ನೂತನ ಪ್ರಚುರಣೆ – 2016

ಶ್ರೀ ಪಾದರ ಸನ್ನಿಧಿಯಿಂದ ಶ್ರೀ ಸ್ವಾಮಿಯ ಅನುಗ್ರಹ ಪ್ರಸಾದ ಗ್ರಂಥ

# ಶ್ರೀಪಾದ ಶ್ರೀ ವಲ್ಲಭ ಚರಿತಾಮೃತ



ಓಂ ಸರ್ವಜಗದ್ರಕ್ಷಾಯ ಗುರುದತ್ತಾತ್ರೇಯ

ಶ್ರೀಪಾದ ಶ್ರೀವಲ್ಲಭ ಪರಬ್ರಹ್ಮಣೇ ನಮಃ

# ಶ್ರೀಪಾದ ಶ್ರೀ ವಲ್ಲಭ ಚರಿತಾಮೃತ



# ಶ್ರೀಪಾದ ಶ್ರೀ ವಲ್ಲಭ ಚರಿತಾಮೃತ



ದಿಗಂಬರಾ ದಿಗಂಬರಾ ಶ್ರೀಪಾದವಲ್ಲಭ ದಿಗಂಬರಾ ದಿಗಂಬರಾ ದಿಗಂಬರಾ ಶ್ರೀಪಾದವಲ್ಲಭ ದಿಗಂಬರಾ



## ಶ್ರೀಪಾದವಲ್ಲಭ ಸ್ತೋತ್ರ

ಶ್ರೀಪಾದವಲ್ಲಭಗುರೋಃ ವದನಾರವಿಂದಂ
ವೈರಾಗ್ಯದೀಪ್ತಿ ಪರಮೋಜ್ವಲಮದ್ವಿತೀಯಂ
ಮಂದಸ್ಮಿತಂ ಸುಮಧುರಂ ಕರುಣಾರ್ಧ್ರ ನೇತ್ರಂ
ಸಂಸಾರ ತಾಪಹರಣಂ ಸತತಂ ಸ್ಮರಾಮಿ

ಶ್ರೀಪಾದವಲ್ಲಭಗುರೋಃ ಕರಕಲ್ಪವೃಕ್ಷಂ
ಭಕ್ತೇಷ್ಟ ದಾನನಿರತಂ ರಿಪುಸಂಕ್ಷಯಂವೈ
ಸಂಸ್ಮರಣ ಮಾತ್ರಚಿತ್ ಜಾಗರಣಂ ಸುಭದ್ರಂ
ಸಂಸಾರ ಭೀತಿ ಶಮನಂ ಸತತಂ ಭಜಾಮಿ

ಶ್ರೀಪಾದವಲ್ಲಭಗುರೋಃ ಪರಮೇಶ್ವರಸ್ಯ
ಯೋಗೀಶ್ವರಸ್ಯ ಶಿವಶಕ್ತಿ ಸಮನ್ವಿತಸ್ಯ
ಶ್ರೀಪರ್ವತಸ್ಯ ಶಿಖರಂ ಖಲು ಸನ್ನಿವಿಷ್ಟಂ
ತ್ರೈಲೋಕ್ಯ ಪಾವನ ಪದಾಬ್ಜ ಮಹಂ ನಮಾಮಿ

ದಿಗಂಬರಾ ದಿಗಂಬರಾ ಶ್ರೀಪಾದವಲ್ಲಭ ದಿಗಂಬರಾ ದಿಗಂಬರಾ ದಿಗಂಬರಾ ಶ್ರೀಪಾದವಲ್ಲಭ ದಿಗಂಬರಾ

# ಉಪೋದ್ಘಾತ

ಶ್ರೀಪಾದ ಶ್ರೀವಲ್ಲಭರ ಕುರಿತು ಶ್ರೀಗುರು ಚರಿತ್ರೆಯಲ್ಲಿ ಸಿಗುವ ಸಮಾಚಾರ ಬಹು ಸ್ವಲ್ಪ. ಕಲಿಯುಗದೊಳು ಪ್ರಪ್ರಥಮ ದತ್ತಾವತಾರ ಶ್ರೀಪಾದ ಶ್ರೀವಲ್ಲಭರು. ಅವರ ಜೀವಿನ ವಿಶೇಷಗಳು ಬಾಹ್ಯ ಪ್ರಪಂಚಕ್ಕೆ ತಿಳಿದಿರುವುದು ಬಹಳ ಕಡಿಮೆ.

ಕ್ರಿ.ಶ. 1320 ರಲ್ಲಿ ಶ್ರೀಪಾದ ಶ್ರೀವಲ್ಲಭರು, ಬ್ರಹ್ಮಶ್ರೀ ಘಂಡಿಕೋಟ ಅಪ್ಪಲರಾಜು ಶರ್ಮರ ಮತ್ತು ಅಖಂಡಲಕ್ಷ್ಮೀ ಸೌಭಾಗ್ಯವತಿ ಸುಮತೀ ಮಹಾರಾಣಿಯರ ಮೂರನೇ ಸಂತಾನವಾಗಿ ಜನ್ಮಿಸಿದರು. ಶ್ರೀಪಾದರಿಗೆ ಶ್ರಿಧರರಾಜ ಶರ್ಮ, ರಾಮರಾಜ ಶರ್ಮ ಎಂಬ ಇಬ್ಬರು ಅಣ್ಣಂದಿರು, ಶ್ರೀ ವಿದ್ಯಾಧರಿ, ರಾಧ, ಸುರೇಖ ಎಂಬ ಮೂವರು ತಂಗಿಯವರಿದ್ದರು. ಅವರು ಭಾರದ್ವಾಜಗೋತ್ರ ಆಪಸ್ತಂಬಸೂತ್ರರು.

ಶ್ರೀಪಾದರ ಮಾತಾಮಹುರು, ಬ್ರಹ್ಮಶ್ರೀ ಮಲ್ಲಾದಿ ಬಾಪನ್ನಾವಧಾನರು. ಅವರ ಧರ್ಮಪತ್ನಿ ಅಖಂಡಲಕ್ಷ್ಮೀ ಸೌಭಾಗ್ಯವತಿ ರಾಜಮಾಂಬ.

ಶ್ರೀಪಾದರ ದಿವ್ಯಚರಿತ್ರೆಯನ್ನು ಶಂಕರ ಭಟ್ಟು ಎಂಬ ಕನ್ನಡ ಬ್ರಾಹ್ಮಣ ಸಂಸ್ಕೃತದಲ್ಲಿ ಬರೆದರು. ಅದರ ತೆಲುಗು ಅನುವಾದ, ಬಾಪನ್ನಾವಧಾನರ 33ನೇ ತರದವನು ಆದ ನನ್ನ ಬಳಿ ಇದೆ. ಶ್ರೀಪಾದ ಶ್ರೀವಲ್ಲಭ ಚರಿತಾಮೃತದಲ್ಲಿ ಬಾಪನ್ನಾವಧಾನರ 33ನೇ ತಲೆಮ್ಮಾರಿನಲ್ಲೇ ಅದು ಬೆಳಕಿಗೆ ಬರುವುದೆಂದು ಹೇಳಲಾಗಿದೆ. ಆದರೆ ಅದು ಯಾವ ಸಮಯ ಮತ್ತು ಯಾವ ವಿಧವಾಗಿ ಅಂತ ವಿವರಿಸಿಲ್ಲ.

ಈ ಚರಿತಾಮೃತವನ್ನು ಎಲ್ಲರಿಗೂ ತಿಳಿಸಬಹುದೇ ಇಲ್ಲವೇ ಎಂಬುವ ಸಂದಿಗ್ಧತೆ ನನಗಿತ್ತು. ಒಂದು ದಿನ (ಭೀಮವರದ) ಮಾವೂಳ್ಳಮ್ಮ ದೇಗುಲ ಪ್ರಾಂತದಲ್ಲಿ ನಾನು ಹೋಗುತ್ತಿರಲೂ, ಒಬ್ಬ ವೃದ್ಧಯಾಚಕ ಊಟಕ್ಕಾಗಿ ಹಣ ಕೇಳಿದನು. ನಾನು 11 ರೂಪಾಯಿ ಕೊಟ್ಟೆನು, ನಂತರ 2,3 ದಿನಗಳಲ್ಲಿ ಗಾಣಗಾಪುರದಿಂದ, ಶ್ರೀ ನೃಸಿಂಹ ಸರಸ್ವತಿಗಳ ಆಶ್ರಮದಿಂದ ನನಗೆ ಅಂಚೆ ಮೂಲಕ ಪ್ರಸಾದ ಬಂತು. ನಾನು ಎಂದು ಆ ವೃದ್ಧನಿಗೆ 11 ರೂಪಾಯಿ ಕೊಟ್ಟೆನೋ, ಅದೇ ದಿನ ಗಾಣಗಾಪುರ ಸಂಸ್ಥಾನಕ್ಕೆ 11 ರು. ಕೊಟ್ಟಿದಕ್ಕೆ ರಶೀದು ಸಹಾ ಅದರ ಜೊತೆ ಇತ್ತು. ನಿಜಕ್ಕೆ ನಾನು ಗಾಣಗಾಪುರಕ್ಕೆ ಎಂತಹ ಹಣವೂ ಕಳಿಸಿರಲಿಲ್ಲ!

ಶ್ರೀ ನೃಸಿಂಹ ಸರಸ್ವತಿ ಸ್ವರೂಪವಾದ ಶ್ರೀಪಾದರ ಸಂಕಲ್ಪ, 'ಲೋಕಕ್ಕೆ ಚರಿತಾಮೃತವನ್ನು ತಿಳಿಸುವ ಸಮಯ ಬಂದಿದೆ' ಎಂದು ನಾನು ಅರ್ಥಮಾಡಿಕೊಂಡು ತಾಕಿದರೆ ಹರಿದು ಹೋಗುವಂತಹಾ ಹಳೇ ಗ್ರಂಥವನ್ನು ಜಾಗರೂಕತೆಯಿಂದ ಪ್ರತಿಮಾಡಿ, ತೆಲುಗಿನ ಹಳೇ ಪ್ರತಿಯನ್ನು ಚರಿತಾಮೃತದಲ್ಲಿ ಹೇಳಿದ ಪ್ರಕಾರವೇ ವಿಜಯವಾಡದ ಕೃಷ್ಣಾನದಿಯಲ್ಲಿ ನಿಮಜ್ಜಿಸಿದೆ. ಪ್ರತಿ ಲಿಪಿ ಆದ ಆ ಗ್ರಂಥವನ್ನು ಪೀಠಾಪುರದ ಶ್ರೀಪಾದ ಶ್ರೀವಲ್ಲಭರ ಮಹಾಸಂಸ್ಥಾನಕ್ಕೆ ನಂತರ, ಹೇಳಿದಂತೆಯೇ ಅವರಿಗೆ ತಲುಪಿಸಿದೆನು.

ಈ ವರುಷ (2001) ವಿಜಯದಶಮಿಯಿಂದ, ಆಶ್ವಯುಜ ಬಹಳ ಏಕಾದಶಿವರೆಗೂ, ಶ್ರೀಪಾದರ ಸಂಸ್ಥಾನದಲ್ಲಿ ಅದನ್ನು, ಶ್ರೀಪಾದರ ಸನ್ನಿಧಿಯಲ್ಲಿ ಮೊದಲಬಾರಿಗೆ ಪಾರಾಯಣ ಮಾಡಿ ಸಂಸ್ಥಾನಕ್ಕೆ ಅರ್ಪಿಸಿದೆ.

ನಮಗೆ ಶ್ರೀಪಾದರ ಮೇಲೆ ಪ್ರೀತಿಯ ಭಕ್ತಿ. ಈ ಪವಿತ್ರ ಗ್ರಂಥವನ್ನು ಯಾರಾದರೂ ನಿಂದಿಸಿದರೇ, ನೊಂದುಕೊಳ್ಳುವಂತಹ ಸುನ್ನಿತ ಸ್ವಭಾವ ನಮ್ಮದು. ಕೀರ್ತಿ, ಪ್ರತಿಷ್ಠೆ, ಹಣದ ಹಿಂದೆ ಬೀಳುವ ವಂಶ ಮೊದಲಿಗೇ ಅಲ್ಲ ನಮ್ಮದು.

ಆದರೇ ದತ್ತ ಭಕ್ತರಿಗೆ ಅತ್ಯಂತ ಅಮೂಲ್ಯವಾದ ಈ ದಿವ್ಯಚರಿತ್ರೆ, ತಲುಪಿಸುವುದೇ ನಮ್ಮ ಧರ್ಮ ಎಂದು ಭಾವಿಸಿ, ಇದನ್ನು ಬೆಳಕಿಗೆ ತರುವ ಕಾರ್ಯ ನಡೆಯಿತು.

ಇದು ಅಕ್ಷರಸತ್ಯ ಗ್ರಂಥ, ಇದರ ಪ್ರತಿ ಅಕ್ಷರವೂ ಶಕ್ತಿ ಉಳ್ಳವು, ಸತ್ಯವಾದವು. ಈ ಗ್ರಂಥದಲ್ಲಿ ಅತಿಶಯೋಕ್ತಿಗಳು, ಅರ್ಥವಿಲ್ಲದ ವರ್ಣನೆಗಳು ಇರುವುದಿಲ್ಲ. ದೊಡ್ಡ ಪಾಂಡಿತ್ಯವಿಲ್ಲದ ಶಂಕರ ಭಟ್ಟನಿಂದ ಬರೆಯಲಾಗಿದೆ. ಕನ್ನಡಿಗ, ಯೋಗ್ಯ. ಅದಕ್ಕೆ ಶ್ರೀಪಾದರು ಅನುಗ್ರಹಿಸಿದ್ದರು.

ಈ ಗ್ರಂಥವನ್ನು ನಿತ್ಯಪಾರಾಯಣ ಗ್ರಂಥವಾಗಿ ಮಾಡಿಕೊಳ್ಳಬೇಕು. ಎಂತಹ ಕಷ್ಟನಷ್ಟಗಳು ಬಂದರೂ, ಸಂಕಟ ಪರಿಸ್ಥಿತಿಗಳು ಎದುರಾದರೂ, ಈ ಗ್ರಂಥ ಪಾರಾಯಣೆ ಮಾಡಿ 11 ಜನಕ್ಕೆ ಸಾಲುವ ಹಣವನ್ನು ಅನ್ನ ದಾನಕ್ಕಾಗಿ ಉಪಯೋಗಿಸಿದರೆ ತಕ್ಷಣ ಫಲಿತ ಹೊಂದಬಹುದು. ಇದು ಸಾಕ್ಷಾತ್ ಶ್ರೀಪಾದ ಶ್ರೀವಲ್ಲಭರಿಂದ ಆ ರೀತಿ ಭರವಸೆ ಹೊಂದಲಾಗಿ, ಅವರ ಜೀವನ ಸಮಯದಲ್ಲೇ ಬರೆಯಲಾದ ಗ್ರಂಥ. ಆದ್ದರಿಂದ ದತ್ತ ಭಕ್ತರು ಈ ಗ್ರಂಥ ಪಾರಾಯಣ ಮಾಡಿ, ನಿಮ್ಮ ಜೀವನಗಳಲ್ಲೇ ಅನುಭವವನ್ನು ಪಡೆಯಿರಿ. ಅನುಭವದಿಂದ ಇದು ಅಕ್ಷರ ಸತ್ಯಗ್ರಂಥವೆಂಬುದು, ನಿಮಗೇ ತಿಳಿದುಬರುವುದು.

ಶ್ರೀದತ್ತ ಸೇವೆಯಲ್ಲಿ

ಶ್ರೀ ಗುರುಭ್ಯೋ ನಮಃ

ಶ್ರೀ ಗುರುದೇವದತ್ತ ಶ್ರೀರಾಮ ಸಮರ್ಥ

**ಶ್ರೀದತ್ತ ಶರಣಂ ಮಮ ಶ್ರೀಪಾದರಾಜಂ ಶರಣಂ ಪ್ರಪದ್ಯೇ**

# ಪ್ರಸ್ತಾವನೆ

ಮಾನವನಿಗೆ ಈ ಪ್ರಪಂಚದಲ್ಲಿ ದುಃಖಭರಿತ ಆಶೆಗಳು ಹುಟ್ಟಿ, ಅದರಿಂದ ಕಷ್ಟನಷ್ಟಗಳು ಉಂಟಾಗುವುವು. ಆ ಕಷ್ಟನಷ್ಟಗಳಿಂದ ರಕ್ಷಿಸಿ, ಕಾಪಾಡುವವನು ಒಬ್ಬ ಪರಮಾತ್ಮನೇ. ಅವನ ಅನುಗ್ರಹದಿಂದಲೇ ಎಲ್ಲಾ ಕಷ್ಟಗಳೂ ತೊಲಗಿ ಸುಖ ಶಾಂತಿಗಳು ಲಭಿಸುವುದು. ಇದು ಪರಮಾತ್ಮನ ಸ್ತೋತ್ರ, ಪ್ರಾರ್ಥನೆ, ಜಪ, ಧ್ಯಾನ ಮತ್ತು ಅವನ ವಿಶಿಷ್ಟತೆಯನ್ನು ತಿಳಿಸುವ ಗ್ರಂಥ ಪಠನೆಯಿಂದ ಮಾತ್ರ ಸಾಧ್ಯ. ಪರಮಾತ್ಮ ಬ್ರಹ್ಮ ವಿಷ್ಣು, ಪರಮೇಶ್ವರರೆಂಬ ತ್ರಿಮೂರ್ತಿ ರೂಪದಲ್ಲಿರುವನು. ಅವರೇ ಜಗತ್ತಿನ ರಕ್ಷಕರು, ಶಿಕ್ಷಕರು. ಇವರಿಂದಲೇ ಎಲ್ಲಾ ಆಗುವುದು. ಕೃತ ಯುಗದಲ್ಲಿ, ಅತ್ರಿ, ಅನಸೂಯ ಭಕ್ತಿಯನ್ನು ಮೆಚ್ಚಿ ಅವರಿಗೆ ಮಗನಾಗಿ, ದತ್ತಾತ್ರೇಯ ರೂಪದಲ್ಲಿ ಅವತರಿಸಿದರು. ಅವರ ಅವತಾರ ಗುರುರೂಪ. ಮಾನವರ ಅಜ್ಞಾನ ದೂರಮಾಡಿ, ಜ್ಞಾನ ಬೆಳಸಿ, ಆ ಮೂಲಕ ಮೋಕ್ಷಕೊಡುವ ಅವತಾರ! ಅವಧೂತ ಮಾರ್ಗ ಮೊದಲಾಗಿದ್ದು ಇವರಿಂದಲೇ. ಅಂತಹ ದತ್ತಾತ್ರೇಯರ ಉಪಾಸನೆ, ಭಾರತಾದ್ಯಂತ ಕೃತ ಯುಗದಿಂದ ನಡೆಯುತ್ತಿದೆ. ಅದೆಷ್ಟೋ ಭಕ್ತರು, ಅಂದಿನಿಂದ ದತ್ತೋಪಾಸನೆ ಮಾಡಿ ಕೃತಾರ್ಥರಾಗಿದ್ದಾರೆ. ದತ್ತನನ್ನು ಭಜಿಸಿದರೇ ಒಂದೇ ಸಲ ಬ್ರಹ್ಮ ವಿಷ್ಣು, ಮಹೇಶ್ವರರನ್ನು ಭಜಿಸಿದ ಫಲ ಲಭಿಸುವುದು. ದತ್ತ ಸ್ಮರ್ತೃಗಾಮಿ. ಅಂದರೇ ಸ್ಮರಣ ಮಾತ್ರದಿಂದಲೇ ಸಂತುಷ್ಟನಾಗಿ, ಭಕ್ತರನ್ನು ಎಲ್ಲಾ ವಿಧವಾಗಿ ರಕ್ಷಿಸಿ, ಭುಕ್ತಿ ಮತ್ತು ಮುಕ್ತಿಯನ್ನು ಕೊಡುವನು.

ಸಾಕ್ಷಾತ್ ಶ್ರೀದತ್ತಾತ್ರೇಯರು ಕ್ರಿ.ಶ. 1320 ಪ್ರಾಂತದಲ್ಲಿ **ಆಂಧ್ರದ ಪೂರ್ವ ಗೋದಾವರಿ ಜಿಲ್ಲೆಯಲ್ಲಿನ ಶ್ರೀಕ್ಷೇತ್ರ ಪೀಠಿಕಾಪುರದಲ್ಲಿ ದತ್ತ ಭಕ್ತರೂ, ಅಪಸ್ತಂಭ ಶಾಖೀಯರೂ ಆದ ಅಪ್ಪಲರಾಜು, ಸುಮತಿ ಎಂಬ ಪುಣ್ಯದಂಪತಿಗಳಿಗೆ ಹುಟ್ಟಿ, ಶ್ರೀಪಾದ ಶ್ರೀವಲ್ಲಭ ಎಂಬ ದಿವ್ಯ ಹೆಸರಿನಲ್ಲಿ, ದತ್ತಾತ್ರೇಯರ ಮೊದಲ ಅವತಾರಮೂರ್ತಿಯಾಗಿ ಈ ಕಲಿಯುಗದಲ್ಲಿ ಜಗದ್ವಿಖ್ಯಾತೆ ಹೊಂದಿದರು.** ನಂತರ ಮಹಾರಾಷ್ಟ್ರದ ಕರಂಜಿಪುರದಂದು ಶ್ರೀನೃಸಿಂಹ ಸರಸ್ವತಿ ನಾಮದೊಳು, ದತ್ತಾತ್ರೇಯರ ದ್ವಿತೀಯ ಅವತಾರಿ ಆಗಿ, ಅನೇಕ ಮಹಿಮೆಗಳನ್ನು ತೋರಿ ಜಗತ್ಪ್ರಸಿದ್ಧರಾದರು.

ಅಂತಹ ಶ್ರೀಪಾದ ಶ್ರೀವಲ್ಲಭರ ವಿಶಿಷ್ಟತೆ ಕುರಿತು, ಗುರುಚರಿತ್ರೆಯಲ್ಲಿ ಕೇವಲ 5 ಅಧ್ಯಾಯಗಳಲ್ಲಿ ಮಾತ್ರ ತಿಳಿಸಲಾಗಿದೆ. ಆದರೇ ಈ ''ಶ್ರೀಪಾದ ಶ್ರೀವಲ್ಲಭ ಚರಿತಾಮೃತಮು'' ಎಂಬ ತೆಲುಗು ಗ್ರಂಥದ ಪ್ರತಿ (53) ಅಧ್ಯಾಯಗಳಲ್ಲೂ ಶ್ರೀಗಳ ಬಗ್ಗೆ ವಿವರಿಸಲಾಗಿದೆ. ಈ ಮಹಾಗ್ರಂಥ ನಿಜಕ್ಕೂ ಅಮೃತವೇ ಆಗಿ, ಶ್ರೀಪಾದ ಚರಿತ್ರೆ, ಲೀಲೆಗಳು, ಅವರ ಅದ್ಭುತ ಮಹಿಮೆಗಳು, ಮಹೋನ್ನತೋಪದೇಶಗಳು ಎಷ್ಟೋ ಹೊಂದಿದೆ. ಓದುಗರು, ಜಗವನ್ನು ಮರೆತು, ಶ್ರೀಪಾದರ ಸನ್ನಿಧಿಯಲ್ಲಿದ್ದ ಅನುಭೂತಿ ಕೊಡುವಂತಾಗಿದೆ. ಶ್ರೀಪಾದರ ಲೀಲೆ, ಶ್ರೀ ಕೃಷ್ಣಬಾಲ ಲೀಲೆಯಂತಿವೆ. ಎಷ್ಟೋ ಆನಂದ ಮತ್ತು ತನ್ಮಯತೆ ಕೊಡುತ್ತಿವೆ. ಈ ಚರಿತ್ರೆ ಶ್ರೀಪಾದರ ಕಾಲದಲ್ಲೇ, ಅವರ ಪ್ರಿಯಶಿಷ್ಯ ಪರಮ ಭಕ್ತಾಗ್ರೇಶ್ವರ, ಕರ್ನಾಟಕ ದೇಶಸ್ಥನಾದ ಶ್ರೀಮಾನ್ ಶಂಕರ ಭಟ್ಟರಿಂದ ಶ್ರೀಪಾದರು ರಚಯಿಸಿದರು.

ಎಲ್ಲರೂ ಈ ಚರಿತ್ರೆಯನ್ನು ಪಾರಾಯಣಮಾಡಿದ್ದಲ್ಲಿ, ಸಂಸಾರ ತಾಪತ್ರಯಗಳು ದೂರವಾಗಿ ಶ್ರೀಪಾದ ಶ್ರೀವಲ್ಲಭರ ಕೃಪೆಗೆ ಪಾತ್ರರಾಗಿ, ಮನಸ್ಸಿಗೆ ಸುಖ, ಶಾಂತಿ ಸಮಾಧಾನಗಳು ಪ್ರಾಪ್ತಿಸುವವು. ಈ ಚರಿತಾಮೃತವನ್ನು ಎಲ್ಲರೂ ಓದಿ, ಬಂಧು-ಬಳಗವನ್ನು ಮತ್ತು ಸ್ನೇಹಿತನ್ನೂ ಓದಲು ಪ್ರೋತ್ಸಾಹಿಸಿ, ಶ್ರೀಪಾದ ಶ್ರೀವಲ್ಲಭರ ಕೃಪೆಯನ್ನು ಹೊಂದಿ ಧನ್ಯರಾಗಲಿ!

**ಶ್ರೀ ಗುರುದೇವದತ್ತ**

**ಶ್ರೀದತ್ತ ಶರಣಂ ಮಮ**

# ಶ್ರೀಪಾದ ಶ್ರೀವಲ್ಲಭ ಚರಿತಾಮೃತ

ಅದೇನು ವಿಚಿತ್ರವೋ ಸರಿ, ಕಲಿಯುಗದಲ್ಲಿ ಶ್ರೀದತ್ತಾತ್ರೇಯರು ಮೊದಲಿಗೆ ಶ್ರೀಪಾದ ಶ್ರೀವಲ್ಲಭರಾಗಿ, ಪೀಠಾಪುರದ ಪುಣ್ಯದಂಪತಿಗಳಾದ ಸುಮತಿ, ಅಪ್ಪಲರಾಜ ಶರ್ಮರಿಗೆ, ಪುತ್ರರಾಗಿ ಅವತರಿಸಿದರೂ ದತ್ತ ಸಂಪ್ರದಾಯ, ಮಹಾರಾಷ್ಟ್ರ, ಕರ್ನಾಟಕ ರಾಜ್ಯಗಳಲ್ಲಿನಂತೇ, ಆಂಧ್ರದಲ್ಲಿ ವ್ಯಾಪಿಸಲಿಲ್ಲ. ಗಂಗಾಧರ ಸರಸ್ವತಿ ಪುಣ್ಯದಿಂದ ಮರಾಠಿ ಭಾಷೆಯಲ್ಲಿ ಗುರುಚರಿತ್ರೆ ಬರೆಯಲ್ಪಟ್ಟಿದ್ದರಿಂದಲೇ ಶ್ರೀಪಾದ ಶ್ರೀವಲ್ಲಭರು ಪೀಠಿಕಾಪುರದಲ್ಲಿ ಜನ್ಮಿಸಿದರೆಂಬ ಸತ್ಯ ಬಯಲಾಗಿದೆ. ಪೀಠಾಪುರದ ವೈಭವ ಮತ್ತಷ್ಟು ಬೆಳಗಿದ್ದಕ್ಕೆ, ತೆಲುಗುನವರು ಗಂಗಾಧರ ಸರಸ್ವತಿಗೆ ಸದಾ ಕೃತಜ್ಞರಾಗಿರಲೇಬೇಕು.

ಗುರುಚರಿತ್ರೆಯಲ್ಲಿ ಶ್ರೀಪಾದರ ಚರಿತ್ರ ಕೇವಲ 5 ಅಧ್ಯಾಯ ಮಾತ್ರ, ಅದೂ ಬಹಳ ಸ್ವಲ್ಪ ವಿಷಯಗಳೊಂದಿಗೆ ಪರಿಚಯಸಿದೆ. ಪ್ರಪಂಚಕ್ಕೆ ಅದಷ್ಟೇ ಶ್ರೀಪಾದರ ಸಮಾಚಾರ ಲಭಿಸಿತು. 20ನೇ ಶತಾಬ್ಧ ಆರಂಭದಲ್ಲಿ 'ಟೇಂಬೇಸ್ವಾಮಿ'ಯಾಗಿ, ದತ್ತಾತ್ರೇಯ ಅವತಾರವಾಗಿ ಪ್ರಸಿದ್ಧಗೊಂಡ, ಶ್ರೀ ವಾಸುದೇವಾನಂದ ಸರಸ್ವತಿ ಸ್ವಾಮಿಗಳು, ದೇಶ ಸಂಚಾರ ಮಾಡುತ್ತಾ ಪೀಠಾಪುರಕ್ಕೆ ಬಂದು, ಇದು 'ಶ್ರೀಪಾದ ಶ್ರೀವಲ್ಲಭರ ಜನ್ಮಸ್ಥಳ' ಎಂದು ತಿಳಿಸಿದ್ದು, ಪೀಠಾಪುರ ವಾಸಿಗಳಿಗೇ ಅಲ್ಲ ತೆಲುಗುನವರಿಗೂ ಆಶ್ಚರ್ಯಕರವಾಗಿತ್ತು. ನಂತರ ಪ್ರಸಿದ್ಧ ದತ್ತೋಪಾಸಕರು, ಶ್ರೀ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳು ತಮ್ಮ ಪ್ರಿಯ ಶಿಷ್ಯರಾದ ಬ್ರಹ್ಮಜ್ಞ ಕವಿ ಶ್ರೀ ದೇವರಾವು ಕುಲಕರ್ಣಿ ಅವರು, ಕರ್ನಾಟಕದಿಂದ ಪೀಠಾಪುರಕ್ಕೆ ಬಂದು ಶ್ರೀ ಸ್ವಾಮಿಯನ್ನು ದರ್ಶಿಸಿ, ಸೇವಿಸಿ, ಸ್ವಾಮಿಯನ್ನು ಕುರಿತು ಬಹಳ ಪ್ರಚಾರ ಮಾಡಿದರು. ಆನಂತರ, ಆಂಧ್ರಾನುವಾದಕರು ಮುಂದೆ ಬರಲೂ, ಶ್ರೀಪಾದರ ಮಹತ್ತು ಪ್ರಚಾರಕ್ಕೆ ಬರಲಾರಂಭಿಸಿತು. ಶ್ರೀಪಾದರ ವಿಷಯಗಳು ತೆಲುಗಿನವರಿಗೆ ಸ್ವಲ್ಪ ಸ್ವಲ್ಪ ತಿಳಿಯುತ್ತಿತ್ತು. ನಂತರ ದತ್ತಾವತಾರಿ ಆದ ಶ್ರೀ ಶ್ರೀಧರ ಸ್ವಾಮಿಗಳ ಶಿಷ್ಯರು, ಸಮರ್ಥ ಸದ್ಗುರು ಶ್ರೀ ಸಜ್ಜನಗಡ ರಾಮಸ್ವಾಮಿಗಳು ಅವರ ಗುರುಗಳ ಆದೇಶದಂತೆ ಪೀಠಾಪುರಕ್ಕೆ ಬರುವುದು, ಶ್ರೀಪಾದರ ಜನುಮ ಸ್ಥಳದಲ್ಲಿ ಮಂದಿರಾದಿಗಳ ಕಾರ್ಯಕ್ರಮಗಳಿಗಾಗಿ, ಧರ್ಮ ಜಾಗರಣೆ ದೀಕ್ಷೆ ವಹಿಸಿ ಜನ ಚೈತನ್ಯಗೊಳಿಸುವುದು ಬೇಗನೆ ನಡೆಯಿತು. ಆದರೇ ನಮಗೇ ಅಲ್ಲ, ತೆಲುಗು ದತ್ತ ಭಕ್ತರಿಗೆಲ್ಲಾ ಶ್ರೀಪಾದರ ಚರಿತ್ರೆ ಸಂಪೂರ್ಣವಾಗಿ ಲಭಿಸಲಿಲ್ಲವೆಂದಿತ್ತು. ಆ ಕೊರತೆ ತಪಸ್ಸಾಗಲೂ, ಶ್ರೀಪಾದರ ಕರುಣಾಮೃತ ಲೋಕಕ್ಕೆ ಪ್ರಾಪ್ತವಾಯಿತು!

ಈ ನೂತನ ಶತಾಬ್ಧಿ ಆರಂಭದಲ್ಲಿ, 2002ನೇ ವರುಷ, ವಿಜಯದಶಮಿ ದಿನ, ಮಿಂಚಿನಂತೆ ಭೀಮವರದಿಂದ ಶ್ರೀ ಮಲ್ಲಾದಿ ಗೋವಿಂದ ದೀಕ್ಷಿತರೆಂಬ ಪುಣ್ಯಮೂರ್ತಿ, ನಮ್ಮ ಬಳಿ ಬಂದು, ಶ್ರೀಪಾದರ ಮಾತಾಮಹಿರ ವಂಶಸ್ಥರಾದ ನಮ್ಮ ಮನೆಯಲ್ಲಿ, ಕನ್ನಡದವನಾದ ಶಂಕರ ಭಟ್ಟರು (ಶ್ರೀಪಾದ ಸಮಕಾಲಿಕರು), ಸಂಸ್ಕೃತದಲ್ಲಿ ಬರೆದ 'ಶ್ರೀಪಾದ ಶ್ರೀವಲ್ಲಭ ಚರಿತಾಮೃತಃ' ಎಂಬುವ ಗ್ರಂಥದ ತೆಲುಗು ಪ್ರತಿ ಶ್ರೀಗಳ 32 ತರಗಳದಿಂದ ಇದೆ ಎಂದು ತಿಳಿಸಿದರು. ಸಂಸ್ಕೃತದಲ್ಲಿ ಶ್ರೀ ಶಂಕರ

ಭಟ್ಟರು ಆದೇಶಿಸಿದ ಹಾಗೆ, ತೆಲುಗು ಹಳೆ ಪ್ರತಿಯನ್ನು ಕೃಷ್ಣಾನದಿಯಲ್ಲಿ ನಿಮಜ್ಜನೆ ಗಾವಿಸಿ, ನೂತನ ಪ್ರತಿಯನ್ನು ನಿಮ್ಮ ಸಂಸ್ಥಾನಕ್ಕೆ ಸಮರ್ಪಿಸುವ ಸಂಕಲ್ಪದಿಂದ ಬಂದೆನೆಂದು ಹೇಳಿ, ಗ್ರಂಥ ಸಪ್ತಾಹ ಪಾರಾಯಣೆ ಮಾಡಿ, ಅದನ್ನು ನಮಗೆ ದಯಪಾಲಿಸಿ ಹೊರಟುಹೋದರು.

ಶ್ರೀಚರಣರು ತೋರಿದ ಈ ದಿವ್ಯ ಲೀಲೆಗೆ ಆಶ್ಚರ್ಯದ ಜೊತೆ ಆನಂದವೂ ಆಯ್ತು. 53 ಅಧ್ಯಾಯಗಳುಳ್ಳ ಈ ದಿವ್ಯಗ್ರಂಥ ಸಪ್ತಾಹ ಪಾರಾಯಣೆ ಹೇಗೆ ಪಠಿಸಿ, ಯಾವ ಫಲಿತ ಪಡೆಯಬಹುದೋ ತಿಳಿಸಲಾಗಿದೆ.

ಅನೇಕ ಚಿತ್ರಾತಿಚಿತ್ರ ಸಂಘಟನೆಗಳು, ಅದ್ಭುತ ಕಥಾ ವಿಧಾನ ನಮಗೆ ತಿಳಿಯದು ಮತ್ತು ತಪ್ಪದೇ ತಿಳಿದುಕೊಳ್ಳಬೇಕಾದಂತಹ ಎಷ್ಟೋ ವಿಜ್ಞಾನ ವಿಷಯಗಳು, ಶ್ರೀ ಕೃಷ್ಣ ಲೀಲೆಗಳಂತಿರುವ ಶ್ರೀಪಾದರ ಬಾಲ ದಿವ್ಯಲೀಲೆ ಪಾರಾಯಣ ಸಮಯ, ಶ್ರೀ ದೀಕ್ಷಿತರ ಮೂಲಕ ಕೇಳುವುದು, ನಮ್ಮೆಲ್ಲರನ್ನೂ ಆಶ್ಚರ್ಯಗೊಳಿಸುವುದು. ನಮ್ಮ ಗುರುಚರಣರು ಪೂಜ್ಯಶ್ರೀ ರಾಮಸ್ವಾಮಿ ಮಹದೀಯರಿಗಾದರೇ ಕಣ್ಣುಗಳಿಂದ ಆನಂದಭಾಷ್ಪ ನಿಲ್ಲಲೇ ಇಲ್ಲ. ಶ್ರೀಗಳ ಸಂಪೂರ್ಣ ದಿವ್ಯಚರಿತ್ರೆ ಸಿಗಲಿಲ್ಲವೆಂಬ ಕೊರತೆ ತೀರಿಸುವುದಕ್ಕೆ, ಒಂದು ಅದ್ಭುತ ದಿವ್ಯ ಸಂಘಟನೆ ಕಲ್ಪಿಸಲಾಗಿದೆ. ಕಲ್ಪವೃಕ್ಷ ಸಮಾನರಾದ ಶ್ರೀಪಾದ ಶ್ರೀವಲ್ಲಭರ ಅನುಗ್ರಹಕ್ಕೆ ಇದೇ ದೊಡ್ಡ ನಿದರ್ಶನೆ.

ಈ ಚರಿತಾಮೃತವನ್ನು ಲೋಕಕ್ಕೆ ಅರ್ಪಿಸುವ ಮಹದ್ಭಾಗ್ಯ ನಮಗೆ ಆ ಶ್ರೀಪಾದ ಶ್ರೀವಲ್ಲಭರು ಅನುಗ್ರಹಿಸಿದ್ದಕ್ಕೆ ನಾವು, ಬ್ರಹ್ಮಾನಂದರಾಗುತ್ತಿದ್ದೇವೆ. ಈ ಶ್ರೀಗಳ ಚರಿತ್ರೆ ಎಂಬುವ ಅಮೃತ, ಶ್ರೀಗಳ ಮಾತಾಮಹಿಯ ವಂಶೀಯರಾದ ಶ್ರೀ ಮಲ್ಲಾದಿ ಗೋವಿಂದ ದೀಕ್ಷಿತರ ಬಳಿ ಭದ್ರವಾಗಿದ್ದು, ನಮಗೆ ಅವರ ಮೂಲಕ ಲಭಿಸಿದ್ದಕ್ಕೆ ನಮ್ಮ ಸಂಸ್ಥಾನ, ಮಲ್ಲಾದಿ ಅವರಿಗೆ ಸದಾ ಕೃತಜ್ಞರಾಗಿರುತ್ತೇವೆ.

ನಮಗೆ ಲಭಿಸಿದ ಗ್ರಂಥ ಎಲ್ಲರಿಗೂ ಲಭಿಸಲೂ, "ಶ್ರೀಪಾದ ಶ್ರೀವಲ್ಲಭ ಚರಿತಾಮೃತ" ಮುದ್ರಣ ಬಯಲು ಮಾಡುತ್ತಿದ್ದೇವೆ. ಆ ಗ್ರಂಥದಲ್ಲಿನ ತತ್ವ ರಹಸ್ಯಗಳನ್ನು, ದತ್ತ ಸ್ವರೂಪ ಸ್ವಭಾವಗಳನ್ನು ಶ್ರೀಗಳ ಅವತಾರ ಪ್ರಾಮುಖ್ಯವನ್ನು ಮುಂತಾದ ವಿಷಯಗಳನ್ನು ಎಲ್ಲರೂ ಗ್ರಹಿಸಿ, ಶ್ರೀಗಳನ್ನು ನೆನೆದು ಧನ್ಯರಾಗಲೆಂದು ಬಯಸುತ್ತಾ ಇದ್ದೇವೆ. ಸಲುವಾಗಿ, ಬುದ್ಧಿವಂತರು, ಒಳ್ಳೆಯದನ್ನು ತಿಳಿದುಕೊಳ್ಳಬಲ್ಲರು.



ಜನ್ಮಸ್ಥಾನದಲ್ಲಿರುವ ಶ್ರೀಪಾದ ಶ್ರೀವಲ್ಲಭರ ದಿವ್ಯ ಪಾದಪದ್ಮಗಳು



ಶ್ರೀಪಾದ ಜನ್ಮಸ್ಥಾನದಲ್ಲಿರುವ ಶ್ರೀಪಾದ ಶ್ರೀವಲ್ಲಭರು
ಶ್ರೀ ದತ್ತಾತ್ರೇಯಸ್ವಾಮಿಯವರು ಹಾಗೂ ಶ್ರೀ ನರಸಿಂಹ ಸರಸ್ವತಿಯವರು



ದತ್ತಾವಧೂತ ಭಗವಾನ್ ಶ್ರೀ ಶ್ರೀಧರಸ್ವಾಮಿಯವರು



ಸಮರ್ಥ ಸದ್ಗುರು ಶ್ರೀ ಶ್ರೀ ಶ್ರೀ ಸಜ್ಜನಗಡ ರಾಮಸ್ವಾಮಿಯವರು

# ಮುನ್ನುಡಿ

ಪ್ರಪಂಚದಲ್ಲಿ ಆಸಿಯಾಖಂಡ ಪರಮ ಪುನೀತ. ಅದರಲ್ಲಿನ ಭಾರತ ಮತ್ತಷ್ಟು ಪಾವನ. ಇದು ಬಹಳಷ್ಟುಸಲ ಅವತಾರ ಪುರುಷರಿಗೆ, ಆಚಾರ್ಯರಿಗೂ ನಿಲಯವಾಗಿದೆ. ಸಾಮಾನ್ಯವಾಗಿ ಅವತಾರ ಪುರುಷರು ಉತ್ತರ ಮತ್ತು ಆಚಾರ್ಯರು ದಕ್ಷಿಣ ಭಾರತದಲ್ಲಿ ಉದಯಿಸಿ, ದೇಶಕ್ಕೆ ಕೀರ್ತಿ ತಂದಿದ್ದಾರೆ. ಗಂಗ ಮುಂತಾದ ನದಿಗಳಿಂದ ದೇಶ ಧನ್ಯವಾಗಿದೆ. ''ತುಲಸೀ ಜಂಗಮಸ್ತರುಃ'' ಎಂದು ಮಹಾತ್ಮರು ಓಡಾಡುವ ಚೈತನ್ಯ ತೀರ್ಥಗಳೆಂದೂ, ಅವರ ವಚನಗಳು 3 ಲೋಕದಲ್ಲೂ ಪ್ರಸಿದ್ಧಿ ಎಂದೂ ಶಾಸ್ತ್ರಗಳು ಹೇಳುತ್ತಿವೆ. ಅವತಾರ ಪುರುಷರಲ್ಲಿ ಶ್ರೀಪಾದ ಶ್ರೀವಲ್ಲಭರು ಉತ್ಕೃಷ್ಟರಾಗಿ ಗಣನೀಯರು ಜಗತ್ಪ್ರಸಿದ್ಧ ಶ್ರೀ ದತ್ತಾವತಾರಿ. ಕಲಿಕಲ್ಮಷ ಹೃದಯಗಳಿಗೆ, ವಿಧಿಚರಿತರಿಗೂ, ಪಾಪದ್ರವ್ಯಲಾಲಸರಿಗೂ, ಕಲಿಯುಗಕ್ಕೂ ಇವರ ಅವತರಣ ಅದೆಷ್ಟೋ ಉಪಯೋಗಕಾರಿ. ಮಹಾದಯಾನಿಧಿ - ಪುಣ್ಯೈಕ ಮೂರ್ತಿ, ಪರಮಪಾವನ ಚರಿತರು, ಲೋಕೈಕವಂದ್ಯರೂ, ಚಿನ್ಮಯ ರೂಪಿಯಾದ ಶ್ರೀಪಾದ ವಲ್ಲಭರನ್ನು ದರ್ಶಿಸಿದರೂ, ಸ್ಮರಿಸಿದರೂ, ಪೂಜಿಸದರೂ, ಧ್ಯಾನಿಸಿದರೂ, ಅಂತಹ ಭಕ್ತರ ಸಕಲ ಕಲ್ಮಷಗಳೂ ಹೋಗಿ, ಶಾಂತಿ ಕೊಡುವ ಇವರಿಗೆ ಬೇರೇ ಸಾಟಿ ಇಲ್ಲ.

ಇಂತಹ ಭಾಗ್ಯನಿಧಿ 14ನೆಯ ಶತಾಬ್ದದಲ್ಲಿ ಈ ಶ್ರೀ ಕ್ಷೇತ್ರ ಪೀಠಾಪುರದಲ್ಲಿ ಅವತರಿಸಿದರು. 17ನೇ ಶತಾಬ್ದಿಯಲ್ಲಿ ಮಹಾರಾಷ್ಟ್ರದಲ್ಲಿ ಶಿವಾಜಿ ಮಹಾರಾಜರಿಗೆ, ಸದ್ಗುರು ಸಮರ್ಥರಾಮದಾಸರು ಗುರುಗಳಾಗಿ ಧರ್ಮೋದ್ಧಾರಣೆ ಮಾಡಿದರು. ನಂತರ 20ನೇ ಶತಾಬ್ದಿಯಲ್ಲಿ ಯತಿಪುಂಗವರಾದ ಶ್ರೀಧರ ಸ್ವಾಮಿ, ಸಕ್ರೀಯ ಭಕ್ತಿ ಭಾವದಿಂದ ತಪಸ್ಸಿನ ಪ್ರಭಾವದಿಂದ, ಶ್ರೀ ಸಮರ್ಥ ರಾಮದಾಸರನ್ನು 3 ಬಾರಿ ಪ್ರತ್ಯಕ್ಷ ಮಾಡಿಕೊಂಡು, ಅವರಿಂದ ಸನ್ಯಾಸತ್ವ ಹೊಂದಿ 'ಭಗವಾನ್' ಎಂದು ಕರೆಯಲ್ಪಟ್ಟು, ಭಗವಾನ್ ಶ್ರೀಧರ ಸ್ವಾಮಿಯಾಗಿ, ದತ್ತಾವತಾರಿ ಎಂದು ಪ್ರಸಿದ್ಧರಾದರು. ಇವರ ಶಿಷ್ಯರೇ ಶ್ರೀ ಸಜ್ಜನಗಡ ರಾಮಸ್ವಾಮಿ. ಇವರೇ ತಮ್ಮ ಗುರುಪ್ರೇರಣೆಯಿಂದ ಶ್ರೀಪಾದರ ಸ್ವಕ್ಷೇತ್ರವಾದ ಪೀಠಾಪುರಕ್ಕೆ ಬಂದು ಭಕ್ತರನ್ನು ಪ್ರೇರಣೀಕರಿಸಿ ಅವರನ್ನು ದೈವೀಕರಾಗಿ ಮಾಡಿ 'ಶ್ರೀಪಾದ ಶ್ರೀವಲ್ಲಭ ಸಂಸ್ಥಾನ' ಸ್ಥಾಪಿಸಿ ಪ್ರಪಂಚಕ್ಕೆ ಶ್ರೀಗಳ ಮಹಿಮೆಗಳನ್ನು, ವಿಶಿಷ್ಟತೆಯನ್ನು ವ್ಯಾಪಿಸಲೂ ಶ್ರೀಕಾರ ಸುತ್ತಿದರು. ಇದು ಅವರು ಮಾಡಿದ ಕಾರ್ಯಕ್ರಮಗಳಲ್ಲಿ ಅತಿ ದೊಡ್ಡ ಅದ್ಭುತ ಕಾರ್ಯಕ್ರಮ. ಇದರಿಂದ ಅವರು ಇಂದಿನ ಮತ್ತು ನಾಳಿನ ದತ್ತಾನುಷ್ಠಾನ ತತ್ಪರರಿಗೆ, ಒಳ್ಳೆಯ ಅವಕಾಶ ಕೊಟ್ಟ ಮಹಾನುಭಾವರಾದರು. ಶ್ರೀ ರಾಮ ಸ್ವಾಮಿಗಳು, ಶ್ರೀಪಾದ ಶ್ರೀವಲ್ಲಭ ಸಂಸ್ಥಾನಕ್ಕೆ ಉತ್ಸಾಹ ಶಕ್ತಿಯಾಗಿ, ಮಾರ್ಗದರ್ಶಿ, ಗುರುದೇವ, ಪೀಠಾಧಿಪತಿಗಳಾಗಿ, ಶ್ರೀಪಾದರ ದರ್ಶನಕ್ಕೆ ವಿವಿಧ ಪ್ರಾಂತದಿಂದ ಆಗಮಿಸುವ ಭಕ್ತರಿಗೆ ವಸತಿ ಅನುಕೂಲ ಮಾಡುವ ದೀಕ್ಷೆಯಿಂದ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಶ್ರೀಗಳ ಆಶೀರ್ವಾದದಿಂದ, ವಿಜಯಿಗಳಾಗಿರುವುದು ಪ್ರಶಂಸನೀಯ. ಇಂತಹ ರಾಮಸ್ವಾಮಿ ಮಹೋದಯ ಸಮಯದಲ್ಲಿ ಅವರ ಮೇಲ್ವಿಚಾರಿಕೆಯಲ್ಲಿ, ಶ್ರೀಪಾದ ಶ್ರೀವಲ್ಲಭರ ಚರಿತಾಮೃತ ಮಹಾಗ್ರಂಥ ಬೆಳಕಿಗೆ ಬಂದು ಭಕ್ತರಿಗೆ ಆನಂದ ವುಂಟು ಮಾಡಿದೆ.

ಈ ಗ್ರಂಥ ಕೋಶದಲ್ಲಿ ಸರ್ವಶಾಸ್ತ್ರ ವಿಷಯಗಳು, ಶ್ರೀಪಾದರ ತತ್ವ ಬಹು ಮುಖದಿಂದ ತಿಳಿಸುವ ಅನೇಕ ವಿಷಯಗಳು ಇವೆ. ಮುಮುಕ್ಷರಿಗೆ ಆಗುವ ಸಕಲ ವಿಧ ಸಂಶಯಗಳನ್ನು ನಿರ್ಮೂಲಿಸಲು, ದತ್ತೋಪಾಸಕರಿಗೆ ಇದು ದಾರಿದೀಪ. 'ಮಮಾತ್ಮ ಸರ್ವಭೂತಾತ್ಮ' ಎಂದು ಭಗವಾನರು ಇದ್ದ ಹಾಗೆ, ಶ್ರೀಪಾದರು ಸಕಲ ಜೀವ ಆತ್ಮರೂಪವಾಗಿ ಪ್ರಕಾಶಿಸುತ್ತಿದ್ದಾರೆ. ಆ ಶ್ರೀಗಳ ಆತ್ಮವೇ ಈ ಗ್ರಂಥ! ಇದರ ಪಾರಾಯಣ, ವೇದ ಪಾರಾಯಣವೇ. ಆದ್ದರಿಂದ ಪಠಣಾಪಾರಾಯಣಾ ಯೋಗ್ಯವಾದ ''ಶ್ರೀಪಾದ ಶ್ರೀವಲ್ಲಭರ ಚರಿತಾಮೃತ'' ದತ್ತ ಭಕ್ತರಿಗೆ ಕಲ್ಪವೃಕ್ಷವಾಗಿ ನಿಲ್ಲುವಂತಾಗಲಿ. ಶ್ರೀಪಾದ ಶ್ರೀವಲ್ಲಭರನ್ನು ಸ್ಮರಿಸುವ ಜೀವನವೇ ಜೀವನ. ಅವರ ನಾಮವನ್ನು ಜಪಿಸುವ ಮನಸ್ಸೇ ಮನಸ್ಸು. ಆದ್ದರಿಂದ, ಆ ಪರಮಪಾವನನ್ನು ನಿತ್ಯವೂ ಸ್ಮರಿಸುತ್ತಾ, ಯೋಚಿಸುತ್ತಾ, ಪ್ರಾರ್ಥಿಸುತ್ತಾ, ಎಲ್ಲರೂ ತಮ್ಮ ಜೀವನವನ್ನು ಸಫಲ ಮಾಡಿಕೊಳ್ಳುವಂತರಾಗಲಿ!

ಲೋಕಾಸ್ಸಮಸ್ತಾ ಸುಖಿನೋಭವಂತು

## ಶ್ರೀಪಾದ ಶ್ರೀವಲ್ಲಭ ಚರಿತಾಮೃತದಲ್ಲಿ ನಾವು ಕಂಡಬಂದ ಶ್ರೀಪಾದರ ಭಕ್ತಾಗ್ರಗಣ್ಯರು. ಈ ಮಹನೀಯರನ್ನು ಅರಿತು, ಪದೇ ಪದೇ ನೆನೆಯುವುದು ನಮ್ಮ ಸಂಪ್ರದಾಯವಲ್ಲವೇ


ಶ್ರೀಯುತರು ........................................... ಪುಟ

ಅಪ್ಪಲರಾಜಶರ್ಮ ........................................ iv

ಸುಮತಿ ಮಹಾರಾಣಿ ...................................... iv

ಶ್ರೀಧರ್ ರಾಜಶರ್ಮ ...................................... iv

ರಾಮರಾಜಶರ್ಮ ......................................... iv

ವಿದ್ಯಾಧರಿ, ರಾಧ, ಸುರೇಖ ................................ iv

ಮಲ್ಲಾದಿ ಬಾಪನ್ನಾವಧಾನಿ, ಅಖಂಡಲಕ್ಷ್ಮಿರಾಜಮಾಂಬ

ಶಂಕರಭಟ್ಟ ............................................. iv

ಮಲ್ಲಾದಿ ಗೋವಿಂದ ದೀಕ್ಷಿತರು ............................. v

ಸಜ್ಜನಗಡ ರಾಮಸ್ವಾಮಿ .................................... vi

ಗಂಗಾಧರ ಸರಸ್ವತಿ ........................................ vii

ಶ್ರೀವಾಸುದೇವಾನಂದ ಸರಸ್ವತಿ (ಟೇಂಬೇ) ಸ್ವಾಮಿ..... vii

ಸಚ್ಚಿದಾನಂದೇಂದ್ರ ಸರಸ್ವತಿಸ್ವಾಮಿ ......................... vii

ಬ್ರಹ್ಮಜ್ಞ ಕವಿ ಶ್ರೀ ದೇವರಾವ್ ಕುಲಕರ್ಣಿ ............. vii

ಸ್ವಾಮಿ ವೇಣ್ವಾನಂದಗಿರಿ ..................................... ix

ಶ್ರೀಮತಿ ಕಮಲಮ್ಮ.......................................... xiv

ಶ್ರೀ ಸದ್ಗುರು ರಾಮಸ್ವಾಮಿಗಳು .......................... xiv

ವ್ಯಾಘ್ರೇಶ್ವರ ಶರ್ಮ ........................................ xv

ಸಿದ್ಧ ಯೋಗೀಂದ್ರರು........................................ 7

ವಲ್ಲಭದಾಸ ................................................. 9

ನಂಬೂದ್ರಿ (ಮಾಧವ) ..................................... 18

ಕಾಣಾದ ಮಹರ್ಷಿ, ಅವರಸಿದ್ಧಾಂತ ........................ 19

ಪಳನಿ ಸ್ವಾಮಿಗಳು ......................................... 19

ಶ್ರೀಯುತರು ........................................... ಪುಟ

ಕಾಲನಾಗ ಋಷಿಗಳು ....................................... 25

ಶಿವಶರ್ಮ .................................................. 28

ತಿರುಮಲದಾಸರು .......................................... 38

ಮಲ್ಯಾಧಿ ಶ್ರೀಧರ ಅವಧಾನಿ ............................. 38

ಮಲ್ಯಾದಿ ಬಾಪನ್ನವಾಧಾನಿ (ಸತ್ಯ ಋಷೀಶ್ವರರು)

ಹರಿದಾಸ (ತಿರುಮಲದಾಸರ ಮಗ) ..................... 40

ವೈಶ್ಯ ವೆಂಕಟಪ್ಪಯ್ಯ ಶ್ರೇಷ್ಠಿ.................................. 40

ವತ್ಸವಾಯ ನರಸಿಂಹ ವರ್ಮ ............................. 40

ಲಕ್ಷ್ಮಿನರಸಿಂಹರಾಜ ಶರ್ಮ ................................ 42

ವಿಷ್ಣುದತ್ತ ಮತ್ತು ಸುಶೀಲ ದಂಪತಿಗಳು .................. 45

ನರಸಾವಧಾನಿ ಪಂಡಿತರು ................................. 47

ಅಶುತೋಷ................................................... 47

ಬ್ರಹ್ಮಜ್ಞಾನಿ, ಜರ್ಮನಿಯಜಾನ್ .......................... 72

ವಿದ್ಯಾರಣ್ಯ ಮಹರ್ಷಿ ....................................... 77

ಸಾಯಣಾಚಾರ್ಯ, ಕೃಷ್ಣ ಸರಸ್ವತಿ ........................ 77

ಗಾಡ್ಗೆ ಮಹಾರಾಜ್ (ಅಗಸ) .............................. 83

ಸಮರ್ಥ ಸದ್ಗುರು ........................................... 84

ಕಾಲಾಗ್ನಿ ಶಮನ ............................................ 85

ಪಾಪಯ್ಯ ಶಾಸ್ತ್ರಿ.............................................. 88

ಶ್ರೀಪಾದರಾಗಿ ಅವತರಿಸಿದ್ಧ

ವಿಶ್ವೇಶ್ವರ ಪ್ರಭುಗಳು, ಸಚ್ಚಿದಾನಂದ ಅವಧೂತರು ............... 90

**ಶ್ರೀಯುತರು ............................................ ಪುಟ**

ಸುಬ್ಬಯ್ಯ ಶ್ರೇಷ್ಠಿ............................................. 92
ಬಿಲ್ವಮಂಗಳ, ಚಿಂತಾಮಣಿ ............................. 92
ಚಂದ್ರಶೇಖರ, ವಿಶ್ವನಾಥ ಮುರಳಿಕೃಷ್ಣ ಮತ್ತು
ಕಾಡೇಪಲ್ಲಿ ದತ್ತಾತ್ರೇಯ ಅವಧಾನಿಗಳು ................103
ಮಾಧವಾಚಾರ್ಯ, ಸಾಯಣಾಚಾರ್ಯ ಮತ್ತು
ಶ್ರೀ ಕೃಷ್ಣ ಸರಸ್ವತಿ ........................................ 104
'ಲಾಬಾಧ' ಮಹರ್ಷಿ ..................................... 107
ಮಲ್ಲಯೋಧ ಕುಲಶೇಖರ, ಭೀಮ ..................... 113
ಆನಂದಶರ್ಮ ............................................. 115
ವೆಂಕಯ್ಯ ..................................................117
ಮಾಯಣಾಚಾರ್ಯ, ಶ್ರೀಮತಿ, ಮಾಧವ .............121
ಶ್ರೀಕೃಷ್ಣ ಸರಸ್ವತಿ, ಶ್ರೀಗಳ ಗುರುಗಳು ................. 122
ದತ್ತಾನಂದ ಸ್ವಾಮಿಗಳು ................................... 128
ಬಂಗಾರಪ್ಪ.................................................. 137
ಸುಂದರ ರಾಮಶರ್ಮ ...................................... 144
ಶ್ರೀಮನ್ನಾರಯಣ ........................................... 148
ಭಲ್ಲೂಕ ................................................... 151
ನಾಮಾನಂದರು ...........................................160
ಸುಶೀಲ ...................................................165
ರವಿದಾಸ ..................................................171
ವಲ್ಲಭೇಶ್ವರ ಶರ್ಮ ........................................ 173
ಲಿಂಗಣ್ಣ ಶಾಸ್ತ್ರಿ............................................. 177
ಗಣಪತಿ ಶಾಸ್ತ್ರಿ..............................................180
ಗುರುಚರಣರು...............................................188
ಹರಿದಾಸ ....................................................190
ನಿಸ್ಸಾವಧಾನಿ ............................................... 191

**ಶ್ರೀಯುತರು ............................................ ಪುಟ**

ದಂಡಿಸ್ವಾಮಿ ...............................................198
ಕೃಷ್ಣದಾಸ ................................................. 202
ಗುರುದತ್ತ ಭಟ್ಟು ........................................... 206
ಶಿವಯ್ಯ ......................................................211
ಧರ್ಮಗುಪ್ತರು, ಶಿವಯೋಗಿ ........................... 213
ವಿರೂಪಾಕ್ಷ.................................................. 229
(ಮೈಲಾರರು, ವೀರಮುಷ್ಠರು, ಗಂಗಕಾವಿಳ್ಳರು)
ನವನಾಥರು, ನವಕೃಷ್ಣರು .............................. 241
ನರಸಿಂಹರಾಯ, ರಮಣಿ ............................... 243
ಶರಭೇಶ್ವರ ಶಾಸ್ತ್ರಿ ...........................................247
ವೇದಾಂತಶರ್ಮ ಅರುಂಧತಿ
(ಬಂಗಾರಯ್ಯ) (ಬಂಗಾರಮ್ಮ) ....................... 255
ಬೈರಾಗಿ (ಭಗಳಾಮುಖಿ) .............................. 265
ನಾಗೇಂದ್ರ ಶಾಸ್ತ್ರಿ (ಕಾಲನಾಗ ಮಣಿ) .................272
ಅರ್ಚಕ ಭಾಸ್ಕರ ಶಾಸ್ತ್ರಿ ..................................... 276
ರೈತ ವೆಂಕಯ್ಯ.................................... 282, 287
ನರಸಿಂಹ ಖಾನ್......................................... 286
ಶ್ಯಾಮಾಚರಣನು ................................ 299, 301
ಶಾಯಿ (ಹನುಮ)........................................ 300
ಸ್ವಾಮಿ ಸಮರ್ಥ ......................................... 300
ಮಹಬೂಬ್ ಸುಭಾನಿ (ವಾರಿಷ್ ಆಲೀಷಾ),
ಗೋಪಾಲ್‌ರಾವ್ (ವೆಂಕೋಸಾ) .......................301
ಮಾಣಿಕ್ಯಪ್ರಭುಗಳು, ವೆಂಕಾವಧಾನಿಗಳು .............. 302
ಬ್ರಾಹ್ಮಣನ ದರಿದ್ರ, ಭಕ್ತರ ಪಾಪಕರ್ಮ
ಯುವತಿಗೆ ಮದುವೆ ಅನುಗ್ರಹಿಸುವುದು ...............315
ಬ್ರಾಹ್ಮಣನ ಹೊಟ್ಟೆ ನೋವು,
ಕ್ಷಯ ತೊಲಗಿಸುವುದು .................................318

# ಶ್ರೀಪಾದ ಶ್ರೀವಲ್ಲಭ ಮಹಾಸಂಸ್ಥಾನ, ಶ್ರೀಕ್ಷೇತ್ರ ಪೀಠಾಪುರಂ

ಭಾರತ ದೇಶದ ಭೂಮಂಡಲದಲ್ಲಿ ಕರ್ಮಭೂಮಿ ಮತ್ತು ಪುಣ್ಯಭೂಮಿಯಾಗಿದೆ. ಇಲ್ಲಿಯ ನದಿಗಳು ಕ್ಷೇತ್ರಗಳು ಪುರಾಣ ಪ್ರಸಿದ್ಧಿ. ಅಂತಹ ಕ್ಷೇತ್ರಗಳಲ್ಲಿ ಪೀಠಾಪುರ ಪ್ರಸಿದ್ಧವಾದದ್ದು. ಚಾರಿತ್ರಾತ್ಮಕ ದಿವ್ಯ ಪುಣ್ಯಕ್ಷೇತ್ರ. ಇದು ತ್ರಿಲಿಂಗ ದೇಶಾಂತರ್ಗತವಾದ ಭೀಮಮಂಡಲದ, ಏಲಾನದಿ (ಏಲೇರು) ತೀರದಲ್ಲಿದೆ. **ಕರಂಜಿಯಾ, ಕುರುವಪುರ, ನರಸೋಬಾವಾಡಿ, ಗಾಣುಗಾಪುರ. ಔದುಂಬರ, ಅಂತಹ ವಿಶಿಷ್ಟ ದತ್ತ ಕ್ಷೇತ್ರಗಳಿಗೆ ಮೂಲಸ್ಥಾನ ಮತ್ತು ಸಾಕ್ಷಾತ್ ದತ್ತನೇ ಆದ ಶ್ರೀಪಾದ ಶ್ರೀವಲ್ಲಭರ ಜನುಮ ಸ್ಥಾನ ಈ ಪೀಠಾಪುರ.**

ಗುರುಚರಿತ್ರೆಯಂತಹಾ ಪವಿತ್ರ ಗ್ರಂಥಗಳ ಆಧಾರವಾಗಿ ಎಷ್ಟೋ ದತ್ತ ಭಕ್ತರು ಎಲ್ಲಾ ಕಡೆಯಿಂದ, 'ಶ್ರೀ ದತ್ತಾ ಶ್ರೀ ಪಾದ ವಲ್ಲಭಾ' ಎನ್ನುತ್ತಾ ಶ್ರೀ ಪಾದರ ಜನುಮ ಸ್ಥಾನ ಸೇರಿ, ಸೇವೆ ಮಾಡುತ್ತಿರುವುದು ಮಾಮೂಲೇ. ಅಂತಹ ಸಂದರ್ಭಗಳಲ್ಲಿ 11-11-1963 ಸೋಮವಾರ ಶ್ರೀ ಶ್ರೀ ಪರಮಹಂಸ ಸಚ್ಚಿದಾನಂದೇಂದ್ರ ಸರಸ್ವತಿಸ್ವಾಮಿಗಳು, ಅವರ ಶಿಷ್ಯರು ಬ್ರಹ್ಮಜ್ಞಕವಿ ಶ್ರೀ ದೇವರಾವ್ ಕುಲಕರ್ಣಿಗಳು ಬಂದು ಶ್ರೀಕ್ಷೇತ್ರ ಪೀಠಾಪುರದ ಶ್ರೀ ಕುಕ್ಕುಟೇಶ್ವರಸ್ವಾಮಿಗಳ ಸನ್ನಿಧಿಯಲ್ಲಿ ತಂಗಿದ್ದ ಸ್ವಯಂಭೂದತ್ತನನ್ನು ಸೇವಿಸಿ, ಸ್ವಾಮಿಯನ್ನು ಕುರಿತು ವಿಶೇಷ ಪ್ರಚಾರ ಮಾಡಿದರು. ಇವರ ಪ್ರೋತ್ಸಾಹ ಮತ್ತು ಸದ್ಗುರು ಶ್ರೀಧರರ ಪ್ರೇರಣೆಯಿಂದ ಸಮರ್ಥ ರಾಮದಾಸು ಸಂಪ್ರದಾಯದವರನ್ನೂ, ಅಪರ ದತ್ತಾವತಾರಿ ಭಗವಾನ್ ಸದ್ಗುರು ಶ್ರೀಧರ ಸ್ವಾಮಿಗಳ ಪ್ರಿಯಶಿಷ್ಯರು, ಶ್ರೀ ದತ್ತ ಉಪಾಸಕರು, ಬ್ರಹ್ಮಚರ್ಯವ್ರತ ನಿಷ್ಠಾಗರಿಷ್ಠರು, ಸಜ್ಜನಗಡ್ಡ ನಿವಾಸಿ, ಜಯ ಜಯರಘುವೀರ ಸಮರ್ಥ ಸದ್ಗುರು ಶ್ರೀ ರಾಮಸ್ವಾಮಿ ಅವರು ಶ್ರೀಕ್ಷೇತ್ರ ಪೀಠಾಪುರಕ್ಕೆ ಬಂದಿದ್ದರು. ಶ್ರೀಕ್ಷೇತ್ರ ಪೀಠಾಪುರದಲ್ಲಿ ಸ್ವಾಮಿ ಇರುವುದನ್ನು, ಅವತಾರ ವಿಶಿಷ್ಟತೆಯನ್ನು ಬೆಳಕಿಗೆ ತರುವುದು, ದತ್ತ ಭಕ್ತಿ ಪ್ರಚಾರ ಎಂಬ ಅಂಶಗಳನ್ನು ಅವರ ದತ್ತ ಸೇವೆಯ ಮುಖ್ಯ ಭಾಗಗಳಾಗಿ ಮನಸ್ಸಿನಲ್ಲಿ ಸ್ಥಿರಪಡಿಸಿ, ಶ್ರೀ ದತ್ತಾತ್ರೇಯ ದೇಗುಲ ಪುನರುದ್ಧರಣೆ ಮಾಡಿ ನಿತ್ಯಪೂಜೆ ಸ್ಥಿರಮಾಡಿ, ವೈಭವವಾಗಿ ಪೂಜೆಗಳು ನಡೆಸಿ, ಶ್ರೀರವರ ಸ್ವಕ್ಷೇತ್ರದಲ್ಲಿ ಶ್ರೀಪಾದ ಶ್ರೀವಲ್ಲಭರ ಪ್ರಚಾರ ಕೈಹಿಡಿದರು.

ಅದಾಗಿ ಸ್ವಾಮಿಗಳ ಅನುಗ್ರಹಕ್ಕೆ ಪಾತ್ರರಾದ ಭಕ್ತರನ್ನು ಸೇರಿಸಿ, ಶ್ರೀ ದತ್ತಾತ್ರೇಯ ಭಕ್ತ ಸಮಾಜವನ್ನು ಸ್ಥಾಪಿಸಿ, ಶ್ರೀ ದತ್ತರ ಉಪಸ್ಥಿತಿ ಮತ್ತು ಪೀಠಾಪುರದಂದು ಶ್ರೀಪಾದ ಅವತಾರ ವಿಶಿಷ್ಟತೆಯನ್ನು ವಿಶೇಷವಾಗಿ ಪ್ರಚಾರ ಮಾಡಿದರು. ಅಲ್ಲಿಂದ ಮಹಾರಾಷ್ಟ್ರ, ಕರ್ನಾಟಕ, ಆಂಧ್ರಗಳಿಂದ ಎಷ್ಟೋ ಭಕ್ತರು ಪೀಠಾಪುರಕ್ಕೆ ಬಂದು ದರ್ಶಿಸಿ, ಸೇವಿಸಿ ಆನಂದ ಪಡುತ್ತಿದ್ದಾರೆ. ದಿನೇ ದಿನೇ ಭಕ್ತರು ಬಂದು ಹೋಗುವುದು ಹೆಚ್ಚಾಗಲೂ, ಅವರಿಗೆ ಅಲ್ಲಿ ತಂಗಲೂ ಅನುಕೂಲ ಮಾಡುವುದು ಕನಿಷ್ಠ ಧರ್ಮವೆಂದು, ಅದು ದತ್ತ ಸೇವೆ ಎಂದೂ ಗಣಿಸಿ, ಶ್ರೀ ರಾಮಸ್ವಾಮಿಗಳು, ಅದಕ್ಕಾಗಿ ಭಕ್ತರನ್ನು ಪ್ರೋತ್ಸಾಹಿಸಿದರು. 'ಶ್ರೀಪಾದ ಶ್ರೀವಲ್ಲಭ ಮಹಾಸಂಸ್ಥಾನ' ಎಂಬ ಒಂದು ಸಂಘವನ್ನು ಏರ್ಪಾಟು ಮಾಡಿದರು.

ಈ ಸಂಘ, ಭಕ್ತರ ವಿರಾಳಗಳಿಂದ ಒಂದು ಮನೆ ಕೊಂಡು, ಅದರಲ್ಲಿ ತಂಗಲೂ ಬದಲಾವಣೆ ಮಾಡಿದರು. ಮೊದಲಬಾರಿಗೆ ಇಲ್ಲಿ ಉತ್ತರದಿಕ್ಕಲ್ಲಿ ಔದುಂಬರವನ್ನು ಪಂಡಿತರಿಂದ ಶಾಸ್ತ್ರೋಕ್ತವಾಗಿ ಪ್ರತಿಷ್ಠಿಸಿದರು. ನಂತರ ಅಲ್ಲಿ ಒಂದು ಸುಂದರವಾದ ಮಂದಿರವನ್ನು ನಿರ್ಮಿಸಿ, ಶ್ರೀರವರ ಪಾದುಕೆಗಳನ್ನು ಪ್ರತಿಷ್ಠಿಸಿದರು. ಈ ಪಾದುಕಾ ಮಂದಿರದಲ್ಲಿ ಶ್ರೀಪಾದ ಶ್ರೀವಲ್ಲಭ, ಶ್ರೀ ದತ್ತಾತ್ರೇಯ, ಶ್ರೀ ನೃಸಿಂಹ ಸರಸ್ವತಿಸ್ವಾಮಿಗಳ ಅತ್ಯಂತ ಮನೋಹರವಾದ ಬಿಳಿಕಲ್ಲು ಮೂರ್ತಿಗಳನ್ನು ಸ್ಥಾಪಿಸಿದರು. ಇಂತಹ ಪಾದುಕೆಗಳು, ದೇಶಾದ್ಯಂತ ದತ್ತ ಕ್ಷೇತ್ರಗಳಲ್ಲಿ ಎಲ್ಲೂ ಇಲ್ಲ. ಇವು ಪಾದುಕೆಗಳಲ್ಲ, ಸ್ವಾಮಿಯ ದಿವ್ಯಪಾದಗಳೇ! ಇವುಗಳ ದರ್ಶನವೇ ಧನ್ಯ.

ಶ್ರೀ ರಾಮಸ್ವಾಮಿ ಸಂಕಲ್ಪ, ಸಂಘದ ಕೃಷಿ, ಭಕ್ತರ ಸಹಾಯ ಸಹಕಾರಗಳಿಂದ ಈ ಮಂದಿರದ ಮುಂಭಾಗದಲ್ಲಿ ಭಕ್ತರ ಪ್ರದಕ್ಷಿಣೆ, ಜಪ, ಪಾರಾಯಣ ಸೌಲಭ್ಯ ಮತ್ತು ಉಪನ್ಯಾಸಗಳಿಗೆ ದೊಡ್ಡ ಸುಂದರ ಮಂಟಪ ನಿರ್ಮಿಸಿದರು. ಋಷೀಶ್ವರರು, ತಪೋಸಂಪನ್ನರು, ಆಚಾರ್ಯರು ಅನುಷ್ಠಾನ ಮಾಡಿಕೊಳ್ಳಲು ಮಂದಿರದ ಹಿಂಭಾಗ 2 ಕೊಠಡಿಗಳ ಒಂದು ಧ್ಯಾನ ಮಂದಿರವನ್ನೂ ನಿರ್ಮಿಸಿದರು.

ಪಾದುಕಾಮಂದಿರದ ದಕ್ಷಿಣ ಭಾಗದಲ್ಲಿ ಭಕ್ತರಗಾಗಿ, ನಿವಾಸಯೋಗ್ಯವಾದ 16 ಕೊಠಡಿಗಳು, 2 ದೊಡ್ಡ ಪ್ರಾಂಗಣಗಳಿಂದ, 2 ಅಂತಸ್ಥಿನ ಎಲ್ಲಾ ಸೌಕರ್ಯಗಳುಳ್ಳ ವಸತಿ ಗೃಹವನ್ನು ನಿರ್ಮಿಸಿದರು. ಸಂಸ್ಥಾನದ ಆಗ್ನೇಯ ಮತ್ತು ವಸತಿ ಗೃಹದ ಪೂರ್ವದಲ್ಲಿ ಪಾಕಶಾಲ (ಕೆಳಗಿನ ಭಾಗ) ಮತ್ತು ಧ್ಯಾನಮಂದಿರ (ಮೇಲ್ಭಾಗ) ಕ್ಕಾಗಿ ಅನುವಾಗಿ 2 ಅಂತಸ್ಥಿನ ಭವನ ನಿರ್ಮಿಸಿದರು. ಇವೆಲ್ಲವನ್ನೂ ಶ್ರೀಪಾದ ಶ್ರೀವಲ್ಲಭ ಸೇವಾ ಸಂಘ ನಿರ್ವಹಿಸುತ್ತಿದೆ.

ಶ್ರೀಪಾದ ಶ್ರೀವಲ್ಲಭರ ದರ್ಶನಾರ್ಥವಾಗಿ, ವಿವಿಧ ಪ್ರಾಂತಗಳಿಂದ ಬರುವ ಭಕ್ತರ ಊಟ, ಉಪಚಾರ ಮತ್ತು ನಿತ್ಯ ಅನ್ನದಾನ ಕಾರ್ಯಕ್ರಮಗಳು ನಿರ್ವಹಿಸುವುದಕ್ಕಾಗಿ, ಅನ್ನಪೂರ್ಣ ಭೋಜನಶಾಲೆ ಎಂಬ ದೊಡ್ಡ ಭೋಜನ ಶಾಲೆಯನ್ನು ಶ್ರೀಪಾದ ಶ್ರೀವಲ್ಲಭ ಸಂಘ ನಿರ್ಮಿಸಿದೆ. ಇದನ್ನು ಭಕ್ತರು ಅಕ್ಷರಾಭ್ಯಾಸ, ಉಪನಯನ ಮುಂತಾದ ಶುಭಕಾರ್ಯಗಳಿಗೂ ಸಹಾ ಉಪಯೋಗಿಸಿಕೊಳ್ಳಬಹುದು.

ಈ ಭೋಜನಶಾಲೆಯ ಪೂರ್ವ ಭಾಗಕ್ಕೆ ಮತ್ತೊಂದು 2 ಅಂತಸ್ಥಿನ ವಸತಿ ಭವನ ಸಹಾ ಇದೆ. ಸದ್ಯಕ್ಕೆ ಸಂಸ್ಥಾನದವರು, ಶ್ರೀಗಳ (1) ಆಲಯ ಪ್ರಾಂಗಣದಲ್ಲಿ ಒಂದು ಪ್ರತಿಷ್ಠಕರವಾದ ಗಾಲಿಗೋಪುರ ನಿರ್ಮಾಣವನ್ನು, (2) ಅನ್ನಪೂರ್ಣ ಭೋಜನ ಶಾಲೆಯ ಎರಡನೆಯ ಅಂತಸ್ಥಿನ ನಿರ್ಮಾಣ, (3) ಪಾದುಕಾಮಂದಿರದ ದಕ್ಷಿಣ ಭಾಗದ ಧ್ಯಾನ ಮಂದಿರದ 2ನೇ ಅಂತಸ್ಥು ನಿರ್ಮಾಣ ಮತ್ತು (4) ಅನ್ನಪೂರ್ಣ ಭೋಜನ ಶಾಲೆಗೆ ಪೂರ್ವ ಭಾಗದ ಭವನಕ್ಕೆ ಕೊನೆಯ ಅಭಿವೃದ್ಧಿ ನಿರ್ಮಾಣ/ಸೌಲಭ್ಯ ಕೆಲಸ ಕಾರ್ಯಗಳಲ್ಲಿದ್ದಾರೆ.

**ಶ್ರೀಗಳ ಸಂಸ್ಥಾನ ಕಾರ್ಯಕ್ರಮಗಳಂದು ಭಕ್ತರು ಯಾವ ತರಹ ಭಾಗವಹಿಸಿದರೂ ಅದು ಭಗವಂತನ ಅನುಗ್ರಹದಿಂದ ಸ್ವಾಮಿಗೆ, ಅವರು ಮಾಡುವ ಸೇವಾಭಾಗ್ಯವೇ ಆಗುವುದು.** ಶ್ರೀಪಾದ ಶ್ರೀವಲ್ಲಭ ಸೇವಾಸಂಘಕ್ಕೆ ವಿರಾಳಗಳು ಕೊಡುವ ಭಕ್ತರು 80ಜಿ ಪ್ರಕಾರ ಇನ್‌ಕಂಟಾಕ್ಸ್ ಕಡಿತ ಪಡೆಯಬಹುದು. ಅಭಿವೃದ್ಧಿ ಕಾರ್ಯಗಳಲ್ಲಿ ಇಲ್ಲವೇ, ಸ್ವಾಮಿಯ ನಿತ್ಯಸೇವೆಗಳಲ್ಲಿ ಭಾಗವಹಿಸಲು ಇಚ್ಛಿಸುವವರು ತಮ್ಮ ವಿರಾಳಗಳನ್ನು ನೇರವಾಗಿ ಸಂಸ್ಥಾನಕ್ಕೆ ಕೊಟ್ಟು ರಶೀದು ಹೊಂದಬಹುದು. ಆಥವಾ ಅಂಚೆ ಮೂಲಕ ಕಳುಹಿಸಬಹುದು. ಕಟ್ಟಡಾಭಿವೃದ್ಧಿ ಮತ್ತು ಶಾಶ್ವತ ಅನ್ನದಾನಕ್ಕೆ ಚಂದಾಗಳು ಕಳುಹಿಸುವ ಭಕ್ತರು ಡಿ.ಡಿ. ಅಥವಾ ಚೆಕ್ಕುಗಳನ್ನು ಶ್ರೀಪಾದ ಶ್ರೀವಲ್ಲಭ ಸೇವಾಸಂಘ, ಪೀಠಾಪುರಂ ಹೆಸರಲ್ಲಿ ಕೊಡಬೇಕಾಗಿ ವಿನಂತಿ. ಶ್ರೀಗಳ ಪೂಜಾದಿ ಕಾರ್ಯಕ್ರಮಗಳು ಬಯಸುವವರು ಡಿ.ಡಿ.ಗಳು ಅಥವಾ ಚೆಕ್ಕುಗಳನ್ನು, ಶ್ರೀಪಾದ ಶ್ರೀವಲ್ಲಭ ಮಹಾಸಂಸ್ಥಾನ, ಪೀಠಾಪುರಂ ಹೆಸರಿಗೆ ಕಳುಹಿಸಬೇಕಾಗಿ ವಿನಂತಿ.



## ಶ್ರೀಕ್ಷೇತ್ರ ಪೀಠಾಪುರಂನಂದು ಶ್ರೀಪಾದ ಶ್ರೀವಲ್ಲಭ ಮಹಾಸಂಸ್ಥಾನ ಪೀಠಾಧಿಪತಿಗಳು

## ಸದ್ಗುರು ಶ್ರೀ ರಾಮಸ್ವಾಮಿಗಳು

ಶ್ರೀ ಸದ್ಗುರು ರಾಮಸ್ವಾಮಿಗಳು 1925ನೇ ವರುಷ ಕರ್ನಾಟಕದಲ್ಲಿ ತುಂಗಾನದಿ ತೀರದಲ್ಲಿನ ದೂರ್ವಾಸ ಕ್ಷೇತ್ರವಾದ ಶಿವಮೊಗ್ಗ ಗ್ರಾಮದಲ್ಲಿ ಮಲ್ಲಾರಪ್ಪ ಪದ್ಮಾವತಿ ಪುಣ್ಯದಂಪತಿಗಳಿಗೆ ಜನ್ಮಿಸಿದರು. ಬಾಲ್ಯದಲ್ಲೇ ಭಗವದ್ಭಕ್ತಿ, ಧ್ಯಾನ, ಭಜನೆ ಮಾಡುತ್ತಾ ದೊಡ್ಡವರ ಜೊತೆ ಸತ್‌ಸಾಂಗತ್ಯ ಮಾಡತೊಡಗಿದರು. ಭಗವದ್ಗೀತೆ, ರಾಮಾಯಣ ನಿತ್ಯ ಪಾರಾಯಣವಾಗಿತ್ತು. ಭಕ್ತಿಭಾವನೆಯಿಂದ, ವೈರಾಗ್ಯ ಹೆಚ್ಚಿ, ಶ್ರೀ ಸದ್ಗುರು ಅನ್ವೇಷಣೆಯಲ್ಲಿ 20ನೇ ವಯಸ್ಸಿನಲ್ಲೇ, ಮಹರಾಷ್ಟ್ರ, ಸತಾರಜಿಲ್ಲೆಯ ಸಜ್ಜನಗಡದಲ್ಲಿರುವ ಶ್ರೀಧರ ಸ್ವಾಮಿಗಳನ್ನು ಸೇರಿ, ಶಿಷ್ಯತ್ವದಲ್ಲಿ ರಾಮೋಪಾಸನೆ ಮಾಡಿದರು. ಶ್ರೀಗಳ ದರ್ಶನದಿಂದಲ್ಲೆ ಇವರು ಮತ್ತಷ್ಟು ಸಂಸ್ಕಾರ ಜಾಗೃತಿ ಹೊಂದಿ, ಪ್ರಾಪಂಚಿಕ ವ್ಯವಹಾರ ಪೂರ್ತಿ ಬಿಟ್ಟು, ಶ್ರೀಗಳ ಆದೇಶಾನುಸಾರ ಬ್ರಹ್ಮಚರ್ಯ ದೀಕ್ಷೆಯಲ್ಲಿ ತಪಸ್ಸು ಮಾಡಿದರು. ನವವಿಧ ಭಕ್ತಿಯಿಂದ ಸಮರ್ಥರನ್ನು ಸೇವಿಸಿ, ಅವರ ಆದೇಶಾನುಸಾರ ಬ್ರಹ್ಮಚರ್ಯವ್ರತದಲ್ಲಿದ್ದು, ವರ್ಣಾಶ್ರಮ ಧರ್ಮಾಚರಣೆ ಮಾಡಿದರು. ಗುರು ಆಜ್ಞೆ ಪ್ರಕಾರ, ಪ್ರಮುಖದತ್ತ ಕ್ಷೇತ್ರವಾದ ನರಸೋಬಾವಾಡಿ ಮತ್ತು ಔದುಂಬರಗಳಲ್ಲಿ ಅತಿಯಾಗಿ ದತ್ತ ಮಂತ್ರ ಅನುಷ್ಠಾನ ಮಾಡಿದ ದತ್ತೋಪಾಸಕರು. ಸದ್ಗುರು ಆದೇಶಾನುಸಾರ ದತ್ತ ಭಕ್ತಿ ಪ್ರಚಾರ ದೀಕ್ಷೆ ವಹಿಸಿ, ದೇಶ ಸಂಚಾರ ಪ್ರಾರಂಭಿಸಿದರು. ಶ್ರೀಪಾದ ಶ್ರೀವಲ್ಲಭ ದತ್ತಾತ್ರೇಯರಿಂದ ಆಕರ್ಷಿಸಲ್ಪಟ್ಟು ಆ ಶ್ರೀಪಾದ ಶ್ರೀವಲ್ಲಭರ ಜನುಮ ಸ್ಥಾನ ಶ್ರೀಕ್ಷೇತ್ರ ಪೀಠಾಪುರದಂದು, ಆ ಸ್ವಾಮಿಯ ಭಕ್ತಿ ಪ್ರಚಾರ ಮಾಡಿ, ಸ್ವಾಮಿ ವೈಭವನ್ನು ಬೆಳಸಿ, ಕಳೆದ 40 ವರುಷಗಳಿಂದ ದತ್ತಸೇವೆ ಮಾಡುತ್ತಿದ್ದಾರೆ. ಕರ್ನಾಟಕದ ಹೊಳೆ ನರಸೀಪುರದಲ್ಲಿನ ಅಪರ ಶಂಕರಾಚಾರ್ಯ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳನ್ನು ಸೇವಿಸಿ, ಅವರ ಅನುಗ್ರಹಕ್ಕೆ ಪಾತ್ರರಾಗಿ, ಶ್ರೀ ಆದಿಶಂಕರಾಚಾರ್ಯರ ಪ್ರಸ್ಥಾನತ್ರಯ ಭಾಷ್ಯಗಳಲ್ಲಿ (ಪರಿಣತೆ ಹೊಂದಿ) ಮತ್ತು ಅಲ್ಲಿ ನಿರೂಪಿಸಿದ ಸಾಧನೆಗಳಲ್ಲಿ ಪರಿಣತೆ ಹೊಂದಿ, ಆತ್ಮವಿಜ್ಞಾನ ಸಂಪನ್ನರಾಗಿ, ಪರಾಭಕ್ತಿವಂತರಾಗಿ, ಸಾಧಕರಿಗೆ ಮಾರ್ಗದರ್ಶಿಗಳಾಗಿ ನಿಜಕ್ಕೂ ಲೋಕ ಕಲ್ಯಾಣಕ್ಕೆ ಬೇಕಾದ ಸಕಲ ಸದ್ಗುಣಗಳಿಗೆ ಶ್ರೇಷ್ಠರಾಗಿದ್ದಾರೆ. ಸತ್ಯಜ್ಞಾನ ನಿಷ್ಠರು. ಮಾತೆ ಶ್ರೀಮತಿ ಕಮಲಮ್ಮರವರ ಬೆಂಬಲದಿಂದ ಆಸೇತು ಹಿಮಾಚಾಲ ಪರ್ಯಂತ, ತೀರ್ಥಯಾತ್ರೆಗಳು ಮಾಡಿದರು. ಅನೇಕಾನೇಕ ದತ್ತ ಕ್ಷೇತ್ರಗಳನ್ನು ದರ್ಶಿಸಿದರು.

# ಶ್ರೀಪಾದ ಶ್ರೀವಲ್ಲಭ ಚರಿತಾಮೃತ ಗ್ರಂಥ ಸಪ್ತಾಹ ಪಾರಾಯಣ ವಿಧಾನ

ಶ್ರೀಪಾದ ಶ್ರೀವಲ್ಲಭ ಚರಿತಾಮೃತವನ್ನು ಭಕ್ತಿ ಶ್ರದ್ಧೆಗಳಿಂದ ಪಠಿಸಬೇಕು. ಇದು ಅಕ್ಷರಸತ್ಯ ಗ್ರಂಥವೆಂದು ಶ್ರೀಪಾದರಿಂದಲೇ ನಿರ್ಣಯಿಸಲ್ಪಟ್ಟು, ಆಶೀರ್ವದಿಸಲ್ಪಟ್ಟಿದೆ. ಆದ್ದರಿಂದ ಇದು ವೇದದಂತೆ ಸ್ವತಃ ಪ್ರಾಮಾಣಿಕವಾದದ್ದು. ದೇವತೆಗಳಿಂದ ಸಹಾ ಓದಲ್ಪಡುವ ಗ್ರಂಥ. ಗುರುಚರಿತ್ರೆಯಲ್ಲಿ, ಗುರುಚರಿತ್ರಾ ಪಾರಾಯಣ, ಯಾವ ನಿಬಂಧನೆಗಳಿಂದ ಪಠಿಸಲು ತಿಳಿಸಲಾಗಿದೆಯೋ ಅದೇ ವಿಧಾನ ಈ ಗ್ರಂಥಕ್ಕೂ ವರ್ತಿಸುವುದು. ಸಾಕ್ಷಾತ್ ಶ್ರೀಪಾದ ಶ್ರೀವಲ್ಲಭರಂತೆ ಇದನ್ನು ಭಾವಿಸುತ್ತಾ, 'ಶ್ರೀಪಾದ ಶ್ರೀವಲ್ಲಭ ಚರಿತಾಮೃತಾ ಕಾರೇಣ ಗುರು ದತ್ತಾತ್ರೇಯ ಶ್ರೀಪಾದ ಪರಬ್ರಹ್ಮಣೇ ನಮಃ' ಎಂದು ಗ್ರಂಥವನ್ನು ಸ್ಮರಿಸುತ್ತಾ ಪಠನೆ ನಡೆಸಬೇಕು.

ಸಂಶಯ ಭಾವಬಿಟ್ಟು, ಗ್ರಂಥ ಪಠನೆ ಮಾಡಿದ್ದಲ್ಲಿ ಇಷ್ಟಕಾರ್ಯ ಸಿದ್ಧಿಸುವುದು. ಆದರೇ ಈ ಗ್ರಂಥ ಪಠನೆಯನ್ನು, ಶಂಕೆಯಿಂದ ಮಾಡಿದ್ದಲ್ಲಿ, ಅನೇಕ ಕಷ್ಟಗಳು, ನಷ್ಟಗಳು ಎದುರಾಗುವವೆಂದು ಶ್ರೀಪಾದರೇ ಚರಿತಾಮೃತದಲ್ಲಿ ತಿಳಿಸಿರುತ್ತಾರೆ.

## *ಸಪ್ತಾಹ*

| | | |
|---|---|---|
| ಪಾರಾಯಣ ಮೊದಲ ದಿನ: | 1 ರಿಂದ 6ನೇಯ ಅಧ್ಯಾಯವರೆಗೂ ಓದಿ. | ಅಂದರೇ 1 ರಿಂದ 55 ನೇ ಪುಟ. |
| ಪಾರಾಯಣ ಎರಡನೇ ದಿನ: | 7 ರಿಂದ 12ನೇಯ ಅಧ್ಯಾಯವರೆಗೂ ಓದಿ. | ಅಂದರೇ 56 ರಿಂದ 114 ನೇ ಪುಟ. |
| ಪಾರಾಯಣ ಮೂರನೇ ದಿನ: | 13 ರಿಂದ 18ನೇಯ ಅಧ್ಯಾಯವರೆಗೂ ಓದಿ. | ಅಂದರೇ 115 ರಿಂದ 176 ನೇ ಪುಟ. |
| ಪಾರಾಯಣ ನಾಲ್ಕನೇ ದಿನ: | 19 ರಿಂದ 22ನೇಯ ಅಧ್ಯಾಯವರೆಗೂ ಓದಿ. | ಅಂದರೇ 177 ರಿಂದ 212 ನೇ ಪುಟ. |
| ಪಾರಾಯಣ ಐದನೇ ದಿನ: | 23 ರಿಂದ 34ನೇಯ ಅಧ್ಯಾಯವರೆಗೂ ಓದಿ. | ಅಂದರೇ 213 ರಿಂದ 249 ನೇ ಪುಟ. |
| ಪಾರಾಯಣ ಆರನೇ ದಿನ: | 35 ರಿಂದ 42ನೇಯ ಅಧ್ಯಾಯವರೆಗೂ ಓದಿ. | ಅಂದರೇ 250 ರಿಂದ 288 ನೇ ಪುಟ. |
| ಪಾರಾಯಣ ಕೊನೆಯ ದಿನ: | 43 ರಿಂದ 53ನೇಯ ಅಧ್ಯಾಯವರೆಗೂ ಓದಿ. | ಅಂದರೇ 289 ರಿಂದ 323 ನೇ ಪುಟ. |

ಪಾರಾಯಣ ದಿನಗಳಲ್ಲಿ ಅಂದಿನ ಅಧ್ಯಾಯಗಳು ಮುಗಿಸಿ ಗುರು ದತ್ತಾತ್ರೇಯ ಶ್ರೀಪಾದ ಶ್ರೀವಲ್ಲಭರ ಕರುಣಾಕಟಾಕ್ಷದಿಂದ, ಓದುಗರಿಗೆ ಪರಿಹಾರ ಆಗಬೇಕಾದ್ದ ಸಮಸ್ಯೆ ಅಥವಾ ಕೋರಿಕೆ, 'ಫಲಶ್ರುತಿ'ಯೆಂದು ತಿಳಿಸಲಾದ ಸಂಬಂಧಪಟ್ಟ ಅಧ್ಯಾಯವನ್ನು ಸಹಾ ಭಕ್ತಿಯಿಂದ ಪಠಿಸಿದರೇ, ಆ ಭಕ್ತರಿಗೆ ಒಳ್ಳೆಯ ಫಲ ಸಿಗುವುದು.

ಸಪ್ತಾಹ ದೀಕ್ಷಾನಂತರ 11 ಜನಕ್ಕೆ ಅನ್ನದಾನ ಮಾಡಬೇಕು. ಅಥವಾ ಅದಕ್ಕೆ ಸರಿಬೀಳುವ ದ್ರವ್ಯವನ್ನು ಶ್ರೀಪಾದ ಶ್ರೀವಲ್ಲಭರ ಅಥವಾ ಶ್ರೀ ದತ್ತಾತ್ರೇಯ ಮಂದಿರದಲ್ಲಿ ದಾನವಾಗಿ ಕೊಡಬಹುದು.

# ಶ್ರೀಕ್ಷೇತ್ರ ಪೀಠಾಪುರದ ಮಾರ್ಗ - ವಿವರಗಳು

ಶ್ರೀಕ್ಷೇತ್ರ 'ಪೀಠಾಪುರಂ' ದಕ್ಷಿಣ ರೈಲ್ವೇಯಲ್ಲಿ ವಿಜಯವಾಡ, ವಿಶಾಖಪಟ್ಟಣ ರೈಲು ಮಾರ್ಗದಲ್ಲಿ ಸಾಮರ್ಲಕೋಟ ಜಂಕ್ಷನ್‌ಗೆ 10 ಕಿ.ಮೀ. ದೂರದಲ್ಲಿದೆ. ಶ್ರೀಪಾದ ಶ್ರೀವಲ್ಲಭ ಮಹಾಸಂಸ್ಥಾನ, ಪೀಠಾಪುರಂ ರೈಲ್ವೇಸ್ಟೇಷನ್‌ನಿಂದ 1/2 ಕಿ.ಮಿ. ದೂರದಲ್ಲಿ, ಗೋಪಾಲಸ್ವಾಮಿ ಗುಡಿ ಬೀದಿಯಲ್ಲಿದೆ. ಹೈದರಾಬಾದ್‌ನಿಂದ ಬರುವ ರೈಲುಗಳಲ್ಲಿ ಗೋದಾವರಿ ಎಕ್ಸ್‌ಪ್ರೆಸ್, ಈಸ್ಟ್‌ಕೋಸ್ಟ್ ಎಕ್ಸ್‌ಪ್ರೆಸ್‌ಗಳು ಪೀಠಾಪುರದಲ್ಲಿ ನಿಲ್ಲುವವು.

ಮುಂಬಾಯ್‌ನಿಂದ ಬರುವ ಕೋಣಾರ್ಕ್, ಢಿಲ್ಲಿನಿಂದ ಬರುವ ಲಿಂಕ್, ಗುಜರಾತ್‌ನಿಂದ ವೋಕಾ, ಅಹ್ಮದಾಬಾದ್‌ನಿಂದ ಬರುವ ನವಜೀವನ್, ಬೆಂಗಳೂರಿನಿಂದ ಬರುವ ಪ್ರಶಾಂತಿ ಎಕ್ಸ್‌ಪ್ರೆಸ್‌ಗಳು ಸಾಮರ್ಲಕೋಟ ನಿಲ್ದಾಣದಲ್ಲಿ ನಿಲ್ಲುವವು. ಅಲ್ಲಿಂದ ಪೀಠಾಪುರಕ್ಕೆ ರೈಲು ಮತ್ತು ಬಸ್‌ಗಳ ವ್ಯವಸ್ಥೆ ಅಧಿಕ. ಪೀಠಾಪುರ ತಲುಪುವುದು ಸುಲಭ.

- ಎಲ್ಲಾ ವಿಷಯಗಳಿಗೂ ಸಂಪರ್ಕಿಸಬೇಕಾದ ವಿಳಾಸ -

**ಶ್ರೀಪಾದ ಶ್ರೀವಲ್ಲಭ ಮಹಾಸಂಸ್ಥಾನ**

ಶ್ರೀ ವೇಣುಗೋಪಾಲಸ್ವಾಮಿ ಗುಡಿ ಬೀದಿ, ಪೀಠಾಪುರಂ - 533 450.

ತೂರ್ಪು ಗೋದಾವರಿ ಜಿಲ್ಲಾ, ಆಂಧ್ರಪ್ರದೇಶ. ಫೋನ್: (08869) 250300

# ಶ್ರೀಪಾದ ಶ್ರೀವಲ್ಲಭ ಚರಿತಾಮೃತ

## ಪಾರಾಯಣ ವಿಧಾನ - “ಫಲಶ್ರುತಿ”


| ಅಧ್ಯಾಯ | ಅಧ್ಯಾಯ ಪಠನ ಫಲಿತ | ಪುಟ ಸಂಖ್ಯೆ |
|---|---|---|
| 1. ವ್ಯಾಘ್ರೇಶ್ವರ ಶರ್ಮ ವೃತ್ತಾಂತ | ಗೃಹದಲ್ಲಿ ಶಾಂತಿಸೌಭಾಗ್ಯಕ್ಕಾಗಿ | 1 |
| 2. ಸಿದ್ಧಯೋಗೀಂದ್ರ ದರ್ಶನ, ವಿಚಿತ್ರಪುರ ವೃತ್ತಾಂತ | ಇತರಿಗೆ ಹೇಳಲಾರದ ಮನೋವ್ಯಾಧಿ, ಕ್ಲೇಶ ಪರಿಹರಿಸುವುದು | 6 |
| 3. ಫಲನಿಸ್ವಾಮಿ ದರ್ಶನ, ಕುರುವಪುರ ಸಂದರ್ಶನೆ | ನಾಗದೋಷ ನಿವಾರಣೆ, ಸಂತಾನ ಪ್ರಾಪ್ತಿಗೆ | 17 |
| 4. ಕುರುವಪುರದಲ್ಲಿ ವಾಸವಾಂಬಿಕ ದರ್ಶನ | ಕನ್ಯಕರಿಗೆ ವಿವಾಹ ಪ್ರಾಪ್ತಿ, ಗುರುನಿಂದೆ ಪಾಪ ವಿಮುಕ್ತಿ | 27 |
| 5. ಶಂಕರ ಭಟ್ಟು ತಿರುಪತಿ ಸೇರುವುದು, ಕಾಣಿಪಾಕದಲ್ಲಿ ತಿರುಮಲದಾಸ ಸಂದರ್ಶನೆ | ದೇವತೆಯರ ಹರಿಕೆ ತೀರಿಸದ ಪಾಪ ಪರಿಹಾರ ಮತ್ತು ಅದಕ್ಕೆ ಆಗುವ ವಿಘ್ನವಿನಾಶಕ್ಕಾಗಿ | 33 |
| 6. ನರಸಾವಧಾನಿ ವೃತ್ತಾಂತ | ಪಿತೃದೇವತೆಯರ ಶಾಪ ನಿವೃತ್ತಿಗಾಗಿ | 41 |
| 7. ಖಗೋಳ ವರ್ಣನೆ | ವಿದ್ಯಾಪ್ರಾಪ್ತಿಗಾಗಿ | 56 |
| 8. ದತ್ತಾವತಾರ ವರ್ಣನೆ | ಸಂತಾನಪ್ರಾಪ್ತಿ ಮತ್ತು ಲಕ್ಷ್ಮೀ ಕಟಾಕ್ಷಕ್ಕೆ | 68 |
| 9. ಕರ್ಮಫಲ ವಿಶ್ಲೇಷಣೆ | ಪ್ರಾರಬ್ಧಕರ್ಮ ನಿವಾರಣೆಗೆ | 78 |
| 10. ನರಸಿಂಹಮೂರ್ತಿ ವರ್ಣನೆ | ದೌರ್ಭಾಗ್ಯ ನಿವಾರಣೆಗಾಗಿ | 92 |
| 11. ಸುಬ್ಬಯ್ಯ ಶ್ರೇಷ್ಠಿ, ಚಿಂತಾಮಣಿ, ಬಿಲ್ವಮಂಗಳ ವೃತ್ತಾಂತಗಳು | ದುರಭ್ಯಾಸದಿಂದ ದೂರವಿರಲೂ | 103 |
| 12. ಕುಲಶೇಖರ ವೃತ್ತಾಂತ | ಶರೀರಾರೋಗ್ಯಕ್ಕೆ | 111 |
| 13. ಆನಂದ ಶರ್ಮ ವೃತ್ತಾಂತ | ಪಶುಸಂಪತ್ತು ಬೆಳೆಯಲು, ವ್ಯವಸಾಯ ಫಲಿಸಲು | 115 |
| 14. ದತ್ತದಾಸರಿಗೆ ಅಭಯ ಪ್ರದಾನ | ಕಷ್ಟ ನಿವಾರಣೆಗೆ, ಧೈರ್ಯೋತ್ಸಾಹ ಬೆಳೆಯಲು | 127 |

| ಅಧ್ಯಾಯ | ಅಧ್ಯಾಯ ಪಠನ ಫಲಿತ | ಪುಟ ಸಂಖ್ಯೆ |
|---|---|---|
| 15. ಬಂಗಾರಪ್ಪ ಸುಂದರರಾಮ ಶರ್ಮ ವೃತ್ತಾಂತ | ಅಕಾರಣ ಕಲಹ ಮತ್ತು ಪೂರ್ವಜನ್ಮಕೃತ ದೋಷ ನಿವಾರಣೆಗೆ | 137 |
| 16. ಶ್ರೀಮನ್ನಾರಾಯಣ ವೃತ್ತಾಂತ | ಧನಾಕರ್ಷಣಾ ಶಕ್ತಿ ಬೆಳೆಯಲು | 148 |
| 17. ಶ್ರೀ ನಾಮಾನಂದರ ದರ್ಶನ | ಸಿದ್ಧಪುರುಷರ ಆಶೀರ್ವಾದಕ್ಕೆ | 157 |
| 18. ರವಿದಾಸು ವರ್ಣನೆ | ಪಾಪಕರ್ಮ ನಶಿಸಿ, ಭಾಗ್ಯವಂತ ಜೀವನ ಲಭ್ಯಕ್ಕೆ | 169 |
| 19. ಗುರುಚರಣ ಸಂಗಡ ಸಮಾಗಮ | ಮಾನಸಿಕ ಕಷ್ಟಗಳು ಕಳೆಯಲು | 177 |
| 20. ನಿಸ್ಸಾವಧಾನರ ವೃತ್ತಾಂತ | ಜೀವನದ ದೊಡ್ಡ ಕಷ್ಟನಷ್ಟಗಳ ನಿವಾರಣೆಗಾಗಿ | 186 |
| 21. ದಂಡಿಸ್ವಾಮಿ ಕುಕ್ಕುಟೇಶ್ವರಾಲಯಕ್ಕೆ ಬರುವುದು | ಆಧ್ಯಾತ್ಮಿಕ ಲಾಭ ಮತ್ತು ಪುಣ್ಯಬಲ ಹೆಚ್ಚಲು | 198 |
| 22. ಗುರುದತ್ತ ಭಟ್ಟು ವೃತ್ತಾಂತ | ಕರ್ಮದೋಷಗಳನ್ನು ಹೋಗಲಾಡಿಸಿ, ಮಾನವರಿಗಾಗುವ ಆಟಂಕಗಳ ನಿರ್ಮೂಲನೆಗಾಗಿ | 206 |
| 23. ಶಿವಪೂಜೆ ಗುಟ್ಟು - ವಿವರಣೆ | ಐಶ್ವರ್ಯ ಪ್ರಾಪ್ತಿಗಾಗಿ | 213 |
| 24. ಅರ್ಧನಾರೀಶ್ವರ ತತ್ತ್ವ | ದಾಂಪತ್ಯಾನುಕೂಲತೆಗೆ | 217 |
| 25. ರುದ್ರಾಕ್ಷೆ ಮಹತ್ಮೆ | ಅನೇಕ ವಿಧ ಯೀತಿಬಾಧೆ ಹೋಗಿ, ಸುಖಶಾಂತಿ ಪ್ರಾಪ್ತಿಸಲು | 223 |
| 26. ಕಲಿಯುಗ ಅಂತ - ಲಕ್ಷಣಗಳು | ದುರದೃಷ್ಟ ಹೋಗಿ, ಸತ್ಸಂತಾನ ಪ್ರಾಪ್ತಿಗಾಗಿ | 227 |
| 27. ಪಂಚದೇವ್ ಪಹಾಡ್‌ಬಳಿ ವಿರೂಪಾಕ್ಷರು | ಕಷ್ಟಸ್ಥಿತಿಯಲ್ಲಿ ದೈವ ಸಹಾಯ ಲಭಿಸಲು | 229 |
| 28. ಶ್ರೀ ವಾಸವಿ ನಗರೇಶ್ವರ ವೃತ್ತಾಂತ | ಯೋಗ್ಯವಾದ ಮದುವೆಯ ಸಂಬಂಧಕ್ಕಾಗಿ | 231 |
| 29. ಶ್ರೀಪಾದರ ದಿವ್ಯೋಪದೇಶ | ಪಿತೃದೇವತೆಗಳ ಆಶೀರ್ವಾದ ಲಭಿಸಲು | 234 |
| 30. ಶ್ರೀಪಾದ ಶ್ರೀವಲ್ಲಭ ಮಹಾಸಂಸ್ಥಾನ ಸ್ಥಾಪನೆ ಬಗ್ಗೆ ಶ್ರೀಪಾದರೇ ಹೇಳುವುದು | ಉಜ್ವಲ ಭವಿಷ್ಯತ್ತಿಗಾಗಿ | 235 |

| ಅಧ್ಯಾಯ | ಅಧ್ಯಾಯ ಪಠನ ಫಲಿತ | ಪುಟ ಸಂಖ್ಯೆ |
|---|---|---|
| 31. ದಶ ಮಹಾವಿದ್ಯೆಗಳ ವರ್ಣನೆ | ವಿದ್ಯೆ, ಐಶ್ವರ್ಯ ಮತ್ತು ಅಧಿಕಾರ ಪ್ರಾಪ್ತಿಗೆ | 236 |
| 32. ನವನಾಥರ ವರ್ಣನೆ | ಸದ್ಗುರು ಕಟಾಕ್ಷ ಲಭಿಸಲು | 240 |
| 33. ರಮಣಿ ನರಸಿಂಹರಾಯ ವಿವಾಹ, ಶ್ರೀಪಾದರು ಮಾಡುವುದು | ಯೋಗ್ಯ ಮದುವೆಯ ಸಂಬಂಧ ನಿಶ್ಚಯಕ್ಕಾಗಿ | 243 |
| 34. ಶರಭೇಶ್ವರ ವೃತ್ತಾಂತ | ಸಾಲಗಳು ತೀರಿ, ಸುಖ ಸಮೃದ್ಧಿಗೆ | 246 |
| 35. ಉಗ್ರ ತಾರಾದೇವಿ ವಿವರಣೆ | ವಾಕ್ಸುದ್ಧಿ ಲಭಿಸಲು | 251 |
| 36. ವೇದಾಂತ ಶರ್ಮ ವೃತ್ತಾಂತ | ಅನುಕೂಲ ದಾಂಪತ್ಯಕ್ಕೆ | 255 |
| 37. ಛಿನ್ನ ಮಸ್ತಾದೇವಿ ವರ್ಣನೆ | ಜೀವನ ಗುರಿ, ಗಮ್ಯವಿಲ್ಲದೇ ನಡೆಯುತ್ತಿರಲು | 262 |
| 38. ಬಗಳಾಮುಖಿ ಆರಾಧನೆ - ವಿವರಣೆ | ಆತ್ಮಸ್ಥೈರ್ಯ ಲಭಿಸಲು | 265 |
| 39. ನಾಗೇಂದ್ರ ಶಾಸ್ತ್ರಿಗಳ ಸಮಾಗಮ | ಸರ್ಪದೋಷ ನಿವಾರಣೆಗೆ | 272 |
| 40. ಭಾಸ್ಕರ ಶಾಸ್ತ್ರಿಗಳ ಸಮಾಗಮ | ಅಸಾಧ್ಯ ವಿಷಯಗಳು ಸಾಧ್ಯವಾಗುವುದು | 276 |
| 41. ಕುಹನಾಪರಿವ್ರಾಜಕ ವೃತ್ತಾಂತ | ಇತರರು ಮಾಡುವ ಮೋಸ, ದಗಗಳಿಂದ ಪಾರಾಗಲು | 279 |
| 42. ಶ್ರೀಪಾದರು ಪೀಠಾಪುರದಿಂದ ಮಾಯ ಆಗುವುದು | ಕಳೆದುಹೋದ ಮಕ್ಕಳು ಲಭಿಸಲು | 285 |
| 43. ಅನಘಾಲಕ್ಷ್ಮಿ ವರ್ಣನೆ | ಅಷ್ಟ ಐಶ್ವರ್ಯ ಲಭಿಸಲು | 289 |
| 44. ಸ್ವರ್ಣ ಪೀಠಿಕಾಪುರ ವರ್ಣನೆ | ಉಜ್ವಲ ಭವಿಷ್ಯತ್ತಿಗೆ | 294 |
| 45. ಶ್ರೀ ಹನುಮಂತನನ್ನು, ಭೂಮಿಯ ಮೇಲೆ ಅವತರಿಸಲು ಆದೇಶಿಸುವುದು | ಎಲ್ಲಾ ರಂಗಗಳಲ್ಲಿ ಅಭಿವೃದ್ಧಿ ಪಡೆಯಲು | 299 |
| 46. ಶ್ರೀ ಪೀಠಿಕಾಪುರದಿಂದ ಪಂಚದೇವ್ ಪಹಾಡ್‌ಗೆ ವಿಚಿತ್ರವಾಗಿ ತಂದೆ ತಾಯಿ ಮತ್ತು ಆಶ್ರಿತರನ್ನು ಕರೆಸುವುದು | ತಕ್ಷಣ ಮದುವೆ ಸಂಬಂಧ ನಿಶ್ಚಯವಾಗಲು | 304 |

| ಅಧ್ಯಾಯ | ಅಧ್ಯಾಯ ಪಠನ ಫಲಿತ | ಪುಟ ಸಂಖ್ಯೆ |
|---|---|---|
| 47. ಪಂಚದೇವ್ ಪಹಾಡ್ ದರ್ಬಾರ್ ರೂಪುಗೊಳ್ಳುವುದು ಆತ್ಮೀಯರನ್ನು ವಿಚಿತ್ರವಾಗಿಯೇ ಪೀಠಾಪುರಕ್ಕೆ ಸೇರಿಸುವುದು | ಸರ್ವವಿಧ ಶುಭ ಫಲ ಲಭಿಸಲು | 307 |
| 48. ಪಂಚದೇವ್ ಪಹಾಡ್‌ನಂದು ದರ್ಬಾರ್ ವಿವರಣೆ | ಆರ್ತರಿಗೂ, ಅರ್ಥಾರ್ತರಿಗೂ, ಜಿಜ್ಞಾಸರಿಗೂ ಮೋಕ್ಷ - ಅಂದರೆ ಚತುರ್ವಿಧ ಪುರುಷಾರ್ಥ ಲಭಿಸಲು | 311 |
| 49. ಶ್ರೀಪಾದರು ಕರ್ಮ ವಿಧ್ವಂಸ ಮಾಡುವ ವಿಧಾನ | ಸಮಸ್ತ ಕರ್ಮ ದೋಷಗಳ ಶಾಂತಿಗಾಗಿ | 314 |
| 50. ಗುರುನಿಂದೆ, ದಾರಿದ್ರ್ಯಪ್ರಾಪ್ತಿ, ನಿವಾರಣೆ ನಾಮಸ್ಮರಣೆ | ಗುರುನಿಂದಾ ಪ್ರಾಪ್ತ, ದರಿದ್ರ ಮುಂತಾದ ಶಾಪ ನಿವೃತ್ತಿಗೆ | 317 |
| 51. ಜಲಗಂಡದಿಂದ ರಕ್ಷಣೆ | ಜಲಗಂಡ ಮುಂತಾದ ಗಂಡಗಳಿಂದ ವಿಮೋಚನೆಗಾಗಿ ಮತ್ತು ದೀರ್ಘಾಯುಷ್ಯುಗಾಗಿ | 320 |
| 52. ಶಂಕರ ಭಟ್ಟರ ಯೋಗಾನುಭವ ನಿರೂಪಣೆ | ಎಲ್ಲಾ ಸಮಸ್ಯೆಗಳೂ ಅಪ್ರಯತ್ನವಾಗಿ ಪರಿಷ್ಕಾರವಾಗಲು | 322 |
| 53. ಶ್ರೀಪಾದ ಶ್ರೀವಲ್ಲಭರ ಚರಿತಾಮೃತ, ಪೀಠಿಕಾಪುರ ಸೇರುವ ಪದ್ಧತಿ | ಮಹಾಪಾಪಗಳೆಲ್ಲಾ ಧ್ವಂಸವಾಗಿ, ಅಲ್ಲಿಯವರೆಗೂ ಕಾಡುತ್ತಿರುವ ಅದೃಷ್ಟ ಲಭಿಸಲು | 323 |


## ಸೂಚನೆ

ಮೇಲೆ ತಿಳಿಸಿರುವ ಫಲಿತಗಳನ್ನು ಹೊಂದಬಯಸುವ ಭಕ್ತರು, ಅವರ ಕೋರಿಕೆಗಳ ಸಂಕಲ್ಪ ಮಾಡಿಕೊಂಡು ಶ್ರೀಪಾದ ಶ್ರೀವಲ್ಲಭರ ಚರಿತಾಮೃತ ಸಪ್ತಾಹ ದೀಕ್ಷಾ ಪಾರಾಯಣ ಭಕ್ತಿಯಿಂದ ಮಾಡಬೇಕು

ಅಥವಾ

ಸಂಬಂಧಪಟ್ಟ ಅಧ್ಯಾಯವನ್ನು ಭಕ್ತಿಯಿಂದ 40 ದಿನ (ಮಹಿಳೆಯರು 48 ದಿನ) ಪ್ರತಿನಿತ್ಯವೂ ಸ್ನಾನಾನಂತರ ಪಾರಾಯಣ, ಸ್ತೋತ್ರ, ಭಜನೆ ಮಾಡಿದ್ದಲ್ಲಿ ಸತ್ಫಲ ಲಭಿಸುವುದು.

ಶ್ರೀರಸ್ತು ಶುಭಮಸ್ತು ಅವಿಘ್ನಮಸ್ತು



# ಶ್ರೀಪಾದ ಶ್ರೀವಲ್ಲಭ ಚರಿತಾಮೃತ

## ಅಧ್ಯಾಯ - 1

## ಚರಿತಾಮೃತದ ಮೂಲ (ಲೇಖಕ) ರಚಯಿತ (ಸಂಸ್ಕೃತ) ಶಂಕರ ಭಟ್ಟ ಮತ್ತು ಶ್ರೀ ವ್ಯಾಘ್ರೇಶ್ವರ ಶರ್ಮರ ವೃತ್ತಾಂತಗಳು

ಶ್ರೀ ಮಹಾಗಣಪತಿ, ಶ್ರೀ ಮಹಾ ಸರಸ್ವತಿ, ಅಸ್ಮದ್ಗುರು ಪರಂಪರಗೆ, ಶ್ರೀಕೃಷ್ಣ ಭಗವಾನರಿಗೆ, ಸಮಸ್ತ ದೇವದೇವತಾ ಗಣಗಳಿಗೆ ಪ್ರಮಾಣಪೂರ್ವಕ ಶ್ರದ್ಧಾಂಜಲಿ ಸಮರ್ಪಿಸುತ್ತಾ, ಶ್ರೀ ಮದಖಿಲಾಂಡ ಕೋಟಿ ಬ್ರಹ್ಮಾಂಡನಾಯಕರಾದ, ಶ್ರೀ ದತ್ತ ಪ್ರಭುಗಳ ಹೊಸಾವತರಣ (ಶ್ರೀಪಾದ ವಲ್ಲಭರ) ವೈಭವವನ್ನು ವರ್ಣಿಸಲು ಇಚ್ಛೆ ಪಟ್ಟಿದ್ದೇನೆ.

ಶ್ರೀ ದತ್ತಾತ್ರೇಯರು ಅತಿ ಪ್ರಾಚೀನರು ಮತ್ತು ನಿತ್ಯನೂತನರು. ಶ್ರೀ **ದತ್ತಾತ್ರೇಯರು ಈ ಕಲಿಯುಗದೊಳು ಆಂಧ್ರ ಪ್ರದೇಶದ ಗೋದಾವರಿ ನದಿ ದಡಪ್ರಾಂತ ಶ್ರೀ ಪೀಠಿಕಾಪುರವೆಂಬ ಗ್ರಾಮದಂದು ಶ್ರೀಪಾದ ಶ್ರೀವಲ್ಲಭ ಎಂಬುವ ಹೆಸರಿನಲ್ಲಿ ಅವತರಿಸಿದರು.** ಶ್ರೀಗಳ ದಿವ್ಯ ಚರಿತೆಯನ್ನು, ದಿವ್ಯಲೀಲಾ ವೈಭವವನ್ನು ವರ್ಣಿಸಲು ಮಹಾ ಮಹಾ ಪಂಡಿತರಿಗೇ ಅಸಾಧ್ಯ. ಹಾಗಿರಲೂ ವಿದ್ಯಾಗಂಧ ಎಳ್ಳಷ್ಟಿಲ್ಲದೆ, ಅಲ್ಪನಾದ ನಾನು, ಅವರ ಚರಿತ್ರೆಯನ್ನು ವರ್ಣಿಸಲು ಮುಂದಾಗಿರುವುದು ಕೇವಲ ಅವರ ಸಂಕಲ್ಪ, ದೈವಾಜ್ಞೆ ಮತ್ತು ಅವರ ದಿವ್ಯಾಶೀಸ್ಸುಗಳಿಂದಲೇ ಎಂದು, ಸರ್ವರಿಗೂ ವಿನಯದಿಂದ ತಿಳಿಸುತ್ತೇನೆ.

ನನ್ನ ಹೆಸರು ಶಂಕರ ಭಟ್ಟು, ನಾನು ಕರ್ನಾಟಕ ದೇಶಸ್ಥ, ಸ್ಮಾರ್ತ, ಭಾರಧ್ವಾಜ ಗೋತ್ರೋದ್ಭವ. ಶ್ರೀಕೃಷ್ಣನ ದರ್ಶನಾರ್ಥ ನಾನು ಉಡುಪಿ ಕ್ಷೇತ್ರಕ್ಕೆ ತೆರಳಿದ್ದೆ. ಅಲ್ಲಿ ಬಾಲಕೃಷ್ಣನವಿಲು ಪಿಂಛದಿಂದ, ಮುಗ್ಧ ಮನೋಹರವಾಗಿ ದರ್ಶನವಿತ್ತು, ಕನ್ಯಾಕುಮಾರಿಯ ಶ್ರೀ ಕನ್ಯಕಾ ಪರಮೇಶ್ವರೀ ದೇವಿ ದರ್ಶನ ಮಾಡಲು ಆಜ್ಞಾಪಿಸಿದರು.

ನಾನು ಕನ್ಯಾಕುಮಾರಿಯಲ್ಲಿನ ಶ್ರೀ ಕನ್ಯಕಾ ಪರಮೇಶ್ವರೀ ದೇವಿಯನ್ನು ದರ್ಶಿಸಿದೆ. ಮೂರು ಸಾಗರಗಳ ಸಂಗಮದಲ್ಲಿ ಪುಣ್ಯ ಸ್ನಾನವನ್ನು ಮಾಡಿದೆನು. ಒಂದಾನೊಂದ ಮಂಗಳವಾರ ಶ್ರೀ ದೇವಿಯ ದರ್ಶನಾರ್ಥ ದೇಗುಲ ಪ್ರವೇಶಿಸಿದೆ. ಅರ್ಚಕರು ನಿಷ್ಠೆಯಿಂದ ಪೂಜೆ ಮಾಡುತ್ತಿದ್ದರು. ಆತ, ನನ್ನ ಕೈಯಿಂದ ಕೆಂಬಣ್ಣದ ಹೂವುಗಳನ್ನು ಸ್ವೀಕರಿಸಿ, ಪೂಜಿಸುತ್ತಿರಲು, ಅಂಬೆ ನನ್ನನ್ನು

ಕರುಣಾಪೂರ್ವಕವಾಗಿ ನೋಡುತ್ತಾ, ''ಶಂಕರಾ! ನಿನ್ನ ಎದೆಯಲ್ಲಿನ ಪವಿತ್ರ ಭಕ್ತಿಗೆ ಸಂತುಷ್ಟಳಾಗಿದ್ದೇನೆ. ನೀನು ಕುರುವಪುರಕ್ಕೆ ತೆರಳಿ, ಅಲ್ಲಿರುವ ಶ್ರೀಪಾದ ಶ್ರೀವಲ್ಲಭರನ್ನು ದರ್ಶಿಸಿ, ಜನ್ಮಸಾರ್ಥಕ ಮಾಡಿಕೋ. ಶ್ರೀಪಾದ ಶ್ರೀವಲ್ಲಭರ ದರ್ಶನದಿಂದ ಮಾತ್ರವೇ ನಿನ್ನ ಮನಸ್ಸಿಗೂ, ಆತ್ಮಕ್ಕೂ ಮತ್ತು ಸರ್ವೇಂದ್ರಿಯಗಳಿಗೂ ತಿಳಿಸಲಾರದ ಅನುಭವವನ್ನು ಪಡೆಯುವೆ'' ಎಂದು ಹೇಳಿದರು.

ನಾನು ತಾಯಿಯ ಅನುಗ್ರಹವನ್ನು ಹೊಂದಿ, ಪುಣ್ಯಧಾಮದಿಂದ ಪಯಣವನ್ನು ಮುಂದುವರೆಸುತ್ತಾ, ಸ್ವಲ್ಪ ದೂರದಲ್ಲೇ ಇದ್ದ ಮರುತ್ವಮಲೈ ಎಂಬುವ ಗ್ರಾಮಕ್ಕೆ ಸೇರಿದೆನು. ಶ್ರೀ ಹನುಮಂತ ಸಂಜೀವಿನೀ ಪರ್ವತವನ್ನು ಹಿಂತಿರುಗಿ ಹಿಮಾಲಯಕ್ಕೆ ತೆಗೆದುಕೊಂಡು ಹೋಗುವಾಗ, ಅದರಿಂದ ಒಂದು ಭಾಗ ಜಾರಿ ಕೆಳಗೆ ಬಿತ್ತು ಎಂದೂ, ಅದನ್ನೇ ಮರುತ್ವಮಲೈ ಎಂದು ಕರೆಯುವರೆಂದು ತಿಳಿದುಕೊಂಡೆ.

ಮರುತ್ವಮಲೈ ಗ್ರಾಮದಲ್ಲಿನ ಆ ಬೆಟ್ಟ ನೋಡಲೂ ಬಹುಚಂದ. ಅದರಲ್ಲಿ ಕೆಲ ಗುಹೆಗಳು ಇವೆ. ಆ ಪ್ರದೇಶ, ಸಿದ್ಧ ಪುರುಷರು ಅದೃಶ್ಯದಲ್ಲಿ ತಪಸ್ಸು ಮಾಡಿಕೊಳ್ಳುವ ಪರ್ವತ ಭೂಮಿ ಎಂದು ತಿಳಿದುಕೊಂಡೆನು. ನನ್ನ ಅದೃಷ್ಟ ಚೆನ್ನಾಗಿದ್ದರೇ, ಯಾವ ಮಹಾಪುರುಷನನ್ನಾದರೂ ನೋಡದಿರುವೆನಾ ಎಂದು ಆ ಗುಹೆಗಳತ್ತ ನೋಡುತ್ತಿದ್ದೆನು. ಒಂದು ಗುಹೆ ದ್ವಾರದ ಬಳಿ ಮಾತ್ರ ಒಂದು ದೊಡ್ಡ ಹುಲಿ ನಿಂತಿತ್ತು. ನನ್ನ ಸರ್ವಾಂಗಗಳಲ್ಲಿಯೂ ನಡುಕ ಮತ್ತು ದಡೆ ಶುರುವಾಯಿತು, ಭಯಕಂಪಿತನಾದೆ. ನಾನು ಒಂದು ಬಾರಿಗೆ 'ಶ್ರೀಪಾದ ಶ್ರೀವಲ್ಲಭಾ! ದತ್ತ ಪ್ರಭೂ!' ಎಂದು ಗಟ್ಟಿಯಾಗಿ ಕಿರುಚಿದೆನು. ಆ ದೊಡ್ಡ ಹುಲಿ, ಸಾದು ಪ್ರಾಣಿಯಂತೆ ನಿಶ್ಚಲವಾಗಿತ್ತು. ಆ ಗವಿಯಿಂದ ಒರ್ವ ವೃದ್ಧ ತಪಸ್ವಿ ಈಚೆಗೆ ಬಂದರು. ಮರುತ್ವಮಲೈ ಪ್ರಾಂತವೆಲ್ಲವೂ ಒಂದೇಬಾರಿಗೆ ಶ್ರೀಪಾದ ಶ್ರೀವಲ್ಲಭ ನಾಮದಿಂದ ಪ್ರತಿಧ್ವನಿಸಿತು.

ಆಗ ಆ ವೃದ್ಧ ತಪಸ್ವಿ, ''ಮಗು! ನೀನು ಧನ್ಯನು. ಶ್ರೀದತ್ತ ಪ್ರಭು ಈ ಕಲಿಯುಗದಲ್ಲಿ ಶ್ರೀಪಾದ ಶ್ರೀವಲ್ಲಭ ನಾಮದಿಂದ ಅವತರಿಸಿದ್ದಾರೆಂದು, ಮಹಾ ಸಿದ್ಧ ಪುರುಷರಿಗೂ, ಮಹಾ ಯೋಗಿಗಳಿಗೂ, ಜ್ಞಾನಿಗಳಿಗೂ ಮತ್ತು ನಿರ್ವಿಕಲ್ಪವಾದ ಸಮಾಧಿ ಸ್ಥಿತಿಯಲ್ಲಿರತಕ್ಕಂತಹ ಪರಮಹಂಸರಿಗೆ ಮಾತ್ರ ವಿದಿತ. ನೀನು ಅದೃಷ್ಟವಂತನಾದ ಕಾರಣ ಇಲ್ಲಿಗೆ ಬಂದಿರುವೆ. ಇದು ತಪೋಭೂಮಿ, ಸಿದ್ಧಭೂಮಿ, ನಿನ್ನ ಇಚ್ಛೆ ಪೂರೈಸುವುದು. ನಿನಗೆ ತಪ್ಪದೇ ಶ್ರೀಪಾದ ಶ್ರೀವಲ್ಲಭರ ದರ್ಶನಭಾಗ್ಯ ಲಭಿಸುವುದು. ಈ ಗವಿ ಮುಂಭಾಗದಲ್ಲಿರುವ ದೊಡ್ಡ ಹುಲಿ, ಒರ್ವ ಜ್ಞಾನಿ. ಅವರಿಗೆ ನಮಸ್ಕರಿಸು'' ಎಂದು ನುಡಿದರು.

ನಂತರ, ನಾನು ದೊಡ್ಡ ಹುಲಿ ರೂಪಧಾರಿ ಜ್ಞಾನಿಗೆ ನಮಸ್ಕರಿಸಿದೆನು. ತಕ್ಷಣ ಆ ಹುಲಿ 'ಓಂ'ಕಾರವನ್ನು ಮಾಡಿತು. ಆ ಧ್ವನಿ, ಮರುತ್ವಮಲೈ ಪ್ರದೇಶವೆಲ್ಲಾ ಪ್ರತಿಧ್ವನಿಸಿತು. ಸುಶ್ರಾವ್ಯವಾಗಿ **"ಶ್ರೀ ಪಾದರಾಜಂ ಶರಣಂ ಪ್ರಪದ್ಯೇ"** ಎಂದು ಆಲಾಪಿಸಿತು. ನಾನು ಈ ವಿಚಿತ್ರವನ್ನು ವೀಕ್ಷಿಸುತ್ತಿದ್ದೆನು. ಆ ದೊಡ್ಡ ಹುಲಿ ಕ್ರಮೇಣ, ಅದ್ಭುತವಾಗಿ ಒರ್ವ ದಿವ್ಯದೇಹದ ಮಹಾತ್ಮರಾಗಿ ಪರಿಣಮಿಸಿತು. ಆ ದಿವ್ಯಪುರುಷ, ವೃದ್ಧ ತಪಸ್ವಿಗೆ ನಮಸ್ಕರಿಸಿ ಆಕಾಶ ಮಾರ್ಗವಾಗಿ ಪ್ರಕಾಶಿಸುತ್ತಾ ಅಂತರ್ಧಾನವಾದರು. ನನ್ನ ಎದುರಲ್ಲಿದ್ದ ಆ ವೃದ್ಧ ತಪಸ್ವಿ ಮುಗುಳ್ನಗೆಯಿಂದ ನನ್ನನ್ನು ಗುಹೆ ಒಳಗೆ ಕರೆದೊಯ್ದರು.

ಆ ವೃದ್ಧ ಮಹಾತ್ಮರು ಕೇವಲ ಕರುಣಾಪೂರಿತ ನೇತ್ರ ದೃಷ್ಟಿಯಿಂದಲೇ, ಸಂಕಲ್ಪ ಅಗ್ನಿಯನ್ನು ಸೃಷ್ಟಿಸಿದರು. ಅಗ್ನಿ ಹೋತ್ರಾವಸರಗಳಾದ ಪವಿತ್ರ ದ್ರವ್ಯಗಳನ್ನು, ಮಧುರ ಪದಾರ್ಥ ಮತ್ತು ಹಣ್ಣುಗಳನ್ನು ಸಹ ಸೃಜಿಸಿದರು. ವೈದಿಕ ಮಂತ್ರೋಚ್ಚಾರಣೆಯಿಂದ ಅಗ್ನಿ ಕಾರ್ಯವನ್ನು ಸುಸಂಪನ್ನ ಮಾಡಿದರು.

**"ಈ ಲೋಕದಲ್ಲಿಂದು, ಯಜ್ಞಯಾಗಾದಿಗಳು ವಿಸ್ಮರಿಸಲಾಗುತ್ತಿವೆ. ಪಂಚ ಭೂತಗಳಿಂದ ಎಷ್ಟೊ ಅನುಕೂಲಗಳನ್ನು ಪಡೆಯುತ್ತಿರುವ ಮಾನವ, ಆ ಪಂಚ ಭೂತಾತ್ಮಕನಾದ ಭಗವಂತನನ್ನೇ ಮರೆತು ಕುಳಿತಿದ್ದಾನೆ. ದೈವ ಪ್ರೀತಿಕರವಾದ ಯಜ್ಞಗಳನ್ನು ಅನುಸರಿಸಿದರೇ, ಸಂತುಷ್ಟಗೊಂಡ ದೇವತೆಯರು ಅನುಕೂಲವಾದ ಪ್ರಕೃತಿಯನ್ನುಂಟು ಮಾಡುವರು. ಪ್ರಕೃತಿಯ ಯಾವುದೇ ಶಕ್ತಿ ವಿಜೃಂಭಿಸಿದರೂ ಅನಾಹುತವೇ. ಧರ್ಮಮಾರ್ಗ ಬಿಟ್ಟರೇ ಇಂತಹಾ ಉಪದ್ರವಗಳು ಖಚಿತ.** ಲೋಕ ಹಿತಕ್ಕಾಗಿ ನಾನು ಈ ಯಜ್ಞವನ್ನಾಚರಿಸಿದೆನು. ಯಜ್ಞವೆಂದರೇ ಸೇರುವಿಕೆ. ನಿನ್ನ ಅದೃಷ್ಟದ ಫಲವಾಗಿ ನೀನು ಈ ಯಜ್ಞವನ್ನವಲೋಕಿಸಿದ ಕಾರಣ, ನೀನು ಶ್ರೀ ದತ್ತಾವತಾರಿಯಾದ ಶ್ರೀಪಾದ ಶ್ರೀವಲ್ಲಭರ ದರ್ಶನವನ್ನು ಪಡೆಯುವೆ. ಇದು ಬಹಳ ಕಷ್ಟಸಾಧ್ಯ. ನೀನು ಅದೆಷ್ಟೊ ಜನ್ಮಗಳ ಪುಣ್ಯಫಲವಾಗಿ ಇಂತಹ ಅಲಭ್ಯವನ್ನು ಸಾಧ್ಯ ಮಾಡಿಕೊಳ್ಳಲಿದ್ದೀಯ'' ಎಂದು ವತ್ತಿ ವಕ್ಕಾಣಿಸಿದರು.

ನಾನು ಮಹಾಪುರುಷರಿಗೆ ನಮಸ್ಕರಿಸಿ ''ಸಿದ್ಧವರೇಣ್ಯರೇ, ನಾನೇನು ಪಂಡಿತನಲ್ಲ, ಸಾಧಕನೂ ಅಲ್ಲ. ಆದ್ದರಿಂದ ತಾವು ನನ್ನಲ್ಲಿರುವ ಕೆಲವು ಸಂದೇಹಗಳನ್ನು ನಿವೃತ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ'' ಎಂದು ಪ್ರಾರ್ಥಿಸಿದರು.

ಶಂಕರ ಭಟ್ಟು, ತಾನು ದೇವಿಯ ದರ್ಶನ ಸಲುವಾಗಿ ಕನ್ಯಾಕುಮಾರಿಗೆ ಹೋಗಿದ್ದು, ಅಲ್ಲಿ ಶ್ರೀದೇವಿ, 'ಕುರುವಪುರಕ್ಕೆ ತೆರಳಿ, ಶ್ರೀಪಾದ ಶ್ರೀವಲ್ಲಭರನ್ನು ದರ್ಶಿಸಿಕೊಳ್ಳಲು ಹೇಳಿದರು' ಎಂದು ಹೇಳಿದರು. ನಂತರ ತಾನಿಲ್ಲಿಗೆ ಬಂದು, ಹುಲಿಯ ರೂಪಧಾರಿ ಒರ್ವ ಮಹರ್ಷಿಯನ್ನು ಕಂಡೆನೆಂದು ಹೇಳಿ ಆ ಮಹನೀಯರಾದ ಶ್ರೀಪಾದ ಶ್ರೀವಲ್ಲಭರು ಯಾರು? ವ್ಯಾಘ್ರ ರೂಪಧಾರಿ ಮಹಾತ್ಮರ ವೃತ್ತಾಂತ ದಯವಿಟ್ಟು ತಿಳಿಸಬೇಕೆಂದು ಕೇಳಿಕೊಂಡರು.

ಆ ವೃದ್ಧ ತಪಸ್ವಿ ಹೀಗೇ ಹೇಳಲು ಆರಂಭಿಸದರು, ''ಮಗು, ಆಂಧ್ರದ ಗೋದಾವರಿ ಮಂಡಲದಲ್ಲಿ ಅತ್ರಿ ಮಹರ್ಷಿಗಳ ತಪೋಭೂಮಿಯಾಗಿ ಖ್ಯಾತಿಗೊಂಡ ಆತ್ರೇಯ ಪುರವೆಂಬ ಗ್ರಾಮದಲ್ಲಿ, ಒಬ್ಬ ಸದ್ಬ್ರಾಹ್ಮಣನಿಗೆ ವ್ಯಾಘ್ರೇಶ್ವರ ಶರ್ಮನೆಂಬ ಒಂದು ಗಂಡು ಮಗು ಕಾಶ್ಯಪ ಗೋತ್ರದಲ್ಲಿ ಜನಿಸಿದನು. ತಂದೆ ಮಹಾಪಂಡಿತರು. ಆದರೇ ಈ ಬಾಲಕ ಪರಮ ಶುಂಠನಾಗಿ ಬೆಳೆದನು. ಸಂಧ್ಯಾವಂದನೆ ಸಹಾ ಮಾಡಲಾರದೇ ಇದ್ದ ಕಾರಣ, ಎಲ್ಲರೂ ಈತನನ್ನು ನಿರ್ಲಕ್ಷಿಸಿದರು, ಆಗ ಅವನಲ್ಲಿ ಪಶ್ಚಾತಾಪ ಉಂಟಾಯಿತು.

ಒಮ್ಮೆ ವ್ಯಾಘ್ರೇಶ್ವರನ ಕನಸಿನಲ್ಲಿ ಒಂದು ತೇಜೋಮಯ ಶಿಶುವು ಆಗಸದಿಂದ ಭೂಮಿಗೆ ಬಂದು ಕಾಲಿಟ್ಟ ಹಾಗೆ, ತಕ್ಷಣ ಭೂಮಿ ಪ್ರಜ್ವಲಿಸಿದ್ದ ಹಾಗೆ ಮತ್ತು ಆ ಶಿಶುವು ತನ್ನ ಬಳಿ ಬಂದು, 'ನಾನಿರಲು ನಿನಗೇಕೆ ಭಯ. ನೀನು ಹಿಮಾಲಯದ ಬದರಿಕಾರಣ್ಯ ಪ್ರಾಂತಕ್ಕೆ ಹೋಗು, ಶುಭವಾಗುವುದೆಂದು' ಹೇಳಿ ಅಂತರ್ಧಾನವಾದದ್ದು ಕಂಡನು.

ತನ್ನ ಕನಸಿನಂತೆ ಶರ್ಮ ಬದರಿಕಾರಣ್ಯ ಪ್ರದೇಶವನ್ನು, ತನ್ನೊಂದಿಗೆ ಒಂದು ಶುನಕ ಸದಾ ಜೊತೆಯಲ್ಲಿ ಬರುತ್ತಿರಲೂ ತಲುಪಿದನು. ಶುನಕವು ಸಹಾ ಶರ್ಮನಂತೆ ಅಲ್ಲಿನ ಊರ್ವಶೀ ಕುಂಡದಲ್ಲಿ ಸ್ನಾನವಾಚರಿಸಿತು. ಅಲ್ಲಿಗೆ ಪುಣ್ಯಸ್ನಾಕ್ಕೆ ಬಂದ ಒಬ್ಬ ಮಹಾತ್ಮರ ಶಿಷ್ಯ ಗಣಗಳಲ್ಲಿ ಒಬ್ಬನಾಗಿ ವ್ಯಾಘ್ರೇಶ್ವರ ಶರ್ಮ ಸೇರಿಕೊಂಡರು. ಆ ಮಹಾತ್ಮರು ''ಮಗು! ನಿನ್ನನ್ನು ನಿಶ್ಚಿಂತೆಯಾಗಿ ಇಲ್ಲಿಯವರಿಗೂ ಹಿಂಬಾಲಿಸದ ಶುನಕವು, ನಿನ್ನ ಹಿಂದಿನ ಜನುಮ ಪುಣ್ಯಫಲ ಸ್ವರೂಪವೆಂದು ತಿಳಿ. ಈ ನರನಾರಾಯಣರ ಪುಣ್ಯಭೂಮಿಗೆ ನೀನು ಆಕರ್ಷಿಸಲ್ಪಟ್ಟಿದ್ದು, ಶ್ರೀಪಾದ ಶ್ರೀವಲ್ಲಭರ ಅನುಗ್ರಹವೆಂದು ತಿಳಿ'' ಎಂದರು.

ನಂತರ, ಶ್ರೀಪಾದ ಶ್ರೀವಲ್ಲಭರ ಚರಿತ್ರೆ ಮತ್ತು ಅವರಿಗೆ ತನ್ನ ಮೇಲಿನ ಕರುಣೆಗೆ ಕಾರಣ ಕೇಳಲೂ ಆ ಮಹಾತ್ಮರು ''ಮಗು, ಶ್ರೀಪಾದ ಶ್ರೀವಲ್ಲಭರು ಸಾಕ್ಷಾತ್ತು ದತ್ತ ಪ್ರಭುಗಳು. ತ್ರೇತಾಯುಗದಲ್ಲಿ ಶ್ರೀ ಭರಧ್ವಾಜ ಮಹರ್ಷಿ, ಒಮ್ಮೆ 'ಸಾವಿತ್ರ ಕಾಠಕಚಯನ'ವೆಂಬ ದೊಡ್ಡ ಯಜ್ಞವನ್ನು ಶ್ರೀ ಪೀಠಿಕಾಪುರದಲ್ಲಿ ನಿರ್ವಹಿಸಿದರು. ಶ್ರೀ ಶಿವಪಾರ್ವತಿಯರನ್ನು ಸಹಾ ಆಹ್ವಾನಿಸಿದ್ದರು. ನಂತರ ಪಡೆದ ವರ ಪ್ರಕಾರ ಭಾರಧ್ವಾಜ ಗೋತ್ರದಲ್ಲಿ ಅನೇಕ ಮಹಾತ್ಮರು, ಸಿದ್ಧಪುರುಷರು, ಜ್ಞಾನಿಗಳು ಮತ್ತು ಯೋಗಿಗಳು ಜನ್ಮ ಪಡೆದಿರುತ್ತಾರೆ ಮತ್ತು ಆ ಯಜ್ಞವು ಪೀಠಿಕಾಪುರದಲ್ಲೇ ನಡೆಯಿತು. ಈ ವಿಷಯ, ಕಲ್ಕಿ ಅವತಾರ ಭೂಮಿಯಾದ 'ಶಂಬಲ' ಗ್ರಾಮದಲ್ಲಿ ಭದ್ರಪಡಿಸಲಾದ, ಪೈಂಗ್ಯಬ್ರಾಹ್ಮಣ ಮತ್ತು ಸಾಂದ್ರಸಿಂಧು ವೇದದಲ್ಲಿ ತಿಳಿಸಲಾಗಿದೆ. ಕಲಿಯುಗ ಪರಿಸಮಾಪ್ತಿಗೊಂಡು ಸತ್ಯಯುಗ ಬಂದಾಗ, ಶ್ರೀ ದತ್ತಾವತಾರ ಮೂರ್ತಿಯಾದ ಶ್ರೀಪಾದ ಶ್ರೀವಲ್ಲಭರು ಶ್ರೀ ಪೀಠಿಕಾಪುರಿಗೆ ಭೌತಿಕ ರೂಪದಲ್ಲಿ ಆಗಮಿಸುವರು. ಸತ್ಕರ್ಮಿಗಳಿಗೆ ಮಾತ್ರ ದತ್ತ ಭಕ್ತಿ ಸಿದ್ಧ. ಅಂತಹ ಸ್ಥಿತಿಯಲ್ಲಿ ಮಾತ್ರ ಯಾವುದೇ ಯುಗವಾಗಲಿ ಯಾವುದೇ ಕಾಲವಾಗಲಿ, ಶ್ರೀಪಾದ ಶ್ರೀವಲ್ಲಭರ ದರ್ಶನ, ಸ್ಪರ್ಶನ ಮತ್ತು ಸಂಭಾಷಣೆ ಸಿದ್ಧಿಸುವುದು. ನಿನಗೆ ಶ್ರೀಪಾದ ಶ್ರೀವಲ್ಲಭರ ಕರುಣೆ ಲಭ್ಯವಾಗಿದೆ. ನೀವೆಲ್ಲರೂ ಇಲ್ಲಿಯೇ ಗುಹೆಗಳಲ್ಲಿ ನಿಮಗೆ ತಿಳಿಸಿದ ಕ್ರಿಯಾ ಯೋಗವನ್ನು ನಿಷ್ಠೆಯಿಂದ ಅಭ್ಯಸುತ್ತಿರಿ. ಆತ್ಮಜ್ಞಾನ ಸಿದ್ಧಿಸುವುದು'' ಎಂದು ಹೇಳಿ ಅವರ ಗುರುಗಳಾದ ಬಾಬಾಜೀ ದರ್ಶನಾರ್ಥವಾಗಿ ದ್ರೋಣಗಿರಿಗೆ ನಂತರ ಬರುವೆನೆಂದು ಹೊರಟು ಹೋದರು.

ವ್ಯಾಘ್ರೇಶ್ವರ ಶರ್ಮ ಗುರು ಆದೇಶದಂತೆ ಒಂದು ಗವಿಯಲ್ಲಿ ಕುಳಿತಿದ್ದನೇ ಹೊರತೂ, ಕ್ರಿಯಾಯೋಗ ಪದ್ಧತಿಗಳೇ ಆಗಲಿ, ಆತ್ಮಜ್ಞಾನ ವಿಷಯವೇ ಆಗಲಿ ತಲೆಗೆ ಹತ್ತಲಿಲ್ಲ, ಹೀಗೆ ಯೋಚಿಸಿದನು ''ಗುರುಗಳು ನನ್ನನ್ನು 'ಒರೇಯ್ ವ್ಯಾಘ್ರಮಾ' ಎಂದು ಸದಾ ಕರೆಯುವರು, ಅಂದರೇ 'ಎಲೈ! ವ್ಯಾಘ್ರವೇ'. ಗುರುಬಾಂಧವರು ವ್ಯಾಘ್ರಾಜಿನದ ಮೇಲೆ ಕುಳಿತು ಧ್ಯಾನ ಮಾಡುವರು. ಹಾಗಿದ್ದಲ್ಲಿ ವ್ಯಾಘ್ರವು ಎಷ್ಟು ದೊಡ್ಡದಾಗಿರ ಬಹುದು? ಆಗ ನನ್ನ ಆತ್ಮ ವ್ಯಾಘ್ರವೇ ಮತ್ತು ಧ್ಯಾನ ಮಾಡಬೇಕಾದದ್ದು ವ್ಯಾಘ್ರವನ್ನೇ.''ನಾನು ವ್ಯಾಘ್ರರೂಪಧಾರಿ ಆದರೇ ಆತ್ಮಜ್ಞಾನ ಪಡೆದ ಹಾಗಿಯೇ ಎಂದುಕೊಳ್ಳಬಹುದು''.

ಒಂದು ವರುಷ ಕಳೆದೇ ಹೋಯಿತು, ಗುರುಗಳು ಬಂದದ್ದೇ, ಪ್ರತಿ ಗುಹೆ ಬಳಿ ಹೋಗಿ ಶಿಷ್ಯಂದಿರನ್ನು ಪರೀಕ್ಷಿಸುತ್ತಿದ್ದರು. ವ್ಯಾಘ್ರೇಶ್ವರನ ಗುಹೆಯಲ್ಲಿ ಅವನಿಲ್ಲ, ಬಳಕ ಒಂದು ವ್ಯಾಘ್ರವು ಕಂಡುಬಂದಿತು. ಗುರುಗಳು ಯೋಗ ದೃಷ್ಟಿಯಿಂದ, ತನ್ನ ಶಿಷ್ಯ ತೀವ್ರವಾಗಿ ವ್ಯಾಘ್ರವನ್ನೇ ಧ್ಯಾನಿಸುತ್ತಿದ್ದರಿಂದ ವ್ಯಾಘ್ರವಾಗಿರುವನೆಂದು ಆತ್ಮಶುದ್ಧಿಗೆ ಸಂತಸಿಸಿ ಓಂಕಾರವನ್ನು ಪಾಠಮಾಡಿ, **"ಶ್ರೀ ಪಾದರಾಜಂ ಶರಣಂ ಪ್ರಪದ್ಯೇ"** ಎಂಬುದನ್ನು ಮಂತ್ರವಾಗಿ ಮನನ ಮಾಡಲು ಉಪದೇಶಿಸಿದರು.

ವ್ಯಾಘ್ರೇಶ್ವರರು ಅನಂತ ಭಕ್ತಿಯಿಂದ ತನ್ನ ಮಂತ್ರವನ್ನುಚ್ಛರಿಸುತ್ತಾ ವ್ಯಾಘ್ರರೂಪದಲ್ಲಿಯೇ ಕುರುವಪುರವನ್ನು ಸಮೀಪಿಸಿದರು. ಜಲಮಾರ್ಗ ಒಂದುಳಿದಿತ್ತು. ಅತ್ತ ಭಕ್ತಜನ ಸಮ್ಮೂಹದಲ್ಲಿದ್ದ ಶ್ರೀಪಾದ ಶ್ರೀವಲ್ಲಭರು, 'ನನ್ನ ಭಕ್ತ ಒರ್ವನು, ನನ್ನನ್ನು ಕರೆಯುತ್ತಿದ್ದಾನೆ, ಇದೋ ಬಂದೆ'ನೆಂದು ಹೇಳೀ ತನ್ನ ಪ್ರಕಾಶಿಸುವ ಶರೀರದಲ್ಲೇ ನೀರಿನ ಮೇಲೆ ನಡೆದುಕೊಂಡು ಹೋದರು. ಹಾಗೆ ಅವರು ಕಾಲಿಡುವಾಗ ಒಂದೊಂದು ಹೆಜ್ಜೆಗೂ ಒಂದು ಕಮಲ ಉದ್ಭವಿಸುತ್ತಿತ್ತು. ತನ್ನ ಬಳಿ ಬಂದ ಅ ಪರಮ ತೇಜಸ್ವಿಯನ್ನು ಭಕ್ತಿ ಮತ್ತು ವಿನಯಪೂರ್ವಕವಾಗಿ ಪಾದ ನಮಸ್ಕಾರ ಮಾಡಿಕೊಳ್ಳಲು, ಶ್ರೀಪಾದ ಶ್ರೀವಲ್ಲಭರು ಆ ವ್ಯಾಘ್ರವನ್ನೇರಿ ನೀರಿನ ಮೇಲೆ ತೇಲಿಯಾಡುತ್ತಾ ಕುರುವಪುರ ಸೇರುವುದನ್ನು ಭಕ್ತಕೋಟಿ ದರ್ಶಿಸಿ ಭಾಗ್ಯಶಾಲಿಗಳಾದರು.

ಶ್ರೀದತ್ತ ಪುರಾಣದಲ್ಲಿರುವಂತೇ ಶ್ರೀದತ್ತ ದೇವರೇ ಧರ್ಮಶಾಸ್ತ ಅಯ್ಯಪ್ಪನಾಗಿ, ಶ್ರೀ ದೇವೇಂದ್ರರು ಹುಲಿಯಾಗಲೂ, ಅದನ್ನೇರಿ ತನ್ನ ರಾಜಧಾನಿಗೆ ತಲುಪಿದರು. ಹೀಗೇ ವ್ಯಾಘ್ರವನ್ನೇರಿ ಬಂದ ಶ್ರೀಪಾದ ಶ್ರೀವಲ್ಲಭರು 'ಅಂಬೆ, ಜಗನ್ಮಾತೆ' ಸಹಾ ಎಂದು ಅನೇಕರ ಭಾವನೆ.

ಶ್ರೀವಲ್ಲಭರು ಆ ವ್ಯಾಘ್ರವಾಹನನಾಗಿ ಕುರುವಪುರಂ ಸೇರಿ, ಶ್ರೀಗಳು ಅದರಿಂದ ಇಳಿದಕೂಡಲೇ ಆ ವ್ಯಾಘ್ರವು ಮಾನವನಾಗಿ ಪರಿಣಮಿಸಿತು. ಆ ಕಾಂತಿಯುತ ಮಹಾಪುರುಷ, ಆತನ ಪೂರ್ವಜನ್ಮ ರೂಪವಾದ ವ್ಯಾಘ್ರದ ಚರ್ಮವನ್ನು ಶ್ರೀಯವರು ಆಸನವಾಗಿ ಉಪಯೋಗಿಸಿಕೊಳ್ಳಬೇಕೆಂದು ಬೇಡಿದರು. 'ಸರೇ' ಎಂದು ಪ್ರೇಮದಿಂದ "ಮಗನೇ ವ್ಯಾಘ್ರೇಶ್ವರನೇ! ನೀನು ಹಿಂದಿನ ಒಂದ ಜನುಮದಲ್ಲಿ ಸಾಕಷ್ಟು ಬಲವಂತನಾಗಿದ್ದು ಹುಲಿಗಳನ್ನು ಹಿಂಸೆ ಮಾಡುವುದು, ಆದರೊಂದಿಗೆ ಹೋರಾಡುವುದು ಅವುಗಳಿಗೆ ಆಹಾರವಿಲ್ಲದೇ ಬಂಧಿಸಿ ನಂತರ ವಿನೋದಕ್ಕೆ ಉಪಯೋಗಿಸಿಕೊಳ್ಳುವುದು ಮುಂತಾದನ್ನು ಮಾಡುತ್ತಿದ್ದೆ. ಆದ್ದರಿಂದ, ನೀನು ನಿನ್ನ ಪಾಪಕರ್ಮ ಸವಿಯಲು ಅನೇಕ ಜಂತುಜನ್ಮ ತಾಳಬೇಕಿತ್ತು. ಆದರೇ ನನ್ನ ಅನುಗ್ರಹದಿಂದ ನಿನಗೆ ಒಂದು ದೊಡ್ಡ ಹುಲಿ ಜನ್ಮದಿಂದಲೇ ಎಲ್ಲಾ ಕರ್ಮಗಳು ನಾಶವಾಗಿವೆ. ನೀನು ವ್ಯಾಘ್ರರೂಪ ಇಚ್ಛಿಸಿರುವುದರಿಂದ, ಯಾವ ಕ್ಷಣದಲ್ಲಿ ಆದರೂ ವ್ಯಾಘ್ರವಾಗಲು ವರ ನೀಡಿದ್ದೇನೆ. ಹಿಮಾಲಯದ ಮಹಾನ್ ಋಷಿಗಳ ದರ್ಶನ ನಿನಗೆ ಲಭಿಸುವುದು. ಯೋಗ ಮಾರ್ಗದಲ್ಲಿ ನೀನು ಉಚ್ಛಸ್ಥಿತಿಯನ್ನು ಹೊಂದುವೆ" ಎಂದು ಆಶೀರ್ವದಿಸಿದರು.

ಕೆಲ ಸಮಯದ ಹಿಂದೆ ಅಂತಹ ಮಹಾನ್ ಪುರುಷನನ್ನೇ ವ್ಯಾಘ್ರ ರೂಪದಲ್ಲಿ ಶಂಕರ ಭಟ್ಟರು ದರ್ಶಿಸಿ ಕೊಂಡಿದ್ದರು. ಸಾಮಾನ್ಯ ಮಾನವನಿಂದ ತಮ್ಮ ತಮ್ಮ ಗುಹೆಗಳಲ್ಲೇ ಇರುವ ಮಹಾ ಯೋಗಿಗಳಿಗೆ ತೊಂದರೇ ಆಟಂಕಗಳು ಆಗದಂತೇ, ವ್ಯಾಘ್ರ ರೂಪದಲ್ಲಿ ಕಾವಲು ಕಾಯುತ್ತಾ, ಅವರು ಪರಸ್ಪರ ಭಾವಪ್ರಸಾರ ಸಹಾ ಬೇರೆ ಬೇರೆ ಗುಹಗಳಿಂದ ನಡೆಸಿಕೊಳ್ಳಲೂ ಅನುಕೂಲವನ್ನು ಈ ಮಹಾ ವ್ಯಾಘ್ರೇಶ್ವರ ಶರ್ಮ ಮಾಡಿಕೊಟ್ಟಿದ್ದಾರೆ. ಇದೆಲ್ಲಾ ಶ್ರೀದತ್ತ ಪ್ರಭು ಲೀಲೆ.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 2

# ಶಂಕರ ಭಟ್ಟರಿಗೆ ಶ್ರೀ ಸಿದ್ಧ ಯೋಗೀಂದ್ರ ದರ್ಶನ

ನಾನು (ಶಂಕರ ಭಟ್ಟ) ನನಗೆ ಮರುತ್ವಮಲೈಯಲ್ಲಿ ಆದ ಆಶ್ಚರ್ಯ ಅನುಭವಗಳನ್ನು ನೆನಪು ಮಾಡಿಕೊಳ್ಳುತ್ತಾ, ಅದೆಷ್ಟೋ ಪುಣ್ಯಕ್ಷೇತ್ರಗಳನ್ನು ದರ್ಶಿಸುತ್ತಾ, ಶ್ರೀಪಾದ ಶ್ರೀವಲ್ಲಭರ ದಿವ್ಯ ನಾಮವನ್ನೇ ಹೇಳುತ್ತಾ ಪ್ರಯಾಣಿಸುತ್ತಿದ್ದೆನು. ಊಟೋಪಚಾರಗಳು ಸ್ವಯಂಸಿದ್ಧಿಸುತ್ತಿದ್ದೆವು. ಪಾಂಡ್ಯ ದೇಶದ ಕದಂಬ ವನದಲ್ಲಿನ, ಅತಿ ಪ್ರಭಾವಿತ ಶಿವಲಿಂಗ ದರ್ಶನಾ ನಂತರ, ನನ್ನ ಆಯಾಸವು ಸುಧಾರಿಸಿತು. ಮುಂದುವರಿಯಲು, ಶ್ರೀ ಸಿದ್ಧ ಯೋಗೀಂದ್ರರ ಆಶ್ರಮ ತಲುಪಿದೆ. ಶ್ರೀಗಳ ಪಾದ ನಮಸ್ಕಾರದಿಂದ ಭಾರವಾಗಿದ್ದ ನನ್ನ ದೇಹ ಹತ್ತಿಯಂತೆ ಸಡಲಿಗೊಂಡಿತು, "ಶ್ರೀಪಾದ ಶ್ರೀವಲ್ಲಭ ದರ್ಶನ ಪ್ರಾಪ್ತಿರಸ್ತು" ಎಂದು ಆಶೀರ್ವದಿಸಿದರು.

ನಂತರ ಯೋಗಿವರೇಣ್ಯರು, "ಮಗುವೇ ಶಂಕರ ಭಟ್ಟ! ನೀನು ಇಲ್ಲಿ ನೋಡಿದ ಶಿವಲಿಂಗ ಮಹಾಮಹಿಮಾನ್ವಿತವಾದದ್ದು, ಸಾಕ್ಷಾತ್ ಇಂದ್ರನು ನಿರ್ಮಿಸಿದ ಆಲಯವೆಂದು ಪ್ರತೀತಿ. ವೃತ್ತಾಂತ ಕೇಳು - ಪೂರ್ವದಲ್ಲಿ ದೇವೇಂದ್ರನು ಎಲ್ಲಾ ರಾಕ್ಷಸರನ್ನು ಜಯಿಸಿ, ಶಿಕ್ಷಿಸಲು ಹೊರಟನು. ಒಬ್ಬ ರಾಕ್ಷಸ ತಪ್ಪಿಸಿಕೊಂಡು ಓಡಿಹೋಗಿ ದೂರ ಪ್ರದೇಶದಲ್ಲಿ ತಪಸ್ಸು ಮಾಡತೊಡಗಿದ. ಇದನ್ನು ತಿಳಿದ ದೇವೇಂದ್ರನು, ತಪಸ್ಸಿನಲ್ಲಿದ್ದವನನ್ನೇ ವಧಿಸಿದನು. ಆ ಕಾರಣ, ದೇವೇಂದ್ರನು ಕಳಾವಿಹೀನರಾಗಿ ಹೋದನು. ಅನೇಕಾನೇಕ ಪುಣ್ಯಕ್ಷೇತ್ರಗಳನ್ನು ದರ್ಶಿಸಿ ಬರುತ್ತಿರಲು, ಈ ಪ್ರದೇಶದ ಪಾಂಡ್ಯ ದೇಶದ ಕದಂಬ ವನಕ್ಕೆ ಬಂದಾಗ, ತನ್ನ ಪಾಪಗಳೆಲ್ಲವೂ ಕರಗಿಹೋದಂತೆ ತಿಳಿದು ಆಶ್ಚರ್ಯಗೊಂಡು, ಆ ಪ್ರದೇಶವನ್ನೆಲ್ಲಾ ಹುಡುಕಲೂ ಈ ಶಿವಲಿಂಗ ಲಭಿಸಿತು. ಅದಕ್ಕೆ ಒಂದು ಆಲಯವನ್ನು ನಿರ್ಮಿಸಿದನು. ಈ ಸ್ವಯಂಭೂ ಶಿವಲಿಂಗವು ಸರ್ವಮಂಗಳ ಪ್ರದವೂ ಸಹಾ. ಎಷ್ಟು ಪುಣ್ಯಾತ್ಮರಿಗೊ ಇದರ ದರ್ಶನ ಭಾಗ್ಯ! ಅದು ನಿಜ. **"ಶ್ರೀದತ್ತ ಪ್ರಭುಗಳ ಭಕ್ತರಿಗೆ ಸುನಾಯಾಸವಾಗಿ ಪುಣ್ಯ ಪುರುಷರ ಮತ್ತು ಪುಣ್ಯ ಸ್ಥಳಗಳ ದರ್ಶನವಾಗುತ್ತದೆ"** ಎಂದರು.

ನಾನು ಯೋಗೀಂದ್ರರಿಗೆ ಮರುಪ್ರಣಾಮ ಮಾಡಲು ಹೊರಟಾಗ ಅವರು ನನ್ನನ್ನು ಇನ್ನೊಮ್ಮೆ ಶಿವಲಿಂಗ ದರ್ಶನ ಮಾಡಿಕೊಂಡು ಬರಲು ಆದೇಶಿಸಿದರು. ನಾನು ಆ ಪ್ರಾಂತಕ್ಕೆ ಹೋದಾಗ, ಆಶ್ಚರ್ಯ ನಾನು ಕಂಡಿದ್ದೇ ಬೇರೆ. ಆ ಪುರಾತನ ಶಿವಾಲಯವೇ ಇಲ್ಲ. ಮೇಲ್ಪಟ್ಟು ಅಲ್ಲಿ ಜನ ಸಂದಡಿ ಮತ್ತು ಒಂದು ಸುಂದರವಾದ ಪಟ್ಟಣವೇ ಇತ್ತು. ಅದು ಮಧುರಾನಗರವೆಂದು ತಿಳಿದೆ ಮತ್ತು ಇದ್ದ ಆಲಯ, ಶ್ರೀ ಮೀನಾಕ್ಷಿ ಸುಂದರೇಶ್ವರಾಲಯ. ಆ ದೇವತಾಮೂರ್ತಿಗಳ ದರ್ಶನದ ನಂತರ ಯೋಗೀಂದ್ರರ ಬಳಿ, ನನ್ನ ಈ ಅನುಭವದ ದೊಡ್ಡ ಪ್ರಶ್ನೆಯನ್ನೆ ಹೊತ್ತಿಹೋಗಲು ಪ್ರಯತ್ನಿಸಿದಾಗ, ನನಗೆ ಯೋಗಿಂದ್ರರ ಆಶ್ರಮವೇ ಕಾಣಲಿಲ್ಲ. ಆಶ್ಚರ್ಯದಿಂದ ನಿಂತಿರಲು ನನ್ನನ್ನೇ ಹಿಂಬಾಲಿಸುತ್ತ ಬರುತ್ತಿರುವ ಒಂದು ದೊಡ್ಡ ಮೂರು ತಲೆಯ ಸರ್ಪ ಕಾಣಿಸಿತು. ಅದರ ಮೂರು ತಲೆಯ ಮೇಲೆ ಸುಪ್ರಕಾಶಿಸುತ್ತಿರುವ ಮೂರು ಮಣಿಗಳು ಆ ಪ್ರಾಂತವನ್ನೆಲ್ಲಾ ತೋಜೋಮಯಗೊಳಿಸಿತ್ತು. ನಾನು ಭಯದಿಂದ ಶ್ರೀಪಾದ ಶ್ರೀವಲ್ಲಭರ ನಾಮವನ್ನು ಮನಸಾರೆ ಉಚ್ಚರಿಸುತ್ತಾ ಮುಂದೆ ನಡೆದೆ. ಆಶ್ಚರ್ಯಕರವಾಗಿ, ನಾನು ಶ್ರೀ ಸಿದ್ಧ ಯೋಗೀಂದ್ರರ ಆಶ್ರಮವನ್ನು ತಲುಪಿದೆ. ನಂತರ ಆ ಸರ್ಪವೂ ಕಾಣೆ, ಅದರೊಂದಿಗಿದ್ದ ಕಾಂತಿಯನ್ನೂ ಕಾಣೆ.

ಶ್ರೀ ಸಿದ್ಧ ಯೋಗೀಂದ್ರರು ಮುಗುಳ್ನಗೆಯಿಂದ ನನ್ನನ್ನು ಕೂರಿಸಿ, ತಿನ್ನಲೂ ಕೊಟ್ಟು, ಒಳ್ಳೆ ಮಾತನ್ನಾಡುತ್ತಿದ್ದರೂ, ನನ್ನ ಎದೆ ಹೊಡೆತ ಇನ್ನೂ ಇತ್ತು. ಆಗ ಅವರು ತಮ್ಮ ದಿವ್ಯ ಹಸ್ತದಿಂದ, ನನ್ನ ಎದೆಯನ್ನು ಮತ್ತು ತಲೆಯನ್ನೂ ಸ್ಪರ್ಶಿಸಲೂ, ಎದೆ ಹೊಡತ

ಕಡಿಮೆ ಆಗುವದಷ್ಟೇ ಅಲ್ಲದೇ, ಶರೀರವು ತೂಕವಿಲ್ಲದಂತೆ ಆಗಿಹೋಯಿತು. ಅಷ್ಟೇ ಅಲ್ಲ, ನನ್ನ ಮನಸ್ಸಿನಿಂದ ಕೆಟ್ಟ ಭಾವನೆಗಳು ಮತ್ತು ಕೆಟ್ಟ ಊಹೆಗಳು ನನ್ನ ನಿಶ್ವಾಸದಲ್ಲಿ, ಈಚೆಗೆ ಹೊರಟು ಹೋಗುವಂತೆ ಇದ್ದವು. ಶರೀರವು ಮತ್ತಿನಿಂದ ಕೂಡಿತ್ತು.

## ಶ್ರೀದತ್ತರ ಮಹಿಮೆ, ಶ್ರೀಪಾದರ ಅನುಗ್ರಹ ಪಡೆಯಲು ಬೇಕಾದ ಯೋಗ್ಯತೆ

ಆ ವಿಧವಾಗಿ ನಾನು ಸಂದಿಗ್ಧ ಸ್ಥಿತಿಯಲ್ಲಿರಲೂ ಸಿದ್ಧ ಯೋಗೀಂದರು, "ಶಂಕರ ಭಟ್ಟಾ! ನಾನು ಶ್ರೀದತ್ತಾತ್ರೇಯರ ಆಜ್ಞೆಯಂತೆಯೇ, ಮೊದಲು ಶಿವಲಿಂಗವನ್ನು, ನಂತರ ಶ್ರೀ ಸುಂದರೇಶ್ವರನ್ನು ನಿನ್ನ ಅನುಭವಕ್ಕೆ ಪ್ರಸಾದಿಸಿದೆ. ನಿಜಕ್ಕೂ, ಇವೆರಡೂ ಒಂದೇ. ನಿನ್ನ ಮುಂದೆ ಈಗ ಇರುವ ಸೃಷ್ಟಿ ಎಲ್ಲಾ ಮಾಯೆ ಎಂದು ನಿನಗೆ ಅರ್ಥವಾಗಲೂ ನಿನಗೆ, ಮೊದಲು ದೇವೆಂದ್ರ ಪ್ರತಿಷ್ಠಿಸಿದ ಶಿವಲಿಂಗವನ್ನು ಮತ್ತು ಅಂದಿನ ಪರಿಸರವನ್ನು, ನಂತರ ವರ್ತಮಾನ ಸ್ಥಿತಿಗತಿಗಳನ್ನು ತೋರಿಸಲಾಯಿತು. ಎಲ್ಲಾ ಚೈತನ್ಯ ಸ್ವರೂಪವೇ. **ಶ್ರೀ ದತ್ತ ಪ್ರಭುಗಳ ಸಂಕಲ್ಪದಂತೆ ಭವಿಷ್ಯತ್ತು ವರ್ತಮಾನ ಕಾಲವಾಗಿಯೂ, ವರ್ತಮಾನ ಭೂತ ಕಾಲವಾಗಿಯೂ ಬದಲಾಯಿಸಬಹುದು. ಶ್ರೀದತ್ತ ಪ್ರಭುಗಳ ಚೈತನ್ಯ ನಿತ್ಯ ವರ್ತಮಾನ. ಇಲ್ಲಿಯವರಿಗೂ ನಡೆದಿದ್ದು ಇಂದು ನಡೆಯುತ್ತಿರುವುದು ಮತ್ತು ಭವಿಷ್ಯದಲ್ಲಿ ನಡೆಯಲಿರುವುದೆಲ್ಲಾ ಪ್ರಭುಗಳ ಸಂಕಲ್ಪದಂತೆಯೇ. ಒಂದು ವಿಷಯ ನಡೆಯಲು ಆಗಲಿ, ನಡೆಯದಿರಲು ಆಗಲಿ ಅಥವಾ ಬೇರೊಂದು ವಿಧದಲ್ಲಿ ವಿನೂತನ ಪದ್ಧತಿಯಲ್ಲಿ ನಡೆಯಲೂ ಶ್ರೀದತ್ತ ಪ್ರಭುಗಳ ಸಂಕಲ್ಪವೇ ಸರಿ. ಯಾವ ಮಹಾಸಂಕಲ್ಪದಲ್ಲಿ ಸೃಷ್ಟಿ, ಸ್ಥಿತಿ, ಲಯಗಳು ನಡೆಯುತ್ತಿರುವೆಯೋ, ಆ ಮಹಾಸಂಕಲ್ಪದ ಸ್ವರೂಪವೇ ಶ್ರೀ ದತ್ತಾತ್ರೇಯರು. ಆ ಮಹಾತ್ಮರೇ ಶ್ರೀಪಾದ ಶ್ರೀವಲ್ಲಭರಾಗಿ ಈ ಭೂಮಂಡಲದಲ್ಲಿ ಅವತರಿಸಿರುವರು.** ಶ್ರೀ ಪೀಠಿಕಾಪುರ ನಿವಾಸಿಗಳು ಅವರನ್ನು ಸರಿಯಾಗಿ ಗುರುತಿಸಲಿಲ್ಲ. ಗುರು ತತ್ವವನ್ನು ಗ್ರಹಿಸಲೂ ಅವರು ವಿಫಲರಾಗಿದ್ದಾರೆ. ಕುರುವಪುರದ ಮತ್ಸಕಾರರಂತಹ ಅಲ್ಪಜ್ಞರು ಸಹಾ ಇಂದು ಬ್ರಹ್ಮಜ್ಞಾನ ಹೊಂದಿರುತ್ತಾರೆ. **ಶ್ರೀಪಾದ ಶ್ರೀವಲ್ಲಭರ ಕರುಣೆ ಹೊಂದಲು ನಮ್ಮಲ್ಲಿನ ಅಹಂಕಾರ ನಶಿಸಬೇಕು. ಎಲ್ಲಾ ವಿಧವಾದ ಮದ-ಮಾತ್ಸರ್ಯ ಕ್ಷೀಣಿಸಬೇಕು. ಆಗಲೇ ನಮಗೆ ಅವರ ಶಕ್ತಿ, ಅನುಗ್ರಹ ನಿಜ ಸ್ಥಿತಿ ತಿಳಿದು ಬರುವುದು.**

ಆ ದೇಗುಲ ದೇವೇಂದ್ರರಿಂದ ಪ್ರತಿಷ್ಠಿತವಾದನಂತರ, ಧನುಂಜಯನೆಂಬ ವರ್ತಕನು, ಆ ರಾಜ್ಯವನ್ನು ಆಳುತ್ತಿರುವ ಕುಲಶೇಖರ ಪಾಂಡ್ಯರು ಈ ವಿಷಯ ತಿಳಿಸಲು, ಶಿವಾಜ್ಞೆಯಿಂದ ಆ ಆರಸ ದೇವಾಲಯವನ್ನು ಪುನರುದ್ಧರಣೆ ಗೊಳಿಸಿ, ಅಲ್ಲಿ ಒಂದು ನಗರವನ್ನು ಸಹ ನಿರ್ಮಿಸಿ ಅದಕ್ಕೆ ಮಧುರಾನಗರವೆಂದು ನಾಮಕರಣವನ್ನು ಮಾಡಿದನು. ಅವನ ಪುತ್ರ ಮಲಯಧ್ವಜನು ಸಂತಾನ ಪ್ರಾಪ್ತಿಗಾಗಿ ಪುತ್ರಕಾಮೇಷ್ಟಿಯಾಗವನ್ನು ಮಾಡಲು, ಆ ಯಜ್ಞಕುಂಡದಿಂದ ಮೂರು ವರುಷದ ಒಂದು ಹೆಣ್ಣು ಮಗು ವುದ್ಭವಿಸಿತು. ಆಕೆಯೇ ಮೀನಾಕ್ಷಿ. ಮೀನಾಕ್ಷಿಯ ವಿವಾಹ, ಸುಂದರೇಶ್ವರನ ಜೊತೆ ನಡೆಯಿತು. ಶಿವನ ಜಟಾಜೂಟದಿಂದ ಉದ್ಭವಿಸಿದ ವೇಗವತೀ ನದಿ, ಆ ಮಧುರಾನಗರವನ್ನು ಮತ್ತಷ್ಟು ಪವಿತ್ರಗೊಳಿಸಿದೆ. ಶ್ರೀ ಮಹಾವಿಷ್ಣು ಕನ್ಯಾದಾನ ಮಾಡಲು, ಮೀನಾಕ್ಷಿ ಸುಂದರೇಶ್ವರರ ವಿವಾಹ ಮಹಾ ವೈಭವೋಪೇತವಾಗಿ ನಡೆಯಿತು.

ಶ್ರೀ ಸಿದ್ಧ ಯೋಗೀಂದ್ರರು ಮುಂದುವರಿಯುತ್ತಾ "ಮಗು, ಶಂಕರ ಭಟ್ಟಾ! **ಸೃಷ್ಟಿಯೊಳಗೆ ಪ್ರತಿಯೊಂದು ವಸ್ತುವಿನಿಂದಲೂ ಪ್ರಕಂಪನೆಗಳು ಆಗುತ್ತಿರುವೆವು. ಇವುಗಳ ಶಕ್ತಿಯಿಂದ ಇತರ ವಸ್ತುಗಳಿಂದ ಆಕರ್ಷಣೆ, ವಿಕರ್ಷಣೆಗಳು ಆಗುತ್ತಿರುವೆವು. ಅದೇ ರೀತಿ ಸ್ಥೂಲ, ಸೂಕ್ಷ್ಮಕಾರಣ ಶರೀರದಲ್ಲಿ ಪುಣ್ಯಕರ್ಮಗಳಿಂದ ಪುಣ್ಯರೂಪವಾದ ಪ್ರಕಂಪನೆ, ಪಾಪಕರ್ಮಗಳಿಂದ ಪಾಪರೂಪದ**

**ಪ್ರಕಂಪನಗಳು ನಡೆಯುತ್ತಿರುವುದು. ಪುಣ್ಯವಿಶೇಷಗಳ ಕಾರಣ ಪುಣ್ಯಪುರುಷರೊಂದಿಗೆ ಮಿಲನ, ಪುಣ್ಯಸ್ಥಳಗಳ ದರ್ಶನಭಾಗ್ಯ ಮುಂತಾದವುಗಳಿಂದ ಪುಣ್ಯಕಾರ್ಯ ಮನೋಭಾವನೆ ದ್ವಿಗುಣೀಕೃತವಾಗಿ, ಪುಣ್ಯವೃದ್ಧಿ ಆಗುವುದು. ಪುಣ್ಯವೃದ್ಧಿ ಮತ್ತು ಪಾಪದ ನಿವೃತ್ತಿಯಿಂದ, ಶ್ರೀದತ್ತ ಪ್ರಭುಗಳ ಮೇಲೆ ನಿಶ್ಚಲ ಭಕ್ತಿ ಉಂಟಾಗುವುದು.** ನೀನು ಪುಣ್ಯಪ್ರದೇಶಕ್ಕೆ ಕಾಲಿಡಲು ಕಾರಣ, ಶ್ರೀವಲ್ಲಭರಿಗೆ ನಿನ್ನಲ್ಲಿ ಇರುವ ಅನಂತ ಕೃಪವೇ.

ನಾನು ನನ್ನ ಅದೃಷ್ಟಕ್ಕೆ ಆಶ್ಚರ್ಯಪಡುತ್ತಾ ಶ್ರೀವಲ್ಲಭರ ದಿವ್ಯ ಶ್ರೀಚರಣಗಳನ್ನು ಬಿಡಬಾರದೆಂದೂ, ಎಷ್ಟು ಬೇಗ ಕುರುವಪುರ ಸೇರುತ್ತೇನೆಂದೂ ಮನಸ್ಸಿನಲ್ಲಿ ಕುತೂಹಲದೊಂದಿಗೆ ಇದ್ದೆನು.

ಮೂರನೇ ದಿನ ನಿದ್ದೆಯಿಂದೆದ್ದ ಕೂಡಲೇ ಒಂದು ಆಶ್ಚರ್ಯ ಎದುರಾಯಿತು. ನಾನು ಜನ ಸಂಚಾರವಿಲ್ಲದ ಒಂದು ಎತ್ತರವಾದ ಗುಡ್ಡದ ಮೇಲಿನ ಅರಳೀ ಮರದ ಬುಡದಲ್ಲಿದ್ದೇನೆ. ಹಾಗಿದ್ದಲ್ಲಿ ''ಕಳೆದ ರಾತ್ರಿ ನಾನಿದ್ದ ಶ್ರೀಯೋಗೀಂದ್ರರ ಆಶ್ರಮವೆಲ್ಲಾ ಭ್ರಮೆಮಾತ್ರವಾ? ಯೋಗೀಂದ್ರರು ಮಾಯಾವಿನಾ? ಮಾಂತ್ರಿಕನಾ?'' ಎಂದು ಅನುಮಾನ ವ್ಯಕ್ತಪಡಿಸಿದೆ. ಆಗ ಶ್ರೀಯೋಗೀಂದ್ರರು ಶ್ರೀದತ್ತ ಪ್ರಭುಗಳು ಶ್ರೀಪಾದರ ಘನತೆ ಮತ್ತು ಕರುಣೆಯ ವಿಚಾರವನ್ನು ವಿಶದೀಕರಿಸಲೂ, ನಾನು ಶ್ರೀಪಾದ ಶ್ರೀವಲ್ಲಭರ ವಿರುದ್ಧ ನೆನೆದ ವಿಷಯಕ್ಕೆ ನಾಚಿಕೆಪಟ್ಟೆ. ಮನಸ್ಸಿನಲ್ಲಿ ಹೀಗೆ ವಿಧವಿಧವಾದ ಯೋಚನೆಗಳು ಹೊರಗೆ ಬರುತ್ತಿರಲೂ, ನಾನು ನನ್ನ ಮೂಟೆಯನ್ನು ಸರಿಪಡಿಸಿಕೊಂಡು ಪ್ರಯಾಣವನ್ನು ಮುಂದುವರೆಸಿದೆ.

ಸಂಜೆಹೊತ್ತಿಗೆ ನನಗೆ ಹಸಿವು ಶುರುವಾದಾಗ ನಾನೊಂದು ಚಿಕ್ಕ ಹಳ್ಳಿಯನ್ನು ನೋಡಿದೆ, ಬ್ರಾಹ್ಮಣನಾಗಿ, ಇತರರ ಮನೆಯಲ್ಲಿ ಭುಜಿಸಬಾರದು. ಬೇಕಾದರೇ ಅಂತವರ ಮನೆಯಲ್ಲಿ ಅಡಿಗೆ ಮಾಡಿಕೊಳ್ಳಬಹುದು ಎಂದು ನನ್ನ ಭಾವನೆ. ಪ್ರಶ್ನಿಸಲೂ ಅಲ್ಲಿನ ಒಬ್ಬರು ''ಸ್ವಾಮೀ! ನಾವು ಬೆಟ್ಟಜಾತಿ ಜನರು. ಈ ಹಳ್ಳಿಯಲ್ಲಿ ಬ್ರಾಹ್ಮಣರು ಯಾರು ಇಲ್ಲ. ನಾನು ಇಲ್ಲಿನವರಿಗೆಲ್ಲಾ ದೊಡ್ಡವನು. ನಿಮಗೆ ಅಭ್ಯಂತರವಿಲ್ಲದಿದ್ದರೆ, ಹಣ್ಣು ಮತ್ತು ಅಪ್ಪಟವಾದ ಜೇನುತುಪ್ಪ ಕೊಡುತ್ತೇನೆ. ದಯವಿಟ್ಟು ಸ್ವೀಕರಿಸಿ'' ಎಂದು ನುಡಿದರು. ಮಾರ್ಗ ಮಧ್ಯದಲ್ಲಿ ಹಾಗೆ ತಿನ್ನಲು ಊಟ, ಇತರರಿಂದ ತೆಗೆದುಕೊಂಡರೂ ತಪ್ಪಿಲ್ಲವೆಂದು, ಸ್ವೀಕರಿಸಿ ತಿನ್ನುವದಕ್ಕೂ ಮುನ್ನ ಕೆಲವು ಕಾಗೆಗಳು ನನ್ನನ್ನ ಹಿಂಬಾಳಿಸಿ ಚುಚ್ಚಲಾರಂಭಿಸಿದೆವು. ಆ ಹಿರಿಯ, ''ಸ್ವಾಮಿ! ಇಲ್ಲಿನ ಕಾಗೆಗಳು ಯಾರನ್ನೂ ಹೀಗೆ ಹಿಂಬಾಲಿಸಿ ಬಾಧಿಸುವುದಿಲ್ಲ. ನೀವು ಯಾರೋ ಸಿದ್ಧ ಪುರುಷನನ್ನು ನಿಂದಿಸಿದಂತಿದೆ. ಅದರ ಪರಿಣಾಮವೇ ಇದು. ನಾವು ನಿಮಗೆ ಸಹಾಯ ಮಾಡಿ ಆ ಋಷೀಶ್ವರ ಕೋಪಕ್ಕೆ ಸಿಕ್ಕಲಾರೆವು. ಕ್ಷಮಿಸಿ'' ಎಂದು ನುಡಿದರು.

ಹಾಗೆ ಲಭಿಸಿದ ಹಣ್ಣು, ಜೇನುತುಪ್ಪ ಉಣ್ಣಲಾರದೆ, ಕಾಗೆಗಳ ಹೊಡೆತದಿಂದ ರಕ್ತ ಸುರಿಯುತ್ತಿರಲೂ, ಹೀಗೆ ಆಲೋಚಿಸಿದೆ 'ಆ ಯೋಗೀಂದ್ರರನ್ನು ಶಂಕಿಸಿದ್ದು ನಿಜ. ಆದರೇ ಆ ಮಹಾನುಭಾವುರೇ ನನಗೆ ಶ್ರೀವಲ್ಲಭರ ದರ್ಶನಪ್ರಾಪ್ತಿ ಆಗುವುದೆಂದರಲ್ಲವೆ? ಬಹುಶಃ ನಾನು ಮಾಡಿದ ಪಾಪಗಳೆಲ್ಲಾ ಈ ತರಹದ ಶಿಕ್ಷೆಗಳಿಂದ ನಶಿಸಬಹು'ದೆಂದು, ''ಶ್ರೀಪಾದ ಶ್ರೀವಲ್ಲಭ ಶರಣು ಶರಣು ಎಂದು ಜಪಿಸುತ್ತಾ ಒಂದು ಔದುಂಬರ ವೃಕ್ಷದ ನೆರಳಲ್ಲಿ ಕುಳಿತೆನು. ನನ್ನ ಶರೀರದಿಂದ ದುರ್ಗಂಧ ಬರುತ್ತಿತ್ತು. ಶ್ರೀದತ್ತ ಪ್ರಭುಗಳ ನಿವಾಸ ಸ್ಥಾನವಾದ ಈ ಔದುಂಬರ ವೃಕ್ಷ ನನ್ನನ್ನು ರಕ್ಷಿಸಲೆಂದು ಬೇಡುತ್ತಿದ್ದೆ. ಆದರೇ ಅದಕ್ಕೆ ವಿರುದ್ಧವಾಗಿ, ಅಲ್ಲಿನ ಕೆಲವು ವಿಷ ಸರ್ಪಗಳು ನನ್ನನ್ನು ಕಚ್ಚಿದವು. ಅದರ ಪರಿಣಾಮ ಬಾಯಿಂದ ನೊರೆ ಬರುತ್ತಿರಲು ನಾನು ಸಾಯುವುದು ತಥ್ಯವೆಂದು ನೆನೆದೆ.

ಸೂರ್ಯಾಸ್ತಮಯಕ್ಕೆ ನಾನು ಹಾಗೆಯೇ ಬಿದ್ದಿರಲೂ, ಆ ದಾರಿಯಲ್ಲಿ ಕೆಲವರು ರಜಕರು ಬಟ್ಟೆಗಳನ್ನು ಒಗೆದು, ಕತ್ತೆಗಳ ಮೇಲೆ ಮೂಟಗಳನ್ನಿತ್ತು ಅವರ ಮನೆಗಳಿಗೆ ವಾಪಸ್ಸಾಗುತ್ತಿದ್ದರು. ನಾನು ಬ್ರಾಹ್ಮಣನೆಂದು ತಿಳಿದು ಮೊದಲಿಗೆ ಸಂಕೋಚಪಟ್ಟರೂ, ನಾನಿದ್ದ ಸ್ಥಿತಿಕಾರಣ, ನನ್ನನ್ನು ಒಂದು ಕತ್ತೆಯಮೇಲೆ ಅವರ ಮನೆಗೆ ಕರೆದೊಯ್ದು ಗಿಡ, ಮೂಲಿಕೆಗಳ ಮತ್ತು ಅವುಗಳ ರಸದಿಂದ ಹಾವಿನ ವಿಷ ತೆಗೆಯತೊಡಗಿದರು. ಆ ಸಮಯ ನನಗೆ ಅತಿಯಾದ ನೋವು ಆಗುತ್ತಿರಲೂ, ಇಬ್ಬರು ಬಲಿಷ್ಠರು ನನ್ನನ್ನು ಗಟ್ಟಿಯಾಗಿ ಹಿಡಿದುಕೊಂಡಿರಲೂ ಆ ಚೆಮ್ಮಾರನು ನನ್ನಲ್ಲಿನ ವಿಷ ಪೂರ್ತಿ ತೆಗೆದು, ಗಾಯಗಳನ್ನು ಸಾಕಷ್ಟು ನಯ ಮಾಡಿದನು.

ಆ ರಾತ್ರಿ ಅವರ ಮನೆಯಲ್ಲೇ ಇದ್ದೆ. ರಾತ್ರಿಯೆಲ್ಲಾ ಆ ವೈದ್ಯ 'ದತ್ತ ದಿಗಂಬರಾ! ಶ್ರೀಪಾದವಲ್ಲಭ ದತ್ತ ದಿಗಂಬರ!' ಎಂದು ಸಂಕೀರ್ತನೆ ಮಾಡುತ್ತಿದ್ದನು. ಅತ್ಯಂತ ಶ್ರಾವ್ಯವಾಗಿ ಕೇಳಿ ಬರುತ್ತಿರುವ ಆ ನಾಮ ಸಂಕೀರ್ತನೆ ನನ್ನ ಹೃದಯವನ್ನಾನಂದ ಪಡೆಸಿತು. ಸ್ವಲ್ಪ ಹೊತ್ತಿನಲ್ಲೇ ಆ ಚೆಮ್ಮಾರ, ನಾನು ಬ್ರಾಹ್ಮಣನೆಂದು ತಿಳಿದು, ಬಾಧೆಪಟ್ಟನು.

## ಶಂಕರ ಭಟ್ಟನಿಗೆ ಚೆಮ್ಮಾರನ ಉಪದೇಶ

ಸಂಕೀರ್ತನಾ ನಂತರ ಆ ಚೆಮ್ಮಾರನು ನನ್ನ ಬಳಿಗೆ ಬರಲು, ಆವನ ಕಣ್ಣುಗಳಲ್ಲಿ ಕರುಣಾರಸವನ್ನೇ ನೋಡಿದೆ. ಆ ಕಣ್ಣುಗಳು ಆತ್ಮಾನುಭೂತಿಯನ್ನು ತೋರಿಸುತ್ತಿದ್ದವು. 'ಈತ ಒಂದು ಯೋಗಿಯಾ, ಏನು?' ಎಂಬುವ ಸಂದೇಹ ನನ್ನಲ್ಲಿತ್ತು. ಅತ ನನ್ನನ್ನು ನೋಡುತ್ತಾ ಹೀಗೆ ನುಡಿದನು. ''ಸ್ವಾಮೀ! ನನ್ನ ಹೆಸರು ವಲ್ಲಭದಾಸ. ನಾನು ಚೆಮ್ಮಾರನೇ, ಅಂತ್ಯಜನೆ ಸಂದೇಹ ವಿಲ್ಲ. ಆದರೂ ನಾನು ತಮಗೆ ಕೆಲವು ವಿಷಯಗಳನ್ನು ತಿಳಿಸಲೂ ಇಚ್ಛಿಸುತ್ತೇನೆ. ತಮ್ಮನಾಮಧೇಯ ಶಂಕರ ಭಟ್ಟನೆಂದು, ತಾವು ಶ್ರೀಪಾದ ಶ್ರೀವಲ್ಲಭರ ದರ್ಶನಕ್ಕೆ ಹೋಗುತ್ತಿದ್ದೇರೆಂದು, ತಾವು ಕಾಗೆಗಳು ಮತ್ತು ಸರ್ಪಗಳಿಂದ ಏಕೆ ಹಿಂಸಿಸುಲ್ಪಟ್ಟರೋ ಸಹಾ ನನಗೆ ಗೊತ್ತು.

ನಾನು ದಿಗ್ಭ್ರಾಂತಿಗೊಂಡು, ಬಹುಶಃ ಈತ ಜ್ಯೋತಿಷ ವಿದ್ಯೆಯಲ್ಲಿ ಪಂಡಿತನೇನೋ ಎಂದು ಮನಸ್ಸಿನಲ್ಲಿ ನೆನೆಯುತ್ತಿರಲೂ, ವಲ್ಲಭದಾಸ, ''ಸ್ವಾಮೀ! ನಾನು ಜ್ಯೋತಿಷ ಸಹಾ ಅಲ್ಲ'' ಎಂದು ಹೇಳಿದರು. ನಂತರ ಹೀಗೆಂದರು, **ಶ್ರೀಪೀಠಿಕಾಪುರ ಪಂಡಿತರಿಗೆ ಹುಟ್ಟೂರು. ಸಾಕ್ಷಾತ್ ಸಾಂಗ ವೇದಾರ್ಥ ಸಾಮ್ರಾಟ್ ಎಂದು ಹೆಸರು ಹೊಂದಿದ್ದ ಪಂಡಿತ ಮಲ್ಲಾದಿ ಬಾಪನ್ನಾವಧಾನಿ ನೆಲದಿದ್ದ ಪುಣ್ಯಭೂಮಿ. ವೇದಗಳು, ಯಾವ ಪರತತ್ವವನ್ನು ಕುರಿತು ವರ್ಣಿಸುವಾಗ, ನೇತಿ ನೇತಿ ಎಂದು ಸೋತುಹೋಗುವವೋ, ಆ ಪರತತ್ವವೇ ಶ್ರೀಪಾದ ಶ್ರೀವಲ್ಲಭರಾಗಿ ಜನುಮ ತಾಳಿದ ಪುಣ್ಯಭೂಮಿ ಇದು. ಶುಷ್ಕ ವೇದಾಂತ ಮತ್ತು ಅರ್ಥವಿಲ್ಲದ ತರ್ಕವಿತರ್ಕಗಳು, ಶ್ರೀಪಾದ ಶ್ರೀವಲ್ಲಭರ ಅನುಗ್ರಹವನ್ನು ಹೊಂದುವುದಿಲ್ಲ. ಶ್ರೀಪಾದರ ಕರುಣೆ ಪಡೆಯಲು ಪಾಂಡಿತ್ಯ ತೋರುವಿಕೆ ಅಗತ್ಯವೇ ಇಲ್ಲ. ಮೇಲ್ಪಟ್ಟು, ಪಾಂಡಿತ್ಯದಿಂದ ಹುಟ್ಟುವ ಅಹಂಕಾರವಿದ್ದರೇ ನಾವು ಅವರಿಂದ ಅದೆಷ್ಟೋ ದೂರ ಎಸೆಯಲ್ಪಟ್ಟವರಾಗುವೆವು."**

ನಿನ್ನನ್ನು ಚುಚ್ಚಿದ ಆ ಕಾಗೆಗಳು ಹಿಂದಿನ ಜನುಮದಲ್ಲಿ ಪೀಠಿಕಾಪುರ ವಾಸಿಗಳಾದ ಮಹಾಪಂಡಿತರು. ಅವರು ಶ್ರೀವಲ್ಲಭರ ದಿವ್ಯತತ್ತ್ವವನ್ನು ಗುರ್ತಿಸಲಾಗದೇ, ಅವರನ್ನು ಶ್ರೀದತ್ತ ಪ್ರಭುಗಳಾಗಿ ಕಾಣದೇ ಅವರವರ ಜೀವನವೆಲ್ಲಾ ವ್ಯರ್ಥ ಮಾಡಿಕೊಂಡರು. ಅವರು ವೇದವನ್ನು ಕೊನೆಯಿಂದಾ ಮೊದಲಿಗೂ ಹೇಳಬಲ್ಲರು. ಆದರೇ ಫಲಿತ? ಕ್ರಮ, ಘನ, ಜಟ ಮತ್ತು ಸ್ವಾಧ್ಯಾಯ ಎಂಬುವ

ಮಾತುಗಳನ್ನುಚ್ಛರಿಸುತ್ತಾ, ಅವರು ತಮ್ಮ ಅಹಂಕಾರವನ್ನು ಪ್ರದರ್ಶಿಸಿದರು. ಸತ್ತನಂತರ, ಸ್ವರ್ಗಕ್ಕೆ ಹೋಗಿ ಇಂದ್ರರಿಂದ ಹೊಗಳಲ್ಪಟ್ಟರು. "ತಾವು ಕ್ರಮಾಂತರು, ಘನಪಾಟಿಗಳು, ಜಟಿ, ತರ್ಕಪ್ರಾವೀಣ್ಯತೆ ಉಳ್ಳವರು. ವೇದವನ್ನದೆಷ್ಟು ಬಾರಿ ನುಡಿದವರೋ! ಎಷ್ಟು ಪುಣ್ಯ! ಈ ಕಾರಣಕ್ಕೆ ತಾವೆಲ್ಲಾ ಇಲ್ಲಿಗೆ ಬಂದಿದ್ದೀರಿ, ಅಲ್ಲಿನ ಇತರರು ಸಹಾ ಹೊಗಳಿದರು. ಆದರೇ ಅವರು ಹಸಿವಿನಿಂದ ಒದ್ದಾಡುತ್ತಿದ್ದರು. ಸ್ವರ್ಗದಲ್ಲಿ ಅಮೃತ ಲಭಿಸುವುದು, ಅದರ ಪಾನದಿಂದ ಹಸಿವು, ಬಾಯಾರಿಕೆ ಇರುವುದಿಲ್ಲವೆಂದು ಅವರು ಕೇಳಿದ್ದರು. ಆದರೇ ಇಲ್ಲಿ ಅದಕ್ಕೆ ವಿರುದ್ಧವಾಗಿ ಅವರು ಹಸಿವಿನಿಂದ ಬಾಧೆ ಅನುಭವಸುತ್ತಿರುವ (ಅವರು) ಶ್ರೀ ದೇವೇಂದ್ರರನ್ನೇ ಸಹಾಯ ಬೇಡಿದರು.'' ವೇದ, ಭಗವಂತನ ಉಚ್ವಾಸ, ನಿಶ್ವಾಸ ರೂಪ, ಪ್ರಭು ಅನಂತ, ಚಿರಂಜೀವಿ. ಅಂದ ಮೇಲೆ ವೇದಗಳು ಸಹಾ ಅನಂತ. ಸರ್ವ ಧರ್ಮಕ್ಕೂ ಮೂಲ ವೇದಗಳೇ. ವೇದ ಪಠನವೆಂದರೇ ಪ್ರಭು ಸ್ತುತಿಯೇ ಸರಿ! ಆದ್ದರಿಂದಲೇ ದೇವತೆಗಳಾದ ನಾವು ಸಹಾ ನಿಮ್ಮನ್ನು ಅದೆಷ್ಟೋ ಸ್ತುತಿಸುತ್ತಿದ್ದೇವೆ. ಇಲ್ಲದಿದ್ದರೇ ನಾವೇಕೆ ನಿಮ್ಮನ್ನು ಸ್ತುತಿಸಬೇಕು? ಯಾರು ಭೋಜನ ಯಾಚಿಸುತ್ತಾರೋ, ಅಂತವರು ಇತರರಿಗೆ ಹಿಂದೆ ಭೋಜನ ಕೊಟ್ಟಿರಬೇಕು. ಯಾರಾದ್ರು ಒಂದು ಕಾಳು ದಾನ ಮಾಡಿದ್ದರೆ. ಅಂತಹವರಿಗೆ ನಾವು ಸಾವಿರ ಕಾಳು ಕೊಡಬಲ್ಲೆವು. ನಿಜಕ್ಕೂ ನೀವು ಇಲ್ಲಿಯವರಿಗೂ ದಾನವೇ ಮಾಡದಿದ್ದಲ್ಲಿ ನಾವೇನು ಮಾಡಲು ಸಾಧ್ಯ? ನಿಮ್ಮ ವೇದೋಚ್ಛರಣೆದಿಂದ ಅನಂತಫಲ ನಿಮಗೆ ಲಭಿಸಿದೆ. ಆದ್ದರಿಂದ ತಾವೆಲ್ಲಾ ಇಲ್ಲಿ ಬಂದಿದ್ದೀರಾ. ಇಂದ್ರಲೋಕದಲ್ಲಿರುವವರೆಗೂ ಸ್ವೇಚ್ಛೆಯಿಂದ ಇರಬಹುದು. ನಂತರ ಬೇರೆ ಲೋಕಕ್ಕೆ ತೆರಳಬಹುದು. ಹಾಗೇ, ನೀವೀಗ ಅನಂತಕಾಲ ಸ್ವೇಚ್ಛಾ ಜೀವನವನ್ನು ನಡೆಸಬಹುದು'' ಎಂದು ಇಂದ್ರರು ಹೇಳಿದರು.

ಇಂದ್ರರ ವಚನಗಳು ಕೇಳಿ ಅವರು ಸಂಕಟಕ್ಕೆ ಗುರಿಯಾದರು. ಹಸಿವನ್ನು ಅನುಭವಿಸುತ್ತಾ ಅನಂತಕಾಲ ಇಲ್ಲಿ ಬಾಳುವುದು, ದುರ್ಭರ ಶಿಕ್ಷೆಯೇ ಎಂದು ಅವರು ತಿಳಿದರು. ಮುಂದುವರಿಯುತ್ತಾ ಇಂದ್ರರು ಹೀಗೆ ಹೇಳಿದರು, "ನೀವೆಲ್ಲಾ ಪವಿತ್ರ ಪಾದಗಯ ಕ್ಷೇತ್ರದಲ್ಲಿ ವಾಸವಿದ್ದರೂ, ಪಿತೃದೇವತೆಗಳಿಗೆ ಪಿಂಡೋದಕಗಳು ಮತ್ತು ಅಬ್ದೀಕೆಗಳನ್ನು ಅಶ್ರದ್ಧೆ ಇಂದ ಅರ್ಪಿಸುತ್ತಿದ್ದೀರಿ. ನೀವು ಸದಾ, ಶ್ರಾದ್ಧಕರ್ಮಗಳ ವೆಚ್ಚ ಎಷ್ಟು ಆಯಿತು ಎಂಬುವುದರಲ್ಲಿ, ಊಟದ ರುಚಿಯ ವಿಷಯದಲ್ಲಿ ಹೆಚ್ಚು ಗಮನವೀಡುತ್ತಿದ್ದರೇ ಹೊರತು, ಕಾರ್ಯದ ಮೇಲೆ ಶ್ರದ್ಧೆ ಇರುತ್ತಿರಲಿಲ್ಲ. ಅದರಿಂದ ನಿಮ್ಮ ಪಿತೃದೇವತೆಗಳಿಗೆ ಉತ್ತಮಗತಿ ಪ್ರಾಪ್ತಿಯಾಗಲಿಲ್ಲ. ನಿಮ್ಮನಂತರದವರು ಸಹಾ ಇದೇ ವಿಧವಾಗಿ ಆಚರಿಸುತ್ತಿದ್ದರು. ನಮ್ಮ ತಂದೆ ತಾಯಿ ಅದೆಷ್ಟು ಕಾಲ ಬದುಕಿದ್ದರೆಂದು, ಎಷ್ಟು ಅಹಾರಕ್ಕಾಗಿ ವೃಥಾ ಖರ್ಚೆಂದೂ, ಅವರುಗಳು ಅನಾರೋಗ್ಯ ಸಲವಾಗಿ ಎಷ್ಟು ವೆಚ್ಚವಾಯಿತೆಂದು ಯೋಚಿಸುವ ಸಂತಾನವೇ ಹೊಂದಿದ್ದರು. ಸಾಕ್ಷಾತ್ ಶ್ರೀಮನ್ನಾರಾಯಣನಾದ ಶ್ರೀಪಾದ ಶ್ರೀವಲ್ಲಭರನ್ನು ನಿಮ್ಮ ಸಂಗಡದಲ್ಲೇ ಇರುತ್ತಾ ತರುಣೋಪಾಯಗಳು ತೋರಿಸುತ್ತಿರಲೂ ಸಹಾ ಅವರನ್ನು ನಿಂದಿಸಿ, ವಿತಂಡವಾದಗಳಲ್ಲಿ ಅವರನ್ನು ದೂಷಿಸಿದಿರಿ. ಭಗವಂತನ ಅವತಾರ ಲಕ್ಷಣಗಳಾದ ಸರ್ವಾಂತರ್ಯಾಮತ್ವ, ಸರ್ವಜ್ಞತ್ವ, ಸರ್ವಶಕ್ತಿತ್ವ ಸ್ಪಷ್ಟವಾಗಿ ಅವರಲ್ಲಿ ಕಾಣುತ್ತಿದ್ದರೂ, ಶ್ರೀಪಾದ ಶ್ರೀವಲ್ಲಭರನ್ನು ಶ್ರೀ ದತ್ತಾವತಾರವೆಂದು ಗುರ್ತಿಸದೇ ಅಂಧರಾದಿರಿ. ಶ್ರೀಪಾದ ಶ್ರೀವಲ್ಲಭರ ಪವಿತ್ರನಾಮದ ಉಚ್ಛಾರಣೆಯಿಂದ ಪವಿತ್ರಗೊಂಡ ವ್ಯಕ್ತಿಯ ರಕ್ತಪಾನದ ನಂತರ, ನಿಮಗೆ ಉತ್ತಮಗತಿ ಲಭ್ಯವೆಂದು, ಅಲ್ಲಿಯವರಿಗೂ ಪಿತೃದೇವತಾ ರೂಪವಾದ ಕಾಗೆಗಳಾಗಿಯೇ ನೀವು ಜೀವಿಸಲೂ ನಿರ್ಧಾರವಾಗಿದೆ.'' ಶಂಕರ ಭಟ್ಟಾ! ಆದ್ದರಿಂದಲೇ ಅವರು ಕಾಗೆಗಳಾಗಿ ಜನಿಸಿ, ಪೂರ್ವ ಜನುಮದ ಪುಣ್ಯಫಲವಾಗಿ ನಿನ್ನ ರಕ್ತವನ್ನು ಪಾನಮಾಡಿ ಸದ್ಗತಿಯನ್ನು ಪಡೆದರು'' ಎಂದು ಶ್ರೀವಲ್ಲಭದಾಸ ನುಡಿದರು.

ಆಗ ತನ್ನ ಎದುರಲ್ಲಿದ್ದ ವಲ್ಲಭದಾಸ, ಸಾಮಾನ್ಯ ಮನುಷ್ಯನಲ್ಲವೆಂದು, ಶ್ರೀಪಾದ ವಲ್ಲಭರ ಕರುಣೆ ಅವರ ಮೇಲೆ ಸಂಪೂರ್ಣವಾಗಿದೆ ಎಂದು ನಾನು ಗುರುತಿಸಿದೆ. ನಂತರ, ಶ್ರೀವಲ್ಲಭದಾಸರು, ''ತಂದೇ! ನಿಮ್ಮ ಶರೀರದ ದುರ್ಗಂಧದಿಂದ ಆಕರ್ಷಿಸಲ್ಪಟ್ಟ ಆ ಸರ್ಪಗಳು ನಿಮ್ಮನ್ನು ಕಚ್ಚಿದನಂತರ, ಸದ್ಗತಿಯನ್ನು ಹೊಂದಿವೆ'' ಎಂದು ನುಡಿದರು.

ತದನಂತರ, ಶಂಕರ ಭಟ್ಟರು, ಇನ್ನು ಮುಂದೆ ಸಹಾ ಯಾವ ಪ್ರಾಣಿ ತನ್ನನ್ನು ಹಿಂಸಿಸುವುದೋ ಎಂಬುವ ಭಯಕ್ಕೆ, ಶ್ರೀವಲ್ಲಭದಾಸರು, ''ಇದೆಲ್ಲವೂ ಆ ಶ್ರೀಪಾದರ ಲೀಲೆ. ಭಯಬೇಡ. ಇನ್ನು ಮುಂದೆ ನಿನಗೆ ಯಾವ ತರಹವಾದ ಉಪದ್ರವವಿರುವುದಿಲ್ಲ. ಪ್ರಾಣ ಕೊಟ್ಟವನಿಗೇ, ಪ್ರಾಣ ತೆಗೆಯುವ ಅಧಿಕಾರ ಹೊರತು, ಬೇರೊಬ್ಬರಿಗಿಲ್ಲ'' ಎಂದು ಧೈರ್ಯ ತುಂಬಿದರು.

ನಿನ್ನ ಪಿತೃದೇವರಲ್ಲಿ ಕೆಲವರು, ಮಸಣದ ಕಾಳಿಮಾತೆ ಸಾಧನೆ ಮಾಡಿ, ಎಷ್ಟೋ ಅಯಿಷ್ಟರನ್ನು ತಮ್ಮ ಮಂತ್ರ ಬಲದಿಂದ ಸಾಯಿಸಿದ್ದರು. ಆ ಕಾರಣ ಅವರಿಗೆ ಪಾಪವು ಮುತ್ತಿದೆ. ಅ ಪಾಪ ನಾಶಕ್ಕಾಗಿಯೇ ಅವರು ಸರ್ಪಗಳಾಗಿ, ಶ್ರೀಪಾದರ ಕರುಣೆ ಹೊತ್ತಿ ಜನುಮವೆತ್ತಿದ, ನಿನ್ನ ರುಧಿರವನ್ನು ಪಾನಮಾಡಿ ಉತ್ತಮ ಗತಿಯನ್ನು ಪಡೆದಿರುತ್ತಾರೆ.

ಸ್ವಾಮಿ! ಬ್ರಾಹ್ಮಣ ಸತ್ಯಾನ್ವೇಷಿಯಾಗಿರಬೇಕು. ಕ್ಷತ್ರಿಯನು ಧರ್ಮಬದ್ಧನಾಗಿರಬೇಕು. ವೈಶ್ಯನು ವ್ಯವಸಾಯ, ಗೋರಕ್ಷಣೆ ಮತ್ತು ಕ್ರಯ ವಿಕ್ರಯ ವಿಷಯಗಳಲ್ಲಿ ಮನಸಿಟ್ಟು ಶಾಂತ ಸ್ವರೂಪನಾಗಿರಬೇಕು. ಶೂದ್ರನು ಪ್ರೇಮ ಸ್ವರೂಪನಾಗಿ ಸೇವೆ ಸಲ್ಲಿಸಬೇಕು. ಆದರೇ **ಭಗವದನುಗ್ರಹವಿದ್ದಲ್ಲಿ ಜಾತಿ, ಮತ, ಕುಲ, ಧನಿಕ ಬಡವನೆಂಬ ಭೇದವಿಲ್ಲದೇ ಇರುವುದು.** ಬ್ರಾಹ್ಮಣ ಕ್ಷತ್ರಿಯ ಧರ್ಮವನ್ನು ಪಾಲಿಸಿ ಅರಸನಾಗಬಹುದು. ಕ್ಷತ್ರಿಯನು ಬ್ರಹ್ಮಜ್ಞಾನವನ್ನು ಬಯಸಿದಾಗ, ಬ್ರಾಹ್ಮಣ ಧರ್ಮವನ್ನು ಪಾಲಿಸಬಹುದು. ವೈಶ್ಯನಾದ ಕುಸುಮ ಶ್ರೇಷ್ಠಿ ಕ್ಷತ್ರಿಯ ಧರ್ಮ ಪಾಲಿಸಿ ರಾಜಕಾರಣವನ್ನು ಆಚರಿಸಲಿಲ್ಲವೇ? ಶತ್ರುವನ್ನು ವಧಿಸುವುದು ಬ್ರಾಹ್ಮಣನಿಗೆ ದೋಷ, ಆದರೇ ಅದು ಕ್ಷತ್ರಿಯ ಧರ್ಮ. ಬ್ರಾಹ್ಮಣ ಸತ್ಯಾನ್ವೇಷಿ. ಅಹಿಂಸೆ ಬ್ರಾಹ್ಮಣರಿಗೆ ಪರಮ ಧರ್ಮ ಆದರೇ ಇದು ಕಟುಕನಿಗೆ ಅನ್ವಯಿಸುವದಿಲ್ಲ.

ಆದ್ದರಿಂದ, **ಸತ್ಫಲಿತಗಳಿಗೆ ಮಾನವ, ತನ್ನ ಧರ್ಮಕ್ಕೆ ಅನುಗುಣವಾಗಿ ಕರ್ಮಾಚರಣೆ ಮಾಡಬೇಕು.** ನೀನೀಗ ರೋಗಗ್ರಸ್ತ, ಆದ್ದರಿಂದ ವೈದ್ಯನ ಹತ್ತಿರ ಇರುವುದೇ ಲೇಸು. ಆ ಕಾರಣಕ್ಕೆ ನೀನು ನನ್ನ ಬಳಿ ಬಂದಿರುವೆ.

**ಶ್ರೀಪಾದ ಶ್ರೀವಲ್ಲಭರು ಸದಾ ನಮ್ಮನ್ನು ಗಮನಿಸುತ್ತಿರುತ್ತಾರೆಂದು ತಿಳಿದುಕೊಳ್ಳಬೇಕು.** ನೀನು ನಿನ್ನ ಬಾಲ್ಯದಲ್ಲಿ ಶ್ರೀ ಮಹಾವಿಷ್ಣುವಿನ ಶ್ಲೋಕಗಳಿಗೆ ಮತ್ತು ''ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ....'' ಎಂಬುವ ಶ್ರೀ ವಿಘ್ನೇಶ್ವರನ ಶ್ಲೋಕಕ್ಕೂ, ವಿನೋದಕ್ಕಾಗಿ ತಪ್ಪು ಅರ್ಥವನ್ನು ಹೇಳುತ್ತಿದ್ದೆ. ವಿಘ್ನೇಶ್ವರನ ಮೇಲ್ಕಂಡ ಶ್ಲೋಕಕ್ಕೆ, ಕತ್ತೆಯ ವರ್ಣನೆಯಾಗಿ ಜೋಡಿಸುತ್ತಿದ್ದೆ. 'ಬಿಳಿಯ ಬಟ್ಟೆ ಹೊತ್ತಿ ಎಲ್ಲೆಲ್ಲೂ ತಿರುಗುತ್ತಾ ಬೂದಿ ಬಣ್ಣದಲ್ಲಿ ನಾಲ್ಕು ಕಾಲಿನ ವಿನೋದ ಮುಖದಿಂದ ಕೂಗುವ, ಎಲ್ಲಾ ವಿಘ್ನ ನಿರ್ಮೂಲಿಸುವ ಕತ್ತೆಯನ್ನು ಧ್ಯಾನಿಸುವೆ' ಎಂದು ವಿಪರೀತಾರ್ಥ ನುಡಿಯುತ್ತಿದ್ದೆ. ಸ್ವಾಮಿ! ಶಂಕರ ಭಟ್ಟ! ಶ್ರೀದತ್ತ ಪ್ರಭುಗಳು ಬಹಳ ಚಮತ್ಕಾರಿ. ನೀನು ವಿನೋದಕ್ಕಾಗಿ ಎಲ್ಲೋ ಮಾಡಿದ ತಪ್ಪುಗಳನ್ನೆಲ್ಲಾ ತನ್ನ ಸನ್ನಿಧಾನದಲ್ಲಿ ಸರಿಪಡಿಸುವೆನು. ನೀನು ''ಶುಕ್ಲಾಂಬರಧರಂ....''ಗೆ ಮರುವರ್ಣನೆ ಕೊಟ್ಟ ಹಾಗೆಯೇ, ನಿನ್ನನ್ನು ಅಗಸರು ಅವರ ಕತ್ತೆಯ ಮೇಲೆ ಕುಂಡ್ರಿಸಿ ನನ್ನ ಬಳಿ, ಇಲ್ಲಿಗೆ ಕರೆದುಕೊಂಡು ಬಂದರು.

ಆಗ ನೀನು ಧೂಳಿನಿಂದ ಬೂದಿಯ ಬಣ್ಣದಂತೆಯೇ ಇದ್ದೆ. ನಡೆಯಲಾರದೇ ಒಮ್ಮೊಮ್ಮೆ ಕೈಗಳನ್ನು ಸಹಾ ನೆಲದ ಮೇಲಿಟ್ಟುಕೊಂಡು, ನಾಲಕ್ಕು ಕಾಲುಳ್ಳವನಂತೆ ನಡೆದುಕೊಂಡು ಬಂದೆ. ಸರ್ಪಗಳ ಕಾಟದಿಂದ ತಪ್ಪಿಸಿಕೊಳ್ಳಲೂ, ಅ ವಿಧವಾಗಿ "ಚತುರ್ಭುಜನಾಗಿ, ಔದುಂಬರ ವೃಕ್ಷದ ಬಳಿ ಬಂದರೂ ಸಹಾ ಅವುಗಳಿಂದ ಆಪತ್ತು ತಪ್ಪಿಸಕೊಳ್ಳಲೂ ಆಗಲಿಲ್ಲ! ಬಾಧೆಯಿಂದ ಒದ್ದಾಡದಿದ್ದರೇ, ನೀನು ಪ್ರಸನ್ನವದನನೇ? ಕೊನೆಗೆ, ನೀನು ಚೆಮ್ಮಾರರ ಹಳ್ಳಿಗೆ ತಲುಪಿಸಲಾದೆ, ನಿನ್ನನ್ನು ಈ ವಿಧವಾಗಿ ದುರವಸ್ಥೆ ಪಾಲು ಮಾಡುವದರಲ್ಲಿ, ಶ್ರೀವಲ್ಲಭರು ವಿನೋದದ ಜೊತೆ ನಿನಗೊಂದು ಗುಣಪಾಠವನ್ನು ಸಹಾ ಕಲಿಸಿ, ನೀಚ ಜನುಮದವರ ವಿಮುಕ್ತಿಯನ್ನು ಸಹ ಮಾಡಿಸಲಾಯಿತು. ನೀನು ವಿನೋದಕ್ಕಾಗಿ ಶ್ರೀ ಮಹಾವಿಷ್ಣು ಧ್ಯಾನ ಶ್ಲೋಕವನ್ನು ನಿನ್ನ ಸಂಗಡಿಯರಿಗೆ ಭಿನ್ನಾರ್ಥದಲ್ಲಿ ಹೇಳುತ್ತಿದ್ದೆ. ಆದ್ದರಿಂದಲೇ, ಅಂತ್ಯದಲ್ಲಿ ಅಲ್ಪಜನಾದ ನನ್ನಿಂದ ಉಪದೇಶವನ್ನು ಕೇಳುವಂತಹ ಪರಿಸ್ಥಿತಿಗೆ ಬಂದಿದ್ದೀಯ! ನಾಳೆ ನೀನು ನಿನ್ನ ಕುಲಸ್ಥರಿಗೆ,ಇಲ್ಲಿ ನಡೆದಿರುವ ವಿಷಯಗಳನ್ನು ಮರೆತು ಹೇಳಿದರೂ, ಅವರೆಲ್ಲಾ ನಿನ್ನನ್ನು ತಮ್ಮ ಕುಲದಿಂದ ಹೊರಗೆ ಹಾಕುವರು.

ಶ್ರೀವಲ್ಲಭದಾಸರ ಹಿತಬೋಧೆಯಿಂದ, ನನ್ನಲ್ಲಿನ ಬ್ರಾಹ್ಮಣ ಅಹಂಕಾರ ಕಡಿಮೆ ಆಯಿತು. ವಲ್ಲಭದಾಸ ಅಂತ್ಯಜನಾದರೂ, ನನ್ನ ರಕ್ತ ಸಂಬಂಧಿಕನೇ ಎಂಬುವಂತ ಸೋದರ ಪ್ರೇಮ ನನಗೆ ಅವರ ಮೇಲೆ ಹುಟ್ಟಿಕೊಂಡಿತು. ಶ್ರೀವಲ್ಲಭದಾಸರ ಅತಿಥ್ಯವನ್ನು ಸ್ವೀಕರಿಸಿ, 2,3 ದಿನಗಳ ನಂತರ ನಾನು ಆ ಊರಿನಿಂದ ಮುಂದೆ ಹೊರಟೆನು.

ಶ್ರೀವಲ್ಲಭರ ಮಹತ್ತರ ಅನುಗ್ರಹವನ್ನು ಹೇಗೆ ವರ್ಣಿಸಲೂ ಸಾಧ್ಯ? ನಾನು ಚಿದಂಬರಂ ಸೇರುವುದಕ್ಕೆ ಮುನ್ನ ವಿಚಿತ್ರ ಪುರವೆಂಬ ಪಟ್ಟಣದಲ್ಲಿ ವಿಚಿತ್ರ ಪರಿಸ್ಥಿತಿಗಳಲ್ಲಿ ಸಿಕ್ಕಿಬಿದ್ದು, ವಿಚಿತ್ರವಾಗಿ ಈಚೆಗೆ ಬಂದೆನು. ಅದೇನೆಂದರೆ -

ನಾನು ವಿಚಿತ್ರ ಪುರವೆಂಬ ಗ್ರಾಮದಿಂದ ಕಾಲ್ನಡಿಗೆಯಲ್ಲಿ ಹೋಗುತ್ತಿರಲೂ ರಾಜಭಟರು ಬಹಳ ವಿನಯ-ವಿಧೇಯತೆ ಇಂದ ನನ್ನನ್ನು ಸಮೀಪಿಸಿ 'ಸ್ವಾಮಿ! ತಾವು ವೈಷ್ಣವರಾ ಅಥವಾ ಶೈವರಾ' ಎಂದು ಪ್ರಶ್ನಿಸಿದರು. 'ನಾವು ಶಿವಕೇಶವರ ಭೇದವನ್ನು ನೋಡದಂತಹಾ ಸ್ಮಾರ್ತರು. ಆದರೂ ಸ್ವಲ್ಪ ಶೈವದತ್ತ ಬಗ್ಗುವೆನೆ'ಂದು ನಾನು ನುಡಿದನು. 'ಆದಿಶಂಕರರ ದಕ್ಷಿಣಾಮ್ನಾಯ ಪೀಠವಾದ ಶೃಂಗೇರಿಯಲ್ಲಿರುವ ಶಂಕರಾಚಾರ್ಯರವರು ನಮ್ಮ ಗುರುಗಳೆ'ಂದೂ ನಾನು ಹೇಳಿದೆನು. ನನ್ನನ್ನು ಅವರ ರಾಜನ ಹತ್ತಿರಕ್ಕೆ ಮರ್ಯಾದೆಯಿಂದ ಕರೆದುಕೊಂಡು ಹೋದರು. ದಾರಿಯಲ್ಲಿ ಕೆಲ ವಿಚಿತ್ರವಾಗಿರುವ ಅಲ್ಲಿನ ವಿಷಯಗಳನ್ನು ಹೇಳಿದರು. ಆ ದಿನ ಯಾರೇ ಬ್ರಾಹ್ಮಣ ಕಾಣಿಸಿದರೂ ಅಲ್ಲಿನ ರಾಜರು, ಅವರನ್ನು ಬರೆಮಾಡಿಕೊಂಡು "ಅಷ್ಟಕ್ಕೆ ಇಷ್ಟಾದರೇ ಇಷ್ಟಕ್ಕೆ ಎಷ್ಟು?" ಎಂದು ಕೇಳುತ್ತಿದ್ದರು. ಅದಕ್ಕೆ ಸಮಾಧಾನ ರಾಜನಿಗೆ ತೃಪ್ತಿ ಕೊಂಡುವಂತಹದ್ದು ಯಾರೂ ಕೊಟ್ಟಿರಲಿಲ್ಲ. ಆ ರಾಜನಿಗೆ ಪುತ್ರನಿಲ್ಲದಿದ್ದರಿಂದ, ಒಂದು ಯಜ್ಞವನ್ನು ಅವರ ಪುರೋಹಿತರು ಮಾಡಿಸಿದ್ದರು. ಪುತ್ರಪ್ರಾಪ್ತಿ ಆಯಿತೇ ಹೊರತು ಅಂದಿನಿಂದ ಬ್ರಾಹ್ಮಣರಿಗೆ ವಿಚಿತ್ರವಾದ ಕಷ್ಟಗಳು ಎದುರಾದವು. ದುರದೃಷ್ಟದಿಂದ ಆ ರಾಜಪುತ್ರನು ಮೂಕನಾದನು. ಆಗ ಆ ರಾಜ, ಬ್ರಾಹ್ಮಣರ ಮೂಲಕ ತಾನು ಪುತ್ರನಿಗಾಗಿ ಮಾಡಿದ ಯಜ್ಞ ಲೋಪಭೂಯಿಷ್ಟವಾಗಿತ್ತೆಂದು ನೆನೆದು, ಶೈವ ಬ್ರಾಹ್ಮಣರನ್ನು, ತಲೆ ಕೂದಲು ಪೂರ್ತಿಯಾಗಿ ತೆಗೆದು ವೈಷ್ಣವ ನಾಮ ಮುಖಕ್ಕೆ ಬಳೆದು, ಕತ್ತಯೆ ಮೇಲೆ ಮೆರವಣಿಗೆ ಮಾಡಿಸಿದನು. ಅದೇ ರೀತಿ ವೈಷ್ಣವ ಬ್ರಾಹ್ಮಣರಿಗೆ ಸಹಾ ಕೂದಲು ತೆಗೆಸಿ ವಿಭೂತಿ ರೇಖೆಗಳು ಮುಖಕ್ಕೆ ಇಟ್ಟು, ಕತ್ತೆಯ ಮೇಲೆ ಮೆರವಣಿಗೆ ಮಾಡಿಸುತ್ತಿದ್ದನು. ಇದರಿಂದ ಶೈವ ಮತ್ತು ವೈಷ್ಣವ ಬ್ರಾಹ್ಮಣರಿಗೆ ಸಂಕಟ ಉಂಟಾಯಿತು. ಮತ್ತೊಂದು ರೀತಿಯಲ್ಲಿ ಆ ರಾಜನು ವಿಚಿತ್ರವಾಗಿ ವರ್ತಿಸಲಾರಂಭಿಸಿದನು. ಬ್ರಾಹ್ಮಣರಿಗೆ ಅಡಿಗೆಗೆ ಸೊಪ್ಪು

ದಾನಮಾಡತೊಡಗಿದನು. ಬ್ರಾಹ್ಮಣರು ಬೇರೆ ಯಾವ ವಿಧವಾಗಿ ಆಹಾರ ತಿನ್ನಬಾರದೆಂದು ಆಜ್ಞಾಪಿಸಿದನು. ವ್ಯವಸಾಯದಾರರನ್ನು ಬರೀ ಸೊಪ್ಪು ಬೆಳೆಸಬೇಕೆಂದು ಆದೇಶಿಸಿದನು. ರಾಜ ಮಂದಿರದಲ್ಲಿ ಬೆಟ್ಟಗಳಷ್ಟು ಸೊಪ್ಪು ಶೇಕರಿಸಿ ಬ್ರಾಹ್ಮಣರಿಗೆ ಫಲಹಾರಕ್ಕೂ ಅದೇ, ಊಟಕ್ಕೂ ಅದೇ ಎಂದು ಆಜ್ಞಾಪಿಸಿದನು. ವಿಧಿ ಇಲ್ಲದೇ, ರುಚಿ ಇಲ್ಲದಿದ್ದರೂ ಅದನ್ನೇ ತಿನ್ನಬೇಕಾಯಿತು ಬ್ರಾಹ್ಮಣರಿಗೆ, ಆ ಭಗವಂತನೇ ಕಾಪಾಡಬೇಕೆಂದು ಬೇಡಿಕೊಳ್ಳುತ್ತಿದ್ದರು. ಅವರಲ್ಲಿ ಒಬ್ಬ ಶ್ರೀದತ್ತ ಭಕ್ತನಿದ್ದನು. ಶ್ರೀದತ್ತಾತ್ರೇಯರು ಸ್ಮರಣದಿಂದಲೇ ಪ್ರಸನ್ನನಾಗುವನೆಂದು, ತಮ್ಮಗಳ ಈ ದುರವಸ್ಥೆ ಆ ದತ್ತ ಪ್ರಭುಗಳೇ ಸರಿ ಮಾಡುವರೆಂದು, ಆದ್ದರಿಂದ ಬ್ರಾಹ್ಮಣರೆಲ್ಲಾ ದೀಕ್ಷೆ ಹೊತ್ತು, ಶ್ರೀ ದತ್ತಾತ್ರೇಯರನ್ನು ಆರಾಧಿಸತೊಡಗಿದರು.

ತನ್ನ ಮಗ ಮೂಕನಾದ ಕಾರಣ ಅರಸ, ಮೂಕಭಾಷೆಯನ್ನ ಹೆಚ್ಚು ಪ್ರೋತ್ಸಾಹ ಮಾಡುತ್ತಿದ್ದರು. ರಾಜ ಗುರುಗಳಿಗೆ ಮೂಕ ಭಾಷೆಯ ಮೇಲೆ ಒಂದು ಗ್ರಂಥವನ್ನು ಬರೆಯಲು ಆದೇಶಿಸಿದ್ದರು. ರಾಜ ಗುರುಗಳು ಹಿಂದೆ ಅಹಂಕಾರದಿಂದಿದ್ದರೂ, ಈಗ ನಡತೆಯನ್ನು ಸರಿಪಡಿಸಿಕೊಂಡು ಮೂಕಭಾಷೆಯ ಮೇಲೆ ವಿಸ್ತೃತವಾಗಿ ಪರಿಶೋಧನೆ ಮಾಡುತ್ತಿದ್ದರು. ಈ ಸಲವಾಗಿಯೇ ಆ ರಾಜನು ಬ್ರಾಹ್ಮಣರನ್ನು ತನ್ನ ಪ್ರಶ್ನೆಗೆ ಉತ್ತರ ಮತ್ತು ಮೂಕಭಾಷೆಯ ಪರಿಜ್ಞಾನ ಕುರಿತು ಪರೀಕ್ಷಿಸುತ್ತಿದ್ದನು.

## ಶಂಕರ ಭಟ್ಟ, ಮಹಾರಾಜರ ಸಂವಾದ

ನನ್ನನ್ನು ರಾಜ ಸಮ್ಮುಖಕ್ಕೆ ಕರೆದೊಯ್ದರು, ಹೆದರಿಕೆಯಿಂದ ಬೆವರು ಸುರಿಯುತ್ತಿರಲೂ ಶ್ರೀಪಾದರ ನಾಮಸ್ಮರಣೆ ಬಿಡದೇ ಮಾಡುತ್ತಿದ್ದೆನು. ಅರಸ, ಎಲ್ಲಾರನ್ನು ಪ್ರಶ್ನಿಸಿದ ಹಾಗೆಯೇ ನನ್ನನ್ನೂ ''ಅಷ್ಟಕ್ಕೆ ಇಷ್ಟಾದರೇ, ಇಷ್ಟಕೆ ಎಷ್ಟು''? ಎಂದು ಪ್ರಶ್ನಿಸಿದರು. ನಾನು ಧೈರ್ಯವಾಗಿ ''ಇಷ್ಟಕ್ಕೆ ಇಷ್ಟೆ'' ಎಂದುತ್ತರಿಸಿದೆ. ಅರಸ, ಆಶ್ಚರ್ಯಗೊಂಡು, ''ಮಹಾತ್ಮಾ! ತಾವು ಉತ್ತಮರು, ದೊಡ್ಡವರು. ನಿಮ್ಮ ದರ್ಶನ ಭಾಗ್ಯದಿಂದ ನಾನು ಧನ್ಯನಾದೆನು. ನನಗೆ ಇತ್ತೀಚೆಗೆ ಪೂರ್ವಜ್ಞಾನೋದಯವಾಗಿದೆ. ನಾನು ಹಿಂದಿನ ನನ್ನ ಜನುಮದಲ್ಲಿ ಬಡ ಬ್ರಾಹ್ಮಣನಾಗಿದ್ದು ಸೊಪ್ಪನ್ನು ಬೆಳೆಯುತ್ತಿದ್ದೆ. ಕೇಳಿದವರಿಗೆಲ್ಲಾ ಸಾಕಷ್ಟು ಸೊಪ್ಪನ್ನು ದಾನ ಮಾಡುತ್ತಿದ್ದೆ. ನನ್ನಿಂದ ದಾನ ಪಡೆದ ಬ್ರಾಹ್ಮಣರು ನನಗಿಂತಾ ಸಾಹುಕಾರರು ಮತ್ತು ಊಟೋಪಚಾರಗಳಲ್ಲಿ ಕೊರತೆ ಇಲ್ಲದವರೇ. ಅವರೆಲ್ಲಾ ನನ್ನಿಂದಾ ದಾನ ಪಡೆಯುವುದೇ ಹೊರತು, ಎಂದಿಗೂ ನನಗೆ ಸಹಕರಿಸಲಿಲ್ಲ ಮತ್ತು ನನ್ನ ಮೇಲೆ ದಯೆ ತೋರಿಸಲಿಲ್ಲ. ವಿವಾಹ ಕಾರ್ಯಗಳಿಗೆ ಮತ್ತು ತಿಥಿ ಕಾರ್ಯಗಳಿಗೆ ನನ್ನನ್ನು ಕಳುಹಿಸಿದಾಗ ವಿಶೇಷವಾಗಿ ದಕ್ಷಿಣೆ ಸಂಭಾವನೆಗಳು ಬರುತ್ತಿದ್ದೆವು. ಅದರಲ್ಲಿ 90ನೇ ಭಾಗ ಅವರುಗಳೇ ಗ್ರಹಿಸಿ, ನನಗೆ ಕೇವಲ 10ನೇ ಭಾಗ ಕೊಡುತ್ತಿದ್ದರು. ಶ್ರಮೆ ನನ್ನದು, ಫಲಿತ ಅವರುಗಳದೆಂಬುವ ರೀತಿ ಇತ್ತು. ಮೇಲ್ಪಟ್ಟು, ನನ್ನಿಂದ ಅಡಿಗೆ ಸೊಪ್ಪು ಉಚಿತವಾಗಿ ಪಡೆಯುತ್ತಿದ್ದರು. ನಾನು ಪೂರ್ಣ ಬಡತನ ಅನುಭವಿಸುತ್ತಾ ಇದ್ದರೂ, ಸೊಪ್ಪನ್ನು ಮಾತ್ರ ಯಥಾ ಪ್ರಕಾರ ದಾನ ಮಾಡುತ್ತಲೇ ಇದ್ದೆ. ಆ ಬ್ರಾಹ್ಮಣರು ಸೊಪ್ಪು ಬಹಳ ಚೆನ್ನಾಗಿದೆಯೆಂದು, ರುಚಿಯಾಗಿದೆ ಎಂದೂ ಪ್ರತಿ ದಿನವೂ ತಿನ್ನುತಿದ್ದರೂ ತೊಂದರೇ ಏನು ಆಗುತ್ತಿಲ್ಲವೆಂದು ಹೇಳುತ್ತಿದ್ದರು.

ಕಾಲಚಕ್ರ ರಭಸವಾಗಿ ತಿರುಗಿದೆ. ಹಿಂದಿನ ಜನುಮದಲ್ಲಿ ನಾನು ಪೂರ್ಣ ದರಿದ್ರನಾಗಿದ್ದರೂ ಸಹ ಬ್ರಾಹ್ಮಣರಗೆ ಸೊಪ್ಪು ದಾನ ಮಾಡಿದ್ದ ಕಾರಣ ಈ ಜನುಮದಲ್ಲಿ ನಾನು ಅರಸನಾಗಿದ್ದೇನೆ. ಹಿಂದೆ ನನ್ನಿಂದ ದಾನವನ್ನು ಪಡೆದ ಬ್ರಾಹ್ಮಣರು, ಈ ಜನುಮದಲ್ಲಿ ಈ ರಾಜ್ಯದಲ್ಲಿ ಬ್ರಾಹ್ಮಣರಾಗಿ ಜನ್ಮಿಸಿದ್ದಾರೆ. ಹೀಗೆ ಅವರಗಿಂತಲೂ ಎಷ್ಟೋಪಾಲು ಧನವಂತನಾಗಿ ಮತ್ತು ಶ್ರೇಷ್ಠನಾಗಿ ಜನ್ಮಿಸಿದ್ದೇನೆ.

ಸೊಪ್ಪು ದಾನಮಾಡಿ ನಾನು ರಾಜನಾಗಿದ್ದೇನೆ. ಹಾಗಿದ್ದಲ್ಲಿ ಈ ಜನ್ಮದಲ್ಲಿ ಗಾಡಿಗಟ್ಟಲೇ ಸೊಪ್ಪನ್ನು ದಾನ ಮಾಡುತ್ತಿದ್ದೇನೆ, ಪ್ರತಿಫಲವಾಗಿ ಹೊಂದಬಹುದಾದ ಮಹೋನ್ನತ ಸ್ಥಿತಿ ಯಾವುದು? ಈ ವಿಚಿತ್ರ ಪ್ರಶ್ನೆಯೇ ನಾನು ನಿಮ್ಮಗಳೆನ್ನೆಲ್ಲಾ ಕೇಳುತ್ತಾ ಬಂದೆ. ನೀನು ಮಾತ್ರ ಸರಿಯಾದ ಸಮಾಧಾನ ಕೊಟ್ಟಿರುವೆ'' ಎಂದು ಆ ಅರಸ ಹೇಳಿದನು. ಅಗ ನಾನು ''ರಾಜಾ! ಹಿಂದಿನ ಜನುಮದ ನಿಮ್ಮ ಪರಿಸ್ಥಿತಿಯ ದೃಷ್ಟಿಯಿಂದ, ನಿಮ್ಮ ಬಳಿ ಇದ್ದ ಸೊಪ್ಪು ಬಹಳ ಬೆಲೆ ಬಾಳುವುದು. ಅದೇ ಸೊಪ್ಪು ಇಂದು, ತಾವಿರುವ ಅತ್ಯುನ್ನತ ಸ್ಥಿತಿ ದೃಷ್ಟ್ಯಾ ಬಹಳ ಕಡಿಮೆ ಬಾಳುವುದು. ವಜ್ರ ವೈಢೂರ್ಯ ರತ್ನ ಬಂಗಾರಗಳು ದಾನ ಕೊಡಬಲ್ಲ ನೀವು ಸೊಪ್ಪು ಎಷ್ಟು ದಾನ ಕೊಟ್ಟರೂ, ಅದಕ್ಕೆ ನೂರುಪಾಲು ಸೊಪ್ಪು ಬಂದು ಬೀಳುವುದೇ ಹೊರತು ಅದಕ್ಕಿಂತಾ ಮತ್ತೇನೂ ನಿಮಗೆ ಸೇರದು. ಆದ್ದರಿಂದಲೇ ''ಇಷ್ಟಕ್ಕೆ ಇಷ್ಟೇ'' ಅಂದಿದ್ದೇನೆ ಎಂದು ಹೇಳಿದನು. ನನ್ನ ಮಾತುಗಳಿಗೆ ರಾಜ ಬಹಳ ಸಂತೋಷಪಟ್ಟು, ನನ್ನ ಸುನಾಯಾಸ ಮಾತಿನ ಉತ್ತರಕ್ಕೆ (ಅರಸ) ತನ್ನ ಸ್ವಂತ ಪೂರ್ವ ಜನಮದ ಕಾರಣ ತಿಳಿಸಿದ್ದು, ನನ್ನ ಮನಕ್ಕೆ ಶಾಂತಿ ಕೊಟ್ಟಿತು. ಶ್ರೀ ಚರಣರ ಕೃಪೆಯಿಂದ ಕತ್ತೆಯನ್ನೇರುವ ದೌರ್ಭಾಗ್ಯ ತಪ್ಪಿತೆಂದು ಸಂತಸಿದೆ. ''ಶುಕ್ಲಾಂಬರಧರಂ ವಿಷ್ಣುಂ....'' ಎಂಬ ಪವಿತ್ರ ಶ್ಲೋಕಕ್ಕೆ ತಪ್ಪು ಅರ್ಥ ಕೊಟ್ಟಿದ್ದಕ್ಕೆ, ಈಗಾಗಲೇ ಕತ್ತೆ ಸವಾರಿ ಆಗಿದೆ! ಈಗ, ಬಹಳ ಅವಮಾನಕರ ಸ್ಥಿತಿಯಲ್ಲಿ ಕತ್ತೆಯನ್ನೇರುವುದು ತಪ್ಪಿಸಿದ್ದಕ್ಕೆ, ಶ್ರೀ ಪಾದರಿಗೆ ಮನಸ್ಸಿನಲ್ಲೇ ನಮಸ್ಕಾರಗಳನ್ನು ಅರ್ಪಿಸಿದನು.

ಇನ್ನು ಎರಡನೆಯ ಪರೀಕ್ಷೆ ಶುರುವಾಯಿತು. ಅರಸನಿಗೆ ಬಹಳಷ್ಟು ಪ್ರಿಯವಾದ ಮೂಕ ಭಾಷೆಯಲ್ಲಿ ಪರೀಕ್ಷೆ ಮೊದಲಾಯಿತು. ರಾಜ ಗುರುಗಳು ನನ್ನನ್ನು ಪರೀಕ್ಷಿಸುವುದು ಶುರು ಮಾಡಿದರು. ರಾಜ ಗುರುಗಳು ತಮ್ಮ ಬೆರಳುಗಳನ್ನು ತೋರಿಸುತ್ತಾ, ಒಂದಾ, ಎರಡಾ? ಎಂದು ಸೈಗೆಯಿಂದಾ ಪ್ರಶ್ನಿಸಿದರು. ನೀನು ಒಬ್ಬನೇ ಬರುತ್ತಿದ್ದೀಯಾ? ಇಲ್ಲ ಬೇರೇ ಯಾರಾದರೂ ಜೊತೆಯಿದ್ದಾರಾ? ಎಂದು ರಾಜ ಗುರುಗಳು ಕೇಳುತ್ತಿದ್ದಾರೆಂದು ನೆನೆದು, ಒಬ್ಬನೇ ಬಂದಿದ್ದೇನೆಂದು ತಿಳಿಸುತ್ತಾ, ಒಂದು ಬೆರಳು ತೋರಿಸುತ್ತಾ ಸನ್ನೆ ಮಾಡಿದೆನು. ನಂತರ ಅವರು ಮೂರು ಬೆರಳು ತೋರಿದರು. ಮೂರು ಸಂಖ್ಯೆ ನನಗೆ ಸದಾ ಶ್ರೀ ದತ್ತಾತ್ರೇಯರನ್ನು ನೆನಪಿಸುತ್ತದೆ. ''ನೀವು ದತ್ತ ಭಕ್ತರಾ'' ಎಂದು ಕೇಳಿದರೆಂದು ನೆನೆದು, ಭಕ್ತಿ ಎಂಬುದು ರಹಸ್ಯವಾಗಿರತಕ್ಕಂತದ್ದೆಂದು ಭಾವಿಸಿ ಮುಷ್ಠಿಯನ್ನಿಡಿದು, ತೋರುತ್ತಾ ಇದು ರಹಸ್ಯವಾದ ವಿಷಯವೆಂದು, ಹೃದಯಾಂತರೊಳಗಿನ ವಿಷಯವೆಂದು ಸೂಚಿಸಿದನು. ಅದಕ್ಕೆ ರಾಜ ಗುರುಗಳು, ಸಿಹಿತಿಂಡಿ ಪದಾರ್ಥ ತೋರಿಸಿ, ಬೇಡುಕೊಳ್ಳುತ್ತಿದ್ದ ಹಾಗೆ ಸನ್ನೆ ಮಾಡುತ್ತಾಕೊಟ್ಟರು. ನಾನು ಬೇಡವೆಂದು ತಿಳಿಸುತ್ತಾ, ನನ್ನ ಬಳಿ ಇದ್ದ ಅವಲಕ್ಕಿ ಮೂಟೆಯನ್ನು ತೋರಿಸುತ್ತಾ ಆದರಿಂದ ಸ್ವಲ್ಪ ತೆಗೆದು ಅವರಿಗೆ ಕೊಟ್ಟೆ. ನನಗೆ ಸಿಹಿ ಪದಾರ್ಥಗಿಂತ ಅವಲಕ್ಕಿಯೇ ಬಹಳ ಇಷ್ಟವೆಂದು, ಅವರೂ ಸಹ ಸ್ವಲ್ಪ ತೆಗೆದುಕೊಂಡರೆ ರುಚಿಕಾಣಬಹುದೆಂದು ನನ್ನ ಭಾವನೆ.

ಆಗ ರಾಜ ಗುರುಗಳು ''ರಾಜಾ! ಈತ ಮಹಾನ್‌ಪಂಡಿತ, ವೇದಗಳನ್ನು ಚೆನ್ನಾಗಿ ತಿಳಿದುಕೊಂಡವನಂತೆ ಕಾಣುತ್ತದೆ. ಈತ ಮೂಕ ಭಾಷೆಯಲ್ಲಿ ಸಹ ಮಹಾಪಂಡಿತ'' ಎಂದು ಹೊಗಳಿದರು. ನನಗಂತೂ ಇದೆಲ್ಲಾ ಅಯೋಮಯವಾಗಿತ್ತು. ರಾಜ ಗುರುಗಳು ಮುಂದುವರೆದರು ''ರಾಜಾ! ಶಿವ ಕೇಶವರು ಬೇರೆ ಬೇರೆನಾ? ಅಥವಾ ಒಬ್ಬರೇನಾ? ಎಂದು ನಾನು ಮೂಕ ಭಾಷೆಯಲ್ಲಿ ಪ್ರಶ್ನಿಸಿದಾಗ, ಇವರು ಒಂದೇ ಬೆರಳು ತೋರಿಸಿ, ಒಬ್ಬರೇ ಎಂದು ಉತ್ತರಿಸಿದರು. ನಂತರ, ಬ್ರಹ್ಮ ವಿಷ್ಣು ಮಹೇಶ್ವರರು ಮೂರುಮಂದಿ ಅಲ್ಲವೇ ಎಂದು ಪ್ರಶ್ನಿಸಿದಾಗ, ಈತ ಮುಷ್ಟಿ ಬಿಗಿಸಿ, ಬೆರಳುಗಳು ಐದು ಆದರೂ ಅವು ಒಂದಾಗಿ, ಸಮಿಷ್ಟಿಯಾಗಿಲ್ಲವೇ ಎಂದು ತಿರುಗು ಪ್ರಶ್ನೆ ಹಾಕಿದ್ದಾರೆ. ನನ್ನನ್ನು ಅವರು ಶಿಷ್ಯನಾಗಿ ಸ್ವೀಕರಿಸಬೇಕೆಂದು, ಸಿಹಿ ಪದಾರ್ಥ ಅರ್ಪಿಸಿದಾಗ, ಅವರು ತಮಗೆ ದೊಡ್ಡ, ಚಿಕ್ಕ

ಭಾವನೆ ಇಲ್ಲವೆಂದು, ಕುಚೇಲನಂತೆ ಅಲ್ಪ ಸಂತುಷ್ಟನೆಂದು ಅವಲಕ್ಕಿ ತೋರಿಸಿದರು. ನನಗೂ ಅರ್ಪಿಸಿದರು'' ಎಂದರು. ಆಗ ನಾನು ಅಹಾ! ಈ ಲೋಕದಲ್ಲಿ ಮನಗಳು, ಆಲೋಚನೆಗಳು ಮತ್ತು ಅವುಗಳನ್ನು ಅರ್ಥಮಾಡಿಕೊಳ್ಳುವ ಪದ್ಧತಿಗಳು ಎಷ್ಟೋ ವಿಭಿನ್ನವಾಗಿವೆಯೇ ಎಂದು ಆಶ್ಚರ್ಯಪಟ್ಟೆ. ಶ್ರೀಪಾದ ಶ್ರೀವಲ್ಲಭರ ಕರುಣೆಯೇ ನನಗೆ ಸಿಕ್ಕಿರುವ ಇಂದಿನ ಹೊಗಳಿಕೆ ಎಂದು, ಅವನಿಗೆ ನಮಿಸಿದೆ.

ಇನ್ನು ಮೂರನೆಯ ಮತ್ತು ಕೊನೆಯ ಪರೀಕ್ಷೆ. ರಾಜ ಗುರುಗಳ ಚಮಕದಲ್ಲಿನ ಕೊನೆಯ ಭಾಗವನ್ನು ಓದುತ್ತಾ, ಅದರ ಅರ್ಥವನ್ನು ತಿಳಿಸಲೂ ಕೇಳಿದರು. ನಾನು. ಶ್ರೀವಲ್ಲಭರನ್ನು ನೆನೆದು, ನನಗೆ ತೋಚಿದ ಹಾಗೆ, ''ಏಕಾಚಮೇ ಅಂದರೇ ಒಂದು; ತಿಸ್ರಶ್ಚಮೇ ಅಂದರೇ ಆ ಒಂದಕ್ಕೆ ಮೂರು ಸೇರಿಸಿ, ಅದರ ವರ್ಗಮೂಲ ತೆಗದಾಗ ಬರುವ ಎರಡು; ಪಂಚಚಮೇ ಅಂದರೇ ಆ ನಾಲ್ಕಕ್ಕೆ ಐದು ಸೇರಿಸಿದರೇ ಬರುವ ಒಂಭತ್ತರ ವರ್ಗಮೂಲ, ಮೂರೆಂದು; ಸಪ್ತಚಮೇ ಅಂದರೇ ಹಿಂದೆ ಬಂದ ಒಂಭತ್ತಕ್ಕೆ, ಏಳು ಸೇರಿಸಿದರೇ ಹದಿನಾರು ಆಗುವುದು. ಅದರ ವರ್ಗಮೂಲ, ನಾಲಕ್ಕೆಂದು; ನವಚಮೇ ಅಂದರೇ, ಬಂದ ಹದಿನಾರಕ್ಕೆ ಒಂಭತ್ತು ಸೇರಿದಾಗ ಇಪ್ಪತ್ತೈದು ಆಗುವುದು, ಅದರ ವರ್ಗಮೂಲ ಐದು ಎಂದು; ಅದೇ ರೀತಿಯಲ್ಲಿ

ಏಕಾದಶಚಮೇ ಅಂದರೇ (25+11) = 36. ಅದರ ವರ್ಗಮೂಲ 6 ಎಂದು,

ತ್ರಯೋದಶಚಮೇ ಅಂದರೇ (36+13) = 49. ಅದರ ವರ್ಗಮೂಲ 7 ಎಂದು,

ಪಂಚದಶಚಮೇ ಅಂದರೇ (49+15) = 64. ಅದರ ವರ್ಗಮೂಲ 8 ಎಂದು,

ಸಪ್ತದಶಚಮೇ ಅಂದರೇ (64+17) = 81. ಅದರ ವರ್ಗಮೂಲ 9 ಎಂದು,

ನವದಶಚಮೇ ಅಂದರೇ (81+19) = 100. ಅದರ ವರ್ಗಮೂಲ 10 ಎಂದು,

ಏಕವಿಗ್ಂಶತಿಶ್ಚಮೇ ಅಂದರೇ (100+21) = 121. ಅದರ ವರ್ಗಮೂಲ 11 ಎಂದು,

ತ್ರಯೋವಿಗ್ಂಶತಿಶ್ಚಮೇ ಅಂದರೇ (121+23) = 144. ಅದರ ವರ್ಗಮೂಲ 12 ಎಂದು,

ಪಂಚವಿಗ್ಂಶತಿಶ್ಚಮೇ ಅಂದರೇ (144+25) = 169. ಅದರ ವರ್ಗಮೂಲ 13 ಎಂದು,

ಸಪ್ತವಿಗ್ಂಶತಿಶ್ಚಮೇ ಅಂದರೇ (169+27) = 196. ಅದರ ವರ್ಗಮೂಲ 14 ಎಂದು,

ನವವಿಗ್ಂಶತಿಶ್ಚಮೇ ಅಂದರೇ (196+29) = 225. ಅದರ ವರ್ಗಮೂಲ 15 ಎಂದು,

ಏಕತ್ರಿಗ್ಂಶತಿಶ್ಚಮೇ ಅಂದರೇ (225+31) = 256. ಅದರ ವರ್ಗಮೂಲ 16 ಎಂದು,

ತ್ರಯೋವಿಗೌಂಶತಿಶ್ಚಮೇ ಅಂದರೇ (256+33) = 289. ಅದರ ವರ್ಗಮೂಲ 17 ಎಂದು,

ಪಂಚವಿಗ್ಂಶತಿಶ್ಚಮೇ ಅಂದರೇ (289+35) = 324. ಅದರ ವರ್ಗಮೂಲ 18 ಎಂದು,

ಸಪ್ತತ್ರಿಗ್ಂಶತಿಶ್ಚಮೇ ಅಂದರೇ (324+37) = 361. ಅದರ ವರ್ಗಮೂಲ 19 ಎಂದು,

ನವವಿಗ್ಂಶತಿಶ್ಚಮೇ ಅಂದರೇ (361+39) = 400. ಅದರ ವರ್ಗಮೂಲ 20 ಎಂದು,''

ಅರ್ಥ ಎಂದೆನು. ನನ್ನ ಈ ವ್ಯಾಖ್ಯಾನ, ಸಭೆಯಲ್ಲಿನ ಪಂಡಿತರನ್ನು ಒಲಸಿತು. ನನಗೇ ನನ್ನ ವ್ಯಾಖ್ಯಾನದ ಬಗ್ಗೆ ಆಶ್ಚರ್ಯ! ''ಇದೆಲ್ಲಾ ಸೃಷ್ಟಿಯ ಪರಮಾಣುಗಳ ರಹಸ್ಯ. ಇದು ಕಾಣಾದ ಮಹರ್ಷಿಗೆ ಚೆನ್ನಾಗಿ ಗೊತ್ತು. ಪರಮಾಣುಗಳ ಸೂಕ್ಷ್ಮ ಕಣಗಳ ಸಂಖ್ಯಾ ಭೇದದಾನುಸಾರ, ವಿವಿಧವಾದ ಧಾತುಗಳು ಉದ್ಭವಿಸುತ್ತವೆ'' ಎಂದೆನು. ಹೀಗೆ ಶ್ರೀವಲ್ಲಭರ ಕೃಪೆಯಿಂದ ವಿಚಿತ್ರವಾಗಿ ವಿಚಿತ್ರ ಪುರದಿಂದ ಪಾರಾದೆನು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - ೩

# ಶಂಕರ ಭಟ್ಟನಿಗೆ ಪಳನಿಸ್ವಾಮಿ ದರ್ಶನ, ಕುರುವಪುರ ಸಂದರ್ಶನೆ

### ಶ್ರೀಪಾದ ಶ್ರೀವಲ್ಲಭರ ಸ್ಮರಣೆ ಮಹಿಮೆ

ಶ್ರೀಪಾದ ಶ್ರೀವಲ್ಲಭರ ಅನುಗ್ರಹದಿಂದ ವಿಚಿತ್ರಪುರದ ದರ್ಶನಾನಂತರ, ನಾನು ಚಿದಂಬರದ ಪರಮೇಶ್ವರನ ದರ್ಶನ ಮಾಡಿಕೊಳ್ಳಲೂ ಕುತೂಹಲದಿಂದ ಇದ್ದೆ. ದಾರಿ ಉದ್ದಕ್ಕೂ ಊಟ, ಉಪಚಾರ ಭವ್ಯವಾಗಿ ಸಿಗುತ್ತಿರಲೂ, ಮೂರು ದಿನದ ಕಾಲ್ನಡಿಗೆ ಆನಂದಕರವಾಗಿತ್ತು. ನಾಲ್ಕನೇ ದಿನ, ನಾನೊಂದು ಗ್ರಾಮದಲ್ಲಿನ ಬ್ರಾಹ್ಮಣರ ಮನೆಯಲ್ಲಿ ಭಿಕ್ಷೆ ಯಾಚಿಸಲೂ, ಒಳಗೆನಿಂದ ಯಜಮಾನರ ಪತ್ನಿ, ರೌದ್ರಾಕಾರದಲ್ಲಿ ಬಂದು, ಅನ್ನ ಇಲ್ಲ, ಸುಣ್ಣ ಇಲ್ಲ ಎಂದು ಗದರಿದಳು. ಅಲ್ಲಿಯೇ ನಿಂತಿರಲೂ, ಯಜಮಾನ ಬಂದು ನನ್ನನ್ನುದ್ದೇಶಿಸಿ, "ಅಯ್ಯಾ! ಅತಿಥಿ ಸೇವೆ ನಾನು ಕೇಳಿಕೊಂಡು ಬಂದಿಲ್ಲ. ನನ್ನ ಪತ್ನಿ ಗಯ್ಯಾಳಿ. ಆಕೆಗೆ ಕೋಪ ಬಂದರೆ, ನನ್ನ ತಲಯ ಮೇಲೆ ಮಡಿಕೆಗಳು ಬೀಳುವೆವು. ನನ್ನ ಗುರುಗಳ ಧರ್ಮಪತ್ನಿ ಸಹಾ, ಹೀಗೇನೇ. ಆನಂತರ, ಒಡೆದ ಮಡಿಕೆಗಳ ಮೌಲ್ಯವನ್ನು ಸಹಾ ನನ್ನ ಧರ್ಮಪತ್ನಿ ಕೇಳುತ್ತಿರುವಳು. ಆದರೇ ಗುರುಗಳ ಪತ್ನಿ ಹಾಗೇ ಕೇಳುತ್ತಿರಲಿಲ್ಲ. ಇದೀಗಲೇ ನನ್ನ ತಲೆಮೇಲೆ ಮಡಿಕೆ ಒಡೆದಿದೆ. ಅದರ ಮೌಲ್ಯ ಎಲ್ಲಿಂದ ತರಬೇಕೋ ಗೊತ್ತಾಗುತ್ತಿಲ್ಲ. ಎಲ್ಲಾದರೂ ಒಂದು ಸಂಭಾವನೆ ಸಿಕ್ಕಿದರೇ ಸರಿ, ಇಲ್ಲದ್ದಲ್ಲಿ, ಸಾಲಾನಾದರೂ ನಾನು ಮಾಡಬೇಕಾಗಿದೆ. ಸಂಭಾವನೆಗಳಲ್ಲಿ ಅರ್ಧಭಾಗ ಈ ಮಡಿಕೆಗಳ ಮೌಲ್ಯಕ್ಕೆ ಹೋಗುತ್ತಿದೆ. ಸ್ವಾಮಿ, ಇತ್ತೀಚಿಗೆ, ಬಂದ ಸಂಭಾವನೆ ಪೂರಾ ನನ್ನ ಹೆಂಡತೀನೆ ತೆಗೆದುಕೊಳ್ಳುತ್ತಿದ್ದಾಳೆ. ಆದ್ದರಿಂದ ಮಾಡಿದ ಸಾಲ ಸಹಾ ತೀರಿಸಲಾಗದೇ ಹೋಗುತ್ತಿದೆ. ಇದೇ ಕಾರಣಕ್ಕೆ, ಯಾರೂ ನನಗೆ ಸಾಲ ಕೊಡಲೂ ಮುಂದೆ ಬರುತ್ತಿಲ್ಲ. ಮೇಲ್ಪಟ್ಟು, ಅವಹೇಳನೇ ಮಾಡುತ್ತಿರುವರು. ಈಗ ನಾನಾ ಮಡಿಕೆಯ ಮೌಲ್ಯ ತೆತ್ತಬೇಕು. ನನ್ನ ಹೆಂಡ್ತಿ ಆದ್ದರಿಂದಲೇ ನಿನ್ನನ್ನ ಕೆಸರಿದಳು. ಒಳಗೆ, ಹೀಗೆಂದು ಸಹಾ ನನಗೆ ಹೇಳಿದ್ದಾಳೆ. "ಬೀದಿಯಲ್ಲಿ ಬಂದ ತೀರ್ಥ ಯಾತ್ರೀಕನ ಜೊತೆ ನೀವೂ ಬೀದಿ ಬೀದಿ ಸುತ್ತಿ, ಯಾರಾದರೂ ದಾನ ಕೊಟ್ಟರೇ ತೆಗೆದುಕೊಂಡು ಬನ್ನಿ, ಆಗಲೇ ನಿಮಗೆ ಊಟ." ಆದ್ದರಿಂದ, ಭಾರ್ಯಾವಿಧೇಯನಾದ ನಾನು ನಿನ್ನ ಜೊತೆ ಬರುವೆನು. ಈ ಗ್ರಾಮದ ಎಲ್ಲಾ ಬ್ರಾಹ್ಮಣರ ಮನೆಗಳೂ ನನಗೆ ಪರಿಚಯ. ನಮಗೆ ಊಟದ ಜೊತೆ ದಕ್ಷಿಣೆ ಸಹಾ ಲಭಿಸಬಹುದು." ನಾನು ಆಶ್ಚರ್ಯಗೊಂಡೆನು. ನನ್ನ ಸ್ಥಿತಿ ಹೀಗೆ ಮರುಳಿತೇ ಶ್ರೀಪಾದ ಶ್ರೀವಲ್ಲಭಾ! ಎಂದು ಭಗವಂತನ ನೆನೆದು ಆ ಬ್ರಾಹ್ಮಣನ ಜೊತೆ ಆ ಅಗ್ರಹಾರದ ಪ್ರತಿಯೊಂದು ಮನೆಗೂ ಭಿಕ್ಷೆಗೆ ಹೊರಟೆನು. ದಕ್ಷಿಣೆ ಇರಲಿ, ಅನ್ನವನ್ನು ಸಹಾ ಯಾರೂ ಕೊಡಲಿಲ್ಲ. ಅಗ ಆ ಬ್ರಾಹ್ಮಣ "ಸ್ವಾಮಿ! ಇದುವರೆಗೂ ನಾನೊಬ್ಬನೇ ದುರದೃಷ್ಟವಂತ, ಈಗ ನನ್ನ ಜೊತೆ ಸೇರಿ, ತಾವೂ ದುರದೃಷ್ಟವಂತರಾಗಿದ್ದೀರಿ." ಎಂದು ನುಡಿದರು. ಅದಕ್ಕೆ ನಾನು "ಸ್ವಾಮಿ! **ಸಮಸ್ತ ಜೀವಿಗಳಿಗೂ ಆಹಾರ ಕೊಡುವವನು, ಸರ್ವ ಸಮರ್ಥನಾದ ಆ ಶ್ರೀದತ್ತ ಪ್ರಭುಗಳೇ!** ಈ ಯುಗದಲ್ಲಿ ಅವರು ಶ್ರೀಪಾದ ಶ್ರೀವಲ್ಲಭರಾಗಿ ಕುರುವಪುರದಲ್ಲಿರುವರು ಮತ್ತು ನಾನು ಅವರ ದರ್ಶನಕ್ಕಾಗಿಯೇ ಹೊರೆಟಿರುವವನು. ಅವರನ್ನು ಸ್ಮರಿಸುತ್ತಾ ಆ ಮರದ ನೆರಳಲ್ಲಿ ಕುಲಿತುಕೊಳ್ಳೋಣ, ಆದನಂತರ ಅವನ ಇಚ್ಚೆ" ಎಂದು ನುಡಿದೆನು.

ಹೊಟ್ಟೆ ಹಸಿವಿನ ಬಾಧೆ ಇಂದಲೇ ನೀರಸವಾಗಿ ಶ್ರೀಪಾದರ ನಾಮ ಜಪಿಸುತ್ತಿರಲು ಆಲ್ಲಿಗೆ ಭಟರು ಬಂದು, "ಸ್ವಾಮಿ! ಯುವರಾಜರಿಗೆ ಮಾತು ಬಂದಿದೆ. ಕೂಡಲೇ ನಿಮ್ಮನ್ನು ಆಸ್ಥಾನಕ್ಕೆ ಕರೆದುಕೊಂಡು ಬರಬೇಕೆಂದು ರಾಜಾಜ್ಞೆ ಆಗಿದೆ. ಆದ್ದರಿಂದ

ಬನ್ನಿ'' ಎಂದು ಹೇಳಿದರು. ತನ್ನೊಡನೆ ಆ ಬ್ರಾಹ್ಮಣನು ಸಹಾ ಬರುವನೆಂದಿದಕ್ಕೆ ಅವರು ಒಪ್ಪಿಕೊಂಡರು. ನಮ್ಮಿಬ್ಬರನ್ನೂ ಗೌರವದಿಂದ ಕುದುರೆಗಳ ಮೇಲೆ ಕರೆದುಕೊಂಡು ಹೋಗುವುದನ್ನು ಆ ಗ್ರಾಮವಾಸಿಗಳು ನೋಡಿ ಆಶ್ಚರ್ಯ ಪಟ್ಟರು.

ಮಹಾರಾಜರು ನನ್ನನ್ನ ಕಂಡು ಹೀಗೇ ಹೇಳಿದರು, ''ಸ್ವಾಮಿ! ಮಹಾತ್ಮರೇ! ತಾವು ದೊಡ್ಡ ಪಂಡಿತರೆಂದು ತಿಳಿದೂ ಸಹಾ, ಸತ್ಕರಿಸದೇ ಬರೀ ಕೈಯಲ್ಲಿ ಕಳುಹಿಸಿದೆನು. ತಾವು ಆಗ, ನಮ್ಮಿಂದ ಹೊರಟನಂತರ, ಯುವರಾಜ ಮೂರ್ಛೆ ಹೋದನು. ನಿಮ್ಮಗಳ ಚಿಕಿತ್ಸೆಯನಂತರ, ಎದ್ದು ತನ್ನ ಬಾಯಿಂದಲೇ 'ಶ್ರೀಪಾದ ಶ್ರೀವಲ್ಲಭ ದಿಗಂಬರಾ! ಶ್ರೀದತ್ತ ದೇವಾ ದಿಗಂಬರ' ಎಂದು ಸ್ಪಷ್ಟವಾಗಿ ನುಡಿದನು. ತನ್ನ ಬಾಯಲ್ಲಿ, ಒಬ್ಬ 16 ವರುಷದ ಯತಿ, ವಿಭೂತಿ ಹಾಕಿದರೆಂದು ತಿಳಿಸಿದನು. ಈಗ ತಾವು, ಆ ಯತಿ ಯಾರೆಂಬುದನ್ನು ದಯವಿಟ್ಟು ತಿಳಿಸಬೇಕೆಂದು ಕೋರಿದರು.

''ಶ್ರೀಪಾದರ ಪಾದುಕಾ ಮಹಿಮೆಯನ್ನು, ನಾನೇನೆಂದು ವರ್ಣಿಸಲಿ? ಅವರು ಸಾಕ್ಷಾತ್ ಶ್ರೀದತ್ತ ಪ್ರಭುಗಳ ಅವತಾರ. ಶ್ರೀಕೃಷ್ಣಾವತಾರ ಹಾಗೆ, ಇದು ವಿಶಿಷ್ಟಾವತಾರ. ಅವರ ದರ್ಶನಾರ್ಥವೇ, ದಾರಿ ಉದ್ದಕ್ಕೂ ಪುಣ್ಯಸ್ಥಳಗಳನ್ನು ಮತ್ತು ಪುಣ್ಯಪುರುಷರನ್ನು ದರ್ಶಿಸುತ್ತಾ, ಕುರುವಪುರಕ್ಕೆ ಹೋಗುತ್ತಿದ್ದೇನೆ'' ಎಂದು ಸವಿನಯವಾಗಿ ಹೇಳಿದೆ.

ವಿಚಿತ್ರ ಪುರದ ಪಂಡಿತರು, ಅವರ ಮಂಡಲ ದೀಕ್ಷೆಯ ಫಲಿತವಾಗಿ ರಾಜನಿಗೆ ಸದ್ಬುದ್ಧಿ ಬಂದಿದಕ್ಕು, ತಮಗೆ ವಿಮೋಚನೆ ಲಭಿಸಿದ್ದಕ್ಕು, ಮತ್ತು ಯುವರಾಜನಿಗೆ ಮಾತು ಬಂದಿದ್ದಕ್ಕೆ ಸಹಾ, ಶ್ರೀಪಾದ ಶ್ರೀವಲ್ಲಭರನ್ನು ಅನಂತವಾಗಿ ಕೀರ್ತಿಸಿದರು.

ರಾಜ ನನ್ನನ್ನು ಸ್ವರ್ಣದಾನದಿಂದ ಸತ್ಕರಿಸಿದನು. ರಾಜಗುರು ಹೀಗೆಂದನು, ''ಸ್ವಾಮಿ! ನಮಗೀಗ ಜ್ಞಾನೋದಯವಾಗಿದೆ. ಶಿವ, ವಿಷ್ಣು ದೇವತೆಗಳು ಬೇರೆ ಬೇರೆ ಎಂಬ ನೆನಪಿನಲಿಲ್ಲ, ಶೈವರು ವಿಷ್ಣುವನ್ನು, ವೈಷ್ಣವರು ಶಿವನನ್ನು ದೂಷಿಸುತ್ತಿದ್ದರು. ಪಾಪದ ಮೂಟೆ ಹೊತ್ತುತ್ತಿದ್ದರು, ಎಷ್ಟೋ ಕಷ್ಟಗಳನ್ನು ಸಹಾ ಅನುಭವಿಸುತ್ತಿದ್ದರು, ನಮ್ಮ ಮಾಧವ ನಂಬೂದ್ರಿ ಸಲವಾಗಿ ನಾವು ಮಂಡಲ ದೀಕ್ಷೆಯಲ್ಲಿದ್ದೀವಿ. ತಮಗೆ ನಾವೆಷ್ಟೋ ಋಣಗ್ರಸ್ತರು'' ಎಂದು ಹೇಳಿದರು.

ನಾನು ಅವರಿಂದ ಹೋಗಿ ಬರುವೆನೆಂದು ಹೊರಡಲು, ಶ್ರೀ ನಂಬೂದ್ರಿ ಸಹಾ ನಮ್ಮ ಜೊತೆ ಬರುವನೆಂದು ಹಠ ಹಿಡಿದನು. ಸರಿ ನಾವು ಮೂವ್ವರೂ ಅರಮನೆಯಿಂದ ಹೊರಟು, ಅಗ್ರಹಾರ ಸೇರಿದವು. ಆ ಬ್ರಾಹ್ಮಣನ ಹೆಂಡತಿಗೆ, ರಾಜರು ಕೊಟ್ಟಿದ್ದ ಸ್ವರ್ಣವನಿತ್ತನು. ಆಕೆ ಸಂತೋಷದಿಂದ ನಮಗೆ ಭೋಜನವಿತ್ತಳು. ನಂತರ, ಶ್ರೀಪಾದ ಶ್ರೀವಲ್ಲಭರ ಭಕ್ತಳಾಗಿ, ಗಯ್ಯಾಳಿ ತನವನ್ನು ದೂರವಿಟ್ಟಳು. ಅವರ ಸಂಸಾರ ಸುಖಮಯವಾಯಿತು.

ನಾನು, ಮಾಧವ ನಂಬೂದ್ರಿ ಸೇರಿ ಚಿದಂಬರದ ಕಡೆ ನಮ್ಮ ಪಯಣವನ್ನು ಸಾಗಿಸಿದೆವು. ಧರ್ಮಶಾಸ್ತ ಅಯ್ಯಪ್ಪನ ಪೂಜೆಗಾಗಿ, ಗೋದಾವರಿ ಮಂಡಲ ಅಂತರದಲ್ಲಿನ 'ರ್‍ಯಾಲಿ' ಗ್ರಾಮ ನಿವಾಸರಾದ ಶ್ರೀ ಪರಬ್ರಹ್ಮಶಾಸ್ತ್ರಿಗಳನ್ನು ಶ್ರೀ ಅಗಸ್ತ್ಯ ಮಹರ್ಷಿಗಳು ಕರೆದೊಯ್ದರು. ಕೆಲ ಕಾಲ ಕಳೆದಂತೇ, ಗರ್ತಪುರೀ (ಗುಂಟೂರು) ಮಂಡಳ ಒಳಗಿನ, ನಂಬೂರು ಗ್ರಾಮದ ವೇದಪಂಡಿತರನ್ನು, ಮಲಯಾಳ ದೇಶದ ರಾಜರು ಆಹ್ವಾನಿಸಲೂ, ಸಾಕಷ್ಟು ಬ್ರಾಹ್ಮಣರು, ನಂಬೂದ್ರಿಗರು ಆ ದೇಶಕ್ಕೆ ಹೋಗಿ ವೇದ ವಿದ್ಯೆಯನ್ನು ಅಲ್ಲಿ ಪ್ರಕಾಶಿಸಿದರು. ಈ ಬ್ರಾಹ್ಮಣರನ್ನೇ ನಂಬೂದ್ರಿ ಬ್ರಾಹ್ಮಣರೆಂದು ಕರೆಯಲಾಗುತ್ತಿದೆ. ಆದಿಶಂಕರರ ಪೂರ್ವೀಕರು ಸಹ, ನಂಬೂರು

ಅಗ್ರಹಾರಕರೇ! ನಂಬೂದ್ರಿ ಬ್ರಾಹ್ಮಣರು, ಆಚಾರ ವ್ಯವಹಾರಗಳಲ್ಲಾಗಲಿ, ನಿಯಮ ನಿಷ್ಠೆಗಳಲ್ಲಾಗಲಿ, ಮಂತ್ರ ತಂತ್ರ ಮತ್ತು ಯಂತ್ರ ವಿದ್ಯೆಗಳಲ್ಲಿ ಬಹಳಷ್ಟು ಪ್ರಸಿದ್ಧರು. ಆದರೇ ಮಾಧವ ನಂಬೂದ್ರಿ ಮಾತ್ರ ಅಕ್ಷರಜ್ಞಾನವಿಲ್ಲದ ಶುಂಠ. ಚಿಕ್ಕ ವಯಸ್ಸಿನಲ್ಲೇ ತಂದೆ ತಾಯಿ ಸ್ವರ್ಗಸ್ಥರಾದ ಕಾರಣ ತನ್ನವರ್ಯಾರೂ ಹತ್ತಿರ ಸೇರಿಸದಿರಲೂ, ಮಾಧವ ನಂಬೂದ್ರಿ ಬ್ರಾಹ್ಮಣರ ಮನೆಗಳಲ್ಲಿ ಅಡಿಗೆ ಮಾಡಿ, ತನ್ನ ಜೀವನ ಸಾಗಿಸುತ್ತಿದ್ದನು. ಶ್ರೀದತ್ತ ಪ್ರಭುಗಳ ಅಚಂಚಲ ಭಕ್ತ, ಶ್ರೀಪಾದ ಶ್ರೀವಲ್ಲಭರನ್ನು ನೋಡಲು, ನಮಿಸಲೂ ಬಹಳ ಆತುರತೆಯಿಂದಾ ಇರುವವನು.

ಚಿದಂಬರಂ ಅಂಚಿನಲ್ಲೇ ಸಿದ್ಧ ಮಹಾತ್ಮರು ಒಬ್ಬರು ಇರುವುರೆಂದು ವಿಚಾರಿಸುತ್ತಾ ಬೆಟ್ಟಗುಡ್ಡಗಳಲ್ಲಿ ಏಕಾಂತವಾಗಿ ತಪಸ್ಸಿನಲ್ಲಿ ಮುಳಗಿರುವ ಶ್ರೀ ಪಳನಿಸ್ವಾಮಿ ಎಂಬ ವೃದ್ಧರನ್ನು ಕಂಡೆನು. ಆ ತಪಸ್ವಿಯ ಗುಹೆ ಬಾಗಿಲಲ್ಲಿ ನಾವಿರುವಾಗಲೇ ಅವರು, ''ಮಾಧವ, ಶಂಕರರು ಇಬ್ಬರೂ ಸೇರಿ ಬರುತ್ತಿದ್ದೀರೀ? ಎಂತಹ ಭಾಗ್ಯ!'' ಎಂದರು. ನಮ್ಮ ಪರಿಚಯಕ್ಕೆ ಮುನ್ನವೇ ಆವರು ನಮ್ಮನ್ನು ಹೆಸರಿನಿಂದ ಕೂಗುತ್ತಿರುವರು, ಸಿದ್ಧಪುರುಷರೇ ಎಂದು ಕೊಂಡೆವು. ಅವರು, ''ಮಗೂ! ಶ್ರೀಪಾದ ಶ್ರೀವಲ್ಲಭರ ಆಜ್ಞಯಂತೇ ನಾನೀದೇಹ ತ್ಯಜಿಸಿ, ಬೇರೊಂದು ಯುವಕ ದೇಹವನ್ನು ಪ್ರವೇಶಿಸುವ ಸಮಯ ಆಸನ್ನವಾಗಿದೆ, ನನ್ನ ಈ ಶರೀರಕ್ಕೆ 300 ವರುಷಗಳು. ಶಿಥಿಲವಾದ ಇದನ್ನು ತ್ಯಜಿಸಿ, ಹೊಸ ಶರೀರದಲ್ಲಿ ಮತ್ತೊಂದು 300 ವರುಷ ಇರಬೇಕೆಂದು ಶ್ರೀಪಾದರ ಆಜ್ಞೆ. **ಜೀವನ್ಮುಕ್ತರು, ಜನನ ಮರಣವೆಂಬ ಸೃಷ್ಟಿಕ್ರಮವನ್ನು ದಾಟಿದವರು ಸಹಾ, ಶ್ರೀಪಾದರು ಆಜ್ಞೆ ಮಾಡಿದ್ದಲ್ಲಿ, ಪುನಃಬರಬೇಕಾದ್ದೆ! ಈ ಮಹಾಸೃಷ್ಟಿಯನ್ನು ನಡೆಸುವುದೇ ಶ್ರೀಪಾದ ಶ್ರೀವಲ್ಲಭ ಅವತಾರದ ಸಂಕಲ್ಪ. ಅವರ ಅವತರಣೆ, ಉತ್ಕೃಷ್ಟವಾದ ಈ ಸೂಕ್ಷ್ಮ ಲೋಕದಲ್ಲಿ, ಸದಾ ನಡೆಯುತ್ತಲೇ ಇರುತ್ತೆ, ನರ ರೂಪಧಾರಿಯಾಗಿ ಬರುವುದು ಸಕೃತ್ತು. ಅವರದ್ದು ಯೋಗ ಸಂಪೂರ್ಣಾವತಾರ. ಅವರ (ಪೂಜ್ಯರ) ಅಂಶಾವತಾರಗಳು, ಸದಾ ಈ ಭೂಮಿಯಮೇಲೆ, ಭಕ್ತರಕ್ಷಣ ಸಲುವಾಗಿ ಅವತರಿಸುತ್ತಲೇ ಇರುವೆವು.** ಮಗು, ಶಂಕರಾ! ನೀನು ವಿಚಿತ್ರ ಪುರದಲ್ಲಿ ಕಾಣಾದ ಮಹರ್ಷಿಯ ಬಗ್ಗೆ, ಅವರ ಕಣ ಸಿದ್ಧಾಂತದ ಬಗ್ಗೆ ನುಡಿದೆಯೇ, ಸ್ವಲ್ಪ ವಿವರಿಸುವೆಯಾ?'' ಎಂದು ನುಡಿದರು.

## ಕಾಣಾದ ಮಹರ್ಷಿಯ, ಕಣ ಸಿದ್ಧಾಂತ

''ಸ್ವಾಮಿ! ನನ್ನನ್ನು ಕ್ಷಮಿಸಿ. ಕಾಣಾದ ಮಹರ್ಷಿ ಮತ್ತು ಅವರ ಕಣ ಸಿದ್ಧಾಂತದ ಬಗ್ಗೆ ನಾನರತಿರುವುದು ಬಹು ಸ್ವಲ್ಪ. ನಾನಂದು ನುಡಿದದ್ದು ಸಹಾ, ಅಪ್ರಯತ್ನವಾಗಿ ನನ್ನ ಬಾಯಿಂದ ಹೊರಬಂದ ಪದಗಳೇ ಎಂದು, ಸ್ವಾಮಿಗೆ ಗೊತ್ತಿಲ್ಲದ್ದಂತೂ ಅಲ್ಲ'' ಎಂದು ವಿವರಿಸಿದೆನು.

ಕರುಣಾಮೂರ್ತಿಗಳಾದ ಶ್ರೀಪಳನಿ ಸ್ವಾಮಿಗಳು ಹೀಗೆ ನುಡಿದರು. ''ಸಮಸ್ತ ಸೃಷ್ಟಿಯೂ ಪರಮಾಣುಗಳಿಂದ ರಚಿಸಲ್ಪಟ್ಟಿದೆ, ಅಂತಹ ಪರಮಾಣುಗಳಗಿಂತ ಸಹಾ ಸೂಕ್ಷ್ಮವಾದ, ಕಣಗಳಿಂದ, ವಿದ್ಯುಲ್ಲತೆಗಳು ಉದ್ಭವಿಸುವವು. ಸೂರ್ಯನ ಸುತ್ತೂ ಗ್ರಹಗಳು, ವಿಭಿನ್ನ ಕಕ್ಷೆಗಳಲ್ಲಿ ಪರಿಭ್ರಮಿಸುವ ರೀತಿ, ಸ್ಥೂಲವಾದ ಈ ಸೂಕ್ಷ್ಮ ಕಣಗಳು ಸಹಾ ಅವುಗಳ ಕೇಂದ್ರ ಬಿಂದುವನ್ನನುಸರಿಸಿ ಅತಿ ವೇಗದಿಂದ ಸ್ವಕಕ್ಷೆಗಳಲ್ಲಿ ಪರಿಭ್ರಮಿಸುತ್ತಿರುವವು. ಇಂತಹ ಸೂಕ್ಷ್ಮ ಕಣಗಳಗಿಂತಲೂ ಸೂಕ್ಷ್ಮ ಸ್ಥಿತಿಯಲ್ಲಿ ಪ್ರಾಣಿಗಳ ಸಮಸ್ತ ಭಾವೋದ್ವೇಗಗಳ ಸ್ಪಂದನೆಗಳು ಇರುವವು. ಸ್ಪಂದನಾಶೀಲವಾದ ಈ ಜಗತ್ತಿನಲ್ಲಿ ಯಾವುದೂ ಸ್ಥಿರವಾಗಿ ಇರಲಾರದು. ಚಂಚಲತ್ವವೇ ಇದರ ಸ್ವಭಾವ. ಕ್ಷಣ ಕ್ಷಣ ಬದಲಾಯಿಸುವುದೇ ಇದರ ಸ್ವಭಾವ. ಇಂತಹ ಸೂಕ್ಷ್ಮ ಸ್ಪಂದನೆಗಳಗಿಂತ ಸೂಕ್ಷ್ಮವಾದದ್ದು, ಶ್ರೀದತ್ತ ಪ್ರಭುಗಳ ಚೈತನ್ಯ.

ಅವರ ಅನುಗ್ರಹ ಪಡೆಯುವುದು ಎಷ್ಟು ಸುಲಭಸಾಧ್ಯವೋ, ಅಷ್ಟೇ ಕಷ್ಟಸಾಧ್ಯ ಸಹಾ! ಪ್ರತಿ ಒಂದು ಕಣವನ್ನೂ ವಿಭಜಿಸುತ್ತಾ ಹೋದರೇ, ಒಂದೊಂದು ಕಣದ ಭಾಗ, ಶೂನ್ಯ ಸಮಾನವಾಗುವುದು. ಅನಂತಗಳಾದ ಮಹಾಶೂನ್ಯಗಳ ಸಂಯೋಗ ಫಲಿತವೇ ಈ ಚರಾಚರ ಸೃಷ್ಟಿ. ಪದಾರ್ಥವು ಸೃಷ್ಟಿ ಆಗುವ ಹಾಗೆಯೇ, ಪೂರ್ತಿಯಾಗಿ ಇದಕ್ಕೆ ಭಿನ್ನವಾದ ವಿಭಿನ್ನ ಪದಾರ್ಥ ಸಹಾ ಇರುವುದು. ಇವು ಎರಡೂ ಸೇರಿದಾಗ ವಿಭಿನ್ನ ಪದಾರ್ಥವು ನಶಿಸುವುದು. ಅಂತಹ ಪದಾರ್ಥ ತನ್ನ ಗುಣಗಳನ್ನು ಬದಲಾಯಿಸಿಕೊಳ್ಳುವುದು. **ಅರ್ಚಾವತಾರಗಳಲ್ಲಿ ಪ್ರಾಣಪ್ರತಿಷ್ಠೆ ನಡೆದಾಗ, ಆ ವಿಗ್ರಹ ಮೂರ್ತಿಗಳು ಚೈತನ್ಯಸಿದ್ಧಿಯಾಗಿದ್ದು, ಭಕ್ತರ ಮನೋಭೀಷ್ಟಗಳನ್ನು ಪೂರೈಸಲು, ಸಮರ್ಥವಂತವಾಗಿರುವವು.** ಸರ್ವಮಂತ್ರಗಳೂ ಕುಂಡಲಿಯಲ್ಲೇ ಆಗುವವು. ಅದರಲ್ಲೇ ಗಾಯತ್ರಿ ಸಹಾ ಆಗಿದೆ. ಗಾಯತ್ರಿ ಮಂತ್ರದಲ್ಲಿ ಮೂರು ಪಾದ ಇರುವುದೆಂದು ಎಲ್ಲರೂ ಭಾವಿಸುವರು. ಆದರೇ ಗಾಯತ್ರಿ ಮಂತ್ರದ ನಾಲ್ಕನೇ ಪಾದ 'ಪರೋರಜಸಿ ಸಾವದೋಮ್' ಎಂದು ಇದೆ. ಚತುಷ್ಪಾದ ಗಾಯತ್ರಿ ನಿರ್ಗುಣ ಬ್ರಹ್ಮವನ್ನು ಸೂಚಿಸುವುದಾಗಿದೆ. ಕುಂಡಲಿನೀಶಕ್ತಿ 24 ತತ್ವಗಳಲ್ಲಿ, ಈ ಜಗತ್ತುಗಳನ್ನು ಸೃಷ್ಟಿ ಮಾಡುವರು, ಗಾಯತ್ರಿಯಲ್ಲಿ ಸಹಾ 24 ಅಕ್ಷರಗಳಿವೆ. 24 ಸಂಖ್ಯೆಗೆ ಗೋಕುಲವೆಂದು ಸಹಾ ಹೆಸರಿದೆ. 'ಗೊ' ಅಂದರೆ 2, 'ಕುಲ'ವೆಂದರೇ 4. ಬ್ರಹ್ಮಸ್ವರೂಪ ಬದಲಾವಣೆಗಳಿಗೆ ಅತೀತ. ಆದ್ದರಿಂದಲೇ ಸಂಖ್ಯೆ 9 ರಿಂದ ಸೂಚಿತ, ಎಂಟು ಮಹಾಮಾಯಾಸ್ವರೂಪ. ಶ್ರೀಪಾದರು, ತಮಗೆ ಇಷ್ಟವಾದವರಿಂದ "ದೋಚೌಪಾತಿ ದೇವ್ ಲಕ್ಷ್ಮೀ" ಎನ್ನುತ್ತಿದ್ದರು. ಜೀವಿಗಳಿಗೆಲ್ಲಾ ಪತಿ ಸ್ವರೂಪ ಪರಬ್ರಹ್ಮನೇ. ಆದ್ದರಿಂದ, ಪತಿದೇವ್ ಎಂಬುದು 9ನ್ನು, ಲಕ್ಷ್ಮೀ ಎಂಬುದು 8ನ್ನು, 'ದೋ' ಎಂಬುದು 2ನ್ನು, 'ಚೌ' ಎಂಬುದು 4ರನ್ನು ಸೂಚಿಸುತ್ತವೆ. 'ದೋಚಪಾತಿದೇವ್ ಲಕ್ಷ್ಮೀ" ಎನ್ನಲು ಬದಲಾಗಿ ಅಪಭ್ರಂಶ ಮಾಡಿ, ವಿಚಿತ್ರವಾಗಿ 'ದೊ ಚೌಪಾತಿ ದೇವ್ ಲಕ್ಷ್ಮೀ' ಎಂದು ಕರೆಯುತ್ತಾ '2498' ಸಂಖ್ಯೆಯನ್ನು ಜೀವಗಳಿಗೆ ನೆನಪು ಮಾಡುತ್ತಿದ್ದರು. ಗೋಕುಲದಲ್ಲಿ ಪರಬ್ರಹ್ಮ, ಪರಾಶಕ್ತಿ, ಶ್ರೀಪಾದ ಶ್ರೀವಲ್ಲಭರ ರೂಪದಲ್ಲೇ ಇವೆ. ಶ್ರೀಕೃಷ್ಣ ಪರಮಾತ್ಮನೇ ಶ್ರೀಪಾದ ಶ್ರೀವಲ್ಲಭರೆಂದು ತಿಳಿಯಿರಿ. ಗಾಯತ್ರಿ ಮಂತ್ರಸ್ವರೂಪ, ಅವರ ನಿರ್ಗುಣ ಪಾದುಕೆಗಳು ಎಂದು ತಿಳಿಯುವೆವು.

"ಮಗೂ ಶಂಕರಾ! ಸ್ಥೂಲ ಮಾನವ ಶರೀರದಂದು 12 ತರಹದ ಭೇದಗಳಿವೆ. ಎಲ್ಲರಿಗೂ ಅನುಭವವಾಗುವ ಸ್ಥೂಲ ಶರೀರ, ಸ್ಥೂಲ ಸೂರ್ಯನ ಪ್ರಭಾವಕ್ಕೆ ಒಳಗೊಳ್ಳುವುದು. ಒಂದಕ್ಕಿಂತ ಮತ್ತೊಂದು ಸೂಕ್ಷ್ಮಸ್ಪಂದನೆಗಳಿಂದ ಕೂಡಿದ ಶರೀರಗಳು, ಕ್ರಿಯಾ ಯೋಗ ಸಾಧನೆಯಿಂದ ಇಂತಹ ದ್ವಾದಶ ಭೇದಗಳಿಂದ ಕೂಡಿದ ಶರೀರಗಳು, ದ್ವಾದಶಾದಿತ್ಯರ ಪ್ರಭಾವಕ್ಕೆ ಒಳಗಾಗುತ್ತವೆ. ಆದರೇ **ಶ್ರೀವಲ್ಲಭರು ದ್ವಾದಶಾದಿತ್ಯರಗಿಂತಲೂ ಅತೀತವಾದವರಾದುದ್ದರಿಂದ ಅವರ ದಿವ್ಯ ಸ್ಥೂಲ ಶರೀರವು ಚಿತ್ರವಿಚಿತ್ರವಾದ ಸ್ಪಂದನೆಗಳನ್ನು ಹೊಂದಿರುತ್ತದೆ.**

ಮಾನವ ಶರೀರದಿಂದ, ಶ್ರೀ ಪೀಠಿಕಾಪುರದೊಳು ಅವತರಿಸುವುದರ ಮುನ್ನ ಅಂದರೇ 108 ವರುಷಗಳ ಹಿಂದೆ, ಶ್ರೀವಲ್ಲಭರು ಈ ಸ್ಥಳಕ್ಕೆ ಬಂದರು. ನನ್ನನ್ನು ಅನುಗ್ರಹಿಸಿದರು. ಈಗ ಪೀಠಿಕಾಪುರದಲ್ಲಿ ಯಾವ ರೂಪ ತಾಳಿ ಬಂದಿರುವರೋ ಅದೇ ರೂಪದಲ್ಲಿದ್ದರು. ಅವರ ಲೀಲೆಗಳಿಗೆ ಕೊನೆ ಎಲ್ಲಿ? ಶ್ರೀವಲ್ಲಭರು ಇಲ್ಲಿಗೆ ಬಂದನಂತರ, ಹಿಮಾಲಯದ ಮಹಾಯೋಗಿಗಳು, ಬದರೀ ಮಹಾಕ್ಷೇತ್ರದಲ್ಲಿ ಶ್ರೀ ಬದರೀನಾರಾಯಣನನ್ನು ಬ್ರಹ್ಮಕಮಲಗಳಿಂದ ಪೂಜಿಸಿದರು. ಆ ಬ್ರಹ್ಮಕಮಲಗಳೆಲ್ಲವೂ, ಇಲ್ಲಿ ಶ್ರೀಗಳ ಚರಣಗಳಲ್ಲಿ ಬಂದು ಬೀಳುತ್ತಿರುವುದು ನಾನು ಕಂಡೆನು. ಅವರು ದೇಶ, ಕಾಲಗಳಿಗೆ ಅತೀತರು" ಎಂದರು.

ನಾನು ಶ್ರೀಪಳನಿ ಸ್ವಾಮಿಗಳ ದಿವ್ಯವಾಕ್ಕುಗಳಿಂದ, ತಿಳಿಸಲಾರದ ಅನುಭೂತಿಯನ್ನು ಹೊಂದಿದೆನು. ''ಸ್ವಾಮಿ! ಬ್ರಹ್ಮ ಕಮಲಗಳೆಂದರೇನು? ಅವು ಎಲ್ಲಿ ಲಭಿಸುವವು? ಅವುಗಳಿಂದ ಪೂಜಿಸಿದರೇ, ಶ್ರೀದತ್ತ ಪ್ರಭುಗಳು ಸಂಪ್ರೀತರಾಗುವರೆಂದು, ತಮ್ಮ ವಚನಗಳಿಂದ ತಿಳಿದು ಬರುತ್ತಿದೆ. ದಯವಿಟ್ಟು ನನ್ನ ಸಂದೇಹವನ್ನು ತೀರಿಸಬೇಕು'' ಎಂದು ಬೇಡಿದೆನು.

## ಬ್ರಹ್ಮಕಮಲಗಳ ಸ್ವರೂಪ

ಆಗ ಶ್ರೀ ಪಳನಿ ಸ್ವಾಮಿಗಳು ಕರುಣಾದೃಷ್ಟಿಯಿಂದ ಹೀಗೆ ನುಡಿದರು, ''ಶ್ರೀ ಮಹಾವಿಷ್ಣು ಬ್ರಹ್ಮಕಮಲಗಳಿಂದ ಪೂಜಿಸಿದರು. ಶ್ರೀ ಮಹಾವಿಷ್ಣುವಿನ ನಾಭಿ ಕಮಲವನ್ನು ಸಹಾ ಬ್ರಹ್ಮಕಮಲವೆಂದೇ ಹೇಳುವರು. **ಕಮಲಗಳಿಂದ ಶ್ರೀದತ್ತನನ್ನ ಪೂಜಿಸಿದರೇ, ಐಹಿಕಾಮುಷ್ಮಿಕ ಐಶ್ವರ್ಯ ಪ್ರಾಪ್ತಿಸುವುದು.** ದಿವ್ಯಲೋಕದ ಬ್ರಹ್ಮಕಮಲಕ್ಕೆ ಬದಲಾಗಿ ಈ ಭೂಮಂಡಲದ ಹಿಮಾಲಯದಲ್ಲಿ ಈ ಬ್ರಹ್ಮಕಮಲಗಳು ಕಾಣಬಹುದು. ಸುಮಾರು 12 ಸಾವಿರ ಅಡಿಗಳ ಎತ್ತರದಲ್ಲಿ, ಈ ಕಮಲ ವರ್ಷಕ್ಕೆ ಒಂದೇ ಬಾರಿ ಪುಷ್ಪಿಸುವುದು. ಮಗೂ! ಮಧ್ಯರಾತ್ರಿ ಸಮಯದಲ್ಲಿ ಮಾತ್ರವೇ ಈ ಹೂವು ಅರಳುವುದು, ಮತ್ತೊಂದು ವಿಚಿತ್ರ. ಈ ಹೂವು ವಿಕಸಿಸುವಾಗ ಅದ್ಭುತವಾದ ಪರಿಮಳವು ಆ ಪ್ರಾಂತವನ್ನೆಲ್ಲಾ ಆಕ್ರಮಿಸಿಕೊಳ್ಳುತ್ತದೆ. ಹಿಮಾಲಯದಲ್ಲಿರತಕ್ಕಂತಹ, ಸಾಧನಾ ಮಹಾತ್ಮರೆಲ್ಲರೂ ಈ ಅದ್ಭುತ ನೋಟಕ್ಕೆ ತಿಂಗಳಗಟ್ಟಲೇ ಕಾದಿರುವರು. ಶರತ್ಕಾಲದಿಂದ ವಸಂತ ಋತುವರೆಗೂ ಇದು ಹಿಮದಲ್ಲಿ ಹೂತುಕೊಂಡಿರುವುದು. ಚೈತ್ರ ಮಾಸದ ಪ್ರಾರಂಭದಲ್ಲಿ ಇದು ಹಿಮದಿಂದ ಈಚೆ ಕಾಣಲಾಗುವುದು. ಗ್ರೀಷ್ಮ ಕಾಲವೆಲ್ಲಾ ವಿಕಾಸ ರಚನೆ, ನಡೆಯುತ್ತಿರುವುದು. ಅಮರನಾಥ್‌ನ ಅಮರೇಶ್ವರ ಲಿಂಗ ದರ್ಶನವಾಗುವ ಶ್ರಾವಣ ಶುದ್ಧ ಪೂರ್ಣಿಮೆಯ ನಡು ರಾತ್ರಿ, ಇದು ಪೂರ್ಣವಾಗಿ ಅರಳುವುದು. ಮಗು ಶಂಕರಾ! ಸಾಧಕರು, ಮಹಾತಪಸ್ವಿಗಳು ಮತ್ತು ಸಿದ್ಧಪುರುಷರಿಗೋಸ್ಕರ ಮಾತ್ರ, ಕೇವಲ ಹಿಮಾಲಯದಲ್ಲಿ ಇಂತಹ ಅದ್ಭುತ ಲೀಲೆ ಇಂದಿಗೂ, ಎಂದಿಗೂ ನಡೆಯುತ್ತಿರುವುದು. ಬ್ರಹ್ಮ ಕಮಲ ದರ್ಶನದಿಂದ ಸಮಸ್ತ ಪಾಪಗಳೂ ನಶಿಸುವವು. ಯೋಗ ವಿಘ್ನಗಳು ಅಂತ್ಯವಾಗುವವು. ಇದು ತಕ್ಷಣ ಫಲಿತ ತರುವ ಅದ್ಭುತ ಲೀಲೆ. ಆದ್ದರಿಂದ ಯೋಗಿಗಳು, ತಾಪಸಿಗಳು, ಅವರವರ ಸಾಧನಾಮಾರ್ಗಗಳಲ್ಲಿ ಉತ್ಕೃಷ್ಟತೆಯನ್ನು ಹೊಂದುವರು. ಇದು ಅರಳಿದ ನಂತರ, ದೈವಾನುಗ್ರಹದಂತೆ ಯಾರಿಗೆ ದರ್ಶನ ಭಾಗ್ಯಇದೆಯೋ, ಅಂತವರು ಈ ಕಮಲವನ್ನು ದರ್ಶನ ಮಾಡಿಕೊಂಡ ಕೂಡಲೇ ಅದು ಅಂತರ್ಧಾನವಾಗುವುದು.

ಮಗನೇ ಶಂಕರಾ! ನಾನು 10 ದಿನ ದೀಕ್ಷೆ ಹಿಡಿದು, ತಪಸ್ಸಮಾಧಿಯಲ್ಲಿರಲೂ, ಬಯಸಿದ್ದೇನೆ. ದೀನ ದುಃಖಿತರಾದ ಮಾನವರ್‍ಯಾರಾದರೂ ದರ್ಶನಾರ್ಥರಾಗಿ ಬಂದರೇ, ತಪಸ್ಸಮಾಧಿಗೆ ಭಂಗ ಆಗದಂತೆ, ನೀನು ಮಾಧವನು, ದರ್ಶನ ಮಾಡಿಸತಕ್ಕದ್ದು. ಹಾವು ಕಚ್ಚಿ ಸತ್ತವರ ಪೈಕಿ ಯಾರಾದರೂ ಬಂದಲ್ಲಿ, ಸ್ವಾಮಿ, ಯೋಗ ಸಮಾಧಿಯೊಳಗೆ ಇದ್ದಾರೆಂದು, ಶಾಸ್ತ್ರ ಪ್ರಕಾರ ಸತ್ತವರ ಶರೀರವನ್ನು ನದೀ ಪ್ರವಾಹದಲ್ಲಿ ಬಿಟ್ಟು ಬಿಡುವುದೋ ಅಥವಾ ಹೂತಾಕುವುದೋ ಮಾಡಬೇಕೆಂದು ನನ್ನ ಆಜ್ಞೆಯಂತೆ ಅವರಿಗೆ ತಿಳಿಸುವುದು'' ಎಂದು ನುಡಿದರು.

ಶ್ರೀ ಪಳನಿ ಸ್ವಾಮಿಗಳು ತನ್ನ ಆಸನದಲ್ಲಿ ಕೂತಂತೆಯೇ ತಪಸ್ಸಮಾಧಿಗೆ ಒಳಗಾದರು. ನಾನು ಮತ್ತು ಮಾಧವ, ಬಿಕ್ಕಟ್ಟಿಲ್ಲಿರುವ ಭಕ್ತರು ಬಂದಾಗ, ಪ್ರಶಾಂತವಾಗಿ ದರ್ಶನ ಮಾಡಿಸುತ್ತಿದ್ದೆವು. ಬಂದ ಭಕ್ತರಲ್ಲಿ ಕೆಲವರು ನಮಗೆ ಊಟಕ್ಕಾಗಿ ಸಂಭಾವನೆ ಕೊಡುತ್ತಿದ್ದರು.

ಮಾಧವ ಅಡಿಗೆ ಮಾಡಲೂ ಹೊರಟು, ತೆಂಗಿನ ಗರಿ (ಒಣಗಿದ) ಬಿದ್ದದ್ದನ್ನು ತರಲೂ ಹೋದಾಗ, ಅಲ್ಲಿದ್ದ ಹಾವೊಂದು ಕಚ್ಚಲೂ, ಅಲ್ಲಿನ ಜನ ಅವನನ್ನು ಗುಹೆ ಹತ್ತಿರಕ್ಕೆ ತಲುಪಿಸಿದರು. ಮಾಧವನು ತೀರಿಹೋದನು.

ಶ್ರೀ ಪಳನಿ ಸ್ವಾಮಿಗಳದು ಮೀರಲಾಗದಂತಹ ಶಾಸನವಾದುದ್ದರಿಂದ ಮಾಧವನನ್ನು ನಾವೇ ಹೂತುಹಾಕಿದೆವು. ನಾನು ಬಿಕ್ಕಿ ಬಿಕ್ಕಿ ಅಳುತ್ತಲೇ ಇತರ ಭಕ್ತರು ಸಹಕರಿಸಲೂ, ಕಾರ್ಯ ಮುಗಿಸಿದೆನು. ಮಾಧವನದು ನಿಷ್ಕಲ್ಮಷವಾದ ಹೃದಯ. ಅವನ ನಿರ್ಮಲಭಕ್ತಿ ಮತ್ತು ಶ್ರೀಪಾದ ಶ್ರೀವಲ್ಲಭರಲ್ಲಿ ಅವನಿಗಿದ್ದ ಮಹಾ ವಿಶ್ವಾಸ ಮನಸ್ಸಿಗೆ ಬರಲೂ ಬಾಧೆ ಆಯಿತು. ವಿಧಿಯನ್ನು ತಪ್ಪಿಸುವರಾರೆಂದು, ಸಮಾಧಾನ ಮಾಡಿಕೊಂಡೆ. ಈ ದುರ್ಘಟನೆ ಹಿಂದೆಯೇ ಒಬ್ಬ 18 ವರುಷದ ಬಾಲಕನ ಶವವನ್ನು, ಹಾವು ಕಚ್ಚಿ ಸಾಯಲೂ, ತೀವ್ರ ಅಳು, ರೋದನೆಗಳ ನಡುವೆ ಅವನ ಸಂಬಂಧೀಕರು ಸ್ವಾಮಿಯ ಹತ್ತಿರಕ್ಕೆ ತಂದರು. ಸ್ವಾಮಿಗಳು ಯೋಗ ಸಮಾಧಿಯಲ್ಲಿರುವರೆಂದೂ, ಅವರ ಆಜ್ಞೆಯಂತೆ ಶವವನ್ನು ಹೂತಾಕಬಹುದೆಂದು, ಇದೀಗ ಇವರ ಸಹಚರನೊಬ್ಬ ಇದೇ ರೀತಿಯಲ್ಲಿ ಮರಣಿಸಿದಾಗ ಸಹಾ, ಸ್ವಾಮಿ ಆಜ್ಞೆಯಂತೆ ಎಲ್ಲರೂ ಸೇರಿ ಹೂತಾಕಲಾಯಿತೆಂದು ತಿಳಿಸಿದೆವು. ಅವರು ಇದು ಕೇಳಿ ಮುಖಬಾಡಲೂ ಮಾಡುವುದಿನ್ನೇನೂ ಇಲ್ಲವಾದ್ದರಿಂದ, ತಮ್ಮಗಳ ದುರದೃಷ್ಟವನ್ನು ನಿಂದಿಸಿಕೊಳ್ಳುತ್ತಾ, ಆ ಬಾಲಕನ ಶವವನ್ನು ಹೂತಾಕಿದರು.

ನಿತ್ಯವೂ ಮೂರು, ನಾಲಕ್ಕು ಜನ ಸ್ವಾಮಿಗಳ ದರ್ಶನವನ್ನು ಪ್ರಶಾಂತವಾಗಿ ಮಾಡಿಕೊಂಡು ಹೋಗುತ್ತಿದ್ದರು. ಈ ರೀತಿ 10 ದಿನಗಳನಂತರ, ಶ್ರೀ ಪಳನಿ ಸ್ವಾಮಿಗಳಲ್ಲಿ ಚೈತನ್ಯ ಬಂತು. ಬ್ರಾಹ್ಮೀ ಮುಹೂರ್ತದಲ್ಲಿ ಸ್ವಾಮಿಗಳು "ಮಾಧವಾ!" ಎಂದು ಕರೆದರು. ನಾನು ಬಿಕ್ಕಿ ಬಿಕ್ಕಿ ಅಳುತ್ತಾ ನಡದದ್ದೆಲ್ಲಾ ವಿವರಿಸಿದೆನು.

ನನ್ನನ್ನ ಸಮಾಧಾನ ಮಾಡಿ, ಯೋಗ ದೃಷ್ಟಿಯನ್ನು ನನ್ನ ಮೇಲೆ ಬೀರಿದರು. ಭಯಂಕರ ಬಾಧೆ ಸಹಿತ ಸಂಚಲನ ಬೆನ್ನುಮೂಳೆಯಲ್ಲಿ ಕಂಡೆ. ಅನಂತರ ಅವರ ಪ್ರಸನ್ನ ದೃಷ್ಟಿ ಆ ನೋವನ್ನು ಮಾಯೆ ಮಾಡಲೂ, "ಮಗೂ! ಮಾಧವನಿಗೆ ಶ್ರೀವಲ್ಲಭರ ದರ್ಶನ ಪ್ರಾಪ್ತಿ ಸ್ಥೂಲ ಶರೀರದಿಂದ ಇಲ್ಲ. ಅದೇ, ಅವನ ಸೂಕ್ಷ್ಮಶರೀರ ಈ 10 ದಿನಗಳಿಂದ, ಕುರುವಪುರದಲ್ಲಿ ಶ್ರೀಗಳ ಚರಣಗಳಲ್ಲಿದೆ. ಹೀಗೆ ಅವನ ಬಯಕೆ ಪೂರೈಸಿದೆ. ಶ್ರೀವಲ್ಲಭರ ಲೀಲೆ ಊಹೆಗಳಿಗೆ ಅತೀತ, ಕಾಲ, ಕರ್ಮ ಮತ್ತು ಕಾರಣ ರಹಸ್ಯಗಳು, ಅವರೇ ಬಲ್ಲರು. ಮಾಧವನ ಸ್ಥೂಲ ಶರೀರವನ್ನು ಒಳಕ್ಕೆ ಪ್ರವೇಶ ಮಾಡುವ ಬಾಧ್ಯತೆ ಶ್ರೀಪಾದರು, ನನಗೆ ವಹಿಸಿದ್ದಾರೆ. ಆ ಕೆಲಸ ಕೂಡಲೆ ಮಾಡೋಣ" ಎಂದು ಸ್ವಾಮಿಗಳು ನುಡಿದರು.

ಸ್ವಾಮಿಗಳ ಆ ನುಡಿಗಳು, ನನಗಿದ್ದ ವಿಷಾದ ವಿಚಾರವನ್ನು ತಟ್ಟನೇ ದೂರ ಮಾಡಿತು. ಮಾಧವ ಪುನರುಜ್ಜೀವಿತನಾಗುವದಕ್ಕಿಂತ ನನಗೆ ಬೇಕಾಗಿರುವುದು ಮತ್ತೇನು. ಮಾಧವನ ಶವವನ್ನು ಹೊರಗೆ ತೆಗೆದೆವು. ನಮಗೆ ಸಹಾಯಕ್ಕಾಗಿ ಬಂದಿದ್ದ ಇಬ್ಬರನ್ನೂ ಸೇರಿಸಿ, ನಮ್ಮನ್ನ ಉದ್ದೇಶಿಸಿ, ಶ್ರೀ ಸ್ವಾಮಿ ಹೀಗೆ ಹೇಳಿದರು "ದಕ್ಷಿಣ ದಿಕ್ಕಿಗೆ ಹೋಗಿ, ತಾಟಿಮರಗಳ ಗುಂಪಿನತ್ತ ಹೋಗಿ ಹೀಗೆ ಹೇಳಿ - ಮಾಧವನನ್ನು ಕಚ್ಚಿದ ಓ ನಾಗರಾಜನೇ! ಶ್ರೀಪಾದ ಶ್ರೀವಲ್ಲಭರ ಆಜ್ಞೆಯಂತೆ ತಾವು, ಶ್ರೀ ಪಳನಿ ಸ್ವಾಮಿಗಳ ಸನ್ನಿಧಿಗೆ ಬರಬೇಕಾಗಿ ಆಜ್ಞಾಪಿಸಲಾಗಿದೆ" ನಾವು ಹಾಗೆಯೇ ಮಾಡಿದೆವು.

ಶ್ರೀ ಪಳನಿ ಸ್ವಾಮಿ ತನ್ನ ಕೌಪೀನದಿಂದ ನಾಲಕ್ಕು ಚಿಕ್ಕ ಕವುಡೆಗಳನ್ನು ತೆಗೆದು, ಶವದ ನಾಲ್ಕು ದಿಕ್ಕುಗಳಲ್ಲಿ ಇಟ್ಟರು. ಸ್ವಲ್ಪ ಸಮಯದನಂತರ, ಅವು ಸ್ವಲ್ಪ ಎತ್ತರಕ್ಕೆ ನೆಗೆದು, ನಂತರ ರಿವ್ವು ಎಂದು ಶಬ್ದ ಮಾಡುತ್ತಾ ಆಕಾಶದಲ್ಲಿ 4 ದಿಕ್ಕುಗಳಲ್ಲಿ ಹೋದವು.

ಮತ್ತೆ ಸ್ವಲ್ಪ ಹೊತ್ತಿಗೆ, ಒಂದು ನಾಗರ ಹಾವು, ಬುಸೆ ಹೊಡೆಯುತ್ತ ಉತ್ತರದಿಕ್ಕಿನಿಂದ ಬಂತು. ಆ ಹಾವು ಬಹಳ ಅಸಹನೆಯಿಂದ ಇತ್ತು. ಶ್ರೀ ಪಳನಿ ಸ್ವಾಮಿಯ 4 ಕವಡೆಗಳು, ಅದರ ಹೆಡೆ ಮೇಲೆ ಮೆತ್ತು ಕೊಂಡಿದ್ದವು. ಶ್ರೀ ಪಳನಿ ಸ್ವಾಮಿ, ಆ ಹಾವನ್ನು ಮಾಧವನ ಶರೀರದಿಂದ ವಿಷ ತೆಗೆದು ಹಾಕಲೂ ಹೇಳಿದರು, ಹಾವು ಎಲ್ಲಿ ಹಲ್ಲನ್ನ ಹಾಕಿ ಕಚ್ಚಿತ್ತೋ ಅಲ್ಲಿಂದಲೇ ವಿಷ ತೆಗೆಯಲಾಯಿತು. ಶ್ರೀಗಳು, ಶ್ರೀಪಾದ ಶ್ರೀವಲ್ಲಭರನ್ನು ಸ್ಮರಿಸುತ್ತಾ ಮಂತ್ರೋದಕವನ್ನು ಆ ಹಾವಿನ ಮೇಲೆ ಪ್ರೋಕ್ಷಣೆ ಮಾಡಿದರು. ಆ ಹಾವು ಶ್ರೀ ಪಳನಿ ಸ್ವಾಮಿ ಕಾಲನ್ನು ಮುತ್ತಿಕ್ಕಿ ಅವರನ್ನು ಮೂರು ಬಾರಿ ಸುತ್ತಿ ಪ್ರಶಾಂತವಾಗಿ ಹೊರಟು ಹೊಯಿತು.

## ದತ್ತ ಭಕ್ತರಿಗೆ ಅನ್ನ ಕೊಡುವದರಿಂದ ಆಗುವ ಫಲ

ಶ್ರೀ ಪಳನಿ ಸ್ವಾಮಿ ಹೀಗೆ ಹೇಳಿದರು, ''ಈ ಹಾವು ಹೋದ ಜನಮದಲ್ಲಿ ಒಂದು ಮಹಿಳೆ. ವೃದ್ಧಳಾಗುವಷ್ಟರಲ್ಲಿ, ಸ್ವಲ್ಪ ಪಾಪ ಮತ್ತು ಸ್ವಲ್ಪ ಪುಣ್ಯ ಮಾಡಿದ್ದಳು. ಒಂದು ಬಾರಿ ಆಕೆ ಓರ್ವ ಬ್ರಾಹ್ಮಣನಿಗೆ ಅನ್ನವಿತ್ತಳು. ಶ್ರೀದತ್ತ ಭಗವಾನರು ಬಹಳ ಸುಲಭವಾಗಿ ಪ್ರಸನ್ನನಾಗುವ ತತ್ವ ಉಳ್ಳವರು. ಆ ಹೆಂಗಸು ಮರಣಾನಂತರ ಯಮಲೋಕಕ್ಕೆ ಹೋದಳು. ಯಮಧರ್ಮರಾಯರು, ಹೀಗೆ ನುಡಿದರು ''ನೀನು ಸ್ವಲ್ಪ ಪಾಪ ಮತ್ತು ಸ್ವಲ್ಪ ಪುಣ್ಯ ಮಾಡಿಕೊಂಡಿದ್ದೆ. ಒಬ್ಬ ದತ್ತ ಭಕ್ತ ಬ್ರಾಹ್ಮಣನಿಗೆ ಅನ್ನ ಕೊಡುವುದರಿಂದ ನಿನಗೆ ಮಹಾಫಲ ಸಿದ್ಧಿಸಿದೆ. ಶ್ರೀದತ್ತ ದೇವರು ಸದ್ಯಕ್ಕೆ ಶ್ರೀಪಾದ ಶ್ರೀವಲ್ಲಭರಾಗಿ ಮಾನವ ಲೋಕದಲ್ಲಿದ್ದಾರೆ. ನಿನಗೆ ಮಹಾ ಪುಣ್ಯ ಮತ್ತು ಸ್ವಲ್ಪ ಮಾತ್ರ ಪಾಪ ಅನುಗ್ರಹಿಸಲೂ, ಶ್ರೀಪಾದರು ನಮ್ಮನ್ನು ಆದೇಶಿಸಿದ್ದಾರೆ. ಚಿತ್ರಗುಪ್ತರು ಅದೇ ಪ್ರಕಾರ ಮಾಡಿದ್ದಾರೆ. ಈಗ, ತಾವು ಪಾಪವನ್ನು ಮೊದಲು ಅನುಭವಿಸುವಿರಾ ಅಥವಾ ಪುಣ್ಯವನ್ನು ಅನುಭವಿಸುವಿರಾ?'' ಎಂದು ಪ್ರಶ್ನಿಸಿದರು. ಪಾಪವು ಸ್ವಲ್ಪ ಇರುವುದರಿಂದ, ಆಕೆ ಮೊದಲು ಪಾಪವನ್ನನುಭವಿಸಲು ಒಪ್ಪಿಕೊಂಡಳು. ಆ ಕಾರಣಕ್ಕಾಗಿ ಆಕೆ, ಒಂದು ಹಾವಾಗಿ ಭೂಲೋಕಕ್ಕೆ ಬಂದಿದ್ದಳು. ಹಾವಿನ ಲಕ್ಷಣವನ್ನು ಅನುಸರಿಸಿ, ಆ ಹಾವು ಅಡ್ಡ ಬಂದವರನೆಲ್ಲರನ್ನೂ ಕಚ್ಚುತ್ತಿತ್ತು. ಫಲವಾಗಿ ಮತ್ತಷ್ಟು ಪಾಪದ ಅಂಶ ಬೆಳೆಯುತ್ತಿತ್ತು. ಮಗೂ! ಹಾವುಗಳಲ್ಲಿ 4 ಜಾತಿಗಳಿವೆ. ಮೊದಲನೆಯ ಜಾತಿ, ಯಾರಿಗೂ ತೊಂದರೇ ಕೊಡದೇ, ಗಾಳಿಯನ್ನೇ ಆಹಾರವಾಗಿಟ್ಟುಕೊಂಡು ಯೋಗಿಗಳಂತೆ ಜೀವಿಸುವುವು. ಎರಡನೆಯ ಜಾತಿ, ಯಾರೇ ಆಗಲಿ, ಅದರ ಹತ್ತಿರ ಬಂದರೆ, ಕ್ರೋಧದಿಂದ ಸಾಯಿಸುವವು. ಮೂರನೇ ಜಾತಿ, ಮಾನವನ ಕಣ್ಣಿಗೆ ಬೀಳದಿರಲು ಶತಪ್ರಯತ್ನ ಮಾಡುವವು. ಒಂದು ವೇಳೆ ಮಾನವನ ಕಣ್ಣಿಗೆ ಬಿದ್ದರೆ ಭಯದಿಂದ ಓಡಿ ಹೋಗುವವು. ನಾಲ್ಕನೆಯ ಜಾತಿ, ಯಾರೂ ಅದಕ್ಕೆ ಅಪಕಾರ ಮಾಡದಿದ್ದರೂ, ಕಣ್ಣಿಗೆ ಬಿದ್ದವರನ್ನ ಕಚ್ಚಿಬಿಡುವುದು. ಆ ವೃದ್ಧ ಮಹಿಳೆ ರಜೋಗುಣ ಉಳ್ಳವಳಾದ್ದರಿಂದ, ತನ್ನ ಹತ್ತಿರ ಬಂದ ಮಾಧವನನ್ನ ಕಚ್ಚಿಬಿಟ್ಟಳು. ಮಾಧವನು ಹಿಂದಿನ ಜನುಮದ ಪಾಪದ ಕಾರಣ ನಿರ್ಜೀವನಾದನು. ಶ್ರೀಪಾದರ ಅನುಗ್ರಹದಿಂದ, ಆ ವೃದ್ಧ ಮಹಿಳೆ ಶೀಘ್ರದಲ್ಲೇ ಹಾವಿನ ಜನುಮದಿಂದ ವಿಮುಕ್ತಳಾಗಿ ಉನ್ನತ ಲೋಕ ಸೇರಿದಳು. ಜೀವ, ಪಿಂಡಾವಸ್ಥೆಯಲ್ಲಿ ಸರ್ಪದಾಕಾರದಲ್ಲಿರುವುದು. ನಾಗದೋಷದಿಂದ ಸಂತಾನ ನಷ್ಟ ಆಗುವುದು.

## ಯೋಗ್ಯರಿಗೆ ಅನ್ನದಾನ ಫಲ

**ಶ್ರೀ ದತ್ತರು ಅಲ್ಪ ಸಂತೋಷಿ. ಶ್ರೀ ದತ್ತರ ಹೆಸರಲ್ಲಿ ಅನ್ನವನ್ನು ಯೋಗ್ಯರಿಗೆ ಇಟ್ಟಲ್ಲಿ, ಆನ್ನದಾತನಿಗೆ ವಿಶೇಷ ಫಲ ಲಭಿಸುವುದು. ಅನ್ನದಲ್ಲಿನ ರಸದ ಒಂದಷ್ಟು ಭಾಗ, ಮನಸ್ಸಾಗುವುದು. ಅನ್ನದಾತನ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ ಮತ್ತು**

**ಶರೀರ, ಮಂಗಳಕರವಾದ ಸ್ಪಂದನೆಗಳಿಂದ ತುಂಬಿರುತ್ತದೆ. ಆದ್ದರಿಂದ ಅವನಿಗೆ ಸೃಷ್ಟಿಯಲ್ಲಿನ ಪದಾರ್ಥಗಳನ್ನು ಆಕರ್ಷಿಸುವ ಶಕ್ತಿ ಪ್ರಾಪ್ತವಾಗುವುದು. ವಸ್ತು ಸಮೃದ್ಧಿಯೇ ಶ್ರೀ ಲಕ್ಷ್ಮೀ ಕಟಾಕ್ಷ.** ಸೃಷ್ಟಿ ಎಲ್ಲವೂ ಸೂಕ್ಷ್ಮ ಸ್ಪಂದನೆಗಳಿಂದಲೂ, ಸೂಕ್ಷ್ಮ ನಿಯಮಗಳಿಂದಲೂ ಪರಿಪಾಲಿಸಲಾಗುತ್ತಿದೆ'' ಎಂದು ಶ್ರೀ ಪಳನಿ ಸ್ವಾಮಿ ತಿಳಿಸಿದರು.

## ಶ್ರೀಪಾದರ ಮಹಿಮೆ

ಶ್ರೀವಲ್ಲಭರ ನಾಮಸ್ಮರಣೆ ಎಷ್ಟು ಲಕ್ಷ್ಮೀಪ್ರದವಾದದ್ದು! ಅವರ ಅನುಗ್ರಹ ಹೊಂದಿದವರ ಅದೃಷ್ಟ ಏನಂತ ವರ್ಣಿಸಬಲ್ಲೆವು? ಶ್ರೀ ಚರಣರ ಅನುಗ್ರಹದಿಂದಲೇ10 ದಿನದ ಹಿಂದೆ ಹೂತಾಕಲಾದ ಮಾಧವ ಹಾಳಾಗದಿದ್ದಾನೆ. ಈಗ ಅವನಿಗೆ ಪ್ರಾಣವನ್ನು ಸಹ ಕರುಣಿಸಲಾಗಿದೆ!

ಮಾಧವನಲ್ಲಿ ಚೈತನ್ಯ ಬರತೊಡಗಿತು. ಅವನು ದಾಹ ಎನ್ನಲೂ, ಶ್ರೀ ಸ್ವಾಮಿಗಳು ತುಪ್ಪ ಮಾತ್ರ ಕುಡಿಸಿದರು. ಆ ತುಪ್ಪ 100 ವರುಷ ಹಳೇದು! ಮಾಧವ, ಕುಡಿಯಲೂ ನಿರಾಕರಿಸಿದನು. ಶ್ರೀಗಳು ಮಾತ್ರ, ತುಪ್ಪ ಕುಡಿದರೇ ಮಾತ್ರ ನೀರು ಎನುತ್ತಿದ್ದರು. ಮಾಧವ ತುಪ್ಪ ಸೇವಿಸಿದನಂತರ, ಹಣ್ಣಿನ ರಸ, ತದನಂತರ ನೀರು ಕೊಟ್ಟರು.

## ನಾಗಲೋಕ ವರ್ಣನೆ

ಮಾಧವ ಪುನರುಜ್ಜೀವಿತನಾದ, ನಮ್ಮ ಆನಂದಕ್ಕೆ ಮಿತಿಯೇ ಇಲ್ಲ. ಮಾಧವ ಹೀಗೆಂದನು, ''ನಾನು ಸೂಕ್ಷ್ಮ ಶರೀರದೊಳು, ಕುರುವಪುರ ಸೇರಿದೆ. **ಶ್ರೀಪಾದರು ಅಜಾನುಬಾಹರು, ವಿಶಾಲ ನೇತ್ರರು, ಅವರ ನೇತ್ರಗಳು, ಜೀವಿಗಳಲ್ಲಿ ಕರುಣೆ, ದಯೆ ಮತ್ತು ಪ್ರೇಮ ತುಂಬಿತ್ತು.** ನಾನು, ಸ್ಥೂಲ ಶರೀರಧಾರಿಗಳಾದ ಭಕ್ತರಿಗೆ ಕಾಣಿಸುತ್ತಿರಲಿಲ್ಲ. ಶ್ರೀವಲ್ಲಭರು, ಕುರುವಪುರದ ಆ ದ್ವೀಪದ ಮಧ್ಯಕ್ಕೆ ನನ್ನನ್ನ ಹೋಗಲೂ ಆಜ್ಞಾಪಿಸಿದರು. ನಾನು ಶ್ರೀಗಳ ನಾಮಸ್ಮರಣೆ ಮಾಡುತ್ತಾ ಆ ದ್ವೀಪದ ಮಧ್ಯ ಭಾಗದಿಂದ ಮತ್ತಷ್ಟು ಆಳಕ್ಕೆ ಹೋದೆನು. ಭೂಗರ್ಭದಲ್ಲಿ ಬಹಳಷ್ಟು ಭವನಗಳು ಇವೆ ಎಂದು, ಅದು ಪಾತಾಳ ಎಂದು ಗೋಚರವಾಯಿತು. ಸ್ಥೂಲವಾಗಿ ನೋಡುವರಿಗೆ, ಸ್ಥೂಲ ರೂಪ ಪದಾರ್ಥಗಳೇ ಕಾಣುವುದು. ನನ್ನಂತೆ ಸೂಕ್ಷ್ಮ ರೂಪಿಗಳಿಗೆ, ಸೂಕ್ಷ್ಮ ರೂಪ ಲೋಕ ಕಾಣುವುದು. ಅಲ್ಲಿದ್ದ ನಾಗ ಜಾತಿಗಳು, ಕಾಮ ರೂಪಿಗಳು. ಅವರು ಬಯಸಿದ ರೂಪ ಧರಿಸಬಲ್ಲರು. ಆದರೂ ನಾಗ ರೂಪ ಪ್ರಿಯರು. ನಾನಲ್ಲಿ ಮಹಾ ಸರ್ಪಗಳನೇಕ ಕಂಡೆ. ಸಾವಿರಾರು ಹೆಡೆಗಳಲ್ಲಿ, ಕಾಂತಿ ಚಿಮ್ಮುತ್ತಿದ್ದ ಮಣಿಗಳಿದ್ದವು, ಕೆಲ ಸರ್ಪಗಳಿಗೆ! ಇನ್ನು ಕೆಲವು, ಹೆಡೆಗಳು ಬಿಚ್ಚಿ, ಯೋಗ ಭಂಗಿಮೆಯಲ್ಲಿದ್ದಂತೆ, ಮೌನವಾಗಿದ್ದವು. ಅದರಲ್ಲಿನ ಒಂದ ಸರ್ಪದ ಮೇಲೆ, ಶ್ರೀಪಾದ ಶ್ರೀವಲ್ಲಭರು, ಶ್ರೀ ಮಹಾವಿಷ್ಣುವಿನಂತೆ ಶಯನಿಸಿದ್ದರು. ಮಹಾ ಸರ್ಪಗಳು ವೇದಗಾನ ಮಾಡುತ್ತಿದ್ದವು. ಶ್ರೀಗಳು ಮುಗುಳ್ನಗೆಯಲ್ಲಿ ಮಲಗಿದ್ದರು. ಅದರ ಪೈಕಿಯ ಒಂದು ಮಹಾ ಸರ್ಪ ಹೀಗೆಂದಿತು.

## ಶ್ರೀದತ್ತ ದೇವರ ಮಹಾಮಹಿಮೆ

ಶ್ರೀದತ್ತ ಪ್ರಭುಗಳು, ನೇಪಾಳದಲ್ಲಿನ ಚಿತ್ರಕೂಟದ ಅನಸೂಯ ಪರ್ವತದ ಮೇಲೆ ಅತ್ರಿ, ಅನಸೂಯರಿಗೆ ಪುತ್ರನಾಗಿ, ಗತಯುಗದಲ್ಲಿ ಅವತರಿಸದರು. ಅವರು, ಆ ಅವತಾರದಲ್ಲೇ ಸೂಕ್ಷ್ಮ ರೂಪಿಗಳಾಗಿ, ನೀಲಗಿರಿ ಶಿಖರ, ಶ್ರೀಶೈಲ ಶಿಖರ, ಶಬರಿಗಿರಿ

ಮತ್ತು ಸಹ್ಯಾದ್ರಿಯಲ್ಲಿ ಸಂಚರಿಸುತ್ತಿರುವರು. ದಿಕ್ಕುಗಳೇ ಅಂಬರ ಅಂದರೇ ವಸ್ತ್ರವಾಗಲೂ, ದಿಗಂಬರರೆಂದು ಪ್ರಖ್ಯಾತಿ ಹೊಂದುವರು. ಅವರು ಸಹ್ಯಾದ್ರಿಯಲ್ಲಿ ಯೋಗನಿಷ್ಠರಾದರು. ಅವರು ನಾಥ ಸಂಪ್ರದಾಯ ಗೋರಕ್ಷ ನಾಥನಿಗೆ ಸಹಾ, ಕ್ರಿಯಾಯೋಗ ಉಪದೇಶಿಸಿದರು. ಜ್ಞಾನೇಶ್ವರ ಯೋಗಿಗೆ, ಖೇಚರೀ ಮುದ್ರೆಯಲ್ಲಿ ಕುಳಿತಿರುವ ನಿರಾಕಾರ ಯೋಗಿಯಾಗಿ ಕಂಡರು. ದೇಶಕಾಲಗಳಿಗೆ ಅತೀತರು. ಅವರ ಸನ್ನಿಧಿಯಲ್ಲಿ ನಮಗೆ ಎಲ್ಲವೂ ನಿತ್ಯ ವರ್ತಮಾನವೇ. ಭೂತ, ಭವಿಷ್ಯ ಎಲ್ಲಾ ಒಂದೆ.

## ಅನಘಾ ಸಮೇತ ಶ್ರೀದತ್ತಾತ್ರೇಯ ದರ್ಶನ

ನನ್ನ ಪಕ್ಕದಲ್ಲಿನ ಮತ್ತೊಂದು ಸರ್ಪ, "ಮಗೂ, ಮಾಧವಾ! ನಮ್ಮನ್ನು ಕಾಲನಾಗ ಋಷೀಶ್ವರರೆನ್ನುವರು. ಶ್ರೀದತ್ತ, ಸಾವಿರಾರು ಸಂವತ್ಸರ, ರಾಜ್ಯ ಆಳಿದನಂತರ, ತನ್ನ ರೂಪ ಗುಪ್ತವಾಗಿಡಲು ಬಯಸಿ ನೀರಿನಲ್ಲಿಯೇ ಕೆಲ ವರುಷ ಇದ್ದರು. ಮೇಲೆ ಬಂದು, ದಡದಲ್ಲಿ ಕಾದಿದ್ದ ನಮ್ಮನ್ನು ಕಂಡು, ಪುನಃ ಮುಳಿಗಿ, ಕೆಲವು ವರುಷ ಇದ್ದರು. ಈ ಸಲ ಮೇಲೆ ಬಂದ ಅವರ ಕೈಯಲ್ಲಿ ಮಧುಪಾತ್ರೆ ಇತ್ತು. ಮತ್ತೊಂದು ಕೈಯಲಿ 16 ವರುಷದ ಸುಂದರಿ ಇದ್ದಳು. ಮಧೋನ್ಮತ್ತ ಹಾಗೂ ಸ್ತ್ರೀ ಲೋಲನಾದ ಇವರನ್ನು ತ್ಯಜಿಸಿ, ನಾವೆಲ್ಲರೂ ಹೊರಟು ಹೋದೆವು. ಅವರು ಅದೃಶ್ಯರಾದರು. ತದನಂತರವೇ, ನಮಗೆ ಜ್ಞಾನೋದಯವಾಯಿತು. ಅವರ ಕೈಯಲ್ಲಿದ್ದ ಮಧುಪಾತ್ರೆ, ಯೋಗಾನಂದ ಅಮೃತವೆಂದು, ಆ ಸ್ತ್ರೀ ಶಕ್ತಿರೂಪಿಣಿ ಅನಘಾದೇವಿ ಎಂದು ನಮಗೆ ತಿಳಿದುಬಂತು. ಪುನಃ ಅವರನ್ನು ಭೂಮಿಯಮೇಲೆ ಅವತರಿಸಲು ಮಾಡಿದ ನಮ್ಮ ಘೋರತಪಸ್ಸಿನ ಫಲವೇ, ಶ್ರೀ ಪೀಠಿಕಾಪುರ ಅವತಾರಿ ಶ್ರೀಪಾದ ಶ್ರೀವಲ್ಲಭರು.

## ಶ್ರೀ ಕುರುವಪುರ ವರ್ಣನೆ

ಆ ದಿನ ಶ್ರೀಗಳು ಯಾವ ಸ್ಥಳದಲ್ಲಿ ಸ್ನಾನಕ್ಕಾಗಿ ಮುಳಗಿದರೋ ಅದೇ ಈ ಪವಿತ್ರ ಕುರುವಪುರ. ಅವರು ಜಲ ಸಮಾಧಿಯಲ್ಲಿದ್ದ ಹಾಗೆಯೇ, ನಾವು ಸೂಕ್ಷ್ಮರೂಪದಲ್ಲಿ ಸೂಕ್ಷ್ಮಲೋಕದೊಳು ಯೋಗಸಮಾಧಿಯಲ್ಲಿದ್ದೇವೆ. ಕೌರವ ಪಾಂಡವರಿಗೆ ಮೂಲಪುರುಷ 'ಕುರು' ಮಹಾರಾಜನಿಗೆ, ಜ್ಞಾನೋಪದೇಶ ಮಾಡಿದ ಕುರುಪುರವೇ ಈ ಪವಿತ್ರ ಸ್ಥಳ. ಮಗು ಮಾಧವಾ! ಕುರುವಪುರ ಮಹತ್ಮೆ ಆದಿಶೇಷರೂ ವರ್ಣಿಸಲಸಾಧ್ಯ.

## ಶ್ರೀ ಸದಾಶಿವಬ್ರಹ್ಮೇಂದ್ರ ಪೂರ್ವ ಗಾಥೆ

ಶ್ರೀಪಾದ ಶ್ರೀವಲ್ಲಭರ ಶ್ರೀ ಚರಣಗಳಿಗೆ ನಾನು ನಮಿಸಿದೆನು. ಶ್ರೀವಲ್ಲಭರು ಕರುಣೆಯಿಂದ, "ಮಗೂ! ಈ ನನ್ನ ದಿವ್ಯ ಭವ್ಯ ದರ್ಶನವು ಬಹಳ ಅಲಭ್ಯ. ನಿನ್ನೊಡನೆ ಮಾತಾಡಿದ ಆ ಮಹಾಸರ್ಪ ಬರುವ ಶತಮಾನದಲ್ಲಿ ಜ್ಯೋತಿರಾಮಲಿಂಗ ಸ್ವಾಮಿಯಾಗಿ ಅವತರಿಸಿ, ಜ್ಯೋತಿ ರೂಪದಲ್ಲೇ ಅಂತರ್ಧಾನವಾಗುವರು. ನಿನ್ನ ಜೊತೆ ಮಾತಾಡಿದ ಮತ್ತೊಂದು ಮಹಾಸರ್ಪ ಸದಾಶಿವ ಬ್ರಹ್ಮೇಂದ್ರರಾಗಿ ಮುಂದಿನ ಶತಮಾನದಲ್ಲಿ ಅವತರಿಸಿ, ಅನೇಕ ಲೀಲೆಗಳು ತೋರಿಸುವರು. ಶ್ರೀ ಪೀಠಿಕಾಪುರ ನನಗೆ ಅತ್ಯಂತ ಪ್ರೀತಿಪಾತ್ರ. ನನ್ನ ಪಾದುಕೆಗಳು, ಪೀಠಿಕಾಪುರದಲ್ಲಿ ಪ್ರತಿಷ್ಠಿಸಲಾಗುವವು. ನಾನು ಜನ್ಮಿಸಿದ ನನ್ನ ಮಾತಾ ಮಹಾಗೃಹದಲ್ಲೇ, ನನ್ನ ಪಾದುಕೆಗಳು ಪ್ರತಿಷ್ಠಿಸಲಾಗುವವು. ನನ್ನ ಜನ್ಮಕರ್ಮಗಳು ದಿವ್ಯ, ರಹಸ್ಯ ಮತ್ತು ಗೋಪನೀಯಗಳು. ಶ್ರೀ ಪೀಠಿಕಾಪುರದೊಳು,

ನನ್ನ ಪಾದುಕೆಗಳು ಪ್ರತಿಷ್ಠ ಆಗಲಿರುವ ಸ್ಥಳದಿಂದ, ಪಾತಾಳಕ್ಕೆ ಹೋಗಿ, ಅಲ್ಲಿ ತಪೋ ನಿಷ್ಠೆಯಲ್ಲಿರುವ ಕಾಲನಾಗರನ್ನು ಭೇಟಿ ಮಾಡಿ ಬನ್ನಿ'' ಎಂದರು.

ಶ್ರೀ ಪಳನಿಸ್ವಾಮಿ ಮುಗುಳ್ನಗೆಯಿಂದ, ''ಮಗೂ ಮಾಧವಾ! ಪೀಠಿಕಾಪುರದಲ್ಲಿನ ಕಾಲನಾಗರನ್ನು ಕುರಿತು, ನಂತರ ಹೇಳಬಹುದು. ನಾವು ಬೇಗನೆ ಸ್ನಾನ ಮಾಡಿ, ಧ್ಯಾನಮಾಡಬೇಕು. ಇದು ಶ್ರೀಪಾದ ಶ್ರೀವಲ್ಲಭರ ಆಜ್ಞೆ'' ಎಂದು ತಿಳಿಸಿದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**




ಶ್ರೀಪಾದ ಶ್ರೀ ವಲ್ಲಭ ದತ್ತಾತ್ರೇಯ ದೇವಸ್ಥಾನ, ಶ್ರೀ ಕ್ಷೇತ್ರ ಕುರುವಪುರ (ರಾಯಚೂರು)



ಶ್ರೀ ಕ್ಷೇತ್ರ ಕುರುವಪುರ (ರಾಯಚೂರು)

## ಅಧ್ಯಾಯ - 4

# ಶಂಕರ ಭಟ್ಟರಿಗೆ ಕುರುವಪುರದಲ್ಲಿ ವಾಸವಾಂಬಿಕ ದರ್ಶನ

ಪಳನಿ ಸ್ವಾಮಿಗಳ ಆಜ್ಞಾನುಸಾರ ನಾವು ಮೂರು ಜನ, ಧ್ಯಾನ ಮಾಡಲು ಉಪಕ್ರಮಿಸಿದೆವು. ಶ್ರೀಗಳು, ''ಮಗು ಮಾಧವಾ! ಶಂಕರಾ! ನಾವು ಮೂವ್ವರೂ ಧ್ಯಾನಸ್ಥರಾಗುವೆವು. ನಂತರ, ಆದ ಧ್ಯಾನ ಅನುಭೂತಿಗಳನ್ನು ಚರ್ಚಿಸಿಕೊಳ್ಳೋಣ. ಇದು ಶ್ರೀಪಾದರ ಅಜ್ಞೆ ಆದ್ದರಿಂದ, ತಪ್ಪದೇ ಏನೋ ದೊಡ್ಡ ಆಧ್ಯಾತ್ಮಿಕ ಪರಿಣಾಮ ನಮಗೆ ಮುಂದೆ ಅನುಭವಕ್ಕೆ ಬರಲಿದೆ. ಭವಷ್ಯತ್ತಿನಲ್ಲಿ ಹೂಣ ಶಕ ವ್ಯವಹಾರದಲ್ಲಿರುವುದು. ಇಂದು ಹೂಣ ಶಕ ರೀತ್ಯಾ 25-5-1336. ಇಂದು ಶುಕ್ರವಾರ. ಸರ್ವ ಶುಭಯೋಗ ಕೂಡಿದ, ಯೋಗ ಸಂಪೂರ್ಣವಾದ ಮಹತ್ತರ ದಿನ. ನಮ್ಮ ಜೀವನದಲ್ಲಿ ಈ ದಿನ ಬಹಳ ಪ್ರಾಮುಖ್ಯತೆ ಹೊಂದಿದೆ. ನಾನು ನನ್ನ ಸ್ಥೂಲ ಶರೀರವನ್ನಿಲ್ಲೇ ಬಿಟ್ಟು, ಸೂಕ್ಷ್ಮಶರೀರದಿಂದ, ಕುರುವಪುರಕ್ಕೆ ಹೋಗುವೆನು. ಒಂದೇ ಸಲ, ನಾಲಕ್ಕೈದು ಕಡೇ ಒಂದೇ ಸಮಯದಲ್ಲಿ ವಿಹರಿಸುವುದು ನನಗೆ ಬಾಲ್ಯ ಕ್ರೀಡೆ. ನಾವೆಲ್ಲಾ ಶ್ರೀಪಾದ ಶ್ರೀವಲ್ಲಭರ ಧ್ಯಾನದಲ್ಲಿ ಇರೋಣ. ಅವರ ಆಜ್ಞೆ ಆದ ಮೇಲೆ, ನಾನು ಸೂಕ್ಷ್ಮರೂಪದೊಳು ಕುರುವಪುರದಲ್ಲಿನ ಅವರ ಸನ್ನಿಧಿ ಸೇರುವೆನು'' ಎಂದು ಹೇಳಿದರು.

### ಸ್ವಾಮಿಯ ಅನುಗ್ರಹ ಸೌಲಭ್ಯ ಪದ್ಧತಿ

ಪಳನಿ ಸ್ವಾಮಿಗಳ ಮಾತು ಕೇಳಿ ನನಗೆ ವಿಚಿತ್ರ ಅಲೋಚನೆ ಬರಲೂ ''ಸ್ವಾಮಿ! ಮಾಧವ ಶ್ರೀವಲ್ಲಭರ ದಿವ್ಯಮಂಗಳ ರೂಪದರ್ಶಿಸಿದ, ತಾವು ಸದಾ ಶ್ರೀವಲ್ಲಭರೊಡನೆ ಸೂಕ್ಷ್ಮರೂಪದಲ್ಲಿ ವ್ಯವಹರಿಸುವರು. ಆದರೇ ನನಗೆ ಅವರ ನಾಮ ಹೊರತು, ರೂಪ ತಿಳಿಯದೇ! ನಾನ್ಹೇಗೆ ಅವರನ್ನ ಧ್ಯಾನಿಸಲಿ?'' ಎಂದೆನು. ಪಳನಿ ಸ್ವಾಮಿ ಮುಗುಳ್ನಗೆಯಿಂದ, ''ಮಗು! ಶ್ರೀಪಾದರ ಮೇಲೆ ಭಕ್ತಿ ಇದ್ದಲ್ಲಿ ಎಲ್ಲವೂ ಸಿದ್ಧಿಸುವುದು. ಆಮೆ ತನ್ನ ಮರಿಯನ್ನು ಬಿಟ್ಟು ಅದೆಷ್ಟು ದೂರವಿದ್ದರೂ, ಅಲೋಚನೆಯ ತರಂಗಗಳು, ಮರಿಯನ್ನು ಕಾಪಾಡುವವು. ಬೆಕ್ಕು ತನ್ನ ಮರಿಗಳನ್ನು ಬಾಯಲ್ಲಿ ಕಚ್ಚಿಕೊಂಡು ಮನೆ ಮನೆ ಸುತ್ತುವುದು. ಸುರಕ್ಷ ಸ್ಥಾನವೆನಿಸುವ ಮನೆಯಲ್ಲಿ, ಅವುಗಳನ್ನಿಡುವುದು. ಹಾಗೆಯೇ ಶ್ರೀಪಾದರು, ಮೊದಲಿಗೆ ತಮ್ಮ ಭಕ್ತರನ್ನು ಆಮೆ ಮರಿಯ ರೀತಿ ಪಾಲಿಸುವರು. ಒಂದಿಷ್ಟು ಜ್ಞಾನ ಅರ್ಜಿಸಿದ ನಂತರ ಬೆಕ್ಕು-ಮರಿಗಳ ರೀತ್ಯಾ ಭಕ್ತಪಾಲನೆ ಮಾಡುವರು. ನಂತರ ಕೋತಿ-ಮರಿಗಳ ರೀತಿ. ಇಲ್ಲಿ ಮರಿಗೆ, ಅದರ ತಾಯಿಯನ್ನು ಹಿಡಿದು ಬಾಳುವ ಅಗತ್ಯ. ಮತ್ತಷ್ಟು ಜ್ಞಾನದನಂತರ, ಮೀನು ಮರಿ, ಸ್ವೇಚ್ಛೆದಿಂದ ತಾಯಿ ಮೀನಿನ ಹಿಂಬಾಲಿಸುವಂತೆ, ಭಕ್ತರಿರುವರು. ನೀನು ಧ್ಯಾನಮಗ್ನನಾದರೇ ಅವರೇ ನಿನಗೆ ದರ್ಶನ ನೀಡುವೆರು. ಶ್ರೀವಲ್ಲಭರು ಮುಖ್ಯವಾದ ಭವಿಷ್ಯನ್ನಿರ್ಣಯವದ್ಯಾವುದೋ ಮಾಡಬಯಸಿ, ನನ್ನನ್ನ ಸೂಕ್ಷ್ಮರೂಪದಲ್ಲಿ ಆ ಮಹತ್ತರ ದಿನ, ಕುರವಪುರಕ್ಕೆ ಬರ ಮಾಡಿಸಿಕೊಂಡರು. ಧ್ಯಾನದಲ್ಲಿದ್ದು, ಅವರ ಆಜ್ಞೆಯಾದ ಕ್ಷಣವೇ, ಕುರುವಪುರ ಸೇರುವೆನು. ಅಲ್ಲಿ ನಡೆಯಲಿರುವ ಮಹತ್ತರ ಸಂಘಟನೆ ನೋಡುವ ಭಾಗ್ಯ ಪ್ರಭುಗಳು ಕೊಡುವರು'' ಎಂದು ಹೇಳಿ ಧ್ಯಾನಸ್ಥರಾದರು, ನಂತರ ನಾವಿಬ್ಬರೂ ಸಹಾ ಧ್ಯಾನಸ್ಥರಾದೆವು.

ಈ ರೀತಿ 10 ಘಳಿಗೆಯ ಧ್ಯಾನದ ನಂತರ ಆಶ್ಚರ್ಯಕರವಾಗಿ, ಎಲ್ಲರೂ ಒಂದೇ ಸಲ ಚೈತನ್ಯರಾದೆವು. ಶ್ರೀಪಳನಿ ಸ್ವಾಮಿ

ಬಹಳಷ್ಟು ಉಲ್ಲಾಸವಾಗಿದ್ದರು. ನಾನೂ, ಮಾಧವಾ ಶ್ರೀಗಳನ್ನು, ಅವರ ಧ್ಯಾನಾನುಭೂತಿ ವಿವರಿಸಲೂ ಕೇಳಿಕೊಂಡೆವು. ಮುಗುಳ್ನಗೆಯಿಂದ ಹೀಗೆ ಹೇಳಿದರು.

## ಶಿವಶರ್ಮ ಕಥೆ - ಶ್ರೀಪಾದ ಶ್ರೀವಲ್ಲಭರ ಚಿಂತನಾ ಫಲಿತ

ಈ ಕಲಿಯುಗದ ಜನರಿಗದೆಷ್ಟು ಭಾಗ್ಯ! ಕುರುವಪುರ ಅಷ್ಟು ಚಿಕ್ಕ ಗ್ರಾಮವಾದರೂ, ಅಲ್ಲಿನ ಶ್ರೀಪಾದರ ಮಹತ್ವವನ್ನು ಗುರ್ತಿಸಿದ ವೇದ ಪಂಡಿತರು, ಸದ್ಬ್ರಾಹ್ಮಣರು ಆದ ಶಿವಶರ್ಮ ಎಂಬುವವರು, ಪತ್ನಿ ಅಂಬಿಕೆಯ ಜೊತೆ ಕುರುವಪುರದಲ್ಲೇ ವಾಸವಿದ್ದರು. ಅಲ್ಲಿ ಇವರದೇ ಬ್ರಾಹ್ಮಣ ಕುಟುಂಬ. ನಿತ್ಯವೂ ದ್ವೀಪದಿಂದೀಚೆಗೆ ಅವರು ಬಂದು, ಬ್ರಾಹ್ಮಣ ಕಾರ್ಯಗಳಿಂದ ಹಣ ಸಂಪಾದಿಸುತ್ತಿದ್ದರು. ಅವರು, ಕಾಶ್ಯಪ ಗೋತ್ರ, ಯಜುರ್ವೇದದ ದೊಡ್ಡ ಪಂಡಿತರಾಗಿದ್ದರು. ಅವರಿಗೆ ಒಂದೆರಡು ಸಂತಾನ ಅತಿ ಸ್ವಲ್ಪಕಾಲಕ್ಕೆ ತೀರಿಹೋಗುತ್ತಿದ್ದರು, ಒಂದು ಗಂಡು ಮಗು ಉಳಿದುಕೊಂಡಿತು. ಅದು, ದುರದೃಷ್ಟದಿಂದ, ಮಂದಬುದ್ಧಿ ಉಳ್ಳವನಾಗಿದ್ದ. ಪ್ರಯೋಜನವಿಲ್ಲದ ಪುತ್ರನನ್ನ ಪಡೆದ ದುಃಖದಲ್ಲಿ, ಶಿವಶರ್ಮ ದುರ್ಬಲನಾದನು. ಒಮ್ಮೆ ಶ್ರೀವಲ್ಲಭರ ಮುಂದೆ, ವೇದ ಪಠನಾನಂತರ, ಮೌನವಾಗಿನಿಂತಿದ್ದನು. ಸ್ವಾಮಿ ವಿಷಯವನ್ನರಿತು, ''ಶಿವಶರ್ಮಾ! **ಇತರ ಚಿಂತೆಗಳನ್ನು ಮರೆತು, ನನ್ನನ್ನೇ ಧ್ಯಾನಿಸುವರಿಗೆ ನಾನು ಗುಲಾಮನು.** ನಿನ್ನ ಕೋರಿಕೆ ಏನೆ''ಂದರು ಅದಕ್ಕೆ ಶಿವಶರ್ಮ, ''ಸ್ವಾಮಿ! ನನ್ನ ಪುತ್ರ ನನಗಿಂತ ಪಂಡಿತ ಮತ್ತು ವಚನಕಾರನಾಗಬೇಕೆಂದು ಬಯಸಿದೆ. ಆದರೇ ಅವನೊಬ್ಬ ಶುಂಠನಾಗಿರುವನು. ಅವನನ್ನ ದೊಡ್ಡ ಪಂಡಿತನಾಗಿ ಮಾಡುವುದು, ತಮಗೆ ಸುಲಭ. ಇದರ ಮೇಲೆ ತಮ್ಮ ಚಿತ್ತ'' ಎಂದು ನುಡಿದರು.

ಶ್ರೀಪಾದರು, ''ಮಗು! **ಎಂತವರಿಗಾದರೂ ಪೂರ್ವಜನುಮ ಕರ್ಮಫಲ ಅನಿವಾರ್ಯ. ಸೃಷ್ಟಿ ಎಲ್ಲವೂ, ತಪ್ಪಿಸಿಕೊಳ್ಳಲಾರದ ಶಾಸನಕ್ಕೆ ಒಳಗಾಗಿ ನಡೆಯುತ್ತಿರುವುದು. ಮಹಿಳೆಯರಿಗೆ ಪೂಜಾಫಲವಾಗಿ ಗಂಡ, ದಾನದಿಂದ ಮಕ್ಕಳು ಲಭಿಸುವರು. ಸದಾ ಸತ್ಪಾತ್ರದಾನ ಮಾಡಬೇಕು.** ಯೋಗ್ಯವಿಲ್ಲದವರಿಗೆ ದಾನ ಮಾಡಿದ್ದಲ್ಲಿ ಪಾಪಪ್ರಾಪ್ತಿ ಆಗುವುದು. **ಸದ್ಬುದ್ಧಿ ಉಳ್ಳವರಿಗೆ ದಾನ ಕೊಟ್ಟಲ್ಲಿ, ಅವರು ಮಾಡುವ ಪುಣ್ಯಕಾರ್ಯಗಳ ಫಲದಲ್ಲಿ ಸ್ವಲ್ಪ ದಾನಿಗೆ ಬರುವುದು.** ಕೆಟ್ಟ ಬುದ್ಧಿಯುಳ್ಳವರಿಗೆ ದಾನ ಕೊಟ್ಟಲ್ಲಿ ಆವನು ಪಡೆಯುವ ಪಾಪದಲ್ಲಿ ಸಹಾ ಸ್ವಲ್ಪ ಕೊಟ್ಟವನೂ ಪಡೆಯುವನು. **ದಾನ, ಅಹಂಕಾರವಿಲ್ಲದೇ ಮಾಡಬೇಕು. ಆಗಲೇ ಸತ್ಫಲಿತ ಲಿಭಿಸುವುದು.** ಪೂರ್ವ ಜನುಮದ ಫಲವೇ ನಿನ್ನ ಅವಿವೇಕತ್ವ ಉಳ್ಳ ಮಗ. ನೀವು ಅಲ್ಪಾಯುಷ್ಯವಿರುವ ಮಗು ಬೇಡ, ಪುರ್ಣಾಯುಷ್ಯುಬಯಸಿದಿರಿ. ಹಾಗೆಯೇ ನಾನು ಒಳ್ಳೆ ಆಯುಷ್ಯು ಉಳ್ಳ ಸಂತಾನ ಕೊಟ್ಟಿದ್ದೇನೆ. ಅವನ ಪೂರ್ವ ಜನುಮ ಪಾಪ ಹರಿಸಿ, ಅವನನ್ನ ಒಳ್ಳೆಯ ಪಂಡಿತನಾಗಿ ಮಾಡಬೇಕಾದರೇ, ನೀನು ನಿನ್ನ ಜೀವನವನ್ನು ತ್ಯಾಗಮಾಡಬೇಕು'' ಎಂದು ನುಡಿದರು. ಅದಕ್ಕೆ ಶಿವಶರ್ಮರು, ''ಸ್ವಾಮಿ! ನಾನೀಗ ವೃದ್ಧನಾಗಿದ್ದೇನೆ. ಈ ಜೀವನ ತ್ಯಾಗಕ್ಕೆ ಸಂಸಿದ್ಧನು'' ಎಂದನು.

ನನ್ನ ಮಗ, ಬೃಹಸ್ಪತಿಯಂತಹ ಪಂಡಿತ, ವಚನಕಾರನಾದರೇ ಸಾಕು. ನನಗಿನ್ನೇನು ಬೇಕು? ಎಂದರು. ಆಗ ಘಟನಾಘಟಿನ ಸಮರ್ಥರಾದ ಶ್ರೀಚರಣರು, ''ಸರಿ! ನೀನು ಸ್ವಲ್ಪ ಸಮಯದಲ್ಲೇ ಮರಣಿಸುವೆ. ನಂತರ ಸೂಕ್ಷ್ಮರೂಪದಲ್ಲಿ ಧೀಶಿಲಾನಗರದಲ್ಲಿನ ನಿಂಬೆವೃಕ್ಷ ಬುಡದತ್ತ ಇರುವ, ಗುಹೆಯಲ್ಲಿ, ತಪಸ್ಸು ಮಾಡುತ್ತಾ ಸ್ವಲ್ಪ ಕಾಲ ಇರುವೆ. ನಂತರ, ಪುಣ್ಯಭೂಮಿಯಾದ ಮರಾಠದಲ್ಲಿ ಜನುಮಿಸುವೆ. ಈ ವಿಷಯ ನಿನ್ನ ಧರ್ಮಪತ್ನಿಗೆ ಯಾವ ಕಾರಣಕ್ಕೂ ತಿಳಿಸಬೇಡ'' ಎಂದು ಆಜ್ಞಾಪಿಸಿದರು.

## ಶ್ರೀಪಾದ ಶ್ರೀವಲ್ಲಭರ ಮುಂದಿನ ಜನುಮ ಆವಿಷ್ಕರಣೆ

ಶೀಘ್ರವೇ ಶಿವಶರ್ಮ ಮೃತಪಟ್ಟರು. ಪತ್ನಿ ಅಂಬಿಕ, ಮಗುವಿನೊಂದಿಗೆ ಭಿಕ್ಷೆ ಎತ್ತಿ ಜೀವನ ಕಳೆಯುತ್ತಿದ್ದಳು. ಅಕ್ಕಪಕ್ಕದವರ ಹೇಳನೆಗೆ ತಡಿಯಲಾರದೇ, ಆ ಮಂದಬುದ್ಧಿಯ ಶುಂಠ, ಆತ್ಮಹತ್ಯೆ ಮಾಡಿಕೊಳ್ಳಲೂ ನದಿಯ ಕಡೆ ಓಡಲೂ, ಅವನ ತಾಯಿ ಸಹಾ ಆತ್ಮಹತ್ಯೆಗೆ ಹಿಂಬಾಲಿಸಿದಳು. ಪೂರ್ವಪುಣ್ಯಫಲವಾಗಿ, ಶ್ರೀಪಾದರು ಎದುರಾಗಿ ಬಂದು, ಅವರ ಯತ್ನವನ್ನು ತಡೆದು, ಆ ಮೂರ್ಖಬಾಲಕನನ್ನು ಮಹಾಪಂಡಿತನಾಗಿ ಮಾಡಿದರು. ಅಂಬಿಕಳ ತನ್ನ ಶೇಷಜೀವನ, ಶಿವಪೂಜೆ ಮಾಡುತ್ತಿರಲೂ ಸೂಚಿಸಿದರು. ಶನಿವಾರ ಪ್ರದೋಷ ಕಾಲ ಮಾಡುವ ಶಿವಪೂಜೆಯ ವಿಶೇಷತ್ವವನ್ನು ವಿವರಿಸಿ, ಅಂಬಿಕಾಳಿಗೆ ಬರುವ ಜನ್ಮದಲ್ಲಿ ತನಗೆ ಸಮಾನನಾದ ಪುತ್ರಲಾಭದ ವರವನ್ನಿತ್ತರು. ಆದರೇ, ಅವರ ಸಮಾನರು ಆ ಮೂರು ಲೋಕದಲ್ಲಿ ಯಾರೂ ಇರಬಾರದು. ಆದ್ದರಿಂದ ಅವರೇ ಅಂಬಿಕಾಳಿಗೆ ಮಗನಾಗಿ ಬರಲೂ ತೀರ್ಮಾನಮಾಡಿದರು.

## ನೃಸಿಂಹ ಸರಸ್ವತಿ ಜನ್ಮ ಸಂಕಲ್ಪ

‘‘ಸಮಸ್ತ ಕಲ್ಯಾಣ ಗುಣಗಳುಳ್ಳ, ಎಲೈ ವಾಸವಾಂಬಿಕೆ! ನಿನ್ನ ಇಚ್ಛೆಯೇ ಪೂರೈಸಲಿ! ನಾನು ಇನ್ನು 14 ವರುಷ, ಅಂದರೇ **ನನಗೆ 30 ವರುಷ ಬರುವವರೆಗೂ, ಶ್ರೀಪಾದ ಶ್ರೀವಲ್ಲಭರ ರೂಪದಲ್ಲೇ ಇದ್ದು, ನಂತರ ಕಾಣದೇ ಇರುವೆ. ಮತ್ತು ಸನ್ಯಾಸ ಧರ್ಮವನ್ನು ಎತ್ತಿ ತೋರಿಸಲೂ, ನೃಸಿಂಹ ಸರಸ್ವತಿ ನಾಮದೊಳು, 80 ವರುಷ ಬಾಳುವೆ. ನಂತರ ಕದಳೀವನದಲ್ಲಿ 300 ವರುಷ ತಪೋ ನಿಷ್ಠೆಯಲ್ಲಿದ್ದು, ಪ್ರಜ್ಞಾಪುರದಲ್ಲಿ ಸ್ವಾಮಿ ಸಮರ್ಥನಾಗಿ, ಅವತಾರವನ್ನು ಕೊನೆ ಮಾಡುವೆ.** ಅವಧೂತರ ಮತ್ತು ಸಿದ್ಧ ಪುರುಷರ ರೂಪಗಳಿಂದ, ನನ್ನ ಮಹಾಲೀಲೆಗಳನ್ನು ಮತ್ತು ಮಹಿಮೆಗಳನ್ನು ವ್ಯಕ್ತಪಡಿಸುತ್ತಾ, ಲೋಕವನ್ನು ಧರ್ಮಕರ್ಮಗಳಲ್ಲಿ, ಇಚ್ಛೆಯಿಂದ ಮಾನವ ಪಾಲ್ಗೊಳ್ಳಲೂ ನಾನು ಮಾಡುವೆನು’’ ಎಂದು ಶ್ರೀಗಳು ನುಡಿದರು.

ಯುಗಗಳು ಕಳೆಯುತ್ತಾ ಮಾನವನ ಶಕ್ತಿ ಕ್ಷೀಣಿಸುವುದು. ಆದ್ದರಿಂದ ಪರತತ್ವ, ಋಷೀಶ್ವರರ ಬಯಕೆಯಂತೆ, ಕೆಳಮಟ್ಟಕ್ಕೆ ಇಳಿಯುತ್ತಿರುವುದು. **ಪ್ರಭುಗಳು ಶರೀರವೆತ್ತಿ ಅವತರಿಸುವುದು, ಸಂಪೂರ್ಣ ಅನುಗ್ರಹ ಎಂದು ಸೂಚಿಸುತ್ತದೆ.** ಹೀಗೆ ಪ್ರಭುತತ್ವ ಕೆಳಸ್ಥಾಯಿಗೆ ಇಳಿಯುತ್ತಿರುವುದರಿಂದ, ಸ್ವಲ್ಪ ಆದರೂ, ಶ್ರಮೆ ಇಂದ ಮಾನವರು, ಸತ್ಫಲಿತ ಹೊಂದಲು ಆಗುತ್ತಿರುವುದು. ಆದ್ದರಿಂದಲೇ ಕಲಿಯುಗದ ಮಾನವರು ಧನ್ಯರು. **ಕೇವಲ ಸ್ಮರಣದಿಂದಲೇ ದತ್ತ ಪ್ರಭುಗಳ ಅನುಗ್ರಹ ಆಗುತ್ತಿರುವುದು. ಮಾನವ, ಕೆಳಮಟ್ಟಕ್ಕೆ ಬೀಳಲೂ ಎಷ್ಟು ಅವಕಾಶಗಳಿವೆಯೋ, ಅದರ ಎರಡರಷ್ಟು ಅವಕಾಶಗಳು, ಶ್ರೀ ಚರಣರ ಅನುಗ್ರಹ ಹೊಂದಲು ಇವೆ. ಸ್ಮರಣೆ, ಅರ್ಚನೆ ಮುಂತಾದ ಕ್ರಿಯೆಗಳಿಂದ, ಶ್ರೀಪಾದ ಪ್ರಭುಗಳ ಜೊತೆ ಸಾಂಗ್ಯ ಮೊದಲಾಗುವುದು. ಇದರಿಂದ, ಆಶ್ರಿತರ ಪಾಪಕರ್ಮಗಳು, ದೋಷಪೂರಿತವಾದ ವಿಷಯ ವಾಸನೆಗಳು ಮತ್ತು ಸಂಸ್ಕಾರ ಇವೆಲ್ಲಾ, ಶ್ರೀಪಾದರ ಚೈತನ್ಯದೊಳಗೆ ಪ್ರವೇಶಿಸಿ, ಶ್ರೀಗಳಿಂದ ಒಳ್ಳೆಯ ಶುಭಸ್ಪಂದನೆಗಳು, ಅವರ ಆಶ್ರಿತರ ಶರೀರದೊಳಿಗೆ ಪ್ರವೇಶಿಸುವುದು.**

**ಶ್ರೀ ಚರಣರು, ತಮ್ಮ ಚೈತನದಲ್ಲಿ ಸೇರಿದ ಪಾಪಗ್ರಸ್ತರನ್ನು, ಅವರ ಕಪ್ಪುವರ್ಚಸ್ಸನ್ನು, ಒಂದೇ ಪವಿತ್ರ ನದೀ ಸ್ನಾನದಲ್ಲೊ ಅಥವಾ ಅವರ ಯೋಗಾಗ್ನಿಯಲ್ಲೊ ಸುಟ್ಟು ಬೂದಿ ಮಾಡುವರು. ತಾವೇ ತಪಸ್ಸನ್ನು ಆಚರಿಸಿ, ಆ ತಪಃಫಲವನ್ನು ಆಶ್ರಿತರಿಗೆ ಹಂಚುವರು. ಈ ರೀತಿ ಕರ್ಮ ಸೂತ್ರವನ್ನು ದಾಟದೇ ಭಕ್ತರಕ್ಷಣೆ ಮಾಡುವರು. ಅಗತ್ಯವಿದ್ದರೇ ಜಡ ಸ್ವರೂಪವಾದ ಕರ್ಮತತ್ವವನ್ನು**

**ಶಾಸನ ಗೊಳಿಸಿ, ಅವರ ಆಶ್ರಿತರಿಗೆ ರಕ್ಷಣೆ, ವಿಮುಕ್ತಿ ದೊರಕಿಸುವರು. ಪ್ರತಿಕ್ಷಣ, ಅವರ ಭಕ್ತರ ಸಲುವಾಗಿಯೇ, ಕರ್ಮ ಧ್ವಂಸವನ್ನು ಮಹಾ ಉಗ್ರರಾಗಿ ಮಾಡುವರು. ಆದ್ದರಿಂದ, ಅವರ ಪಾದುಕೆಗಳನ್ನು ಹಿಡಿದವರು, ಅವರು ತಿಳಿಯದಂತೇ ಕರ್ಮಬಂಧನಗಳಿಂದ ವಿಮುಕ್ತಿ ಹೊಂದಿರುವರು.**

ಈ ರೀತಿಯ ಪಳನಿಸ್ವಾಮಿಯ ನುಡಿಗಳಿಗೆ ನಾನು, ''ಸ್ವಾಮಿ! ಶನಿ ಕಾಟವನ್ನು ಶ್ರೀ ಶಂಕರನೂ ತಪ್ಪಿಸಲಾರ ಎನ್ನುವರೇ ಗ್ರಹ ಸಂಬಂಧದ ನೋವುಗಳನ್ನು ಶ್ರೀ ಗುರುಸಾರ್ವಭೌಮರು ಹೇಗೆ ದೂರಮಾಡುವರೋ ದಯವಿಟ್ಟ ತಿಳಿಸಿ'' ಎಂದು ಪ್ರಶ್ನಿಸಿದೆ.

''ಮಗು ಶಂಕರಾ! ಖಗೋಳದ ಗ್ರಹಗಳು, ಜೀವಿಗೆ ಶತೃವು ಅಲ್ಲ, ಮಿತ್ರನೂ ಅಲ್ಲ. ಮನುಷ್ಯ ಜನ್ಮಿಸುವಾಗ, ಅವನ ಪ್ರಾರಬ್ಧ ಕರ್ಮಾನುಗುಣವಾಗಿ, ಗ್ರಹಸ್ಫುಟದಿಂದ ಹುಟ್ಟಿ, ಅಂತಹಾ ಗ್ರಹಚಾರದ ಶುಭ, ಅಶುಭಗಳನ್ನು ಅನುಭವಿಸುತ್ತಾನೆ. **ಗ್ರಹಗಳಿಂದ ಹೊರಬೀಳುವ ಸೂಕ್ಷ್ಮಕಿರಣಗಳು ಅಶುಭ ಉಂಟು ಮಾಡುತ್ತಿದ್ದರೇ, ಅದರ ದೋಷ ತೊಲಗಿಸಲೂ, ಮಂತ್ರ, ತಂತ್ರ ಮತ್ತು ಯಂತ್ರಗಳು ಫಲಿಸದಿದ್ದರೇ, ಆಗ ಜಪ, ತಪ ಮತ್ತು ಹೋಮಗಳನ್ನು ಆಶ್ರಯಿಸಬೇಕು. ಆಗಲೂ ಪ್ರಯೋಜನವಿಲ್ಲದಿದ್ದರೇ, ಶ್ರೀ ಗುರುಪಾದುಕೆಗಳೇ ಗತಿ, ಶ್ರೀ ಚರಣರು ಸರ್ವಶಕ್ತಿ ಸಂಪನ್ನರು.** ಶಕ್ತಿಗಳಲ್ಲಿ ಒಳ್ಳೆಯ ಮತ್ತು ಕೆಟ್ಟ ಶಕ್ತಿಗಳಿರುತ್ತವೆ. ತದನುಸಾರವಾದ ಸ್ಪಂದನೆಗಳು ಶುಭ, ಅಶುಭಗಳನ್ನುಂಟು ಮಾಡುವವು. ಪ್ರತಿ ಗ್ರಹವೂ, ಮಾನವನ ಕೆಲವು ಶರೀರ ಭಾಗಗಳಮೇಲೆ ಅಧಿಕಾರ ಹೊಂದಿರುವವು. ಗ್ರಹಬಾಧೆ ಸಂಭವಿಸಿದಾಗ ಮಾನವ ಶರೀರದ, ಯಾವ ಭಾಗದ ಆಧಿಪತ್ಯ ಹೊಂದಿರುವುದೋ, ಅಲ್ಲಿ ರೋಗ ರುಚಿನಗಳನ್ನುಂಟು ಮಾಡುತ್ತದೆ. ವಿಶ್ವ ಚೈತನ್ಯದಿಂದ ಹೊರಬೀಳುವ ಸೂಕ್ಷ್ಮ ಸ್ಪಂದನೆಗಳನ್ನು ಹೊಂದುವಾಗ, ಅನಿಷ್ಟ ಫಲಗಳು ಕಂಡುಬರುವವು. ಸ್ಪಂದನೆಗಳಿಂದ ಆಗುವ ಆಕರ್ಷಣಾ, ವಿಕರ್ಷಣೆಗಳಿಂದ, ಪರಿಣಾಮ ಆಗುವುದು. ಕೊನೆ ಇಲ್ಲದೇ, ಸಜ್ಜನರೊಡನೆ ಮಸಲುತ್ತಿರುವ ಒಳ್ಳೆಯ ಪುರುಷ, ದುರ್ಜನ ಸಾಂಗತ್ಯ ಹೊಂದುವುದು ನೀಚರ ಸಹವಾಸ. ಕಾರಣವಿಲ್ಲದ್ದ ಜಗಳಗಳು, ಬಂಧುಗಳಿಂದ ದೂರವಾಗುವುದು, ತನ್ನವರ ಜೊತೆ ಕಲಹ, ಎಲ್ಲರಿಂದ ತ್ಯಜಿಸಲ್ಪಡುವುದು ಮುಂತಾದ ಅನಿಷ್ಟಗಳು ಪ್ರಾಪ್ತಿಸುವವು. ಹೀಗೆ, ವಿಶ್ವಶಕ್ತಿಯ ಸ್ಪಂದನೆಗಳು, ಕಾರಣ ಭೂತಗಳಾಗಿ, ಕೆಲಕಾಲ ಆಯಾ ಮಾನವರನ್ನು ಪೀಡಿಸುವುದು ಸ್ಥಿತಿ ಕಾರ್ಯ. ಕಾಲ ಶಕ್ತಿ ಸ್ವರೂಪ. ಸ್ವಲ್ಪ ಸಮಯದನಂತರ, ಆ ಸ್ಪಂದನೆಗಳು ಅವನನ್ನು ಬಿಟ್ಟು, ವಿಧಿರೀತ್ಯಾ ಬೇರೊಬ್ಬನನ್ನು ಪ್ರವೇಶಿಸುತ್ತವೆ. ಪುನಃಕಾಲಚಕ್ರ ಪ್ರಕಾರ ಫಲಿತ ಉಂಟಾಗುತ್ತಿರುವುದು. ದೈವಭಕ್ತಿ, ಜಪತಪಗಳು ಈ ಸ್ಪಂದನಾ ತೀವ್ರತೆಯನ್ನು ಸ್ವಲ್ಪ ಕಡಿಮೆ ಮಾಡಬಲ್ಲವು. **ಮಹರ್ಷಿಗಳು ವಿಶ್ವ ಕಲ್ಯಾಣಕ್ಕಾಗಿ ಅನೇಕ ಯಜ್ಞಗಳನ್ನು ಮಾಡುವರು. ಅದರ ಫಲವನ್ನು, ಲೋಕ ಕಲ್ಯಾಣಕ್ಕಾಗಿ ಅರ್ಪಿಸುವರು.**

**ಈ ಸತ್ಕಾರ್ಯಗಳಿಂದ, ವಿಶ್ವದಲ್ಲಿನ ಅನಿಷ್ಟಕಾರಕ ಸ್ಪಂದನೆಗಳು, ಮನುಷ್ಯರನ್ನು ಪೀಡಿಸದೇ, ಅವುಗಳು ಉದ್ಭವಿಸಿದ, ಅಂದರೇ ಮೂಲ ಬಿಂದು ಸ್ಥಾನವನ್ನೇ ತಲುಪುತ್ತವೆ. ಇದುವೇ ತಿರೋಧಾನ. ಸ್ವಲ್ಪ ಪುಣ್ಯಕಾರ್ಯಕ್ಕೇ ವಿಶೇಷ ಫಲ ನೀಡುವುದು ಅನುಗ್ರಹ ಎನ್ನುವರು.** ''ಮಗೂ! ಕ್ರಿಯಾಯೋಗ ಸಿದ್ಧಾಂತ ಪ್ರಕಾರ, ಸೃಷ್ಟಿ, ಸ್ಥಿತಿ, ಲಯ ಮತ್ತು ತಿರೋಧಾನ ಪದ್ಧತಿಗಳನ್ನು ನಿನಗೆ ತಿಳಿಸಿದ್ದೇನೆ. ನೀನು ಧ್ಯಾನದಲ್ಲಿ ಕಂಡ ಮುಸಲ್ಮಾನ್ ಸಾಧುವಿನಲ್ಲಿ ಮುಂದೆ, ಶ್ರೀಪಾದ ಶ್ರೀವಲ್ಲಭರ ಶಕ್ತಿ ವಿಶಿಷ್ಟವಾಗಿ ಬೀರುವುದು. ನಿಂಬೆವೃಕ್ಷ ಬುಡದಲ್ಲಿನ, ಭೂಗೃಹದೊಳಗಿನ 4 ನಂದಾ ದೀಪಗಳನ್ನು ನೀನು ನೋಡಿದೆ. ಇದು ಸಾಧಾರಣ ವಿಷಯವಲ್ಲ. ಶ್ರೀಪಾದ ಶ್ರೀವಲ್ಲಭರು, ಯಾವುದೋ ಮಹತ್ತರ ಉದ್ದೇಶ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ನಿನಗೀ ಅವಕಾಶ ಸಂಕಲ್ಪಿಸಿದ್ದಾರೆ. ಅದು ಅವರಿಗೆ

ಮಾತ್ರ ಗೊತ್ತು. ಅವರ ಲೀಲೆಗಳು ಉತ್ಕೃಷ್ಟವಾದ್ದು ಮತ್ತು ಉಪಯೋಗಕರವಾಗಿರುತ್ತವೆ. ಅಷ್ಟೇ ಅಲ್ಲದೇ, ಇತರರು ತಿಳಿಯಬಾರದಂತಹ, ದೈವ ರಹಸ್ಯಗಳು ಸಹಾ ಆಗಿರಬಹುದು. ಅವರು ಒಪ್ಪಿದಷ್ಟು ಮಾತ್ರವೇ ನಾನು ತಿಳಿಸಬಲ್ಲೆನು. **ಸಮಸ್ತ ಸೃಷ್ಟಿಯೂ, ಶ್ರೀಪಾದ ಶ್ರೀವಲ್ಲಭರ ಕಣ್ಣು ಸನ್ನೆಯಿಂದಲೇ ನಡೆಯುವವು. ಅವರಿಗೆ ಅವರೇ ಪ್ರಮಾಣ ಮತ್ತು ಅವರಿಗೆ ಅವರೇ ಸರಿತೂಗುವರು.** ವಿಶ್ವನಿಯಂತ್ರರ ವಿಭೂತಿಗಳು, ಯೋಗಸಿದ್ಧಿಗಳು. ಅವುಗಳ ವಿಶಾಲತೆ, ಆಳೆತೆ ಮತ್ತು ಸರಿ ಸಮತೆ ತಿಳಿಯಲಾರದಂತಹ ವಿಷಯವೇ ಸರಿ!'' ಎಂದು ಪಳನಿಸ್ವಾಮಿಗಳು ವಿವರಿಸಿದರು.

ಶ್ರೀ ಪಳನಿಸ್ವಾಮಿಯ ವಿವರಣೆ ನನ್ನ ಮನಸ್ಸನ್ನು ಆನಂದಗೊಳಸಿತು. ನಾನು ಉಡುಪಿ ಕ್ಷೇತ್ರದಿಂದ ಹೊರಟ ನಂತರ, ಕುರುವಪುರ ಸೇರುವ ತನಕ, ಅವೆಷ್ಟೊ ಚಿತ್ರವಿಚಿತ್ರವಾದ ಸಂಘಟನೆಗಳು ನಡೆಯಿತ್ತು. ಈ ವಿವರಗಳನ್ನೆಲ್ಲಾ ಒಂದು ಗ್ರಂಥ ರೂಪಕ್ಕೆ, ಕುರುವಪುರದಲ್ಲಿ ಶ್ರೀಪಾದ ಶ್ರೀವಲ್ಲಭರ ದರ್ಶನೆ ಆದಾಗ, ಅವರ ಒಪ್ಪಿಗೆ ಪಡೆದು ಮುದ್ರಿಸಬೇಕೆಂದು ಅಂದುಕೊಂಡೆನು.

ಶ್ರೀ ಪಳನಿಸ್ವಾಮಿಗಳು ನನ್ನ ಮನಸ್ಸಿನ ಬಯಕೆಯನ್ನು ಅರಿತು, ''ನಿನ್ನ ಮನಸ್ಸು ಅರ್ಥ ಮಾಡಿಕೊಂಡಿದ್ದೇನೆ. ಮುಂದೆ ಬರುವ ಭಕ್ತ ಜನರ ಹಿತಕ್ಕಾಗಿ, ಶ್ರೀಗಳ ಚರಿತ್ರೆಯನ್ನು ಲಿಖಿಸಬೇಕೆಂದಿದ್ದೀಯ. ಶ್ರೀಪಾದರು ತಪ್ಪದೇ ನಿನ್ನ ಪ್ರಯತ್ನವನ್ನು ಆಶೀರ್ವದಿಸುವರು'' ಎಂದು ನುಡಿದರು. ನಂತರ ಶ್ರೀ ಪಳನಿಸ್ವಾಮಿ ಮಾಧವನನ್ನು, ಧ್ಯಾನಾನುಭೂತಿ ತಿಳಿಸಲು ಕೇಳಿದರು.

## ಶ್ರೀಪಾದ ಶ್ರೀವಲ್ಲಭರ ಜನ್ಮಸ್ಥಾನದಲ್ಲಿ ಅವರ ಪಾದುಕೆಗಳು ಮತ್ತು ಶ್ರೀಪಾದ, ಶ್ರೀ ದತ್ತಾತ್ರೇಯರ, ಶ್ರೀ ನೃಸಿಂಹ ಸರಸ್ವತಿಯರ ವಿಗ್ರಹಗಳ ಪ್ರತಿಷ್ಠೆ

ಶ್ರೀ ಪಳನಿಸ್ವಾಮಿ ಹೀಗೆಂದರು. ''ಮಗೂ, ಮಾಧವಾ! ನೀನು ಕಂಡ ಶ್ರೀಪಾದ ಶ್ರೀವಲ್ಲಭರ ಮಾತಾಮಹಾಗೃಹವು ನಿನ್ನಲ್ಲಿನ ಸರ್ವಶಕ್ತಿಗಳನ್ನು ಆಕರ್ಷಿಸಿದ ಸ್ಥಳ, ಅದೇ ಶ್ರೀಪಾದ ಶ್ರೀವಲ್ಲಭರ ಜನ್ಮಸ್ಥಳ. ಅಲ್ಲಿನ ಪಾದುಕೆಗಳ ಕೆಲ ಭಾಗ ಪಾತಾಳದಲ್ಲಿ, ಅನಂತ ವರುಷಗಳಿಂದ ತಪಸ್ಸಿನಲ್ಲಿರುವ ಋಷಿಗಳು ಇರುವರು. ಆ ಜನ್ಮಸ್ಥಳದಲ್ಲಿ ಮಾತ್ರ ಶ್ರೀಗಳ ಪಾದುಕೆಗಳು ಪ್ರತಿಷ್ಠಿಸಲಾಗುವವು. ತದನಂತರ, ಕೆಲ ವರುಷಗಳಿಗೆ ಶ್ರೀಪಾದ ಶ್ರೀವಲ್ಲಭರ ಚರಿತಾಮೃತ ಬೆಳಕಿಗೆ ಬರುವುದು. ನೀನು ಕೂತು ಧ್ಯಾನಮಾಡಿದ ಸ್ಥಳದಲ್ಲಿ, ಶ್ರೀಪಾದ ಶ್ರೀವಲ್ಲಭರ, ಅವರ ಮೂಲಾವತಾರವಾದ ಶ್ರೀ ದತ್ತಾತ್ರೇಯರ ಮತ್ತು ಅವರ ನಂತರದ ಅವತಾರಿಯಾದ ನೃಸಿಂಹ ಸರಸ್ವತಿಗಳ ವಿಗ್ರಹ ಮೂರ್ತಿಗಳ ಪ್ರತಿಷ್ಠೆ ಯಾಗುವುದು. ಅದರ ನಂತರ, ಆ ಕ್ಷೇತ್ರದಲ್ಲಿ ಅನೇಕಾನೇಕ ಲೀಲೆ ನಡೆಯುವವು'' ಎಂದು ಹೇಳಿದರು.

ಅನಂತರ, ಶ್ರೀ ಪಳನಿಸ್ವಾಮಿ ಸ್ವಲ್ಪಕಾಲ ಮೌನವಹಿಸಿ ನಮ್ಮ ಗುಹೆಯ ಹತ್ತಿರವೇ ಇದ್ದ ಒಂದು ಯುವಕನ ಶವವನ್ನು ಈಚೆಗೆ ತೆಗೆಯಲೂ ಹೇಳಿದರು. 'ಪ್ರಣವ' ಉತ್ತರಿಸುತ್ತಿರಲೂ, ''ಶ್ರೀಪಾದರಾಜಂ ಶರಣಂ ಪ್ರಪದ್ಯೆ'' ಎಂಬುವ ಘೋಷಣೆಯಿಂದ, ವ್ಯಾಘ್ರೇಶ್ವರ ಶರ್ಮ ಬಂದರು. ಶ್ರೀ ಪಳನಿಸ್ವಾಮಿ ಆ ಯುವಕನ ಶರೀರದೊಳಗೆ ಪ್ರವೇಶಿಸಿದರು. ವಯಸ್ಸಿನಿಂದ ಶಿಥಿಲವಾದ, ಪಳನಿಸ್ವಾಮಿಯ ದೇಹವನ್ನು, ವ್ಯಾಘ್ರ ರೂಪದಲ್ಲಿನ ವ್ಯಾಘ್ರೇಶ್ವರ ಶರ್ಮ, ಅಲ್ಲಿನ ನದಿಯೊಳಗೆ ಹಾಕಲೂ ತೆಗೆದುಕೊಂಡು ಹೋದರು.

ನವಯುವಕನ ಶರೀರ ಪ್ರವೇಶಿಸಿದ ಪಳನಿಸ್ವಾಮಿ, ''ನೀವು ತಕ್ಷಣ ಇಲ್ಲಿಂದ ಹೊರಡಬೇಕು. ಮಗು, ಮಾಧವಾ! ನೀನು ನಿನ್ನ ವಿಚಿತ್ರಪುರಕ್ಕೆ ಹೋಗು. ನೀನು ಸೂಕ್ಷ್ಮರೂಪದಲ್ಲಿ ಪೀಠಿಕಾಪುರದ ಪುಣ್ಯವಂತರನ್ನು ಈಗಾಗಲೇ ದರ್ಶಿಸಿದ್ದೀಯ. ಈ ಜನುಮಕ್ಕೆ ಅದು ಸಾಕು. ಮಗೂ, ಶಂಕರಾ! ನೀನು ತಿರುಪತಿ ಮಹಾಕ್ಷೇತ್ರಕ್ಕೆ ಹೋಗು. ಮಾಧವಾ! ನಿಮಗೆ ಶ್ರೀಪಾದ ಶ್ರೀವಲ್ಲಭರ ಅನುಗ್ರಹ ಪ್ರಾಪ್ತವಾಗಲಿ!'' ಹಾಗೆಯೇ, ಮಾಧವ ವಿಚಿತ್ರಪುರದ ಕಡೆ, ನಾನು ತಿರುಪತಿ ಕಡೆ, ಪಯನಿಸಿದೆವು.

ಶ್ರೀ ಚರಣರ ಲೀಲೆಗಳಿಗೆ ಕೊನೆ ಎಲ್ಲಿ?



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 5

# ಶಂಕರ ಭಟ್ಟ ತಿರುಪತಿ ಸೇರುವುದು, ಕಾಣಿಪಾಕದಲ್ಲಿನ ತಿರುಮಲ ದಾಸನನ್ನ ದರ್ಶಿಸುವುದು

### ಶ್ರೀಪಾದರ ಅನುಗ್ರಹದಿಂದ, ಶಂಕರ ಭಟ್ಟನಿಗೆ ಶನಿ ಪೀಡೆ ಹೋಗುವುದು

ನಾನು, ಶ್ರೀಗಳ ಆಜ್ಞೆಯಂತೆ ತಿರುಪತಿಗೆ ಬರಲು, ಮನಶ್ಶಾಂತಿ ಉಂಟಾಗಿತ್ತು. ತಿರುಮಲ ಪುಷ್ಕರಿಣಿ ಸ್ನಾನಾಂತರ ಶ್ರೀ ವೆಂಕಟೇಶ್ವರಸ್ವಾಮಿ ದರ್ಶನವನ್ನು ಮಾಡಿ ಆಲಯದಲ್ಲಿ ಧ್ಯಾನಕ್ಕೆ ಕುಳಿತೆನು. ಶ್ರೀ ವೆಂಕಟೇಶ್ವರನನ್ನು ಸ್ತ್ರೀ ಮೂರ್ತಿಯಾಗಿ ಕಂಡೆನು. ಬಾಲಾತ್ರಿಪುರ ಸುಂದರಿಯಾಗಿ ಕಂಡ ಆ ಮೂರ್ತಿ, ಕೆಲ ಕ್ಷಣಗಳಲ್ಲಿ, ಪರಮೇಶ್ವರರಾಗಿ ನಂತರ ಶ್ರೀ ಮಹಾವಿಷ್ಣುವಾಗಿ ಬದಲಾಯಿಸಿತು. ಮತ್ತಷ್ಟು ಧ್ಯಾನದ ನಂತರ, ಆ ಮೂರ್ತಿ 16 ವರುಷದ ಬಲು ಸುಂದರ, ಬಾಲ ಯತಿಯಾಗಿ ದರ್ಶನ ಕೊಟ್ಟಿತು. ಆ ಬಾಲ ಯತಿ ಕಣ್ಣುಗಳಲ್ಲಿ ಕೋಟಿ ತಾಯಿಯ ವಾತ್ಸಲ್ಯದ, ಅಮೃತದೃಷ್ಟಿ ಕಾಣುತ್ತಿತ್ತು. ಇಷ್ಟರಲ್ಲಿ, ಆ ಸುಂದರ ಬಾಲ ಯತಿ ಹತ್ತಿರಕ್ಕೆ ಒಬ್ಬ ಕಪ್ಪು ವರ್ಣದ ವಿಕೃತ ಸ್ವರೂಪನು ಬಂದು ''ಶ್ರೀಪಾದ ಶ್ರೀವಲ್ಲಭ ಪ್ರಭೂ! ತಾವು ಜಗತ್ತನ್ನು ನಡೆಸುವರು, ತಮ್ಮ ಭಕ್ತನಾದ ಶಂಕರ ಭಟ್ಟನಿಗೆ ಇಂದಿನಿಂದ ಶ್ರೀ ಶನಿಕಾಟ ಶುರುವಾಗಲಿದೆ. ಲೋಕದ ಎಲ್ಲಾ ವಿಧವಾದ ತೊಂದರೆಗಳನ್ನು ಅವನು ಅನುಭವಿಸುವಂತೆ, ನೋಡುತ್ತೇನೆ, ತಾವು ಒಪ್ಪಿಗೆ ಕೊಟ್ಟರೆ'' ಎಂದು ನುಡಿದನು. ಕರುಣಾಮಯನಾದ ಪ್ರಭು '' ಎಲೈ ಶನೈಶ್ಚರನೇ! ನೀನು ಕರ್ಮಕಾರಕ. ಜೀವಿಗಳು ಕರ್ಮಫಲಗಳನ್ನು ಅನುಭವಿಸುವಂತೆ ಮಾಡಿ, ಅವನ್ನು ಕರ್ಮ ವಿಮುಕ್ತರನ್ನಾಗಿ ಮಾಡುತ್ತೀಯ. ನೀನು ನಿನ್ನ ಧರ್ಮದಂತೆ ನಡೆದುಕೋ. ಆಶ್ರಿತ ಭಕ್ತ ಜನರ ರಕ್ಷಣೆ ನನ್ನ ಪ್ರತಿಜ್ಞೆಯಾದ್ದರಿಂದ, ನಿನ್ನ ಆ ತೊಂದರೆಗಳಿಂದ, ಹೇಗೆ ಶಂಕರ ಭಟ್ಟನ ಬೆನ್ನಿಗೆ ನಿಂತು, ಅವನನ್ನ ಹೇಗೆ ಬಿಡುಗಡೆ ಮಾಡುತ್ತೇನೋ ನೀನೇ ನೋಡುತ್ತೀಯ'' ಎಂದು ಅಭಯಕೊಟ್ಟರು. ಹಾಗೆ ನುಡಿದು, ಆ ಇಬ್ಬರೂ ನನ್ನ ಮನಸಿನಿಂದ ದೂರವಾದರು, ನಂತರ ಭಗವಂತನ ಧ್ಯಾನ ಸುಲಭವಾಗಲಿಲ್ಲ. ನನ್ನ ಕಷ್ಟಕಾಲ ಮೊದಲಾಯಿತೆಂದು, ಶ್ರೀಪಾದರು ಕಾಪಾಡುವರೆಂದು ತೋಚಿತು. ತಿರುಮಲದಿಂದ ತಿರುಪತಿಗೆ ಬಂದೆನು.

ಮನಸ್ಸು ಕೆಟ್ಟಿರಲೂ ತಿರುಪತಿಯ ರಸ್ತೆಗಳಲ್ಲಿ ಇಚ್ಛೆ ಬಂದಂತೆ ತಿರುಗಾಡುತ್ತಿದ್ದೆ. ಒಬ್ಬ ನನ್ನನ್ನು ಬಲವಂತವಾಗಿ ನಿಲ್ಲಿಸಿ ''ನೀನು 20 ವರುಷದ ಹಿಂದೆ, ಮನೆಯಿಂದ ಓಡಿಹೋದ ಸುಬ್ಬಯ್ಯ ಅಲ್ಲವೆ? ನಿನ್ನ ತಂದೆ ತಾಯಿ ನೋವಿನಲ್ಲಿದ್ದಾರೆ. ನಿನ್ನ ಹೆಂಡತಿ ಋತು ಮತಿಯಾಗಿದ್ದಾಳೆ. ಆದ್ದರಿಂದ ನೀನು ಆಕೆಯೊಂದಿಗೆ ಸಂಸಾರ ಆರಂಭಿಸಿ ಮಕ್ಕಳೊಂದಿಗೆ ಸುಖವಾಗಿ ಇರುವಂತೆ ಗದರಿಸಿ ಹೇಳಿದರು. ನಿನಗಾಗಿ ಕಾಯುತ್ತಿದ್ದಾಳೆ. ನೀನು ಮನೆ ಸೇರಿ, ಹೆಂಡತಿ, ಮಕ್ಕಳ ಜೊತೆ ಸಂತೋಷವಾಗಿ ಬಾಳು'' ಎಂದು ಘರ್ಜಿಸಿದನು. ಆಗ ನಾನು ''ಅಯ್ಯಾ! ನಾನು ಶಂಕರ ಭಟ್ಟನೆಂಬ ಕನ್ನಡ ದೇಶದ ಬ್ರಾಹ್ಮಣ ದಾರಿಹೋಕನು ಪುಣ್ಯಕ್ಷೇತ್ರಗಳ ದರ್ಶನಾಭಿಲಾಷಿ. ದತ್ತ ಭಕ್ತ. ಶ್ರೀ ದತ್ತ ಪ್ರಭುಗಳು, ಶ್ರೀಪಾದ ಶ್ರೀವಲ್ಲಭರಾಗಿ ಅವತರಿಸಿದ್ದಾರೆಂದು ತಿಳಿದು, ಕುರುಂಗಡ್ಡೆಗೆ ಹೋರಟಿದ್ದೇನೆ. ಪರಮ ಪವಿತ್ರಳಾದ ಶ್ರೀ ಗಾಯತ್ರಿಮಾತೆ ಆಣೆ. ನಾನು ಬ್ರಹ್ಮಚಾರಿ. ನೀವು ತಿಳಿದ ಹಾಗೆ ನಾನು ಹಜಾಮ ಸುಬ್ಬಯ್ಯ ಅಲ್ಲವೇ ಅಲ್ಲ'' ಎಂದೆನು.

ಆದರೇ ಆತ ನನ್ನ ಮಾತು ಕೇಳಲಿಲ್ಲ. ಅಲ್ಲಿ ಸೇರಿದ ಜನ ನನ್ನನ್ನ ಎಷ್ಟೋ ವಿಧವಾಗಿ ನಿಂದಿಸಿದರು. ನನ್ನನ್ನು ಸುಬ್ಬಯ್ಯನ ಮನೆಗೆ ಕರೆದುಕೊಂಡು ಹೋದರು. ಸುಬ್ಬಯ್ಯನ ತಂದೆ ತಾಯಿ, ನಾನು ಅವರ ಮಗನೆಂದೇ ತಿಳಿದು, ನನ್ನನ್ನು ಎಷ್ಟೊ ವಿಧವಾಗಿ ಬೇಡಿಕೊಳ್ಳುತ್ತಾ ಅವರನ್ನು ಬಿಟ್ಟುಹೋಗಬಾರದೆಂದು, ಕಾದಿರುವ ಹೆಂಡತಿಯ ಜೊತೆ ಸಂಸಾರ ಮಾಡಬೇಕೆಂದು ಕೇಳಿಕೊಂಡರು, ಹಾಗೂ ಬುದ್ಧಿವಾದವೂ ಹೇಳಿದರು. ಅವರಲ್ಲಿನ ಒಬ್ಬನು, ''ಸುಬ್ಬಯ್ಯ, ಗಡ್ಡ, ಮೀಸೆ ಬೆಳೆಸಿಕೊಂಡು ಶನಿ ಕಳೆಯಿಂದಿದ್ದಾನೆ. ಇವನಿಗೆ ಕ್ಷೌರ ಮಾಡಿಸಿದರೆ ಮುಖಕ್ಕೆ ಕಳೆಬರುವುದು'' ಎಂದನು. ನಾನು ಅದೆಷ್ಟು ಸಾರಿ, ಸುಬ್ಬಯ್ಯ ಅಲ್ಲ ಎಂದರೂ, ಅವರು ಕೇಳಲಿಲ್ಲ. ಬಲವಂತವಾಗಿ, ತಲೆ ಕೂದಲು, ಗಡ್ಡ ಮೀಸೆ, ಕೊನೆಗೆ ಯಜ್ಞೋಪವೀತ ಸಹಾ ತೆಗೆದುಬಿಟ್ಟರು. ಚಿತ್ರವಿಚಿತ್ರ ವೇಷಧಾರಿಯಾದ ಒಬ್ಬ ಭೂತವೈದ್ಯನನ್ನು ಸಹಾ ಕರೆ ತಂದರು. ಅವನ ನೋಟವೇ ಭಯಂಕರವಾಗಿತ್ತು. ನನ್ನನ್ನು ಕಟ್ಟಿಹಾಕಿ, ಕತ್ತಿಯಿಂದ ತಲೆ ಮೇಲೆ ಒಂದು ಕಾಟುಹಾಕಿದರು. ಅದರ ಮೇಲೆ ನಿಂಬೆ ಮತ್ತಿತರ ರಸಗಳು ಹಾಕಲು, ನೋವು ಬಹಳ ಇತ್ತು. ಮನೆ ಬಿಟ್ಟು ಹೋದ ಸುಬ್ಬಯ್ಯನನ್ನು, ಬ್ರಾಹ್ಮಣ ದೆವ್ವ ಹಿಡಿದಿದೆ ಎಂದು, ಅದಕ್ಕೇ ಇವನು ಜನಿವಾರ ಧರಿಸಿ, ಮಂತ್ರೋಚ್ಚಾರಣೆ ಮಾಡುತ್ತಿರುವನೆಂದು ಹೇಳಿಕೊಳ್ಳುತ್ತಿದ್ದರು. ಆ ಊರಿಗೆ ಬಂದ ಈ ದಾರಿಹೋಕ ಸುಬ್ಬಯ್ಯನೇ ಎಂದು, ಯಾವುದೋ ರಾಕ್ಷಸಿ ಅವನನ್ನ ಹಿಡಿದಿದೆ ಎಂದು ತೀರ್ಮಾನಿಸಿ, ಬ್ರಾಹ್ಮಣ ಮುಖ್ಯಸ್ಥನ ಹತ್ತಿರಕ್ಕೆ ಕರೆದೊಯ್ದರು. ನನ್ನ ಹುಟ್ಟು ಪೂರ್ವೋತ್ತರ, ಗೋತ್ರ, ನನ್ನ ವಿದ್ಯೆ ವಿವರಿಸಿದರೂ, ಅವರು ನಂಬದೇ, ನನನ್ನು ಕನ್ನಡ ಬ್ರಾಹ್ಮಣ ದೆವ್ವ ಆವರಿಸಿದೆ ಎಂದು ತಕ್ಕ ಚಿಕಿತ್ಸೆ ಮಾಡಿಸಿ ಮಾಮೂಲು ಮನುಷ್ಯನನ್ನಾಗಿ ಮಾಡಿಕೊಡಬೇಕೆಂದು ಅವರಿಗೆ ತಿಳಿಸಿದರು.

ಗಾಯಗಳಿಂದ ಅದ ನೋವಿಗೆ ನಾನು ನೀರಿಳಿದು ಹೋದೆನು. ನನ್ನ ಅಳು, ಕೇಳುವರೇ ಇಲ್ಲ. ಪ್ರಜ್ಞೆ ಬರುವ ವೇಳೆಗೆ, ನನ್ನ ಮುಂದೆ, ನನ್ನನ್ನು ಹೋಲಿರುವ, ಕಪ್ಪು ವಿಕೃತಾಕಾರನೊಬ್ಬ ಕುಳಿತಿರುವುದು, ನಾ ಕಂಡೆ. ಅವನು ಮಾತೇ ಆಡದೇ ನನ್ನಲ್ಲಿ ಸೇರಿಹೋದನು. ನನ್ನ ಆಕಾರವೇ ಆಗಿಬಿಟ್ಟನು. ಶನಿಕಾಟ ಶುರವಾಯಿತೆಂದು, ಇನ್ನು $7\frac{1}{2}$ ವರುಷ ನನಗೆ ಕಷ್ಟಕಾಲವಿರುವುದೆಂದು ನನ್ನನ್ನು ರಕ್ಷಿಸಬಲ್ಲವರು ಶ್ರೀಪಾದ ಶ್ರೀವಲ್ಲಭರು ಮಾತ್ರವೇನೆಂದು ನನ್ನ ಮನಸ್ಸು ಹೇಳಿತು.

ಅಷ್ಟು ಬಾಧೆಯಲ್ಲಿ ಸಹಾ ಶ್ರೀಪಾದ ಶ್ರೀವಲ್ಲಭ ಸ್ಮರಣೆ ನನಗಿದ್ದ ನೋವನ್ನು ಕಡಿಮೆ ಮಾಡತೊಡಗಿತು. ಭೂತವೈದ್ಯನು ಮಾತ್ರ ಕೋಳಿಗಳನ್ನು, ಮೇಕೆಗಳನ್ನು ಬಲಿ ಕೊಡುತ್ತಾ, ಚಿತ್ರವಿಚಿತ್ರ ಪೂಜೆಗಳು ಮಾಡತೊಡಗಿದನು. ನನ್ನನ್ನು ಬ್ರಾಹ್ಮಣ ದೆವ್ವ ಹಿಡಿದಿದೆ ಎಂದು ಅವರು ನಂಬಿರುವುದರಿಂದ ಪಥ್ಯದ ಶಾಕಾಹಾರವೇ ನನಗೆ ಇಡಲಾಯಿತು. ಹೀಗೆ, ಮಂಸಾಹಾರ ಎಲ್ಲಿ ತಿನ್ನಬೇಕಾಗುವುದೋ ಎಂದು ಹೆದರಿದ ನಾನು, ಶ್ರೀಪಾದ ಶ್ರೀವಲ್ಲಭರ ಕೃಪೆಯಿಂದ, ಶಾಕಾಹಾರ ಲಭಿಸಲು ಮನಸ್ಸಿಗೆ ಶಾಂತಿ ಲಭಿಸಿತು. ಮುಂದೆ ಸಹಾ ಶ್ರೀಪಾದ ಶ್ರೀವಲ್ಲಭರ ಸ್ಮರಣೆಯಿಂದ ನನಗೆ ನಾಲ್ಕನೇ ದಿನದಿಂದ ನೋವು ಲೇಶ ಮಾತ್ರವೂ ಕಂಡುಬರುತ್ತಿರಲಿಲ್ಲ. ನನ್ನ ಶರೀರದ ಮೇಲೆ ಅನೇಕಾನೇಕ ಪ್ರಯೋಗಗಳು, ಮಾಂತ್ರಿಕನ ಕೊರಡಾ (ಚಾಟಿ) ಏಟು ಸಹಾ ಬೀಳುತ್ತಿತ್ತು. ಶ್ರೀ ವಲ್ಲಭಾ! ಶರಣು ಶರಣು ಎಂದು ಕೂಗುತ್ತಿದ್ದೆ. ಶ್ರೀ ದತ್ತರನ್ನು ಅತ್ಯಂತ ಭಕ್ತಿಯಿಂದ ನಮಿಸಿದರೇ ಬಾಧೆ ಎಲ್ಲಿರುತ್ತೆ?! ಒಂದು ವಿಚಿತ್ರ ಸಂಗತಿ ನಡೆಯಿತು. ಆ ಮಾಂತ್ರಿಕನು ನನ್ನನ್ನು ಚಾಟಿಯಿಂದ ಹೊಡೆದಾಗೆಲ್ಲಾ ನನಗೆ ಲೇಶದಷ್ಟು ಸಹಾ ನೋವಿರುತ್ತಿರಲಿಲ್ಲ. ಆದರೆ ಆ ಮಾಂತ್ರಿಕ ಒದ್ದಾಡುತ್ತಿದ್ದ. ಆವನು, ಸುಖವಾಗಿರುವ ನನ್ನನ್ನು ಕಂಡು ಹುಚ್ಚನಂತೆ ನೋಡುತ್ತಿದ್ದ. ನಾನು ಶ್ರೀ ಚರಣರ ದಿವ್ಯಲೀಲೆಗಳನ್ನು ಗಮನಿಸಿ ಸಂತೋಷ ಪಡುತ್ತಿದ್ದೆ. ನನಗೆ ಪಥ್ಯಾಹಾರ ಕೊಡುತ್ತಿದ್ದರು, ಅದು ನನಗೆ ಮಧುರವಾಗಿರುತ್ತಿತ್ತು. ಊಟ ಶ್ರೀಪಾದರ ಅನುಗ್ರಹದ

ಪ್ರಸಾದವೆಂದು, ನಾನು ಹೊಟ್ಟೆ ತುಂಬಾ ತಿನ್ನಲಾರಂಬಿಸಿದೆನು. ಆದರೆ ಆ ಮಾಂತ್ರಿಕನು, ತನಗಿಷ್ಟವಾದ ಕೋಳಿಗಳ, ಮೇಕೆಗಳ ಮಾಂಸ ತಿನ್ನುತ್ತಿದ್ದರೂ ಅದು ರುಚಿಸುತ್ತಿರಲಿಲ್ಲ. ಅವನ ಆರೋಗ್ಯ ಕೆಡಲಾರಂಭಿಸುತು. ಆಗ ಅವನು ನನ್ನನ್ನು ಬಾಧಿಸುವುದು ಬಿಟ್ಟು ಕೇವಲ ಮಂತ್ರಗಳು ಪೂಜೆಗಳಿಂದ ಕಾಲ ಕಳೆಯುತ್ತಿದ್ದ. ಅವನು ನನಗೆ ಚಿಕಿತ್ಸೆ ಪ್ರಾರಂಭ ಮಾಡಿದ ಐದನೇ ದಿನವೇ, ಆವನ ಮನೆ ಸುಟ್ಟು ಬೂದಿ ಆಯಿತು. ಆ ಮನೆಯಲ್ಲಿ ಬೆಂಕಿ ಹಚ್ಚದೇ, ಕೆಂಡವೇ ಇಲ್ಲದಿದ್ದರೂ, ಎಲ್ಲರೂ ನೋಡುತ್ತಿದ್ದ ಹಾಗೆಯೇ ಸುಟ್ಟುಹೋಯಿತು. ಆರನೇ ದಿನ ಅವನು ಸೋತ ಮುಖದಿಂದ ಸುಬ್ಬಯ್ಯನ ಮನೆಗೆ ಬಂದು ಸುಬ್ಬಯ್ಯನನ್ನು ಹಿಡಿದ ಬ್ರಾಹ್ಮಣ ದೆವ್ವ ಮಾಂತ್ರಿಕನೇ ಎಂದು ಅವನು ಚಿಕಿತ್ಸೆ ಮಾಡಿದ್ದರಿಂದ ಆ ಬ್ರಾಹ್ಮಣ ದೆವ್ವ ತನ್ನ ಮನೆಯನ್ನು ದಹನಮಾಡಿತೆಂದು ಭೇತಾಳ ಮೊದಲಾದ ಅನೇಕ ಕ್ಷುದ್ರಶಕ್ತಿಯನ್ನು ಆವಾಹನೆ ಮಾಡಿಕೊಳ್ಳಲೂ ಎಷ್ಟೋ ಪೂಜೆಗಳು ಮಾಡಬೇಕೆಂದು ಅದಕ್ಕೆ ಸಾಕಷ್ಟು ಹಣಬೇಕೆಂದು ತಿಳಿಸಿದನು. ಚಿಕಿತ್ಸೆ ಮಾಡುವುದರಿಂದ ಏನೂ ಉಪಯೋಗವಿಲ್ಲ ಎಂದು, ಮಾಂತ್ರಿಕನು ಹಣದ ಆಸೆಗೆ ಈ ತರಹ ಸಲಹೆಗಳು ನೀಡುತ್ತಿದ್ದಾನೆಂದು ನನಗೆ ಗೊತ್ತು. ಆ ಕಾರಣ, ವಿಧಿಗೆ ತಲೆ ಬಗ್ಗಿ, ಸುಬ್ಬಯ್ಯ ಹೆಂಡತಿಯನ್ನು ತನ್ನ ಅರ್ಧಾಂಗಿಯಾಗಿ ಸ್ವೀಕರಿಸಬೇಕಾಗಿ ಬಂದಲ್ಲಿ, ಅದಕ್ಕಿಂತ ಕೆಟ್ಟ ಅದೃಷ್ಟ ಮತ್ತು ನಂಬಿಕೆ ದ್ರೋಹ ಮತ್ತೊಂದು ಇರಲ್ಲ ಎಂದೆನಿಸುತು. ನನ್ನ ಈ ಕೆಟ್ಟ ಪರಿಸ್ಥಿತಿಗೆ, ವಿಧಿವಿಲಾಸದ ಆಟಕ್ಕೆ ನನ್ನ ಎದೆ ಸೀಳಿದಂತೆ ಅನುಭವಿಸುತ್ತಿದ್ದೆನು. ಸಬ್ಬಯ್ಯ ತಂದೆ ತಾಯಿಯನ್ನುದ್ದೇಶಿಸಿ "ಜನನೀ ಜನಕರೇ! ತಾವು, ಇರುವ ಚರ/ಸ್ಥಿರ ಆಸ್ತಿಗಳು ಮಾರಲು ಈ ಮಾಂತ್ರಿಕನ ಜಾಲಕ್ಕೆ ಬೀಳಬೇಡಿ. ನಾನು ಸ್ವಸ್ಥನಾಗಿದ್ದೇನೆ. ನಾನು, ತಮ್ಮನ್ನು ತಂದೆ ತಾಯಿಗಳಂತೆಯೇ ಭಾವಿಸಿದ್ದೇನೆ" ಎಂದು ನುಡಿದೆನು. ತಕ್ಷಣ ನನಗೆ ಬಿಡುಗಡೆ ಲಭಿಸಿತು. ಆ ತಂದೆ ತಾಯಿಯರ ಸಂತೋಷಕ್ಕೆ ಅಂತ್ಯವೇ ಇಲ್ಲ. ಆದರೇ, "ಪರಸ್ತ್ರೀ ಮಾತೃ ಸಮಾನ. ನನ್ನನ್ನ ಈ ಗಂಡಾಂತರದಿಂದ ಪಾರುಮಾಡು ತಂದೆ" ಎಂದು, "ಧರ್ಮಭ್ರಷ್ಟನನ್ನು ಮಾಡಬೇಡ" ಎಂದೂ ಶ್ರೀಪಾದ ಶ್ರೀವಲ್ಲಭರನ್ನ ದೀನದಿಂದ ಮನಸ್ಸಿನಲ್ಲೇ ಬೇಡಿಕೊಂಡೆನು.

ನನ್ನ ಚಿಕಿತ್ಸೆ ಪ್ರಾರಂಭವಾದ ಏಳನೆಯ ದಿನ, ನನಗೆ ಸೇವೆ ಮಾಡುತ್ತಿದ್ದ ಸುಬ್ಬಯ್ಯನ ಧರ್ಮಪತ್ನಿಯನ್ನು ಕಂಡು ಹೀಗೆಂದೆನು. "ನನ್ನನ್ನ ಏನೆಂದು ತಾವು ಭಾವಿಸುತಿದ್ದೀರ? ನಾನು ನಿಜವಾಗಿಯೇ ಸುಬ್ಬಯ್ಯ ಎಂದು ನೀವು ನಂಬಿದ್ದೀರಾ? ಅದಕ್ಕೆ ಆ ಸಾಧ್ವಿ, "ನನ್ನ ಮದುವೆ ಆದಾಗ, ನನಗೆ 2 ವರುಷ ಈಗ ನನಗೆ 22 ವರುಷ, ತಾವು ನನ್ನ ಗಂಡ ಹೌದೋ ಅಲ್ಲವೋ ಎನ್ನುವುದು ಆ ಭಗವಂತನೇ ಬಲ್ಲ. ನವಯವ್ವನ ಪತ್ನಿಯನ್ನು ಕಂಡ ಗಂಡುಸು ಯಾರೇ ಆಗಲಿ, ಸ್ಥಿಮಿತವಾಗಿರಲಾರ. ತಾವು ಇಷ್ಟು ಕಷ್ಟಗಳು ಅನುಭವಿಸುತ್ತಿದ್ದರೂ, ನನ್ನನ್ನ ಪತ್ನಿಯಾಗಿ ಕಾಣುತ್ತಿಲ್ಲ. ನನ್ನನ್ನು ಮುಟ್ಟಲೂ ಇಲ್ಲ! ಇದು ದೊಡ್ಡ ಸಂಸ್ಕಾರವಂತರಿಗೆ ಸಾಧ್ಯ. ತಮ್ಮ ಬಗ್ಗೆ ನನಗೆ, ಯಾವ ವಿಧವಾದ ಅಭಿಪ್ರಾಯವೂ ಇಲ್ಲ. ಕುಲಾಚಾರವನ್ನು ಪಾಲಿಸುತ್ತಾ ಧರ್ಮಬದ್ಧವಾಗಿ, ಜೀವಿಸಬಯಸುತ್ತೇನೆ. ತಾವು ನನ್ನ ಗಂಡನೇ ಆದಲ್ಲಿ, ಈ ಚರಣದಾಸಿಯನ್ನು ಬಿಡಬೇಡಿ, ಹಾಗೇ ಅಲ್ಲದ ಪಕ್ಷ, ನನ್ನ ಗಂಡ 20 ವರುಷಗಳ ಹಿಂದೆ ಓಡಿಹೋದ ಕಾರಣ, ನನಗೆ ಊಹೆಯೇ ಇಲ್ಲದ, ಎಳೇ 2 ವರುಷದಲ್ಲಿ ಮದುವೆ ಆದ ಕಾರಣದಿಂದಲೂ ಈಗ ನನ್ನನ್ನು ಪತ್ನಿಯಾಗಿ ತಾವು ಸ್ವೀಕರಿಸಬಹುದು. ನಾನು ತಮ್ಮನಡೆನುಡಿಗಳಿಗೆ ಬದ್ಧಳಾಗಿ ಬಾಳುವೆನು. ತಾವು ಸದಾ ಸ್ಮರಣೆ ಮಾಡುವ ಶ್ರೀಪಾದ ಶ್ರೀವಲ್ಲಭರು ಯಾರು? ಅವರು ಸದ್ಗುರುಗಳಾದಲ್ಲಿ, ಈ ಕ್ಲಿಷ್ಟ ಸಮಸ್ಯೆಗೆ ಧರ್ಮ ಬದ್ಧವಾದ ಪರಿಷ್ಕಾರವನ್ನು ಕೊಡಲೂ ಸಹಾ ಪ್ರಾರ್ಥಿಸುತ್ತಿದ್ದೇನೆ" ಎಂದಳು.

ಆಕೆಯ ವಾದ ನನಗೆ ಮುಕ್ತವಾಗಿಯೇ ಕಂಡುಬಂತು. ಆಗ ನಾನು **"ಶ್ರೀಪಾದ ಶ್ರೀವಲ್ಲಭರು, ಸಾಕ್ಷಾತ್ ದತ್ತಾತ್ರೇಯರೇ,**

**ಕಲಿಯುಗದಲ್ಲಿ ಅವತರಿಸಿ, ಈಗ ಕುರುವಪುರದಲ್ಲಿದ್ದಾರೆ, ನಮ್ಮ ಭಾವನೆಗಳನ್ನನುಸರಿಸಿ, ಅವರು ಕಂಡುಬರುವರು. ಗುರುಗಳೆನ್ನುವವರಿಗೆ ಗುರುವಾಗಿಯು, ಪರಮಾತ್ಮ ಎನ್ನುವರಿಗೆ ಪರಮಾತ್ಮರಾಗಿಯು ತೃಪ್ತಿಗೊಳುಸುವರು.** ಸರಿ, ನೀನು ಸಹಾ ಶ್ರೀಪಾದ ಶ್ರೀವಲ್ಲಭರನ್ನು ಸ್ಮರಿಸು, ತಪ್ಪದೇ ಎಲ್ಲರೂ ಒಪ್ಪುವಂತಹ ಪರಿಹಾರ ಮಾರ್ಗ ನಮಗೆ ತೋರಿಸುವರು'' ಎಂದೆನು.

ಆ ದಿನವೇ ಒಬ್ಬ ಮಾದಿಗ ಕುಲದ ಜಂಗಮ ಬಂದನು. ಜಂಗಮನಾಗಿ ವೇಷಧಾರಿಯಾದ ಆತನು ಹಳೆ ತಾಳೆಪತ್ರ ಗ್ರಂಥಗಳಿಟ್ಟುಕೊಂಡಿದ್ದನು. ತನ್ನ ಬಳಿ ಬಂದವರಿಗೆಲ್ಲಾ ಭೂತ ಭವಿಷ್ಯತ್ತುಗಳನ್ನು ಅದ್ಭುತವಾಗಿ ಹೇಳುತ್ತಿರಲು, ಎಲ್ಲರೂ ಅವನಿಗೆ ಹತ್ತಿರವಾದರು. ಆತನ ಹತ್ತಿರ ಇದ್ದ ತಾಳೆಪತ್ರ ಗ್ರಂಥಗಳು ನಾಡೀ ಗ್ರಂಥಗಳೆಂದು, ಆದನ್ನ ರಮಲಶಾಸ್ತ್ರ ಎನ್ನುವರೆಂದು, ಅದರಲ್ಲಿನ ವಿಷಯಗಳು ತಪ್ಪದೇ ಸತ್ಯವನ್ನೆ ತೋರಿಸುತ್ತವೆಂದು ಹೇಳುತ್ತಿದ್ದನು. ಸುಬ್ಬಯ್ಯನ ತಂದೆ ತಾಯಿ ಆ ಜಂಗಮನನ್ನು ಅವರ ಮನೆಗೆ ಕರೆದುಕೊಂಡು ಬಂದರು. ಅವನು ನನ್ನ ಕೈಗೆ ಒಂದಷ್ಟು ಕವಡೆ ಕೊಟ್ಟು, ಅವನ್ನು ಹಾಕಲು ಹೇಳಿದನು. ಸಾಕಷ್ಟು ಲೆಕ್ಕಾಚಾರದ ನಂತರ ಒಂದು ತಾಳೆಪತ್ರ ಎಳೆದು ಹೀಗೆ ಅದನ್ನ ಓದಿದನು ''ಈಗ ಕವಡೆ ಹಾಕಿದವನು 'ಶಂಕರ ಭಟ್ಟ'ನೆಂಬ ಕನ್ನಡ ಬ್ರಾಹ್ಮಣ. ದತ್ತಾವತಾರಿ ಶ್ರೀಪಾದ ಶ್ರೀವಲ್ಲಭರ ಚರಿತ್ರೆ ಈತ ಬರೆಯುವನು. ಹಿಂದಿನ ಜನುಮದಲ್ಲಿ ಈತ, ಮತ್ತೊಬ್ಬನು, ಕಂದಕೂರು ಎಂಬ ಪಟ್ಟಣಕ್ಕೆ ಹತ್ತಿರದ ಮೊಗಲಿಚರ್ಲ ಎಂಬ ಗ್ರಾಮದಲ್ಲಿ ಜನ್ಮಿಸಿದ್ದರು. ದ್ಯೂತಕ್ರೀಡೆಯಲ್ಲಿ, ಜೂಜೂ ಆಟದಲ್ಲಿ, ಅತ್ಯಂತ ಆಸೆ ತೋರಿದ್ದರು. ಆ ಗ್ರಾಮದಲ್ಲಿನ ಸ್ವಯಂಭೂ ದತ್ತ ದೇವಾಲಯ ಅರ್ಚಕರ ಸಹೋದರನಾಗಿ ಜನಿಸಿದ್ದನು. ಅಣ್ಣನಪರ ಪೂಜಾ ಕಾರ್ಯಗಳಲ್ಲಿಯೂ ಮತ್ತು ಸ್ನೇಹಿತರ ಜೊತೆ ಆಲಯ ಪ್ರಾಂಗಣದಲ್ಲಿಯೇ ದ್ಯೂತ ಕ್ರೀಡ್ಯೆಯಲ್ಲಿ ನೈಪುಣ್ಯ ಪಡೆಯುತ್ತಿದ್ದನು. ಇದು ದೊಡ್ಡ ಅಪಚಾರವೇ ಸರಿ. ತನ್ನ ಸ್ನೇಹಿತನ ಜೊತೆ ಒಮ್ಮೆ ವಿಚಿತ್ರವಾದ ಷರತ್ತಿನಿಂದ ಜೂಜಾಡಿದನು. ಅವನ ಸ್ನೇಹಿತ ಗೆದ್ದರೆ, ಪಂದ್ಯದಲ್ಲಿ ಕಟ್ಟಿದ್ದ ದುಡ್ಡು ಕೊಡಬೇಕು. ಅವನೇ ಗೆದ್ದರೇ, ಅವನ ಮಿತ್ರನ ಪತ್ನಿಯನ್ನು ತನಗೆ ಅರ್ಪಿಸಬೇಕು ಎಂದೂ, ಇದಕ್ಕೆ ಶ್ರೀದತ್ತ ಪ್ರಭುವೇ ಸಾಕ್ಷಿ ಎಂದು ನಿರ್ಧರಿಸಿದ್ದರು.

ತನ್ನ ಮುಂದೆಯೇ ಅತ್ಯಂತ ಅನಾಚಾರ ನಡೆಯಲಿರುವುದನ್ನು ಶ್ರೀದತ್ತರು ಗಮನಿಸುತ್ತಿದ್ದರು. ಜೂಜಲ್ಲಿ ಶಂಕರ ಭಟ್ಟ ಗೆದ್ದನು. ಶಂಕರನ ಮಿತ್ರ, ಅವನ ಪತ್ನಿಯನ್ನು ಅರ್ಪಿಸಲೂ ನಿರಾಕರಿಸಿದನು. ಇವರ ಈ ವ್ಯಾಜ್ಯ ಗ್ರಾಮದ ಮುಖ್ಯಸ್ಥರವರೆಗೂ ಹೋಯಿತು. ಅಲ್ಲಿನ ಮುಖ್ಯಸ್ಥರೆಲ್ಲಾ ಸೇರಿ, ಶ್ರೀದತ್ತ ಪ್ರಭುಗಳ ಸಮಕ್ಷದಲ್ಲಿ ನಡೆದ ಈ ಅಕೃತ್ಯವನ್ನು ಗಟ್ಟಿಯಾಗಿ ಖಂಡಿಸಿದರು. ತಕ್ಕ ಶಿಕ್ಷೆ ಕೊಡಬೇಕೆಂದು, ಪರಸ್ತ್ರೀಯನ್ನು ಹೊಂದಲು ಆಸೆ ಪಟ್ಟ ಅವನ ತಲೆ ಮೇಲೆ ಬಿಸಿಯಾದ ಎಣ್ಣೆ ಸುರಿಯಬೇಕೆಂದು ನಿರ್ಧಾರ ಮಾಡಿದರು. ಜೂಜಾಟದಲ್ಲಿ ಹೆಂಡತಿಯನ್ನೇ ಮುಂದಿಟ್ಟ ಆ ಸ್ನೇಹಿತನನ್ನು ನಪುಂಸಕನಾಗಿ ಬದಲಾಯಿಸಿ, ಆ ಇಬ್ಬರನ್ನೂ ಊರಿನಿಂದ ಬಹಿಷ್ಕಾರ ಮಾಡಬೇಕೆಂದು ಧೃಡವಾಗಿ ತೀರ್ಮಾನ ಮಾಡಿದರು. ಆ ತೀರ್ಮಾನದ ಪ್ರಕಾರ ನಡೆದ ನಂತರ, ಶಂಕರ ಭಟ್ಟ ಅಲ್ಪ ಸ್ವಲ್ಪ ದತ್ತ ಸೇವೆ ಮಾಡಿದ ಕಾರಣ ಈಗ ಪುಣ್ಯ ದೈವಭಕ್ತನಾಗಿ ಜನಿಸಿದ್ದಾನೆ. ಆ ಹಿಂದಿನ ಜನುಮದ ಮಿತ್ರ, ಈಗ ತಿರುಪತಿಯಲ್ಲಿ ಹಜಾಮನಾಗಿ ಸುಬ್ಬಯ್ಯ ಎಂಬುವ ನಾಮಧೇಯ ಹೊಂದಿ ಚಂಚಲ ಬುದ್ಧಿಯ ಹುಚ್ಚನಾಗಿ ಮದುವೆಯನಂತರ ಹೆಂಡತಿಯನ್ನು ಬಿಟ್ಟು ಓಡಿಹೋದವನಾಗಿದ್ದಾನೆ. ಅಮಾಯಕಳಾದ ಸುಬ್ಬಯನ ಹೆಂಡತಿ ಅಬಲೆ ಮತ್ತು ನಿರ್ದೋಷಿಯಾದ್ದರಿಂದ, ಅವಳ ಪಾತಿವ್ರತ್ಯದ ಪ್ರಭಾವದಿಂದ, ಸುಬ್ಬಯ್ಯನ ಮನಶ್ಚಂಚಲತ್ವ ಕಡಿಮೆ ಆಗಿ, ಜಂಗಮನಿಂದ ರಮಲಶಾಸ್ತ್ರವನ್ನ ಕೇಳಿದ ಮಾರನೇ ದಿನ ಸುಬ್ಬಯ್ಯ ವಾಪಸ್ಸಾಗುವನು. ಅದೇ ದಿನ ಶಂಕರ ಭಟ್ಟನಿಗೆ ಬಿಡುಗಡೆ ಲಭಿಸುವುದು.

ಶ್ರೀಪಾದ ಶ್ರೀವಲ್ಲಭರ ಅನುಗ್ರಹದಿಂದ, ಶಂಕರ ಭಟ್ಟನಿಗೆ ಹಿಡಿದ ಶನಿ ಕಾಟ ಈ ವಿಧವಾದ ಬಾಧೆ ಅನುಭವಿಸುವುದರಿಂದ 7½ ದಿನಗಳಲ್ಲೇ ತೀರುವುದು. **ಭಗವಂತನ ಸಾಕ್ಷಿ ಮಾಡಿ, ಅಸತ್ಯವಾದ ಪ್ರಮಾಣ ಮಾಡುವವರಿಗೂ, ಅಧರ್ಮ ಪ್ರಮಾಣ ಮಾಡುವವರಿಗೂ, ಕಠಿಣ ಶಿಕ್ಷೆ ತಪ್ಪದೇ ಲಭಿಸುವುದು.** ಸುಬ್ಬಯ್ಯನ ಮನಶ್ಚಂಚಲತ್ವದ ಪರಿಹಾರಕ್ಕೆ, ಶಂಕರ ಭಟ್ಟ ಖಾತಾದಿಂದ ಸ್ವಲ್ಪ ಭಾಗ ಪುಣ್ಯ ಚಿತ್ರಗುಪ್ತರಿಂದ ತೆಗೆದುಕೊಳ್ಳಲಾಗಿದೆ. **ಕರ್ಮದ ಫಲ ಅತಿ ಸೂಕ್ಷ್ಮವಾಗಿ ಲೆಕ್ಕಿಸಲ್ಪಡುವುದೆಂಬುವ ಸತ್ಯವನ್ನು ಮಾನವ ಗ್ರಹಿಸಿ ಸತ್ಕರ್ಮಗಳನ್ನು ಮಾತ್ರವೇ ಮಾಡುತ್ತಿರಬೇಕು. ಶ್ರೀಪಾದ ಶ್ರೀವಲ್ಲಭರ ಜಾತಕ, ಅವರ ಅವತಾರ, ಕೆಲವು ಶತಮಾನಗಳಲ್ಲಿ ತ್ರಿಪುರದೇಶದಲ್ಲಿನ ಅಕ್ಷಯಕುಮಾರ ಎಂಬ ಜೈನ ಮತಸ್ಥದ ಮೂಲಕ ಶ್ರೀ ಪೀಠಿಕಾಪುರ ತಲುಪುವವು.**

ಶ್ರೀವಲ್ಲಭರ ಕರುಣೆ ಹೇಗೆಂದು ವರ್ಣಿಸುವೆನು? ಮರುದಿನವೇ ಸುಬ್ಬಯ್ಯ ತನ್ನ ಮನೆಗೆ ಬಂದನು. ಆತನಿಗಿದ್ದ ಮನಶ್ಚಂಚಲತ್ವ ಹೋಗಿ, ಸ್ವಸ್ಥನಾಗಿದ್ದನು. ಸುಬ್ಬಯ್ಯನ ಹೆಂಡತಿಯನ್ನು ನನ್ನ ಸೋದರಿಯಂತೆ ಭಾವಿಸಿದ್ದೆನು. ಸುಬ್ಬಯ್ಯನ ತಂದೆ ತಾಯಿಗೆ ನಮಿಸಿ, ಚಿತ್ತೂರು ಮಂಡಲದ ಕಾಣಿಪಾಕಂ ತಲುಪಿದೆನು.

ಕಾಣಿಪಾಕಂ ಚಿತ್ತೂರು ಹತ್ತಿರವೇ ಇದ್ದು, ಶ್ರೀ ವರದರಾಜ ಸ್ವಾಮಿ, ಶ್ರೀ ಮಣಿಕಂಠೇಶ್ವರ ಸ್ವಾಮಿ ಮತ್ತು ಶ್ರೀ ವರಸಿದ್ಧಿ ವಿನಾಯಕರ ಆಲಯಗಳನ್ನು ಹೊಂದಿತ್ತು. ನಾನು ಶ್ರೀ ವರಸಿದ್ಧಿ ವಿನಾಯಕರನ್ನು ದರ್ಶಿಸಿ ಬರಲು, ಅಲ್ಲಿ ಒಂದು ಎತ್ತರವಾದ ನಾಯಿ ಇತ್ತು, ಭಯ ಉಂಟಾಗಿ, ಆಲಯದೊಳಗೆ ಹೋಗಿ, ಸ್ವಲ್ಪ ಧ್ಯಾನದ ನಂತರ ಆಚೆಗೆ ಬಂದೆನು. ಹಿಂದೆ ನೋಡಿದ ಶುನಕದಷ್ಟೇ ಗಾತ್ರದಲ್ಲಿ ಮತ್ತೊಂದು ಇತ್ತು. "ಈ ದಿನ ಈ ನಾಯಿಗಳಿಂದ ಕಚ್ಚಿಸಿಕೊಳ್ಳುವುದು ಖಚಿತ'' ಎಂದು ಭಯ ಹೊಂದಿದೆನು. ತಕ್ಷಣ ಆಲಯದೊಳಗೆ ಓಡಿದೆನು. ಅರ್ಚಕರಿಗೆ ನನ್ನ ಈ ವರ್ತನೆಯಿಂದ ಆಶ್ಚರ್ಯ ಉಂಟಾಗಿ, "ಸ್ವಾಮಿ! ಅದೇಕೆ ಪದೇ ಪದೇ ಈಚೆಗೂ ಒಳಕ್ಕೂ ಓಡಾಡುತ್ತಿದ್ದೀರಾ?'' ಎಂದು ಪ್ರಶ್ನಿಸಿದರು. ನಾಯಿಗಳ ವಿಷಯ ತಿಳಿದುಕೊಂಡು, "ಆ ಶುನಕಗಳು ಕಾರಣವಿಲ್ಲದೇ ಯಾರನ್ನೂ ಏನೂ ಮಾಡುವುದಿಲ್ಲ. ಅವು ಒಬ್ಬ ದತ್ತ ಭಕ್ತನಾದ ಅಗಸನ ಬಳಿ ಇರುವ ನಾಯಿಗಳು. ಇವನು ದತ್ತ ಭಕ್ತ ಮತ್ತು ನಮ್ಮೆಲ್ಲರಿಗೂ ಶ್ರೀದತ್ತರು, ಶ್ರೀಪಾದ ಶ್ರೀವಲ್ಲಭರಾಗಿ ಅವತಾರ ಹೊಂದಿದ್ದಾರೆಂದು ಹೇಳುತ್ತಾ ಇರುವನು. ಅಗಸರಿಗೆ ದೇವಾಲಯದ ಪ್ರವೇಶ ನಿಷಿದ್ಧ ಆಗದಿದ್ದರೂ, ಆತ ದೇವಾಲಯವನ್ನು ಪ್ರವೇಶಿಸುತ್ತಿರಲಿಲ್ಲ. ಆತನ ಶುನಕಗಳನ್ನು ಆಲಯದೊಳಕ್ಕೆ ಕಳುಹಿಸುವುನು. ನಾನು ಸ್ವಾಮಿಯ ಪ್ರಸಾದವನ್ನು ಬುತ್ತಿಕಟ್ಟಿ, ಅವುಗಳಿಗೆ ಕೊಡಲೂ, ಅವು ಆ ಆಗಸನಿಗೆ ಕೊಡುವವು. ನೀನು ಎರಡು ಶುನಕಗಳನ್ನು ಕಂಡೆ ಅಲ್ಲವೇ, ಒಟ್ಟು 4 ಇಲ್ಲಿಗೆ ಬಂದನಂತರ, ನಾನು ಪ್ರಸಾದವನ್ನು ಕೊಡುವೆನು'' ಎಂದು ಆ ಅರ್ಚಕರು ತಿಳಿಸಿದರು. ನಂತರ ನಾವೆಲ್ಲಾ ಹೊರಗೆ ಹೋಗಿ ನೋಡಲೂ 4 ಶುನಕಗಳು ಬಂದಿದ್ದವು. ಅರ್ಚಕರು, ಪ್ರಸಾದದ ಬುತ್ತಿಕೊಡಲು, ನನ್ನ ಸುತ್ತಲೂ ನಿಂತವು. ಆಗ ಅರ್ಚಕರು, "ಆ ನಾಯಿಗಳ ಇಚ್ಛೆ ಪ್ರಕಾರ ನೀನೂ, ಜೊತೆಯಲ್ಲಿ ಆ ಅಗಸನ ಬಳಿಹೋಗು, ಶುಭವಾಗುವುದು'' ಎಂದರು.

ನನ್ನ ಜೀವನ ಸಂಘಟನೆಗಳು, ಶ್ರೀವಲ್ಲಭರ ನಿರ್ದೇಶನದಲ್ಲೇ ನಡೆಯುತ್ತಿವೆ ಎಂದು ತಿಳಿದುಕೊಂಡೆನು. ಸುಬ್ಬಯ್ಯನ ಮನೆಯಲ್ಲಿ ನಡೆದ ಅವಾಂತರದ ನಂತರ, ಕುಲಮತ ಭೇದಗಳು ನಾವು ಹೆಚ್ಚಿಗೆ ಪಾಲಿಸಬಾರದೆಂದು ನನಗೆ ಅನಿಸಿತು. ಛಂಡಾಲ, ಮರು ಜನುಮದಲ್ಲಿ ಬ್ರಾಹ್ಮಣನಾಗಿ, ಬ್ರಾಹಣ ಅದೇ ರೀತಿ, ಛಂಡಾಲನಾಗಿ ಜನಿಸಬಹುದು. ಜೀವ, ತಾನು ಮಾಡಿದ ಪಾಪ ಪುಣ್ಯಗಳ ಪ್ರಕಾರ ಜನುಮ ಜನುಮಾಂತರಗಳವರೆಗೂ, ಕರ್ಮ ಪ್ರವಾಹದಲ್ಲಿ ಸಿಕ್ಕಿಬೀಳುತ್ತಿರುವನೆಂದು ತಿಳಿದುಕೊಂಡೆನು.

## ಶಂಕರ ಭಟ್ಟನಿಗೂ ತಿರುಮಲದಾಸನಿಗೂ ಮಧ್ಯದ ಸಂವಾದ

ಅರ್ಚಕರ ಆದೇಶಾನುಸಾರ ನಾನು ಅಗಸ ವಾಸಿಸುವ ಮನೆಗೆ ಹೋದೆನು. ತಿರುಮಲದಾಸು ಎಂಬುವ ಆತನು 70 ವರುಷದ ಅಗಸ. ತನ್ನ ಗುಡಿಸಿಲಿನಿಂದ ಹೊರಗೆ ಬಂದು, ನನ್ನನ್ನ ಆದರದಿಂದ ಒಂದು ಮಂಚದಮೇಲೆ ಕೂಡಿಸಿದರು. ಬ್ರಾಹ್ಮಣ ಜನುಮದಹಂಕಾರ ನನ್ನಲ್ಲಿ ಬಹಳಷ್ಟು ಸತ್ತಿತ್ತು. ಶ್ರೀಪಾದ ಶ್ರೀವಲ್ಲಭರ ಭಕ್ತರು ಯಾರೇ ಆಗಲಿ, ನನಗೆ ಆತ್ಮೀಯರೆನಿಸಿದರು. ಶ್ರೀ ವರಸಿದ್ಧಿ ವಿನಾಯಕರ ಪ್ರಸಾದ, ಅವನು ನನಗೆ ಕೊಡಲು ನಾನು ಅದನ್ನು ಶ್ರೀಪಾದ ಶ್ರೀವಲ್ಲಭರ ಪ್ರಸಾದವಾಗಿ ಸ್ವೀಕರಿಸಿದೆನು. ನಂತರ, ತಿರುಮಲದಾಸ ಹೀಗೆ ನುಡಿಯಲು ಆರಂಭಿಸದರು.

## ಅಯಿನವಿಲ್ಲಿ ಗಣಪತಿ ಶ್ರೀಪಾದ ಶ್ರೀವಲ್ಲಭರಾಗಿ ಅವತರಿಸುವುದು

"ಸ್ವಾಮಿ! ಈ ದಿನದ, ನಿಮ್ಮ ದರ್ಶನ ಭಾಗ್ಯ ಸುಕೃತ. ನೀವು ನನ್ನ ಬಳಿಗೆ ಎಂದು ಬರುವಿರೋ, ಎಂದು ನಾನು ಮಲ್ಯಾದ್ರಿಪುರ, ಪೀಠಿಕಾಪುರದ ವಿಶೇಷಗಳು ತಿಳಿಸುವೆನೋ ಎಂದು ಆತುರತೆದಿಂದ ಇದ್ದೇನೆ. ಮಗೂ, ಶಂಕರಾ! ಶ್ರೀ ವಿನಾಯಕರ ಪ್ರಸಾದ ತೆಗೆದುಕೊಂಡಿದ್ದೀಯ. ಈ ದಿನವೇ ನೀನು ಶ್ರೀಪಾದ ಶ್ರೀವಲ್ಲಭರ ಚರಿತಾಮೃತಕ್ಕೆ ಶ್ರೀಕಾರ ಮಾಡು. ಕುರುವಪುರದಂದು ಶ್ರೀವಲ್ಲಭರ ಆಶೀರ್ವಾದ ಲಭಿಸುವುದು. ನಾನು ಪೂರ್ವ ಜನುಮದಲ್ಲಿ ದೊಡ್ಡ ವೇದ ಪಂಡಿತನು. ಆದರೇ ಪರಮಲೋಭಿ ಆಗಿದ್ದೆ. ನಾನು ಸಾಯುವ ಸಮಯದಲ್ಲಿ, ಆಗಲೇ ಹುಟ್ಟಿದ ಒಂದು ಹಸುವಿನ ಕರು, ಹಳೇ ಬಟ್ಟೆಯನ್ನು ತಿನ್ನುತ್ತಿರುವುದು ಕಂಡು, ಬಟ್ಟೆ ಭದ್ರವಾಗಿಟ್ಟುಕೊಳ್ಳಬೇಕೆಂದು ನನ್ನ ಮಕ್ಕಳಿಗೆ ಸೂಚಿಸಿದ್ದೆ. ಆ ಸಮಯದಲ್ಲಿ ಕೊಳೆ ಬಟ್ಟೆ ಮೇಲೆ ದೃಷ್ಟಿ ಇದ್ದಿದ್ದರಿಂದ ಈ ಜನುಮದಲ್ಲಿ ಅಗಸನಾಗಿ ಹುಟ್ಟಿದ್ದೇನೆ. ಸಾಯುವ ಸಮಯದಲ್ಲಿ ಮನಸ್ಸು ಯಾವ ವಿಷಯಗಳಲ್ಲಿ ಮಗ್ನವಾಗುತ್ತೋ ಅದಕ್ಕೆ ಸಂಬಂಧ ಪಟ್ಟ ಜನುಮ ಲಭಿಸುವುದು. ನನ್ನ ಪೂರ್ವಜನ್ಮದ ಪುಣ್ಯವಶದಿಂದ, ಗರ್ತಪುರಿ (ಗುಂಟೂರು) ಮಂಡಲದ, ಮಲ್ಯಾದ್ರಿಪುರದಲ್ಲಿ ಜನಿಸಿದ್ದೇನೆ. ಇದೇ ಈಗಿನ ಮಲ್ಲಾದಿ ಗ್ರಾಮ. ಅಲ್ಲಿ 'ಮಲ್ಲಾದಿ' ಎಂಬುವ, ಗೃಹನಾಮ ಉಳ್ಳ ಎರಡು ಕುಟುಂಬಗಳಲ್ಲಿ ಒಬ್ಬರು ಮಲ್ಲಾದಿ ಬಾಪನ್ನಾವಧಾನಿ, ಮಹಾಪಂಡಿತರು. ಹರಿತಸ ಗೋತ್ರದವರು. ಎರಡನೆಯ ಕುಟುಂಬ, ಮಲ್ಲಾದಿ ಶ್ರೀಧರ ಅವಧಾನಿ. ಇವರೂ ದೊಡ್ಡ ಪಂಡಿತರೇ, ಕೌಶಿಕ ಗೋತ್ರಸಂಭೂತರು. ಈ ಇಬ್ಬರು ಭಾವ, ಭಾವಮೈದನರು, ಗೋದಾವರಿ ಮಂಡಲದ 'ಅಯಿನವಿಲ್ಲಿ' ಎಂಬ ಗ್ರಾಮದಲ್ಲಿ ನಡೆದ ಸ್ವರ್ಣಗಣಪತಿ ಮಹಾಯಜ್ಞಕ್ಕೆ ಹಾಜರಾದರು (ಶ್ರೀಧರ ಅವಧಾನಿ ಸಹೋದರಿ ರಾಜಮಾಂಬೆಯನ್ನು ಬಾಪನ್ನಾವಧಾನಿಗೆ ಕೊಟ್ಟು ಮದುವೆ ಮಾಡಿದ್ದರು). ಶಾಸ್ತ್ರಪ್ರಕಾರ ಕೊನೆಯ ಹೋಮವನ್ನು ಗಣಪತಿ ಅವನ ಸೊಂಡಿಲಿನಿಂದ ಸ್ವೀಕರಿಸಬೇಕೆಂದು, ಸ್ವರ್ಣಮಯ ಕಾಂತಿಯಿಂದ ಗಣಪತಿ ದರ್ಶನ ಕೊಡಬೇಕೆಂದು ಕೆಲ ಪಂಡಿತರು ವಾದ ಮಾಡಿದರು. ಆ ಮಹಾಯಜ್ಞ ನಿರ್ವಾಹಕರಾಗಿ ಕುಳಿತಿದ್ದ ಆ ಮಹಾ ಪಂಡಿತರು ಇರುವುರೂ ಮಹಾಗಣಪತಿಯನ್ನು ಅಲ್ಲಿ ಪ್ರತ್ಯಕ್ಷಿಸಬಲ್ಲೆವೆಂದು ವೇದೋಕ್ತ ಪ್ರಕಾರವಾಗಿ ಎಲ್ಲಾ ಕಾರ್ಯಗಳನ್ನೂ ನಿರ್ವಹಿಸಬಲ್ಲೆವೆಂದು ಪ್ರತಿಜ್ಞೆ ಮಾಡಿದರು. **ಯಜ್ಞದ ಕೊನೆಯ ಹಂತದ ವೇಳೆ ಸ್ವರ್ಣಕಾಂತಿಗಳಿಂದ ಗಣಪತಿ ದರ್ಶನ ಕೊಟ್ಟು, ಆಹುತಿಯನ್ನು ತನ್ನ ಸೊಂಡಿಲಿನಿಂದ ಸ್ವೀಕರಿಸಿ, ಸದ್ಯದಲ್ಲೇ ಗಣೇಶ ಚತುರ್ಥಿಯ ದಿನ, ಸರ್ವ ಕಳಾಸಂಪನ್ನರಾಗಿ ಶ್ರೀಪಾದ ಶ್ರೀವಲ್ಲಭರ ರೂಪದಲ್ಲಿ ಅವತರಿಸಲಿದ್ದಾರೆಂದು ತಿಳಿಸಿದರು.** ಯಜ್ಞಕ್ಕೆ ಹಾಜರಾದವರೆಲ್ಲಾ ಆಶ್ಚರ್ಯಗೊಂಡರು. ಆದರೇ ಅಲ್ಲಿ ನೆರದಿದ್ದ ಮೂವ್ವರು ನಾಸ್ತಿಕರು ಕಂಡುಬಂದದ್ದೆಲ್ಲಾ ಇಂದ್ರಜಾಲ ಅಥವಾ ಮಹೇಂದ್ರಜಾಲವೇ ಹೊರತು, ಶ್ರೀ ಗಣೇಶರಲ್ಲವೆಂದು, ಅದೇ ನಿಜವಾದರೆ ಮತ್ತೊಮ್ಮೆ ದರ್ಶನ ನೀಡಬೇಕೆಂದು ಸಪ್ಪೆವಾದ ಮಾಡಿದರು.

## ಕಾಣೇಪುರ ವಿನಾಯಕರ ಮಹಿಮೆ

ಆಗ, ಹೋಮಕುಂಡದಲ್ಲಿನ ಭಸ್ಮ ಮಾನವಾಕಾರ ಹೊಂದಿ, ನಂತರ ಅದು ಶ್ರೀ ಮಹಾಗಣಪತಿಯಾಗಿ ಮಾರ್ಪಟ್ಟಿತು. ಆ ಮಹಾ ಗಣಪತಿಯ ರೂಪ, "ಮೂರ್ಖರೇ, ತ್ರಿಪುರಾಸುರನನ್ನು ವಧಿಸುವ ಸಮಯದಲ್ಲಿ ಶಿವನೂ, ಬಲಿಚಕ್ರವರ್ತಿಯನ್ನು ಎದುರಿಸುವ ಮುನ್ನ ವಿಷ್ಣುದೇವರೂ, ಶಿವನ ಆತ್ಮಲಿಂಗವನ್ನು ತೆಗೆದುಕೊಂಡು ಹೋಗುತ್ತಿದ್ದ ರಾವಣನ್ನು ಎದುರಿಸಲು ವಿಷ್ಣುಭಗವಾನರೂ, ಮಹಿಷಾಸುರನನ್ನು ವಧಿಸುವ ಸಮಯದಲ್ಲಿ ಪಾರ್ವತಿ ದೇವಿಯೂ, ಭೂಭಾರವನ್ನು ಸಹಿಸುವುದರ ಮುನ್ನ ಆದಿಶೇಷನೂ, ಎಲ್ಲಾ ಸಿದ್ಧಿಗಳೂ ಪ್ರಾಪ್ತವಾಗುವ ಮುನ್ನ ಸಿದ್ಧಮುನಿಗಳೂ, ಪ್ರಪಂಚವನ್ನು ಜಯಿಸಲು ಮನ್ಮಥನೂ, ಇದೇ ವಿಧವಾಗಿ ಸಮಸ್ತ ದೇವತೆಗಳೂ, ನನ್ನನ್ನು ಆರಾಧಿಸಿದ ನಂತರವೇ ಅವರ ಕೋರಿಕೆಗಳನ್ನು ಹೊಂದಿದರು. ಎಲ್ಲಾ ಶಕ್ತಿಗಳಿಗೆ ನಿಲಯವೂ ನಾನೇ, ಶಕ್ತಿವಂತನೂ ನಾನೇ. ದೈವೀ ಶಕ್ತಿಗಳೂ ರಾಕ್ಷಸ ಶಕ್ತಿಗಳೂ ಕೂಡಾ ನನ್ನಲ್ಲೇ ಇವೆ. ಎಲ್ಲಾ ವಿಘ್ನಗಳಿಗೂ ಕರ್ತನು ನಾನೇ, ಅವನ್ನು ಹರಿಸುವುನೂ ನಾನೇ. ದತ್ತಾತ್ರೇಯರೆಂದರೆ ಯಾರು ಅಂದುಕೊಂಡಿದ್ದೀರಾ? ಹರಿಹರ ಪುತ್ರನಾದ ಧರ್ಮಶಾಸ್ತನೇ. ವಿಷ್ಣು ರೂಪದಲ್ಲಿ, ಬ್ರಹ್ಮರುದ್ರರು ಮಿಲನವಾದುದ್ದೇ ಶ್ರೀದತ್ತ ರೂಪ, ಧರ್ಮಶಾಸ್ತ ರೂಪದಲ್ಲಿ ಗಣಪತಿ, ಷಣ್ಮುಖರು ವಿಲೀನವಾದ ರೂಪ ಸಹಾ ದತ್ತ ಪ್ರಭು ರೂಪವೇ ಶ್ರೀ ದತ್ತರು ಸದಾ ತ್ರಿಮೂರ್ತಿ ಆತ್ಮವೇ ಎಂದು ತಿಳಿಯರಿ. **ಶ್ರೀಪಾದ ಶ್ರೀವಲ್ಲಭ ರೂಪದಲ್ಲಿ ಮಹಾಗಣಪತಿ ಇರುವನೆಂಬುದಕ್ಕೆ ತಾರ್ಕಾಣವಾಗಿ ಶ್ರೀಪಾದ ಶ್ರೀವಲ್ಲಭರು ಗಣೇಶ ಚತುರ್ಥಿ ದಿನವೇ ಅವತರಿಸಿದ್ದಾರೆ.** ಸುಬ್ರಹ್ಮಣ್ಯ ತತ್ವದಿಂದ, ಅವರದ್ದು ಕೇವಲ ಜ್ಞಾನಾವತಾರ ಎಂದು ತಿಳಿಯರಿ. ಧರ್ಮಶಾಸ್ತ ತತ್ವದಿಂದ, ಅವರದ್ದು ಎಲ್ಲಾ ಧರ್ಮಶಾಸ್ತ್ರ ಕರ್ಮಗಳಿಗೂ, ಮೊದಲು ಪುನಾದಿ ಎಂದು, ಮೂಲವೆಂದೂ ಗಮನಿಸಿರಿ. ಮುಂಬರುವ ಅವರ ಅವತಾರ, ತಂದೆ ತಾಯಿಯ ಸಂಯೋಗ ಫಲವಲ್ಲ. ಜ್ಯೋತಿಸ್ವರೂಪವೇ ಮಾನವಾಕೃತಿ ಹೊಂದುವುದು.

ಇಲ್ಲಿಯೇ ನಿಮ್ಮನ್ನು ಶಪಿಸುತ್ತಿದ್ದೇನೆ. ಸತ್ಯಸ್ವರೂಪವನ್ನು ಕಣ್ಣಾರೆನೋಡಿಯು ಸಹ ಅಸತ್ಯವನ್ನಾಡಿದಕ್ಕೆ ನಿಮ್ಮಲ್ಲಿ ಒಬ್ಬರು ಕುರುಡನಾಗಿ ಹುಟ್ಟುವನು. ಸತ್ಯಸ್ವರೂಪವನ್ನು ಮಾತಿನಲ್ಲಿ ತಿಳಿಸದೇ ಅವಹೇಳನ ಮಾಡಿದಕ್ಕೆ ನಿಮ್ಮಲ್ಲಿನ ಒಬ್ಬ ಮೂಗನಾಗುವನು. ಇಷ್ಟೊಂದು ಭಕ್ತರು ಸತ್ಯವನ್ನು ಕುರಿತು ತಿಳಿಸುತ್ತಿದ್ದರೂ ಕೇಳದಂತಹ ಕಾರಣ ನಿಮ್ಮಲ್ಲಿ ಒಬ್ಬ ಕಿವುಡನಾಗಿ ಹುಟ್ಟುವನು. ನೀವು 3 ಜನ, ಅಣ್ಣತಮ್ಮಂದರಂತೆ ಜನ್ಮಿಸಿ, ನನ್ನ ಸ್ವಯಂಭೂಮೂರ್ತಿಯನ್ನು ದರ್ಶಿಸಿದ ನಂತರ, ನೀವು ದೋಷ ವಿಮುಕ್ತರಾಗುವಿರಿ" ಎಂದು ನುಡಿದರು.

ಮಗೂ! ಆ ಮುವ್ವರೂ. ಈ ಕಾಣಿಕಾಪುರದಂದು ಸಹೋದರರಾಗಿ ಜನ್ಮಿಸಿದರು. ತ್ರಿಮೂರ್ತಿಗಳನ್ನು, ತ್ರಿಮೂರ್ತ್ಯಾತ್ಮಕನಾದ ದತ್ತನನ್ನು ದೂಷಿಸಿದರೇ ಅನೇಕಾನೇಕ ಅನರ್ಥಗಳು ಮೂಡುವವು. ಸೋದರರಾದ ಈ ಮುವ್ವರೂ ಒಂದು 'ಕಾಣಿ' ಭೂಮಿಯಲ್ಲಿ ಈ ಗ್ರಾಮದಲ್ಲೇ ವ್ಯವಸಾಯ ಮಾಡುತ್ತಿದ್ದರು. ಆ ಗದ್ದೆಯಲ್ಲೇ ಇದ್ದ ಬಾವಿಯಿಂದ ನೀರು ಹೊರಕ್ಕೆ ಎತ್ತಿ ಉಪಯೋಗಿಸುತ್ತಿದ್ದರು. ಒಮ್ಮೆ ಅನಾವೃಷ್ಟಿ ಕಾಣಿಸಿತು. ಬಾವಿಯ ನೀರು ಮುಗಿದುಹೋಗಲೂ, ಬಾವಿಯೊಳಕ್ಕೆ ಇಳಿದು, ನೀರು ಉಕ್ಕಿಸಲೂ ಹಾರೆಯಿಂದ ಅಗಿಯುತ್ತಿದ್ದರು. ಅಲ್ಲಿನ ಕಲ್ಲಿಗೆ ತಗಲಿ ರಕ್ತ ಚಿಮ್ಮಿತು. ಆ ರಕ್ತ ಕೈಗೆ ತಾಕಿದ ತಕ್ಷಣವೇ ಮೂಕನಿಗೆ ಮಾತು ಬಂತು. ನೀರು ಯಥಾರೀತಿ ಬಾವಿಗೆ ಬಂದುಬಿಟ್ಟಿತು. ಆ ನೀರು ಕೈಗೆ ತಾಕಿದ ಕೂಡಲೇ ಕಿವುಡನಿಗೆ ಕಿವಿ ಕೇಳಲಾರಂಭವಾಯಿತು. ಆ ಕಲ್ಲನ್ನು ತಾಕಿದ ತಕ್ಷಣವೇ ಕುರುಡನಿಗಿದ್ದ ದೋಷ ತೊಲಗಿತು. ಆ ಬಾವಿಯೊಳಗಿನ ಕಲ್ಲೇ ಸ್ವಯಂಭೂ ಶ್ರೀ ವಿನಾಯಕ ದೇವರು. ಹಾರೆ ತಗಲಿದ ಕಾರಣ ಅಲ್ಲಿಂದ ರಕ್ತ ಬರಲಾರಂಭಿಸಿತ್ತು.

ಆ ವರಸಿದ್ಧಿ ವಿನಾಯಕರನ್ನು ಪ್ರತಿಷ್ಠೆ ಮಾಡಲು ಸತ್ಯಋಷೀಶ್ವರರಾದ ಬಾಪನ್ನಾವಧಾನಿಯು, ಅವರ ಬಾವಮೈದುನರಾದ ಶ್ರೀಧರಾವಧಾನಿಯು ಅಲ್ಲಿಗೆ ಬಂದರು. ಶ್ರೀ ವರಸಿದ್ಧಿ ವಿನಾಯಕರು ಅವರನ್ನು ಉದ್ದೇಶಿಸಿ ''ಮಹಾಭೂಮಿಯಿಂದಾ ಈ ಲೋಕಕ್ಕೆ ಬಂದಿರುವೆನು. ಭೂತತ್ತ್ವದಲ್ಲಿ ಹುಟ್ಟಿದ್ದೇನೆ. ಈ ತತ್ತ್ವ ಬಹಳಷ್ಟು ಬದಲಾಯಿಸುವುದು. ಜಲ, ಅಗ್ನಿ, ವಾಯು ಮತ್ತು ಆಕಾಶ ತತ್ತ್ವಗಳಲ್ಲಿ ಈಗಾಗಲೇ ನಾನು ಅವತರಿಸಿದ್ದೇನೆ. ಅಯಿನವಿಲ್ಲಿಯಲ್ಲಿ ನೀವು ಮಾಡಿದ ಆ ಮಹಾಯಜ್ಞದಲ್ಲಿನ ಹೋಮ ಭಸ್ಮವೇ ಈ ರೂಪವನ್ನು ಹೊಂದಿದೆ. ಶ್ರೀಶೈಲದಲ್ಲಿ ಕಲೆಗಳು ಕಡಿಮೆ ಕಾಣಬರುತ್ತಿವೆ. ನೀವು ನನ್ನೀ ಆದೇಶದಂತೆ ಅಲ್ಲಿ ಸೂರ್ಯ ಮಂಡಲದ ತೇಜಸ್ಸನ್ನು ಹೋಲುವ ಶಕ್ತಿಪಾತವನ್ನು ಮಾಡಿ. ಆದೇ ದಿನ, ಗೋಕರ್ಣದಲ್ಲಿಯು, ಕಾಶಿಯಲ್ಲಿಯು, ಬದರೀ ಮತ್ತು ಕೇದಾರದಲ್ಲಿ ಸಹಾ ನನ್ನ ಅನುಗ್ರಹದಿಂದ ಶಕ್ತಿಪಾತಗಳು ನಡೆಯುವವು. ಶ್ರೀಪಾದ ಶ್ರೀವಲ್ಲಭರ ಅವತಾರ ಸಮಯ ಹತ್ತಿರವಾಗುತ್ತಿದೆ. ಶ್ರೀಧರಾ! ನಿನ್ನ ಮನೆಯ ನಾಮವನ್ನು ಶ್ರೀಪಾದ ಎಂದು ಬದಲಾಯಿಸುತ್ತಿದ್ದೇನೆ. ಕೌಶಿಕರ ಗೋತ್ರದವರಾದ ನಿನ್ನ ವಂಶಸ್ಥರು, ಇಲ್ಲಿಂದ ಶ್ರೀಪಾದ ಗೃಹನಾಮದಲ್ಲಿ ಶೋಭಿಸುವರಾಗಲಿ'' ಎಂದು ನುಡಿದರು.

ಅಗಸನಾದ ಶ್ರೀ ತಿರುಮಲದಾಸ, ಶಂಕರ ಭಟ್ಟನನ್ನ ಉದ್ದೇಶಿಸಿ, ''ಮಗೂ ಶಂಕರಾ! ಮಲ್ಯಾದ್ರಿಪುರದಿಂದ. ಬಾಪನ್ನಾವಧಾನಿ ಮತ್ತು ಶ್ರೀಧರಾವಧಾನಿ, ಪೀಠಿಕಾಪುರದಲ್ಲಿ ವಾಸಮಾಡಲೂ ವಲಸೇ ಹೋಗಿದ್ದಾರೆ. ನಾನು ಶ್ರೀಪಾದ ಶ್ರೀವಲ್ಲಭರ ಬಾಲಕ್ರೀಡೆಗಳನ್ನೆಷ್ಟೊ ನೋಡಿದ್ದೇನೆ. ನಿನಗೆ, ಆವೆಲ್ಲವೂ ಸವಿಸ್ತಾರವಾಗಿ ತಿಳಿಸಬಲ್ಲೆನು. ನನ್ನ ಮೊದಲ ಪತ್ನಿಯೊಡನೆ ನನಗೊಂದು ಗಂಡು ಮಗು ಇದ್ದಾನೆ. ಅವನು ಹರಿದಾಸನೆಂಬುವ ನಾಮದಿಂದ ಕುರುವಪುರದಲ್ಲೇ ವಾಸಮಾಡುತ್ತಾ, ಶ್ರೀಪಾದರಿಗೆ ಯಥೋಚಿತವಾದ ಸೇವೆ ಸಲ್ಲಿಸುತ್ತಿದ್ದಾನೆ. ನಾನು ಶ್ರೀಪಾದರ ಆಜ್ಞೆಯಿಂದ, ಕಾಣಿಕಾಪುರದಲ್ಲೇ ನೆಲೆದು, ನನ್ನ ಎರಡನೆಯ ಪತ್ನಿ ಮತ್ತು ಸಂತಾನ ಜೊತೆ, ಕುಲವೃತ್ತಿ ಮಾಡುತ್ತಾ ಜೀವನ ಸಾಗಿಸುತ್ತಿದ್ದೇನೆ.

ನೀನು ಶ್ರೀ ಪೀಠಿಕಾಪುರದಲ್ಲಿ ಎಷ್ಟೋ ಪುಣ್ಯಪುರುಷರನ್ನು ಭೇಟಿಮಾಡುವೆ. ಅದರಲ್ಲಿ ವೈಶ್ಯ ಶ್ರೇಷ್ಠನಾದ, ವೆಂಕಟಪ್ಪಯ್ಯ ಶ್ರೇಷ್ಠಿ ಇಂದ, ಅದೆಷ್ಟೋ ಮಹತ್ತರ ವಿಷಯಗಳು ನಿನಗೆ ತಿಳಿದು ಬರುವವು. ವೆಂಕಯ್ಯಪ್ಪಶ್ರೇಷ್ಠಿ ಎಂದು ಬದುಲು ನಾಮದಲ್ಲಿ ಕೂಗಲ್ಪಟ್ಟ ಶ್ರೇಷ್ಠಿವಂಶಕ್ಕೆ, ಶ್ರೀಪಾದರ ಅಭಯಹಸ್ತ ಇತ್ತು. ವತ್ಸವಾಯ ಗೃಹನಾಮ ಉಳ್ಳ ನರಸಿಂಹರವರನ್ನು ಸಹಾ ಭೇಟಿ ಮಾಡು. ಅವರಿಗೆ ಶ್ರೀಪಾದರ ಜೊತೆ ಗಾಢವಾದ ಅನುಬಂಧ ಇದೆ. ನೀನು ಬರೆಯಲಿರುವ ಶ್ರೀಪಾದ ಶ್ರೀವಲ್ಲಭರ ಚರಿತ್ರೆಯನ್ನು, ಶ್ರೀ ಚರಣರು ಆಶೀರ್ವದಿಸುವರು. ನಿನ್ನ ಗ್ರಂಥಕ್ಕೆ ಸರಿತೂಗುವ ವಿವರಣೆ, ಬೇರ್‍ಯಾವುದೂ ಬರಲಾರದು. ಇದು ಶ್ರೀಚರಣರ ಆಜ್ಞೆ'' ಎಂದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**



ಸ್ವಯಂಭು ಶ್ರೀ ಗಣಪತಿ, ಕಾಣಿಪಾಕ್ಕಂ



ಶ್ರೀ ಲಕ್ಷ್ಮೀ ವೆಂಕಟೇಶ್ವರಸ್ವಾಮಿ

## ಅಧ್ಯಾಯ - 6

# ನರಸಾವಧಾನರ ವೃತ್ತಾಂತ

ಮೂರನೇ ದಿನ ಬೆಳಿಗ್ಗೆ, ಜಪ ಧ್ಯಾನಾದಿಗಳನಂತರ ತಿರುಮಲದಾಸು ಹೀಗೆ ಹೇಳಲಾರಂಭಿಸಿದನು. ''ಅಯ್ಯಾ! **ಶ್ರೀಪಾದ ಶ್ರೀವಲ್ಲಭರು ಆಲದ ಮರದಂತೆ ಈ ಚರಾಚರ ಸೃಷ್ಟಿಗೆಲ್ಲಾ ಮೂಲ. ಅವರ ಅಂಶಾವತಾರಗಳೆಲ್ಲಾ, ಆ ವೃಕ್ಷದ ಬಿಳಿಲು ತರಹಾ. ಬಿಳಿಲುಗಳು ಭೂಮಿಗೆ ಇಳಿದು, ಸ್ವತಂತ್ರತೆ ಹೊಂದಿದಹಾಗೆ ಬಂದರೂ, ಅವೆಲ್ಲಕ್ಕೂ ಆಧಾರ ಆ ಆಲದ ಮರವೇ. ದೇವದಾನವರೂ ಸೇರಿ, ಸಮಸ್ತ ಪ್ರಾಣಿಗಳಿಗೂ ಅವರೇ ಆಧಾರ, ಆಶ್ರಯವೂ ಸರಿ. ಅವರಿಂದಲೇ ಸಮಸ್ತ ಶಕ್ತಿಗಳು ಉದ್ಭವಿಸಿ, ಪುನಃ ಅವರಲ್ಲೇ ಲೀನವಾಗುತ್ತಿರುವವು.** ಪರ್ವತ ಶಿಖರ ಸೇರಿದ ವ್ಯಕ್ತಿಗೆ, ಎಲ್ಲಾ ದಾರಿಗಳೂ ಒಂದೇ ತರಹ ಇರುವವು. ಹಾಗೇ ಎಲ್ಲಾ ಸಂಪ್ರದಾಯದವರೂ, ದತ್ತ ತತ್ತ್ವದಲ್ಲಿ ಸಮನ್ವಯ ಹೊಂದುವರು. ಸಮಸ್ತ ಪ್ರಾಣಿಗಳಿಗೂ ಕಾಂತಿ ಪರಿಪೂರ್ಣವಾಗಿರುವುದು. ನಾನು ಪೀಠಿಕಾಪುರದಲ್ಲಿದ್ದ ದಿನಗಳಲ್ಲಿ, ಅಲ್ಲಿಗೊಬ್ಬ ಯೋಗಿ ಬಂದನು. ಆತ ಇಂತಹ ವಿಗ್ರಹದ ಕಾಂತಿ ಪರಿಪೂರ್ಣತೆ, ಈ ತರಹಾ ಇದೆ, ಈ ಮನುಷ್ಯನ ಕಾಂತಿ ವಿಶೇಷ ಈ ಬಣ್ಣದಲ್ಲಿ, ಇಷ್ಟು ದೂರ ಅರಳಿದೆ ಎಂದು ಹೇಳುತ್ತಿದ್ದನು. ಆತ ಶ್ರೀ ಕುಕ್ಕುಟೇಶ್ವರಾಲಯಕ್ಕೆ ಬಂದು, ಸ್ವಯಂ ಭೂದತ್ತನ ಕಾಂತಿ ಎಷ್ಟುದೂರ ಅರಳಿದೆ ಎಂದು, ಯಾವ ಬಣ್ಣದಲ್ಲಿ ಇದೆ ಎಂದು ಪರೀಕ್ಷೆ ಮಾಡಲು ಹೊರಟನು. ಅವರಿಗೆ ಶ್ರೀ ದತ್ತ ಸ್ಥಾನದಲ್ಲಿ ಶ್ರೀಪಾದ ಶ್ರೀವಲ್ಲಭರು ದರ್ಶನವಿತ್ತರು. ಅವರ ತಲೆಸುತ್ತಲೂ, ವಿದ್ಯುತ್ ಬಳ್ಳಿಗಳಂತೆ ಕಾಂತಿ ಅದ್ಭುತವಾಗಿ ವ್ಯಾಪಿಸಿತ್ತು. ಆ ಧವಳ ಕಾಂತಿಯನ್ನು ಸುತ್ತಿ, ದಿಗಂತಕ್ಕೆ ವ್ಯಾಪಿಸುವ, ನೀಲಿ ಬಣ್ಣದ ಕಾಂತಿ ಕಂಡು ಬಂತು. ಆ ಅದ್ಭುತ ಮೂರ್ತಿ, ಆ ಯೋಗಿಯನ್ನು ಕಂಡು, ''ಮಗು! ಇತರರ ಸೂಕ್ಷ್ಮಶರೀರಗಳು ಎಷ್ಟು ಗಾತ್ರ ಅರಳಿವೆಯೋ ಎಂದು ತಿಳಿಯುವ ಹುಚ್ಚು ಕಾರ್ಯದಿಂದ, ಅಮೂಲ್ಯವಾದ ಸಮಯವನ್ನು ವೃಥಾ ಮಾಡುತ್ತಿದ್ದೀಯ. ಮೊದಲು ನಿನ್ನನ್ನು ಕುರಿತು ಯೋಚಿಸು. ಕೆಲವೇ ದಿನಗಳಲ್ಲಿ ಸಾವು ಕಾದಿದೆ, ಆದ್ದರಿಂದ ಸದ್ಗತಿ ಹೊಂದುವ ಯೋಚನೆ ಮಾಡು. **ಸರ್ವಸತ್ಯಗಳೂ ಮತ್ತು ಅವುಗಳ ಮೂಲವಾದ ದತ್ತನು ನಾನೇ! ಮಹಾಸಿದ್ಧರು, ಮಹಾಯೋಗಿಗಳು, ಮಹಾಭಕ್ತರು, ಪ್ರೇಮದಿಂದ ಕರೆಯಲೂ, ನಾನು ಈ ಕಲಿಯುಗದಲ್ಲಿ ಪಾದಗಯಾ ಕ್ಷೇತ್ರದಲ್ಲಿ ಅವತರಿಸಿದ್ದೇನೆ.**

ಸ್ವಾಮಿಯ ಈ ಉಪದೇಶಗಳಿಗೆ, ಆ ಯೋಗಿಯೊಳಗಿದ್ದ ಕೆಟ್ಟ ಯೋಚನೆ ಹೋಯಿತು. ಸೂಕ್ಷ್ಮಶರೀರ ಕಾಂತಿ ತಿಳಿದುಕೊಳ್ಳುವ ಆತನ ಶಕ್ತಿ ಎಲ್ಲಾ ಶ್ರೀಪಾದ ಶ್ರೀವಲ್ಲಭರಲ್ಲಿ ಸೇರಿಕೊಂಡಿತು. ನಂತರ, ಆತ ಶ್ರೀವಲ್ಲಭರನ್ನು ಅವರ ಸ್ವಗೃಹದಲ್ಲಿ ದರ್ಶನ ಮಾಡಿಕೊಂಡು, ಧನ್ಯನಾದನು. ''ಶ್ರೀಪಾದರ ಸುತ್ತಲೂ ಅರಳಿದ ಆ ಸ್ವಚ್ಛ ಧವಳಕಾಂತಿ, ಶ್ರೀವಲ್ಲಭರು ಅತ್ಯಂತ ನಿರ್ಮಲವಾದವರು ಎಂದು, ಸಂಪೂರ್ಣ ಯೋಗಾವತಾರಿ ಎಂದು, ನೀಲಿ ಬಣ್ಣದ ಪ್ರಕಾಶ, ಅವರು ಅನಂತ ಪ್ರೇಮ, ಕರುಣೆಯಿಂದ ತುಂಬಿರುವರೆಂದು ಈ ಬಣ್ಣಗಳು ಸೂಚಿಸುತ್ತವೆ'' ಎಂದು ಯೋಗಿ ಹೇಳಿದರು.

ಆ ಯೋಗಿ ಹೊರಟ ನಂತರ, ಆಸಕ್ತಿಕರವಾದ ಚರ್ಚೆ ನಡೆಯಿತು, ಚತುರ್ವರ್ಣ ವಿಭಾಗ, ಸೂಕ್ಷ್ಮಶರೀರಗಳ ಕಾಂತಿಭೇದ ಅನುಸಾರ ನಿರ್ಣಯಿಸಬೇಕೆ? ಇಲ್ಲ ಜನುಮದ ಕುಲ, ಗೋತ್ರಾನುಸಾರವೇ ಎಂದು, ಉಪನಯನವು, ವೇದೋಕ್ತವಾಗಿ ಯಾವ

ವರ್ಣದವರಿಗೆ ಮಾಡಬೇಕು? ಶಾಸ್ತ್ರೋಕ್ತ ಅಥವಾ ಪುರಾಣೋಕ್ತ ಉಪನಯನ ಯಾವ ವರ್ಣಕ್ಕೆ? ಈ ಸುಕಾರ್ಯ ಭ್ರೂಮಧ್ಯದ ಮೂರನೇ ಕಣ್ಣಿಗೆ ಸಂಬಂಧವೆ? ಅಥವಾ ಬೇರೇ ವಿಶೇಷವೇ? ಮೇಧಾಜನವೆಂದರೇನು? ಮೊದಲಾದ ದೀರ್ಘ ಚರ್ಚೆಯಲ್ಲಿ ಪಂಡಿತರು ಏಕಾಭಿಪ್ರಾಯಕ್ಕೆ ಬರಲಿಲ್ಲ.

ಸತ್ಯ ಋಷೀಶ್ವರರೆಂದು ಹೆಸರಿದ್ದ ಮಲ್ಲಾದಿ ಬಾಪನ್ನ ಅವಧಾನಿಗಳು, ಪೀಠಿಕಾಪುರ ಬ್ರಾಹ್ಮಣ ಪರಿಷತ್ತಿಗೆ ಅಧ್ಯಕ್ಷರಾಗಿದ್ದರು. ಬಾಪನಾರ್ಯ ಎಂದು ಕರೆಯಲ್ಪಟ್ಟ ಇವರು, ಸೂರ್ಯ, ಅಗ್ನಿ ಉಪಾಸಕರು. ಪೀಠಿಕಾಪುರದ ಒಂದು ಯಜ್ಞಕ್ಕೆ ಅಧ್ಯಕ್ಷರಾಗಿದ್ದರು. ಯಜ್ಞಾಂತ್ಯದಲ್ಲಿ ಕುಂಭವೃಷ್ಟಿ ಬರಲು, ಎಲ್ಲರೂ ಸಂತೋಷಪಟ್ಟರು. ಬಾಪನಾರ್ಯರನ್ನು ತಮ್ಮ ಊರಿನಲ್ಲಿ ವಾಸವಿರಲೂ, ಕ್ಷತ್ರಿಯರಾದ ಶ್ರೀವತ್ಸವಾಯಿನರಸಿಂಹ ವರ್ಮ ಬೇಡಿದರು. ಆರ್ಯರು ಒಪ್ಪಲಿಲ್ಲ. ದ್ರವ್ಯಶುದ್ಧಿ ಇಲ್ಲದಿದ್ದರೆ, ಯಜ್ಞಯಾಗದ ಸಂಭಾವನೆ ಸಹಾ ಅವರು ಮುಟ್ಟುತ್ತಿರಲಿಲ್ಲ. ಶ್ರೀವರ್ಮ ಬಳಿ ಗಾಯತ್ರಿ ಎಂಬ ಕಪಿಲ ಹಸು ಇತ್ತು. ಸಾಕಷ್ಟು ಹಾಲು ಕೊಡುತ್ತಿತ್ತು. ಬಹಳ ಸಾಧು ಸ್ವಭಾವ ಉಳ್ಳ ಮತ್ತು ವರ್ಮರ ಅಚ್ಚುಮೆಚ್ಚಾದ ಆ ಹಸು ಕಾಣಿಸುತ್ತಿಲ್ಲವೆಂದು ಕೇಳಿ ಬಂತು, ಬಾಪನಾರ್ಯರು ಜ್ಯೋತಿಷ್ಯ ಪಂಡಿತರು ಸಹಾ. ಅವರನ್ನ ಕೇಳಲೂ, ಆ ಹಸು, ಶ್ಯಾಮಲಾಂಬ ಪುರ (ಸಾಮರ್ಲಕೋಟ)ದ ಖಾನ್‌ಸಾಬ್ ಎಂಬ ಕಟುಕರ ಬಳಿ ಇದೆ ಎಂದು, ಶೀಘ್ರವೇ ಹೋಗದಿದ್ದರೇ ವಧಿಸಲ್ಪಡುತ್ತೆಂದು ಹೇಳಿದರು. ವರ್ಮ ಶ್ಯಾಮಲಾಂಬ ಪುರಕ್ಕೆ ಒಬ್ಬ ಆಳನ್ನು ಕಳುಹಿಸಲೂ ಒಂದು ಷರತನ್ನಿತ್ತರು. ಬಾಪನಾರ್ಯ ಮಾತಿನಂತೆ, ಅವರ ಗಾಯತ್ರಿ ಸಿಕ್ಕಿದ ಪಕ್ಷಕ್ಕೆ, ಪಂಡಿತ ಬಹುಮಾನವಾಗಿ ವರ್ಮ ಕೊಡುವ 3 ಅಳತೆಯ ಭೂಮಿಯನ್ನು ಮತ್ತು ವಾಸಿಸಲೂ ಯೋಗ್ಯವಾದ ಒಂದು ಮನೆಯನ್ನೂ, ಆರ್ಯರು ಸ್ವೀಕರಿಸಬೇಕು. ಈಗ ಪಂಡಿತರು ಸಂಕಟದಲ್ಲಿ ಬಿದ್ದರು! ವರ್ಮ ಕೊಡುವ ಬಹುಮಾನ ಸ್ವೀಕರಿಸದಿದ್ದರೆ, ಗೋಹತ್ಯ ನಡೆದುಬಿಡುವುದು. ಆ ಪಾಪ ಆರ್ಯರಿಗೇ! ಆದ್ದರಿಂದ ಆರ್ಯರು ಬಹುಮಾನವನ್ನು ಒಪ್ಪಿಕೊಂಡರು. ಹಸು ರಕ್ಷಿಸಲ್ಪಟ್ಟಿತು. ಗ್ರಾಮದವರೂ ಸಂತೋಷಪಟ್ಟರು. ಶ್ರೀ ಬಾಪನ್ನಾವಧಾನಿಗಳು 3 ಅಳತೆಯ ಭೂಮಿಯ ಮಾಲೀಕರಾದರು. ಗೃಹವಸತಿಯೂ ಲಭಿಸಿತು. **ಶ್ರೀ ಬಾಪನಾರ್ಯರಿಗೆ ವೆಂಕಾವಧಾನಿ ಎಂಬ ಒಬ್ಬ ಮಗ ಮತ್ತು ಸುಮತಿ ಎಂಬ ಮಗಳೂ ಇದ್ದರು. ಸುಮತಿ ಜಾತಕದಲ್ಲಿ ಸರ್ವವಿಧವಾದ ಶುಭಲಕ್ಷಣಗಳು ಇದ್ದುದ್ದರಿಂದ ಮತ್ತು ಆಕೆ ನಡೆಯುವಾಗ, ಮಹಾರಾಣಿಯಂತೆ ಸೊಗಸಾದ ನಡಿಗೆ ಇದ್ದುದ್ದರಿಂದಲೂ, ಆಕೆಗೆ ಸುಮತಿ ಮಹಾರಾಣಿ ಎಂದು ನಾಮಕರಣವಾಯಿತು.** ಬಾಪನಾರ್ಯರು ಕೀರ್ತಿಪ್ರತಿಷ್ಠೆ ಸ್ವಲ್ಪ ಸಮಯಕ್ಕೇ ದಶದಿಕ್ಕುಗಳಿಗೂ ವ್ಯಾಪಿಸಿತು.

**ಗೋದಾವರಿ ಮಂಡಲದ ಅಯಿನವಿಲ್ಲಿ ಗ್ರಾಮದಿಂದ, ಘಂಡಿಗೋಟ ಎಂಬುವ ಗೃಹನಾಮ ಹೊಂದಿದ್ದ, ಅಪ್ಪಲ ಲಕ್ಷ್ಮೀನರಸಿಂಹರಾಜ ಶರ್ಮ ಎಂಬ ಬ್ರಾಹ್ಮಣ ಬಾಲಕನು ಪೀಠಾಪುರಕ್ಕೆ ಬಂದನು. ಆತ ಭಾರಧ್ವಾಜ ಗೋತ್ರೀಯ, ಆಪಸ್ತಂಬ ಸೂತ್ರನು. ವೆಲನಾಡು ವರ್ಗದವನು. ಅವನ ಮನೆಯಲ್ಲಿದ್ದ 'ಕಾಲಾಗ್ನಿಶಮನ ದತ್ತ' ವಿಗ್ರಹ, ಪೂಜೆಯ ವೇಳೆ, ರಾಜ ಶರ್ಮನೊಟ್ಟಿಗೆ ಸ್ಪಷ್ಟವಾಗಿ ಮಾತನಾಡುವುದು, ಆದೇಶಗಳು ಕೊಡುವುದೂ, ನಡೆಯುತ್ತಿದ್ದವು.** ಚಿಕ್ಕ ವಯಸ್ಸಿನಲ್ಲೇ ಅಪ್ಪಲರಾಜ ಶರ್ಮ, ತಂದೆ ತಾಯಿಯನ್ನು ಕಳೆದುಕೊಂಡಿದ್ದರು. ಒಮ್ಮೆ ಪೂಜಾ ವೇಳೆ, ಕಾಲಾಗ್ನಿ ಶಮನರು, ರಾಜ ಶರ್ಮನನ್ನು ಪೀಠಿಕಾಪುರಕ್ಕೆ ಹೋಗಿ ಹರಿತಸ ಗೋತ್ರ, ಆಪಸ್ತಂಬಸೂತ್ರ, ವೆಲನಾಡಿನ ವೈದಿಕ ಶಾಖೆಗೆ ಸೇರಿದ ಮಲ್ಲಾದಿ ಬಾಪನ್ನಾವಧಾನಿ ಹತ್ತಿರ ವಿದ್ಯೆಯನ್ನು ಮುಂದುವರಿಸುವಂತೆ ಆದೇಶಿಸಿದರು. ಶ್ರೀ ದತ್ತರ ಆದೇಶದ ಮೇರೆಗೆ ಬಂದ ಶರ್ಮನನ್ನು ಬೇರೊಬ್ಬರ ಮನೆಯಲ್ಲಿ ಊಟಕ್ಕೆ ಅವಕಾಶ ಮಾಡಿಕೊಳ್ಳಲೂ ಒಪ್ಪಿಗೆ ಕೊಡದೇ, ತನ್ನ ಮನೆಯಲ್ಲೇ ವಸತಿ, ಭೋಜನ ಸೌಕರ್ಯಗಳನ್ನು ಒದಗಿಸಿ, ಶ್ರೀ ಬಾಪನಾರ್ಯರು ಆದರಿಸಿದರು.

ಶ್ರೀ ಬಾಪನಾರ್ಯರು ಶನಿ ಪ್ರದೋಷ ಸಮಯದಲ್ಲಿ ಶಿವಾರಾಧನೆ ಮಾಡುತ್ತಿದ್ದರು. ಮನೆಯ ಸ್ತ್ರೀಯರು ಸಹಾ ಆ ಸಮಯದಲ್ಲಿ ಶಿವ ವ್ರತಗಳನ್ನು ಮಾಡುತ್ತಿದ್ದರು. **ಹಿಂದೆ ನಂದಯಶೋದೆಯರು, ಶನಿ ಪ್ರದೋಷ ಸಮಯ ಶಿವಾರಾಧನೆ ಮಾಡಿದ ಫಲವೇ, ಶ್ರೀ ಕೃಷ್ಣರನ್ನ ಬೆಳೆಸುವ ಯೋಗ, ಮಹದ್ಭಾಗ್ಯ.** ಅಂತಹಾ ಶಿವಾರಾಧನೆಯಲ್ಲಿ, ಶ್ರೀ ನರಸಿಂಹ ವರ್ಮ, ಶ್ರೀ ವೆಂಕಟಪ್ಪಯ್ಯ ಶ್ರೇಷ್ಠಿ ಮತ್ತಿತರ ವೈಶ್ಯ ಪ್ರಮುಖರು ಸಹಾ ಶ್ರೀ ಬಾಪನಾರ್ಯರ ಜೊತೆ ಪಾಲ್ಗೊಳ್ಳುತ್ತಿದ್ದರು.

## ಶ್ರೀ ಕುಕ್ಕುಟೇಶ್ವರ ಸ್ವಾಮಿಗಳು ನುಡಿದ ವಾಣಿ

## ಸುಮತಿ-ಅಪ್ಪಲರಾಜರ ವಿವಾಹ

**ಒಮ್ಮೆ ಶನಿ ಪ್ರದೋಷ ಸಯಮದ ಶಿವಾರಾಧನೆಯ ನಂತರ ಶ್ರೀ ಕುಕ್ಕುಟೇಶ್ವರ ಶಿವಲಿಂಗದಿಂದ, ವಿದ್ಯುತ್ಕಾಂತಿ ಹೊರಬಂದಿತು. ಒಂದು ಗಂಭೀರವಾಣಿ, "ಮಗೂ, ಬಾಪನಾರ್ಯ! ಸಂದೇಹ ಪಡದೇ ನಿನ್ನ ಮಗಳಾದ ಸುಮತಿ ಮಹಾರಾಣಿಯನ್ನು, ಅಪ್ಪಲರಾಜು ಶರ್ಮಗೆ ಕೊಟ್ಟು ವಿವಾಹ ಮಾಡು ಲೋಕ ಕಲ್ಯಾಣವಾಗುವುದು. ಶ್ರೀ ದತ್ತ ಪ್ರಭುಗಳ ನಿರ್ಧಾರವನ್ನು, ಈ ಸೃಷ್ಟಿಯಲ್ಲಿ ಯಾರಿಗೂ ಅತಿಕ್ರಮಿಸಲು ಅಧಿಕಾರವಿಲ್ಲ" ಎಂದು ನುಡಿಯಿತು.**

ಆ ವಾಣಿ ವೆಂಕಟಪ್ಪಯ್ಯ ಶ್ರೇಷ್ಠಿಗೂ, ನರಸಿಂಹ ವರ್ಮನಿಗೂ ಮತ್ತಿತರರಿಗೂ ಕೇಳಿಬಂದು, ಆಶ್ಚರ್ಯವಾಯಿತು.

ಅಯಿನವಿಲ್ಲಿ ಗ್ರಾಮದಲ್ಲಿದ್ದ ರಾಜಶರ್ಮನ ಗುರುಹಿರಿಯರು ಮತ್ತು ಬಂಧುಗಳಿಗೆ ಈ ವಿಷಯ ತಿಳಿಸಲಾಯಿತು. ರಾಜಶರ್ಮ, ಸುಮತಿ ಮಹಾರಾಣಿಯರ ವಿವಾಹ ನಿಶ್ಚಯವಾಯಿತು. ವಾಸಕ್ಕಾಗಿ ಒಂದು ಮನೆ ಸಹಾ ಇಲ್ಲದ ರಾಜಶರ್ಮನಿಗೆ, ಆಗಲಿರುವ ಮಾವ, ಶ್ರಿ ವೇಂಕಟಪ್ಪ ಶ್ರೇಷ್ಠಿ, ತನ್ನಲ್ಲಿದ್ದ ಅನಕೇ ಗೃಹಗಳಿಂದ ಒಂದನ್ನು ಕೊಡಲೂ ಸೂಚಿಸಿದಾಗ, ರಾಜಶರ್ಮ ನಿರಾಕರಿಸಿದನು. ಶ್ರೀ ಶ್ರೇಷ್ಠಿ ರಾಜ ಶರ್ಮನ ಬಳಗದ ಜೊತೆ ಮಾತಾಡಿ, ರಾಜ ಶರ್ಮನಿಗೆ ಪಿತ್ರಾರ್ಜಿತ ಭಾಗದ ಆಸ್ತಿ ಬೆಲೆ 1 ವರಹಾ ಎಂದು ತಿಳಿದ ಕೂಡಲೇ, ತನ್ನ ಒಂದು ಮನೆ 12 ವರಹಗಳು ಬಾಳುವುದನ್ನು, ರಾಜ ವರ್ಮನಿಗೆ ಒಂದು ವರಹಕ್ಕೆ ಮಾರಲೂ ನಿರ್ಧರಿಸಿ, ''ನನ್ನ ಮನೆಯನ್ನು ದಾನವಾಗಿ ಪಡೆಯಲೂ, ನಿಮಗೆ ಅಭ್ಯಂತರವಿದ್ದಲ್ಲಿ, ಒಂದು ವರಹ ಕೊಟ್ಟು ಪಡೆಯಿರಿ'' ಎಂದು ನುಡಿದನು. ಇದು ಧರ್ಮಸಮ್ಮತವೇ ಎಂದು ಹಿರಿಯರು ಒಪ್ಪಲೂ. ಶ್ರೀ ಸುಮತಿ ಮಹಾರಾಣಿ ಮತ್ತು ಶ್ರೀ ಅಪ್ಪಲ ಲಕ್ಷ್ಮೀನರಸಿಂಹ ರಾಜಶರ್ಮರ ವಿವಾಹವು, ಮಹಾಪಂಡಿತರ ವೇದಘೋಷ ಮತ್ತು ಮಂಗಳವಾದ್ಯದ ನಡುವೆ ವಿಜೃಂಭಣೆಯಿಂದ ನಡೆಯಿತು. **ಶ್ರೀಪಾದ ಶ್ರೀವಲ್ಲಭರ ಅವತಾರ, ಆಜ್ಞಾನಾಂಧಕಾರ ನಿರ್ಮೂಲನೆಗೆ ಬಂದದ್ದು. ಆಧ್ಯಾತ್ಮಿಕ ಮತ್ತು ಭೌತಿಕ ಪ್ರಗತಿಗೆ ಬರುವಂತಹ ತೊಂದರೆಗಳ ನಿರ್ಮೂಲಕ್ಕೇ ಬಂದದ್ದು ಆದ್ದರಿಂದ, ಶ್ರೀದತ್ತ ಪ್ರಭುಗಳು, ಕಾಲದೇವತೆ ಮತ್ತು ಕರ್ಮದೇವತೆಗಳನ್ನು ಆಜ್ಞಾಪಿಸಿದರು. ಫಲಿತ, ರಾಜಶರ್ಮನಿಗೆ, ಒಂದು ಕುರುಡ ಬಾಲಕ, ಅಜ್ಞಾನಾಂಧಕಾರಕ್ಕೆ ಪ್ರತಿಯಾಗಿ, ಸತ್ಯಾಸತ್ಯ ಪ್ರಗತಿಗೆ ಸಂಬಂಧಿಸಿದ ಕುಂಟತ್ವದ ಸಲುವಾಗಿ ಒಬ್ಬ ಕುಂಟ ಬಾಲಕನೂ, ಸಂತಾನವಾಗಿ ಜನಿಸಿದರು.** ತಮಗಾದ ಈ ಸಂತಾನಗಳಿಗೆ, ಸುಮತಿ ರಾಜ ಶರ್ಮರು, ಬಹಳ ವ್ಯಥೆ ಪಟ್ಟರು. ಒಮ್ಮೆ ಅವರ ಬಂಧುಗಳು, ಅಯಿನವಿಲ್ಲಿಯ ಪ್ರಸಿದ್ಧ ವಿಘ್ನೇಶ್ವರಾಲಯದ, ಮಹಾ ಪ್ರಸಾದವನ್ನು ಪೀಠಿಕಾಪುರಕ್ಕೆ ತಂದರು. ಸುಮತಿ ರಾಜ ಶರ್ಮರು ಅದನ್ನು ಸ್ವೀಕರಿಸಲು, ಕನಸ್ಸಿನಲ್ಲಿ ಸುಮತಿಗೆ, ಐರಾವತ ಕಂಡುಬಂತು. ನಂತರದ ದಿನಗಳಲ್ಲಿ, ಶಂಖ, ಚಕ್ರ, ಗದೆ, ಕಮಲ, ತ್ರಿಶೂಲ, ಅನೇಕಾನೇಕ ದೇವತೆಯರು, ಋಷಿಗಳು, ಸಿದ್ಧರು, ಯೋಗಿ ಮೊದಲಾದವರು, ಸ್ವಪ್ನಗಳಲ್ಲಿ

ದರ್ಶನ ಕೊಡುತ್ತಿದ್ದರು. ಕೆಲವು ದಿನಗಳ ನಂತರ, ಜಾಗ್ರತಾವಸ್ಥೆಯಲ್ಲೇ ದರ್ಶನ ಪ್ರಾಪ್ತವಾಗುತ್ತಿತ್ತು. ಕಣ್ಣು ಮುಚ್ಚಿದರೇ, ತೆರೆ ಮೇಲೆ ಬೊಂಬೆಗಳಂತೆ ದಿವ್ಯ ವರ್ಚಸ್ಸಿನಿಂದ ಅನೇಕ ತರಹದ ಕಾಂತಿಯಿಂದ ತಪಸ್ಸಮಾಧಿಯಲ್ಲಿರುವ ಯೋಗಿಗಳು, ಮುನಿಗಳು, ಮುಂತಾದವರು ದರ್ಶನ ಕೊಡುತ್ತಿದ್ದರು.

ಈ ವಿಷಯದ ಬಗ್ಗೆ ಸುಮತಿ ಮಹಾರಾಣಿ, ತಂದೆ ಬಾಪನಾರ್ಯರಲ್ಲಿ ಪ್ರಸ್ತಾಪಿಸಲು, "ಇವೆಲ್ಲವೂ ಸರ್ವಶುಭಲಕ್ಷಣ ಸಂಪನ್ನ ಒರ್ವ ಮಹಾಪುರುಷ ಜನನವನ್ನು ಸೂಚಿಸುತ್ತವೆ" ಎಂದು ನುಡಿದರು. ಸುಮತಿಯ ಸೋದರಮಾವನಾದ ಶ್ರೀಧರ ಪಂಡಿತರು, "ತಾಯಿ, ಸುಮತಿ! ರವಿಯ ಜನ್ಮನಕ್ಷತ್ರವಾದ ವಿಶಾಖಿಗೂ, ಶ್ರೀರಾಮಾವತಾರಕ್ಕೂ ಸಂಬಂಧವಿರುವುದು. ಪೂರ್ವಾಷಾಡದಲ್ಲಿ ಜನಿಸಿದ ಅಂಗಾರಕನಿಗೂ, ಶ್ರೀ ಲಕ್ಷ್ಮೀನರಸಿಂಹಾವತಾರಕ್ಕೂ ಸಂಬಂಧವಿರುವುದು. ಶ್ರವಣ ನಕ್ಷತ್ರದಲ್ಲಿ ಜನಿಸಿದ ಬುಧನಿಗೂ, ಬುದ್ಧಾವತಾರಕ್ಕೂ ಸಂಬಂಧವಿದೆ. ಪೂರ್ವಫಲ್ಗುಣಿ ನಕ್ಷತ್ರ ಜಾತ ಗರುಡನಿಗೂ, ವಿಷ್ಣು ವಂಶಕನಿಗೂ ಸಂಬಂಧವಿರುವುದು. ಪುಷ್ಯಮೀ ನಕ್ಷತ್ರ ಜಾತ ಶುಕ್ರನಿಗೂ, ಭಾರ್ಗವ ರಾಮನಿಗೂ, ರೇವತಿ ನಕ್ಷತ್ರದಲ್ಲಿ ಜನ್ಮಿಸಿದ ಶನಿಗೂ ಕೂರ್ಮಾವತಾರಕ್ಕೂ, ಭರಣಿ ನಕ್ಷತ್ರ ಜಾತ ರಾಹುವಿಗೂ ವರಾಹವತಾರಕ್ಕೂ, ಆಶ್ಲೇಷಾ ನಕ್ಷತ್ರದಲ್ಲಿ ಜನಿಸಿದ ಕೇತುಗೂ ಮತ್ಸ್ಯಾವತಾರಕ್ಕೂ ಸಂಬಂಧವಿದೆ. ನೀನು ನನ್ನನ್ನು ಪ್ರಶ್ನಿಸಿದ ಸಮಯ, ದೈವ ರಹಸ್ಯಕ್ಕೆ ಸಂಬಂಧಪಟ್ಟ ಸಮಯ. ಆದ್ದರಿಂದ ಕೋಟಿಗಟ್ಟಲೆ ಗ್ರಹಗಳು, ನಕ್ಷತ್ರಗಳು, ಬ್ರಹ್ಮಾಂಡದ ಸ್ಥಿತಿಗತಿಗಳನ್ನು ನಿರ್ದೇಶಿಸುವ ಶ್ರೀದತ್ತ ಪ್ರಭುಗಳೇ ಜನ್ಮಿಸುವರಾ ಎಂಬ ಅನುಮಾನ ದೃಢವಾಗಿದೆ" ಎಂದು ನುಡಿದರು.

## ದತ್ತ ಪ್ರಭುಗಳ ನಿತ್ಯ ವೈಭವ ವಿಭೂತಿ

ಈ ವಿಷಯವನ್ನು ಸುಮತಿ, ರಾಜ ಶರ್ಮನಿಗೆ ತಿಳಿಸಿದಳು. ಅದಕ್ಕೆ ಆತ ಪೂಜಾ ಸಮಯದಲ್ಲಿ ಕಾಲಾಗ್ನಿ ಶಮನದತ್ತನನ್ನೇ ಕೇಳುವೆನೆಂದನು. ಕಾಲಾಗ್ನಿ ಶಮನರನ್ನು ಪೂಜಿಸುವಾಗ, ಮಾನವರ್ಯಾರೂ ನೋಡಬಾರದು. ಪೂಜಾನಂತರ ಶ್ರೀದತ್ತ ಮಾನವಾಕಾರದಲ್ಲಿ ಎದುರುಗಡೆ ಕುಳಿತು, ಮಾತಾಡಿ, ವಿಗ್ರಹದಲ್ಲಿ ಲೀನವಾಗಿ ಬಿಡುವನು. ಇದು ನಿತ್ಯವೂ ನಡೆಯುವಂತಹ ವ್ಯವಹಾರ. ರಾಜ ಶರ್ಮ, ಚಿಕ್ಕ ವಿಷಯಗಳನ್ನು ಮತ್ತು ಸ್ವಾರ್ಥಸಮಸ್ಯೆಗಳನ್ನು ದತ್ತರಿಗೆ ನಿವೇದಿಸುವುದಿಲ್ಲ. ಆ ದಿನ, ಪೂಜಾನಂತರ ದತ್ತ ಪ್ರಸನ್ನರಾಗಿ ಕಾಣಿಸಿ, ಎದುರಿಗೆ ಬಂದು ಕುಳಿತರು. ಶ್ರೀಧರಾ ಬಾ! ಎಂದು ಕೂಗಿದರು. ದತ್ತರಿಂದ ಒಂದು ರೂಪ ಹೊರಟು. ತನ್ನ ಎದುರಿಗೆಯೇ ಧ್ಯಾನದಲ್ಲಿ ಲೀನವಾದರು. ಪುನಃ ತನ್ನ ಬೆರಳಿನಿಂದ ಕರೆಯುತ್ತಾ, ಶ್ರೀಧರಾ, ಬಾ! ಎಂದು ಕೂಗಿದರು. ಕೂಡಲೇ ಆ ರೂಪ ದತ್ತರಲ್ಲಿ ಲೀನವಾಯಿತು. ರಾಜಶರ್ಮರಿಗೆ ಇದೆಲ್ಲವೂ ಆಶ್ಚರ್ಯವಾಗಿತ್ತು. ಶ್ರೀದತ್ತ ಪ್ರಭುಗಳು, ರಾಜಶರ್ಮನಿಗೆ " ನೀನೀಗ ನೋಡಿದ ರೂಪ, ಬರುವ ಶತಮಾನಗಳಲ್ಲಿ ಬರಲಿರುವ, ಒಂದಾನೊಂದು ಅಂಶಾವತಾರ. ನನ್ನಲ್ಲಿ ಲೀನವಾದ, ಜೀವನ್ಮುಕ್ತರು ಸಹಾ, ನಾನು ಬಾ ಎಂದು ಕೂಗಿದ ಕೂಡಲೇ ಬರಲೇಬೇಕು. ಹೋಗಲೂ ಆಜ್ಞಾಪಿಸಿದ ತಕ್ಷಣ, ಕಣ್ಮರೆಯಾಗದೆ ವಿಧಿ ಇಲ್ಲ. ನನ್ನ ಈ ಲೀಲೆ ಭೂಮಿಗೆ ಮಾತ್ರ ಅನ್ವಯಿಸುವುದಲ್ಲದೇ ಬ್ರಹ್ಮಾಂಡಕ್ಕೂ ವರ್ತಿಸುವುದು. ನಾನು ಕಾಲಿನಿಂದ ಒಂದುಬಾರಿ ಜಾಡಿಸಿ ಒದ್ದರೇ ಕೋಟಿ ಯೇಜನಗಳ ದೂರ ಬೀಳಬೇಕು. ನಾನು ಜನನ ಮರಣಗಳಿಗೆ ಅತೀತನೆಂದು ಹೇಳುತ್ತಾ, ರಾಜ ಶರ್ಮ ಭ್ರೂಮಧ್ಯವನ್ನು ಮುಟ್ಟಿದರು. ಕೂಡಲೇ ರಾಜ ಶರ್ಮನಿಗೆ, ತಾನು ಒಂದಾನೊಂದು ಯುಗದಲ್ಲಿ ವಿಷ್ಣುದತ್ತನಾಗಿಯೂ, ಅವನ ಪತ್ನಿ ಸುಶೀಲ ಎಂದು ನಾಮಾಂತರ ಉಳ್ಳ ಸೋಮದೇವಮ್ಮಳೆಂದು, ಹಿಂದಿನದೆಲ್ಲವೂ ಸ್ಮರಣೆ ಬಂತು. ಶ್ರೀದತ್ತರು, "ನಾನು ದತ್ತನಾಗಿ

ದರ್ಶನ ಕೊಟ್ಟ ಆ ಯುಗದಲ್ಲಿ ನಾನು ಅವಕಾಶಕೊಟ್ಟರೂ ನೀವು ಸರಿಯಾದ ವರ ಕೋರಲಿಲ್ಲ. ನಿಮ್ಮ ಮನೆಗೆ ನನ್ನನ್ನು ನಿಮ್ಮ ಪಿತೃಶ್ರಾದ್ಧದ ದಿನ, ಊಟಕ್ಕೆ ಕರೆದಿದ್ದರಿ, ಸೂರ್ಯಾಗ್ನಿಯೊಡನೇ ಊಟ ಮಾಡಿ, ನಿಮ್ಮ ಪಿತೃದೇವತೆಗಳಿಗೆ, ಬ್ರಹ್ಮಲೋಕ ಪ್ರಾಪ್ತಿಯೊದಗಿಸಿದೆ. ನಾನು ಶ್ರೀಪಾದ ಶ್ರೀವಲ್ಲಭರ ಅವತಾರವನ್ನು ಮೂಡಲೂ ಯೋಚಿಸಿದ್ದೇನೆ. ಕಳೆದ 100 ವರುಷಗಳಿಂದ ಈ ಭೂಮಿ ಮೇಲೆ ಶ್ರೀಪಾದ ಶ್ರೀವಲ್ಲಭರಾಗಿ ಯೋಗಿಗಳಿಗೂ, ಮಹಾಪುರುಷರಿಗೂ, ದರ್ಶನ ಕೊಡುತ್ತಲ್ಲೇ ಇದ್ದೇನೆ. ತ್ರೇತಾಯುಗದಲ್ಲಿ ಭರಧ್ವಾಜ ಮಹರ್ಷಿ, ಪೀಠಿಕಾಪುರದಲ್ಲಿ ಸವಿತೃಕಾರಕ ಚಯನವನ್ನು ಮಾಡಿದ್ದಾನೆ. ಅಂದಿನ ಹೋಮ ಭಸ್ಮ ಮಹಾಪರ್ವತ ಗಾತ್ರವಾಗಿದೆ. ಆ ಪರ್ವತ ಭಾಗಗಳನ್ನು ಶ್ರೀ ಹನುಮಂತ, ಸ್ವರ್ಗ, ಮರ್ತ್ಯ, ಪಾತಾಳಕ್ಕೆ ತಲುಪಿಸಿರುವನು. ಮರ್ತ್ಯಲೋಕದೊಳು, ಹಿಮಾಲಯದಲ್ಲಿನ ದ್ರೋಣಗಿರಿಯಲ್ಲೂ ಮತ್ತಿತ್ತರ ಪ್ರಾಂತದಲ್ಲಿ ಚೆಲ್ಲಲಾಯಿತು. ಶ್ರೀ ಹನುಮಂತರು ಆ ಭಾಗಗಳನ್ನು ಸಾಗಿಸುವ ಸಮಯ, ಒಂದು ಚಿಕ್ಕಭಾಗ, ಗಂಧರ್ವ ನಗರ (ಗಾಣಗಾಪುರ) ಮೇಲೆ ಬಿದ್ದಿತು. ಗಂಧರ್ವ ನಗರ, ಭೀಮ, ಅಮರಜಾ ನದಿ ಪವಿತ್ರ ಸಂಗಮ ಪ್ರದೇಶ. ಶ್ರೀಪಾದ ಶ್ರೀವಲ್ಲಭರ ಅವತಾರವನ್ನು ಮುಚ್ಚಿತ್ತ ಮೇಲೆ, ಮೀನ ಅಂಶೆ, ಮೀನ ಲಗ್ನದಲ್ಲಿ ನೃಸಿಂಹ ಸರಸ್ವತಿಯಾಗಿ ಜನಿಸಿ, ಗಂಧರ್ವ ನಗರದಂದು ಅನೇಕ ಲೀಲೆ ತೋರಿಸಿ, ಶ್ರೀಶೈಲದಲ್ಲಿ ಕದಳೀವನದಲ್ಲಿ 300 ಸಂವತ್ಸರಗಳು ತಪೋಸಮಾಧಿಯಲ್ಲಿದ್ದು, ನಂತರ ಸ್ವಾಮಿ ಸಮರ್ಥ ನಾಮದಲ್ಲಿ ಪ್ರಜ್ಞಾಪುರದಲ್ಲಿ ವಾಸಿಸಿ, ಶನಿ ಮೀನಕ್ಕೆ ಪ್ರವೇಶಿಸಿದಾಗ ಶರೀರವನ್ನು ತ್ಯಜಿಸುವೆನು'' ಎಂದರು.

ಶ್ರೀದತ್ತ ಪ್ರಭುಗಳ ವಚನಗಳನ್ನು ಧರ್ಮಪತ್ನಿಗೆ ರಾಜ ಶರ್ಮ ವಿವರಿಸಿದರು. ಸತ್ಯ ಋಷೀಶ್ವರಾದ ಬಾಪಾನಾರ್ಯರು, ''ಮಗೂ ರಾಜ ಶರ್ಮ! ನೀನು ಗತಕಾಲದಲ್ಲಿ ಶ್ರೀ ದತ್ತರಿಗೆ, ಸೂರ್ಯ ಮತ್ತು ಅಗ್ನಿಗೆ ತಿಥಿ ಊಟವನ್ನಿತ್ತ ಪುಣ್ಯಾತ್ಮನು. ಈ ಜನುಮದಲ್ಲಿ, ಯಾವ ರೂಪದಲ್ಲಾದರೂ ಶ್ರೀದತ್ತರು ನಿನ್ನಿಂದ ಊಟ ಯಾಚಿಸಬಹುದು. ಅಂದು, ಪಿತೃಶ್ರಾದ್ಧ ದಿನವಾದರೂ ಸರಿ, ಬ್ರಾಹ್ಮಣರ ಊಟಕ್ಕೂ ಮೊದಲಾದರೂ ಸರಿ, ಅಭ್ಯಂತರವಿಲ್ಲದೇ, ಶ್ರೀದತ್ತರಿಗೆ ಊಟ ನೀಡು. ತಾಯಿ ಸುಮತಿ! ನೀನು ಈ ವಿಷಯ ನೆನಪಿಟ್ಟುಕೊ.'' ಶಂಕರ ಭಟ್ಟ! ದತ್ತರ ಲೀಲೆ ಅಪೂರ್ವ, ಅಚಿಂತ್ಯ ಎಂದೂ ಕೇಳಿರುವೆವು, ತಿಳಿದುಕೋ.

## ಶ್ರೀಪಾದ ಶ್ರೀ ವಲ್ಲಭರ ಆವಿರ್ಭಾವ

ಒಂದು ಮಹಾಲಯ ಅಮಾವಾಸ್ಯ ದಿನ, ರಾಜ ಶರ್ಮ, ಪಿತೃಶ್ರಾದ್ಧಕ್ಕೆ ಏರ್ಪಾಟು ಮಾಡುತ್ತಿರಲು, ಬೀದಿ ಬಾಗಿಲಬಳಿ 'ಭವತಿ ಭಿಕ್ಷಾಂದೇಹಿ' ಎಂಬ ಕೂಗು ಕೇಳಿಬಂತು. ಆ ಅವಧೂತರಿಗೆ ಸುಮತಿ ಭಿಕ್ಷೆನಿತ್ತಳು. ಅದಕ್ಕೆ ಏನು ಬೇಕೋ ಕೋರಿಕೋ ಎನ್ನಲು, ''ಸ್ವಾಮಿ! ತಾವು ಅವಧೂತರು. ನಿಮ್ಮ ವಾಕ್ಕು ಸಿದ್ಧಿಸುವುದು. ಶ್ರೀಪಾದ ಶ್ರೀವಲ್ಲಭರು ಅವತಾರ ಈ ಭೂಮಿ ಮೇಲೆ ಯಾವ ರೂಪದಲ್ಲಿದೆ? ಇಲ್ಲಿಗೆ 100 ವರ್ಷಗಳಿಂದ ಸಂಚರಿಸುತ್ತಿರುವರೆಂದು ಕೇಳುತ್ತಿದ್ದೇವೆ. ನನ್ನ ಕೋರಿಕೆ ಶ್ರೀದತ್ತ ಪ್ರಭುಗಳ ಅವತಾರವಾದ ಶ್ರೀಪಾದ ಶ್ರೀವಲ್ಲಭರನ್ನು ದರ್ಶಿಸುವುದು. ದಯವಿಟ್ಟು ಪ್ರಸಾದಿಸಿ'' ಎಂದು ಸುಮತಿ ಪ್ರಾರ್ಥಿಸಿದಳು.

ಆ ಕೋರಿಕೆಗೆ ಆ ಅವಧೂತರು ಜೋರಾಗಿ ವಿಕಟಾಟ್ಟಹಾಸ ಮಾಡಿದರು. ಆಕೆಗೆ ತನ್ನ ಸುತ್ತಲೂ ವಿಶ್ವವೆಲ್ಲಾ ಅದೃಶ್ಯವಾದಂತೆ ಕಂಡುಬಂತು. ಎದುರಲ್ಲಿ ಒಂದು ಸುಂದರ 16ವಯಸ್ಸಿನ ಯತಿಯಾಗಿ ಪ್ರತ್ಯಕ್ಷಗೊಂಡು, ''ತಾಯಿ! ನಾನೇ ಶ್ರೀಪಾದ ಶ್ರೀವಲ್ಲಭನು, ದತ್ತನು. ಅವಧೂತ ರೂಪದಲ್ಲಿರಲೂ, ಶ್ರೀವಲ್ಲಭರನ್ನು ಕಾಣಬೇಕೆಂದು ಕೋರಿದೆ. ಅದಕ್ಕೆ ಶ್ರೀವಲ್ಲಭನಾಗಿ ನನ್ನನು ಕಾಣುತ್ತಿದ್ದೀಯ.

ಈಗ ನಿನ್ನ ಬಯಕೆ ಏನು, ಕೇಳು? ನೀನಿತ್ತ ಭಿಕ್ಷೆಗೆ ಬದಲಾಗಿ ವರವನ್ನು ಕೊಡಬೇಕೆಂದು ನನ್ನ ಬಯಕೆ. ಈ ಜಗತ್ತಿನಲ್ಲಿ ಜನರು, ಸಂಕಲ್ಪ ರೂಪದಲ್ಲಿ ಪಾಪಕರ್ಮಗಳನ್ನು ಮಾಡಿ, ತತ್ಫಲಿತಗಳನ್ನು ಹೊಂದುವರು. ಪುಣ್ಯಕರ್ಮಗಳಿಗೆ ಪುಣ್ಯಫಲ ಲಭಿಸುವುದು. ಯಾವ ವಿಧವಾದ ಕರ್ಮವೂ ಇಲ್ಲದೆ, ಪುಣ್ಯಕರ್ಮ ಆಚರಿಸುವುದನ್ನು 'ಅಕರ್ಮ'ವೆಂದು ಹೇಳುವರು. ಅದು, ಸುಕರ್ಮವೂ ಅಲ್ಲ, ದುಷ್ಕರ್ಮವೂ ಅಲ್ಲ. ಅಕರ್ಮಕ್ಕೆ ಪುಣ್ಯ ಪಾಪವಿಲ್ಲದ ಮತ್ತೊಂದು ಫಲಿತ ನೀಡಬೇಕಾಗುತ್ತೆ. ಅದು ಭಗವದಧೀನ. ಅರ್ಜುನ, ಅಕರ್ಮ ಮಾಡಿದ್ದರಿಂದಲೇ ಶ್ರೀಕೃಷ್ಣನು, ಕೌರವರನ್ನು ಕೊಲ್ಲಲು ಹೇಳಿದನು. ಹಾಗೆ ಮಾಡಲೂ ಪಾಪ ಪ್ರಾಪ್ತಿ ಆಗದು ಎಂದು ಭಾವ. ಕೌರವ ಸಂಹಾರ ಭಗವನ್ನಿರ್ಣಯ. ನೀವೀರ್ವರೂ, ವಿಶೇಷವಾದ ಅಕರ್ಮ ಮಾಡಿದ್ದೀರ. ಆದ್ದರಿಂದ ಲೋಕ ಹಿತಾರ್ಥವಾದ ಫಲಿತ ಮಾಡಲೇಬೇಕು. ಸಂಶಯವಿಲ್ಲದೇ ನಿನ್ನ ಬಯಕೆ ತಿಳಿಸು. ಅನುಗ್ರಹಿಸುವೆನು'' ಎಂದರು.

## ಶ್ರೀಪಾದ ಶ್ರೀವಲ್ಲಭ ದರ್ಶನಾನಂತರ ಸುಮತಿ ಮಹಾರಾಣಿಗೆ ಆದ ಸಂಕಲ್ಪ

ಆ ದಿವ್ಯಮಂಗಳ ವಿಗ್ರಹವನ್ನು ಕಂಡು ಸುಮತಿ, ಅವನ ಪಾದಗಳನ್ನು ಹಿಡಿದು ನಮಸ್ಕರಿಸಿದಳು. **ಸುಮತಿಯನ್ನು ಮೇಲೆತ್ತಿ ಶ್ರೀಪಾದ ಶ್ರೀವಲ್ಲಭರು, "ತಾಯಿ! ಮಗುವಿನ ಕಾಲಮೇಲೆ ತಾಯಿ ಬೀಳುವುದು ಅಸಂಬದ್ಧ. ಮಗುವಿಗೆ ಆಯುಷ್ಯ ಕಡಿಮೆ ಆಗುವುದು" ಎಂದರು. ಆಗ ಸುಮತಿ, "ಶ್ರೀಪಾದ ಶ್ರೀವಲ್ಲಭ ಪ್ರಭೂ! ತಾವು ಅಮ್ಮ ಎನ್ನಲೂ ನಾನು ತಾಯಿ, ನೀವು ನನ್ನ ಮಗು. ನಿಮ್ಮ ಸಿದ್ಧವಾಕ್ಕು ಫಲಿಸಲಿ. ನೀವು ಎನಗೆ ಪುತ್ರನಾಗಿ ಜನ್ಮಿಸಿರಿ" ಎಂದು ಕೇಳಿದಳು. ಶ್ರೀಚರಣರು, "ತಥಾಸ್ತು. ಈ ಶ್ರೀಪಾದ ಶ್ರೀವಲ್ಲಭ ರೂಪದಲ್ಲೇ ಜನ್ಮಿಸುವೆ. ತಾಯಿ, ಮಗುವಿನ ಕಾಲಮೇಲೆ ಬಿದ್ದರೇ ಮಗುವಿನ ಆಯುಷ್ಯ ಕಡಿಮೆ ಆಗುವುದು. ಧರ್ಮಕರ್ಮಗಳಿಗೆ ಒಳಪಟ್ಟು, ನಾನು ನಿಮ್ಮ ಮಗನಾಗಿ ಕೇವಲ 16 ವರುಷ ಮಾತ್ರ ಜೀವಿಸುವೆ" ಎಂದರು.** ಆಗ ಸುಮತಿ, ''ಅಯ್ಯೋ! ಎಷ್ಟು ಅಪಚಾರ ನಡೆದುಹೋಯಿತು. 16 ವರುಷ ಮಾತ್ರವಾ ಆಯುಷ್ಯ'' ಎಂದು ವಿಲಪಿಸದಳು. ಅದಕ್ಕೆ ಶ್ರೀಚರಣರು, ''ತಾಯಿ! 16 ವರುಷದವರೆಗೆ, ತಾವು ಹೇಳಿದಂತೇ ನಡೆಯುವೆನು. ''ವರ್ಷೇ ಷೋಡಷೇ ಪ್ರಾಪ್ತೇ, ಪುತ್ರಂ ಮಿತ್ರವದಾಚರೇತ್'' ಎನ್ನುತ್ತಾರೆ. ಅಂದರೆ 16 ವರುಷ ಬಂದ ಪುತ್ರನನ್ನ ಮಿತ್ರನಾಗಿ ಭಾವಿಸಿ, ಕಟ್ಟುನಿಟ್ಟುಗಳು ವಿಧಿಸಬಾರದೆಂದು ಮದುವೆಗೆ ಬಲಾತ್ಕಾರ ಮಾಡಬಾರದು. ನಾನು ಯತಿಯಾಗಿ ಯಥೇಚ್ಛವಾಗಿ ನಡೆಯಲು ಬಿಡಿ. ನನ್ನ ಸಂಕಲ್ಪಕ್ಕೆ ವ್ಯತಿರಿಕ್ತವಾಗಿ ನೀವು ನಡೆದರೇ, ನಾನು ನಿಮ್ಮ ಮನೆಯಲ್ಲಿ ಇರಲಾರೆ'' ಎಂದು ನುಡಿದು, ಸರಸರ ನಡೆದುಕೊಂಡು ಹೊರಟು ಹೋದರು.

ಸುಮತಿ ಮಹಾರಾಣಿ ಬಾಯಿಂದ ಮಾತು ಬಾರದೇ ನಿಂತು ಬಿಟ್ಟಳು. ಗಂಡ ಅಪ್ಪಲರಾಜ ಶರ್ಮನಿಗೆ ತಿಳಿಸಿದಳು. ಆಗ ಆತ, ''ಸುಮತಿ! ವಿಚಾರಿಸಬೇಡ. ಶ್ರೀ ದತ್ತರು ಈ ತರಹಾ ನಮ್ಮ ಮನೆಗೆ ಭಿಕ್ಷೆಗೆ ಬರುವರೆಂದು ನಿನ್ನ ತಂದೆ ಸೂಚಿಸಿದ್ದರು. ಶ್ರೀ ದತ್ತರು ಕರುಣಾಮಯಿ, ಶ್ರೀಪಾದ ಶ್ರೀವಲ್ಲಭರ ಜನನ ಆಗಲಿ, ನಂತರ ಯೋಚಿಸೋಣ'' ಎಂದರು. ಅಪ್ಪಲರಾಜನ ಮನೆಗೆ ಅವಧೂತ ಬಂದ ವಿಷಯ, ಮುಖ್ಯವಾದ ಮಹಾಲಯ ಅಮಾವಾಸ್ಯೆ ದಿನ, ಪಿತೃದೇವತೆಯರಿಗೆ ನೈವೇದ್ಯ ಕೊಡುವ ಮುನ್ನವೇ ಅವಧೂತರ ಭಿಕ್ಷೆ ನಡೆದ ವಿಷಯ ಗ್ರಾಮದಲ್ಲಿ ಚರ್ಚಿಸಲ್ಪಡುತ್ತಿತ್ತು. ಶ್ರೀ ಬಾಪನ್ನಾವಧಾನಿಗಳು, ''ಶ್ರೀಪಾದ ಶ್ರೀವಲ್ಲಭರ ಜನನ, ಎಲ್ಲರೂ ಹೇಳುಕೊಳ್ಳುತ್ತಲೇ ಇದ್ದಾರೆ. ಅವಧೂತರಿಗೆ ಸಾಷ್ಟಾಂಗ ಪ್ರಣಾಮ ಒಳ್ಳೆಯದೇ. ಅದರಲ್ಲಿ ಸುಮತಿಯ ದೋಷವೇನೂ ಇಲ್ಲ. ಮಗುವಾಗಿ ಹುಟ್ಟಿದ ನಂತರ ನಮಸ್ಕಾರ ಮಾಡಿದರೇ ಆಯುಃ ಕ್ಷೀಣಿಸಬಹುದು. ಆದರೆ ಅವಧೂತ ರೂಪಧಾರಿಗೆ ನಮಸ್ಕಾರ

ತಪ್ಪಲ್ಲ'' ಎಂದರು. ಈ ವಿಷಯ ಕುರಿತು ಕೆಲವರು ಪೀಠಿಕಾಪುರ ಬ್ರಾಹ್ಮಣರು, ಹೊಟ್ಟೆಕಿಚ್ಚು ಪಡುತ್ತಿದ್ದರು. ಅವರಲ್ಲಿ ಸರಸಾವಧಾನಿ ಮುಂದಿದ್ದರು. ಅಮಾವಾಸ್ಯೆಗೆ ಎಲ್ಲರೂ ಪಿತೃಕಾರ್ಯಗಳಲ್ಲಿರುವರು. ಬ್ರಾಹ್ಮಣಾರ್ಥಕ್ಕೆ ಇಕ್ಕಟ್ಟಾಗಬಹುದೆಂದು, ಕಳವಳಪಟ್ಟರು. ಬಾಪನಾರ್ಯರು ಮಾತ್ರ ಧೈರ್ಯವಾಗಿ, ಅಪ್ಪಲರಾಜ ಶರ್ಮ ಮನೆಯ ಪಿತೃಕಾರ್ಯಕ್ಕೆ ತೊಂದರೆ ಬರುವುದಿಲ್ಲ ಎಂದರು. ಶ್ರೀ ರಾಜಶರ್ಮ ಕಾಲಾಗ್ನಿ ಶಮನರ ಧ್ಯಾನದಲ್ಲಿದ್ದರು. ಇಷ್ಟರಲ್ಲಿ ಅವರ ಮನೆಯಲ್ಲಿ ಬ್ರಾಹ್ಮಣಾರ್ಥಕ್ಕೆ 3 ಅತಿಥಿಗಳು ಬಂದರು. ಹಾಗೆ ಪಿತೃಕಾರ್ಯ ನಿರಾತಂಕವಾಗಿ ನಡೆದುಹೋಯಿತು.

ಮಗೂ, ಶಂಕರ ಭಟ್ಟಾ! ಇಂದು, ವೈಶ್ಯರಿಗೆ ವೇದೋಕ್ತ ಉಪನಯನದ ಅಧಿಕಾರ ಇರುವುದೇ? ಇಲ್ಲವೋ? ಎನ್ನುವ ವಿಚಾರಕ್ಕೆ ಬ್ರಾಹ್ಮಣ ಪರಿಷತ್ ಸೇರಿದೆ. ಬಂಗಾಳ ದೇಶದ ನವದ್ವೀಪದಿಂದ ಅಶುತೋಷನೆಂಬ ಪಂಡಿತರು ಪಾದಗಯಾ ಕ್ಷೇತ್ರಕ್ಕೆ ಬಂದರು. ಆತನ ಬಳಿ ಪ್ರಾಚೀನ ಕಾಲದ ನಾಡೀ ಗ್ರಂಥಗಳಿದ್ದು, ಪಂಡಿತರ ಪರಿಷತ್ತುಗೆ ಆಹ್ವಾನಿಸಲ್ಪಟ್ಟಿದ್ದರು. ಶ್ರೀ ಬಾನಪನಾರ್ಯರು, 'ನಿಯಮ ನಿಷ್ಠೆಗಳಲ್ಲಿ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಸಮಾನರೇ, ಆದ್ದರಿಂದ, ಇವರಿಗೆ ವೇದೋಕ್ತ ಉಪನಯನ ಧರ್ಮ ಬದ್ಧವೇ. ಕೆಳಗಿನ ವರ್ಣದವರು, ಉಪನಯನ ಬಯಸಿದರೇ ಪುರಾಣೋಕ್ತವಾಗಿ ಮಾಡಬಹುದು. **ಜ್ಞಾನಸಿದ್ಧಿಗೆ ಕುಲ, ಲಿಂಗ, ವಯಸ್ಸುಗಳು ಅಡ್ಡಬರಲಾರವು. ಸಿದ್ದರಲ್ಲಿ ವೈಶ್ಯ ಪುರುಷ ಮುನಿಗಳು ಸಹಾ ಇರುವರೆಂದು, ಲಾಭದವೆಂಬ ವೈಶ್ಯ ಮಹರ್ಷಿ ದತ್ತರ ಅನುಗ್ರಹದಿಂದ ಸಿದ್ಧರಾದರೆಂದು, ಲಾಭಾದ ಮಹರ್ಷಿ ದಯೆ ಇದ್ದರೆ, ಮಾನವನ ಎಲ್ಲಾ ಪ್ರಯತ್ನಗಳಲ್ಲಿ ಲಾಭ ಲಭಿಸುವುದೆ'ಂದು ನುಡಿದರು.**

ಈ ವಿಧವಾದ ನಿರ್ಣಯ, ಸರಸಾವಧಾನಿ ಪಂಡಿತರಿಗೆ ನೋವನ್ನುಂಟು ಮಾಡಿತು. ಆತ ವಿತಂಡ ವಾದದಲ್ಲಿ ಜಾಣರಾಗಿದ್ದು, ಭಗಳಾಮುಖಿ ದೇವತಾ ಉಪಾಸಕರೂ ಸಹ. ಪ್ರತಿನಿತ್ಯ ಆತ ದೇವಿಪೂಜೆ ಮಾಡಿ ಮುಖ ಪ್ರಕ್ಷಾಳಾನಂತರ, ವಾದಕ್ಕೆ ಮುನ್ನ ಭಗಳಾಮುಖೀ ಮಂತ್ರವನ್ನು ಜಪಿಸುತ್ತಿದ್ದನು. ಆಗ ಆತನನ್ನು ಗೆಲ್ಲುವುದು ಅಸಾಧ್ಯ. ಬಾಪನಾರ್ಯರು ಕೋಟಿಗಟ್ಟಲೇ ಗಾಯತ್ರಿ ಮಂತ್ರವನ್ನು ಜಪಿಸಿದ ಪುಣ್ಯಾತ್ಮರು. ಆ ಇಬ್ಬರೂ ತೀಕ್ಷ್ಣ ವಾದಕ್ಕೆ ಎಂದು ಸೇರಿರಲಿಲ್ಲ. ನರಸಾವಧಾನಿ ಮುಖಪ್ರಕ್ಷಾಳನೆ ಮಾಡಿ ಮಂತ್ರ ಜಪಿಸಿಕೊಂಡರು. ಶ್ರೀಪಾದ ಶ್ರೀವಲ್ಲಭರು ಅತಿ ಚಿಕ್ಕ ವಯಸ್ಸಿನಿಂದಲೇ ತಂದೆ ತಾಯಿಯ ಸಾನ್ನಿಹಿತ್ಯದಲ್ಲಿದ್ದವರು. ಆದ್ದರಿಂದ ಅಂದಿನ ಬ್ರಾಹ್ಮಣ ಪರಿಷತ್ತಿಗೆ ಸಹಾ ಅವರು, ಅಜ್ಜನ ಜೊತೆ ಬರುತ್ತಿದ್ದರು. ಮುದ್ದಾದ ಆ ಬಾಲಕನನ್ನು ಯಾರೂ ತಡೆಯುತ್ತಿರಲಿಲ್ಲ ಅಂದು, ಸರಸಾವಧಾನಿಗೆ ಶ್ರೀ ವಲ್ಲಭರು ಸಭೆಯಲ್ಲಿರುವುದು ಇಷ್ಟವಿರಲಿಲ್ಲ. ಮಹಾಪಂಡಿತರ ಸಭೆಗೆ ಬಾಲಕ ಬರುವುದು ಆತನಿಗೆ ತಪ್ಪಾಗಿ ಕಂಡುಬಂದಿತು. ಭಗಳಾಮುಖೀ ಮಂತ್ರ ಜಪದ ನಂತರ, ವಾದಕ್ಕೆ ಮುನ್ನ, ನೀನೇಕೆ ಬಂದೆ ಎಂದು ಶ್ರೀಪಾದರನ್ನು ಪ್ರಶ್ನಿಸಿದರು. ಅದಕ್ಕೆ ಶ್ರೀಪಾದರು, ''ತಾತ! ಅಹ್ವಾನವಿಲ್ಲದ ಕೂಟಕ್ಕೆ ಬರುವುದು ಸರಿ ಆಗಲಾರದಾ! ನೀನು ನನ್ನನ್ನ ಸಕ್ರಮವಾಗಿ ಕರೆದಿದ್ದಕ್ಕೇ ನಾನು ಬಂದೆ. ನೀನು ಹೋಗೆಂದರೇ ಹೋಗುವೆನು. ನನಗೇನು? ನಾನು ಬಾಲಕ. ಸ್ವೇಚ್ಛಾಜೀವಿ'' ಎಂದರು. ಸರಸಾವಧಾನಿ, ಶ್ರೀಪಾದರನ್ನು ತೊಲಗಲೂ ಘರ್ಜಿಸಿದರು. ಶ್ರೀ ರಾಜಶರ್ಮ ತನ್ನ ಮಗನನ್ನು ಕರೆದುಕೊಂಡು ಹೋದರು. ವಾದಕ್ಕೆ ಇಳಿದ, ನರಸಾವಧಾನಿಗೆ ಮಾತೇ ನಿಂತುಹೋಯಿತು. ಇದೆಲ್ಲವನ್ನು ಗಮನಿಸುತ್ತಿದ್ದ ಅಶುತೋಷನಿಗೆ ನಗು ಬಂತು. ಸಭೆಯಲ್ಲಿ ಶ್ರೀಬಾಪನಾರ್ಯರ ಮಾತು ನಿಂತಿತು. ವೈಶ್ಯರಿಗೆ ವೇದೋಕ್ತ ಉಪನಯನ ಸೂಕ್ತವಾಯಿತು.

ಅಶುತೋಷನ ಬಳಿ ಇದ್ದ ನಾಡೀ ಗ್ರಂಥಗಳ ಚರ್ಚೆ ಶುರುವಾಯಿತು. ಆ ಗ್ರಂಥ, ಸಾಂದ್ರ ಸಿಂಧು ವೇದ ಗಣಿತ ಪ್ರಕಾರವೇ ಶ್ರೀಪಾದ ಶ್ರೀವಲ್ಲಭರ ಜನನ ನಿರ್ಣಯಿಸಬೇಕೆಂದು ಸೂಚಿಸಿತ್ತು. **ಶ್ರೀಪಾದರು, ಗಣೇಶ ಚತುರ್ಥಿಯ ಪ್ರಾತಃಕಾಲ, ಸಿಂಹಲಗ್ನ,**

**ಚಿತ್ತಾ ನಕ್ಷತ್ರ, ತುಲಾರಾಶಿಯಲ್ಲಿ ಜನ್ಮಿಸಿದ ಹಾಗೆ ನಿರ್ಣಯಗೊಂಡಿತು. ಶ್ರೀಪಾದರ ಬಗ್ಗೆ ತಿಳಿಸಿದ ಆ ಪವಿತ್ರ ಗ್ರಂಥ, ಅವರು ಶ್ರೀ ದತ್ತಾವತಾರಿಯೆಂದು, ಅವರ ಚರಣಗಳು ಸರ್ವ ಶುಭಲಕ್ಷಣದಿಂದ ಕೂಡಿದ ಕಾರಣ, ಅವರಿಗೆ ಶ್ರೀಪಾದ ಶ್ರೀವಲ್ಲಭ ನಾಮ ಸಾರ್ಥಕವೆಂದು, ಅವರ ಜನುಮ ಕುಂಡಲಿಯನ್ನು ಕೇವಲ ತ್ರಿಪುರ ದೇಶದ ಅಕ್ಷಯ ಕುಮಾರನೆಂಬ ಜೈನ ಮತಸ್ಥನಿಗೆ ಕೊಡಬೇಕೆಂದು, ಹಾಗೆ ಅದು ಶ್ರೀ ಪೀಠಿಕಾಪುರಿ ಸೇರುವುದೆಂದು, ಅದೆಲ್ಲಾ ದೈವಲೀಲಾನುಸಾರವೇ ಎಂದು ತಿಳಿಸಲಾಗಿತ್ತು.**

ಅಶುತೋಷರು ಶ್ರೀಪಾದ ಶ್ರೀವಲ್ಲಭರ ದರ್ಶನಕ್ಕಾಗಿ ಅವರ ಮನೆಗೆ ಹೋದರು. ಶ್ರೀ ವಲ್ಲಭರು, ''ಇಂದು ಚಿತ್ತಾನಕ್ಷತ್ರ. **ನನ್ನ ಜನುಮ ನಕ್ಷತ್ರದ ದಿನ, ಯಾರೇ ನನ್ನನ್ನು ಆರಾಧಿಸಿದರೂ, ನಾನು ಬಹಳ ಸಂತುಷ್ಟನಾಗುವೆನು.** ನೀನು ಕಲ್ಮಷವಿಲ್ಲದೇ ಬಂದ ಕಾರಣ ನಿನ್ನನ್ನು ಅನುಗ್ರಹಿಸುತ್ತಿದ್ದೇನೆ. ಏನು ಬೇಕು, ಕೇಳು'' ಎಂದರು. ಆಗ ಅಶುತೋಷ ''ಪ್ರಭೂ! ನರಸಾವಧಾನಿ ಭಗಳಾಮುಖಿ ಆರಾಧಕರು. ಅವರ ಮೂಲಕ ಅಂಬಿಕೆಯನ್ನು ದರ್ಶಿಸಲು ಆಸೆ ಪಟ್ಟೆ, ಆದರೇ ಅಂಬಿಕೆ ಅವರ ಮೇಲೆ ಕೋಪಗೊಂಡಿರುವುದಾಗಿ ತಿಳಿದು, ನಿರಾಶನಾಗಿದ್ದೇನೆ'' ಎನ್ನುತ್ತಿರಲೂ, ಶ್ರೀಪಾದರು ''ಆತ ಆರಾಧಿಸುವ ಅಂಬಿಕೆ ನಾನೇ, ನನ್ನನ್ನು ಹೋಗು ಎಂದಾಗಲೇ, ಆತನ ಸೂಕ್ಷ್ಮ ಶರೀರದಲ್ಲಿದ್ದ ಅಂಬಿಕೆ ನನ್ನಲ್ಲಿ ಲೀನವಾದಳು. **ನಾನು ಸರ್ವ ದೇವೀ ದೇವತಾ ಸ್ವರೂಪನು.** ಅಂಬಿಕೆ ದರ್ಶನವನ್ನು ತೆಗೆದುಕೋ'' ಎಂದು ಶ್ರೀಗಳು, ಅಶುತೋಷರಿಗೆ ಶ್ರೀ ಭಗಳಾಂಬಿಕೆಯ ದರ್ಶನವಿತ್ತರು. ಆತ ಸಂತುಷ್ಟನಾಗಿ, ಶ್ರೀಗಳ ಆದೇಶದಂತೆ, ಪೆನುಶಿಲಕೋನ (ಪೆಂಚಲಕೋನ - ನೆಲ್ಲೂರು ಜಿಲ್ಲೆ) ಅರಣ್ಯದ ಕಣ್ವ ಮಹರ್ಷಿ ತಪೋಭೂಮಿಗೆ ಹೊರಟರು. ಕಣ್ವ ಮಹರ್ಷಿಗೆ ಸಂಬಂಧಪಟ್ಟ ವಾಜಸನೇಯಿ ಶಾಖೆಯಲ್ಲಿ, ಪುನಃ ಮಹರಾಷ್ಟ್ರದಲ್ಲಿ ಅವತರಿಸುವುದಾಗಿ ಹೇಳಿದರು. ಆಗ ನಿನ್ನನ್ನು ಅನುಗ್ರಹಿಸುವೆ. ನನ್ನ ಮುಖ್ಯ ಶಿಷ್ಯರಲ್ಲಿ ನೀನೊಬ್ಬನಾಗುವೆ. ನನ್ನ ಅದ್ಭುತ ಲೀಲೆಗಳನ್ನು ಕಣ್ಣು ತುಂಬಾ ನೋಡುವೆ. ತಕ್ಷಣ ಹೊರಡಲು ಎಚ್ಚರಿಸಿದರು.

## ಶ್ರೀಪಾದ ಜನುಮ ಸಮಯ ಕಂಡುಬಂದ ಅದ್ಭುತ ದೃಶ್ಯಗಳು

ಆಗ ನಾನು ಹೀಗೆ ಹೇಳಿದೆನು. ''ಸ್ವಾಮಿ! ನೀವು ಕಣ್ಣು ತುಂಬಾ ನೋಡಿದ ಶ್ರೀಪಾದರ ಲೀಲೆಗಳನ್ನು ತಿಳಿಸಿ, ನನ್ನನ್ನು ಧನ್ಯನಾಗಿ ಮಾಡಿ.'' ಆಗ ತಿರುಮಲದಾಸು, ''ಶಂಕರ ಭಟ್ಟರೇ! ನರಸಾವಧಾನಿಗೆ ಬಾಪನಾರ್ಯ ಮೇಲೆ ಕೋಪ ಬಂತು. ಹೇಗಾದರು, ಅವರನ್ನು ಅವಮಾನ ಗೊಳಿಸಲು ನಿರ್ಧರಿಸಿದರು. ಭಗಳಾಮುಖಿ ದೇವತೆ ಆತನನ್ನು ಬಿಟ್ಟುಹೋಗಿದ್ದು ಬಾಪನಾರ್ಯರಿಂದಲೇ ಎಂದುಕೊಂಡರು. ತಂತ್ರದಿಂದ ಬಾಪನಾರ್ಯರು ತನಗಿದ್ದ ಮಂತ್ರ ಶಕ್ತಿಯನ್ನು ಅಪಹರಿಸಿದ್ದಾರೆಂದು ಪ್ರಚಾರ ಮಾಡಿದರು. ನಾಡೀಗ್ರಂಥ, ಶ್ರೀವಲ್ಲಭರ ಅವತಾರದ ಬಗ್ಗೆ ತಿಳಿಸಿರುವುದು ಆತನಿಗೆ ಬಾಧೆ ಉಂಟು ಮಾಡಿತು. ಆ ಗ್ರಂಥ ಅಪನಂಬಿಕೆ ಎಂದು ಮೀನು ತಿನ್ನವ ಬಂಗಾಳಿ ಬ್ರಾಹ್ಮಣನಿಗೆ ಬಾಪನಾರ್ಯರು ಊಟ ಕೊಡುವುದು ಅಪಚಾರವೆಂದು ವಾದ ಮಾಡಿದರು. ಮನುಷ್ಯ ಮಾತ್ರರು ಯಾರೂ ಪೂರ್ಣ ಬ್ರಹ್ಮರ ರೂಪ ಆಗಲಾರನೆಂದು, ಬಾಲಕನಾದ ಶ್ರೀಪಾದನು, ಸರ್ವಾಂತರ್ಯಾಮಿತ್ವವನ್ನು, ಸರ್ವಜ್ಞತ್ವವನ್ನು, ಸರ್ವಶಕ್ತಿತ್ವವನ್ನು ಹೊಂದಿದ ದತ್ತ ಪ್ರಭುಗಳು ಆಗಲಾರನೆಂದು ವಾದಿಸಿದರು. ಶ್ರೀಪಾದರು ಹಸಿಪ್ರಾಯದ ಮಗು ಆಗಿದ್ದಾಗಲೇ ಪ್ರಣವವನ್ನು ಹೇಳುವುದು, ತೊಟ್ಟಿಲ ಮಗುವಾಗಿದ್ದಾಗಲೇ ಸಂಸ್ಕೃತದಲ್ಲಿ ಪ್ರಸಂಗ ಮಾಡುವುದು, ವಯಸ್ಸಿಗೆ ಮೀರಿ ಪ್ರಜ್ಞೆ, ತಿಳುವಳಿಕೆ ತೋರಿಸುಕೊಳ್ಳುವುದು, ಯಾರೋ ಒಬ್ಬ ವೇದ ಪಂಡಿತ ಬ್ರಾಹ್ಮಣ, ಅಶರೀರದವ ಈ ಬಾಲಕನ ಶರೀರವನ್ನು ಆಕ್ರಮಿಸಿದ್ದಾನೆಂದು ಪ್ರಚಾರ ಮಾಡ ತೊಡಗಿದನು. ಶ್ರೀ ಕುಕ್ಕುಟೇಶ್ವರಾಲಯದ ಸ್ವಯಂಭೂ ದತ್ತರೇ ನಿಜವಾದ ವರ ಪ್ರದಾತ

ಎಂದು, ಬಾಲಕನನ್ನ ದತ್ತ ಸ್ವರೂಪವಾಗಿ ಭಾವಿಸುವುದು ತಪ್ಪೆಂದು ಪ್ರಚಾರ ಮಾಡಿದರು. **ಶ್ರೀಪಾದ ಶ್ರೀವಲ್ಲಭರು ಜನುಮಿಸಿದಾಗ, ಮೂರು ತಲೆಯ ನಾಗರಹಾವು 18 ದಿನ, ಮಗುವನ್ನು ಎಲ್ಲಿ ಮಲಗಿಸಿದರೂ ಹೆಡೆ ಹಿಡಿಯುತ್ತಿತ್ತು. ಅವರು ತಾಯಿ ಗರ್ಭದಿಂದ ಜ್ಯೋತಿಸ್ವರೂಪರಾಗಿ ರೂಪಗೊಂಡರು. ಹುಟ್ಟಿದ ಮರುಕ್ಷಣವೇ ಸುಮತಿ ಮಹಾರಾಣಿ ದಿಗ್ಭ್ರಾಂತಿ ಹೊಂದಿದಳು. ಹುಟ್ಟು ಕೊಠಡಿಯಿಂದ ಮಂಗಳವಾದ್ಯಗಳ ನಾದ ಕೇಳಿಬರುತ್ತಿತ್ತು.** ಕೆಲಹೊತ್ತಿಗೆ ಒಂದು ಆಕಾಶವಾಣಿ, ಎಲ್ಲರನ್ನೂ ಕೊಠಡಿಯಿಂದ ಹೊರಗೆ ಹೋಗಲೂ ಹೆಚ್ಚರಿಸಿತು. **ಶ್ರೀಪಾದರ ಸನ್ನಿಧಿಗೆ 4 ವೇದಗಳು, 18 ಪುರಾಣಗಳು, ಮಹಾ ಪುರುಷರು, ಜ್ಯೋತಿ ಸ್ವರೂಪರಾಗಿ ಬಂದರು. ಪವಿತ್ರ ವೇದ ಮಂತ್ರಗಳು ಈಚೆಗೆ ಕೇಳಿ ಬರುತ್ತಿತ್ತು.** ಸ್ವಲ್ಪ ಸಮಯದ ನಂತರ ನಿಶ್ಶಬ್ದವಾಯಿತು. ಈ ಅದ್ಭುತ ಸಂಘಟನೆ ಬಾಪನಾರ್ಯರಿಗೆ ಸಹಾ ಅಯೋಮಯವಾಗಿತ್ತು.

## ಶ್ರೀಪಾದರ ಬಾಲ್ಯ ಲೀಲೆಗಳು

ಶ್ರೀಪಾದರು ಜನ್ಮಿಸಿ ಒಂದು ವರ್ಷ ಪೂರ್ತಿ ಆಗಲಿತ್ತು. ತಿಂಗಳ ಕೂಸಾಗಿರಲೂ ಸಹಾ ಅವರು, ತಾತನಾದ ಬಾಪನಾರ್ಯರ ಜೊತೆ, ಪಂಡಿತ ಪರಿಷತ್ ಸಮಾವೇಶಗಳಿಗೆ ಹಾಜರಾಗುತ್ತಿದ್ದರು.

**ಶ್ರೀಚರಣರು ತಿಂಗಳುಗಳ ಕೂಸಾಗಿರುವಾಗಲೂ ಸಹಾ, ಸ್ವೇಚ್ಛೆಯಾಗಿ ನಡೆಯುವುದು ಶಾಸ್ತ್ರ ಪ್ರಸಂಗಗಳನ್ನು ಮಾಡುವುದು, ಚಿತ್ರವಿಚಿತ್ರ ಲೀಲಾ ಪ್ರದರ್ಶನ ನಡೆಯುತ್ತಲೇ ಇತ್ತು.** ಯಾರೋ ದೊಡ್ಡ ಪಂಡಿತರು ಮರಣಾನಂತರ, ಈ ಬಾಲಕನನ್ನು ಪ್ರವೇಶಿಸಿ, ಹೀಗೆ ಮಾಡುತ್ತಿದ್ದಾನೆಂದು ಬಾಲಕನಿಗೆ ತಕ್ಕ ಚಿಕಿತ್ಸೆ ಮಾಡಿಸದೇ, ಬಾಪನಾರ್ಯರು ಮತ್ತು ರಾಜಶರ್ಮರು ಅವನನ್ನು ಶ್ರೀ ದತ್ತಾವತಾರವೆಂದು ತಪ್ಪಾಗಿ ಬಾವಿಸುತ್ತಿದ್ದಾರೆಂದು ಇದು ಒಪ್ಪವಂತಹಾ ವಿಷಯವಲ್ಲವೆಂದು ಶ್ರೀ ಪೀಠಿಕಾಪುರ ವಾಸಿಗಳು ಯೋಚಿಸುತ್ತಿದ್ದರು. ಪೀಠಿಕಾಪುರ ಪಾದಗಯಾ ಕ್ಷೇತ್ರವಾದ ಕಾರಣ, ಪಿತೃದೇವತೆಯರಿಗೆ ಪ್ರಧಾನ ಕ್ಷೇತ್ರವಾದ್ದರಿಂದ ಮತ್ತು ಪೀಠಿಕಾಪುರದಲ್ಲಿ ತೀರಿಹೋದವರ ಜೊತೆ ಮಾತಾಡಬಲ್ಲ ತಂತ್ರಜ್ಞರು ಇದ್ದ ಕಾರಣ ಈ ವಿಧವಾದ ಯೋಚನೆಗಳಿಗೆ ಬಲ ಪ್ರಾಪ್ತವಾಗುತ್ತಿತ್ತು. ನಾನು ಮಲ್ಯಾದಿಪುರದಿಂದ ಬಂದಕಾರಣ, ಶ್ರೀ ಬಾಪನಾರ್ಯರ ಮತ್ತು ಶ್ರೀ ರಾಜಶರ್ಮರ ಮನೆಗಳಲ್ಲಿ ಬಟ್ಟೆ ಒಗೆಯುತ್ತಿದ್ದೆನು. ನರಸಾವಧಾನಿಯ ವೃದ್ಧ ಅಗಸ ತೀರಿಹೋಗಿ, ಅವನಿಗಿದ್ದ ಒಬ್ಬನೇ ಮಗ ಕೋಕನವೆಂದು ಕರೆಯಲ್ಪಡು, ವಾಯಸಪುರ ಅಗ್ರಹಾರ (ಕಾಕಿನಾಡ) ಕ್ಕೆ ವಲಸೆ ಹೋಗಲೂ, ನನ್ನನ್ನೇ ನರಸಾವಧಾನಿ ಮನೆ ಬಟ್ಟೆ ಒಗೆಯಲೂ ನಿಯಮಿಸಿದರು. ಚಿಕ್ಕ ವಯಸಿನಿಂದಲೂ ಬಾಪನಾರ್ಯರ ಕುಟುಂಬ ಜೊತೆ ಸಾನ್ನಿತ್ಯದ ಕಾರಣ, ನಾನು ಒಳ್ಳೆಯ ಮಾರ್ಗದಲ್ಲಿ ನಡೆಯುವಂತವನಾಗಿ ಬೆಳೆದೆನು. ನನ್ನಲ್ಲಿ ಆಧ್ಯಾತ್ಮಿಕ ಪ್ರವೃತ್ತಿ ಬೆಳೆಯಿತು. ನರಸಾವಧಾನಿಯ ಬಟ್ಟೆ ನಾನು ಒಗೆಯದೇ, ನನ್ನ ಹಿರಿಯ ಮಗನಾದ ರವಿದಾಸನನ್ನು ಒಗೆಯಲೂ ಹೇಳಿದೆನು. ನರಸಾವಧಾನಿಯನ್ನು ನೋಡಿದ ದಿನ, ಹೊಟ್ಟೆಯ ಆರಾಟ ಶುರುವಾಗಿ ಊಟವೂ ಸೇರುತ್ತಿರಲಿಲ್ಲ! ಶುಭ ಮನಸ್ತತ್ವ ಉಳ್ಳವರ ಮನೆಯ ಬಟ್ಟೆ ಮಾತ್ರ ಒಗೆಯಲೂ ನನಗೆ ಸಾಧ್ಯವಾಗುತ್ತಿತ್ತು.

## ತಿರುಮಲದಾಸನ ಮೇಲೆ ಶ್ರೀಪಾದರ ದಿವ್ಯಾನುಗ್ರಹ

ರವಿದಾಸ, ನನ್ನ ಹಿರಿಯ ಮಗ, ನನ್ನ ಮೊದಲ ಪತ್ನಿಯವ. ರವಿದಾಸನೇ ನರಸವಧಾನಿ ಬಟ್ಟೆಗಳು ಒಗೆಯುತ್ತಿರುವ ವಿಷಯ ತಿಳಿದು, ನನ್ನನ್ನೆ ಒಗೆಯುವಂತೆ ಆಜ್ಞಾಪಿಸಿದರು. ದೊಡ್ಡವರ ಆಜ್ಞೆ ಶಿರೋಧಾರವಾದ್ದರಿಂದ ಶ್ರೀಪಾದರ ನಾಮ ಜಪಿಸುತ್ತಾ ಅವರ

ಬಟ್ಟೆ ಒಗೆಯುತ್ತಿದ್ದೆನು. ರವಿದಾಸ ಬಟ್ಟೆಗಳು ಅವರಿಗೆ ತಲುಪಿಸಿದನು. ವಿಚಿತ್ರವಾಗಿ, ನಾನು ಒಗೆದ ಬಟ್ಟೆಗಳನ್ನು ಹಾಕಿಕೊಂಡ ನರಸಾವಧಾನಿಗೆ ಮಾತ್ರ, ಮೈಯ್ಯೆಲ್ಲಾ ಚೇಳು, ಜೆರಿ ಹಾರಾಡಿದ ಹಾಗೆ ಇದ್ದು, ಶರೀರ ಬೆಂಕಿಯ ಮೇಲೆ ಇದ್ದ ಭಾವನೆ ಆಗುತ್ತಿತ್ತು. ಅವು ಅಗ್ನಿ ವಸ್ತ್ರಗಳಾಗಿ ಇದ್ದವು. ನರಸಾವಧಾನಿ, ನಾನು ಕ್ಷುದ್ರ ವಿದ್ಯೆಯಿಂದ ಮಂತ್ರ ಶಕ್ತಿಯನ್ನು ಅವರ ಬಟ್ಟೆಗೆ ಹಾಕಿ ಅವರಿಗೆ ತೊಂದರೆ ಕೊಡುತ್ತಿದ್ದೇನೆಂದು, ನನ್ನನ್ನು ಶಿಕ್ಷೆಗೆ ಗುರಿ ಮಾಡುವೆನೆಂದು ಹೆದರಿಸಿದರು. ನ್ಯಾಯಾಧಿಕಾರಿ ನನ್ನನ್ನು ನಿರ್ದೋಷಿ ಎಂದು ತೀರ್ಮಾನಿಸಿದರು. ಮಗೂ ಶಂಕರ ಭಟ್ಟಾ! ಶ್ರೀಪಾದರ ಲೀಲೆ ಯೋಚನಾತೀತಗಳು. ನಾನು ನ್ಯಾಯಾಧಿಕಾರಿ ಬಳಿಯಿಂದ ಮನೆಗೆ ಬರಲೂ, ಶ್ರೀ ಚರಣರು 16 ವಯಸಿನ ಬಾಲಕನಾಗಿ ಬಂದರು. ಮೊದಲಿಂದಲೂ ತಮಗೆ ಇಷ್ಟ ಬಂದ ವಯಸ್ಸಿನಲ್ಲಿ ದರ್ಶನ ಕೊಡುತ್ತಿದ್ದರು. ಶ್ರೀಚರಣರ ಲೀಲೆ, ನೇರಾಗಿ ಕಾಣುವಂತವರಿಗೆ ಇದು ಸಹಜವಾಗಿದ್ದವು. ನಾನು ಆಶ್ಚರ್ಯದಿಂದ, "ಸ್ವಾಮಿ! ತಾವು ಉತ್ತಮ ಬ್ರಾಹ್ಮಣ ವಂಶಸ್ಥರು. ಅಗಸರ ವಾಸಸ್ಥಾನಕ್ಕೆ ಬರುವುದು ಒಳ್ಳೆಯದಲ್ಲ" ಎಂದೆನು. ಆಗ ಶ್ರೀಪಾದರು, "ನರಸಾವಧಾನಿ ಯಾರೆಂದು ತಿಳಿದಿದ್ದೀಯ? ಅಗಸನ ಮೂಟೆಯಷ್ಟು ಪಾಪ ಹೊತ್ತು ತಿರುಗುವ ಒಬ್ಬ ಅಗಸ. ಅಗಸನಾದ ನೀನು, ಬ್ರಹ್ಮಜ್ಞಾನಕ್ಕಾಗಿ ತಪಿಸುತ್ತಿರುವ ಬ್ರಾಹ್ಮಣ. ಆದ್ದರಿಂದ, ನಾನಿಲ್ಲಿಗೆ ಬರುವುದು ತಪ್ಪಲ್ಲ, ಅಲ್ಲವೆ?" ಎಂದರು.

ಆಗ ನಾನು ಶ್ರೀಚರಣರ ಚರಣಗಳ ಮೇಲೆ ಬಿದ್ದು ಬಿಕ್ಕಿಬಿಕ್ಕಿ ಅತ್ತೆನು. ಅಮೃತ ನೋಟದಿಂದ ನನ್ನನ್ನು ತಮ್ಮ ದಿವ್ಯ ಹಸ್ತಗಳಿಂದ ಎತ್ತಿ, ಆ ಹಸ್ತಗಳನ್ನು ನನ್ನ ತಲೆ ಮೇಲೆ ಇಟ್ಟರು. ನನ್ನ ಹಿಂದಿನ ಜನ್ಮ ಜ್ಞಾಪಕಕ್ಕೆ ಬರಲೂ, ಯೋಗಶಕ್ತಿ ನನ್ನಲ್ಲಿ ಚಲಿಸಿತು. ಕುಂಡಲಿನೀ ಶಕ್ತಿ ಜಾಗೃತವಾಗತೊಡಗಿತು. ಶ್ರೀಪಾದರು ಸಾವಧಾನವಾಗಿ, ಹೆಜ್ಜೆಯನ್ನಿಕ್ಕುತ್ತಾ ಮಾಯವಾದರು.

ನರಸವಾಧಾನಿ ತನ್ನ ಮನೆಯಲ್ಲಿ ಸೊಪ್ಪನ್ನು ಬೆಳೆಯುತ್ತಿದ್ದರು. ಅದು ಬಹಳ ರುಚಿಕರವಾದದ್ದೆಂದು ಪ್ರಸಿದ್ಧಿ. ಎಷ್ಟು ಕೇಳಿಕೊಂಡರೂ, ಯಾರಿಗೂ ಅವರು ಸೊಪ್ಪು ಕೊಡುತ್ತಿರಲಿಲ್ಲ. ಯಾರಿಂದಾಗಲೀ ತನಗೆ ಅತಿಯಾದ ಪ್ರತಿಫಲ ಇದ್ದ ಪಕ್ಷದಲ್ಲಿ ಮಾತ್ರ ಸೊಪ್ಪು ಕೊಡುತ್ತಿದ್ದರು. ಶ್ರೀಪಾದರು ಒಮ್ಮೆ ತನ್ನ ತಾಯಿಯನ್ನು ಸೊಪ್ಪು ಹಾಕಿ ಅಡಿಗೆ ಮಾಡಲು ಕೇಳಿದರು. ಅದು ನರಸಾವಧಾನಿ ಮನೆ ಸೊಪ್ಪಿನಿಂದ. ಅದು ಅಸಾಧ್ಯವಾಗಿ ಕಂಡು ಬರಲೂ, ಅಜ್ಜನಾದ ಬಾಪನಾರ್ಯರು, "ಮಗೂ, ಶ್ರೀಪಾದ! ನಾಳೆ ಬೆಳಿಗ್ಗೆ ನೀನೆ ಖುದ್ದಾಗಿ ನರಸಾವಧಾನಿ ಅಜ್ಜನನ್ನ ಸೊಪ್ಪು ಕೊಡಲು ಕೇಳು. ನಾನು ನಿನ್ನನ್ನು ಎತ್ತಿಕೊಂಡು ಹೋಗುವೆನು. ಒಂದು ವೇಳೆ ಅವರು ನಿರಾಕರಿಸಿದರೇ ಆ ವಿಷಯ ಯಾರಿಗೂ ತಿಳಿಸಬಾರದು" ಎನ್ನಲೂ, ಅದಕ್ಕೆ ಶ್ರೀಪಾದರು ಒಪ್ಪಿದರು. ಮಾರನೇ ದಿನ ಬೆಳಿಗ್ಗೆ ಬಾಪನಾರ್ಯರು ಶ್ರೀಪಾದರನ್ನು ಎತ್ತಿಕೊಂಡು ನರಸಾವಧಾನಿಯರ ಮನೆಗೆ ಹೊರಟಿದ್ದರು. ದೊಡ್ಡವರನ್ನು ಗೌರವಿಸಬೇಕೆಂದು, ಅವರ ಆಶೀರ್ವಾದ ಮಕ್ಕಳು ಪಡೆಯಬೇಕೆಂದು ಬಾಪನಾರ್ಯರಂದರು. ಶ್ರೀಪಾದರು ಒಪ್ಪಿಕೊಂಡರು. ನರಸಾವಧಾನಿ ಬೀದಿ ಕಡೆ ಜಗಲಿ ಮೇಲಿದ್ದರು. ಅವರಿಗೆ ಉದ್ದವಾದ ಶಿಖೆ (ಜುಟ್ಟು) ಇತ್ತು. ಆ ಸಮಯದಲ್ಲೇ ಹಜಾಮಾ ಬಂದು, ಕ್ಷೌರ ಮಾಡುವ ಯತ್ನದಲ್ಲಿದ್ದನು. ಅಜ್ಜನ ಭುಜದ ಮೇಲೆ ಕುಳಿತಿದ್ದ ಶ್ರೀಪಾದರು, ನರಸಾವಧಾನಿಯನ್ನು ಕಂಡು ಕೈ ಮುಗಿದು ನಮಸ್ಕರಿಸಿದರು. ಆ ತಕ್ಷಣ ಘಟನೆಗೆ ನರಸಾವಧಾನಿ ಅಚ್ಚರಿಗೊಂಡರು. ಶ್ರೀಪಾದರ ದೃಷ್ಟಿ ನರಸಾವಧಾನರ ಜುಟ್ಟಿನ ಮೇಲೆ ಬಿತ್ತು. ಅಪ್ರಯತ್ನವಾಗಿ ಜುಟ್ಟು ಕೆಳಗೆ ಬಿತ್ತು. ಜುಟ್ಟು ಅದಷ್ಟಕ್ಕದೇ ಹೇಗೆ ಕಳಚಿಕೊಂಡು ಕೆಳಗೆ ಬಿತ್ತೊ ಅವರಿಗೆ ಅರ್ಥವಾಗದೇ ಸಂದಿಗ್ಧೆಯಲ್ಲಿದ್ದರು, ಆಗ ಶ್ರೀಚರಣರು ಅಜ್ಜನಿಗೆ, "ತಾತಾ! ನರಸಣ್ಣ ತಾತರಿಗೆ ಬಲು ಇಷ್ಟವಾದ ಜುಟ್ಟು ಅದಷ್ಟಿಗೆ ಅದೇ ಕಳಚಿ ಬಿದ್ದಿದೆ. ಈಗ ನಾನು, ಅವರಿಗೆ ಅಷ್ಟೇ ಪ್ರಿಯವಾದ ಸೊಪ್ಪು ಕೇಳಿದರೇ, ಏನು ಚಂದ? ಮೊದಲಿಗೇ ದುಃಖದಲ್ಲಿರುವ ಅವರನ್ನು

ಮತ್ತಷ್ಟು ದುಃಖಪಡಿಸಲಾರೆ. ನಮ್ಮನೆಗೆ ವಾಪಸ್ ನಡೀರಿ'' ಎಂದು ಹೇಳಿದರು. ತದನಂತರ, ಶ್ರೀಪಾದರು ತನಗೆ ಸೊಪ್ಪು ಬೇಕೆಂದು, ಎಂದಿಗೂ ಕೇಳಲಿಲ್ಲ.

ಶ್ರೀಪಾದರು ತನಗೆ ನಮಸ್ಕಾರ ಮಾಡುವುದರಲ್ಲಿ ಆದ ಮೋಸ, ನರಸಣ್ಣಿಗೆ ತಿಳಿದು ಬಂತು. ಅವರು ಧ್ಯಾನದಲ್ಲಿದ್ದಾಗ ಅವರನ್ನೆ ಹೋಲಿದ ಒಬ್ಬ ವರ್ಚಸ್ವಿ ತನ್ನಿಂದ ಈಚೆಗೆ ಹೊರಟನು. ನೀನಾರು? ಎಲ್ಲಿಗೆ ಹೊರಟಿದ್ದೀಯ ಎಂದು, ನರಸಾವಧಾನಿ ಪ್ರಶ್ನಿಸಿದರು. ಆ ವರ್ಚಸ್ವಿ ''ನಾನು ನಿನ್ನಲ್ಲಿದ್ದ ಪುಣ್ಯ ಶರೀರ. ನೀನಿಲ್ಲಿಯವರೆಗೂ ಅದೆಷ್ಟೊ ಸಲ ವೇದಾಧ್ಯಯನ ಮಾಡಿ, ಸ್ವಯಂಭೂ ದತ್ತರನ್ನ ಆರಾಧಿಸಿದೆ, ಆ ದತ್ತ ಅವತಾರಿಯಾದ ಶ್ರೀಪಾದರನ್ನೇ ಅವಮಾನಿಸಿದೆ, ನಿನಗೆ ನಿನ್ನ ಜುಟ್ಟಿನ ಮೇಲೆ ಮತ್ತು ನಿನ್ನ ಸೊಪ್ಪಿನ ಮೇಲಿನ ವ್ಯಾಮೋಹ ಎಳ್ಳಷ್ಟು ಆದರೂ, ಶ್ರೀವಲ್ಲಭರ ಮೇಲೆ ಇದ್ದಿದ್ದರೇ ನಿನ್ನ ಜನುಮ ಸಾರ್ಥಕವಾಗಿರುತ್ತಿತ್ತು. ಮೋಹ ನಾಶವಾದರೇನೇ ಮೋಕ್ಷ. ನೀನೋ ಮೋಹಪಾಶಗಳಿಲ್ಲಿ ಸಿಕ್ಕಿದ್ದೀಯ. ಸದ್ಯದಲ್ಲೇ ನಿನಗೆ ದರಿದ್ರ ಬರಲಿದೆ. ಅದರ ನಿವಾರಣೆಗೆಂದೇ ನಿನ್ನಿಂದ ''ಶಾಕದಾನವನ್ನು'' ಶ್ರೀಗಳು ಬಯಸಿದರು. ಆ ಕೋರಿಕೆಯಂತೆ, ನೀನು ಸೊಪ್ಪನ್ನ ಕೊಟ್ಟಿದ್ದರೆ, ದರಿದ್ರ ದಶೆ ಬರದೇ, ಐಶ್ವರ್ಯ ಸಹಾ ಬಂದಿರುವುದು. ಆ ಅವಕಾಶವನ್ನು ನೀನು ಕೈಯಾರೆ ಕಳೆದುಕೊಂಡೆ. ಆದರೂ, ಶ್ರೀಪಾದರು ಕರುಣಾಮಯಿ. ಅವರು ಈ ಆವತಾರವನ್ನು ಸಾಕು ಮಾಡಿ, ಮತ್ತೊಂದು ಅವತಾರ ತೋರಿಸುವುದರಲ್ಲಿದ್ದಾರೆ. ಆಗ ನೀನು ಒಬ್ಬ ಬಡ ಬ್ರಾಹ್ಮಣನಾಗಿರುವೆ. ಆಗಲೂ ನೀನು ನಿನ್ನ ಮನೆ ಹಿತ್ತಲಲ್ಲಿ ಸೊಪ್ಪನ್ನ ಬೆಳೆಸುವೆ. ಸರಿಯಾದ ಸಮಯ ಬಂದಾಗ ನಿನ್ನ ಪುಣ್ಯ ರೂಪವಾದ ನಾನು ನಿನ್ನಲ್ಲಿ ಪ್ರವೇಶಿಸುವೆ. ತದನಂತರ ಶ್ರೀ ಚರಣರು ನಿನ್ನ ಮನೆಗೆ ಬಂದು, ನೀನು ಪ್ರೀತಿಯಿಂದ ಬಡಿಸಿದ ಸೊಪ್ಪು ಅಡಿಗೆಯನ್ನು ಭುಜಿಸಿ, ನಿನಗೆ ಐಶ್ವರ್ಯ ಅನುಗ್ರಹಿಸುವರು. ಆಗ ಶ್ರೀಪಾದರು ನಮಸ್ಕರಿಸಿದ್ದು ನಿನಗೆ ಅಲ್ಲ. ನಿನ್ನಲ್ಲಿದ ಆ ಪುಣ್ಯ ಸ್ವರೂಪವಾದ ನನ್ನನ್ನು. ಈಗ ಅವರ ಶರೀರದೊಳು ಪ್ರವೇಶಿಸಲು ಆಜ್ಞೆ, ಆದ್ದರಿಂದ, ಈಗ ಸದ್ಯಕ್ಕೆ ನಿನ್ನನ್ನು ಬಿಟ್ಟುಹೋಗುತ್ತಿದ್ದೇನೆ. ಶ್ರೀಪಾದರಿಂದ ನಮಸ್ಕರಿಸಲ್ಪಟ್ಟು ನನ್ನನ್ನು ಕಳೆದುಕೊಂಡಿದ್ದೀಯ. ಉಳಿದಿರುವುದು, ನಿನ್ನಲ್ಲಿ ಪಾಪ ಪುರುಷ ಮಾತ್ರವೇ'' ಎಂದು ನುಡಿದು, ಆತನಲ್ಲಿದ್ದ ಪುಣ್ಯಪುರುಷ ಶ್ರೀಪಾದರಲ್ಲಿ ಲೀನವಾದನು.

ಅಂದಿನಿಂದ, ನರಸಾವಧಾನಿಯ ಸ್ಥಿತಿ ಕ್ಷೀಣಿಸಲಾಯಿತು. ಹಿಂದಿನ ವರ್ಚಸ್ಸು ಕಳೆದುಕೊಂಡು, ಅವರ ಮಾತನ್ನು ಲೆಕ್ಕಿಸುವವರಿಲ್ಲವಾದರು. ಪೀಠಿಕಾಪುರದಲ್ಲಿ ವಿಷೂಚಿ (ಕಲರಾ) ವ್ಯಾಧಿ ಪ್ರಬಲವಾಯಿತು. ಅನೇಕರು ಮರಣಿಸಿದರು. ಜಲದೋಷದಿಂದ ಕ್ರಿಮಿಗಳು ಜಾಸ್ತಿ ಆಗುತ್ತಿವೆ ಎಂದು, ಆ ಕಾರಣ ರೋಗ ಪ್ರಬಲವಾಗುತ್ತದೆ ಎಂದು ವೈದ್ಯರು ಹೇಳಿದರು. ಜನ ಹೆದರಿ, ಈ ದೊಡ್ಡ ರೋಗದಿಂದ ತಮ್ಮನ್ನು ಕಾಪಾಡಬೇಕೆಂದು, ಶಾಸ್ತ್ರಗಳಲ್ಲಿ ತಿಳಿಸಿರುವ ಉಪಾಯವನ್ನು ಆಚರಿಸಲು ಸಹಾಯ ಮಾಡಬೇಕೆಂದು ಬಾಪನಾರ್ಯರನ್ನು ಪ್ರಾರ್ಥಿಸಿದರು.

ಬಾಪನಾರ್ಯರು ಅಂತರ್‌ದೃಷ್ಟಿಯಿಂದ ಪರಿಶೀಲಿಸಿ, ಇದರ ಕಾರಣ ಜಲದೋಷ ಅಲ್ಲ ಎಂದು ವಾಯುಮಂಡಲದ ಕಾಲುಷ್ಯ ಎಂದು ತಿಳಿಸಿದರು. ಆದರೇ ವೈದ್ಯರು, ಇದು ವೈದ್ಯಶಾಸ್ತ್ರ ಒಪ್ಪವುದಿಲ್ಲವೆಂದರು.

ಜನರು ಗ್ರಾಮ ದೇವತೆಗೆ ತರಾವರಿ ಜೀವಬಲಿ ಮತ್ತು ಪೂಜೆಗಳನ್ನು ಮಾಡಿದರು. ಜೀವಬಲಿಯಿಂದ ಆ ಜಂತುವಿನ ಜೀವಶಕ್ತಿ ಅಂದರೇ ಪ್ರಾಣಶಕ್ತಿ ಬಿಡುಗಡೆ ಆಗಿ, ಮಂತ್ರೋಚ್ಛಾಟನೆಯಿಂದ ಆ ಪ್ರಾಣಶಕ್ತಿಯನ್ನು ವಶಮಾಡಿಕೊಳ್ಳಬಹುದೆಂದು ತಂತ್ರಜ್ಞರ

ನಂಬಿಕೆ. ಪ್ರಾಣಶಕ್ತಿ ವೃದ್ಧಿ, ಯೋಗ ಪ್ರಕ್ರಿಯೆಗಳಿಂದ ಸಾಧಿಸಬಹುದೆಂದು, ಗ್ರಾಮ ದೇವತೆಯನ್ನು ಸಾತ್ವಿಕಾರಾಧನೆದಿಂದ, ಪ್ರಸನ್ನ ಮಾಡಿಕೊಳ್ಳಬಹುದೆಂದು ಬಾಪನಾರ್ಯ ಸೂಚಿಸಿದರು. ಆದರೂ ಜನ, ಪ್ರಾಣಿ ಬಲಿ ಮಾಡುತ್ತಲೇ ಇದ್ದರು. ಶ್ರೀಪಾದರಂದು ಅವರ ದಿವ್ಯಲೀಲೆಗಳಲ್ಲಿ ವಿಶ್ವಾಸವಿರುವ ಕೆಲಮಂದಿ, ಶ್ರೀ ಚರಣರನ್ನು ಈ ವಿಷಯದ ಬಗ್ಗೆ ಕೇಳಿಕೊಂಡರು. ಆಗ ಶ್ರೀಚರಣರು ಗ್ರಾಮ ದೇವತೆಯನ್ನು ಪ್ರಾಣಿ ಬಲಿ ಕೇಳದೇ, ಸಮುದ್ರ ಸ್ನಾನಕ್ಕೆ ಹೋಗಬೇಕೆಂದು ತಾವು ಹೇಳಿದ್ದ ಹಾಗೆ ತಿಳಿಸಿದರು. ಕೇವಲ ಹಾಲು ಉಕ್ಕಿಸಿದರೇ, ರಕ್ಷಾಕಾಳಿಕಾಂಬೆ ಶಾಂತಿಸುವುಳೆಂದು, ಈ ವಿಷಯ ಎಲ್ಲಾ ಗ್ರಾಮ ಪ್ರಜೆಗಳಿಗೆ ತಪ್ಪಡಿ ಹೊಡಿಯುತ್ತಾ ಸಾರು ಹಾಕಬೇಕೆಂದು ಹೇಳಿದರು. ವಿಷೂಚಿ ರೋಗಗ್ರಸ್ತನಾದ ವೆಂಕಯ್ಯ, ಡಂಗೂರ ಹಾಕಬೇಕೆಂದು ಸಹಾ ಹೇಳಿದರು.

ಶ್ರೀವಲ್ಲಭರ ವಿಶ್ವಾಸಿಗಳು, ಮರಣಾವಸ್ಥೆಯಲ್ಲಿದ್ದ ವೆಂಕಯ್ಯನಿಗೆ ಈ ವಿಷಯ ತಿಳಿಸಲೂ ಆತ ಮೂರ್ಛೆ ಹೋದನು. ಒಂದೇ ಗಳಿಗೆಯಲ್ಲಿ ಪೂರ್ಣ ಸ್ವಸ್ಥನಾಗಲೂ, ಡಂಗೂರ ಹಾಕಿದನು. ಎಲ್ಲರೂ ಆಶ್ಚರ್ಯಪಟ್ಟರು.

ಶ್ರೀ ಬಾಪನಾರ್ಯರು ಒಂದು ದೊಡ್ಡ ಪಾತ್ರೆಯಲ್ಲಿ ನೀರು ಕೊಡಲು ಕೇಳಿದರು. ವಿಷಕ್ರಿಮಿಗಳ ಸಂಹಾರಕ ಮಂತ್ರ ಉಚ್ಛರಿಸಿದರು. ವಿಷಕ್ರಿಮಿಗಳು ಟಪಟಪ ಎಂದು ವಾಯು ಮಂಡಲದಿಂದ ನೀರಿನಲ್ಲಿ ಬಿದ್ದವು. ವಾಯು ಮಂಡಲದ ಕಾಲುಷ್ಯ ನಿರ್ಮೂಲವಾಯಿತು. ವಿಷೂಚಿ ದೊಡ್ಡರೋಗ ಪೀಠಿಕಾಪುರವನ್ನು ಬಿಟ್ಟುಹೋಯಿತು.

ಶ್ರೀಪಾದರ ಜನುಮ ದಿನವಾದ ಗಣೇಶ ಚತುರ್ಥಿಯಂದು ರಾಜಶರ್ಮ ಪತ್ನಿಯ ಜೊತೆ ಶ್ರೀಚರಣರನ್ನು ಕರೆದುಕೊಂಡು ಬಾಪನಾರ್ಯರ ಮನೆಗೆ ಹೋದರು. ಶ್ರೀ ಬಾಪನಾರ್ಯರು, ಶ್ರೀವಲ್ಲಭರ ಪಾದಗಳನ್ನು ಪರಿಶೀಲಿಸಿ ಶುಭಲಕ್ಷಣಗಳನ್ನು ದರ್ಶಿಸಲು ಯತ್ನಿಸಿದಾಗ ಎಲ್ಲಾ ಕಣ್ಣಿಗೆ ಮಿಂಚಿನಂತ ಕಾಂತಿ ಮಾತ್ರವೇ ಕುಂಡುಬರುತ್ತಿತ್ತು. ಶ್ರೀ ಮಹಾವಿಷ್ಣುವಿಗೆ ಇರುವ ಶುಭಲಕ್ಷಣಗಳನ್ನು ಕಾಣಲೂ ಆಗುತ್ತಿರಲಿಲ್ಲ. ಇದು ಅವರಿಗೆ ಆಶ್ಚರ್ಯವಾಗಿ ಕಂಡಿತು. ಒಂದು ದಿನ ಬೆಳಿಗಿನ ಝಾವವೇ, ಅಕ್ಕಿಯನ್ನು ಕುಟ್ಟಿದಾಗ ಬರುವ ತೌಡಿನ ಮೇಲೆ ದಿವ್ಯ ಪಾದ ಹೆಜ್ಜೆಗುರ್ತು ನೋಡಿ, ಬಾಪನಾರ್ಯರು ತನ್ನ ಮಗಳಾದ ಸುಮತಿಯನ್ನು ಕೇಳಿದರು, ''ಮಗು, ಈ ತೌಡಿನ ಮೇಲೆ ಯಾರು ನಡೆದುಹೋಗಿದ್ದು?'' ಆಗ ಆಕೆ, ''ಇನ್ಯಾರು, ನಿಮ್ಮ ಮುದ್ದಿನ ಮೊಮ್ಮಗನೇ'' ಎಂದಳು. ಆ ಹೆಜ್ಜೆ ಗುರ್ತು ಸುಮಾರು 16 ವರುಷ ಬಾಲಕನ ಹೆಜ್ಜೆಗಳಂತೆ ಇದ್ದವು. ಮೊಮ್ಮಗನನ್ನು ಎತ್ತಿಕೊಂಡು, ಅವನ ಶ್ರೀಚರಣಗಳನ್ನು ಪರೀಕ್ಷಿಸಿದರು. ಇದಕ್ಕೆ ಮುನ್ನ ಕಂಡ ಮಿಂಚಿನ ಕಾಂತಿ ತೋರಲಿಲ್ಲ. ಸ್ಪಷ್ಟವಾಗಿ ಅವನು ದತ್ತ ಅವತಾರವೇ ಎನ್ನುವ ಚಿಹ್ನೆಗಳು ಕಂಡುಬಂತು. ಪಾದಗಳನ್ನು ಮುದ್ದಾಡಿ, ಸಾಕ್ಷಾತ್ ದತ್ತ ಪ್ರಭುಗಳೇ ಎಂದು ಖರಾರು ಮಾಡಿಕೊಂಡರು. ಬಾಪನಾರ್ಯರ ಬಾಯಿಂದ ತಕ್ಷಣ ಕೆಲವು ಪದಗಳು ಕೇಳಿಬಂದೆವು. ಅವು ಛಂದಸ್ಸನ್ನು, ವ್ಯಾಕರಣದೋಷ ರಾಹಿತ್ಯವನ್ನು ಹೊಂದಿರಬೇಕಾಗಿಲ್ಲ.

ತಾತನ ಕಣ್ಣುಗಳಿಂದ ನೀರು ಸೋರುತ್ತಿರಲೂ, ಶ್ರೀಪಾದರು ಶಾಂತವಾಗಿ ಒರಸಿದರು ಮತ್ತು ಹೀಗೆಂದರು, ''ತಾತ! ನೀವು ಶ್ರೀಶೈಲ್ಲದಲ್ಲಿ, ಸೂರ್ಯಮಂಡಲದಿಂದ ಶಕ್ತಿಪಾತಮಾಡಿ, ಮಲ್ಲಿಕಾರ್ಜುನ ಶಿವಲಿಂಗದೊಳಕ್ಕೆ ಆಕರ್ಶಿಸಿದಿರಿ. ಅದೇ ಸಮಯಕ್ಕೆ **ಸೂರ್ಯಮಂಡಲದಿಂದ ಶಕ್ತಿ, ಗೋಕರ್ಣದ ಮಹಾಬಲೇಶ್ವರರಲ್ಲಿ ಮತ್ತು ಪಾದಗಯಾ ಕ್ಷೇತ್ರದ, ಸ್ವಯಂಭೂ ದತ್ತರಲ್ಲಿ ಆಕರ್ಶಿಸಲ್ಪಟ್ಟಿತು. ನಾನು ಗೋಕರ್ಣ ಕ್ಷೇತ್ರವನ್ನು ಮತ್ತಷ್ಟು ಶಕ್ತಿಯುತವಾಗಿ ಮಾಡಲು ಇಚ್ಛಿಸುತ್ತೇನೆ. ಜೀವಿಗಳಿಗೆ ಸಂಬಂಧಪಟ್ಟ ಅನಿಷ್ಟ, ಸ್ಪಂದನೆಗಳನ್ನು ಮಹಾಬಲೇಶ್ವರ (ಪರಮೇಶ್ವರ ಆತ್ಮಲಿಂಗ)ಲ್ಲಿ ಲಯಮಾಡಿಕೊಂಡು, ಶುಭಸ್ಪಂದನೆಗಳನ್ನು ಆಶ್ರಿತರಿಗೆ ತಲುಪಿಸುವುದೇ ನನ್ನ ಗುರಿ. ಹಾಗೆಯೇ ದರ್ಶನದಿಂದಲೇ ಮುಕ್ತಿಯನ್ನುಂಟು ಮಾಡುವ ಮಲ್ಲಿಕಾರ್ಜುನ ಲಿಂಗವನ್ನು ಸಹಾ**

**ಶಕ್ತಿವಂತವಾಗಿ ಮಾಡುತ್ತೇನೆ.** ನೀನು ಸತ್ಯಋಷಿ. ಯತಿ ರೂಪಧಾರಿಯಾದ ನನಗೆ, ತಾಯಿ ಪಾದ ನಮಸ್ಕಾರ ಮಾಡಿದರೂ, ನಾನು ಅಲ್ಪಾಯುಷ್ಕರನಾಗಲಾರೆನೆಂದು ನಿರ್ಧರಿಸಿದೆ. ಶ್ರೀಪಾದ ಶ್ರೀವಲ್ಲಭರೂಪದಲ್ಲಿರುವ ನನಗೆ, ತಾಯಿ ಪಾದ ನಮಸ್ಕಾರದಿಂದ, ನಾನು ಅಲ್ಪಾಯುಷ್ಯವನಾಗುವೆನೆಂದು, ನಾನು ಖಚಿತವಾಗಿ ಹೇಳಿದ್ದೆ. ನಮ್ಮಿಬ್ಬರ ಮಾತುಗಳೂ ಸುಳ್ಳಾಗದೇ, ನಾನು ನಿಮ್ಮ ಮನೆಯಲ್ಲಿ ಕೇವಲ 16 ವರುಷ ಇರುವೆನು. ಸಂಸಾರ ಬಂಧನಗಳಿಂದ ಮುಕ್ತಿ ಬಯಸುವ ಮುಮುಕ್ಷುರನ್ನು ಆದುಕೋಬೇಕು. ನಾನು ಚಿರಂಜೀವಿಯಾಗಿರಬೇಕೆಂಬುವ ನಿನ್ನ ಬಯಕೆ ತಪ್ಪದೇ ತೀರಿಸುವೆ. ಶ್ರೀಪಾದ ಶ್ರೀವಲ್ಲಭ ನಾಮದೊಳು ಇರುವ ಈ ದಿವ್ಯಮಂಗಳ ಸ್ವರೂಪ ಗುಪ್ತವಾಗಿರುವುದು. **ನೃಸಿಂಹ ಸರಸ್ವತಿಯಾಗಿ ಅವತರಿಸಿದರೂ, ಶ್ರೀಪಾದ ಶ್ರೀವಲ್ಲಭರ ರೂಪದಲ್ಲೇ, ನಿತ್ಯಸತ್ಯರೂಪವಾಗಿ ನಿಂತಿರುವೆನು. ನೃಸಿಂಹ ಸರಸ್ವತಿ ಆಗಿ ಅವತರಿಸಿ ಶ್ರೀಶೈಲದಲ್ಲಿ ಕದಲೀವನದೊಳು 300 ವರುಷ ತಪಸ್ಸನ್ನ ಆಚರಿಸಿ, ಪ್ರಜ್ಞಾಪುರದಲ್ಲಿ ಸ್ವಾಮಿ ಸಮರ್ಥರಾಗಿ, ಅಲ್ಲಿನ ಔದುಂಬರ ವೃಕ್ಷದಲ್ಲಿ ನನ್ನ ಪ್ರಾಣಶಕ್ತಿಯನ್ನು ಇಟ್ಟು, ಶ್ರೀಶೈಲ ಮಲ್ಲಿಕಾರ್ಜುನ ಶಿವಲಿಂಗದಲ್ಲಿ ಲೀನವಾಗುವೆನು.**'' ಬಾಪನಾರ್ಯರಿಗೆ ಇದೆಲ್ಲವು ಆಶ್ಚರ್ಯ ಮತ್ತು ಅದ್ಭುತವಾಗಿ ಗೋಚರಿಸಿತು. ತಾತನ ಮನೆಯಲ್ಲಿ ಗಣೇಶ ಚತುರ್ಥಿದಿನ, ಶ್ರೀಪಾದರ ಪ್ರಥಮ ಜನ್ಮದಿನ ವೈಭವದಿಂದಾಯಿತು.

ಪೀಠಿಕಾಪುರದಲ್ಲಿ ಆ ದಿನ ಮತ್ತೊಂದು ಅದ್ಭುತ ನಡೆಯಿತು. ಪ್ರಾತಃಕಾಲದಲ್ಲೆ ನರಸಾವಧಾನಿ, ಪೂಜಾರಿ ಮತ್ತಿತರರು ಶ್ರೀ ಕುಕ್ಕುಟೇಶ್ವರಾಲಯ ದರ್ಶನಕ್ಕೆ ಹೊರಟಾಗ, ಅಲ್ಲಿ ಸ್ವಯಂಭೂ ದತ್ತರ ವಿಗ್ರಹ ಇರಲಿಲ್ಲ. ಈ ವಿಷಯ, ಕಾಡ್ಗಿಚ್ಚಿನಂತೆ ಊರೆಲ್ಲಾ ವ್ಯಾಪಿಸಿತು. ನರಸಾವಧಾನಿಯನ್ನು ದ್ವೇಷಿಸುವ ತಾಂತ್ರಿಕನೊಬ್ಬನು ವಿಗ್ರಹ ನಾಪತ್ತೆ ಆಗಿರುವುದು, ಕ್ಷುದ್ರ ವಿದ್ಯೆ ತಿಳಿದ, ನರಸಾವಧಾನಿಯ ಕೆಲಸವೆಂದು ಪ್ರಚಾರ ಮಾಡಿದನು. ಆಗ ಪೀಠಿಕಾಪುರ ಬ್ರಾಹ್ಮಣ್ಯ, ನರಸಾವಧಾನರ ಮನೆಯನ್ನು ಜಪ್ತಿ ಮಾಡಿದರು. ಇದರ ಬಗ್ಗೆ ಬಾಪನಾರ್ಯರು ಸತ್ಯವು ಸಮಯ ಬಂದಾಗ ಈಚೆಗೆ ಬರುವುದೆಂದು, ಆಗ ಮಾತನಾಡೋಣವೆಂದು ಮೌನ ವಹಿಸಿದರು. ನೆಲ ಅಗೆಯಲು, ನರಸವಧಾನಿ ಮನೆಯಲ್ಲಿ ಕ್ಷುದ್ರವಿದ್ಯೆಗೆ ಸಂಬಂಧಿಸಿದ ಮಾನವ ಕಪಾಲ, ಮುಂತಾದವು ಈಚೆಗೆ ಬಂದು, ಅವರು ನಿರ್ದೋಷಿ ಆದರೂ ಕ್ಷುದ್ರವಿದ್ಯಾ ಉಪಾಸಕರೆಂದು ಖಚಿತವಾಯಿತು. ದಿನೇ ದಿನೇ ಅವರ ಸ್ವಸ್ಥತೆ ಕ್ಷೀಣಿಸಿತು. ತನ್ನ ಮನೆಯಲ್ಲಿದ್ದ ಒಂದು ಗೊಡ್ಡು ಹಸುವನ್ನು ಎತ್ತಿನಂತೆ ಉಪಯೋಗಿಸುತ್ತಾ, ಆಹಾರವೂ ಸರಿಯಾಗಿ ಕೊಡದವನಾಗಿದ್ದನು. ತಾಂತ್ರಿಕನು ಆ ಗೋವಿನಲ್ಲಿ ಕ್ಷುದ್ರ ಶಕ್ತಿಯನ್ನು ಪ್ರವೇಶ ಮಾಡಿದನು. ಅದು ಒಂದು ದಿನ ಹಗ್ಗವನ್ನು ಬಿಡಿಸಿಕೊಂಡು ಭೀಕರವಾಗಿ, ಮನೆಯವರನ್ನು ಗುಮ್ಮಿ ತನ್ನ ಯಜಮಾನರ ಪ್ರೀತಿಯ ಸೊಪ್ಪಿನ ತೋಟವನ್ನು ಧ್ವಂಸಮಾಡಿತು. ಯಾರಿಗೂ ಅದನ್ನು ಹಿಡಿದು ಕಟ್ಟಲು ಆಗಲಿಲ್ಲ. ಅಂದು ಯಜಮಾನರ ತಾಯಿಯ ಆಬ್ಧೀಕವಾಗಿದ್ದು, ಸಮೃದ್ಧಿಯಾಗಿ ಮಾಡಲಾಗಿದ್ದ ಕಜ್ಜಾಯಾದಿಗಳನ್ನು ಹಸು ತಿಂದುಹಾಕಿತು. ಬ್ರಾಹ್ಮಣರ ಭೋಜನ ಆಗಿದ್ದರೂ, ಮನೆಯವರ್‍ಯಾರು ತಿಂದಿರಲಿಲ್ಲ. ಶ್ರೀಪಾದರು ತಂದೆ ರಾಜಶರ್ಮರೊಂದಿಗೆ, ನರಸಣ್ಣರ ಮನೆಗೆ ಹೋಗಬೇಕೆಂದು ಹಟ ಮಾಡಿದರೂ, ಮನೆಯ ಮುಂದೆ ನಿಲ್ಲಲೂ, ಆ ಉದ್ರೇಕದಲ್ಲಿದ್ದ ಹಸು, ಶ್ರೀಪಾದರನ್ನು ಕಂಡಕೂಡಲೇ ಶಾಂತಗೊಂಡು, ಬಂದು ಅವರಿಗೆ 3 ಸಲ ಸುತ್ತಿ ಪ್ರದಕ್ಷಿಣೆ ಮಾಡಿ ಪಾದ ನಮಸ್ಕಾರ ಮಾಡಿ ಪ್ರಾಣ ಬಿಟ್ಟಿತು.

ಈ ಸಂಘಟನೆ ಕುರಿತು, ಪೀಠಿಕಾಪುರ ವಾಸಿಗಳು ವಿವಿಧ ರೀತಿಯಲ್ಲಿ ಮಾತಾಡಿಕೊಂಡರು. ನರಸಾವಧಾನಿ ಮನೆ ಕಜ್ಜಾಯದಲ್ಲಿ ವಿಷ ಅಕಸ್ಮಾತ್ತಾಗಿ ಸೇರಿದೆಯೆಂದು, ಅದೃಷ್ಟದಿಂದ ಬ್ರಾಹ್ಮಣರು ಪಾರಾಗಿದ್ದಾರೆಂದು, ಅವನ್ನು ತಿಂದ ಹಸು ಸತ್ತುಹೋಯಿತೆಂದು, ನರಸಾವಧಾನಿಗೆ ಈಗ ಗೋಹತ್ಯಾಪಾತಕ ಸಹಾ ಸುತ್ತಿದೆ ಎಂದು ವ್ಯಾಖ್ಯಾನಿಸಿದರು. ಇದು ನರಸಾವಧಾನಿಗೆ ನೋವು ಉಂಟುಮಾಡಿತು.

ಆ ಗೋವು ಶ್ರೀಪಾದರಿಗೆ ಸುತ್ತಿ ನಮಸ್ಕರಿಸಿದ್ದ ಕಾರಣ, ಆ ಬಾಲಕ ದೈವಾಂಶವುಳ್ಳ ಅಸಾಧಾರಣದವ ಎಂದು ಬಹಳಷ್ಟುಮಂದಿ ಭಾವಿಸಿದರು. ರಾಜಶರ್ಮ ಆಯುರ್ವೇದ ವೈದ್ಯ ಸ್ವಲ್ಪಷ್ಟು ತಿಳಿದುಕೊಂಡಿದ್ದು ನರಸಾವಧಾನಿಯ ಬೇಡಿಕೆಯಂತೆ, ಅವರಿಗೆ ಚಿಕಿತ್ಸೆ ಮಾಡುತ್ತಿದ್ದರು. ನರಸಾವಧಾನಿಯ ಮನೆಗೆ ಚಿಕಿತ್ಸೆಗೆ ಹೋದಾಗಲೆಲ್ಲಾ, ರಾಜಶರ್ಮರ ಜೊತೆ ಅವರ ಮನಗೆ ಶ್ರೀಪಾದರು ಸಹಾ ಹೋಗುತ್ತಿದ್ದರು. ರಾಜಶರ್ಮರು ಅಷ್ಟು ಚಿಕಿತ್ಸೆ ಕೊಟ್ಟರೂ, ನರಸಾವಧಾನಿಗೆ ವಾಸಿಯಾಗದೇ, ಅವರ ಆರೋಗ್ಯ ಮತ್ತಷ್ಟು ಕೆಟ್ಟಿತು. ಒಂದು ದಿನ ಅವರು ಸ್ವರ್ಗಸ್ಥರಾದರು.

ಪೀಠಿಕಾಪುರದಲ್ಲಿ ಪುಕಾರು, ಕಿವಿಮಾತುಗಳು, ವಕ್ರಭಾಷ್ಯಗಳು, ಅಸತ್ಯವನ್ನು ಸತ್ಯವಾಗಿಯು, ನಿಜವನ್ನು ಸುಳ್ಳಾಗಿಯೂ ತೋರಿಸುವುದೇ ಹೆಚ್ಚಾಗಿತ್ತು. ರಾಜಶರ್ಮ ಒಳ್ಳೆಯ ಉದ್ದೇಶದಿಂದ ಚಿಕಿತ್ಸೆ ಮಾಡಿದರು, ಸಫಲ ಆಗಿಲ್ಲ. ಹುಟ್ಟು ಸಾವು ದೈವಾಧೀನ ತಾನೆ? ನರಸಾವಧಾನಿ ತಂತ್ರದಿಂದ ಮೃತಪಟ್ಟರೆಂದು ಕೆಲವುರು, ರಾಜಶರ್ಮರು ದ್ವೇಷದಿಂದ ನರಸಾವಧಾನಿಗೆ ಔಷಧವಿತ್ತರೆಂದು, ಬೇರೇ ವೈದ್ಯರಾಗಿದ್ದಲ್ಲಿ ಉಳಿಯುತ್ತಿದ್ದರೆಂದು ಕೆಲವರು ಊಹಿಸಿದರು. ಇನ್ನು ಕೆಲವರು ಶ್ರೀಪಾದ ಶ್ರೀವಲ್ಲಭರನ್ನು ದತ್ತಾವತಾರಿ ಎಂದು ಭಾವಿಸುವುದು ಅವಿವೇಕವೆಂದು, ಪ್ರತಿದಿನ ಶ್ರೀಪಾದರು ನರಸಾವಧಾನಿಯ ಮನೆಗೆ ಹೋಗುತ್ತಿದ್ದನಲ್ಲವೆ, ಹಾಗಾದರೇ ಶ್ರೀಪಾದ ಸಾಮಾನ್ಯ ಬಾಲಕನೆ ಎಂದು ಅನುಮಾನಿಸಿದರು. ವಿಷದಿಂದ ಆ ಗೋವು ಸತ್ತ ಕಾರಣ, ನರಸಾವಧಾನಿಗೆ ಗೋಹತ್ಯಪಾತಕ ಮುತ್ತಿ ಅವರೂ ಸತ್ತರೆಂದು, ಆ ಮನೆಯಲ್ಲಿ ಇನ್ನಷ್ಟು ಸಾವಿನ ಸುದ್ದಿ ಬರಲಿದೆ ಎಂದು, ಆ ಪಾಪ ಪ್ರಾಯಶ್ಚಿತ್ತವಾಗಿ ಬ್ರಾಹ್ಮಣರಿಗೆ ಭಾರಿ ದಾನಧರ್ಮ ಮಾಡಬೇಕೆಂದು, ಚಿನ್ನದ ಗೋಪ್ರತಿಮೆ ಬ್ರಾಹ್ಮಣರಿಗೆ ದಾನ ಕೊಡಬೇಕೆಂದು, ಒಂದು ಮಂಡಲ ಕಾಲ, ಮಹಾಶಾಂತಿ ಹೋಮಗಳು ಮಾಡಿಸಿ, ಪ್ರತಿ ದಿನಾ ಬ್ರಾಹ್ಮಣರಿಗೆ ಸಂತರ್ಪಣೆ, ಸಮಾರಾಧನೆ ಆಗಬೇಕೆಂದು ತೀರ್ಮಾನಿಸಿದರು. ಈ ಕಾರ್ಯವನ್ನು ನೆರವೇರಿಸಲು, ನರಸಾವಧಾನಿಯ ಆಸ್ತಿ ಎಲ್ಲಾ ಮಾರಬೇಕಾಗುವುದು. ಇದು ಅವರಿಗೆ ಅಶುಭವಾಗಿ ತೋಚಿತು.

ನರಸಾವಧಾನಿಯ ಶವವನ್ನು ದಹನಕ್ರಿಯೆಗಾಗಿ, ಸ್ಮಶಾನಕ್ಕೆ ಸಾಗಿಸಲಿರಲು, ರಾಜಶರ್ಮ, ಶ್ರೀಪಾದರು, ಬಾಪನಾರ್ಯರು ಸೇರಿ, ನರಸಾವಧಾನಿಯ ಕುಟುಂಬದವರನ್ನು ಸಮಾಧಾನ ಮಾಡುತ್ತಿರಲು ನರಸಾವಧಾನಿಯ ಪತ್ನಿ ಶ್ರೀಪಾದರ ಕರಗಳನ್ನು ಹಿಡಿದು, ''ಮಗೂ, ಅರಿಶಿನ ಕುಂಕುಮಕ್ಕಾಗಿ, ಅದೆಷ್ಟು ದೂರವಾದರೂ ಸರಿ, ಹೋಗಿ ಬರುತ್ತಿದ್ದವಳು ನಾನು, ನೀನು ದತ್ತ ದೇವರಾದರೇ ನಿನ್ನಜ್ಜರು ನರಸಣ್ಣರನ್ನು ಬದುಕಿಸಲು ಆಗದೇ?'' ಎಂದು ಅತ್ತಳು. ಅಮೃತ ಹೃದಯರಾದ ಶ್ರೀಪಾದರು ಆಕೆಯ ಕಣ್ಣೀರು ಒರೆಸಿ ಮೌನವಾಗಿದ್ದರು, ಶವಯಾತ್ರೆ ಪ್ರಾರಂಭವಾಯಿತು. ರಾಜಶರ್ಮ, ಶ್ರೀಪಾದರು, ಬಾಪನಾರ್ಯರೂ ಸಹಾ ಸ್ಮಶಾನದಲ್ಲಿರಲು, ನರಸಾವಧಾನಿಯ ಹಿರಿಯ ಪುತ್ರ ಶವಕ್ಕೆ ಬೆಂಕಿ ಹಚ್ಚಲಿರಲು, ಶ್ರೀಪಾದರ ಕಣ್ಣುಗಳಿಂದ 2 ತೊಟ್ಟು ಕಣ್ಣೀರು ಬಿತ್ತು. ಮೇಘ ಗರ್ಜನೆಗೆ ಸಮವಾದ ಕಂಠದಿಂದ, ಶ್ರೀಪಾದರು, ''ಭಳಾ! ಸತ್ತ ತಂದೆಗೆ ಬೆಂಕಿ ಇಡುವ ಮಗನನ್ನು ಕಂಡಿದ್ದೀನೆ ಹೊರತು, ಜೀವಂತವಿರುವ ತಂದೆಗೆ ಬೆಂಕಿ ಇಡುವವನನ್ನು ನೋಡಿಲ್ಲ'' ಎಂದರು. ಆಗ ಎಲ್ಲರೂ ನೋಡುತ್ತಿರಲೂ, ಶ್ರೀಪಾದರು ನರಸಾವಧಾನಿಯ ಭ್ರೂಮಧ್ಯ ಭಾಗವನ್ನು ತನ್ನ ಹೆಬ್ಬೆಟ್ಟಿನಿಂದಿ ಮುಟ್ಟಿ, ತನ್ನ ಭ್ರೂಮಧ್ಯ ಭಾಗವನ್ನು ಒತ್ತಿಕೊಂಡರು. ಅಷ್ಟೇ, ನರಸಾವಧಾನಿಯಲ್ಲಿ ಚೈತನ್ಯ ಬರಲಾರಂಭಿಸಿತು. ಶವಯಾತ್ರೆಗಾಗಿ ಬಂದ ತನ್ನವರೊಡನೇ, ರಾಯರು ಶೋಭಯಾತ್ರೆಯಲ್ಲಿ ಮನೆಗೆ ಬಂದರು. ಶ್ರೀಪಾದರು, ಅವರ ಭ್ರೂಮಧ್ಯವನ್ನು ಮುಟ್ಟುವುದರಿಂದ, ಕರ್ಮಸೂತ್ರದ ಸೂಕ್ಷ್ಮಾಂಶ ಅರ್ಥವಾಯಿತು. ತನ್ನ ಮನೆಯ ಗೊಡ್ಡು ಹಸು ತನ್ನ ತಾಯಿಯೇ ಎಂದು ಜ್ಞಾನವಾಯಿತು. ವಯಸ್ಸಾದ ಎತ್ತು ತನ್ನ ತಂದೆ ಎಂದೂ ತಿಳಿಯಿತು. ಅವರಿಬ್ಬರೂ, ಅವನ ಅಜ್ಜಿ ಅಜ್ಜಂದಿರನ್ನು

ಮುದಿವಯಸ್ಸಿನಲ್ಲಿ ಸರಿಯಾಗಿ ನೋಡಿಕೊಳ್ಳದ ಕಾರಣ, ಇಂತಹ ಹೀನ ಜನುಮವನ್ನೆತ್ತಿ ತನಗೆ ಸೇವೆ ಸಲ್ಲಿಸಿದರೆಂದೂ ಅರ್ಥವಾಯಿತು. ಮರಣಾವಸ್ಥೆಯಲ್ಲಿದ್ದ ಗೋಮಾತೆ, ತನ್ನ ಕ್ಷೀರವನ್ನು ತೆಗೆದುಕೊಳ್ಳಲೂ ಪ್ರಾರ್ಥಿಸಿದ್ದ ಹಾಗೂ, ಮುಂದಿನ ಜನುಮದಲ್ಲಿ ಗೊಡ್ಡು ಹಸುವಾಗಿ ಜನಿಸಿದಾಗ ಹಾಲನ್ನು ತೆಗೆದುಕೊಳ್ಳುವೆನೆಂದು, ಅಭಯವಿತ್ತ ಹಾಗೆ ಶುದ್ಧವಾಗಿ ತಿಳಿಯಿತು. ತನಗೆ ತಾಂತ್ರಿಕ ಪ್ರಯೋಗ ಮಾಡಿದ ತಾಂತ್ರಿಕನು, ಸ್ವಲ್ಪಕಾಲಕ್ಕೆ ಸ್ವರ್ಗಸ್ಥನಾಗುವನು ಎಂದು, ಬರುವ ಜನುಮದಲ್ಲಿ ಬ್ರಹ್ಮರಾಕ್ಷಸನಾಗಲು, ಶ್ರೀಪಾದರು ಸನ್ಯಾಸ ವೇಷದಲ್ಲಿ ಅವನನ್ನ ಅನುಗ್ರಹಿಸುವುದಾಗಿಯು, ಸೂಕ್ಷ್ಮಲೋಕ ಸಂಗತಿಗಳನ್ನು ಆತ ಗ್ರಹಿಸಲಾರಂಭಿಸಿದನು. ಆತ ಸಹಾ ಮರುಜನುಮದಲ್ಲಿ ಸನ್ಯಾಸಿ ವೇಷದಲ್ಲಿರುವ ಶ್ರೀಪಾದರವರಿಂದ, ಅನುಗ್ರಹಿಸಲ್ಪಟ್ಟು ಅಧಿಕ ಸಂಪತ್ತು ಪಡೆದು, ತನ್ನ ಮನೆಯಲ್ಲಿ ಶ್ರೀಚರಣರು, ಅಲ್ಲೇ ಬೆಳೆದ ಸೊಪ್ಪಿನ ಊಟ ಸೇವಿಸಿ, ಖುದ್ದಾಗಿ ಸೊಪ್ಪಿನ ತೋಟವನ್ನು ನಿರ್ಮೂಲನೆ ಮಾಡಿ, ಬಂಗಾರು ನಾಣ್ಯಗಳು ತುಂಬಿದ ಕೊಡಗಳನ್ನು ಪ್ರಸಾದಿಸಿದ ಹಾಗೆ ಆತನು ಭವಿಷ್ಯತ್ತನ್ನು ಸ್ಪಷ್ಟವಾಗಿ ಕಂಡನು.

ಶ್ರೀ ಚರಣರ ಲೀಲೆಗಳು ಬೇರೊಬ್ಬರಿಗೆ ಅಸಾಧ್ಯಗಳು. ಇವುಗಳ ಸಮ ಬೇರೊಂದು ಇರಲಾರವು, ಕಾಣಲಾಗುವೆವು ಸಹಾ.

ಶ್ರೀವಲ್ಲಭರು ನರಸಾವಧಾನಿಗೆ ಮತ್ತು ಅವರ ಧರ್ಮಪತ್ನಿಗೆ ಮಾಡಿದ ಹಿತೋಪದೇಶ, ಅವರನ್ನು ಅನುಗ್ರಹಿಸಿದ ಪದ್ಧತಿ, ನಾಳೆ ನಿನಗೆ ತಿಳಿಸುವೆನು. ಇಂದು ನಾವು ಶ್ರೀಪಾದ ಶ್ರೀವಲ್ಲಭರ ಧ್ಯಾನ ಮಾಡುತ್ತಾ ಸ್ವಲ್ಪಕಾಲ ಭಜನೆಯಲ್ಲಿ ಕಳೆಯೋಣ. ಅವರ ನಾಮಸ್ಮರಣಾ ಪ್ರದೇಶದಲ್ಲಿ ಶ್ರೀಚರಣರು ಸೂಕ್ಷ್ಮ ರೂಪದಲ್ಲಿ ಸಂಚರಿಸುತ್ತಿರುವರು. ಇದು ಖಂಡಿತವಾದ ಮಾತು. ತಿರುಮಲದಾಸನಂತಹಾ ಸದ್ಭಕ್ತನ ಸಾಂಗತ್ಯ ಲಭಿಸಿದ್ದಕ್ಕೆ ನಾನು ಅತ್ಯಂತ ಆನಂದ ಪರವಶನಾದೆನು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

# ಅಧ್ಯಾಯ - 7

# ಖಗೋಳಗಳ ವರ್ಣನೆ

## ಶ್ರೀಪಾದ ಶ್ರೀವಲ್ಲಭರ ಚರಿತಾಮೃತಾ ಮಹಿಮೆ

ಬೆಳ್ಳಂಬೆಳಿಗ್ಗೆ ತಿರುಮಲದಾಸರು ತನ್ನ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಹೀಗೆ ನುಡಿದರು "ಮಗು! ಶಂಕರ ಭಟ್ಟು, ಶ್ರೀಪಾದ ಶ್ರೀವಲ್ಲಭರ ಚರಿತ್ರೆ ಅಮೃತ, ಕೇಳಿರಲಾರದ್ದು, ಅಪೂರ್ವ, ತರ್ಕಕ್ಕೆ ನಿಲುಕದ್ದು. ನಿನ್ನ ಮೇಲೆ ಶ್ರೀಪಾದ ಶ್ರೀವಲ್ಲಭರಿಗೆ ಅಪಾರ ಅನುಗ್ರಹವಿದ್ದ ಕಾರಣವೇ, ಅವರ ಚರಿತ್ರೆಯನ್ನು ಗ್ರಂಥವಾಗಿ ಮಾಡುವ ಭಾಗ್ಯ ನಿನ್ನದಾಗಿದೆ! ಮಹಾಪಂಡಿತರಿಗೂ ಸಿಗದ ಆ ಭಾಗ್ಯ ನಿನ್ನದಾಗುವುದು ಶ್ರೀಗಳ ಸಂಕಲ್ಪವೇ ಸರಿ!''

## ಶ್ರೀಪಾದರು ಒಂದೇ ಸಮಯ, ಅನೇಕ ಕಡೆ ದರ್ಶನ ಕೊಡುವುದು

ನರಸಾವಧಾನಿ ಮರಣದಿಂದ ಪಾರಾದ ನಂತರ, ಆತನಲ್ಲಿದ್ದ ಆಕರ್ಷಣೆ ಕ್ಷೀಣಿಸಿತು. ಆತ ಹಿಂದೆ ಧ್ಯಾನದಲ್ಲಿ ಕುಳಿತು ಯಾರನ್ನಾದರೂ ನೆನೆದಲ್ಲಿ ಅವರು ಎಷ್ಟೇ ದೂರದಲ್ಲಿದ್ದರೂ ನರಸಾವಧಾನಿ ಹತ್ತಿರಕ್ಕೆ ತಪ್ಪದೇ ಸೇರುತ್ತಿದ್ದರು. ಆ ಶಕ್ತಿ ಈಗ ಮಾಯವಾಗಿತ್ತು. ಇಲ್ಲಿಯವರೆಗೂ ಆತನನ್ನು ಹೊಗಳಿ ಭಯಪಡುತ್ತಿದ್ದ ಜನ ಹೆದರುವುದನ್ನೇ ಬಿಟ್ಟಿದ್ದಾರೆ, ಮೇಲ್ಪಟ್ಟು ವಿಮರ್ಶಿಸಲಾರಂಭಿಸಿದ್ದಾರೆ. ಎರಡು ಹೊತ್ತು ಊಟ ಸಿಗಲಾರದ ಬಡತನವೂ ಪ್ರಾಪ್ತವಾಗಿತ್ತು. ಈ ಸ್ಥಿತಿಗೆ ಚಿಂತಿಸುತ್ತಿರಲೂ, ಬಾಪನಾರ್ಯರು, ಮೊಮ್ಮಗ ಶ್ರಿಪಾದನನ್ನು ಹೊತ್ತು ಆ ಕಡೆ ನಡೆಯುತ್ತಿದ್ದರು. ಎರಡು ಮನೆಗಳೂ ಅಕ್ಕಪಕ್ಕದ ಬೀದಿಗಳಲ್ಲೇ ಇದ್ದವು. ಶ್ರೀಚರಣರು ತಮ್ಮ ಮನೆಗಿಂತ ಅಜ್ಜನ ಮನೆಯಲ್ಲೇ ಸಂತೋಷವಾಗಿ ಕಾಲ ಕಳೆಯುತ್ತಿದ್ದರು. ಶ್ರೀ ನರಸಿಂಹ ವರ್ಮ ಮತ್ತು ಶ್ರೀ ವೆಂಕಟಪ್ಪಯ್ಯ ಶ್ರೇಷ್ಠಿಗಳ ಮನೆಗೆ ಸರಾಗವಾಗಿ ಹೋಗುತ್ತಿದ್ದರು. ನರಸಾವಧಾನಿಗೆ ಮುದ್ದಾದ ಶ್ರೀಪಾದರನ್ನು ಎತ್ತಿ ಮಾತನಾಡಿಸಬೇಕೆಂಬ ಆಸೆ ಹುಟ್ಟಿತು. ಅಜ್ಜ ಬಾಪನಾರ್ಯರ ಜೊತೆ ಹೋಗುತ್ತಾ, ನರಸಾವಧಾನಿಯನ್ನು ನೋಡಿ ಶ್ರೀಪಾದರು ಮುಗುಳ್ನಗೆ ಇತ್ತರು. ನಂತರ ನರಸಾವಧಾನಿ, ಹರಳೆ ಎಣ್ಣೆ ತರಲು ಶ್ರೇಷ್ಠಿ ಮನೆಗೆ ತಲುಪಿದರು. ಅಲ್ಲಿ ಶ್ರೀಪಾದರು ಶ್ರೇಷ್ಠಿಯ ಮಡಿಲಿನಲ್ಲಿದ್ದರು. ನರಸಾವಧಾನಿಯನ್ನು ಕಂಡು ವಿಲಾಸದಿಂದ ನಕ್ಕಿದರು. ಎಣ್ಣೆ ತಂದು, ಮನೆಯಿಂದ ಪುನಃ ನರಸಿಂಹವರ್ಮರ ಮನೆಗೆ ಹೋಗಲೂ, ಅಲ್ಲಿಯೂ ಸಹ ಶ್ರೀಪಾದರು, ನರಸಿಂಹವರ್ಮರ ಭುಜದಮೇಲೆ ಕುಳಿತಿರುವುದನ್ನು ಕಂಡರು. ಆಗಲೂ ಅದೇ ರೀತಿ ಶ್ರೀಪಾದರು ಮುಗುಳ್ನಕ್ಕರು. ಹೀಗೆ ಒಂದೆ ಸಮಯದಲ್ಲಿ ಶ್ರೀಪಾದರು, ತಾಯಿಯ ಹೆತ್ತವರ ಮನೆಯಲ್ಲಿ, ವರ್ಮ ಮತ್ತು ಶ್ರೇಷ್ಠಿಗಳ ಮನೆಗಳಲ್ಲಿ ಇರುವುದನ್ನು ನರಸಾವಧಾನಿಗಳು ಗಮನಿಸಿ, ಇದು ಕನಸೇ, ವೈಷ್ಣವಮಾಯೆಯೋ ಎಂಬ ಸಂದಿಗ್ಧದಲ್ಲಿ ಬಿದ್ದರು.

ಊರಿನ ಜನ ಬಹು ವಿಧಗಳಲ್ಲಿ ತನ್ನನ್ನು ನಿಂದಿಸುತ್ತಿದ್ದರು. ಪಾದಗಯಾ ಕ್ಷೇತ್ರದ ಸ್ವಯಂಭೂ ದತ್ತನ ವಿಗ್ರಹ ಮಾಯವಾಗಲೂ ಸಹಾ ಅವರೇ ಕಾರಣವೆಂದು ಆಪಾದನೇ ಮಾಡುತ್ತಿದ್ದರು. ಗುರಿಯಿಲ್ಲದ ಯಾತ್ರಿಕನಂತೆ ನರಸಾವಧಾನಿ ಬೀದಿ ಸುತ್ತುತ್ತಿದ್ದನು.

ಹುಚ್ಚನಂತೆ ಮನೆಗೆ ಬಂದ ಗಂಡನನ್ನ ಕಂಡು ಅವಧಾನಿಗಳ ಪತ್ನಿ ದುಃಖಿಸಿದಳು. ಅಳುತ್ತಾ ದೇವರ ಮನೆ ಸೇರಲೂ ಅಲ್ಲಿ ಆಶ್ಚರ್ಯಪಡುವಂತೆ ಶ್ರೀಪಾದರನ್ನು ಕಂಡಳು. ಆ ದಂಪತಿಗಳ ಆನಂದಕ್ಕೆ ಮಿತಿ ಇಲ್ಲದ ಹಾಗೆ ಇತ್ತು. ಬಗಲಿನ ಸೊಪ್ಪಿನ ಅಡಿಗೆ ಮಾಡಿ ತಿನ್ನುಸುವೆನೆಂದು ಎಷ್ಟು ಕೇಳಿಕೊಂಡರೂ, ಶ್ರೀಪಾದರು ಒಪ್ಪಲಿಲ್ಲ. **ಕಾಲ, ಕರ್ಮ, ಕಾರಣಗಳು ಒಂದೇ ಬಾರಿ ಕೂಡಿಬಂದಾಗ ಅಲಭ್ಯಯೋಗ ಆಗುತ್ತಿರುವುದು. ವಿವೇಕವಂತನು ಅದನ್ನು ಗುರ್ತಿಸಿ ಲಬ್ಧಿ ಹೊಂದುವನು. ಅವಿವೇಕಿ ಗುರ್ತಿಸದೇ ನಷ್ಟಪಡುವನು.** ಕೊನೆಗೂ ಶ್ರೀಪಾದರು ಊಟ ಮಾಡಲೂ ಅಂಗೀಕರಿಸಿದರು. ಆದರೆ ಅದು ಈ ಜನುಮದಲ್ಲಿ ಮಾತ್ರ ಅಲ್ಲ, ಬರುವ ಜನುಮದಲ್ಲಿ ಶ್ರೀಗಳು ಶ್ರೀ ನರಸಿಂಹ ಸರಸ್ವತಿ ನಾಮದಲ್ಲಿ ಪುಣ್ಯಭೂಮಿ ಮಹಾರಾಷ್ಟ್ರದಲ್ಲಿ ಜನ್ಮಿಸಿ ಅವರ ಮನೆಯ ಸೊಪ್ಪಿನ ಊಟ ಗ್ರಹಿಸುವುದಾಗಿ ವಾಗ್ದಾನ ಮಾಡಿದರು. ಶ್ರೀ ಗಣೇಶ ಚತುರ್ಥಿಯ ದಿನ ಅವತರಿಸಿ ತನ್ನ ಗಣೇಶ ಅಂಶವಾದ ಗಜಾನನ ಹೆಸರಿನ ಒಬ್ಬ ಮಾಹಾತ್ಮನು ಕೆಲವು ಶತಮಾನಗಳ ನಂತರ, ತಾನು ಹುಟ್ಟಿದ ಪ್ರದೇಶ ಬಳಿಯಲ್ಲೇ ಜನುಮಿಸುವುರೆಂದು ತಿಳಿಸಿದರು. **ಸೂರ್ಯಚಂದ್ರರ ಗತಿಗಳನ್ನಾದರೂ ಮರುಳಿಸಬಹುದು. ಆದರೇ ಎಂತಹ ಪರಿಸ್ಥಿತಿಯಲ್ಲೂ ಶ್ರೀಪಾದರ ವಾಗ್ದಾನಗಳನ್ನು ಮೀರಲು ಯಾರಿಗೂ ಸಾಧ್ಯವಿಲ್ಲ. ಅವರ ಆದೇಶಾನುಸಾರವೇ ಪಂಚಭೂತಗಳೇನು, ಸಮಸ್ತ ಜೀವಿಗಳೂ ನಡೆದುಕೊಳ್ಳಬೇಕು. ವಾಗ್ದಾನ ಪಾಲಿಸುವುದರಲ್ಲಿ ಅವರು ದೃಢವ್ರತರು, ಸತ್ಯವ್ರತರು. ಜಗತ್ತೇ ಅಸ್ಥಿರವಾದರೂ, ಯುಗಗಳೇ ಕಳೆದರೂ, ಅವರ ಲೀಲೆ ಮಾತ್ರ ನಿತ್ಯಸತ್ಯ ಮತ್ತು ನೂತನವಾಗಿಯೇ ಇರುವುದು.** ಆ ಪೂಜಾ ಗೃಹದಲ್ಲಿ ಇದ್ದ ಶ್ರೀಪಾದರು, ನರಸಾವಧಾನಿಗೂ ಅವರ ಧರ್ಮಪತ್ನಿಗೂ ಹಿತೋಪದೇಶ ಮಾಡಿದರು. ಅವು ದತ್ತ ಭಕ್ತರೆಲ್ಲರಿಗೂ ಎಷ್ಟೋ ಪ್ರಯೋಜನಕಾರಿಯೂ ಆಗಿದ್ದವು.

## ನರಸವಧಾನಿಗೂ ಪೂಜಾ ಗೃಹದಲ್ಲಿದ್ದ ಶ್ರೀಪಾದರಿಗೂ ನಡೆದ ಸಂಭಾಷಣೆ
## ನರಸಾವಧಾನಿಗೆ ಶ್ರೀಪಾದರ ಉಪದೇಶಗಳು

**ನರಸಾವಧಾನಿ:** ತಾವು ಯಾರು? ದೇವತೆಯಾ? ಯಕ್ಷನಾ? ಇಲ್ಲ ಮಾಂತ್ರಿಕನಾ?

**ಶ್ರೀಪಾದರ ಉತ್ತರ:** ನಾನು ನಾನೇ! ಪಂಚ ಭೂತಾತ್ಮಕವಾದ ಈ ಸೃಷ್ಟಿಯ ಅಣುವಣುವಿನಲ್ಲಿರುವ ಅದೃಶ್ಯ ಶಕ್ತಿ ನಾನೇ! ಪಶು, ಪಕ್ಷಿ ಸೇರಿದ ಸಮಸ್ತ ಸೃಷ್ಟಿಯ ಮಾತೃ, ಪಿತೃ ಮತ್ತು ಗುರು ಸ್ವರೂಪವಾಗಿರುವುದು ನಾನೆಂದರೇ ನಾನೇ!

**ನರಸಾವಧಾನಿ:** ಆದರೆ ತಾವು ದತ್ತ ಪ್ರಭುಗಳ ಅವತಾರವೇ?

**ಶ್ರೀಪಾದರ ಉತ್ತರ: ಸಂಶಯವೇ ಬೇಡ, ನಾನು ದತ್ತನೇ! ನೀವೆಲ್ಲಾ ಶರೀರ ಧಾರಿಗಳು. ಆದ್ದರಿಂದ, ನೀವು ಗುರ್ತಿಸಲು ಮಾತ್ರವೇ ನಾನು ಶರೀರ ಧಾರಣೆ ಮಾಡಿದ್ದೇನೆ. ನಿಜಕ್ಕೂ ನಾನು ನಿರಾಕಾರಿ, ನಿರ್ಗುಣನು.**

**ನರಸಾವಧಾನಿ:** ಅಂದರೇ ತಮಗೆ ಆಕಾರವೂ ಇಲ್ಲ, ಗುಣಗಳೂ ಇಲ್ಲ ಅಷ್ಟೇ ಅಲ್ಲವೇ?

**ಶ್ರೀಪಾದರ ಉತ್ತರ:** ಆಕಾರವಿಲ್ಲದಿರುವುದು ಸಹಾ ಒಂದು ಆಕಾರವೆ. ಗುಣವಿಲ್ಲದಿರುವುದು ಸಹಾ ಒಂದು ಗುಣವೇ. ಸಾಕಾರ, ನಿರಾಕಾರ, ಸಗುಣ, ನಿರ್ಗುಣಗಳಿಗೆ ಆಧಾರವಾಗಿರುವ ನಾನು ಅವುಗಳಿಗೆ ಅತೀತನು ಸಹಾ!

**ನರಸಾವಧಾನಿ:** ಎಲ್ಲವೂ ತಾವೇ ಆದಾಗ, ಜೀವಿಗಳಿಗೆ ಕಷ್ಟಸುಖಗಳು ಏಕೆ?

**ಶ್ರೀಪಾದರ ಉತ್ತರ:** ನಿನ್ನಲ್ಲಿ, ನೀನು, ನಾನೂ ಸಹಾ ಇದ್ದೇವೆ. **ಆ ನೀನು ಜೀವಿ, ಆದರೇ ನಿನ್ನಲ್ಲಿನ ನಾನು ಪರಮಾತ್ಮ.** ನಿನಗೆ ಕರ್ತೃತ್ವ ಭಾವನೆ ಇರುವವರೆಗೂ ನೀನು ನಾನಾಗಿ ಆಗಲಾರೆ. ಅಲ್ಲಿಯವರಿಗೂ, ಸುಖ ದುಃಖ ಪಾಪ ಪುಣ್ಯವೆಂಬ ದ್ವಂದ್ವಗಳಿಗೆ ನೀನು ಆಳೇ ಸರಿ. ನಿನ್ನಲ್ಲಿನ ನೀನು ಕ್ಷೀಣಿಸಿ, **ನಿನ್ನಲ್ಲಿನ 'ನಾನು' ಉಚ್ಛ ದಶೆಗೆ ಸೇರಿದಾಗ ಮಾತ್ರವೇ, ನೀನು ನನಗೆ ಹತ್ತಿರವಾಗುವೆ. ಆಗ ನಿನ್ನ ಕರ್ತವ್ಯ ಕಡಿಮೆ ಆಗಿ ಹೋಗುವುದು. ನನ್ನ ಕರ್ತವ್ಯದಲ್ಲಿ ನೀನಿದ್ದಾಗ ಶ್ರೇಯಸ್ಸನ್ನೇ ಹೊಂದುವೆ.**

**ನರಸಾವಧಾನಿ:** ಜೀವಾತ್ಮಪರಮಾತ್ಮಬೇರೆ ಬೇರೆ ಎಂದು ಕೆಲವರ ಹೇಳಿಕೆ, ಜೀವಾತ್ಮಪರಮಾತ್ಮಒಂದೇ ಎಂದು ಇನ್ನು ಕೆಲವರ ಹೇಳಿಕೆ. ಜೀವನೇ ದೇವ ಎಂದು ಮತ್ತಿತರು ಹೇಳುವುದು! ನಿಜವೆಂಬುವುದು ಯಾವುದು?

**ಶ್ರೀಪಾದರ ಉತ್ತರ:** ನೀನು ನಾನು ಬೇರೆ ಬೇರೆ ಯಾಗಿದ್ದಷ್ಟು ಮಾತ್ರಕ್ಕೆ ನಷ್ಟ ಏನೂ ಇಲ್ಲ. ನಿನ್ನಲ್ಲಿನ ಅಹಂಕಾರ ನಶಿಸಿ, ನಾವಿಬ್ಬರೂ ಬೇರೇ ಸ್ಥಿತಿಯಲ್ಲಿದ್ದರೂ ಶ್ರೇಯಸ್ಸೇ ಲಭಿಸುವುದು. ಸಮಸ್ತವೂ ನನ್ನ ಅನುಗ್ರಹದಿಂದಲೇ ಆಗುತ್ತಿದೆ ಎಂದೂ, ನೀನು ಕೇವಲ ನಿಮಿತ್ತಮಾತ್ರವೆಂಬ ತತ್ತ್ವ ತಿಳಿದರೆ ನೀನು ಆನಂದ ಸ್ಥಿತಿಯಲ್ಲಿರಬಹುದು. ಮೋಹ ಕ್ಷೀಣಿಸುವುದೇ ಮೋಕ್ಷ. ಆದ್ದರಿಂದ, ಬೇರೆಯಾಗಿದ್ದರೂ ಮೋಕ್ಷ ಹೊಂದಬಲ್ಲೆ. ನೀನು ನನಗೆ ಅತ್ಯಂತ ಹತ್ತಿರವಾಗಿದ್ದರೂ, ನಿನ್ನ ಮೂಲಕವೇ ನಾನು ವ್ಯಕ್ತವಾಗುತ್ತಿರುವೆನು. ನನ್ನಲ್ಲಿನ ಎಲ್ಲಾ ಶಕ್ತಿಗಳೂ ನಿನ್ನಲ್ಲಿ ವ್ಯಕ್ತವಾಗುತ್ತಿರಲೂ, ನಿನ್ನಲ್ಲಿನ ಅಹಂಕಾರ ನಶಿಸಿದಾಗ, ನಿನ್ನಲ್ಲಿನ ಮೋಹ ಮಾಯವಾಗುವುದು. ವಿಶಿಷ್ಟವಾದ ಈ ಅದ್ವೈತ ಸ್ಥಿತಿಯಲ್ಲಿ ನಿನಗೆ ಆನಂದ ಲಭಿಸುವುದು. ಮೋಹವಿಲ್ಲದ್ದರಿಂದ ಇದೂ ಮೋಕ್ಷವೇ. ನಿನ್ನಲ್ಲಿನ ಅಹಂಕಾರ ಪೂರ್ತಿಯಾಗಿ ನಶಿಸಿ, ಕರ್ತೃತ್ತ್ವಭಾವ ಸಂಪೂರ್ಣವಾಗಿ ದಹನವಾದ ಸಮಯ "ನೀನು" ಎಂಬುದು ಉಳಿಯದೇ "ನಾನು" ಎಂಬುದು ಮಾತ್ರ ಇರುವುದು. ಆದ್ದರಿಂದ ಮನಸ್ಸಿನಿಂದ ಎಷ್ಟು ಮಾತ್ರವೂ ತಿಳಿಯಲಾರದ ಆ ಸ್ಥಿತಿಯಲ್ಲಿ ನೀನು ಬ್ರಹ್ಮಾನಂದ ಪಡೆಯುವೆ. ಆದ್ದರಿಂದ, ಅದ್ವೈತ ಸ್ಥಿತಿಯಲ್ಲಿದ್ದರೂ ನೀನು ಮೋಕ್ಷ ಹೊಂದುವೆ. ನೀನು ದ್ವೈತದಲ್ಲಿದ್ದರೂ, ವಿಶಿಷ್ಟಾದ್ವೈತದೊಳು ಇದ್ದರೂ ಅಥವಾ ಅದ್ವೈತದೊಳಿದ್ದರೂ ಬ್ರಹ್ಮಾನಂದ ಸ್ಥಿತಿ ಮಾತ್ರ ಒಂದೇ! ಅದು ಮನಸ್ಸಿಗೂ, ಮಾತಿಗೂ ಸಿಗಲಾರದ್ದು. ಕೇವಲ ಅನುಭವ ಪ್ರದಾಯಕ ಮಾತ್ರವೇ.

**ನರಸಾವಧಾನಿ:** ಅವಧೂತ ಸ್ಥಿತಿಯಲ್ಲಿರುವ ಕೆಲವರು ತಾವೇ ಬ್ರಹ್ಮವೆಂದು ಹೇಳುತ್ತಿರುವರೇ, ನೀವು ಅವಧೂತರೇನಾ?

**ಶ್ರೀಪಾದರ ಉತ್ತರ:** ಅಲ್ಲ. ನಾನು ಅವಧೂತನಲ್ಲ. ಬ್ರಹ್ಮನು. ಬ್ರಹ್ಮವೇ ಸರ್ವಸ್ವ ಎಂಬುದು ಅವಧೂತರ ತಿಳುವಳಿಕೆ. ಆದರೆ ನಾನೇ ಬ್ರಹ್ಮ ನಾನೇ ಸರ್ವಸ್ವ ಎಂಬುವ ಸ್ಥಿತಿ ಎನ್ನದ್ದು.

**ನರಸಾವಧಾನಿ:** ಆದರೂ ಈ ಸ್ವಲ್ಪ ಭೇದದೊಳಗಿನ ರಹಸ್ಯ ನನಗೆ ಅರ್ಥವಾಗಲಿಲ್ಲ.

**ಶ್ರೀಪಾದರ ಉತ್ತರ:** ಎಲ್ಲಾ ಪ್ರಾಪಂಚಿಕ ಬಂಧಗಳಿಂದ ದೂರವಾದ ಅವಧೂತ, ನನ್ನಲ್ಲಿ ಒಂದಾಗುತ್ತಾ ಬ್ರಹ್ಮಾನಂದ ಸ್ಥಿತಿ ಅನುಭವಿಸುವನು. ಅವನಲ್ಲಿ ವ್ಯಕ್ತಿತ್ವ ಇರುವುದಿಲ್ಲ. ವ್ಯಕ್ತಿತ್ವ ಇಲ್ಲದಿದ್ದಲ್ಲಿ ಸಂಕಲ್ಪ ಶೂನ್ಯ. ಈ ಸೃಷ್ಟಿಯ ಮಹಾಸಂಕಲ್ಪದಲ್ಲಿ, ಮಹಾಶಕ್ತಿಯಲ್ಲಿ ನಾನು ಇರುವೆನು. ಜೀವಿಗಳು ಎಂಬುವ ಮಾಯಾಶಕ್ತಿ ರೂಪದಲ್ಲಿ ಸಹಾ ನಾನಿರುವೆ. ನನ್ನಲ್ಲಿ ಲೀನವಾದ ಅವಧೂತನನ್ನು ಪುನಃ ಜನ್ಮತಾಳಬೇಕೆಂದು, ನಾನು ನುಡಿದರೇ, ಜನುಮಿಸಲೇ ಬೇಕು. ಸಂಕಲ್ಪ ಸಹಿತ ಸತ್ಯಜ್ಞಾನ ಆನಂದ ರೂಪ ನನ್ನದು. ಸಂಕಲ್ಪವಿಲ್ಲದ ಸತ್ಯಜ್ಞಾನಾನಂದ ರೂಪ ಅವರದು.

**ನರಸಾವಧಾನಿ:** ಬೀಜ ಹುರಿದ ಮೇಲೆ, ಮೊಳಕೆ ಅಸಾಧ್ಯ. ಹಾಗಿರಲೂ, ಬ್ರಹ್ಮಜ್ಞಾನ ಹೊಂದಿದ ಮೇಲೆ ಬ್ರಹ್ಮವೇ ತಾನಾಗಿರಲೂ, ಪುನಃ ಜನುಮ ಹೇಗೆ ಸಾಧ್ಯ?

**ಶ್ರೀಪಾದರ ಉತ್ತರ:** ಹುರಿದ ಬೀಜ ಮೊಳಕೆ ಯಾಗದಿರುವುದು ಸೃಷ್ಟಿ ಧರ್ಮ. ಅಂತಹಾ ಬೀಜಗಳನ್ನೇ ಮೊಳಕಿಸುವುದು ಸೃಷ್ಟಿಕರ್ತನ ಶಕ್ತಿ ಸಾಮರ್ಥ್ಯ. ಇಷ್ಟಕ್ಕೂ ನನ್ನ ಈ ರೂಪಧಾರಣೆಯೇ ಸತ್ಯನಿರೂಪಣೆಗೆ ಅಲ್ಲವೇ.

**ನರಸಾವಧಾನಿ:** ದತ್ತ ಪ್ರಭೂ! ಶ್ರೀಪಾದಾ! ದಯವಿಟ್ಟು ವಿವರಿಸಿ.

**ಶ್ರೀಪಾದರ ಉತ್ತರ:** ಭೂತ, ಭವಿಷ್ಯದ್ವರ್ತಮಾನಗಳು, ಅವಸ್ಥಾತ್ರಯಗಳು, ಸೃಷ್ಟಿ ಸ್ಥಿತಿಲಯ ಮುಂತಾದ ತ್ರಯಗಳನ್ನೆಲ್ಲಾ ಮೀರಿ ತಂದೆಯವರು ಅತ್ರಿಮಹರ್ಷಿಯಾಗಿ ಪ್ರಸಿದ್ಧರಾದರು. ಸೃಷ್ಟಿಯ ಎಲ್ಲಾ ಜೀವಗಳು ಮತ್ತು ಪದಾರ್ಥಗಳಲ್ಲಿ ಅಸೂಯೆ, ವೈರ ಎಳ್ಳಷ್ಟೂ ಇಲ್ಲದ ಕಾರಣ, ತಾಯಿ ಅನುಸೂಯ ಆಗಿ ಖ್ಯಾತಿ ಹೊಂದಿದರು. ಬ್ರಹ್ಮ ವಿಷ್ಣು ರುದ್ರರಿಗೆ ಸಹಾ ಆಧಾರ ಮತ್ತು ಅತೀತವಾದ ಆ ಪರಂಜೋತಿಯನ್ನು ಕಾಣಲು, ಅತ್ರಿ ಮಹರ್ಷಿಗಳು ಘೋರ ತಪಸ್ಸು ಮಾಡಿದರು. ಅಂತಹ ಪರಂಜ್ಯೋತಿ ಸ್ವರೂಪ, ಸೃಷ್ಟಿಯ ಒಂದೊಂದು ಪ್ರಾಣಿಯನ್ನೂ, ಪ್ರತಿ ಪದಾರ್ಥವನ್ನೂ ಅಮೃತ ದೃಷ್ಟಿಯಿಂದ ಕಂಡು ಅನುಗ್ರಹಿಸಲೆಂದು ಅನುಸೂಯ ಮಾತೆ ತಪಸ್ಸಾಚರಿಸಿದರು. ಕರ್ಮಸೂತ್ರಗಳ ಫಲವಾಗಿ ಜೀವಿಗಳಿಗೆ ಸುಖದುಃಖ ಪ್ರಾಪ್ತವಾಗುತ್ತಿರುವುದು ಮಹಾಪಾಪಗಳ ಫಲ ಸ್ವಲ್ಪವಾಗಿಯೂ, ಸ್ವಲ್ಪ ಪುಣ್ಯದ ಫಲ, ಅತಿ ಹೆಚ್ಚಾಗಿಯೂ ಜೀವಿಗಳಿಗೆ ಪ್ರಾಪ್ತವಾಗುವಂತೆ ಅನುಸೂಯ ಮಾತೆ ಪ್ರಾರ್ಥಿಸುತ್ತಿದ್ದಳು. ಕಠಿಣವಾದ ಲೋಹದಿಂದ ಮಾಡಿದ, ಕಡಲೆಯ ಆಕಾರದ ಆ ಕಬ್ಬಿಣ ತುಂಡುಗಳನ್ನು ಅನುಸೂಯ ಮಾತೆ ತಿನ್ನಬಹುದಾದ ಶುದ್ಧ ಕಡಲೇಕಾಳಾಗಿ ತನ್ನ ತಪೋಬಲದಿಂದ ರೂಪಿಸಿದರು. ಖನಿಜ, ಪೂರ್ಣವಾಗಿ ನಿದ್ರಾಸ್ಥಿತಿಯಲ್ಲಿರುವ ಚೈತನ್ಯ. ವೃಕ್ಷ ಮತ್ತು ವೃಕ್ಷ ಪದಾರ್ಥಗಳು, ಅರ್ಧ ನಿದ್ರೆಯ ಚೈತನ್ಯ, ಜಂತುಜಾಲ, ಪೂರ್ಣ ಚೈತನ್ಯ ಸ್ಥಿತಿಗಳು. **ಖನಿಜವಾಗಿ ಹುಟ್ಟಿ, ಖನಿಜವಾಗಿ ನಶಿಸಿ, ನಂತರ ವೃಕ್ಷಗಳಾಗಿ ಬೆಳೆದು, ತರುವಾಯ ಜಂತು ಜನುಮಗಳು ತಾಳಿ, ಕೊನೆಯಲ್ಲಿ ಮಾನವ ಜನುಮ ಪಡೆದ ಮಾನವ, ವಿವೇಕ ಜ್ಞಾನವೈರಾಗ್ಯವಂತನಾಗಿ ತನ್ನೊಳಗಿನ ನಿದ್ರೆಯ ಸ್ಥಿತಿಯಲ್ಲಿರುವ ಪರಮಾತ್ಮ ಶಕ್ತಿಯನ್ನು ಎದ್ದೇಳಿಸಿ ಮೋಕ್ಷ ಹೊಂದಬೇಕು.** ಪ್ರಕೃತಿಯಲ್ಲಿರುವ ಬದಲಾವಣೆಗಳ ಧರ್ಮಗಳನ್ನು ಪರಂಜ್ಯೋತಿಯ ಅನುಗ್ರಹದಿಂದ ಬದಲಾಯಿಸಬಹುದೆಂದು ತಾಯಿ ತೋರಿಸಿಕೊಟ್ಟಿರುವಳು. ತ್ರಿಮೂರ್ತಿಗಳ ರೂಪದಲ್ಲಿರುವ ಚೈತನ್ಯ, ಜಾಗ್ರತಾವಸ್ಥೆಯಲ್ಲಿದ್ದ ಕಾರಣ, ಅದನ್ನು ನಿದ್ರೆಯ ಸ್ಥಿತಿಗೆ ಬದಲಾಯಿಸಿ, ಆ ಆಕಾರಗಳನ್ನು ಕೂಸುಗಳಾಗಿ ಬದಲಾಯಿಸಿದಳು. ಮೂರು, ಮಾತೆಯ ಶಕ್ತಿ ಒಂದಾಗಿ ರೂಪಿಸಿ ಅನಘಾದೇವಿಯಾಗಿ ನಿಂತಳು. ನಾನು ದತ್ತಾತ್ರೇಯನಾಗಿ ಜನಿಸಿ ಅನಘಾದೇವಿಯನ್ನು ಸ್ವೀಕರಿಸಿದ್ದಾಯಿತು. ಶ್ರೀಪಾದ ಶ್ರೀವಲ್ಲಭ ಅವತಾರದಲ್ಲಿ ನನ್ನ ಎಡ ಭಾಗದಲ್ಲಿ ಅನಘಾದೇವಿಯು, ಬಲ ಭಾಗದಲ್ಲಿ ದತ್ತದೇವರಿರುವ ಅರ್ಧನಾರೀಶ್ವರ ರೂಪದಲ್ಲಿ ಜನಿಸಿದೆನು. ಇಂತಹ ಮಹತ್ತರ ಸೃಷ್ಟಿಯನ್ನು ತನ್ನ ಮನಸ್ಸಿಗೆ ಬಂದಂತೆ ರಚಿಸಿದ ಪ್ರಭುಗಳು, ಸೃಷ್ಟಿಧರ್ಮವನ್ನು ಅನುಗುಣವಾಗಿ ಬದಲಾಯಿಸಲು ಸಾಧ್ಯವೇತಾನೇ?

**ನರಸಾವಧಾನಿ:** ಶ್ರೀಪಾದ! ಸೃಷ್ಟಿಧರ್ಮಗಳನ್ನು ಬದಲಾಯಿಸಬಲ್ಲ ನೀವು, ನನ್ನ ದಾರಿದ್ರ್ಯ ಹೋಗಿಸಲಾರಿರಾ?

**ಶ್ರೀಪಾದರ ಉತ್ತರ:** ತಪ್ಪದೇ ಹೋಗಿಸಬಲ್ಲೆನು. ಆದರೇ ಅದು ಮುಂಬರುವ ಜನುಮಕ್ಕೆ ನಿರ್ಧರಿಸಿದ್ದೇನೆ. ಆ ಜನ್ಮದಲ್ಲೂ ಸ್ವಲ್ಪ

ದಾರಿದ್ರ್ಯಬಾಧೆ ಅನುಭವಿಸಿದ ನಂತರವೇ! ತೋಟದ ಸೊಪ್ಪಿನ ವಿಷಯ ಬಹಳ ಚಿಕ್ಕ ವಿಷಯವೇ. ಆದರೂ ಅದರ ಮೇಲೆ ಅದೆಷ್ಟು ವ್ಯಾಮೋಹ ಬೆಳೆಸಿಕೊಂಡಿದ್ದೀಯ? ತಾಯಿ ಆಗಲಿ, ತಂದೆ, ತಾತ ಆಗಲೀ ಯಾರನ್ನೂ ಯಾವುದೂ ಬೇಡಿದ್ದಿಲ್ಲ. ಚಿಕ್ಕಮಗುವಾದ ನಾನದೆಷ್ಟು ತಿಂದೇನು? ನಾನಿಷ್ಟಪಟ್ಟಾಗ ನೀನು ಸೊಪ್ಪನ್ನು ಕೊಡಬೇಕಿತ್ತು. ಈಗ ಕಾಲ ಮೀರಿದೆ ನಿನ್ನ ಮನಸ್ಸಿನ ಮಾಲಿನ್ಯ ಕಳೆಯಲೂ ಈ ಜೀವನದ ಸಮಯ ಸಾಲದು. **ಪ್ರತಿಯೊಬ್ಬರಿಗೂ ಪುಣ್ಯಫಲ ರೂಪವಾಗಿ ಆಯುಸ್ಸು, ಐಶ್ವರ್ಯ, ರೂಪ, ಪ್ರಖ್ಯಾತಿ ಮುಂತಾದವು ಸಿದ್ಧಿಸುವವು. ಪಾಪಫಲ ರೂಪವಾಗಿ ಅಲ್ಪಾಯುಷ್ಯ, ದಾರಿದ್ರ್ಯ, ಅನಾಕಾರಿತನ ಮತ್ತು ಕೆಟ್ಟಹೆಸರು ಮುಂತಾದವು ಪ್ರಾಪ್ತಿಯಾಗುವವು.** ನಿನ್ನ ಪುಣ್ಯಫಲದ ಅಧಿಕ ಭಾಗ ನಿನ್ನ ಆಯಸ್ಸಿಗೆ ಹಾಕಿದ್ದೇನೆ. ಆದ್ದರಿಂದಲೇ ಅಧಿಕ ಭಾಗ ಪುಣ್ಯ ಖರ್ಚಾಗಿದೆ. ಪಾಪ ಬಹಳಷ್ಟು ಇದೆ. ನೀನು ದಾರಿದ್ರ್ಯ ಅನುಭವಿಸಲೇಬೇಕು. ಆದರೂ, ನೀನು ಸ್ವಯಂಭೂ ದತ್ತನನ್ನು ಆರಾಧಿಸಿದ್ದಕ್ಕೆ ಐಶ್ವರ್ಯವಿಲ್ಲದಿದ್ದರೂ ಸುಲಭವಾಗಿ ಎರಡು ಹೊತ್ತಿನ ಊಟ ಲಭಿಸಲೂ ಅನುಗ್ರಹಿಸುತ್ತಿದ್ದೇನೆ.

**ನರಸಾವಧಾನಿ:** ಶ್ರೀಪಾದಾ! ವರ್ಣವ್ಯವಸ್ಥೆ ಪ್ರಕಾರ ನಡೆದುಕೊಳ್ಳಲು ಶಾಸ್ತ್ರ ಹೇಳುತ್ತಿದೆ. ತಮ್ಮ ತಾತ ವೈಶ್ಯರಿಗೂ ವೇದೋಕ್ತವಾಗಿ ಉಪನಯನ ಮಾಡಬಹುದೆಂದು ತೀರ್ಮಾನಿಸಿದರು. ತಪ್ಪಲ್ಲವೇ?

**ಶ್ರೀಪಾದರ ಉತ್ತರ:** ಸತ್ಯಋಷೀಶ್ವರರ ನಿರ್ಣಯದಲ್ಲಿ ತಪ್ಪು ತೋರಿಸಿದ್ದಕ್ಕೆ ನಿನ್ನ ನಾಲಿಗೆಯನ್ನು ಕತ್ತರಿಸಿ ಹಾಕಬೇಕು. ನನ್ನ ಅಜ್ಜಯಾರೆಂದು ತಿಳಿದಿದ್ದೀಯ? ಸಾಕ್ಷಾತ್ತು ಭಾಸ್ಕರಾಚಾರ್ಯರು. ವಿಷ್ಣುದತ್ತ ಮತ್ತು ಸುಶೀಲ ಎಂಬುವ ದಂಪತಿಗಳು ಸ್ವಾರ್ಥವನ್ನರಿಯದ ಪವಿತ್ರರು. ಅವರು ನನ್ನ ಜನನೀಜನಕರಾಗಿ ಅವತರಿಸಲೂ, ನಾನು ಕರ್ಮ ದೇವತೆಯರನ್ನು ಆದೇಶಿಸಿದ್ದೆ. ನರಸಿಂಹವರ್ಮ ಪೂರ್ವೀಕರು ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯ ಪರಮ ಭಕ್ತರು. ಸಿಂಹಾಚಲದಲ್ಲಿ ನಡೆದ ಯಜ್ಞಯಾಗಾದಿಗಳಲ್ಲಿ ವಿಶೇಷವಾಗಿ ಅನ್ನದಾನ ಮಾಡಿದ ಪವಿತ್ರರು. ನಾನು ಪೀಠಿಕಾಪುರದಲ್ಲಿ ಜನ್ಮಿಸುವುದಕ್ಕೆ ಮೊದಲೇ ಒಂದಾನೊಂದು ಕ್ರಮ ಪದ್ಧತಿಯಲ್ಲಿ ಸಂಪುಟಿ ಮಾಡುತ್ತಿದ್ದೆ. ಆ ಮೂರು ಕುಟುಂಬಗಳಿಂದ ನನಗೆ ಇರುವ ಋಣಾನುಬಂಧ ಒಂದು ಜನುಮದಲ್ಲಿ ತೀರುವುದಲ್ಲ. ಒಂದು ಅವತಾರದಲ್ಲಿ ಪರಿಸಮಾಪ್ತಿ ಆಗುವಂತದ್ದೂ ಅಲ್ಲ. ನನ್ನ 'ವರ'ದ ಹಸ್ತ ತಲತಲಾಂತರವರೆಗೆ ಅವರ ಮೇಲಿರುವುದು. ನನ್ನ ಛತ್ರಿಯ ನೆರಳಿನಲ್ಲಿ ಅವರು ನಿಶ್ಚಿಂತರಾಗಿರುವರು.

## ಶ್ರೀಪಾದರು ಭಕ್ತರಿಗೆ ಕೊಡುವಂತಹ ಅಭಯ

ನನ್ನ ವಿಷಯಕ್ಕೆ ಬಂದರೇ, ದೊಡ್ಡದಾಗಿ ಬೆಲೆ ಬಾಳದ ಅಡಿಗೆ ಸೊಪ್ಪನ್ನು ಕೂಡ ನೀನು ನನಗೆ ಕೊಡಲಾರದೇ ಹೋದೆ. ನನ್ನನ್ನು ತಿನ್ನುವಂತೆ ಮಾಡಿದ್ದರೇ, ಲಕ್ಷ ಬ್ರಾಹ್ಮಣರಿಗೆ ಊಟ ಕೊಟ್ಟ ಪುಣ್ಯ ನಿನಗೆ ಲಭಿಸಿರುತ್ತಿತ್ತು. ಬಹಳಷ್ಟು ಅದೃಷ್ಟವೂ ಕಳೆದುಕೊಂಡೆ, ಧರ್ಮಾಧರ್ಮ ಚರ್ಚೆ ಮಾಡಬೇಕಾದಾಗ, ಶಾಸ್ತ್ರವನ್ನೇ ಆಶ್ರಯಿಸಬೇಕು. **ಆದರೇ ಶಾಸ್ತ್ರ ಪ್ರಕಾರ ಆಚರಿಸಬಹುದೇ? ಇಲ್ವೇ? ಎಂದು ಸಂಕಟಕ್ಕೆ ಗುರಿಯಾದಾಗ, ನಿರ್ಮಲ ಅಂತಃಕರಣೆ ಉಳ್ಳವರ ನಿರ್ಣಯವೇ ಶಾಸ್ತ್ರವಾಗುವುದು. ಅವರ ನುಡಿಯೇ ವೇದವಾಗುವುದು. ವಾಕ್ಕೇ ಧರ್ಮಸಮ್ಮತವಾಗುವುದು. ಅವರು ಅಧರ್ಮ ತೀರ್ಪು ಹೇಳಬೇಕೆಂದುಕೊಂಡರೂ ಧರ್ಮದೇವತೆ ಅವರನ್ನು ಕೆಟ್ಟದಾರಿಗೆ ಹೋಗಲು ಬಿಡದೇ ಸರಿಯಾದ ತೀರ್ಪು ಕೊಡಿಸುವುದು.** ಹಿಂಸಿಸುವುದು ಪಾಪವೆಂದು ನಿನ್ನ ಶಾಸ್ತ್ರ ಹೇಳುತ್ತಿದೆ. ಶ್ರೀಕೃಷ್ಣರ ಸಮಕ್ಷದಲ್ಲಿ ನಡೆದ ಯುದ್ಧ, ಧರ್ಮಯುದ್ಧವಾಗಿದೆ ಎಂದು, ಕೌರವ ಪಾಂಡವ ಸಂಗ್ರಾಮ ಧರ್ಮಯುದ್ಧವೆಂದು, ಅದು ನಡೆದ ಸ್ಥಳ

ಧರ್ಮಕ್ಷೇತ್ರವೆಂದು ಪ್ರಖ್ಯಾತಿ ಹೊಂದಿದೆ ಅಲ್ವೇ? ಯಜ್ಞ ಪುಣ್ಯಫಲವೇ. ಆದರೇ ಪರಮಾತ್ಮ ಸ್ವರೂಪಿ ಶಿವನನ್ನ ಆಹ್ವಾನಿಸದೇ, ದಕ್ಷನು ಮಾಡಿದ ಯಜ್ಞ ಕೊನೆಗೆ ಯುದ್ಧವಾಗಿ ಮಾರ್ಪಟ್ಟಿತು. ದಕ್ಷನ ತಲೇ ಉರುಳಿತು, ಮೇಕೆ ತಲೆ ಇಡಲಾಯಿತು. **ರೋಗಿಗೆ ಪೈತ್ಯಪ್ರಕೋಪ ಇದ್ದಾಗ, ವೈದ್ಯ ಔಷಧಿಯಿಂದ ಸರಿ ಮಾಡುವುನು. ಶರೀರ ಕೊಳೆತರೆ ಕತ್ತಿ ಇಂದ ಕತ್ತಿರಿಸಿ ಚಿಕಿತ್ಸೆ ಮಾಡುವನು. ನಾನು ಅಷ್ಟೇ! ನನ್ನಲ್ಲಿ ದೈವ ಅಂಶಗಳೇ ಅಲ್ಲದೇ ರಾಕ್ಷಸಾಂಶಗಳು ಸಹಾ ಇವೆ. ನಾನು ಗರ್ವದಿಂದ, ಪಿಶಾಚಿಯಾಗಿ, ರಾಕ್ಷಸನಾಗಿ ಸಹಾ ನಡೆದುಕೊಳ್ಳುವೆನು. ಆದರೆ ನನ್ನಲ್ಲಿ ಜೀವಿಗಳ ಮೇಲೆ ಪ್ರೀತಿ ಉಕ್ಕಿ ನಿಂತಿರುವುದು. ನಿಮ್ಮ ಸ್ವಭಾವಾನುಸಾರವಾಗಿ, ನಿಮ್ಮಗಳ ಕರ್ಮಗಳ ಫಲಾನುಸಾರವಾಗಿ ನನ್ನ ನಡತೆ ಇರುವುದು. ಸರ್ವಶ್ಯ ಶರಣಾಗತಿ ಬೇಡಿದ ಭಕ್ತರನ್ನು ನಾನು ಕೈ ಬಿಡುವುದಿಲ್ಲ. ದೂರ ಇರುವ ನನ್ನ ಭಕ್ತರನ್ನು ನನ್ನ ಬಳಿ, ಬಲವಂತವಾಗಿ ಆದರೂ ಬರಿಸುವೆನು. ಋಷಿಗಳ ಮೂಲ, ನದಿಗಳ ಮೂಲಗಳ ಬಗ್ಗೆ ಮತನಾಡಬಾರದು.** ಆದಿಪರಾಶಕ್ತಿ ಕನ್ಯಕಾಪರಮೇಶ್ವರಿಯಾಗಿ ವೈಶ್ಯ ಕುಲದಲ್ಲಿ ಹುಟ್ಟಲಿಲ್ಲವೇ? ಸಿದ್ಧ ಮುನಿಗಳಲ್ಲಿ ವೈಶ್ಯ ಮುನಿಗಳಿಲ್ಲವೆ? ಬ್ರಹ್ಮ ಕ್ಷತ್ರಿಯ, ವೈಶ್ಯರಗೇ ಅಲ್ಲ. ಶೂದ್ರರೂ ಸಹಾ ನಿಯಮನಿಷ್ಠೆಗಳನ್ನು ಪಾಲಿಸಿದರೆ ವೇದೋಕ್ತ ಉಪನಯನಕ್ಕೆ ಅರ್ಹರೇ! ಉಪನಯನದಿಂದ ಮೂರನೇ ಕಣ್ಣು ತೆರೆದುಕೊಳ್ಳಬೇಕು. ಅಂತಃಕರಣೆ ಪರಿಶುದ್ಧವಾಗಿ ಬ್ರಹ್ಮಜ್ಞಾನದಲ್ಲಿ ಮನಸ್ಸು ಲಗ್ನವಾಗಬೇಕು. ನಿನ್ನ ಮನಸ್ಸು ಶಾಕಜ್ಞಾನದಲ್ಲಿ ಪೂರ್ತಿಯಾಗಿ ಲಗ್ನವಾಗಿದೆ. ಬ್ರಹ್ಮಎನ್ನುವುದು ಅಂಗಡಿಯಲ್ಲಿ ಸಿಗುವ ಪದಾರ್ಥ ಅಂದುಕೊಂಡೆಯಾ? ಈ ಜನುಮದಲ್ಲಿ ಬ್ರಾಹ್ಮಣನಾಗಿರುವನು, ಮರು ಜನುಮದಲ್ಲಿ ಛಂಡಾಲನಾಗಿ ಹುಟ್ಟಬಹುದು. ಇಂದಿನ ಛಂಡಾಲನು, ಬ್ರಾಹ್ಮಣನಾಗಿ ಮರು ಜನುಮದಲ್ಲಿರಬಹುದು. ಬ್ರಹ್ಮಪದಾರ್ಥ ಕುಲಮತಗಳಿಗೂ, ದೇಶಕಾಲಗಳಿಗೂ ಅತೀತವೆನ್ನುವ ರಹಸ್ಯ ಗುರ್ತಿಸು. **ದೈವ ಭಾವ ಪ್ರಿಯನೇ ಆದರೇ, ಹೊರಗಿನ (ಬಾಹ್ಯ) ಪ್ರಿಯಮಾತ್ರ ಅಲ್ಲ. ನಿನ್ನ ಭಾವನೆಗೆ ಅನುಗುಣವಾಗಿ ದೈವ ಕೆಲಸ ಮಾಡುವನು.** ಬ್ರಹ್ಮಜ್ಞಾನ ಸಂಬಂಧ ವಿಷಯಗಳು ಬಂದಾಗ ನಾನು ಬ್ರಾಹ್ಮಣನು. ದರ್ಬಾರು ಮಾಡುತ್ತಾ ಭಕ್ತರ ಯೋಗಕ್ಷೇಮ ವಿಚಾರಿಸುವಾಗ, ಅವರನ್ನು ಅನುಗ್ರಹಿಸುವಾಗ ನಾನು ಕ್ಷತ್ರಿಯನು. **ಪ್ರತಿ ಒಂದು ಜೀವಿಗೂ ಆ ಜೀವಿ ಮಾಡುವ ಪಾಪಪುಣ್ಯ ಕರ್ಮಗಳ ಅನುಸಾರವಾಗಿ ಬೆಲೆ (ಕೂಲಿ) ನಿರ್ಧರಿಸಲಾಗುವುದು. ಪ್ರತಿ ಒಬ್ಬನ ಬೆಲೆ ಅಥವಾ ಸಂಬಳವೂ ನನ್ನ ಬಳಿ ಇರುವುದು.** ಅದನ್ನು ತಕ್ಕಡಿಯಲ್ಲಿ ತೂಗಿ, ಅಳೆದು, ಯಾರಿಗೆ ಎಷ್ಟು ಕೊಡಬೇಕೆಂದು ಲೆಕ್ಕ ಮಾಡುವಾಗ ನಾನು ವೈಶ್ಯನು. ಭಕ್ತರ ಬಾಧೆಗಳನ್ನು, ಕಷ್ಟಗಳನ್ನು ನನ್ನ ಶರೀರದ ಮೇಲೆ ತೆಗೆದುಕೊಂಡು, ಅವರಿಗೆ ಸುಖಶಾಂತಿ ಕೊಡಲೂ ನಾನು ಅವರ ಸೇವೆ ಮಾಡುವುದರಿಂದ, ನಾನು ಶೂದ್ರನೂ ಸರಿ! ಜೀವಿಗಳ ಪಾಪಗಳನ್ನು ತೊಳೆಯುವುದರಿಂದ ನಾನು ಅಗಸನು. ಸತ್ತ ಜೀವಿಗಳನ್ನು ಸುಟ್ಟು ಬೂದಿ ಮಾಡಿ, ಉತ್ತಮ ಜನುಮ ಕೊಡುತ್ತಿದ್ದೇನೆ. ಆದ್ದರಿಂದ ನಾನು ಮಸಣ ಪಾಲಕನು ಸಹಾ. ಈಗ ಹೇಳು, ನನ್ನ ಕುಲ?

**ನರಸಾವಧಾನಿ:** ಶ್ರೀಪಾದಾ! ಕ್ಷಮಿಸಬೇಕು. ನಾನು ಅಜ್ಞಾನಿ. ತಾವು ದತ್ತ ಪ್ರಭುಗಳೇ! ಸರ್ವ ಜೀವಿಗಳಿಗೂ ಆಶ್ರಯ ತಾವೇ! ಮೊದಲಾಗಿ, ಈ ಸೃಷ್ಟಿ ಹೇಗೇ ಉದ್ಭವಿಸಿದೆಯೋ ತಿಳಿಸಿ, ನನ್ನನ್ನು ಕೃತಾರ್ಥನಾಗಿ ಮಾಡಿ ಪ್ರಭೂ!

## ಲೋಕಲೋಕಾ ವರ್ಣನೆ

**ಶ್ರೀಪಾದರ ಉತ್ತರ:** ಅಜ್ಜಾ! ಸ್ವರ್ಗದಲ್ಲಿ 88 ಸಾವಿರ ಗೃಹಸ್ಥ ಮುನಿಗಳು ಇದ್ದಾರೆ. ಅವರು ಪುನರಾವೃತ್ತಿ ಧರ್ಮ ಉಳ್ಳವರು. ಧರ್ಮವನ್ನು ಪುನಃ ಪ್ರಚಾರ ಮಾಡುವುದಕ್ಕೆ ಬೀಜ ಭೂತರಾಗಿರುವರು. ಪರಮಾತ್ಮರ ಅನಂತ ಶಕ್ತಿಯ, ಒಂದು ಸಣ್ಣ ಅಂಶವೇ, ಜಗತ್ತನ್ನು ಸೃಷ್ಟಿಸಲು ಬ್ರಹ್ಮನಾಗಿ ಆಗಿರುವನು. ಪರಮಾತ್ಮರಿಂದ ಕ್ರಮವಾಗಿ ರೂಪಗೊಂಡ ಜಲ ಸರ್ವವ್ಯಾಪ್ತಿಯಾಗಿದ್ದಿತು. ಪರಮಾತ್ಮರ ತೇಜದಿಂದ

ಆ ಜಲದಿಂದು ಸ್ವರ್ಣಮಯವಾದ ಅಂಡಗಳು ಕೋಟಿಗಟ್ಟಲೇ ಹುಟ್ಟಿಕೊಂಡವು. ಆ ಅಂಡಗಳಲ್ಲಿ ನಾವು ವಾಸಿಸುತ್ತಿರುವ ಬ್ರಹ್ಮಾಂಡವೂ ಒಂದು. ಅಂಡದ ಒಳ ಭಾಗ ಕತ್ತಲೆ ತುಂಬಿದ್ದರೇ, ಪರಮೇಶ್ವರನ ತೇಜಸ್ಸು ಮೂರ್ತಿತ್ವ ಹೊಂದಿ ಅನಿರುದ್ಧ ನಾಮದಲ್ಲಿ ಖ್ಯಾತಿ ಹೊಂದಿದನು. ಆ ಅಂಡವನ್ನು ತನ್ನ ತೋಜೋಮಹಿಮೆಯಿಂದ ಪ್ರಕಾಶಿಸಿದ್ದ ಕಾರಣ ಹಿರಣ್ಯಗರ್ಭ ಎಂದು ಸೂರ್ಯ, ಸವಿತ, ಪರಂಜ್ಯೋತಿ ಎಂದು ಅನೇಕಾನೇಕ ಹೆಸರುಗಳಲ್ಲಿ ವೇದ ವ್ಯವಹರಿಸಿದೆ. ತ್ರೇತಾಯುಗದಲ್ಲಿ ಪೀಠಿಕಾಪುರದಲ್ಲಿ 'ಸವಿತೃಕಾಠಕ ಚಯನ'ವನ್ನು ಶ್ರೀ ಭರದ್ವಾಜ ಮಹರ್ಷಿ ನಿರ್ವಹಿಸಿದರು. ಅನೇಕ ಕೋಟಿ ಬ್ರಹ್ಮಾಂಡ ತೇಜಸ್ಸನ್ನು ಹೊತ್ತ ಶ್ರೀದತ್ತಾತ್ರೇಯರನ್ನು ಉದ್ದೇಶಿಸಿ, 'ಸವಿತೃಕಾಠಕ ಚಯನ' ಮಾಡಲಾಗಿದೆ. ಸತ್ಯಲೋಕದಲ್ಲಿ ಅನುಕೂಲವಾದ 'ನಿರಾಮಯ'ವೆಂಬ ಒಂದು ತಕ್ಕ ಸ್ಥಳವಿದೆ. ತ್ರಿಖಂಡ ಸೋಪಾನದಲ್ಲಿ ವಸುರುದ್ರ ಆದಿತ್ಯರೆಂದು ಕರೆಯಲ್ಪಟ್ಟ ಪಿತೃದೇವತೆಗಳಿರುವುರು. ಇವರು ನಿರಾಮಯ ಸಂರಕ್ಷರಾಗಿ ಇರುವುರು. ಕಾರಣ, ಬ್ರಹ್ಮಲೋಕವೆನ್ನುವುದು ಚತುರ್ಮುಖ ಬ್ರಹ್ಮನಿವಾಸ ಸ್ಥಾನವಾಗಿದೆ. ಅದು ವಿದ್ಯಾಸ್ಥಾನವೆಂದು, ಮೂಲಪ್ರಕೃತಿ ಸ್ಥಾನವೆಂದು ಹೆಸರುಳ್ಳ ಶ್ರೀನಗರ ಆ ಮೇಲೆ ಭಾಗದಲ್ಲಿದೆ. ಅದರ ಮೇಲೆ ಮಹಾಕೈಲಾಸ, ನಂತರ ಮೇಲೆ ವೈಕುಂಠ ಇವೆ. ಸತ್ಯಲೋಕದಲ್ಲಿ ಪುರಾಣ ಪುರವೆನ್ನುವುದು ವಿದ್ಯಾಧರ ಸ್ಥಾನ. ತಪೋ ಲೋಕದಲ್ಲಿ ಅಂಜನಾವತೀ ಪುರದಿಂದು ಸಾಧ್ಯುರೆಂಬವರು ಇದ್ದಾರೆ. ಜನ(ಭೂ)ಲೋಕದಲ್ಲಿ ಅಂಬಾವತೀ ಪುರದಿಂದು ಸನಕಸನಂದ ಮೊದಲಾದ ಋಷಿಗಳು ಇರುವರು. ಮಹರ್ಲೋಕದೊಳು ಜ್ಯೋತೊಷ್ಮತೀ ಪುರದಲ್ಲಿ ಸಿದ್ಧರು ಇರುವರು. ಸುವರ್ಲೋಕವೆಂದು ಕರೆಯಲ್ಪಡುವ ಸ್ವರ್ಗ ಲೋಕದಲ್ಲಿನ ಅಮರಾವತಿ ಪುರದಲ್ಲಿ ದೇವೇಂದ್ರಾದಿ ದೇವತೆಗಳಿರುವರು. ಖಗೋಳಕ್ಕೆ ಸೇರಿದ, ನಕ್ಷತ್ರಾದಿಗಳಿರುವ ಭುವರ್ಲೋಕದಲ್ಲಿ ರಥಂತರ ಪುರದಲ್ಲಿ ವಿಶ್ವಕರ್ಮನೆಂಬ ದೇವಶಿಲ್ಪಿ ಇರುವನು. ಅಜ್ಜಾ! ಭೂಲೋಕ ಎರಡು ಭಾಗಗಳಾಗಿದೆ. ಮಾನವರು ಇರುವುದು ಭೂಗೋಳ. ಇದಲ್ಲದೇ ಮಹಾಭೂಮಿ ಎಂದು ಮತ್ತೊಂದು ಇದೆ. ಇದು ಭೂಗೋಳಕ್ಕೆ ದಕ್ಷಿಣದಲ್ಲಿ 5 ಕೋಟಿ ಬ್ರಹ್ಮಾಂಡ ಯೋಜನೆ ದೂರದಲ್ಲಿದೆ. ಮರ್ತ್ಯಲೋಕವೆಂದರೆ ಭೂಲೋಕ, ಭುವರ್ಲೋಕಗಳು. ಇದರಲ್ಲಿ ಮಹಾಭೂಮಿ ಸಹಾ ಸೇರಿದೆ. ಪಾತಾಳವೆಂದರೆ ಅತಲ, ವಿತಲ, ಸುತಲ, ರಸಾತಲ, ತಲಾತಲ, ಮಹಾತಲ, ಪಾತಳ ಸೇರಿದ 'ಸ್ವರ್ಗ ಮರ್ತ್ಯಪಾತಾಳ' ಇದೆ.

ನಾವು ವಾಸಿಸುವ ಭೂಗೋಳಕ್ಕೆ ಕೆಳಗಿರುವ ಮಹಾಭೂಮಿ ಎನ್ನುವುದು ಮಧ್ಯಭಾಗದಲ್ಲಿ ದೃಢವಾಗಿ ಚಕ್ರಾಕಾರದಲ್ಲಿರುವುದು. ಆದ್ದರಿಂದ, ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಪ್ರಕಾಶ ನಿರಂತರ. ಸದಾ ಬೆಳಕಿನ ಕಾರಣ ಅಲ್ಲಿ ಕಾಲಮಿತಿ ಇಲ್ಲ. ಈ ಮಹಾ ಭೂಮಿಯಮೇಲೆಯೇ ಸಪ್ತ ಸಮುದ್ರಗಳು ಸಪ್ತ ದ್ವೀಪಗಳುಂಟು. ಇದರಲ್ಲೇ ಜಂಬೂದ್ವೀಪ ಇದೆ. ಭೂಲೋಕ, ಭುವರ್ಲೋಕ ಸೇರಿ ಮರ್ತ್ಯಲೋಕವಾಗಿದೆ. ಭೂಲೋಕದಲ್ಲಿ ಮಹಾಭೂಮಿ, ಭೂಗೋಳವೆಂದು ಎರಡು ವಿಧಗಳುಂಟು.

ಸೃಷ್ಟಿ ಮೊದಲಿನಲ್ಲಿ ಎಲ್ಲವೂ ಜಲವಿತ್ತು. ಪ್ರಜಾಪತಿ ಸೃಷ್ಟಿ ಮಾಡಲು ಇಚ್ಛಿಸಿ ತಪಸ್ಸು ಮಾಡಲೂ, ನೀರಿನ ಮೇಲೆ ಪುಷ್ಕರ ಬಣ್ಣ ಕಾಣಿಸಿತು. ಪ್ರಜಾಪತಿ ವರಾಹನಾಗಿ, ಆ ಬಣ್ಣದ ಮುಂದೆ ಮುಳುಗಲೂ, ಕೆಳಗಿನ ಮಹಾಭೂಮಿ ಹೊಂದಿದನು. ಆ ಮಹಾಭೂಮಿಯಿಂದ ಸ್ವಲ್ಪ ಒದ್ದೆಯ ಮಣ್ಣು ತನ್ನ ಹಲ್ಲುಗಳಲ್ಲಿ ಹಿಡಿದು, ನೀರಿನ ಮೇಲ್ಭಾಗಕ್ಕೆ ತಂದಿತು. ಅದು ಆ ಬಣ್ಣ ಸೇರಿ ಪೃಥ್ವಿ ಎಂದು ಹೇಳಲಾಯಿತು. ತಾತ! ಇದೇ ಭೂಗೋಳ. ಮಹಾಭೂಮಿಯಿಂದ 5 ಕೋಟಿ ಬ್ರಹ್ಮಾಂಡ ಯೋಜನೆಯ ದೂರವಿದೆ ಮಹಾಭೂಮಿ. 50 ಕೋಟಿ ಯೋಜನೆ ವಿಸ್ತಾರ. ಜಂಬೂದ್ವೀಪ ವೆಂಬುದು ಮಹಾಭೂಮಿಯಲ್ಲೇ ಇರುವುದು. ಅದರಲ್ಲಿ ನವ ಖಂಡಗಳಿವೆ. ದೈವ ಖಂಡದಲ್ಲಿ ದೇವತೆಯರಿರುವರು. ಗಭಸ್ತ್ಯ ಖಂಡದಲ್ಲಿ ಭೂತಗಳು, ಪುರುಷ ಖಂಡದಲ್ಲಿ ಕಿನ್ನರರು, ಭರತ ಖಂಡದಲ್ಲಿ

ಮಾನವರು, ಶರಭ ಖಂಡದಲ್ಲಿ ಸಿದ್ಧರು, ಗಂಧರ್ವ ಖಂಡದಲ್ಲಿ ಗಂಧರ್ವರು, ತಾಮ್ರ ಖಂಡದಲ್ಲಿ ರಾಕ್ಷಸರು, ಶೇರು ಖಂಡದಲ್ಲಿ ಯಕ್ಷರು, ಇಂದು ಖಂಡದಲ್ಲಿ ಪನ್ನಗರೂ ಇರುವರು. ಮಹಾಭೂಮಿಯಲ್ಲಿನ ಜಂಬೂದ್ವೀಪಕ್ಕೆ ದಕ್ಷಿಣಕ್ಕೆ ಇರುವ ಭರತ ಖಂಡದೊಳಗಿನ ಭರತ ಪುರದಲ್ಲಿ ವೈವಸ್ವತ ಮನು, ಭೂಋಷಿಗಳೊಡನೆಯೂ, ಮಾನವರೊಡನೆಯೂ ಅಲಂಕರಿಸಿದ್ದರು. ಮಹಾಭೂಮಿ ಮೇಲೆ ಜಂಬೂದ್ವೀಪವಿರುವ ಹಾಗೆ ಭೂಗೋಳ ಮೇಲೆ ಸಹಾ ಜಂಬೂದ್ವಿಪವಿದೆ. ಶ್ರೀಪಾದ ಶ್ರೀವಲ್ಲಭ ಅವತಾರವಾದ ನಾನು ಪೀಠಿಕಾಪುರದಲ್ಲಿ ಅವತರಿಸುವುದರ ಮುನ್ನ 100 ವರ್ಷಗಳ ಹಿಂದೆ ಮಹಾಭೂಮಿ ಮೇಲೆ ಬಂದಿದ್ದೆ. ಮಹಾಭೂಮಿಯ ಮೇಲಿನ ಜಂಬೂದ್ವೀಪ, ಲಕ್ಷ ಬ್ರಹ್ಮಾಂಡ ಯೋಜನೆ ವಿಸ್ತೀರ್ಣ ಹೊಂದಿದೆ. ಜಂಬೂದ್ವೀಪದ ಭರತ ಖಂಡದಲ್ಲಿ ಮಾತ್ರವೇ ವೈವಸ್ವತ ಮನು ಇರುವನು. ಉಳಿದ ಖಂಡಗಳಲ್ಲಿ ದೇವಯೋನರಾದವರು ಇದ್ದಾರೆ. ಮಹಾಭೂಮಿಯ ಜಂಬೂದ್ವೀಪದ ಶೀತ ಉಷ್ಣಗಳು ಹೆಚ್ಚಾಗಿರದೇ ತೃಪ್ತಿಯಾಗಿರುವವು. ಎಳೇ ಬಿಸಿಲಿನಂತೆ ಸದಾ ಬೆಳಕಿರುವುದು. ಆದರೆ ರಾತ್ರಿ ಹಗಲೆಂಬುವ ಭೇದವಿರದು. ಮಹಾಭೂಮಿಯ ಜಂಬೂದ್ವೀಪ ಲಕ್ಷ ಯೋಜನೆ ವಿಸ್ತೀರ್ಣ ಉಳ್ಳದ್ದು. ಲವಣ ಸಮುದ್ರ ಲಕ್ಷೆಯೋಜನೆ, ಪಕ್ಷ ದ್ವೀಪ 2 ಲಕ್ಷ, ಸುರಾಸಮುದ್ರ 4 ಲಕ್ಷ, ಕ್ರೌಂಚ ದ್ವೀಪ 8 ಲಕ್ಷ ಯೋಜನೆ ವಿಸ್ತೀರ್ಣ, ಸಪ್ತ ಸಮುದ್ರ 8 ಲಕ್ಷ, ಶಾಕ ದ್ವೀಪ 16 ಲಕ್ಷ, ದಧಿ ಸಮುದ್ರ 16 ಲಕ್ಷ, ಶಾಲ್ಮಲೀದ್ವೀಪ 32 ಲಕ್ಷ, ಕ್ಷೀರ ಸಮುದ್ರ 32 ಲಕ್ಷ, ಪುಷ್ಕರ ದ್ವೀಪ 64 ಲಕ್ಷ, ಶುದ್ಧಜಲ ಸಮುದ್ರ 64 ಲಕ್ಷ, ಚಲಾಚಲ ಪರ್ವತ 128 ಲಕ್ಷ, ಚಕ್ರವಾಳ ಪರ್ವತ 256 ಲಕ್ಷ, ಲೋಕಾಲೋಕ ಪರ್ವತ 512 ಲಕ್ಷ ಮತ್ತು ತಮೋಭೂಮಿ 1250 ಲಕ್ಷ ಯೋಜನೆಗಳ ವಿಸ್ತೀರ್ಣ ಹೊಂದಿವೆ. ಲೋಕಾಲೋಕ ಪರ್ವತವನ್ನು ದಾಟಿ, ಸೂರ್ಯರಶ್ಮಿ ಹೋಗಲೂ ಅಸಾಧ್ಯ! ಆದ್ದರಿಂದಲೇ ಲೋಕಾಲೋಕ ಪರ್ವತ ಮತ್ತು ಅಂಡಭಿತ್ತಿ ನಡುವಿನ ಪ್ರದೇಶ ಸದಾ ಕತ್ತಲೆಯಿಂದ ಇರುವುದು. ಅಂಡಭಿತ್ತಿ ಎಂಬುದು ಕೋಟಿ ಯೋಜನೆ ದಪ್ಪ ಉಳ್ಳದ್ದು! ವರಾಹ ಅವತಾರವಾಗಲಿ, ನರಸಿಂಹಾವತಾರವಾಗಲಿ ಭೂಮಿ ಹಿಡಿಯುವಂತಹಾ ಅವತಾರಗಳಲ್ಲ! ವರಾಹವೆಂದರೆ ಹಂದಿ ಅಲ್ಲ. ಖಡ್ಗಮೃಗ, ಒಂದೇ ದಂತ ಉಳ್ಳದ್ದು.

## ದ್ವೀಪಗಳು, ದ್ವೀಪಾಧಿಪತಿಗಳು, ದ್ವೀಪಾಧಿದೇವತೆಯರ ವಿವರಣೆ

ಮಹಾಭೂಮಿಯ ಜಂಬೂದ್ವೀಪವನ್ನು ಸ್ವಯಂಭುವ ಮನು, ಮೊದಲ ಚಕ್ರವರ್ತಿಯಾಗಿ ಆಳಲೂ, ಅವನ 7 ಮಕ್ಕಳು 7 ದ್ವೀಪಗಳಿಗೆ ಒಡೆಯರಾದರು. ಪಕ್ಷ ದ್ವೀಪಕ್ಕೆ ಮೋದಾತಿಥಿ, ಶಾಲ್ಮ ದ್ವೀಪವನ್ನು ವಪುಷ್ಮಂತ, ಕುಶ ದ್ವೀಪವನ್ನು ಜೋತಿಷ್ಮಂತ, ಕ್ರೌಂಚಿಯನ್ನು ದ್ಯುತಿಮಂತ, ಶಾಕನನ್ನು ಹವ್ಯ, ಪುಷ್ಕರವನ್ನು ಸವನ - ಪಾಲಿಸಿದ ಮೊದಲ ಚಕ್ರವರ್ತಿಗಳು. ಪಕ್ಷದ್ವೀಪದ 4 ವರ್ಣಗಳು ಆರ್ಯಕ, ಕುರರ, ವಿಂದಕ, ಭಾವಿನ. ಅವರಿಗೆ ಚಂದ್ರರೂಪದ ವಿಷ್ಣು ಆರಾಧ್ಯ ದೈವ. ಶಾಲ್ಮಲೀದ್ವೀಪದೊಳು ಕಪಿಲವರ್ಣ, ಚಾರಣಕ, ಪೀತ, ಕೃಷ್ಣ ಎಂಬ 4 ವರ್ಣಗಳವರು ಇರುವರು. ಕುಶ ದ್ವೀಪದಲ್ಲಿ ದಮಿ, ಶುಷ್ಮಿಣ, ಸ್ನೇಹ, ಮಂದೇಹ ಎಂಬ 4 ವರ್ಣದ ಬ್ರಹ್ಮಾರಾಧಕರಿರುವರು. ಕ್ರೌಂಚದಲ್ಲಿ ಪುಷ್ಕರ, ಪುಷ್ಕಲ, ಧನ್ಯ, ಪಿಷ್ಯ ಎಂಬ 4 ವರ್ಣದವರು ಸೂರ್ಯಾರಾಧಕರು. ಪುಷ್ಕರದಲ್ಲಿ ಮಾತ್ರ ಚತುರ್ವರ್ಣರಿಲ್ಲ. ಎಲ್ಲರೂ ದೇವರುಗಳಂತೆ ರೋಗ, ಶೋಕವಿಲ್ಲದೇ ಆನಂದವಾಗಿರುವರು. ಇವರು ಬ್ರಹ್ಮಾರಾಧ್ಯರು. ನಮ್ಮ ಭೂಗೋಳದ ಜಂಬೂದ್ವೀಪದಲ್ಲಿ, ಭರತವರ್ಷ, ಕಿಂಪುದಷ ವರ್ಷ, ಹರಿವರ್ಷ, ಕೇತುಮಾಲವರ್ಷ, ಇಲಾವೃತವರ್ಷ, ಭದ್ರಾಶ್ವವರ್ಷ, ರಮ್ಯಕವರ್ಷ, ಹಿರಣ್ಯಕವರ್ಷ ಮತ್ತು ಕುರುವರ್ಷ ಎಂಬುವವಿವೆ. ಅಜ್ಜಾ! ಮಹಾಭೂಮಿಯಲ್ಲಿ ಖಂಡ ವಿಭಾಗಳುಳ್ಳ

ಜಂಬೂದ್ವೀಪ ಇರುವಂತೆಯೇ, ಭೂಗೋಳದಲ್ಲಿ ವರ್ಷ ವಿಭಾಗಗಳಿಂದ ಇರುವ ಜಂಬೂದ್ವೀಪ ಇದೆ. ಮಹಾಭೂಮಿ ಗೋಳಾಕಾರವಿದ್ದು, ಮಧ್ಯದಲ್ಲಿ ಆಮೆಯ ಹಿಂಚಿನಂತೆ ದೃಢವಾಗಿರುವುದು. ಇದನ್ನೇ ಭೂಮಂಡಲವೆನ್ನುವರು. ಭೂಗೋಳ ಮಾತ್ರ ನಿಂಬೆಹಣ್ಣಿನಂತಿರುವುದು. ಮಹಾಭೂಮಿ, ಮೇರು ರೇಖೆಯನ್ನು ಸುತ್ತಿ ಬ್ರಹ್ಮಾಂಡದ ಅಂಡಭಿತ್ತಿಯವರಿಗೂ ವ್ಯಾಪಿಸಿರುವುದು. ಭೂಗೋಳ ಮಾತ್ರ ಜ್ಯೋತಿಶ್ಚಕ್ರ ನಡುವಿನಲ್ಲಿ ಸರಿಯಾಗಿ ನಿಂತಿದೆ. ಮಹಾಭೂಮಿಯಲ್ಲಿ ನಡುವಿನಲ್ಲಿರುವ ಮೇರು ರೇಖೆಯನ್ನು ಸುತ್ತಿ ಜಂಬೂದ್ವೀಪವಿದೆ. ಅದನ್ನು ಸುತ್ತಿ ಸಪ್ತ ಸಮುದ್ರ ದ್ವೀಪಾದಿಗಳು ಇವೆ. ಭೂಗೋಳದ ಉತ್ತರಾರ್ಥ ಗೋಳ ದೇವ ಭಾಗವೆಂದು, ದಕ್ಷಿಣಾರ್ಥ ಗೋಳ ಅಸುರ ಭಾಗವೆಂದು ಹೇಳುವರು. ಮಹಾಭೂಮಿಯ ಸಮಮಧ್ಯ ಪ್ರದೇಶದಲ್ಲಿ ಮೇರು ಸುಂದರವಾಗಿ ಬೆಳಗುತ್ತಿದೆ. ಜೀವಿಗಳನ್ನು ಪಾಲಿಸುವ ಮನುವರಿಗಿದು ನಿವಾಸ ಸ್ಥಾನ. ಭೂಗೋಳ ಪರಿಪಾಲಿಸಲ್ಪಡುತ್ತಿದ್ದ ಜೀವಿಗಳ ಸ್ಥಾನ. ಮಹಾಭೂಮಿಯಲ್ಲಿ ಸುತ್ತು ಬಳಿಸಿರುವ ಚಕ್ರವಾಳ ಪರ್ವತ ತುದಿಯಲ್ಲಿ ಜ್ಯೋತಿಶ್ಚಕ್ರ ನಿಮಿಡಿಸಲಾಗಿದೆ. ಭೂಗೋಳ ಮಾತ್ರ ಇದಕ್ಕೆ ಭಿನ್ನವಾಗಿದೆ. ಸಪ್ತ ಕಕ್ಷ್ಯಾವೃತವಾದ ಜ್ಯೋತಿಶ್ಚಕ್ರ ಇದಕ್ಕೆ ಪ್ರತಿದಿನ ಒಂದು ಪ್ರದಕ್ಷಿಣೆ ಮಾಡುತ್ತಿದೆ. ಮಹಾಭೂಮಿಯಲ್ಲಿ ಶೀತ, ವಾತ, ತಾಪಗಳು ಸ್ವಲ್ಪವೇ. ಸದಾ ಹಗಲು ಇದ್ದು ಕತ್ತಲೆಂಬುವುದಿಲ್ಲದೇ ಸಮಯದ ವ್ಯತ್ಯಾಸವಿಲ್ಲದೇ ಇರುವುದು. ಭೂಗೋಳದಲ್ಲಿ ಇದಕ್ಕೆ ವ್ಯತಿರಿಕ್ತವಾಗಿದೆ. ಮಹಾಭೂಮಿ ಪುಣ್ಯಫಲಾನುಭವದಿಂದಲೇ ಸಾಧ್ಯ. ಸ್ಥೂಲ ಶರೀರದಲ್ಲಿ ಹೊಂದಲಾಗದ್ದು ಭೂಗೋಳ, ಪುಣ್ಯಪ್ರಾಪ್ತಿಗೆ ಸರಿಯಾದ ಕರ್ಮಭೂಮಿ. ಸ್ಥೂಲ ಶರೀರದವರು ಇರಬೇಕಾದ ಭೂಮಿ. ಮಹಾಭೂಮಿಯ ಮೇಲೆ, ಮನು ಪ್ರಳಯ ಬಿಟ್ಟು, ಚಿಕ್ಕ ಪ್ರಳಯಗಳು ಇರುವುದಿಲ್ಲ. ಭೂಗೋಳ ಮೇಲೆ ಯುಗ, ಮಹಾ ಮತ್ತು ಮನು ಪ್ರಳಯಗಳು ನಡೆಯುತ್ತಿರುವುದು.

ಮಹಾ ಭೂಮಿಯನ್ನು ಧಾತ್ರಿ, ವಿಧಾತ್ರಿ ಎಂದು ಕರೆಯುವರು. ಭೂಗೋಳವನ್ನು ಮಹಿ, ಉರ್ವಿ, ಕ್ಷಿತಿ, ಪೃಥ್ವಿ, ಭೂಮಿ ಎಂಬುವರು. ಅಜ್ಞಾ! ಪಾತಾಳ ಲೋಕದ ಬಗ್ಗೆ ಹೇಳುವೆನು ಕೇಳು. ಅತಲದಲ್ಲಿ ಪಿಶಾಚಿ ಗಣಗಳು, ವಿತಲದಲ್ಲಿ ಗುಹ್ಯಕರು, ಸುತಲದಲ್ಲಿ ರಾಕ್ಷಸರು, ರಸಾತಲದಲ್ಲಿ ಭೂತಗಳು, ತಲಾತಲದಲ್ಲಿ ಯಕ್ಷರು, ಮಹಾತಲದಲ್ಲಿ ಪಿತೃದೇವತೆಯರು, ಪಾತಾಳದಲ್ಲಿ ಸರ್ಪಗಳಿರುವುರು.

## ಲೋಕವಾಸಿಗಳು, ಲೋಕಾಧಿಪತಿಗಳು, ಖಂಡಗಳ ವಿವರಣೆ

ವಿತಲದಲ್ಲಿರುವ ಕುಬೇರನು ನವನಿಧಿಗಳಿಗೂ ಅಧಿಪತಿ. ಈತನೇ ಬ್ರಹ್ಮಾಂಡಕ್ಕೆ ಕೋಶಾಧಿಪತಿ ಉತ್ತರಕ್ಕೆ ಅಧಿಪತಿ ಸಹಾ. ಇವರು ವಿತಲದ ಅಲಕಾ ಪುರದಲ್ಲಿ ಇರುವರು.

ಅದೇ ವಿತಲದಲ್ಲಿ ಮೇರುವಿಗೆ ಪಶ್ಚಿಮಕ್ಕೆ, ಯೋಗಿನೀಪುರದಂದು ಮಯ ಇರುವನು. ಈತ ರಾಕ್ಷಸರ ಶಿಲ್ಪಿ. ತ್ರಿಪುರಾಸರಿಗೆ ಆಕಾಶದಲ್ಲಿ ಎತ್ತರವಾಗಿ ಹಾರಬಲ್ಲ ತ್ರಿಪುರಗಳನ್ನು ಮಾಡಿ ಕೊಟ್ಟವನು.

ಸುತಲದಲ್ಲಿನ ವೈವಸ್ವತ ಪುರವನ್ನು ಯಮಧರ್ಮರಾಯ ಆಳುತ್ತಿದ್ದನು. ಈತ ದಕ್ಷಿಣ ದಿಕ್ಕಿನ ಒಡೆಯ. ಈ ಪಟ್ಟಣ ಪ್ರವೇಶಕ್ಕೆ ಮೊದಲು ಅಗ್ನಿಹೋತ್ರ ನದಿ ಇದೆ. ಇದನ್ನೇ ವೈತರಣೀ ಎನ್ನುವರು. ಇದನ್ನು ದಾಟಲೂ ಪುಣ್ಯವಂತರಿಗೆ ಸುಲಭವಾಗಿಯೂ, ಪಾಪಾತ್ಮರಿಗೆ ಕಷ್ಟವಾಗಿಯೂ ಇರುವುದು.

ರಸಾತಲದಲ್ಲಿ ಪುಣ್ಯ ನಗರವೆಂಬುದು ಇದೆ. ಅದರ ಒಡೆಯ 'ನಿಋತಿ.' ನೈಋತಿ ದಿಕ್ಕಿನ ಅಧಿಪತಿ ತಲಾತಲಿದ ಧನಿಷ್ಠಾನ ಪುರದಲ್ಲಿ, ಪಿಶಾಚ ಗಣಗಳ ಜೊತೆ, ಭೇತಾಳ ಇರುವನು. ಮಹಾತಲದ ಕೈಲಾಸದಲ್ಲಿ ಸರ್ವಭೂತಗಣಗಳೊಂದಿಗೆ, ಕಾತ್ಯಾಯನಿಪತಿ

ಆದ ಈಶಾನ್ಯನು ಇರುವನು. ಈತನು ಈಶಾನ್ಯ ದಿಕ್ಕಿನ ಒಡೆಯ.

ಪಾತಾಳದಲ್ಲಿ ವೈಕುಂಠ ನಗರ ಇರುವುದು. ಅಲ್ಲಿ ಶ್ರೀಮನ್ನಾರಾಯಣಮೂರ್ತಿ ಪಾತಾಳ ಅಸುರರ ಜೊತೆ ವಾಸುಕಿ ಮುಂತಾದ ಸರ್ಪಶ್ರೇಷ್ಠರ ಜೊತೆ ಶೇಷಸಾಯಿ ಆಗಿರುವನು. ಇದೇ ಶ್ವೇತದ್ವೀಪ ವೈಕುಂಠ.

ಕೊನೆಯದಾದ ಪಾತಾಳ ಲೋಕದಲ್ಲಿ ತ್ರಿಖಂಡ ಸೋಪಾನವಿದೆ. ಪ್ರಥಮ ಖಂಡದಲ್ಲಿ ಅನಂಗಜೀವರು, ದ್ವಿತೀಯ ಖಂಡದಲ್ಲಿ ಪ್ರೇತಗಣಗಳಿದ್ದಾರೆ. ತೃತೀಯ ಖಂಡದಲ್ಲಿ ಯಾತನಾದೇಹವನ್ನು ಹೊಂದಿರುವ ಜೀವಿಗಳು ದುಃಖಾಕ್ರಾಂತರಾಗಿರುವರು.

ಸಪ್ತ ಸಮುದ್ರಗಳು, ಸಪ್ತ ದ್ವೀಪಗಳೂ ಮಹಾಭೂಮಿಯಲ್ಲಿವೆ. ಅದರ ಮಧ್ಯೆ ಜಂಬೂದ್ವೀಪ. ಇದು 9 ಖಂಡಗಳಾಗಿ ವಿಭಜಿಸಲ್ಪಟ್ಟಿದೆ. ದಕ್ಷಿಣದಲ್ಲಿರುವುದು ಭರತಖಂಡ. ಇದರಲ್ಲಿ ಭರತ ಪುರದಲ್ಲಿ ಸ್ವಯಂಭೂ ಮನು ಇರುವರು. ಅನೇಕ ಪುಣ್ಯ ಜೀವಿಗಳು, ಋಷಿಗಳೂ, ಸ್ವಯಂಭೂ ಮನು ಪಾಲನೆಯಲ್ಲಿರುವರು. ಇವರು ಲೋಕಗಳನ್ನು, ಧರ್ಮಾಧರ್ಮಗಳನ್ನೂ ಪಾಲಿಸುತ್ತಿರುವರು. ಮಹಾಭೂಮಿಯ ಮೇಲೆ ಇರುವ ಸಪ್ತ ದ್ವೀಪಗಳನ್ನು ಸುತ್ತಿ ಚಾರಾಚರ, ಚಕ್ರವಾಳ, ಲೋಕಾಲೋಕ ಪರ್ವತಗಳು ಸ್ವರ್ಗಲೋಕದವರೆಗೂ ವ್ಯಾಪಿಸಿರುವವು. ಇವು ಬೆಳಕನ್ನು ಪೂರ್ತಿಯಾಗಿ ತಡೆಯುವಂತಹ ಪದರಗಳು.

ಮಹಾಭೂಮಿಗೆ ಕೆಳಗೆ 7 ಅಧೋ ಲೋಕಗಳಿವೆ. ಇವನ್ನು ಸಪ್ತ ಪಾತಾಳವೆನ್ನುವುರು. ಅತಲ ಲೋಕ ಪಿಶಾಚಿಗಳ ವಾಸ ಸ್ಥಾನ. ವಿತಲ ಲೋಕದ ಅಲಕಾಪುರಿಯಲ್ಲಿ ಕುಬೇರನಿರುವುರು. ಯೋಗಿನೀ ಪುರದಲ್ಲಿ ರಾಕ್ಷಸರ ಜೊತೆ ಮಯನಿರುವನು. ಸುತಲದಲ್ಲಿ ಬಲಿಚಕ್ರವರ್ತಿ ತನ್ನ ಪರಿಜನರಾದ ರಾಕ್ಷಸರ ಜೊತೆ ಇರುವನು. ವೈವಸ್ವತ ಪುರದಲ್ಲಿ ಯಮಧರ್ಮರಾಜನಿರುವನು. ಇಲ್ಲಿನ ನರಕ ಮುಂತಾದಲ್ಲಿ ಪಾಪಿಗಳು ಅವಸ್ಥೆ ಪಡುತ್ತಿರುವರು. ರಸಾತಲದ ಪುಣ್ಯಪುರ ನೈಋತಿಯ ಸ್ಥಾನ. ಇಲ್ಲಿ ಭೂತಾದಿ ವರ್ಗಗಳಿರುವವು. ತಲಾತಲದ ಧನಿಷ್ಠಾಪುರದೊಳು ಭೇತಾಳನಿರುವರು. ತಲಾತಲದ ಕೈಲಾಸಪುರದಲ್ಲಿ ರುದ್ರನಿರುವರು. ಮಹಾತಲ ಪಿತೃದೇವತೆಯ ಸ್ಥಾನ. ಪಾತಾಳದಲ್ಲಿ ಶ್ವೇತ ದ್ವೀಪ ವೈಕುಂಠವಿದೆ. ಇಲ್ಲಿ ನಾರಾಯಣನಿರುವನು. ಮೇರುವನ್ನು ಅಪ್ಪಿಕೊಂಡಿರುವ ಕೆಳ ಭಾಗದಲ್ಲಿ ಅನಂಗ ಜೀವುರು, ಪ್ರೇತ ಗಣಗಳು, ಯಾತನಾದೇಹಗಳು ಇರುವವು. ನಿರಾಲಂಬ ಸೂಚ್ಯಗ್ರ ಸ್ಥಾನವೆನ್ನುವುದರಲ್ಲಿ ಮಹಾಪಾತಕರಿರುವರು. ಭೋಜನಾನಂತರದ ಮಂತ್ರ 'ರೌರವೇ ಅಪುಣ್ಯ ನಿಲಯೇ ಪದ್ಮಾರ್ಬುದ ನಿವಾಸಿನಾಂ ಅರ್ಥಿನಾಂ ಉದಕಂ ದತ್ತಂ, ಅಕ್ಷಯ್ಯ ಮುಪತಿಷ್ಠತು' ಇವರಿಗಾಗಿಯೆ.

## ಲೋಕಗಳ ಹೆಸರುಗಳು, ಅವುಗಳ ವಿಸ್ತೀರ್ಣ ವಿಷಯ

ಭೂಲೋಕದಲ್ಲಿನ ಭೂಗೋಳ, ಮಹಾಭೂಮಿ ಬೇರೆ ಬೇರೆ ಎಂದು ಶುದ್ಧವಾಗಿ ತಿಳಿ. ಭೂಗೋಳ ಬಿಂದುವಿನ ಮೇಲ್ಭಾಗದಲ್ಲಿ ಶಿಖರ ಧೃವ ಸ್ಥಾನದವರೆಗೆ ಇರುವ ಪ್ರದೇಶದಲ್ಲಿ ಮೇರು ರೇಖೆಯಲ್ಲಿ ಪ್ರಕಾಶಿಸುವುದು ಸೂರ್ಯಲೋಕ. ಶ್ರೀ ಸೂರ್ಯ ದೇವತೆ ಇರುವ ಲೋಕ, ಸೂರ್ಯ ಗ್ರಹಮಂಡಲ ಅಲ್ಲವೇ ಅಲ್ಲ. ಇದೇ ರೀತಿ, ಚಂದ್ರ, ಅಂಗಾರಕ, ಬುಧ, ಗುರು, ಶುಕ್ರ, ಶನೈಶ್ಚರ, ರಾಶ್ಯಧಿ ದೇವತಾ, ನಕ್ಷತ್ರ ದೇವತಾ, ಸಪ್ತ ಋಷಿ ಮತ್ತು ಊರ್ಧ್ವ ಧ್ರುವ ಲೋಕಗಳಿವೆ. ಇವಲ್ಲದೇ ಇನ್ನೂ ಅನೇಕ ಅವಾಂತರ ಲೋಕಗಳೂ ಇವೆ.

ಭೂಮಧ್ಯೆ ಬಿಂದುವಿನಿಂದ ಸೂರ್ಯ ಲೋಕ ಲಕ್ಷ ಬ್ರಹ್ಮಾಂಡ ಯೋಜನೆಯಲ್ಲಿರುವುದು. ಇದು ಸೂರ್ಯ ಗ್ರಹಾದಿ ದೇವತೆಯಾದ ಸೂರ್ಯನಿರುವ ಲೋಕ. ಹಾಗೆಯೇ ಭೂಮಧ್ಯೆ ಬಿಂದುವಿನಿಂದ ಚಂದ್ರ ಲೋಕ 2 ಲಕ್ಷ, ಅಂಗಾರಕ ಲೋಕ 3 ಲಕ್ಷ, ಬುಧ ಲೋಕ 5 ಲಕ್ಷ, ಗುರು ಲೋಕ 7 ಲಕ್ಷ, ಶುಕ್ರ ಲೋಕ 9 ಲಕ್ಷ, ಶನೈಶ್ಚರ ಲೋಕ 11 ಲಕ್ಷ, ರಾಶ್ಯಧಿದೇವತಾ ಲೋಕ 12 ಲಕ್ಷ, ನಕ್ಷತ್ರದೇವತಾ ಲೋಕ 13 ಲಕ್ಷ, ಸಪ್ತರ್ಷಿ ಲೋಕ 14 ಲಕ್ಷ ಮತ್ತು ಧ್ರುವ ಲೋಕ 15 ಲಕ್ಷಗಳ ಬ್ರಹ್ಮಾಂಡ ಯೋಜನೆಗಳಲ್ಲಿರುವವು. ಇದೇ ರೀತಿ ಭೂಮಧ್ಯೆ ಬಿಂದುವಿನಿಂದ ಬೇರೆಬೇರೆಯಾದ ದೂರಗಳಲ್ಲಿ ಸ್ವರ್ಗಲೋಕ, ಮಹರ್ಲೋಕ, ಜನಲೋಕ, ತಪೋಲೋಕ ಮತ್ತು ಸತ್ಯಲೋಕಗಳು ಇರುವವು. ಭೂಮಧ್ಯೆ ಬಿಂದುವಿನಿಂದ ಬ್ರಹ್ಮಾಂಡವನ್ನು ಸುತ್ತಿದ ಗೋಡೆ, ಅಂದರೇ ಅಂತಭಿತ್ತಿ ತನಕಾ 24 ಕೋಟಿ 50 ಲಕ್ಷ ಬ್ರಹ್ಮಾಂಡ ಯೋಜನೆಗಳ ದೂರವಿದೆ. ಭೂಮಧ್ಯೆ ಬಿಂದುವಿನಿಂದ ಅಂಡಭಿತ್ತಿ ಆಚೆಗೆ 25 ಕೋಟಿ 50 ಲಕ್ಷಗಳ ಬ್ರಹ್ಮಾಂಡ ಯೋಜನೆಗಳ ದೂರವಿದೆ. ಭೂಲೋಕ, ಭುವರ್ಲೋಕ, ಸುವರ್ಲೋಕಗಳು ಪ್ರಳಯ ಕಾಲದಲ್ಲಿ ನಾಶವಾಗುವೆವು. ಸುವರ್ಲೋಕಕ್ಕೆ ಮೇಲೆ, ಮಹರ್ಲೋಕ ಸ್ವಲ್ಪ ನಾಶವಾಗಿ ಸ್ವಲ್ಪ ಉಳಿದಿದೆ. ಅದರ ಮೇಲಿರುವ ಜನಲೋಕ, ತಪೋಲೋಕ, ಸತ್ಯಲೋಕಗಳು, ಬ್ರಹ್ಮಜೀವಿತಾಂತವಾದರೂ ನಶಿಸವು. ಸ್ವರ್ಗವೆಂದರೇ ಸುವರ್ಲೋಕ, ಮಹರ್ಲೋಕ, ಜನಲೋಕ, ತಪೋಲೋಕ, ಸತ್ಯಲೋಕಗಳು ಮತ್ತು ಅಂಡಭಿತ್ತಿವರೆಗೂ.

## ದತ್ತ ಅಂದರೇ ಯಾರು?

**ನರಸಾವಧಾನಿ ತಾತ! ಶ್ರೀದತ್ತತತ್ತ್ವ ನಿನಗೆ ಅನುಭವಕ್ಕೆ ಬರಬೇಕೆಂದರೇ ಕೆಲವು ಲಕ್ಷ ಜನುಮ ತಾಳಬೇಕು. ಕೋಟಿಗಟ್ಟಲೇ ಬ್ರಹ್ಮಾಂಡಗಳನ್ನು ಆವರಿಸಿಕೊಂಡಿದ್ದು ಅದನ್ನೂ ಮೀರಿದ ಒಂದೇ ಒಂದು ತೇಜೋಮಯರಾಶಿಯೇ ದತ್ತ ಎಂದು ತಿಳಿ. ಆ ದತ್ತನೇ ನಿನ್ನ ಮುಂದೇ ಇರುವ ಶ್ರೀಪಾದ ಶ್ರೀವಲ್ಲಭ ಎಂದೂ ತಿಳಿ.**

ಶ್ರೀಚರಣರ ಹಿತಬೋಧೆಯನ್ನು ಕೇಳಿದ ನರಸಾವಧಾನಿ, ಅವರ ಪತ್ನಿ ಆಶ್ಚರ್ಯ ಹೊಂದಿದರು. ಒಂದು ವರ್ಷದ ಈ ಕೂಸು ಇಷ್ಟು ದೊಡ್ಡ ವಿಷಯಗಳನ್ನು ದೃಢವಾಗಿ ಹೇಳುವುದು, ತಾನೇ ಸಾಕ್ಷಾತ್ ದತ್ತನೆಂಬುವುದು ನರಸಾವಧಾನಿ ದಂಪತಿಗಳಿಗೆ ಅಳು ತಂದಿತು. ಆ ದಿವ್ಯ ಕೂಸು ಶ್ರೀಚರಣಗಳನ್ನು ಮುಟ್ಟಲು ಬಯಸಿದರು. ಅದಕ್ಕೆ ಶ್ರೀವಲ್ಲಭರು ಒಪ್ಪಲಿಲ್ಲ. ಆ ದಂಪತಿಗಳು ನಿಶ್ಚೇಷ್ಟರಾದರು.

ಶ್ರೀಪಾದರು, **"ನಾನು ದತ್ತನು, ಕೋಟಿಗಟ್ಟಲೆ ಬ್ರಹ್ಮಾಂಡವನ್ನು ಆಕ್ರಮಿಸಿದ ಏಕೈಕ ತತ್ತ್ವ, ದಿಕ್ಕುಗಳನ್ನೇ ವಸ್ತ್ರಗಳಾಗಿ ಪಡೆದವನು, ದಿಗಂಬರನು. ಯಾರೇ ಆಗಲಿ ತ್ರಿಕರಣ ಶುದ್ಧಿಯಿಂದಾ 'ದತ್ತ ದಿಗಂಬರ! ಶ್ರೀಪಾದವಲ್ಲಭ ದಿಗಂಬರ! ನೃಸಿಂಹ ಸರಸ್ವತಿ ದಿಗಂಬರಾ!' ಎಂದು ಕೀರ್ತಿಸುವೆರೋ ಅಲ್ಲಿ ಸೂಕ್ಷ್ಮ ರೂಪದಲ್ಲಿರುವೆನು.** ನನ್ನ ಮಾತಾಮಹರಾದ ಶ್ರೀ ಬಾಪನಾರ್ಯರು, ಪರದೇಶದಿಂದ ಬಂದು ಪಾದಗಯಾ ಕ್ಷೇತ್ರದೊಳು, ಶ್ರಾದ್ಧಕರ್ಮ ಮಾಡುವವರಿಗೆ ಉಚಿತ ಊಟ, ವಸತಿ ಅನುಕೂಲ ಮಾಡಿಕೊಡುತ್ತಿರಲೂ 'ನಿನ್ನ ಸ್ವಯಂಭೂ ದತ್ತನೆಲ್ಲಿ? ಅದೃಶ್ಯನಾದನಲ್ಲವೆ?' ಎಂದು ಆಕ್ಷೇಪಿಸಿದೆ. ಆ ದತ್ತನು ನಾನೇ! **ನಾನು ಹುಟ್ಟಿದ ಈ ಪವಿತ್ರ ಮನೆಯಲ್ಲಿ ವಾಸಿಸುವವರು ತಪ್ಪದೇ ಪವಿತ್ರರಾಗುವರು. ಅವರ ಪಿತೃದೇವರಿಗೆ ಪುಣ್ಯಲೋಕ ಪ್ರಾಪ್ತಿಸುವುದು.** ಜೀವಿಗಳನ್ನೇ ಅಲ್ಲ, ನಿರ್ಜೀವರ ಯೋಗಕ್ಷೇಮ ಸಹಾ ನೋಡಬೇಕಾದ ಪ್ರಭು ನಾನು. ನನಗೆ ಸಾವು, ಹುಟ್ಟುವಿಕೆ ಎರಡೂ ಸಮಾನವೇ! ಆದರೂ

ಸ್ವಯಂಭೂ ದತ್ತನನ್ನು ಆರಾಧಿಸಿದರ ಫಲ ಇದಾ ಎಂದು ಚಿಂತಿಸುತ್ತಿದ್ದೀಯಾ, ನಿನ್ನ ಮೇಲೆ ಬಿದ್ದ ಅಪವಾದ ಹೋಗಲಿಕ್ಕೆ ಸ್ವಯಂಭೂ ದತ್ತ ಸದ್ಯದಲ್ಲೇ ಕಾಣಿಸಿಕೊಳ್ಳುವರು. ಪ್ರತಿಷ್ಠೆ ಸಹಾ ಆಗುವುದು. ನಿನ್ನ ಆಯುಸ್ಸನ್ನು ಆಶೀರ್ವಾದಿಸಿದ್ದೇನೆ. ದತ್ತ ಧ್ಯಾನದಲ್ಲಿರು, ಬರುವ ಜನುಮದೊಳು ಕಟಾಕ್ಷಿಸುವೆನೆಂದು ಅಭಯ ಕೊಡುತ್ತಿದ್ದೇನೆ. ಈ ಜನುಮದಲ್ಲಿ ನನ್ನ ಪಾದುಕಾ ಸ್ಪರ್ಶೆ ಮಹಾಪುಣ್ಯ ಇಲ್ಲವೆಂದರೇ ಇಲ್ಲ, ಕೋಟಿಗಟ್ಟಲೆ ಬ್ರಹಾಂಡವನ್ನು ಸೃಜಿಸಿ, ರಕ್ಷಿಸಿ, ಲಯ ಮಾಡುವ ಏಕೈಕ ಪ್ರಭುವಾದ ನಾನು, ನನ್ನ ವರದ ಹಸ್ತದಿಂದ ನಿನಗೆ ಆಶೀರ್ವದಿಸುತ್ತಿದ್ದೇನೆ'' ಎಂದು ನುಡಿದರು. ದೊಡ್ಡ ಭಯಂಕರ ಶಬ್ದದಿಂದ ಶ್ರೀಚರಣರ ಶರೀರದ ಅಣು ಪರಮಾಣು ಸೇರಲು, ಶ್ರೀಪಾದರು ಅದೃಶ್ಯರಾದರು.

ಮಗು, ಶಂಕರ ಭಟ್ಟಾ! ಶ್ರೀಪಾದರು ಸ್ವಯಂ ಅವರ ನಾಮದ ಕೊನೆಯಲ್ಲಿ ದಿಗಂಬರ ನಾಮ ಸೇರಿಸಿ, ಜಪಿಸಿದವರ ಮರ್ಮವನ್ನು ಈ ರೀತಿ ತಿಳಿಸಿದರು. ಅವರು ಸರ್ವವ್ಯಾಪಿ. ನಿರಾಕಾರವಾದ ಆ ತತ್ತ್ವ ಸಾಕಾರವಾಗಿ ಹೇಗೆ ಆವಿರ್ಭವಿಸುವುದೋ ನಮ್ಮ ಊಹೆಗೆ ಸಿಗದಂತಹ ವಿಷಯ. ಕೂಸಾಗಿ ಕಪಟ ವೇಷದಲ್ಲಿ ಕಾಣಿಸಿಕೊಂಡ ಜಗತ್ಪ್ರಭುವು, ಚಿಕ್ಕಂದಿನಿಂದಲೇ ಮಾಡುವ ಲೀಲೆಗಳಿಗೆ ಅಂತ್ಯವೆಲ್ಲಿ?



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

# ಅಧ್ಯಾಯ - 8

# ದತ್ತಾವತಾರಗಳ ವರ್ಣನೆ

## ಬ್ರಹ್ಮಜ್ಞಾನಕ್ಕೆ ತಪಿಸುವರೆಲ್ಲಾ ಬ್ರಾಹ್ಮಣರೇ

ಮಾರನೇ ದಿನ ತಿರುಮಲದಾಸರು ಅನುಷ್ಠಾನ ಪೂರ್ತಿಮಾಡಿಕೊಂಡು ಹೀಗೆ ಹೇಳಿದರು, ''ಮಗೂ, ಶಂಕರ ಭಟ್ಟು! ಆತ್ಮ ಸಾಕ್ಷಾತ್ಕಾರ ಸಮಯ, 16 ಕಲೆಗಳೂ ಅದರದರ ಭೂತಗಳಲ್ಲಿ ಸೇರುವವು. ತತ್ ದೇವತಾಶಕ್ತಿಗಳೂ, ಮೂಲಭೂತವಾದ ಅವರ ಚೈತನ್ಯದಲ್ಲಿ ಸೇರಿಬಿಡುವುದು. ಆತ್ಮಜ್ಞಾನ, ಕರ್ಮ ಎಲ್ಲವೂ ಬ್ರಹ್ಮ ಸ್ವರೂಪದಲ್ಲಿ ಐಕ್ಯವಾಗುವವು. ಅಂತಹ ಬ್ರಹ್ಮ ಜ್ಞಾನಕ್ಕಾಗಿ ಪರಿತಪಿಸುವವನೇ ಬ್ರಾಹ್ಮಣನು. 'ಪ್ರಾಣ, ವಿಶ್ವಾಸ, ಆಕಾಶ, ವಾಯು, ಅಗ್ನಿ, ನೀರು, ಭೂಮಿ, ಇಂದ್ರಿಯಗಳು, ಮನಸ್ಸು, ಅನ್ನ, ಜಲ, ಅಲೋಚನೆ, ಮಂತ್ರಗಳು, ಕರ್ಮಗಳು, ಲೋಕಗಳು, ಲೋಕದ ವಿಧವಿಧವಾದ ನಾಮಗಳು' ಎಂಬುವುದನ್ನು 16 ಕಲೆಗಳು ಎನ್ನುವರು. ಶ್ರೀಪಾದ ಶ್ರೀವಲ್ಲಭರು ಷೋಡಷಕಲಾ ಪರಿಪೂರ್ಣ ಪರಬ್ರಹ್ಮಾವತಾರ.

## ಆಹಾರವೇ ಮನಸ್ಸಾಗುವುದು. ಸಾತ್ವಿಕ ಆಹಾರದಿಂದ ಮನೋನೈರ್ಮಲ್ಯ ಆಗುವುದು

ಬ್ರಹ್ಮ ಮೊದಲಿಗೆ ಪ್ರಾಣ ಸೃಷ್ಟಿಸಿದರು. ಪ್ರಾಣವೆಂದರೆ ವಿಶ್ವದ ಸಮಸ್ತ ಪ್ರಾಣ. ಸೂಕ್ಷ್ಮಾತ್ಮ ಅರಣ್ಯ ಗರ್ಭನಾಮಗಳಿಂದ ಇದು ಕರೆಯಲ್ಪಡುತ್ತಿದೆ. ಸೃಷ್ಟಿಕರ್ತನಿಗೆ ಸಹ ಹಿರಣ್ಯಗರ್ಭವೆಂಬ ನಾಮವಿದೆ. ಮಾನವನ ಭೌತಿಕ, ಮಾನಸಿಕ, ಜ್ಞಾನ ಸಂಬಂಧವಾದ ಮೂರ್ತಿತ್ವಗಳಲ್ಲಿ ಸೃಷ್ಟಿ ಪ್ರೇರಣೆಗೆ ಪ್ರಾಣವೆಂದು ಹೆಸರು. ಪ್ರಾಣಮಯ ಕೋಶವಾದ ಜೀವಧಾತು ಶರೀರಕ್ಕೆ ಶಕ್ತಿ ಶರೀರವೆಂಬ ಹೆಸರು. ಪ್ರಾಣಮಯ ಚೈತನ್ಯವನ್ನು ಸರಿಮಾಡುವುದರಿಂದ, ಭೌತಿಕ ಸಂಬಂಧ ಬಾಧೆಗಳನ್ನು ಹೋಗಿಸಬಹುದು. ಮಾನವ ರೋಗಿ ಆಗುವುದರ ಮುನ್ನ ಪ್ರಾಣಮಯ ಶರೀರ, ರೋಗಿ ಆಗುವುದು. ನಂತರವೇ ಸ್ಥೂಲ ಶರೀರ ರೋಗಿ ಆಗುವುದು. ಸೃಷ್ಟಿ ಪ್ರೇರಣೆಯಲ್ಲಿ ವಿಶ್ವಾಸ ಆದ ನಂತರವೇ ಪಂಚ ಭೂತಗಳು ಆಗಿವೆ. ಪಂಚ ಭೂತಗಳ ಗುಣ ನೋಡಲು, ಪಂಚೇಂದ್ರಿಯ ಹುಟ್ಟಿವೆ. ಇವುಗಳನ್ನು ಒಂದುಗೂಡಿಸಿ ಒಂದೇ ಸಮನೆ ಕೆಲಸಗಳನ್ನು ನಡೆಸಲು ಮನಸ್ಸು ನಿಂತಿದೆ. ಮಾನವ ಆಹಾರ ವಿಷಯಗಳಲ್ಲಿ ಜಾಗರೂಕತೆ ವಹಿಸಬೇಕು. ಆಹಾರದ ಸೂಕ್ಷ್ಮಾತಿ ಸೂಕ್ಷ್ಮಾಂಶಗಳಿಂದ ಮನಸ್ಸು, ಅದನ್ನು ಆಹಾರದಿಂದ ಬಲಪಡಿಸುವುದರಿಂದ ಆಲೋಚನೆ ಆಗುತ್ತಿದೆ. ಈ ಆಲೋಚನೆಯನ್ನು ಕ್ರಮಬದ್ಧಿಸಿ ನಿಯಂತ್ರಿಸಿದರೆ ಹೋರಡುವುದೇ ಮಂತ್ರ. ಯಜ್ಞಯಾಗಾದಿಗಳನ್ನು ಶಿಸ್ತಿನಿಂದ ಮಾಡುತ್ತಾ, ತತ್ ಕರ್ಮಕಲಾಪಗಳಲ್ಲಿ ಪದ್ದತಿಯಿಂದ ಮಂತ್ರಗಳನ್ನು ಹೇಳಿದರೇ ಅದು ಕರ್ಮ ಆಗುವುದು. ಕರ್ಮಗಳು ಅನುಸರಿಸಿಯೇ ಪ್ರಪಂಚ. ನಾಮ ರೂಪಗಳಿಲ್ಲದೇ ಪ್ರಪಂಚವಿಲ್ಲ. ಹೀಗೆ ದುಃಖ ಬಂಧನಗಳದಿಂದ ಕೂಡಿದ ಕೈಬೇಡಿಗಳು 16 ಬಣ್ಣಗಳಿಂದ ತಯಾರಾಗಿವೆ. **ನಮ್ಮಲ್ಲಿನ ಒಂದೊಂದು ಇಂದ್ರಿಯವೂ ಒಂದೊಂದು ದೇವತೆಯಿಂದೆ ಪ್ರಭಾವಿತವಾಗುವುದು. ಸಮಾಧಿ ಸ್ಥಿತಿಯಲ್ಲಿರುವ ಯೋಗಿಗೆ ಆತ್ಮ ಸಾಕ್ಷಾತ್ಕಾರ ಆದಾಗ, 16 ಕಲೆಗಳೂ ಅವರವರ ಭೂತಗಳಲ್ಲಿ ಲೀನವಾಗುವವು.** ಯೋಗಿಯ ಭೌತಿಕ ಶರೀರದ ಇಂದ್ರಿಯಗಳಲ್ಲಿನ ಶಕ್ತಿಗಳು, ವಿಶ್ವಾಂತರಾಳ ಒಳಗಿನ ಭೂತಗಳಲ್ಲಿ ಲೀನವಾಗುವವು. ಕರ್ಮೇಂದ್ರಿಯಗಳು, ಜ್ಞಾನೇಂದ್ರಿಯಗಳು ಹೊಂದಿರುವ ಮಾನವ, ಕರ್ಮಗಳನ್ನು ಮಾಡದೇ ಇರಲಾರ.

## ಅಹಂ ನಶಿಸದೇ ಮೋಕ್ಷ ಲಭ್ಯವಿಲ್ಲ

ಮನುಷ್ಯನ ಅಹಂಪ್ರೇರಣೆಯಿಂದಲೇ ಕರ್ಮಗಳು ಆಚರಿಸಲ್ಪಡುವವು. ಅಹಂ ಎನ್ನುವುದು ಮನಸ್ಸು, ಬುದ್ಧಿಗಳ ನಿಯಮ ನಿಬಂಧನೆಗಳಿಂದ ನಿಬದ್ಧಿತವಾದ ಚೈತನ್ಯ ಜ್ಯೋತಿ. ಆತ್ಮಸಾಕ್ಷಾತ್ಕಾರ ಹೊಂದಿದ ಯೋಗಿಗೆ, ಹಿಂದಿನ ಜನುಮಗಳ ಕರ್ಮಫಲಗಳು ಏನೂ ಉಳಿಯವು. ಅಹಂ ಪೂರ್ತಿಯಾಗಿ ನಶಿಸದೇ ಆತ್ಮಸಾಕ್ಷಾತ್ಕಾರ ಆಗುವುದಿಲ್ಲ. ಹಾಗಾಗಿ, ಯೋಗಿಗೆ ಆತ್ಮಸಾಕ್ಷಾತ್ಕಾರವಾದಾಗ ಶ್ರುತಿ ಕರ್ಮಗಳು, ಅದರ ಫಲ, ಅಹಂಗೆ ಕೇಂದ್ರ. ಅದರ ಮಾಯಾಜಾಲಗಳೆಲ್ಲವೂ ಶಾಶ್ವತನಾದ ಪರಮಾತ್ಮನಲ್ಲಿ ಲೀನವಾಗುವವು. ಯೋಗಿ ಪರಮಾತ್ಮನಲ್ಲಿ ಲೀನವಾಗಿ, ವ್ಯಕ್ತಿತ್ವವನ್ನು ಬಿಟ್ಟವನಾಗುವನು. ಪರಮಾತ್ಮ ವ್ಯಕ್ತಿತ್ವ ಉಳ್ಳವನಾಗಿ, ಶಕ್ತಿ ಸ್ವರೂಪನಾಗಿರುವನು. ಕರ್ಮಗಳು, ಅದರ ಫಲಗಳು ನಾಶವಾಗಿ ಯೋಗಿ ಸಿದ್ಧಾವಸ್ಥೆಯನ್ನು ಹೊಂದುತ್ತಾನೆ. ಅವನ ಸ್ಥೂಲ ದೇಹ ಕರ್ಮ ಫಲಗಳನ್ನು ಅನುಭವಿಸುತ್ತಿದ್ದರೂ, ಯೋಗಿಗೆ ಸ್ಥೂಲ ದೇಹ ಪ್ರಜ್ಞೆ ಇಲ್ಲದಾಗ ಮುಕ್ತಾವಸ್ಥೆಯಲ್ಲೇ ಇರುವನು. ಪರಮಾತ್ಮ ಸಿದ್ಧಾವಸ್ಥೆಯಲ್ಲಿದ್ದರೂ, ಯೋಗಿ ಮೂಲಕ ಅವನ ದಿವ್ಯಲೀಲೆಗಳನ್ನು ಪ್ರಕಟಿಸಬಹುದು. **ಯೋಗಿ ಈ ಶಕ್ತಿ ಸಾಮಾರ್ಥ್ಯ ತನಗೇ ಇರುವುದೆಂದು ಭ್ರಮಿಸಲು ಪರಮಾತ್ಮ ಅದನ್ನು ನಿರ್ಮೂಲಿಸಿ ಗರ್ವಭಂಗ ಮಾಡುವನು. ಯೋಗಿಯನ್ನು ತನ್ನ ಕೈಯಲ್ಲಿನ ಉಳಿಯಾಗಿ ಉಪಯೋಗಿಸಲು ಯೋಗಿಯ ಅಹಂಕಾರವು ಪರಮಾತ್ಮರಲ್ಲಿ ಲಯವಾಗಿ ಹೋಗಬೇಕು.**

ಶ್ರೀ ಬಾಪನಾರ್ಯರು ಶ್ರೀಶೈಲ ಕ್ಷೇತ್ರದಲ್ಲಿನ ಮಲ್ಲಿಕಾರ್ಜುನ ಲಿಂಗದೊಳಗೆ ಗೋಕರ್ಣದಲ್ಲಿನ ಮಹಾಬಲೇಶ್ವರ ಲಿಂಗದೊಳಗೆ ಮತ್ತು ಇತರ ದಿವ್ಯ ಸ್ಥಳದೊಳಗೆ ಸೂರ್ಯಮಂಡಲದಿಂದ ಶಕ್ತಿಪಾತ ಮಾಡಿದ್ದಾರೆ. ಸ್ವಯಂಭೂ ದತ್ತನ ಅರ್ಚನಾಮೂರ್ತಿಯೊಳಗೆ ಸಹಾ ಶಕ್ತಿಪಾತ ನಡೆದಿದೆ. ಅಗ್ನಿ ಸಂಬಂಧವಾದ ಈ ಶಕ್ತಿಗೆ ಶಾಂತಿ ನಡೆಸಬೇಕು. ಇಲ್ಲದಿದ್ದಲ್ಲಿ ಅರ್ಚನಾಮೂರ್ತಿಯ ತೀಕ್ಷಣತೆಗೆ ಅರ್ಚಕರೂ ಸೇರಿ ಅರ್ಚನೆ ನಡೆಸುವವರೂ ಶಿಕ್ಷಿಸಲ್ಪಡುವರು. ಕೆಟ್ಟ ಫಲ ಪ್ರಾಪ್ತಿಯಾಗುವುದು. ಸ್ವಯಂಭೂ ದತ್ತರೊಳಗೆ ಸೂರ್ಯ ಮಂಡಲದಿಂದ ಶಕ್ತಿಪಾತ ನಡೆದ ವಿಷಯ ಅಂತರ್ಜ್ಞಾನವಿರುವ ಯೋಗಿಗಳು ಮಾತ್ರವೇ ಗ್ರಹಿಸಬಲ್ಲರು. ಶ್ರೀಶೈಲದಲ್ಲಿ ಶಕ್ತಿಪಾತ ಶ್ರೀಬಾಪನಾರ್ಯರ ಆಧ್ವರ್ಯದಲ್ಲಿ ಸಾವಿರಾರು ಜನ ಸಮ್ಮುಖದಲ್ಲಿ ನಡೆಯಿತು. ಸೂರ್ಯ ಮಂಡಲದಿಂದ ತೇಜಸ್ಸು ಹೊರಟು ಎಲ್ಲರೂ ನೋಡುತ್ತಿರಲು ಮಲ್ಲಿಕಾರ್ಜುನ ಲಿಂಗದಲ್ಲಿ ಲೀನವಾಯಿತು. ನಿಜಕ್ಕೂ ಶ್ರೀಪಾದ ಶ್ರೀವಲ್ಲಭ ಅವತಾರಕ್ಕೂ ಈ ಶಕ್ತಿಪಾತಕ್ಕೂ ದೊಡ್ಡ ಅಂತರ್ಗತ ದೈವ ರಹಸ್ಯ ಇದೆ. ಅದು ಮಹಾಯೋಗಿಗಳಿಗೆ ಮಾತ್ರ ತಿಳಿಯಬಹುದಾದಂತಹ ವಿಷಯ ಮತ್ತು ತಿಳಿಯತಕ್ಕಂತಹ ವಿಷಯ. ಶ್ರೀಶೈಲದಲ್ಲಿ ಶಾಂತಿ ನೆಲೆಯಿತು. ಸಾವಿರಾರು ಮಂದಿಗೆ ಅನ್ನದಾನ ನಡೆಯಲೂ ಜಠರಾಗ್ನಿ ಶಾಂತಿ ಆಯಿತು. ಶಕ್ತಿ ಉಗ್ರತೆಯನ್ನು ಬಿಟ್ಟು ಶಾಂತಿ ಬೆಳೆಯಲೂ, ಎಲ್ಲಾ ಶುಭಗಳೂ ಪ್ರಶಾಂತ ಸ್ಥಿತಿಯಲ್ಲಿ ನಡೆಯುತ್ತಿರುವವು.

ಆದರೆ, ಪೀಠಾಪುರದಲ್ಲಿನ ಶ್ರೀ ಸ್ವಯಂಭೂ ದತ್ತರಂದು ಆದ ಶಕ್ತಿಪಾತಕ್ಕೆ ಕಣ್ಣಿಗೆ ಕಾಣುವ ಸಾಕ್ಷಿಗಳಿಲ್ಲ, ಆದ್ದರಿಂದ ಅಲ್ಲಿ ಶಾಂತಿ ಕಾರ್ಯಗಳೂ ನಡೆಯಲಿಲ್ಲ. ಶ್ರೀ ಬಾಪನಾರ್ಯರು ಶಾಂತಿ ನಡೆಯಬೇಕೆಂದು ಅನ್ನದಾನ ಸೂಚಿಸಿದರೂ ಅಲ್ಲಿನ ಪಂಡಿತರು ಕೆಟ್ಟ ಭಾವನೆಗಳಿಂದ ಅದನ್ನು ತಳ್ಳಿಹಾಕಿದರು.

## ಶ್ರೀಪಾದರು ಷೋಡಷಕಲಾ ಪ್ರಪೂರ್ಣರು

ಕಾಲ ನಡೆಯುತಿತ್ತು. ಶ್ರೀಪಾದ ಶ್ರೀವಲ್ಲಭರು 2ನೇ ವರುಷಕ್ಕೆ ಪ್ರವೇಶಿಸಿದರು. ಶ್ರೀವಲ್ಲಭರ ಬಹಳಷ್ಟು ಲೀಲೆಗಳ ಮೂಲಕ ಅವರದ್ದು ಷೋಡಶಕಲಾ ಪ್ರಪೂರ್ಣ ಮಹಾಯುಗಾವತಾರವೆಂದು ತಿಳಿಸುತ್ತಿದ್ದು, ಅವರ 16ನೇ ವಯಸ್ಸಿನಲ್ಲಿ ಪೀಠಿಕಾಪುರ ಬಿಟ್ಟರು. ನಂತರ 14 ವರುಷ ಕುರುವಪುರ ಮತ್ತಿತರೆ ಪ್ರಾಂತಗಳು ಸಂಚರಿಸುತ್ತಿದ್ದರೂ ಅವರ ವಯಸ್ಸು ಮಾತ್ರ 16ರಲ್ಲೇ ನಿಂತಿತ್ತು.

## ಶ್ರೀದತ್ತಾತ್ರೇಯರ ಷೋಡಷಾವತಾರ ನಾಮಗಳು

16ನೇ ಅಂಕೆಗೆ ಮತ್ತೊಂದು ಪ್ರಾಮುಖ್ಯತೆ ಇದೆ. ಶ್ರೀದತ್ತರು ಕಳೆದ ಯುಗದಲ್ಲಿ 16 ರೂಪಗಳಲ್ಲಿ ದರ್ಶನ ಕೊಟ್ಟಿದ್ದರು. ಅವರು (1) ಯೋಗಿರಾಜ (2) ಅತ್ರಿವರದ (3) ದಿಗಂಬರಾವಧೂತ ಶ್ರೀ ದತ್ತಾತ್ರೇಯರು (4) ಕಾಲಾಗ್ನಿ ಶಮನರು (5) ಯೋಗಿಜನ ವಲ್ಲಭ (6) ಲೀಲಾವಿಶ್ವಂಭರ (7) ಸಿದ್ಧರಾಜು (8) ಜ್ಞಾನ ಸಾಗರ (9) ವಿಶ್ವಂಭರಾವಧೂತ (10) ಮಾಯಾಮುಕ್ತಾವಧೂತ (11) ಆದಿಗುರು (12) ಸಂಸ್ಕಾರ ಹೀನ ಶಿವಸ್ವರೂಪ (13) ದೇವದೇವ (14) ದಿಗಂಬರ (15) ದತ್ತಾವಧೂತ (16) ಶ್ಯಾಮ ಕಮಲಲೋಚನ.

**ಶ್ರೀದತ್ತ ಪ್ರಭುಗಳು ಭೋಗ ಮೋಕ್ಷಪ್ರದರು. ಅವರನ್ನು ಆರಾಧಿಸಲು ಅವರ ಪಾದುಕಾರಾಧನವೇ ಸಾಕು. ಅವರ ಪಾದುಕೆಗಳನ್ನು ನಾಲ್ಕು ವೇದಗಳು, ನಾಲ್ಕು ನಾಯಿಗಳ ರೂಪತಾಳಿ ನೆಕ್ಕುತ್ತಿವೆ. ಎಲ್ಲಾ ಅಪವಿತ್ರತೆಯನ್ನೂ ಹೋಗಲಾಡಿಸಬಲ್ಲ ವೇದಗಳೇ ಅಪವಿತ್ರ ನಾಯಿಗಳಾಗಿ ಅವರ ಪಾದಗಳ ಹತ್ತಿರಬಿದ್ದಿರಲೂ, ಅವರ ಪವಿತ್ರತೆಯನ್ನು ಊಹಿಸಲೂ ಮಾನವರಿಗೇ ಅಲ್ಲ ದೇವತೆಗಳಿಗೂ, ಸಪ್ತರ್ಷಿಗಳಿಗೂ ಸಾಧ್ಯವಿಲ್ಲ.**

ಹಿಂದೆ ವಾಮನಾವತಾರ ಸಮಯದಲ್ಲಿ ಅವರಿಗೆ ಸಮಕಾಲೀನರಾಗಿ ವಾಮದೇವ ಮಹರ್ಷಿ ಎಂಬ ಋಷಿ ಇದ್ದರು. ಅವರ ಜನನ ಸಮಯದಲ್ಲಿ ಮಾತೃ ಗರ್ಭದಿಂದ ತಲೆ ಒಮ್ಮೆ ಈಚೆಗೆ ಬಂದು ಸುತ್ತುಮುತ್ತಲನ್ನು ನೋಡಿ ಪುನಃಗರ್ಭಸ್ಥವಾಯಿತು. ಆಗ ದೇವತೆಗಳು, ಋಷಿಗಳು ಪ್ರಾರ್ಥಿಸಲೂ ಜನುಮವೆತ್ತಿದ್ದರು, ಆಜನ್ಮ ಬ್ರಹ್ಮಜ್ಞಾನರು.

ಶ್ರೀಪಾದರ ಜನನದಲ್ಲೂ ಹಾಗೇ ನಡೆಯಿತು, ಎರಡು ಸಲ ಹುಟ್ಟಿದ್ದರಿಂದ ಅವರು ಆಜನ್ಮ ದ್ವಿಜರು. ಆಜನ್ಮ ಜ್ಞಾನ ಸಂಪನ್ನರು. ಅವರು ಸಂಪೂರ್ಣವಾದ ಅಖಂಡ, ಅನಂತ, ಅದ್ವೈತ ಸಚ್ಚಿದಾನಂದದಿಂದ ಅವತರಿಸಿದರು. ಆದ್ದರಿಂದ ಈ ಅವತಾರದಲ್ಲಿ ಅವರಿಗೆ ಗುರುವೆಂಬ ವ್ಯಕ್ತಿಯೇ ಇರಲಿಲ್ಲ. **ಶ್ರೀಪಾದರು ಗಣೇಶ ಚತುರ್ಥಿಯ ದಿನ ಚಿತ್ತಾನಕ್ಷತ್ರ ತುಲಾರಾಶಿ ಸಿಂಹ ಲಗ್ನದಂದು ಜನಿಸಿದರು. ನಿಜಕ್ಕೂ ಅವರು ತ್ರಿಮೂರ್ತಿಗಳ ಸಂಯುಕ್ತವಲ್ಲದೇ, ಅವರಿಗೆ ಅತೀತವಾಗಿರುವ ಒಂದು ಭಿನ್ನ ತತ್ವ. ಆದ್ದರಿಂದ ಅವರು ತ್ರಿಮೂರ್ತಿಗಳಿಗೆ ವಿಭಿನ್ನವಾದ ನಾಲ್ಕನೆಯ ತತ್ವವೆಂದು ಸೂಚಿಸಲು ಚತುರ್ಥಿ ತಿಥಿಯಂದು ಜನುಮಿಸಿದರು. ಸೃಷ್ಟಿಯಲ್ಲಿನ ಪ್ರವೃತ್ತಿ ಗಣಗಳು, ನಿವೃತ್ತಿ ಗಣಗಳು ಎರಡಕ್ಕೂ ಅಧಿಪತಿಯಾದ ಗಣೇಶ ತತ್ತ್ವವೆಂದು ಸೂಚಿಸಲೂ ಗಣೇಶ ಚತುರ್ಥಿಯ ದಿನ ಹುಟ್ಟಿದರು. ಚಿತ್ತಾ ನಕ್ಷತ್ರಕ್ಕೆ ಅಧಿಪತಿ ಅಂಗಾರಕ. ಅಂಗಾರಕನನ್ನು ಮಂಗಳ ಗ್ರಹವೆಂದು ಸಹ ಕರೆಯುವರು. ಈ ಗ್ರಹ ಪಾಪಿ ಆದಲ್ಲಿ ಜೀವಿಗಳಿಗೆ ಬಹಳ ಅಮಂಗಳಗಳು ಬರುವವು. ಎಲ್ಲಾ ಅಮಂಗಳಗಳನ್ನೂ ಪರಿಹರಿಸಲು ಸರ್ವಶುಭಗಳು ಪ್ರಸಾದಿಸಲು ಅವರು ಚಿತ್ತಾನಕ್ಷತ್ರದಲ್ಲಿ**

ಜನ್ಮಿಸಿದರು. ಚಿತ್ತಾ ನಕ್ಷತ್ರದಲ್ಲಿ ಶ್ರೀಪಾದರನ್ನು ಪೂಜಿಸಿದರೆ, ವಿಶೇಷ ಫಲ ಲಭಿಸುವುದು. ಶ್ರೀಪಾದರು ಸಾಕ್ಷಾತ್ ಧರ್ಮಶಾಸ್ತ. ಹರಿಹರಾತ್ಮಜ ಅಯ್ಯಪ್ಪನೆಂದು ತಿಳಿಸಲು, ತುಲಾ ರಾಶಿಯಲ್ಲಿ ಜನುಮಿಸಿದರು. ಗ್ರಹಾಧಿಪತಿಯಾದ ಸೂರ್ಯನ ಸಿಂಹ ಲಗ್ನದಲ್ಲಿ ಜನುಮಿಸಿ ಅವರು ವಿಶ್ವಪ್ರಭುವೆಂದು, ದರ್ಬಾರು ಮಾಡಲು ಬಂದ ಚಕ್ರವರ್ತಿಯೆಂದೂ ತಿಳಿಸುತ್ತಿದ್ದಾರೆ. ಶ್ರೀಪಾದರಿಗೆ ತಿಳಿಯದ ಧರ್ಮ ಸೂಕ್ಷ್ಮಗಳು ಇಲ್ಲ. ಧರ್ಮ ಸಂದಿಗ್ಧ ಸ್ಥಿತಿಯಲ್ಲಿ ಅವರನ್ನು ಪ್ರಾರ್ಥಿಸಿದರೇ ಧರ್ಮಮಾರ್ಗ ಕಂಡುಬಿಡುವುದು.

ಶ್ರೀದತ್ತ ಪ್ರಭುಗಳಿಂದ ತ್ರಿಮೂರ್ತಿಯರು, ಅವರಿಂದ 3 ಕೋಟಿ ದೇವತೆಗಳು, ಅವರಿಂದ 33 ಕೋಟಿ ದೇವತೆಯರು ಬಂದರು. ಆದ್ದರಿಂದ ದತ್ತನಾಮ ಸ್ಮರಣೆ ಮಾಡಿದರೇನೇ ಎಲ್ಲಾ ದೇವತೆಗಳ ಸ್ಮರಣ ಫಲ ಸಿಗುವುದು. ಶ್ರೀದತ್ತರ ಬ್ರಹ್ಮ ಮುಖಕ್ಕೆ ಋಷಿ ಪೂಜೆ ಮಾಡಬೇಕು. ವಿಷ್ಣು ಮುಖಕ್ಕೆ ಶ್ರೀ ಸತ್ಯನಾರಾಯಣ ವ್ರತವನ್ನು, ವಿಷ್ಣು ಸಹಸ್ರ ನಾಮವನ್ನೂ ಮಾಡಬೇಕು. ರುದ್ರ ಮುಖಕ್ಕೆ ರುದ್ರಾಭಿಷೇಕ ಮಾಡಬೇಕು. ಶ್ರೀಗಳ ಬ್ರಹ್ಮ ಮುಖ ನಾಲಿಗೆಯಂದು ಶ್ರೀ ಸರಸ್ವತಿ ಇರುವಳು, ಮಧ್ಯ ಮುಖ ಎದೆ ಭಾಗದಲ್ಲಿ ಶ್ರೀಲಕ್ಷ್ಮೀ ಇರುವಳು. ಶಿವ ಮುಖ ಎಡ ಭಾಗದಲ್ಲಿ ಶ್ರೀಗೌರಿ ಇರುವಳು. ಸೃಷ್ಟಿಯ ಎಲ್ಲಾ ಸ್ತ್ರೀ ದೇವತಾ ಶಕ್ತಿಗಳೂ, ಶ್ರೀಪಾದರ ಎಡ ಭಾಗದಲ್ಲಿ ಮತ್ತು ಎಲ್ಲಾ ಪುರುಷ ಶಕ್ತಿಗಳು ಅವರ ಬಲ ಭಾಗದಲ್ಲಿರುವವು.

ತಿರುಪತಿಯಲ್ಲಿ 7 ಬೆಟ್ಟಗಳ ಒಡೆಯ ಶ್ರೀ ವೇಂಕಟೇಶ್ವರನು ಸಾಕ್ಷಾತ್ತು ದತ್ತ ಪ್ರಭುಗಳೇ! 'ವೇಂ' ಅಂದರೇ ಪಾಪಗಳನ್ನು 'ಕಟ' ಅಂದರೇ ಖಂಡಿಸುವನು, ಓಡಿಸುವನು. 'ವೇಂ'ಕಾರ ಅಮೃತ ಬೀಜ. 'ಕಟ' ಐಶ್ವರ್ಯ ಬೀಜ. ಆದ್ದರಿಂದ 'ವೇಂಕಟೇಶ್ವರ' ಎಂದರೇ ಅಮೃತ ಐಶ್ವರ್ಯ ಪ್ರಧಾತ ಮತ್ತು ಸಕಲ ಪಾಪ ಪರಿಹಾರಕನು ಎಂದು. ಇವರು ಮತ್ತು ಶ್ರೀಪಾದರು ಭಿನ್ನವಾಗದ ಮೂರ್ತಿಗಳು.

ಆಗ ನಾನು ಹೀಗೆಂದೆನು "ಸ್ವಾಮಿ, ತಿರುಮಲದಾಸರೇ! ವರ್ಣಾಶ್ರಮ ಧರ್ಮ ಪಾಲಿಸಬೇಕೆಂದು ಹಿರಿಯರ ಆದೇಶ. ಆದರೇ ಶ್ರೀಪಾದರು ಅದಕ್ಕೆ ವಿಭಿನ್ನವಾಗಿ ಹೇಳುತ್ತಿರುವರೆಂದು ನನ್ನ ಅನುಮಾನ. ದಯವಿಟ್ಟು ನನಗೆ ವಿವರಿಸಿ".

## ಬ್ರಾಹ್ಮಣ ಲಕ್ಷಣಗಳು

ಆಗ ತಿರುಮಲದಾಸರು "ಮಗೂ! ಬ್ರಾಹ್ಮಣ ಬ್ರಹ್ಮ ಜ್ಞಾನಾನ್ವೇಷಿಯಾಗಿ ಬದುಕಬೇಕು. ಆಗ ಮಾತ್ರವೇ ಆತ ಸದ್ಬ್ರಾಹ್ಮಣನಾಗುವನು. ತನ್ನ ಧರ್ಮಗಳನ್ನು ಬಿಟ್ಟು ದುರಾಚಾರನಾದಲ್ಲಿ ಆತ ದುಷ್ಟ ಬ್ರಾಹ್ಮಣನೇ ಸರಿ. ಆತನ ದುರಾಚಾರಗಳು ಹದ್ದುಮೀರಿದರೇ ಅಂದರೆ, ಗೋಹತ್ಯೆ, ಗೋಮಾಂಸ ತಿನ್ನುವುದು, ಪರಸ್ತ್ರೀ ವ್ಯಾಮೋಹ ಮುಂತಾದವಿದ್ದಲ್ಲಿ ಆತನಲ್ಲಿ ಬ್ರಾಹ್ಮಣತ್ವ ಕಿಂಚಿತ್ತೂ ಇಲ್ಲವೆಂದೇ ಅರ್ಥ! ಇದರಿಂದ ಅವನಲ್ಲಿನ ಬ್ರಾಹ್ಮಣ ತೇಜಸ್ಸು ಪೂರ್ತಿ ನಾಶ ಗೊಳ್ಳುವುದು. ಆತನ ಶರೀರದ ಜೀವಕಣಗಳು ಸಹಾ ಎಷ್ಟೋ ಬದಲಾವಣೆಗಳಿಗೆ ದಾರಿಕೊಟ್ಟು, ಅವನಲ್ಲಿ ಛಂಡಾಲತ್ವ ಬೆಳೆಯುವುದು. ಆಗ ಆತ ಹೆಸರಿಗೆ ಮಾತ್ರ ಬ್ರಾಹ್ಮಣ. ಕ್ಷತ್ರಿಯನು ಸಹಾ ಬ್ರಹ್ಮಜ್ಞಾನಾಪೇಕ್ಷಿಯಾಗಿ ತಪಸ್ಸಿನಿಂದ ಬ್ರಾಹ್ಮಣತ್ವವನ್ನು ಹೊಂದಬಹುದು. ಆಗ ಜನುಮ ಸಿದ್ಧವಾಗಿರುವಂತಹ ಶರೀರದ ಜೀವಕಣಗಳು ಬ್ರಾಹ್ಮಣತ್ವವನ್ನು ಹೊಂದುವವು. ಹೀಗೆ, ಬ್ರಾಹ್ಮಣತ್ವವನ್ನು ಹೊಂದಿದ ಕ್ಷತ್ರಿಯನು ವಿಶ್ವಾಮಿತ್ರ. ಶನೈಶ್ಚರ 3 ರಾಶಿಗಳಲ್ಲಿ ಪ್ರಯಾಣ ಮಾಡುವ 7½ ವರುಷಗಳ ಕಾಲದಲ್ಲಿ ಪ್ರತಿ ಮನುಷ್ಯನಿಗೂ ಶರೀರದಲ್ಲಿ ಜೀವಕಣಗಳ ಬದಲಾವಣೆ ಹೊಂದುವವು. ಹಳೆಯ ಕಣಗಳು ಕ್ಷೀಣಿಸಿ ಹೊಸವು ಸೃಷ್ಟಿಯಾಗುವವು. ಇದೆಲ್ಲಾ ಮನುಷ್ಯನ ಪ್ರಮೇಯವಿಲ್ಲದೇನೆ ಅವನಿಗೆ ತಿಳಿಯದೇ ನಡೆದು ಹೋಗುತ್ತಿರುವವು.

ಕ್ಷತ್ರಿಯನು ತನ್ನ ಕ್ಷೇತ್ರ ವೃತ್ತಿಯನ್ನು ಬಿಟ್ಟು, ಶಾಂತಿರಸ ಪ್ರಧಾನವಾದ ಕೃಷಿ, ಗೋಪೋಷಣೆ ವ್ಯಾಪಾರ ವ್ಯವಹಾರದಲ್ಲಿ ಪೂರ್ತಿಯಾಗಿ ಮಗ್ನನಾದಲ್ಲಿ, ಅವನಿಗೆ ಕ್ಷತ್ರಿಯತ್ವ ಇರುವುದಿಲ್ಲ. ಮನಸ್ಸು, ಬುದ್ಧಿ, ಶರೀರ, ಅನೇಕ ಬದಲಾವಣೆಗಳನ್ನು ಹೊಂದಿ, ವೈಶ್ಯರ ಪ್ರಬುದ್ಧಿಗಳು ಬಂದುಬಿಡುವವು. ಬ್ರಾಹ್ಮಣ ಕ್ಷಾತ್ರ ವೃತ್ತಿ ಮಾಡತೊಡಗಿದರೆ ಪರಶುರಾಮನಂತೆ ಆಗುವನು. ಹಿಂದೆ ದ್ರೋಣಾಚಾರ್ಯರು, ಕೃಪಾಚಾರ್ಯರು, ಜನ್ಮತಃ ಬ್ರಾಹ್ಮಣರಾದರೂ ಕ್ಷತ್ರಿಯ ವೃತ್ತಿ ಮಾಡಲಿಲ್ಲವೇ? ಕುಸುಮ ಶ್ರೇಷ್ಠಿ ವೈಶ್ಯನಾದರೂ, ಕ್ಷಾತ್ರ ವೃತ್ತಿ ಮಾಡಲಿಲ್ಲವೆ? ಜನ್ಮತಃ ಶೂದ್ರನಾದರೂ, ನಾನು ಶ್ರೀಪಾದರ ಅನುಗ್ರಹದಿಂದ ಬ್ರಹ್ಮಜ್ಞಾನ ಹೊಂದಲಿಲ್ಲವೆ? ಜನ್ಮತಃ ಶೂದ್ರನಾದವನು ಸಹಾ ನಿರಂತರ ಕೃಷಿಯಿಂದ ವೈಶ್ಯನಾಗಿಯೇ, ಕ್ಷತ್ರಿಯನಾಗಿಯೇ, ಬ್ರಾಹ್ಮಣನಾಗಿಯೇ ಆಗಬಹುದು. ಕೇವಲ ಒಂದು ಜಾತಿಯಲ್ಲಿ ಜನ್ಮಿಸಿದ ಮಾತ್ರಕ್ಕೆ ಶಿಕ್ಷೆ ಹಾಕದೇ ಇರಲು ಅಥವಾ ಶಿಕ್ಷೆ ಹಾಕುವದಾಗಲಿ ಯಮಧರ್ಮರಾಯರು ಮಾಡುವುದಿಲ್ಲ. ನಾವು ಮಾಡುವ ಶುಭಕಾರ್ಯಗಳ ಅನುಸಾರ ಫಲಿತಗಳು ಪ್ರಾಪ್ತವಾಗುತ್ತಿರುವವು. ಜನ್ಮತಃ ಶೂದ್ರನಾದ ನಾನು ಮರುಜನುಮದೊಳು ಬ್ರಾಹ್ಮಣನಾಗಿ ಹುಟ್ಟಬಹುದು. ಜನ್ಮತಃ ಇಂದಿನ ಬ್ರಾಹ್ಮಣ ಮುಂದಿನ ಜನುಮದಲ್ಲಿ ಶೂದ್ರನಾಗಿರಬಹುದು. ಕೆಲವು ಸಾಂಘಿಕ ಹದ್ದುಗಳಿಗಾಗಿ ವರ್ಣಸ್ಥಿತಿ ಏರ್ಪಾಡಾಗಿದೆ. ಪರಮಾತ್ಮರ ಮುಖ ಬ್ರಾಹ್ಮಣತ್ವ, ಬಾಹುಗಳು ಕ್ಷತ್ರಿಯತ್ವ, ತೊಡೆ ವೈಶ್ಯತ್ವ ಮತ್ತು ಪಾದಗಳು ಶೂದ್ರತ್ವವನ್ನು ಸೂಚಿಸುವುದೆಂದು ಶ್ರೀಪಾದವಲ್ಲಭರೇ ಒಮ್ಮೆ ತಿಳಿಸಿದ್ದರು. ಶಂಕರ ಭಟ್ಟಾ! ನೀನು ನನ್ನ ಮನೆಯಲ್ಲಿ ಆತಿಥ್ಯ ತೆಗೆದುಕೊಳ್ಳುತ್ತಿದ್ದೀಯ. ನಮ್ಮ ಮನೆಯ ಊಟ ಬ್ರಾಹ್ಮಣ ಊಟವೇ!

## ಕರ್ಮ ರಹಸ್ಯ

**ಸದಾ ಶ್ರೀಪಾದರ ಸ್ಮರಣೆಯಲ್ಲಿಯು, ಧ್ಯಾನದಲ್ಲಿಯೂ ಇರುವ ಈ ಸುತ್ತಮುತ್ತಲು ಶುಭಪ್ರದ ಪವಿತ್ರವಾದ ದಿವ್ಯ ಸ್ಪಂದನೆಗಳಿಂದ ತುಂಬಿರುವವು.** ನರಸಾವಧಾನರು ಜನ್ಮತಃ ಬ್ರಾಹ್ಮಣಾರಾದರೂ ಆ ಗೃಹದಲ್ಲಿ ಭೌತಿಕ, ಮಾನಸಿಕ, ಆಧ್ಯಾತ್ಮಿಕ ಸ್ಪಂದನೆಗಳೆಲ್ಲವೂ ವಿಷಪೂರಿತಗಳಾಗಿದ್ದ ಕಾರಣ, ಕಲುಷಿತ ವಾಯು ಮಂಡಲದಲ್ಲಿ ತುಂಬಿದ ಆ ಬ್ರಾಹ್ಮಣ ಗೃಹದಲ್ಲಿ ಶ್ರೀಪಾದರು ಆತಿಥ್ಯ ಗ್ರಹಿಸಲಿಲ್ಲ. ಇದರಲ್ಲಿ ರಹಸ್ಯ ಇಷ್ಟೇ!

ಜೀವಿಗಳು ಪರಿಣಾಮ ಅಥವಾ ವಿಪರಿಣಾಮ ಕ್ರಮದಲ್ಲಿ ಕರ್ಮಸೂತ್ರ ಪ್ರಕಾರ ಜನ್ಮಿಸಲು, ಕುಲಗಳೆಂಬುವವು ಇರಲೇಬೇಕಲ್ಲವೇ? ಆದ್ದರಿಂದಲೇ ಆ ಪದ್ಧತಿ. **ಜಾನ್, ಜರ್ಮನಿಯ ಬ್ರಹ್ಮಜ್ಞಾನಾನ್ವೇಷಿ ಆದ ಕಾರಣ, ಸತ್ ಪರಿಣಾಮ ಹೊಂದುವ ಫಲವಾದ, ಶ್ರೀಪಾದರ ದರ್ಶನ ಭಾಗ್ಯ ಕುರುವಪುರದಲ್ಲಿ ಲಭ್ಯವಾಯಿತು.** ಅದೇ ಬ್ರಾಹ್ಮಣ ನರಸಾವಧಾನಿ, ಶ್ರೀ ಪೀಠಿಕಾಪುರ ನಿವಾಸಿಯಾದರೂ ಅನೇಕ ವರುಷಗಳಾದರೂ ಶ್ರೀಪಾದರನ್ನು ಅವತಾರಮೂರ್ತಿಯಾಗಿ ಗುರ್ತಿಸದೇ, ನಂತರವೂ ಅದೆಷ್ಟೋ ಸಾಧನೆ ನಂತರವೇ ಶ್ರೀಗಳ ಅನುಗ್ರಹ ಲಭಿಸಿತು.

ಆಗ ಶಂಕರನು ''ಸ್ವಾಮಿ! ತಾವು ಜೀವಕಣಗಳು ಬದಲಾಯಿಸುವವೆಂದು ಹೇಳಿದ್ದೀರಿ. ಆದರೆ ಎಲ್ಲಾ ಜಾತಿಗೂ ಒಂದು ಆತ್ಮ ಇರುವುದಾ? ಪಾರ್ವತಿದೇವಿ, ಹೈಮವಂತನ ಮಗಳೆನ್ನಲು ಕಾರಣವೇನು? ಎಂದು ಪ್ರಶ್ನಿಸಿದರು''.

ಆಗ ತಿರುಮಲದಾಸರು ''ಪ್ರತಿಜಾತಿಗೂ ಒಂದು ಆತ್ಮ ಇರುವುದು. ಅದು ಒಂದು ಮಾನಸಿಕ ಪದಾರ್ಥವಾಗಿರುವುದು. ಅದು ದಿವ್ಯಾತ್ಮನಾದ ಶ್ರೀದತ್ತನಿಂದ ಹೊರಬಿದ್ದ ಭಾಗ. ಸದಾ ಅದರಲ್ಲಿ ಪ್ರತ್ಯಕ್ಷ ಸಂಬಂಧ ಹೊಂದಿರುವ ಮಹಾಶಕ್ತಿ ಅದು. ನೀನು

ನೆನೆಸಿದ ಹಾಗೆ ಜಾತಿ ಎಂದರೆ ಆ ಜಾತಿಯಲ್ಲಿ ಜನ್ಮಿಸಿದ ಎಲ್ಲಾ ಜನ ಅಲ್ಲ. ಸ್ಪೃಹೆ ಇರುವ ಜೀವಿಗಳ ಜೀವಕಣಗಳು ಹೇಗೆ ಇರುವವೋ, ಹಾಗೆಯೇ ಒಟ್ಟಾಗಿರುವ ವ್ಯಕ್ತಿತ್ವದಲ್ಲಿ ಅಲ್ಲಿನ ಸಮಸ್ತ ವ್ಯಕ್ತಿಗಳ ವಿವಿಧ ಶಕ್ತಿಸಾಮರ್ಥ್ಯಗಳು, ಗುಣಗಣಗಳೂ ಅಂತರ್ಲೀನವಾಗಿರುವವು. **ಹೀಗೆಯೇ ಪ್ರತಿ ಹಳ್ಳಿಗೂ ಆತ್ಮ ಇರುವುದು. ಪ್ರತಿ ನಗರಕ್ಕೂ ಆತ್ಮ ಇರುವುದು. ಪ್ರತಿ ದೇಶ, ನಮ್ಮ ಭೂಮಿಗೆ ಸಹಾ ಬೇರೆಬೇರೆ ಆತ್ಮ ಇರುವುದು. ಅದೇ ನಮ್ಮ ಭೂಮಾತೆ.** ಈ ಭೂಮಿಯ ಅಭಿಮಾನ ದೇವತೆ. ಆಕೆಯ ಆತ್ಮ ಪರಮಾತ್ಮನಿಂದ ಹೊರಬಿದ್ದ ಒಂದಾನೊಂದು ಮನಸ್ಸಂಬಂಧವಿರುವ ಮಹಾಶಕ್ತಿ. ಇದೇ ರೀತಿ ಹಿಮವನ್ನಗರದಂದು ಅಭಿಮಾನವಿರುವ ದೇವತಾಶಕ್ತಿಗೆ ಹಿಮವಂತನೆಂದು ಹೆಸರು. ಆತನ ಮಗಳೇ ಹೇಮವತಿ. **ಸರ್ವಸಾಕ್ಷಿಯಾದ ಸೂರ್ಯನ ಮಗ ಯಮಧರ್ಮರಾಯ. ಅಂದರೇ ಜೀವಿಗಳ ಶುಭಾಶುಭ ಕರ್ಮ ಪ್ರಕಾರ ನ್ಯಾಯ ಹೇಳಿ, ಪಾಪಿಗಳನ್ನು ಶಿಕ್ಷಿಸುವ ದೇವತಾತ್ಮ ಎಂದು ಅರ್ಥ.**

ಸೂರ್ಯ ಭಗವಾನರಿಂದ ಮಾತ್ರವೇ ಸರ್ವ ಜೀವಿಗಳು, ಅವರವರ ಕಾರ್ಯಕಲಾಪಗಳನ್ನು ನಡೆಸಲು ಚೈತನ್ಯ ಹೊಂದುವುರು. ಆಕಾಶದಲ್ಲಿರುವ ಸೂರ್ಯ ಬೇರೆ. ಆ ಸೂರ್ಯನ ಅಭಿಮಾನ ದೇವತಾಸ್ವರೂಪವಾಗಿರುವ ದೇವತಾತ್ಮ ಬೇರೆ. ಶ್ರೀಪಾದ ಶ್ರೀವಲ್ಲಭರು 30ನೇ ವಯಸ್ಸಿನಲ್ಲಿ ಮಾಯವಾಗುವರೆಂದು ನಿನ್ನ ಹತ್ತಿರ ಹೇಳಿದೆನು. ಕೋಟ್ಯಾನುಕೋಟಿ ಬ್ರಹ್ಮಾಂಡದಲ್ಲಿ ಅವರು ಪ್ರತಿ ಅಣುವಿನಲ್ಲೂ ಲೀನವಾಗುವರು. 'ಅವರು ಸರ್ವಾಂತರ್ಯಾಮಿ ಅಲ್ಲವೇ, ಪುನಃ ವಿಲೀನವಾಗುವುದೆಂದರೆ ಏನೂ' ಅಂತ ನೀನು ಕೇಳಬಹುದು. ಅವರು ಸರ್ವಾಂತರ್ಯಾಮಿಯಾದರೂ ಅವರ ಶಕ್ತಿ ಪ್ರಭಾವಗಳಿಗೆ ಸ್ವಲ್ಪ ದೂರದಲ್ಲಿ, ಕೋಟ್ಯಾನುಕೋಟಿ ಬ್ರಹ್ಮಾಂಡಗಳೂ ಇವೆ. ಅವುಗಳಲ್ಲಿ ಪರಿಣಾಮ ಕ್ರಮವನ್ನು ಬೇಗನೇ ಮುಗಿಸುವ ಉದ್ದೇಶದಿಂದ, ಅವರ ಶಕ್ತಿ ಪ್ರಭಾವಗಳಿಗೆ ಹತ್ತಿರವಾಗಿ ಅವರು ಅವುಗಳನ್ನು ಆಕರ್ಷಿಸುವರು. ಸಮಸ್ತ ಸೃಷ್ಟಿಯೊಳಗೂ ಪರಿಣಾಮ ದಶೆಯಲ್ಲಿ ಒಂದು ತೊಂದರೆಯ ಪರಿಸ್ಥಿತಿ ಆದಾಗ, ಈ ವಿಧವಾಗಿ ಶ್ರೀದತ್ತಾತ್ರೇಯರು ಅವತರಿಸುವರು. ಕಬ್ಬಿಣವನ್ನು ಅಯಸ್ಕಾಂತ ಆಕರ್ಷಿಸುವುದು. ಅದೇ ಕಬ್ಬಿಣ, ಕೊಳೆಯಿಂದ ಇದ್ದಾಗ ಆಕರ್ಷಣೆ ಬಹುಮಟ್ಟಿಗೆ ಕಡಿಮೆ ಆಗುವುದು. ಮಲಿನವನ್ನು ತೆಗೆದುಹಾಕಿ ಸೃಷ್ಟಿಯ ಪ್ರತಿ ಅಣುವನ್ನೂ ಅವರ ಕಡೆಗೆ ಆಕರ್ಷಿಸುಕೊಳ್ಳುವ ಮತ್ತು ವಿಶ್ವ ಪರಿಣಾಮಕ್ಕೆ ನೂತನ ದಿಶೆಯನ್ನು ಕೊಟ್ಟಾಗ ಮಾತ್ರವೇ ಇಂತಹಾ ಅವತಾರ ಬರುವುದು.

## ಪಂಚಕನ್ಯೆಯರ ವಿವರಣೆ

ಶಂಕರ ಭಟ್ಟ ತಿರುಮಲದಾಸರನ್ನು ಹೀಗೆ ಕೇಳಿದರು "ಸ್ವಾಮಿ! ಅಹಲ್ಯಾ, ದ್ರೌಪದಿ, ಸೀತಾ, ತಾರ, ಮಂಡೋದರೀ, ತಥಾ ಪಂಚಕನ್ಯಾಂ ಪಠೇನಿತ್ಯಂ ಮಹಾಪಾತಕ ನಾಶನಂ" ಅಂತ ಹೇಳುವರಲ್ಲವೇ? ಇದು ನನಗೆ ಅರ್ಥವಾಗುತ್ತಿಲ್ಲ, ವಿವರಿಸಬೇಕೆಂದು ಪ್ರಾರ್ಥನೆ.

ಆಗ ತಿರುಮಲದಾಸರು, "ಮಗೂ! ಅಹಲ್ಯಳನ್ನು ದೇವೇಂದ್ರನು ಮೋಹಿಸಿದನು. ಆಕೆಯನ್ನು ಪಡೆಯಲು ಮಾಯೋಪಾಯ ಮಾಡಿದನು. ಕೋಳಿಯ ರೂಪದಲ್ಲಿ 'ಕೊಕ್ಕಕೋಕೋ' ಎಂದು ಕೂಗಿದನು. ಬೆಳಗಾಯಿತು ಎಂದು ಅನುಷ್ಠಾನಕ್ಕೆ ಗೌತಮ ಮಹಾಮುನಿ ಹೊರಟರು. ಮಹಾಪತಿವ್ರತೆ ಅಹಲ್ಯಳನ್ನು ಇಂದ್ರ ಮುಟ್ಟಲಾರ. ದೇವತಾಶಕ್ತಿ ಉಳ್ಳವನಾದ್ದರಿಂದ ಅಹಲ್ಯಾ ವ್ಯಾಮೋಹದಲ್ಲಿ, ತನ್ನ ತೀವ್ರ ಮನೋಬಲದಿಂದ, ಅಹಲ್ಯಳಂತಹ ಸ್ತ್ರೀರೂಪ ಸೃಷ್ಟಿಸಿದನು. ಮಾಯಾ ಅಹಲ್ಯಳ ಶರೀರದ ಜೀವಾಣುಗಳೆಲ್ಲಾ, ಇಂದ್ರನ ಮನಶ್ಶಕ್ತಿಯಿಂದ ಆದವೇ. ಮಾಯಾ ಅಹಲ್ಯಳನ್ನು ಅನುಭವಿಸುತ್ತಿದ್ದ ಇಂದ್ರನನ್ನು ನೋಡಿ, ಉಗ್ರನಾದ

ಗೌತಮನು ಅವರಿಬ್ಬರನ್ನೂ ಶಪಿಸಿದನು. ಆಗ ಪತ್ನಿ ಅಹಲ್ಯ "ಎಲೈ ಬುದ್ಧಿಹೀನ ಮುನಿಯೇ! ಎಂತಹ ಕೆಲಸ ಮಾಡಿದೆ?'' ಎಂದಳು. ಅಹಲ್ಯಳು ಪತಿಗಿಂತಾ ಆಧ್ಯಾತ್ಮಿಕವಾಗಿ ಉನ್ನತ ಸ್ಥಿತಿಯಲ್ಲಿದ್ದಳು. ಅಹಲ್ಯಾಶಾಪದಿಂದ, ಗೌತಮರು 12 ವರುಷ ಮನಸ್ಸು ಚಂಚಲ ಹೊಂದಿ ಶಿವಾರ್ಚನೆಯಲ್ಲಿದ್ದನು. ಅಹಲ್ಯಳ ಮನಶ್ಶಕ್ತಿ ಕುಂಟಿತು. ಆದರಿಂದ ಆಕೆಯ ಶರೀರ ಸಹಾ ಸ್ಥಗಿತಗೊಂಡು ಪಾಷಾಣ ಅಂದರೇ ಕಲ್ಲು ಆಯಿತು. ಶ್ರೀರಾಮನ ಪಾದ ಧೂಳಿಯಿಂದ ಅಹಲ್ಯ ಶಾಪ ಕಳೆಯಿತು. ಹಾಗೆ ಈಕೆ ಪವಿತ್ರಳು.

ಶಾಪಗ್ರಸ್ಥನಾದ ದೇವೇಂದ್ರನು ಪಂಚಪಾಂಡವರಾಗಿ ಹುಟ್ಟಿದನು. 5 ರೂಪಗಳಾದರೂ, 5 ಮನಸ್ಸು ಇದ್ದರೂ, ಅವುಗಳಿಗೆ ಆಧಾರಭೂತವಾದ ಆತ್ಮ ಒಂದೇ. ಇದು ಒಂದು ವಿಚಿತ್ರವಾದ ವಿಷಯ. ಶಚೀದೇವಿ ದ್ರೌಪದಿಯಾಗಿ ಯಜ್ಞ ಕುಂಡದಲ್ಲಿ ಹುಟ್ಟಿಕೊಂಡಳು. ಆಕೆಯೇ ಅಯೋನಿಜ.

ನಿಜ ಸೀತಾಮಾತೆಯನ್ನು ಅಗ್ನಿದೇವರು, ಅವರ ಗರ್ಭದಲ್ಲಿ ಬಚ್ಚಿಟ್ಟನು. ಮಾಯಾ ಸೀತೆಯನ್ನು ರಾವಣನು ಲಂಕೆಗೆ ಎತ್ತಿಕೊಂಡು ಹೋಗಿದ್ದನು. ಸೀತೆ ಅಗ್ನಿಪ್ರವೇಶ ಮಾಡಿದಾಗ, ಇಬ್ಬರು ಸೀತೆಯರು ಅಗ್ನಿಕುಂಡದಿಂದ ಈಚೆಗೆ ಬಂದರು. ಹಾಗೆ ಸೀತಾಮಾತೆಯೂ ಮಹಾಪತಿವ್ರತೆ ಎಂದು ತಿಳಿ.

ಭೂಚಕ್ರದ 12 ರಾಶಿಗಳಲ್ಲಿ 27 ನಕ್ಷತ್ರಗಳುಂಟು. ಈ 27 ನಕ್ಷತ್ರಗಳಿಗೆ ಅಭಿಮಾನ ದೇವತೆ ತಾರಾದೇವಿಯಾಗಿ ಜನುಮಿಸಿದಳು. ಆಕೆ ತುಂಬಿದ ಯವ್ವನವತಿಯಾಗಿರಲು, ಗುರುಗ್ರಹ ಅಭಿಮಾನ ದೇವತೆಯಾದ ಬೃಹಸ್ಪತಿ ಆಕೆಯನ್ನು ಮೋಹಿಸಿದನು, ವಿವಾಹವಾದನು. ವೃದ್ಧಪತಿ, ನವಯವ್ವನ ಪತ್ನಿಯನ್ನು ತೃಪ್ತಪಡಿಸಲಾರ, ಇದು ವಿವಾಹ ಸಮಯದಲ್ಲಿ ಮಾಡಿದ ಪ್ರಮಾಣಗಳನ್ನು ಉಲ್ಲಂಘಿಸುವ ಧರ್ಮ ವಿರುದ್ಧದ ವಿಷಯವಾಯಿತು. ಆಕೆಗೆ ಬೃಹಸ್ಪತಿಯನ್ನು ನೋಡಿದಾಗೆಲ್ಲಾ ಭರ್ತೃಭಾವ ಉಂಟಾಗುತ್ತಿರಲಿಲ್ಲ. ಆಕೆಗೆ ಆ ಭಾವನೆ ಉದ್ಭವವಾಗಲೆಂದು ಬೃಹಸ್ಪತಿ ಅಧರ್ಮದಿಂದ ನಡೆದುಕೊಂಡರು. ತಾರಾದೇವಿ ಶರೀರದ ಜೀವಾಣುಗಳು ಆಕೆಯ ಮನಃಪ್ರವೃತ್ತಿಗೆ ಸರಿಯಾಗಿ, ಬಹಳಷ್ಟು ಬದಲಾವಣೆ ಹೊಂದಿದ್ದವು. ಆಕೆಯ ಮನಸ್ಸಿನಲ್ಲಿ ಚಂದ್ರನ ರೂಪವಿತ್ತು. ಹೃದಯ, ಚಂದ್ರಾಧೀನವಾಗಿತ್ತು. ಈ ವಿಧವಾಗಿ ಪರಿಣಾಮ ಸ್ಥಿತಿಯನ್ನು ಹೊಂದಿದ ತಾರದೇವಿ ಹಿಂದೆ ಬೃಹಸ್ಪತಿಯನ್ನು ಮದುವೆಯಾದ ತಾರಾದೇವಿ ಎಷ್ಟುಮಾತ್ರಕ್ಕೂ ಅಲ್ಲ. ಹಾಗೆ ತಾರಾಚಂದ್ರರ ಮಿಲನ ಧರ್ಮವಿರುದ್ಧವಾಗಲಿಲ್ಲ. ಸೃಷ್ಟಿ ನಿಯಮಗಳನುಸಾರ 27 ನಕ್ಷತ್ರಗಳನ್ನು ಸುತ್ತಿಬರುವುದು ಚಂದ್ರನ ಧರ್ಮ. ಅದು ಗುರುಗ್ರಹ ಧರ್ಮವಲ್ಲ. ಹೀಗೆ ಸಂಚರಿಸಿದರೇ ಅದು ಧರ್ಮವಿರುದ್ಧವಾಗುವುದು. ಧರ್ಮ ವಿರುದ್ಧವಾದದ್ದು ಯಾವುದೂ ನಿಲ್ಲಲಾರದು. ಆದ್ದರಿಂದ 27 ನಕ್ಷತ್ರಗಳ ಅಧಿದೇವತೆ ಆದ ತಾರಾದೇವಿ ಮಹಾಪತಿವ್ರತೆ.

ಭೀಷ್ಮಪಿತಾಮಹ ಬಾಣದ ಶಯ್ಯೆಮೇಲಿರಲೂ, ಧರ್ಮರಾಜನಿಗೆ ಹೀತೋಪದೇಶ ಮಾಡಿದರು. "ಕೆಟ್ಟದ್ದು ನಡೆಯುವಾಗ, ಸಾಧ್ಯವಾದರೇ ಅದನ್ನು ತಡೆಯಬೇಕು. ಇಲ್ಲಾ ಅಂತಹ ಸ್ಥಳದಿಂದ ಪಲಾಯನ ಮಾಡಬೇಕು'' ಎಂದು ಹೇಳಿದರು. ಅದನ್ನು ಕೇಳಿದ ದ್ರೌಪದಿ ಜೋರಾಗಿ ನಕ್ಕಳು. ಆಗ ಭಿಷ್ಮರು, "ದ್ರೌಪದಿ ದೇವಿಗೆ ಮಾನಭಂಗ ನಡೆಯುತ್ತಿರಲೂ ನಾನಲ್ಲೇ ಸುಮ್ಮನಿದ್ದೆ. ಆಗ ನಾನು ದುರ್ಯೋಧನನ ಊಟ ಮಾಡುತ್ತಿದ್ದೆ. ಅದಕ್ಕೆ ನನ್ನ ಬುದ್ಧಿ ಭ್ರಷ್ಟವಾಗಿತ್ತು. ಅ ಕೆಟ್ಟ ರಕ್ತವೆಲ್ಲವೂ ಈಗ ಶರೀರದಿಂದ ಹೊರಟು ಹೋಗಿದೆ. ಈಗ ನನ್ನ ಬುದ್ಧಿ ಕಲ್ಮಷವಿಲ್ಲದೇ ಇದೆ. ಸತ್ಯವು ತಲೆಗತ್ತಿದೆ'' ಎಂದು ಹೇಳಿದರು.

ಜೀವಿ ಪರಿಣಾಮ ದಶೆಯಲ್ಲಿ ಅನೇಕ ಜನುಮ ತಾಳುತ್ತಿರುವನು. ಕೆಲವು ಜನುಮಗಳಲ್ಲಿ ಸ್ತ್ರೀ ಆಗಿಯೂ ಇನ್ನು ಕೆಲವು ಜನುಮಗಳಲ್ಲಿ ಪುರುಷನಾಗಿಯೂ ಜನ್ಮಿಸಬಹುದು. ಇಲ್ಲ ಪಶುಪಕ್ಷಿಗಳಾಗಿಯೂ ಹುಟ್ಟಬಹುದು. ಮಂಡೋದರಿ ಒಂದಾನೊಂದು ಜನುಮದಲ್ಲಿ ಪುರುಷನಾಗಿದ್ದಳು. ಆಗ ಆಕೆಗೆ ಚಂಚಲ ಸ್ವಭಾವವುಳ್ಳ ಒಂದು ಪತ್ನಿ, ದುಷ್ಟ ಸ್ವಭಾವವುಳ್ಳ ಮತ್ತೊಂದು ಪತ್ನಿ ಮತ್ತು ಒಳ್ಳೆಯ ಸ್ವಭಾವ ಉಳ್ಳ ಮೂರನೆಯ ಪತ್ನಿಗಳಿದ್ದರು. ಚಂಚಲ ಸ್ವಭಾವದ ಪತ್ನಿ ಮರುಜನುಮದಲ್ಲಿ ವಾಲಿ ಆದನು. ದುಷ್ಟಪ್ರವೃತ್ತಿ ಉಳ್ಳ ಪತ್ನಿ ರಾವಣನಾದನು. ಮೃದು ಸ್ವಭಾವದ ಪತ್ನಿ ವಿಭೀಷಣನಾದನು. ಈ ಮುವ್ವರೂ ಪುರುಷರಾಗಿ ಮರುಜನುಮದಲ್ಲಿ ಮಂಡೋದರಿ ಮಡದಿಯಾಗಿದ್ದರು. ವಾಲಿಗೆ ಪತ್ನಿಯಾಗಿ ಅಂಗದನನ್ನು ಹೆತ್ತಳು. ನಂತರ ರಾವಣನಿಗೆ ಪತ್ನಿ ಯಾದಳು. ರಾವಣ ವಧೆಯ ನಂತರ ವಿಭೀಷಣನ ಮಹಾರಾಣಿ ಆದಳು. ವಾಲಿಯ ಪತ್ನಿಯಾಗಿರಲು ಜೀವಾಣುಗಳು, ರಾವಣನಿಗೆ ಪತ್ನಿಯಾಗಿರಲು ಜೀವಾಣುಗಳು ಮತ್ತು ವಿಭೀಷಣರ ಪತ್ನಿಯಾಗಿರಲು ಜೀವಾಣುಗಳು ಬೇರೇಬೇರೇ ಆಗಿವೆ. ಆದ್ದರಿಂದ ಮಂಡೋದರಿ ಸಹಾ ಮಹಾಪತಿವ್ರತೆಯೇ!

ಆಗ ಶಂಕರ ಭಟ್ಟು, "ಸ್ವಾಮಿ! ಮಹಿಳೆಯರಿಗೆ ಒಂದೇ ಪತಿ ಇರಬೇಕೆಂದು, ಪುರುಷರು ಏಕಪತ್ನಿ ವ್ರತಸ್ಥರಾಗಿರಬೇಕೆಂದು ಹೇಳುವರಲ್ಲವೇ ಬಹು ಪತ್ನಿತ್ವ, ಅನೇಕ ಭರ್ತ್ವತ್ತ್ವ ನಿಂದೆಗೆ ಅರ್ಹಗಳಲ್ಲವೇ?" ಎಂದರು.

## ಕರ್ಮಚಕ್ರ ಪರಿಣಾಮವು

ಆಗ ತಿರುಮಲದಾಸರು ಹೀಗೆಂದರು, "ನೀವು ಹೇಳುವುದು ಅಕ್ಷರಶಃ ನಿಜ. ಒಬ್ಬ ಕಾರಣವಿಲ್ಲದೇ ಪತ್ನಿಯನ್ನು ಹಿಂಸೆಗೆ ಗುರಿ ಮಾಡಿದರೇ, 7 ಜನುಮ ಬಾಲ ವೈಧವ್ಯ ಹೊಂದುವವನೆನ್ನಲಾಗಿದೆ. ಒಬ್ಬ 4, 5 ಮಹಿಳೆಯರನ್ನು ವಿವಾಹವಾದಲ್ಲಿ ಮರು ಜನುಮದಲ್ಲಿ ಅವನು ಮಹಿಳೆಯಾಗಿ ಹುಟ್ಟುವನು. ಆ 4,5 ಮಹಿಳೆಯರೂ ಅವರವರ ಕಾಮ, ಸಂಸ್ಕಾರ ಪರಿಪೂರ್ಣ ಆಗದಿದ್ದಲ್ಲಿ, ನಂತರದ ಜನುಮದಲ್ಲಿ ಪುರುಷರಾಗಿ ಆ ಮಹಿಳೆಯನ್ನು ಅನುಭವಿಸುವರು. ಹೀಗೆ ಒಂದೇ ಜನುಮದಲ್ಲಿ ನಡೆದರೇ ಅದು ವ್ಯಭಿಚಾರ ದೋಷ. ಹಾಗಲ್ಲದೇ, ಆ ಮಹಿಳೆಯನ್ನು ಬೇರೆ ಬೇರೆ ಜನುಮಗಳಲ್ಲಿ ಆ ಪುರುಷರು ಮದುವೆ ಆದಲ್ಲಿ ದೋಷವಿಲ್ಲ. ಇದು ಕಾಲಚಕ್ರ ಪ್ರಭಾವ. ಈ ಮಹಾಚಕ್ರದಲ್ಲಿ ಇಂತಹ ವಿಚಿತ್ರಗಳು ಅದೆಷ್ಟೋ! ಮಹಿಳೆಯಾಗಿ, ಪುರುಷನಾಗಿ ಜನ್ಮಿಸಿದರೇ ಆಯಾ ಜನ್ಮಕ್ಕೆ ಸಂಬಂಧಿಸಿದ ಧರ್ಮವನ್ನಾಚರಿಸಬೇಕು. ಪತಿ ಪತ್ನಿಯರನ್ನು ಬೇರೇ ಮಾಡಿದ ಪಾತಕರು, ನಪುಂಸಕರಾಗಿ ಹುಟ್ಟಿ ಬಾಧೆಯನ್ನನುಭವಿಸುವರು. ಮಾಂಸ ಭೋಜನ ನಿಷಿದ್ಧ. ಒಬ್ಬ ಒಂದು ಮೇಕೆಯನ್ನು ಕೊಂದು ಅದರ ಮಾಂಸ 10 ಜನರ ಜೊತೆ ತಿಂದರೇ, ಆ ಮೇಕೆಯ ಪ್ರಾಣ ಹೋಗುವ ಸಮಯದ ಬಾಧಾಸ್ಪಂದನೆಗಳು, ವಾಯು ಮಂಡಲದಲ್ಲಿ ತೇಲಾಡುತ್ತಿರುವವು. **ಆನಂದಮಯ ಸ್ಪಂದನಗಳು ಸಹಾ ವಾಯು ಮಂಡಲದಲ್ಲಿ ಗೂಢವಾಗಿರುವವು. ಇದು ಸತ್ಕರ್ಮ, ದುಷ್ಕರ್ಮಗಳ ಫಲಗಳು.** ಸತ್ತ ಆ ಮೇಕೆ, ತನ್ನನ್ನು ಭುಜಿಸದ ಆ 10 ಜನರನ್ನೂ ಹಿಂಸಿಸಬೇಕೆಂದು ಬಯಸುತ್ತಿರುವುದು. ತತ್ಫಲಿತವಾಗಿ, ಮೇಕೆ ಮಾನವ ಧ್ಯಾಸೆಯಲ್ಲಿ ಸತ್ತ ಕಾರಣ ಮಾನವನಾಗಿ ಮರು ಜನುಮ ತಾಳುವುದು. ಆ ಮಾನವರು ಮೇಕೆಗಳಾಗುವರು. ಇದು ಕರ್ಮ ಸಿದ್ಧಾಂತ. ಪ್ರತಿ ಕ್ರಿಯೆಗೂ, ಪ್ರತಿಕ್ರಿಯೆ ಇರುವುದು. **ಆದ್ದರಿಂದ ಮಾನವ ಕ್ಷಮಾಗುಣವನ್ನಾಚರಿಸಬೇಕು.** ಸಾತ್ವಿಕನು ಮೇಕೆಯನ್ನು ಕಂಡರೂ, ಅದರ ಮಾಂಸ ತಿನ್ನಲೂ ನೋಡುವುದಿಲ್ಲ. ಒಂದುವೇಳೆ ಹಿಂದಿನ ಜನುಮದಲ್ಲಿ ತನನ್ನು ಕೊಂದುತಿಂದ ಮಾನವನೇ ಆಗಿದ್ದರೂ ಕ್ಷಮಿಸಿ, ಆ ಮೇಕೆಯನ್ನು ಕೊಂದು ತಿನ್ನದಿದ್ದರೇ, ಅವನು ಪುಣ್ಯನಾಗಿ ಪ್ರಾಣದಾನ ಮಾಡುವನು. ಅಲ್ಲಿಗೆ ಕರ್ಮಚಕ್ರ ನಿಲ್ಲುವುದು.

**ಪೀಠಿಕಾಪುರದವರ ಸಾಂಘಾತಿಕ ಒಟ್ಟು ಪುಣ್ಯ ಮತ್ತು ಪಾಪ ಒಂದೇಬಾರಿ ಫಲಿಸಲು ಶ್ರೀಪಾದ ಶ್ರೀವಲ್ಲಭರ ಜನನಕ್ಕೆ ಕಾರಣವಾಯಿತು. ಪುಣ್ಯವಂತರು, ಅವರನ್ನು ಶ್ರೀದತ್ತನನ್ನಾಗಿ ಒಪ್ಪಿ ಶುಭ ಫಲಿತಗಳು ಹೊಂದಿದರು. ಅದೇ ಪಾಪಾತ್ಮರು, ಅವರನ್ನು ಶ್ರೀದತ್ತನಾಗಿ ಒಪ್ಪದೇ ಮತ್ತಷ್ಟು ಅಶುಭ ಫಲಗಳನ್ನು ಹೊಂದಿದರು. ಶ್ರೀದತ್ತನನ್ನು ಆರಾಧಿಸುತ್ತಾ ಶ್ರೀಪಾದರನ್ನು ನಿಂದಿಸುವರು ರೌರವಾದಿನರಕ ಪಡೆಯುವರು. ವಿಷಯ ಅರ್ಥವಾಗದಿರಲು, ಮೌನ ವಹಿಸುವುದೇ ಒಳ್ಳೆಯದು. ಅಷ್ಟೇ ಹೊರತು, ದಿವ್ಯ ಭವ್ಯವಾದ ಆ ಶ್ರೀ ಮನ್ಮಹಾಮಂಗಳ ರೂಪವನ್ನು ನಿಂದಿಸಬಾರದು.** ಅವರಿಗೆ ಹಾರತಿ ಒಂದೆಡೆ ಕೊಡುತ್ತಾ ಕಾಲಿಗೆ ಮೊಳೆ ಹೊಡೆಯುವರು, ಶ್ರೀದತ್ತಾವತಾರವನ್ನು ನಿಂದಿಸುವವರೂ ಸುಖವ್ಯಾಧಿಗೆ ಸಿಕ್ಕುವರು. ಅಷ್ಟೇ ಅಲ್ಲದೇ ಶ್ರೀದತ್ತರು ಒಂದಾನೊಂದು ವಿಚಿತ್ರವಾದ ಯೋಗಶಕ್ತಿಯನ್ನು ಅವರ ಅನುಗ್ರಹ ಲೀಲೆಯಲ್ಲಿ ಸೇರಿಸಿದರು. **ಪುಣ್ಯಾತ್ಮರಿಗೆ ಶ್ರೀದತ್ತ ನಾಮಸ್ಮರಣೆಯಿಂದ ಎಲ್ಲಾ ಇಷ್ಟಗಳು ಸುಲಭವಾಗಿ ಸಿದ್ಧಿಸುವವು. ಶ್ರೀವಲ್ಲಭರನ್ನು ನಿಂದಿಸುವ ಪಾಪಾತ್ಮರಿಗೆ ವಿಚಿತ್ರ ವಿಧವಾಗಿ ವಿಘ್ನಗಳು, ಅನಿಷ್ಟಗಳು ಬಹಳಷ್ಟು ಆಗುತ್ತಿರುವವು. ಶ್ರೀಪಾದರದು ಅಗ್ನಿಸ್ವರೂಪ. ಅವರು ಧರಿಸುವುದು ಅಗ್ನಿವಸ್ತ್ರ. ಅವರು ಪವಿತ್ರ ಯೋಗಾಗ್ನಿ ಸ್ವರೂಪಿ. ಅವರ ಪಾದುಕೆಗಳ ವರ್ಣನೆ ಯುಗವಾದರೂ ಮುಗಿಯದು. ವೇದೋಪನಿಷತ್ತು ಸಹಾ ಪಾದುಕಾಮಹಿಮೆ ವರ್ಣನೆ ಮಾಡಲಾರವು.** ಎಷ್ಟುಯುಗಗಳು ಕಳೆದಿವೆ? ಎಷ್ಟು ಕಲ್ಪಗಳು ಕಳೆದಿವೆ? ಎಷ್ಟು ಸೃಷ್ಟಿಸ್ಥಿತಿಲಯಗಳು ಉರುಳಿವೆ? ಆದರೂ ಶ್ರೀದತ್ತರು ದತ್ತರೇ. ಅವರಿಗೆ ಸಾಟಿ ಇನ್ನೊಬ್ಬರಿಲ್ಲ. ಅವರು ಸಾಕ್ಷಾತ್ತು ಶ್ರೀಪಾದ ಶ್ರೀವಲ್ಲಭರೇ. ಸೃಷ್ಟಿಯ ಪ್ರತೀ ಅಣುವೂ ಈ ಸತ್ಯಕ್ಕೆ ಸಾಕ್ಷಿಯೇ.

## ಸ್ವಯಂಭೂ ದತ್ತ ಪುನಃಪ್ರತಿಷ್ಠೆ

ಶ್ರೀ ಪೀಠಿಕಾಪುರಕ್ಕೆ ಒಬ್ಬ ವಿಚಿತ್ರವಾದ ಅವಧೂತ ಬಂದರು. ಆತ ಉನ್ಮತ್ತ ಸಿದ್ಧ. ಆತ ತನ್ನ ಬೈಗಳು, ಶಾಪಗಳಿಂದ, ಆಶೀರ್ವಾದ ತಲುಪಿಸುವ ಅದ್ಭುತ ಸಾಧು. ಆತ ಯಾರನ್ನಾದರೂ ಹೊಗಳಿದರೇ, ಆ ಕಡೆ ಮನುಷ್ಯನ ಪುಣ್ಯ ಕಡಿಮೆ ಆದಂತಯೇ! ಆ ಸಿದ್ಧರನ್ನು ಪೀಠಿಕಾಪುರ ಜನ ಸ್ವಯಂಭೂ ದತ್ತರೆಲ್ಲಿದ್ದಾರೆಂದರೇ 'ಎಲ್ಲಾ ಪುಣ್ಯಕ್ಷೇತ್ರಗಳಲ್ಲಿ ಸ್ನಾನಮಾಡಿ ಏಲಾನದಿಯಲ್ಲಿರುವೆನು' ಎಂದನು. ಆಗ, ಹುಡುಕಲೂ, ಏಲಾನದಿಯಲ್ಲಿ ಸ್ವಯಂಭೂ ದತ್ತ ವಿಗ್ರಹ ಲಭಿಸಿತು. ಆ ಸಿದ್ಧರ ಹೇಳಿಕೆಯಂತೆ ಆ ವಿಗ್ರಹವನ್ನು ಒಂದು ಶುಭ ಮೂಹೂರ್ತದಲ್ಲಿ ಅಪರ ಸರ್ವಮಂಗಳೆಯಾದ ಸುಮತಿ ಮಹಾರಾಣಿಯು ಬ್ರಹ್ಮತೇಜ ಅಪ್ಪಲರಾಜ ಶರ್ಮರು ಪುನಃಪ್ರತಿಷ್ಠಾಪಿಸಿದರು. ಆ ಮಹೋತ್ಸವಕ್ಕೆ ಬಾಪನಾರ್ಯರು ಮುಖಂಡರು.

## ವಿದ್ಯಾರಣ್ಯರ ಆವಿರ್ಭಾವ

ಆಲಯದಲ್ಲಿ ಪುನಃ ಪ್ರತಿಷ್ಠೆ ಆದ ದಿನ, ಆ ಸಿದ್ಧನನ್ನು ಬಾಪನಾರ್ಯರು ತನ್ನ ಮನೆಗೆ ಭಿಕ್ಷೆಗೆ ಆಹ್ವಾನಿಸಿದರು. ಸರಿ, ಎನ್ನಲು ಆ ಸಿದ್ಧನು ಬಂದು, ತಾತನ ಮನೆಯಲ್ಲಿದ್ದ ಶ್ರೀಪಾದರನ್ನು ದರ್ಶಿಸಿದರು. **ಎರಡೇ ವರುಷದ ವಯಸ್ಸಿನಲ್ಲಿದ್ದ ಆ ದಿವ್ಯ ಶಿಶುವು ಮೇಲೆ, ಅತ್ಯಂತ ಪುತ್ರ ವಾತ್ಸಲ್ಯ ಉಕ್ಕಿತು.** ಸೋದರಮಾವ ವೆಂಕಾವಧಾನರ ಭುಜದ ಮೇಲೆ ಕುಳಿತು ತಮಾಷೆಗೆ ಮಾವನ ಜುಟ್ಟಿನಿಂದ ಕಪಿ ಚೇಷ್ಟೆಗಳನ್ನು ಮಾಡುತ್ತಾ ಸಿದ್ಧರನ್ನು ನೋಡಿ ಶ್ರೀಪಾದರು ನಗುತ್ತಿದ್ದರು. ಆ ನಗುವಿಗೆ ಸಿದ್ಧರು ಸಮಾಧಿ ಸ್ಥಿತರಾದರು. ಪುನಃಪ್ರಕೃತಿ ಸ್ಥಿತರಾದಕೂಡಲೇ ಶ್ರೀಪಾದರು, "ಮಾಧವಾ! ನನಗೆ 16 ವರುಷ ಆದಾಗ, ನಿನ್ನ ಬಯಕೆಯಂತೆ ಬುಕ್ಕರಾಯನಿಂದ ಒಂದು

ಸಾಮ್ರಾಜ್ಯ ಸ್ಥಾಪಿಸಲಾಗುವುದು. ಹರಿಹರನಿಗೆ, ಬುಕ್ಕರಾಯನಿಗೆ ನೀನು ಜೊತೆಯಲ್ಲಿರು. ನೀನು ವಿದ್ಯಾರಣ್ಯ ಮಹರ್ಷಿ ಹೆಸರಿನಲ್ಲಿ ಖ್ಯಾತನಾಗುವೆ. ನಿನ್ನ ಸಹೋದರ ಸಾಯಣಾಚಾರ್ಯರ ಮನೆಯಲ್ಲಿ ಬರುವ ಶತಮಾನಗಳಲ್ಲಿ ಗೋವಿಂದ ದೀಕ್ಷಿತರಾಗಿ ಹುಟ್ಟಿ, ರಾಜರ್ಷಿಯಾಗಿ ತಂಜಾವೂರಿನ ಮಹಾಮಂತ್ರಿ ಆಗುವುದು ನೀನೇ'' ಎಂದರು.

ಆಗ, ಆ ಸಿದ್ಧನ ಕಣ್ಣಿಂದ ಆನಂದ ಬಾಷ್ಪಗಳು ಬೀಳಲಾರಂಭಿಸಿತು. ಆತ ಶ್ರೀಪಾದರನ್ನು ಪ್ರೇಮದಿಂದ ಕರೆದುಕೊಂಡರು. ಶ್ರೀಪಾದರು, ಸಿದ್ಧನ ಪಾದ ನಮಸ್ಕಾರ ಮಾಡಿಕೊಂಡರು. ಸಿದ್ಧರು ``ಇದು ಎಂತಹ ವಿಚಿತ್ರ?'' ಎಂದರು ಆಗ ಶ್ರೀಪಾದರು ಹೇಳಿದರು ``ನೀನು ಶೃಂಗೇರಿ ಪೀಠಾಧಿಪತಿಯಾಗಿ ವಿದ್ಯಾರಣ್ಯ ಹೆಸರಿನಲ್ಲಿ ಖ್ಯಾತಿ ಪಡೆಯುವೆ. ನಿನ್ನ ಶಿಷ್ಯ ಪರಂಪರೆಯ 3ನೇ ಅವನಾಗಿ, ನೀನೇ ಕೃಷ್ಣ ಸರಸ್ವತಿ ಹೆಸರಿನಲ್ಲಿ ಜನ್ಮಿಸುವೆ. **ನಿನಗೆ ನನ್ನಲ್ಲಿ ಪುತ್ರಪ್ರೇಮ ಬಹಳಷ್ಟು ಇದೆ. ಆದ್ದರಿಂದ ನಾನು ನೃಸಿಂಹ ಸರಸ್ವತಿ ಹೆಸರಿನಲ್ಲಿ ಪುನಃ ಅವತರಿಸುವಾಗ, ನೀನು ಕೃಷ್ಣ ಸರಸ್ವತಿ ಹೆಸರಿನಲ್ಲಿ ನನಗೆ ಕಾಶಿಯಲ್ಲಿ ದೀಕ್ಷೆ ಪ್ರಸಾದಿಸುವೆ.** ಇದಕ್ಕೆ ಕಾಶೀ ವಿಶ್ವೇಶ್ವರನೂ, ಅನ್ನಪೂರ್ಣ ಮಾತೆ ಸಾಕ್ಷಿ. ನೀನು ಸನ್ಯಾಸ ಧರ್ಮವನ್ನು ಪುನರುದ್ಧರಿಸಬೇಕು.''

ವಶಿಷ್ಟ, ಶಕ್ತಿ, ಪರಾಶರ ಸತ್ರಯಾ ಋಷಿ ಪ್ರವರಾನ್ವಿತ, ಪರಾಶರ ಗೋತ್ರೋದ್ಭವರು, ಋಗ್ವೇದರು, ಆದ ವಾಜಪೇಯಾಜರ ಮಾಧವಾಚಾರ್ಯನು, ವಿದ್ಯಾರಣ್ಯ ಮಹರ್ಷಿಯಾಗಿ ಖ್ಯಾತಿ ಹೊಂದೇಹೊಂದುವರು. ಮಗೂ! ನಾಳೆ ನಿನಗೆ ಮತ್ತಷ್ಟು ವಿಷಯಗಳನ್ನು ತಿಳಿಸುವೆ ಎಂದು ಶ್ರೀ ತಿರುಮಲದಾಸರು ಆ ದಿನ ವೃತ್ತಾಂತವನ್ನು ಮುಗಿಸಿದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 9

# ಕರ್ಮಫಲ

ಅಂದು ಗುರುವಾರ, ಸೂರ್ಯೋದಯ ಸಮಯ, ಗುರು ದಶೆ. ಶ್ರೀ ತಿರುಮಲದಾಸರು, ನಾನು, ಧ್ಯಾನಸ್ಥರಾಗಿ ಒಂದೇ ಕೊಠಡಿಯಲ್ಲಿದ್ದೆವು. ಚಿಕ್ಕ ಸೂರ್ಯಕಾಂತಿ ಕಿರಣ ನಮ್ಮ ಕೊಠಡಿ ಪ್ರವೇಶಿಸಿತು. ಆಶ್ಚರ್ಯ, ಆ ಚಿಕ್ಕ ಕಿರಣದಲ್ಲೆ ನಾವು ಶ್ರೀಪಾದ ಶ್ರೀವಲ್ಲಭರ ರೂಪ ಕಂಡೆವು. ಸೂರ್ಯಕಾಂತಿ ಒಳಕ್ಕೆ ಬಂದ ಹಾಗೇ ನಮ್ಮ ಧ್ಯಾನ ಮುಗಿಯಿತು. ಅತ್ಯಂತ ಮಂಗಳಪ್ರದವಾದ 16 ವರುಷ ಪ್ರಾಯದ ಶ್ರೀಪಾದ ಶ್ರೀವಲ್ಲಭರನ್ನು ಕಂಡಿದ್ದು, ನಿಸ್ಸಂಶಯವಾಗಿ ಪ್ರಭುಗಳ ಅವ್ಯಾಜ್ಯ ಕರುಣೆಯಿಂದನೇ! ಕ್ಷಣಕಾಲ ಕಾಣಿಸಿ ಆ ರೂಪ ಮಾಯವಾಯಿತು.

ಶ್ರೀಗಳಿಗೆಂದು ನೈವೇದ್ಯಕ್ಕಿಟ್ಟಿದ್ದ ಕಡಲೆ ಮಾತ್ರ, ಆ ಸೂರ್ಯಕಿರಣಗಳಿಂದ ಲೋಹದ ಕಡ್ಡಿಗಳಾಗಿ ಹೋದವು. ಇದು ಆಶ್ಚರ್ಯ ಮತ್ತು ನೋವಿನ ವಿಚಾರವಾಗಿತ್ತು. 'ಶ್ರೀಗಳ ದರ್ಶನ, ಅವರ ಅನುಗ್ರಹ ಸೂಚಕವಾದರೇ, ಕಡಲೇ ಕಬ್ಬಿಣಕಾಳಾಗಿ ಬಿಡುವುದು, ಅವರ ಕೋಪಕ್ಕಾಗಿಯಾ?' ಎಂದು ಚಿಂತಿಸಿದೆ.

ಆಗ ಶ್ರೀ ತಿರುಮಲದಾಸರು, "ಮಗೂ, ಶಂಕರ ಭಟ್ಟಾ! ಇಂದು ನನ್ನ ಆತಿಥ್ಯದ ನಂತರ ಮಧ್ಯಾಹ್ನ ನೀನು ಕುರುವಪುರಕ್ಕೆ ಹೊರಡಬಹುದು. ಶ್ರೀದತ್ತರ ಆಜ್ಞೆ ಆಗಿದೆ. ಗುರುವಾರ ನಡು ಮಧ್ಯಾಹ್ನ ದತ್ತ ಕ್ಷೇತ್ರಗಳಲ್ಲಿ ಶ್ರೀದತ್ತರು ಭಿಕ್ಷೆ ಮಾಡುವರು. ಇದು ಅದೆಷ್ಟೋ ಶುಭ ಸಮಯ" ಎಂದರು. ಆಗ ನಾನು, "ಸ್ವಾಮಿ! ನಿತ್ಯವೂ ಶ್ರೀದತ್ತರ ಸ್ಮರಣೆ, ಕಥಾಪ್ರಸಂಗಗಳಿಂದ ಕಾಲ ಕಳೆಯುತ್ತಿದ್ದೆವು. ಇಂದು ನೈವೇದ್ಯದ ಕಡೆಲೇ ಕಬ್ಬಿಣ ತುಣುಕುಗಳಾಗುವುದು ನೋವು ತಂದಿದೆ. ನನ್ನ ಈವ್ಯಥೆಯನ್ನು ತೀರಿಸಿ ಕೃತಾರ್ಥನಾಗಿ ಮಾಡಿರಿ" ಎಂದೆನು.

ತಿರುಮಲದಾಸರು, "ಮಗೂ! ಕೆಲವು ಶತಮಾನಗಳ ನಂತರ, ಕಲಿಯುಗ ಕೊನಗೊಂಡು ನಾಸ್ತಿಕತ್ವ ಹೆಚ್ಚುವುದು. ಅದನ್ನು ಕೊನೆ ಗೂಡಿಸಿ, ಪುನಃ ಆಸ್ತಿಕತ್ವ ಸ್ಥಿರಪಡಿಸಲು, ಶ್ರೀಗಳು ಚಿತ್ರವಿಚಿತ್ರವಾದ ಲೀಲೆಗಳಿಂದ ಜೀವರನ್ನು ಅನುಗ್ರಹಿಸುವರು. ಮುಂದೆ ಶ್ರೀದತ್ತರು ಮಾಡಲಿರುವ ಧರ್ಮ ಸಂಸ್ಥಾಪನಾ ಕಾರ್ಯಕ್ರಮಗಳೆಲ್ಲವುಕ್ಕೂ ಓಂ ಪ್ರಥಮವಾಗಿ ಶ್ರೀಪಾದ ಶ್ರೀವಲ್ಲಭರ ಅವತಾರದಲ್ಲಿ ತೋರುವರು" ಎಂದರು.

ಖನಿಜದಲ್ಲಿನ ಚೈತನ್ಯ, ನಿದ್ರಾಸ್ಥಿತಿಯಲ್ಲಿರುವುದು. ಅಂತರ್ಲೀನವಾಗಿ ಪ್ರಾಣ ಇರುವುದು. ಖನಿಜದ ವಿವಿಧ ರಸಾಯನ ಕ್ರಿಯೆಗಳಿಂದ ಪ್ರಾಣ ಉದ್ಭವಿಸುವುದು. ಪ್ರಾಣದಲ್ಲಿ ಮನಸ್ಸು ಅಂತರ್ಲೀನವಾಗಿರುವುದು. ಪ್ರಾಣ ರೂಪದಲ್ಲಿ ಚೈತನ್ಯ, ಅರನಿದ್ರೆ ಸ್ಥಿತಿಯನ್ನು ವೃಕ್ಷಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಮತ್ತನ್ನು ಗ್ರಹಿಸಿದವನು, ಅವನ ಶರೀರದಲ್ಲಿ ಸ್ಥಿತಿ ಹೊಂದುವನು. ಪ್ರಾಣ, ಶಕ್ತಿರೂಪದೊಳು ಅಭಿವ್ಯಕ್ತವಾದ ತತ್ತ್ವ ಬದಲಾವಣೆ ಹೊಂದಿ ವಿಕಾಸ ಹೊಂದಿದ ಸ್ಥಿತಿಯಲ್ಲಿ, ಮನಸ್ಸಿನ ಮೂಲಕ ಕೆಲಸ ಮಾಡಲು ಕಲಿಯುವುದು. ಈ ಸ್ಥಿತಿಯನ್ನು ಜಂತುಗಳಲ್ಲಿ ಕಾಣಬಹುದು. ಜಂತು (ಮೃಗ) ಪೂರ್ತಿಯಾಗಿ ವಿಕಾಸ ಹೊಂದಲು ಮನುಷ್ಯನಾಗುವುದು. ಮನಸ್ಸು ತನ್ನ ಸಂಪೂರ್ಣ ಶಕ್ತಿಯಿಂದ ಕೆಲಸ ಮಾಡುವುದು. ಆದರೇ ಮನಸ್ಸಿನಲ್ಲಿ ಅದಕ್ಕೆ ವ್ಯತಿರಿಕ್ತವಾಗಿ ಅತಿಮಾನಸವಿರುವುದು. ಅದು ಅಂತರ್ಲೀನ ಸ್ಥಿತಿಯಲ್ಲಿರುವುದು. ಯೋಗದಿಂದ ಮಾನವ ಪರಿಪೂರ್ಣನಾಗುವನು. ಅವನು

ಮೂಲಾಧಾರದಲ್ಲಿ ಬಿದ್ದಿರುವ ಚೈತನ್ಯವನ್ನು, ಸಹಸ್ರಾರಕ್ಕೆ ಕೊಂಡೊಯ್ದು, ವಿಕಲ್ಪವಿಲ್ಲದ ಅಥವಾ ವಿಕಲ್ಪಸಹಿತ ಸ್ಥಿತಿ ಸಹಾ ಹೊಂದಲಾಗಿ ಪರಂಜ್ಯೋತಿ ಸ್ವರೂಪನಾದ ಶ್ರೀಗುರುನೊಡನೇ ತದಾತ್ಮ ಸ್ಥಿತಿ ಅನುಭವಿಸುತ್ತಿರುವನು. ಆಗ ಅನಿರ್ವಚನೀಯ ಆನಂದಸ್ಥಿತಿ ಅನುಭವಿಸುತ್ತಿರುವನು. ಆದರೇ ಆತ ಮಹಾಸಂಕಲ್ಪವನುಸರಿಸಿ ನಡೆದುಕೊಳ್ಳುವನು. ಆದ್ದರಿಂದ ಅವನಿಗೆ ಕರ್ಮಬಂಧನಗಳು ಅಂಟಿಕೊಳ್ಳುವುದಿಲ್ಲ. ಆ ಮಹಾಸಂಕಲ್ಪ ಸ್ವರೂಪಮಾತ್ರ ಯೋಚಿಸಲಾಗದ್ದು, ಚಿಂತಿಸಲಾರದು ಮತ್ತು ಅತಿ ದೊಡ್ಡ ವೇಗ ಉಳ್ಳದ್ದು.ಅತಿಮಾನಸ ಕೇವಲ ಶ್ರೀಪ್ರಭುಗಳದು. **ಪ್ರತಿ ಕ್ಷಣ ಕೋಟಿಗಟ್ಟಲೇ ಪ್ರಾರ್ಥನೆಗಳನ್ನು ಶ್ರೀಪ್ರಭುಗಳು ಸ್ವೀಕರಿಸುವರು. ಧರ್ಮಬದ್ಧವಾದ ಪ್ರತಿ ಪ್ರಾರ್ಥನೆಗೂ ಅವರ ಉತ್ತರವಿರುವುದು. ನೋವನ್ನು ನಾಶ ಮಾಡುವರು. ಧರ್ಮಬದ್ಧವಾದ ಪ್ರತಿ ಕೋರಿಕೆಯನ್ನು ಸಹಾ ತೀರಿಸುವರು. ಮಾನವ ಮಾನಸ ವೇಗ ಆಮೆಯದಷ್ಟಾದರೇ, ಅವರ ಅತಿ ಮಾನಸದ ವೇಗ ಪ್ರಚಂಡವಾದದ್ದು ಊಹಿಸಲಾರದ್ದು! ಬೆಳಕಿನ ವೇಗ ಸಹಾ ಸರಿ ಆಗದು. ಮಾನವನ ಅಥವಾ ಬೇರೇ ಯಾವ ಪ್ರಾಣಿಯದೇ ಆಗಲಿ, ಒಂದು ಚಿಕ್ಕ ಪ್ರಾರ್ಥನೆ ಸಹ ಲೆಕ್ಕವಿಲ್ಲದ ಅವರ ಕಾಂತಿ ಸಮೂಹ ಸೇರಲೇಬೇಕು! ಎಲ್ಲಾ ದೃಶ್ಯ ಅದೃಶ್ಯ ಶಕ್ತಿಗಳಿಗೂ ಅವರೇ ಆಧಾರ. ಅವರ ಲೋಕದಲ್ಲಿರುವ ಪ್ರಕಾಶ ಅವರ ತೇಜೋಮಯ ಶರೀರದಿಂದ ಹೊರಡುವ ತೇಜಸ್ಸೇ ಹೊರತು ಮತ್ತೊಂದಲ್ಲ. ಅದು ಕೋಟಿಕೋಟಿ ಸೂರ್ಯ ಪ್ರಕಾಶದಂತೆ ಅನೇಕ ಕೋಟಿ ಬ್ರಹ್ಮಾಂಡಗಳಲ್ಲಿ ಬೆಳಗುತ್ತಿರುವ ಕೋಟ್ಯಾನುಕೋಟಿ ಗ್ರಹ ನಕ್ಷತ್ರಗಳ ಗುಂಪಿನ ಒಟ್ಟು ಬೆಳಕು ಸಹಾ ಅವರ ತೇಜಸ್ಸಿನಲ್ಲಿ ಎಳ್ಳಷ್ಟೇ! ಮಗು! ಇದೇ ಶ್ರೀಪಾದ ಶ್ರೀವಲ್ಲಭರ ನಿಜವಾದ ಕ್ಷುಣ್ಣ ತತ್ತ್ವವು. ಅನಂತ ಶಕ್ತಿ, ಜ್ಞಾನ, ವ್ಯಾಪಕತ್ವ ಹೊಂದಿದ ಆ ನಿರ್ಗುಣ, ಆಕಾರವಿಲ್ಲದ ಸ್ವರೂಪ, ಸೃಷ್ಟಿಯಲ್ಲಿ ತನಗಿರುವ ಎದುರಿಸಲಾಗದಂತಹ ದೊಡ್ಡ ಕರುಣೆಯಿಂದ ಸದ್ಗುಣ ಸಾಕಾರದಿಂದ ಮನುಷ್ಯ ರೂಪದಲ್ಲಿ ಶ್ರೀಪಾದರ ರೂಪದಲ್ಲಿ ದರ್ಶನ ಕೊಡುತ್ತಿದೆ. ಇದನ್ನು ಗ್ರಹಿಸಲೂ ಮಾನವನಿಗೆ ಪರಿಪೂರ್ಣತ್ವ ಸಿದ್ಧಿಸಬೇಕು.**

## ಶ್ರೀಪಾದ ಶ್ರೀವಲ್ಲಭರ ದಿವ್ಯಸ್ವರೂಪ

**ಮಾನವನಿಗೆ ದೇವರ ಕಡೆ ದೃಷ್ಟಿ ಮರಳಿದ ನಂತರ ಸೇರುವುದು ಹೇಗೆ ನಿಶ್ಚಯವೋ. ದೇವರಿಗೆ ಸಹಾ ತನ್ನ ಅನೇಕ ಪರಿಮಿತಿಗಳನ್ನು ದಾಟಿಕೊಂಡು ಕೆಳಗಿನ ಸ್ಥಿತಿಗೆ ತನ್ನ ಭಕ್ತರಿಗಾಗಿ ಬರಲೇಬೇಕಾಗಿರುವುದು. ಇದೇ ಅವತರಣ.** ಇದು ಸದಾ ನಡೆಯುತ್ತಿರುವುದು. ಸತ್ಯವನ್ನು ಒಮ್ಮೆ ಸೃಷ್ಟಿಯಲ್ಲಿ ಪ್ರತಿಷ್ಠಾಪಿಸಿದರೇ ಅದು ತನ್ನಷ್ಟಕ್ಕೆ ತಾನೇ ಕೆಲಸ ಮಾಡುತ್ತಿರುವುದು. **ಸತ್ಯ, ಜ್ಞಾನಾನಂದ ಸ್ವರೂಪರಾದ ಶ್ರೀಪಾದರು ಅನೇಕ ದಿವ್ಯ ಸತ್ಯಗಳನ್ನು ಸೃಷ್ಟಿಯೊಳಗೆ ಪ್ರತಿಷ್ಠಾಪಿಸಬೇಕೆಂದು ದಿವ್ಯ ಭವ್ಯ ಅವತಾರ ತಾಳಿದರು, ಸಾಕ್ಷತ್** ದತ್ತಶ್ರೀಗಳೇ! ಆಗ ನಾನು, "ಸ್ವಾಮಿ! ತಮ್ಮ ಜೊತೆ ಮಾತನಾಡುತ್ತಿದ್ದರೇ ಅದೆಷ್ಟೋ ಹೊಸ ಸಂಗತಿಗಳು ತಿಳಿದುಬರುತ್ತಿವೆ. ಶ್ರೀ ಗುರು ಸ್ವರೂಪ ಕೊನೆ ಮೊದಲೇ ಸಿಗುತ್ತಿಲ್ಲ. ಅವರ ಈ ಭವ್ಯ ದಿವ್ಯ ಚರಿತ್ರೆಯನ್ನು ಹೇಗೆ ಬರೆಯಬೇಕೋ ಯಾವ ವಿಷಯಗಳು ಬರೆಯಬೇಕೋ ತಿಳಿಯುತ್ತಿಲ್ಲ. ತಾವು ಸತ್ಯವನ್ನು ಸ್ಥಾಪಿಸುವುದೆಂದು ಹೇಳಿದಿರಿ. ನಾನೋ ವಿಗ್ರಹಗಳ ಪ್ರತಿಷ್ಠೆ ತಿಳಿದಿದ್ದೇನೇ ಹೊರತು ಸತ್ಯ ಪ್ರತಿಷ್ಠೆ ಕೇಳೂ ಇರಲಿಲ್ಲವೇ! ದಯವಿಟ್ಟು ಬಿಡಿಸಿ ತಿಳಿಸಿ" ಎಂದು ಪ್ರಾರ್ಥಿಸಿದರು. ಆಗ ತಿರುಮಲದಾಸರು, **"ಸ್ವಾಮಿ, ಶಂಕರ ಭಟ್ಟಾ! ನೀನು ಶ್ರೀಗಳ ಚರಿತ್ರೆಯನ್ನು ಬರೆಯಲೂ ಸಂಕಲ್ಪಗೊಂಡಿರುವವನು. ನಿನಗೆ ಎದುರಾದ ಶ್ರೀಪಾದ ಭಕ್ತರ ಅನುಭವಗಳನ್ನು ಅವರು ಹೇಳುತ್ತಾ ಬಂದ ವಿಷಯಗಳನ್ನೂ ಬರೆಯುರಿ ಸಾಕು. ನಿಮ್ಮ ವಿವರಣೆ ಬೇಕಿಲ್ಲ. ಶ್ರೀಗಳ ಚರಿತ್ರೆ ಶ್ರೀಗಳೇ ಬರೆಸಿಕೊಳ್ಳುವುರು. ಇದಕ್ಕೆ ಮೀರಿ ನೀವು ಯೋಚಿಸುವುದೇ ವ್ಯರ್ಥ"** ಎಂದು ದೃಢೀಕರಿಸಿದರು.

ಮಾನವನು ವಿವಿಧ ಆಹಾರ ಪದಾರ್ಥಗಳನ್ನು ಗ್ರಹಿಸುವನು. ಅವು ಸ್ವತಃ ಜೀರ್ಣಗೊಂಡು ಅವನಿಗೆ ಶಕ್ತಿ ನೀಡುತ್ತಿವೆ. ಈ ಕ್ರಿಯೆಗೆ ಅವನ ಅಗತ್ಯವೇ ಆಗಲಿ ಉಪಯೋಗವೇ ಆಗಲಿ ಶೂನ್ಯ. ಆಹಾರ ಸಂಗ್ರಹಿಸಿ ತಿನ್ನುವವರಿಗೆ ಅವನ ಬಾಧ್ಯತೆ, ನಂತರದ ಕೆಲಸ **ಶರೀರದ ಕರ್ತವ್ಯ. ಮಾನವನಿಗಿರುವ ಮನಸ್ಸಿನಿಂದಲೇ ಸ್ವತಂತ್ರವಾಗಿ ತಪ್ಪುಸರಿಗಳನ್ನು ಮಾಡುತ್ತಿರುವನು. ಆದರೆ ಶರೀರಕ್ಕೆ ಆ ಸ್ವೇಚ್ಛೆ ಇಲ್ಲ. ಅದು ತಿಂದ ಆಹಾರವನ್ನು ಯಥಾರೀತಿ ಜೀರ್ಣಿಸಿ ಶಕ್ತಿ ಕೊಡಲೇಬೇಕು. ತಿಂದವನು ಇಷ್ಟಪಡಲಿ ಇಲ್ಲದಿರಲಿ, ಅಂದರೆ ಶರೀರಕ್ಕೆ ಒಂದು ವಿಧಿ ಇಡಲಾಗಿದೆ. ಅದಕ್ಕೆ ಸಂಬಂಧಿಸಿದ ಸತ್ಯವು ಸ್ಥಿರಪಡಿಸಲಾಗಿದೆ. ಸತ್ಯದಿಂದ ನಡೆಯುವ ಕಾರ್ಯಗಳು ಆ ಪ್ರಯತ್ನವಾಗಿ ನಮ್ಮ ಸಂಕಲ್ಪಗಳಿಲ್ಲದೇನೇ ನಡೆದು ಹೋಗುತ್ತಿರುವವು.** ಪ್ರಕೃತಿಯ ಕಾರ್ಯಕಲಾಪಗಳೆಲ್ಲವೂ ಸತ್ಯದ ಆಧಾರದ ಮೇಲೆ ನಡೆಯುತ್ತಿರುವವು. ಸೂರ್ಯೋದಯಾಸ್ತಮಯಗಳು, ಋತುಚಕ್ರ ಗ್ರಹ ನಕ್ಷತ್ರಾದಿಗಳ ಗತಿಗಳು ಹೀಗೆಯೇ ಒಂದೇ ಸಮ ನಡೆಯುತ್ತಿರುವವು. ಇದು ದಾಟಬಾರದಂತಹ ಶಾಸನ. ಅಂದರೆ ಈ ಕಾರ್ಯಗಳು ಬೇರೊಂದು ರೀತಿ ನಡೆಯಲೂ ಸ್ವತಂತ್ರ ನೀಡಿಲ್ಲ. ಪ್ರಭುಗಳು ಮಾತ್ರ ಸೃಷ್ಟಿಯ ಪ್ರಾಣಿಗಳ ಮೇಲೆ ದಯೆ ಬರಲು, ನಿರ್ಣಯಿಸಿದ ಕರ್ಮವನ್ನು ಸ್ವಲ್ಪ ಸರಳ ಮಾಡುವನು. ಕೃತಯುಗದಲ್ಲಿ ಎಲ್ಲವೂ ಸಂಕಲ್ಪ ಮಾತ್ರದಿಂದ ಸಿದ್ಧಿಸುತ್ತಿರುವುದು. ತ್ರೇತಾಯುಗದಲ್ಲಿ ಇದೇ ಯಜ್ಞಯಾಗಾದಿಗಳಿಂದ ಲಭಿಸುತ್ತಿತ್ತು. ದ್ವಾಪರದಲ್ಲಿ ಮಾತ್ರ ಅಸ್ತ್ರ ಪ್ರಯೋಗದಿಂದ ಸಿಗುತ್ತಿತ್ತು. ಕಲಿಯುಗದಲ್ಲಿ ತಂತ್ರ ಶಾಸ್ತ್ರಕ್ಕೆ ಪ್ರಾಮುಖ್ಯತೆ ಇದೆ. ಈ ಯುಗದಲ್ಲಿ ಯಂತ್ರಗಳಿಂದ ಸಿದ್ಧಿ ಲಭಿಸುತ್ತಿರುವುದು. ಯುಗ ಧರ್ಮಗಳಾನುಸಾರ ಸರಳೀಕರಣ ಮಾಡಲಾಗಿದೆ. ಮಾನವರ ಶಕ್ತಿಯುಕ್ತಿಗಳು ಕಡಿಮೆ ಆಗುತ್ತಿರಲು ಸರಳೀಕರಣ ಹೆಚ್ಚಿದೆ.

## ಶ್ರೀಪಾದರ ನಿರಂತರ ಧ್ಯಾನದಿಂದ ಅವರ ದರ್ಶನ ಲಭಿಸುವುದು

ಮೂರು ರಾತ್ರಿ ಹಗಲು ಒಂದೇ ಸಮನೆ ಶ್ರೀಪಾದ ಶ್ರೀವಲ್ಲಭರ ಸ್ಮರಣೆ ಮಾಡುತ್ತಾ, ಅವರನ್ನು ಧ್ಯಾನ ಮಾಡುವರಿಗೆ ಶ್ರೀಪಾದರು ಶರೀರದಿಂದಲೇ ದರ್ಶನ ಕೊಟ್ಟು ಧನ್ಯರನ್ನಾಗಿ ಮಾಡುವರು. **ಮಾನವ ಕೆಡಲು ಒಂದು ಲಕ್ಷ ಮಾರ್ಗಗಳನ್ನು ಹಿಡಿದರೇ, ಅವನನ್ನು ಉದ್ಧರಿಸಲೂ ಭಗವಂತ 10 ಲಕ್ಷ ಮಾರ್ಗಗಳು ಪ್ರಸಾದಿಸುವನು. ಶ್ರೀದತ್ತರು ಅವರ ಅಂಶಾವತಾರಗಳಿಂದ, ಸಿದ್ಧರು, ಯೋಗಿಗಳು ಅವಧೂತರು ಮತ್ತು ಮಹಾಸಿದ್ಧರಿಂದಲೂ ಈ ಸೃಷ್ಟಿಪಾಲನೆ ಮಾಡುತ್ತಿರುವರು.**

**ಪೂರ್ವ ಯುಗದ ಶ್ರೀದತ್ತರೇನಾ ಈ ಶ್ರೀಪಾದರು ಎಂದು ಸಂಶಯ ನಿನ್ನ ಮನಸ್ಸಿನಲ್ಲಿದೆ. ಅದನ್ನು ತೊಲಗಿಸಲೆಂದೇ ಶ್ರೀಪಾದರು ನೀವು ನೈವೇದ್ಯಕ್ಕಾಗಿ ಇಟ್ಟ ಕಡಲೆಯನ್ನು ಕಬ್ಬಿಣದ ತುಣುಕುಗಳಂತೆ ಮಾಡಿದರು. ಅನುಸೂಯ ಮಾತೆ ಲೋಹದ ತುಂಡುಗಳನ್ನು, ತಿನ್ನಲು ಯೋಗ್ಯವಾದ ಕಡೆಲೆಯಂತೆ ಮಾಡಿದರು. ನಾನು ಅಂದಿನ ದತ್ತನೇ ಎಂದು ಗುರ್ತುಮಾಡಲು, ಹೀಗೆ ತೋರಿಸಿದರು. ಇದರಲ್ಲಿ ಮತ್ತೊಂದು ರಹಸ್ಯ ಸಹಾ ಅಡಗಿದೆ. ನಿನ್ನ ಜಾತಕದಲ್ಲಿ ಗುರು ಅನಾರೋಗ್ಯದ ಸ್ಥಾನದಲ್ಲಿದ್ದಾನೆ. ಗುರು ಗ್ರಹಕ್ಕೆ ಕಡಲೆಯ ಸಂಬಂಧ ಇದೆ. ಗುರು ಗ್ರಹದಿಂದ ನಿನಗಾಗಲಿರುವ ವಿಪತ್ತುಗಳು ಮೊಳಕೆ ಹೊಂದಲಿರುವ ಬೀಜ ರೂಪದಲ್ಲಿವೆ ಎಂದು, ಅ ವಿಪತ್ತುಗಳು ಮೊಳಕೆ ಏಳದಂತಹ ಲೋಹಸ್ಥಿತಿಗೆ ಕಡಲೆಗಳನ್ನು ಬದಲಾಯಿಸಿದ್ದೇನೆ ಎಂದು ತಿಳಿಸಲು ಶ್ರೀಗಳ ಸಂಕೇತವೇ ಆ ಕಡಲೆ ಬದಲಾವಣೆ! ಶ್ರೀಗಳೂ ಅವರ ಮನಸ್ಸಿನಲ್ಲಿ ನೋಡದಂತಹದ್ದು ಯಾವುದೂ ಈ ಸೃಷ್ಟಿಗೆ ಬರಲಾರದು,** ಜೀವಿಯೂ ಬರಲಾರದು, ಇದು ಪರಮಸತ್ಯ. ಸತ್ಯವಸ್ತುವಿಗೆ ಸಂಬಂಧಪಟ್ಟ ಜ್ಞಾನ, ಸುಪ್ರತಿಷ್ಠಿತವಾಗಿರುವುದರಿಂದ ಆ ಜ್ಞಾನವನ್ನು

ಹೊಂದಿದವರೆಲ್ಲಾ ಈ ಲೋಕದಿಂದ ಹೊರಬಿದ್ದರೂ ನಷ್ಟವಿಲ್ಲ. ಆ ಜ್ಞಾನ ಪಡೆಯಲು ಯೋಗ್ಯತೆ ಉಳ್ಳ ಮಾನವನು ಈ ಸೃಷ್ಟಿಯೊಳಗೆ ಬರುವ ಸಮಯ ಜ್ಞಾನವು ಖುದ್ದಾಗಿ ಆತನನ್ನು ವರಿಸುವುದು. ದೈವ ಶಕ್ತಿಗಳು, ಚಿರಂಜೀವಿಗಳಾದ ಮುನಿಗಳು ಅವತಾರ ಪುರುಷರು ಎಲ್ಲರೂ ಅವಿನಾಶ ತತ್ತ್ವಕ್ಕೆ ಸೇರಿದವರೇ. ಮಾನವರು, ವಿನಾಶ ತತ್ತ್ವಕ್ಕೆ ಸೇರಿದವರು. ಅವಿನಾಶ ತತ್ತ್ವದ ಜ್ಞಾನ, ಸ್ಥಿತಿ, ಶಕ್ತಿ, ಗತಿಗಳು ಹೀಗೆ ಇರಬೇಕೆಂಬುವ ಕಡ್ಡಾಯವಿಲ್ಲ. ಅದು ಸ್ವೇಚ್ಛಾತತ್ತ್ವ, ಪರಿಪೂರ್ಣ, ಬಹಳ ಪುರಾತನವಾದದ್ದು ಮತ್ತು ಬಹಳಷ್ಟು ನವೀನವಾದದ್ದು ಸಹಾ! **ಕಾರಣವಿಲ್ಲದೇ ಯಾವ ಕಾರ್ಯವೂ ನಡೆಯಲಾಗದು. ಎಲ್ಲಾ ಕಾರ್ಯಗಳಿಗೂ ಎಲ್ಲಾ ಕಾರಣಗಳಿಗೂ ಒಂದೇ ಒಂದು ತತ್ತ್ವವೇ ಆಧಾರ. ಅದು ಎಲ್ಲದಕ್ಕೂ ಮೀರಿದ್ದು. ಅದೇ ದತ್ತ ತತ್ತ್ವ. ಆ ದತ್ತ ಪ್ರಭುಗಳು ತನ್ನ ಎಲ್ಲಾ ಕಲೆಗಳಿಂದ ಕಲಿಯುಗದಲ್ಲಿ ಪ್ರಪ್ರಥಮವಾಗಿ ಶ್ರೀಪಾದ ಶ್ರೀವಲ್ಲಭರಾಗಿ ಜನಿಸಿದ್ದು, ಈ ಪೀಠಾಪುರದಲ್ಲೇ. ಅಂತಹಾ ಶ್ರೀಪಾದ ಶ್ರೀವಲ್ಲಭರನ್ನು ಕುರಿತು ವರ್ಣಿಸಿ ಹೇಳಲು 1000 ಶಿರಸ್ಸುಗಳುಳ್ಳ ಆದಿಶೇಷರಿಗೆ ಸಹಾ ಆಗದ ವಿಷಯ.**

ಮಗೂ! ಶ್ರೀಪಾದ ಶ್ರೀವಲ್ಲಭರು ಅನೇಕಬಾರಿ ಅವರು ಶ್ರೀ ನೃಸಿಂಹ ಸರಸ್ವತಿಗಳಾಗಿ ಅವತರಿಸುವರೆಂದು ತಿಳಿಸಿದ್ದಾರೆ. ಹಿರಣ್ಯಕಶ್ಯಪನು ವಿಚಿತ್ರವಾದ ವರವನ್ನು ಹೊಂದಿದ್ದನು. ಅವನ ಅಂತ್ಯ ಆಗುವುದಿಲ್ಲ ಎಂದಿದ್ದರು. ಆದರೂ ಕೊಟ್ಟ ವರಗಳಿಗೆ ವ್ಯತಿರೇಕವಾಗಿರದೇ ಊಹೆಗೆ ಮೀರಿದ ವಿಧವಾಗಿ ನೃಸಿಂಹಾವತಾರ ಹಿರಣ್ಯಕಶ್ಯಪನನ್ನು ಕೊನೆಗೊಂಡಿಸಿತು. ಪರಮ ಭಕ್ತನಾದ ಪ್ರಹ್ಲಾದನನ್ನು ರಕ್ಷಿಸಿತು. ಪ್ರಹ್ಲಾದನು ಸ್ಥಂಭದೊಳಗೆ ಸಹಾ ತನ್ನ ಪ್ರಭುಗಳಿರುವರೆಂದು ತೀರ್ಮಾನಿಸದನು. ಸ್ವಾಮಿ ಸ್ಥಂಭದಿಂದ ಪ್ರಕಟಿತವಾದರು. **ಇಷ್ಟಕ್ಕೂ ದೇವರಿರುವರಾ? ಇಲ್ಲವಾ? ಎಂಬುವ ಸಂಶಯಗಳು ಕಲಿಯುಗದಲ್ಲಿ ಲೆಕ್ಕವಿಲ್ಲದಷ್ಟು. ಕಲಿಯುಗದ ಹಿರಣ್ಯಕಶ್ಯಪರ ಮದ ನಾಶ ಮಾಡಲು, ಪ್ರಹ್ಲಾದನಂತಹ ಸದ್ಭಕ್ತರನ್ನು ರಕ್ಷಿಸಲು ಶ್ರೀದತ್ತ ಪ್ರಭುಗಳು ಅವತರಿಸಿರುವರು. ಭಗವಂತನಿರುವನೆಂದು ರುಜುವಾತುಮಾಡುವುದೇ ನೃಸಿಂಹಾವತಾರದ ವಿಶಿಷ್ಟತೆ. ದೈವದೂಷಣೆ ಮಾಡುವವರ ಅಂತ್ಯ ಕಾಣುವುದು, ದೈವ ಭಕ್ತರನ್ನು ಕಣ್ಣಿನ ರೆಪ್ಪೆಯಂತೆ ಕಾಪಾಡುವುದೆಂಬ ಈ ಎರಡು ಪ್ರಧಾನ ಉದ್ದೇಶ್ಯಗಳಿಂದ ಸೃಷ್ಟಿಗೆ ಬಂದ ಅವತಾರಗಳೇ ಶ್ರೀಪಾದ ಶ್ರೀವಲ್ಲಭ ಮತ್ತು ಶ್ರೀನೃಸಿಂಹ ಸರಸ್ವತಿ. ಶ್ರೀಪಾದರಿಗೆ ಅಸಾಧ್ಯವಾದದ್ದೇನೂ ಇಲ್ಲ.**

ಈ ರೀತಿ ತಿರುಮಲದಾಸರು ಹೇಳುತ್ತಿರಲು ನನಗೆ ಒಂದು ಸಂದೇಹ ಬಂದಿತು. ನಾನು ಭೂರ್ಜ ಪತ್ರಗಳ ಮೇಲೆ ಶ್ರೀಪಾದ ಶ್ರೀವಲ್ಲಭರ ಚರಿತಾಮೃತ ಬರೆಯುತ್ತಿದ್ದೆನು. ಮುಂದಿನ ಪೀಡೆಗಳು ಎಂತಹ ಪತ್ರಗಳ ಮೇಲೆ ಬರೆಯುವರೋ, ಶಾಲಿವಾಹನ ಶಕ ಈಗ ವ್ಯವಹಾರದಲ್ಲಿದೆ. ಮುಂದೆ, ಹೂಣ ಶಕ ಬರುವುದೆಂದು ಶ್ರೀಪಾದರು ತಿಳಿಸಿದ್ದಾರಂತೆ, ಶ್ರೀಕೃಷ್ಣರ ಅಂತ್ಯ ಎಂದಾಯಿತು? ಈ ಕಲಿಯುಗ ಎಂದು, ಎಷ್ಟು ಸಮಯಕ್ಕೆ ಆರಂಭವಾಯಿತು? ಮುಂದೆ ಜನರು ಪಾಲಿಸುವ ಕಾಲಗಣನೆ ಪ್ರಕಾರ ಅವರು ಉಪಯೋಗಿಸಲಿರುವ ಪತ್ರದ ಮೇಲೆ ಈ ವಿಷಯವನ್ನು ಬರೆದುಕೊಟ್ಟಲ್ಲಿ, ನಾನು ಶ್ರೀಪಾದ ಶ್ರೀವಲ್ಲಭರನ್ನು ಶ್ರೀದತ್ತಾವತಾರಿಯೇ ಎಂದು ನಂಬುವೆನು.

ನನ್ನ ಒಳಗಿನ ಈ ಸಂದೇಹಗಳನ್ನು ತಿರುಮಲದಾಸರಿಗೆ ತಿಳಿಸದೇ ಅವರು ಹೇಳುತ್ತಿರುವ ವಿಷಯಗಳು ಕೇಳುವಂತೆ ನಟಿಸುತ್ತಾ ಮುಗುಳ್ನಗೆ ತಾಳಿ ಆ ಲೋಹದ ಕಡಲೆಗಳನ್ನು ನೋಡುತ್ತಿದ್ದೆನು.

ಇಷ್ಟರಲ್ಲಿ ತಿರುಮಲದಾಸರ ಕಂಠ ಗೊಗ್ಗುರಗೊಂಡಿತು. ಮಾತು ಆಡಲೂ ಶಕ್ತಿ ಇರಲಿಲ್ಲ, ಶ್ರೀಪಾದರ ಚರಿತ್ರೆ ಕೇಳುತ್ತಿದ್ದ ನಾನು ಹಿಂದೆಂದೂ ಕೇಳದಂತಹಾ ಭಯಂಕರ ಧ್ವನಿ ಕೇಳಿದೆನು. ಆ ಕಾರಣ ನನಗೆ ಸಂಪೂರ್ಣವಾಗಿ ಕಿವುಡು ಮುಚ್ಚಿತು.

ಅಯ್ಯೋ! ಒಂದೇ ಕ್ಷಣದಲ್ಲಿ ಶ್ರೀ ತಿರುಮಲದಾಸರು ಮೂಕನಾಗಿಯು, ನಾನು ಕಿವುಡನಾಗಿಯು ಆಗಿಬಿಟ್ಟೆವು. ತಿರುಮಲದಾಸರು ಏನೋ ಹೇಳಲೂ ಪ್ರಯತ್ನಿಸುತ್ತಿದ್ದರು, ಆಗುತ್ತಿರಲಿಲ್ಲ. ನಾನು ಎಷ್ಟು ಪ್ರಯತ್ನಿಸಿದರೂ ಚಿಕ್ಕ ಧ್ವನಿ ಸಹಾ ಕೇಳಿ ಬರುತ್ತಿರಲಿಲ್ಲ! ಆಗ ನಾನು, 'ಬರಬಾರದಂತಹ ಸಂಶಯವನ್ನು ನಾನು ಯೋಚಿಸಿ ಬ್ರಹ್ಮಕಿವುಡನ್ನು ತಂದು ಕೊಂಡಿದ್ದೇನೆ. ದೇವರೇ! ಇದು ಶಾಶ್ವತವಾಗದಿರಲಿ, ನಾನೇನು ಮಾಡಲಿ?' ಅಂದುಕೊಂಡೆ.

## ಪ್ರಸಾದಕ್ಕೆ ಇಟ್ಟ ಕಡಲೇ, ಕಬ್ಬಿಣ ತುಂಡುಗಳಾಗಿ "ಶ್ರೀಪಾದರಾಜಂ ಶರಣಂ ಪ್ರಪದ್ಯೆ" ಆಕಾರ ಹೊಂದುವುದು

**ಇಷ್ವರಲ್ಲಿ ನೈವೇಧ್ಯಕ್ಕೆಂದು ಇಟ್ಟ ಕಡಲೆ ಕಬ್ಬಿಣ ತುಂಡುಗಳಾಗಿ ಬದಲಾವಣೆಗೊಂಡು ತೆಲುಗಿನಲ್ಲಿ** ''శ్రీపాదం రాజం శరణం ప్రపద్యే'' **ಎಂಬ ಆಕಾರದಲ್ಲಿ ನಿಂತಿತು.** ಅವುಗಳ ಮೇಲೆ ಬಿಳಿಯ ಚಿಕ್ಕ ಪತ್ರ ಕಾಣಿಸಿತು. ನೋಡುತ್ತಿರಲೂ ಅದು ದೊಡ್ಡವಾಯಿತು. ಅದು ದೀರ್ಘಚತುರಶ್ರವಾಯಿತು. ಭೂರ್ಜಪತ್ರಗಳಿಗಿಂತಾ ಕಡಿಮೆ ದಪ್ಪ ಇತ್ತು. ಮುಟ್ಟಲು ಮೃದುವಾಗಿತ್ತು, ಕಪ್ಪು ಲಿಪಿ ಸುಂದರವಾಗಿತ್ತು. ತೆಲುಗುನಲ್ಲಿ ''ಶ್ರೀಕೃಷ್ಣ ನಿರ್ಯಾಣ ಕ್ರೀಸ್ತುಪೂರ್ವ 3102ನೇ ವರುಷ ಫೆಬ್ರವರಿ 18, ರಾತ್ರಿ 2 ಗಂ॥ 27 ನಿ॥ 30 ಸೆಕೆಂಡು. ಇದು ಪ್ರಮಾದಿ ನಾಮ ಸಂವತ್ಸರ, ಚೈತ್ರ ಶುದ್ಧ ಪಾಡ್ಯ, ಶುಕ್ರವಾರ, ಅಶ್ವಿನೀ ನಕ್ಷತ್ರ, ಇದರ ನಂತರ ಕಲಿ ಪ್ರವೇಶಿಸಿದರು''.

ನನಗೆ ಬೆವರು ಸುರಿಯಲಾರಂಭಿಸಿತು. ಒಳಗಿನ ನೀರೆಲ್ಲಾ ಬೆವರಾಗಿ ಹೋಗುತ್ತಿತ್ತು. ಶರೀರ ಕಂಪಿಸತೊಡಗಿತು. ಶ್ರೀಪಾದರು, ಕಾಣದೇ ಅಲ್ಲಲ್ಲೇ ಇರುವುದು ನನಗೆ ಖಚಿತವಾಯಿತು. ಮನಸ್ಸಿನಲ್ಲಿ ''ಏನು ನನ್ನ ದುರದುಷ್ಟ? ನಾನು ಕುರುವಪುರ ಸೇರುವುದು, ಶ್ರೀಗಳ ಚರಿತ್ರೆ ಬರೆಯುವುದು, ನನಗೆ ನಂಬಿಕೆ ಇಲ್ಲ. ಶ್ರೀಪಾದರು ನನ್ನ ಅವಿವೇಕತ್ವಕ್ಕೆ ನೃಸಿಂಹಾವತಾರ ತಾಳಿ ನನ್ನನ್ನು ಸಂಹರಿಸಿದರೂ ಆಶ್ಚರ್ಯವಿಲ್ಲ. 'ಬಟ್ಟೆ ಒಗೆದ ಹಾಗೆ, ಶಂಕರ ಭಟ್ಟನನ್ನು ಒಗೆದು ಒಣಗಾಕು' ಎಂದು ತಿರುಮಲದಾಸರಿಗೆ ಶ್ರೀಗಳು ಆಜ್ಞಾಪಿಸಿದರೇ? ಎಂದು ಹೆದರುತ್ತಿದ್ದೆ. ಆತ್ಮಜ್ಞಾನರೆಂದು ದೊಡ್ಡದಾಗಿ ಹೇಳಿಕೊಳ್ಳುವ ಕೆಲ ಗುರುಗಳು, ಸಾಧಾರಣವಾಗಿ ಬ್ರಹ್ಮಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ತಮ್ಮ ಶಿಷ್ಯಂದರಿಗೆ ಉಪದೇಶಿಸುತ್ತಾ ದ್ರವ್ಯದ ಅಪೇಕ್ಷೆಯಿಂದ ಶಿಷ್ಯರನ್ನು ಪ್ರಶಂಸಿರುವರು. ಹಾಗಿಯೇ ಆ ಶಿಷ್ಯರು ಸಹಾ ಇಂತಹ ಗುರುಗಳ ಪ್ರಶಂಸೆ ಹೊಂದಿರುವೆನೆಂದು ಗರ್ವಿಸುವನು. ಇಂತಹ ಗುರುಶಿಷ್ಯರಿಬ್ಬರೂ ದೋಷಿಗಳೇ! **ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ನನಗೆ ಅಗಸ ಕುಲದವರಾದ ತಿರುಮಲದಾಸರಿಂದ ಬ್ರಹ್ಮಜ್ಞಾನವನ್ನು ಉಪದೇಶಿಸುವುದು ಶ್ರೀಪಾದರ ಚಮತ್ಕಾರ.** ಈ ಸುತ್ತಮುತ್ತಲಿರುವ ಅಗಸರೆಲ್ಲಾ ತಮ್ಮ ವೃತ್ತಿಯೇ ವಿನಃ ಇಂತಹ ಆಳವಾದ ವಿಷಯಗಳನ್ನು ಚರ್ಚಿಸುವುದೇ ಆಗಲಿ, ಅರ್ಥಮಾಡಿಕೊಳ್ಳುವುದೇ ಆಗಲಿ ಇಲ್ಲ. ಯಾವುದೇನಾದರೂ ನನಗೆ ಶ್ರೀಪಾದ ಶ್ರೀವಲ್ಲಭರೇ ಶರಣು.

ನಾನು ತಿರುಮಲದಾಸರನ್ನು ಪ್ರಸನ್ನ ಮುಖದಿಂದ, ಬ್ರಹ್ಮವರ್ಚಸ್ಸಿನಿಂದ ತುಂಬಿರುವುದನ್ನು ಕಂಡೆನು. ಆಗ ಆತ ಬ್ರಾಹ್ಮಣನೆಂದು, ಮಲಿನ ಮನಸ್ಕನಾದ ನಾನು ಅಗಸನೆಂದು ಅನಿಸಿತು.

ನೈವೇದ್ಯಕ್ಕಿಡಲಾಗಿದ, ಕಬ್ಬಿಣ ತುಣುಕುಗಳಾಗಿ ಹೋದ ಕಡಲೇ, ಪುನಃ ಕಡಲೇ ಆದೆವು. ಶ್ರೀಪಾದರು ನನ್ನನ್ನು ಕ್ಷಮಿಸಿದರೆಂದು ಎಣಿಸಿ ನೋಡುತ್ತಿರಲು ಆ ಬಿಳಿಯ ಚೀಟಿ (ಪತ್ರ) ಸಹಾ ಮಾಯವಾಯಿತು.

ತಿರುಮಲದಾಸರು ಹೀಗೆಂದರು, ''ಮಗು, ಶಂಕರ ಭಟ್ಟು! ಈ ಕಲಿಯುಗ, ಲೋಹಯುಗ. ಇದೆಲ್ಲವೂ ಕಲ್ಮಷದಿಂದ ಕೂಡಿದ ಯುಗ. ಶ್ರೀಪಾದರ ಆಜ್ಞೆಯಂತೆ ನಾನು ಶರೀರವನ್ನು ಸಾಕುಮಾಡಿ ಕೆಲ ಕಾಲದ ನಂತರ ಹಿರಣ್ಯ ಲೋಕದಿಂದ ಮರಾಠ ಭೂಮಿಯಲ್ಲಿ ಹುಟ್ಟಲೇಬೇಕು''.

''ಸ್ವಾಮಿ! ಶ್ರೀಪಾದರು ತಮ್ಮನ್ನು ಸಹ ಶರೀರ ಪತನಾನಂತರ ಮತ್ತೊಂದು ಜನುಮ ತಾಳಬೇಕೆಂದು ಆಜ್ಞಾಪಿಸಿದರಾ? ಅದು ತಿಳಿಸಿ ನನ್ನನ್ನು ಧನ್ಯಮಾಡಿ'' ಎಂದೆನು.

ತಿರುಮಲದಾಸರು, ''ಒಂದು ಸಲ ನಾನು ಶ್ರೀಪಾದರ ತಾಯಿಯ ತವರು ಮನೆಗೆ ಒಗೆದ ಬಟ್ಟೆಗಳನ್ನು ತೆಗೆದುಕೊಂಡು ಹೋದೆ. **ಸುಮತಿ ಮಹಾರಾಣಿ ಸೋದರಮಾವರಾದ ಶ್ರೀಧರಾವಧಾನಿಗಳು ಶ್ರೀಪಾದರನ್ನೆತ್ತಿಕೊಂಡು ಆಟ ಆಡುಸುತ್ತಿದ್ದರು. 'ದತ್ತದಿಗಂಬರ, ದತ್ತದಿಗಂಬರ, ದತ್ತದಿಗಂಬರ ಅವಧೂತ!' ಎಂದು ಹಾಡುತ್ತಿದ್ದರು. ಎರಡೇ ವರುಷದ ಶ್ರೀಪಾದರು ಸಂತಸದಿಂದ ಕಿರುಚುತ್ತಾ ಆಡುತ್ತಿದ್ದ ದೃಶ್ಯ, ಕಮನೀಯ! ನಾನು, "ಶ್ರೀಪಾದವಲ್ಲಭ ದಿಗಂಬರ" ಎಂದೆನು. ಶ್ರೀಧರಾವಧಾನಿಗಳು ನನ್ನನ್ನು ನೋಡುತ್ತಿರಲೂ, ಶ್ರೀಪಾದರು "ನೃಸಿಂಹ ಸರಸ್ವತಿ ದಿಗಂಬರಾ!" ಎಂದರು. ತಾವು ಸಾಕ್ಷತ್ ದತ್ತ ಪ್ರಭುಗಳಾಗಿ, ಹಿಂದಿನ ಜನುಮದಲ್ಲಿ ಅವತರಿಸಿದರೆಂದು ಈಗ ಶ್ರೀಪಾದ ಶ್ರೀವಲ್ಲಭರಾಗಿರುವರೆಂದು, ಇದರ ನಂತರ ನೃಸಿಂಹ ಸರಸ್ವತಿಗಳಾಗಿ ಬರಲಿರುವರೆಂದು ಶ್ರೀಪಾದರು ತಮ್ಮದೇ ಆದ ಶೈಲಿಯಲ್ಲಿ ಬೋಧಿಸಿದರು.**

## ಸಮರ್ಥ ಸದ್ಗುರುಗಳೇ ಷಿರಿಡಿಸಾಯಿಬಾಬ ಆಗಿ ಅವತರಿಸುವುದು

ಶ್ರೀಪಾದರು, ''ತಾತಾ! ನಾನು, ನೃಸಿಂಹ ಸರಸ್ವತಿಯಾಗಿ ಮರಾಠ ದೇಶದಲ್ಲಿ ಬರಲಿದ್ದೇನೆ. ತಿರುಮಲದಾಸರನ್ನು ಸಹಾ ಮರಾಠ ದೇಶಕ್ಕೆ ಕರೆಯುತ್ತಿದ್ದೇನೆ'' ಎಂದರು. ಶ್ರೀಧರಾವಧಾನಿಗೆ ಮಾತೇ ಹೊರಡಲಿಲ್ಲ. ಆಗ ತಿರುಮಲದಾಸರು, ''ನಾನು, ಯಾವಾಗ ಯಾವ ರೂಪದಲ್ಲಿ ಯಾವ ಜನುಮದಲ್ಲಿ ಎಲ್ಲಿದ್ದರೂ ನನ್ನನ್ನು ದಯೆದಿಂದ ನೋಡಿಕೊಳ್ಳುವ ಭಾರ ತಮ್ಮದು. ನನಗೆ ನಿಮ್ಮ ಬಾಲಕೃಷ್ಣ ರೂಪದ ಹುಚ್ಚು ಅಧಿಕ!'' ಎಂದೆನು. ಆಗ ಶ್ರೀಪಾದರು, ''ತಿರುಮಲದಾಸ! ನೀನು ಮರಾಠ ದೇಶದಲ್ಲಿ ಗಾಡ್ಗೆ ಮಹಾರಾಜ್ ಎಂಬ ಹೆಸರಿಂದ ಅಗಸ ಕುಲದಲ್ಲಿ ಹುಟ್ಟುವೆ. ದೀನ ದಳಿತ ದುಃಖಿತರ ಸೇವೆಯಲ್ಲಿ ಪುನೀತನಾಗುವೆ! ಧೀಶಿಲಾನಗರದೊಳು 'ಸಾಯಿಬಾಬಾ' ಹೆಸರಿನಲ್ಲಿ ಮುಸಲ್ಮಾನ್ ವೇಷದಲ್ಲಿ ನನ್ನ ಸಮರ್ಥ ಸದ್ಗುರು ಅವತಾರ ಬರಲಿದೆ. ನೀನು ತಪ್ಪದೇ ಮುಸ್ಲಿಮ್ ವೇಷದಲ್ಲಿರುವ ನನ್ನ ಸಮರ್ಥ ಸದ್ಗುರು ಅವತಾರದ ಅನುಗ್ರಹವನ್ನು ಹೊಂದುವೆ! ನಿನಗೆ, ಬಾಲಕೃಷ್ಣ ರೂಪದಲ್ಲಿ ಆಸೆ ಹೆಚ್ಚು. ಆದ್ದರಿಂದ ''ಗೋಪಾಲ, ಗೋಪಾಲ, ದೇವಕೀನಂದನ ಗೋಪಾಲ'' ಎಂದು ಜಪಿಸುವೆ. ನಿನ್ನ ಮನೋನೇತ್ರದೊಳು ಸದಾ ನಾನು ನಿನಗೆ ದರ್ಶನ ಕೊಡುವೆನು. ನೀನು ಈ ಶರೀರ ಪತನಾನಂತರ ಸ್ವಲ್ಪಕಾಲ ಹಿರಣ್ಯ ಲೋಕದಲ್ಲಿದ್ದು ನಂತರ ಗಾಡ್ಗೆ ಮಹರಾಜ್ ಆಗಿ ಲೋಕ ಹಿತ ಮಾಡು. ಇದೇ ನಿನಗೆ ನನ್ನ ವರ ಮತ್ತು ನನ್ನ ಅಭಯ!'' ಎಂದು ನನ್ನನ್ನು ಆಶೀರ್ವದಿಸಿದರು.

ಸ್ವಲ್ಪ ಸಮಯದ ನಂತರ ಶ್ರೀಧರಾವಧಾನಿಗಳು ಯಥಾಸ್ಥಿತಿಗೆ ಬಂದರು. ಅವರಿಗೆ ಇದೆಲ್ಲಾ ಅಯೋಮಯವಾಗಿತ್ತು. ಇಷ್ಟರಲ್ಲಿ ಸುಮತಿ ಮಹಾರಾಣಿ ಅವರ ಸೋದರಮಾವನನ್ನು ಕರೆದರು. ಅವರಿಗೆ ಪೂರ್ತಿಯಾಗಿ ಮಾಯೆ ಆವರಿಸುವುದರಿಂದ ಪುನಃ ಶ್ರೀಪಾದರನ್ನು ಸಾಮಾನ್ಯ ಬಾಲಕನಾಗಿಯೇ ಭಾವಿಸಿದರು.

ಆಗ ನಾನು ಹೀಗೆ ನುಡಿದೆನು, "ಸ್ವಾಮಿ! ನನಗೊಂದು ಸಂದೇಹ. ಶ್ರೀಕೃಷ್ಣರು ಭಗವದ್ಗೀತೆಯಲ್ಲಿ ಕರ್ಮಫಲಗಳು ಅನಿವಾರ್ಯ ಎಂದರೇ, ಅದನ್ನು ಉಲ್ಲಂಘಿಸದೇ ಶ್ರೀಪಾದರು ಕರ್ಮ ಧ್ವಂಸ ಹೇಗೆ ಮಾಡುವರು?"

## ಸದ್ಗುರುಗಳಿಗೂ, ಸತ್ಪುರುಷರಿಗೂ, ಯೋಗಿಗಳಿಗೂ ಮಾಡಿದ ದಾನಧರ್ಮಗಳ ಫಲ

ಶ್ರೀ ತಿರುಮಲದಾಸರು ಹೀಗೆಂದರು, "ಶ್ರೀಕೃಷ್ಣರು ಕರ್ಮಫಲಗಳನ್ನು ಅನುಭವಿಸಬೇಕೆಂದು ಹೇಳಿದರೇ ಹೊರತು, ಎಚ್ಚರಿಕೆಯಲ್ಲೇ ಅನುಭವಿಸಬೇಕೆನ್ನಲಿಲ್ಲ! ಅವನ್ನು ಸ್ವಪ್ನಾವಸ್ಥೆಯಲ್ಲೂ ಅನುಭವಿಸಬಹುದು. **ಭೌತಿಕವಾಗಿ ಶರೀರದಿಂದ ಅನುಭವಿಸಬೇಕಾದ 10 ವರ್ಷಗಳ ಕರ್ಮ ಮಾನಸಿಕ ಕ್ಷೋಭೆಯಿಂದಲೋ, ಕನಸಿನಲ್ಲಿನ ಮನಸು ಬಾಧೆಯಿಂದಲೋ ಕೆಲವೇ ಅಲ್ಪಕಾಲ ಅನುಭವಿಸಿ ಮುಕ್ತರಾಗಬಹುದು. ಸತ್ಪುರುಷರಿಗೆ ಯೋಗಿಗಳಿಗೆ ದಾನ ಧರ್ಮ ಸೇವೆ ಮಾಡುವುದರಿಂದ ದೇವತಾ ಪೂಜೆ ಸಹಾ ಪಾಪಕರ್ಮ ಕ್ಷಯಗೊಳ್ಳುವುದು. ದೇವತಾಮೂರ್ತಿಗಳು ಪುಣ್ಯ ಸ್ವರೂಪರು. ಅವರ ಕೈಂಕರ್ಯಗಳಿಂದ ನಮ್ಮ ಪಾಪ ಅವರಿಗೆ ಅಂಟಿ, ಅವರ ಪುಣ್ಯ ನಮಗೆ ಲಭಿಸುವುದು. ಪುಣ್ಯಮೂರ್ತಿಗಳಿಗೆ ದಾನಧರ್ಮ ಸೇವೆ ಮಾಡಲು ಸಹಾ ಇದೇ ರೀತಿ ಬದಲಾವಣೆ ನಡೆಯುವುದು. ಸಮರ್ಥ ಸದ್ಗುರುಗಳ ಧ್ಯಾನದಿಂದ ಧ್ಯಾನದ ಶಕ್ತಿ ಕಾರಣ ಬದಲಾವಣೆ ಆಗುತ್ತಿರುವುದು. ಸದ್ಗುರುಗಳು ತಮ್ಮ ಶಿಷ್ಯರಿಂದ ಸೇವೆ ಹೊಂದಿ ಸೇವೆ ಮಾಧ್ಯಮದಲ್ಲಿ ಶಿಷ್ಯರ ಪಾಪ ತಾವು ಗ್ರಹಿಸಿ ತಮ್ಮ ಪುಣ್ಯಫಲಗಳು ಶಿಷ್ಯರಿಗೆ ಬದಲಾಯಿಸುವರು. ಪಾಪ ಫಲವನ್ನು ಯಾರೋ ಒಬ್ಬರು ಅನುಭವಿಸದೇ ಆಗದು. ಆ ರೀತಿ ಪಾಪವನ್ನು ಹೊಂದಿದ ದೇವತಾಮೂರ್ತಿಗಳು ಅವತಾರ ಪುರುಷರು, ತೇಜೋಮೂರ್ತರು, ಅಗ್ನಿ ಸ್ವರೂಪರಾದ್ದರಿಂದ ಅ ಪಾಪವನ್ನು ಸುಡಬಲ್ಲರು. ಅವರಿಗೆ ನಾವು ಪತ್ರ, ಫಲ, ಪುಷ್ಪಗಳನ್ನು ಸಮರ್ಪಿಸಿದಾಗ ಕೂಡ ನಮ್ಮ ಪಾಪ ಅವರ ಪುಣ್ಯದೊಂದಿಗೆ ಬದಲಾಯಿಸಬಹುದು. ನಮ್ಮ ಆತುರ, ಭಕ್ತಿ, ಶರಣಾಗತತ್ವ ಎಷ್ಟು ಆಳವಾಗಿರುವುದೋ ಅಷ್ಟು ತೀವ್ರವಾಗಿ ಬದಲಾವಣೆ ನಡೆಯುವುದು. ಒಮ್ಮೊಮ್ಮೆ ತನ್ನ ಆಶ್ರಿತರ ಪಾಪ ಕರ್ಮಗಳನ್ನು ಜಡ ಪದಾರ್ಥಗಳಾದ ಕಲ್ಲು, ಬಂಡೆಗಳ ಸಂಗಡ ಸಹಾ ಶ್ರೀಗಳು ಬದಲಾವಣೆ ನಡೆಸುವರು. ಅ ಕಲ್ಲು, ಬಂಡೆಗಳನ್ನು ಹೊಡೆದು ಬಡೆದು ವಿಚಿತ್ರ ಮಾರ್ಗದಲ್ಲಿ ಕರ್ಮಫಲ ಧ್ವಂಸ ಮಾಡುತ್ತಿರುವರು.** ಇದಕ್ಕೆ ಒಂದು ಕಥೆ ಹೇಳುವೆನು, ಶ್ರದ್ಧಯಿಂದ ಕೇಳು.

ಶ್ರೀಪಾದರು ಹುಟ್ಟಿದಾಗಿನಿಂದ ಅವರಿಗೆ ಹಾಲಿನ ಸಮಸ್ಯೆ ಇತ್ತು. ಸುಮತಿ ಮಹಾರಾಣಿಗೆ ತನ್ನ ಮಗುವಿಗೆ ಸಾಲುವಷ್ಟು ಹಾಲು ಉಕ್ಕುತ್ತಿರಲಿಲ್ಲ. ಅವರಿಗೆ ಒಂದು ಹಸು ಇತ್ತು. ಅವರ ಮನೆಯ ಕಾಲಾಗ್ನಿಶಮನ ದತ್ತರಿಗೆ ನೈವೇದ್ಯಕ್ಕೆ ಸರಿ ಬೀಳುವಷ್ಟು ಹಾಲನ್ನು ಮಾತ್ರ ಆ ಹಸು ಕೊಟ್ಟು, ಅದರ ಕರುಗೆ ಮಾತ್ರ ಸಂಪೂರ್ತಿಯಾಗಿ ಕ್ಷೀರ ಕೊಡುತ್ತಿತ್ತು, ಅದು ಒಂದು ವಿಚಿತ್ರ ವರ್ತನೆಯಾಗಿತ್ತು.

ಕಾಲಾಗ್ನಿಶಮನ ದತ್ತರಿಗೆ ಇಡಲಾದ ಆ ಸ್ವಲ್ಪ ಕ್ಷೀರವನ್ನು ಸಹಾ ಒಮ್ಮೊಮ್ಮೆ ಶ್ರೀಪಾದರು ಯಾರೂ ಕಾಣದೇ ಪೂಜಾಮಂದಿರ ಪ್ರವೇಶಿಸಿ ಕುಡಿಯುತ್ತಿದ್ದರು. ಅಂತಹ ದಿನ ಶ್ರೀ ಅಪ್ಪಲರಾಜ ಶರ್ಮರು ನೈವೇದ್ಯಕ್ಕೆ ಒಂದು ಬೆಲ್ಲದ ತುಂಡು ಶ್ರೀದತ್ತರಿಗೆ ಅರ್ಪಿಸಿ ತಾವು ಉಪವಾಸ ಇರುತ್ತಿದ್ದರು. ಸುಮತಿ ಮಹಾರಾಣಿ ಸಹಾ ಉಪವಾಸವೇ ಮಾಡುತ್ತಿದ್ದರು. ಒಂದು ವೇಳೆ ನೈವೇದ್ಯ ಆಗುವವರಿಗೂ ಆದರೆ, ಶ್ರೀಗಳೇ ಆ ಕ್ಷೀರವನ್ನು ಮುಗಿಸುತ್ತಿದ್ದರು. ವಂಶದ ಅಪೂರ್ವ ಶಿಶುವಿಗೆ ಸಾಕಾದ ಕ್ಷೀರವನ್ನು ಸಹಾ ಕೊಡಲಾಗದಕ್ಕೆ, ತಂದೆ ತಾಯಿ ಬೇಸರಗೊಳ್ಳುತ್ತಿದ್ದರು. ಸಮೃದ್ಧಿಯಾಗಿ ಕ್ಷೀರವನ್ನು ಕೊಡಬಲ್ಲ ಹಸುವನ್ನು ಶ್ರೀ ಅಪ್ಪಲರಾಜ ಶರ್ಮರಿಗೆ ಕೊಡಬೇಕೆಂದು

ವೆಂಕಟಪ್ಪಯ್ಯ ಶ್ರೇಷ್ಠಿ ಮತ್ತು ನರಸಿಂಹವರ್ಮರು ಅನೇಕ ಪ್ರಯತ್ನ ಮಾಡಿದರು, ವ್ಯಥಾ ಆಯಿತು! ಎಂತಹ ಪರಿಸ್ಥಿತಿಯಲ್ಲೂ ಶ್ರೀ ಅಪ್ಪಲರಾಜ ಶರ್ಮ ದಾನವನ್ನು ಸ್ವೀಕರಿಸರು. ಅದು ಅವರ ವ್ರತ. ದಾನ ಸ್ವೀಕರಣೆ ಪಾಪ ಎಂದು ಅವರ ಅಭಿಪ್ರಾಯ. ವೇದ ಪಂಡಿತರಾದ್ದರಿಂದ ವೇದ ಸಭೆಗಳಲ್ಲಿ ವೇದ ಸಂಭಾವನೆ ಮಾತ್ರ ಸ್ವೀಕರಿಸುತ್ತಿದ್ದರು. ಅವರ ಪೌರೋಹಿತ್ಯ ಸಹಾ ಕೇವಲ ವೆಂಕಟಪ್ಪಯ್ಯ ಶ್ರೇಷ್ಠಿ ಮತ್ತು ನರಸಿಂಹಯ್ಯರಿಗೆ ಮಾತ್ರ ಇತ್ತು. ಅವರಿಬ್ಬರೂ ಎಷ್ಟೋಬಾರಿ, ಸಾಮಾನ್ಯ ಸಂಭಾವನೆಗಿಂತ ಅಧಿಕ ದ್ರವ್ಯ ಕೊಡಲು ಸಾಹಸ ಮಾಡಿ ಶರ್ಮರ ಕೋಪಕ್ಕೆ ಗುರಿ ಆಗಿರುವುದೂ ಉಂಟು. ಶರ್ಮರು, ಅವರ ಮಾವನವರಾದ ಸತ್ಯ ಋಷೀಶ್ವರರಿಂದ ಸಹಾ ಏನೂ ಸ್ವೀಕರಿಸುತ್ತಿರಲಿಲ್ಲ. ಕಾರ್ತಿಕ ಪೌರ್ಣಮಿ, ಸುಮತಿ ಮಹಾರಾಣಿಯ ಹುಟ್ಟಿಹಬ್ಬ. ಅಂದುಮಾತ್ರ ಬಾಪನಾರ್ಯರ ಮನೆಯಲ್ಲಿ ಊಟ ಮಾಡುವರು. ಹಾಗೆಯೇ ಅವರ ಜನುಮದಿನ ವೈಶಾಖ ಶುದ್ಧ ತದಿಯ ದಿನ, ಮಾವನವರ ಮನೆಯಲ್ಲಿ ಊಟ. ಕಾಲ ಕಳೆದಂತೆ ಶ್ರೀಪಾದ ಜಯಂತಿ ಆದ ಶ್ರೀಗಣೇಶ ಚತುರ್ಥಿ ದಿನ ಸಹಾ ಬಾಪನಾರ್ಯರ ಮನೆ ಊಟ ಆಗುತ್ತಿತ್ತು.

ಮನೆಯ ಅಂತಹ ದುಸ್ಥಿತಿಯನ್ನು ನೆನೆದು ಸುಮತಿ ಮಹಾರಾಣಿ ಒಮ್ಮೆ ಪತಿಗೆ ಹೀಗೆಂದಳು, ''ಸ್ವಾಮಿ! ನನ್ನ ತವರಿನವರು ಸ್ಥಿತಿಪರರೇ, ಮೇಲ್ಪಟ್ಟು ಅವರೂ ನಿಷ್ಠಾಗರಿಷ್ಠರಾದ ಶ್ರೋತ್ರೀಯರೇ. ಶ್ರೀಮಂತರಾದ ನಮ್ಮ ಮಲ್ಲಾದಿಗಳಿಂದ ಒಂದು ಗೋವನ್ನು ಸ್ವೀಕರಿಸುವುದರಲ್ಲಿ ನನಗೇನೂ ತಪ್ಪು ಕಾಣುತ್ತಿಲ್ಲ. ಶ್ರೀಪಾದನಿಗೆ ಹೊಟ್ಟೆ ತುಂಬಾ ಹಾಲನ್ನು ಕೊಡಲಾಗದ ಸ್ಥಿತಿಯಲ್ಲಿದ್ದೇವೆ, ತಾವು ಸಾವಧಾನವಾಗಿ ಈ ವಿಷಯ ಯೋಚಿಸಬೇಕೆಂದು ನನ್ನ ಬೇಡಿಕೆ. ಆಗ ಅಪ್ಪಲರಾಜ ಶರ್ಮರು ಹೀಗೆಂದರು, ''ಸೌಭಾಗ್ಯವತಿ! ನೀನು ಹೇಳುತ್ತಿರುವುದು ನಿಜವೇ. ಸತ್ಯ ಋಷೀಶ್ವರರು ಪಾಪವಿಲ್ಲದವರು. ಅದ್ದರಿಂದ ಅವರಿಂದ ಗೋವನ್ನು ಪಡೆಯುವುದು ತಪ್ಪಾಗದು. ಆದರೆ ಈ ವಿಷಯದ ಬಗ್ಗೆ ಧರ್ಮಶಾಸ್ತ್ರದ ಒಪ್ಪಿಗೆ ಅತ್ಯಾವಶ್ಯಕ. ಶ್ರೀಪಾದರು ದತ್ತಾವತಾರಿಗಳೆಂದು ಮಹನೀಯರನೇಕರು ತಿಳಿಸಿದ್ದಾರೆ. ಶ್ರೀಪಾದನ ಜನನಕ್ಕೆ ಮುಂಚೆಯಿಂದಲೇ ಇಲ್ಲಿಯವರಿಗೂ ಅತ್ಯಾಶ್ಚರ್ಯಕರ ಘಟನೆಗಳು ನಡೆಯುತ್ತಿವೆ. ಇದು ಶ್ರೀದತ್ತರ ನೂತನ ಅವತಾರವಾದರೇ ನಮ್ಮ ಮನೆಯ ಗೋಮಾತೆಯೇ ಸಮೃದ್ಧಿಯಾಗಿ ಹಾಲನ್ನು ಕೊಡಬಹುದು ಅಥವಾ ನಿನಗೇ ಕ್ಷೀರಲಬ್ಧಿ ಹೆಚ್ಚಬಹುದಲ್ಲವೇ? ಅಷ್ಟೆ ಅಲ್ಲ, ದೊಡ್ಡವನಾದ ಶ್ರೀಧರರಾಜ ಶರ್ಮ ಅಂಧನಾಗಿಯು, ಚಿಕ್ಕವನಾದ ರಾಜರಾಜ ಶರ್ಮ ಕುಂಟನಾಗಿಯೂ ಇರುವರೇ? ಶ್ರೀಪಾದನು ಅವರಿಬ್ಬರ ಅಂಗವಿಕಲತೆಯನ್ನು ಪಾರುಮಾಡಬಹುದಲ್ಲವೇ. ನೀನೀ ವಿಷಯ ನಿನ್ನ ತಂದೆಯ ಜೊತೆ ಚರ್ಚಿಸು. ಇಲ್ಲ ಶ್ರೀಪಾದನನ್ನೇ ಕೇಳು. ಅದೆಲ್ಲಾ ಬಿಟ್ಟು ನನ್ನನ್ನು ನಿಯಮ ದಾಟಲೇಬೇಕೆಂದು ನನಗೆ ಸಮಸ್ಯೆ ತಂದಿಡುವುದು ಉಚಿತವಲ್ಲ''.

ಸುಮತಿ ಮಹಾರಾಣಿ ಈ ವಿಷಯವನ್ನು ತನ್ನ ತಂದೆಗೆ ತಿಳಿಸಿದಳು. ಬಾಪನಾರ್ಯರು ಮುಗುಳ್ನಗೆಯಿಂದಾ, ''ಅಮ್ಮಣ್ಣೀ! ಇದೆಲ್ಲಾ ಶ್ರೀಪಾದರ ಲೀಲೆಯೇ. **ಶ್ರೀಪಾದರು ಸಮಸ್ಯೆಗಳನ್ನು ಪರಿಹರಿಸುದರಲ್ಲೇ ಅಲ್ಲ, ಸಮಸ್ಯೆ ತಂಡಿಡುವುದರಲ್ಲಿ ಸಹಾ ಜಾಣರು.** ಶ್ರೀಪಾದರು ದತ್ತನೇ ಎಂದು, ನಾನು ಯೋಗ ದೃಷ್ಟಿಯಿಂದ ತಿಳಿದೆ. ನಮ್ಮ ಮನೆಯಲ್ಲಿ ಗೋವುಗಳಿಗೆ ಕೊರತೆ ಇಲ್ಲ. ಗೋವನ್ನು ಕೊಡಲು ನನಗೆ ಮಹದಾನಂದ. ದತ್ತರಿಗೆ ಗೋಕ್ಷೀರ ಬಹಳಷ್ಟು ಇಷ್ಟವಲ್ಲವೇ. ನಿನ್ನ ಪತಿ ಹೇಳಿದ ಹಾಗೆ ಇದಕ್ಕೆ ಧರ್ಮಶಾಸ್ತ್ರ ಒಪ್ಪಿಗೆ ಅಗತ್ಯವೇ. ಆಹಾ! ಏನು ವಿಧಿವಿಪರೀತ್ಯ! ಮಾವನಿಂದ ಆಸ್ತಿ ಹೇಗೇಗೆ ಕಬಳಿಸಬಹುದು ಎಂದು, ಬಲೆ ಬೀಸುವ ಅಳಿಯಂದರು ಅನೇಕಾನೇಕರು ಲೋಕದಲ್ಲಿರುವರು. ನನ್ನ ಅಳಿಯ, ಅಗ್ನಿದೇವರಂತೆ ಶುದ್ಧರು. ಅವರ ಪದ್ಧತಿಯನ್ನು ಬದಲಾಯಿಸಲು ಯತ್ನಿಸಿದರೇ ನಾವು ಹುಚ್ಚರಾಗುವೆವು. ಸೃಷ್ಟಿಯ ಪಂಚ ಭೂತಗಳು ಹೇಳಿದರೇ ಹೊರತು ನಿನ್ನ ಪತಿ ಈ ಗೋದಾನ ಸ್ವೀಕರಿಸುವುದಿಲ್ಲ. ಶ್ರೀಪಾದರು

ತನ್ನ ಅಣ್ಣಂದರಿಬ್ಬರನ್ನೂ ಅಂಗವಿಕಲತ್ವದಿಂದ ಪಾರುಮಾಡಿದರೆ ನಿಮ್ಮ ಕುಟುಂಬದ ಜೊತೆ ಅವರಿಗಿರುವ ಋಣಾನುಬಂಧ ಹೋಗುವುದು. ಋಣ ವಿಮುಕ್ತನಾದ ಶ್ರೀದತ್ತನು ನಿಮ್ಮ ಮನೆಯಲ್ಲಿ ಮಗುವಾಗಿರಲಾರ, ಜಗದ್ಗುರುಗಳಾಗಿ ಲೋಕೋದ್ಧಾರಣೆಗಾಗಿ ಹೊರಡುವನು. ಆದ್ದರಿಂದ ತಪ್ಪಿದವಾಗಿ ಸಹಾ ನೀನು ಶ್ರೀಪಾದನನ್ನು ತನ್ನ ಅಣ್ಣಂದಿರ ಅಂಗವಿಕಲತ್ವ ಹೋಗಿಸಲು ಕೇಳಿಕೊಳ್ಳಬೇಡ. ಎಲ್ಲವೂ ಆ ಸಮಯಕ್ಕಾಗಿ ಕಾದುನೋಡುತ್ತವೆ. ಆ ಕಾಲ ಶ್ರೀಪಾದನ ಆಧೀನ. ಶ್ರೀಪಾದರು ನೆನೆದರೇ ನಿನಗೆ ಕ್ಷೀರಸಮೃದ್ಧಿ ಆಗುವುದು. ಆಗ ಶ್ರೀಪಾದನ ಸಂಗಡ ನಿನಗೆ ಋಣಾನುಬಂಧ ತೀರುವುದು. ಋಣ ವಿಮುಕ್ತನಾದ ಶ್ರೀಪಾದರು ನಮ್ಮ ಕಟುಂಬಕ್ಕೆ ಕಣ್ಣು ಬೀಳದೇ, ವಿಶ್ವಗುರುತ್ವ ವಹಿಸಲೂ ಗೃಹದಿಂದ ಹೊರಟು ಬಿಡುವನು. ಶ್ರೀಪಾದರು ಸಂಕಲ್ಪಿಸಿದರೇ ನಿಮ್ಮ ಮನೆಯ ಗೋವಿಗೆ ಕ್ಷೀರ ಅಧಿಕವಾಗಿ ಅದರ ವಿಚಿತ್ರ ವರ್ತನೆ ಬಿಟ್ಟು, ಅಧಿಕ ಹಾಲು ಕೊಡುವುದು. ಆಗ ಈ ಸಮಸ್ಯೆಯೇ ಇರಲಾರದು. ಆದ್ದರಿಂದ ಸ್ವಲ್ಪಕಾಲ ನೀನು ಸಹನೆ ವಹಿಸು. ಶ್ರೀದತ್ತರು ಸೃಷ್ಟಿಸಿದ ಈ ಸಮಸ್ಯೆಗೆ ದತ್ತರೇ ಪರಿಹಾರ ಕೊಡುವರು'' ಎಂದು ಹೇಳಿದರು.

ಆಗ ಶಂಕರ ಭಟ್ಟು, ''ಸ್ವಾಮಿ! ಶ್ರೀಪಾದರ ಅಣ್ಣಂದಿರು ಇಬ್ಬರೂ ಅಂಗವಿಕಲರಾಗಲು ಕಾರಣವೇನು? ಅದಕ್ಕೆ ಕಟುಂಬಕ್ಕೆ ಸಂಬಂಧಿಸಿದ ಕರ್ಮ ದೋಷಗಳಿವೆಯಾ?'' ಎಂದು ಪ್ರಶ್ನಿಸಿದರು.

ಆಗ ತಿರುಮಲದಾಸರು, **''ಮಗೂ! ಶ್ರೀದತ್ತಾತ್ರೇಯರು ಸಾಯಂಸಂಧ್ಯದೊಳು ಅವತರಿಸಿದರು. ಶ್ರೀಪಾದರು ಉಷಃಕಾಲದಂದು, ಬರಲಿರುವ ಶ್ರೀನೃಸಿಂಹ ಸರಸ್ವತಿ ಅವತಾರ ಪೂರ್ಣ ಮಧ್ಯಾಹ್ನ ಅಭಿಜಿತ್ ಲಗ್ನದಲ್ಲಿ ಆಗಲಿದೆ.** ದತ್ತ ಲೀಲೆಗಳು ಆಳವಾದವು. ಸಾಯಂಸಂಧ್ಯ ನಂತರ ಕತ್ತಲು ಆಕ್ರಮಿಸುವುದು. ಜೀವಿಗಳು ನಿದ್ರಾವಸ್ಥೆಯಲ್ಲಿರುವರು. ಆದ್ದರಿಂದ ದತ್ತಾವತಾರ ಯೋಗ ಸಾಧನೆಗಳಲ್ಲಿನ ಪರಿಣಾಮ ಕ್ರಮದಲ್ಲಿ ಪೂರ್ಣ ಬಾಧ್ಯತೆಯನ್ನು ತಾನೇ ವಹಿಸಿ, ಜೀವಿಗಳ ಸುಖನಿದ್ರೆಗೆ ಅವಕಾಶಮಾಡಿದೆ. ಹೇಗೆ, ಯಾವ ಕಡೆ ಹೋಗಬೇಕೋ, ಏನು ಮಾಡಬೇಕೋ ಆ ಪರಿಣಾಮದ ಯಾವ ಕಡೆ ಕದಲಬೇಕೋ **ಜೀವಿಗಳಿಗೆ ದಿಕ್ಕು ತೋಚದ ಕತ್ತಲು, ಜೀವಿಗಳಿಗೆ ತಿಳಿಯದೇ ಅವರಲ್ಲಿ ಪರಿಣಾಮವನ್ನು ತರುವುದು ಶ್ರೀದತ್ತಾವತಾರ ವಿಶಿಷ್ಟತೆ.** ಜೀವಿಗಳು ಯಾವ ಪ್ರಯತ್ನವೂ ಮಾಡದೇ, ಇಲ್ಲಿ ಸ್ವಲ್ಪ ಪ್ರಯತ್ನದಿಂದಲೇ ಅವರಿಗೆ ತಿಳಿಯದಂತಹ ರೀತಿಯಲ್ಲಿ ಅಂತಶ್ಚೈತನ್ಯದ ಅಗಾಧ ಆಳಗಳಿಂದ ಪರಿಣಾಮದ ಕಡೆ ನಡೆದರು. ಇದು ಒಂದು ಭೂಮಂಡಲಕ್ಕೆ ಮಾತ್ರ ಒಳಗೊಂಡಿದ್ದಲ್ಲ.

ಶ್ರೀಪಾದರ ಅವತಾರ ಉಷಃಕಾಲ. ಉಷಸ್ಸಿನಿಂದು ಸೂರ್ಯನ ಸಮಸ್ತ ಶಕ್ತಿಗಳು ಒಂದು ಬಾರಿ ಚಿಮ್ಮಿ ಜೀವಗಳನ್ನು ಪುನೀತರನ್ನಾಗಿ ಮಾಡುವವು. ಅವುಗಳ ಆತ್ಮಸೂರ್ಯನಿಗೆ ಪ್ರತೀಕ. ಜೀವಿಗಳಲ್ಲಿನ ವಿವಿಧ ಶಕ್ತಿಗಳು ಎದ್ದು, ವಿವಿಧ ಸ್ಥಾಯಿಯಲ್ಲಿ ನಾಟ್ಯವಾಡುತ್ತಾ, ಅನಂತ ರೀತಿ ಪರಿಣಾಮ ಹೊಂದುವುದನ್ನು ಇದು ಸೂಚಿಸುವುದು. ಮಧ್ಯಾಹ್ನದ ಸೂರ್ಯ ಪ್ರಚಂಡ ಸ್ವರೂಪ. ಆತ್ಮಸೂರ್ಯನು ತನ್ನ ಸಂಪೂರ್ಣ ಶಕ್ತಿಗಳನ್ನು ಬೇಕಾದ ಹಾಗೆ ಸಮೃದ್ಧಿಯಾಗಿ ಚಲ್ಲುತ್ತಾ, ಜೀವಿಗಳನ್ನು ಎಚ್ಚರ ಗೊಳಿಸುವುದು ನೃಸಿಂಹ ಸರಸ್ವತಿ ಅವತಾರ ಪ್ರಯೋಜನೆ. ಇವು ಅವರ ವಿಶ್ವವ್ಯಾಪ್ತ ಚೈತನ್ಯಕ್ಕೆ ಸಂಬಂಧಿಸಿದ ವಿಷಯಗಳು.

ಶ್ರೀದತ್ತಾವತಾರಕ್ಕೂ ಶ್ರೀಪಾದ ಶ್ರೀವಲ್ಲಭ ಅವತಾರಕ್ಕೂ ಮಧ್ಯ ಸಮಯದಲ್ಲಿ ಕಾಳರಾತ್ರಿ ನಡೆದಿದೆ. ಅದು ಕೇವಲ ಮಹಾ ಅಂಧಕಾರ ಸ್ವರೂಪ. ಅದಕ್ಕೆ ಪ್ರತೀಕವಾಗಿ ದೊಡ್ಡಣ್ಣ ಶ್ರೀಧರರಾಜ ಶರ್ಮ ಜನ್ಮಿಸಿದರು. ಆ ರಾತ್ರಿ ಕಳೆದ ನಂತರ ಸ್ಥಿತಿ ಸಂಶಯಗಳು, ನಾಸ್ತಿಕವಾದಗಳು, ಕುತರ್ಕಗಳು, ವಕ್ರಭಾಷ್ಯಗಳು ಮುಂತಾದದ್ದು ಇದ್ದ ಸ್ಥಿತಿ. ಅದಕ್ಕೆ ಚಿಹ್ನೆಯಾಗಿ ಚಿಕ್ಕಣ್ಣನವರಾದ ಶ್ರೀರಾಮರಾಜ

ಶರ್ಮ ಹುಟ್ಟಿದರು. ಯಾವ ಜೀವಿ ಆದರೂ ಮಹಾಂಧಕಾರ ಸದೃಶ್ಯವಾದ ತಮಸ್ಸನ್ನು ಬಿಟ್ಟು, ಕುತರ್ಕಗಳು, ಶಂಕೆಗಳು, ವಕ್ರಭಾಷ್ಯಗಳು ಮುಂತಾದವುಗಳಿಂದ ಕೂಡಿದ ಮನಶ್ಚಾಂಚಲ್ಯ ಸ್ಥಿತಿಯನ್ನು ಮೀರಿ, ತದನಂತರ ಶ್ರೀಪಾದ ಶ್ರೀವಲ್ಲಭರ ಅನುಗ್ರಹ ಹೊಂದುವರು. ಇದೇ ಇದರಲ್ಲಿನ ರಹಸ್ಯದ ಮಾತು. ಇವು ಜಗತ್ತು ಒಳಗಿನ ಜೀವಿಗಳ ಪರಿಣಾಮಕ್ಕೆ ಸಂಬಂಧಸಿದೆ. ಕುಟುಂಬ ಪರ ಕರ್ಮ ದೋಷಗಳು ಸಹಾ ಇದೇ. ಶ್ರೀ ಅಪ್ಪಲರಾಜ ಶರ್ಮರವರು ವೆಲನಾಡು ವೈದಿಕ ಬ್ರಾಹ್ಮಣರಾದರೂ ಅವರ ಕುಟುಂಬಕ್ಕೆ ಗ್ರಾಮಾಧಿಪತ್ಯವಿತ್ತು. ಶ್ರೀಪಾದರ ಅಜ್ಜ ಅಂದರೇ ಪಿತಾಮಹರು, ಅಯಿನವಿಲ್ಲಿ ಗ್ರಾಮಾಧಿಕಾರಿಯಾಗಿದ್ದವರು. ಅವರ ಕುಟುಂಬದಲ್ಲಿ ಗ್ರಾಮಾಧಿಪತ್ಯ ದೊಡ್ಡ ಮಗನಿಗೆ ಸಿಗುತ್ತಿರುವುದು. ಶ್ರೀಪಾದರ ಪಿತಾಮಹರ ಹೆಸರು ಶ್ರೀಧರ ರಾಮರಾಜ ಶರ್ಮ. ಗ್ರಾಮಾಧಿಕಾರ ಇರುವ ಬ್ರಾಹ್ಮಣರು ರಾಜ ಶಬ್ಧವನ್ನು ಅವರ ಹೆಸರಿನ ಕೊನೆಯಲ್ಲಿ ಅಲಂಕರಿಸಿಕೊಳ್ಳುವುದು ಅವರ ಸಂಪ್ರದಾಯ. ಶರ್ಮ ಶಬ್ದ ಬ್ರಾಹ್ಮಣತ್ವವನ್ನು ಸೂಚಿಸುವುದು. ಗ್ರಾಮದಲ್ಲಿ ಬೆಳೆ ಆದರೂ ಆಗದಿದ್ದರೂ ಜಮೀಂದಾರರಿಗೆ ಶುಲ್ಕ ಕಟ್ಟಬೇಕಾಗಿತ್ತು. ಬಲವಂತವಾಗಿ ತೆರಿಗೆ ವಸೂಲಿ ಮಾಡುವ ಜವಾಬ್ದಾರಿ ಗ್ರಾಮಾಧಿಕಾರಿಗಳ ಮೇಲೆ ಇತ್ತು.

ಆದ್ದರಿಂದ ಶ್ರೀಧರ ರಾಮರಾಜ ಶರ್ಮ ಅವರ ಇಷ್ಟಾನಿಷ್ಟಗಳ ಪ್ರಮೇಯವಿಲ್ಲದೇ ಜಮೀಂದಾರರ ಆಜ್ಞೆ ಪ್ರಕಾರ, ಹಿಂಸೆಯಿಂದಲಾದರೂ ಸರಿ, ತೆರಿಗೆ ವಸೂಲು ಮಾಡಬೇಕಾಗಿತ್ತು. ಅದು ಅವರ ಕರ್ತವ್ಯ, ಧರ್ಮ ಸಹ. ಆದರೂ ದೈವ ದೃಷ್ಟಿಯಲ್ಲಿ ಅದು ಪಾಪ ಕಾರ್ಯವಾಯಿತು. ಅಪ್ಪಲರಾಜು ಶರ್ಮ ದೊಡ್ಡ ಅಣ್ಣನಿಗೆ ಗ್ರಾಮಾಧಿಪತ್ಯ ಲಭಿಸಿತು. ಅಜ್ಜ ಮಾಡಿದ ಪಾಪಕರ್ಮ ಪ್ರಭಾವದಿಂದ ಶ್ರೀಪಾದರ ದೊಡ್ಡ ಸಹೋದರ ಶ್ರೀಧರರಾಜ ಶರ್ಮರು, ಚಿಕ್ಕ ಸಹೋದರನಾದ ರಾಮರಾಜ ಶರ್ಮರು ಅಂಗವಿಕಲತ್ವದಿಂದ ಜನಿಸಿದರು. **ಶ್ರೀಪಾದ ಶ್ರೀವಲ್ಲಭರು ಸಾಕ್ಷಾತ್ ದತ್ತಾವತಾರಿ ಆದರೂ, ಅಜ್ಜಂದಿರು ಮಾಡಿದ ಆ ಸ್ವಲ್ಪ ಕರ್ಮಫಲವನ್ನು ಅವರೂ ಸಹಾ ಅನುಭವಿಸುವುದು ಕೇವಲ ನಮಗೆಲ್ಲಾ ಮಾರ್ಗದರ್ಶಗಳಾಗಿರಲೆಂದೇ.**

ಶ್ರೀ ವೆಂಕಟಪ್ಪಯ್ಯ ಶ್ರೇಷ್ಠಿ ಮತ್ತು ಶ್ರೀ ವತ್ಸವಾಯಿ ನರಸಿಂಹ ವರ್ಮರು, ಶ್ರೀಪಾದರನ್ನು ಅವರ ಸ್ವಂತ ಮೊಮ್ಮಗನಂತೇ ಕಾಣುತ್ತಿದ್ದರು. ಆದ್ದರಿಂದ ಅವರು ಶ್ರೀಪಾದರ ಹಾಲಿನ ಸಮಸ್ಯೆಯನ್ನು ಪರಿಹರಿಸಲು ದೀರ್ಘವಾಗಿ ಯೋಚಿಸಿದರು. ವರ್ಮ, ಶ್ರೀ ಶ್ರೇಷ್ಠಿಯೊಂದಿಗೆ "ಸ್ವಾಮಿ! ಇದಕ್ಕೆ ಸರಿಯಾದ ಉಪಾಯ ತಾವೇ ತೋರಿಸಬೇಕೆಂದರು. ಶ್ರೀ ನರಸಿಂಹ ವರ್ಮರ ಬಳಿ ಗಾಯತ್ರಿ ಎಂದು ಹೆಸರುವಾಸಿಯ ಗೋಸಂತತಿ ಇತ್ತು. ಅವುಗಳಲ್ಲಿ ಎಲ್ಲಾ ಶುಭಲಕ್ಷಣ ಉಳ್ಳ ಒಂದು ಗೋವನ್ನು ವರ್ಮರವರಿಂದ ಶ್ರೇಷ್ಠಿ, ಬೆಲೆಗೆ ಹೊಂದಿದರು. ಮಾರಲು ಬಂದ ದುಡ್ಡನ್ನು ಭದ್ರವಾಗಿ ಅವರ ಬಳಿಯೇ ಇಟ್ಟುಕೊಂಡರು. ಇಷ್ಟರಲ್ಲಿ ಪೌರೋಹಿತ್ಯಕ್ಕಾಗಿ ವರ್ಮರ ಮನೆಗೆ ಅಪ್ಪಲರಾಜ ಶರ್ಮ ಬಂದರು. ಆ ಭದ್ರವಾಗಿಟ್ಟಿದ್ದ ದುಡ್ಡನ್ನು ಸಂಭಾವನೆಯಾಗಿ ಕೊಟ್ಟರು. ಆಗ ನಡೆದ ಪೌರೋಹಿತ್ಯ ಕಾರ್ಯದ ಸಾಮಾನ್ಯ ಸಂಭಾವನೆಗಿಂತ ಈಗ ಕೊಟ್ಟ ದುಡ್ಡು ಬಹಳ ಅಧಿಕವಾಗಿತ್ತು. ಅಪ್ಪಲರಾಜ ಶರ್ಮ ಧರ್ಮಬದ್ಧವಾಗಿ ಪಡೆಯುವ ಸಂಭಾವನೆಯ ಮೊತ್ತವನ್ನು ಮಾತ್ರ ಪಡೆದು, ಮಿಕ್ಕ ದುಡ್ಡನ್ನು ತಿರಸ್ಕರಿಸಿದರು. ಸುಕ್ಷತ್ರಿಯ ವಂಶದವನಾದ ನಾನು ದಾನಕೊಟ್ಟ ಮೊತ್ತವನ್ನು ವಾಪಸು ತೆಗೆದುಕೊಳ್ಳಲಾರೆ ಎಂದರು. ಈ ತಗಾದೆ ಶ್ರೀ ಬಾಪನಾರ್ಯರವರೆಗೂ ಬಂತು. ಬ್ರಾಹ್ಮಣ ಪರಿಷತ್ ಸಮಾವೇಶಗೊಂಡಿತು. ಸಭೆಯಲ್ಲಿ ಬಾಪನಾರ್ಯರು ಹೀಗೆಂದರು, "ಅಪ್ಪಲರಾಜ ಶರ್ಮ ನಿರಾಕರಿಸಿದ ಈ ಮೊತ್ತವನ್ನು ತೆಗೆದುಕೊಳ್ಳಲು ಬಯಸುವವರು ತೆಗೆದುಕೊಳ್ಳಬಹುದು''. ಎಷ್ಟೋ ಬ್ರಾಹ್ಮಣರು ಕೊಡಿಸಿ ಎಂದು, ಮುಂದೆ ಬಂದರು, ಅದು ವಿಚಿತ್ರವಾಗಿತ್ತು.

ಆಗ ಒಬ್ಬ ಚಿಕ್ಕ ವಯಸ್ಕ ಪಾಪಯ್ಯ ಶಾಸ್ತ್ರಿ ಎಂಬ ಬ್ರಾಹ್ಮಣ ''ಶ್ರೀಪಾದರು ದೈವಾಂಶರಲ್ಲ, ದೈವವೇ ಆಗಿದ್ದರೇ ಈ ವಿಚಿತ್ರ ಸ್ಥಿತಿ ಹೇಗೆ ಬಂದಿರುವುದು? ಅವರು ಶ್ರೀದತ್ತರೇ ಆಗಿದ್ದರೇ ಅವರ ಇಬ್ಬರು ಅಣ್ಣಂದಿರನ್ನೂ ಏಕೆ ಅಂಗವೈಕಲ್ಯದಿಂದ ಪಾರು ಮಾಡಲಿಲ್ಲ? ನಡೆದ ಕೆಲವು ಘಟನೆಗಳು, ಕೇವಲ ನಡೆದುಹೋದ ಸ್ವಾಭಾವಿಕಗಳು. ಎಲ್ಲಾ ಕಲ್ಪಿಸಿ ದೊಡ್ಡದಾಗಿ ಮಾಡಿ ಹೇಳುವುದು ದೊಡ್ಡ ಅಪರಾಧ. ನಾನು ದತ್ತ ಭಕ್ತ. ಶ್ವೇತಾರ್ಕ ರಕ್ಷೆಯನ್ನು ಸಹಾ ಗುರುಗಳಿಂದ ಪಡೆದವನು. ಪ್ರತೀ ದಿನ ಒಂದಷ್ಟು ಜಪ ಮಾಡಿಕೊಳ್ಳುತ್ತಿದ್ದೇನೆ. ನಾನು ಎಂತಹ ದಾನ ಸ್ವೀಕರಿಸಿದರೂ ಪಾಪ ಅಂಟದು. ಯೋಗ್ಯನಾದ ನನಗೆ ಈ ಧನವನ್ನು ಕೊಡಿಸುವುದು'' ಎಂದು ಹೇಳಿದನು. ಪರಿಷತ್, ಆ ಬ್ರಾಹ್ಮಣನಿಗೆ ಹಣ ಕೊಡಿಸಿತು. ಆ ಹಣ ಒಂದು ಒಳ್ಳೆಯ ಗೋವನ್ನು ಖರೀದಿಸಬಹುದಾದದ್ದು. ಸಭೆಯನಂತರ, ಶ್ರೀ ಪಾಪಯ್ಯ ಶಾಸ್ತ್ರಿ ವಿಜಯಗರ್ವದಿಂದ ಮನೆ ಸೇರಿದರು. ಮನೆಯಲ್ಲಿ, ಸೋದರಮಾವನ ಸಂಗಡ ಇಷ್ಟಾಗೋಷ್ಠಿ ನಡೆಯಿತು, ಊಟ ಮಾಡಿ ಹೋಗಲು ಪಾಪಯ್ಯ ಹೇಳಿದರು. ಆತ, ವರುಷದಲ್ಲಿ ಒಂದೇ ಒಂದು ಬಾರಿ ಊಟ, ಸೋದರಳಿಯನ ಮನೆಯಲ್ಲಿ ಮಾಡುವನೆಂದು, ಈ ದಿನ ಅದು ಆಗಲಾರದೆಂದು ನುಡಿದು, ಒಡನೇ ಹೊರಟು ಹೋದರು.

ಸೋದರಮಾವನು ಹೊರಟು ಹೋದನಂತರ, ಪಾಪಯ್ಯ ಯೋಚನೆ ಮಾಡುತ್ತಾ ಕುಳಿತಿದ್ದರು. ಪತ್ನಿ ಬಂದು. ''ಸ್ವಾಮಿ! ಈಗ ಬಂದ ಈ ಸೋದರಮಾವ, ಕಳೆದ ವರುಷ ತೀರಿಹೋದ ನಿಮ್ಮ ಸ್ವಂತ ಸೋದರಮಾವ ಒಂದೇ ತರಹಾ ಇದ್ದಾರಲ್ಲವೇ?'' ಎಂದಳು. ಪಾಪಯ್ಯ ಬೆಚ್ಚಿಬಿದ್ದರು. ತನಗೆ ಒಬ್ಬರೇ ಸೋದರಮಾವ ಇದ್ದರು. ಆತ ಕಳೆದ ವರುಷ ತೀರಿಹೋದರು. ಈಗ ಈ ಸೋದರಮಾವ ಯಾರು? ನನ್ನ ಬುದ್ಧಿ ಎಷ್ಟು ಭ್ರಮೆಯಲ್ಲಿ ಸಿಕ್ಕಿಬಿದ್ದಿದೆ, ಬಳಗದ ಸೋದರಮಾವಂದಿರು ಇನ್ನು ಕೆಲವರಿದ್ದರೂ, ಯಾರೂ ಈಗ ಬಂದವರನ್ನು ನೂರುಪಾಲು ಹೋಲಿರಲಿಲ್ಲ. ತೀರಿಹೋದ ಸೋದರಮಾವನ ಪ್ರೇತಾತ್ಮವೇ, ತಾನೀಗ ಕಂಡದ್ದು? ಎದೆ ಡವಡವ ಹೊಡೆಯತೊಡಗಿತು. ತನಗೆ ಭೂತಪ್ರೇತ ಪಿಶಾಚಿಗಳ ಸಂಗಡ ಎಂತಹ ಮಂತ್ರ ಪ್ರಮೇಯವೂ ಇಲ್ಲ. ತಾನು ಉಪಾಸಿಸುವ ಶ್ರೀದತ್ತನ ಅನುಗ್ರಹದಿಂದ ದೂರ ಸರಳಿ ತಾನು ಪತನವಾಗುತ್ತಿದ್ದಾನಾ? ಬರುವ ಕಾಲ ತನಗೆ ಕೆಟ್ಟ ಕಾಲವೇ? ಸೋದರಮಾವ ಹೊರಟು ಹೋಗುತ್ತಾ ''ನೀನು ಶ್ರೀಘ್ರದಲ್ಲೆ ನನ್ನನ್ನು ಭೇಟಿ ಮಾಡುವೆಯೆಂದು ಬಯಸುತ್ತಿದ್ದೇನೆ'' ಎಂದು ಹೇಳಿದ ಮಾತುಗಳು ಆತನ ಮನಸ್ಸನ್ನು ಅನೇಕ ರೀತಿ ಬಾಧಿಸತೊಡಗಿತು. ತಾನು ಶೀಘ್ರದಲ್ಲೇ ತೀರಿ ಹೋಗಿ, ಸೋದರಮಾವನನ್ನು ಸ್ವರ್ಗದಲ್ಲಿ ಭೇಟಿ ಮಾಡಲಿರುವೆನಾ? ಎದೆ ಭಾರವಾಯಿತು. ''ಓಂ ದ್ರಾಂ, ದತ್ತಾತ್ರೇಯಾಯನಮಃ'' ಎಂದು ಜಪ ಮಾಡಿಕೊಂಡನು. ಆದರೇ ಏಕಾಗ್ರತೆ ಕುದರಲಿಲ್ಲ! ಶ್ರೀ ಕುಕ್ಕುಟೇಶ್ವರಾಲಯದ ಸ್ವಯಂಭೂ ದತ್ತನ ದರ್ಶನಕ್ಕೆ ಹೊರಟನು. ಧ್ಯಾನಿಸುವಾಗ, ಶಿರಸ್ಸಿಲ್ಲದ ಶ್ರೀದತ್ತರೂ ಕಾಣತೊಡಗಿದರು. ಜಪಕ್ಕೆ ಏಕಾಗ್ರತೆ ಸಿಗಲಿಲ್ಲ. ಅರ್ಚಕರು ಕೊಡುತ್ತಿದ್ದ ಪ್ರಸಾದ, ವಿಷಪೂರಿತವಾದಂತೆ ಕಂಡುಬಂತು! ಅರ್ಚಕರು ನಗುತ್ತಾ ಏನೋ ಹೇಳುತ್ತಿದ್ದರು. ಅದು ಪಾಪಯ್ಯನಿಗೆ, ''ಈ ಪ್ರಸಾದ ಭುಜಿಸಿ, ಶ್ರೀಘ್ರವಾಗಿ ಮರಣಿಸು'' ಎಂದು ಕೇಳಿಬಂತು! ಮನಗೆ ಬರಲು, ಹೆಂಡತಿಯ ಮುಖದಲ್ಲಿ ಕುಂಕುಮ ಕಾಣದಾಯಿತು! 'ನಾನಿನ್ನೂ ಜೀವವಂತವಾಗಿದ್ದಾಗಲೇ ಕುಂಕುಮ ಏಕೆ ತೆಗೆದೆ?' ಎಂದು ಪತ್ನಿಯನ್ನು ಪ್ರಶ್ನಿಸಿದನು. ರೂಪಾಯಿ ಗಾತ್ರದ ಕುಂಕುಮ ಇಟ್ಟಿರಲೂ, ಪತಿ ಏಕೆ ಕುಂಕುಮ ಇಲ್ಲವೆನ್ನುತ್ತಿದ್ದಾರೆಂದು ಆಕೆಗೆ ಆಶ್ಚರ್ಯವಾಯಿತು. ಪಾಪಯ್ಯಗೆ 'ಬುದ್ಧಿಭ್ರಮಣೆಯಾಗಿದೆ' ಎಂಬ ಸುದ್ಧಿ ಶೀಘ್ರವಾಗಿ ಹಬ್ಬಿತು. ಪೀಠಿಕಾಪುರದಲ್ಲಿ ವದಂತಿಗಳು, ಪುಕಾರುಗಳು, ವಿಮರ್ಶೆಗಳಿಗೆ ಕಡಿಮೆ ಇರಲಿಲ್ಲ! ಪಾಪಯ್ಯನಿಗೆ ಮಾನಸಿಕ, ಭೂತ ಚಿಕಿತ್ಸೆಗಳು ನಡೆಯುತ್ತಿದ್ದವು. ತನಗೆ ಹುಚ್ಚಿಲ್ಲವೆಂದು, ಎಲ್ಲಾ ನಿಜವೇ ಹೇಳುತ್ತಿದ್ದೇನೆಂದು ಪಾಪಯ್ಯ ಪರಿತಪಿಸಿದರು. ಆದರೇ ಜನ, 'ಒಮ್ಮೊಮ್ಮೆ ಹುಚ್ಚ ಸಹಾ

ತರ್ಕಬದ್ಧವಾಗಿ ಮಾತಾಡುವನೆಂದು ಪಾಪಯ್ಯನ ವಾದ ತಳ್ಳಿಹಾಕಿದರು. ಪಾಪಯ್ಯನ ಪತ್ನಿಗೆ ಒಳ್ಳೆಯ ಆಲೋಚನೆ ಹೊರಟಿತು. ಅಜ್ಞಾನದಿಂದ ಪಾಪಯ್ಯ, ಶ್ರೀಪಾದರನ್ನು ನಿಂದಿಸಿದ ಫಲವೇ ಇದು ಎಂದು ತೀರ್ಮಾನ ಮಾಡಿದಳು. ''ಬಾಯಿಲ್ಲದ ಕಲ್ಲು ದೇವತೆಗಳಿಗಿಂತ, ಸುಲಕ್ಷಣ ದಿವ್ಯಾಂಶ ಸಂಭೂತವಾಗಿರುವ ಶ್ರೀಪಾದರನ್ನು ಶರಣು ಬೇಡುವುದೊಂದೇ ದಾರಿ'' ಎಂದಳು.

ಆಕೆ ಶ್ರೀಪಾದರ ಮನೆಗೆ ಬಂದು, ಮಗುವನ್ನೆತ್ತಾಡಿಸಿದಳು. ಏಕಾಂತ ಸಮಯದಲ್ಲಿ ತನ್ನ ವ್ಯಥೆ ಶ್ರೀಪಾದರ ಮುಂದಿಟ್ಟಳು. ಶ್ರೀಪಾದರು, ''ಅತ್ತೆ, ಇದೆಲ್ಲವೂ ಒಂದು ಚಿಕ್ಕ ಕಾರ್ಯದಿಂದ ಸರಿ ಹೋಗುವುದು. ನೀನು ನನಗೆ ತಾಯಿ ಸಮಾನಳು. ಆದ್ದರಿಂದ ನಿನಗೀ ರಹಸ್ಯ ಬಿಡಿಸಿ ಹೇಳುತ್ತಿದ್ದೇನೆ, ತಡಮಾಡದೇ ಒಂದು ಹೊಸ ಮನೆಯನ್ನು ನಿರ್ಮಿಸಿಕೊಳ್ಳಿ, ಮಾವನ ಜೊತೆ ವಾಸ್ತುಪೂಜೆ ಮಾಡಿ, ನೂತನ ಗೃಹಪ್ರವೇಶ ಮಾಡಿದರೇ ಈಗಿರುವ ಸಮಸ್ಯೆಗಳೆಲ್ಲಾ ಮಾಯವಾಗುವವು'' ಎಂದು ಉಪದೇಶಿಸಿದರು.

ಶ್ರೀಪಾದರು ತನ್ನನ್ನು ಹೀಗೆ ಆಜ್ಞಾಪಿಸಿದ ವಿಷಯ, ಯಾರಿಗೂ ತಿಳಿಸದೇ, ಬಾಡಿಗೆ ಮನೆಯ ಕಾರಣವೇ ಈ ಕಷ್ಟಗಳೆಂದು, ವಿಳಂಬಮಾಡದೇ ನೂತನ ಸ್ವಂತ ಮನೆ ಮಾಡಿಕೊಳ್ಳಬೇಕೆಂದು ಒಪ್ಪಿಸಿದಳು. ಪಾಪಯ್ಯನಿಗೆ ಯಾರೋ ಒಂದು ಹಾಳು ಬಿದ್ದ ಸ್ಥಳ, ಭೂದಾನವಾಗಿ ಕೊಟ್ಟರು. ಅದನ್ನು ತಕ್ಷಣವೇ, ಖರ್ಚು ಮತ್ತು ಶ್ರಮಕ್ಕೆ ಹಿಂದೆ ಮುಂದೆ ನೋಡದೇ ಆ ಹಳ್ಳವನ್ನು ಮುಚ್ಚಿಸಿ ನೂತನ ಗೃಹ ನಿರ್ಮಾಣಕ್ಕೆ ಮನೆಯಲ್ಲಿನ ಧನ, ಕನಕ, ವಸ್ತುಗಳೆಲ್ಲವೂ ಮಾರಿದ್ದಾಯಿತು. ಸ್ವಲ್ಪ ಸಾಲ ಸಹಾ ಮಾಡಲಾಯಿತು. ಬೆಟ್ಟ ಕಲ್ಲುಗಳನ್ನು ತಂದು ಉದ್ಧ, ಚೂರು ಮಾಡಿ ಗೃಹ ನಿರ್ಮಾಣಕ್ಕೆ ಉಪಯೋಗಿಸಿದರು. ಗೃಹ ಪ್ರವೇಶದ ತಕ್ಷಣವೇ ಪಾಪಯ್ಯ ಚೆನ್ನಾಗಿ ಚೇತರಿಸಿಕೊಂಡರು.

ಮಗೂ, ಶಂಕರ ಭಟ್ಟೂ! **ಪಾಪಯ್ಯನಿಗೆ ಮೃತ್ಯುದಶೆ ನಡೆಯುತ್ತಿದೆ. ಅವನನ್ನು ಅಪಮೃತ್ಯು ಸಂಕಟದಿಂದ ಶ್ರೀಗಳು ಪಾರು ಮಾಡಿದರು. ಅವನಿಗೆ ಮಾನಸಿಕ ಕ್ಷೋಭೆ, ಅವಮಾನ, ಖರ್ಚು ಮುಂತಾದವು ಮಾಡಿಸಿ ಕರ್ಮ ಧ್ವಂಸ ಮಾಡಿದರು. ಅಷ್ಟೇ ಅಲ್ಲ. ಅವನ ಕೆಟ್ಟ ಕರ್ಮವನ್ನು ಬೆಟ್ಟದ ಕಲ್ಲುಗಳಿಗೆ ಬರಮಾಡಿಸಿ, ಅವನ್ನು ಭಿನ್ನ ಮಾಡುವುದರಿಂದ (ಅವನ) ಕರ್ಮ ನಾಶ ಮಾಡಿದರು.** ಕರ್ಮ ಧ್ವಂಸಕ್ಕೆ ಸಿದ್ಧರೂ, ಅವಧೂತರು ಅವಲಂಭಿಸುವ ಮಾರ್ಗಗಳು ವಿಚಿತ್ರವಾಗಿರುವವು. ಅರೋಗ್ಯವಂತನಾದ ಪಾಪಯ್ಯನನ್ನು ನೋಡಿ, ಶ್ರೀಪಾದರು, ''ನೀನು ಎಷ್ಟು ಅವಿವೇಕಿ? ಬುದ್ಧಿಯಿಲ್ಲದವ! ನೀನು ಮನಸಾರ ಪೂಜಿಸುವ ಶ್ರೀದತ್ತನು, ಶರೀರದಿಂದಲೇ ಶ್ರೀಪಾದನಾಗಿ ನಿನ್ನೆದುರೇ ಇದ್ದರೂ ಗುರ್ತಿಸಲಾಗದ ಪಾಪಿ. ಕುಕ್ಕುಟೇಶ್ವರಾಲಯದ ಕಲ್ಲು ವಿಗ್ರಹವನ್ನೇ ನಿನ್ನ ರಕ್ಷಕ ಎಂದು ನಂಬಿದೆ. ದತ್ತನಾದ ನಾನು, ನಿನ್ನ ಕರ್ಮಗಳನ್ನು ಬೆಟ್ಟಕಲ್ಲುಗಳಲ್ಲಿ ಸೇರಿಸಿ ಅವನ್ನು ಖಂಡಿಸುವುದರಿಂದ ಕರ್ಮ ಕ್ಷಯ ಮಾಡಿದೆ. ಹೊಸ ಮನೆ ಸಹಾ ಕೊಟ್ಟೆ. **ನೀನು ಸಶರೀರ ದತ್ತನಾದ ನನ್ನ ಮೇಲೆ ವಿಶ್ವಾಸವಿಟ್ಟಿದ್ದರೇ, ನಿನ್ನ ಸಂಸ್ಕಾರಗಳನ್ನೆಲ್ಲಾ ನನ್ನ ಶರೀರಕ್ಕೆ ಆಕರ್ಷಿಸಿ ನಿನ್ನ ಕರ್ಮ ಕ್ಷಯ ಗೊಳಿಸಿ ರಕ್ಷಿಸುತ್ತಿದ್ದೆ. ಭಕ್ತನ ಭಾವನೆಯಂತೆ ದೈವದ ಅನುಗ್ರಹ ಫಲ ಇರುವುದು"** ಎಂದರು.

ಈ ಲೀಲೆಯ ನಂತರ, ಪಾಪಯ್ಯ ಶ್ರೀಪಾದ ಶ್ರೀವಲ್ಲಭರನ್ನು ದತ್ತಾವತಾರಿಯಾಗಿ ಗುರ್ತಿಸಿದರು.

ಶ್ರೀಪಾದರ ಹಾಲಿನ ಸಮಸ್ಯೆ ಶ್ರೇಷ್ಠಿಗೂ, ವರ್ಮರಿಗೂ ನೋವನ್ನು ತಂದಿತ್ತು. ಅವರು, ಶ್ರೀ ಸತ್ಯ ಋಷೀಶ್ವರರ ಬಳಿ ಬಂದು, ''ಎಲೈ ರಾಜರ್ಷಿಯೇ! ತಾವು ಜನಕ ಮಹಾರಾಜರಂತೆ, ಸಂಸಾರದಲ್ಲಿದ್ದುಕೊಂಡೂ ಬ್ರಹ್ಮಜ್ಞಾನರಾಗಿ ಬ್ರಹ್ಮದಂದು ಲೀನವಾಗಿದ್ದೀರಿ.

ನಮ್ಮದೊಂದು ಸಣ್ಣ ಪ್ರಾರ್ಥನೆ. ತಾವು ಕರುಣಿಸಬೇಕು'' ಎಂದರು. ಬಾಪನಾರ್ಯರು, ''ಪ್ರಾರ್ಥನೆ ತಿಳಿಯದೇ ಹೇಗೆ ಒಪ್ಪಿಗೆ ಕೊಡಲಿ? ತಾವು ಸಂಕೋಚವಿಲ್ಲದೇ ಕೇಳಿ. ಅದು ಧರ್ಮಬದ್ಧವಾದರೇ ತಪ್ಪದೇ ಒಪ್ಪುವೆನು'' ಎಂದರು. ಆಗ ಶ್ರೀ ಶ್ರೇಷ್ಠಿ, ''ನಾನು, ಶ್ರೀ ವರ್ಮರಿಂದ ಗಾಯತ್ರಿ ವಂಶಾಂಕುರವಾದ ಶುಭಲಕ್ಷಣ ಗೋವೊಂದನ್ನು ಕ್ರಯಕ್ಕೆ ಪಡೆದಿದ್ದೆ. ನಮ್ಮಕುಲ ಪುರೋಹಿತರಾದ ಶ್ರೀ ಅಪ್ಪಲರಾಜ ಶರ್ಮರಿಗೆ ಕೊಟ್ಟು, ಅದರ ಕ್ಷೀರವನ್ನು ಶ್ರೀಪಾದರ ಸೇವೆಗೆ ಉಪಯೋಗಿಸಲು ಬಯಸಿದೆವು'' ಎಂದರು.

ಶ್ರೇಷ್ಠಿ ಮಾತನ್ನು ಕೇಳಿದ ಶ್ರೀ ಬಾಪನಾರ್ಯರು, ''ಒಳ್ಳೆಯದು! ಆ ಗೋಮಾತೆಯನ್ನು ನಮ್ಮಮನಗೆ ಕರೆ ತನ್ನಿ. ಅದು ಅಪ್ಪಲರಾಜರ ಮನೆಯಲ್ಲಿರುವುದು, ದಾತನಿಗೆ ಮತ್ತು ಪಡೆದವನಿಗೆ ಸಹಾ ಶ್ರೇಯಸ್ಕರ'' ಎಂದು ನುಡಿದರು.

ಗೋಮಾತೆ, ಬಾಪನಾರ್ಯರ ಮನೆ ತಲುಪಿತು. ಅದನ್ನು ದಾನವಾಗಿ ಪಡೆಯಲು, ಅಪ್ಪಲರಾಜ ಶರ್ಮ ಒಪ್ಪಲಿಲ್ಲ. ಹಿಮಾಲಯದಲ್ಲಿ ಶತೋಪಥವೆಂಬುವ ಪ್ರಾಂತ ಒಂದಿದೆ. ಅಲ್ಲಿಂದಲೇ ಶ್ರೀಧರ್ಮರಾಜ ಮುಂತಾದವರು ಸ್ವರ್ಗಾರೋಹಣೆ ಮಾಡಿದರು. ಅಲ್ಲಿ ಶ್ರೀ ಸಚ್ಚಿದಾನಂದರೆಂಬುವ ಓರ್ವ ಅವಧೂತ ಇದ್ದರು. ಈ ಮಾಹಾತ್ಮರ ವಯಸ್ಸು ಕೆಲವು ಶತಮಾನಗಳು. ಅವರು ಕೈವಲ್ಯಶೃಂಗದಲ್ಲಿನ ಶ್ರೀ ವಿಶ್ವೇಶ್ವರ ಪ್ರಭುಗಳ ಶಿಷ್ಯರು. ಶ್ರೀ ವಿಶ್ವೇಶ್ವರ ಪ್ರಭುಗಳು ತಾವು ಪೀಠಿಕಾಪುರದಲ್ಲಿ ಶ್ರೀಪಾದ ಶ್ರೀವಲ್ಲಭ ರೂಪದಲ್ಲಿ ಅವತರಿಸಿದ್ದೇವೆಂದು, ಅವರ ಬಾಲ್ಯ ರೂಪವನ್ನು ತಿಲಕಿಸಿ ಧನ್ಯರಾಗ ಬೇಕೆಂದು, ಶ್ರೀ ಸಚ್ಚಿದಾನಂದ ಅವಧೂತರನ್ನು ಶಾಶಿಸಿದರು. ಶ್ರೀ ಅವಧೂತರು ಪೀಠಿಕಾಪುರಕ್ಕೆ ಬಂದರು. ಶ್ರೀ ಬಾಪನಾರ್ಯರು, ಆದರದ ಸ್ವಾಗತ ಕೊಟ್ಟರು. ಶ್ರೀಪಾದ ಶ್ರೀವಲ್ಲಭರ ರೂಪಧಾರಿಯಾದ, ಶ್ರೀದತ್ತ ಪ್ರಭು ದರ್ಶನದಿಂದ ಚರಿತಾರ್ಥರಾದರು. ಅವರ ಮುಂದೆ ಈ ಹಾಲಿನ ಸಮಸ್ಯೆ ಇಡಲಾಯಿತು. ಅವಧೂತರು, ಶ್ರೀ ಅಪ್ಪಲರಾಜ ಶರ್ಮ ಗೋದಾನ ಪಡೆಯಲೇಬೇಕೆಂದು, ವ್ಯರ್ಥ ನಿಯಮಗಳಿಂದ ಸಾಕ್ಷಾತ್ ದತ್ತ ಪ್ರಭುಗಳಾದ ಶ್ರೀಪಾದರಿಗೆ ತಕ್ಕ ಹಾಲನ್ನು ನೀಡುವ ಮಹದ್ಭಾಗ್ಯ ಮತ್ತು ಸೇವೆಯನ್ನು ಕಳೆದುಕೊಳ್ಳಬಾರದೆಂದು ತಟ್ಟಿ ಹೇಳಿದರು. ಬ್ರಾಹ್ಮಣ ಪರಿಷತ್ ಶ್ರೀಪಾದರು ದತ್ತರೇ ಎನ್ನಲೂ ಸಾಕ್ಷ್ಯಗಳು ಕೇಳಿದರು. ಪಂಚ ಭೂತಗಳಿಂದಲೇ ಕೊಡಿಸುವೆನೆಂದು ಅವಧೂತರು ನುಡಿದರು.

## ಶ್ರೀಪಾದರೇ ದತ್ತಾತ್ರೇಯರೆಂದು ಪಂಚ ಭೂತಗಳು ಸಾಕ್ಷ್ಯ ನೀಡುವುದು

ಯಜ್ಞ ಪ್ರಾರಂಭವಾಗಲು ಭೂಮಾತೆ ಸಾಕ್ಷ್ಯ ನುಡಿದಳು. ಶ್ರೀಪಾದರು ದತ್ತದೇವರೇ, ಆದ್ದರಿಂದ ಅಪ್ಪಲರಾಜ ಶರ್ಮ ಗೋದಾನ ಪಡೆಯುವುದು ದೋಷವಲ್ಲ. ಮಾವನವರು ಅಳಿಯರಿಗೆ ಪ್ರೇಮದಿಂದ ಕೊಡುವುದು ದಾನವಾಗಲಾರದು. ಆದ್ದರಿಂದ, ಸತ್ಯಋಷೀಶ್ವರ ಶ್ರೇಷ್ಠಿ ಯಿಂದ ಅದನ್ನು ದಾನವಾಗಿ ಪಡೆದು ಅಳಿಯ ದೇವರಿಗೆ ಕಾಣಿಕೆಯಾಗಿ ಕೊಡಬಹುದು. ಇದು ಭುಮಾತೆಯ ವಚನ. ಯಜ್ಞ ಪ್ರಾರಂಭವಾದ ನಂತರ ಯಜ್ಞ ಸ್ಥಳ ಬಿಟ್ಟು, ಮಿಕ್ಕ ಕಡೆ ಮಳೆ ಬೀಳುತ್ತಿತ್ತು. ಇದು ಎರಡನೆಯ ಸಾಕ್ಷಿಯಾಗಿ ಸ್ವೀಕರಿಸಲಾಯಿತು. ಯಜ್ಞದಲ್ಲಿ ಹವಿಸ್ಸನ್ನು ಅಗ್ನಿ ದೇವರು ಸ್ವತಃ ಸ್ವೀಕರಿಸಿ, ಗೋದಾನ ದೋಷವಿಲ್ಲವೆಂದು ವಿವರಿಸಿದರು. ಇದು ಮೂರನೇ ಸಾಕ್ಷಿಯಾಗಿ ಒಪ್ಪಲಾಯಿತು. ವಾಯು, ಯಜ್ಞಶಾಲೆ ವಿನಃ ಮಿಕ್ಕ ಪ್ರಾಂತವನ್ನೆಲ್ಲಾ ತನ್ನ ಬಲದಿಂದ ನಡುಗಿಸಿದರು. ಇದು ನಾಲ್ಕನೇ ಸಾಕ್ಷಿಯಾಗಿ ಒಪ್ಪಲಾಯಿತು. ಆಕಾಶದಿಂದ ದಿವ್ಯವಾಣಿ ಹೊರಬಂದು, ಶ್ರೀಪಾದರು ದತ್ತ ಪ್ರಭುಗಳೇ ಎಂದು ತಿಳಿಸಿತು. ಪಂಚ ಭೂತಗಳ ಸಾಕ್ಷ್ಯ ದೊರೆತನಂತರ ಅಪ್ಪಲರಾಜ ಶರ್ಮರು ಗೋದಾನ ಪಡೆದರು. ಗೋದಾನ ಫಲ ಶ್ರೇಷ್ಠಿಗೆ ತಲುಪಿತು.

ಆದ್ದರಿಂದ, ಅದರ ಬೆಲೆಯನ್ನು ನರಸಿಂಹ ವರ್ಮರು ಅಪ್ಪಲರಾಜ ಶರ್ಮರಿಗೆ ಕೊಡುವಂತೆ ನಿರ್ಣಯವಾಯಿತು. ಈ ತರಹ ಶ್ರೀ ಅವಧೂತರ ಸಮಕ್ಷದಲ್ಲಿ ಶ್ರೇಷ್ಠಿಗಳಿಗೆ ಮತ್ತು ವತ್ಸವಾಯಿರಿಗೇ ಅಪೂರ್ವ ಪುಣ್ಯ ಲಭಿಸಿತು.

**ಮುಂದೆ ಕೋಕನದ ಎಂದು ಕರೆಯಲಾಗುವ ವಾಯಸಪುರ ಅಗ್ರಹಾರ (ಕಾಕಿನಾಡ), ಶ್ಯಾಮಲಾಂಬಾಪುರ (ಸಾಮರ್ಲಕೋಟೆ), ಶ್ರೀ ಪೀಠಿಕಾಪುರ ಸೇರಿ ದೊಡ್ಡ ಪಟ್ಟಣವಾಗುವುದು. ಲೋಕದ ಎಲ್ಲಾ ದೇಶದವರೂ, ಎಲ್ಲಾ ಜಾತಿಯವರೂ, ಎಲ್ಲಾ ಸಂಪ್ರದಾಯಸ್ತರೂ, ಯಾವುದೋ ಒಂದು ಜನುಮದಲ್ಲಿ, ಯಾವುದೋ ದಿನ ಶ್ರೀ ಪೀಠಿಕಾರಪುರಕ್ಕೆ ಬಂದು, ಶ್ರೀಗಳನ್ನು ದರ್ಶಿಸುವರು. ಶ್ರೀಪಾದರ ಚರಿತ್ರೆ ಸಂಸ್ಕೃತದಲ್ಲಿ ಬರೆಯಲಾಗುವುದು. 'ಶ್ರೀಪಾದ ಶ್ರೀವಲ್ಲಭ ಚರಿತಾಮೃತ'ವೆನ್ನುವ ಈ ಗ್ರಂಥ ಶ್ರೀಪಾದರಿಂದಲೇ ಆಶೀರ್ವಾದಿಸಲ್ಪಡುವುದು. ಆ ಭೂರ್ಜಪತ್ರದ್ದು, ಶ್ರೀಪಾದರ ಸಂಕಲ್ಪದಂತೆ, ಕಾಣದಂತೆ, ಶ್ರೀಪಾದರ ಜನುಮ ಸ್ಥಳಕ್ಕೆ ಬಹಳಷ್ಟು ಆಳದಲ್ಲಿ ಭದ್ರದಿಂದಿರುವುದು. ಅವರ ಜನ್ಮ ಸ್ಥಳದಲ್ಲಿ ಪಾದುಕೆ ಪ್ರತಿಷ್ಠೆ ಆಲಯ ನಿರ್ಮಾಣ ಆಗುವುದು. ಶ್ರೀಪಾದರಿಗೆ ಗೋದಾನ ಮಾಡಿದ ಮಹಾಪುಣ್ಯವಂತ ವೈಶ್ಯ ಶ್ರೇಷ್ಠನಾದ ವೆಂಕಟಪ್ಪಯ್ಯ ಶ್ರೇಷ್ಠಿ ಧನ್ಯರು. ಅವರ ಕುಟುಂಬದಲ್ಲಿ ಸಿರಿಸಂಪತ್ತಿಗೆ ಕೊರತೆ ಇರುವುದಿಲ್ಲ. ಅವರು ಹಿರಣ್ಯ ಲೋಕದಲ್ಲಿ ಕೆಲ ಕಾಲ ಇದ್ದನಂತರ, ಮರಾಠಾ ದೇಶದ ಮಹಾ ಐಶ್ವರ್ಯವಂತರಾದ ವೈಶ್ಯ ಕುಟುಂಬದಲ್ಲಿ ಹುಟ್ಟಿ, ಶ್ರೀ ನೃಸಿಂಹ ಸರಸ್ವತಿ ಅವತಾರವನ್ನು ಸಹಾ ದರ್ಶಿಸಬಲ್ಲರು.**

ಮಗು! ಶಂಕರ ಭಟ್ಟು, ಈ ಗೋದಾನ ಸತ್ಫಲವಿಶೇಷ ಬಹಳ ಶುಭದಾಯಕ. ನೀನು ಕುರುವಪುರಕ್ಕೆ ಇನ್ನು ಪ್ರಯಾಣ ಮುಂದುವರಿಸಬಹುದು. ನಿನ್ನನ್ನು ಶ್ರೀಪಾದ ಶ್ರೀವಲ್ಲಭರು ಸದಾ ರಕ್ಷಿಸಲಿ.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 10

# ನರಸಿಂಹ ಮೂರ್ತಿಯ ವರ್ಣನೆ

ನಾನು ಶ್ರೀ ತಿರುಮಲದಾಸರ ಆಜ್ಞೆ ಪಡೆದು, ಕುರುವಪುರದತ್ತ ಪ್ರಯಾಣ ಮುಂದುವರೆಸಿದೆ. ಶ್ರೀಪಾದರ ಲೀಲೆಗಳನ್ನು ಮನಸ್ಸಿನಲ್ಲಿ ನೆನೆಯುತ್ತಿರಲು ನನಗೆ ರೋಮಾಂಚನೆಯಾಗತೊಡಗಿತು. ಪ್ರಯಾಣ ಮಾರ್ಗದಲ್ಲಿ ಅಷ್ಟು ದೂರದಲ್ಲಿ ಅರಳೀ ಮರ ಒಂದು ಕಾಣಿಸಿತು. ಮಧ್ಯಾಹ್ನ ಸಮಯ ಹಸಿವು ಜೋರಾಗಿತ್ತು. ಹತ್ತಿರದಲ್ಲಿ ಯಾವುದಾದರೂ ಬ್ರಾಹ್ಮಣರ ವಾಸ ಸ್ಥಳ ಇದ್ದರೇ ಮಧೂಕರವನ್ನು ತಂದುಕೊಂಡು ಪ್ರಯಾಣ ದಣಿವನ್ನು ತೀರಿಸಿಕೊಳ್ಳಲೂ ಪವಿತ್ರವಾದ ಅಶ್ವಥ ವೃಕ್ಷ ಇದೆ ಬಿಡು ಎಂದು ಅಂದುಕೊಳ್ಳುತ್ತಿದ್ದೆನು. ಆ ಅಶ್ವಥ ಮರದ ನೆರಳಿನಲ್ಲಿ ಯಾರೋ ತಂಗಿರುವುದು ಕಂಡುಬಂದಿತು. ಸ್ವಲ್ಪ ದೂರ ಅಲ್ಲಿಗೆ ನಡೆಯಲೂ ಆ ವ್ಯಕ್ತಿಗೆ ಪವಿತ್ರ ಯಜ್ಞೋಪವೀತವಿರುವಂತೆಯೂ ಕಂಡು ಬಂದಿತು.

ಆ ವೃಕ್ಷದತ್ತಿರ ನಾನು ಹೋಗಲು ಆ ವ್ಯಕ್ತಿ ನನ್ನನ್ನು ಸಾದರವಾಗಿ ಬರ ಮಾಡಿಕೊಂಡರು. ಅವರ ಕಣ್ಣಿನಲ್ಲಿ ಕರುಣಾ ರಸವಿತ್ತು. ಆತನ ಮುಂದೆ ಒಂದು ಬುತ್ತಿ ಇತ್ತು. ಅದರಲ್ಲಿ ಒಂದು ತಾಮ್ರಪಾತ್ರೆ ವಿನಹಾ ತಿನ್ನಲಾಗದ್ದೇನೂ ಇರಲಿಲ್ಲ. ಅತನು ಶ್ರೀಪಾದ ಶ್ರೀವಲ್ಲಭರ ನಾಮವನ್ನು ಸದಾ ನುಡಿಯುತ್ತಿದ್ದನು. ನಾನು, “ಸ್ವಾಮಿ! ತಾವು ಶ್ರೀಪಾದರ ಭಕ್ತರೇ? ಆ ಮಹಾಪುರುಷನನ್ನು ದರ್ಶಿಸಿದ್ದೀರಾ?” ಎಂದು ಕೇಳಿದೆ.

ಆತ, “ಸ್ವಾಮಿ! ನಾನು ಸದ್ವೈಶ್ಯಕುಲದಲ್ಲಿ ಜನ್ಮಿಸಿದ್ದೇನೆ. ಸುಬ್ಬಯ್ಯ ಶ್ರೇಷ್ಠಿ ನಾಮಧೇಯ. ನನ್ನ ಚಿಕ್ಕ ವಯಸ್ಸಿನಲ್ಲೇ ತಂದೆ ತಾಯಿಯರನ್ನು ಕಳೆದುಕೊಂಡೆ. ಬೇಕಾದಷ್ಟು ಹಣವಿತ್ತು. ದೂರ ಪ್ರದೇಶಕ್ಕೆ ತೆರಳಿ ವ್ಯಾಪಾರ ಮಾಡುತ್ತಿರುತ್ತೇನೆ. ಕಾಂಚಿಪುರಕ್ಕೆ ಅನೇಕ ಸಲ ಹೋಗಿ ಬರುತ್ತಿದ್ದೆ. ಅಲ್ಲಿ ಚಿಂತಾಮಣೀ ಎಂಬ ವೇಶ್ಯೆಯೊಡನೆ ಸಂಪರ್ಕ ಬೆಳೆಯಿತು. ಸಾಕಷ್ಟು ಧನ ಖರ್ಚುಮಾಡಿದೆ. ಮಳೆಯಾಳ ದೇಶದ ಪಾಲಕ್ಕಾಡದಿಂದ ಸಹಾ, ಬಿಲ್ವಮಂಗಳನೆಂಬ ಬ್ರಾಹ್ಮಣನೊಬ್ಬನು ವ್ಯಾಪಾರಕ್ಕೆ ಕಾಂಚಿಪುರಕ್ಕೆ ಬರುತ್ತಿದ್ದನು. ಸುಗಂಧ ದ್ರವ್ಯಗಳು ಅರಬ್ಬು ದೇಶಸ್ಥರಿಗೆ ಮಾರಿ ರತ್ನರಾಶಿಗಳನ್ನು, ಕುದುರೆಗಳನ್ನು ಪಡೆಯುತ್ತಿದ್ದನು. ಒಮ್ಮೊಮ್ಮೆನಾವಿಬ್ಬರೂ ಸೇರಿ ವ್ಯಾಪಾರ ವ್ಯವಹಾರ ನಡೆಸುತ್ತಿದ್ದೆವು. ನಮ್ಮಿಂದ ಒಳ್ಳೆಯ ಜಾತಿ ಕುದುರೆಗಳನ್ನು ರಾಜಮಹಾರಾಜರು ಖರೀದಿಸುತ್ತಿದ್ದರು. ದುರದೃಷ್ಟದಿಂದ ನಾವಿಬ್ಬರೂ ವೇಶ್ಯೆ ಸಾಂಗತ್ಯದಲ್ಲಿ ಭ್ರಷ್ಟರಾದೆವು.

ಅರಬ್ಬು ದೇಶಸ್ಥರ ಜೊತೆ ನಾವು ನಡೆಸುತ್ತಿದ್ದ ವ್ಯಾಪಾರ ಸ್ವಲ್ಪಕಾಲ ಸಂತೋಷವಾಗೆ ಇತ್ತು. ಕ್ರಮೇಣ ಅವರು ನಮ್ಮಿಂದ ಬಹಳಷ್ಟು ಧನ ಪಡೆದರೂ ಮೇಲು ಜಾತಿ ಕುದುರೆಗಳನ್ನು ಕೊಡುತ್ತಿರಲಿಲ್ಲ. ಆ ಕೆಳಮಟ್ಟ ಕುದುರೆಗಳಿಂದ ವ್ಯಾಪಾರದಲ್ಲಿ ನಷ್ಟ ಹೊಂದಿದೆವು. ನನ್ನ ಪತ್ನಿ ಮತ್ತು ಮತಿಸ್ಥಿಮಿತವಿಲ್ಲದ ಪುತ್ರನೂ ತೀರಿಕೊಂಡರು.

ಮಗೂ! ತೀರ್ಥಗಳೆಲ್ಲಾ ಶ್ರೇಷ್ಠವೆಂದು ಹೆಸರು ಪಡೆದ ಪಾದಗಯ ತೀರ್ಥರಾಜವನ್ನು ಹೊಂದಿದ ಶ್ರೀ ಪೀಠಿಕಾಪುರ ನಮ್ಮ ಸ್ವಗ್ರಾಮ. ನಾನು ನನ್ನ ಅಜ್ಞಾನ ದಶೆಯಿಂದ, ದೇವ ಬ್ರಾಹ್ಮಣರನಿಂದೆ ಮಾಡುತ್ತಿದ್ದೆ. ಬಾಕೀ ವಸೂಲಿ ಕಾರ್ಯ, ಅತಿ ಕಠೋರವಾಗಿಯೇ ಮಾಡುತ್ತಿದ್ದೆ. ಒಮ್ಮೆ ಶ್ರೀಪಾದರ ತಂದೆ ಅಪ್ಪಲರಾಜ ಶರ್ಮರ ಮನೆಗೆ ಅಯಿನವಿಲ್ಲಿನಿಂದ ಬಹಳಷ್ಟು ಜನ ಬಂದಿದ್ದರು. ಅವರಿಗೆಲ್ಲಾ

ಉಟೋಪಚಾರ ನೀಡಲು, ಶರ್ಮರ ಬಳಿ ಹಣವಿರಲಿಲ್ಲ. ಶ್ರೇಷ್ಠಿಗಳ ಬಳಿ ಪದಾರ್ಥಗಳಿಗಾಗಿ ಹೋದರೆ ಅವರು ಅವರ ಕುಲ ಪುರೋಹಿತರಾದ ಕಾರಣ ಹಣ ತೆಗೆದುಕೊಳ್ಳದೇ ಪದಾರ್ಥಗಳನ್ನು ಕೊಡುವರು. ಆಗ ಅದು ಅವರಿಂದ ದಾನ ಪಡೆದಂತಾಗುವುದು. ಶ್ರೀ ಶರ್ಮ ದಾನ ಸ್ವೀಕರಿಸುವುದಿಲ್ಲ. ಒಮ್ಮೆ ವಿಧಿ ಇಲ್ಲದ ಪರಿಸ್ಥಿತಿಯಲ್ಲಿ ನನ್ನ ಅಂಗಡಿಯಿಂದ ಒಂದು ವರಹಾ ಬೆಲೆ ಬಾಳುವ ಪದಾರ್ಥಗಳನ್ನು ಬಾಕಿ ಇಟ್ಟು ತೆಗೆದುಕೊಂಡು ಹೋಗಿದ್ದರು. ಅವರ ಬಂಧುಗಳು ಹೊರಟು ಹೋದನಂತರ, ನಾನು ಅವರನ್ನು ಆ ಒಂದು ವರಹಾ ಬಾಕಿ ತೀರಿಸಲೂ ಗದರಿದೆ. ಸದ್ಯಕ್ಕೆ ಕೈಯಲಿ ಹಣವಿಲ್ಲವೆಂದು ಹಣ ಬಂದ ತಕ್ಷಣವೇ ಕೊಟ್ಟುಬಿಡುವೆನೆಂದು ನುಡಿದಿದ್ದರು. ಸ್ವಲ್ಪ ಕಾಲದನಂತರ ನಾನು ಚಕ್ರಬಡ್ಡಿ ಕಳ್ಳ ಲೆಕ್ಕ ಸೇರಿಸಿ ಅವರು 10 ವರಹಾ ಕೊಡಬೇಕಾಗಿದೆ ಎಂದು ತೀರ್ಮಾನ ಮಾಡಿದೆ. 10 ವರಹಾ ಕೊಡಬೇಕಾದರೇ ಅವರ ಮನೆಯನ್ನು ಮಾರಬೇಕಾಗಿ ಬಂತು. ಆಗಿನ ಬೆಲೆಗಳ ಪ್ರಕಾರ ನಾನು ಅವರ ಮನೆಯನ್ನು ಪಡೆದು, ಅವರಿಗೆ ಒಂದೋ ಎರಡೋ ವರಹಾ ಕೊಟ್ಟರೇ ಸರಿಹೋಗುತ್ತಿತ್ತು. ಈ ವಿಷಯ ಹತ್ತಾರು ಜನಕ್ಕೆ ನಾನು ತಿಳಿಸುತ್ತಿದ್ದೆ. ರಾಜಶರ್ಮರನ್ನು ಗೃಹವಿಲ್ಲದವನಾಗಿ ಮಾಡುವುದೇ ನನ್ನ ಧ್ಯೇಯವಾಗಿತ್ತು. ನನ್ನ ದುರಾಲೋಚನೆಯನ್ನು ತಿಳಿದ ಶ್ರೀ ವೆಂಕಟಪ್ಪಯ್ಯ ಶ್ರೇಷ್ಠಿ "ಎಲಾ ದುಷ್ಟ! ಧನ ಮದದಿಂದ ಇಷ್ಟಬಂದಂತೆ ನುಡಿಯುತ್ತಿರುವೆ. ನಮ್ಮ ಕುಲಪುರೋಹಿತರನ್ನು ಅವಮಾನಿಸಿದರೇ, ನನ್ನನ್ನು ಅವಮಾನಿಸಿದ ಹಾಗೆಯೆ! ನಿನ್ನ ಪದ್ಧತಿ ಬದಲಾಯಿಸಿಕೊಳ್ಳದಿದ್ದರೆ ಕೆಡುತ್ತೀಯ. ಅಗ್ನಿಹೋತ್ರನಿಗಿಂತ ಪವಿತ್ರರಾದ ರಾಜಶರ್ಮರನ್ನು ಹೀಗೆ ಹಿಂಸಿಸಿದರೇ, ರೌರವಾದಿ ನರಕಕ್ಕೆ ಹೋಗುವೆ'' ಎಂದರು.

ಒಂದು ಬಾರಿ, ಶ್ರೀಪಾದರು ವೆಂಕಟಪ್ಪಯ್ಯ ಶ್ರೇಷ್ಠಿ ಮನೆ ಬಳಿ ಇದ್ದರು. ನಾನು ಅವಹೇಳನದಿಂದ "ಶ್ರೇಷ್ಠಿಗಳೇ! ರಾಜಶರ್ಮ ನನ್ನ ಬಾಕೀ ತೀರಿಸದೇ ಇದ್ದರೇ, ಅವರ ಒಬ್ಬ ಕುಮಾರ ನನ್ನ ಅಂಗಡಿಯಲ್ಲಿ ಕೆಲಸ ಮಾಡಬೇಕಾಗುತ್ತೆ. ಒಬ್ಬ ಕುರುಡ, ಎರಡನೆಯವ ಕುಂಟ. ಮೂರನೆಯ ಶ್ರೀಪಾದ 3 ವರುಷದ ಬಾಲಕ! ಹಾಗಿರುವಾಗ, ನನ್ನ ಬಾಕಿ ಗತಿ?'' ಅಂತ ನುಡಿದೆ. ಶ್ರೀ ವೆಂಕಟಪ್ಪಯ್ಯ ಶ್ರೇಷ್ಠಿಗಳು ಬಹಳ ನೊಂದುಕೊಂಡರು. ಕಣ್ಣೀರು ಸುರಿಯುತ್ತಿತ್ತು. ತಮ್ಮ ದಿವ್ಯ ಹಸ್ತದಿಂದ ಶ್ರೀಪಾದರು ಕಣ್ಣೀರು ಒರೆಸಿ, "ತಾತ! ನಾನಿರಲು ನಿನಗೇಕೆ ಭಯ? ಹಿರಣ್ಯಾಕ್ಷ, ಹಿರಣ್ಯಕಶ್ಯಪುರನ್ನು ಸಂಹರಿಸಿದ್ದು ನಾನೇ. ಸುಬ್ಬಯ್ಯನ ಬಾಕೀ ತೀರಿಸುವುದೇನು ಅಷ್ಟು ಕಷ್ಟವಲ್ಲ'' ಎಂದರು. ಶ್ರೀಪಾದರು ನನ್ನನ್ನು ನೋಡಿ,'' ಎಲಾ! ನಿನ್ನ ಬಾಕಿಯನ್ನು ನಾನು ತೀರಿಸುವೆನು. ನಾನು ನಿನ್ನ ಅಂಗಡಿಯಲ್ಲಿ ಕುಳಿತು ಸೇವೆ ಮಾಡಿ ಬಾಕಿ ತೀರಿಸುವೆ ಬಾಕಿ ತೀರಿದ ನಂತರ, ಶ್ರೀ ಮಹಾಲಕ್ಷ್ಮಿ ನಿನ್ನ ಮನೆಯಲ್ಲಿರಲಾರಳು, ಯೋಚಿಸು'' ಎಂದರು.

ಗರ್ವಿಷ್ಠನೂ, ದುರ್ಮಾರ್ಗದವನು ಆದ ನಾನು, 'ಆಯಿತು' ಎಂದೆನು. ಶ್ರೀಪಾದರನ್ನು ಎತ್ತಿಕೊಂಡು ವೆಂಕಟಪ್ಪಯ್ಯ ಶ್ರೇಷ್ಠಿ, ನನ್ನ ಅಂಗಡಿಗೆ ಬಂದು, "ಸುಬ್ಬಯ್ಯಾ! ನಾನು ಶ್ರೀಪಾದನ ಬದಲಾಗಿ ನಿನ್ನ ಅಂಗಡಿಯಲ್ಲಿ ಕೆಲಸ ಮಾಡುತ್ತೇನೆ. ಒಪ್ಪಿಗೆಯಾ'' ಎಂದರು. ನಾನು ಒಪ್ಪಿದೆನು. ಇಷ್ಟರಲ್ಲಿ ಜಡೆಗಳುಳ್ಳ ಸನ್ಯಾಸಿ ಒರ್ವನು ನನ್ನ ಬಳಿ ಬಂದು,'ಸುಬ್ಬಯ್ಯನ ಅಂಗಡಿ ಎಲ್ಲಿ' ಅಂದನು.ನಾನೇ ಸುಬ್ಬಯ್ಯ, ಇದೇ ಆ ಅಂಗಡಿ ಎಂದೆನು. ಆತನು, "ಸ್ವಾಮಿ! ನನಗೆ ಬೇಗನೇ ಒಂದು ತಾಮ್ರದ ಪಾತ್ರೆ ಬೇಕು. ಬೆಲೆ ಎಷ್ಟಾದರೂ ಪರವಾಗಿಲ್ಲ, ಒಂದು ತಾಮ್ರದ ಪಾತ್ರೆ ಕೂಡಲೇ ಕೊಡಿ'' ಅಂದರು. ನನ್ನ ಬಳಿ 32 ತಾಮ್ರದ ಪಾತ್ರೆಗಳು ಇದ್ದರೂ, "ಇರುವುದು ಒಂದೇ, 10 ವರಹಗಳು ಕೊಟ್ಟರೇ ಈಗಲೇ ಆ ಪಾತ್ರೆ ಕೊಡಲಾಗುವುದು'' ಎಂದೆನು. ಒಂದು ಷರತ್ತನ್ನು ಹಾಕಿ ಆ ಬೆಲೆಗೆ ಅಂಗೀಕರಿಸಿದನು. ವೆಂಕಟಪ್ಪಯ್ಯ ಶ್ರೇಷ್ಠಿ ಬಳಿ ಇರುವ ಆ ಶ್ರೀಪಾದರು, ತಮ್ಮ ಹಸ್ತದಿಂದ ಆ ಪಾತ್ರೆ ಕೊಡಬೇಕು. ಶ್ರೀಪಾದರು ಅಂಗೀಕರಿಸಿದರು. ಜಡೆಗಳುಳ್ಳ ಸನ್ಯಾಸಿ ಶ್ರೀಪಾದರು ನಗುತ್ತಿರಲು ಆ ಪಾತ್ರೆಯನ್ನು ಪಡೆದುಕೊಂಡರು. ಜಟಾಧಾರಿಯೂ ನಗುತ್ತಿದ್ದರು.

ಆಗ ಶ್ರೀಪಾದರು, ಜಟಾಧಾರಿಗೆ, ''ಎಲೈ, ನಿನ್ನ ಕೋರಿಕೆ ತೀರಿತಲ್ಲವೆ? ನಿನ್ನ ಮನೆಯಲ್ಲಿ ಶ್ರೀ ಲಕ್ಷ್ಮಿ ಸ್ಥಿರವಾಗಿರುವಳು. ಈಗ ನಿನ್ನ ಸನ್ಯಾಸ ದೀಕ್ಷೆ ಸಾಕುಮಾಡಿ, ನಿನಗಾಗಿ ನಿನ್ನ ಮನೆಯಲ್ಲಿ ಕಾದಿರುವ ನಿನ್ನ ಪತ್ನಿ ಮತ್ತು ಮಕ್ಕಳ ಬಳಿ ಹೋಗು'' ಎಂದರು. ಆತ ಆನಂದದಿಂದ ಹೊರಟನು.

ನನಗೆ ವೆಂಕಟಪ್ಪಯ್ಯ ಶ್ರೇಷ್ಠಿಯನ್ನು ಮತ್ತು ಅಪ್ಪಲರಾಜ ಶರ್ಮನನ್ನು ಅವಮಾನಿಸಬೇಕೆಂಬ ಕೋರಿಕೆ ಇತ್ತು. ಇಂದು ಅದು ತೀರಿತು, ಗರ್ವದಿಂದ ''ಇಂದು ಒಂದು ತಾಮ್ರದ ಪಾತ್ರೆ ವ್ಯಾಪಾರದಲ್ಲಿ ವಿಶೇಷ ಧನ ಲಭಿಸಿದೆ. ಆಪ್ಪಲರಾಜ ಶರ್ಮ ನನಗೆ ಕೊಡಬೇಕಾದ ಋಣ ತೀರಿತೆಂದು ಭಾವಿಸುತ್ತಿದ್ದೇನೆ. ಆದ್ದರಿಂದ ಈ ಕ್ಷಣದಿಂದ ಶ್ರೀಪಾದನು ಬಂಧ ವಿಮುಕ್ತನು'' ಎಂದೆನು. ವೆಂಕಪ್ಪಯ್ಯ ಶ್ರೇಷ್ಠಿ ಈ ಮಾತನ್ನು ಶ್ರೀ ಗಾಯತ್ರಿ ಸಾಕ್ಷಿಯಾಗಿ ಹೇಳಬೇಕೆನ್ನಲೂ ಮಂದಬುದ್ಧಿಯವನಾದ ನಾನು ಸಹಾ ಹಾಗೆಯೇ ನುಡಿದೆನು.

ಮಗು, ಶಂಕರ ಭಟ್ಟೂ! **ಅವಧೂತರಿಂದ ಆಗಲಿ, ಸಿದ್ಧಪುರುಷರಿಂದಾಗಲಿ, ಅನುಗ್ರಹ ಪ್ರಸಾದವಾಗಿ ತಾಮ್ರಲೋಹದ ಚಿಕ್ಕ ಚೂರನ್ನು ಗ್ರಹಿಸಿದರೇ ವಿಶೇಷ ಭಾಗ್ಯ ಲಭಿಸುವುದು.** ಹಾಗಿರಲು ಸಾಕ್ಷಾತ್ ಶ್ರೀ ದತ್ತರೇ, ಶ್ರೀಪಾದ ರೂಪದಲ್ಲಿ ಬಂದು ತಾಮ್ರದ ಒಂದು ಪಾತ್ರೆಯನ್ನು ಜಟಾಧಾರಿಗೆ ಕೊಡುವುದು, ಆ ಪಾತ್ರೆ ಪಡೆದವನಿಗೆ ಎಷ್ಟು ಭಾಗ್ಯವೋ ಅಲ್ಲವೆ! ನಾನೆಷ್ಟು ದುರದೃಷ್ಟದವ. ಆ ಕ್ಷಣದಿಂದಲೇ ನನ್ನ ಶರೀರ, ಮನಸ್ಸು, ಆತ್ಮಗ್ಗಳಲ್ಲಿ ಲೀನವಾಗಿದ್ದ ಶ್ರೀ ಲಕ್ಷ್ಮಿ ಅಂಶ ಕ್ಷೀಣಿಸುತ್ತಿತ್ತು. **ಶ್ರೀಪಾದರ ಲೀಲೆ ಊಹಾತೀತ, ಅಚಿಂತ್ಯ ಸಹಾ, ಅವರ ಮುಂದೆ ನುಡಿದ ಪ್ರತಿ ಒಂದು ನುಡಿಯೂ ಸತ್ಯವಾಗುವುದು.** 32 ಪಾತ್ರೆಗಳಿದ್ದರೂ, ಒಂದೇ ಪಾತ್ರೆ ಇದೆ ಎಂದು ಸುಳ್ಳು ನುಡಿದೆ. ನನ್ನ ಈ ಸುಳ್ಳನ್ನೇ ಶ್ರೀಪಾದರು ನಿಜ ಮಾಡಿದರು. ವೆಂಕಟಪ್ಪಯ್ಯ ಶ್ರೇಷ್ಠಿ ಶ್ರೀಪಾದರು ಹೊರಟ ನಂತರ ನನ್ನ ಅಂಗಡಿಯಲ್ಲಿ ಪರಿಶೀಲಿಸಲು ಇರಬೇಕಾದ 31 ತಾಮ್ರ ಪಾತ್ರೆಗಳ ಬದಲಾಗಿ ಒಂದೇ ಪಾತ್ರೆ ಉಳಿದಿತ್ತು. ನನಗೆ ಅಪ್ಪಲರಾಜ ಶರ್ಮ 10 ವರಹಾ ಕೊಡಬೇಕಾಗಿದೆ ಎಂದು ಸುಳ್ಳು ಲೆಕ್ಕ ತೋರಿಸಿದೆ. ಅದಕ್ಕೆ ಸರಿ ಹೋಲುವಂತೆ ಶ್ರೀಗಳು 10 ವರಹಗಳು ನನಗೆ ಈ ವಿಧವಾಗಿ ಲಭಿಸುವಂತೆ ಮಾಡಿದರು. ಈ ಲೀಲೆಯಿಂದ ಅಪ್ಪಲರಾಜ ಶರ್ಮರಿಗೆ ಇದ್ದ ಕೆಲವು ಅಪನಂಬಿಕೆಗಳನ್ನು ಸಹಾ ದೂರ ಮಾಡಿದರು. ಸೂರ್ಯೋದಯದ ಪೂರ್ವ, ಸೂರ್ಯಾಸ್ತಮಯದ ಪೂರ್ವದ ಸಮಯ ಅತಿ ಪವಿತ್ರ ಕಾಲ. ಪ್ರಾತಸ್ಸಂಧ್ಯೆ, ಸಾಯಂಸಂಧ್ಯದಲ್ಲಿ ಅಗ್ನಿಹೋತ್ರ ಮಾಡುವುದು, ಬಹಳ ಫಲದಾಯಕ. ಪ್ರಾತಃಸಂಧ್ಯದಲ್ಲಿ ಸೂರ್ಯಭಗವಾನರ ಎಲ್ಲಾ ಶಕ್ತಿಗಳೂ ವಿಜೃಂಭಣೆಗೆ ಸಿದ್ಧವಾಗಿರುವವು. ಸಾಯಂಸಂಧ್ಯೆಯಲ್ಲಿ ಎಲ್ಲಾ ಶಕ್ತಿಗಳು ಸೂರ್ಯನನ್ನು ವಾಪಸಿಯಲ್ಲಿ ಸೇರುವವು.

ಆಗ ನಾನಂದೆನು, ''ಸ್ವಾಮಿ! ದಾನ ಸ್ವೀಕರಿಸಿದರೇ ಪುಣ್ಯಫಲ ಕಡಿಮೆ ಆಗುವುದೆಂದು ಕೇಳಿದ್ದೇನೆ ಹೊರತು, ಸ್ವೀಕರಿಸದೇ ಹೋದರೇ ಪಾಪ ಪ್ರಾಪ್ತಿಯಾಗುವುದೆಂದು ನಿಮ್ಮಿಂದ ಮಾತ್ರ ಕೇಳಿದೆ. ಇದು ನನಗೆ ಅರ್ಥವಾಗಲಿಲ್ಲ. ಅಷ್ಟೇ ಅಲ್ಲ, ಶ್ರೀಪಾದರು ದತ್ತಾವತಾರಿ. ನರಸಿಂಹಾವತಾರಿ ಮತ್ತು ಶಿವಾವತಾರಿ ಎಂದು ಸಹಾ ಹೇಳುತ್ತಿದ್ದಾರೆ. ಶಿವನಲ್ಲಿ ಅನುಸೂಯ ತತ್ವ ಹೇಗೆ ಕೂಡಿರುವುದೋ ದಯವಿಟ್ಟು ವಿವರಿಸಿ.''

ಆಗ ಸುಬ್ಬಯ್ಯ ಶ್ರೇಷ್ಠಿಗಳು, ''ಸ್ವಾಮಿ! ನಿಮಗೆ ಹಸಿವಾಗಿದೆ, ಮನೆಗೆ ಅನ್ನವನ್ನು ಯಾಚಿಸಿ ಬಂದವರಿಗೆ, ಕುಡಿಯಲು ನೀರು, ತಿನ್ನಲು ಆಹಾರ, ಜಾತಿ, ಕುಲ, ಭೇದವಿಲ್ಲದೆ ಅರ್ಪಿಸಬೇಕೆಂದು ಶ್ರೀವಲ್ಲಭರು ತನ್ನ ಭಕ್ತರಿಗೆ ಸದಾ ಬೋಧಿಸುವರು. ತಾವು ಮೊದಲು

ಊಟ ಮಾಡಿ, ಹತ್ತಿರದಲ್ಲೇ ಒಂದು ಕೆರೆ ಇದೆ. ಶುಚಿವಂತರಾಗಿ ಬನ್ನಿ. ನಾನಿಷ್ಟರಲ್ಲಿ ಅಲ್ಲಿ ಕಾಣಿಸುವ ಬಾಳೆ ಮರದಿಂದ ಎಲೆಗಳನ್ನು ತರುವೆನು. ಅನ್ನಕ್ಕೆ ಸಾಂಬಾರ್, ಹೀರೇಕಾಯಿ ತವ್ವೆ ರುಚಿಕಟ್ಟಾಗಿ ಸಿದ್ದಮಾಡುವೆನು'' ಎಂದರು.

ನನಗೆ ಆಶ್ಚರ್ಯವಾಯಿತು. ಅವರ ಬುತ್ತಿಯಲ್ಲಿ ಒಂದು ತಾಮ್ರದ ಪಾತ್ರೆ ವಿನಹಾ ಏನೂ ಇಲ್ಲ! ಆಹಾರ ಪದಾರ್ಥ, ಹಣ್ಣು, ಹಂಪಲು ಏನೂ ಇಲ್ಲ. ಮೇಲ್ಪಟ್ಟು ಅನ್ನಕ್ಕೆ ಅಚ್ಚುಕಟ್ಟಾದ ಹೀರೆಕಾಯಿ ತವ್ವೆ ಎನ್ನುತ್ತಿರುವರೆ? ಏನೋ, ಕೆರೆಗೆ ಕೈಕಾಲು ತೊಳೆಯಲು ಹೊರಟೆ. ಸುಬ್ಬಯ್ಯ ಬಾಳೆಮರದ ಕಡೆ ಹೊರಟರು.

ನಾನು ಶುಚಿರ್ಭೂತನಾಗಿ ಹಿಂತಿರುಗಲು, ಸುಬ್ಬಯ್ಯ ಸಹಾ 2 ಬಾಳೆ ಎಲೆ ಹಿಡಿದು ಬಂದರು. ಹತ್ತಿರದಲ್ಲಿನ ತಾಳೆ ಮರದಿಂದ ಎಲೆಗಳು ತಂದು ದೊನ್ನೆಗಳಾಗಿ ಮಾಡಿದರು. ನಾನೀ ವೈಚಿತ್ರವನ್ನು ಆಶ್ಚರ್ಯದಿಂದ ನೋಡುತ್ತಿದ್ದೆ. ಆತ ಕಣ್ಣು ಮುಚ್ಚಿ ಕುಳಿತು ಕ್ಷಣಕಾಲ ಧ್ಯಾನಿಸಿದರು. ನಂತರ ತನ್ನ ತಾಮ್ರದ ಪಾತ್ರೆಯಿಂದ ಆ 2 ದೊನ್ನೆಗಳಲ್ಲಿ ನೀರು ಸುರಿದರು. ಆ ಖಾಲಿ ತಾಮ್ರದ ಬಟ್ಟಲಿನಿಂದ ನೀರು ಬಂದದ್ದು ಒಂದು ವಿಚಿತ್ರ, ನಂತರ ಆದರಿಂದಲೇ ಹೀರೆಕಾಯಿ ತವ್ವೆ, ಅನ್ನ, ಸಮೃದ್ಧಿಯಾಗಿ ಬರುತ್ತಿತ್ತು. ಆ ಪ್ರಸಾದದ ನಂತರ ಪಾತ್ರೆ ಖಾಲಿಯಾಗಿಯೇ ಇತ್ತು.

## ಶನಿವಾರ ಪ್ರದೋಶ ವೇಳೆಯ ಶಿವಾರ್ಚನೆಯ ಫಲ

ಶನೈಶ್ಚರನು ಕರ್ಮಕಾರನು. ಗ್ರಹಗಳಲ್ಲಿ ಛಾಯಗ್ರಹಗಳಾದ ರಾಹು-ಕೇತುಗಳಲ್ಲಿ, ರಾಹು ಶನೈಶ್ಚರ ಹಾಗಿಯೇ ಫಲಿತ ತರುವನು. ಕೇತು, ಅಂಗಾಕರನಂತೆ ಫಲಿತ ಕೊಡುವನು. ಕರ್ಮಕಾರಕನಾದ ಶನೈಶ್ಚರನು, ಕರ್ಮ ಸಾಕ್ಷಿಯಾದ ಸೂರ್ಯನ ಪುತ್ರ. **ಆದ್ದರಿಂದ ಶನಿವಾರದ ಸಾಯಂಸಂಧ್ಯ ಬಹಳ ಶಕ್ತಿಯುತ. ಚತುರ್ಥಿ, ತ್ರಯೋದಶಿ ತಿಥಿಗಳು, ರಾಹುವಿಗೆ ಬಲವಾದವು. ಶನಿ ತ್ರಯೋದಶಿ ಮಹಾಪರ್ವದಂದು ಸಾಯಂಸಂಧ್ಯೆಯಲ್ಲಿ ಶಿವಾರಾಧನೆ ಮಾಡುವವನಿಗೆ ಹಿಂದಿನ ಜನುಮ ಪಾಪಗಳ ಫಲ ಶೂನ್ಯವಾಗುವುದು. ಶ್ರೀಪಾದರು ಅಂಗಾರಕನ ನಕ್ಷತ್ರವಾದ ಚಿತ್ತದಲ್ಲಿ ಅವತರಿಸಿರುವುದರಿಂದ ಆ ನಕ್ಷತ್ರದಲ್ಲಿ ಶ್ರೀಪಾದರನ್ನು ಪೂಜಿಸಿದರೆ ಸರ್ವಗ್ರಹ ದೋಷಗಳೂ ನಶಿಸುವವು.** ಯುದ್ಧಗಳಿಗೆ, ಆಪತ್ತುಗಳಿಗೆ, ಶಸ್ತ್ರಾಸ್ತ್ರಗಳಿಂದ ಆಗುವ ಅಕಾಲ ಮೃತ್ಯುವಿಗೂ, ಋಣಗ್ರಸ್ತರಾಗಿ ತಪಿಸುವ ಜೀವನಕ್ಕೆ ಕಾರಣ ಅಂಗಾರಕ. **ಋಣವೆಂದರೆ ಪಾಪ. ಅರುಣವೆಂದರೆ ಪಾಪವಿಲ್ಲದ್ದು ಎಂದರ್ಥ. ಚಿತ್ತಾ ನಕ್ಷತ್ರದಂದು ಅಥವಾ ಮಂಗಳವಾರ ಶ್ರೀಪಾದರು ಅರುಣ ವರ್ಣದಿಂದ ಪ್ರಕಾಶಿಸುವರು. ಸಾಕ್ಷಾತ್ ಅರುಣಾಚಲೇಶ್ವರ ರೂಪದಲ್ಲಿರುವರು.** ವೆಂಕಟಪ್ಪಯ್ಯ ಶ್ರೇಷ್ಠಿ, ನರಸಿಂಹ ವರ್ಮ ಮತ್ತು ಬಾಪನಾರ್ಯರು ಶನಿ ಪ್ರದೋಷದಲ್ಲಿ ಶಿವಾರಾಧನೆ ಮಾಡುತ್ತಿದ್ದರು. ಅಂದು ಅಪ್ಪಲರಾಜ ಶರ್ಮ ಸಹಾ ಬಹಳ ನಿಷ್ಠೆಯಿಂದ ಇರುತ್ತಿದ್ದರು. ಅಖಂಡ ಲಕ್ಷ್ಮಿ ಸೌಭಾಗ್ಯವತಿ ಸುಮತಿ ಮಹಾರಾಣಿ ಶಿವ ಸ್ವರೂಪದಲ್ಲಿ ಅಂತರ್ಲೀನವಾಗಿರುವ ಅನುಸೂಯ ತತ್ತ್ವವನ್ನು ಧ್ಯಾನಿಸುತ್ತಿದ್ದರು. ಆ ಮಹಾತಪಸ್ಸುಗಳ ಫಲದಿಂದ ಶ್ರೀಪಾದರ ಅವತಾರ ನಡೆದಿದೆ. ಆದ್ದರಿಂದ ವೆಂಕಟಪ್ಪಯ್ಯ ಶ್ರೇಷ್ಠಿಗಳಿಂದ ಆಗಲಿ, ನರಸಿಂಹ ವರ್ಮರಿಂದ ಆಗಲಿ ಅಥವಾ ಬಾಪನಾರ್ಯರಿಂದ ಆಗಲಿ ಧನವನ್ನು ಸ್ವೀಕರಿಸಿದರೇ ಅದು ದಾನ ಆಗುವುದಿಲ್ಲವೆಂದು ಅವರಿಂದ ಧನವನ್ನು ಸ್ವೀಕರಿಸದೇ ಇದ್ದರೇನೆ ಮಹಾಪಾಪವೆಂದು ಶ್ರೀಪಾದರು ತಮ್ಮ ಅಪ್ಪನಿಗೆ ಮೌನವಾಗಿ ಬೋಧಿಸಬೇಕೆಂದುಕೊಂಡರು. ಶಂಕರ ಭಟ್ಟು! **ಶ್ರೀಪಾದರು ಸಕಲ ದೇವತಾ ಸ್ವರೂಪಿ. ಎಲ್ಲಾ ದೇವತಾ ಸ್ವರೂಪಕ್ಕೂ ಅತೀತವಾಗಿರುವ ಮಹಾತತ್ತ್ವ ಅವರದ್ದು. ಅವರ ದರ್ಶನ, ಸ್ಪರ್ಶನ ಮತ್ತು ಸಂಭಾಷಣಾ**

**ಭಾಗ್ಯ ಹೊಂದಿದವರೇ ಧನ್ಯರು.** ಸುಬ್ಬಯ್ಯ ಶ್ರೇಷ್ಠಿ ಹೀಗೆ ಹೇಳತೊಡಗಿದರು, "ಶ್ರೀಪಾದರು ಇಂತಹಾ ವಿಚಿತ್ರ ರೀತಿಯಿಂದ ಅವರ ತಂದೆಯನ್ನು ಋಣ ವಿಮುಕ್ತರಾಗಿ ಮಾಡಿದ ಆ ವೃತ್ತಾಂತ ಪೀಠಿಕಾಪುರವೆಲ್ಲಾ ಬೆಂಕಿಯಂತೆ ವ್ಯಾಪಿಸಿತು. ಶ್ರೀಪಾದರು 3 ವರುಷದ ಬಾಲಕ, ಅಪ್ಪಲರಾಜ ಶರ್ಮರ ಕಣ್ಣುಗಳಿಂದ ಕಣ್ಣೀರು ಪ್ರವಹಿಸಿತು. ಸುಮತಿ ಮಹಾರಾಣಿ ಅವರ ಮುದ್ದಿನ ಮಗನನ್ನು ಎದೆಗೆ ಅವಚಿಕೊಂಡು ಬಹಳ ಕಾಲ ತನ್ಮಯಳಾದಳು. ರಾಜ ಶರ್ಮರ ಮನೆಗೆ ವೆಂಕಟಪ್ಪಯ್ಯ ಶ್ರೇಷ್ಠಿ, ನರಸಿಂಹ ವರ್ಮ, ಬಾಪನಾರ್ಯರೂ ಬಂದರು. ತಂದೆಯನ್ನು ಋಣಮುಕ್ತ ಮಾಡುವುದು ಪುತ್ರನ ಧರ್ಮವೆಂದು ಶ್ರೀಪಾದರು ನುಡಿದರು. ನನ್ನನ್ನೂ ಶರ್ಮರ ಮನೆಗೆ ಬರುವಂತೆ ಆಹ್ವಾನಿಸಿದರು. ನಾನು, ಅಲ್ಲಿ ಸೇರಿದ ಹಿರಿಯರ ಮುಂದೆ ರಾಜ ಶರ್ಮರ ಬಾಕಿ ತೀರಿತೆಂದು ಹೇಳಿದೆ. ಅದಕ್ಕೆ ರಾಜ ಶರ್ಮರು ಒಪ್ಪಲಿಲ್ಲ. ಯಾರೋ ಜಟಾಧಾರಿ ಬಂದು 10 ವರಹಗಳು ಕೊಟ್ಟು ತಾಮ್ರದ ಪಾತ್ರೆ ಖರೀದಿಸಿದರೇ ಋಣ ಹೇಗೆ ತೀರಿತೆಂದು ರಾಜ ಶರ್ಮ ಕೇಳಲು ಸುದೀರ್ಘ ಚರ್ಚೆ ನಡಿತು.

ಬಾಪನಾರ್ಯರು, "ಶ್ರೀಪಾದ! ಆ ಜಟಾಧಾರಿ ಯಾರು, ನಿನಗೆ ಗೊತ್ತಾ?" ಎಂದರು. ಶ್ರೀಪಾದರು, ಆ ಜಟಾಧಾರೀನೇ ಅಲ್ಲಾ, ಎಲ್ಲಾ ಜಟಾಧಾರಿಗಳ ವಿಷಯ ಸಹಾ ನನಗೆ ಗೊತ್ತು" ಎಂದು ಉತ್ತರಿಸಿದರು.

## ಶ್ರೀಪಾದರ ಸ್ವರೂಪ

**ಬಾಪನಾರ್ಯರು:** ನೀನು 3 ವರುಷದ ಬಾಲಕ. ವಯಸ್ಸಿಗೆ ಮೀರಿ ಮಾತನಾಡುತ್ತಿದ್ದೀಯ. ಎಲ್ಲರ ಕುರಿತೂ ತಿಳಿದಿರುವುದಕ್ಕೆ ನೀನೇನು ಸರ್ವಜ್ಞನಾ?

**ಶ್ರೀಪಾದರು:** ನನ್ನ ವಯಸ್ಸು 3 ವರುಷವೆಂದು ನೀವೆಲ್ಲಾ ಅಂದುಕೊಳ್ಳುತ್ತಿದ್ದೀರ. ಆದರೇ ನಾನು ಹಾಗೆ ಅಂದುಕೊಳ್ಳುತ್ತಿಲ್ಲ. ನನ್ನ ವಯಸ್ಸು ಅನೇಕ ಲಕ್ಷ ವರುಷ. ನಾನೀ ಸೃಷ್ಟಿಗೆ ಮುಂಚೆ ಇದ್ದೆ. ಪ್ರಳಯಾನಂತರ ಸಹಾ ಇರುವೆ. ಸೃಷ್ಟಿಯ ಕಾರ್ಯಕಲಾಪ ನಡೆಯುವಾಗಲು ಇರುವೆ. ನಾನಿಲ್ಲದೇ ಸೃಷ್ಟಿ, ಸ್ಥಿತಿ, ಲಯಗಳು ನಡೆಯಲಾರವು. ನಾನು ಸಾಕ್ಷೀಭೂತನಾಗಿ ಇವೆಲ್ಲವನ್ನೂ ಗಮನಿಸುತ್ತಿರುವೆನು.

**ಬಾಪನಾರ್ಯರು:** ಶ್ರೀಪಾದ! ಚಿಕ್ಕ ಮಗು, ಅವನು ಚಂದ್ರಮಂಡಲದಲ್ಲಿದ್ದ ಹಾಗೆ ಯೋಚಿಸಿದ ಮಾತ್ರಕ್ಕೆ ಚಂದ್ರಮಂಡಲದಲ್ಲಿದ್ದ ಹಾಗೆ ಅಲ್ಲ. ಪ್ರತ್ಯಕ್ಷ ಅನುಭವ ಇರಬೇಕು. ಸರ್ವಜ್ಞತ್ವ, ಸರ್ವಶಕ್ತಿತ್ವ, ಸರ್ವವ್ಯಾಪಕತ್ವ ಮುಂತಾದವು ಕೇವಲ ಜಗತ್ಪ್ರಭುವಿನ ಲಕ್ಷಣಗಳು.

**ಶ್ರೀಪಾದರು:** ನಾನೇ ಸರ್ವೇಸರ್ವತ್ರ ಸ್ಥಿತಿಯಾದ ಆದಿತತ್ತ್ವ. ಆಯಾ ಅಗತ್ಯಗಳ ಪ್ರಕಾರ ನಾನು ಅಲ್ಲಲ್ಲಿ ಇದ್ದ ಹಾಗೆ ಕಾಣುತ್ತಿರುವುದು. ಕಾಣದಂತ ಮಾತ್ರ ನಾನಲ್ಲಿ ಇಲ್ಲಾ ಎಂದಲ್ಲ. ಜೀವರಾಶಿಯು ಅನ್ನಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಕೋಶಗಳಲ್ಲಿ ನಾನು ತಂಗಿದ್ದೇನೆ. ನನ್ನ ಇರುವಿಕೆಯಿಂದಲೇ ಅವೆಲ್ಲವೂ ಕಾರ್ಯಗಳನ್ನು ನಡೆಸುತ್ತಿವೆ. 'ನಾನು ಇಂತಹ ಸ್ಥಳದಲ್ಲಿದ್ದೇನೆ' ಎಂದು ವ್ಯಕ್ತಪಡಿಸಿದರೇ, ಅಲ್ಲಿ ನಾನಿದ್ದ ಹಾಗೆ ನೀನು ಭಾವಿಸುವೆ. ನಿನಗೆ ಜ್ಞಾತವಿಲ್ಲದ ಕಾರಣಕ್ಕೆ, ನಾನಲ್ಲಿ ಇಲ್ಲ ಎಂದಲ್ಲ. ನಾನು ಸದಾ ಎಲ್ಲಾ ಕಡೆಯಲ್ಲೂ ಇದ್ದೇನೆ. ಸಮಸ್ತವಾದ ಜ್ಞಾನ ವಿಜ್ಞಾನಗಳೂ, ನನ್ನ ಪಾದಗಳ ಬಳಿ ಇವೆ. ನನ್ನ ಸಂಕಲ್ಪ ಮಾತ್ರದಿಂದಲೇ ಈ ಸೃಷ್ಟಿ ನಡೆದಿದೆ. ನಾನು ಸರ್ವಶಕ್ತಿವಂತ ಆಗಿರುವುದರಲ್ಲಿ ಆಶ್ಚರ್ಯವೇನು?

**ಅಪ್ಪಲರಾಜ ಶರ್ಮ:** ಮಗು! ಮಗುವಿನಿಂದಲೂ ನೀನು ನಮಗೆಲ್ಲಾ ಸಮಸ್ಯೆಯಾಗಿದ್ದೀಯ. ನೀನು ಎಷ್ಟೋಬಾರಿ, ದತ್ತ ಪ್ರಭುವೆನ್ನುತ್ತಿದ್ದೀಯ. ನೃಸಿಂಹ ಸರಸ್ವತಿ ಎಂಬುವ ಹೆಸರಿನ ಅವತಾರದಲ್ಲಿ ಬರುವೆನೆಂದೂ ಬಾರಿ ಬಾರಿ ನುಡಿಯುತ್ತಿದ್ದೀಯ. ಜನರು ಮೂಳೆಯಿಲ್ಲದ ನಾಲಿಗೆಯವರು. ಇದೆಲ್ಲಾ ನಾಟಕ ಎಂದು, ಸುಳ್ಳೆಂದು ಸ್ಥಿಮಿತ ಇಲ್ಲದ ಮನಸ್ಸಿನಿಂದ ನಡೆಯುತ್ತಿರುವ ಬುದ್ಧಿ ಇಲ್ಲದ ಕೃತ್ಯಗಳೆಂದು ವಿಧವಿಧವಾಗಿ ಹೇಳುತ್ತಿದ್ದಾರೆ. ನಾವು ಬ್ರಾಹ್ಮಣರು. ನಮ್ಮ ಧರ್ಮ ಕರ್ಮಗಳನ್ನು ಪಾಲಿಸುವುದು ಒಳ್ಳೆಯದು. ಅದಕ್ಕೆ ಮೀರಿ, ದೈವಾಂಶ ಸಂಭೂತರೆಂದು, ಅವತಾರ ಪುರುಷರೆಂದು ಹೇಳಿಕೊಳ್ಳುವುದು ಕೇವಲ ಅಹಂಕಾರ ಎಂದು ನಿರ್ಧರಿಸಲ್ಪಡುವುದು.

**ಶ್ರೀಪಾದರು:** "ತಂದೆ! ತಾವು ಹೇಳುವುದು ನಾನು ಒಪ್ಪುತ್ತೇನೆ. ಸತ್ಯವನ್ನೇ ನುಡಿಯಬೇಕಲ್ಲವೆ? ನನ್ನ ಹಾಲಿನ ಬಾಕೀ ವಿಷಯ ಬಂದಾಗ, ನನಗೆ ನಗು ಬರುವುದು. ಪಂಚ ಭೂತಗಳಿಂದ ಸಾಕ್ಷ್ಯ ಕೊಡಿಸಿದಾಗ, ನಾನು ಶ್ರೀದತ್ತ ಪ್ರಭುಗಳು ಅಲ್ಲವೆಂದಿದ್ದರೇ ಸುಳ್ಳು ಹೇಳಿದ ದೋಷ ಬರದೇ? ಅಕಾಶದಲ್ಲಿ ಪ್ರಕಾಶಿಸುವ ಸೂರ್ಯನನ್ನು ನೋಡಿ, 'ನೀನು ಸೂರ್ಯನಲ್ಲ' ಎಂದ ಮಾತ್ರಕ್ಕೇ, ಸೂರ್ಯ ಆಗಲಾರನಾ? ಸತ್ಯ ದೇಶಕಾಲಕ್ಕೆ ಅತೀತವಾದದ್ದು, ನಮ್ಮ ಪೀಠಿಕಾಪುರ ಬ್ರಾಹ್ಮಣ್ಯವು, ತಾವು ಶರೀರಧಾರಿಗಳು ಎಂದು ಮನುಷ್ಯರೆಂದು ಭಾವಿಸಿ ಮಾನವ ತತ್ತ್ವವನ್ನು ಅದ್ಯಾವ ರೀತಿ ಅನುಭವಿಸುತ್ತಿದ್ದಾರೋ ಹಾಗೆಯೇ **ನಾನೂ ಸರ್ವಜ್ಞತ್ವ, ಸರ್ವಶಕ್ತಿತ್ವ, ಸರ್ವಾಂತರ್ಯಾಮಿತ್ತ್ವ ಹೊಂದಿದ ದತ್ತನೇ ಎಂಬುವ ತತ್ತ್ವವನ್ನು ನಿಮಗೆ ಬಾರಿ ಬಾರಿ ಜ್ಞಾಪಕ ಮಾಡುತ್ತಿದ್ದೇನೆ.** ಯುಗಗಳೇ ಕಳೆಯುತ್ತಿರಬಹುದು. ಜಗತ್ತುಗಳು ಸೃಷ್ಟಿ ಸ್ಥಿತಿ ಲಯಗಳು ಹೊಂದುತ್ತಿರಬಹುದು, ಆದರೆ ಸಾಕ್ಷಾತ್ ಶ್ರೀದತ್ತನಾದ ನಾನು, ಶ್ರೀದತ್ತನಾಗದಿರಲು ಹೇಗೆ ಸಾಧ್ಯ?''

**ಬಾಪನಾರ್ಯರು:** ಶ್ರೀಪಾದಾ! ಜಟಾಧಾರಿ ಹೋದ ನಂತರ, ಸುಬ್ಬಯ್ಯ ಶ್ರೇಷ್ಠಿ ಬಳಿ ಇರಬೇಕಾದ್ದ ತಾಮ್ರ ಪಾತ್ರೆಗಳು 31. ಆದರೇ ಒಂದೇ ಅಲ್ಲಿ ಉಳಿದಿರಲೂ ನೀನೇನಾದರೂ ಚಮತ್ಕಾರ ಮಾಡಿದೆಯಾ?

**ಶ್ರೀಪಾದರು: ಕಾಲಕರ್ಮವಶದಿಂದ ಎಲ್ಲವೂ ಯಾವುದೋ ಒಂದು ಕಾರಣದಿಂದಲೇ ನಡೆಯುತ್ತಿರುವವು. ಕಾರಣವಿಲ್ಲದೆ ಕಾರ್ಯ ನಡೆಯುವುದೇ ಇಲ್ಲ. ಇದು ಪ್ರಕೃತಿಯಲ್ಲಿನ ಅನುಲ್ಲಂಘನೀಯ ಶಾಸನ.** ಈ ಸುಬ್ಬಯ್ಯ ಶ್ರೇಷ್ಠಿ ಹಿಂದಿನ ಜನುಮದಲ್ಲಿ ಅರಣ್ಯ ಪ್ರಾಂತದ ದತ್ತ ಪೂಜಾರಿ ಆಗಿದ್ದರು. ಅರಣ್ಯ ಪ್ರಾಂತದ ದತ್ತ ದರ್ಶನ ಕೆಲವೊಮ್ಮೆ ಮಾತ್ರ ಮಾಡುತ್ತಿದ್ದರು. ಇವನು ಸ್ತ್ರೀಯರ ಮೇಲಿನ ಹುಚ್ಚು ಹೆಚ್ಚಾಗಿ ಪುರಾತನಕಾಲದಿಂದ ಪೂರ್ವಿಕರಿಂದ ಆರಾಧಿಸಲ್ಪಡುತ್ತಿದ್ದ ಆ ದೊಡ್ಡ ತಾಮ್ರದ ದತ್ತ ವಿಗ್ರಹವನ್ನು ಮಾರಲು ಯೋಚಿಸಿದನು. ಬಂದ ಹಣ ಅವನ ಪ್ರಿಯತಮೆಗೆ ಕೊಟ್ಟನು. ಜನಕ್ಕೆ ವಿಗ್ರಹವನ್ನು ಕಳ್ಳರು ಅಪಹರಿಸಿದರೆಂದನು. ಜಟಾಧಾರಿ ಆಗಿ ಬಂದವನು, ಲೌಕಿಕ ವಿಷಯಗಳಲ್ಲಿ ಸಿಕ್ಕಿದ ಒಬ್ಬ ಅಕ್ಕಸಾಲಿಗನು. ಆತ ಹಿಂದಿನ ಜನುಮದಲ್ಲಿ ಅಕ್ಕಸಾಲಿಗನಾಗಿರಲೂ, ಧನದಾಶೆಯಿಂದ ಆ ದತ್ತ ವಿಗ್ರಹವನ್ನು ಕರಗಿಸಿದನು. ಫಲಿತವಾಗಿ ಈ ಜನುಮದಲ್ಲಿ ಆತ ಹುಟ್ಟು ದರಿದ್ರನಾಗಿ ಹುಟ್ಟಿದನು. ದತ್ತ ವಿಗ್ರಹಕ್ಕೆ ಅನೇಕ ವರುಷ ಪೂಜೆ ಮಾಡಿದ ಪುಣ್ಯಕ್ಕೆ ಸುಬ್ಬಯ್ಯ ಶ್ರೇಷ್ಠಿ ಶ್ರೀಮಂತರ ಮನೆಯವನಾದ. ಹಿಂದೆ, ಇವರಿಬ್ಬರೂ ಸೇರಿ ಕರಗಿಸಿದ ಆ ದತ್ತ ವಿಗ್ರಹದಿಂದ 32 ತಾಮ್ರದ ಪಾತ್ರೆ ಮಾಡಿ ಮಾರಲಾಯಿತು. ಅಕ್ಕಸಾಲಿಗರ ಮನೆ ದೇವರು ಶ್ರೀ ನಾರಸಿಂಹರು. ಈ ದೇವರ ಮುಂದೆಯೇ ಈ 32 ಪಾತ್ರೆ ಮಾಡಲಾಯಿತು. ಆದ್ದರಿಂದ ದೈವ ಸಂಕಲ್ಪದಿಂದ ನೃಸಿಂಹನ 32 ಅವತಾರಗಳ ಅಂಶಗಳೂ ಆ ತಾಮ್ರ ಪಾತ್ರೆಗಳಲ್ಲಿ ಸೇರಿದವು.

ಈ ಜನುಮದಲ್ಲಿ ಹಿಂದಿನ ಜನುಮ ಜ್ಞಾನ ಹೊಂದಿದ ಆ ಅಕ್ಕಸಾಲಿಗ ನನ್ನನ್ನು ಹೆಚ್ಚು ಭಕ್ತಿಯಿಂದ ಪೂಜಿಸಿದನು. ಅವನ ದಾರಿದ್ರ್ಯವನ್ನು ನಾಶ ಮಾಡಬೇಕೆಂದು ಮನಸ್ಪೂರ್ತಿ ಪ್ರಾರ್ಥಿಸಿದನು. ಅದಕ್ಕೆ ನಾನು ಅವನ ಕನಸ್ಸಿನಲ್ಲಿ ದರ್ಶನವಿತ್ತು ಪೀಠಿಕಾಪುರಕ್ಕೆ ಬರಬೇಕೆಂದು, ನನ್ನ ಕೈಗಳಿಂದ ತಾಮ್ರಪಾತ್ರೆಯನ್ನು ಸ್ವೀಕರಿಸಿ ಅದಕ್ಕೆ ಬದಲಾಗಿ 10 ವರಹಗಳು ಹಣವನ್ನು ಶ್ರೇಷ್ಠಿಗೆ ಕೊಟ್ಟು ನನ್ನನ್ನು ಬಂಧವಿಮುಕ್ತನಾಗಿ ಮಾಡಲು ಹೇಳಿದೆನು. ಆತ ಹಾಗೆಯೇ ಮಾಡಿ ಧನ್ಯನಾದನು. ಆತನ ಆರ್ಥಿಕ ಸಮಸ್ಯೆಗಳು ಊಹಿಸಲಾಗದ ರೀತಿ ತೀರುವಂತೆ ಆಶೀರ್ವದಿಸಿದೆನು. ಆತ ಸಾಲಗಾರರಿಂದ ಪಾರಾಗಲೂ ಜಟಾಧಾರಿ ವೇಷದಲ್ಲಿ ತಿರುಗುತ್ತಿದ್ದನು. ಹಾಗೆ, ಜಟಾಧಾರಿ ಬಗ್ಗೆ ನನಗೆಲ್ಲಾ ಗೊತ್ತಲ್ಲವೇ!

ಈ ಸುಬ್ಬಯ್ಯ ಶ್ರೇಷ್ಠಿ ನಮ್ಮ ಕುಟುಂಬದಿಂದ ಅಕ್ರಮವಾಗಿ 10 ವರಹಾಗಳು ವಸೂಲಿ ಮಾಡಲೆನಿಸಿದನು. ಈತನಿಗೆ 10 ವರಹಗಳು ಲಭಿಸುವಂತೆ ಮಾಡಿದೆನು. ಆದರೇ ಇದಕ್ಕೆ ಬದಲಾಗಿ ಇವನ ಹಿಂದಿನ ಜನ್ಮ ಪುಣ್ಯಫಲವೆಲ್ಲವೂ ಕರಗಿಸಿಬಿಟ್ಟೆನು. ಎಲಾ, ಸುಬ್ಬಯ್ಯ ಶ್ರೇಷ್ಠಿ! ಚಿಂತಾಮಣಿ ಜೊತೆ ನೀನು ಮಾಡಿದ ಶೃಂಗಾರ ಹುಚ್ಚಾಟ ನನಗೆಲ್ಲಾ ಗೊತ್ತು. ನಿನ್ನ ಕಥೆ ಇತಿಹಾಸದಲ್ಲಿ ಹಾಸ್ಯಾಸ್ಪದವಾಗಿ ಉಳಿಯುವುದು. ನೀನು ಬುತ್ತಿ ಹಿಡಿದು ನನ್ನಂತಹ ಎಳೇ ಮಕ್ಕಳಿಗೆ ಬೇಕಾದ ತಿಂಡಿ ಪದಾರ್ಥ ಮಾರಿಕೊಂಡು ಬದುಕುವೆ. ನಿನ್ನಿಂದ ಪಡೆದ ಹಣದಿಂದ ನನ್ನ ತಂದೆ ತಾಯಿಯರು ಅವರ ಬಂಧುಗಳಿಗೆ ಊಟ ಏರ್ಪಾಡು ಮಾಡಿದರು. ನಿನ್ನನ್ನು ಮೀರಿಸುವ ಸುಳ್ಳು ಲೆಕ್ಕಗಳು ನನಗೆ ವಿದಿತ. ನೀನು ಕೊಟ್ಟ ಹಣ ಬರೀ ಅನ್ನ, ತಪ್ಪೆ, ಹೀರೆಕಾಯಿ ಬೇಯಿಸಲು ಮಾತ್ರ ಸರಿಹೋಯಿತು. ಮಿಕ್ಕಿದಕ್ಕೆ ನನ್ನ ತಂದೆಯ ಕಾಯಕಷ್ಟ ಸರಿಹೋಯಿತು. ನೀನು ಅನ್ನ ಸಹಾ ಲಭಿಸದ ದೀನಸ್ಥಿತಿಗೆ ತಲುಪಿದಾಗ ನಿನ್ನ ಬಳಿ ಇರುವ ಆ ತಾಮ್ರದ ಪಾತ್ರೆಯಿಂದ ಜಲ, ಅನ್ನ, ತಪ್ಪೆ, ಹೀರೇಕಾಯಿ ಮಾತ್ರ ಲಭಿಸುವುದು. ನೀನು ತಿಂದು ಇನ್ನೊಬ್ಬರಿಗೆ ಇಡಲು ಬೇಕಾದ ಪದಾರ್ಥಗಳು ಮಾತ್ರ ಲಭಿಸುವವು'' ಎಂದು ಖಡಾಖಂಡಿತವಾಗಿ ಹೇಳಿದನು.

ಶ್ರೀಪಾದರ ಮುಖಮಂಡಲ ದಿವ್ಯ ವರ್ಚಸ್ಸಿನಿಂದ ತೀಕ್ಷ್ಣವಾಗಿತ್ತು. ಅವರ ಕಣ್ಣುಗಳು ಅಗ್ನಿಕುಂಡಗಳಾಗಿತ್ತು. ಪುನಃ, ಅವರು, ''ಎಲೈ ಸುಬ್ಬಯ್ಯ ಶ್ರೇಷ್ಠಿ! ಇಂದಿನ ರಾತ್ರಿ ನಿನ್ನ ಮನೆಯ ದಕ್ಷಿಣ ದಿಕ್ಕಿನ ಬಾಗಿಲ ಬಳಿ ಎಮ್ಮೆ ಒಂದು ಬರುವುದು. ನಿನಗೆ ಸಾವು ಬಹಳ ಹತ್ತಿರದಲ್ಲಿದೆ ಎಂದು ತಿಳಿಸಲು ಯಮಧರ್ಮರಾಯ ಕಳುಹಿಸುವ ಸುದ್ದಿ ಅದು. ಆದರೇ ನಾನು ನಿನ್ನನ್ನು ಅನುಗ್ರಹಿಸುತ್ತಿದ್ದೇನೆ. ನೀನು ನಿನ್ನ ಕೈಗಳಿಂದ ಅನ್ನ, ತಪ್ಪೆ, ಹೀರೇಕಾಯಿ ಬೇಯಿಸಿ ಆ ಎಮ್ಮೆಗೆ ಅರ್ಪಿಸು. ಆ ಎಮ್ಮೆಯ ಒಂದೇ ಒಂದು ಬಯಕೆ ಅದು. ಅದನ್ನು ತಿಂದ ನಂತರ ನಿನ್ನ ಬದಲಿಗೆ ಆ ಎಮ್ಮೆ ಸಾಯುವುದು. ಆ ಕ್ಷಣದಿಂದ ನೀನು ಬಹಳಷ್ಟು ಬಡವನಾಗುತ್ತಿರುವ ಸುದ್ದಿ ಪದೇ ಪದೇ ಬರುತ್ತಿರುವುದು. ನೀನು ಬುತ್ತಿ ಹಿಡಿದು, ನಾನು ಹೇಳಿದಂತೆ ಮಾಡು. ನಂತರ ನಿನಗೆ ಅನ್ನ ಸಹಾ ಸಿಗದಂತಹ ಪರಿಸ್ಥಿತಿ ಬಂದಾಗ ನಾನು ಅನುಗ್ರಹಿಸಿದ ಹಾಗೆ ಆ ತಾಮ್ರಪಾತ್ರೆ ಅನುಗ್ರಹಿಸುವುದು'' ಎಂದು ಕಠಿಣವಾಗಿ ಹೇಳಿದರು.

ವೆಂಕಟಪ್ಪಯ್ಯ ಶ್ರೇಷ್ಠಿಗಳು ಹಾಗೆ ಕೋಪಗೊಂಡ ಶ್ರೀಪಾದರನ್ನು ಕಂಡು ಭಯ ಹೊಂದಿದರು. ಆಗ ಶ್ರೀಪಾದರು ಹೀಗೆಂದರು. ''ತಾತಾ! ಭಯಪಟ್ಟೆಯಾ? ನಾನು ನರಸಿಂಹ ಮೂರ್ತಿಯೇ! ಸಂದೇಹವಿಲ್ಲ. ನಾನು ಶ್ರೀಪಾದ ಶ್ರೀವಲ್ಲಭನ ತತ್ತ್ವವಲ್ಲವೆ? ವೈಶ್ಯ ಕುಲಕ್ಕೆ ಶಾಪ ಕೊಡುವೆನೆಂದುಕೊಳ್ಳುತ್ತಿದ್ದೀಯಾ? ವಾಸವೀಮಾತೆ, ತನ ಕುಲಸ್ಥರಿಗೆ ಸೌಂದರ್ಯ ಕಡಿಮೆ ಇರಲೂ ಶಾಪಕೊಟ್ಟ ಹಾಗೆಯೇ, ವೈಶ್ಯರು ಧನವಿಲ್ಲದವರಾಗಲೆಂದು ನಾನು ಶಾಪ ಕೊಡುವೆನೆಂದು ಭಯಪಡುತ್ತಿದ್ದೀಯ? ಭಯಬೇಡ, **ದೈವಕ್ಕೆ ಜಾತಿ ಕುಲಬೇಧ ಇರುವುದಿಲ್ಲ.** ಹಾಗೆಯೇ ಭಕ್ತನಿಗೂ ಸಹ ಜಾತಿ ಕುಲಬೇಧ ಇರುವುದಿಲ್ಲ. ಆರ್ಯವೈಶ್ಯರೊಂದಿಗೆ ನನ್ನ

ಅನುಬಂಧ ಬಹಳ ಪುರಾತನದ್ದು. ಬಾಪನಾರ್ಯರು ಕಳೆದ ಯುಗದ 'ಲಾಭದ' ಮಹರ್ಷಿ ಅಲ್ಲವೆ? ನಿನಗೆ ವರ ನೀಡುತ್ತಿರುವೆ. ವೈಶ್ಯರಲ್ಲಿ 'ಲಾಭದ' ಮಹರ್ಷಿ ಗೋತ್ರ ಸಂಪ್ರಾಪ್ತಿ ಆಗಿ ಹೋದರು, ಬಾಪನಾರ್ಯರ ವಂಶವನ್ನು ಕಲಿಯುಗಾಂತ್ಯದವರೆಗೂ ಮುಂದುವರಿಸುತ್ತೇನೆ. ನಿನಗೆ ನಾನು ಕೊಡುವ ಬುತ್ತಿ ಬೇರೆ ಇದೆ. ಅದರಲ್ಲಿ ಶ್ರೀದತ್ತರ ಸಿಹಿ ಬಹಳ ಇರುವುದು. ಎಷ್ಟು ಕೊಟ್ಟರೂ ಮುಗಿಯದು. ಯಾರ ಕಣ್ಣಿಗೂ ಬೀಳದಂತಹದು. **ನೃಸಿಂಹರ 32 ಅವತಾರಗಳ ಲಕ್ಷಣಗಳು ನನ್ನಲ್ಲೇ ಇರುವುದರಿಂದ ನನ್ನದು 32ನೇ ಅವತಾರ. ಆದ್ದರಿಂದ ನಿನ್ನ ವಂಶದಲ್ಲಿ 33ನೇ ತಲೆಮಾರು ನಡೆಯುತ್ತಿರಲೂ, ಬಾಪನಾರ್ಯರ 33ನೆಯ ತಲೆಮಾರು ನಡೆತಯುತ್ತಿರಲೂ ಮತ್ತು ವತ್ಸವಾಯಿ ನರಸಿಂಹ ವರ್ಮರ 33ನೆಯ ತಲೆಮಾರು ನಡೆಯುತ್ತಿರಲೂ ನಾನು ಹುಟ್ಟಿದ ಬಾಪನಾರ್ಯರ ಮನೆಯಲ್ಲಿ ನನ್ನ ಜನುಮ ಸ್ಥಳದಲ್ಲಿ ಮುದ್ದಾಗಿ ನನ್ನ ಶ್ರೀ ಪಾದುಕೆಗಳು ಪ್ರತಿಷ್ಠಿಸಲಾಗುವವು. ವತ್ಸವಾಯಿಗಳಿಗೂ, ಮಲ್ಲಾದಿಗಳಿಗೂ ಮತ್ತು ವೆಂಕಟಪ್ಪಯ್ಯ ಶ್ರೇಷ್ಠಿಗೂ ಇದೇ ನನ್ನ ಅಭಯ! ನಿಮ್ಮ ವಂಶಸ್ಥರಲ್ಲಿ ಯಾರಾದರೂ ಸರಿ ಶ್ರೀಪಾದ ಶ್ರೀವಲ್ಲಭರ ದಿವ್ಯ, ಭವ್ಯ ರೂಪವನ್ನು ನವವಿಧ ಭಕ್ತಿಗಳಲ್ಲಿ ಯಾವ ರೀತಿಯಲ್ಲಿ ಆದರೂ ಸರಿ ಆ ನನ್ನನ್ನು ಆರಾಧಿಸಿದರೆ ಶ್ರೀ ದತ್ತ ಶುನಕಗಳು, ಕಾಣದೇ ಕಾವಲು ಕಾಯುತ್ತಿರುವವು. ವೇದಗಳು, ಪುರಾಣಗಳು, ಉಪನಿಷತ್ತುಗಳು ಮುಂತಾದವು ಕಾಣದೇ ಆ ಅದೃಶ್ಯ ಶುನಕಗಳ ರೂಪದಲ್ಲಿ ಯಾವಾಗಲೂ ರಕ್ಷಣೆಯಾಗಿರುವವು.**

ಆಗ ವೆಂಕಟಪ್ಪಯ್ಯ ಶ್ರೇಷ್ಠಿ ಶ್ರೀಪಾದರನ್ನು ಅವರ ಎದೆಗೆ ಅಪ್ಪಿಕೊಂಡರು. ಅವರ ಕಣ್ಣುಗಳಿಂದ ಆನಂದಭಾಷ್ಪಗಳು ಬೀಳುತ್ತಿದ್ದವು. ಬಾಪನಾರ್ಯರ ಬಾಯಿಂದ ಮಾತೇ ಬರಲಿಲ್ಲ. ಸುಮತೀಮಾತೆ 'ಇದೇನು ಕನಸಾ? ಇಲ್ಲ ವೈಷ್ಣವ ಮಾಯೆಯಾ?' ಎಂದು ಯೋಚಿಸಿದಳು. ಅಪ್ಪಲರಾಜು ಶರ್ಮ ಮನಸ್ಸು ಮೂಕವಾಯಿತು. ಶ್ರೀಪಾದರ ಅಣ್ಣಂದಿರಿಬ್ಬರೂ ಶ್ರೀಪಾದರನ್ನು ಭಯದಿಂದ ನೋಡುತ್ತಿದ್ದರು. ಈತ ನಮ್ಮ ತಮ್ಮನೇನಾ? ಇಲ್ಲ ದತ್ತ ಪ್ರಭುಗಳಾ? ಏನು ಈ ವಿಚಿತ್ರವೆಂದು ಆಲೋಚಿಸುತ್ತಿದ್ದರು. ನನ್ನ ಅಜ್ಞಾನಕ್ಕೂ, ಹೇಳನೆ ಬುದ್ಧಿಗೂ ಮಿತಿ ಇರಲಿಲ್ಲ. ಆದ್ದರಿಂದ ಹೀಗೆಂದನು. "ಶ್ರೀಪಾದ ಆಯಾ ಸ್ಪಂದನಾಶಕ್ತಿಗಳು ಮಾನವ ರೂಪ ತಾಳಿದಾಗ ಪತ್ನಿಗಳಾಗಿವೆ ಅಲ್ಲವೆ? ಇದು ಸ್ತ್ರೀ ಲೋಲತ್ವವಲ್ಲದೇ ಮತ್ತೇನು? ಅವತಾರ ಪುರುಷರ ವಿಷಯ ಬಂದರೇ ಇದು ಲೀಲೆ! ನಮ್ಮಂತಹಾ ಸಾಮಾನ್ಯರಾದರೇ ಸ್ತ್ರೀ ಲೋಲತ್ವ! ಏನು ಪಕ್ಷಪಾತ?

ಶ್ರೀಪಾದರು ಹೀಗೆಂದರು, "ಶ್ರೀ ಕೃಷ್ಣನಿಗೆ ಅಷ್ಟಪತ್ನಿಯರು, 16000 ಗೋಪಿಕೆಯರಿದ್ದರೂ ಆತ ನಿತ್ಯಬ್ರಹ್ಮಚಾರಿಯೇ ಅಷ್ಟೇ ಹೊರತು, ನೀನು ತಿಳಿದ ಹಾಗೆ ಸ್ತ್ರೀಲೋಲನಲ್ಲ. ಅದು ದೇಹ ಸಂಬಂಧ ಅಲ್ಲವೇ ಅಲ್ಲ. ಕೇವಲ ಆತ್ಮ ಸಂಬಂಧ ರೀತ್ಯಾ ಪತ್ನಿಯರು. ಭರಿಸಲ್ಪಡುವಂತಹಾ ಆತ್ಮ ಸತಿ ಭರಿಸುವ ಆತ್ಮ ಪತಿ. ಅದಕ್ಕೂ ಮೀರಿ ಇನ್ನೇನಿದೆ? ದೇವೇಂದ್ರರು ಮಾನವತ್ವ ಹೊಂದುವಂತೆ ಶಪಿಸಲ್ಪಟ್ಟಾಗ ಶಚೀದೇವಿ ದ್ರೌಪದಿಯಾಗಿ ಅವತರಿಸಿದಳು. ದೇವೇಂದ್ರನೇ 5 ರೂಪ ತಾಳಿ ಪಾಂಡವರಾಗಿ ಜನಿಸಿದರು. ದ್ರೌಪದಿ ಪಂಚ ಪಾಂಡವರಿಗೆ ಪತ್ನಿಯಾದರೂ, ಶಯನ ಸುಖ ಹೊಂದಿದ್ದು ಕೇವಲ ಅರ್ಜುನನಿಂದಲೇ. ಧರ್ಮ ಬೇರೇ, ಧರ್ಮಸೂಕ್ಷ್ಮ ಬೇರೆ. ಕುಂತಿಮಾತೆ ಹೇಳಿದ ಮಾತನ್ನು ತಪ್ಪುವುದೇ ಇಲ್ಲ. ದ್ರೌಪದಿ ಕೇವಲ ಅರ್ಜುನನನ್ನು ಇಷ್ಟಪಟ್ಟಳು. ಮತ್ಸ್ಯ ಯಂತ್ರವನ್ನು ಛೇದಿಸಿದ್ದೂ ಸಹ ಅರ್ಜುನನೇ. ಧರ್ಮಪತ್ನಿಗೆ 6 ಲಕ್ಷಣಗಳಿರುವವು. ರೂಪದಲ್ಲಿ ಲಕ್ಷ್ಮಿಯನ್ನು, ಪ್ರಸನ್ನತೆಯಲ್ಲಿ ದ್ರೌಪದಿಯನ್ನು, ಕ್ಷಮೆಯಲ್ಲಿ ಭೂದೇವಿಯನ್ನು ಹೋಲಿರಬೇಕು. ಸಹದೇವನಿಗೆ ಮುಂದೆ ನಡೆಯುವ ವಿಷಯಗಳು ತಿಳಿಯುವವು. ಕೌರವ ಪಾಂಡವ ಯುದ್ಧ ನಡೆಯುವುದೆಂದು ತಿಳಿದಿತ್ತು. ಅದು ನಡೆಯುವುದಕ್ಕೆ ಮುನ್ನ ಅದೆಷ್ಟೋ ಘಟನೆಗಳು ನಡೆಯಬೇಕಿದೆ.

ಇವುಗಳಲ್ಲಿ ಕೆಲವು ದುಃಖದಾಯಕವು, ಇವೆಲ್ಲವನ್ನು ನೆನೆದಾಗ ಸಹದೇವನಿಗೆ ಬೇಸರ ಜಾಸ್ತಿಯಿರುತ್ತಿತ್ತು. ಆದ್ದರಿಂದ ಸಹದೇವನ ಸಂಗಡ ವ್ಯವಹರಿಸಬೇಕಿದ್ದಲ್ಲಿ ದ್ರೌಪದಿ ಅದೆಷ್ಟೋ ಸಹನೆಯಿಂದ ವರ್ತಿಸುತ್ತಿದ್ದಳು. ಭೀಮನು ತಿನ್ನುವುದಧಿಕ ಊಟ, ಅಧಿಕ ಸೇವಿಸುವುದರಿಂದ ಮಂದಮತಿ, ಆದ್ದರಿಂದ ಅವನು ತನ್ನ ಕೆಲಸಗಳು ಮಾಡಿಕೊಳ್ಳಲೂ ಸಹಾ ಹಿಂಜಾಡುತ್ತಿದ್ದನು. ಆದ್ದರಿಂದ ದ್ರೌಪದಿ, ಭೀಮನ ಜೊತೆ ವ್ಯವಹರಿಸುವಾಗ ದಾಸಿಯಂತೆ ವರ್ತಿಸುತ್ತಿದ್ದಳು. ಧರ್ಮರಾಯ ಪಾಂಡವರಲ್ಲಿ ಜ್ಯೇಷ್ಠ, ರಾಜನೀತಿಗೆ ಸಂಬಂಧಿಸಿದ ವಿಷಯಗಳದೆಷ್ಟೋ ಅವನನ್ನು ಕಾಡುತ್ತಿದ್ದವು. ಆದ್ದರಿಂದ ದ್ರೌಪದಿ ಅವನಿಗೆ ಮಂತ್ರಿಯಂತೆ ಒಳ್ಳೆಯ ಸಲಹೆ ಕೊಡುತ್ತಿದ್ದಳು. ನಕುಲ ಕತ್ತಿ ಯುದ್ಧದಲ್ಲಿ ಬಹಳ ಬುದ್ಧಿವಂತ. ಎರಡು ಮಳೆ ಹನಿಗಳ ಮಧ್ಯೆ ಕತ್ತಿ ನೆನಿಯದೇ ಬಹುವೇಗವಾಗಿ ಕತ್ತಿ ಆಡಿಸಬಲ್ಲ ನಿಪುಣ. ಅಂತಹ ಕಷ್ಟಕರವಾದ ವಿದ್ಯೆ ಕಲಿಯುವುದರಿಂದ ಬಹಳ ಹಸಿವು ಆಗುತ್ತಿತ್ತು. ಊಟ ರುಚಿಯಿದ್ದರೇ ಬಹಳ ಸಂತೋಷ ಪಡುತ್ತಿದ್ದ. ಅವನ ಯುದ್ಧಾಭ್ಯಾಸಕ್ಕೆ ಅನುಗುಣವಾಗಿ ದ್ರೌಪದಿ ಆಹಾರ ತಯಾರಿಸುತ್ತಿದ್ದಳು. ಶಯನ ಸುಖವನ್ನು ರಂಭೆಯನ್ನು ಸಹ ಮೀರಿಸಿ ಅರ್ಜುನನಿಗೆ ನೀಡುತ್ತಿದ್ದಳು. ಧರ್ಮಭಂಗ ಆಗದೆ ಐವರಿಗೆ ಹೆಂಡತಿಯಾದರೂ ಶಯನ ಸುಖವನ್ನು ಒಬ್ಬ ಅರ್ಜುನನಿಗೆ ಮಾತ್ರ ಕೊಟ್ಟಳು.

ಸುಬ್ಬಯ್ಯ ಶ್ರೇಷ್ಠಿ! ನೀನು ಇಟ್ಟುಕೊಂಡಿದ್ದ ಚಿಂತಾಮಣಿ ನಿನಗೆ ಮಾತ್ರವೇ ಶಯನ ಸುಖ ಕೊಡುತ್ತಿರಲಿಲ್ಲ. ಬಿಲ್ವಮಂಗಳ ಮತ್ತದೆಷ್ಟು ಜನರೋ ಅವಳ ಶರೀರವನ್ನನುಭವಿಸಿದರು. ನೀನು ಗುಂಟೂರು ಮಂಡಲದ ಮಂಗಳಗಿರಿಯಲ್ಲಿ ಪಾನಕಾಲ ಸ್ವಾಮಿಯನ್ನು ದರ್ಶಿಸುವಾಗ ಕಾಲ, ಕರ್ಮ, ಕಾರಣ ವಶದಿಂದ ಚಿಂತಾಮಣಿ ಬಿಲ್ವಮಂಗಳರನ್ನು ಭೇಟಿಯಾಗುವೆ. ಅವರನ್ನು ಪೀಠಿಕಾಪುರಕ್ಕೆ ಕರೆತರುವೆ. ಆಗ ನಾನು ನಿಮಗೆ ಬೋಧನೆ ಮಾಡುವೆನು.

ಆಗ ನರಸಿಂಹ ವರ್ಮರವರು, ಶ್ರೀಪಾದನನ್ನು ತಮ್ಮ ಬಳಿ ಕರೆದುಕೊಂಡರು. ಶ್ರೀಪಾದರು ವರ್ಮರಿಗೆ ಹೀಗೆಂದರು, "ತಾತ! ನಾಳೆ ನಾವಿಬ್ಬರು ಕುದರೇ ಗಾಡಿಯಲ್ಲಿ ನಮ್ಮ ಭೂಮಿಗಳನ್ನು ನೋಡಲು ಹೋಗೋಣ, ಎಷ್ಟು ದಿವಸಗಳಿಂದಲೋ ಅಲ್ಲಿನ ಭೂಮಾತೆ, 'ಶ್ರೀಪಾದ ಪ್ರಭು! ನಿನ್ನ ಪಾದ ಸ್ಪರ್ಶದಿಂದ ನನ್ನನ್ನು ಪುನೀತಳಾಗಿ ಮಾಡುವುದಿಲ್ಲವೇ?' ಎಂದು ದೀನಳಾಗಿ ಪ್ರಾರ್ಥಿಸುತ್ತಿರುವಳು, 'ನಾನು ಆರ್ತತ್ರಾಯಣ ಪರಾಯಣನಲ್ಲವೇ' ಎಂದರು. ಆಗ ವರ್ಮ ಅವರು, "ಮಗು ಶ್ರೀಪಾದ! ನನ್ನದೊಂದು ಚಿಕ್ಕ ಬೇಡಿಕೆ. ನಮ್ಮ ಭೂಮಿಗಳು ಪೀಠಿಕಾಪುರದ ಹತ್ತಿರವೇ ಅಲ್ಲ. ಆದ್ದರಿಂದ ಅಲ್ಲಿ ಒಂದು ಹಳ್ಳಿಯನ್ನು ನಿರ್ಮಿಸಿ, ನಮ್ಮ ಜಮೀನುಗಳನ್ನು ಬಿತ್ತಲು ಯೋಚಿಸುತ್ತಿದ್ದೇನೆ. ಆ ಹಳ್ಳಿ ಜನಕ್ಕೆ ಕಡಿಮೆ ಕೌಲುಗೆ ಕೊಟ್ಟು, ಜಮೀಂದಾರಿ ಕಾರ್ಯಗಳನ್ನು ನೋಡಿಕೊಳ್ಳಲು ತಂದೆಯವರನ್ನು ಶಾನುಭೋಗಕ್ಕೆ ಇಟ್ಟರೆ ಚೆಂದ ಎಂದು ನನ್ನ ಅಭಿಪ್ರಾಯ. ಅಯಿನವಿಲ್ಲಿ ಶಾನುಭೋಗ ಈಗ ನಮ್ಮಗಿಲ್ಲ ಅಲ್ಲವೇ" ಎಂದರು. ಶ್ರೀಪಾದರು ನಗುತ್ತಾ "ತಾತ! ನೀನು, ನಿನ್ನ ಜಮೀಂದಾರಿ ವಿಷಯವೇ ಆಲೋಚಿಸಿದೆ. ನನ್ನ ಜಮೀಂದಾರಿ ವಿಷಯ ಯೋಚಿಸಿಲ್ಲ. ಇದು ನನಗೆ ಅಸಮ್ಮತ, ಮೊದಲು ತಂದೆಯವರನ್ನ ಶಾನುಭೋಗರನ್ನಾಗಿ ಮಾಡು ಎನ್ನುವೆ. ನಂತರ, ಶ್ರೀಪಾದ ನೀನು ಈ ಶಾನುಭೋಗಿಕೆ ವಹಿಸು ಎನ್ನುವೆ." ಘಂಡಿಕೋಟೆ ಶ್ರೀಪಾದ ಶ್ರೀವಲ್ಲಭರು ಇಂತಹ ಊರಿಗೆ ಕರಣಾಧಿಕಾರ ಎಂದು ಮಾತ್ರ ಇತಿಹಾಸದಲ್ಲಿ ಉಳಿಯುವುದು. ನನ್ನ ಶಾನುಭೋಗಿಕೆ ವಿಶ್ವವ್ಯಾಪಿಯಾಗಿರುವುದು. ನನ್ನ ಲೆಕ್ಕ ನನಗಿದೆ. ಪ್ರತಿ ದಿನ, ಕೋಟಿಗಟ್ಟಲೇ ಪುಣ್ಯರಾಶಿಗಳು, ಮಣಿಗಳು, ಹವಳಗಳು ಖರ್ಚು ಆಗುತ್ತಿವೆ. ನನ್ನ ಅವತಾರದ ಫಲ ವಿಶ್ವದ ಕುಂಡಲಿನಿಯನ್ನು ಚಲಿಸಿ ಒಳ್ಳೆಯದನ್ನು ಮಾಡುವುದು. ಮನುಷ್ಯರಂತೇ ಗ್ರಾಮಗಳಿಗೆ, ಪಟ್ಟಣಗಳಿಗೆ ಪುಣ್ಯಕ್ಷೇತ್ರಗಳಿಗೆ ಸಹಾ ಕುಂಡಲಿನಿ

ಇದೆ. ಇದು ಸಾಂಧ್ರಸಿಂಧುವೇದ ತಿಳಿದವರಿಗೆ ಮಾತ್ರ ಅರ್ಥವಾಗುವಂತಹ ಯೋಗ ರಹಸ್ಯ. ಪೀಠಿಕಾಪುರ ಕುಂಡಲಿನಿಯನ್ನು ಬಾಪನಾರ್ಯರ, ವೆಂಕಟಪ್ಪಯ್ಯ ಶ್ರೇಷ್ಠಿಯ ಮತ್ತು ವತ್ಸವಾಯಿಯರ 33ನೆಯ ತಲೆಮಾರಿನಲ್ಲಿ ಕದಲಿಸಬಹುದು. ಈಗಲೇ ಏನು ಅಗತ್ಯ? ಅದೃಷ್ಟವಶಾತ್ ನಿಮಗೆ ಸಿಕ್ಕಿರುವ ಈ ಪುಣ್ಯ ಅವಕಾಶವನ್ನು ಪ್ರತಿಕ್ಷಣವೂ ಉಪಯೋಗಿಸಿಕೊಳ್ಳಿ'' ಎಂದು ನುಡಿದರು. ಮಗೂ ಶಂಕರ ಭಟ್ಟೂ! ನರಸಿಂಹ ವರ್ಮರವರು, ಶ್ರೀಪಾದರನ್ನು ಪೀಠಿಕಾಪುರದಲ್ಲಿ ಶಾಶ್ವತವಾಗಿ ಇರುವ ಹಾಗೆ ಮಾಡಲೂ ಈ ತರಹ ಪ್ರಯತ್ನಿಸಿದರು.

## ಶ್ರೀಪಾದರ ವೈಭವ

ನನ್ನಲ್ಲಿ ಅಜ್ಞಾನ ಬಹಳ ಹೆಚ್ಚು ಪರಿಮಾಣದಲ್ಲಿದೆ. ಶ್ರೀಪಾದರು ತಾವೇ ಖುದ್ದಾಗಿ ಶ್ರೀಕಷ್ಣನೆಂದು ಹೇಳುವುದರಿಂದ ವ್ಯಂಗ್ಯವಾಗಿ ಅಜ್ಞಾನದಿಂದ ಪ್ರಶ್ನಿಸಿದೆ. ''ಶ್ರೀಪಾದಾ! ನೀನು ಶ್ರೀ ಕೃಷ್ಣನೆನ್ನುತ್ತಿದ್ದೀಯ. ಹಾಗಾದರೇ ಅಷ್ಟಪತ್ನಿಯರು, 16,000 ಗೋಪಿಕೆಯರು ಈ ಅವತಾರದಲ್ಲಿ ಸಹಾ ಇರುವರಾ?'' ಆಗ ಶ್ರೀಪಾದರು ಮುಗುಳ್ನಗೆಯಿಂದ, ''ನನ್ನ ಅಷ್ಟವಿಧ ಪ್ರಕೃತಿಯೇ ನನ್ನ ಅಷ್ಟ ಪತ್ನಿಯರು. ನನ್ನದು ಷೋಡಶಕಲಾ ಪರಿಪೂರ್ಣ ಅವತಾರ. ನನ್ನ ಶರೀರದಿಂದ ನನ್ನ ಮನಸ್ಸಿನಿಂದ ಶ್ರೀಪಾದ ಶ್ರೀವಲ್ಲಭ ಅವತಾರವೆಂಬ ಈ ದಿವ್ಯಾತ್ಮದಿಂದ ಹತ್ತು ದಿಕ್ಕುಗಳಲ್ಲಿಯೂ ಶಕ್ತಿ ಸ್ವರೂಪಗಳಾದ ಸ್ಪಂದನೆಗಳು, ಪ್ರತಿ ಕ್ಷಣವೂ ಹೊರಬೀಳುತ್ತಿರುವವು. ಈ ತರಹ ಪ್ರತಿಕ್ಷಣವೂ ಒಂದೊಂದು ಕಲೆಗೂ ಶರೀರ, ಮನಸ್ಸು, ಆತ್ಮ ತತ್ತ್ವಗಳಿಂದ 10 x 10 x 10 = 1,000 ಸ್ಪಂದನೆಗಳು ಹೊರಬೀಳುತ್ತಿರುವವು. ಈ ವಿಧವಾಗಿ 16 ಕಲೆಗಳಿಂದ ಒಟ್ಟು 16,000 ಸ್ಪಂದನೆಗಳು ಹೊರಬೀಳುತ್ತಿರುವವು. ಇವೆಲ್ಲವೂ ನನ್ನ ಇಂದಿನ 16,000 ಗೋಪಿಕೆಯರು. ಹಿಂದಿನ ಅವತಾರದಲ್ಲಿ ಅವು ಮಾನವ ರೂಪದಲ್ಲಿದ್ದವು, ಈ ಅವತಾರದಲ್ಲಿ ಅವೆಲ್ಲವೂ ಆಕಾರವಿಲ್ಲದೇ ಸ್ಪಂದಿಸುತ್ತಿವೆ.

ನನ್ನ ವಿವಿಧ ದೇವತಾ ಸ್ವರೂಪಗಳನ್ನು ಆರಾಧಿಸಿದರೂ ತಪ್ಪಿಲ್ಲ. ಅವೆಲ್ಲವೂ ನನ್ನನ್ನು ಆರಾಧಿಸಿದ ಹಾಗೆಯೇ, ನನ್ನಲ್ಲಿನ ಶಿವ ಸ್ವರೂಪವನ್ನು, ವಿಷ್ಣು ಸ್ವರೂಪವನ್ನು, ಬ್ರಹ್ಮಸ್ವರೂಪವನ್ನು ಆರಾಧಿಸಬಹುದು. ನನ್ನಲ್ಲಿನ ಇತರ ದೇವತೆಗಳ್ನೂ ಆರಾಧಿಸಬಹುದು. ವಿವಿಧ ಸಾಧನಾ ಪದ್ಧತಿಗಳು, ಸಾಧಕರ ವಿವಿಧ ಸಾಧನಾವಸ್ಥೆಗಳು, ಕಾಲ, ಕರ್ಮ, ಕಾರಣಗಳು ಎಷ್ಟೋ ಜೀವ ಪರಿಣಾಮದ ಮೇಲೆ ಪ್ರಭಾವ ತೋರಿಸುವುದು'' ಎಂದು ವಿವರಿಸಿದರು.

ನರಸಿಂಹರಾಜ ವರ್ಮರಿಗೆ ಆ ರಾತ್ರಿ ನೃಸಿಂಹನ 32 ರೂಪಗಳ ದರ್ಶನ ಭಾಗ್ಯ ಲಭಿಸಿತು. ಅವು 1. ಕುಂದಪಾದ ನೃಸಿಂಹ 2. ಕೋಪ ನೃಸಿಂಹ 3. ದಿವ್ಯ ನೃಸಿಂಹ 4. ಬ್ರಹ್ಮಾಂಡ ನೃಸಿಂಹ 5. ಸಮುದ್ರ ನೃಸಿಂಹ 6. ವಿಶ್ವರೂಪ ನೃಸಿಂಹ 7. ವೀರ ನೃಸಿಂಹ 8. ಕ್ರೂರ ನೃಸಿಂಹ 9. ಭೀಭತ್ಸ ನೃಸಿಂಹ 10. ರೌದ್ರ ನೃಸಿಂಹ 11. ಧೂಮ್ರ ನೃಸಿಂಹ 12. ವಹ್ನಿ ನೃಸಿಂಹ 13. ವ್ಯಾಘ್ರ ನೃಸಿಂಹ 14. ಬಿಡಾಲ ನೃಸಿಂಹ 15. ಭೀಮ ನೃಸಿಂಹ 16. ಪಾತಾಳ ನೃಸಿಂಹ 17. ಆಕಾಶ ನೃಸಿಂಹ 18. ವಕ್ರ ನೃಸಿಂಹ 19. ಚಕ್ರ ನೃಸಿಂಹ 20. ಶಂಕ ನೃಸಿಂಹ 21. ಸತ್ತ್ವ ನೃಸಿಂಹ 22. ಅದ್ಭುತ ನೃಸಿಂಹ 23. ವೇಗ ನೃಸಿಂಹ 24. ವಿದಾರಣ ನೃಸಿಂಹ 25. ಯೋಗಾನಂದ ನೃಸಿಂಹ 26. ಲಕ್ಷ್ಮೀ ನೃಸಿಂಹಮೂರ್ತಿ 27. ಭದ್ರ ನರಸಿಂಹಮೂರ್ತಿ 28. ರಾಜನರಸಿಂಹ ಮೂರ್ತಿ 29. ವಲ್ಲಭ ನರಸಿಂಹಮೂರ್ತಿ 30. ನೆಯ ನೃಸಿಂಹನಾಗಿ ಶ್ರೀಪಾದ ಶ್ರೀವಲ್ಲಭರನ್ನು ಕಂಡೆನು

31. ನೇ ನೃಸಿಂಹನನ್ನು ಶ್ರೀ ನೃಸಿಂಹ ಸರಸ್ವತಿಯವರಲ್ಲಿ ಕಂಡೆನು 32. ನೇ ನೃಸಿಂಹನಾಗಿ ಶ್ರೀ ಪ್ರಜ್ಞಾಪುರ ನಿವಾಸಿ ಸ್ವಾಮಿ ಸಮರ್ಥರನ್ನು ಕಂಡೆನು.

## ಶ್ರೀ ಶ್ರೀನಿವಾಸ ವೃತ್ತಾಂತ

ಮಗು! ನಾಳೆ ಪರಮ ಪವಿತ್ರವಾದ ದಿನ. ಕನ್ಯಾಮಾಸದಲ್ಲಿ ಶ್ರವಣಾನಕ್ಷತ್ರ ದ್ವಾದಶಿ ಸೋಮವಾರ ಸಿದ್ಧ ಯೋಗದಲ್ಲಿ ಶ್ರೀ ವೇಂಕಟೇಶ್ವರನು 'ಅರ್ಚಾ' ರೂಪದಲ್ಲಿ ಆವಿರ್ಭವಿಸಿರುವನು. ವೈಶಾಖ ಶುದ್ಧ ಸಪ್ತಮಿಯಂದು ವಿಳಂಬಿ ನಾಮ ಸಂವತ್ಸರದಲ್ಲಿ ಕುಬೇರನಿಂದ ಧನ ಸಹಾಯ ಪಡೆದು, ಸಾಲದ ಪತ್ರ ಬರೆದು ಕೊಟ್ಟಿರುವನು. ಶ್ರೀ ಪದ್ಮಾವತಿದೇವಿ, ಮೃಗಶಿರಾ ನಕ್ಷತ್ರದಲ್ಲಿ ಜನ್ಮಿಸಲೂ ಶ್ರೀನಿವಾಸನು ಶ್ರವಣಾ ನಕ್ಷತ್ರದಲ್ಲಿ ಅವತರಿಸಿದರು. ವೈಶಾಕ ಶುದ್ಧ ದಶಮಿಯಂದು ಉತ್ತರ ಫಲ್ಗುಣೀ ನಕ್ಷತ್ರದಲ್ಲಿ ಶ್ರೀನಿವಾಸ ಕಲ್ಯಾಣ ನಡೆಯಿತು. ಶ್ರೀನಿವಾಸ ಪ್ರಭುಗಳು ಸಹಾ ಭಾರದ್ವಾಜ ಗೋತ್ರದಲ್ಲಿ ಅವತರಿಸಿದರು. ಪಾಂಡವ ವಂಶದಲ್ಲಿ ಸುಧನ್ವನಿಗೆ ನಾಗಕನ್ಯೆಯಿಂದ ಜನ್ಮಿಸಿದವರು ಆಕಾಶರಾಜ. ಇವರ ಸಹೋದರನೇ ತೊಂಡಮಾನರು. ವಸುಧಾನ ಆಕಾಶರಾಜ ಕುಮಾರನೇ ಶ್ರೀನಿವಾಸ ಪ್ರಭುಗಳು ಅಗಸ್ತ್ಯರ ಸಲಹೆ ಪ್ರಕಾರ ರಾಜ್ಯವನ್ನು ಮಕ್ಕಳಿಬ್ಬರಿಗೂ ಸಮವಾಗಿ ಹಂಚಿದನು.

ಸುಬ್ಬಯ್ಯ ಶ್ರೇಷ್ಠಿ ಶಂಕರ ಭಟ್ಟನಿಗೆ, "ನೀನು ಈ ದಿನ ವಿಶ್ರಾಂತಿ ತೆಗೆದುಕೋ. ಈ ರಾತ್ರಿ ಎಲ್ಲಾ ನಾವು ಶ್ರೀಪಾದ ಶ್ರೀವಲ್ಲಭರ ದಿವ್ಯನಾಮವನ್ನು ಕೀರ್ತನೆ ಮಾಡೋಣ. ಜ್ಯೋತಿಶ್ಶಾಸ್ತ್ರ ಪ್ರಕಾರ, ನಾಳೆ ಪರಮ ಪವಿತ್ರ ದಿನ. ನಾಳೆ ನಿನಗೆ ಅತ್ಯಂತ ಆಶ್ಚರ್ಯಕರವಾದ ಶ್ರೀಪಾದರ ಲೀಲೆಗಳನ್ನು ತಿಳಿಸುವೆನು. ಚಿಂತಾಮಣಿ ಬಿಲ್ವಮಂಗಳರು, ಪೀಠಾಪುರಕ್ಕೆ ಹೇಗೆ ಕರೆದುಕೊಂಡುಬರಲಾಗದೋ ಅವರನ್ನು ಶ್ರೀಗುರುಗಳು ಹೇಗೆ ರಕ್ಷಿಸಿದರೋ, ನರಸಿಂಹ ವರ್ಮರ ಜಮೀನುಗಳಂದು ಶ್ರೀಪಾದರು ಪ್ರದರ್ಶಿಸಿದ ಚಿತ್ರವಾದ ಲೀಲೆಗಳಿಗೆ ಚಿಹ್ನೆಯಾಗಿ ಅಲ್ಲಿ ಚಿತ್ರಾಡ ಗ್ರಾಮ ಹೇಗೆ ಹುಟ್ಟಿಕೊಂಡಿತು, ಅದು ಹೇಗೆ ಖ್ಯಾತಿಗೊಂಡಿತೋ ಮುಂದೆ ಎಂತಹ ಚಿತ್ರವಿಚಿತ್ರ ವಿಷಯಗಳು ಅಲ್ಲಿ ನಡೆಯುವವೋ, ಶ್ರೀಗಳ ಕೊನೆಯ ಅವತಾರವಾದ ಕಲ್ಕಿಗೆ ಮುನ್ನ ನಡೆಯಲಾಗಿರುವ ಲೀಲೆಗಳನ್ನು ಸಹಾ ವಿವರಿಸುವೆನು'' ಎಂದು ಹೇಳಿ ನನ್ನನ್ನು ಹತ್ತಿರದಲ್ಲಿದ್ದ ಒಂದು ಕೊಠಡಿಗೆ ಕರೆದೊಯ್ದರು. ಅಲ್ಲಿ 2 ಈಚಲ ಎಲೆ ಚಾಪೆಗಳಿದ್ದವು. 4 ಒಳ್ಳೆಯ ಜಾತಿ ನಾಯಿಗಳು ಆ ಕುಟೀರವನ್ನು ಕಾಯುತ್ತಿದ್ದವು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 11

# ಸುಬ್ಬಯ್ಯ ಶ್ರೇಷ್ಠಿ, ಚಿಂತಾಮಣಿ, ಬಿಲ್ವಮಂಗಳ ವೃತ್ತಾಂತ

### ದತ್ತಾರಾಧನೆಯಿಂದ ಸಕಲ ದೇವತಾರಾಧನೆ ಫಲ

### ಶ್ರೀಪಾದರ ಜನ್ಮ ಅತ್ಯದ್ಭುತ ಜ್ಯೋತಿರ್ಮಯ

ಶ್ರೀ ಸುಬ್ಬಯ್ಯ ಶ್ರೇಷ್ಠಿ, ಮಾರನೇ ದಿನ ಹೀಗೆಂದರು, "**ಶ್ರೀ ದತ್ತ ಪ್ರಭುಗಳು ಸರ್ವದೇವತಾ ಸ್ವರೂಪರು. ದತ್ತನನ್ನು ಆರಾಧಿಸಿದರೇ, ಸಕಲ ದೇವತಾರಾಧನೆ ಫಲ ಲಭಿಸುವುದು.** ಸರ್ವದೇವತೆಗಳಲ್ಲಿಯೂ ಅಂತರ್ಲೀನವಾಗಿ ಶ್ರೀದತ್ತರೇ ಇರುವರು. ಶ್ರೀ ಸುಮತಿ ಮಾತೆ, ಶನಿ ಪ್ರದೋಷ ಸಮಯ ಅನಸೂಯ ತತ್ತ್ವದಲ್ಲಿ ಪರಮಶಿವನನ್ನು ಆರಾಧಿಸುತ್ತಿದ್ದರು. ಹಾಗೆ ಶ್ರೀ ದತ್ತರ ಶಿವತತ್ತ್ವ, ಅನಸೂಯ ತತ್ತ್ವದೊಂದಿಗೆ ಪ್ರತಿಬಿಂಬಿಸಿ, ಅನಸೂಯ ಮಾತೆಗೆ ಸಮಾನವಾದ ಸ್ಥಿತಿಯಲ್ಲಿದ್ದು ಸುಮತಿ ಮಾತೆಯ ಗರ್ಭದಂದು ಶ್ರೀಪಾದ ಶ್ರೀವಲ್ಲಭ ರೂಪ ತಾಳಿದೆ. ಇದು, ಒಂದಾನೊಂದು ಯೋಗಪ್ರಕ್ರಿಯೆ. ಅವರು ಮಾತಾಪಿತೃ ಸಂಯೋಗದಿಂದ ಅಲ್ಲದೇ, ಯೋಗನಿಷ್ಠರಾದ ಅಪ್ಪಲರಾಜ ಶರ್ಮ. ಸುಮತೀಮಾತೆಯ ನೇತ್ರದಿಂದ ಯೋಗ ಜ್ಯೋತಿಗಳು ಅರಳಿ **ಅವು ಸಂಯೋಗ ಹೊಂದಿ ಸುಮತಿ ಮಾತೆ ಗರ್ಭದಲ್ಲಿ ನಿಂತು 9 ತಿಂಗಳು ತುಂಬಿದ ನಂತರ ಕೇವಲ ಜ್ಯೋತಿ ಸ್ವರೂಪವಾಗಿ ಮಾತ್ರವೇ ಹೊರಬಿದ್ದಿದೆ. ಶ್ರೀಪಾದರು ವಸ್ತುತಃ ಜ್ಯೋತಿ ಸ್ವರೂಪರು. ಅವರು 3ನೇ ವರ್ಷದಿಂದಲೇ ಕೆಲವು ವಿಚಿತ್ರ ಶಕ್ತಿಗಳನ್ನು ಪ್ರಕಟಿಸತೊಡಗಿದರು. ಶ್ರೀಪಾದರ ನಂತರ ಅವರಿಗೆ ಶ್ರೀವಿದ್ಯಾಧರಿ, ರಾಧ, ಸುರೇಖ ಎನ್ನುವ 3 ಸಹೋದರಿಯರು ಜನುಮಿಸಿದರು.** ಶ್ರೀ ವಿದ್ಯಾಧರಿ ಹುಟ್ಟಿದ ದಿನ ಬಾಪನಾರ್ಯರ ದೂರದ ನೆಂಟರಾದ ಮಲ್ಲಾದಿ ರಾಮಕೃಷ್ಣಾವಧಾನಿ ಎಂಬ ಮಹಾಪಂಡಿತರು ಮನೆಗೆ ಬಂದರು. ಅವರ ಪುತ್ರ ಚಂದ್ರಶೇಖರ ಘಂಡಿಕೋಟೆ ಮನೆಯಲ್ಲಿ ಮಹಾಲಕ್ಷ್ಮಿಯೇ ಹುಟ್ಟಿದ್ದಾಳೆ, ಆಕೆ ಮಲ್ಲಾದಿಗಳ ಸೊಸೆ ಆದರೇ ಚಂದವೆಂದು ಎಲ್ಲರೂ ಹೇಳಿದರು. ಶ್ರೀಪಾದರೂ ಸಹಾ ಹಾಗೆಯೇ ಭಾವಿಸಿದರು. ಶ್ರೀಪಾದರು ಸಿದ್ಧಸಂಕಲ್ಪರು, ವಜ್ರಸಂಕಲ್ಪರು. ಅವರು ಹೇಳಿಕೆಯಂತೆಯೇ ಮುಂದೆ, ಕೆಲಕಾಲದನಂತರ ಶ್ರೀವಿದ್ಯಾಧರಿಗೂ, ಚಂದ್ರಶೇಖರ ಅವಧಾನಿಗೂ ವೈಭವದಿಂದ ಪೀಠಿಕಾಪುರದಲ್ಲಿ ವಿವಾಹ ನಡೆಯಿತು. ರಾಧೆಯೆಂಬ ಮತ್ತೊಂದು ಮಗಳ ವಿವಾಹ ವಿಜಯವಾಟಿಕಾ ನಿವಾಸಿ ಆದ ವಿಶ್ವನಾಥ ಮುರಳೀಕೃಷ್ಣಾವಧಾನಿಗೂ ಮತ್ತು ಸುರೇಖ ಎನ್ನುವ ಶ್ರೀಗಳ 3ನೇ ಸಹೋದರಿಯನ್ನು ಮಂಗಳಗಿರಿ ನಿವಾಸಿ ಆದ ಕಾಡೇಪಲ್ಲಿ ದತ್ತಾತ್ರೇಯ ಅವಧಾನಿಗೆ ಕೊಟ್ಟು ಮದುವೆ ಮಾಡಿದರು.

ಮಗು, ಶಂಕರ ಭಟ್ಟು! ಶ್ರೀಪಾದರ ಲೀಲೆಗಳು ಉಹಾತೀತಗಳು. ಅವನ್ನು ಸ್ಮರಿಸುವವರ ಪಾಪ ಕಳೆಯುವುದು. ಗೋದಾವರಿ ಮಂಡಲದಲ್ಲಿ ತಾಟಂಕಪುರ (ತಣುಕು) ಎಂಬ ಗ್ರಾಮ ಉಂಟು. ಅಲ್ಲಿ ಅನೇಕ ವಾಜಪೇಯಗಳನ್ನು, ಪೌಂಡರೀಕಗಳನ್ನು ಮತ್ತು ಮಹಾಯಾಗಗಳನ್ನು ಆಚರಿಸಿದ ಪರಮ ಪವಿತ್ರ ವಂಶ ಒಂದಿತ್ತು. ಅವರೇ ವಾಜಪೇಯಯಾಜುಲು. ಪೀಠಿಕಾಪುರದ

ಮಲ್ಲಾದಿಗಳಿಗೂ ತಣುಕಿನ ವಾಜಪೇಯಯಾಜುರಿಗೂ ಹತ್ತಿರದ ಸಂಬಂಧವಿತ್ತು. ಆದರೇ ವಾಜಪೇಯಯಾಜರು 'ಇದಂ ಬ್ರಹ್ಮಂ ಇದಂ ಕ್ಷಾತ್ರಂ' ಎಂಬ ಸಿದ್ಧಾಂತದ ವಿಶ್ವಾಸ ಉಳ್ಳವರು. ಅವರು ವಶಿಷ್ಠ ಶಕ್ತಿ, ಪರಾಶರ ಸತ್ರಯಾ ಋಷಿ ಪ್ರವರಾನ್ವಿತ ಪರಾಶರ ಗೋತ್ರ ಸಂಭೂತರು, ಋಗ್ವೇದರು. ಮಲ್ಲಾದಿಗಳು ಯಜುರ್ವೇದದವರು, ಕರ್ನಾಟಕದಲ್ಲಿ ಋಗ್ವೇದ ಅಧ್ಯಯನಕ್ಕೆ ಸರಿಯಾದ ಬೋಧಕರಿರಲಿಲ್ಲ, ಆಗ ತಣುಕಿನ ವಾಜಪೇಯಯಾಜರು ಮಾಯಣಾಚಾರ್ಯರನ್ನು ಆಹ್ವಾನಿಸಲು, ಕರ್ನಾಟಕದ ಹೊಯಸಳಕ್ಕೆ ಹೊರಟರು, ಅಂದಿನಿಂದ ಅವರನ್ನು ಹೋಯಸಳ ಬ್ರಾಹ್ಮಣರೆಂದು ಕರೆಯಲಾಯಿತು. ಅವರು ಬ್ರಾಹ್ಮಣತ್ವವನ್ನು, ಕ್ಷಾತ್ರ ವೃತ್ತಿಯನ್ನು ಸಮವಾಗಿ ಸ್ವೀಕರಿಸಿದರು. ಸನಾತನ ಧರ್ಮವನ್ನು ಸಂರಕ್ಷಿಸಲು ಅವರು ಎಷ್ಟೋ ಕಷ್ಟಪಟ್ಟರು. ಮಾಯಣಾಚಾರ್ಯರಿಗೆ ಇಬ್ಬರು ಕುಮಾರರು. ಮಾಧವಾಚಾರ್ಯ ಮತ್ತು ಸಾಯಣಾಚಾರ್ಯರೆಂದು ಇಬ್ಬರೂ ಉದ್ಧಂಡ ಪಂಡಿತರೇ. ಸಾಯಣಾಚಾರ್ಯರು ವೇದಗಳಿಗೆ ಭಾಷ್ಯ ಬರೆದರು, ಮಾಧವಾಚಾರ್ಯರು ಶ್ರೀ ಮಹಾಲಕ್ಷ್ಮಿ ಅನುಗ್ರಹಕ್ಕಾಗಿ ತೀವ್ರ ತಪಸ್ಸು ಆಚರಿಸಿದರು. ದೇವಿ ಪ್ರಸನ್ನಳಾಗಲು, ಅವರು ತನಗೆ ವಿಶೇಷವಾದ ಲಕ್ಷ್ಮಿ ಕಟಾಕ್ಷವನ್ನು ಕೇಳಿದರು. ಆಗ, ಶ್ರೀಲಕ್ಷ್ಮಿ "ಮಗು! ಅದು ನಿನಗೆ ಈ ಜನುಮದಲ್ಲಿ ಅಸಾಧ್ಯ" ಎಂದಳು. ಅವರು ಕೂಡಲೇ "ಅಮ್ಮಾ! ನಾನು ಸನ್ಯಾಸ ಸ್ವೀಕರಿಸುತ್ತಿದ್ದೇನೆ, ನನಗೆ ಈಗ ಎರಡನೆಯ ಜನುಮವೇ, ಅಲ್ಲವೇ" ಎಂದರು. ಶ್ರೀದೇವಿ ಅನುಗ್ರಹಿಸಿದಳು. ಅವರು ಲೋಹವನ್ನು ಮುಟ್ಟಿದರೇ ಅದು ಬಂಗಾರ ಆಗುತ್ತಿತ್ತು, ಅವರೇ ವಿದ್ಯಾರಣ್ಯ ಮಹರ್ಷಿಗಳು. ಅವರನ್ನು ಶ್ರೀಪಾದರು ಅನುಗ್ರಹಿಸಿದರು. ಅವರಿಗೆ ಮೂರನೆ ತಲೆಮಾರಿನ ಸನ್ಯಾಸಾಶ್ರಮ ಸಾಲಿನಲ್ಲಿ ಶ್ರೀಕೃಷ್ಣ ಸರಸ್ವತಿಯಾಗಿ ಜನುಮ ತಾಳಲಿರುವುದು ಅವರೇ! ಶ್ರೀಪಾದರು, ಮುಂದೆ ಶ್ರೀ ನರಸಿಂಹ ಸರಸ್ವತಿಯಾಗಿ ಅವತರಿಸಿದಾಗ ಅವರಿಗೆ ಶ್ರೀ ಕೃಷ್ಣ ಸರಸ್ವತಿಗಳು ಸನ್ಯಾಸಾಶ್ರಮ ಗುರುಗಳಾಗಿರುವರು. ಅವರಿಗೆ ಭೋಗದಲ್ಲಿ ಆಶೆ ಕೊನೆಯಾಗಲಿಲ್ಲ. ಅದ್ದರಿಂದ ಮುಂದಿನ ಶತಮಾನಗಳಲ್ಲಿ ಸಾಯಣಾಚಾರ್ಯರ ವಂಶದಲ್ಲಿ ಗೋವಿಂದ ದೀಕ್ಷಿತರಾಗಿ ಹುಟ್ಟಿ ತಂಜಾವೂರ್ ಪ್ರಭುಗಳಿಗೆ ಮಹಾಮಂತ್ರಿಯಾಗಿ, ರಾಜರ್ಷಿಯಾಗಿ, ಸಾವಿರಾರು ಜನದ ಮೆಚ್ಚುಗೆ ಪಡೆಯುವರು. ಇದೆಲ್ಲವೂ ಭವಿಷ್ಯವಾಣಿ. ಶ್ರೀಪಾದರೇ ಖುದ್ದಾಗಿ ತೀರ್ಮಾನಿಸಿದ ವಿಧಿ ವಿಧಾನ. ಅವರು ಸತ್ಯಸಂಕಲ್ಪರು. ಆದ್ದರಿಂದ ತಪ್ಪದೇ ಈ ಭವಿಷ್ಯ ನಡದೇ ನಡೆಯುವುದು.

ಅನೇಕ ದೇವತಾರಾಧನೆ ಮಾಡುವಾಗ, ಆಯಾ ದೇವತೆಗಳಲ್ಲಿ ದತ್ತ ಪ್ರಭುಗಳ ಚೈತನ್ಯ ಪ್ರತಿಬಿಂಬಿಸಿ ಹೊಸ ಚೈತನ್ಯವಾಗಿ ಬದಲಾಯಿಸಿ, ಸಾಧಕರ ಕೋರಿಕೆಗಳನ್ನು ತೀರಿಸುವುದು. ದತ್ತ ಪ್ರಭುಗಳನ್ನೆ ಆಶ್ರಯಿಸಿದರೇ ಯಾವ ದೇವತಾಂಶದಿಂದ ಎಷ್ಟರವರೆಗೂ ಯಾವ ಕಾರ್ಯ ನಡೆಸಬೇಕೋ ಶ್ರೀದತ್ತರೇ ನಿರ್ಧರಿಸಿ, ಕಣ್ಣಿನ ರೆಪ್ಪೆಯಂತೆ ಕಾಪಾಡುವರು. ಧೃವ ಕಠೋರ ಜಪ ಮಾಡಿದನು, ಆತನಿಗೆ ಶ್ರೀ ಮಹಾವಿಷ್ಣು ತನ್ನ ಅಪಾರವಾದ, ಅನಂತವಾದ ಪಿತೃ ಪ್ರೀತಿಯನ್ನು ಹಂಚಿದನು. ಶ್ರೀ ದತ್ತ ದೇವರು ಸಗುಣ ತತ್ತ್ವಕ್ಕೂ, ನಿರ್ಗುಣ ತತ್ತ್ವಕ್ಕೂ ಮೀರಿದ್ದು ಮತ್ತು ಆಧಾರವೂ ಆದ ಪರಮ ತತ್ತ್ವ, ಅದುವೇ ಚರಮ ತತ್ತ್ವ, ಆದಿ ತತ್ತ್ವ, ಅದೇ ಆದ್ಯಂತ ರಹಿತ ತತ್ತ್ವ. ದತ್ತ ತತ್ತ್ವವನ್ನು ಕೇವಲ ಅನುಭವ ಪೂರ್ವಕವಾಗಿ, ತಿಳಿದುಕೊಳ್ಳಬೇಕೇ ಹೊರತು, ಅದು ಹೀಗೆ ಇರುವುದೆಂದು ನಾವು ತರ್ಕ ಬುದ್ಧಿಯಿಂದ ಯೋಚಿಸುವುದು ನಿಷ್ಫಲವೇ ಸರಿ? **ಒಂದು ಕೆಲಸ ನಡೆಯಲು, ನಡೆಯದಿರಲು ಅಥವಾ ಬೇರೊಂದು ರೀತಿ ನಡೆಸಲು, ಇರುವ ಸರ್ವಶಕ್ತಿಯೇ ಶ್ರೀಪಾದ ಶ್ರೀವಲ್ಲಭರ ಅವತಾರ ರಹಸ್ಯ.**

## ಶ್ರೀಪಾದ ತತ್ತ್ವ

ಅವರು ಖುದ್ದಾಗಿ ದತ್ತಾತ್ರೇಯರೆಂದು ನುಡಿದ ಶ್ರೀಪಾದರು, ತಮ್ಮ ಮನೆಯಲ್ಲಿರುವ ಕಾಲಾಗ್ನಿ ಶಮನದತ್ತನ ಆರಾಧಿಸುತ್ತಿದ್ದರು. ಒಮ್ಮೆ ಬಾಪನಾರ್ಯರು ಈ ವಿಷಯದಲ್ಲಿ ದಿಕ್ಕು ತಿಳಿಯದೇ, "ಮಗು! ನೀನು ದತ್ತನಾ, ಇಲ್ಲ ದತ್ತೋಪಾಸಕನಾ? ಎಂದು ಶ್ರೀಪಾದರನ್ನೇ ಕೇಳಿದರು. ಆಗ ಅವರು ಹೀಗೆಂದರು, **"ನಾನು ದತ್ತನೆಂಬುವಾಗ, ಶ್ರೀ ದತ್ತನೇ ಆಗುತ್ತಿದ್ದೇನೆ. ನಾನು ಶ್ರೀ ದತ್ತ ಉಪಾಸಕನೆಂಬುವಾಗ, ಶ್ರೀ ದತ್ತೋಪಾಸಕನೇ ಆಗುತ್ತಿದ್ದೀನಿ, ನಾನು ಶ್ರೀಪಾದ ಶ್ರೀವಲ್ಲಭನೆಂಬುವಾಗ, ಶ್ರೀಪಾದ ಶ್ರೀವಲ್ಲಭನೇ ಆಗುತ್ತಿದ್ದೀನಿ. ನಾನು ಏನು ಸಂಕಲ್ಪಿಸಿದರೇ, ಅದು ನಡೆಯುವುದು. ನಾನು ಯಾವ ರೀತಿ ನೆನೆದರೇ, ಅದೇ ಆಗುತ್ತಿದ್ದೀನಿ, ಇದೇ ನನ್ನ ತತ್ತ್ವ".**

ಅಜ್ಜನಿಗಿದೆಲ್ಲವೂ ಅಯೋಮಯವಾಗಿತ್ತು. ಆಗ ಶ್ರೀಪಾದರು ಹೀಗೆಂದರು, **"ತಾತ! ನೀನು, ನಾನು ಒಂದೇ! ಮುಂದಿನ ಜನುಮದಲ್ಲಿ, ತೇಟ್ ನಿನ್ನ ತರಹಾ ಶರೀರದಿಂದ ಮಾತ್ರ ಅವತರಿಸಲಿದ್ದೇನೆ. ನಿನ್ನಲ್ಲಿ ಸನ್ಯಾಸಾಶ್ರಮ ಪಡೆಯಬೇಕೆಂಬುವ ಕೋರಿಕೆ ಬಲವಾಗಿದೆ. ನೀನು ಈ ಜನುಮದಲ್ಲಿ ಆಗಲಿ, ಬರುವ ಜನ್ಮದಲ್ಲಾಗಲಿ, ಸನ್ಯಾಸನಾಗುವುದು ನನ್ನ ಸಂಕಲ್ಪದಲ್ಲಿಲ್ಲ. ನಿನ್ನ ರೂಪದಲ್ಲಿ ಅವತರಿಸಿ ನಿನ್ನ ಕರ್ಮ ಬಂಧನಗಳನ್ನು, ವಾಸನ ವಿಶೇಷಗಳನ್ನು ಧ್ವಂಸ ಮಾಡಬೇಕೆಂದಿದ್ದೇನೆ"** ಎಂದು ಮುದ್ದಾಗಿ ತಾತನ ಕಣ್ಣು ಹುಬ್ಬುಗಳ ಮಧ್ಯ ಭಾಗವನ್ನು ತಾಕಿದರು. ಅದು ಕೂಟಸ್ಥ ಚೈತನ್ಯಕ್ಕೆ ನಿಲಯ. ಅವರು ಕೆಲವು ಕ್ಷಣಗಳು ತನಕ, ಹಿಮಾಲಯದಲ್ಲಿ ನಿಶ್ಚಲ ತಪೋ ಸಮಾಧಿಯಲ್ಲಿರುವ ಬಾಬಾಜಿಯವರನ್ನು ಕಂಡರು. ನಂತರ, ಪ್ರಯಾಗ ಮಹಾಕ್ಷೇತ್ರದಲ್ಲಿನ ತ್ರಿವೇಣಿ ಸಂಗಮದಲ್ಲಿ, ಅವರು ಸ್ನಾನ ಮಾಡುತ್ತಿರುವುದು ಕಂಡರು. ಆನಂತರ ಶ್ರೀಪಾದ ಶ್ರೀವಲ್ಲಭ ರೂಪ ನೋಡಿದರು. ಆ ಸ್ವರೂಪ, ಕುಕ್ಕುಟೇಶ್ವರಾಲಯದ ಸ್ವಯಂಭೂ ದತ್ತನಲ್ಲಿ ಅಂತರ್ಲೀನವಾಯಿತು. ಅದರಿಂದ ಒಂದು ಅವಧೂತ ಸ್ವರೂಪ ಹೊರಡಿತು. ತನ್ನ ಮಗಳಾದ ಅಖಂಡಲಕ್ಷ್ಮೀ ಸೌಭಾಗ್ಯವತಿ ಸುಮತಿ ಮಹಾರಾಣಿ, ಆ ಅವಧೂತರಿಗೆ ಭಿಕ್ಷೆ ಕೊಡುತ್ತಿರುವುದನ್ನು ನೋಡಿದರು. ಆ ಅವಧೂತ ಸ್ವರೂಪವೇ ಶ್ರೀಪಾದ ಶ್ರೀವಲ್ಲಭರ ರೂಪ ಹೊಂದಿ ಸುಮತಿ ಮಹಾರಾಣೀ ಮಡಿಲಲ್ಲಿ ಕಂದಮ್ಮನಾಗಿರುವುದು ಕಂಡರು. ಆ ಮಡಿಲಿನಿಂದ, ಹಸಿ ಹಸಿ 16 ವರುಷ ಯುವಕನಾಗಿ ಮಾರ್ಪಟ್ಟನು. ಆ ಯುವಕ ತನ್ನ ಕಡೆ ಗಂಭೀರವಾದ ದೃಷ್ಟಿಹರಿಸಿ, ತೇಟ್ ತನ್ನಂತಯೇ ರೂಪ ಧರಿಸಿದನು. ಆದರೆ ಆ ಮೂರ್ತಿ ಸನ್ಯಾಸಿ ರೂಪದಲ್ಲಿದ್ದನು. ಯಾವುದೋ 2 ಪವಿತ್ರ ನದಿಗಳ ಕೂಟದಲ್ಲಿ ಸ್ನಾನಮಾಡಿ, ತನ್ನ ಶಿಷ್ಯರೊಡನೇ ಗಂಭೀರವಾಗಿ ನಡೆಯುತ್ತಿದ್ದನು. ಆ ಸನ್ಯಾಸಿ, ತನ್ನನ್ನ ಉದ್ದೇಶಿಸಿ, "ಓಹೋ! ನಾನು ಯಾರು ಎಂದು ಸಂದಿಗ್ದದಲ್ಲಿದ್ದೀಯ? ನನ್ನನ್ನು ನೃಸಿಂಹ ಸರಸ್ವತಿ ಎನ್ನುವರು. ಇದು ಗಂಧರ್ವಪುರ." ಕೆಲವೇ ಕ್ಷಣಗಳಲ್ಲಿ ತನ್ನ ಅಂಗ ವಸ್ತ್ರವನ್ನು ನದಿಯಲ್ಲಿ ಹಾಸಿ ಅದರ ಮೇಲೆ ಕುಳಿತು ಶ್ರೀಶೈಲವನ್ನು ತಲುಪಿದರು. ಅಲ್ಲಿನ ಕದಳೀವನದ ಮಹಾಪುರುಷರು, ಯೋಗಿಗಳು, ಸಾಷ್ಟಾಂಗ ಪ್ರಣಾಮಗಳು ಮಾಡಿದರು. ಅವರೆಲ್ಲಾ "ಮಹಾಪ್ರಭೂ! ತಮ್ಮ ಬರುವಿಕೆಗಾಗಿ ನೂರಾರು ವರ್ಷಗಳಿಂದ ತಪಸ್ಸು ಮಾಡುತ್ತಿದ್ದೇವೆ. ನಮ್ಮನ್ನು ಧನ್ಯರಾಗಿ ಮಾಡಿ" ಎಂದು ಪ್ರಾರ್ಥಿಸಿದರು. ಅನೇಕ ವರುಷ ಅಲ್ಲಿ ತಪಸ್ಸನ್ನಾಚರಿಸಿದ ಮೇಲೆ, ಕೇವಲ ಕೌಪೀನ ಧಾರಿಗಳಾಗಿ ವೃದ್ಧರಾಗಿರುವಂತೆ ಕಂಡರು. ಅತ್ಯಂತ ತೀಕ್ಷ್ಣ ದೃಷ್ಟಿ ಬಾಪನಾರ್ಯರ ಕಡೆ ಬೀರುತ್ತಾ, 'ಈ ನನ್ನ ಸ್ವರೂಪವನ್ನು, ಸ್ವಾಮಿ ಸಮರ್ಥರೆಂದು ಹೇಳುವರು" ಎಂದು ವಕ್ಕಣಿಸಿದರು. ಸ್ವಲ್ಪ ಸಮಯದ ನಂತರ, ಶರೀರ ತ್ಯಾಗ ಮಾಡಿ, ತನ್ನ ಪ್ರಾಣಶಕ್ತಿಯನ್ನು

ಒಂದಾನೊಂದು ಆಲದ ಮರದಲ್ಲಿಯು, ತನ್ನ ದಿವ್ಯಾತ್ಮವನ್ನು ಶ್ರೀಶೈಲದ ಮಲ್ಲಿಕಾರ್ಜುನ ಶಿವಲಿಂಗದಲ್ಲಿಯು ವಿಲೀನವಾಗುವಂತೆ ಕಂಡನು. ಮಹಾಪವಿತ್ರವು, ಅತ್ಯಂತ ಶಕ್ತಿಮಯವಾದ ಆ ಶಿವಲಿಂಗದಿಂದ ಮೇಘ ಗಂಭೀರ ಸ್ವರದಿಂದ, "ಬಾಪನಾರ್ಯ! ನೀನು ಧನ್ಯ, ಅಗ್ರಾಹ್ಯ, ಅವಾಂಗ್ಮಾನಸಗೋಚರ, ಅನಂತ, ಕೇವಲ ಜ್ಞಾನಸ್ವರೂಪ, ಅನಾದ್ಯಂತನು ಆದ ನನ್ನನ್ನು, ನೀನು ನಿನ್ನ ಕ್ರಿಯಾ ಯೋಗಶಕ್ತಿಯಿಂದ, ಸೂರ್ಯಮಂಡಲದಿಂದ ಶಕ್ತಿಪಾತ ಆಚರಿಸಿ ಈ ಜ್ಯೊತಿರ್ಲಿಂಗಕ್ಕೆ ಆಕರ್ಶಿಸಿದೆ. 18,000 ಜನ ದಿವ್ಯ ಪುರುಷರು, ಈ ಜ್ಯೊತಿರ್ಲಿಂಗದಲ್ಲಿ, ವಿಲೀನನಾದ ನನ್ನನ್ನು ಪೂಜಿಸುವರು. ಈ ಜ್ಯೋತಿರ್ಲಿಂಗ ದರ್ಶನ ಮಾಡುವವರಿಗೆ ಸದಾ ಆ ದಿವ್ಯ ಪುರುಷರು ಭೌತಿಕ, ಆಧ್ಯಾತ್ಮಿಕ, ಪ್ರಗತಿಯಲ್ಲಿ ಸಹಾಯ ಮಾಡುವರು. ತ್ರಿಮೂರ್ತಿ ಸ್ವರೂಪನಾದ ನಾನು, ಶ್ರೀಪಾದ ಶ್ರೀವಲ್ಲಭ, ನರಸಿಂಹ ಸರಸ್ವತಿ, ಸ್ವಾಮಿ ಸಮರ್ಥ ಸ್ವರೂಪದಲ್ಲಿ ನಿನ್ನನ್ನು ಅನುಗ್ರಹಿಸುತ್ತಿದ್ದೇನೆ" ಎಂಬುವ ಮಾತು ಕೇಳಿ ಬಂದಿತು.

ಮಗು ಶಂಕರ ಭಟ್ಟು! ಶ್ರೀಗುರುವಿನ ಲೀಲೆಗಳು ಊಹಾತೀತ, ಸ್ವಲ್ಪ ಸಮಯಕ್ಕೆ ಬಾಪನಾರ್ಯರು ಯಥಾಸ್ಥಿತಿಗೆ ಬಂದರು. ಎದುರಲ್ಲಿ ಮುಗ್ಧ ಮುಖದಿಂದ ಮುಗಳ್ನಗೆ ಬೀರುತ್ತಾ 3 ವರುಷ ಪ್ರಾಯದಲ್ಲಿರುವ ಶ್ರೀಪಾದರನ್ನು ಕಂಡರು. ಈ ವಿಚಿತ್ರ ಅನುಭವ, ಅವರಿಗೆ ದಿವ್ಯ ಮಧುರವಾಗಿತ್ತು. ಶ್ರೀಪಾದರನ್ನು ತಮ್ಮ ಎದೆಗೆ ಅಪ್ಪಿಕೊಂಡರು. ಸ್ವಲ್ಪ ಹೊತ್ತು ಅವರು ದಿವ್ಯ ತನ್ಮಯತ್ವದಲ್ಲಿದ್ದರು. ಆ ಅವಸ್ಥೆಯಿಂದ ಜಾಗೃತರಾಗಿ, ಅಗ್ನಿಹೋತ್ರ ಕಾರ್ಯಕ್ರಮ ಕೈ ಹಿಡಿದರು. ಅವರು ಮಾಡುತ್ತಿದ್ದ ಅಗ್ನಿಹೋತ್ರವು, ಆಶ್ಚರ್ಯ ತೋರುತ್ತಿತ್ತು. ಅರಳಿ ಮತ್ತು ಶಮೀಕೋಲುಗಳಿಂದ ಸಾಮಾನ್ಯವಾಗಿ ಬೆಂಕಿ ಉದ್ಭವಿಸುವರು. ಆದರೇ ಬಾಪನಾರ್ಯರು ಸಮಿತ್ತುಗಳನ್ನು ಅಗ್ನಿಕುಂಡದಲ್ಲಿಟ್ಟು ವೇದ ಮಂತ್ರೋಚ್ಚಾರಣೆ ಮಾಡುವರು. ಕೂಡಲೇ ಬೆಂಕಿ ಸೃಷ್ಟಿಸಲ್ಪಟ್ಟು ಪ್ರಜ್ವಲಿಸುವುದು. ಅಪ್ಪಲರಾಜ ಶರ್ಮರು ಸಹಿತ, ಇದೇ ಮಾದರಿ ಅಗ್ನಿಯನ್ನು ಬರಮಾಡಿಕೊಳ್ಳುವರು, ಅವರ ವಂಶದಲ್ಲಿ ಅಗ್ನಿಪೂಜೆ ಇದೆ. ಪ್ರಜ್ವಲಾಗ್ನಿಯಿಂದ ಕೂಡಿದ ಅಗ್ನಿ ಕುಂಡದಲ್ಲಿಳಿದು ಆಹುತಿಗಳನ್ನೆಲ್ಲಾ ಜೋಡಿಸುವುರು. ಇದನ್ನು ಸಾಧಾರಣವಾಗಿ ವಿಶೇಷ ಪರ್ವಗಳಲ್ಲಿ ಮಾಡುತ್ತಿದ್ದರು. ಈ ರೀತಿಯ ಅಗ್ನಿ ಪೂಜೆಯಲ್ಲಿ ಅವರ ದೇಹಕ್ಕಾಗಲಿ, ಬಟ್ಟೆಗಳಿಗಾಗಲಿ, ಅಗ್ನಿಯಿಂದ ಯಾವ ವಿಧವಾದ ತೊಂದರೆಯೂ ಆಗದು. ಇದು ಅಶ್ಚರ್ಯಗಳಲ್ಲೇ ಆಶ್ಚರ್ಯ!

## ಶ್ರೀಪಾದರ ಘಟನಾಘಟನ ಸಾಮರ್ಥ್ಯ

ಬಾಪನಾರ್ಯರು ಅಗ್ನಿಹೋತ್ರ ಮಾಡಲು ಆ ದಿನ ಅದೆಷ್ಟು ಬಾರಿ ವೇದ ಮಂತ್ರಗಳನ್ನುಚ್ಛರಿಸುತ್ತಿದ್ದರೂ ಅಗ್ನಿ ಸೃಷ್ಟಿ ಆಗಲಿಲ್ಲ. ಶ್ರೀಪಾದರು ತಮ್ಮ ತಾತನ ದುಸ್ಥಿತಿಯನ್ನು ಕಂಡು ಲೀಲೆಯಿಂದ ನಗುತ್ತಿದ್ದರು. ತಾತನಿಗೆ ಬೆವರಿಳಿಯುತ್ತಿತ್ತು. ಆಗ ಶ್ರೀಗಳು, ಅಗ್ನಿಗುಂಡದ ಕಡೆ ನೋಡಿ, "ಎಲೈ ಅಗ್ನಿದೇವನೇ! ನಿನ್ನನು ಆಜ್ಞಾಪಿಸುತ್ತಿದ್ದೇನೆ. ಅಜ್ಜನ ದೈವ ಕಾರ್ಯಕ್ಕೆ ತೊಂದರೆ ತರಬೇಡ" ಎಂದರು. ತಕ್ಷಣ ಅಗ್ನಿ ಸೃಷ್ಟಿ ಆಗಿ ಪ್ರಜ್ವಲಿಸಿತು. ಶ್ರೀಪಾದರು ತಾತನ ಕಣ್ಣಿಂದ ನೀರು ತೆಗೆದು ಅಗ್ನಿ ಕುಂಡದಲ್ಲಿ ಹಾಕಿದರು. ಅಗ್ನಿ ಆರುವ ಬದಲಾಗಿ ಪ್ರಜ್ವಲಿಸಿತು! ತಾತ ಈ ಆಶ್ಚರ್ಯವನ್ನು ಕಂಡು ಮುಗ್ಧರಾದರು. ಆಗ ಶ್ರಿಪಾದರು, "ತಾತ! ನನ್ನ ಈ ಅವತಾರಕ್ಕೆ ನೀನು, ವೆಂಕಟಪ್ಪಯ್ಯ ಶ್ರೇಷ್ಠಿ ಮತ್ತು ನರಸಿಂಹ ವರ್ಮರು ಕಾರಕರು. ಆದ್ದರಿಂದ ನೀನಾಗಲಿ, ನನ್ನ ತಂದೆ ಆಗಲೀ ವೆಂಕಟಪ್ಪಯ್ಯ ಶ್ರೇಷ್ಠಿ ಮತ್ತು ನರಸಿಂಹ ವರ್ಮದಿಂದ, ಧನ, ಮತ್ತಾವುದೋ ಸಹಾಯ ಪಡೆದರೇ ಅದು ದಾನ ಆಗಲಾರದು. ಮಿಗಿಲಾಗಿ, ಆ

ರೀತಿ ಸಹಾಯ ಪಡೆಯದೇ ಇರುವುದೇ ದೈವ ದ್ರೋಹ ಸಹಾ ಆಗುವುದು. ಅಂತಹ ಸಹಾಯ ಪರಮೇಶ್ವರ ಅನುಗ್ರಹವೆಂದು ಭಾವಿಸಬೇಕು. ನನಗೆ ಜನುಮವಿತ್ತ ಸುಮತಿ ಮಹಾರಾಣಿ, ಮಲ್ಲಾದಿಗಳಿಗೇ ಅಲ್ಲ, ವೆಂಕಟಪ್ಪಯ್ಯ ಶ್ರೇಷ್ಠಿಯ, ವತ್ಸವಾಯಿಯರ ಕುಟುಂಬಕ್ಕೂ ಸಹಾ ಮಗಳೇ. ಇದು ನನ್ನ ಶಾಸನ'' ಎಂದರು. ಶ್ರೀಪಾದರು, ಈ ಮಾತುಗಳನ್ನು ನುಡಿಯುವ ಸಮಯ, ಅಪ್ಪಲರಾಜ ಶರ್ಮರು, ಸುಮತಿ ಮಹಾರಾಣಿ ಅಲ್ಲಿಯೇ ಇದ್ದರು. ವೆಂಕಟಪ್ಪಯ್ಯ ಶ್ರೇಷ್ಠಿ ಮತ್ತು ನರಸಿಂಹ ವರ್ಮ ಸಹಾ ಅಲ್ಲಿಯೇ ಇದ್ದರು. ಆಗ ಶ್ರೀಪಾದರು ಹೀಗೆಂದರು, **"ನನ್ನ ಅನುಜ್ಞೆ ಇಲ್ಲದೇ ಬಾಪನಾರ್ಯರಂತಹ ಮಹಾತಪಸ್ವಿ ಸಹಾ ಅಗ್ನಿ ಸೃಷ್ಟಿ ಮಾಡಲಾರ. ನನ್ನ ತಂದೆ ಸಹಾ ಅಗ್ನಿ ಕುಂಡದಲ್ಲಿಳಿದರೇ ಅಗ್ನಿ ಹೋತ್ರನು ತನ್ನ ಬಿಸಿ ತೋರಿಸುವನು! ನನ್ನ ಸಂಕಲ್ಪಗಳಲ್ಲಿ ಬದಲಾವಣೆ ಬಂದರೆ ವೆಂಕಟಪ್ಪಯ್ಯ ಶ್ರೇಷ್ಠಿ ಸಹಾ ಬಡವನಾಗುವನು. ಹುತ್ತಗಳಷ್ಟು ಜಮೀನು ಇದ್ದರೂ ನರಸಿಂಹ ವರ್ಮ ನಿಲ್ಲಲೂ ನೆರಳಿಲ್ಲದವನಾಗುವನು! ನೀವೆಲ್ಲರೂ ನನ್ನ ಸಂಕಲ್ಪವನ್ನನುಸರಿಸಿಯೇ ನಿಮ್ಮ ಸ್ಥಾನಗಳಲ್ಲಿದ್ದೀರ. ನಾನು ಭಿಕ್ಷೆ ಬೇಡುವವನನ್ನು ಮಹಾರಾಜನಾಗಿ ಮಾಡಬಲ್ಲೆ. ಮಹಾರಾಜನನ್ನು ಭಿಕ್ಷುಕನನ್ನಾಗಿ ಬದಲಾಯಿಸಬಲ್ಲೆ. ನನ್ನನ್ನು ನಂಬಿದ ನನ್ನ ಭಕ್ತರಿಗೆ ಅವರೇನು ಬಯಸಿದರೂ ಕೊಡಬಲ್ಲೆ. ಆದರೇ ಕೊಡುವಮುನ್ನ ಆ ಉನ್ನತ ಶಕ್ತಿಯನ್ನಾತ ಉಳಿಸುಕೊಳ್ಳಬಲ್ಲನಾ? ಅವನ ಶಕ್ತಿ ಲೋಕೋಪಯೋಗಕ್ಕೆ ಉಪಯೋಗಿಸುವನಾ? ಇಲ್ಲವಾ? ಎನ್ನುವುದನ್ನು ಪರೀಕ್ಷಿಸುತ್ತೇನೆ. ನನಗೆ ಬೇಕೆನ್ನಿಸಿದರೇ ನೆಲವನ್ನು ಅಂಬರವಾಗಿ, ಅಂಬರವನ್ನೇ ನೆಲವಾಗಿ ಬದಲಾಯಿಸಬಲ್ಲೆ.** ಬಾಪನಾರ್ಯರು ಕೃತ ಯುಗದಲ್ಲಿ 'ಲಾಬಾಧ' ಮಹರ್ಷಿಯಾಗಿದ್ದಾಗ, ಅವರಿಗೆ ಮಂಗಳ ಮಹರ್ಷಿ ಎಂಬ ಒಬ್ಬ ಶಿಷ್ಯನಿದ್ದನು. ಮಂಗಳ ಮಹರ್ಷಿ ದರ್ಬೆ ಕುಯ್ಯುತ್ತಿರುವಾಗ ಕೈಯಿಂದ ರಕ್ತ ಬರಲಾರಂಭಿಸಿತು. ಆ ರಕ್ತ ಗಡ್ಡೆ ಕಟ್ಟಿ, ಸುಗಂಧ ಭರಿತವಾದ ವಿಭೂತಿಯಾಗಿ ಮಾರ್ಪಟ್ಟಿತು. ಎಲಾ! ನಾನೆಷ್ಟು ದೊಡ್ಡ ಸಿದ್ಧಿಯನ್ನು ಹೊಂದಿರುವೆ? ಎಂದು ಆತನ ಮನದಲ್ಲಿ ಕೊಬ್ಬು ಬಂದಿತು. ಆಗ ಪರಶಿವ ಪ್ರತ್ಯಕ್ಷವಾಗಿ ತನ್ನ ಕೈಯನ್ನು ಆಡಿಸಲೂ ಹಿಮತ್ಪರ್ವತದಿಂದ ಹಿಮದ ರಾಶಿಯೇ ಉರಳಿದಂತೆ ವಿಭೂತಿ ಸುರಿಯಿತು. ಶ್ರೀ ಪರಮೇಶ್ವರನು, 'ತ್ರೇತಾಯುಗದಲ್ಲಿ ಭರದ್ವಾಜನು, ಪೀಠಿಕಾಪುರದಲ್ಲಿ ಸವಿತೃಕಾರಕ ಚಯನ ಮಾಡುವನು. ಆ ಮಹಾಚಯನದಲ್ಲಿ ಆವಿರ್ಭವಿಸಿದ ವಿಭೂತಿಯ ಲವಲೇಶವನ್ನು ನಾನೀಗ ತೋರಿಸಿದೆ' ಎಂದರು. ಆಗ ಮಂಗಳ ಮಹರ್ಷಿಯ ಗರ್ವ ತೊಲಗಿತು. ಶ್ರೋತೃಗಳೆಲ್ಲರೂ ಮಾತಿಲ್ಲದೇ ಶ್ರೀಪಾದ ಶ್ರೀವಲ್ಲಭರು ಹೇಳುವುದನ್ನೇ ಕೇಳುತ್ತಿದ್ದರು. ಶ್ರೀಪಾದರು ಮುಂದುವರೆಸಿದರು, **"ಈ ಪೀಠಿಕಾಪುರ ಅಗ್ರಹಾರದಲ್ಲಿ ಹೆಜ್ಜೆ ಇಡುವುದು ಎಷ್ಟೋ ಜನುಮದ ಪುಣ್ಯಫಲ.** ನನ್ನ ಈ ಅವತಾರದ ಸಮಯದಲ್ಲಿ ನೀವು ನನ್ನ ಜೊತೆ ಇರುವುದು ಹೇಳಲಾರದ ವಿಶೇಷ. **ನನ್ನ ಶಕ್ತಿ ಅನುಭವಕ್ಕೆ ಬರಬೇಕೆಂದರೇ, ಮೊದಲು ನೀವು ತೀವ್ರ ಸಾಧಕರಾಗಬೇಕು. ಆಗ ಮಾತ್ರವೇ ನನ್ನ ಕರುಣೆ, ಶಕ್ತಿ, ವಾತ್ಸಲ್ಯ, ರಕ್ಷಣೆ ಮತ್ತು ಪಾಪ ವಿಮೋಚನೆ ನಿಮ್ಮ ಅನುಭವಕ್ಕೆ ಬರುವುದು. ನನ್ನ ಜನ್ಮಭೂಮಿಯಾದ ಈ ಬಾಪನಾರ್ಯರ ಮನೆಯಲ್ಲಿ, ನನ್ನ ಪಾದುಕೆಗಳು ಪ್ರತಿಷ್ಠಿಸಲಾಗುವವು. ನಾನು ಪೀಠಿಕಾಪುರದಲ್ಲಿ ಪ್ರಾತಃ ಸಮಯ ಮಾತೃಮೂರ್ತಿ ಸುಮತಿ ಮಡಿಲಿನಲ್ಲಿ ಹಾಲು ಕುಡಿಯುವೆನು. ಮಧ್ಯಾಹ್ನ ಸಮಯ ತಾಯಿ ಸುಮತಿ ನನಗೆ ಪ್ರೀತಿಯ ಉಂಡೆಗಳು ಮಾಡಿ, ಅನ್ನ ತಿನ್ನಿಸುವರು. ರಾತ್ರಿ ಹೊತ್ತು ಪೀಠಿಕಾಪುರದಲ್ಲಿ ತಾಯಿ ಸುಮತಿ ಮಡಿಲಿನಲ್ಲಿ ಕುಳಿತು ಗೋಧಿಯ ಹಲ್ವಾ ತಿನ್ನುವೆ. ನಾನು ಪೀಠಿಕಾಪುರದಂದು ಇದ್ದ ಹಾಗೆಯೇ ಗಂಧರ್ವ ಪುರದಲ್ಲಿ ಶ್ರೀ ನೃಸಿಂಹ ಸರಸ್ವತಿ ರೂಪದಲ್ಲಿರುವೆನು. ಮಧ್ಯಾಹ್ನ ತಪ್ಪದೇ ಗಂಧರ್ವ ಪುರದಲ್ಲಿ ಭಿಕ್ಷೆ ನೆರವೇರಿಸುವೆನು. ಅಂತರದೃಷ್ಟಿ ಉಳ್ಳವರಿಗೆ, ಇವೆಲ್ಲಾ ಸ್ಪಷ್ಟವಾಗಿ ಕಾಣುವವು."**

**ಮಹಾಪುರುಷರು, ಮಹಾಯೋಗಿಗಳು, ಎಲ್ಲಾ ದೇಶದವರೂ ಇರುವೆಗಳ ಹುತ್ತದಂತೆ ಲಕ್ಷಗಟ್ಟಲೇ ನನ್ನ ದರ್ಶನಕ್ಕಾಗಿ ನನ್ನ ದರ್ಬಾರಿಗೆ ಬರುವರು. ಅವರು, "ದತ್ತ ದಿಗಂಬರ, ದತ್ತ ದಿಗಂಬರ, ಶ್ರೀಪಾದವಲ್ಲಭ ದತ್ತ ದಿಗಂಬರ! ನೃಸಿಂಹ ಸರಸ್ವತಿ ದತ್ತ ದಿಗಂಬರ!" ಎನ್ನುತ್ತಾ ತನ್ಮಯದಿಂದ ನಾಟ್ಯ ಮಾಡುವರು. ನಾನು ಕಾಲಪುರುಷನಿಗೆ ಅನುಮತಿ ಕೊಟ್ಟ ಕ್ಷಣವೇ, ಆಗಬೇಕಾದ ಕಾರ್ಯಗಳು ತಕ್ಷಣ ನಡೆಯುವವು. ನನ್ನ ಹೆಸರಿನಲ್ಲಿ ಮಹಾಸಂಸ್ಥಾನ ಒಂದು ಸ್ಥಾಪಿಸಲಾಗುವುದು. ನನ್ನ ಪ್ರಭಾವ ಬೆಳೆಯುತ್ತಿದ್ದಂತೆ, ಈ ಪೀಠಾಪುರ ಕ್ಷೇತ್ರದಲ್ಲಿ ಗೋವು ಕಾಲಿಡದಷ್ಟು ಜಮೀನು ಸಹ ಕೊಳ್ಳಲೂ ಅವಕಾಶವಿರುವುದಿಲ್ಲ. ನಾನು ನನ್ನವರೆಂದವರನ್ನು ಬೇಕಾದರೇ ಜುಟ್ಟು ಹಿಡಿದು ಎಳೆಕೊಂಡು ಬಂದು ಪೀಠಿಕಾಪುರದಲ್ಲಿ ಹಾಕುವೆನು. ಎಷ್ಟು ಧನವಂತನಾದರೂ, ಎಂತಹ ಯೋಗಿ ಆದರೂ, ನನ್ನ ಸಂಕಲ್ಪ ಇಲ್ಲದೇ, ನನ್ನ ಪೀಠಿಕಾಪುರ ಸಂಸ್ಥಾನಕ್ಕೆ ಬರಲಾರರು. ಇದು ಸತ್ಯ. ನನ್ನ ನಿಜ ತತ್ತ್ವವನ್ನು ಅರಿತು ಆನಂದಿಸಿರಿ. ಈ ಸಮಯ ಪುನಃಬಾರದು. ಮಾನವನು ಯೋಚಿಸಬಲ್ಲ ಎಲ್ಲಾ ದೇವತಾಶಕ್ತಿಗಳು, ನನ್ನ ಸ್ವರೂಪದಲ್ಲೇ ಇವೆ. "ನನಗೆ ಯಾರಾದರು ದಕ್ಷಿಣೆ ಅರ್ಪಿಸಿದರೇ, ನಾನು ಅದನ್ನ ನೂರರಷ್ಟು ಮಾಡಿ ಸಮಯ ಬಂದಾಗ ಅವರಿಗೆ ಅನುಗ್ರಹಿಸುವೆನು. ಧರ್ಮಬದ್ಧರಾಗಿ ಧನವನ್ನು ಸಂಪಾದಿಸಬೇಕು. ಧರ್ಮಕ್ಕೆ ವಿರುದ್ಧವಿಲ್ಲದೇ ಬಯಕೆಗಳೂ ಅನುಭವಿಸಬಹುದು. ಸತ್ಕರ್ಮಗಳು ಮಾಡಿದರೇ ಮೋಹ ನಾಶಗೊಳ್ಳುವುದು. ಮೋಹ ಕ್ಷಯದಿಂದ ಮೋಕ್ಷ ಪ್ರಾಪ್ತಿಯಾಗುವುದು.**

ಮಗು, ಶಂಕರ ಭಟ್ಟು! ಕೇಳಿದೆಯಾ ಶ್ರೀಪಾದರ ಅಮೃತ ವಾಕ್ಯಗಳು? ಈ ದಿವ್ಯೋಪದೇಶದ ನಂತರ ಮಾರನೇ ದಿನ ನರಸಿಂಹ ವರ್ಮರು ಶ್ರೀಗಳನ್ನು ಅವರ ಕುದುರೆ ಗಾಡಿಯಲ್ಲಿ ಜಮೀನು ತೋರಿಸಲು ಕರೆದುಕೊಂಡು ಹೋದರು, ಅವರ ಭೂಮಿಗಳು ಅನೇಕಾನೇಕ. ಅವುಗಳಲ್ಲಿ ವಿವಿಧ ಬೆಳೆ ಆಗುತ್ತಿತ್ತೇ ಹೊರತು, ಹೀರೇಕಾಯಿ ಬೆಳೆ ಸರಿಯಾಗಿ ಆಗುತ್ತಿರಲಿಲ್ಲ! ಹುವ್ವು ಬಿಟ್ಟನಂತರವೇ ಎಳೇ ಕಾಯಿ ನಾಶವಾಗುತ್ತಿತ್ತು. ಒಂದೆರೆಡು ದೊಡ್ಡ ಕಾಯಿ ಆದರೂ, ಅವು ವಿಪರೀತ ಕಹಿ ಇರುತ್ತಿತ್ತು. ಈ ವಿಷಯ ಶ್ರೀ ಪಾದರಿಗೆ, ನರಸಿಂಹ ವರ್ಮ ಬೇಡಿಕೆನಿತ್ತರು. ಶ್ರೀಪಾದರು ಪ್ರಸನ್ನ ಮುಖರಾಗಿ ''ನಮ್ಮನೆಯವರಿಗೆಲ್ಲಾ ಹೀರೇಕಾಯಿ ತವ್ವೆ ಅಂದರೇ ಬಹಳ ಇಷ್ಟ.ಆದ್ದರಿಂದ ನನಗೂ ಇಷ್ಟ! ಆದರೇ ಹಿಂದಿನ ಕಾಲದಲ್ಲಿ ಒಬ್ಬ ದತ್ತೋಪಾಸಕ ಈ ಭೂಮಿಯಲ್ಲಿ ತಪಸ್ಸಾಚರಿಸಿದನು. ಈ ಪವಿತ್ರಭೂಮಿ ಸಾಕ್ಷಾತ್ ದತ್ತನಾದ ನನ್ನ ಪಾದಸ್ಪರ್ಶಕ್ಕೆ ಕಾತುರದಿಂದ ಕಾದಿದೆ. ಅದರ ಆತುರತೆಯನ್ನು ನಿನಗೆ ಅದರ ಭಾಷೆಯಲ್ಲಿ ಹೀಗೆ ತಿಳಿಸುತ್ತಿದ್ದೇನೆ! ತಪ್ಪದೇ ಈ ಭೂಮಾತೆಯ ಕೋರಿಕೆ ತೀರಿಸುವೆನು. ಈ ನೆಲಕ್ಕೆ ನನ್ನ ಸ್ಪರ್ಶದ ನಂತರ ಇದರ ತತ್ತ್ವದಲ್ಲಿ ಬದಲಾವಣೆ ಇರುವುದು! ಒಳ್ಳೆ ರುಚಿಯುಳ್ಳ ಹೀರೆಕಾಯಿಗಳನ್ನು ಈ ಮಾತೆ ನಮಗೆ ಕೊಡುವಳು. ತಾತಾ! ನೀನು ನಿರ್ಭಯದಿಂದ ನಮ್ಮನೆಗೆ ಇಲ್ಲಿ ಬೆಳೆದ ಹೀರೆಕಾಯಿ ಕಳುಹಿಸು. ಮನೆಯವರು ಸೇರಿ, ನಾನೂ ಆ ಊಟ ಮಾಡುವೆನು'' ಎಂದು ನುಡಿದರು.

ಮಗು, ಶಂಕರ ಭಟ್ಟು! ವಿಚಿತ್ರವೇ ನಡೆದುಹೋಯಿತು. ಆ ದಿನದಿಂದ, ಆ ಭೂಮಿಯಲ್ಲಿ ಹೀರೆಕಾಯಿಯ ಬೆಳೆ ವಿಪರೀತ ಆಗುವುದೇ ಅಲ್ಲದೇ, ಒಳ್ಳೆಯ ರುಚಿ ಸಹಾ ಹೊಂದಿತ್ತು.

ಶ್ರೀಪಾದರು, ನರಸಿಂಹ ವರ್ಮರ ಜೊತೆ, ಕುದರೇ ಗಾಡಿಯಲ್ಲಿಂದ ಇಳಿದು, ಆ ಜಮೀನುಗಳಲ್ಲಿ ಕೆಲ ಸಮಯ ವಿಹರಿಸಿದರು. ಇಷ್ಟರಲ್ಲಿ ಕೆಲವು ಚೆಂಚು ಯುವತಿ ಯುವಕರು ಆ ಪ್ರಾಂತಕ್ಕೆ ಬಂದರು. ಶ್ರೀಪಾದರಿಗೆ ನಮಸ್ಕರಿಸಿದರು. ಆಗ ಶ್ರೀಗಳ

ದಿವ್ಯಮುಖ ಕಂಡಲ್ಲಿ, ದಿವ್ಯ ಬೆಳಕಿನ ವಲಯ ಏರ್ಪಟ್ಟಿತು. ಶ್ರೀಪಾದರು ಹೀಗೆಂದರು, ''ತಾತ! ಈ ಚೆಂಚುಗಳೆಲ್ಲರೂ ನರಸಿಂಹಾವತಾರಕ್ಕೆ ಸಂಬಂಧಿಸಿದವರು. ಇವರು ಆ ಮಹಾಲಕ್ಷ್ಮಿಯನ್ನು ಅವರ ಮನೆ ಮಗಳಂತೆ ಭಾವಿಸಿ ಪೂಜಿಸುವರು. ನೀನು ನರಸಿಂಹನ ಭಕ್ತನಲ್ಲವೇ'' ನೀನು ಇವರನ್ನು ಆಶ್ರಯಿಸಿದರೇ, ನೃಸಿಂಹ ದೇವರನ್ನು ದರ್ಶಿಸಬಹುದು.''

ಶ್ರೀಪಾದರು ತಮ್ಮನ್ನು ಆಟವಾಡಸಲೇ ಹೀಗೆ ನುಡಿದರೆಂದು ನರಸಿಂಹ ವರ್ಮ ಯೋಚಿಸಿದರು. ಆವರು ಹೀಗೆ ನುಡಿದರು, ''ಎಲೈ ಚೆಂಚುಗಳಿರಾ! ನೀವು ನರಸಿಂಹ ದೇವರನ್ನು ಕಂಡಿದ್ದೀರ? ಅವರೆಲ್ಲಿರುವರೋ ಹೇಳುವಿರಾ?'' ಅವರು ಹೀಗೆ ಉತ್ತರಿಸಿದರು, ''ಅದೇನಂತಹ ದೊಡ್ಡ ಭಾಗ್ಯ? ಸಿಂಹದ ತಲೆ, ಮನುಷ್ಯ ಶರೀರದವನು. ಹುಚ್ಚೆದ್ದು, ಈ ಕಾಡಲ್ಲೇ ತಿರುಗಾಡುತ್ತಿದ್ದಾನೆ. ಅವನು ನನ್ನ ಸಹೋದರಿ ಚೆಂಚುಲಕ್ಷ್ಮಿ ಮೇಲೆ ಆಸೆ ಬೆಳೆಸಿಕೊಂಡಿರುವನು. ನಮ್ಮ ಮಗು ಸಹಾ ಅವನನ್ನಿಷ್ಟಪಟ್ಟಿದೆ. ಅವರ ವಿವಾಹವೂ ನಾವು ಮಾಡಿದ್ದೇವೆ. ನೀವು ಬೇಕೆಂದರೆ, ಚೆಂಚುಲಕ್ಷ್ಮಿ ಮತ್ತು ನೃಸಿಂಹನನ್ನು ಸಹಾ ನಿಮ್ಮ ಮುಂದೆ ನಿಲ್ಲಿಸಬಲ್ಲೆವು.

ಹಾಗೆ ನುಡಿದು, ಆ ಚೆಂಚು ಯುವತಿಯರು ಬೇಗ ಬೇಗನೇ ಓಡಿಹೋದರು. ನರಸಿಂಹ ವರ್ಮರು ಆಶ್ಚರ್ಯದಿಂದ ನೋಡುತ್ತಿದ್ದರು. ಇಷ್ಟರಲ್ಲಿ ತಮ್ಮ ಜಮೀನುಗಳಿಂದ ಹೊರಟು ಬರುತ್ತಿರುವ ಒಂದು ಯುವತಿ ಯುವಕನನ್ನು ಕಂಡರು. ನನ್ನ ಅದೃಷ್ಟಕ್ಕೆ ನಾನು ಸಹಾ ಅದೇ ದಾರಿಯಲ್ಲಿ ಹೋಗುತ್ತಿದ್ದೆ. ಶ್ರೀಪಾದರು ನನ್ನನ್ನು ಅವರ ಬಳಿ ಕರೆದರು. ''ಸುಬ್ಬಯ್ಯ ಶ್ರೇಷ್ಠಿ! ಅಲ್ಲಿ ಬರುತ್ತಿರುವವರು ಯಾರೆಂದು ತಿಳಿದಿದ್ದೀಯ? ಅವರು ಬಿಲ್ವಮಂಗಳ ಮತ್ತು ಚಿಂತಾಮಣಿ. ಅವರನ್ನು ತರಾಟೆಗೆ ತೆಗೆದುಕೊಳ್ಳೋಣ! ತಮಾಷೆ ನೋಡಬಹುದು'' ಎಂದರು.

ನರಸಿಂಹ ವರ್ಮರಿಗು, ನನಗೂ ಬೆವರು ಸುರಿಯುತ್ತಿತ್ತು. ಅಲ್ಲಿಗೆ ಬಂದದ್ದು ಬಿಲ್ವಮಂಗಳ, ಚಿಂತಾಮಣಿಯೇ! ಸಂದೇಹವಿಲ್ಲ. ಅವರಿಬ್ಬರೂ ಗುರುವಾಯೂರ್ ಕ್ಷೇತ್ರದ ಶ್ರೀಕೃಷ್ಣರ ದರ್ಶನ ನಂತರ, ಭಾಗ್ಯದಿಂದ ಕುರೂರಮ್ಮ ಎಂಬ ಮಹಾಯೋಗಿನಿಯನ್ನು ದರ್ಶಿಸಿದರು. ಆಕೆ, ಅಪ್ರಯತ್ನವಾಗಿ ''ಶ್ರೀಪಾದ ಶ್ರೀವಲ್ಲಭ ದರ್ಶನ ಪ್ರಾಪ್ತಿರಸ್ತು' ಎಂದು ಆಶೀರ್ವದಿಸಿದರು. ಆ ಆಶೀರ್ವಾದ ಪ್ರಭಾವದಿಂದ ಇವರಲ್ಲಿ ಭಕ್ತಿ ವೈರಾಗ್ಯ ಬೀಜಗಳು ಬಿದ್ದಿವೆ. ಮಂಗಳಗಿರಿಯಲ್ಲಿನ ನೃಸಿಂಹರನ್ನು ದರ್ಶಿಸಿ, ಪೀಠಿಕಾಪುರಕ್ಕೆ ಶ್ರೀಪಾದರ ದರ್ಶನಾರ್ಥ ಬರುತ್ತಿರುವರು. ಶತವೃದ್ಧಳಾದ ಆ ಮಹಾತಾಯಿ, ಮಹಾಯೋಗಿನಿಯ ಆಶೀರ್ವಚನ ಪ್ರಭಾವದಿಂದ ಅವರಿಗೆ ಶ್ರೀಪಾದರ ದರ್ಶನ ಇಲ್ಲಿಯೇ ಲಭಿಸಿದೆ! ಇದು ಆಶ್ಚರ್ಯಕರವಾದ ವಿಷಯ. ಅವರಿಬ್ಬರೂ, ಮಂಗಳಗಿರಿಯಲ್ಲಿ ಹೀಗೆ ಪ್ರಾರ್ಥಿಸಿದರು, ''ಮಹಾಯೋಗಿನಿ ಕುರೂರಮ್ಮ ಆಶೀರ್ವಾದ ಫಲಿಸಿ, ದತ್ತಾವತಾರಿ ಶ್ರೀಪಾದರ ದರ್ಶನ ನಮಗೆ ಆದಲ್ಲಿ, ನೃಸಿಂಹ ಸ್ವಾಮಿಯಾದ ನಿನ್ನ ದರ್ಶನ ಭೌತಿಕವಾಗಿ ಆಗಲೆಂದು ಬಯಸುತ್ತಿದ್ದೇವೆ.

ಧಗಧಗಿಸುವ ಬೆಂಕಿಯ ಉರಿ ಮೇಲೇರುತ್ತಿರಲು, ಬಿಲ್ವಮಂಗಳನು ಮತ್ತು ಚಿಂತಾಮಣಿಯು, ತಮ್ಮ ದೇಹಕ್ಕೆ ದಹನ ಕಾರ್ಯ ನಡೆಯುತ್ತಿರುವಂತೆ ಅನುಭವಿಸಿದರು. ಸ್ವಲ್ಪ ಹೊತ್ತಿಗೆ ಅವರವರ ಶರೀರಗಳಿಂದಲೇ ಕಪ್ಪು ಆಕಾರಗಳು ಹೊರ ಬಂದು, ಆ ಬೆಂಕಿಯಲ್ಲಿ ಬಿದ್ದು ಆಹುತಿಯಾದ ಮೇಲೆ ಅವರಿಗೆ ಎಚ್ಚರ ಬಂದಿತು. ಇಷ್ಟರಲ್ಲಿ ಚೆಂಚುಗಳು, ತಮ್ಮ ಸೋದರಿ ಚೆಂಚುಲಕ್ಷ್ಮಿ ಜೊತೆ ಅಲ್ಲಿಗೆ ಬಂದರು. ನೃಸಿಂಹ ದೇವರ ಕೈಕಾಲು ಬಂಧಿಸಿ, ಚೆಂಚುಗಳು ನೃಸಿಂಹ ದೇವರನ್ನು ಶ್ರೀಪಾದರ ಮುಂದೆ ನಿಲ್ಲಿಸಿದರು.

ಇಂತಹ ಚಿತ್ರವಿಚಿತ್ರಗಳು ಯಾವ ಯುಗದಲ್ಲೂ ನಡೆದಿರಲಿಲ್ಲ. ಶ್ರೀಪಾದರ ಅವತಾರ ಕಾರ್ಯಕ್ರಮಗಳಲ್ಲಿ ಲೀಲೆಗಳು, ಚಮತ್ಕಾರಗಳು ಅದೆಷ್ಟೋ. ಊಹಾತೀತಗಳು. ಶ್ರೀಪಾದರು ಹೀಗೆ ಪ್ರಶ್ನಿಸಿದರು. ''ಪೂರ್ವ ಯುಗದ ನೃಸಿಂಹ ದೇವರು ತಾವೇನಾ?

ಈ ಚೆಂಚುಲಕ್ಷ್ಮಿ ನಿನ್ನ ಪತ್ನಿಯೇನಾ? ಹಿರಣ್ಯ ಕಶ್ಯಪನನ್ನು ವಧಿಸಿ ಪ್ರಹ್ಲಾದನನ್ನು ರಕ್ಷಿಸಿದ್ದು ತಾವೇನಾ? "ಅದಕ್ಕೆ ಶ್ರೀನೃಸಿಂಹ ದೇವರು ಹೌದೆಂದು 3 ಬಾರಿ ನುಡಿದರು. ಚೆಂಚುಲಕ್ಷ್ಮಿಯು, ನೃಸಿಂಹ ದೇವರೂ, ಜ್ಯೋತಿ ಸ್ವರೂಪದಲ್ಲಿ ಶ್ರೀಪಾದರಲ್ಲಿ ಪ್ರವೇಶಿಸಿದರು. ಚೆಂಚುರು ಮಾಯವಾದರು. ಬಿಲ್ವಮಂಗಳರು ಮಹಾಭಕ್ತನಾಗಿ, ಬಿಲ್ವಮಂಗಳ ಮಹರ್ಷಿಯಾಗಿ ಮಾರ್ಪಟ್ಟರು. ಚಿಂತಾಮಣಿ ಮಹಾಯೋಗಿನಿಯಾಗಿ ಮಾರ್ಪಟ್ಟಳು. ಚಿತ್ರಾತಿಚಿತ್ರ ಲೀಲೆಗಳು ನಡೆದ ನೃಸಿಂಹ ವರ್ಮರ ಜಮೀನುಗಳಲ್ಲಿ ಒಂದು ಗ್ರಾಮ ಉದ್ಭವಿಸುವುದೆಂದು ಅದನ್ನು 'ಚಿತ್ರವಾಡ' ಎಂದು ಕರೆಯುವರೆಂದು ಶ್ರೀಪಾದರು ನುಡಿದರು. ಅವರು ಸತ್ಯ ಸಂಕಲ್ಪರು, ಸಿದ್ಧಿ ಸಂಕಲ್ಪರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 12

# ಕುಲಶೇಕರ ವೃತ್ತಾಂತ

ಶ್ರೀ ಸುಬ್ಬಯ್ಯ ಶ್ರೇಷ್ಠಿಗಳು, ಎಷ್ಟೋ ಹೊಸ ವಿಷಯಗಳನ್ನು, ಸುಲಭವಾಗಿ ಅರ್ಥ ಮಾಡಿಕೊಳ್ಳುವ ಹಾಗೆ ನನಗೆ ತಿಳಿಸಲು, ನನ್ನಲ್ಲಿ ಅರ್ಥ ಮಾಡಿಕೊಂಡಷ್ಟೂ ಆತ್ಮವಿಶ್ವಾಸ ಬೆಳೆಯುತ್ತಿತ್ತು. ಸುಬ್ಬಯ್ಯ ಶ್ರೇಷ್ಠಿ ಹೀಗೆ ನುಡಿದರು, ''ಶ್ರೀಪಾದ ಶ್ರೀವಲ್ಲಭರು, ಸಾಕ್ಷಾತ್ತು ಶ್ರೀ ವೇಂಕಟೇಶ್ವರ ಸ್ವಾಮಿಯೇ! ಕಲಿಯುಗಾಂತ್ಯಕ್ಕೆ, ಶ್ರೀಪಾದರೇ ಕಲ್ಕಿ ಅವತಾರ ತಾಳಿ ಬರುವರು. ಸಾಧಾರಣವಾಗಿ, ಕಲಿಯುಗ 4,32,000 ವರುಷಗಳೆಂದು, ಬ್ರಾಹ್ಮಣರು ನುಡಿಯುವರು, ಆದರೆ ಸಾಂದ್ರಸಿಂದು ವೇದವನ್ನನುಸರಿಸಿ, ಕಲಿಯುಗ 5000 ವರುಷಗಳಾದನಂತರ, ಸಾಮಾನ್ಯ ಪ್ರಳಯ ಸಂಭವಿಸಿ, ಸತ್ಯಯುಗ ಸ್ಥಾಪಿಸಲಾಗುವುದು.'' ನನ್ನ ಆಶ್ಚರ್ಯಕ್ಕೆ ಅಂತ್ಯವಿಲ್ಲ ನಾನು ಬ್ರಾಹ್ಮಣರಿಂದ ಕೇಳಿದ್ದಕ್ಕೆ ವ್ಯತಿರಿಕ್ತವಾಗಿ ಶ್ರೀ ಶ್ರೇಷ್ಠಿಗಳಿಂದ ಹೇಳಲ್ಪಟ್ಟಿತು!

### ಶ್ವಾಸಕ್ಕೂ ಆಯುಷ್ಯಕ್ಕೂ ಇರುವ ಸಂಬಂಧ

''ಮಗು, ಶಂಕರ ಭಟ್ಟು! ಕಲಿಯುಗದಲ್ಲಿ ಕಲಿ ಅಂತರ್ದಶೆ, 5000 ವರುಷಗಳಿಗೆ ಕೊನೆಗೊಳ್ಳುವುದು. ಅನಂತರ ಸ್ವಲ್ಪ ಕಾಲ ಸಂಧಿಕಾಲ. ತದನಂತರ, ಕಲಿಯುಗದಲ್ಲಿ ಸತ್ಯಯುಗ ಅಂತರ್ದಶೆ ಆರಂಭವಾಗುವುದು. ಒಟ್ಟು 4,32,000 ವರುಷಗಳು, ಕಲಿಯುಗದ ಪ್ರಮಾಣವಾದರೂ, ಅದರಲ್ಲಿ ಅಂತರ್ದಶೆಗಳು, ಸೂಕ್ಷ್ಮದಶೆಗಳು, ವಿದಶೆಗಳು ಮುಂತಾದವು ಇರುವವು. ಇದು ಯೋಗಶಾಸ್ತ್ರ ಬಲ್ಲವರಿಗೆ ಸುಲಭಗ್ರಾಹ್ಯ. ಬ್ರಹ್ಮದೇವರು, ಒಬ್ಬನಿಗೆ 120 ವರುಷಗಳ ಆಯಸ್ಸು ಖರಾರು ಮಾಡಿದ್ದಲ್ಲಿ, ಭೌತಿಕವಾಗಿ ಅವನು 120 ವರುಷ ಜೀವಿಸುವೆನೆಂದು ಅಲ್ಲ. 120 ವರುಷಗಳಲ್ಲಿ ಎಷ್ಟು ಬಾರಿ ಶ್ವಾಸ ತೆಗೆದು ಬಿಡುವುದು ಸಾಧಾರಣ ಸ್ಥಿತಿಯಲ್ಲಿ ಸಾಧ್ಯವೋ, ಅಷ್ಟು ಉಛ್ವಾಸ ನಿಶ್ವಾಸದ ಕಾಲ ಕೊಡಲಾಗಿದೆಂದರ್ಥ. ಮನಸ್ ಚಂಚಲತ್ವ, ಕೋಪ, ವೇಗವಾಗಿ ಹಾರಾಡುವುದು, ನಿತ್ಯವೂ ದಿಗಿಲಿನಿಂದ ಜೀವನ, ಕೆಟ್ಟ ಹವ್ಯಾಸ ಉಳ್ಳವರು, ತಮ್ಮ ತಮ್ಮ ಶ್ವಾಸಗಳನ್ನು ಶೀಘ್ರವಾಗಿ ಖರ್ಚು ಮಾಡಿಕೊಳ್ಳುವರು. ಎಲ್ಲದಕ್ಕಿಂತ ಕಡಿಮೆ ಉಛ್ವಾಸ ನಿಶ್ವಾಸಗಳನ್ನು ತೆಗೆದುಕೊಳ್ಳುವ ಆಮೆ 300 ವರುಷ ಜೀವಿಸುತ್ತದೆ. ಹೆಚ್ಚು ಚಂಚಲ ಸ್ವಭಾವವುಳ್ಳ ಮಂಗ, ಶೀಘ್ರಕಾಲಕ್ಕೆ ಸಾಯುತ್ತದೆ. ಶ್ವಾಸಕಾರ್ಯಕ್ಕೆ ಶರೀರ ಅವಯವ ನಿರ್ಮಾಣ ಸಹಿತಾ ಸರಿಯಾಗಿರಬೇಕು. ಯೋಗಿಗಳು ಗಾಳಿಯನ್ನು ಅಧಿಕ ಮಾತ್ರದಲ್ಲಿ ಒಳಕ್ಕೆ ತುಂಬಿ ಗಾಳಿ ಶರೀರಾಂತರ್ಭಾಗಗಳಲ್ಲೇ ಓಡಾಡುವಂತೆ ಮಾಡುವರು. ಇದರಿಂದ ಅವೆಷ್ಟೋ ಶ್ವಾಸಗಳು ಉಳಿದು, ಅವರು ಅಧಿಕ ಕಾಲ ಬಾಳುತ್ತಿರುವರು. ಮಾನವ ಶರೀರ ಜೀವಾಣುಗಳು, ಪರಿಣಾಮ ಕ್ರಮಕ್ಕೆ ಒಳಗಾಗುತ್ತಿವೆ.''

### ಶ್ರೀಪಾದ ಚರಿತಾಮೃತ ಪಾರಾಯಣ ಫಲಿತ

10 ವರುಷಗಳ ಹಿಂದಿನ ಶರೀರ ಭಾಗಗಳು, ಇಂದಿನ ಭಾಗಗಳಿಗೆ ಸಮವಲ್ಲ. ಹಳೆಯ ಜೀವಾಣುಗಳ ಸ್ಥಾನದಲ್ಲಿ, ಹೊಸ ಜೀವಾಣುಗಳು ಹುಟ್ಟುತ್ತಿವೆ. ಹೊಸ ಶರೀರ ಭಾಗಗಳು ಸಹಾ ಹುಟ್ಟುತ್ತಿವೆ. ಹಾಗಿಯೇ ಪ್ರಾಣಶಕ್ತಿ ಸಹಾ ಬಹಳಷ್ಟು ಬದಲಾವಣೆಗೆ ಒಳಗೊಳ್ಳುತ್ತಿದೆ. ಜೀವನದಾಯಕವಾದ ಹೊಸ ಪ್ರಾಣಶಕ್ತಿ ಹುಟ್ಟುತ್ತಿರುವುದು. ಖಾಯಿಲೆ ಬಿದ್ದ ಹಳೆಯ ಪ್ರಾಣಶಕ್ತಿ

ನಶಿಸುತ್ತಿರುವುದು. ಹಾಗಿಯೇ ಮಾನಸಿಕ ಶಕ್ತಿ ಸಹಾ ಅನೇಕ ಬದಲಾವಣೆಗಳನ್ನು ಹೊಂದುತ್ತಿದೆ. ಹಳೇ ಭಾವಗಳು ನಶಿಸಿ, ನವೀನ ಭಾವೋತ್ಪನ್ನವಾಗುತ್ತಿದೆ. ನವೀನವಾಗಿ ಹುಟ್ಟಿದ ಈ ಮಾನಸಿಕ ಪದಾರ್ಥ, ದೈವ ಶಕ್ತಿ, ದೈವ ಕೃಪೆಯನ್ನಾಕರ್ಷಿಸುವ ಶಕ್ತಿ ಹೊಂದಿದೆ. ಅದರಿಂದ ಮನಸ್ಸು ಪರಿಶುದ್ಧವಾಗಿ, ಪ್ರಾಣ ಪರಿಶುದ್ಧವಾಗಿ ಅಂತ್ಯಕ್ಕೆ ಶರೀರ ಸಹಾ ಪರಿಶುದ್ಧವಾಗುತ್ತಿದೆ. ಶ್ರೀಪಾದ ಶ್ರೀವಲ್ಲಭ ಚರಿತಾಮೃತವಂತಹ ಗ್ರಂಥಗಳು ಸಾಕ್ಷಾತ್ ಪರಮೇಶ್ವರ ಸ್ವರೂಪ. ಈ ಗ್ರಂಥಗಳ ಪ್ರತಿ ಅಕ್ಷರದಂದೂ ಸಿದ್ಧ ಶಕ್ತಿ, ಯೋಗ ಶಕ್ತಿಗಳು ಅಂತರಂಗಿಕವಾಗಿರುವವು. ಅಂತಹ ಗ್ರಂಥಗಳನ್ನು ಮಾನಸಿಕವಾಗಿ ಆಗಲಿ, ಓದುವಿಕೆದಿಂದಾಗಲಿ ಅಥವಾ ಮನೋವಾಕ್ಕಾಯದಿಂದಾಗಲಿ ಪಠಿಸಿದರೇ ಶ್ರೀಪಾದರ ದಿವ್ಯಮಾನಸ ಚೈತನ್ಯ ಆಕರ್ಷಿಸಲ್ಪಡುವುದು. ಗ್ರಂಥ ಪಾರಾಯಣ ಮಾಡುವ ಭಕ್ತರ ಶಾರೀರಕ, ಮಾನಸಿಕ, ಪ್ರಾಣ ರುಗ್ಮತೆಗಳು, ಕಷ್ಟಗಳಿಗೆ ಸಂಬಂಧಿಸಿದ ಎಲ್ಲಾ ಸ್ಪಂದನೆಗಳೂ ಶ್ರೀಪಾದರ ಮಾನಸಿಕ ಚೈತನ್ಯದಲ್ಲಿ ಸೇರುವವು. ಅಲ್ಲಿ ಅವು ಪರಿಶುದ್ಧಗೊಂಡು, ದಿವ್ಯಾನುಗ್ರಹ ಪೂರಿತವಾದ ಸ್ಪಂದನೆಗಳಿಂದ, ಪುನಃ ಸಾಧಕನನ್ನು ಸೇರುವವು. ಅಂತಹ ಪರಿಸ್ಥಿತಿಯಲ್ಲಿ ಸಾಧಕನಿಗೆ ಇಹಪರ ಸುಖಗಳು ಲಭ್ಯವಾಗುತ್ತಿವೆ.

## ಸತ್ಪುರುಷರಿಗೆ ಅನ್ನದಾನ ಮಾಡಿದರೆ ಸಿಗುವ ಫಲ

ಗ್ರಂಥ ಪಾರಾಯಣಾನಂತರ ಕನಿಷ್ಠ 11 ಜನ ಸತ್ಪುರುಷರಿಗೆ ಊಟ ಇಡುವುದು ಅಥವಾ ಅದಕ್ಕೆ ಸಮವಾದ ಹಣವನ್ನು, ಯಾವುದಾದರು ದತ್ತ ಕ್ಷೇತ್ರದಲ್ಲಿ ವೆಚ್ಚವಾಗುವಂತೆ ಮಾಡದಿದ್ದರೇ, ಪಾರಾಯಣ ಫಲ ಸಂಪೂರ್ತಿ ಲಭಿಸದು. ಸತ್ಪುರುಷರಿಗೆ ಭೋಜನ ಕೊಡುವುದರಿಂದ ಸಾಧಕನಿಗೆ ಆಯಸ್ಸು ಲಭಿಸುವುದು. ಅಂದರೇ ಸಾಧಕನಿಗೆ ಇನ್ನಷ್ಟು ವರುಷಗಳಿಗೆ ಸರಿಬೀಳುವಷ್ಟು ಅನ್ನ ಅಗೋಚರವಾಗಿ ಸಿದ್ಧವಾಗಿದೆ. ಅಷ್ಟೇ ಅಲ್ಲದೇ ಅವರು ಸಂತುಷ್ಟರಾದಲ್ಲಿ ಶಾಂತಿ, ಪುಷ್ಟಿ, ತುಷ್ಟಿ, ಐಶ್ವರ್ಯ ಮುಂತಾದಕ್ಕೆ ಸಂಬಂಧಿಸಿದ ಭೋಗ, ಯೋಗ ಸ್ಪಂದನೆಗಳು ಅಗೋಚರವಾಗಿ ಉದ್ಭವಿಸುವವು. ನಂತರ ಕೆಲಕಾಲಕ್ಕೆ ಆ ಅಗೋಚರದಲ್ಲಿನ ಬೀಜಗಳು ಕಣ್ಮುಂದೆ ಮೊಳಕೆ ಎದ್ದು ಮಹಾ ವೃಕ್ಷಗಳಾಗಿ ಹರ್ಷ ತರುತ್ತವೆ. **ಮಾತೆ ದ್ರೌಪದಿಯಿಂದ ಒಂದು ಅನ್ನದ ಕಾಳನ್ನು ಸ್ವೀಕರಿಸಿದ ಶ್ರೀಕೃಷ್ಣ ಪರಮಾತ್ಮರು ದುರ್ವಾಸ ಮಹರ್ಷಿಗೂ, ಆತನ 10,000 ಶಿಷ್ಯಂದಿರಿಗೂ, ಹೊಟ್ಟೆ ತುಂಬಾ ಊಟ ಅನುಗ್ರಹಿಸಿದನು. ಆದ್ದರಿಂದ ಶ್ರೀ ಗುರುವಿಗೆ ಭಕ್ತಿ ಶ್ರದ್ಧೆಯಿಂದಾ ಸಮರ್ಪಿಸಿದ ಎಲ್ಲವೂ, ಅಗೋಚರದಲ್ಲಿ ಬೀಜದಿಂದ ಚಿಗುರುಸಿ, ಸಾಧಕನಿಗೆ ಬೇಕಾದ ಭೋಗ ಭಾಗ್ಯಗಳು ಪ್ರಸಾದಿಸುವವೆಂದು ತಿಳಿಯಬೇಕು.**

ಒಮ್ಮೆ ಶ್ರೀಕೃಷ್ಣನು, ಸುಧಾಮನು ದರ್ಭೆ ಕೊಯಿದು ತರಲು ಕಾಡಿಗೆ ಹೋದರು. ಶ್ರೀಕೃಷ್ಣನು ಸ್ವಲ್ಪ ಕಾಲ ವಿಶ್ರಾಂತಿ ಪಡೆಯಲು, ಸುಧಾಮನ ಮಡಿಲಲ್ಲಿ ತಂಗಿದನು. ಆಗ ಶ್ರೀಕೃಷ್ಣನಿಗೆ ತಿಳಿಯದೇ ಸುಧಾಮನು, ಆಶ್ರಮದಿಂದ ತಂದುಕೊಂಡಿದ್ದ ಅವಲಕ್ಕಿಯನ್ನು ತಿನ್ನುತ್ತಿದ್ದನು. ಸುಳ್ಳು ನಿದ್ದೆಯಲ್ಲಿದ್ದ ಶ್ರೀಕೃಷ್ಣನು ನಿದ್ದೆಯಿಂದ ಎದ್ದ ಹಾಗೆ ನಟಿಸುತ್ತಾ, "ಸುಧಾಮ! ಹಸಿವಾಗುತ್ತಿದೆ, ಮನೆಯಿಂದ ಹೊರಟಾಗ ಗುರುಪತ್ನಿ ತಿನ್ನಲು ಏನಾದರೂ ಕೊಟ್ಟಿರುವರಾ?" ಎಂದು ಕೇಳಿದನು. ಸುಧಾಮನು "ಇಲ್ಲ" ಎಂದನು. ನೀನು ಏನೋ ಆಗಿಯುವಂತೆ ಅನಿಸುತ್ತಿದೆ" ಎಂದನು ಶ್ರೀಕೃಷ್ಣ. "ಏನೂ ಇಲ್ಲ. ವಿಷ್ಣು ಸಹಸ್ರನಾಮ ಓದಿಕೊಳ್ಳುತ್ತಿದ್ದೇನೆ" ಎಂದ ಗೆಳಿಯ. "ಹಾಗೋ! ನಮ್ಮಿಬ್ಬರಿಗೂ ಅಮ್ಮನವರು ಅವಲಕ್ಕಿ ಕೊಟ್ಟ ಹಾಗೆ, ಅದನ್ನು ನೀನೊಬ್ಬನೇ ತಿನ್ನುತ್ತಿದ್ದಹಾಗೆ ನನಗೆ ಕನಸು ಬಂತು" ಎಂದರು ಶ್ರೀ ಪರಮಾತ್ಮ ಆಗ ಸುಧಾಮ, "ಶ್ರೀಕೃಷ್ಣಾ ಸುಸ್ತುಪಟ್ಟಿದ್ದೀಯವಲ್ಲವೇ! ಕನಸು. ಅದರಲ್ಲೂ ಹಗಲೊತ್ತು. ಆ ಹೊತ್ತಿನ ಕನಸುಗಳು ನಿಷ್ಫಲಗಳು, ಎನ್ನುತ್ತದೆ ಶಾಸ್ತ್ರ" ಎಂದನು. ಕೃಷ್ಣ ನಕ್ಕು ಸುಮ್ಮನಾದನು.

ಕಾಲ ಕಳೆದಂತೆ, ಸುಧಾಮನು ಕುಚೇಲನಾಗಿ ಪರಮ ನಿರ್ಭಾಗ್ಯನಾದ. ತನ್ನ ಕಷ್ಟಗಳನ್ನು ತೀರಿಸೆಂದು ಅದೆಷ್ಟು ಬಾರಿಯೋ ವಿಷ್ಣು ಸಹಸ್ರನಾಮ ಪಠಿಸಿದನು. ಕೊನೆಗೆ ಶ್ರೀಕೃಷ್ಣನಿಗೆ ದಯೆ ಹುಟ್ಟಿ ಕುಚೇಲನಿಂದ ಅವಲಕ್ಕಿಯನ್ನು ಪಡೆದು ಭಕ್ತನಿಗೆ ವಿಶೇಷ ಐಶ್ವರ್ಯ ಪ್ರಸಾದಿಸಿದನು. ತಾನು ದಣಿದಿದ್ದಾಗ ಕುಚೇಲನ ಮಡಿಲಲ್ಲಿ ವಿಶ್ರಮಿಸಿದ ಕಾರಣ, ಕುಚೇಲನನ್ನು ಹಂಸತೂಲಿಕ ಮಂಚದಮೇಲೆ ಮಲಗಿಸಿ ಕಾಲೊತ್ತಿದನು. ಕರ್ಮ ಫಲಪ್ರಾಪ್ತಿ ಎಷ್ಟು ನಿಗೂಢವಾಗಿ ಕೆಲಸ ಮಾಡುವುದೋ ಭಗವಂತ ಇದರಿಂದ ಸೂಚಿಸಿದರು.

## ಮಲ್ಲಯುದ್ಧ ಪ್ರವೀಣನಿಗೆ ಗರ್ವಭಂಗ

ಶ್ರೀಪಾದರು 4 ವರುಷದ ಬಾಲಕನಾಗಿರಲು, ಪೀಠಿಕಾಪುರಕ್ಕೆ ವರ್ಮಕಲ ಎಂಬ ಒಂದು ಮರ್ಮಕಲೆಯನ್ನು ಅರಿತ ಮಲೆಯಾಳ ದೇಶಸ್ಥ ಬಂದನು. ಹೆಸರು ಕುಲಶೇಖರ. ನಮ್ಮ ಶರೀರದ ಆನೇಕ ಭಾಗಗಳನ್ನು ನಿಯಂತ್ರಿಸುವ ಕೆಲ ಜೀವಶಕ್ತಿ ಕೇಂದ್ರಗಳನ್ನು ಮರ್ಮಗಳೆನ್ನುವರು. ಈ ವರ್ಮಗಳ ಮೇಲೆ ಹೊಡೆದಲ್ಲಿ ಅಥವಾ ತಾಕಿದಲ್ಲಿ ಮನುಷ್ಯನನ್ನು ಎಚ್ಚರ ತಪ್ಪಿಸಬಹುದು. ಯಾವುದಾದರೂ ಶರೀರ ಭಾಗ ಕೆಲಸ ಮಾಡದಿರಲೂ, ಅಂಗವೈಕಲ್ಯ ಸಹಾ ಮಾಡಬಹುದು. ಇಂತಹ ಮರ್ಮ ವ್ಯಾಧಿಯಿಂದ ನೋವನುಭವಿಸುತ್ತಿರುವರನ್ನು ರಕ್ಷಿಸಲು ಅಥವಾ ಈ ವ್ಯಾಧಿ ನಿವಾರಣೆಗೆ ಈ ಕಲೆಯನ್ನುಪಯೋಗಿಸಬಹುದು. ಯುದ್ಧಕಲೆ ಅಲ್ಲದೇ ಕೆಲವರು ಪ್ರತ್ಯೇಕ ಮರ್ಮಗಳನ್ನು 'ಅಡಂಗಳ್' ಎನ್ನುವರು. ಇದರಿಂದ ಮಾಡುವ ಚಿಕಿತ್ಸಾ ಕಲೆಯನ್ನು 'ಮರ್ಮ ಚಿಕಿತ್ಸೆ' ಎನ್ನುವರು. ಈ ಶಾಸ್ತ್ರವನ್ನು ಮೊದಲಿಗೆ ಲೋಕಕ್ಕೆ ತಿಳಿಸಿದವರು 'ಪ್ರಾಚೀನ ವೈದ್ಯ ಸುಶೃತನು'. ಈ ಕಲೆಯಲ್ಲಿ ಅಪಾಯಕರವಾದ 12 ಮರ್ಮ ಸ್ಥಾನಗಳಿವೆ. ಅವನ್ನು ಗುರು ಮುಖದಲ್ಲಿ ಕಲಿತು, ಲೋಕಕಲ್ಯಾಣಕ್ಕೆ ಮಾತ್ರ ಉಪಯೋಗಿಸಬೇಕು. ಈ ಮರ್ಮ ಸ್ಥಾನಗಳಲ್ಲಿ ಪ್ರಾಣಶಕ್ತಿ ವಿಶೇಷವಾಗಿ ಇರುವುದು. ಇದರಮೇಲೆ ಅತಿಯಾಗಿ ಒತ್ತಡ ಹಾಕುವುದರಿಂದಾಗಲಿ, ಅಲ್ಲಿ ಏಟು ಬೀಳುವುದರಿಂದಾಗಲಿ ಒಬ್ಬನಿಗೆ ಪ್ರಾಣಾಪಾಯವಾಗಬಹುದು. ಬೇರೇ ಕೆಲವು ಕಡೆ ಅದೇ ಬಲಪ್ರಯೋಗ ಮಾಡಿದರೆ, ಪ್ರಾಣಾಪಾಯದಿಂದ ರಕ್ಷಿಸಬಹುದಷ್ಟೇ ಅಲ್ಲದೇ ವಿವಿಧ ದೀರ್ಘವ್ಯಾಧಿಗಳನ್ನು ಸಹಾ ವಾಸಿ ಮಾಡಬಹುದು.

ಕುಲಶೇಖರನು ಶ್ರೀನಿವಾಸನ ಭಕ್ತ. ಆತ ಪ್ರತಿ ರಾಜ್ಯದಲ್ಲಿ ಮಲ್ಲಯೋಧರನ್ನು ಜಯಿಸುತ್ತಾ ವಿಜಯ ಪತಾಕೆಗಳನ್ನು ಹಿಡಿದು, ಪೀಠಿಕಾಪುರಕ್ಕೆ ಆಗಮಿಸಿದನು. ಪೀಠಿಕಾಪುರದಲ್ಲಿ ಸಹಾ ಮಲ್ಲಯೋಧರು ಇರುವರು. ಅವರು ನಾವು ಕುಲಶೇಖರನ ಕೈಯ್ಯಲ್ಲಿ ಅಪಜಯಪಟ್ಟು, ಪೀಠಿಕಾಪುರದ ಗೌರವವನ್ನು ಹಾಳು ಮಾಡುವುದು ಖಾಯಂ ಎಂದೆಣಿಸಿ ವಿಚಿತ್ರ ಶಕ್ತಿಯುಳ್ಳ ಯೋಗಿ ಶ್ರೀಪಾದ ಶ್ರೀವಲ್ಲಭರು, ದತ್ತಾತ್ರೇಯ ಅವತಾರಿಯವರನ್ನು ಈ ಕ್ಲಿಷ್ಟ ಸಮಸ್ಯೆಯ ಪರಿಹಾರಕ್ಕೆ ದಾರಿ ತೋರುವಂತೆ ಬೇಡಿದರು. ಅಗ ಶ್ರೀಗಳು ನರಸಿಂಹ ವರ್ಮರ ಮನೆಯಲ್ಲಿದ್ದರು. ಶ್ರೀ ವರ್ಮರವರು ಶ್ರೀಪಾದರಿಗೆ ಪ್ರತ್ಯೇಕವಾಗಿ ಒಂದು ಬೆಳ್ಳಿ ಜರಿಯ ತಲೆಪೇಟ ಮಾಡಿಸಿದ್ದರು. ಅವರು ತಮ್ಮ ಜಮೀಂದಾರಿ ಭೂಮಿಗಳ ವೀಕ್ಷಣೆಗೆ ಹೋಗುವಾಗ ಆ ಬೆಳ್ಳಿ ಜರಿಪೇಟವನ್ನು ಇಟ್ಟು, ಶ್ರೀಪಾದರನ್ನು ಕುದುರೆಗಾಡಿಯಲ್ಲಿ ಕರೆದು ಕೊಂಡು ಹೋಗುವುದು ಸಾಮಾನ್ಯ. ಒಮ್ಮೆ ಆ ಪೇಟ ತಲೆಗೆ ಇಡುವಾಗ ಶ್ರೀಪಾದರು, ''ತಾತ! ನಾವು ಸ್ವಲ್ಪ ತಡಮಾಡಿ ಹೋಗೋಣ'' ಎಂದರು.

ಅಷ್ಟರಲ್ಲೆ, ಪೀಠಿಕಾಪುರ ಮಲ್ಲಯೋಧರು ಶ್ರೀಗಳ ಬಳಿ ಬಂದರು. ಅವರು ಶ್ರೀಪಾದರ ಶರಣು ಬೇಡಿದರು. ಅಭಯವೂ ಸಿಕ್ಕಿತು. ಪೀಠಿಕಾಪುರದಲ್ಲಿ 'ಭೀಮ'ನೆಂಬುವ ಒಬ್ಬ ಗೂನುಬೆನ್ನಿನವನಿದ್ದನು. ಬಹಳ ಅಡ್ಡ ತಿರುಗಿದ ಅಂಗಗಳುಳ್ಳವನು! ಮೇಲಾಗಿ

ನಿಶ್ಶಕ್ತ! ಯಾವ ಕೆಲಸಕ್ಕೂ ಬಾರದಿದ್ದರೂ, ವರ್ಮರವರು ಅವನನ್ನು ಸಂಬಳ ಕೊಟ್ಟು ಕೆಲಸಕ್ಕಿಟ್ಟುಕೊಂಡಿದ್ದರು. ಭೀಮನಿಗೆ ಶ್ರೀಪಾದರಲ್ಲಿ ಬೆಟ್ಟದಷ್ಟು ಪ್ರೇಮಾಭಿಮಾನಗಳು ಮತ್ತು ನಂಬಿಕೆ ಇತ್ತು. ಅವನು ತನ್ನ ಗೂನುಬೆನ್ನು ಸರಿಮಾಡುವಂತೆ ಅನೇಕ ಬಾರಿ ಶ್ರೀಗಳನ್ನು ಬೇಡಿದ್ದನು. ಅದಕ್ಕೆ ತಕ್ಕ ಸಮಯ ಬರಲೆಂದು ತಿಳಿಸಿದ್ದರು. ಶ್ರೀಪಾದರು, ''ಆ ಮಲ್ಲಯೋಧನಿಗೆ ನಾವೇಕೆ ಹೆದರಬೇಕು? ನಮ್ಮ ಭೀಮನಿದ್ದಾನಲ್ಲವೆ? ಭೀಮನಂತವನು ನಮ್ಮೊಟ್ಟಿಗೆ ಇರಲು ನಮಗೇಕೆ ಭಯ'' ಎಂದರು.

ದತ್ತ ವಿಧಾನಗಳು ಚಿತ್ರವಿಚಿತ್ರವಾಗಿರುವವು. ಕುಲಶೇಖರನ್ನೆದಿರಿಸಲು 'ಭೀಮ'ನನ್ನು ಆರಿಸಿವುದು, ಪೀಠಿಕಾಪುರದವರಿಗೆ ಆಶ್ಚರ್ಯ ತಂದಿತು. 'ಈ ಏಟಿಗೆ ಭೀಮ ಸ್ವರ್ಗವನ್ನಾದರೂ ಸೇರುತ್ತಾನೆ ಅಥವಾ ಶ್ರೀಪಾದರ ದಿವ್ಯತ್ವ ಮತ್ತಷ್ಟು ಬೆಳಕಿಗೆ ಬರುವುದೆ'ಂದು ಎಲ್ಲರೂ ಎಣಿಸಿದರು. ಕುಕ್ಕುಟೇಶ್ವರ ಆಲಯದ ಹತ್ತಿರ ಮಲ್ಲಯುದ್ಧ ಸ್ಥಳ ನಿರ್ಧರಿಸಲಾಯಿತು. ಬಹಳಷ್ಟು ಜನ ಆ ವಿನೋದವನ್ನು ವೀಕ್ಷಿಸಲು ಬಂದರು, ಮಲ್ಲಯುದ್ಧ ಆರಂಭವಾಯುತು, ಕುಲಶೇಖರನ ಪ್ರತಿ ಏಟಿಗೂ ಭೀಮನ ಮೈಯಲ್ಲಿ ಶಕ್ತಿ ತುಂಬುತ್ತಿತ್ತು. ಭೀಮನಿಗೆ ಯಾವ ಭಾಗಕ್ಕೆ ಏಟು ಬೀಳುತ್ತಿತ್ತೊ ಕುಲಶೇಕರನಿಗೆ ಸಹಾ ಅದೇ ಭಾಗಕ್ಕೆ ಏಟು ತಗುಲುತ್ತಿತ್ತು. ಆದರಿಂದ ಕುಲಶೇಖರಿನಿಗೆ ಆಯಾಸ ಬಂದಿತು. ಭೀಮನ ಬೆನ್ನುಗೂನು ಸರಿಹೋಗುವುದಲ್ಲದೇ, ಆತ ದೊಡ್ಡ ಬಲಶಾಲಿಯೂ ಆದನು.

ಕುಲಶೇಖರನು ಶ್ರೀಪಾದರ ಚರಣದಾಸನಾದನು. ಆಗ ಶ್ರೀಗಳು, ''ಕುಲಶೇಖರಾ! ಮಾನವ ಶರೀರದ ಮೇಲೆ 108 ಮರ್ಮಗಳಿವೆ. ಅದಕ್ಕೆ ಸಂಬಂಧಿಸಿದ ಸಮಸ್ತ ಜ್ಞಾನವೂ ನಿನಗಿದೆ. ಆದರೇ ಭೀಮ ಕೇವಲ ನನ್ನನ್ನೇ ನಂಬಿರುವಂತವನು. ನಾನೇ ರಕ್ಷಕನೆಂಬುವ ಜ್ಞಾನ ಅವನಗಿದೆ. ನಿನ್ನ ಜ್ಞಾನ ದೊಡ್ಡದಾ? ಇಲ್ಲ ಅವನದ್ದಾ? ನೀನು ಅಹಂಕಾರದಿಂದ ಕೊಬ್ಬಿದ್ದೆ. ನಾನು ದಿವ್ಯವಿನೋದಿನಿ. ವಿಧವಿಧವಾದ ಶಿಕ್ಷೆಗಳನ್ನು ವಿಧಿಸಲಾದ ಶಾಸನಕರ್ತನು ನಾನು. ಇಂದಿನಿಂದ ಭೀಮನಲ್ಲಿನ ಎಲ್ಲಾ ದುರ್ಬಲತ್ವಗಳನ್ನೂ ನಿನಗೆ ಕೊಡುತ್ತಿದ್ದೇನೆ. ಶರೀರ ಆಯಾಸದಿಂದ, ಅನ್ನ ವಸ್ತ್ರಗಳಿಗೆ ಕೊರತೆ ಇಲ್ಲದೇ ಜೀವಿಸುವಂತವನಾಗು. ಭೀಮ ನಿನ್ನಲ್ಲಿದ್ದ ಪ್ರಾಣಶಕ್ತಿ ಎಲ್ಲವನ್ನು ಗ್ರಹಿಸಿ ಧೃಡಕಾಯನಾಗಿ ಬಾಳಲಿ. ನಾನು ಪ್ರಪಂಚದಲ್ಲಿನ ಎಲ್ಲಾ ಜೀವಿಗಳಗಿಂತ ಬಲವಂತನು. ತಿರುಪತಿಯಲ್ಲಿರುವುದು ಯಾರು? ನಾನೇ ಅಲ್ಲವೇ? ಸದಾ ನನ್ನ ರಕ್ಷಣೆ ಬೇಡುತ್ತಾ ಈ ಮರ್ಮ ಕಲೆಯನ್ನು ದುರುಪಯೋಗಿಸಿದ್ದೀಯ. ಆದ್ದರಿಂದ ನಿನ್ನಲ್ಲಿನ ಈ ಮರ್ಮಕಲೆಯನ್ನು ನಿನ್ನಿಂದ ಬೇರು ಮಾಡುತ್ತಿದ್ದೀನಿ'' ಎಂದರು.

ಶ್ರೀಪಾದರು ಕ್ಷಣಕಾಲ ಕುಲಶೇಖರನಿಗೆ ಶ್ರೀಪದ್ಮಾವತೀ ವೇಂಕಟೇಶ್ವರನಾಗಿ ದರ್ಶನವಿತ್ತು ಕೃತಾರ್ಥನಾಗಿ ಮಾಡಿದರು. ಶ್ರೀಪಾದರ ಲೀಲೆಗಳು ಕಷ್ಟಾರ್ಥಗಳು, ಯೋಚಿಸಲಾಗದವು. ಅವರ ಕರುಣೆ ಹೊಂದುವುದೇ ನಮಗೆಲ್ಲಾ ಒಂದು ಸರಿಯಾದ ಮಾರ್ಗ.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 13

# ಆನಂದ ಶರ್ಮರ ವೃತ್ತಾಂತ

ನಾನು ಶ್ರೀ ಸುಬ್ಬಯ್ಯ ಶ್ರೇಷ್ಠಿಗಳಿಂದ ಒಪ್ಪಿಗೆ ಪಡೆದು, ಕುರುವಪುರದ ಕಡೆ ಪ್ರಯಾಣ ಮುಂದುವರಿಸಿದೆ. ರಾತ್ರಿ ವೇಳೆಗೆ ಒಂದು ಗ್ರಾಮ ಸೇರಿಕೊಂಡೆನು. ಮಧೂಕರಕ್ಕೆ ಯಾರ ಮನೆಗೆ ಹೋಗಲಿ ಎಂದು ಯೋಚಿಸುತ್ತಿದ್ದೆನು. ತನ್ನ ಬೀದಿಯ ಜಗ್ಗಿಲ ಮೇಲೆ, ಸುಖಾಸೀನನಾಗಿ ಜೊತೆಯವರೊಂದಿಗೆ ಮಾತನಾಡುತ್ತಿದ್ದ ಒಬ್ಬ ಬ್ರಾಹ್ಮಣನ್ನು ಕಂಡೆನು. ಆತನ ಕಣ್ಣುಗಳು ತೇಜೋಮಯವಾಗಿದ್ದವು. ಕರುಣೆ ಉಕ್ಕಿ ಹರಡುತ್ತಿತ್ತು. ಆತ ನನ್ನನ್ನು ಹಾರ್ಧಿಕವಾಗಿ ಸ್ವಾಗತಿಸಿ ಭೋಜನ ಇತ್ತನು. ಊಟದ ನಂತರ ಆತ, "ಮಗು! ನನ್ನನ್ನು ಆನಂದ ಶರ್ಮ ಎನ್ನುವರು. ನಾನು ಗಾಯತ್ರಿ ಮಂತ್ರ ಅನುಷ್ಠಾಪಕ. ತಾಯಿ ಗಾಯತ್ರಿ ಸ್ವಲ್ಪ ಸಮಯದ ಹಿಂದೆ, ನನ್ನ ಅಂತರ್ನೇತ್ರಕ್ಕೆ ಕಾಣಿಸಿ, 'ದತ್ತ ಭಕ್ತನೊಬ್ಬ ಬರುತ್ತಿದ್ದಾನೆ. ಆತನಿಗೆ ಹೊಟ್ಟೆ ತುಂಬಾ ಊಟ ನೀಡು, ಶ್ರೀದತ್ತನ ದರ್ಶನ ಭಾಗ್ಯದ ಪುಣ್ಯ ನಿನಗೆ ಬರುವುದು ಎಂದು ಹೇಳಿರುವಳು. ತಾಯಿ ನುಡಿದ ಹಾಗೆಯೇ ನಡೆದಿದೆ. ಬಹಳ ಸಂತೋಷ"

ಆಗ ನಾನು, "ಸ್ವಾಮಿ, ನಾನು ಶ್ರೀದತ್ತ ಭಕ್ತನೇ, ದತ್ತರು ಸದ್ಯಕ್ಕೆ ಭೊಲೋಕದಲ್ಲಿ ಶ್ರೀಪಾದ ಶ್ರೀವಲ್ಲಭ ಹೆಸರಿನಿಂದ ಕುರುವಪುರದಲ್ಲಿರುವರು. ನಾನು ಶಂಕರ ಭಟ್ಟು, ಕನ್ನಡ ಬ್ರಾಹ್ಮಣ, ಶ್ರೀಗಳ ದರ್ಶನಕ್ಕೆ ಹೊರಟಿದ್ದೇನೆ ಎಂದೆನು."

### ಕಣ್ವ ಮಹರ್ಷಿ ಅಶ್ರಮ ವಿವರಣೆ

ನನ್ನ ಮಾತು ಕೇಳಿ ಆನಂದ ಶರ್ಮ ನಕ್ಕರು. "ಸ್ವಾಮಿ! ನನ್ನ ತಂದೆ ನನಗೆ ಉಪನಯನ ಮಾಡುವ ಸಮಯಕ್ಕೆ ನಮ್ಮ ಮನೆಗೆ ಅವಧೂತರೊಬ್ಬರು ಬಂದರು. ನಮ್ಮ ಮನೆಯವರು ಆತನಿಗೆ ಸಕಲ ಮರ್ಯಾದೆಗಳು ಮಾಡಿದರು. ಆತ ಗಾಯತ್ರಿ ಮಂತ್ರಾನುಷ್ಠಾನಕ್ಕೆ ಸಂಬಂಧಿಸಿದ ಆನೇಕ ವಿಷಯಗಳನ್ನು ತಿಳಿಸಿದನು. ಬೃಹತ್ ಶಿಲಕೋನ (ಪೆಂಚಲಕೋನ) ದಲ್ಲಿನ ಶ್ರೀ ನೃಸಿಂಹ ದೇವರನ್ನು ದರ್ಶಿಸಲು ಆದೇಶಿಸಿದರು. ನನ್ನ ತಂದೆ ನನ್ನನ್ನು ಆ ಕೋನೆಗೆ ಕರೆದೊಯ್ದರು. ಅಲ್ಲಿ ನೃಸಿಂಹ ದೇವರ ದರ್ಶನಾನಂತರ, ನೆನೆಯದೇ ನನ್ನ ತಂದೆ ಧ್ಯಾನಸ್ಥರಾದರು. ಆ ಧ್ಯಾನ, ರಾತ್ರಿ ಹಗಲು ಸಾಗಿತು. ನನಗೆ ಭಯ, ಹಸಿವೂ ಆಯಿತು. ಒಬ್ಬ ಅಗಂತಕ ನನಗೆ ಊಟ ಕೊಟ್ಟು, ದಾರಿಯೇ ತಿಳಿಯದ ದಟ್ಟವಾದ ಕಾಡಿನಲ್ಲಿನ ಗುಹೆ ಒಂದರಲ್ಲಿ ಕೊಂಡೊಯ್ದನು, ಮಾಯವಾದನು. ಆ ಗುಹೆಯಲ್ಲಿ ಆಗ್ನಿಗೋಳಗಳಂತಿರವ ಕಣ್ಣಿನ ಒಬ್ಬ ವೃದ್ಧ ತಪಸ್ವಿಯನ್ನು ಕಂಡೆನು. ಆತನಿಗೆ 101 ಋಷಿಗಳು ಸೇವೆ ಸಲ್ಲಿಸುತ್ತಿದ್ದರು. ಆ ವೃದ್ಧ ತಪಸ್ವಿ, ತಾನೇ ಕಣ್ವ ಮಹರ್ಷಿ ಎಂದು ಅದು ತನ್ನ ತಪೋಭೂಮಿ ಎಂದು, ತನ್ನ ಶಿಷ್ಯರು ಯುವಕರಾಗಿ ಕಂಡುಬಂದರೂ, ಅನೇಕ ಸಾವಿರ ವರುಷ ವಯಸ್ಸಿನವರೆಂದು, ಅವಧೂತ ರೂಪಿ ಶ್ರೀದತ್ತರ ದರ್ಶನಾ ಪುಣ್ಯಫಲವಾಗಿ ಈ ತಪೋಭೂಮಿಗೆ ಬರಲಾಯಿತೆಂದು ತಿಳಿಸಿದರು. ಸಂಭ್ರಮಾಶ್ಚರ್ಯದಿಂದ ನನಗೆ ಮಾತೇ ಬಾರದಂತಾಯಿತು! ಶರೀರ ನಡುಗುತ್ತಿತ್ತು. ಆಗ ಕಣ್ವ ಯೋಗೀಂದ್ರರು, "ಈಗ ದತ್ತರು ಪೀಠಿಕಾಪುರದಲ್ಲಿ ಶ್ರೀಪಾದ ಶ್ರೀವಲ್ಲಭ ರೂಪದಲ್ಲಿದ್ದಾರೆ, 'ನಮ್ಮನ್ನು ದಯೆಯಿಂದ ಕಾಪಾಡಬೇಕೆಂದು ನಮ್ಮ ಬೇಡಿಕೆ' ಎಂದು ತಿಳಿಸು, ನಿನಗೆ ಬೇಗನೇ ಶ್ರೀಪಾದ ಶ್ರೀವಲ್ಲಭ ಪಾದುಕಾ ದರ್ಶನ ಆಗಲಿ!" ಎಂದಾಶೀರ್ವಾದಿಸಿ ನನ್ನ ತಲೆಯ ಮೇಲೆ ದಿವ್ಯ ಹಸ್ತವನ್ನಿತ್ತರು. ನಾನು ಕ್ಷಣದಲ್ಲಿಯೇ ನನ್ನ ತಂದೆಯ ಹತ್ತಿರ ಇದ್ದೆ. ಅವರು ಧ್ಯಾನ

ಸಮಾಧಿಯಿಂದ ಎದ್ದ ನಂತರ ನಮ್ಮ ಊರಿಗೆ ಸೇರಿದೆವು. ನನಗೆ ಕಣ್ವ ಮಹರ್ಷಿ ಆಶ್ರಮದಲ್ಲಿ ಆದ ಅನುಭವವನ್ನು ಶ್ರೀದತ್ತರ ನೂತನಾವತಾರ ಪೀಠಿಕಾಪುರದಲ್ಲಿರುವ ವಿಷಯವೂ ಸಹಾ ನನ್ನ ತಂದೆಯವರಿಗೂ ತಿಳಿಸಲಿಲ್ಲ.

## ರಾಜಮಹೇಂದ್ರವರದ ಹತ್ತಿರ ಪಟ್ಟುಸಾಚಲ ಪುಣ್ಯಕ್ಷೇತ್ರ

ಕಾಲ ಉರುಳುತ್ತಿತ್ತು. ಕಣ್ವ ಮಹರ್ಷಿಗಳ ಆಶೀರ್ವಾದ ಬಲದಿಂದ ನನಗೆ ಧ್ಯಾನದಲ್ಲಿ ಅನೇಕಬಾರಿ ಶ್ರೀಪಾದುಕಾದರ್ಶನವಾಗುತ್ತಿತ್ತು. ಒಮ್ಮೆ ನಮ್ಮ ಮನೆಗೆ ಕೆಲವು ಬಳಗ ಆಗಮಿಸಿದರು. ಅವರಿಗೆ ಪುಣ್ಯನದಿಗಳ ಸ್ನಾನ ಮತ್ತು ಪುಣ್ಯಕ್ಷೇತ್ರಗಳ ಸಂದರ್ಶನಾಭಿಲಾಷೆ ಉಂಟಾಯಿತು. ನನ್ನ ತಂದೆಯನ್ನು ಸಹಾ ಕರೆದರು. ಆಗ ನನ್ನ ವಯಸ್ಸು 10, ನನ್ನ ಮೇಲಿನ ಪ್ರೀತಿಯಿಂದ ನನ್ನನ್ನೂ ನನ್ನ ತಂದೆ ಕರೆದೊಯ್ದರು. ರಾಜಮಹೇಂದ್ರವರ ಗೋದಾವರಿ ನದಿ ದಡದ ಪಟ್ಟಣ ದೊಡ್ಡ ಪುಣ್ಯಕ್ಷೇತ್ರ. ರಾಜಮಹೇಂದ್ರವರಕ್ಕೆ ಉತ್ತರದ ಬೆಟ್ಟಗಳ ಮೇಲೆ ಕೆಲವರು ಋಷಿಗಳು ತಪಸ್ಸಾಚರಿಸುತ್ತಿದ್ದರು. ಇತ್ತ ಪೂರ್ವದ ಬೆಟ್ಟಗಳಲ್ಲೂ ಋಷಿಗಳ ತಪಸ್ಸು ನಡೆಯುತಿತ್ತು. ರಾಜಮಹೇಂದ್ರವರಕ್ಕೆ ಸ್ವಲ್ಪ ದೂರದಲ್ಲೇ 'ಪಟ್ಟಸಾಚಲ' ಪುಣ್ಯಕ್ಷೇತ್ರ ಗೋದಾವರಿ ನದಿ ಮಧ್ಯದಲ್ಲಿದೆ. ಮಹಾಶಿವರಾತ್ರಿಗೆ ಈ ಋಷೀಶ್ವರುಗಳಲ್ಲಿ ಕೆಲವರು ಪಟ್ಟಸಾಚಲದಲ್ಲು, ಇನ್ನು ಕೆಲವರು ರಾಜಮಹೇಂದ್ರವರದಲ್ಲೂ ವೇದಸ್ವಸ್ತಿ ಹೇಳುತ್ತಿದ್ದರು. ಈ ಋಷೀಶ್ವರಗಳು ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಿಂದ ಹೊರಟು 'ಏದುರುಲಪಲ್ಲಿ' ಎಂಬ ಗ್ರಾಮದಲ್ಲಿ ಸೇರಿ ಅದರ ಸಮೀಪದ 'ಮುನಿಕೂಡಲಿ' ಗ್ರಾಮದಲ್ಲಿ ತಂಗಿ ಪರಸ್ಪರ ಚರ್ಚೆ ಮಾಡಿಕೊಳ್ಳುತ್ತಿದ್ದರು. ನನ್ನ ಅದೃಷ್ಟಕ್ಕೆ ನನ್ನ ತಂದೆ ಜೊತೆ ನಾನೂ 'ಮುನಿಕೂಡಲಿ' ದರ್ಶಿಸಿದೆ. ಎಲ್ಲಾ ಶ್ರೀದತ್ತ ಪ್ರಭು ಲೀಲೆ.

## ಕಲಿಯುಗದಲ್ಲಿ ಶ್ರೀದತ್ತಾತ್ರೇಯರ ಪ್ರಪ್ರಥಮ ಅವತರಣೆ ಶ್ರೀಪಾದ ಶ್ರೀವಲ್ಲಭರು

ಅತ್ಯಂತ ನಿಗೂಢವಾದ ವೇದಾಂತ ವಿಷಯಗಳು, ಯೋಗಶಾಸ್ತ್ರ ರಹಸ್ಯಗಳು, ಜ್ಯೋತಿಶ್ಯಾಸ್ತ್ರ ವಿಷಯಗಳು ಚರ್ಚೆಗೆ ಬರುತ್ತಿದ್ದವು. ಆ ಚರ್ಚೆಯಲ್ಲಿ ಭಾಗವಹಿಸಿದ ಮಹಾಮುನಿಗಳೆಲ್ಲರೂ ಒಂದೇ ಮಾತಿನಿಂದ **ಶ್ರೀದತ್ತರು ಶ್ರೀಪಾದ ಶ್ರೀವಲ್ಲಭ ನಾಮದಲ್ಲಿ ಪೀಠಿಕಾಪುರದಲ್ಲಿ ಅವತರಿಸಿದ್ದಾರೆಂದು ಕಲಿಯುಗದಲ್ಲಿ ಅವರದ್ದು ಪ್ರಪ್ರಥಮ ಸಂಪೂರ್ಣ ದತ್ತಾವತಾರವೆಂದೂ ಹೇಳಿದರು. ಖುದ್ದಾಗಿ ಅವರನ್ನು ದರ್ಶಿಸಲೂ ಆಗದಿದ್ದವರು ಧ್ಯಾನ ಮಾರ್ಗದಲ್ಲಿ ಅವರವರ ಮನಸ್ಸಿನಲ್ಲೇ ದರ್ಶಿಸಬಲ್ಲರೆಂದು ಈ ಅವತಾರ ಅತ್ಯಂತ ಶಾಂತ, ಕರುಣಾರಸ ಪೂರ್ಣವೆಂದು ನುಡಿದರು.**

ಅಗ ನನ್ನ ತಂದೆ ನನ್ನನ್ನು ಕರೆದುಕೊಂಡು ಪೀಠಿಕಾಪುರಕ್ಕೆ ಹೋದರು. ನಮ್ಮ ಜೊತೆ ಬಂದಿದ್ದ ಪಂಡಿತರ ಗುಂಪು ಪಾದಗಯಾ ತೀರ್ಥದಲ್ಲಿ ಸ್ನಾನಮಾಡಿ ಶ್ರೀ ಕುಕ್ಕುಟೇಶ್ವರ ಆಲಯದಲ್ಲಿನ ಅನೇಕ ದೇವತೆಗಳನ್ನು ದರ್ಶಿಸಿ, ಪೂಜಿಸಿ, ಅಲ್ಲಿಂದ ವೇದಸ್ವಸ್ತಿ ಹೇಳುತ್ತಾ ಶ್ರೀ ಬಾಪನಾರ್ಯರ ಮನೆಗೆ ಹೊರಟರು. ಶ್ರೀ ಬಾಪನಾರ್ಯರು, ಶ್ರೀ ಅಪ್ಪಲರಾಜ ಶರ್ಮರು ಅವರ ಪಂಡಿತ ಬೃಂದ ಜೊತೆ ವೇದಸ್ವಸ್ತಿ ಹೇಳುತ್ತಾ ನಮ್ಮನ್ನು ಸೇರಿದರು. ಅದು ಮನೋಹರ ದೃಶ್ಯವಾಗಿತ್ತು. ಅಂತಹ ದಿವ್ಯ, ಭವ್ಯ ದೃಶ್ಯಗಳು ಹಿಂದಿನ ಜನ್ಮ ಪುಣ್ಯವಿಲ್ಲದಿದ್ದರೇ ಲಭಿಸದು.

## ಶ್ರೀಪಾದರ ದಿವ್ಯಮಂಗಳ ಸ್ವರೂಪ ವರ್ಣನೆ

ನಮ್ಮೆಲ್ಲರಿಗೂ ಶ್ರೀಬಾಪನಾರ್ಯುರ ಮನೆಯಲ್ಲಿ ಹಬ್ಬದ ಊಟ ಬಡಿಸಲಾಯಿತು. ಆಗ ಶ್ರೀಪಾದ ಶ್ರೀವಲ್ಲಭರ ವಯಸ್ಸು **5 ದಾಟಿರಲಿಲ್ಲ. ಅ ಎಳೇ ಶಿಶುವು ಎಷ್ಟೋ ತೇಜಸ್ಸಿನಿಂದ ವರ್ಚಸ್ಸಿನಿಂದ ಸುಂದರವಾಗಿ ಆಜಾನುಬಾಹುವಾಗಿದ್ದನು. ಕಣ್ಣುಗಳಿಂದ ಪ್ರೇಮ, ಕರುಣೆ ಉಕ್ಕಿ ಪ್ರವಹಿಸುತ್ತಿತ್ತು. ನಾನು ಅವರ ಶ್ರೀಪಾದಗಳನ್ನು ಸ್ಪರ್ಶಿಸಲು ಅವರು ತಮ್ಮ ಅಭಯಹಸ್ತ ನನ್ನ ತಲೆಯಮೇಲೆ ಇಟ್ಟು, "ಜನುಮ ಜನುಮಾಂತರದಲ್ಲಿಯೂ ನನ್ನ ಅನುಗ್ರಹ ನಿನ್ನ ಮೇಲಿರುವುದು. ನೀನು ನಿನ್ನ ಕೊನೆಯ ಜನ್ಮದಲ್ಲಿ ವೆಂಕಯ್ಯ ನಾಮದೊಳು ಅವಧೂತರಾಗಿ ನಿತ್ಯಕರ್ಮಗಳಲ್ಲಿದ್ದು, ಅಕಾಲಸಮಯ ಮಳೆ ಬೀಳಿಸುವಷ್ಟು ಸಮರ್ಥನಾಗಿ ಪ್ರಜೆಗಳ ದೈನಂದಿನ ಬಾಧೆಗಳನ್ನು ಈಡೇರಿಸುತ್ತಾ ಬೆಳಗುವವನಾಗು"** ಎಂದಾಶೀರ್ವದಿಸಿದರು.

ಆಗ ನಾನು, ''ಶ್ರೀಪಾದ ಲೀಲೆಗಳು, ಚಿತ್ರವಿಚಿತ್ರವಾಗಿವೆ. ಶ್ರೀ ಗಾಯತ್ರಿ ಮಂತ್ರ ಸಾಧನಾ ರಹಸ್ಯ ತಿಳಿಸಿ'' ಎಂದು ಪ್ರಾರ್ಥಿಸಿದೆನು.

## ಶ್ರೀ ಗಾಯತ್ರೀ ಮಂತ್ರ ಸರ್ವಾಕ್ಷರ ಮಹಿಮೆ ವರ್ಣನೆ

ಆನಂದ ಶರ್ಮ ಹೀಗೆ ವಿವರಿಸಿದರು, ''ಶ್ರೀ ಗಾಯತ್ರಿ ಶಕ್ತಿ, ವಿಶ್ವವ್ಯಾಪಕಶಕ್ತಿ, ಆ ಶಕ್ತಿ ಜೊತೆ ಸಂಬಂಧ ಸ್ಥಾಪಿಸಿಕೊಂಡರೆ ಸೂಕ್ಷ್ಮಪ್ರಕೃತಿ ಸ್ವಾಧೀನವಾಗುವುದು. ಅದರಿಂದ ಭೌತಿಕ, ಮಾನಸಿಕ, ಆತ್ಮೀಯ ಕ್ಷೇತ್ರಗಳಲ್ಲಿನ ಎಲ್ಲಾ ಸಂಪತ್ತುಗಳನ್ನೂ ಹೊಂದಲು ಸಾಧ್ಯ. ಶರೀರದ ಎಲ್ಲಾ ಅಂಗಗಳಿಂದ ನಾಡಿಗಳು ಶರೀರವೆಲ್ಲಾ ವ್ಯಾಪಿಸಿರುವವು. ಕೆಲವು ನಾಡಿಗಳು ಸೇರಿದರೇ ಗ್ರಂಥಿ ಆಗುವುದು. ಮಾನವನ ಶರೀರದಲ್ಲಿ ವಿವಿಧ ಗ್ರಂಥಿಗಳಲ್ಲಿ ವಿವಿಧ ಶಕ್ತಿಗಳು ಕೂಡಿರುವವು. ಜಪ ಯೋಗದಲ್ಲಿ ನಿಷ್ಠೆಯಿಂದಿರುವವರು ತಕ್ಕ ಮಂತ್ರವನ್ನು ಉಚ್ಚರಿಸುವುದರಿಂದ ಆ ಗ್ರಂಥಿಯಲ್ಲಿನ ಶಕ್ತಿಯನ್ನು ಹೊರಬರಿಸಬಹುದು.

''ಓಂ'' ಎನ್ನುವದನ್ನುಚ್ಚರಿಸಿದರೇ ಶಿರಸ್ಸಿನ ಮೇಲೆ 6'' (ಆರು ಅಂಗುಳ) ಪ್ರಾಂತದಲ್ಲಿ
''ಭೂಃ''ವನ್ನು ಉಚ್ಚರಿಸುವಾಗ ಬಲಗಣ್ಣ ಮೇಲೆ 4'' ಪ್ರಾಂತದಲ್ಲಿಯು
''ಭುವಃ'' ಉಚ್ಚರಿಸುವಾಗ ಮಾನವನ ತ್ರಿನೇತ್ರ ಮೇಲೆ 3'' ಪ್ರಾಂತದಲ್ಲಿಯು
''ಸ್ವಃ'' ಯನ್ನುಚ್ಚರಿಸಿದರೇ ಎಡಗಣ್ಣು ಮೇಲೆ 4'' ಪ್ರಾಂತದಲ್ಲಿ ಶಕ್ತಿ ಎಚ್ಚರಗೊಳ್ಳುವುದು.

| | |
|---|---|
| ಆಜ್ಞಾಚಕ್ರ ಪ್ರಾಂತದಲ್ಲಿನ 'ತಾಪಿನಿ' ಗ್ರಂಥಿಯಲ್ಲಿ ಸೇರಿಕೊಂಡಿರುವ 'ಸಾಫಲ್ಯ' ಶಕ್ತಿಯನ್ನು ಜಾಗೃತಗೊಳಿಸಲು | ''ತತ್'' |
| ಎಡಗಣ್ಣಿನಲ್ಲಿನ 'ಸಫಲತೆ' ಎಂಬುವ ಗ್ರಂಥಿಯಲ್ಲಿ ಸೇರಿಕೊಂಡಿರುವ 'ಪರಾಕ್ರಮ' ಎಂಬುವ ಶಕ್ತಿಯನ್ನು ಎಚ್ಚರಿಸಗೊಳ್ಳಲೂ | ''ಸ'' |
| ಬಲಗಣ್ಣಿನಲ್ಲಿನ 'ವಿಶ್ವ' ಎಂಬುವ ಗ್ರಂಥಿಯಲ್ಲಿ ಸೇರಿರುವ 'ಪಾಲನೆ' ಎಂಬುವ ಶಕ್ತಿಯನ್ನು ಜಾಗೃತಗೊಳಿಸಲು | ''ವಿ'' |
| ಎಡಕಿವಿಯಲ್ಲಿನ 'ತುಷ್ಟಿ' ಎಂಬುವ ಗ್ರಂಥಿಯಲ್ಲಿ ಸೇರಿರುವ 'ಮಂಗಳಕರ' ಶಕ್ತಿಯನ್ನು ಜಾಗೃತಗೊಳಿಸಲು | ''ತು'' |
| ಬಲಕಿವಿಯಲ್ಲಿನ 'ವರದ' ಎಂಬುವ ಗ್ರಂಥಿಯಲ್ಲಿ ಸೇರಿರುವ 'ಯೋಗ' ಶಕ್ತಿ ಜಾಗೃತಿಗೆ | ''ವ'' |

ಮೂಗಿನ ಮೂಲದಲ್ಲಿ 'ರೇವತಿ' ಎಂಬುವ ಗ್ರಂಥಿಯಲ್ಲಿ ಸೇರಿರುವ 'ಪ್ರೇಮ' ಶಕ್ತಿ ಸಿದ್ಧಿಸಲು "ರೇ"

ಮೇಲ್ತುಟಿಯಲ್ಲಿನ 'ಸೂಕ್ಷ್ಮ' ಗ್ರಂಥಿಯಲ್ಲಿ ಸೇರಿರುವ 'ಘನ' ಎಂದು ಸಂಜ್ಞೆ ಇರುವ ಶಕ್ತಿ ಪ್ರೇರಣೆಗೆ "ಣಿ"

ಕೆಳಗಿನ ತುಟಿಯಲ್ಲಿನ 'ಜ್ಞಾನ' ಎಂಬುವ ಗ್ರಂಥಿಯಲ್ಲಿ ಸೇರಿರುವ 'ತೇಜ' ಎಂಬುವ ಶಕ್ತಿ ಜಾಗೃತಕ್ಕೆ "ಯಂ"

ಕಂಠದಲ್ಲಿನ 'ಭರ್ಗ್' ಎಂಬುವ ಗ್ರಂಥಿಯಲ್ಲಿ 'ರಕ್ಷಣೆ' ಎಂಬುವ ಶಕ್ತಿ ಪ್ರೇರಣೆಗೆ "ಭರ್"

ಕಂಠ ಆಳದಲ್ಲಿನ 'ಗೋಮತಿ' ಎಂಬುವ ಗ್ರಂಥಿಯಲ್ಲಿ ಅಡಗಿರುವ 'ಬುದ್ಧಿ' ಎಂಬುವ ಶಕ್ತಿಗಾಗಿ "ಗೋ"

ಎಡಭಾಗದ ಎದೆಯ ಅಗ್ರದಲ್ಲಿನ 'ದೇವಿಕ' ಎಂಬುವ ಗ್ರಂಥಿಯಲ್ಲಿ ಸೇರಿರುವ 'ದಮನ' ಶಕ್ತಿ ಜಾಗೃತಿಗೆ "ದೇ"

ಬಲಭಾಗದ ಎದೆಯ ಅಗ್ರದಲ್ಲಿನ 'ವಾರಾಹಿ' ಎಂಬುವ ಗ್ರಂಥಿಯಲ್ಲಿ ಅಡಗಿರುವ 'ನಿಷ್ಠೆ' ಶಕ್ತಿ ಸಿದ್ಧಿಗಾಗಿ "ವ"

ಹೊಟ್ಟೆಯ ಮೇಲ್ಭಾಗದಲ್ಲಿ, ಕೊನೆಯ ಪಕ್ಕದ ಮೂಳೆಗಳು ಸೇರುವ ಸ್ಥಳದಲ್ಲಿನ 'ಸಿಂಹಿನಿ' ಗ್ರಂಥಿಯಲ್ಲಿ ಸೇರಿಕೊಂಡಿರುವ 'ಧಾರಣೆ' ಎಂಬುವ ಶಕ್ತಿಯನ್ನು ಎಚ್ಚರಗೊಳಿಸಲು "ಸ್ಯ"

ಯಕೃತ್ತಿನಲ್ಲಿನ 'ಧ್ಯಾನ' ಎಂಬುವ ಗ್ರಂಥಿಯಲ್ಲಿ ಸೇರಿರುವ 'ಪ್ರಾಣ' ಎಂಬುವ ಶಕ್ತಿಯನ್ನು ಜಾಗೃತಿಸಲು "ಧೀ"

ಯಕೃತ್ತಿನಲ್ಲಿನ 'ಮರ್ಯಾದೆ' ಗ್ರಂಥಿಯಲ್ಲಿ ಅಡಗಿರುವ 'ಸಂಯಮ' ಎಂಬುವ ಶಕ್ತಿ ಪ್ರೇರಣೆಗಾಗಿ "ಮ"

ಹೊಕ್ಕಳುನಲ್ಲಿರುವ 'ಸ್ಫುಟ' ಎಂಬ ಗ್ರಂಥಿಯಲ್ಲಿ ಸೇರಿರುವ 'ತಪೊ' ಎಂಬುವ ಶಕ್ತಿ ಜಾಗೃತಿಗೆ "ಹಿ"

ಬೆನ್ನುಮೂಳೆ ಕೊನೆಯ ಭಾಗದಲ್ಲಿನ 'ಮೇಧಾ' ಗ್ರಂಥಿಯಲ್ಲಿ ಸೇರಿರುವ 'ದೂರದರ್ಶಿತ' ಶಕ್ತಿ ಜಾಗೃತಿಸಲು "ಧಿ"

ಎಡ ಭುಜದಲ್ಲಿನ 'ಯೋಗಮಾಯೆ' ಗ್ರಂಥಿಯಲ್ಲಿರುವ 'ಅಂತರ್ನಿಹಿತ' ಎಂಬ ಶಕ್ತಿ ಜಾಗೃತಿಗಾಗಿ "ಯೋ"

ಬಲ ಭುಜದಲ್ಲಿ 'ಯೋಗಿನಿ' ಎಂಬ ಗ್ರಂಥಿಯಲ್ಲಿ ಸೇರಿರುವ 'ಉತ್ಪಾದನೆ' ಎಂಬ ಶಕ್ತಿ ಜಾಗೃತವಾಗಲು "ಯೋ"

ಬಲ ಮೊಳಕೈಯಲ್ಲಿನ 'ಧಾರಿಣಿ' ಎಂಬ ಗ್ರಂಥಿಯಲ್ಲಿ ಬೆರೆತಿರುವ 'ಸರಸತಾ' ಎಂಬ ಶಕ್ತಿ ಪ್ರೇರಣೆಗೆ "ನಃ"

ಎಡ ಮೊಳಕೈಯಲ್ಲಿನ 'ಪ್ರಭವ' ಎಂಬ ಗ್ರಂಥಿಯಲ್ಲಿ ಅಡಗಿರುವ 'ಆದರ್ಶ' ಎಂಬ ಶಕ್ತಿ ಜಾಗೃತಕ್ಕಾಗಿ "ಪ್ರ"

ಬಲಗೈ ಮಣಿಕಟ್ಟಿನಲ್ಲಿ 'ಉಷ್ಮಾ' ಎಂಬ ಗ್ರಂಥಿಯಲ್ಲಿ ಸೇರಿರುವ, 'ಸಾಹಸ' ಎಂಬ ಶಕ್ತಿ ಪ್ರೇರಣೆಗೆ "ಚೋ"

ಬಲ ಅಂಗೈಯಲ್ಲಿನ 'ದೃಶ್ಯ' ಎಂಬ ಗ್ರಂಥಿಯಲ್ಲಿ ಅಂತರ್ಗರ್ಭಿತ 'ವಿವೇಕ' ಎಂಬ ಶಕ್ತಿ ಪ್ರೇರಣೆಗೆ "ದ"

ಎಡ ಅಂಗೈಯಲ್ಲಿನ 'ನಿರಂಜನ' ಎಂಬುವ ಗ್ರಂಥಿಯಲ್ಲಿ ಸೇರಿರುವ 'ಸೇವೆ' ಎಂಬ ಶಕ್ತಿ ಎಚ್ಚರಗೊಳ್ಳಲು "ಯಾತ್"

- ಎಂಬುವ ಬೀಜಗಳನ್ನು ಉಚ್ಚರಿಸಬೇಕು.

ಈ ವಿಧವಾಗಿ ಶ್ರೀ ಗಾಯತ್ರಿ ಮಂತ್ರದ 24 ಅಕ್ಷರಕ್ಕೂ ನಮ್ಮ ಶರೀರದೊಳು, ಬೇರೇ ಬೇರೆ ಕಡೆ ಇರುವ 24 ಗ್ರಂಥಿಗಳಿಗೂ ಆಯಾ ಗ್ರಂಥಿಗಳಲ್ಲಿ ಅಂತರ್ಗರ್ಭಿತವಾದ 24 ತರಹ ಶಕ್ತಿಗಳಿಗೂ ಹತ್ತಿರದ ಸಂಬಂಧ ವಿರುವುದು. ಸಂಖ್ಯೆ 9 ಬದಲಾವಣೆಗೆ ಒಳಗಾಗದ ಬ್ರಹ್ಮತತ್ತ್ವವನ್ನು ಸೂಚಿಸುವುದು, 8 ಮಾಯಾತತ್ತ್ವವನ್ನು ಸೂಚಿಸುತ್ತದೆ.



ಶ್ರೀ ಗಾಯತ್ರಿ ಮಾತಾ



ಔದುಂಬರ ಮಹಾ ವೃಕ್ಷ, ಕುರುವಪುರ.

## 'ದೋ ಚಪಾತಿ ದೇವ್ ಲಕ್ಷ್ಮೀ' ಎಂಬ ವಾಕ್ಯಕ್ಕೆ ವಿವರಣೆ

ಶ್ರೀಪಾದರು ತಮಗಿಷ್ಟವಾದವರ ಮನೆಯಿಂದ 2 ಚಪಾತಿಗಳನ್ನು ಸ್ವೀಕರಿಸುತ್ತಿದ್ದರು. ಅವರು 'ದೋ ಚಪಾತಿ ದೇವ್ ಲಕ್ಷ್ಮೀ' ಎಂದು ಕೇಳುವ ಬದಲಾಗಿ 'ದೋ **ಚೌ**ಪಾತಿ ದೇವ್ ಲಕ್ಷ್ಮೀ' ಎಂದು ಕೇಳುತ್ತಿದ್ದರು. **'ದೋ' ಎಂಬುವುದು 2 ಸಂಖ್ಯೆಯನ್ನು, 'ಚೌ' ಎಂಬುವುದು 4 ಸಂಖ್ಯೆಯನ್ನು, 'ಪತಿದೇವ್' ಶಬ್ದ ಜಗತ್ಪ್ರಭುವಾದ ಪರಮೇಶ್ವರರನ್ನು 9 ಸೂಚಿಸಲು, 'ಲಕ್ಷ್ಮೀ' ಶಬ್ದ ಮಾಯಾಸ್ವರೂಪವಾದ 8 ಸಂಖ್ಯೆಯನ್ನು ಸೂಚಿಸುತ್ತದೆ. ಆದ್ದರಿಂದ,** 2498 ಎನ್ನುವ ಸಂಖ್ಯೆ ಒಂದು ವಿಚಿತ್ರವಾದ್ದು. ಅದು, ತಾನು ಗಾಯತ್ರಿ ಸ್ವರೂಪವೆಂದು, ಪರಮಾತ್ಮನೆಂದು, ಪರಾಶಕ್ತಿಯನ್ನು ಸಹಾ ತಾನೇ ಎಂದು ಸೂಚಿಸಲು ಶ್ರೀಪಾದರು 2498ನ್ನು ಹೀಗೆ ತೋರಿದರು.

ಆಗ ನಾನು, ''ಸ್ವಾಮಿ ಗಾಯತ್ರಿ ಅಕ್ಷರ ಕುರಿತು ತಾವು ಹೇಳಿದ್ದು ಭಾಗಶಃ ಅರ್ಥವಾಗಿದೆ. ಅಲ್ಲಿ 9 ಪರಮಾತ್ಮ ಸ್ವರೂಪವೆಂದಿರಿ, 8 ಎನ್ನುವುದು ಮಾಯಾಸ್ವರೂಪವೆಂದಿರಿ. ಇದು ಅರ್ಥವಾಗಲಿಲ್ಲ'' ಎಂದೆನು.

## ನವಮ ಸಂಖ್ಯೆ ವಿವರಣೆ

ಆಗ ಆನಂದ ಶರ್ಮರು, ''ಮಗು ಶಂಕರ ಭಟ್ಟು! ಪರಮಾತ್ಮರು ಈ ವಿಶ್ವಕ್ಕೆ ಅತೀತರು. ಆತ ಎಂತಹ ಬದಲಾವಣೆಗಳಿಗೂ ಒಳಗಾದವ. 9 ಎನ್ನುವುದು ಒಂದು ವಿಚಿತ್ರವಾದ ಸಂಖ್ಯೆ. ಅದನ್ನು ಒಂದರಿಂದ ಗುಣಿಸಿದರೇ 9ತ್ತೇ ಬರುವುದು. 9ನ್ನು 2 ರಿಂದ ಗುಣಿಸಿದರೇ 18 ಬರುವುದು. ಅದು ಪುನಃ (1+8) 9ತ್ತೇ ಆಗುವುದು. 9ನ್ನು 3 ರಿಂದ ಗುಣಿಸಿದರೇ 27 ಬರುವುದು. ಅದು ಪುನಃ (2+7) 9ತ್ತೇ ಆಗುವುದು. ಹೀಗೆ 9ನ್ನು ಯಾವ ಸಂಖ್ಯೆಯಿಂದ ಗುಣಿಸಿ, ಬಂದ ಸಂಖ್ಯೆಗಳನ್ನು ಕೂಡಿದರೇ 9 ಬರುವುದು. ಬದಲಾವಣೆ ಇಲ್ಲ. ಹೀಗೆ 9 ಸಂಖ್ಯೆ ಬ್ರಹ್ಮತತ್ವವನ್ನು ಸೂಚಿಸುವುದು.

## ಶ್ರೀ ಗಾಯತ್ರಿ ವಿವರಣೆ

ಅಷ್ಟೇ ಅಲ್ಲ, ಶ್ರೀ ಗಾಯತ್ರಿ ಮಂತ್ರ ಕಲ್ಪವೃಕ್ಷದಂತದ್ದು. ಇದರಲ್ಲಿನ 'ಓಂ'ಕಾರವು, ಭೂಮಿಯಿಂದ ಮೇಲೆ ಬರುತ್ತಿರುವ ಮೂಲಕಾಂಡವೆಂದು ಗ್ರಹಿಸಬೇಕು.

**ಭಗವಂತನಿರುವನೆಂಬ ಜ್ಞಾನವು, ಪರಮೇಶ್ವರನ ಮೇಲೆ ಏಕಾಗ್ರತೆಯು 'ಓಂ'ಕಾರ ಉಚ್ಚಾರಣೆಯಿಂದ ಹೊಂದಬಹುದು.** ಮೂಲಕಾಂಡದ 3 ಶಾಖೆಗಳಾಗಿ ''ಭೂಃ'' ''ಭುವಃ'' ''ಸ್ವಃ'' ಎಂಬುವವು ಹೊರಬಂದಿಹವು. ''ಭೂಃ'' ಎಂಬುವುದು ಆತ್ಮಜ್ಞಾನ ಪ್ರಾಪ್ತಿಯಾಗಲು ಸಮರ್ಥವಾದದ್ದು. ''ಭುವಃ'' ಎಂಬುದು ಜೀವಿ ಶರೀರದಲ್ಲಿರಲು ಆಚರಿಸಬೇಕಾದ ಕರ್ಮಯೋಗವನ್ನು ಸೂಚಿಸುವುದು. ''ಸ್ವಃ'' ಎಂಬುದು ಎಲ್ಲಾ ಸಂದಿಗ್ಧಗಳಲ್ಲೂ ಸ್ಥಿರತ್ವ ಹೊಂದಿ ಸಮಾಧಿ ಸ್ಥಿತಿಗೆ ಸಹಕರಿಸುವುದು.

''ಭೂಃ'' ಎಂಬ ಶಾಖೆಯಿಂದ ''ತತ್'', ''ಸವಿತುಃ'', ''ವರೇಣ್ಯಂ'' ಎಂಬುವ 3 ಉಪ ಶಾಖೆಗಳು ಹುಟ್ಟಿವೆ. ''ತತ್'' ಎಂಬುದು ಶರೀರದಲ್ಲಿರುವವರಿಗೆ ಜೀವನ ವಿಜ್ಞಾನ ಕೊಡಲು, ''ಸವಿತುಃ'' ಎಂಬುದು ಶರೀರದಲ್ಲಿರುವವರಿಗೆ ಶಕ್ತಿ ಪಡೆಯಲು, ''ವರೇಣ್ಯಂ'' ಎಂಬುದು ಮಾನವ ತನ್ನ ಜಂತು ಧರ್ಮಗಳನ್ನು ಬಿಟ್ಟು ದಿವ್ಯನಾಗಿ ಬೆಳಗಲು ಸಹಕರಿಸುವುದು.

''ಭುವಃ'' ಎಂಬ ಶಾಖೆಯಿಂದ ''ಭರ್ಗೋ'', ''ದೇವಸ್ಯ'', ''ಧೀಮಹಿ'' ಎಂದು 3 ಉಪ ಶಾಖೆಗಳು ಹುಟ್ಟಿವೆ. ''ಭರ್ಗೋ'' ಎಂಬುದು ನಿರ್ಮಲತ್ವವನ್ನು ಬೆಳಸುವುದು, ''ದೇವಸ್ಯ'' ಎಂಬುದು ದೇವತೆಗಳಿಗೇ ಸಾಧ್ಯವಾದ ದಿವ್ಯದೃಷ್ಟಿಯನ್ನು ಕೊಡುವುದು, ''ಧೀಮಹಿ'' ಸದ್ಗುಣಗಳನ್ನು ಬೆಳಸುವುದು.

''ಸ್ವಃ'' ಎಂಬ ಶಾಖೆಯಿಂದ ''ಧಿಯೊ'', ''ಯೋನಃ'', ''ಪ್ರಚೋದಯಾತ್'' ಎಂದು 3 ಉಪ ಶಾಖೆಗಳು ಬಂದಿವೆ. ''ಧಿಯೋ'' ಎಂಬುದು ವಿವೇಕವನ್ನು, ''ಯೋನಃ'' ಎಂಬುದು ಸಂಯೋಮವನ್ನು, ''ಪ್ರಚೋದಯಾತ್'' ಸೇವಾಭಾವವನ್ನು ಎಲ್ಲಾ ಜೀವರಾಶಿಗಳಲ್ಲೂ ಬೆಳೆಯಲೂ ಸಹಕರಿಸುವುದು.

ಆದ್ದರಿಂದ ಗಾಯತ್ರಿ ಕಲ್ಪವೃಕ್ಷಕ್ಕೆ 3 ಶಾಖೆಗಳು, ಒಂದೊಂದು ಶಾಖೆಗೆ 3 ಉಪ ಶಾಖೆಗಳು ಇವೆ ಎಂದು, ನಿನಗೆ ಅರ್ಥವಾಯಿತಲ್ವೆ? **ಆದ್ದರಿಂದ 2498 ಎಂಬುದು ಶ್ರೀಪಾದರನ್ನು ಸೂಚಿಸುವುದು.** ಅದರ 9ನ್ನು ನಿನಗೆ ವಿವರಿಸಿದ್ದೇನೆ.

## ಅಷ್ಟಮ ಸಂಖ್ಯೆ ವಿವರಣೆ

8 ಎಂಬುವ ಸಂಖ್ಯೆ ಮಾಯಸ್ವರೂಪ. ಇದುವೇ ಶ್ರೀ ಅನಘಾಮಾತ ತತ್ತ್ವ. ಎಂಟರಿಂದ ಒಂದು ಗುಣಿಸಿದರೇ 8 ಬರುವುದು. 8ನ್ನು 2 ರಿಂದ ಗುಣಿಸಿದರೇ 16 ಬರುವುದು. (1+6)=7 ಆಗುವುದು. 8ಕ್ಕಿಂತಾ 1 ಕಡಿಮೆ. 8ನ್ನು 3 ರಿಂದ ಗುಣಿಸಿದರೇ 24 ಬರುವುದು. (2+4)=6. ಅಂದರೇ 8ಕ್ಕಿಂತ 2 ಕಡಿಮೆ. ಹೀಗೆ ಸೃಷ್ಟಿಯ ಸಮಸ್ತ ಜೀವರಾಶಿಯ ಶಕ್ತಿಗಳನ್ನು ನಾಶಗೊಳಿಸಿ/ ಕಡಿಮೆ ಮಾಡಬಲ್ಲ ತತ್ತ್ವವು ಜಗನ್ಮಾತೆಯಲ್ಲಿರುವುದು. ಯಾರೇ ಎಷ್ಟೇ ದೊಡ್ಡವರಾಗಿದ್ದರೂ ಅವನನ್ನು ಕಡಿಮೆ ಮಾಡಬಲ್ಲ ಶಕ್ತಿ ಮಯಾ ಸ್ವರೂಪಕ್ಕಿದೆ. **ಶ್ರೀಪಾದ ಶ್ರೀವಲ್ಲಭರು ಶ್ರೀ ಗಾಯತ್ರಿಮಾತ ಸ್ವರೂಪ. ಅವರು ಅನಘಾದೇವಿ ಸಮೇತ ಶ್ರೀದತ್ತರು. ಅವರನ್ನು ಮನೋವಾಕ್ಕಾಯ ಕರ್ಮಗಳಿಂದ ಆರಾಧಿಸುವ ಜನಕ್ಕೆ ಸಮಸ್ತ ಅಭೀಷ್ಟಗಳು ಸಿದ್ಧಿಸುವವು.**

ಶ್ರೀ ಗಾಯತ್ರಿ ಮಾತೆಯಲ್ಲಿ ಪ್ರಾತಃಕಾಲದಲ್ಲಿ ಹಂಸಾರೂಢೆಯಾದ ಬ್ರಾಹ್ಮೀಶಕ್ತಿ, ಮಧ್ಯಾಹ್ನ ಕಾಲ ಗರುಡಾರೂಢಳಾದ ವೈಷ್ಣವೀಶಕ್ತಿ, ಸಂಜೆಯ ಸಮಯದಲ್ಲಿ ವೃಷಭಾರೂಢಳಾದ ಶಾಂಭವಿಶಕ್ತಿ ಇರುವುದು. ಶ್ರೀ ಗಾಯತ್ರಿ ಮಂತ್ರಾಧಿಷ್ಠಾನ ದೇವತೆ ಸವಿತಾದೇವಿ. ತ್ರೇತಾಯುಗದಲ್ಲಿ ಶ್ರೀಪೀಠಿಕಾಪುರದೊಳು ಶ್ರೀ ಭರಧ್ವಾಜ ಮಹರ್ಷಿ ಸವಿತೃಕಾರಕ ಚಯನ ಮಾಡಿದ ಫಲಿತ ಶ್ರೀಪಾದ ಶ್ರೀವಲ್ಲಭರು ಪೀಠಿಕಾಪುರದಲ್ಲಿ ಜನಿಸಿದರು. ಸವಿತಾದೇವಿ ಪ್ರಾತಃಕಾಲದಲ್ಲಿ ಋಗ್ವೇದ ರೂಪದಲ್ಲಿರುವಳು. ಮಧ್ಯಾಹ್ನ ಸಮಯ ಯಜುರ್ವೇದ ರೂಪಧಾರಿಯಾಗಿರುವಳು. ಸಾಯಂಸಮಯ ಸಾಮವೇದ ರೂಪಧಾರಿಯಾಗಿರುವಳು. ರಾತ್ರಿಯ ವೇಳೆ ಅಥರ್ವಣ ರೂಪಧಾರಿಯಾಗಿರುವಳು. ನಮ್ಮ ಕಣ್ಣಿಗೆ ಕಾಣುವ ಸೂರ್ಯ ಕೇವಲ ಒಂದು ಚಿಹ್ನೆ. ಯೋಗಿಗಳು ಮಹೋನ್ನತ ಸ್ಥಿತಿ ಹೊಂದುವಾಗ ತ್ರಿಕೋಣಾಕಾರದಲ್ಲಿ ಮಹೋಜ್ವಲವಾಗಿ ಪ್ರಕಾಶಿಸುವ ಬ್ರಹ್ಮಯೋನಿನಿ ದರ್ಶಿಸಬಲ್ಲರು. ಇದರಿಂದಲೇ ಕೋಟ್ಯಾನುಕೋಟಿ ಬ್ರಹ್ಮಾಂಡಗಳು ಪ್ರತಿಕ್ಷಣವೂ ಹುಟ್ಟುತ್ತಿವೆ. ಪ್ರತಿಕ್ಷಣವೂ ರಕ್ಷಿಸಲ್ಪಡುತ್ತಿವೆ. ಪ್ರತಿಕ್ಷಣವೂ ನಾಶವೂ ಮಾಡಲ್ಪಡುತ್ತಿವೆ. ಈ ರೀತಿ ಪ್ರತಿಕ್ಷಣವೂ ಸೃಷ್ಟಿ, ಸ್ಥಿತಿ, ಲಯಗಳು ಮಾಡಲ್ಪಡುತ್ತಿವೆ. ಲೆಕ್ಕವಿಲ್ಲದ ಈ ಖಗೋಳಗಳನ್ನೆಲ್ಲಾ ಸೃಷ್ಟಿ ಸ್ಥಿತಿ ಲಯಗಳು ಮಾಡುವ ಸವಿತಾ ಶಕ್ತಿಗೆ ಸಾವಿತ್ರಿ ಎಂದು ಹೆಸರು. ಆದರೇ ಸಾವಿತ್ರಿ, ಗಾಯತ್ರಿ ಒಂದೇ ಸ್ವರೂಪಗಳು.

ಶವಗಳ ದಹನಕ್ಕೆ ಉಪಯೋಗಿಸುವ ಅಗ್ನಿಯನ್ನು 'ಲೋಹಿತ' ಎಂಬುವರು. ಅಡಿಗೆಗೆ ಉಪಯೋಗಿಸುವ ಅಗ್ನಿ 'ರೋಹಿತ.' ಹಾಗೆಯೇ ಪರಾಸ್ಥಾಯಿಯಲ್ಲಿ ಗಾಯತ್ರಿಯಾಗಿ ಅಪರಾಸ್ಥಾಯಿಯಲ್ಲಿ ಸಾವಿತ್ರಿಯಾಗಿ ಒಂದೇ ಶಕ್ತಿ ಆಡಿಸುತ್ತಿರುವಳು.

ಜೀವರಾಶಿಗಳ ಪರಿಣಾಮ ಕ್ರಮದಲ್ಲಿ ಇಹಲೋಕ ಸಂಬಂಧವಾದ ಬೇಡಿಕೆಗಳು ಎಷ್ಟೊ! ಅವೆಲ್ಲವೂ ಸಾವಿತ್ರಿ ಮಾತೆಯಿಂದ ಲಭಿಸುವವು. ಜೀವರಾಶಿಗಳಿಗೆ ಆಧ್ಯಾತ್ಮಿಕೋನ್ನತಿ ಗಾಯತ್ರಿ ಮಾತೆ ಅನುಗ್ರಹದಿಂದ ಲಭಿಸುವುದು. ಇಹಲೋಕದಲ್ಲಿ ಸಕಲ ಸುಖಭೋಗಗಳನ್ನನುಭವಿಸಲು ಪರಲೋಕದಲ್ಲಿ ವಿಮುಕ್ತಿ ಸ್ಥಿತಿಯಲ್ಲಿ ದಿವ್ಯಾನಂದವನ್ನನುಭವಿಸಲು ಸಮನ್ವಯ ಬೇಕಾಗಿದೆ. **ಶ್ರೀಪಾದರ ಶ್ರೀಚರಣಾಶ್ರಿತರಿಗೆ ಇಹಪರ ಲಾಭಗಳು ಎರಡೂ ಲಭಿಸುವವು.** ಮಿಕ್ಕ ದೇವತಾರಾಧನೆಗೂ, ಶ್ರೀದತ್ತಾರಾಧನೆಗೂ ಇರುವ ವ್ಯತ್ಯಾಸವೇ ಇದು.

ನನಗೆ ಶ್ರೀ ಆನಂದ ಶರ್ಮರು ತಿಳಿಸಿದ ವಿಷಯಗಳದೆಷ್ಟೊ ಆಶ್ಚರ್ಯಕರವಾಗಿದ್ದವು. ಆಗ ನಾನು ಹೀಗೆಂದೆನು, ''ಮಹಾತ್ಮರೇ ತಾವೆಷ್ಟೋ ಧನ್ಯರು. ಶ್ರೀಪಾದರು ಶ್ರೀ ನೃಸಿಂಹ ಸರಸ್ವತಿ ಅವತಾರ ತಾಳುವರೆಂದು ಕೇಳಿದೆನು. ಆ ಅವತಾರದಲ್ಲಿ ಶ್ರೀ ಕೃಷ್ಣ ಸರಸ್ವತಿಯನ್ನು ಗುರುವಾಗಿ ಸ್ವೀಕರಿಸುವರೆಂದು ಕೇಳಿದ್ದೆ. ಏನೀ ವಿಚಿತ್ರ.''

ಶ್ರೀ ಆನಂದ ಶರ್ಮ ಹೀಗೆ ಹೇಳಿದರು, **"ಭಗವಂತನ ಅವತಾರ ಬರುವುದೇ ಭಕ್ತರಿಗಾಗಿ. ಮಾನವರಾಗಿ ಬಂದಾಗ, ಉಚ್ಚ ಮಾನವ ಯಾವ ವಿಧವಾಗಿ ಇರಬೇಕೋ, ಆಚರಿಸಿ ಉಪದೇಶಿಸುವರು.** ಸನ್ಯಾಸಾಶ್ರಮವನ್ನುದ್ಧರಿಸಬೇಕಾಗಿದೆ. ತಾನೇ ಸನ್ಯಾಸಿ ಆಗ ಬೇಕಾದರೂ ಒಬ್ಬ ಗುರು ಅಗತ್ಯ. ಆ ಗುರು ಯೋಗ್ಯನಾಗಿರಬೇಕು. **ಸಾಕ್ಷಾತ್ ಅವತಾರ ಪುರುಷರಿಗೆ ಗುರು ಆಗಬೇಕಾದ ಯೋಗ್ಯತೆ ಕೋಟಿಯಲ್ಲಿ ಯಾವ ಒಬ್ಬರಿಗೋ ಇರುವುದು. ಅವತಾರ ಪುರುಷರು ಜನ್ಮಿಸಿದ ವಂಶದಲ್ಲಿ 80 ತಲೆಮಾರಿನವರು ಅವತರಿಸುವರು. ಆ ವಂಶದಲ್ಲಿ ಅನಂತ ಪುಣ್ಯ ಸೇರಿರಬೇಕು. ಅದೇ ಪ್ರಕಾರ ಅವತಾರ ಪುರುಷರಿಗೆ ಗುರುವಾಗಿರುವವರ ವಂಶ ಸಹಾ ಪರಮ ಪವಿತ್ರವಾಗಿರಬೇಕಾಗಿದೆ.** ತಾಟಂಕಪುರ (ತಣುಕು) ವಾಜಪೇಯಯಾಜರ ವಂಶದಂದು ಮಾಯಣಾಚಾರ್ಯರೆಂಬುವ ಮಹನೀಯರು ಜನ್ಮಿಸಿದರು. ಅವರ ಪತ್ನಿ ಹೆಸರು ಶ್ರೀಮತಿ. ಅವರು ಪುಣ್ಯದಂಪತಿಗಳು. ಅವರು ದರಿಮಿಲಾ ನಂದಿಕೊಟ್ಕೂರು ಪ್ರಾಂತದಲ್ಲಿನ ಮಂಗಳಾಪುರದಂದು ಜೀವನ ಸಾಗಿಸುತ್ತಿದ್ದರು. ಅವರಿಗೆ ಮಾಧವ, ಸಾಯಣ, ಭೋಗಿನಾಥರು ಜನ್ಮಿಸಿದರು. ಸನಾತನಧರ್ಮ ಉದ್ಧರಿಸಲು ಮಾಧವನು ವಿದ್ಯಾರಣ್ಯನಾದನು. ಮಹಾತಪಸ್ಸಂಪನ್ನರಾದ ಬಾಪನಾರ್ಯರು ಸೂರ್ಯಮಂಡಲದಿಂದ ಶ್ರೀಶೈಲ ಮಲ್ಲಿಕಾರ್ಜುನ ಲಿಂಗದಂದು ಶಕ್ತಿಪಾತ ನಡೆಸಿದರು. ನಿಜಕ್ಕೆ, ಶ್ರೀದತ್ತರ ಶ್ರೀಚರಣಗಳು ಶ್ರೀ ಪರ್ವತ ಮೇಲೆ ಉದ್ಭವಿಸುವುದು ಎಷ್ಟೋ ಅದ್ಭುತವಾದ ವಿಷಯ. ಪರ್ವತದ ಹೆಸರು ''ಶ್ರೀ'' ದತ್ತ ಪ್ರಭು ಚರಣಗಳು ಶ್ರೀ ಚರಣಗಳು. ಈ ನೂತನಾವತಾರಕ್ಕೆ ಶ್ರೀಪಾದ ಶ್ರೀವಲ್ಲಭ ನಾಮಧೇಯ ಅದೆಷ್ಟೋ ಹೊಂದಿದೆ.''

ಶ್ರೀ ಬಾಪನಾರ್ಯರ ವಂಶಕ್ಕೂ ಮಾಯಣಾಚಾರ್ಯರ ವಂಶಕ್ಕೂ ಎಷ್ಟೋ ವರುಷಗಳಿಂದ ಸಂಬಂಧ ಬಾಂಧವ್ಯಗಳು ಇವೆ. ಮಲ್ಲಾದಿ ಮನೆಯಲ್ಲಿ ಹೆಣ್ಣು ಮಗಳು ಹುಟ್ಟಿದರೇ ವಾಜಪೇಯಜರ ಸೊಸೆ ಎಂದು, ವಾಜಪೇಯಜರ ಮನೆಯಲ್ಲಿ ಹೆಣ್ಣು ಹುಟ್ಟಿದರೇ ಮಲ್ಲಾದಿಯವರ ಸೊಸೆ ಎಂದು, ಚಮತ್ಕಾರದಿಂದ ಮಾತಾಗುತ್ತಿತ್ತು. ಆದರೇ **ಬಾಪನಾರ್ಯರು ಅವರ ಮಗಳು ಸಕಲ ಸೌಭಾಗ್ಯವತಿ ಸುಮತಿ ಮಹಾರಾಣಿಯನ್ನು ವಾಜಪೇಯಯಾಜರ ಮನೆ ಸೊಸೆಯಾಗಿ ಮಾಡಲಿಲ್ಲ. ವಿಧಿವಶಾತ್ತು ದೈವ ಸಂಕಲ್ಪದಿಂದ ಅಪ್ಪಲರಾಜ ಶರ್ಮರಿಗೆ ಕೊಟ್ಟು ವಿವಾಹ ಮಾಡಿದರು.**

ಸಾಕ್ಷಾತ್ ದತ್ತ ಪ್ರಭುಗಳು ಶ್ರೀಪಾದ ಶ್ರೀವಲ್ಲಭರಾಗಿ ಜನ್ಮಿಸಿ ಅವರ ತಾಯಿಯ ತಾಯಿ ಸಂಗಡ ರಕ್ತಸಂಬಂಧ ಹೊಂದಿದ ವಾಜಪೇಯಯಾಜರನ್ನು ಸಹಾ ಉದ್ಧಾರಮಾಡ ಬಯಸಿ, ಮಧವಾಚಾರ್ಯನನ್ನು ಅವರ ಕಡೆ ಆಕರ್ಶಿಸಿದರು. ಮಧವಾಚಾರ್ಯರಿಗೆ ಶ್ರೀಪಾದರ ಮೇಲೆ ಪ್ರೀತಿ ಉಕ್ಕಿತು. ಮಧವಾಚಾರ್ಯರು ವಿದ್ಯಾರಣ್ಯ ಮಹರ್ಷಿಯಾಗಿ ಬದಲಾಯಿಸಿದರು. ಅವರ ಶಿಷ್ಯರು ಮಲಯಾನಂದರು. ಅವರ ಶಿಷ್ಯರು ದೇವೀತೀರ್ಥರು. ಅವರ ಶಿಷ್ಯರು ಯಾದವೇಂದ್ರ ಸರಸ್ವತಿಗಳು, ಅವರ ಶಿಷ್ಯರು ಕೃಷ್ಣ ಸರಸ್ವತರು. ಶ್ರೀ ವಿದ್ಯಾರಣ್ಯರಿಗೂ, ಕೃಷ್ಣ ಸರಸ್ವತಿಗಳ ಮಧ್ಯೆ ಮೂವ್ವರಿದ್ದರು. ಶ್ರೀ ವಿದ್ಯಾರಣ್ಯರೇ ಶ್ರೀ ಕೃಷ್ಣ ಸರಸ್ವತಿಯಾಗಿ ಅವತರಿಸಿ ಶ್ರೀಗಳನಂತರದ ಅವತಾರದಲ್ಲಿ ಗುರುಗಳಾಗಿರುವರು. ಶ್ರೀ ವಿದ್ಯಾರಣ್ಯರು ಮುಂದೇ ಅವರ ಸೋದರನಾದ ಸಾಯಣಾಚಾರ್ಯರ ವಂಶದಲ್ಲಿ ಗೋವಿಂದ ದೀಕ್ಷಿತರಾಗಿ ಜನ್ಮಿಸಿ ರಾಜರ್ಷಿಯಾಗಿ ತಂಜಾವೂರ್ ಮಹಾಮಂತ್ರಿ ಆಗುವರು. ಇದು ಶ್ರೀಗಳ ದಿವ್ಯವಾಣಿ.

ಶ್ರೀಪಾದರು ನಿತ್ಯ ಸತ್ಯವಚನರು. ಒಮ್ಮೆ ಸುಮತಿ ಮಹಾರಾಣಿ ಶ್ರೀಪಾದರಿಗೆ ಸ್ನಾನ ಮಾಡಿಸುತ್ತಿದ್ದರು. ಅಷ್ಟರಲ್ಲಿ ಶ್ರೀ ವೆಂಕಟಪ್ಪಯ್ಯ ಶ್ರೇಷ್ಠಿಗಳು ಅಲ್ಲಿಗೆ ಬಂದರು. ಅವರನ್ನು ನೋಡಿ ಶ್ರೀಪಾದರು "ತಾತ! ನಮ್ಮದು ಮಾರ್ಕಂಡೇಯ ಗೋತ್ರವಾ?" ಎಂದು ಪ್ರಶ್ನಿಸಿದರು. ಅವರು ಉತ್ತರ ಕೊಡದೇ ಶ್ರೀಪಾದರ ಮುದ್ದಾದ ಮಾತುಗಳಿಗೂ ಶ್ಲೇಷ ಅರ್ಥಕ್ಕೂ ತಮ್ಮಲ್ಲೇ ನಕ್ಕರು. ನಿಜಕ್ಕೂ ಶ್ರೀಪಾದರದ್ದು ಭಾರಧ್ವಾಜ ಗೋತ್ರ. ವೇಂಕಟಪ್ಪ ಶ್ರೇಷ್ಠಿಗಳದ್ದು ಮಾರ್ಕಂಡೇಯ ಗೋತ್ರ. ಅವರು ಭಾವನೆಗಳ ಪ್ರಕಾರ ವೆಂಕಟಪ್ಪಯ್ಯ ಶ್ರೇಷ್ಠಿಗಳಿಗೆ ಸಹಾ ಮೊಮ್ಮಗ್ಗ ಎಂದು ಗಂಭೀರವಾಗಿ ಹೇಳಿದರು. ಇಷ್ಟರಲ್ಲೇ ಮಾತೆ ಸುಮತಿ ಸ್ನಾನಾನಂತರ 'ಮಾರ್ಕಂಡೇಯನಂತೆ ಆಯಿಷು ನಿನಗಿರಲಿ' ಎಂದು ನೀರನ್ನು ಸುತ್ತು ತಿರಗಿಸಿ ಆಶೀರ್ವದಿಸಿದಳು. ಮಾರ್ಕಂಡೇಯನು 16 ವರುಷದ ಆಯಿಷು ಮಾತ್ರವೇ ಉಳ್ಳವನು. ಶಿವಾನುಗ್ರಹದಿಂದ ಚಿರಂಜೀವಿ ಆದನು. ಮಾರ್ಕಂಡೇಯನು 16 ವರುಷದ ಕಾಲ ಮಾತ್ರವೇ ತನ್ನ ತಂದೆ ತಾಯಿ ಜತೆ ಇದ್ದನೆಂದು, ಶ್ರೀಗಳು ನರನಾಡಿಗಳ ಆಳವಾಗಿ ಸೂಚಿಸಿದರು. 16 ವರುಷದ ನಂತರ ಮಾರ್ಕಂಡೇಯನು ಮಹರ್ಷಿಯಾಗಿ ಸಂಸಾರ ತ್ಯಾಗ ಮಾಡಿ ಚಿರಂಜೀವಿ ಆದನು. ಶ್ರೀಪಾದರು ಸಹಾ 16 ವರುಷದವರೆಗೂ ತಂದೆ ತಾಯಿ ಜೊತೆ ಇದ್ದು ನಂತರ ಜಗದ್ಗುರುವಾದರು. ಅವರು ಅವರ ಶರೀರವನ್ನು ರಹಸ್ಯವಾಗಿ ಬಚ್ಚಿಟ್ಟಿರುವೆನೆಂದು ಅದಕ್ಕೆ ಚಿರಂಜೀವಿತ್ವ ಇರುವುದೆಂದು ಈಗ ನಾವು ನೋಡುತ್ತಿರುವ ಶ್ರೀಪಾದ ಶ್ರೀವಲ್ಲಭರ ರೂಪದಲ್ಲೇ ಹಿಂದೆ ಅತ್ರಿ ಅನಸೂಯರಿಗೆ ಕುಮಾರನಾಗಿ ಅವತರಿಸಿದ್ದರೆಂದು ಪದೇ ಪದೇ ಹೇಳಿರುವರು.

## ಶ್ರೀಪಾದರ ವಿವಿಧ ರೂಪಗಳು

ಶ್ರೀಪಾದರು ತಮ್ಮ ಯೋಗಶಕ್ತಿಯನ್ನು ಹೊರ ತಂದು ಸ್ತ್ರೀ ರೂಪದಲ್ಲಿರುವ ಅವರ ಯೋಗಶಕ್ತಿ ಸಹಿತದಿಂದಲೇ ದರ್ಶನ ಕೊಡುತ್ತಿದ್ದರು. ಇದೊಂದು ಅಪೂರ್ವವಾದ ಸಂಗತಿ. ಕುಂಡಲಿನೀ ಶಕ್ತಿಯನ್ನು ಈ ತರಹ ಸ್ತ್ರೀ ಸ್ವರೂಪದಲ್ಲಿ ಹೊರ ತರುವುದು ಕೇವಲ ಶ್ರೀದತ್ತರಿಗೇ ಸಾಧ್ಯ. 16 ವರುಷ ಪ್ರಾಯದಲ್ಲಿರುವ ನವಯವ್ವನ ದಂಪತಿ ರೂಪವನ್ನು ಬಾಪನಾರ್ಯರು, ರಾಜಮಾಂಬ, ಶ್ರೀಪಾದರ ತಂದೆ ತಾಯಿ, ನರಸಿಂಹವ ವರ್ಮ ದಂಪತಿಗಳು, ವೆಂಕಟಪ್ಪಯ್ಯ ಶ್ರೇಷ್ಠಿ ದಂಪತಿಗಳು ಮತ್ತು ಕೆಲವರು ದರ್ಶಿಸಿದರು. ಅವರಿಬ್ಬರಿಗೂ ಮದುವೆ ಮಾಡುವ ಯೋಚನೆ ಮಾಡಿದ ತಂದೆ ತಾಯಿಯರಿಗೆ ಕೇವಲ ನಿರಾಶೆ ಮಾತ್ರ ಆಯಿತು. ತಾವು ಮುಂದೆ

ದಿವ್ಯದಂಪತಿ ರೂಪದಲ್ಲಿ ದರ್ಶನ ಕೊಡುವ ಸಂಕಲ್ಪ, ಮೊಟ್ಟಮೊದಲಿಗೆ ಅವರು ಅವಧೂತ ರೂಪದಲ್ಲಿ ಸುಮತಿ ಮಾತೆಗೆ ದರ್ಶನ ಕೊಟ್ಟಾಗಲೇ ಸೂಚಿಸಿದ್ದರು. ಅವಧೂತರು, ಸುಮತಿ ಮಾತೆಯೊಡನೆ ಹೀಗೆಂದರು, "ತಾಯಿ! ನಿನ್ನ ಮಗ 16 ವರುಷವರೆಗೂ ತಮ್ಮೊಡನೇ ಇರುವನು. ಅವನಿಗೆ ಮದುವೆ ಮಾಡುವ ಸಂಕಲ್ಪ ಮಾಡಿದರೇ ಕೇಳುವುದಿಲ್ಲ. ಮೇಲ್ಪಟ್ಟು ಮನೆ ಬಿಟ್ಟು ಹೋಗಿಬಿಡುವನು. ಆದ್ದರಿಂದ ಅವನ ಇಷ್ಟ ಪ್ರಕಾರವೇ ನಡೆದುಕೊಳ್ಳುವಂತರಾಗಿ." **ಶ್ರೀ ಅನಘಾದತ್ತರು ಆದಿ ದಂಪತಿಗಳು. ಅವರಿಗೆ ಸಾವು ಹುಟ್ಟುಗಳಿಲ್ಲ. ಆವರು ಸದಾ ಲೀಲಾವಿಹಾರಿಗಳು. ಅವರು ಶ್ರೀಪಾದ ಶ್ರೀವಲ್ಲಭ ರೂಪದಲ್ಲು, ಶ್ರೀ ನೃಸಿಂಹ ಸರಸ್ವತಿ ರೂಪದಲ್ಲು ಮತ್ತು ಸ್ವಾಮಿ ಸಮರ್ಥರ ರೂಪದಲ್ಲೂ ಅರ್ಧನಾರೀಶ್ವರರಾಗಿ ಇರುವರು.** ಇದು ದೈವ ರಹಸ್ಯ.

## ಮಂಡಲಕಾಲ ಅರ್ಚನೆ ಮತ್ತು ಶ್ರೀಪಾದ ಶ್ರೀವಲ್ಲಭ ಚರಿತಾಮೃತ ಪಾರಾಯಣದಿಂದ ಆಗುವ ಫಲ

ಶ್ರೀಪಾದರು ಶ್ರೀ ಗಣೇಶ ಚತುರ್ಥಿಯಂದು ಅವತರಿಸುವುದರಲ್ಲಿ ದೊಡ್ಡ ವಿಶೇಷವಿದೆ. **ಲಾಭನು ಶ್ರೀ ಗಣೇಶನ ಪುತ್ರ.** ಒಂದಾನೊಂದು ಕಲ್ಪದಲ್ಲಿ, ಒಂದಾನೊಂದು ಯುಗದಲ್ಲಿ ಆತನೇ ಲಾಭಾದ ಮಹರ್ಷಿ ಎಂದು ಹೆಸರು ಪಟ್ಟನು. ಆತನೇ ಶ್ರೀಕೃಷ್ಣಾವತಾರದಲ್ಲಿ ನಂದನಾಗಿದ್ದನು. **ಲಾಭನೇ ಶ್ರೀಪಾದ ಶ್ರೀವಲ್ಲಭಾವತಾರದಲ್ಲಿ ಶ್ರೀಪಾದರವರಿಗೆ ಮಾತೆ, ಪಿತರಾಗಿ ಜನ್ಮಿಸಿದರು. ಭಕ್ತರ ಸಮಸ್ತ ವಿಘ್ನಗಳನ್ನು ತೊಲಗಿಸಲು, ತಮ್ಮ ಚೈತನ್ಯದಲ್ಲಿ ಶ್ರೀ ವಿಘ್ನೇಶ ತತ್ತ್ವವನ್ನು ಸ್ಥಿರವಾಗಿ ಉಳಿಸಿಕೊಂಡು, ಶ್ರೀಪಾದರು ಅವತರಿಸಿದರು.** ಅವರು ಚಿತ್ತಾ ನಕ್ಷತ್ರದಲ್ಲಿ ಅವತರಿಸಿ ಇದಕ್ಕೆ 27ನೆಯ ನಕ್ಷತ್ರವಾದ ಹಸ್ತದಲ್ಲಿ ಕುರುವಪುರದಲ್ಲಿ ಅದೃಶ್ಯರಾದರು. **ಅವರ ಜಾತಕ ಪ್ರಕಾರ 27 ನಕ್ಷತ್ರಗಳಲ್ಲೂ ಸಂಚರಿಸುವ ನವಗ್ರಹಗಳಿಂದ ಆಗುವ ಕೆಟ್ಟ ಫಲಗಳು ತೊಲಗಲು ಶ್ರೀಪಾದರ ಭಕ್ತರು ಮಂಡಲದೀಕ್ಷೆ ವಹಿಸಬೇಕು. ಒಂದು ಮಂಡಲ ಕಾಲ ಶ್ರದ್ಧಾಭಕ್ತಿಯಿಂದಾ ಶ್ರೀಪಾದರನ್ನು ಆರಾಧಿಸಿದರೆ ಅಥವಾ ಅವರ ದಿವ್ಯ ಚರಿತ್ರೆಯನ್ನು ಪಾರಾಯಣ ಮಾಡಿದರೂ ಸರ್ವಾಭೀಷ್ಟಗಳು ಸಿದ್ಧಿಸುವವು.** ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳು ಒಂದೊಂದು 10 ದಿಕ್ಕುಗಳಲ್ಲಿ ತಮ್ಮ ಸ್ಪಂದನೆಗಳನ್ನು ಕಂಪನಗಳನ್ನು ತೋರಿಸುತ್ತಿರುವವು. ಅಂದರೇ ಅವುಗಳ ಕಂಪನೆಗಳು ಬೇರೆ ಬೇರೆಯಾಗಿ 40 ದಿಕ್ಕುಗಳಲ್ಲಿ ಹೊರಡುತ್ತಿರುವವು. ಈ 40 ದಿಕ್ಕುಗಳಲ್ಲಿಯ ಕಂಪನೆಗಳನ್ನು ತಡೆಹಿಡಿದು ಶ್ರೀಪಾದರ ಕಡೆ ಮರಳಿಸಿದರೇ ಅವು ಶ್ರೀಗಳ ಚೈತನ್ಯದಲ್ಲಿ ಸೇರುವವು. ಅಲ್ಲಿ ಅವು ಸಾಕಷ್ಟು ಸಂಸ್ಕರಿಸಲ್ಪಟ್ಟು ಯೋಗ್ಯವಾದ ಸ್ಪಂದನೆಗಳಾಗಿ ಬದಲಾವಣೆ ಹೊಂದಿ ಪುನಃ ಸಾಧಕನನ್ನು ಸೇರುವವು. ಆಗ ಸಾಧಕನ ಎಲ್ಲಾ ಧರ್ಮಬದ್ಧವಾದ ವಾಂಛೆಗಳೂ ಈಡೇರುವವು. **"ಮಗು ಶಂಕರ ಭಟ್ಟು! ನೀನು ಶ್ರೀಪಾದರ ಚರಿತ್ರೆಯನ್ನು ರಚಿಸಬಲ್ಲೆ ಎಂದು ಅಂತರದೃಷ್ಟಿಯಿಂದ ತಿಳಿದುಕೊಂಡೆನು.** ಲೋಕದಲ್ಲಿ ಈಗ ಇರುವ ಪಾರಾಯಣ ಗ್ರಂಥಗಳಲ್ಲಿ ಬರಹಗಾರನ ವಿಚಾರ ಅನೇಕಾನೇಕ ಸ್ತೋತ್ರಗಳು ಮುಂತಾದವು ಇರುವವು. ನೀನು ಬರೆಯಲಿರುವ ಪ್ರಭು ಚರಿತ್ರೆಯಲ್ಲಿ ನಿನ್ನ ವಂಶಾವಳಿ ಬೇಕಾಗಿಲ್ಲ. **ಶ್ರೀಗಳನ್ನು ಧ್ಯಾನಿಸಿ ನಿನ್ನ ಅಂತರ್ನೇತ್ರದಲ್ಲಿ ಶ್ರೀಪಾದರನ್ನು ಸ್ಥಿರಪಡಿಸಿಕೊಂಡು ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ರಚಿಸು. ಆಗ ಶ್ರೀಪಾದರ ಚೈತನ್ಯ ನಿನ್ನ ಲೇಖನಿಯಿಂದ ಯಾವುದು ಬರೆಸುವುದೋ ಅದೇ ಸತ್ಯವಾಗುವುದು.** ಆ ವಿಧವಾದ ಸ್ಫೂರ್ತಿಯಲ್ಲಿ ಬರೆಯಲ್ಪಡುವ ಗ್ರಂಥಗಳಿಗಾಗಲಿ, ಉಚ್ಚರಿಸಲ್ಪಡುವ ಮಂತ್ರಗಳಿಗಾಗಲಿ ಛಂದೋಬದ್ಧತೆ ಇರಬೇಕಾಗಿಲ್ಲ. ಕೆಲವರು ಮಹಾಭಕ್ತರು ತಮಗೆ ದೈವ ಸಾಕ್ಷಾತ್ಕಾರವಾದಾಗ ಅವರವರ ಸ್ಥಾನಿಕ

ಭಾಷೆಯಲ್ಲಿ ವ್ಯವಹಾರದಲ್ಲಿರುವ ಪದಗಳಲ್ಲಿ ಸ್ತೋತ್ರಿಸಿದರು. ಅವರು ಸಾಧಾರಣ ವ್ಯಾಕರಣ ನಿಬಂಧನೆಗಳನ್ನು ಸಹಾ ಮೀರಿದ್ದರು. ಆ ಸ್ತೋತ್ರಗಳನ್ನು ಹಾಗೆಯೇ ಪಠಿಸಬೇಕು. ಛಂದೋಬದ್ಧತೆಗಾಗಿ ಬದಲಾವಣೆಗಳು ಮಾಡಿದರೇ ನೆನೆಸಿದ ಫಲ ಪ್ರಾಪ್ತವಾಗದು. ಭಕ್ತನ ಯಾವ ಪದಗಳಲ್ಲಿ ಭಗವಾನರು ಸಂತುಷ್ಟರಾಗಿ ವರವನ್ನಿತ್ತರೋ ಆ ಪದಗಳಲ್ಲಿ ಭಗವಾನರ ಅನುಗ್ರಹ ಶಕ್ತಿ ಇರುವುದು. ಆ ಪದಗಳಿಂದ ಕೂಡಿದ ಸ್ತೋತ್ರಗಳನ್ನು ನಾವು ಪಠಿಸುವಾಗ ನಮ್ಮ ಚೈತನ್ಯ ಬೇಗನೇ ಭಗವಚ್ಚೈತನ್ಯಕ್ಕೆ ಹತ್ತಿರದಲ್ಲಿರುವುದು. ಭಗವಾನರು ಭಾವಪ್ರಿಯನೇ ಹೊರತು. ಬಾಹ್ಯಪ್ರಿಯನಲ್ಲ. ಭಾವನೆ ಎಂಬುದು ಶಾಶ್ವತಶಕ್ತಿ. ಇದು ನೆನಪಿರಲಿ'' ಎಂದರು.

ಆಗ ನಾನು ಹೀಗೆಂದೆನು, ''ಸ್ವಾಮಿ! ಭೋಜನಾನಂತರ ಸದ್ಗುರುವಿನ ಮಾತುಗಳದೆಷ್ಟೋ ಸಂತುಷ್ಟಕರವು. ಇನ್ನೂ ಶ್ರೀಪಾದರ ಅವತಾರ ವಿಶೇಷಗಳನ್ನು ತಿಳಿಸಿ, ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದು ಪ್ರಾರ್ಥನೆ.

ಆನಂದ ಶರ್ಮ ಹೀಗೆ ನುಡಿದರು, **"ಶ್ರೀಪಾದರು ಮಲ್ಲಾದಿಗಳಿಗೂ, ವೆಂಕಟಪ್ಪಯ್ಯ ಶ್ರೇಷ್ಠಿಗಳಿಗೂ ಮತ್ತು ವತ್ಸವಾಯಿಗೂ ಬಹಳ ಸನ್ನಿಹಿತರಾಗಿ ನುಡಿಯಲಾರದ ಋಣಾನುಬಂಧ ಇಟ್ಟಿರುವರು.** ಆ ಮೂರು ಕುಟುಂಬದವರಿಗೂ ಪುಣ್ಯಬಲ ಅದೆಷ್ಟೋ ಇತ್ತು. ಆದ್ದರಿಂದಲೇ ಅವರ ತಂದೆ ಆ ಮೂರು ಕುಟುಂಬದವರು ಕೊಡುವ ದ್ರವ್ಯವನ್ನಾಗಲಿ, ವಸ್ತುಗಳನ್ನಾಗಲಿ ಸ್ವೀಕರಿಸದೇ ಇರುವುದು, ಅರ್ಥವಿಲ್ಲದ ವಿಷಯವೆಂದು ಶ್ರೀಪಾದರು ಅಭಿಪ್ರಾಯಪಟ್ಟರು. ಶ್ರೀಪಾದರ ಇಷ್ಟಾನುಸಾರ ಹಬ್ಬ, ಹರಿಕೆಗಳಲ್ಲಿ ಮಾತ್ರ ಅಲ್ಲದೇ ಇತರ ಸಂದರ್ಭಗಳಲ್ಲಿ ಸಹಾ ಅಪ್ಪಲರಾಜ ಶರ್ಮ ದಂಪತಿಗಳು ಅವರ ಮಕ್ಕಳ ಜೊತೆ ಮಲ್ಲಾದಿಗಳ ಮನೆಗೆ ವೆಂಕಟಪ್ಪಯ್ಯ ಶ್ರೇಷ್ಠಿ ಮತ್ತು ವತ್ಸವಾಯರ ಮನೆಗಳಿಗೆ ಯಥೇಚ್ಛವಾಗಿ ಹೋಗಿ ಬರುತ್ತಿದ್ದರು. ವೆಂಕಟಪ್ಪಯ್ಯ ಶ್ರೇಷ್ಠಿಗಳು ಒಮ್ಮೆ ಒಂದು ಹಬ್ಬಕ್ಕೆ ಅಪ್ಪಲರಾಜ ಶರ್ಮ ದಂಪತಿಗಳನ್ನು ಆವರ ಮನೆಗೆ ಊಟಕ್ಕೆ ಕರೆದರು. ಶ್ರೀಪಾದರನ್ನು ತಮ್ಮ ಮಡಲಿನಲ್ಲಿ ಕೂರಿಸಿಕೊಂಡು ತೂಗು ಉಯ್ಯಾಲೆಯಲ್ಲಿ ಶ್ರೀ ವೆಂಕಟಪ್ಪಯ್ಯ ಶ್ರೇಷ್ಠಿಗಳು ತೂಗುತಿದ್ದರು. ಆ ದಿನ ಶ್ರೇಷ್ಠಿಗಳು ಮೌನದಿಂದಿದ್ದರು. ಕಾರಣ ಪೀಠಿಕಾಪುರದಲ್ಲಿ ಒಬ್ಬ ಪ್ರಸಿದ್ಧ ಜ್ಯೋತಿಷ್ಯನಿದ್ದನು. ಆತ ಓಡ್ರ ದೇಶಕ್ಕೆ ಹೋಗಿ ಜ್ಯೋತಿಷ್ಯ ಕಲಿತಿದ್ದನು. ಆತ ಹೇಳಿದ ಜ್ಯೋತಿಷ್ಯ ಸುಳ್ಳಾಗಿಲ್ಲ. ಆತ ಖಚಿತವಾಗಿ ಯಾರದೇ ಆಗಲಿ ಸಾವಿನ ಸಮಯ ಸೂಚಿಸಬಲ್ಲ. ಅಂತಹ ಆತ ಶ್ರೇಷ್ಠಿಗಳು ಇಂತಹ ದಿನ, ಇಷ್ಟು ಘಡಿಯ, ವಿಘಡಿಯಗಳಿಗೆ ಹೃದಯಕ್ಕೆ ಸಂಬಂಧಿಸದ ವ್ಯಾಧಿಯಿಂದ ಸಾವನ್ನಪ್ಪುವರೆಂದು ಹೇಳಿದ್ದನು. ಅಷ್ಟೇ ಅಲ್ಲ ಆತ ಕೆಲವು ಔಷಧಿ ಸಸಿಗಳಿಗೂ, ಗ್ರಹಗಳಿಗೂ, ನಕ್ಷತ್ರಗಳಿಗೂ, ಕೆಲವು ಪವಿತ್ರ ವೃಕ್ಷಗಳಿಗೂ, ಯೋಗ ಪ್ರಕ್ರಿಯೆಗಳಿಗೂ ಸಂಬಂಧ ಇದೆ ಎಂದೂ ತಾನೊಂದು ಔಷಧ ರಾಜವಾದ ತಾಯೆತ್ತನ್ನು ಕೊಡುವೆನೆಂದೂ, ಆದರಿಂದ ಶ್ರೇಷ್ಠಿಗೆ ಒಕ್ಕರಿಸಿರುವ ಅಪಮೃತ್ಯು ದೋಷ ದೂರಾಗುವುದೆಂದೂ ಶ್ರೇಷ್ಠಿಗಳು ಅಪ್ಪಲರಾಜ ಶರ್ಮರನ್ನು ಬಿಟ್ಟು ತನ್ನನ್ನು ಅವರ ಮನೆಯ ಕುಲ ಪುರೋಹಿತನನ್ನಾಗಿ ಮಾಡಿಕೊಳ್ಳಬೇಕೆಂದೂ ಹೇಳಿದ್ದನು. ಇದಕ್ಕೆ ಶ್ರೇಷ್ಠಿಗಳು ಒಪ್ಪಲಿಲ್ಲ. ನನ್ನ ಭವಿಷ್ಯವಾಣಿ ತಪ್ಪಾದರೇ ತಲೆ ಕೂದಲು ಬೋಳಿಸಿಕೊಳ್ಳುವದಾಗಿಯು, ಕತ್ತೆಯಮೇಲೆ ಆ ಊರಿನಲ್ಲಿ ಸವಾರಿ ಮಾಡುವೆನೆಂದೂ ಪ್ರತಿಜ್ಞೆ ಮಾಡಿದನು. ಈ ವಿಷಯ ಅಪ್ಪಲರಾಜ ಶರ್ಮರಿಗೂ, ಬಾಪನಾರ್ಯರಿಗೂ ತಿಳಿಸಲಾಯಿತು. ಬಾಪನಾರ್ಯರು ಗಂಭೀರವಾದ ಲೆಕ್ಕಾಚಾರ ಮಾಡಿ ದೈವಶಕ್ತಿ ಕೆಲಸ ಮಾಡಲು ಶ್ರೇಷ್ಠಿಗಳ ಅಪಮೃತ್ಯು ನಿವಾರಿಸಲಾಗುವುದೆಂದು ತಿಳಿಸಿದರು. ಅಪ್ಪಲರಾಜ ಶರ್ಮ ಕಾಲಾಗ್ನಿಶಮನನ್ನು ಪೂಜಿಸಿ ತೀರ್ಥವನ್ನು ಪ್ರಸಾದವಾಗಿತ್ತನು. ಸುಮತೀ ಮಾತೆ ಪ್ರಸನ್ನಮುಖಳಾಗಿ ಆಕೆಯ ಚಿಕ್ಕಪ್ಪನಾಗಿ ಭಾವಿಸುತ್ತಿದ್ದ ಶ್ರೇಷ್ಠಿ ಹತ್ತಿರ ಬಂದಿದ್ದಳು. ಇಷ್ಟರಲ್ಲಿ ಶ್ರೇಷ್ಠಿಗೆ ಹೃದಯಲ್ಲಿ ಬಾಧೆ ಆಗಿ, 'ಅಮ್ಮಾ' ಎಂದು ಕೂಗಿದರು. ಹತ್ತಿರವೇ ಇದ್ದ ಸುಮತಿ ಮಾತೆ ತಂದೆ! ನನ್ನನ್ನು ಕರೆದರಾ?

ಎಂದು ಓಡಿಬಂದು ಆಕೆಯ ದಿವ್ಯಮಂಗಳ ಸ್ವರೂಪ ಶ್ರೀ ಹಸ್ತದಿಂದ ಶ್ರೇಷ್ಠಿಗಳ ಹೃದಯವನ್ನು ಸ್ಪರ್ಶಿಸಿದಳು. **ಶ್ರೇಷ್ಠಿ ಮಡಿಲಲ್ಲೇ ಇದ್ದ ಶ್ರೀಪಾದರು, 'ಹೋಗು' ಎಂದು ಗಟ್ಟಿಯಾಗಿ ಕೂಗಿದರು. ಶ್ರೇಷ್ಠಿ ಮನೆಯಲ್ಲಿ ಒಂದು ಗಂಡು ಎಮ್ಮೆ ಇತ್ತು. ತಕ್ಷಣವೇ ಅದು ಕಾಲುಗಳನ್ನು ಝಾಡಿಸುತ್ತಾ ಕ್ಷಣಗಳಲ್ಲೇ ಪ್ರಾಣಬಿಟ್ಟಿತು. ಶ್ರೇಷ್ಠಿಗಳು ರಕ್ಷಿಸಲ್ಪಟ್ಟರು.**

ಈ ವಿಷಯ ತಿಳಿದು ಜ್ಯೊತಿಷ್ಯನು ತಕ್ಷಣವೇ ಶ್ರೇಷ್ಠಿಗಳ ಮನೆಗೆ ಓಡಿ ಓಡಿ ಬಂದನು. ತನ್ನ ಅಮೋಘ ಜ್ಯೋತಿಷ್ಯ ಸ್ವಲ್ಪದಲ್ಲಿ ತಪ್ಪಿದ್ದಕ್ಕೆ ಆತನು ಒಳಗೊಳಗೆಯೇ ಬಹಳ ದುಃಖಿಸಿದನು.

ಜ್ಯೊತಿಷಿಯ ಸಂಗಡ ಶ್ರೀಪಾದರು, "ನೀನು ಜ್ಯೊತಿಷಿಯೇ! ಬಹಳ ಸಾಧನೆ ಮಾಡಿರುವೆಯೇ ಸರಿ! ಜ್ಯೊತಿಗಳಿಗೇ ಜ್ಯೊತಿಯಾದ ನಾನಿಲ್ಲಿರಲೂ ಶ್ರೇಷ್ಠಿಗೆ ಮೃತ್ಯು ಭಯವೇಕೆ? ನೀನು ಕೂದಲು ತೆಗೆಸಿ ಕತ್ತೆಯ ಮೇಲೆ ಊರಲ್ಲಿ ಸವಾರಿ ಮಾಡಬೇಕಿಲ್ಲ. ಪಶ್ಚಾತ್ತಾಪ ಪಟ್ಟರೇ ಸಾಕು. ನಿನ್ನ ತಂದೆ ಬದುಕಿದ್ದಾಗ ಶ್ರೇಷ್ಠಿಬಳಿ ಸಾಲ ಮಾಡಿದ್ದನು. ಸಾಲ ತೀರಿದೆ ಎಂದು ಸುಳ್ಳು ನುಡಿದಿದ್ದನು. ಅದೂ ಶ್ರೀ ಗಾಯತ್ರಿ ಸಾಕ್ಷಿಯಾಗಿ ಹೇಳಿದ್ದನು. ಅದರ ಫಲ ನಿನ್ನ ತಂದೆ ಶ್ರೇಷ್ಠಿ ಮನೆಯ ಎಮ್ಮೆಕೋಣವಾಗಿ ಹುಟ್ಟಿದ್ದರು. ಶ್ರೇಷ್ಠಿ ಧರ್ಮಾತ್ಮ ಹಾಗಾಗಿ ಆ ಕೋಣಕ್ಕೆ ಸರಿಯಾಗಿ ಆಹಾರ ನೀಡಿದರು. ಕೀಳು ಜನುಮ ಹೊಂದಿದ್ದ ನಿನ್ನ ತಂದೆಗೆ ಉತ್ತಮ ಜನುಮ ನಾನು ಪ್ರಸಾದಿಸಿರುವೆ. **ಅಪಮೃತ್ಯುವಿನ ಬರೆ ಬೀಳಲಿರುವ ಶ್ರೇಷ್ಠಿಯ ಕರ್ಮ ಫಲವನ್ನು ಆ ಎಮ್ಮೆ ಕೋಣಕ್ಕೆ ಬದಲಾಯಿಸಿದೆ.** ನೀನೀಗ ಆ ಕೋಣಕ್ಕೆ ದಹನ ಸಂಸ್ಕಾರ ಮಾಡಿ ಅನ್ನದಾನ ಮಾಡು. ನಿನ್ನ ತಂದೆಗಿದ್ದ ಕರ್ಮ ಫಲ ನಶಿಸುವುದು, ಉತ್ತಮ ಗತಿ ಲಭಿಸುವುದು" ಎಂದು ನುಡಿದರು. ಶ್ರೀಪಾದರ ಆದೇಶಾನುಸಾರವೇ ಆ ಜ್ಯೊತಿಷಿಯು ಆಚರಿಸಿದನು.

ಮಗು ಶಂಕರ ಭಟ್ಟು! **ಶ್ರೀಪಾದರು ಅನೇಕ ವಿಧಗಳಲ್ಲಿ ಪ್ರಾಣರಕ್ಷಣೆ ಮಾಡುವರು. ಒಮ್ಮೊಮ್ಮೆ ಮುಂದಿನ ಜನುಮದ ಸ್ವಲ್ಪ ಆಯುಷ್ಯನ್ನು ಕಡಿಮೆ ಮಾಡಿ ಈ ಜನುಮದ ಆಯುಷ್ಯನ್ನು ಬೆಳೆಸಬಲ್ಲರು!** ಇಲ್ಲ ಕರ್ಮ ಫಲಗಳನ್ನು ಬದಲಾಯಿಸಿ ತಕ್ಕ ಪದ್ಧತಿಯಲ್ಲಿ ಶ್ರೇಷ್ಠಿಗಳಿಗೆ ನಡೆದಂತೆ ಮಾಡಬಲ್ಲರು. **ಶ್ರೇಯೋಭಿಲಾಷಿಯ ಆಯುಷ್ಯನ್ನು ಯಾರಿಗಾದರು ಕೊಡಬಲ್ಲರು. ಅಸಾಧಾರಣ ಪರಿಸ್ಥಿತಿಯಲ್ಲಿ ಮೃತ್ಯುವನ್ನೇ ಶಾಶಿಸಿ ಆಯುಷ್ಯನ್ನು ಕೊಡಬಲ್ಲರು.** ಶರೀರದಲ್ಲಿ ಕಡಿತ ಮತ್ತು ಬೆಳವಣಿಗೆಗಳನ್ನು ನಿಲ್ಲಿಸಿ, ಯೋಗಿ, ಪ್ರಾಣಶಕ್ತಿಯನ್ನು ತನ್ನ ಆಧೀನದಲ್ಲಿಟ್ಟುಕೊಳ್ಳುವನು. ಶ್ರೀಪಾದರು ಯೋಗ ಸಂಪೂರ್ಣಾವತಾರಿ. ಅವರಿಗೆ ಅಸಾಧ್ಯವನ್ನುವುದೇ ಇಲ್ಲ. ಉಸಿರಾಟ ವಿಚ್ಛೇದನೆಯಿಂದ ಮುಕ್ತಿ ಹೊಂದುವುದು ಸುಲಭತರ. ಕ್ರಿಯಾಯೋಗಿ ತನ್ನ ಪ್ರಾಣಶಕ್ತಿಯನ್ನು ಆಜ್ಞಾ, ವಿಶುದ್ಧ, ಅನಾಹತ, ಮಣಿಪೂರ, ಸ್ವಾಧಿಷ್ಟಾನ, ಮೂಲಾಧಾರ ಚಕ್ರಗಳನ್ನು ಸುತ್ತಿ ಮೇಲೆನಿಂದ ಕೆಳಕ್ಕೆ, ಕೆಳಗಿಂದ ಮೇಲಕ್ಕೂ ಪರಿಭ್ರಮಿಸುವಂತೆ ಮಾಡುತ್ತಾನೆ. ಒಂದು ಕ್ರಿಯಗೆ ಹಿಡಿಸುವ ಸಮಯ ಒಂದು ವರುಷದಲ್ಲಿ ನಡೆಯುವ ಪ್ರಕೃತಿ ಸಹಜವಾದ ಆಧ್ಯಾತ್ಮಿಕ ವಿಕಾಸಕ್ಕೆ ಸಮಾನ. ಮಗು! ಅಹೋರಾತ್ರಿಯಲ್ಲಿನ ಮೂರನೇ ಭಾಗ ಸಮಯದಲ್ಲಿ 1000 ಕ್ರಿಯೆಗಳು ನಡೆದರೇಕೇವಲ 3 ವರುಷಗಳಲ್ಲಿ ಸಹಜ ಪ್ರಕೃತಿಯಿಂದ ಹತ್ತು ಲಕ್ಷಗಳ ವರುಷಗಳಲ್ಲಿ ಬರುವ ಪರಿಣಾಮ ಬರುವುದು. ಪುರಾಣಗಳಲ್ಲಿ ಸಾವಿರಾರು ವರುಷ ತಪಸ್ಸು ಮಾಡಿದ ಯೋಗಿಗಳ ಬಗ್ಗೆ ಹೇಳುವಾಗ ಆ ಸಮಯ ಸಹಜವಾಗಿ ಪ್ರಕೃತಿಗೆ ಹಿಡಿಸುವ ಪರಿಣಾಮ ಸಮಯವೆಂದು ಅರ್ಥ ಮಾಡಿಕೊಳ್ಳಬೇಕು. ಅಂದರೆ ಆಯಾ ಯೋಗಿಗಳಿಗೆ ಹಿಡಿಸುವ ವಾಸ್ತವ ಸಮಯ ಬೇರೆಯಾಗಿಯು ಆ ಪರಿಣಾಮ ಪ್ರಕೃತಿಸಿದ್ಧವಾಗಿ ಬರಲು ಹಿಡಿಸುವ ಸಮಯ ಬೇರೆಯಾಗಿಯು ಅರ್ಥ ಮಾಡಿಕೊಳ್ಳಬೇಕು. **ಬ್ರಹ್ಮ ದೇವರು ಪ್ರತಿ ಜೀವಿಗೂ**

**ಆಯಿಷು ಕೊಟ್ಟು ಉಸಿರಾಟ ನಿರ್ಧರಿಸುವನು. ಅಷ್ಟೇಹೊರತು ಇಷ್ಟು ವರುಷವೆಂದು ನಿರ್ಧರಿಸುವುದಿಲ್ಲ. ಕೋಪ ಆವೇಶದಂತಹ ಕೆಟ್ಟ ಲಕ್ಷಣಗಳು ಇದ್ದಾಗ ಶ್ವಾಸ ಹೆಚ್ಚಾಗಿ ಖರ್ಚಾಗುವುದು. ಆದರಿಂದ ಆಯಿಷು ಕಡಿಮೆ ಆಗುವುದು. ಮನಶ್ಚಂಚಲದ ಕೋತಿ ಅಧಿಕ ಉಸಿರಾಟ ಮಾಡುವುದು, ಆದ್ದರಿಂದಲೇ ಅಲ್ಪಾಯುಷಿ. 300 ವರುಷ ಜೀವಿಸುವ ಆಮೆ ಒಂದು ನಿರ್ದಿಷ್ಟಕಾಲದಲ್ಲಿ ಕೋತಿ ತೆಗುದುಕೊಳ್ಳುವ ಉಸಿರಾಟದಲ್ಲಿ ಎಂಟನೆಯ ಒಂದು ಭಾಗ ಮಾತ್ರವೆ ತೆಗೆದುಕೊಳ್ಳುತ್ತದೆ.**

ಶ್ರೀ ಆನಂದ ಶರ್ಮ ಸದ್ಗೋಷ್ಠಿಯಿಂದ ನಾನೆಷ್ಟೋ ಜ್ಞಾನವಂತನಾದೆನು. ಬೆಳ್ಳಂಬೆಳಿಗ್ಗೆ, ನಿತ್ಯಕರ್ಮಗಳನಂತರ ಆನಂದ ಶರ್ಮರ ಆಜ್ಞೆ ಪಡೆದು ಶ್ರೀಪಾದ ಶ್ರೀವಲ್ಲಭರ ದರ್ಶನಾರ್ಥಿಯಾಗಿ ಕುರುವಪುರ ಕಡೆ ಹೋರಟೆನು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 14

# ದತ್ತದಾಸನಿಗೆ ಅಭಯ ಪ್ರದಾನ

ನಾನು ಕೆಲವು ದಿನಗಳ ಪ್ರಯಾಣ ಮಾಡಿದ ನಂತರ 'ಮುಂತಕಲ್ಲು' ಎಂಬ ಗ್ರಾಮ ಸೇರಿದೆನು. ದಾರಿಹೋಕರನ್ನು ವಿಚಾರಿಸಲು ಕೆಲವು ದಿನಗಳು ಪ್ರಯಾಣಿಸಿದರೇ ಕುರುವಗಡ್ಡ ಸೇರುವೆನೆಂದರು. ಶ್ರೀಪಾದರನ್ನು 'ಶರೀರದಲ್ಲಿ ಎಂದು ನೋಡುವೆನೋ' ಎಂಬುವ ಆತುರತೆ ಇತ್ತು. ಒಂದು ಕೈಯಲ್ಲಿ ಹೆಂಡದ ಪಾತ್ರೆ ಹಿಡಿದು ಬರುತ್ತಿರುವ ಒಬ್ಬನನ್ನು ಕಂಡೆನು. ನಾನು ಪಂಡಿತನಲ್ಲದಿದ್ದರೂ ಬ್ರಾಹ್ಮಣನಾದ ಕಾರಣ ಒಂದಷ್ಟು ಆಚಾರವಂತನಾದ ಕಾರಣ, ಆ ಹೆಂಡದ ವಾಸನೇ ನನಗೆ ಆಗದ ಕಾರಣ ಮತ್ತು ಅವ್ಯಕ್ತಿ ನನ್ನ ಕಡೆಗೆಬರುತ್ತಿರುವ ಕಾರಣ, ನನಗೆ ಬಾಧೆ ಉಂಟು ಮಾಡಿತು. ಶ್ರೀಪಾದ ನಾಮ ಹೇಳುತ್ತಾ ವೇಗವಾಗಿ ನಡಿಯುತ್ತಿದ್ದೆ. ನನಗಿಂತ ಬೇಗ ಬರುತ್ತಾ ಆತ ನನ್ನನ್ನು ಸೇರಿದನು. 'ನಾನು ನಿನ್ನನ್ನು ಸೇರಲು ಬರುತ್ತಿದ್ದರೇ ದೂರ ಹೋಗುವುದು ಸರಿಯಾ?' ಎಂದು ಪ್ರಶ್ನಿಸಿದನು.

ಆಗ ನಾನು, "ಎಲಾ, ನೀನ್ಯಾರು? ನನ್ನೊಡನೇ ನಿನಗೇನು ಕೆಲಸ?'' ಕೇಳಿದೆನು. ಅದಕ್ಕೆ ಆತನು ನಕ್ಕನು. ಹೆಂಡದ ವಾಸನೆ ಚಿಮ್ಮುತ್ತಿತ್ತು. ''ನಾನ್ಯಾರೋ ತಿಳಿಯುವ ಮುನ್ನ, ನೀನ್ಯಾರೋ, ಎಲ್ಲಿಂದ ಬಂದೆಯೋ ಪಯಣ ಯಾವ ಕಡೆಗೋ ತಿಳಿದುಕೊಳ್ಳಬೇಕು'' ಎಂದನು. "ಹೆಂಡದ ಸಂಪರ್ಕದವರು ಸಹಾ ಈ ಪ್ರಾಂತದಲ್ಲಿ ವೇದಾಂತ ಮಾಡುವುದು ಕಲಿತಿರುವರೇ?'' ಎಂದುಕೊಂಡೆನು. ಆ ಕಡೆ ಹೋಗುವವರನ್ನೆಲ್ಲರನ್ನೂ ಆತ ಕರೆದನು. ಒಂದು ಗುಂಪೇ ಅಲ್ಲಿ ಸೇರಿತು. ಅ ಹೆಂಡ ಮಾರುವ ವ್ಯಕ್ತಿ, "ನಾನೀ ಪ್ರಾಂತದಲ್ಲಿ ಹೆಂಡ ಮಾರಿಕೊಳ್ಳುವವನು. ಧರ್ಮಬದ್ಧವಾಗಿ ಜೀವಿಸುವವನು. ನನಗೆ ಈಚಲ ಮರವೇ ಕಲ್ಪವೃಕ್ಷ. ನಾನು ಮರದಿಂದ ಹೆಂಡ ತರುವವರಿಗೂ ಈ ಬ್ರಾಹ್ಮಣ ಮರದ ಕೆಳಗೆ ನನಗಾಗಿ ಕಾಯುತ್ತಿದ್ದ. ಈತ ಬ್ರಾಹ್ಮಣನಾದರೂ ಹೆಂಡ ಕುಡಿಯುವವನೆಂದು, ಕೊಳ್ಳಲು ಕಾಸಿಲ್ಲವೆಂದು ಸ್ವಲ್ಪ ಹೆಂಡ ಕೊಟ್ಟು ಪುಣ್ಯಪಡಿ ಎಂದು ಬೇಡಿರುವನು. ನಾನು ಒಪ್ಪಿ, ಕೊಡಲು ಸಿದ್ಧನಾದರೇ ನೀವೆಲ್ಲಾ ಈ ಕಡೆ ಹೋಗುವುದನ್ನು ಗಮನಿಸಿ ತನ್ನ ಬ್ರಾಹ್ಮಣತ್ವಕ್ಕೆ ನೀವು ಅವಹೇಳನೆ ಮಾಡುವಿರೆಂದು ಈಗ ಬೇಡ ಎನ್ನುತ್ತಿದ್ದಾನೆ. ಇದರಿಂದ ನಾನು ಹೆಂಡ ಕೊಡಲು ಒಪ್ಪಿ ವಾಗ್ದಾನಭಂಗ ಮಾಡಿದ ಮಹಾಪಾಪಿ ಆಗುವೆನು. ನಮ್ಮಕುಲದಲ್ಲಿ ಈ ಕಲ್ಲು (ಹೆಂಡ) ಅಮೃತಕ್ಕೆ ಸಮಾನ. ಒಬ್ಬ ಬ್ರಾಹ್ಮಣನಿಗೆ ದಾನ ಕೊಟ್ಟಲ್ಲಿ ನನಗೆ ವಿಶೇಷ ಪುಣ್ಯ ಲಭಿಸುವುದು. ನನ್ನ ಆಸೆ ನಿರಾಶೆ ಆಗುತ್ತಿದೆ. ತಾವು ಈ ಬ್ರಾಹ್ಮಣನಿಗೆ ಉಪದೇಶ ಮಾಡಿ ನಾನು ಪಾಪಿ ಆಗತಂದೆ ಮಾಡಿ'' ಎಂದನು.

ಅಲ್ಲಿ ಸೇರಿದ ಜನರೆಲ್ಲರೂ ಕಲ್ಲು, ಸಾರಾ ತೆಗೆದು ಜೀವಿಸುವ ಗೌಡ ಕುಲಸ್ಥರಾದ್ದರಿಂದ ತಮ್ಮ ಕುಲದವನ ಮಾತಿಗೆ ಬೆಲೆಕೊಟ್ಟರು. ನನಗೆ ಬಲವಂತವಾಗಿ ಸಾರಾಯಿ ಕುಡಿಸಲಾಯಿತು. ತದನಂತರ ಅವರೆಲ್ಲಾ ಅವರವರ ದಾರಿ ಹಿಡಿದು ಹೊರಟು ಹೋದರು. ನನಗೆ ಹೆಂಡ ಕುಡಿಸಿದ ವ್ಯಕ್ತಿ ಸಹಾ ಹೊರಟು ಹೋದನು. ನಾನು ಮನಸ್ಸಿನಲ್ಲಿ 'ಉತ್ತಮ ಬ್ರಾಹ್ಮಣ ಕುಲದಲ್ಲಿ ಜನ್ಮಿಸಿ, ಅವತಾರ ದೇವ ಶ್ರೀಪಾದ ಶ್ರೀವಲ್ಲಭರ ದರ್ಶನಕ್ಕೆ ಹೊರಟು ಇಷ್ಟು ನೀಚವಾದ ಹೆಂಡ ಸೇವಿಸಿದೆನು. ನನ್ನ ಬ್ರಾಹ್ಮಣತ್ವಕುಲ ಕೆಟ್ಟಿದೆ. ಪರಮ ಪವಿತ್ರರಾದ ಶ್ರೀಪಾದರ ಮುಖ ನಾನು ಹೇಗೆ ನೋಡುವುದು? ನನ್ನ ಕರ್ಮ ಹೀಗೆ ಕೆಟ್ಟಿದೆ. ವಿಧಿ ಬಲವಾದದ್ದು. ನನ್ನ ಹಣೆಬರಹ ಹೀಗೆ ವಕ್ರವಾಗಿ ಬರೆದಿರಲೂ ಅದಕ್ಕೆ ವಿರುದ್ಧವಾಗಿ ಹೇಗೆ ನಡೆಯುವುದು?'' ಎಂದು ಕುಗ್ಗಿಹೋದೆನು.

ನನ್ನ ಹೆಜ್ಜೆ ಹದ ತಪ್ಪುತ್ತಿತ್ತು. ನನ್ನ ಮುಖದಿಂದ ಸಾರಾಯಿ ಗಬ್ಬುವಾಸನೆ ಹೊರಡುತ್ತಿತ್ತು. ಶರೀರದಲ್ಲಿ ಸ್ವಲ್ಪ ಮತ್ತು ಏರುತ್ತಿತ್ತು. ನನ್ನ ದುರದೃಷ್ಟವನ್ನು ದೂಷಿಸಿಕೊಳ್ಳುತ್ತಾ ಶ್ರೀಪಾದರ ನಾಮೋಚ್ಚಾರಣೆ ಮಾಡುತ್ತಾ ನಡೆಯುತ್ತಿದ್ದೆನು. ಮಾರ್ಗಮಧ್ಯೆ ಒಂದು ಪರ್ಣಶಾಲೆ ಕಾಣಿಸಿತು. ಅದು ಒಂದು ತಪೋಭೂಮಿಯಂತೆ ಇತ್ತು. ಅಲ್ಲಿ ಯಾರೋ ಮಹಾತ್ಮರು ಇರುವರೆಂದುಕೊಂಡೆ. ಮಹಾತ್ಮರ ದರ್ಶನಕ್ಕೆ ನಾನು ಅಯೋಗ್ಯನೆಂದು ಭಾವಿಸಿದೆ. ಆ ಪವಿತ್ರ ತಪೋಭೂಮಿಯ ಮೇಲೆ ಹೆಜ್ಜೆ ಇಡಲು ಮನಸಾಗಲಿಲ್ಲ. ಮೇಲ್ಪಟ್ಟು ಸಾರಾಯಿ ಸೇವಿಸಿದ ನನಗೆ ಪವಿತ್ರ ಆಶ್ರಮ ಪ್ರವೇಶ ನಿಂದನೀಯವೆನಿಸಿತು.

ನನ್ನ ದಾರಿಯಲ್ಲೇ ನಾನು ಹೋಗುತ್ತಿರಲು ಹಿಂದೆ ಯಾರೋ ಚಪ್ಪಾಳೆ ತಟ್ಟಿ, "ಎಲಾ ಶಂಕರ ಭಟ್ಟೂ! ನಿಲ್ಲು. ನಿನ್ನನ್ನು ಆಶ್ರಮಕ್ಕೆ ಕರೆತರಲು ದತ್ತಾನಂದ ಸ್ವಾಮಿಗಳ ಆಜ್ಞೆ" ಎಂದು ಗಟ್ಟಿಯಾಗಿ ಕೂಗಿದನು. ದೈವಲೀಲೆಗೆ ಆಶ್ಚರ್ಯಪಡುತ್ತಾ ನಿಂತೆನು. ಆತ, ನನ್ನನ್ನು ಶ್ರೀ ದತ್ತಾನಂದ ಸ್ವಾಮಿಗಳ ಮುಂದೆ ನಿಲ್ಲಿಸಿದನು. ಕರುಣಾನೇತ್ರದಿಂದ ಶ್ರೀಸ್ವಾಮಿ ನನ್ನನ್ನು ಬೇಗ ಸ್ನಾನ ಮಾಡಿಬರಲು ಆಜ್ಞಾಪಿಸಿದರು. ಸ್ನಾನಾನಂತರ ಮಧುರ ಫಲಗಳನ್ನು ಕೊಟ್ಟರು. ತಿಂದನಂತರ ನನ್ನನ್ನು ಕರೆದು, "ಮಗು! ದತ್ತಾತ್ರೇಯರ 9ನೆ ಅವತಾರವಾದ ಶ್ರೀಪಾದ ಶ್ರೀವಲ್ಲಭರಿಗೆ ನಿನ್ನಲ್ಲಿ ಅದೆಷ್ಟು ಕಾರುಣ್ಯ! ಅವರು, ಅವರ ಅಮೃತ ಹಸ್ತಗಳಿಂದ ನಿನಗೆ ಅಮೃತವನ್ನೇ ಕುಡಿಸಿದರು. ಅವರನ್ನು ನೀನು ಸಾರಾಯಿ ತಯಾರಿಕೆ ಗೌಡನೆಂದು ನೆನೆಸಿದೆ! ಅವರು ನಿನಗಿತ್ತ ಅಮೃತವನ್ನು ಸಾರಾಯಿಯಂತೆ ಭ್ರಮಿಸಿದೆ! ಎಂತಹ ಆಶ್ಚರ್ಯ!" ಎಂದು ನುಡಿದರು.

ನನಗೆ ತಲೆ ತಿರುಗಿದಹಾಗೆ ಆಯಿತು. ನಾನು ನೋಡುತ್ತಿರುವ ಈ ವಿಶ್ವವೇ ಕ್ರಮಕ್ರಮವಾಗಿ ಕಣ್ಮರೆ ಆಗುತ್ತಿತ್ತು. ನಂತರ ಅನಂತ ಚೈತನ್ಯಶಕ್ತಿ ಮಹಾಸಾಗರದ ತರಂಗಗಳಂತೆ ನನ್ನ ಮೇಲೆ ಎದ್ದುಬೀಳುವಂತೆ ತೋಚಿತು. ಅನಂತವಾದ ಆ ಶಕ್ತಿಯಿಂದ ಮಹಾ ಹೀನವಾದ ಮತ್ತು ಅತಿ ಅಲ್ಪವಾದ ನನ್ನ ಅಹಂಕಾರ ರೂಪಿ ಜೀವಾತ್ಮ ಅದೃಶ್ಯವಾಯಿತು. 'ನಾನು' ಎಂಬುದು ಏನೋ ಗೊತ್ತಿಲ್ಲದ, ಗೊತ್ತಾಗದ ಒಂದಾನೊಂದು ದಿವ್ಯಾನಂದದಲ್ಲಿ ನಾನು ಮುಳುಗಿಹೋದೆ. ನನ್ನಲ್ಲಿ ಪರಿಮಿತವಾದ 'ನಾನು' ಎಂಬುದು ನಶಿಸಿಸಲೂ ಈ ಸಮಸ್ತ ಸೃಷ್ಟಿಯು ಕೇವಲ ಒಂದು ಸ್ವಪ್ನದಂತೆ ಕಾಣಿಸಿತು.

ಇಷ್ಟರೊಳಗೆ ಶ್ರೀಸ್ವಾಮಿ ನನ್ನ ಮೇಲೆ ಮಂತ್ರ ಜಲವನ್ನು ಪ್ರೋಕ್ಷಿಸಿ ಪವಿತ್ರ ಭಸ್ಮವನ್ನು ನನ್ನ ಹಣೆಗೆ ತಮ್ಮ ದಿವ್ಯ ಹಸ್ತಗಳಿಂದ ಇಟ್ಟರು. ನಾನು ತನ್ಮಯನಾದೆನು. ಕೆಲ ಸಮಯ ನಾನು ದಿವ್ಯಾನಂದವನ್ನು ಅನುಭವಿಸೆದನು. ಆ ತನ್ಮಯದಲ್ಲಿ ನಾನು ಸ್ಥೂಲತತ್ತ್ವದೊಳು ಸೇರಿಹೋದೆನೆಂದು ತಿಳಿದುಕೊಂಡೆನು.

ಶ್ರೀಸ್ವಾಮಿ, "ಒಂದಾನೊಂದು ಜನ್ಮದಲ್ಲಿ ನೀನು ಗೌಡನಾಗಿದ್ದೆ. ಹೆಚ್ಚಾಗಿ ಸಾರಾಯಿ ಸೇವಿಸುತ್ತಿದ್ದೆ. ನಿನ್ನ ಅಂತರಾಂತರಗಳಲ್ಲಿ ಸಾರಾ ಕುಡಿಯಬೇಕೆಂಬುವ ಆಸೆ ಉಳಿದಿತ್ತು. ಶ್ರೀಪಾದರ ಅನುಗ್ರಹವೇ ಇಲ್ಲದಿದ್ದರೇ, ಬ್ರಾಹ್ಮಣನಾಗಿದ್ದರೂ ಸಾರಾಯಿ ಕುಡಿತ ಅಭ್ಯಾಸ ಮಾಡಿಕೊಂಡು ಕೆಳಗಿಳಿಯುತ್ತಿದ್ದೆ. ಶ್ರೀಪಾದರದು ಅಮೃತ ದೃಷ್ಟಿ. ನಿನ್ನ ಜಾತಕದಲ್ಲಿ ಅನೇಕ ಅಪಾಯಗಳು ನಿನಗೆ ಇವೆ. ಶ್ರೀಗಳು ತಮ್ಮ ಅಮೃತ ದೃಷ್ಟಿಯಿಂದ ನಿನಗೆ ತಿಳಿಯದ ಹಾಗೆಯೇ ಅವನ್ನು ಪರಿಹರಿಸುತ್ತಿರುವರು. ಶ್ರೀಗುರುಗಳ ಮಹಿಮೆಯನ್ನು ವರ್ಣಿಸುವುದು ಯಾರಿಗೆ ಸಾಧ್ಯ? ಅವರ ಮಹಿಮೆಯನ್ನು ವರ್ಣಿಸಲು ವೇದಗಳೇ ಸೋತಿವೆ!" ಎಂದು ವಿವರಿಸಿದರು.

ಆಗ ನಾನು, "ಸ್ವಾಮಿ! ಶ್ರೀಗುರುವಿನ ಮಹಿಮೆ ತಿಳಿಯಲಿಚ್ಛಿಸಿದ್ದೇನೆ. ತಿಳಿದುಕೊಂಡಷ್ಟು ಮತ್ತಷ್ಟು ಕೇಳಿ ತಿಳಿದುಕೊಳ್ಳಲು ಉತ್ಸುಕತೆ ಅಧಿಕವಾಗಿದೆ. ಶ್ರೀಗಳು ಆಗಾಗ ಅವರು ಶ್ರೀ ನರಸಿಂಹ ಸರಸ್ವತಿಗಳಾಗಿ ಅವತರಿಸುವೆನೆಂದು ಹೇಳುತ್ತಿದ್ದಾರೆ. ಅವರ

ಲೀಲೆಗಳಲ್ಲಿನ ಅಂತರಾರ್ಥ ತಿಳಿಯಲು ಉತ್ಸುಕನಾಗಿರುವೆ'' ಎಂದೆನು. ಆಗ ಶ್ರೀ ಸ್ವಾಮಿ ''ಮಗು! ವೇದಋಷಿಗಳ ತತ್ತ್ವಾನ್ವೇಷಣೆಯ ಪ್ರಧಾನ ಉದ್ದೇಶ ಆಧ್ಯಾತ್ಮಿಕವಾದ ಅಂತಸ್ಸತ್ಯ, ಅವರ ನಿಗೂಢ ಶಬ್ದಗಳಲ್ಲಿ ಅತಿ ಮುಖ್ಯವಾದದ್ದು. 'ಋತಂ' ಎಂದರೇ ಸತ್ಯ. ಇದೇ ಆತ್ಮಸತ್ಯ, ವಸ್ತು ಸತ್ಯ. ಇದನ್ನು ಅವರು ಕರ್ಮಕಾಂಡಕ್ಕೆ ಅನುಸಾರವಾಗಿ ವ್ಯಾಖ್ಯಾನ ಮಾಡುವಾಗ ಸತ್ಯವೆಂದು, ಯಜ್ಞವೆಂದು, ಜಲವೆಂದು, ಅನ್ನವೆಂದು ವಿಧವಿಧವಾಗಿ ನುಡಿದರು. ಅದೇ ಪ್ರಕಾರ ಸರಸ್ವತಿ ಶಬ್ದ ಸಹಾ ಬಹಳ ವಿಶಿಷ್ಟವಾದದ್ದೆ. ಸರಸ್ವತೀ ನದಿ ಅಂತರ್ವಾಹಿನಿ. ಇದನ್ನು ವರ್ಣಿಸುವಾಗ ಸತ್ಯವಾಕ್ಕನ್ನು ಪ್ರಬೋಧಿಸುವುದಾಗಿಯು, ಋತ ಪ್ರಬೋಧವನ್ನು ಮಾಡುವುದಾಗಿಯು, ಭಾವನ ಸಮೃದ್ಧವಾದ ಚೈತನ್ಯವನ್ನು ಪ್ರಬೊಧಿಸುವುದಾಗಿಯು, ಮಹಾರ್ಣವನ್ನು ತಿಳಿಸುವುದಾಗಿಯು, ನಮ್ಮ ಚಿತ್ತಗಳನ್ನು ಬೆಳಗಿಸುವುದಾಗಿಯು ಹೇಳಲಾಗಿದೆ. ಆದ್ದರಿಂದ ಶ್ರೀಗುರುಗಳು, ಒಂದಾನೊಂದು ಪ್ರಬೋಧಕ ಶಕ್ತಿ, ಪ್ರಬೋಧೀನಾ ಪ್ರವಾಹ, ಅವರದ್ದು ಸತ್ಯವಾಣಿ. ನಮ್ಮ ಚಿತ್ತಗಳನ್ನು ಅವರು ತೇಜೋಮಯ ಮಾಡುವರು. ಪರಮ ಸತ್ಯವನ್ನು ಅಂತರ್ ಜ್ಞಾನವನ್ನು ಅವರು ನಮ್ಮಲ್ಲಿ ಬಿತ್ತುವರು. **ವೇದದಲ್ಲಿ ಯಜ್ಞ ಎಂಬುದು ಅಂತಃಪ್ರವೃತ್ತಿಗೆ ಬಾಹ್ಯ ಗುರ್ತು. ಯಜ್ಞಗಳಿಂದ ಮಾನವರು ತಮಗೆ ಸೇರಿದ್ದನು ದೇವತೆಗಳಿಗೆ ಅರ್ಪಿಸುವರು. ಅದಕ್ಕೆ ಪ್ರತ್ಯುಪಕಾರವಾಗಿ ದೇವತೆಗಳು ಅವರಿಗೆ ಗೋಗಣಗಳನ್ನು, ಅಶ್ವಗಳನ್ನು ಕೊಡುವರು.** ಗೋಗಣ ಎಂದರೇ ತೇಜಸ್ಸಿನ ಸಂಪತ್ತು. ಅಶ್ವಗಳೆಂದರೇ ಶಕ್ತಿ ಸಂಪತ್ತು. ಅದೇ ರೀತಿ ಅವರು ನಮಗೆ ತಪಶ್ಶಕ್ತಿಗಳನ್ನು ಸಹಾ ಪ್ರಸಾದಿಸುವರು. ವೇದಗಳಲ್ಲಿನ ನಿಗೂಢ ಅರ್ಥ ಯೋಗ್ಯರಾದವರಿಗೆ ತಿಳಿಸಲು ಬಹಳ ರಹಸ್ಯವಾಗಿಡಲಾಗಿದೆ. ಯಜ್ಞ ಕಾರ್ಯಗಳಲ್ಲಿ ಪ್ರಧಾನ ಪದಾರ್ಥ ಘೃತ. ಇದಕ್ಕೆ ವ್ಯಾಖ್ಯಾರ್ಥ ನೋಡಿದರೇ ಬೆಣ್ಣೆ ಕಾಸಿದ ತುಪ್ಪ. ಆದರೇ 'ಘೃತ' ಶಬ್ದಕ್ಕೆ 'ದೀಪ್ತಿ' ಎಂದು ಇನ್ನೊಂದರ್ಥವಿದೆ. ವೇದದಲ್ಲಿ 'ಗೋ' ಶಬ್ದಕ್ಕೆ 'ಬೆಳಕು' ಎಂದು ಅರ್ಥವಿದೆ. ಅಶ್ವವು ಶಕ್ತಿಗೂ, ಆತ್ಮಬಲಕ್ಕೂ, ತಪಶ್ಶಕ್ತಿಗೂ ಒಂದು ಗುರ್ತು. ಋಷಿಗಳು ಅವರವರ ಮಂತ್ರಗಳಲ್ಲಿ ಗೋವು ಮುಖ್ಯಸ್ಥವಾದ ಅಶ್ವ ರೂಪವನ್ನು ವರವಾಗಿ ಬಯಸಿದರು. ಅಂದರೇ ತೇಜಸ್ಸಿನಿಂದ ನಡೆಸಲಾಗುವ ಆಧ್ಯಾತ್ಮಿಕ ಶಕ್ತಿ ಸಮೂಹವನ್ನು ಋಷಿಗಳು ಅಪೇಕ್ಷಿಸುತ್ತಿರುವರು. ಅಂದರೆ ಗೋ ಕಿರಣಗಳಿಂದ ಅಭಿವೃದ್ಧಿ ಹೊಂದುವ ಅಶ್ವ ಶಕ್ತಿಗಳೆಂದು ಇದರ ಅರ್ಥ. ಋಷಿಗಳು ಪುತ್ರರನ್ನು, ಸಂತತಿಯನ್ನೂ ಬಯಸುತ್ತಾ ಅದೆಷ್ಟೋ ಮಂತ್ರೋಚ್ಛಾರಣೆಯಿಂದ ಪ್ರಾರ್ಥಿಸಿದ ಹಾಗೆ ತಿಳಿಯುತ್ತಿದೆ. ಆದರೇ ಇದರಲ್ಲಿ ಒಂದು ಒಳಗಿನ ಅರ್ಥವಿದೆ. ಪುತ್ರೋತ್ಪತ್ತಿ ಎಂಬುವುದು ಅಂತರ್ ಶಕ್ತಿ ಹುಟ್ಟುವಿಕೆಗೆ ಗುರುತು. ಇದನ್ನೇ ಅವರು, 'ಅಗ್ನಿ ಖುದ್ದಾಗಿ ನಮಗೆ ಪುತ್ರನಾಗಿ ಜನ್ಮಿಸುತ್ತಿದ್ದಾನೆಂದು, ಅಗ್ನಿ ಯಜ್ಞದೊಳು ಹುಟ್ಟಿದ ಮಗನೆಂದು ವಿಶ್ವಾಗ್ನಿ ಆಗಿ ಆತ, ಪಿತರರಿಗೆ ಜನಕನೆಂದೂ' ವರ್ಣಿಸಿದರು. ಹಾಗೆಯೇ ಸಲಿಲ, ಉದಕವೆಂಬುದು ಸಹಾ ಸಂಕೇತಾರ್ಥದಲ್ಲೇ ಹೇಳಲಾಗಿವೆ. 'ಸಲಿಲ ಅಪ್ರಕೇತ' ಎಂದರೇ ಚೈತನ್ಯ ರೂಪವಾದ ಸಮುದ್ರ, ಅಂದರೇ ದೈವತ್ವವು, ಅಂತರ್ಲೀನವಾಗಿದ್ದ ಜಡಾಬ್ಧಿ' ಎಂಬುವ ಕಪ್ಪು ಸಮುದ್ರದಿಂದ ಅದರ ಸ್ವಕೀಯ ಶಕ್ತಿ ಕಾರಣ, ದಿವ್ಯತ್ವವು ರೂಪಗೊಳ್ಳುತ್ತಿದೆ ಎಂಬುವ ಅರ್ಥದಲ್ಲಿ ನುಡಿದರು. ಇದನ್ನೇ ಮಹಾಸಮುದ್ರವೆಂದು ಸಹಾ ವರ್ಣಿಸಿದರು. ಋಷಿಗಳು ಒಂದಾನೊಂದು ಸೂಕ್ತದಲ್ಲಿ, ಶ್ರೀ ಸರಸ್ವತಿ ತನ್ನ ಅಂತರ್‌ಜ್ಞಾನಕಿರಣಗಳಲ್ಲಿ ಊರ್ಧ್ವ ಸಲಿಲಗಳನ್ನು ನಮಗೆ ಕಾಣಿಸಿಕೊಳ್ಳುವಂತೆ ಮಾಡುತ್ತಿಹಳೆಂದರು. ವೇದದಲ್ಲಿ ಹೇಳಲಾದ ಸಪ್ತ ಸ್ರೋತಸ್ವಿಗಳಿಗೆ ಸಹಾ ಅಂತರಾರ್ಥವಿದೆ. ಅವು ಸ್ವರ್ಗ ವಿಭೂತಿಗಳು. ಪರಾಶರ ಮಹರ್ಷಿ 'ಸಲಿಲಗಳಲ್ಲಿ'ವಸಿಸುವ ಜ್ಞಾನವನ್ನು 'ವಿಶ್ವ ಪ್ರಾಣ'ವೆಂದು ಹೇಳಿರುವರು. ಗೋಗಳನ್ನು ಅಪಹರಿಸುವ ದರೋಡೆಕಾರರನ್ನು 'ವೃತ್ರರು, ಧಸ್ಯರು' ಎಂದು ಕೂಗಿದರು. ವೃತ್ರನು, ತೇಜಸ್ಸನ್ನು, ಅಂದರೇ ಗೊವುಗಳನ್ನು, ಸಲಿಲವನ್ನು, ಪರಮ ಸತ್ಯವನ್ನು, ಊರ್ಧ್ವ

ಚೈತನ್ಯವನ್ನು ಆಚ್ಛಾದಿಸಿ ರಹಸ್ಯವಾಗಿ ತನ್ನ ಸ್ವಾಧೀನದಲ್ಲಿಟ್ಟುಕೊಳ್ಳುವಂತಹ ರಾಕ್ಷಸ. ಇಂತಹ ನೀಚ ಕಾರ್ಯ ಮಾಡಿಸುವ ಶಕ್ತಿಗಳೇ 'ವೃತ್ರರು'. ಇವರೇ 'ದಸ್ಯರು', ತಮಶ್ಶಕ್ತಿಗಳು. ಸತ್ಯ ಜ್ಞಾನವನ್ನು ಅನ್ವೇಷಿಸುವರಿಗೆ ದೊಡ್ಡ ವಿರೋಧಿಗಳು'' ಎಂದು ವಿವರಿಸಿದರು.

## ಔದುಂಬರ ವೃಕ್ಷಕ್ಕೆ ಕೊಟ್ಟ ವರಗಳು

## ನರಸಿಂಹ ಸರಸ್ವತಿ ಅವತಾರ ವೈಶಿಷ್ಟ್ಯ

ಮಗು! ಶ್ರೀ ಮಹಾವಿಷ್ಣು ಹಿರಣ್ಯಕಶಪನನ್ನು ಸಂಹರಿಸಲು, ಔದುಂಬರ ವೃಕ್ಷದ ಮರದ ಕಂಬದಿಂದ ಶ್ರೀ ನರಸಿಂಹ ಸ್ವಾಮಿಯಾಗಿ ಪ್ರತ್ಯಕ್ಷವಾಗಿ, ಪ್ರಹ್ಲಾದನನ್ನು ರಕ್ಷಿಸಿದನು. ಪ್ರಹ್ಲಾದ ಅರಸಾದನು. ಸ್ವಲ್ಪ ಕಾಲದ ನಂತರ ಎರಡು ತುಂಡಾಗಿದ್ದ ಆ ಕಂಬ ಚಿಗುರಿಸಲು ಆರಂಭಿಸಿತು. ಅಲ್ಲಿ ಔದುಂಬರ ವೃಕ್ಷವು ರೂಪುಗೊಂಡಿತು. ಪ್ರಹ್ಲಾದನು ಆಶ್ಚರ್ಯಗೊಂಡು ಆ ಔದುಂಬರ ವೃಕ್ಷವನ್ನು ಪೂಜಿಸಿದನು. ಶ್ರೀ ದತ್ತಾತ್ರೇಯರು ಒಮ್ಮೆ ಆ ಔದುಂಬರ ವೃಕ್ಷ ಮೂಲದಲ್ಲಿ ಧ್ಯಾನಸ್ಥರಾಗಿ ದರ್ಶನವಿತ್ತು ಪ್ರಹ್ಲಾದನಿಗೆ ಜ್ಞಾನಬೋಧೆ ಮಾಡಿದರು. ಪ್ರಹ್ಲಾದನಿಗೆ ದ್ವೈತ ಸಿದ್ಧಾಂತದಲ್ಲಿದ್ದ ಆಸಕ್ತಿಯನ್ನು ಕಂಡು ಶ್ರೀದತ್ತರು, ''ನೀನು ಕಲಿಯುಗದೊಳು ಯತಿ ವೇಷಧಾರಿಯಾಗಿ ದೀನ ಜನೋದ್ಧಾರಣೆ ಮಾಡಬಲ್ಲೆ, ದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡಬಲ್ಲೆ'' ಎಂದಾಶೀರ್ವಾದ ಮಾಡಿದರು. **ಪರಮ ಪವಿತ್ರವಾದ ಔದುಂಬರ ಮನುಷ್ಯ ಆಕೃತಿ ತಾಳಿ, ಶ್ರೀದತ್ತರ ಚರಣ ಕಮಲಗಳ ಮೇಲೆ ಬಿದ್ದು ತನಗೂ ವರವನ್ನು ಅನುಗ್ರಹಿಸುವಂತೆ ಬೇಡಿತು. ಆಗ ಶ್ರೀದತ್ತರು "ಪ್ರತಿಯೊಂದು ಔದುಂಬರ ಮೂಲದಲ್ಲೂ ನಾನು ಸೂಕ್ಷ್ಮ ರೂಪದಲ್ಲಿರುವೆನು. ನಿನ್ನಿಂದ ನರಸಿಂಗಾಕೃತಿ ಹೊರಬಿದ್ದ ಕಾರಣ, ಕಲಿಯುಗದಲ್ಲಿ ನರಸಿಂಹ ಸರಸ್ವತಿ ನಾಮದಲ್ಲಿ ಅವತರಿಸುವೆ"ನೆಂದು ವಾಗ್ದಾನ ಮಾಡಿದರು.** ಇದು ಪೈಂಗ್ಯ ಬ್ರಾಹ್ಮಣದಲ್ಲಿ ವರ್ಣಿಸಲಾಗಿದೆ. ಈ ಪೈಂಗ್ಯ ಬ್ರಾಹ್ಮಣ ಈಗ ಸಪ್ತ ಮಹರ್ಷಿಗಳ ತಪೋಭೂಮಿಯಾದ ಹಿಮಾಲಯದಂದಲಿ ಶಂಬಲ ಗ್ರಾಮ ಪರಿಸರದಂದು ಮಾತ್ರವೇ ನಿಂತಿದೆ, ಮಿಕ್ಕ ಕಡೆ ಲುಪ್ತವಾಗಿ ಹೋಗಿದೆ. ಇದ್ದೀಯ? ಇಲ್ಲವೇ? ಎಂಬ ಪ್ರಶ್ನೆ ಬಂದಾಗ ಅವರು ಇದ್ದೀನಿ ಎಂದು ತಿಳಿಸಲು ಜಡವಾದ ಸ್ಥಂಭದಿಂದ ಹುಟ್ಟಿದ ಅವೇಶಾವತಾರ ಶ್ರೀ ನರಸಿಂಹ ಸ್ವಾಮಿ. **ಅದೇ ರೀತಿಯಲ್ಲಿ ಕಲಿಯುಗದ ಜನರು, ಕಲ್ಮಷಚಿತ್ತರಾಗಿ ದೇವರಿದ್ದಾನ? ಇಲ್ಲವಾ? ಎಂಬ ಕುತರ್ಕಗಳು ಮಾಡುತ್ತಾ ಇದ್ದರೇ, ಅವರು ಇದ್ದೇನೆಂದು ಋಜು ಮಾಡುವುದೇ ಅಲ್ಲದೇ ಪ್ರಹ್ಲಾದನನ್ನು ರಕ್ಷಿಸಿದ ತರಹಾ ಭಕ್ತ ಸಂರಕ್ಷಣೆ ಮಾಡಿದೆನೆನ್ನಲು ಸೂಚನಪ್ರಾಯವಾಗಿ ಅವರು ನರಸಿಂಹ ಸರಸ್ವತಿಯಾಗಿ ಅವತರಿಸುವರು.**

ಆಗ, ಶ್ರೀ ಸ್ವಾಮಿಗಳನ್ನು ನಾನು ''ಸ್ವಾಮಿ! ತಾವು ಶ್ರೀ ಪೀಠಿಕಾಪುರದಲ್ಲಿ ಶ್ರೀಪಾದರನ್ನು ದರ್ಶಿಸಿದ್ದೀರಾ? ಅವರ ಬಾಲ್ಯ ಲೀಲೆಗಳನ್ನು ಕೇಳಲು ಮನಸ್ಸು ಆತುರತೆಯಿಂದ ಇದೆ'' ಎಂದು ಬೇಡಿದೆನು.

## ಶ್ರೀಪಾದರ ಅದ್ಭುತಲೀಲೆ

ಶ್ರೀ ಸ್ವಾಮಿ ಹೀಗೆ ಹೇಳಲಾರಂಭಿಸಿದರು, ''ನನಗೆ ಚಿಕ್ಕ ವಯಸ್ಸಿನಿಂದಲೇ ತೊದಲು ಇತ್ತು. ಎಲ್ಲರೂ ನನ್ನನ್ನು ಅವಹೇಳನೆ ಮಾಡುತ್ತಿದ್ದರು. ಇದರ ಜೊತೆಗೆ ನನಗೊಂದು ವಿಚಿತ್ರ ಖಾಯಿಲೆ ಸೇರಿತು. 5ನೇ ವರುಷದಿಂದ ಈ ಖಾಯಿಲೆ ಜಾಸ್ತಿ ಆಯಿತು. ಒಂದು ವರುಷ ತುಂಬವಷ್ಟುರೊಳಗೆ, 10 ವರುಷ ಕಳೆದ ಭಾವನೆ ಆಗುತ್ತಿತ್ತು. ನನ್ನ 10ನೇ ವರುಷ ವಯಸ್ಸಿನಲ್ಲಿ 50 ವರುಷ ದಾಟಿದ ವೃದ್ಧ ಲಕ್ಷಣಗಳು ಕಂಡುಬಂತು.

ಶ್ರೀ ಪೀಠಿಕಾಪುರದಲ್ಲಿ ಬಾಪನಾರ್ಯರ ಅಧ್ವರ್ಯದಲ್ಲಿ ಯಜ್ಞ ಒಂದು ನಡೆಯುತ್ತಿತ್ತು. ಬ್ರಾಹ್ಮಣರಿಗೆ ಒಳ್ಳೆಯ ಸಂಭಾವನೆ ಕೊಡಲಾಗುತ್ತಿತ್ತು. ವಿದ್ಯೆ ಇರುವವರಿಗೆ ಭೂರಿ ದಕ್ಷಿಣೆ ಕೊಡಲ್ಪಡುತ್ತಿತ್ತು. ಶ್ರೀಪಾದರ ಮಹಿಮಾಜ್ಞಾನ ಉಳ್ಳವರಾದ್ದರಿಂದ ನನ್ನ ತಂದೆ ನನ್ನನ್ನು ಸಹಾ ಯಜ್ಞಕ್ಕೆ ಕರೆದೊಯ್ದರು. ಶ್ರೀಪಾದರ ವಯಸ್ಸು ಆರು ತುಂಬಿರಲಿಲ್ಲ. ಯಜ್ಞಾವಸರವಾದ ಘೃತವು ಆರ್ಜಿಸಲಾಗಿತ್ತು. ಆ ಘೃತವೆಲ್ಲವನ್ನು ಒಬ್ಬ ವೃದ್ಧ ಬ್ರಾಹ್ಮಣ ಆಧೀನದಲ್ಲಿಟ್ಟರು. ಆತ ಲೊಭಿ ಮತ್ತು ದುರಾಚಾರಸ್ಥ. ಘೃತದ ಒಂದು ಭಾಗವನ್ನು ತನ್ನ ಮನೆಗೆ ಕಳುಹಿಸಿದನು. ಮಿಕ್ಕ 3 ಭಾಗಗಳು ಮಾತ್ರ ಯಾಗ ಸ್ಥಳಕ್ಕೆ ಕಳುಹಿಸಲಾಯಿತು. ಯಜ್ಞ ಶುರುವಾಗಲು ಘೃತ ಸರಿಹೋಗದೆಂದು ಯಾಜ್ಞಿಕರು ಭಾವಿಸಿದರು. ತಕ್ಷಣ ಘೃತ ಸೇಕರಣೆ ಕಷ್ಟಸಾಧ್ಯ. ಯಜ್ಞಕ್ಕೆ ಇಂತಹ ಆಟಂಕ ಬರುವುದು ಎಲ್ಲರಿಗೂ ಬೇಡದ ವಿಷಯವಾಯಿತು. ಶ್ರೀ ಬಾಪನಾರ್ಯರು ಪ್ರಶಾಂತ ಮುಖದಿಂದ ಶ್ರೀಪಾದರನ್ನು ವೀಕ್ಷಿಸಿದರು. ಶ್ರೀಪಾದರು, "ನನ್ನ ಧನವನ್ನು ಅಪಹರಿಸಿಬೇಕೆಂದು ಕೆಲವರು ಕಳ್ಳರು, ರಾಜ್ಯಾಧಿಕಾರ ಪಡೆಯಲು ಯೋಚಿಸುತ್ತಿದ್ದಾರೆ. ನನ್ನ ಹೆಸರಿನಲ್ಲಿ ಈ ಪೀಠಿಕಾಪುರದಲ್ಲಿ ಒಂದು ದೊಡ್ಡ ದರ್ಬಾರು ನಡೆಯಲಿದೆ. ನನ್ನ ಧನವನ್ನು ಅಪಹರಿಸಬೇಕೆಂಬುವರನ್ನು ಒಳಗೆ ಬಿಡುವೆನು. ಧನವನ್ನಪಹರಿಸಿ ಆಚೆಗೆ ಹೋಗುತ್ತಿರುವಾಗ ನಾನು ದ್ವಾರದ ಬಳಿ ನಿಂತು ಮರದ ತುಂಡಿನಿಂದ ಒಂದು ಬಾರಿಸುವೆನು. ಆ ಏಟಿಗೆ ಕೆಲವರು ಅಲ್ಲೇ ಸಾಯುವರು! ಇನ್ನೂ ಕೆಲವರು ನನ್ನ ಧನವನ್ನು ಬಿಟ್ಟು ಓಡಿಹೋಗುವರು. ನನ್ನ ಧನವನ್ನಪಹರಿಸುವವರ ಮನೆಯಲ್ಲಿ ಜ್ಯೇಷ್ಠಾಪತ್ನಿ ಸಮೇತಳಾಗಿ ಶನೈಶ್ಚರನನ್ನು ತಿಷ್ಠೆ ಹಾಕಲು ಆಜ್ಞಾಪಿಸುವೆನು'' ಎಂದು ನುಡಿದರು. ಶ್ರೀಪಾದರ ಮಾತುಗಳು ಯಾರಿಗೂ ಅರ್ಥವಾಗಲಿಲ್ಲ. ಮುಂದೆ ನಡೆಯಲಿರುವ ವಿಷಯಗಳು ನುಡಿಯುತ್ತಿರುವರೆಂದು ನೆನೆದರು. ಇಷ್ಟರಲ್ಲಿ ಶ್ರೀಪಾದರಾವೃದ್ಧ ಬ್ರಾಹ್ಮಣನ್ನು ಕರೆದು ತಾಳಪತ್ರದ ಮೇಲೆ "ತಾಯಿ, ಗಂಗ ಮಾತೆ! ಯಜ್ಞ ಮಾಡಲು ಬೇಕಾದ ಘೃತವನ್ನು ಕೊಡಬೇಕು. ನಿನ್ನ ಸಾಲವನ್ನು ನಮ್ಮ ಅಜ್ಜರಾದ ವೆಂಕಟಪ್ಪಯ್ಯ ಶ್ರೇಷ್ಠಿ ತೀರಿಸಬಲ್ಲರು. ಇದು ಶ್ರೀಪಾದ ಶ್ರೀವಲ್ಲಭರ ಅಜ್ಞೆ'' ಎಂದು ಬರಿಸಿದರು. ಈ ಪತ್ರವನ್ನು ವೆಂಕಟಪ್ಪಯ್ಯ ಶ್ರೇಷ್ಠಿಗೆ ತೋರಿಸಲಾಯಿತು. ಅವರು ಒಪ್ಪಿದರು. ಆ ಪತ್ರವನ್ನು ತೆಗೆದುಕೊಂಡು ಆ ವೃದ್ಧ ಬ್ರಾಹ್ಮಣ ಸೇರಿ, ನಾಲ್ಕು ಜನ ಪಾದಗಯ ತೀರ್ಥಕ್ಕೆ ತೆರಳಿದರು. ಅ ಪತ್ರವನ್ನು ಆ ತೀರ್ಥರಾಜಕ್ಕೆ ಸಮರ್ಪಸಿದರು. ತಾವು ಕೊಂಡೊಯ್ದ ಪಾತ್ರೆಗಳಲ್ಲಿ ಆ ನೀರನ್ನು ತುಂಬಿದರು. ವೇದಮಂತ್ರಗಳೊಂದಿಗೆ ಆ ನೀರನ್ನು ಯಾಗಸ್ಥಳಕ್ಕೆ ತರಲಾಯಿತು. ಎಲ್ಲರೂ ನೋಡುತ್ತಿದ್ದ ಹಾಗೆಯೇ ಆ ನೀರು ಘೃತವಾಗಿ ಮಾರ್ಪಟ್ಟಿತು. ಯಜ್ಞವು ಪರಿಸಮಾಪ್ತಿ ಆಯಿತು. ವಾಗ್ದಾನದ ರೀತ್ಯಾ ಶ್ರೇಷ್ಠಿ ಅದೇ ಪಾತ್ರೆ ತುಂಬಾ ಘೃತವನ್ನು ಪಾದಗಯಾ ತೀರ್ಥಕ್ಕೆ ಸಮರ್ಪಿಸಿದರು. ಘೃತ ಗಂಗೆಗೆ ಹಾಕುತ್ತಿರಲು ಅದು ಪುನಃ ನೀರಾಗಿ ಬದಲಾಯಿಸಿತು!

ನಮ್ಮ ತಂದೆಯವರು ನನ್ನ ದುಸ್ಥಿತಿಯನ್ನು ಶ್ರೀಪಾದರಿಗೆ ತಿಳಿಸಲು, ಅವರು "ಸ್ವಲ್ಪ ತಾಳಿ, ನಿಮ್ಮ ಮಗುವಿನ ಖಾಯಿಲೆ ವಾಸಿ ಮಾಡುವೆ. ತೊದಲನ್ನು ಸಹ ನಿರ್ಮೂಲನೆ ಮಾಡುವೆ. ಒಂದು ಗೃಹ ದಹನವಾಗಬೇಕಾಗಿದೆ. ಅದರ ಮುಹೂರ್ತ ನಿರ್ಣಯಿಸಬೇಕು'' ಎಂದರು. ಅವರ ನಿರ್ಧಾರಗಳು ಊಹಾತೀತ! ಇಷ್ಟರಲ್ಲಿ ಆ ವೃದ್ಧ ಬ್ರಾಹ್ಮಣ ಬಂದನು. ಘೃತ ಅಪಹರಿಸಿದ್ದಕ್ಕೆ ಏನಾದರೂ ಕೆಟ್ಟದ್ದು ಆಗುವುದಾ ಎಂದು ಒಳಗೊಳಗೇ ಚಿಂತಿಸುತ್ತಿದ್ದನು. ಅವರು ಘೃತವನ್ನಪಹರಿಸಿದ ವಿಷಯ ಶ್ರೀಪಾದರಿಗೆ ಹೇಳಿಕೊಂಡರೇ ಒಳ್ಳೆಯದು ಎಂದು ಒಮ್ಮೆ ಯೋಚಿಸುತ್ತಿದ್ದನು. ಏನಾದರೂ ಶ್ರೀಪಾದರ ದರ್ಶನದಿಂದ ಒಳ್ಳೆಯದೇ ಆಗುವುದೆಂದು ದೃಢ ನಿಶ್ಚಯಕ್ಕೆ ಬಂದನು. ಆಗ, ಅವರಿಬ್ಬರ ನಡುವೆ ರಸವತ್ತರವಾದ ಚರ್ಚೆ ನಡೀತು.

**ಶ್ರೀಪಾದರು:** ತಾತ! ನೀನು ಮುಹೂರ್ತಗಳು ಖಾಯಂ ಮಾಡುವುದರಲ್ಲಿ ಎತ್ತಿದ ಕೈ ಅಲ್ಲವೇ? ಒಂದು ಗೃಹ ಪರಶುರಾಮ ಪ್ರೀತಿ ಆಗಬೇಕಿದೆ. ಅಂದರೇ ಆ ಗೃಹ ಸುಡಲು ತಕ್ಕ ಮುಹೂರ್ತ ನಿರ್ಣಯಿಸಬೇಕೆಂದರು.

**ವೃದ್ಧ ಬ್ರಾಹ್ಮಣ:** ಗೃಹ ನಿರ್ಮಾಣಕ್ಕೆ, ಶಂಖು ಸ್ಥಾಪನೆಗೆ, ಮುಹೂರ್ತಗಳಿರುವವು. ಗೃಹದಹನಾ ಮುಹೂರ್ತ ಇರುವುದಿಲ್ಲ.

**ಶ್ರೀಪಾದರು:** ಕಳ್ಳತನ ಮಾಡಲು, ಗೃಹದಹನ ಮಾಡಲು ಮುಹೂರ್ತಗಳು ಹೇಗೆ ಇರಲಾರವು?

**ವೃದ್ಧ ಬ್ರಾಹ್ಮಣ:** ಅಂತಹ ಮುಹೂರ್ತಗಳಿದ್ದ ಹಾಗೆ ನಾನು ಕೇಳಿಲ್ಲ. ಒಂದುವೇಳೆ ಅಂತಹವು ಯಾವುದಾದರು ವರ್ಜ್ಯ ಅಥವಾ ದುರ್ಮುಹೂರ್ತದಂತಹಾ ವರ್ಜಿತ ಸಮಯಗಳಲ್ಲಿ ನಡೆಯುವವೋ ತಿಳಿಯದು.

**ಶ್ರೀಪಾದರು:** ಹಾಗಾದರೇ ಈಗ ಅಂತಹ ವರ್ಜಿತ ಸಮಯ ನಡೆಯುತ್ತಿದೆಯಾ?

**ವೃದ್ಧ ಬ್ರಾಹ್ಮಣ:** ಈಗ ಖಚ್ಚಿತವಾಗಿಯು ಅಂತಹ ವರ್ಜಿತ ಸಮಯವೇ ನಡೆಯುತ್ತಿದೆ.

**ಶ್ರೀಪಾದರು:** ತಾತ! ಎಂತಹಾ ಒಳ್ಳೇ ಸುದ್ದಿ ತಿಳಿಸಿದೆ? ಪರಮ ಪವಿತ್ರವಾದ ಯಜ್ಞಕ್ಕೋಸ್ಕರ ಸೇಕರಿಸಿದ್ದ ಘೃತವನ್ನು ಒಬ್ಬ ದೂರ್ತ ಅಪಹರಿಸಿದ್ದಾನೆ. ಅಗ್ನಿದೇವರಿಗೆ ಹಸಿವು ತೀರಲಿಲ್ಲ. ಧರ್ಮಬದ್ಧವಾಗಿ ತನಗೆ ಸೇರಬೇಕಿದ್ದ ಘೃತದ ಜತೆ ಆ ಮನೆಯನ್ನು ಸಹಾ ಸುಟ್ಟು ತನ್ನ ಹಸಿವು ತೀರಿಸಿಕೊಳ್ಳುತ್ತಿದ್ದಾನೆ, ಆನಂದವಾಗಿ ಕುಪ್ಪಳಿಸುತ್ತಾ!

ಶ್ರೀಪಾದರ ಈ ಮಾತುಗಳನ್ನು ಕೇಳಿದೊಡನೆಯೇ ಬ್ರಾಹ್ಮಣನ ಮುಖ ಬಿಳಿಚಿತು. ಸ್ವಲ್ಪಹೊತ್ತಿಗೆ ಅವನ ಮನೆ ಸುಟ್ಟು ಬೂದಿ ಆಯಿತು. ಅಲ್ಲಿಂದ ಭಸ್ಮ ತೆಗೆದುಕೊಂಡು ಬರಲು ಆ ವೃದ್ಧ ಬ್ರಾಹ್ಮಣನ್ನು ಶ್ರೀಪಾದರು ಆದೇಶಿಸಿದರು. **ಶ್ರೀಪಾದರು ಅನುಗ್ರಹಿಸಿ ವರ ಕೊಡುವುದರಲ್ಲು, ಆಗ್ರಹಿಸಿ ನಷ್ಟ ತರುವುದರಲ್ಲೂ ಸಮರ್ಥರು** ಎಂದು ಸಂಪೂರ್ಣವಾಗಿ ತಿಳಿದುಕೊಂಡ ಆ ವೃದ್ಧ ಬ್ರಾಹ್ಮಣನು ವಿನಯದೊಳು ಭಸ್ಮವನ್ನು ತಂದನು. ಆ ಭಸ್ಮವನ್ನು ನೀರಿದ್ದ ಪಾತ್ರೆಯಲ್ಲಿ ಹಾಕಿ ನನ್ನನ್ನು ಕುಡಿಯಲು ಶ್ರೀಪಾದರು ಆಜ್ಞಾಪಿಸಿದರು. ಈ ಪ್ರಕಾರ 3 ದಿನ ಮಾಡಲು ಹೇಳಿದರು. ನಾವು ಶ್ರೀ ಬಾಪನಾರ್ಯರ ಮನೆಯಲ್ಲಿ ಅತಿಥಿಗಳಾಗಿ ಇದ್ದೆವು. ನನ್ನ ತೊದಲು ಸೇರಿ ನನಗಿದ್ದ ವಿಚಿತ್ರ ವ್ಯಾಧಿ ಸಹಾ ಮಾಯವಾಯಿತು. ನಾನು ಆರೋಗ್ಯವಂತನಾದೆನು. ಶ್ರೀಪಾದರು ತಮ್ಮ ವರದ ಹಸ್ತವನ್ನು ನನ್ನ ತಲೆಯ ಮೇಲಿಟ್ಟು ಶಕ್ತಿಪಾತ ಮಾಡಿ ನನ್ನನ್ನು ಧನ್ಯನನ್ನಾಗಿ ಮಾಡಿ "ಇಂದಿನಿಂದ ನೀನು ದತ್ತಾನಂದ ಹೆಸರಿನಲ್ಲಿ ಪ್ರಸಿದ್ಧನಾಗುವೆ. ಗೃಹಸ್ಥಾಶ್ರಮ ತೆಗೆದುಕೊಂಡು ಪ್ರಜೆಗಳಿಗೆ ಧರ್ಮಬೋಧನೆ ಮಾಡಿ ತರಿಸುವಂತವನಾಗು!" ಎಂದಾಶೀರ್ವದಿಸಿದರು.

ನಂತರ ಶ್ರೀಪಾದರು, "ಎಲೈ ನೀನು, ಈ ವೃದ್ಧ ಬ್ರಾಹ್ಮಣನು ಹಿಂದಿನ ಜನ್ಮದಲ್ಲಿ ಸೇರಿ ವ್ಯಾಪಾರ ಮಾಡುತ್ತಿದ್ದಿರಿ. ವ್ಯಾಪಾರದಲ್ಲಿ ವೈಷಮ್ಯ ಬೆಳೆದು ಒಬ್ಬರನ್ನೊಬ್ಬರು ನಾಶಮಾಡಲು ಪ್ರಯತ್ನಿಸುತ್ತಿದ್ದೀರಿ. ಒಂದು ದಿನ ನೀನು, ಈ ವೃದ್ಧ ಬ್ರಾಹ್ಮಣನ ಮನೆಗೆ ಬಂದು ಪ್ರೀತಿಯಿಂದ ಪಾಯಸವನ್ನು ಕುಡಿಸಿದೆ. ಆ ಪಾಯಸದಲ್ಲಿ ನೀನು ವಿಷವನ್ನು ಬೆರಸಿದ ವಿಷಯ ಗೊತ್ತಾಗದೇ ಆ ವೃದ್ಧ ಬ್ರಾಹ್ಮಣ ಪಾಯಸವನ್ನು ಕುಡಿದು ಸಾವನ್ನಪ್ಪಿದನು. ನಿನಗೆ ಗೊತ್ತಾಗದೇ ಆ ವೃದ್ಧ ಬ್ರಾಹ್ಮಣನು ಅದೇ ಸಮಯ, ಕೆಲವರು ಕೂಲಿಗಳನ್ನಿಟ್ಟು ನಿನ್ನ ಗೃಹಕ್ಕೆ ಬೆಂಕಿ ಹಚ್ಚಿಸಿದ್ದನು. ನಿನ್ನ ಮನೆ ಸುಟ್ಟು ಭಸ್ಮವಾಯಿತು. ಮನೆಯೊಳಗಿನ ನಿನ್ನ ಪತ್ನಿ ಸಹಾ ಸಜೀವದಹನ ಹೊಂದಿದ್ದಾಳೆ. ಹಿಂತಿರುಗಿ ಮನೆಗೆ ಬಂದ ನೀನು, ಸರ್ವವೂ ಕಳೆದುಕೊಂಡ ಕಾರಣ ಎದೆಯ ನೋವಿನಿಂದ ಮರಣಿಸಿದೆ. ನೀನು

ಹಿಂದೆ ವಿಷ ಪ್ರಯೋಗಿಸಿದ ಕಾರಣ ಈ ಜನುಮದಲ್ಲಿ ವಿಚಿತ್ರವ್ಯಾಧಿಗೆ ಗುರಿಯಾಗಿದ್ದೀಯ. ನಿನ್ನ ಗೃಹವನ್ನು ಹಿಂದಿನ ಜನುಮದಲ್ಲಿ ಆ ವೃದ್ಧ ಬ್ರಾಹ್ಮಣ ದಹನ ಮಾಡಿಸಿದ್ದ ಕಾರಣ ಆತನ ಮನೆ ಈ ಜನುಮದಲ್ಲಿ ಭಸ್ಮಹೊಂದಿದೆ. ನಿಮ್ಮಿಬ್ಬರನ್ನೂ ಕರ್ಮಬಂಧಗಳಿಂದ ನನ್ನ ಈ ಲೀಲೆ ಮೂಲಕ ವಿಮುಕ್ತರನ್ನಾಗಿ ಮಾಡಿದ್ದೇನೆ'' ಎಂದು ನುಡಿದರು.

ಶ್ರೀಪಾದರ ಅನುಗ್ರಹವನ್ನೊಂದಿ ನಾನು ಮನೆಗೆ ಬಂದೆನು. ವೇದಶಾಸ್ತ್ರಗಳಲ್ಲಿ ಪಂಡಿತನಾದೆನು. ಶ್ರೀ ನರಸಿಂಹ ವರ್ಮರು ಆ ವೃದ್ಧ ಬ್ರಾಹ್ಮಣನಿಗೆ ಒಂದು ಹೊಸ ಮನೆ ಕಟ್ಟಿಸಿಕೊಟ್ಟರು. ಶ್ರೀಪಾದರ ಕೃಪೆ, ನಮ್ಮ ಇಬ್ಬರ ಕರ್ಮಬಂಧಗಳೂ ಕಳೆದ ಕಾರಣ, ಅನಂತಕಾಲ ನಮಗೆ ಒಳ್ಳೆಯದೇ ನಡೆಯುತಿತ್ತು. ಅವರ ಲೀಲೆ ದಿವ್ಯ ಮತ್ತು ಭವ್ಯ. ವೃದ್ಧ ಬ್ರಾಹ್ಮಣನಿಗೆ ನೂತನ ಗೃಹ ಲಭಿಸಿತು. ನನ್ನ ವ್ಯಾಧಿ ನಶಿಸಿ ತೊದಲು ಹೋಗುವುದೇ ಅಲ್ಲ, ಪಂಡಿತನೂ ಆದೆನು. ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನ ಆಧ್ವರ್ಯದಲ್ಲಿ ನಡೆದ ಕುರುಕ್ಷೇತ್ರ ಸಂಗ್ರಾಮ ಯಜ್ಞದಂತೆ ಆಯಿತು. ಶಿವನಿಲ್ಲದೇ ನಡೆದ ದಕ್ಷಯಜ್ಞ ರಣರಂಗಭೂಮಿ ಆಯಿತು. ಇದರ ಧರ್ಮಸೂಕ್ಷ್ಮ ತಿಳಿಯುವುದು ಉಚಿತ.

ಮಗು ಶಂಕರ ಭಟ್ಟು! ಎಲ್ಲಾ ದೇವತೆಯರೂ ತೇಜಸ್ಸಂಭೂತರು. ಅದಿತಿ ಅನಂತ ರೂಪಿಣಿ. ಆಕೆಯ ಸಂತಾನವೇ ದೇವತೆಗಳು. ಮಾನವನ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಆ ಮಾತೆಯೇ ಕಾರಣ. ದೇವತೆಗಳು ಮಾನವನಿಗೆ ತೇಜಸ್ಸು ನೀಡುವರು. ಅವನ ಆತ್ಮಕ್ಕೆ ದಿವ್ಯ ಚೈತನ್ಯ ಸಂಪತ್ತು ಸುರಿಸುವರು. ಅವರು ಸತ್ಯ ಉದ್ಧಾರಕರು. ದಿವ್ಯಲೋಕ ನಿರ್ಮಾಪಕರು. ಮಾನವರ ಸಂಪೂರ್ಣ ಮೋಕ್ಷಕ್ಕೆ ಹೊಂದಾಣಿಕೆ ಮತ್ತು ಆನಂದಕ್ಕೆ ಅಡ್ಡು ಬರುವ ದುಷ್ಟ ಶಕ್ತಿಗಳನ್ನು ಒತ್ತಿ ಹಿಡಿಯುವರು. ಋಷಿಗಳು ದೇವತೆಯರ ಸಾಕ್ಷಾತ್ಕಾರ ಹೊಂದಿ, ಅವರ ವಿವಿಧ ಕಾರ್ಯ ಕಲಾಪಗಳನ್ನು ಪರಿಶೀಲಿಸಿದ ತರುವಾಯಿ ಅವರನ್ನು ಬೇರೆ ಬೇರೆಯ ಹೆಸರುಗಳಿಂದ ವರ್ಣಿಸಿದರು. ವೇದದಲ್ಲಿ ಪದಗಳು ವಿಶೇಷಾರ್ಥ ಹೊಂದಿರುತ್ತವೆ. ಅಶ್ವವೆಂದರೆ ಲೌಕಿಕಾರ್ಥವೇನೋ ಕುದುರೆ. ಆದರೇ ವೇದ ಋಷಿಗಳು ಮಾತ್ರ ಸ್ವಲ್ಪ ಜಡ ಚೈತನ್ಯವನ್ನು ಮತ್ತಷ್ಟು ಮನಶ್ಚೈತನ್ಯವನ್ನು ಪ್ರದರ್ಶಿಸು ಪ್ರಾಣಮಯ ಚೈತನ್ಯಕ್ಕೆ, ಜಾಜ ಶಕ್ತಿಗೆ, ಜೀವಶ್ವಾಶ ಶಕ್ತಿಗೆ ಅಶ್ವವೆಂದಿದ್ದಾರೆ. ಇದು ಕ್ರಿಯಾಯೋಗ ರಹಸ್ಯ. ಔಷಧಿಗಳು, ಪಶುಗಳು ಮುಂತಾದ ಜೀವರಾಶಿಗಳಂತೆಯೇ ವಾಕ್‌ರೂಪಗಳು ಸಹಾ ಕೇವಲ ಮಾನವರ ಬುದ್ಧಿಯಿಂದ ಹೊರಬಿದ್ದವಲ್ಲವೇ ಅಲ್ಲ. ಅವು ಸಜೀವಗಳಾದ ಜನನೋಪಚಯ ಸಂಭೂತಗಳು. ಕೆಲವು ಮೂಲ ಬೀಜಗಳೆಂಬುವ ಶಬ್ದಗಳಿಂದ ಹುಟ್ಟಿರುವವು. ಅವು ಪ್ರವೃದ್ಧವಾದ ಜೀವವುಳ್ಳ ಶಬ್ದಗಳು. ಅವು, ಧಾತುಗಳ ಅಸಂಖ್ಯಾತ ಸಂತಾನವೇ. ಹೆಚ್ಚಾಗಿ ಅಭಿವೃದ್ಧಿಹೊಂದಿ ಬೇರೆ ಬೇರೆ ವರ್ಗಗಳಾಗಿ, ಬೇರೆ ಬೇರೆ ಜಾತಿ, ವಂಶ, ಕುಟುಂಬಗಳಾಗಿ ವೃದ್ಧಿ ಹೊಂದಿವೆ. ಪದಗಳ ಸಂವ್ಯೂಹದಲ್ಲಿ ಒಂದೊಂದಕ್ಕೂ ಒಂದು ಸಮಾನವಾದ ಕಾಂಡ, ಮಾನಸಿಕ ತತ್ತ್ವ ಚರಿತ್ರೆ ಇರುವುದು.

## 'ಬ್ರಾಹ್ಮಣರೇ ಭೂಸುರರು' ಎನ್ನಲು ಕಾರಣ

ವೇದ ಋಷಿಗಳ ಪರಿಭಾಷೆಯಲ್ಲಿ ಭಾಷೆಯನ್ನು ಮೊಟ್ಟಮೊದಲು ಕಲ್ಪಿಸಿದ್ದು ಗಾಳಿ, ಅಗ್ನಿ ಇಂದ್ರರಲ್ಲ. ಪ್ರಾಣೇಂದ್ರಿಯಗಳ ಪ್ರವೃತ್ತಿಗಳಿಂದಲೇ ಮನಸ್ಸು ಉದ್ಭವಿಸಿದೆ. ಮಾನವನ ಇಂದ್ರಿಯಗಳ ಸಹಚರ್ಯ ಪ್ರತೀಕಾರಗಳನ್ನು ಅನುಸರಿಸಿ ಮಾತ್ರವೇ ಮನೋಬುದ್ಧಿ ನಿರ್ಮಿಸಲಾಗಿದೆ. ಈ ಪರಿಣಾಮಕ್ರಮ ಪದ್ಧತಿ ಪ್ರಕಾರವೇ ಪ್ರಾಣೇಂದ್ರಿಯ ಚೈತನ್ಯಗಳನ್ನು ಅನುಸರಿಸಿ

ಭಾಷಾಬೋಧನೆಯ ಪ್ರಯೋಗ ಎಂಬುದು ಪರಿಣಮಿಸಿದೆ. ಮಗು! **ದೇವತೆಗಳೆಲ್ಲಾ ಮಂತ್ರ ಸ್ವರೂಪರು. ಈ ಜಗತ್ತೆಲ್ಲಾ ದೈವಾಧೀನವಾಗಿದೆ. ದೇವತೆಗಳು, ಮಂತ್ರಾಧೀನರಾಗಿರುವರು. ಆ ಮಂತ್ರಗಳು, ಸದ್ಬ್ರಾಹ್ಮಣರ ಅಧೀನವಾಗಿವೆ. ಆದ್ದರಿಂದ ಭೂಮಿಯ ಮೇಲೆ ಬ್ರಾಹ್ಮಣರೇ ದೇವತೆಗಳು.**

ಶಬ್ದಗಳು ಅವುಗಳ ಹುಟ್ಟುವಿಕೆಯಲ್ಲಿ ಸಾಮಾನ್ಯವಾಗಿ ಪಂಚೇಂದ್ರಿಯಗಳಿಂದ ತಿಳಿಯಲಾರದ ಬೆಳಕು, ಚಲನೆ, ಸ್ಪರ್ಶ, ಶೀತೋಷ್ಣ, ವ್ಯಾಪಕ, ಬಲ ಪ್ರಯೋಗ, ವೇಗ ಮುಂತಾದ ಅತಿ ಚಿಕ್ಕ ಪರಿಮಿತಿ ಉಳ್ಳ ಪ್ರಾಥಮಿಕ ಭಾವನೆಗಳನ್ನು ತಿಳಿಸುವುದಕ್ಕೆ ಮಾನವರಿಗೆ ಉಪಯೋಗಿಸಲಾಗುವುದು. ಆದರೆ, ಆತನ ಬುದ್ಧಿ ಅರಳಿದಂತೆ ಕ್ರಮವಾಗಿ ಭಾಷೆಯಲ್ಲಿ ಭಾವ ವೈವಿಧ್ಯ, ನಿಶ್ಚಿತತ್ವ ಬೆಳೆಯುವುದು. ಅಂದರೇ ಅಸ್ಪಷ್ಟತೆಯಿಂದ ನಿಶ್ಚಿತವಾದ ನಿಶ್ಚಿತತ್ವಕ್ಕೆ ಭೌತಿಕವಾದ ಅಂಶಗಳಿಂದ ಮಾನಸಿಕಾಂಶಗಳು, ವ್ಯಕ್ತವಿಷಯಗಳಿಂದ ಅವ್ಯಕ್ತ ಭಾವನೆಗಳು. ಈ ವಿಧವಾಗಿ ಭಾಷೆ ಅಭಿವೃದ್ಧಿ ಹೊಂದಿ, ಮುಂದುವರಿಯುವುದು.

**ಪವಿತ್ರ ಗ್ರಂಥಪಠನ, ವಿಶೇಷ ಫಲದಾಯಕ. ನೀನು ಶ್ರೀಪಾದರ ದಿವ್ಯಚರಿತ್ರೆಯನ್ನು ಬರೆಯಲು ಉದ್ದೇಶಿಸಲ್ಪಟ್ಟಿರುವನು. ನೀನದನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದರೂ ಅದು ಕಾಲಾಂತರದಲ್ಲಿ ಶ್ರೀಪಾದರ ಮಾತೃಭಾಷೆಯಾದ ತೆಲುಗಿನಲ್ಲಿ ಅನುವಾದಿಸಲ್ಪಟ್ಟರೂ, ಎರಡರ ಪಾರಾಯಣ ಫಲವೂ ಒಂದೇ. ಶ್ರೀಪಾದರ ದಿವ್ಯ ಚರಿತ್ರೆಯನ್ನು ಯಾರು ಎಲ್ಲೇ ಪಠಿಸುತ್ತಿದ್ದರೂ ಅಲ್ಲಿ ಶ್ರೀಪಾದರು ಸೂಕ್ಷ್ಮರೂಪದಲ್ಲಿದ್ದು ಕೇಳುವರು.** ಇದರ ಸಾಕ್ಷಿಗಾಗಿ ಒಂದು ಕಥೆ ಹೇಳುವೆನು ಸಾವಧಾನವಾಗಿ ಕೇಳು.

ಶ್ರೀಪಾದರು ಏಳು ವರುಷದವಾರಾಗಿದ್ದರು. ಅವರಿಗೆ ವೇದೋಕ್ತ ವಿಧಿವಿಧಾನದಲ್ಲಿ ಉಪನಯನ ನೆರವೇರಿತು.ಆ ಕಾಲದಲ್ಲಿ ಸಂಪನ್ನರ ಮನೆಗಳಲ್ಲಿಂತಹ ಕಾರ್ಯಗಳು ಎಷ್ಟೋ ಸಂಭ್ರಮದಿಂದ ನಡೆಯುತ್ತಿತ್ತು. ಶ್ರೀ ಬಾಪನಾರ್ಯರ ಆನಂದಕ್ಕೆ ಮಿತಿಯೇ ಇಲ್ಲ. ಆದರೇ ಪೀಠಿಕಾಪುರದ ದತ್ತದಾಸ ಎಂಬುವ 'ಮಲದಾಸ'ರಿಗೆ ಈ ಮಹೋತ್ಸವ ನೋಡುವ ಯೋಗ ಸಿಗಲಿಲ್ಲ. ಆತ ಪಂಚಮ ಜಾತಿಗೆ ಸೇರಿದವನಾದ ಕಾರಣ ಈ ಅವಕಾಶ ಸಿಗಲಿಲ್ಲ. ಆತ ತನ್ನ ಜಾತಿಯವರನ್ನೆಲ್ಲಾ ಮನೆಗೆ ಕರೆದು ದತ್ತಚರಿತ್ರೆ ಕೇಳಿಸುವೆನೆಂದು ತಿಳಿಸಿದನು. ಎಲ್ಲರೂ ಆಸಕ್ತಿಯಿಂದ ಅವನ ಮನೆಗೆ ಬಂದರು. **ದತ್ತದಾಸ ದತ್ತಚರಿತ್ರೆ ಹೀಗೆ ಹೇಳಿದರು, "ಕಳೆದ ಯುಗಗಳಲ್ಲಿ ಅನುಸೂಯ ಮಾತೆಗೂ, ಅತ್ರಿ ಮಹರ್ಷಿಗೂ ಕುಮಾರನಾಗಿ ಅವತರಿಸಿದ್ದ ಆ ಪರಂಜ್ಯೋತಿಯೇ ಈ ಕಲಿಯುಗದಲ್ಲಿ ಶ್ರೀಪಾದ ಶ್ರೀವಲ್ಲಭರಾಗಿ ನಮ್ಮ ಪೀಠಾಪುರದಲ್ಲಿ ಅವತರಿಸಿದ್ದಾರೆ. ಆ ಮಹಾಪ್ರಭುವಿಗೆ ಇಂದು ಉಪನಯನ ನಡೆಯಿತು. ಆ ಶುಭ ಕಾರ್ಯದ ನಂತರ ನಮ್ಮ ಪ್ರಭು ಪ್ರಕಾಶಿಸುತ್ತಿದ್ದರು. ದೀನ ಜನೋದ್ಧಾರಕನಾದ ಆ ಪ್ರಭುವಿಗೆ ನಿತ್ಯಶ್ರೀರಸ್ತು, ಮಂಗಳವಾಗಲಿ." ಇದಕ್ಕೆ ಮೀರಿ ಶ್ರೀಗುರುವಿನ ಬಗ್ಗೆ ಹೇಳುವ ಪಾಂಡಿತ್ಯ ಅವನಲ್ಲಿರಲಿಲ್ಲ. ಆತ ಇದೇ ಕಥೆಯನ್ನು ಅನೇಕ ಬಾರಿ ಹೇಳುತ್ತಿದ್ದನು. ಕೇಳುವರು ಸಹಾ ತನ್ಮಯರಾಗಿ ಕೇಳುತ್ತಿದ್ದರು. ಹೀಗೆ 53 ಸಲವಾಯಿತು.** ದತ್ತದಾಸನ ಮೇಲೆ ಶ್ರೀಪಾದರ ಅಮೃತ ದೃಷ್ಟಿ ಬಿದ್ದಿತು. ಉಪನಯನ ಕಾರ್ಯಗಳನಂತರ ಸೇರಿದ್ದ ಬ್ರಾಹ್ಮಣೋತ್ತಮರೊಡನೇ ಶ್ರೀಪಾದರು ಕೂಡಲೇ ಮೂಲದಾಸನ ಮನೆಗೆ ಹೋಗಬೇಕೆಂದರು. ಶ್ರೀ ಬಾಪನಾರ್ಯರು ಕಾರಣ ಕೇಳಲು ಶ್ರೀಗಳು **"ಶುದ್ಧ ಅಂತಃಕರಣೆ ಉಳ್ಳ ದತ್ತದಾಸ, ನನ್ನ ಚರಿತ್ರೆ ಕೇಳಿಸುತ್ತಿದ್ದಾನೆ. ಆತ ಒಮ್ಮೆ ಹೇಳಿದ್ದು ಒಂದು ಅಧ್ಯಾಯವಾಗಿ ತೆಗೆದುಕೊಂಡು ಚರಿತ್ರೆಯ 53 ಅಧ್ಯಾಯಗಳು. ಅಂದರೇ ಗ್ರಂಥಪೂರ್ತಿ ಆದಾಗಿಯೇ ತಿಳಿಯಬೇಕು. ನನ್ನ ಚರಿತ್ರೆಯ 53 ಅಧ್ಯಾಯಗಳೂ ಶ್ರದ್ಧೆಯಿಂದ ಪೂರ್ತಿ ಮಾಡಿದವರಿಗೆ ಕೊಡಬೇಕಿರುವ ಸದ್ಯಃ ಫಲಿತ, ಕೂಡಲೇ ಈತನಿಗೆ ಕೊಡಿ"** ಎಂದರು.

## ಶ್ರೀಪಾದರ ಭಕ್ತಿವಾತ್ಸಲ್ಯಕ್ಕೆ ಜಾತಿ, ಕುಲಗಳಿಲ್ಲ

ಶ್ರೀಪಾದರು ದತ್ತದಾಸನ ಮನೆಗೆ ಹೋಗಲು ಬ್ರಾಹ್ಮಣ್ಯ ಒಪ್ಪಿಗೆ ಕೊಡಲಿಲ್ಲ. ಆಗ ಕೋಪಾವೇಶದಿಂದ ಶ್ರೀಪಾದರು ನುಡಿದರು ''ತಾವೆಲ್ಲಾ ಯಾರನ್ನಾದರೇ ಪಂಚಮರೆಂದು ನೀಚ ಜಾತಿಯವರೆಂದು ಕ್ರೂರವಾಗಿ ತಿಳಿದು ಹಿಡಿದಿರುವೆರೋ ಅವರಲ್ಲೇ ನನ್ನ ಕಟಾಕ್ಷ ಅಧಿಕವಾಗಿದ್ದು ಮುಂಬರುವ ಶತಮಾನದಲ್ಲಿ ಅವರು ಉನ್ನತ ಸ್ಥಿತಿಯಲ್ಲಿರುವರು. ಮುಂಬರುವ ಶತಮಾನದಲ್ಲಿ ನಿಮ್ಮ ಬ್ರಾಹ್ಮಣ್ಯದ ಅಧಿಕಾಂಶ ಸೇವಕರ ವೃತ್ತಿಯನ್ನಿಡಿದು, ಧರ್ಮಭ್ರಷ್ಟ, ಕರ್ಮಭ್ರಷ್ಟರಾಗುವರು. ನನ್ನ ನುಡಿಗಳು ಶಿಲಾಶಾಸನಗಳಂತಹವು. ಅವುಗಳಲ್ಲಿ ಒಂದು ಅಕ್ಷರವಾದರೂ ಬದಲಾಯಿಸಲು ಆಗದು. ಹಾಗೆಯೇ ನಿಮ್ಮ ಬ್ರಾಹ್ಮಣ್ಯದಲ್ಲಿನ ಧರ್ಮಬದ್ಧ ಮತ್ತು ದೇಶ ಭಕ್ತರನ್ನು ಕಣ್ಣು ರೆಪ್ಪೆಯಂತೆ ಕಾಪಾಡುವೆನು.''

ಶ್ರೀಪಾದರ ಕ್ರೋಧಾವೇಶವನ್ನು ಅವರ ಮಾತಾಪಿತರು ಶಾಂತಿಗೊಳಿಸಲು ಯತ್ನಿಸಿದರು. ಸ್ವಲ್ಪ ಸಮಯ ದನಂತರ ಶ್ರೀಪಾದರು ಶಾಂತ ತಾಳಿ ಮೌನ ಪಾಲಿಸಿದರು.

ಸರಿಯಾಗಿ ಅದೇ ಸಮಯಕ್ಕೆ ದತ್ತದಾಸನ ಮನೆಯಲ್ಲಿ ಶ್ರೀಪಾದ ಶ್ರೀವಲ್ಲಭರು ತಮ್ಮ ದಿವ್ಯಮಂಗಳ ಸ್ವರೂಪದೊಳು ದರ್ಶನವಿತ್ತರು. ಅವರುಗಳು ಪ್ರೇಮದಿಂದ ಅರ್ಪಿಸಿದ ಮಧುರ ಹಣ್ಣುಗಳನ್ನು ಸ್ವೀಕರಿಸಿದರು. ಅವರು ಕೊಟ್ಟ ಹಾಲನ್ನು ಎಷ್ಟೋ ಪ್ರೇಮದಿಂದ ಕುಡಿದರು. ಶ್ರೀಗಳು ತಮ್ಮ ದಿವ್ಯ ಹಸ್ತದಿಂದ ಅವರಿಗೆಲ್ಲಾ ಸಿಹಿಯನ್ನು ಹಂಚಿದರು. ದತ್ತದಾಸನ ಮನೆಯಲ್ಲಂದು ಸೇರಿದ್ದ ಪ್ರತಿ ಒಬ್ಬರನ್ನೂ ಶ್ರೀಪಾದ ಶ್ರೀವಲ್ಲಭರು ಆಶೀರ್ವದಿಸಿದರು.

ಮಗು, ಶಂಕರ ಭಟ್ಟು! ನೋಡಿದೆಯಾ? ಶ್ರೀಪಾದರ ದಿವ್ಯ ಪ್ರೇಮ! **ಅವರು ಭಾವನಾಮಾತ್ರ ಸಂತುಷ್ಟರು. ಅವರಿಗೆ ಕುಲ ಗೋತ್ರಾದಿಗಳಿಂದಾಗಲಿ, ಮಿಕ್ಕ ಭೌತಿಕ ವಿಷಯಗಳಿಂದ ಜೋಡನವೇ ಆಗಲಿ ಇರುವುದಿಲ್ಲ. ಶ್ರೀದತ್ತ ಪ್ರಸಾದವನ್ನು ಅಂತ್ಯ ಕುಲದವನು ಸಮರ್ಪಿಸಿದರೂ, ಭಕ್ತಿಯಿಂದ ಪಡೆಯಬೇಕು, ಅಲಕ್ಷ್ಯಮಾಡಿದ್ದಲ್ಲಿ ಕಷ್ಟನಷ್ಟಗಳಿಗೆ ಗುರಿಯಾಗುವರು.**

## ಶ್ರೀಪಾದರು ಭಕ್ತರಿಗೆ ತಿಳಿಸಿದ ದ್ವಾದಶ ಅಭಯ ವಾಕ್ಯಗಳು

ಶ್ರೀಪಾದರು ದತ್ತದಾಸನ ಮನೆಯಲ್ಲಿ ನುಡಿದ ವಚನಗಳನ್ನು ಶ್ರದ್ಧೆಯಿಂದ ಕೇಳು.

1. **ನನ್ನ ಚರಿತ್ರೆ ಪಾರಾಯಣೆ ಮಾಡುತ್ತಿರುವ ಪ್ರತಿ ಸ್ಥಳದಲ್ಲೂ ನಾನು ಸೂಕ್ಷ್ಮ ರೂಪದಲ್ಲಿ ಇರುವೆನು.**
2. **ಮನೋವಾಕ್ಕು ಕರ್ಮದಿಂದ ನನಗೆ ಅಂಕಿತವಾದವನನ್ನು ನಾನು ಕಣ್ಣು ರೆಪ್ಪೆಯಂತೆ ಕಾಪಾಡುವೆನು.**
3. **ಶ್ರೀ ಪೀಠಿಕಾಪುರದಲ್ಲಿ ನಾನು ನಿತ್ಯವೂ ಮಧ್ಯಾಹ್ನ ಸಮಯ ಭಿಕ್ಷೆ ಸ್ವೀಕರಿಸುವೆನು. ನನ್ನ ಬರುವಿಕೆ ದೈವ ರಹಸ್ಯ.**
4. **ಸದಾ ನನ್ನನ್ನು ಧ್ಯಾನಿಸುವವರ ಕರ್ಮಗಳನ್ನು ಅವು ಅದೆಷ್ಟು ಜನ್ಮಗಳಿಂದ ಇದ್ದವಾದರೂ ಅವುಗಳನ್ನೆಲ್ಲಾ ಭಸ್ಮ ಮಾಡುವೆನು.**
5. **'ಅನ್ನ ಬೇಕೋ ರಾಮಚಂದ್ರ' ಎಂದು ವ್ಯಥೆ ಪಡುತ್ತಿರುವವರಿಗೆ ಅನ್ನ ಕೊಟ್ಟರೇ ನಾನು ಪ್ರಸನ್ನನಾಗುವೆನು.**
6. **ನಾನು ಶ್ರೀಪಾದವಲ್ಲಭನು. ನನ್ನ ಭಕ್ತರ ಮನೆಯಲ್ಲಿ ಮಹಾಲಕ್ಷ್ಮಿ ಸಂಪೂರ್ಣ ಕಳೆಯಿಂದ ನಲಿಯುವಳು.**

7. ನೀನು ಶುದ್ಧ ಅಂತಃಕರಣನಾದರೇ ನನ್ನ ಕಟಾಕ್ಷ ಸದಾ ನಿನ್ನ ಮೇಲೆ ಇರುವುದು.

8. ನೀನು ಯಾವ ದೇವತಾಸ್ವರೂಪವನ್ನಾರಾಧಿಸಿದರೂ ಯಾವ ಸದ್ಗುರುವನ್ನು ನಂಬಿದರೂ ನನಗೆ ಅಂಗೀಕಾರವೇ.

9. ನೀನು ಮಾಡುವ ಪ್ರಾರ್ಥನೆಗಳೆಲ್ಲವೂ ನನಗೇ ಸೇರುವವು. ನೀನು ಆರಾಧಿಸುವ ದೇವತಾ ಸ್ವರೂಪದಿಂದಲೂ, ನಿನ್ನ ಸದ್ಗುರು ಮೂಲಕವೋ ನನ್ನ ಅನುಗ್ರಹ ನಿನಗೆ ತಲುಪುವುದು.

10. ಶ್ರೀಪಾದ ಶ್ರೀವಲ್ಲಭರೆಂದರೇ ಬರೀ ಈ ನಾಮಕ್ಕೆ ನಿಲ್ಲುವದಲ್ಲ. ಎಲ್ಲಾ ದೇವತಾ ಸ್ವರೂಪಗಳನ್ನು ಸಕಲ ಶಕ್ತಿಗಳನ್ನೂ ಅಂಶಗಳಾಗಿ ಹೊಂದಿರುವ ನನ್ನ ವಿರಾಟ್ ಸ್ವರೂಪವನ್ನು ಅನುಷ್ಠಾನದಿಂದ ಮಾತ್ರ ನೀನು ತಿಳಿದುಕೊಳ್ಳಬಲ್ಲೆ.

11. ನನ್ನದ್ದು ಯೋಗ ಸಂಪೂರ್ಣ ಅವತಾರ. ಮಹಾಯೋಗಿಗಳು, ಮಹಾಸಿದ್ಧಪುರುಷರು ಸದಾ ನನ್ನನ್ನು ಧ್ಯಾನಿಸುವರು. ಅವರೆಲ್ಲರೂ ನನ್ನ ಅಂಶಗಳೇ.

12. ನೀನು ನನ್ನನ್ನು ತಬ್ಬಿಕೊಂಡರೇ ನಾನು ನಿನಗೆ ಧರ್ಮ ಮಾರ್ಗವನ್ನು, ಕರ್ಮ ಮಾರ್ಗವನ್ನು ಬೋಧಿಸುವೆನು. ನೀನು ಪತಿತನಾಗದಿರಲು ಹಗಲು ರಾತ್ರಿ ನಾನು ಕಾಪಾಡುವೆನು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 15

# ಬಂಗಾರಪ್ಪ, ಸುಂದರರಾಮ ಶರ್ಮರ ವೃತ್ತಾಂತ

ನಾನು ಶ್ರೀದತ್ತಾನಂದ ಸ್ವಾಮಿಗಳಿಂದ ಅಪ್ಪಣೆ ಪಡೆದು ನನ್ನ ಪ್ರಯಾಣ ಮುಂದುವರೆಸಿದೆ. ದಾರಿಯಲ್ಲಿ ಬಾಯಾರಿಕೆ ಆದ ಕಾರಣ ಹತ್ತಿರದಲ್ಲೇ ಇದ್ದ ಒಂದು ಭಾವಿಯ ಬಳಿ ಹೊರಟೆನು. ಅಲ್ಲಿ ನೀರು ಸೇದಲು ಗಾಲಿಯೂ ಸಹ ಇತ್ತು. ಆದರೇ ಬಾವಿ ಒಳಗೆ ಬಗ್ಗಿ ನೋಡಿದರೇ ಒಂದು ವಿಚಿತ್ರ ದೃಶ್ಯ ಕಂಡುಬಂದಿತು! ಭಾವಿಯ ಕಲ್ಲು ಕಟ್ಟಡಗಳ ಮಧ್ಯದಿಂದ ಮೊಳಕೆಹೊಡೆದ ಒಂದು ಮರದ ಕೊಂಬೆಗೆ ತಲೆ ಕೆಳಗಾಗಿ ಒಬ್ಬ ವ್ಯಕ್ತಿ ನೇತಾಡುತ್ತಿದ್ದನು. ಆ ಅಪರಿಚಿತನು ನನ್ನನ್ನು ಪ್ರೇಮದಿಂದ, "ಶಂಕರ ಭಟ್ಟು!" ಎಂದು ಕೂಗಿದನು. ಆಶ್ಚರ್ಯಗೊಂಡು ನನ್ನ ಹೆಸರು ನಿಮಗೆ ಹೇಗೆ ಗೊತ್ತು ಎಂದು ಕೇಳಲು ಆತ, "ನಿನ್ನ ಹೆಸರೇ ಅಲ್ಲ. ನೀನು ಶ್ರೀಪಾದ ಶ್ರೀವಲ್ಲಭರ ದರ್ಶನಕ್ಕಾಗಿ ಕುರುಂಗಡ್ಡೆ ಹೊರಟಿರುವ ವಿಷಯ ಸಹಾ ನನಗೆ ಗೊತ್ತು. ನಿನ್ನನ್ನು ಭೇಟಿ ಮಾಡಲೆಂದೇ ನಾನು ಕಾದಿರುವೆ" ಎಂದನು.

ಆತನನ್ನು ಭಾವಿಯಿಂದ ಹೊರಗೆ ತುರುವುದು ಹೇಗೆ ಎಂದು ನಾನು ಆಲೋಚಿಸಿದೆನು. ನೀರು ಸೇದಲು ಇದ್ದ ಹಗ್ಗ ಬಲಹೀನವಾಗಿತ್ತು. ನನ್ನ ಆಲೋಚನೆಯನ್ನು ಅರ್ಥ ಮಾಡಿಕೊಂಡು, ಆತ, "ಪ್ರಾಪಂಚಿಕ ಬಂಧನಗಳೊಂದಿಗೆ, ಸಂಸಾರ ಕೂಪದಲ್ಲಿ ಬಿದ್ದವನು ನೀನು. ಬಂಧಗಳನ್ನು ತ್ಯಜಿಸಿ ಈ ವಿಚಿತ್ರ ಯೋಗಕ್ರಿಯೆಯಲ್ಲಿ ಆತ್ಮಾನಂದದಲ್ಲಿರುವವನು ನಾನು! ನನ್ನನ್ನು ನೀನೇನು ಮೇಲೆತ್ತಬಲ್ಲೆ? ನಾನೇ ಏಳುವೆ. **ಶಕ್ತಿ ಸಾಲದಿದ್ದರೇ ಶ್ರೀಪಾದರು ಶಕ್ತಿ ಕೊಡುವರು" ಎಂದು ಹೇಳಿದರು.** ಹಾಗೆ ಹೇಳುತ್ತಲೇ ತಕ್ಷಣ ನನ್ನ ಪ್ರಕ್ಕದಲ್ಲಿದ್ದರು. ನನಗೆ ಸಂಭ್ರಮಾಶ್ಚರ್ಯವಾಯಿತು. ಆತ ಮುಂದುವರೆದನು. "ನನ್ನ ಹೆಸರು ಬಂಗಾರಪ್ಪ. ನಿನಗೆ ಬಾಯಾರಿಕೆ ಇದ್ದಹಾಗೆ ಕಾಣುತ್ತದೆ. ನಾನದನ್ನು ತೀರಿಸುವೆ" ಎಂದು ತಕ್ಷಣವೇ ನೀರು ಸೇದಿ, ಗಟ ಗಟ ತಾನೇ ಕುಡಿದನು! ಮಹದಾಶ್ಚರ್ಯವಾಗಿ ನನ್ನ ದಾಹ ತೀರಿತು.

ನಂತರ ನಾವಿಬ್ಬರು ಸೇರಿ ಪ್ರಯಾಣ ಮುಂದುವರೆಸಿದೆವು. ಆತ ಹೀಗೆ ಹೇಳಿದನು, "ನಾನು ಸ್ವರ್ಣಕಾರರ ಕುಟುಂಬಕ್ಕೆ ಸೇರಿದವನು. ಮಂತ್ರ ತಂತ್ರಗಳಲ್ಲಿ ಪ್ರಾವೀಣ್ಯ ಸಂಪಾದಿಸಿರುವೆನು. ನನಗೆ ಆಗದೇ ಇರುವವರನ್ನು ಮಂತ್ರ ತಂತ್ರ ಪ್ರಯೋಗಗಳಿಂದ ಅಶಕ್ತರನ್ನಾಗಿ ಮಾಡಿ ಸಾಯಿಸುವ ಸಾಮರ್ಥ್ಯ ಹೊಂದಿರುವೆನು. ಭೂತ ಪ್ರೇತ ಪಿಶಾಚಿಗಳೊಡನೇ ಸಹ ಸಾಮೀಪ್ಯ ಹೊಂದಿರುವೆನು. ಸ್ಮಶಾನಗಳಲ್ಲಿ ವಿಧವಿಧವಾದ ಕೆಲಸಗಳನ್ನು ಮಾಡುತ್ತಿದ್ದೆನು. ನನ್ನ ಹೆಸರು ಕೇಳಿದಂತೆ ಜನ ನಡುಗುತ್ತಿದ್ದರು. ನಾನು ಯಾವ ಗ್ರಾಮಕ್ಕೆ ಹೋದರು, ಅಲ್ಲಿನ ಜನ ನನಗೆ ಹೆದರಿ ನನಗೆ ವಿಶೇಷ ಧನ ಕೊಡುತ್ತಿದ್ದರು. ಆ ದುಡ್ಡಿನಲ್ಲಿ ಅಧಿಕ ಭಾಗ ನನ್ನನ್ನು ಆಶ್ರಯಿಸಿರುವ ಭೂತ ಪ್ರೇತಗಳ ಬಲಿಗಳಿಗೆ ವೆಚ್ಚವಾಗುತ್ತಿದ್ದು, ಸಕಾಲದಲ್ಲಿ ಭೂತಬಲಿ ಸಮರ್ಪಿಸದೇ ಹೋದರೇ ಆ ಭೂತಗಳು ನನಗೇ ಹಾನಿ ಮಾಡಬಲ್ಲವಾಗಿದ್ದವು. ನನ್ನ ಮುಖದಲ್ಲಿ ಸಾಮಾನ್ಯ ಮಾನವನಿಗೆ ಇರಬೇಕಾದ ಪ್ರಸನ್ನತ್ವ ನಶಿಸಿ, ಭೂತ ಪ್ರೇತಗಳಿಗಿರುವ ವಿಕೃತ ಕಲೆ, ಕ್ರೂರ ಸ್ವಭಾವಗಳು ಚಿಗುರಿಸಿದವು. ನನ್ನ ಸಂಚಾರದಲ್ಲಿ ಹಿಂದಿನ ಪುಣ್ಯದಿಂದ ಒಮ್ಮೆ ಶ್ರೀ ಪೀಠಿಕಾಪುರಕ್ಕೆ ಬಂದೆನು.

ಶ್ರೀದತ್ತ ಪ್ರಭುಗಳ ಅವತಾರದಿಂದ ಪವಿತ್ರವಾದ ಈ ನಗರದಂದು, ಕ್ಷುದ್ರ ಕುತಂತ್ರಕ್ಕೆ ಮತ್ತು ಪರಸ್ಪರ ಕಲಹಗಳಿಗೆ ಸಹಾ ಕಡಿಮೆ ಇರಲಿಲ್ಲ. ನಾನು ಬಾಪನಾರ್ಯರು ಮತ್ತು ಶ್ರೀಪಾದರವರನ್ನು ಕುರಿತು ಕಿವಿಯಾರ ಚಿತ್ರವಿಚಿತ್ರಗಳಾದ ವಿಷಯಗಳು

ಕೇಳಿದೆನು. ಮೊದಲಿಗೆ ನಾನು ಬಾಪನಾರ್ಯರನ್ನು ನಾಶಮಾಡಿಸಲು ನೆನೆದನು. ಒಂದು ಕೊಳದಲ್ಲಿ ಎರಡು ಕರಗಳಲ್ಲಿ ನೀರು ಅನೇಕ ಬಾರಿ ಕುಡಿದೆನು. ನಾನು ಯಾರನ್ನಾದರೂ ಕೊನೆಗೊಳಿಸಬೇಕಾದರೇ ಅವರನ್ನು ನೆನೆಯುತ್ತಾ ಅಧಿಕ ನೀರು ಕುಡಿದರೇ ಆ ಮನುಷ್ಯನ ಹೊಟ್ಟೆ ಉಬ್ಬರಿಸಿಕೊಂಡು, ಒಡೆದು, ಸಾಯುವನು. ಆದರೇ ಶ್ರೀಪಾದರು ಲೀಲಾ ವಿಶೇಷಗಳು ಯಾರು ಊಹಿಸಬಲ್ಲರು? ನಾನಲ್ಲಿ ಕೊಳದಲ್ಲಿ ಬಾಪನಾರ್ಯರನ್ನು ನೆನೆಯುತ್ತಾ ನೀರು ತುಂಬಿಸಿಕೊಳ್ಳುತ್ತಿದ್ದರೆ ಇಲ್ಲಿ ಶ್ರೀಪಾದರು ಪ್ರೇಮದಿಂದ ಬಾಪನಾರ್ಯರ ಹೊಟ್ಟೆ ನೀವುತ್ತಿದ್ದರು. ಶ್ರೀಪಾದರ ಮಹಿಮೆಯಿಂದ ನಾನು ಕುಡಿದ ಅಷ್ಟು ನೀರು ಹವೆಯಾಗಿ ಹೋಗುತ್ತಿತ್ತು. ನಾನು ಕುಡಿದು ಕುಡಿದು ಸುಸ್ತು ಹೊಡೆದೆನು. ಬಾಪನಾರ್ಯರು ಕ್ಷೇಮದಿಂದಿದ್ದರು. ನನ್ನ ಈ ಕ್ಷುದ್ರವಿದ್ಯೆ ಅಂದು ಏಕೆ ವಿಫಲವಾಯಿತೋ ನನಗೆ ತಿಳಿಯಲಿಲ್ಲ.

## ಶ್ರೀಪಾದರು ಕ್ಷುದ್ರೋಪಾಸಕರ ಪೀಡೆ ಓಡಿಸುವುದು

ನನಗೆ ಸರ್ಪಮಂತ್ರ ಒಂದು ತಿಳಿದಿತ್ತು. ಅದು ಪಠನೆ ಮಾಡಿ ಬೇಕಾದ ವ್ಯಕ್ತಿಯನ್ನು ಮನಸ್ಸಲ್ಲಿ ನೆನೆದರೇ ಆ ವ್ಯಕ್ತಿ ಮನೆ ಬಳಿ ಎಲ್ಲೆಲ್ಲಿನ ಸರ್ಪಗಳೋ ಸೇರಿ ಅವನನ್ನು ಕಡಿಯುವವು. ನಾನಾ ಮಂತ್ರಪಠನೆ ಮಾಡಿ ಬಾಪನಾರ್ಯರನ್ನು ನೆನೆದೆನು. ಅಗ ಅನೇಕ ಸರ್ಪಗಳು ಬಾಪನಾರ್ಯರ ಮನೆ ಸೇರಿದವು. ಆದರೆ ಅವೆಲ್ಲವು ಮನೆ ಬಳಿ ಇದ್ದ ಒಂದು ಚಪ್ಪರವನ್ನು ಸೇರಿ ಪಡವಲಕಾಯಿಗಳಂತೆ ನೇತಾಡಿದವು. ಎರಡು ಮುಹೂರ್ತಗಳನಂತರ ಅವು ಬಂದ ದಾರಿಯಲ್ಲೇ ವಾಪಸ್ಸಾದವು. ಹೀಗೆ ನನ್ನ ಎರಡನೆಯ ಪ್ರಯತ್ನವೂ ವಿಫಲವಾಯಿತು. ನನ್ನ ಅಧೀನದ ಭೂತ ಪ್ರೇತಗಳು ಬಾಪನಾರ್ಯರ ಮನೆ ಸುತ್ತಮುತ್ತಲೂ ಸಹಾ ಹೋಗಲಾರವೆಂದವು. ಇದಕ್ಕೆಲ್ಲಾ ಕಾರಣ ಶ್ರೀಪಾದರೇ ಎಂದು ನನಗೆ ಅರ್ಥವಾಯಿತು. ನನ್ನಲ್ಲಿನ ಕೆಟ್ಟ ರಾಕ್ಷಸ ಪ್ರವೃತ್ತಿ ಇನ್ನು ನಶಿಸದ ಕಾರಣ, ನಾನು ಸ್ಮಶಾನಕ್ಕೆ ತೆರಳಿ ಶ್ರೀಪಾದರ ಹಿಟ್ಟಿನ ಪುತ್ತಳಿಯನ್ನು ಮಾಡಿ ಅದಕ್ಕೆ 32 ಸ್ಥಾನಗಳಲ್ಲಿ 32 ಸೂಜಿಗಳನ್ನು ಚುಚ್ಚಿದೆ. ಈ ಮಾರಣ ಕೃತ್ಯದಿಂದ ಶ್ರೀಪಾದರ ಶರೀರದ ಆಯಾ 32 ಸ್ಥಾನಗಳಲ್ಲಿ ದುಶ್ಪ್ರತಿಕ್ರಿಯೆ ಆಗಲೇಬೇಕಿತ್ತು. ಅಷ್ಟೇ ಅಲ್ಲ ಆ 32 ಸೂಜಿಗಳು ದ್ರವ ರೂಪ ತಾಳಿ ಶ್ರೀಪಾದರ ಶರೀರದೊಳಗೆ ಸೇರಿ ವಿಷ ಪ್ರಯೋಗ ನಡೆದು ಅವರ ಮೃತ್ಯುವಿಗೆ ಕಾರಣವಾಗುವುದು. ಆದರೇ ನನ್ನ ಈ ಪ್ರಯತ್ನ ಸಹಾ ವಿಫಲವಾಯತು. ವಿಚಿತ್ರವಾಗಿ ಒಂದು ರಾತ್ರಿ 12 ಘಂಟೆಯ ಸಮಯ ನನ್ನ ಹೊಟ್ಟೆಯಲ್ಲಿ ಅಧಿಕವಾಗಿ ನೀರು ಸೇರಿ ಪ್ರಾಣಾಂತಕ ಭಾವನೆ ಬಂದಿತು. ನನ್ನ ಸರ್ಪಮಂತ್ರ ಪ್ರಭಾವದ ಸರ್ಪಗಳೆಲ್ಲವೂ ಪೀಠಾಪುರದ ನನ್ನ ಆಗಿನ ನಿವಾಸಕ್ಕೆ ಸೇರಿ ನನ್ನನ್ನು ಕಡಿದವು. ಶ್ರೀಪಾದರ ಹಿಟ್ಟಿನ ಬೊಂಬೆಗೆ ಎಲ್ಲೆಲ್ಲಿ ನಾನು ಸೂಜಿಗಳನ್ನು ಚುಚ್ಚಿದ್ದೆನೋ, ಅಲ್ಲಲ್ಲಿ ಸರಿಯಾಗಿ ನನ್ನ ಶರೀರದಲ್ಲಿ ಸೂಜಿಯ ನೋವು ಆಗಲು ಆರಂಭಿಸಿತು. ಹೀಗೇ ನನ್ನ ದುಷ್ಪಚರ್ಯಗಳ ಪ್ರತಿಚರ್ಯಗಳು ನನ್ನ ಶರೀರದಲ್ಲೇ ಆಗತೊಡಗಿದವು. ನರಕಯಾತನೆ ಅನುಭವಿಸಿದೆ. ಸತ್ತುಹೋಗುವುದೇ ಲೇಸು ಎನ್ನಿಸುತ್ತಿತ್ತು. ಆದರೇ ಸಾವು ಬಾರದಿತ್ತು. ನರಕಬಾಧೆಗಳು ಹೇಗೀರುವೆಯೋ ಸತ್ತನಂತರವೇ ಹೊರತು ತಿಳಿಯದು. ಆದರೇ ನಾನು ಆ ರಾತ್ರಿ ಜೀವಿಸುವಾಗಲೇ ನರಕದ ಅನುಭವ ಸವಿದೆನು. **ಭರಿಸಲಾರದ ಬಾಧೆಗಳು ಆದಾಗ ಯಾರೇ ಆಗಲಿ ದೈವದ ಕಡೆ ತಿರುಗದೇ ಇರಲಾರರು.** ಶ್ರೀಪಾದ ಶ್ರೀವಲ್ಲಭರನ್ನು ನಾನು ನನ್ನ ಮನಸ್ಸಿನಲ್ಲೇ ಶರಣು ಬೇಡಿದೆನು. ನನ್ನ ಮನೋನೇತ್ರಕ್ಕೆ ಶ್ರೀಪಾದರ ರೂಪ ಕಾಣಿಸಿತು. "ಬಂಗಾರಪ್ಪ! ನೀನು ಮಾಡಿದ ಮಹಾಪಾಪಗಳಿಗೆ ನೀನು ಅನೇಕ ವರುಷ ಇಹಲೋಕದಲ್ಲಿ ಬಾಧೆ ಅನುಭವಿಸಿದ ನಂತರ, ನರಕದಲ್ಲಿ ಸಹಾ ಬಾಧೆ ಅನುಭವಿಸಬೇಕಾಗಿರುತ್ತೆ. ಆದರೇ ನಿನ್ನ ಮೇಲೆ ಕೃಪೆ ವಹಿಸಿ ಇಂದಿನ ರಾತ್ರಿ ನೀನನುಭವಿಸುವ

ಕಷ್ಟಯಾತನೆಗಳ ಮೂಲಕ ನಿನ್ನ ಪಾಪ ಕರ್ಮಗಳನ್ನು ಧ್ವಂಸ ಮಾಡುತ್ತಿದ್ದೇನೆ. ನಿನ್ನ ಕ್ಷುದ್ರವಿದ್ಯಾ ಪಾರಗಂತ್ಯವೆಲ್ಲವೂ ನಶಿಸುವುದು. ಆದರೇ ಯಾರಾದರೂ ಬಾಯಾರಿಕೆಯಿಂದ ನರಳುವವರು, ನಿನ್ನ ಮನೋನೇತ್ರಕ್ಕೆ ಕಂಡುಬಂದಲ್ಲಿ ನೀನು ಕುಡಿಯುವ ನೀರಿನಿಂದ ಅವರೆಷ್ಟೇ ದೂರದಲ್ಲಿದ್ದರೂ ದಾಹ ತೀರಿದವರಾಗುವರು. ತಲೆ ಕೆಳಗಿಂದ ತೂಗಾಡುವೆಂಬ ಒಂದು ಯೋಗ ಪ್ರಕ್ರಿಯೆಯಿಂದ ನೀನು ಆನಂದ ಹೊಂದುವೆ. ಇಂದಿನಿಂದ ಸಾತ್ವಿಕ ಪ್ರವೃತ್ತಿಯಿಂದ ಜೀವನ ಕಳೆಯುವವನಾಗು. **ನಮ್ಮ ತಂದೆ ತಾಯಿಯ ಮನೆಯಲ್ಲಾಗಲಿ, ಬಾಪನಾರ್ಯರ ಮನೆಯಲ್ಲಾಗಲಿ ಕಾಲಿಡಲು ಎಷ್ಟೋ ಜನುಮಗಳ ಪುಣ್ಯ ಬೇಕಾಗಿದೆ. ನಿನಗೀ ಜನುಮದಲ್ಲಿ ಅಷ್ಟು ಅದೃಷ್ಟವಿಲ್ಲ. ಅದೃಷ್ಟ ಆಕಸ್ಮಾತ್ತಾಗಿ ಲಭಿಸುವುದಲ್ಲ. ಹಾಗೆಯೇ ದುರದೃಷ್ಟ ಸಹಾ ವಿಚಕ್ಷಣೆ ಇಲ್ಲದೇ ಕೊಡತಕ್ಕಂತದ್ದು ಅಲ್ಲ. ಹಿಂದಿನ ಜನುಮದ ಪುಣ್ಯಕರ್ಮಗಳು ಒಮ್ಮೆ ಒಂದೇ ಬಾರಿಗೇ ಫಲಿತಕೊಟ್ಟಾಗ ಅದೃಷ್ಟ ಅನ್ನುವರು. ಹಾಗೆಯೇ ಪಾಪಕರ್ಮಗಳು ಒಂದೇ ಬಾರಿಗೇ ಫಲಿತ ನೀಡಿದಾಗ ದುರದೃಷ್ಟವೆನ್ನುವರು. ಪ್ರಾಣ ಕೊಡುವವನು ಪರಮೇಶ್ವರನಾಗಿದ್ದಾಗ ಪ್ರಾಣ ತೆಗೆಯುವ ಅಧಿಕಾರ ಸಹಾ ಆ ಪರಮೇಶ್ವರನಿಗೆ ಮಾತ್ರ ಉಂಟು. ಮಾತಾಪಿತರು ಜನ್ಮದಾತರು, ಆದ್ದರಿಂದ ಪರಮಪೂಜ್ಯರು. ಅವರನ್ನು ವೃದ್ಧಾಪ್ಯದಲ್ಲಿ ನಿರ್ಲಕ್ಷ್ಯ ಮಾಡಿದವರಿಗೆ ನನ್ನ ಕಟಾಕ್ಷ ಇರಲಾರದು.** ನೀನು ಕ್ಷುದ್ರವಿದ್ಯೆಯಿಂದ ಎಷ್ಟೋ ಅಮಾಯಕರನ್ನು ಆಕಾಲ ಮರಣಕ್ಕೆ ಗುರಿ ಮಾಡಿದ್ದೀಯ. ಆ ಪಾಪಗಳ ಫಲ ನಿನಗೆ ಒಬ್ಬ ಕನ್ನಡ ಬ್ರಾಹ್ಮಣ ಶಂಕರ ಭಟ್ಟು ಕಾಣಿಸಿಕೊಳ್ಳುವವರೆಗೂ ಇರುವುದು. ಆತ ಬಾಯಾರಿಕೆಗೊಂಡು ನೀರನ್ನು ಬಯಸಿದಾಗ ನಿನ್ನ ವಿದ್ಯೆಯಿಂದ ಅವನ ಆಸೆ ಪೂರೈಸು. ತಕ್ಷಣ ನಿನ್ನ ಪಾಪ ನಿಶ್ಶೇಷವಾಗುವುದು. ಆ ಶಂಕರ ಭಟ್ಟು ನನ್ನ ಚರಿತ್ರೆಯನ್ನು ಬರೆಯುವನು'' ಎಂದು ಹೇಳಿದರು. ಈ ಸಂಘಟನೆ ಸಮಯದಲ್ಲಿ ಶ್ರೀಪಾದರ ವಯಸ್ಸು 7,8 ವರುಷ. ಮಗು ಶಂಕರ ಭಟ್ಟು! ಅಂದಿನಿಂದ ನಿನಗಾಗಿಯೇ ಕಾದಿದ್ದೇನಿ. ಇಂದು ನನ್ನ ಸುದಿನ'' ಎಂದು ಬಂಗಾರಪ್ಪ ನುಡಿದರು. ನನಗೆ ಇದೆಲ್ಲವೂ ಅಯೋಮಯವಾಗಿರಲು, ಹೀಗೆಂದನು, ``ಸ್ವಾಮಿ! ತಾವು ನೀರು ಕುಡಿದಲ್ಲಿ ಮತ್ತೊಬ್ಬರ ಬಾಯಾರಿಕೆ ಹೇಗೆ ತೀರುವುದು? ಇದರ ಮರ್ಮ ತಿಳಿಸಿ.'' ``ಮಗು! ಅನ್ನಮಯ ಕೋಶದಲ್ಲಿರುವ ಜೀವಿಗಳು ಭೌತಿಕ ಸಂಸ್ಕಾರವನ್ನೊಂದಿ ಭೌತಿಕ ಪ್ರಪಂಚದಲ್ಲಿ ಅನುಭವಗಳನ್ನು ಹೊಂದುವರು. ಪ್ರಾಣಮಯ ಕೋಶದ ಜೀವಿಗಳು ಸೂಕ್ಷ್ಮ ಶರೀರ ಚೈತನ್ಯ ಹೊಂದಿರುವರು. ಮನೋಮಯ ಕೋಶದ ಜೀವಿಗಳು ಮಾನಸಿಕ ಪ್ರಪಂಚದ ಜೊತೆ ಸಂಬಂಧ ಹೊಂದಿರುವರು. ವಿಜ್ಞಾನ ಸಮಯ ಕೋಶದ ಜೀವಿಗಳು ಅದಕ್ಕೆ ಸಂಬಂಧಪಟ್ಟ ಪ್ರಪಂಚದಿಂದ ಸಂಬಂಧ ಹೊಂದಿರುವರು. ಆನಂದಮಯ ಕೋಶದ ಜೀವಿಗಳಿಗೆ ಆನಂದಾನುಭವ ಇರುವುದು. ಪ್ರಾಣಮಯ ಶಕ್ತಿಯನ್ನು ಒಂದಾನೊಂದು ಯೋಗ ಪ್ರಕ್ರಿಯೆ ಮೂಲಕ ನಾನು ಇತರ ಜೀವಿಗಳ ಪ್ರಾಣಮಯ ಶಕ್ತಿ ಜೊತೆ ಅನುಸಂಧಾನ ಮಾಡುವೆನು. ಆದ್ದರಿಂದ, ಈ ತಾದಾತ್ಮ್ಯ ಭಾವದ ಕಾರಣ ಇದು ಸಾಧ್ಯವಾಗುವುದು. ಒಂದಾನೊಂದು ಯೋಗ ಪ್ರಕ್ರಿಯೆ ಮೂಲಕ ಹಿಂದೆ, ವಾಲಿ ಅವನ ಎದುರಿನಲ್ಲಿನ ವ್ಯಕ್ತಿಗಿಂತ 2 ರಷ್ಟು ಶಕ್ತಿ ಬಲ ಹೊಂದುತ್ತಿದ್ದನು. ಆದ್ದರಿಂದಲೇ ಶ್ರೀರಾಮನು ವಾಲಿಯನ್ನು ಮರದ ಮರೆಯಿಂದ ವಧಿಸಿದನು. ವಿಶ್ವಾಮಿತ್ರ ಮಹರ್ಷಿ ರಾಮಲಕ್ಷ್ಮಣರಿಗೆ ಬಲ, ಅತಿಬಲ ಎಂಬ ಎರಡು ಪವಿತ್ರ ಮಂತ್ರಗಳನ್ನುಪದೇಶಿಸಿದರು. ಈ ಮಂತ್ರಗಳ ಸ್ಪಂದನೆಗೆ ಸರಿಯಾಗಿ ಪ್ರಾಣಶಕ್ತಿಯನ್ನು ಒದಗಿಸಿದರೇ ವಿಶ್ವಾಂತರಾಳದಲ್ಲಿರುವ ವಿಶ್ವಶಕ್ತಿಯನ್ನು ತನ್ನ ಒಳಗೆ ಆಕರ್ಷಿಸಲು ಸಾಧ್ಯವಾಗುವುದು. ಶರೀರ ಪರಿಶುದ್ಧವಿಲ್ಲದಿದ್ದಲ್ಲಿ, ಆ ಶಕ್ತಿ ನಮ್ಮ ಶರೀರದೊಳಗೆ ಪ್ರವೇಶಿಸುವ ಸಮಯ ಬಹಳ ನೋವು ಆಗುವುದಲ್ಲದೇ ಆ ಶಕ್ತಿಯನ್ನು ಪಡೆಯಲು ಸಾಧ್ಯವಾಗದೇ ಸಾವು ಸಂಭವಿಸುವುದು. **ಪರಿಶುದ್ಧತಾಕ್ರಮದಲ್ಲಿ ಮಾನವ ಶರೀರಗಳು 12 ದಶೆಗಳಲ್ಲಿರುವವು. ಶ್ರೀರಾಮರ, ಶ್ರೀದತ್ತರ ಶರೀರಗಳು 12**

**ಮತ್ತು 12ಕ್ಕೂ ಮೀರಿ (ದತ್ತರದ್ದು) ದ ದಶೆಗೆ ಸೇರಿರುವವು. ಆದ್ದರಿಂದ ದತ್ತಾವತಾರರಾದ ಶ್ರೀಪಾದ ಶ್ರೀವಲ್ಲಭರಲ್ಲಿ ಅನಂತಶಕ್ತಿ, ಜ್ಞಾನ ಮತ್ತು ವ್ಯಾಪಕತ್ತ್ವ ಸಹಜಸಿದ್ಧವಾಗಿರುವುದು"** ಎಂದು ಬಂಗಾರಪ್ಪ ನುಡಿದರು. ಆಗ ನಾನು, "ಸ್ವಾಮಿ! ಗೌತಮ ಮಹರ್ಷಿಗಳ ಶಾಪ ಕಾರಣ ಮಾತೆ ಅಹಲ್ಯ ಶಿಲೆಯಾದಳೆಂದು ಶ್ರೀರಾಮರ ಪಾದಧೂಳಿ ಸ್ಪರ್ಶದಿಂದ ವಿಮುಕ್ತಳಾದರೆನ್ನುವರೆ, ಆಕೆ ನಿಜಕ್ಕೂ ಶಿಲೆ ಆದಳಾ ಇಲ್ಲ ಗೂಢಾರ್ಥ ಇದರಲ್ಲಿದೆಯಾ?'' ಎಂದು ಪ್ರಶ್ನಿಸಿದೆ.

ಆಗ ಬಂಗಾರಪ್ಪ, "ಒಳ್ಳೆಯ ಪ್ರಶ್ನೆಯನ್ನೇ ಕೇಳಿದ್ದೀಯ. ಅಹಲ್ಯಳ ನೆರಳ ರೂಪದಿಂದಲೇ ಇಂದ್ರನು ಸಂಬಂಧಹೊಂದಿದ್ದನು. ಅದು ತಿಳಿಯದೇ ಕ್ರೋಧಾವೇಶದಲ್ಲಿ ಗೌತಮನು ಅಹಲ್ಯಳನ್ನು 'ಶಿಲೆ' ಆಗುವಂತೆ ಶಪಿಸಿದನು. ಆಗ ಅಹಲ್ಯ, "ಓ ಬುದ್ಧಿಯಿಲ್ಲದ ಮುನಿ, ಎಂತಹ ಕೆಲಸ ಮಾಡಿದ್ದೀಯಾ?'' ಅಂದಳು. ಗೌತಮನಲ್ಲಿನ ಬುದ್ಧಿ ಕ್ಷೀಣಿಸಿ ಹುಚ್ಚನಾಗಿ ಅನೇಕ ದಿವ್ಯ ಸ್ಥಳಗಳನ್ನು ಸುತ್ತಿ, ಶಿವಾನುಗ್ರಹದಿಂದ ಪುನಃ ಆರೋಗ್ಯ ಪಡೆದನು. ಚೈತನ್ಯ ಪರಿಣಾಮಕ್ರಮ ಪರಿಶೀಲಿಸಿದರೇ ಶಿಲೆ ಪ್ರಥಮ ಸ್ಥಾನದಲ್ಲಿರುವುದು. ಅದರಲ್ಲಿನ ಆತ್ಮ ನಿರ್ಜೀವ ಸ್ಥಿತಿಯಲ್ಲಿರುವುದು. ಶಿಲೆಯಲ್ಲಿ ಸಹಾ ಅನೇಕ ಜಾತಿಗಳಿವೆ. ಒಂದಾನೊಂದು ಶಿಲೆ 'ಆತ್ಮ', ಆ ಶಿಲೆಯಲ್ಲಿ ಕೆಲವು ಸಂಸ್ಕಾರಗಳನ್ನು ಹೊಂದುತ್ತಿರುವುದು. ಆ ಅನುಭವಗಳ ನಂತರ ಮತ್ತೊಂದು ಜಾತಿಯ ಶಿಲೆಯಲ್ಲಿ ಆ ಆತ್ಮ ಪ್ರವೇಶಿಸುವುದು. ಹಾಗೆ ಖಾಳಿಯಾಗಿದ್ದ ಮೊದಲನೆಯ ಶಿಲೆಯೊಳಕ್ಕೆ ಮತ್ತೊಂದು ಆತ್ಮ ಪ್ರವೇಶಿಸುವುದು. ಯಾವ ಆತ್ಮ ಯಾವ ಶಿಲೆಯಲ್ಲಿ ಎಷ್ಟುಕಾಲ ಇತ್ತೆಂಬುದು ಕೇವಲ ಯೋಗ ದೃಷ್ಟಿ ಉಳ್ಳವರಿಗೆ ಮಾತ್ರ ತಿಳಿಯಲು ಸಾಧ್ಯ. ಒಂದು ಶಿಲೆಯಲ್ಲಿ ಒಂದು ಆತ್ಮ ಇರಲು ಆ ಶಿಲೆ ಎರಡು ಭಾಗಗಳಾದ್ದಲ್ಲಿ ಒಂದರಲ್ಲಿ ಈ ಆತ್ಮ ಮತ್ತು ಎರಡನೆಯ ಶಿಲೆಯಲ್ಲೆ ಮತ್ತೊಂದು ಆತ್ಮ ಇದ್ದು ಕೆಲವು ಅನುಭವಗಳನ್ನು ಹೊಂದುವುದು. ಆ ಅನುಭವಗಳ ವಿಷಯ ಆ ಆತ್ಮಕ್ಕೆ ತಿಳಿಯದು! ಆದರೇ ಶಿಲಾ ಸ್ಥಿತಿಯಲ್ಲಿರುವ ಆತ್ಮ ಬಹಳಷ್ಟು ಬಾಧೆ ಅನುಭವಿಸುವುದು. ಅವಕ್ಕೆ ಜೀವವಿಲ್ಲದಿದ್ದರೂ ಬಾಧೆಯ ಅನುಭವ ಉಂಟು'' ಎಂದರು.

## ಜೀವಿಗಳಿಗೆ ವಿವಿಧ ಯೋನಿಗಳಲ್ಲಿ ಆಗುವ ಕಷ್ಟಗಳ ವಿವರಣೆ

ಆಗ ನಾನು, "ಸ್ವಾಮಿ! ಜೀವವಿದ್ದರೇನೇ ತಾನೇ ಬಾಧೆ ಅಥವಾ ಸುಖದ ಅನುಭವ? ಹಾಗಾದರೇ ನಿರ್ಜೀವ ಪದಾರ್ಥಗಳಿಗೆ ಅಪರಿಮಿತ ಬಾಧೆ ಹೇಗೆ ಸಾಧ್ಯ?'' ಎಂದು ಪ್ರಶ್ನಿಸಿದೆನು. ಬಂಗಾರಪ್ಪ, "ಜೀವಾತ್ಮ ಪರಮಾತ್ಮನಲ್ಲಿ ಸೇರಿರಲು ಬ್ರಹ್ಮಾನಂದವನ್ನು ಅನುಭವಿಸುವುದು. ಅದು ಮಾತಿಗೆ ಸಿಗದಂತದ್ದು, ಮನಸ್ಸಿಗೆ ತಿಳಿಯಲಾರದ್ದು, ಹಾಗೆಯೇ ಜೀವಾತ್ಮ ಶಿಲೆಯಲ್ಲಿರಲು ಬ್ರಹ್ಮಾನಂದಕ್ಕೆ ಸಂಪೂರ್ಣ ವಿರುದ್ಧವಾದ ಮಹಾದುಃಖವನ್ನು ಅನುಭವಿಸುವುದು. ಅದೂ ಸಹಾ ವಾಕ್ಕುಗೆ ಸಿಗದಾಗಿ ಮನಸ್ಸಿಗೆ ತಿಳಿಯಲಾಗಿರುವುದು. ಅಂದರೇ ಪ್ರಾಣ ಇಲ್ಲದ್ದಲ್ಲಿ ಅನುಭವಿಸಲಾದ ಮಹಾದುಃಖ ಅದು. ಅನೇಕ ಶಿಲೆಗಳಲ್ಲಿ ಈ ಆತ್ಮ ಪರಿಭ್ರಮಿಸುತ್ತಾ ತಿಳಿಯಲಾರದ, ಊಹಿಸಲಾರದ, ಪ್ರಾಣವಿಲ್ಲದ ಮಹಾದುಃಖಗಳನ್ನು ಅನುಭವಿಸುತ್ತಾ ಲೋಹದಲ್ಲಿ ಪ್ರವೇಶಿಸುವುದು. ವಿವಿಧ ಲೋಹಗಳಲ್ಲಿ ಅದು ಸುತ್ತುತ್ತಾ ನಿದ್ರಾಣ ಸ್ಥಿತಿಯಲ್ಲಿರುವ ಪ್ರಾಣವನ್ನು ಅನುಭವಿಸುವುದು. ಒಂದು ಲೋಹದ ಮೇಲೆ ಅದಕ್ಕೆ ಸರಿಬೀಳದ ವಿಷಪೂರಿತ ಪದಾರ್ಥ ಸುರಿದರೇ ಅದರಲ್ಲಿ ನಿದ್ರಾಣ ಸ್ಥಿತಿಯಲ್ಲಿರುವ ಪ್ರಾಣ, ನಿದ್ರಾಣ ಸ್ಥಿತಿಯಲ್ಲೇ ಬಾಧೆಯನ್ನನುಭವಿಸಿ, ಆ ಲೋಹವನ್ನು ಬಿಟ್ಟು ಮತ್ತೊಂದು ಲೋಹದೊಳಗೆ ಪಯಣಿಸುವುದು. ಲೋಹ ಜಾತಿಗಳಲ್ಲಿ ತಾದಾತ್ಮ್ಯ ಹೊಂದಿದ ಆತ್ಮ ಪರಿಣಾಮಕ್ರಮದಲ್ಲಿ ಬೇರೇ ಸ್ಥಾನದಲ್ಲಿರುವ ವೃಕ್ಷದಲ್ಲಿ ಪ್ರವೇಶಿಸುವುದು. ಇಲ್ಲಿಯವರೆಗೂ ನಿರ್ಜೀವ ಪದಾರ್ಥವಾಗಿದ್ದಾಗ, ನಿದ್ರಾಣ ಸ್ಥಿತಿಯಲ್ಲಿದ್ದ ಪ್ರಾಣ ಈಗ ಚೈತನ್ಯ ಹೊಂದಿ ನೇರವಾಗಿ ನಿಂತೋ, ವಾಲಿಕೊಂಡೋ ಇರಬೇಕೆಂಬ

ಉದ್ದೇಶ ಹೊಂದಿರುವುದು. ಆದರೇ ದೃಢತ್ವಕ್ಕಾಗಿ ಏರ್ಪಡಿಸಿದ ಬೇರುಗಳು, ಭೂಮಿಯೊಳಕ್ಕೆ ಸೀಳಿಕೊಂಡು ಹೋಗಿ, ಹಾಗೆ ಆಗಲು ಅನುಕೂಲ ಮಾಡಿಕೊಡುವವು. ಆತ್ಮ ಈ ಪ್ರಕಾರವಾಗಿ ಅನೇಕ ವೃಕ್ಷಗಳಲ್ಲಿ ಪ್ರವೇಶಿಸಿ, ಅನೇಕ ಅನುಭವಗಳನ್ನು ಹೊಂದುತ್ತಾ, ಅರ್ಧಭಾಗ ಜೀವದಿಂದಲು, ಉಳಿದ ಅರ್ಧಭಾಗ ಜೀವವಿಲ್ಲದೇ ಇರುವಂತಹ ಸ್ಥಿತಿಯಿಂದ ಹೊರಬಂದು ಕ್ರಿಮಿಕೀಟಕಗಳಾಗಿ ಬದಲಾವಣೆ ಹೊಂದುವುದು. ಈ ಸ್ಥಿತಿಯಲ್ಲಿ ಚಲನವನ್ನು ಬಯಸುವ ಅದರ ಸಂಕಲ್ಪ ಪೂರೈಸುವುದು. ಹೀಗೆ ಕ್ರಿಮಿಕೀಟಕಾದಿಗಳಾಗಿದ್ದು ಅನೇಕ ಸಂಸ್ಕಾರಗಳನ್ನು ಹೊಂದುತ್ತಾ ಮೀನು ರೂಪ ಹೊಂದುವುದು. ನಂತರ ಪಕ್ಷಿ(ಹಕ್ಕಿ) ರೂಪ. ಅನೇಕ ಹಕ್ಕಿಗಳ ರೂಪದಲ್ಲಿ ಅನುಭವ ಹೊಂದಿ ನಂತರ 4 ಕಾಲಿನ ಜೀವಿಯಾಗಿ ಹುಟ್ಟುವುದು. ಅದರಲ್ಲೂ ಪರಮ ಪವಿತ್ರವಾದ ಗೋಜನ್ಮ ತಾಳುವುದು. ಮಾನವರಿಗೆ ತಾಯಿಯಂತೆ ಹಾಲನ್ನು ಕೊಡುತ್ತಾ ಅದಕ್ಕೆ ತಿಳಿಯದಂತೆಯೇ ಪುಣ್ಯ ಸಂಪಾದಿಸುವುದು. ಎತ್ತು ಜನುಮದಲ್ಲಿ ಸಹಾ ಮಾನವನಿಗೆ ಅಹಾರ ಉತ್ಪತ್ತಿಗೆ ಸಹಾಕಾರಕೊಟ್ಟು ಸಾಕಷ್ಟು ಪುಣ್ಯ ಸಂಪಾದಿಸುವುದು. ನಂತರದ ಜನುಮದಲ್ಲಿ ಅದೇ ಆತ್ಮ, ಮಾನವನ ಶರೀರ ಹೊಂದುವುದು. ಸಂಸ್ಕಾರಗಳು ಅಲೋಚನೆಗಳನ್ನು, ಅದರಿಂದ ಕೃತ್ಯಗಳು ಮಾಡಲ್ಪಟ್ಟು ಪುಣ್ಯಪಾಪ ಕರ್ಮಗಳಾಗುವವು.

## ಸಾಧನೆಯ ಪಥದಲ್ಲಿ ಸಪ್ತ ಭೂಮಿಕೆಗಳ ವಿಚಾರಣೆ

ಮಾನವನು ಬದಲಾವಣೆಗಳ ಹಾದಿಯಲ್ಲಿ ಸಪ್ತ ಭೂಮಿಕೆಗಳಲ್ಲಿರುವನು. ಮೊದಲನೆಯ ಭೂಮಿಕೆಯಲ್ಲಿ ಸ್ಥೂಲ ದೇಹೇಂದ್ರಿಯಗಳು, ಸೂಕ್ಷ್ಮ ದೇಹೇಂದ್ರಿಯಗಳನ್ನು ಒಂದೇ ಸಮಯ ಉಪಯೋಗಿಸುವನು. 2ನೇ ಭೂಮಿಕೆಯಲ್ಲಿ ಸೂಕ್ಷ್ಮ ದೇಹೇಂದ್ರಿಯಗಳಿಂದ, ಸೂಕ್ಷ್ಮ ಪ್ರಪಂಚಾನುಭವ ಹೊಂದಿ, ಚಿಕ್ಕಪುಟ್ಟ ಮಹಿಮೆಗಳನ್ನು ಮಾಡುವ ಸಾಮರ್ಥ್ಯ ಹೊಂದುವನು. 3, 4ನೇ ಭೂಮಿಕೆಯಲ್ಲಿನ ನಡುವೆ ವಶೀಕರಣ ಕೇಂದ್ರ ಒಂದಿದೆ. ವಶೀಕರಣಕ್ಕೆ ಒಳಗೊಂಡರೇ ಇದ್ದ ಸ್ಥಿತಿಯಲ್ಲೇ ಇರಲಾಗುವುದು. ಗೌತಮ, ಅಹಲ್ಯೆಯನ್ನು ಶಪಿಸಿದಾಗ, ಬಹಳ ಆಶ್ಚರ್ಯಕ್ಕೆ ಒಳಗಾದಳು. ಆಗ ಆ ಸಾಧ್ವಿ ಶಿಲಾಚೈತನ್ಯದಲ್ಲಿದ್ದ ಹಾಗೆ ಭಾವಿಸಿಕೊಂಡಳು. ಆಕೆ ಹಾಗೆಯೇ ಶ್ರೀ ರಾಮ ದರ್ಶನವರೆಗೂ ಅದೇ ಸ್ಥಿತಿಯಲ್ಲಿ ಇದ್ದುಬಿಟ್ಟಳು. ಅಹಲ್ಯ ಶರೀರ ಶಿಲೆಯಾಗಲಿಲ್ಲ. ಆಕೆಯ ಮನಸ್ಸು ಮಾತ್ರವೇ ಆ ಸ್ಥಿತಿಯನ್ನು ಹೊಂದಿತು. ಅಂದರೇ 3,4 ಭೂಮಿಕೆಗಳ ಮಧ್ಯೆ ಇರುವ ವಶೀಕರಣ ಕೇಂದ್ರದೊಳು ಇದ್ದುಬಿಟ್ಟಿತು. ಶ್ರೀರಾಮನ ಪಾದಧೂಳಿ ಸೋಕಿದಂತೇಯೇ ಆಕೆಯ ಮನೋಪುಷ್ಪ ಅರಳಿ, ಪುನಃ ನಿಜಸ್ಥಿತಿ ಹೊಂದಿದಳು.

4ನೆಯ ಭೂಮಿಕೆಗೆ ಸೇರಿದ ಆತ್ಮಕ್ಕೆ ಅತ್ಯಂತ ವಿಸ್ತಾರವಾದ ಯೋಗ ಶಕ್ತಿಗಳು ಲಭಿಸುವವು. ತಮ್ಮ ಯೋಗ ಶಕ್ತಿಗಳನ್ನು ಲೋಕ ಕಲ್ಯಾಣಕ್ಕೆ ಅಂತರಾತ್ಮ ಬೋಧಿಸಿದಂತೆ ನಡೆಸಿದರೇ ಮೇಲಿನ ಸ್ಥಿತಿಗೆ ಹೋಗಬಲ್ಲರು. ಹಾಗಲ್ಲದೇ ಪಾಪಕಾರ್ಯಕ್ಕೊ, ತುಚ್ಛವಾದ ಸ್ವಾರ್ಥಕ್ಕಾಗಿಯೋ ಈ ಶಕ್ತಿಗಳನ್ನು ಬಳಿಸಿದರೆ ಪತನ ಹೊಂದಿ ಶಿಲಾಚೈತನ್ಯದಲ್ಲಿ ಬೀಳುವುದು ಶತಸಿದ್ಧ. ನಂತರ ಅನೇಕ ಸಾವಿರ ಜನುಮಗಳನ್ನು ತಾಳಿದ ಮೇಲೆಯೇ ಮಾನವ ಜನ್ಮ ಸಾಧ್ಯ. 5ನೇಯ ಭೂಮಿಕೆಯಲ್ಲಿರುವವರು ಸಂಕಲ್ಪ ಜ್ಞಾನರು. 6ನೇ ಭೂಮಿಕೆಯಲ್ಲಿರುವವರು ಭಾವ ಜ್ಞಾನರು, ಸಂಕಲ್ಪ ಜ್ಞಾನರು, ದೈವ ಸಾಕ್ಷಾತ್ಕಾರ ಕೋರುತ್ತಲೇ ಪ್ರಾಪಂಚಿಕ ಕೆಲಸ, ಕಾರ್ಯಗಳನ್ನು ಸಹಾ ಮಾಡುತ್ತಾರೆ. ಆದರೇ ಭಾವ ಜ್ಞಾನರಿಗೆ ಪ್ರಾಪಂಚಿಕ ಕೆಲಸ ಕಾರ್ಯಗಳಲ್ಲಿ ಅಲೋಚನೆ ಬಹಳ ಕಡಿಮೆ ಇರುವುದು. 7ನೇ ಭೂಮಿಕೆಯಲ್ಲಿರುವವರು ಪರಮಾತ್ಮನಲ್ಲಿದ್ದೇ ಅನಂತ ಸ್ಥಿತಿಯ ಜ್ಞಾನವನ್ನು ಹೊಂದಬಲ್ಲರು'' ಎಂದು ತಿಳಿಸಿದರು.

## ಅವತಾರ ಪುರುಷರಿಗೂ, ಸಾಧಕರಿಗೂ ಇರುವ ವ್ಯತ್ಯಾಸ

ಬಂಗಾರಪ್ಪ ಹೇಳಿದ ಮಾತನ್ನು ಕೇಳಿದ ನಂತರ ನನಗೆ ಕೆಲವು ಸಂದೇಹಗಳು ಬಂದವು. ಅವನ್ನು ತೀರಿಸಿಕೊಳ್ಳಲು ನಾನು, "ಸ್ವಾಮಿ! ಜೀವಿಗಳಿಗೆ ಮಾತ್ರವೇ ಪರಿಣಾಮಕ್ರಮಗಳಿರುವೆಯ? ಇಲ್ಲ ಅವತಾರ ಪುರುಷರಿಗೂ ಇದು ವರ್ತಿಸುವುದ? ಎಂದೆನು. ಆಗ ಬಂಗಾರಪ್ಪ, "**ಅವತಾರಗಳು ಕಾಲಕ್ಕೆ ತಕ್ಕಾಗಿ ಬರುತ್ತಿರುವವು. ಮಾನವ ಭಗವಂತನಾದರೇ, ಸಮರ್ಥ ಸದ್ಗುರುವೆಂದು ಕರೆಯಲ್ಪಡುವನು. ದೇವನೇ ಮಾನವನಾಗಿ ಬಂದರೇ ಅವತಾರವೆನ್ನಲಾಗುವನು.** ಮೀನು ನೀರಿನಲ್ಲಿ ವೇಗದಿಂದರಬಲ್ಲದು. ಆಮೆ ನೀರು ಮತ್ತು ಭೂಮಿ ಮೇಲೆ ಸಹಾ ಚಲಿಸಬಲ್ಲದು. ಹಂದಿ, ಖಡ್ಗಮೃಗ ಭೂಮಿ ಮೇಲೆ ಹೆಚ್ಚು ಗತಿಯಿಂದ ಚಲಿಸಬಲ್ಲ ಪ್ರಾಣಿ. ನಾರಸಿಂಹ, ಜಂತುಗಳಲ್ಲಿ ಶ್ರೇಷ್ಠವಾದ ಸಿಂಹದ ಮುಖದೊಂದಿಗೆ, ಮಿಕ್ಕ ಶರೀರ ಮನುಷ್ಯ ರೂಪದಲ್ಲಿರುವ ಅವತಾರ. **ಯಾಚನಾಪ್ರವೃತ್ತಿಯುಳ್ಳ ತಮೋಗುಣ ಪ್ರಧಾನವಾಗಿ ಬಂದದ್ದು ವಾಮನಾವತಾರ. ರಜೋಗುಣ ಪ್ರಧಾನವಾಗಿ ಬಂದದ್ದು ಪರಶುರಾಮಾವತಾರ. ಸತ್ವಗುಣ ಪ್ರಧಾನವಾಗಿ ಬಂದದ್ದು ರಾಮಾವತಾರ. ತ್ರಿಗುಣಕ್ಕೂ ಅತೀತವಾದ, ನಿರ್ಗುಣತತ್ತ್ವ ಪ್ರಧಾನವಾಗಿ ಬಂದದ್ದು ಶ್ರೀಕೃಷ್ಣಾವತಾರ. ಕರ್ಮ ಪ್ರಧಾನವಾಗಿ ಬಂದದ್ದು ಬುದ್ಧಾವತಾರ. ಸಮಸ್ತ ಸೃಷ್ಟಿಯೊಳಗಿನ ಏಕತ್ವದೊಳಗಿನ ಅನೇಕತ್ವವನ್ನು, ಅನೇಕತ್ವದಲ್ಲಿನ ಏಕತ್ವವನ್ನು ತನ್ನೊಳಗೇ ಉಳಿಸಿಕೊಂಡು ಬಂದ ಅತ್ಯಂತ ಅದ್ಭುತವಾದ, ಅತ್ಯಂತ ವಿಲಕ್ಷಣವಾದ ಅವತಾರ, ಯುಗಾವತಾರ ಶ್ರೀಪಾದ ಶ್ರೀವಲ್ಲಭಾವತಾರ. ಶ್ರೀಪಾದರಿಗೆ ಋಣಾನುಬಂಧವಿಲ್ಲದ ಯೋಗ ಸಂಪ್ರದಾಯಗಳಾಗಲಿ, ಮತಗಳಾಗಲಿ, ಧರ್ಮಗಳಾಗಲಿ ಸೃಷ್ಟಿಯಲ್ಲೇ ಇಲ್ಲ. ಶ್ರೀಪಾದರ ಸ್ಥಿತಿ ಅದೆಷ್ಟು ಬುದ್ಧಿಶಾಲಿಗಳಿಗೆ ಆಗಲಿ ಅಗೋಚರ. ಅವರಿಗೆ ಅವರೇ ಸರಿ. ಎಲ್ಲಾ ಸಿದ್ಧಾಂತಗಳೂ, ಸಂಪ್ರದಾಯಗಳೂ ಸಹಾ ಅವರಲ್ಲಿ ಸಮನ್ವಯ ಹೊಂದುವವು. ಈ ಸೃಷ್ಟಿಗೆಲ್ಲಾ ಆದಿ ಮತ್ತು ಅಂತ್ಯ ಅವರೇ. ಸ್ಪಂದನೆಗಳಿಗೊಳಗಾಗಿರುವ ಈ ಜಗದ್ವ್ಯಾಪಾರವನ್ನೆಲ್ಲಾ ನೋಡಿಕೊಳ್ಳುವುದು, ಸಂಕಲ್ಪಿಸುವುದು ಮತ್ತು ನಡೆಸುವುದೂ ಶ್ರೀಗಳೇ.** ಇದು ಅತ್ಯಂತ ಗಂಭೀರ ದೈವ ರಹಸ್ಯ. ಸಪ್ತರ್ಷಿಗಳಿಗೇ ತಿಳಿಯದ ಅವರ ಸ್ಥಿತಿಯನ್ನು, ನಾನೇನೆಂದು ವರ್ಣಿಸಲಿ? ಮಗೂ ಶಂಕರ ಭಟ್ಟು! ನೀನು ಧನ್ಯನು. ಅವರ ಅವ್ಯಾಜ್ಯ ಪ್ರೀತಿಯನ್ನು ಹೊಂದಿರುವರೇ ಧನ್ಯರು. ಇತರರ ಜೀವ ವ್ಯರ್ಥ" ಎಂದರು.

## ಸತ್ಕರ್ಮ, ದುಷ್ಕರ್ಮಗಳ ಫಲ ವಿವರಣೆ

"ಸ್ವಾಮಿ! ನನಗೊಂದು ಸಂದೇಹವಿದೆ. ಎಲ್ಲಾ ಕರ್ಮಗಳಿಗೂ ಪ್ರಬೋಧಕರು ಅವರೇ ಆದಾಗ, ಲೋಕದಲ್ಲಿ ಕೆಲವರನ್ನು ಒಳ್ಳೆಯವರಾಗಿಯೂ, ಇನ್ನು ಕೆಲವರನ್ನ ಕೆಟ್ಟವರಾಗಿಯು ಏಕೆ ಹುಟ್ಟಿಸಬೇಕು?" ಎಂದು ನಾನು ಕೇಳಿದೆ.

ಅದಕ್ಕೆ ಶ್ರೀ ಬಂಗಾರಪ್ಪ ಜೋರಾಗಿ ನಕ್ಕಿ, "ಮಗು! ಇದು ಒಳ್ಳೆಯ ಪ್ರಶ್ನೆಯೇ. ಸೃಷ್ಟಿ ಎಲ್ಲಾ ದ್ವಂದ್ವಗಳ ಸಹಾಯವಾಗಿಯೇ ನಿಂತಿದೆ. ಸಾವಿನ ಭಯವೇ ಇಲ್ಲದಿದ್ದರೇ ಬಹುಶಃ ಹೆತ್ತ ತಾಯಿ ಸಹ ತನ್ನ ಕಂದನನ್ನು ಪ್ರೇಮಿಸಲಾರಳು. ವೇದಗಳಲ್ಲಿ ಪುರುಷ ಶಬ್ದ ಆತ್ಮ ಎಂಬುವ ಅರ್ಥದಲ್ಲಿ ಉಪಯೋಗಿಸಲಾಗಿದೆಯೇ ಹೊರತು, ಪುರುಷಾಧಿಪತ್ಯೆಗಾಗಿ ಅಲ್ಲ. ಮಾನವ ಧರ್ಮಗಳಿಗೂ, ಜಂತು ಧರ್ಮಗಳಿಗೂ ಇರುವಷ್ಟು ವ್ಯತ್ಯಾಸವೇ ಮಾನವ ಮತ್ತು ದೇವತಾ ಧರ್ಮಗಳಿಗೂ ಸಹಾ ಇರುವುದು. ದ್ವಂದ್ವಗಳೇ ಇಲ್ಲದಿದ್ದರೆ ವಿಕಾಸವಾಗಲಿ, ಪರಿಣಾಮವಾಗಲಿ ಸಾಧ್ಯವಿಲ್ಲ. ಭಗವಂತ ಸರ್ವಶಕ್ತಿವಂತನೆಂದರೆ ಎಲ್ಲಾ ಒಳ್ಳೆಯ ಶಕ್ತಿಗಳೇ ಅವರ ಬಳಿ

ಇರುವವೆಂದು ಅರ್ಥವಲ್ಲ. ನೀನು ಈ ಪ್ರಪಂಚದಲ್ಲಿ ಕಾಣುತ್ತಿರುವ ಮೋಸ, ವಂಚನೆ, ದೌರ್ಜನ್ಯದಂತದ್ದು ಸಹಾ ಆ ಸರ್ವಶಕ್ತಿಗಳಲ್ಲಿನ ಒಂದು ಭಾಗವೇ. ದುಃಖ ಇರುವುದಿಂದಲೇ ಸುಖವನ್ನು ಬಯಸುತ್ತಿದ್ದೇವೆ. ದುಃಖದ ಜ್ಞಾನವಿಲ್ಲದಿದ್ದಲ್ಲಿ, ಸುಖದ ಅನುಭವ ಎಂಬುದು ತಿಳಿಯಲಾರದು. ನಾವಿಂದು ಕಾಣುವ ಕೋಟಿಕೋಟಿ ನಕ್ಷತ್ರಗಳೆಲ್ಲಾ, ಮೊದಲಿಗೆ ಚೆಲ್ಲಾಪಿಲ್ಲಿಯಾಗಿ ಇದ್ದವು. ಎಲ್ಲವೂ ಒಂದಕ್ಕೊಂದು ಡಿಕ್ಕಿ ಹೊಡೆದು ಇನ್ನಷ್ಟು ನಕ್ಷತ್ರ ರಾಶಿಗಳು ಆದವು. ಹೀಗೆ ಅನೇಕಬಾರಿ ಕೂಡಿದ ನಂತರ, ಇಂದು ನಾವು ಕಾಣುತ್ತಿರುವ ಸುವ್ಯವಸ್ಥಿತವಾದ ನಕ್ಷತ್ರ ರಾಶಿಗಳು ಸ್ಥಿರ ಹೊಂದಿವೆ. ನಮ್ಮ ಸೌರ ಕುಟುಂಬದ ಗ್ರಹಗಳು, ಸುವ್ಯವಸ್ಥಿತವಾದ ಕಕ್ಷೆಯಲ್ಲಿ ಸೂರ್ಯನ ಸುತ್ತಲೂ ತಿರುಗುತ್ತಿವೆ. ಆ ಸೂರ್ಯನಿಗೆ ಧೃವ ಆಧಾರ. ಹೀಗೇ **ಪರಸ್ಪರ ಆಕರ್ಷಣಾ ವಿಕರ್ಷಣೆಗಳಲ್ಲಿ ಸೃಷ್ಟಿ ನಡೆಯುತ್ತಿದೆ. ಪರಮಾತ್ಮನಲ್ಲಿ ಆಕರ್ಷಣೆ ಉಳ್ಳವನು ಆಸ್ತಿಕನಾಗಿ, ಸತ್ಕರ್ಮಿಯಾಗುತ್ತಿದ್ದಾನೆ. ವಿಕರ್ಷಣೆ ಉಳ್ಳವನು ನಾಸ್ತಿಕನಾಗಿ, ದುಷ್ಕರ್ಮಿ ಆಗುತ್ತಿದ್ದಾನೆ. ಆಸ್ತಿಕರಿಗೂ, ನಾಸ್ತಿಕರಿಗೂ ಸಹಾ ಅವರೇ ಆಧಾರ. ಸತ್ಕರ್ಮ ದುಷ್ಕರ್ಮಿಗಳಿಗೂ ಅವರೇ ಆಧಾರ. ಈ ಸೃಷ್ಟಿ ಲೀಲೆಗಳಲ್ಲಿ ಯಾವುದೂ ಸ್ಥಿರವಲ್ಲ. ಇಂದು ನೀನು ಕಾಣುವ ಸತ್ಕರ್ಮಿ, ಹಿಂದೆ ದುಷ್ಕರ್ಮಿಯಾಗಿದ್ದವನೇ. ಆದ್ದರಿಂದಲೇ ಈ ಜನುಮದಲ್ಲಿ ಸತ್ಕರ್ಮಗಳು ಆಚರಿಸುತ್ತಿದ್ದರು, ದುಃಖ ತಪ್ಪಿಲ್ಲ. ಹಾಗೆಯೇ ಇಂದು ನಾವು ಕಾಣುವ ದುಷ್ಕರ್ಮಿಗಳೂ ಸುಖ ಅನುಭವಿಸುತ್ತಿರುವುದು, ಪೂರ್ವ ಜನ್ಮದ ಪುಣ್ಯಫಲ. ಸಾಮಾನ್ಯ ಪುಣ್ಯವೇ ಆಗಲಿ, ಪಾಪವೇ ಆಗಲಿ ತಕ್ಷಣ ಫಲಿತ ತಾರದು. ಆದರೇ ತೀವ್ರ ಪಾಪ ಅಥವ ಪುಣ್ಯ ಶೀಘ್ರವಾಗಿಯೇ ಫಲಿಸುವುದು. ಮಾನವನು ಹೇಗೆ ನಡೆದುಕೊಂಡರೆ ಸುಖಜೀವನ ಲಭಿಸುವುದೋ ಸತ್‌ಗ್ರಂಥಗಳು ತಿಳಿಸುತ್ತಿವೆ.** ಒಳ್ಳೆಯ ಕೆಲಸ ಅಥವಾ ಕೆಟ್ಟ ಕೆಲಸ ಸಹಾ ಮಾಡಲು ಸ್ವೇಚ್ಛೆ ನೀಡಲಾಗಿದೆ. **ಅಧರ್ಮ ಮಿತಿ ಮೀರಿದಾಗ, ಧಾರ್ಮಿಕರು ದಿಕ್ಕು ತೋಚದೇ ಇರುವ ಸ್ಥಿತಿಯಲ್ಲಿ, ಪರಮಾತ್ಮನ ಮಾಯದಿಂದ ಅವತರಿಸುವನು.** ಸಾವು ಹುಟ್ಟುವಿಕೆಗಳಲ್ಲಿ ದೈವ ಅವತಾರ ತಾಳಿ, ಮಾನವನಾಗಿ ನಮ್ಮ ಸಂಗಡ ಇರುವುದು ಒಂದು ಅದ್ಭುತ!'' ಎಂದರು.

## ಮಹಾರಾಜನಿಗೆ ಗರ್ವಭಂಗ

ಪೀಠಿಕಾಪುರ ಸಂಸ್ಥಾನವನ್ನು ಆಳುವ ರಾಜ ಒಮ್ಮೊಮ್ಮೆ ವೇಷ ಬದಲಾಯಿಸಿ ರಾಜ್ಯ ಸುತ್ತಿ, ಪ್ರಜೆಗಳ ಸ್ಥಿತಿ ತಿಳಿದುಕೊಳ್ಳುತ್ತಿದ್ದನು. ಒಂದು ಬಾರಿ ರಾಜನಿಗೆ ಶ್ರೀಪಾದ ವಲ್ಲಭರ ದರ್ಶನ ಮಾಡಿಕೊಳ್ಳಬೇಕೆಂಬುವ ಆಸೆ ಆಯಿತು. ತಕ್ಷಣ ತನ್ನ ಭಟರನ್ನು ಅಪ್ಪಲರಾಜ ಶರ್ಮರ ಮನೆಗೆ ಕಳುಹಿಸಿದನು. ಆ ಸಂದೇಶದ ಸಾರಾಂಶವೇನಂದರೇ ''ಶೀಘ್ರವಾಗಿ ಶ್ರೀಪಾದರನ್ನು ಕರೆದುಕೊಂಡು ಅಪ್ಪಲರಾಜ ಶರ್ಮ ಮತ್ತು ಬಾಪನಾರ್ಯರೂ ಕೋಟೆ ಒಳಗಿನ ಮಹಾರಾಜರ ಸಮ್ಮುಖಕ್ಕೆ ಬರಬೇಕು.'' ಅವಮಾನಕರವಾದ ಆ ಆಹ್ವಾನವನ್ನು ಶ್ರೀಪಾದರು ತಿರಸ್ಕರಿಸಿದರು. ಅಪ್ಪಲರಾಜ ಶರ್ಮರಿಗೆ ಕೋಟೆ ಒಳಗೆ ಹೋಗಲು ಇಷ್ಟವಿಲ್ಲ. ಬಾಪನಾರ್ಯರಂತಹಾ ಮಹಾಪುರುಷರು, ಅಂತರಾತ್ಮಪ್ರೇರಣೆ ಆದರೇ ಹೊರತು ಎಲ್ಲಿಗೂ ಹೋಗುವುದಿಲ್ಲ. ಬಾಪನಾರ್ಯರು ಶ್ರೀಪಾದರೊಂದಿಗೆ ''ಮಗು! ಚಿನ್ನ! ಕೋಟೆ ಒಳಗೆ ಹೋಗಲು ನಿನಗೆ ಅಭ್ಯಂತರವೆ?'' ಎಂದು ಪ್ರಶ್ನಿಸಿದರು. ಶ್ರೀಪಾದರು, ''ತಾತ! ಮಹರಾಜನಿಗೆ ಭಕ್ತಿ ಇಲ್ಲ. ನನ್ನ ದರ್ಶನ ಅಷ್ಟು ಸುಲಭವಾದದ್ದಲ್ಲ'' ಎಂದರು. ಶ್ರೀಪಾದರೇ ಭಟರೊಂದಿಗೆ, ''ನಿಮ್ಮ ಮಹಾರಾಜರಿಗೆ ನನ್ನನ್ನು ಕಾಣಬೇಕಾದರೇ ಖುದ್ದಾಗಿ ಇಲ್ಲಿಗೆ ಬರಬಹುದು. ಆತ ಕೇವಲ ಈ ಸಂಸ್ಥಾನಕ್ಕೆ ಮಾತ್ರ ರಾಜ. ನಾನೀ ಸೃಷ್ಟಿಗೆಲ್ಲಾ ರಾರಾಜನು, ಚಕ್ರವರ್ತಿ. ನಾನು ಸಮಸ್ತ ಭುವನಗಳಿಗೂ ಸಾರ್ವಭೌಮನು. ಆದ್ದರಿಂದ ನನ್ನ ಬಳಿ ಬಂದಾಗ ಬರೀ

ಕೈಯಲ್ಲಿ ಬರಬಾರದು. ಉಡುಗೊರೆ ಸಹಾ ತರಬೇಕು. ರಾಜ ನನ್ನನ್ನು ಗುರುವಾಗಿ ಭಾವಿಸಿದರೇ ಗುರುದಕ್ಷಿಣೆ ಸಹಾ ತೆಗೆದುಕೊಂಡು ಬರಬೇಕು'' ಎಂದು ಖಚಿತವಾಗಿ ಹೇಳಿದರು.

**ಶ್ರೀಪಾದ ಶ್ರೀವಲ್ಲಭರು ಸಮಸ್ಯೆಗಳನ್ನು ಸೃಷ್ಟಿಸುವುದರಲ್ಲಿ ಜಾಣರು. ಹಾಗೆಯೇ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಸಹಾ ಬಹಳ ಚತುರರು.** ಮಹರಾಜರಿಗೆ ಕೋಪ ಬಂದರೇ, ಬರಲಿರುವ ಅನಾಹುತಗಳ ಬಗ್ಗೆ ಬಾಪನಾರ್ಯರು, ಅಪ್ಪಲರಾಜಶರ್ಮ, ವೆಂಕಟಪ್ಪಯ್ಯ ಶ್ರೇಷ್ಠಿ ಮತ್ತು ನರಸಿಂಹ ವರ್ಮ ಯೋಚನೆ ಮಾಡುತ್ತಿದ್ದರು. ಭಟರು ತಂದ ಈ ಸುದ್ದಿಯನ್ನು ಕೇಳಿದ ಮಹರಾಜ ಕೋಪದಿಂದ ಉರಿಯುತ್ತಿದ್ದನು. "ನಾನು ನೆನೆದರೆ ಆ ಬಡಪಾಯಿ ಬಾಪನಯ್ಯರ ಬಾಳೇನಾಗುವುದೋ ತಿಳಿಸುತ್ತೇನೆ. ನನ್ನ ಶಕ್ತಿ ಅವರಿಗೆ ತಿಳಿದಿಲ್ಲ'' ಎಂದು ರಾಜ ಗಟ್ಟಿಯಾಗಿ ಕಿರುಚಿದನು. ಆ ಕೂಗಿನೊಟ್ಟಿಗೇನೇ ರಾಜನೊಳಗಿನ ಎಲ್ಲಾ ಶಕ್ತಿಯು ಹೊರಬಿದ್ದು ಅಶಕ್ತನಾದನು. ಎಚ್ಚರ ತಪ್ಪಿ ಕೆಳಗೆ ಬಿದ್ದನು. ಸೇವಕರೆಲ್ಲಾ ಆರೈಕೆ ಮಾಡಿದರೂ, ರಾಜ ಅಶಕ್ತನಾಗಿದ್ದರು.

ಇಷ್ಟರಲ್ಲಿ ರಾಜನ ಮನಸ್ಸಿನಲ್ಲಿ ಒಂದು ವಿಕಾರವಾದ ಮಹಿಳೆ ಕಂಡುಬಂದಳು. ''ನಾನೇ ಶಕ್ತಿ! ನಿನ್ನೊಳಕ್ಕೆ ಸೇರಿಕೊಳ್ಳುತ್ತಿದ್ದೇನೆ'' ಎಂದು ಕಿರುಚುತ್ತಾ ಆತನೊಳಕ್ಕೆ ಬಲವಂತವಾಗಿ ಪ್ರವೇಶಿಸಿದಳು. ಆ ಶಕ್ತಿಯ ಧಾಳಿಗೆ ತಡೆಯಲಾಗದೇ ರಾಜ ತನ್ನ ಮೂಳೆ ಮುರಿದ ಹಾಗೆ ಭಾವಿಸಿದನು. "ಕೂಡಲೇ ನನ್ನೊಳಗಿಂದ ಹೊರಡು'' ಎಂದಾತ ದೀನ ಸ್ವರದಿಂದ ಕೂಗಿದನು. "ಇದೋ ಹೊರಡುತ್ತಿದ್ದೇನೆ'' ಎಂದು ಕೂಗುತ್ತಾ ಆ ಶಕ್ತಿ ದೊಡ್ಡ ಹೊಡತದಿಂದ ಆಚೆಗೆ ಹೋದಳು. ಆ ಸಮಯ ರಾಜ ನರಕಯಾತನೆ ಪಡುತ್ತಿದ್ದನು. ರಾಜ ಪುರೋಹಿತರಾದ ಶ್ರೀ ಸುಂದರಾಮ ಶರ್ಮರಿಗೆ ಭಟರ ಮೂಲಕ ವಿಷಯ ತಿಳಿಯಲು ಸ್ವಯಂಭೂ ದತ್ತರಿಗೆ ಅರ್ಚನೆ ಮಾಡಿ ತೀರ್ಥ ಕೊಟ್ಟರು. ಶ್ರೀ ದತ್ತರ ವಿಭೂತಿ ಹಣೆಗೆ ಇಡಲಾದ ನಂತರ ಶರೀರ ಒಳಗೆ ಶಕ್ತಿಯ ಪ್ರವೇಶ ಮತ್ತು ನಿರ್ಗಮನ ನಿಲ್ಲಿತು. ಆಗ ಶರ್ಮರು, "ಮಹಾರಾಜ ನೋಡಿದಿರಾ? ನಮ್ಮ ಅರ್ಚನೆಯ ಶೀಘ್ರಫಲ. ತಾವು ಶ್ರೀಪಾದರ ದರ್ಶನ ಬಯಸಿದಿರಿ. ಬರೀ ವ್ಯರ್ಥ. ಅವರ ಮನೆಯಲ್ಲಿ ಕಾಲಾಗ್ನಿಶಮನ ದತ್ತಮೂರ್ತಿ ತಂಗಿರುವೆರು. ಅದರ ಪೂಜಾ ವಿಶೇಷದಿಂದ ಅಪ್ಪಲರಾಜ ಶರ್ಮರಿಗೆ ಚಿಕ್ಕ ಚಿಕ್ಕ ಶಕ್ತಿಗಳು ಸಿದ್ಧಿಸಿವೆ. ಬಾಪನಾರ್ಯರು ಸಹಾ ಮಂತ್ರಾನುಷ್ಠಾನ ಫಲಿತ, ಕೆಲವು ಶಕ್ತಿಗಳನ್ನು ಹೊಂದಿರುವರು. ಇನ್ನು ವೆಂಕಟಪ್ಪಯ್ಯ ಶ್ರೇಷ್ಠಿ ವೈಶ್ಯರು. ಒಳ್ಳೆಯ ವಸ್ತುವನ್ನು ನಕಲೀ ಎಂದು ವಾದಿಸಿ ಕಡಿಮೆ ಬೆಲೆಗೆ ಖರೀದಿಸಬಲ್ಲರು. ನಕಲೀ ವಸ್ತುವನ್ನು ಒಳ್ಳೆಯದೆಂದು ನಂಬಿಸಿ ಮಾರಬಲ್ಲರು. ಇಲ್ಲದ್ದೆಲ್ಲಾ ಸೃಷ್ಟಿಸಿ ಅದ್ಭುತ ಶಕ್ತಿಗಳನ್ನು ಶ್ರೀಪಾದರಿಗೆ ಜೋಡಿಸಿ ಅವರನ್ನು ಹೊಗಳುತ್ತಿದ್ದಾನೆ. ನರಸಿಂಹ ವರ್ಮ ಸುಕ್ಷತ್ರಿಯನಾದರೂ ಮೂರ್ಖನಾಗಿ ಶ್ರೀಪಾದರನ್ನು ಶ್ರೀ ದತ್ತಾವತಾರವೆಂದು ಸ್ತುತಿಸುತ್ತಿದ್ದಾನೆ. ತಾವು ಏನೂ ಯೋಚಿಸಬೇಡಿ. ನಮ್ಮ ಅನುಷ್ಠಾನ ಮಹತ್ತರವಾದದ್ದು. ಮಹಾರಾಜರೇ ಆಜ್ಞಾಪಿಸಿದರೂ ಬರದಿರಲು ಅದೆಷ್ಟು ಧೈರ್ಯ? ಪ್ರಭುಗಳು ಬಲಪ್ರಯೋಗದಿಂದಲೂ ಶ್ರೀಪಾದರನ್ನು ಇಲ್ಲಿಗೆ ತರಬಲ್ಲರು!'' ಈ ಮಾತುಗಳು, ಮುಖ ಸ್ತುತಿಗಳು ಕೇಳಿಸಿಕೊಂಡ ರಾಜನು ನೀರಸವಾಗಿ, "ಬಲವಂತವಾಗಿ ಅವರನ್ನು ಇಲ್ಲಿಗೆ ಬರೆಮಾಡಿಕೊಂಡರೇ ನನಗೇನು ಲಾಭ? ಮೇಲ್ಪಟ್ಟು ನನಗೆ ಅಪಕೀರ್ತಿಯೇ ಉಳಿಯುವುದು. ಶ್ರೀಪಾದರ ಬಳಿ ಕೆಲವು ಕ್ಷುದ್ರವಿದ್ಯೆ ಇದ್ದ ಹಾಗೆ ನನ್ನ ಅನುಮಾನ. ನನ್ನ ಮೇಲೆ ಶ್ರೀಪಾದನು ಆ ಶಕ್ತಿಯನ್ನು ಪ್ರಯೋಗಿಸಿದ್ದಾನೆ. ಇಲ್ಲದಿದ್ದರೇ ಈ ಶಕ್ತಿ ಏಕೆ ನನ್ನೊಳಗೆ ಬಂದು ಹೋಗುತ್ತಿದೆ? ಇದಕ್ಕೆ ತಾವು, ಪಾರಾಗಲು ಉಪಾಯ ತೋರಿಸಿ. ತಾವು ನಮ್ಮ ಕುಲ ಪುರೋಹಿತರು. ನಮ್ಮ ಕ್ಷೇಮವನ್ನು ಬಯಸುವವರು'' ಎಂದು ನುಡಿದರು.

ಆಗ ಶರ್ಮ ಹೀಗೆಂದರು ''ಮಹಾರಾಜ! ಶ್ರೀದತ್ತ ಪುರಾಣ ಬ್ರಾಹ್ಮಣರಿಂದ ಪಾರಾಯಣ ಮಾಡಿಸಬೇಕು. ಸ್ವಯಂಭೂ ದತ್ತರಿಗೆ ಅರ್ಚನೆ ಮಾಡಿಸಬೇಕು. ಬ್ರಾಹ್ಮಣ ಸಮಾರಾಧನೆ ಮಾಡಬೇಕು. ಭೂರಿ ದಕ್ಷಿಣೆ ಅವರಿಗೆ ನೀಡಬೇಕು. 18 ವರ್ಣಗಳಿಗೂ ಅನ್ನದಾನ ಮಾಡಬೇಕು. ಆಗ ಶ್ರೀದತ್ತ ಪ್ರಸನ್ನನಾಗುವನು, ಶ್ರೀಪಾದರ ಆಟ ಆಗ ನಡೆಯದು. ಕ್ಷುದ್ರಶಕ್ತಿಗಳ ಬಾಧೆಯೂ ದೂರವಾಗುವುದು.''

ರಾಜ ಪುರೋಹಿತರ ಕೋರಿಕೆ ಪ್ರಕಾರ ರಾಜ ಬೇಕಾದದ್ದನ್ನೆಲ್ಲಾ ಮಾಡಿಸಿದನು. ಪೀಠಿಕಾಪುರ ಪ್ರದೇಶದಲ್ಲಿ ಬಹಳಷ್ಟು ಕಾಡುಗಳಿವೆ. ಪೀಠಿಕಾಪುರದಲ್ಲಿ ಕಳ್ಳರ ಭಯವೂ ಅಧಿಕ. ಶ್ರೀದತ್ತ ಪುರಾಣ ಪಾರಾಯಣಾ ದಿನದಿಂದ ನಗರದಲ್ಲಿ ಕಳ್ಳತನಗಳು ಸಾಕಷ್ಟು ನಡೆಯುತ್ತಿದ್ದವು. ರಾಜರು ಅವನ್ನು ತಡೆಯಲು ವಿಫಲರಾದರು. ಅವರಿಗೆ ಕೆಟ್ಟ ಕನಸುಗಳು ಸಹಾ ಹೆಚ್ಚಿದವು. ಒಂದನ್ನು ತಡೆಯಲು ಹೋಗಿ ಹತ್ತಾರು ಸಮಸ್ಯೆಗಳನ್ನು ಸ್ವಾಗತಿಸಿದಂತಾಯಿತು. ರಾಜರಿಗೆ ತಮ್ಮ ಪಿತೃದೇವತೆಗಳು ಸ್ವಪ್ನದಲ್ಲಿ ಒಂದಷ್ಟು ತಿಂಡಿಗೆ ಪರದಾಡುವ ಬಡ ಭಿಕ್ಷುಕರಂತೆ ದರ್ಶನವಿತ್ತರು. ''ಏನೋ! ನಮಗೆ ಶ್ರಾದ್ಧ ಭೋಜನ ನೀಡುತ್ತಿಲ್ಲವೇಕೆ? ನಾವೀ ಪ್ರೇತ ದೇಹದಲ್ಲೇ ಇರಬೇಕೆ? ಸದ್ಗತಿಗಳಿಲ್ಲವೆ?'' ಎಂದು ಪ್ರಶ್ನಿಸಿದರು. ''ಶಾಸ್ತ್ರೋಕ್ತವಾಗಿ ಶ್ರಾದ್ಧ ಕರ್ಮಗಳು ಮಾಡುತ್ತಿರುವೆನೇ?'' ಎಂದರು ರಾಜ. ''ನೀನು ಮಾಡುತ್ತಿದ್ದೀಯ ಸರಿ, ಆದರೇ ಅದು ನಮಗೆ ಸೇರುತ್ತಿಲ್ಲ! ಸದ್ಬ್ರಾಹ್ಮಣರು, ಸುಲಕ್ಷಣ ಮಂತ್ರೋಚ್ಚಾರಣೆ ಮಾಡಿ, ಕರ್ತ ಸಹಾ ಶ್ರದ್ಧಾಭಕ್ತಿಯಿಂದ ಕರ್ಮ ಮಾಡಿದ್ದಲ್ಲೇ ನಮಗೆ ಸದ್ಗತಿ ಲಭ್ಯವಾಗುವುದು'' ಎಂದರು ಪಿತೃದೇವತೆಗಳು. ಕಣ್ಣು ಮುಚ್ಚಿದರೂ, ತೆಗೆದರೂ ತನ್ನ ಪಿತೃದೇವತೆಗಳ ಅಳು, ಆರ್ತನಾದಗಳೇ ಕೇಳಿಬರುತ್ತಿರಲೂ, ರಾಜನಿಗೆ ರಾತ್ರಿಹೊತ್ತು ನಿದ್ದೆಯೇ ದೂರವಾಯಿತು. ತಲೆ ನೋವಿನಿಂದ ನರಳುತ್ತಿರುವವನ ತಲೆ ಮೇಲೆ ದೊಡ್ಡಕಲ್ಲು ಬಿದ್ದಹಾಗೆ, ರಾಜನ ಮದುವೆಗಿದ್ದ ಮಗಳು ಭೂತದ ಕಾಟ ಅನುಭವಿಸುತ್ತಾ, ಕೂದಲೆಲ್ಲಾ ಬಿಡಿಸಿಕೊಂಡು, ಕಿರುಚಾಡುತ್ತಾ ಮನೆ ವಸ್ತುಗಳನ್ನು ಬೀದಿಗೆ ಎಸೆಯುತ್ತಿದ್ದಳು. ಉಣ್ಣಲು ಕೂತಾಗ ಅನ್ನದಲ್ಲಿ ಹುಳಗಳು ಕಂಡುಬರುತ್ತಿದ್ದವು. ಇದ್ದಕ್ಕಿದ್ದ ಹಾಗೆಯೇ ಬಟ್ಟೆಗಳಿಗೆ ಬೆಂಕಿ ತಗಲಿ ಉರಿಯುತ್ತಿದ್ದವು. ಅನ್ನದಾನ ಶಿಬಿರಕ್ಕೆ ರಾಜ ಭೇಟಿ ಕೊಟ್ಟಾಗ, ಅಲ್ಲಿ ದೀನದಿಂದ ಹೀನವಾಗಿ ಕೃಶಿಸಿದ ದೇಹ ಮತ್ತು ಪ್ರೇತಕಳೆ ಉಳ್ಳ ತನ್ನ ವಂಶದ ಸ್ತ್ರೀ ಪುರುಷರು ಕಂಡುಬಂದು, ರಾಜನ ಸ್ಥಿತಿ ಕರುಣಾಮಯವಾಗಿತ್ತು.

ಸುಂದರರಾಮ ಶರ್ಮರ ಮನೆಯ ಸ್ಥಿತಿಯೂ ಕೆಟ್ಟಿತ್ತು. ಸೌಮ್ಯಳಾಗಿದ್ದ ಹೆಂಡತಿ ಕಾರಣವಿಲ್ಲದೇ ಪಾತ್ರೆಗಳಿಂದ ಆತನ ತಲೆ ಕುಕ್ಕುತ್ತಿದ್ದಳು. ಪುತ್ರ ಹಗ್ಗದಿಂದ ಶರ್ಮರನ್ನು ಕಂಭಕ್ಕೆ ಕಟ್ಟಿಹಾಕುತ್ತಿದ್ದನು. ಪುತ್ರಿ, ತಂದೆಯನ್ನು ಚಪ್ಪಲಿಗಳಿಂದ ಹೊಡೆದು, ಮುಖದ ಮೇಲೆ ಉಗುಳುತ್ತಿದ್ದಳು. ಶರ್ಮರಿಗೆ ಊಟಕ್ಕೆ ತಿನ್ನಲು ಒಣಹುಲ್ಲು ನೀಡುತ್ತಿದ್ದರು. ತಿನ್ನದಿದ್ದರೇ ಬರೆ ಇಡುವಂತೆ ಬೆದರಿಸುತ್ತಲೂ ಇದ್ದರು. ಶರ್ಮರು ನಿಯಮಿಸಿದ್ದ ಬ್ರಾಹ್ಮಣರು ಮಾತ್ರ ದತ್ತ ಪುರಾಣ ಪಾರಾಯಣ ಮುಂದುವರೆಸುತ್ತಿದ್ದರು. ಪಾರಾಯಣೆ ಮತ್ತು ಬ್ರಾಹ್ಮಣರ ಭೋಜನಾನಂತರ ಭೂತ ಪ್ರೇತ ಪಿಶಾಚಿಗಳು ಯಥೇಚ್ಛದಿಂದ ಮನೆಯಲ್ಲಿ ತಿರುಗಾಡುತ್ತಾ ಭಯಭ್ರಾಂತಿ ಗೊಳಿಸುತ್ತಿದ್ದವು. ಕೆಲ ಮಹಿಳೆಯರು ವಿಕೃತವಾಗಿ ನಗುತ್ತಾ, ''ನೀನು ಯಾವ ರಾಜನಿಗೆ ಪೌರೋಹಿತ ಮಾಡುತ್ತಿದ್ದೀಯೊ ಆ ವಂಶದ ಪೂರ್ವಿಕರು ಪರಸ್ತ್ರೀಯನ್ನು ಮಾತೃಸಮಾನವಾಗಿ ನೋಡದೇ ಬಲವಂತವಾಗಿ ಅನುಭವಿಸಿದ್ದಾರೆ. ಆ ಮಹಿಳೆಯರು ಇನ್ನು ಯಾರೋ ಅಲ್ಲ, ನಾವೇ! ನಮ್ಮನ್ನು ನಮ್ಮ ಸಂಸಾರ, ನಮ್ಮ ಗಂಡಂದಿರ ಜೊತೆ ಸುಖವಾಗಿ ಬಾಳಲು ಬಿಡದೇ ದೊಡ್ಡ ತಪ್ಪು ಮಾಡಿದ್ದಾರೆ. ನಾವೀ ರಾಜ ವಂಶದ ಮೇಲೆ ಸೇಡು ತೀರಿಸುಕೊಳ್ಳಲಿದ್ದೇವೆ. ನೀವು ನಮಗೆ ಪಿಂಡ ಪ್ರದಾನ ಮಾಡಿದಷ್ಟು ಮಾತ್ರಕ್ಕೇ

ನಮಗೆ ಸದ್ಗತಿ ಸಿಗದು. ಆ ಶುದ್ಧವಾದ ರಾಜ ದ್ರವ್ಯವನ್ನು ಭೂರಿ ದಕ್ಷಿಣೆಯಾಗಿ ಪಡೆದು, ನಾವು ನಿಮ್ಮ ಕುಟುಂಬಕ್ಕೆ ನೋವು ತರುತ್ತೇವೆ'' ಎಂದರು.

ಅತ್ತ ಪಾರಾಯಣ ಮಾಡುವ ಬ್ರಾಹ್ಮಣರು, ಸುಂದರರಾಮ ಶರ್ಮ ಮತ್ತು ಮಹಾರಾಜ ಸಹಾ ಭಯಗ್ರಸ್ತರಾಗಿ ''ದತ್ತ ಪುರಾಣ ಪಾರಾಯಣ ಶುಭಪ್ರದವೆಂದು ಕೇಳಿದ್ದೇವೆ, ಆದರೇ ಇದೇನು ವಿಪರೀತ? ಈ ಪುರಾಣ ಪಠನೆಯಿಂದ, ಶ್ರೀ ಶಂಕರನು ಪ್ರಸನ್ನನಾಗಿ ತನ್ನ ಭೂತ ಪ್ರೇತ ಪಿಶಾಚ ಗಣಗಳೊಡನೇ ಕರಾಳನಾಟ್ಯ ಮಾಡುತ್ತಿರುವನು. ದತ್ತ ಪುರಾಣ ಪಠನೆಯಿಂದ ಶ್ರೀ ಮಹಾವಿಷ್ಣು ತೃಪ್ತನಾಗಿ ನಮಗೆ ಮಾತ್ರ ಭೋಜನ ಪ್ರಾಪ್ತವಿಲ್ಲದೇ, ದೇಹಿ ಎಂದು ಬಂದ ಭಿಕ್ಷುಕರಿಗೆ ತೃಪ್ತಿ ಕೊಟ್ಟಿರುತ್ತಾನೆ. ಹಾಗೇ, ಶ್ರೀ ಬ್ರಹ್ಮದೇವನು ಪ್ರಸನ್ನನಾಗಿ, ಅಶ್ಲೀಲವಾದ ಮತ್ತು ನಿಂದಾಪೂರ್ವಕ ಕಠಿಣ ಮಾತುಗಳಿಂದ, ನಮ್ಮನ್ನು ದೂಷಿಸುವವರನ್ನು ಸೃಷ್ಟಿಸಿರುವನು! ಆಹಾ ದತ್ತ ಪುರಾಣ ಪಠನ ಕಾರಣ, ಈ ಪ್ರಕಾರವಾಗಿ ಬ್ರಹ್ಮ ವಿಷ್ಣು, ಮಹೇಶ್ವರರು ಪ್ರಸನ್ನರಾಗಿ ಕಠಿಣ ಮಾತುಗಳಿಂದ ಹಿಂಸಿಸಿ, ಸಾಯುವುದಕ್ಕೆ ಬಿಡದೆ ವಿಷ್ಣು ತತ್ತ್ವದಿಂದ ರಕ್ಷಿಸಿ, ಭೂತ ಪ್ರೇತ ಪಿಶಾಚಿಗಳಿಗೆ ಆನಂದವನ್ನು ತರುವ ನಾಟ್ಯಕಲೆಯಿಂದ,ಜೀವಚ್ಛವರನ್ನಾಗಿ ನಮ್ಮನ್ನು ಮಾಡಿದರೇ ಅಂತಹ ದತ್ತ ಭಕ್ತಿ ನಮಗೆ ಜನುಮ ಜನುಮಗಳಿಗೂ ಬೇಡವೇ ಬೇಡ ಮಹಾಪ್ರಭೋ'' ಎಂದು ಪರಿತಪಿಸುತ್ತಿದ್ದರು.

## ಸೃಷ್ಟಿಯಲ್ಲಿ ಮಾನವನು ಕೂಲಿಯೇ, ಕೂಲಿ ಕೊಡುವವನು ಶ್ರೀಪಾದನು

ತಕ್ಷಣವೇ ಬ್ರಾಹ್ಮಣರು, ಸುಂದರರಾಮ ಶರ್ಮರು ಮತ್ತು ಮಹರಾಜನು ಶ್ರೀಪಾದರ ಶರಣು ಕೋರಿದರು. ಆಗ ಶ್ರೀಪಾದರು, **"ಈ ಸೃಷ್ಟಿಯಲ್ಲಿ ಪ್ರತಿ ಮಾನವನೂ ಕೂಲಿಯೇ, ನಾನೇ ಯಜಮಾನ, ನಾನು ಪ್ರಸನ್ನನಾದರೇ ನಿಮಗೆ ಬರಬೇಕಾದಕ್ಕಿಂತಾ ಜಾಸ್ತಿಯೇ ಕೂಲಿ ಕೊಡುವೆನು, ಅಪ್ರಸನ್ನನಾದೆನೋ, ನಿನ್ನ ದುಷ್ಕೃತ್ಯಕ್ಕೆ ಎಷ್ಟು ಕೂಲಿ ಕಡಿಮೆ ಮಾಡಬೇಕೋ ಅಷ್ಟು ಮಾಡೇತೀರುವೆನು. ಆಲಯದಲ್ಲಿನ ಸ್ವಯಂಭೂ ದತ್ತನು ನಾನೇ! ಕಾಲಾಗ್ನಿಶಮನದತ್ತ ರೂಪವೂ ನಾನೇ! ಜೀವಿಗಳಲ್ಲಿ ಕರುಣೆಯಿಟ್ಟು ಶ್ರೀಪಾದ ಶ್ರೀವಲ್ಲಭ ರೂಪದಲ್ಲಿ ಬಂದಿರುವೆನು.** ನನ್ನ ಮುಖಕ್ಕೆ ಮಂಗಳಹಾರತಿ ಇತ್ತು, ಪಾದಗಳಿಗೆ ಆಣಿಗಳು ಹೊಡೆದರೇ ನಿಮಗೇನು ಫಲ? ನನ್ನ ತಂದೆ ತಾಯಿ ಯಾರನುಕೊಂಡಿದ್ದೀರ? **ಈ ದತ್ತ ಪುರಾಣದಲ್ಲಿನ ವಿಷ್ಣುದತ್ತನು, ಆತನ ಪತ್ನಿ ಈ ಕಲಿಯುಗದಲ್ಲಿ ಅಪ್ಪಲರಾಜ ಶರ್ಮ ಆಗಿಯು, ಸುಮತಿ ಮಹಾರಾಣಿ ಆಗಿಯೂ ಜನುಮಿಸಿರುವರು.** ಒಂದಾನೊಂದು ಕಾಲದಲ್ಲಿ ಶ್ರೀ ವಿಘ್ನೇಶ್ವರನ ಪುತ್ರರಾದ 'ಲಾಭ'ನು ಮತ್ತು ಇನ್ನೊಂದು ಕಲ್ಪದೊಳು ಹುಟ್ಟಿದ 'ಲಾಭಾದ ಮಹರ್ಷಿ'ಯು ಮತ್ತು ಬೃಹತ್‌ಶಿಲಾನಗರದಲ್ಲಿ 'ಭಾಸ್ಕರಾಚಾರ್ಯ'ರಾಗಿ ಬಂದದ್ದು ಸಹಾ ಶ್ರೀ ಬಾಪನಾರ್ಯರೇ! ಅವರ ಗೋತ್ರ ವೈಶ್ಯ ಕುಲದಲ್ಲಿ ಹುಟ್ಟಿದವರಿಗೆ ಗೌರವಯುತವಾಗಿದೆ. ನಾನು ಶ್ರೀ ಗಣೇಶ ಚುತುರ್ಥಿಯಂದು ಜನ್ಮಿಸುವುದು ಸಹಾ ದಿವ್ಯ ಸಂಕಲ್ಪದ ಒಂದು ಭಾಗವೇ! ವಾಸವೀ ಕನ್ಯಕಾಪರಮೇಶ್ವರಿ ಅವತಾರದಿಂದ ವೆಂಕಟಪ್ಪಯ್ಯ ಶ್ರೇಷ್ಠಿಗಳೊಡನೆ ಋಣಾನುಬಂಧ, ಸಿಂಹಾಚಲ ಕ್ಷೇತ್ರದ ನೃಸಿಂಹ ರೂಪದಲ್ಲಿ ಋಣಾನುಬಂಧ ಹೊಂದಿರುವ ನೃಸಿಂಹ ವರ್ಮ, ನಿಜಕ್ಕೂ ಪುಣ್ಯಾತ್ಮರು ಆಗಿರುವುದರಿಂದಲೇ, ಅವರೊಡನೆ ನನಗೆ ಈ ಅವತಾರದಲ್ಲಿ ಸಂಬಂಧ ಒದಗಿದೆ. ಅವರ ಆದರಾಭಿಮಾನಗಳು ನನ್ನನ್ನು ಜನ್ಮಜನ್ಮಗಳಿಗೂ ಹಿಡಿದಿಟ್ಟಿತ್ತಿರುವುದು. **ನಾನು ನೃಸಿಂಹ ಸರಸ್ವತಿಯಾಗಿ ಅವತರಿಸಿದಾಗ, ಪರಿಪೂರ್ಣವಾಗಿ ಶ್ರೀ ಬಾಪನಾರ್ಯರ ಹುಟ್ಟನ್ನೇ ಹೊಂದಿರುವೆನು.** ಅವರ ತಾಮ್ರದ

ಪಾತ್ರೆಯಿಂದ ಜಲವನ್ನು ತೆಗೆದು, ಪ್ರೋಕ್ಷಿಸಿ, ಇಲ್ಲಿರುವ ಭೂತ ಪ್ರೇತಗಳನ್ನು ವಿಮುಕ್ತ ಮಾಡಿದ ಹಾಗೆ, ನರಸಿಂಹ ಸರಸ್ವತಿಯಾಗಿ ಬಂದಾಗ ನನ್ನ ಗಂಧರ್ವ ನಗರಕ್ಕೆ ಬಂದ ಭಕ್ತರನ್ನು ಹೊಕ್ಕಿರುವ ಭೂತ ಪ್ರೇತಗಳನ್ನು ಓಡಿಸಿ ಅವಕ್ಕೆ ಸದ್ಗತಿ ಕಲ್ಪಿಸುವೆನು. **ಸಿರಿಸಂಪತ್ತು ಇದ್ದಷ್ಟು ಮಾತ್ರಕ್ಕೇ ಗರ್ವಪಡಬಾರದು. ನಿನ್ನ ಬಳಿಯಿರುವ ಆ ಸೊತ್ತಿಗೆ ಶುದ್ಧತೆ ಇರಬೇಕು. ಅದಿಲ್ಲದ್ದಲ್ಲಿ ದುಃಖ ಆಗುವುದು. ನೀನು ಪುಣ್ಯವಂತನೆಂದು ಕೊಚ್ಚಿಕೊಂಡರೇ, ನೀನೆಷ್ಟು ಮಾತ್ರಕ್ಕೂ ಪುಣ್ಯವಂತನಲ್ಲ.** ನಿನ್ನ ಎಲ್ಲಾ ಲೆಕ್ಕಗಳೂ ನನ್ನ ಬಳಿ ಇವೆ. ದಯೆ ತೋರಿಸಿ, ಆ ಲೆಕ್ಕದ ನಿನ್ನ ಪಾಪ ಕರ್ಮಗಳನ್ನೆಲ್ಲಾ ಚುಕ್ತಾ ಮಾಡಿದ್ದೇನೆ. **ನಾನು ಪಾಪಿ ಎಂದು ನಿರುತ್ಸಾಹದಿಂದ ನನ್ನನ್ನು ಶರಣು ಕೋರಿದರೇ, "ಶ್ರೀಪಾದ ದತ್ತಾ! ಶ್ರೀ ವಲ್ಲಭಾ ದಿಗಂಬರಾ!" ಎಂದು ಕೂಗಿದರೇ, ನಿನ್ನ ಪಾಪಗಳನ್ನೆಲ್ಲಾ ಭಸ್ಮಮಾಡಿ, ಪುಣ್ಯವಂತನಾಗಿ ಮಾಡಿಬಿಡುವೆನು.** ಸತ್ಯವನ್ನು ಅಸತ್ಯವಾಗಿಯು, ಅಸತ್ಯವನ್ನು ಸತ್ಯವಾಗಿಯು ಭಾವಿಸಿದ ಕಾರಣ ನಿಮಗೀ ಕಷ್ಟನಷ್ಟಗಳಾಗಿವೆ. ಶ್ರೀಪಾದ ಶ್ರೀವಲ್ಲಭರ ನಿಂದಾಕಾರಣ, ನೀವು ದತ್ತ ಪಾರಾಯಣ ಮಾಡಿದರೂ ಅದರ ಫಲ ಸಿಗದೇ ಮೇಲ್ಕಂಡ ವಿಚಿತ್ರ ಬಾಧೆಗಳಿಗೆ ಗುರಿಯಾದಿರಿ. ದತ್ತನೇ ಖುದ್ದಾಗಿ ಶ್ರೀಪಾದ ಶ್ರೀವಲ್ಲಭನಾಗಿ ಬಂದಿರುವುದು, ಸತ್ಯ'' ಎಂದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 16

# ಶ್ರೀಮನ್ನಾರಾಯಣ ವೃತ್ತಾಂತ

ನಾನು ಶ್ರೀಪಾದರ ದಿವ್ಯ ಚರಿತ್ರೆಯನ್ನು ನೆನೆಯುತ್ತಾ, ಮನಸ್ಸಿನಲ್ಲೇ ಶ್ರೀಪಾದರ ನಾಮಸ್ಮರಣೆ ಮಾಡುತ್ತಾ ನಡೆಯುತ್ತಿದ್ದೆನು. ಶ್ರೀಪಾದರು ಆಗ ವಾಸವಾಗಿರುವ ಕುರುಂಗಡ್ಡೆಗೆ ಹತ್ತಿರದಲ್ಲೇ ಇರುವ ಆನಂದ, ನನಗೆ ಅತ್ಯಂತವಾಗಿತ್ತು. ನಾನು ನಡೆಯುತ್ತಿದ್ದ ದಾರಿಯಲ್ಲಿ ಒಂದು ಕಬ್ಬಿನ ತೋಟ ಕಂಡುಬಂದಿತು. ಆ ತೋಟದ ರೈತ ಎತ್ತರವಾದ ಮಂಚದ ಮೇಲೆ ಹಾಯಾಗಿ ಕುಳಿತು ಕಾವಲು ಕಾಯುತ್ತಿದ್ದ. ಆತ ''ಸ್ವಾಮಿ! ಸ್ವಲ್ಪ ಕಾಲ ಇಲ್ಲಿ ವಿಶ್ರಮಿಸಿ, ಕಬ್ಬಿನ ರಸ ಸ್ವೀಕರಿಸಿ ಹೋಗಬಹುದು, ಬನ್ನಿ'' ಎಂದು ಸವಿನಯದಿಂದ ಆಹ್ವಾನಿಸಿದನು. ನಾನು ಆ ರೈತ ಇತ್ತ 'ಮಧು'ರವಾದ ಕಬ್ಬಿನ ರಸವನ್ನು ಕುಡಿದೆನು. ನಾನು ಶ್ರೀಪಾದರ ದರ್ಶನಾರ್ಥಿ ಎಂದು ತಿಳಿದು, ಆತ ಆನಂದಿಸಿ, ''ಸ್ವಾಮಿ! ನನ್ನ ಹೆಸರು ಶ್ರೀಮನ್ನಾರಾಯಣ. ನನ್ನ ಗೃಹನಾಮಧೇಯ ಮಲ್ಲಾದಿನವರು ಎಂದು, ಸ್ವಗ್ರಾಮ ಮಲ್ಯಾದ್ರಿಪುರ. ಕಾಲಕ್ರಮೇಣ ಅದು ಮಲ್ಲಾದಿಪುರವಾಗಿದೆ. ಬಾಪನಾರ್ಯರ ಸ್ವಗ್ರಾಮ ಸಹಾ ಮಲ್ಯಾದ್ರಿಪುರವೇ. ಅವರ ಮನತನವೂ ಮಲ್ಲಾದಿಯೇ! ಆದರೇ ಅವರು ಬ್ರಾಹ್ಮಣರು, ನಾವು ಕಮ್ಮ ಜಾತಿಗಳು. ಬಾಪನಾರ್ಯರ ಕುಟುಂಬಕ್ಕೂ, ನಮ್ಮ ಕುಟುಂಬಕ್ಕೂ ಅದೆಷ್ಟೋ ಹತ್ತಿರವಾದ ಸಂಬಂಧಗಳಿರುವವು. ಶ್ರೀಪಾದರು 8 ವರುಷ ವಯಸ್ಸು, ನಾವು ಮಲ್ಯಾದ್ರಿಪುರ ಬಿಟ್ಟು ಪೀಠಾಪುರಕ್ಕೆ ಬಂದೆವು. ನಮ್ಮ ಸ್ವಗ್ರಾಮದಲ್ಲಿ ಪರಿಸ್ಥಿತಿಗಳು ಕೈ ಬಿಟ್ಟು ಹೋಗುತ್ತಿರಲು, ನಮ್ಮ ಆರ್ಥಿಕ ಪರಿಸ್ಥಿತಿಯ ಕಾರಣ, ಸಾಲಗಾರರ ಕಾಟ ತಡೆಯಲಾರದೇ, ಚರ, ಸ್ಥಿರಾಸ್ಥಿಗಳನ್ನು ಮಾರಿ ಸಾಲ ತೀರಿಸಿ ಪೀಠಾಪುರಕ್ಕೆ ಬಂದು ಸೇರಿದೆವು. ಆಗ ನಮ್ಮನ್ನು ಶ್ರೀ ಬಾಪನಾರ್ಯರು ಎಷ್ಟೋ ಪ್ರೀತಿಯಿಂದ ಆದರಿಸಿ ತಿಂಡಿತೀರ್ಥ ಒದಗಿಸಿದರು. ಆ ರಾಯರ ಜಮೀನು ಗುತ್ತಿಗೆ ತೆಗೆದುಕೊಂಡು ವ್ಯವಸಾಯ ಮಾಡಿಕೊಳ್ಳಬೇಕೆಂದು, ''ಸ್ವಾಮಿ! ಬಿಟ್ಟಿ ಊಟ ತಿನ್ನುವುದು ಉಚಿತವಲ್ಲ. ತಾವು ನಮಗೆ ಆಹಾರವಿತ್ತು ಪ್ರಾಣ ಉಳಿಸಿದ್ದೀರಿ. ಹೂವು ಮಾರಿದ ಕಡೆ ಸೌದೆ ಮಾರುವುದು ನೋವಿನ ವಿಚಾರವೇ. ಆದ್ದರಿಂದಲೇ ನಮ್ಮ ಸ್ವಗ್ರಾಮ ಬಿಟ್ಟು ಪೀಠಿಕಾಪುರಕ್ಕೆ ಬಂದಿದ್ದೇವೆ. ತಾವು ನಮ್ಮ ಮೇಲೆ ದಯೆ ಇಟ್ಟು ತಮ್ಮ ಜಮೀನು ಗುತ್ತಿಗೆ ಕೊಟ್ಟರೇ ನಾವು ತಮಗೆ ಕೃತಜ್ಞರಾಗುತ್ತೇವೆ, ಅನುಗ್ರಹಿಸಬೇಕು'' ಎಂದು ಬಾಪನಾರ್ಯರನ್ನು ಬೇಡಿದೆವು. ಆಗ ಶ್ರೀಪಾದರೂ ಅಲ್ಲಿಯೇ ಇದ್ದರು. ಶ್ರೀಪಾದರು, ''ಬಾಪನಾರ್ಯರ ಮನೆ ಊಟ ಪ್ರಸಾದಕ್ಕೆ ಸಮಾನ, ದೈವಾನುಗ್ರಹವಿದ್ದರೇನೇ ಅದು ಲಭ್ಯ. ಮಹಾತಪಸ್ವಿ ಆದ ಬಾಪನಾರ್ಯರ ದರ್ಶನವೇ ಸಾಮಾನ್ಯರಿಗೆ ಸಿಗದು. ಹಿಂದಿನ ಪುಣ್ಯಫಲ, ನಿಮಗೆ ಅದು ಪ್ರಾಪ್ತಿಯಾಗಿದೆ'' ಎಂದು ನುಡಿದರು. ಶ್ರೀ ಬಾಪನಾರ್ಯರು, ''ನಮ್ಮ ಹೊಲ, ಗದ್ದೆಗಳನ್ನು ಈಗಾಗಲೇ ಕೆಲ ರೈತರಿಗೆ ಫಸಲು ಬೆಳೆಸಿಕೊಳ್ಳಲು ಕೊಟ್ಟಿದ್ದೇವೆ. ಕಾರಣವಿಲ್ಲದೇ ಅವರನ್ನು ಹೊರ ಹಾಕುವುದು ಧರ್ಮವಲ್ಲ. ಕೆಲವು ದಿನ ಕಾಯೋಣ, ಯಾವುದೋ ಒಂದು ಮಾರ್ಗ ಸಿಗದೇ ಹೋಗದು'' ಎಂದರು. ಆಗ ಶ್ರೀಪಾದರು, ''ತೆಗೆದುಕೊಳ್ಳಿ ಒಂದು ಹಿಡಿ ಉದ್ದಿನಕಾಳು. ಇವನ್ನು ಒಂದು ಬಟ್ಟೆಯಲ್ಲಿ ಚೆನ್ನಾಗಿ ಸುತ್ತಿ ಹಿಡಿದುಕೊಂಡು ಪಶ್ಚಿಮದ ಕಡೆ ಹೋಗಬೇಕು. ತಮ್ಮ ಆಸೆಗಳು ತೀರಿದ ನಂತರ ಈ ಕಾಳನ್ನು ಬಿಸಾಡಬೇಕು. ಬಂಡೆಯ ಕೆಳಗೆ ಕೂತ ಕಪ್ಪೆಗೆ ಸಹಾ ಆಹಾರ ಕೊಡುವ ಜಗತ್ಪ್ರಭುವಿಗೆ, ನಿಮಗೆ ಆಹಾರ ಒದಿಗಿಸುವುದೇನು ದೊಡ್ಡ ಕೆಲಸವಲ್ಲ. ಧೈರ್ಯದಿಂದ ಹೊರಡಿ ವಿಜಯ ಪ್ರಾಪ್ತಿಯಾಗುವುದು'' ಎಂದರು.

ನಾವು ಬಾಪನಾರ್ಯರ ಮನೆಯ ಕೊನೆಯ ಊಟ ಮುಗಿಸಿ, ಸೆರಗಿನಲ್ಲಿ ಉದ್ದಿನ ಕಾಳಿನ ಬುತ್ತಿ ಕಟ್ಟಿ, ಪಶ್ಚಿಮದ ಕಡೆ ಪ್ರಯಾಣ ಪ್ರಾರಂಭಿಸಿದೆವು. ಶ್ರೀಪಾದರ ಅನುಗ್ರಹದಿಂದ ನಮಗೆ ಪ್ರಯಾಣದಲ್ಲಿ ಊಟೋಪಚಾರಗಳಿಗೆ ಕೊರತೆ ಆಗಲಿಲ್ಲ. ಕೇಳುವ ಮುನ್ನವೇ ಊಟ ಲಭಿಸುತ್ತಿತ್ತು. ಇದು ದೊಡ್ಡ ವಿಚಿತ್ರವೇ ಆಗಿತ್ತು. ಆಂಧ್ರ ದಾಟಿ ಕರ್ನಾಟಕ ಪ್ರಾಂತವನ್ನು ಸೇರಿಕೊಂಡೆವು. ಮಾರ್ಗದಲ್ಲಿ ಒಂದಾನೊಂದು ಕೊಠಡಿಯನ್ನು ಕಂಡೆವು. ಅಲ್ಲಿ ಕೇವಲ ಮುದಿ ದಂಪತಿಗಳಿದ್ದರು. ಅವರೂ ಕಮ್ಮ ಜಾತಿಯವರೇ, ಅವರಿಗಿದ್ದ ಒಬ್ಬ ಮಗ, ಹಾವು ಕಚ್ಚಿ ಮೃತ ಪಟ್ಟಿದ್ದನು. ಕೆಲವೇ ದಿನಗಳಿಗೆ ಆತನ ಪತ್ನಿಯೂ ಕೃಷ್ಣಾನದಿಯಲ್ಲಿ ಸ್ನಾನಮಾಡುತ್ತಾ ನೀರಿನಲ್ಲಿ ಮುಳಗಿ ಮರಣಿಸಿದಳು. ಆ ವಿಧವಾಗಿ ಆ ವೃದ್ಧ ದಂಪತಿಯರು ಅನಾಥರಾಗಿದ್ದರು. ದಾಯಾದಿಗಳು ಆ ವೃದ್ಧರ ಆಸ್ತಿ ಕಬಳಿಸಲೂ ಹೊಂಚುಹಾಕಿ ಕುಳಿತಿದ್ದರು. ವೃದ್ಧರನ್ನು ಕಪಟ ವಚನಗಳಿಂದ ಸಂತೋಷಪಡಿಸುತ್ತಿದ್ದರು. ದಾಯಾದಿಗಳಲ್ಲಿ ಯಾರಿಗೆ ತಮ್ಮ ಆಸ್ತಿ ಕೊಡಬೇಕೆಂಬುವ ಸಂದಿಗ್ದದಲ್ಲಿ ವೃದ್ಧರಿದ್ದರು. ಆ ವೃದ್ಧರ ಮನೆಯಲ್ಲೇ ನಮಗೆ ಆತಿಥ್ಯ ಲಭಿಸಿತು. ಅಲ್ಲಿಂದ ನಾವು ಯಾವಾಗ ಹೊರಟರೂ ಯಾವುದೋ ಕಂಟಕ ಎದುರಾಗುತ್ತಿತ್ತು. ಒಮ್ಮೆ ದೃಢ ನಿಶ್ಚಯದಿಂದ ಒಂದು ಮುಹೂರ್ತದಲ್ಲಿ ಹೊರಡಲು ನಿಂತೆವು. ಆ ದಿನವೇ ಮನೆಯವರಿಗೆಲ್ಲಾ ವಾಂತಿಬೇದಿ ಆಯಿತು. ಅವರಿಗೆ ವಾಸಿ ಆದನಂತರ ಹೊರಡಲು, ವೃದ್ಧರು ತಡೆದರು. ನಮ್ಮ ಮೇಲೆ ಅವರಿಗೆ ವಾತ್ಸಲ್ಯ ಹೆಚ್ಚಿತು. ಅದು ದಾಯಾದಿಗಳಿಗೆ ಸಂಕಟ ಉಂಟು ಮಾಡಿತು. ಆಸ್ತಿ ಕಬಳಿಸಲು ನಾವಲ್ಲಿಯೇ ಇದ್ದೇವೆಂದು ಅವರು ಎಣಿಸಿದರು. ಸೆರಗಿಗೆ ಕಟ್ಟಿದ ಉದ್ದಿನ ಕಾಳುಗಳಿಂದ ದುರ್ವಾಸನೆ ಬರಲಾರಂಭಿಸಿತು. ಶ್ರೀಪಾದರಿತ್ತ ಆ ಕಾಳಿನ ಅವಶ್ಯಕತೆ ತೀರಿದೆ ಎಂದೆಣಿಸಿ ಅವನ್ನು ಎಸೆದೆವು. ಕಷ್ಟವೋ, ಸುಖವೋ, ಅಲ್ಲೇ ಇದ್ದುಬಿಡಬೇಕೆಂದು ಎಣಿಸಿದೆವು.

ಆ ದಾಯಾದಿಗಳಿಗೆ ವೃದ್ಧರ ಆಸ್ತಿ ಬೇಕೇ ಹೊರತು ಅವರು ಬೇಕಿರಲಿಲ್ಲ. ನಾವೂ ಅವರ ಕುಲಸ್ಥರಾದ ಕಾರಣ ಆಸ್ತಿಯನ್ನು ನಮಗೆ ಕೊಟ್ಟು ದತ್ತು ಪಡೆಯಬೇಕೆಂದು ವೃದ್ಧರು ನಿಶ್ಚಯಿಸಿದರು. ಇದನ್ನು ದಾಯಾದಿಗಳು ಗಮನಿಸುತ್ತಿದ್ದರು, ಚಿಂತಿಸುತ್ತಲೂ ಇದ್ದರು. ಆಗ ಅವರವರಲ್ಲೇ ಒಂದು ನಿರ್ಧಾರಕ್ಕೆ ಬಂದರು. ಪರಸ್ಪರ ಹೊಡದಾಡದೇ ಆಸ್ತಿಯನ್ನು ಸಮವಾಗಿ ಹಂಚಿಕೊಂಡು ನಮ್ಮನ್ನು ಆ ಮನೆಯಿಂದ ಓಡಿಸಲೆಂದು ಯೋಚಿಸಿದರು.

ಆ ದಾಯಾದಿಗಳಿಗೆ ಒಬ್ಬ ಜ್ಯೋತಿಷಿಯ ಪರಿಚಯ ಚೆನ್ನಾಗಿತ್ತು. ಅವನ ಜೊತೆ ಸೇರಿ ಆ ವೃದ್ಧ ದಂಪತಿಗಳ ಬಳಿ ಕರೆತಂದರು. ಆ ಜ್ಯೋತಿಷಿಯು ಹೀಗೆಂದನು, ''ನಿಮ್ಮ ಮನೆಯಲ್ಲಿರುವ ಈ ಅತಿಥಿಗಳು ಅತ್ಯಂತ ಅಮಂಗಳ ಜಾತಕರು. ಅವರುಗಳು ಇರುವ ಮನೆಯಲ್ಲಿ ಸಿರಿ ಇರಲಾರಳು, ಅಷ್ಟೇ ದರಿದ್ರ ಪ್ರಾಪ್ತಿಸುವುದು, ಅವರನ್ನು ಬೇಗ ಹೊರಡಿಸಿ.''

ಅದಕ್ಕೆ ಆ ವೃದ್ಧ ದಂಪತಿಗಳು, ''ತಾವು ಸೂಚಿಸಿದ ಹಾಗೆ ಅವರಿಗೆ ದರಿದ್ರತೆಯೇ ಇದ್ದಲ್ಲಿ, ಅದಕ್ಕೆ ಪರಿಹಾರ ಸಹಾ ಶಾಸ್ತ್ರದಲ್ಲಿರಲಾರದೆ? ಅದೆಷ್ಟು ಧನವೆಚ್ಚವಾದರೂ, ಅವರಿಗಿರುವ ಅಮಂಗಳ ಪರಿಹಾರಕ್ಕೂ, ಸಮಸ್ತ ಸನ್ಮಂಗಳ ಪ್ರಾಪ್ತಿಗೂ ಪೂಜೆ ಪುನಸ್ಕಾರ ಮಾಡಿಸಬೇಕೆಂದು ನಮ್ಮ ಬೇಡಿಕೆ. ದೇವತೆಗಳ ಆಧೀನದಲ್ಲೇ ಈ ಜಗತ್ತೆಲ್ಲಾ ನಡೆಯುತ್ತಿರುವುದು. ಆ ದೇವತೆಯರು ಮಂತ್ರಾಧೀನರು. ಅಂತಹಾ ಮಂತ್ರಗಳು ಬ್ರಾಹ್ಮಣಾಧೀನವಲ್ಲವೇ? ಆದ್ದರಿಂದ, ಸದ್ಬ್ರಾಹ್ಮಣರಾದ ನೀವೇ ನಮಗೆ ಈ ಭುವಿಯ ದೇವತೆಯರು. ನಮ್ಮ ಆಸೆ ಈಡೇರಿಸಬೇಕೆಂದು ಮನವಿ'' ಎಂದು ಪ್ರಾರ್ಥಿಸಿದರು.

ಆಗ ಆ ಜ್ಯೋತಿಷ್ಯನಿಗೆ ಪೂಜೆ ಮಾಡಿಸುವುದು ಬಿಟ್ಟರೇ, ಬೇರೇ ದಾರಿ ಇರಲಿಲ್ಲ! ಮಗೂ, ಶಂಕರ ಭಟ್ಟು **ಆಹಾರ ಬೆಳೆಯಲೂ ಮಳೆ ಬೇಕು. ಮಳೆ ಬರಿಸುವುದು ಯಜ್ಞ, ಆ ಯಜ್ಞ ಕರ್ಮದಿಂದ ಬರುವುದು. ಸಮಸ್ತ ಕರ್ಮಗಳಿಗೂ ಮೂಲ ವೇದ. ಯಾಗದಿಂದ**

**ಮನುಷ್ಯರು ದೇವತೆಗಳನ್ನಾರಾಧಿಸಬೇಕು. ದೇವತೆಗಳು ಅವರಿಗೆ ಶ್ರೇಯಸ್ಸನ್ನು ಒದಗಿಸಬೇಕು. ಈ ಪ್ರಕಾರ ಮಾನವರಿಗೂ ದೇವತೆಗಳಿಗೂ ಪರಸ್ಪರ ಆಶ್ರಯತ್ವ ಇದೆ.** ದೇವ ಯಜ್ಞ, ಮನುಷ್ಯ ಯಜ್ಞ, ಭೂತ ಯಜ್ಞ, ಪಿತೃ ಯಜ್ಞ ಮತ್ತು ಬ್ರಹ್ಮ ಯಜ್ಞವೆಂದು 5 ವಿಧ ಯಜ್ಞ. ಶ್ರೀಪಾದರ ಲೀಲೆಗಳು ಚಿತ್ರವಿಚಿತ್ರವಾಗಿರುವವು. ವೃದ್ಧ ದಂಪತಿಯರ ದ್ರವ್ಯ ಸಹಾಯದಿಂದ ಬ್ರಾಹ್ಮಣೋತ್ತಮರಿಂದ ಸಮಸ್ತ ಶುಭಪ್ರಾಪ್ತಿಗಾಗಿ ಯಜ್ಞವು ನಡೆಸಲಾಯಿತು. ನಿಜಕ್ಕೂ ನಮ್ಮ ಜಾತಕಗಳಲ್ಲಿ ಯಾವ ದೋಷವೂ ಇರಲಿಲ್ಲ. ವೃದ್ಧ ದಂಪತಿಗಳ ಪುಣ್ಯದಿಂದ ನಮಗೆ ಆ ಪರಮ ಪವಿತ್ರವಾದ ಯಜ್ಞವನ್ನು ಸಂದರ್ಶಿಸುವ ಭಾಗ್ಯ ಲಭಿಸಿತು. ಇಂದ್ರಾದಿ ದೇವತೆಗಳು ಪರೋಕ್ಷ ದೇವತೆಗಳು. ಬ್ರಾಹ್ಮಣರು ಪ್ರತ್ಯಕ್ಷ ದೇವತೆಗಳು. ನಾವು ತರುವ ಸ್ವಲ್ಪ ಹವಿಸ್ಸು, ಮಂತ್ರ ಬಲದಿಂದ, ಯಾವ ದೇವತೆಗಳಿಗೆಷ್ಟು ಬೇಕೋ ಅಷ್ಟು ನೀಡುತ್ತದೆ.

## ಶ್ರೀ ಭೂದೇವಿ ಈ ಏಳರಿಂದ ಧರಿಸಲ್ಪಡುತ್ತಿದ್ದಾಳೆ

ಭೂದೇವಿ ಗೋವುಗಳು, ವೇದಗಳು, ಬ್ರಾಹ್ಮಣರು, ಪತಿವ್ರತೆಯರು, ಸತ್ಯವಂತರು, ಅಲುಬ್ಧರು ಮತ್ತು ದಾನಶೀಲರಿಂದ ಧರಿಸಲ್ಪಟ್ಟಿದೆ. ವ್ಯವಸಾಯಕ್ಕೆ ಎತ್ತು ಬಹಳಷ್ಟು ಮುಖ್ಯ. **ಗೋಮಾತೆ ತುಪ್ಪ, ಹಾಲು, ಮೊಸರು ಮುಂತಾದ ಭೋಗ್ಯ ದ್ರವ್ಯಗಳನ್ನು ಕೊಡುತ್ತಾ, ಮನುಷ್ಯರ ಇಹಲೋಕ ಸ್ಥಿತಿಗೆ ಮತ್ತು ಯಜ್ಞಯಾಗಾದಿಗಳಿಂದ ಪರಲೋಕ ಸ್ಥಿತಿಗೂ ಎಷ್ಟೋ ಸಹಾಯವಾಗಿದೆ.** ಇಂದ್ರಾದಿ ಎಲ್ಲಾ ದೇವತೆಗಳು, ವೇದ ಮಂತ್ರಗಳಿಂದ ಸಮರ್ಪಿಸಲ್ಪಟ್ಟ ಹವಿಸ್ಸನ್ನು ಸ್ವೀಕರಿಸುವರು. ಎಲ್ಲಾ ಧರ್ಮಗಳಿಗೂ ವೇದವೇ ಮೂಲ, ಆದ್ದರಿಂದ **ವೇದಗಳಿಂದ** ಸಹಾ ಭೂಮಿ ಧರಿಸಲ್ಪಡುತ್ತಿದೆ. ಬ್ರಾಹ್ಮಣರು ಯಜ್ಞಗಳ ಮೂಲಕ, ಜನರಿಂದ ಸತ್ಕರ್ಮಗಳನ್ನಾಚರಿಸುವ ಹಾಗೆ ಮಾಡುವರು. ಹಾಗೇ **ಬ್ರಾಹ್ಮಣರಿಂದ** ಸಹಾ ಭೂಮಿ ಧರಿಸಲ್ಪಡುತ್ತಿದೆ. **ಪತಿವ್ರತೆಯರು** ತಮ್ಮ ಪಾತಿವ್ರತ್ಯ ಮಹಿಮೆಯಿಂದ ಧರ್ಮವನ್ನು ಎತ್ತಿ ನಿಲ್ಲಿಸಿದ್ದಾರೆ. **ಸತ್ಯವಂತರು** ಸತ್ಯವಾಕ್ಪಾಲನೆದಿಂದ, ಸತ್ಯಸಂಕಲ್ಪರಾಗಿ ಭೂಮಿಯನ್ನು ಕಾಪಾಡುತ್ತಿದ್ದಾರೆ. **ಅಲುಬ್ದರು,** ಲೋಭಬುದ್ಧಿ ಬಿಟ್ಟು ಕೂಡಿಬಾಳುವ ಜೀವನದ ಸಿಹಿಯನ್ನು ಹತ್ತಾರು ಜನಕ್ಕೆ ಹಂಚುತಿದ್ದಾರೆ. **ದಾನಶೀಲರು** ತಮ್ಮ ಭೂಲೋಕದ ಧನದಿಂದಲು ಮತ್ತು ಪರಲೋಕ ಧನದ ಪುಣ್ಯದಿಂದಲು, ದೀನರನ್ನು ಹೀನ ಮತ್ತು ಅಭಾಗ್ಯರನ್ನು ಕಾಪಾಡುತ್ತಿದ್ದಾರೆ. **ಶ್ರೀ ಬಾಪನಾರ್ಯರಂತಹ ಮಹಾಪುಣ್ಯವಂತರ ಸಮಕ್ಷದಲ್ಲಿ ನಮ್ಮನ್ನು ನೆಪ ಮಾತ್ರಕ್ಕೆ ಬರಗೂಡಸಿ, ಯಜ್ಞ ಪುರುಷನಾದ ಶ್ರೀಪಾದರೇ ಹಿಂದೆಯಿಂದ ಯಜ್ಞಕಾರ್ಯಗಳನ್ನು ಪೂರ್ತಿಗೊಳಿಸಿ ನಮ್ಮನ್ನು ಧನ್ಯರಾಗಿ ಮಾಡಿದರು.**

## ಶ್ರೀಪಾದರು ತಮ್ಮ ಭಕ್ತರನ್ನು ಕಾಪಾಡಿದ ರೀತಿ

ಯಜ್ಞ ನಿರಾತಂಕವಾಗಿ ನಡೆಯಿತು. ವೃದ್ಧ ದಂಪತಿಗಳು ನಮ್ಮನ್ನು ಅವರ ವಾರಸುದಾರರಾಗಿ ನಿರ್ಣಯಿಸಿದರು. ದಾಯಾದಿಗಳಿಗೆ ಈ ಕ್ರಿಯೆ ಇಷ್ಟವಾಗಲಿಲ್ಲ. ನಮಗಿದ್ದ ಒಂದಾನೊಂದು ಜಮೀನಿನಲ್ಲಿ ಮೆಣಸಿನ ಕಾಯಿ ತೋಟವಿತ್ತು. ಅದರ 4 ಅಂಚಿನಲ್ಲಿ ತಾಳೆ ಮರಗಳಿದ್ದವು. ಅದರಿಂದ ಸಾರಾಯಿ ತೆಗೆಯಲು ಗೌಡ ಕುಲಸ್ಥರಿಗೆ ಅನುಮತಿ ಕೊಡಲಾಗಿತ್ತು. ನಮ್ಮ ದಾಯಾದಿಗಳು ಕಳ್ಳತನದಲ್ಲಿ ಮೆಣಸಿನ ಕಾಯಿಯನ್ನು ಕಬಳಿಸಲು ಯತ್ನಿಸುತ್ತಿದ್ದರು. ಹಲವಾರು ಮೂಟೆಗಳ ಮೆಣಸಿನ ಕಾಯಿ ತೆಗೆಯಲಾಯಿತು. ಆ ಮೂಟೆಗಳು ಎತ್ತಿನ ಗಾಡಿಗಳಲ್ಲಿ ಕೊಂಡೊಯ್ಯಲು ಸಿದ್ಧವಾಗಿದ್ದವು. ನಾನು ತೋಟಕ್ಕೆ ಹೋದೆನು. ಅಲ್ಲಿನ ದೃಶ್ಯ ಕಂಡು ಆಶ್ಚರ್ಯಪಟ್ಟೆನು. ಕಳ್ಳತನಕ್ಕಾಗಿ ಬಂದ ದಾಯಾದಿಗಳು 10 ಜನ, ನಾನು ಒಬ್ಬಂಟಿಗ. ಆಗ ತಾಳೆ ಗಿಡದಿಂದ ಸಾರಾಯಿ

ಸೇವಿಸುತ್ತಿರುವ ಒಂದು ಭಲ್ಲೂಕ (ಕರಡಿ) ಕೆಳಕ್ಕೆ ಬಿತ್ತು. ಅದು ಬಹಳ ಅಪಾಯಕಾರಿ ಎಂದು ನಮಗೆಲ್ಲಾ ಗೊತ್ತು. ಅದರ ಚೂಪಾದ, ಬಲವಾದ ಉಗುರಿನ ವಿಷರಕ್ತ ಮತ್ತು ನಮ್ಮ ಮಾಂಸ ಖಂಡಗಳನ್ನು ನಾಶಗೊಳಿಸಬಲ್ಲದು. ಅದು ಎತ್ತಿನಗಾಡಿ ಬಳಿ ಬರಲೂ ಅವರು ಪರಾರಿಯಾದರು. ನಾನು ಭಯದಿಂದ ಶ್ರೀಪಾದರ ನಾಮವನ್ನು ಜಪಿಸುತ್ತಿರಲೂ ತನ್ನ ಕರಗಳ ತಾಳ ಮೀಟುತ್ತಿತ್ತು. ಹಾಗೆಯೇ ಆ ಭಲ್ಲೂಕ ಮುಂದೆ ಸಾಧುಪ್ರಾಣಿಯಾಗಿ ಸಾಗುತ್ತಿರಲು ನಾನು ಗಾಡಿಯನ್ನು ಮನೆಗೆ ತಲುಪಿಸಿದೆನು.

ಮನೆಯ ವೃದ್ಧರಿಗೂ ಮತ್ತು ಸುತ್ತಮುತ್ತಲಿನ ಜನಕ್ಕೂ ಇದು ಮಹದಾಶ್ಚರ್ಯವಾಗಿತ್ತು. ಆ ರಾತ್ರಿಯೆಲ್ಲಾ ಶ್ರೀಪಾದರ ನಾಮ ಜಪವನ್ನೇ ಮಾಡುತ್ತಿದ್ದೆವು. ಭಲ್ಲೂಕ ಸಹಾ ಶಾಂತದಿಂದ ನಮ್ಮ ಜಪಕ್ಕೆ ತಾಳ ಹಾಕುತ್ತಾ ನಮ್ಮ ಜತೆಯಲ್ಲೇ ಇತ್ತು. ಶ್ರೀಪಾದರ ಪ್ರಸಾದವನ್ನು ಸಹಾ ಆನಂದದಿಂದ ಸ್ವೀಕರಿಸಿತು.

ಅಂದಿನಿಂದ ಭಲ್ಲೂಕವು ಮನೆಯಲ್ಲಿ ಒಬ್ಬನಂತೆ ಸಂಚರಿಸುತ್ತಾ, ಎಲ್ಲರೊಂದಿಗೆ ಪ್ರೇಮದಿಂದಿತ್ತು. ಈ ಕಟುಂಬಕ್ಕಿರುವ ವೈರಿಗಳಿಗೆ ಅದು ಭಯ ಹುಟ್ಟಿಸುತ್ತಿತ್ತು. ನಮ್ಮ ಹೊಲ ಗದ್ದೆಗಳಿಗೆ ಕಾವಲೂ ಕಾಯುತ್ತಿತ್ತು. ಕಳ್ಳರ ಭಯವೇ ನಮಗಿರಲಿಲ್ಲ. ಮನೆಯಲ್ಲಿ ನಿತ್ಯವೂ ಶ್ರೀದತ್ತ ಪ್ರಭುಗಳ ಲೀಲೆಗಳನ್ನು ಚರ್ಚಿಸುತ್ತಾ ಶ್ರೀಪಾದ ಶ್ರೀವಲ್ಲಭರ ನಾಮಸ್ಮರಣೆ ನಾವು ನಿರಾತಂಕವಾಗಿ ಸಾಗಿಸುತ್ತಿದ್ದೆವು.

ಶ್ರೀಮನ್ನಾರಾಯಣ ಈ ವಿಷಯಗಳನ್ನು ತಿಳಿಸುತ್ತಿರಲೂ ಆ ಭಲ್ಲೂಕವು ಕಬ್ಬಿನ ತೋಟಕ್ಕೆ ಬಂದಿತು. ಅದರ ನೋಟದಿಂದಲೇ ನನಗೆ ಬೆವರು ಸುರಿಯಿತು. ಆದರೆ ನನ್ನೊಟ್ಟಿಗೆ ಅದು ಸ್ನೇಹದಿಂದಿರಲು ನಾನು ಶ್ರೀಪಾದರ ನಾಮಸ್ಮರಣೆ ಶುರು ಮಾಡಲು, ಅದು ಆನಂದದಿಂದ ಕುಣಿದಾಡುತ್ತಿತ್ತು.

ನಮ್ಮ ಅಕ್ಕಪಕ್ಕ ಗ್ರಾಮಗಳಿಗೆ ಕ್ಷುದ್ರವಿದ್ಯಾ ಪಾರಂಗತನಾದ ಒಬ್ಬ ತಾಂತ್ರಿಕ ಬಂದನು. ತನ್ನ ಶಕ್ತಿಗಳಿಂದ ಅನೇಕರನ್ನು ವಶಪಡಿಸಿಕೊಂಡು ವಿಶೇಷ ಧನ ಸಂಗ್ರಹಿಸಿದ್ದನು. ನಮ್ಮ ದಾಯಾದಿಗಳಾತನನ್ನು ಆಶ್ರಯಿಸಿದರು. ಆತ ನಮ್ಮ ಮನೆಯ ಭಲ್ಲೂಕ ಮೇಲೆ ತಂತ್ರ ಪ್ರಯೋಗಿಸಿದನು. ಭಲ್ಲೂಕ ಸಂಪೂರ್ಣವಾಗಿ ನಿಶ್ಶಕ್ತವಾಯಿತು. ಅವರೆಲ್ಲರೂ ಆನಂದಿಸಿದರು. ಭಲ್ಲೂಕ ಅಲ್ಲಾಡದೇ ಮಲಗಿಬಿಟ್ಟಿತು. ತಾಂತ್ರಿಕನು ಒಂದು ಯೋಗ ಪ್ರಕ್ರಿಯೆಯಿಂದ ಭಲ್ಲೂಕದ ಚೈತನ್ಯದ ಜೊತೆ ತಾದಾತ್ಮ್ಯಹೊಂದಿ ಮತ್ತೊಂದು ಯೋಗ ಪ್ರಕ್ರಿಯೆಯಿಂದ ಅದರಲ್ಲಿನ ಸಮಸ್ತ ಶಕ್ತಿಗಳನ್ನೂ ತನ್ನೊಳಕ್ಕೆ ಗ್ರಹಿಸಿಬಿಟ್ಟನು.

## ಶ್ರೀಪಾದರು ತಮ್ಮ ಭಕ್ತರನ್ನು ಅವರ ಪ್ರಾರಬ್ಧ ಕರ್ಮಗಳಿಂದ ರಕ್ಷಿಸುವುದು

ಶ್ರೀಪಾದರ ಲೀಲೆಗಳು ಊಹಾತೀತ. **ಕಾರ್ಯಕಾರಣ ಸಂಬಂಧಗಳು ಹುಡುಕುವುದು ಕಷ್ಟದ ವಿಷಯ. ಕಾರಣವಿಲ್ಲದೆ ಕಾರ್ಯ ಸಂಭವಿಸದು.** ಇಂದ್ರ ತನ್ನ ಧರ್ಮದಾನುಸಾರ ಬಹಳಷ್ಟು ಮಳೆ ಸುರಿಸಿದನು. ಶ್ರೀಕೃಷ್ಣನು ತನ್ನ ಧರ್ಮವನ್ನಾಚರಿಸುತ್ತಾ ಗೋವರ್ಧನ ಗಿರಿಯನ್ನುದ್ಧರಿಸಿ ತನ್ನ ಗೋಪಾಲ ಧರ್ಮವನ್ನಾಚರಿಸಿದನು. ಹಾಗೆಯೇ ಶ್ರೀಪಾದರು ಸಹಾ ತಾಂತ್ರಿಕನ ಯೋಗಶಕ್ತಿಗಳನ್ನು ಕೆಲಸ ಮಾಡಲು ಬಿಟ್ಟರು. ಭಲ್ಲೂಕ ಆ ಶಕ್ತಿಗೆ ಗುರಿ ಆಯಿತು. ಆದರೇ ಭಲ್ಲೂಕದಲ್ಲಿನ ಒಂದು ಪುಣ್ಯಾಂಶ ಅದನ್ನು ಶ್ರೀಪಾದ ಭಕ್ತನನ್ನಾಗಿ ಬದಲಾಯಿಸಿತು. ಅದು ಮೌನವಾಗಿ ನೋವನ್ನನುಭವಿಸುತ್ತಿತ್ತು. **ಜೀವಿಗಳ ಬಾಧೆಗಳನ್ನು ಶ್ರೀಪಾದರು**

**ತಪ್ಪದೇ ಕೇಳುವರು. ಅವರವರ ಕರ್ಮಾನುಸಾರ ಫಲಿತ ಕೊಡುವ ಸಂದರ್ಭದಲ್ಲಿ ತಮ್ಮ ಅನುಗ್ರಹದಿಂದ ಪಾಪ ಕರ್ಮಫಲಗಳ ಪ್ರಭಾವವನ್ನು ಕಡಿಮೆ ಮಾಡುವರು.**

ಶ್ರೀಮನ್ನಾರಾಯಣ ಗೃಹದಲ್ಲಿ ಶ್ರೀದತ್ತ ಕಥಾಪ್ರಸಂಗಗಳು, ಶ್ರೀಪಾದ ಶ್ರೀವಲ್ಲಭ ನಾಮ ಪಾರಾಯಣ ಯಥಾಪ್ರಕಾರ ನಡೆಯುತ್ತಿತ್ತು. ಕೆಲವರು ಶ್ರೀಪಾದರ ಬಗ್ಗೆ ಮನಸ್ಸಿನಲ್ಲೇ ಅನೇಕ ಸಂದೇಹಗಳನ್ನಿಟ್ಟಿಕೊಂಡಿದ್ದರು, ಇನ್ನು ಕೆಲವರು ವಿರುದ್ಧ ಮನಸ್ಸಿನಲ್ಲಿದ್ದರು. ಮಿಕ್ಕ ಶ್ರದ್ಧಾಳುಗಳು ಮಾತ್ರ ಶ್ರೀಗಳ ಮೇಲೆ ಚಂಚಲವಿಲ್ಲದ ಭಕ್ತಿಯಿಂದ ಇದ್ದರು.

ನಾಮ ಪಾರಾಯಣ ನಡೆಯುವಾಗ, ಕದಲದೇ ಬಿದ್ದಿದ್ದ ಭಲ್ಲೂಕಕ್ಕೆ ಚೈತನ್ಯಬಂದು ಒಂದು ಪವಾಡ ನಡೆಯತು. ಹಿಂದಿನ ಅದರ ಶಕ್ತಿಗಳನ್ನೆಲ್ಲಾ ಪುನಃ ಪಡೆಯಲಾರಂಭಿಸಿತು. ಹಿಂದಿನಂತೆ ಭಲ್ಲೂಕ ಶ್ರೀಪಾದ ನಾಮ ಶಬ್ದಕ್ಕೆ ಕುಣಿಯತೊಡಗಿತು. ಶ್ರೀದತ್ತಾತ್ರೇಯ ಯೋಗವು ಹಿಂದಿದ್ದ ಯೋಗ ಪ್ರಕ್ರಿಯಗಳಿಗಿಂತ ಹೆಚ್ಚಿತು. ಭಲ್ಲೂಕದ ಆತ್ಮಚೈತನ್ಯ ತಾಂತ್ರಿಕನಿಗೆ ಬದಲಾವಣೆ ಆಗಲಾರಂಭಿಸಿತು. ಅವನಲ್ಲಿನ ಮಾನವ ಚೈತನ್ಯ ಭಲ್ಲೂಕ ತತ್ತ್ವಕ್ಕೆ ಬದಲಾವಣೆ ಆಗುತ್ತಿತ್ತು. ಇಲ್ಲಿ ಭಲ್ಲೂಕ ತತ್ತ್ವದಿಂದ ಮಾನವತ್ವ, ಭಲ್ಲೂಕದಲ್ಲಿ ರೂಪಿಸಿಕೊಂಡಿತು. ಮಾನವ ತಾಂತ್ರಿಕ, ಭಲ್ಲೂಕ ತತ್ತ್ವದೊಳು ರೂಪುಗೊಳ್ಳಲೂ, ಕರಡಿಯಂತೆ ವರ್ತಿಸ ತೊಡಗಿದನು. ಅವನನ್ನು ಅವನ ಸಂಗಡಿಗರೇ ಹಗ್ಗದಿಂದ ಕಟ್ಟಿ ಕಾಡಲ್ಲಿ ಬಿಟ್ಟುಬಂದರು.

ಭಲ್ಲೂಕವು ಮನುಷ್ಯಭಾಷೆ ಮಾತನಾಡತೊಡಗಿತು. ಅದು, ''ಸ್ವಾಮಿಗಳೇ! ನಾನು ಹಿಂದಿನ ಜನುಮದಲ್ಲಿ ಒಬ್ಬ ಬಡ್ಡಿ ವ್ಯಾಪಾರಿ. ಅಧಿಕ ಬಡ್ಡಿ ಗಿಂಜುತ್ತಾ ಎಲ್ಲರನ್ನೂ ಬಾಧಿಸಿದೆ. ಅದರ ಫಲಿತ, ಈ ಭಲ್ಲೂಕ ಜನುಮ. ಹಿಂದಿನ ಪುಣ್ಯಫಲ, ಶ್ರೀಪಾದರ ಅನುಗ್ರಹ ಲಭಿಸಿದೆ. ಶ್ರೀಗಳು ಸಾಕ್ಷಾತ್ ದತ್ತ ಪ್ರಭುಗಳೆಂದು ತಿಳಿಯಿರಿ. ಆವರ ಕೃಪೆಯೇ ನನಗೆ ಉತ್ತಮ ಜನುಮ ಲಭಿಸಲಿದೆ. ತಾಂತ್ರಿಕನು ಬಹಳ ಪಾಪ ಕರ್ಮಗಳನ್ನು ಮಾಡಿದ್ದಾನೆ. ಮೇಲ್ಪಟ್ಟು ಶ್ರೀಪಾದರ ಭಕ್ತನು, ಮೂಕ ಪ್ರಾಣಿಯಾದ ನನಗೆ ಕೇಡೆಣಿಸಿದ. ಅದಕ್ಕೇ ಶ್ರೀಪಾದರವನನ್ನು ಶಿಕ್ಷಿಸಿದರು. **ರಕ್ಷಣೆ, ಶಿಕ್ಷಣೆ ಎರಡೂ ಶ್ರೀಪಾದರಿಗೆ ಸೇರಿರುವುದೇ. ನಿಶ್ಚಲ ಭಕ್ತಿಯಿಂದ ಅವರನ್ನಾರಾಧಿಸಿದರೇ ಅವರು ಕಾಪಾಡುವರು. ದೈವಭಕ್ತರನ್ನು ನಿಂದಿಸುವವರನ್ನು ಅಂತಹವರಿಗೆ ತೊಂದರೆ ಕೊಡುವವರನ್ನು ಶ್ರೀಗಳು ಶಿಕ್ಷಿಸುವರು. ಶಿಕ್ಷೆಯನಂತರ ಅವರೇ ಭಕ್ತರಾಗಿ ಬಿಡುವರು.** ಶ್ರೀಪಾದ ನಾಮ ಜಪಿಸಿರಿ. ನಾನು ಸದ್ಗತಿ ಹೊಂದಲಿದ್ದೇನೆ'' ಎಂದು ನುಡಿಯಿತು.

ಎಲ್ಲರೂ ಅಶ್ಚರ್ಯಗೊಂಡು, ಶ್ರೀಪಾದ ನಾಮ ಪಾರಾಯಣ ಮಾಡುತ್ತಿದ್ದರು. ಭಲ್ಲೂಕವು ಮೌನವಾಗಿ ತನ್ಮಯದಿಂದಿತ್ತು. ಆಗ ಅದೆಲ್ಲಿಂದಲೊ ಮೂರು ನಾಗರ ಹಾವುಗಳು ಅಲ್ಲಿ ಸೇರಿದವು. ಅವೂ ಸಹಾ ಪಾರಾಯಣಾತನ್ಮಯತ್ವದಲ್ಲಿದ್ದವು. ಅದೇ ಸಮಯ ಭಲ್ಲೂಕವು ಪ್ರಶಾಂತ ಮರಣ ಹೊಂದಿತು! ಆ ಮೂರು ಹಾವುಗಳೂ ಭಲ್ಲೂಕಕ್ಕೆ ಮೂರು ಪ್ರದಕ್ಷಿಣೆ ಮಾಡಿ, ಅಲ್ಲಿಯೇ ದಿನ ಪೂರ್ತಿ ಇದ್ದವು. ಆದರೇ ಅವು ಎಲ್ಲಿಂದ ಬಂದವೋ ಏಕೆ ಬಂದವೋ ಯಾರಿಗೂ ತಿಳಿಯಲಿಲ್ಲ. ಭಲ್ಲೂಕಕ್ಕೆ ಮನುಷ್ಯ ಪದ್ದತಿಯಲ್ಲೆ ದಹನ ಕಾರ್ಯಗಳು ನೆರವೇರಿಸಿದೆವು.

ನಮಗೆಲ್ಲಾ, ಎಲ್ಲಾ ಕಾಲಸ್ಥಿತಿಗಳಿಗೂ ಶ್ರೀಪಾದ ಶ್ರೀವಲ್ಲಭ ನಾಮಸ್ಮರಣೆಯೇ ರಕ್ಷೆಯಾಗಿತ್ತು. ಆ ಪವಿತ್ರ ನಾಮಸ್ಮರಣೆ ನಾವು ಮಾಡುತ್ತಲ್ಲೇ ಇದ್ದೆವು. ಶ್ರೀಪಾದರಿಗೆ ಇತ್ತ ನೈವೇದ್ಯ ಕ್ಷೀರವನ್ನು ಆ ಹಾವುಗಳು ಕುಡಿಯುತ್ತಿದ್ದವು. ಬಹಿಷ್ಠ ಮಹಿಳೆಯರು, ಮೈಲಿಗೇ ಉಳ್ಳವರು ಗುಂಪಿನಲ್ಲಿದ್ದಲ್ಲಿ ಅವು ಕೋಪಗೊಂಡು ಜೋರು ಉಸಿರು ಬಿಡುತ್ತಿದ್ದವು.

ನಮ್ಮ ಮನೆಯಲ್ಲಿ ನಾಗರ ಹಾವುಗಳಿರಲೂ ಕೆಲವರಿಗೆ ನಮ್ಮ ಮನೆಗೆ ಬರಲು ಹೆದರಿಕೆ ಇತ್ತು. ಆದರೇ ಶ್ರೀದತ್ತ ಭಕ್ತರು ಸ್ವೇಚ್ಛೆಯಿಂದ ಬರುತ್ತಿದ್ದರು. ಶ್ರೀದತ್ತ ನಾಮವನ್ನಾಗಲಿ ಶ್ರೀಪಾದರ ನಾಮವನ್ನಾಗಲಿ ಕೇಳಿದೊಡನೆಯೇ, ಅವು ತನ್ಮಯ ಮುದ್ರೆ ಹಾಕುತ್ತಿದ್ದವು! ವೃದ್ಧ ದಂಪತಿಗಳ ಮನೆಯ ಒಂದು ಭಾಗವನ್ನು, ಅಕ್ರಮವಾಗಿ ಅವರ ದಾಯಾದಿಗಳು ಆಕ್ರಮಿಸಿದ್ದರು. ಅದನ್ನು ವಿವಾದಾಸ್ಥಳವಾಗಿ ಗ್ರಾಮಾಧಿಕಾರಿಗಳು ನಿಶ್ಚಯಿಸಿದ್ದರು. ಅಲ್ಲಿ ಸೊಪ್ಪು ತರಕಾರಿ ಬೆಳೆಸಿಕೊಳ್ಳಲೂ ಸಹಾ ದಾಯಾದಿಗಳಿಗೆ ಅನುಮತಿ ನೀಡಲಾಗಿತ್ತು. ಆ ದಾಯಾದಿಗಳು ಗ್ರಾಮಾಧಿಕಾರಿಗಳನ್ನು ಬುಟ್ಟಿಗೆ ಹಾಕಿಕೊಂಡಿದ್ದ ಕಾರಣ, ಆ ವಿವಾದದ ತೀರ್ಪನ್ನು ಕಾರಣವಿಲ್ಲದೇ ನಿಧಾನ ಮಾಡುತ್ತಿದ್ದರು. ಆ ಸ್ಥಳದಲ್ಲಿ ಒಂದು ಹುತ್ತವಿತ್ತು, ನಾಗರ ಚೌತಿಗೆ ಅದರೊಳಗೆ ಹಾಲು ಹಾಕಲಾಗುತ್ತಿತ್ತು. ಹಾಲನ್ನು ಹಾಕುತ್ತಾ ಭಕ್ತರು, "ನಾಗದೇವತಾ! ನಿನ್ನ ಸಾಕ್ಷಾತ್ಕಾರ ಭಾಗ್ಯ ದಯ ಮಾಡಿಸು. ನಮ್ಮ ಬಯಕೆಗಳನ್ನು ತೀರಿಸು!" ಎಂದು ಪ್ರಾರ್ಥಿಸುತ್ತಿದ್ದರು. ಅದರೊಳಗೆ ನಾಗನಿಲ್ಲವೆಂದು ಅವರಿಗೆ ಚೆನ್ನಾಗಿ ಗೊತ್ತಿತ್ತು.

ಶ್ರೀಪಾದರು ಬಲು ಚಮತ್ಕಾರಿ. ನಾಗರ ಚೌತಿ ಹತ್ತಿರದಲ್ಲೇ ಇದೆ. ಸಾಮಾನ್ಯವಾಗಿ ಹುತ್ತಕ್ಕೆ ಬರುವ ಜನ ಜಂಕುತ್ತಿದ್ದರು. ಆ ಹಬ್ಬ ಬಂದೇಬಿಟ್ಟಿತು. ಲೋಕ ಎಂತಹ ವಿಚಿತ್ರ. ನಾಗದೇವತೇ ಸಾಕ್ಷಾತ್ಕರಿಸು ಎಂದು ಬೇಡುವರು. ಆ ನಾಗದೇವತೆಯೇ ಅಲ್ಲಿ ಸಾಕ್ಷಾತ್ಕರಿಸಿದರೇ ಒಬ್ಬರೂ ಇರೊಲ್ಲ, ಭಯದಿಂದ ಓಡುವರು. ವೃದ್ಧ ದಂಪತಿಗಳೂ ಮತ್ತು ನಾವು ಹಾಲನ್ನು ಹುತ್ತದ ಬಳಿ ಇಟ್ಟು ನಮಸ್ಕರಿಸಿದಂತೆಯೇ ಅಲ್ಲಿ ಮೂರು ನಾಗಗಳು ಪ್ರತ್ಯಕ್ಷವಾದವು. ಅವು ಆ ಹಾಲನ್ನು ಕುಡಿದು ಹುತ್ತದೊಳಗೆ ಹೋದವು. ನಮ್ಮನ್ನು ಬಿಟ್ಟರೇ ಮತ್ತಾರೂ ಅಲ್ಲಿಗೆ ಹಾಲು ಹಾಕಲು ಬರಲಿಲ್ಲ.

## ತಮ್ಮ ಭಕ್ತರನ್ನು ರಕ್ಷಿಸುವ ನಾಗಗಳನ್ನು ಸಾಯಿಸಲು ಯತ್ನಿಸಿದವರಿಗೆ ಶ್ರೀಪಾದರ ಗುಣಪಾಠ

ನಾಗರ ಚೌತಿಗೆ ನಮ್ಮ ಗ್ರಾಮಕ್ಕೆ ಒಬ್ಬ ಮಂತ್ರವಾದಿ ಬಂದಿದ್ದನು. ಅವನನ್ನು ನಮ್ಮ ದಾಯಾದಿಗಳು ಮತ್ತು ಗ್ರಾಮದ ಮುಖ್ಯಸ್ಥರು ಮನಸ್ಫೂರ್ತಿಯಾಗಿ ಆಹ್ವಾನಿಸಿದರು. ಆತ ಎಂತಹ ವಿಷ ಸರ್ಪವನ್ನಾದರು ತನ್ನ ಮನಶ್ಶಕ್ತಿಯಿಂದ ಚಲನವಿಲ್ಲದೇ ಮಾಡಿ ತನ್ನ ವಶ ಮಾಡಿಕೊಳ್ಳಬಲ್ಲನು. ಹಾವು ಕಚ್ಚಿದ ಯಾವ ವ್ಯಕ್ತಿಯನ್ನಾದರೂ ಸರಿ ನವೀನ ಮಂತ್ರಶಕ್ತಿದಿಂದ ಪುನಃಜೀವಿಸಬಲ್ಲದವನಾಗಿ ಮಾಡಲು ಶಕ್ತಿ ಉಳ್ಳವನು. ಅತನ ಕೈಯಲ್ಲಿ ಗರುಡ ರೇಖೆ ಇತ್ತು. ಆ ರೇಖೆ ಇದ್ದವರಿಗೆ ಸರ್ಪಗಳು ಸ್ವಾಧೀನವಾಗುವವೆಂದು ಶಾಸ್ತ್ರ. ಆ ಮೂರು ಸರ್ಪಗಳನ್ನು ಸಾಯಿಸಲು ಇವರುಗಳು ಯೋಚಿಸುತ್ತಿದ್ದರು.

ಆ ಹುತ್ತದ ಸುತ್ತಮುತ್ತಲು ಬೆಂಕಿಯ ಉರಿ ಏರ್ಪಡಿಸಲಾಯಿತು. ಮಂತ್ರವಾದಿ ದೊಡ್ಡ ಆಸನದ ಮೇಲೆ ಕುಳಿತು, ವಿಚಿತ್ರ ಪದ್ಧತಿಗಳಲ್ಲಿ ತಂತ್ರಗಳು ಮಾಡುತ್ತಾ ಮಂತ್ರಗಳನ್ನು ಗಟ್ಟಿಯಾಗಿ ಪಠಿಸುತ್ತಿದ್ದನು. ಸದ್ಜಾತಿಯ ಸರ್ಪಗಳನ್ನು ವಧಿಸುವುದು ಪಾಪವೆಂದು ನಾವು ಬಾಧೆ ಪಡುತ್ತಿದ್ದೆವು. ನಿಸ್ಸಹಾಯಕರಾಗಿದ್ದೆವು. ಈ ಹಾವುಗಳನ್ನು ಶ್ರೀಪಾದನೇ ರಕ್ಷಿಸಲೆಂದು ಪ್ರಾರ್ಥಿಸುತ್ತಿದ್ದೆವು. ಮಂತ್ರಶಕ್ತಿ ಪ್ರಭಾವವೇ ಅನ್ನುವಂತೆ ಆ ಸರ್ಪಗಳು ಹುತ್ತದಿಂದೀಚೆಗೆ ಬಂದವು. ಮಾಂತ್ರಿಕ ಮತ್ತು ಅವನ ಕಡೆಯವರು ಆನಂದ ಪಡುತ್ತಿದ್ದರು. ಆದರೇ ಆ ಆನಂದ ಅಧಿಕ ಕಾಲವಿರಲಿಲ್ಲ. ಈಚೆಗೆ ಬಂದ ಸರ್ಪಗಳು ತಮ್ಮ ಗಾತ್ರ ಕ್ಷಣಕ್ಷಣಕ್ಕೂ ಬೆಳೆಸುತ್ತಿದ್ದವು. ಮಂತ್ರಗಳ ಶಬ್ದವೂ ಬೆಳೆಯುತ್ತಿತ್ತು. ಮಂತ್ರಶಕ್ತಿಗೆ ಒಳಗೊಂಡಿವೆ ಎಂದ ಹಾಗೆ ಅವು ಅಗ್ನಿಮೂಲದ ಕಡೆ ಹೊರಡುತ್ತಿದ್ದವು. ಆಶ್ಚರ್ಯ ಅವು ಹೋಗುತ್ತಿದ್ದ ಕಡೆ ಎಲ್ಲಾ ಅಗ್ನಿದೇವ ಶಾಂತಿಗೊಂಡು ತಣ್ಣಗಾಗುತ್ತಿದ್ದ. ಕೊನೆಗೆ ಅಗ್ನಿ ಸಂಪೂರ್ಣವಾಗಿ ಆರಿ ತಣ್ಣಗಾಯಿತು. ಆ ಸರ್ಪರಾಜಗಳು ಸ್ವೇಚ್ಛೆಯಿಂದ ಅಲ್ಲಿಂದ ಹೊರಟು ಹೋದವು. ಮಂತ್ರವಾದಿ ಸಹ ಹೆದರಿ ನಿಂತನು.

ಇಷ್ಟರಲ್ಲಿ ಆ ಗ್ರಾಮ ಮುಖ್ಯಸ್ಥನ ಮಗನಿಗೆ ಹಾವು ಕಡಿದ ಲಕ್ಷಣಗಳು ಕಂಡುಬಂದಿತು. ಎರಡನೆಯ ಪುತ್ರನ ಕಣ್ಣಿನ ತೀಕ್ಷ್ಣತೆ ಕಡಿಮೆ ಆಯಿತು. ಹಾವು ಕಚ್ಚದೆಯೇ ಕಚ್ಚಿಸಿಕೊಂಡವನಿಗೆ ಇರುವ ವಿಷಭರಿತ ಶರೀರ ಒಬ್ಬನಿಗೂ, ಇದ್ದಕ್ಕಿದ್ದಹಾಗೇ ಕುರುಡತ್ವ ಇನ್ನೊಬನಿಗೂ ಪ್ರಾಪ್ತಿಸಿದ್ದು ಆಶ್ಚರ್ಯವೇ. ಮಂತ್ರವಾದಿಯ ಅನೇಕ ಮಂತ್ರಗಳು ಫಲಿಸಲಿಲ್ಲ. ಅವನ ಕೈಯ್ಯಲ್ಲಿದ್ದ ಆ ಗರುಡ ರೇಖೆ ರೂಪು ಬದಲಾಯಿಸಿ ಅದೃಶ್ಯವಾಯಿತು. ಮುಖ್ಯಸ್ಥನಿಗೆ ಮಹಾಭಯ ಹುಟ್ಟಿತು. ಅನಾಥ ರಕ್ಷಕ ಶ್ರೀಪಾದರು ಬಿಟ್ಟರೇ ಯಾರು ದಿಕ್ಕು? ಮಂತ್ರವಾದಿಯ ಮಂತ್ರ ಶಕ್ತಿ ಪೂರ್ತಿಯಾಗಿ ನಶಿಸಿತು. ಕೆಲವೇ ನಿಮಿಷಗಳಲ್ಲಿ ಆತ ಜೀವವಿಲ್ಲದವನಾದ. ಶ್ರೀಪಾದರ ಲೀಲೆ ಯಾವ ಸಮಯಕ್ಕೆ ಹೇಗಿರುವುದೋ ಯಾರು ಬಲ್ಲರು? ಆ ಮುಖ್ಯಸ್ಥ ನಮ್ಮ ಬಳಿ ಓಡಿ ಬಂದು ಅಳತೊಡಗಿದನು. ನಾವೇನು ಮಾಡಬಲ್ಲೆವು? ನಿಷ್ಠೆಯಿಂದ ಶ್ರೀಪಾದರನ್ನು ಸ್ಮರಿಸಿದರೆ ನಿನ್ನ ಪುತ್ರರು ಸ್ವಸ್ಥರಾಗುವರೆಂದು ಮಾತ್ರ ಹೇಳಿದೆವು.

ಮಾಂತ್ರಿಕನ ಕಳೇಬರ ಗ್ರಾಮ ಮುಖ್ಯಸ್ಥರ ಮನೆ ಬಳಿ ಇತ್ತು. ಅವರ ಮಕ್ಕಳಿಬ್ಬರೂ ವಿಧಿಗೆ ಬಲಿ ಆದರು. ನಮ್ಮ ದಾಯಾದಿಗಳು ನಡುಗಲಾರಂಭಿಸಿದರು. ವಾತಾವರಣ ವಿಷಾದ ಭರಿತವಾಗಿತ್ತು. ಸತ್ತ ಮಾಂತ್ರಿಕನ ಶವವನ್ನು ಮಸಣಕ್ಕೆ ಸಾಗಿಸಿದರು. ಸೌದೇ ಪೇರಿಸಿ, ಬೆಂಕಿ ಇಡಲಾಯಿತು. ಬೆಂಕಿ ಹತ್ತಿದ ನಂತರ ಶವದಲ್ಲಿ ಚಲನೆ ಕಂಡುಬಂದು. ''ರಕ್ಷಿಸಿ'' ಎಂದು ಬೊಬ್ಬೆ ಇಡುತ್ತಿತ್ತು. ಮಸಣದ ಕಾವಲುಗಾರರು, ಸತ್ತ ಮಾಂತ್ರಿಕನು ದೆವ್ವವಾಗಿ ಪುನಃ ಶರೀರ ಪ್ರವೇಶಿಸಿರುವನೆಂದು ಅವನನ್ನು ಕಾಪಾಡಿದರೇ ಇದೇ ಶರೀರದಿಂದ ಆತ ಪ್ರೇತಾತ್ಮ ಮಾಡುವ ದುಷ್ಕಾರ್ಯಗಳನ್ನೆಲ್ಲಾ ಮಾಡುವನೆಂದು, ಆತನ ಶರೀರ ಸುಟ್ಟು ಬೂದಿ ಆದರೇ ಕೇವಲ ಪ್ರೇತಾತ್ಮನಾಗಿಯೇ ಇದ್ದು ಬಿಡುವನೆಂದು, ಅವನಿಗೆ ವಶವಾದವರ ಶರೀರ ಪ್ರವೇಶ ಮಾಡಿ, ಕೆಲವರನ್ನು ಮಾತ್ರವೇ ಬಾಧಿಸುವನೆಂದು ಯೋಚಿಸಿ ಕಿರುಚುತ್ತಿರುವವನ ಶರೀರಕ್ಕೆ ನೀರು ಹಾಕುವುದು ನಿಲ್ಲಿಸಿದರು. ಸತ್ತವನ ತಿಂಡಿತೀರ್ಥವಿಲ್ಲದ ಪ್ರೇತಾತ್ಮಕ್ಕಿಂತ, ಜೀವವುಳ್ಳವನಾಗಿ ತನ್ನ ಸ್ವಂತ ಉಪಾಧಿಯೊಳಗೇ ಪ್ರವೇಶಿಸುವ ಪ್ರೇತಾತ್ಮ ಅಧಿಕ ಶಕ್ತಿಗಳನ್ನು ಹೊಂದಿದ್ದು, ಸಮಾಜಕ್ಕೆ ವಿಶೇಷ ನಷ್ಟಕಷ್ಟಗಳನ್ನು, ದುಃಖವನ್ನು ತಪ್ಪದೇ ತರುವುದೆಂದು ಅವರೆಲ್ಲಾ ಭಾವಿಸಿದರು. ಶ್ರೀಪಾದ ಶ್ರೀವಲ್ಲಭರ ವಿಚಿತ್ರ ವಿಧಾನ, **ಪ್ರಾರಬ್ಧಾನುಸಾರವಾಗಿ ಆಯಾ ಮನುಷ್ಯರ ಮನಸ್ಸಿನಲ್ಲಿ ಆಯಾ ಯೋಚನೆಗಳನ್ನು ಬರಸಿ ಆಯಾ ಕರ್ಮಫಲಗಳನ್ನು ಅನುಭವಿಸಲು ನೋಡಿ, ಪ್ರತ್ಯಕ್ಷವಾಗಿ ತನ್ನ ಅವತಾರ ತತ್ತ್ವದ ನಿಜ ಸ್ವರೂಪವನ್ನು ಬೋಧಿಸುವುದು.**

ಮಸಣದ ಕಾವಲುಗಾರರ ಮೇಲೆ ದಯೆ ಉಳ್ಳ ಸಜ್ಜನನೊಬ್ಬನು, ಆ ಶವ ಪಡುತ್ತಿರುವ ನೋವನ್ನು ಕಾಣಲಾರದೇ ನೀರು ತಂದು ಸುರಿದನು. ಅದು ಉರಿಯನ್ನು ಶಾಂತ ಗೊಳಿಸಲಿಲ್ಲ ಮೇಲ್ಪಟ್ಟು ತುಪ್ಪ ಸುರಿದಂತೆ ಅಗ್ನಿ ಎದ್ದಿತು. ಆತನ ಶರೀರ ಆ ಮಹಾಅಗ್ನಿಗೆ ಸುಡಲಿಲ್ಲ. ಅವಯವಗಳು ಕೆಡಲಿಲ್ಲ, ನರಕ ಬಾಧೆ ಸಶರೀರವಾಗಿ ಅನುಭವಿಸತೊಡಗಿದನು.

ಮಗು ಶಂಕರ ಭಟ್ಟು! ಕಠಿಣವಾದ ಮಹಾನರಕದಂದು ಅನೇಕ ಅರ್ಬುಧಗಳಿಂದ ವಿಚಿತ್ರನೋವನ್ನು ಅನುಭವಿಸುವ ಜೀವಿಗಳಿರುವರು. ಸ್ನಾನ ಮಾಡುವಾಗ, ಶಿಖೆಯನ್ನು ಹಿಂಡಿಕೊಳ್ಳುವಾಗ, ಪಂಚೆ ಹಿಂಡಿಕೊಳ್ಳುವಾಗ, ಭೋಜನ ವೇಳೆಯಲ್ಲಿ **"ರೌರವೇ ಪುಣ್ಯನಿಲಯೇ ಪದ್ಮಾರ್ಬುದ ನಿವಾಸಿನಾಂ, ಅರ್ಥಿನಾಂ ಉದಕಂದತ್ತಂ ಅಕ್ಷಯ್ಯಮುಪತಿಷ್ಠತು"** ಎಂದು ಪರಿಷೇಚನ ಮಾಡಿಬಿಡುವ ನೀರನ್ನು, ಅಪುಣ್ಯ ನಿಲಯುವಾದ ಕಠಿಣವಾದ ನರಕದಲ್ಲಿ ಅನೇಕ ಅರ್ಬುದಗಳ ಕಾಲದಿಂದ, ಬಾಯಾರಿಕೆಯಿಂದಿರುವವರಿಗೆ, ದಾಹೋಪಶಮನವನ್ನು ನೀಗಿಸುವುದು. **ಧರ್ಮನಿಷ್ಠೆಯಾದವರಿಗೆ ಶ್ರೀಪಾದರು ಒಂದು ವರ. ಧರ್ಮಭ್ರಷ್ಟರು, ಮಹಾಪಾಪ ಮಾಡುವವರಿಗೆ ಅವರು ಯಮರಾಜರೇ ಸರಿ.**

ಮಾಂತ್ರಿಕನ ಶವವು ಅಗ್ನಿಯಿಂದೆದ್ದು, ಕುಣಿದಾಡುತ್ತಾ ಗ್ರಾಮದ ಮುಖ್ಯಸ್ಥನ ಮನೆ ಸೇರಿತು. ಅಗ್ನಿಯಿಂದ ಸುಟ್ಟು ಬೂದಿಯಾಗದೇ,ಅಗ್ನಿಯ ಪ್ರಭಾವಕ್ಕೆ ಮಹಾನೋವನ್ನನುಭವಿಸುತ್ತಾ, ಕಿರುಚುತ್ತಾ, ಅಲ್ಲಿಗೆ ಬಂದಿತು. ನಾವೆಲ್ಲಾ ಅಲ್ಲಿ ಶ್ರೀದತ್ತ ಕಥಾಪಾರಾಯಣವನ್ನು ಮಾಡಿಕೊಳ್ಳುತ್ತಾ, ಶ್ರೀದತ್ತರ ದಿವ್ಯ, ಭವ್ಯ, ನವಾವತಾರವಾದ ಶ್ರೀಪಾದ ಶ್ರೀವಲ್ಲಭರ ದಿವ್ಯನಾಮ ಸಂಕೀರ್ತನೆಯಲ್ಲಿದ್ದೆವು. 'ದಿಗಂಬರಾ, ದತ್ತದಿಗಂಬರ, ಶ್ರೀಪಾದ ಶ್ರೀವಲ್ಲಭದತ್ತ ದಿಗಂಬರ!' ಎಂಬುವ ದಿವ್ಯನಾಮ ಸಂಕೀರ್ತನೆ, ಅಲ್ಲಿನ ವಾತಾವರಣವನ್ನೇ ಪವಿತ್ರ ಮಾಡುತ್ತಿತ್ತು. **ಸ್ಥೂಲರೂಪಧಾರಿ ಶ್ರೀಪಾದ ಶ್ರೀವಲ್ಲಭ ಸ್ವರೂಪದಲ್ಲಿನ ದಿವ್ಯಕಿರಣಗಳು, ಅವರ ಸಂಗಡದವರನ್ನು ಪವಿತ್ರರನ್ನಾಗಿ ಮಾಡುತ್ತಿತ್ತು. ಅವರ ಸೂಕ್ಷ್ಮ ರೂಪದಿಂದ ಹೊರಬೀಳುತ್ತಿದ್ದ ದಿವ್ಯಕಿರಣಗಳು ಭೂಮಂಡಲವನ್ನೆಲ್ಲಾ ಪವಿತ್ರಮಾಡುತ್ತಿತ್ತು! ಶ್ರೀಗಳ ಕಾರಣರೂಪದ ದಿವ್ಯಕಿರಣಗಳು ಕೋಟಿಗಟ್ಟಲೆಯ ಬ್ರಹ್ಮಾಂಡಗಳನ್ನು ಪವಿತ್ರಗೊಳಿಸುತ್ತಿರುವವು. ಮಹಾಕಾರಣ ಶರೀರ, ಸದಾ ಸಚ್ಚಿದಾನಂದ ಅದ್ವೈತ ಸ್ವರೂಪವಾಗಿದ್ದು, ಮಹಾ ವಿಶ್ರಾಂತಿಯಂದಿರುವುದು. ಅದರಿಂದ ಹೊರಬೀಳುವ ದಿವ್ಯಕಿರಣಗಳು, ಸಾಲೋಕ್ಯ, ಸಾಮೀಪ್ಯ ಮತ್ತು ಸಾಯುಜ್ಯ ಅವಸ್ಥೆಗಳಲ್ಲಿರುವ ಅವಧೂತರು, ಅಂಶಾವತಾರಿಗಳು, ಮಹಾಸಿದ್ಧ ಜನರು, ಮಹಾಯೋಗಿಗಳು ಮುಂತಾದವರನ್ನು ಪವಿತ್ರಗೊಳಿಸುತ್ತಿರುವವು.**

**ಅವರ ದಿವ್ಯನಾಮ ಸ್ಮರಣೆ ಮಾಡುವಾಗ ನಮಗೆ ಅಗೋಚರವಾದ ರೀತಿಯಲ್ಲಿ ಅವರು ಅಲ್ಲೇ ನೆಲೆಸಿರುವರು. ಅವರು, ಅವರ ದಿವ್ಯಲೀಲೆಗಳಿಂದ ಅವರ ಇರುವಿಕೆ ಮತ್ತು ಮಹತ್ತನ್ನು ಸಾಬೀತು ಮಾಡುತ್ತಿರುವರು.**

''ಶ್ರೀದತ್ತನು ದಿಗಂಬರನಾ? ಶ್ರೀಪಾದರು ದತ್ತರಾ? ಆತನೂ ದಿಗಂಬರನೇನಾ? ವಸ್ತ್ರವಿಲ್ಲದ ಹುಚ್ಚನಾ?'' ಎಂದು ಮಾಂತ್ರಿಕನು ಶ್ರೀಪಾದರನ್ನು ಗೇಲಿಮಾಡುತ್ತಿದ್ದನು. ತನ್ನ ನಾಮಸ್ಮರಣೆ ಆಗುತ್ತಿರುವ ಸ್ಥಳಕ್ಕೆ ಮಸಣದಿಂದ ಮಾಂತ್ರಿಕನನ್ನು ತಂದು ಬೆಂಕಿಯ ಹಬೆಯಿಂದ ಶರೀರಕ್ಕೆ ನೋವು ಆಗುತ್ತಿದ್ದರೂ, ದಿಗಂಬರ ಸ್ಥಿತಿಯಲ್ಲಿ ತನ್ನ ಭಕ್ತರ ಮುಂದೆ ನಿಲ್ಲಿಸಿದರೆಂದರೆ ಅದು ಸಾಮಾನ್ಯ ವಿಷಯವೇ? ಸಾಮಾನ್ಯ ಯೋಗಿಗಳಿಗೆ ಇದು ಸಾಧ್ಯವೇ? ಇಂತಹ ಲೀಲೆಗಳನ್ನು ನಾವೆಂದಾದರೂ ಕೇಳಿದ್ದೇವೆಯೇ? ಅಥವಾ ನೋಡಿದ್ದೇವೆಯೆ? ಎಲ್ಲವೂ ಚಿತ್ರ, ವಿಚಿತ್ರ, ಎಲ್ಲೂ ಕೇಳದ್ದು ಮತ್ತು ತರ್ಕಕ್ಕೆ ನಿಲುಕದ್ದು. **ಶ್ರೀಪಾದರ ಶ್ರೀಚರಣಗಳಲ್ಲಿ, ವಿನಯದಿಂದ ತಲೆ ತಗ್ಗಿಸಿ ಶರಣಾಗತರಾದವರು, ತಾಯಿಯ ಮಡಿಲಲ್ಲಿ ಸುಖ ಮತ್ತು ಸಂಪೂರ್ಣ ರಕ್ಷಣೆಯಿಂದ ಇರುವ ಮಗುವಿನಂತೆ ಇರುವರು. ಅವರು ಎಲ್ಲಾ ಶುಭ, ಸೌಖ್ಯಗಳನ್ನು ಹೊಂದುವರು.**

ಶ್ರೀಪಾದರ ನಾಮಸ್ಮರಣೆ ನಡೆಯುತ್ತಿರಲು ಮಾಂತ್ರಿಕನು ಸಹಾ ಹೆಜ್ಜೆ ಹಾಕುತ್ತಾ ತೃಪ್ತಿ ಹೊಂದುತ್ತಿದ್ದನು. ಕುಣಿತ ನಿಲ್ಲಿಸಿದರೆ ನೋವು ಹೆಚ್ಚುತ್ತಿತ್ತು. ದಿಗಂಬರನಾಗಿ ಹಾಗೆ ನಾಟ್ಯ ಮಾಡುವುದು ಕಷ್ಟವಾಗಿತ್ತು. ಆದರೇ ಇದೆಲ್ಲಾ ಸ್ವಯಂಕೃತಾಪರಾಧವೆಂದು ಆ ಅಪರಾಧದ ಕರ್ಮಫಲ ಈ ರೀತಿ ಅನುಭವಿಸಲಾಗುತ್ತಿದೆ ಎಂದು ತಿಳಿದನು. ಅನೇಕ ಸರ್ಪಗಳನ್ನು ತನ್ನ ಮಂತ್ರಶಕ್ತಿಯಿಂದ ಅಗ್ನಿಗೆ ಆಹುತಿ ಮಾಡಿದ್ದೆಲ್ಲಾ ನೆನಸಿಕೊಂಡನು. ಬುದ್ಧಿ ಇಲ್ಲದೇ ಮಹಾತ್ಮರನ್ನು, ದಿಗಂಬರ ಸನ್ಯಾಸಿಗಳನ್ನು ದೂಷಿಸಿದ ಫಲ ಇದು ಎಂದು ಭಾವಿಸಿದನು. ಅವನಲ್ಲಿ ಪಶ್ಚಾತ್ತಾಪ ಹೆಚ್ಚಿ ಶ್ರೀಪಾದರನ್ನು ಮನಸ್ಫೂರ್ತಿಯಾಗಿ ಶರಣು ಬೇಡಿದನು.

ಆತನ ಮನಸ್ಸಿನಲ್ಲಿ ಹೀಗೆ ಪರಿಣಾಮ ಆದ ನಂತರ ಅಗ್ನಿ ಶಾಂತವಾಯಿತು. ನಾನು ನನ್ನ ಶಲ್ಯವನ್ನು ಆತನಿಗೆ ಉಟ್ಟುಕೊಳ್ಳಲು ಕೊಟ್ಟೆನು. ಹರ್ಷ ತುಂಬಿ ಸಂಕೀರ್ತನೆಯಲ್ಲಿ ಆತ ಪಾಲ್ಗೊಂಡನು. ಸೂರ್ಯೋದಯಕ್ಕೇ ಗ್ರಾಮ ಮುಖ್ಯಸ್ಥನ ದ್ವಿತೀಯ ಪುತ್ರನಿಗೆ

ಕಣ್ಣೋಟ ಪೂರ್ತಿಯಾಗಿ ಬಂದಿತು. ಶ್ರೀಪಾದರಿಗಿತ್ತ ನೈವೇದ್ಯ, ಹಸು ಹಾಲನ್ನು ದೊಡ್ಡ ಮಗನ ಬಾಯಿಗೆ ಹಾಕಲು ಆತನಿಗೆ ಎಚ್ಚರ ಬಂದಿತು. ಮಾಂತ್ರಿಕನು, ಶ್ರೀಪಾದರ ನಾಮಸ್ಮರಣೆ ಮಾಡುತ್ತಾ ಒಳ್ಳೆಯ ಜೀವನ ನಡೆಸುವೆನೆಂದು ಹೊರಟನು. ಗ್ರಾಮದ ಮುಖ್ಯಸ್ಥ, ವಿವಾದಾಸ್ಪದ ಭೂಮಿ ವೃದ್ಧ ದಂಪತಿಗಳಿಗೆ ಕೊಡಿಸಿದನು.

ಆ 3 ಸರ್ಪರಾಜಗಳು ಇದ್ದ ಹುತ್ತದಿಂದ 3 ಔದುಂಬರ ವೃಕ್ಷಗಳು ಎದ್ದವು. ಕೆಲ ಕಾಲದ ನಂತರ ದತ್ತಾನಂದ ಅವಧೂತ ಎಂಬುವ ಸನ್ಯಾಸಿ ಅಕಸ್ಮಿಕವಾಗಿ ನಮ್ಮ ಮನೆಗೆ ಬಂದರು. ಆತ ಈ ಔದುಂಬರ ವೃಕ್ಷ ಮೂಲದಲ್ಲಿ ಕುಳಿತು ಧ್ಯಾನ ಮಾಡುತ್ತಿದ್ದರು. ಒಂದು ಶನಿವಾರ ಪ್ರದೋಷ ಸಮಯದಲ್ಲಿ, ನಮ್ಮಿಂದ ಮಾಡಿಸಲ್ಪಟ್ಟ ಹಲ್ವಾವನ್ನು ಶ್ರೀಪಾದರಿಗೆ ನೈವೇದ್ಯವಿತ್ತು, ನಮಗೂ ಭುಜಿಸಲು ಕೊಟ್ಟರು. ನಂತರ ಹೀಗೆ ಹೇಳಿದರು, **"ಶ್ರೀಪಾದರು ಪೀಠಿಕಾಪುರದಲ್ಲಿನ ಅವರ ಮಾತಾಮಹೆಯ ಒಂದು ಔದುಂಬರ ವೃಕ್ಷ ಮೂಲದಲ್ಲಿ ಕೂಡುವರು. ಅವರ ತಾಯಿ ಸುಮತಿ ಮಹಾರಾಣಿ ಪ್ರೀತಿಯಿಂದ ಬೆಳ್ಳಿ ಬಟ್ಟಲಲ್ಲಿ ಹಲ್ವಾ ತುಂಬಿ ಆ ವೃಕ್ಷದ ಬಳಿ ಇದ್ದ ಶ್ರೀಪಾದರಿಗೆ ತಿನ್ನುಸುವರು. ಶ್ರೀಪಾದ ಶ್ರೀವಲ್ಲಭ, ಶ್ರೀ ನೃಸಿಂಹ ಸರಸ್ವತಿ, ಸ್ವಾಮಿ ಸಮರ್ಥ ಎಂಬುವ ನಾಮತ್ರಯರ ಕುರುಹು ಈ 3 ವೃಕ್ಷಗಳು. ಪೀಠಿಕಾಪುರದಲ್ಲಿನ ಆ ಔದುಂಬರ ವೃಕ್ಷ ಬೀಜ ಪರಂಪರೆಯೇ ಈ 3 ವೃಕ್ಷಗಳು. ಕಾಲ ಕಳೆದ ನಂತರ ಪೀಠಿಕಾಪುರದಲ್ಲಿನ ಆ ಔದುಂಬರ ವೃಕ್ಷ ಬೀಜಗಳ ಸರಣಿಯ ಬೀಜವೇ ಶ್ರೀಪಾದ ಜನುಮ ಸ್ಥಳದಲ್ಲಿ ಔದುಂಬರವಾಗಿ ಪ್ರಖ್ಯಾತಿಗೊಳ್ಳುವುದು. ಅಲ್ಲಿಯೇ ಅವರ ದಿವ್ಯಮೂರ್ತಿಯೂ ಪ್ರತಿಷ್ಠಿಸಲಾಗುವುದು. ಮುಂಬರುವ ಕಾಲದಲ್ಲಿ ಆ ಔದುಂಬರ ವೃಕ್ಷ ಮೂಲದಲ್ಲಿರುವ ಶ್ರೀಪಾದರಿಗೆ ಶನಿ ಪ್ರದೋಷ ಸಮಯದಲ್ಲಿ ಹಲ್ವಾ ನೈವೇದ್ಯ ಇಡುವವರಿಗೆ ಶ್ರೀಪಾದರ ಅನುಗ್ರಹದಿಂದ ಬಾಳು ಬೆಳಗುವುದು."**

ಈ ಚಿತ್ರಕಥೆಗಳನ್ನು ಕೇಳಿದ ನಂತರ ನನ್ನ ಭಕ್ತಿ ಸ್ಥಿರಗೊಂಡಿತು. ಮಾರನೇ ದಿನ ಕುರಂಗಡ್ಡೆಕ್ಕೆ ಹೊರಟೆನು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 17

# ಶ್ರೀ ನಾಮಾನಂದರ ದರ್ಶನ

ನಾನು ಕುರಂಗಡ್ಡೆ ಕಡೆ ಪ್ರಯಾಣ ಬೆಳೆಸಲು, ಮಾರ್ಗ ಮಧ್ಯದಲ್ಲಿ ಒಬ್ಬ ಸ್ತ್ರೀ, ಕೂದಲನ್ನು ಬಿಡಿಸಿಕೊಂಡು, ವಿಕಾರವಾಗಿ ನಗುತ್ತಾ ನನ್ನ ಕಡೆ ಬರುವುದನ್ನು ನೋಡಿದೆನು. ಆಕೆ, ಬುದ್ಧಿಸ್ಥಿಮಿತವಿಲ್ಲದವಳಂತೆ ಕಂಡಳು. ಆಕೆ ನನ್ನ ಬಳಿ ಓಡೋಡಿ ಬರುತ್ತಿರಲು ನನಗೆ ಹೆದರಿಕೆ ಉಂಟಾಯಿತು. ಕಾಲುಕೈಗಳಲ್ಲಿ ನಡುಕ ಹೆಚ್ಚಿತು. ಇಬ್ಬರು ಗಂಡಸರು ಕೈಯಲ್ಲಿ ಕೋಲು ಹಿಡಿದು, ಆಕೆಯನ್ನು ಓಡಿಸುತ್ತಿದ್ದರು. ಆಕೆ ಓಡಿಬಂದು ನನ್ನ ಕಾಲು ಹಿಡಿದು, ಅವರಿಂದ ಕಾಪಾಡಲು ಪ್ರಾರ್ಥಿಸಿದಳು. ನನಗೆ ಅಲ್ಲಿನ ಅವಾಂತರ ಅರ್ಥವಾಗಲಿಲ್ಲ. ದಾರಿಗೆ ತಿಂಡಿ ಸಹಾ ಇಲ್ಲದ ಬಡ ಬ್ರಾಹ್ಮಣನಾದ ನಾನು ಇತರೇ ದೇಶದಲ್ಲಿ ಇತರರಿಂದ ಆಕೆಯನ್ನು ಹೇಗೆ ತಾನೆ ಕಾಪಾಡಬಲ್ಲೆನು? ಅಪ್ರಯತ್ನವಾಗಿ, "ತಾಯಿ! ನಿನಗೆ ಬಂದ ಆಪತ್ತೇನೂ ಇಲ್ಲ. ಈ ದುರ್ಮಾರ್ಗರಿಂದ ಶ್ರೀಪಾದ ಶ್ರೀವಲ್ಲಭರು, ನಿನ್ನನ್ನು ತಪ್ಪದೇ ಕಾಪಾಡುವರು. ಭಯವಿಲ್ಲದೇ ಏಳು" ಎಂದು ಧೈರ್ಯ ತುಂಬಿದೆನು.

ಆ ಬಂದ ಕಟುಕರು, ನನ್ನ ಕಡೆ ಆಶ್ಚರ್ಯವಾಗಿ ನೋಡಿದರು. ಶರೀರ ಬಲದಲ್ಲಿ ಅವರಿಗದೆಷ್ಟೂ ಸಾಟಿಯಾಗದ ಒಬ್ಬ ಬಡಕಲು ಮನುಷ್ಯ, ತಮ್ಮನ್ನು ದುರ್ಮಾರ್ಗಿಗಳೆನ್ನುವುದಲ್ಲದೇ, ತಮ್ಮಿಂದ ಆ ಸ್ತ್ರೀಯನ್ನು ರಕ್ಷಿಸುವೆನೆಂದೂ ದೃಢವಾಗಿ ಹೇಳುವುದು ಅವರಿಗೆ ವಿಚಿತ್ರವಾಗಿ ಕಂಡಿತು, ಅವರು, "ಎಲೈ ಬಡ ಬ್ರಾಹ್ಮಣನೇ! ನಾವೀ ಆಚಾರವಿಲ್ಲದ ಹೆಂಗಸನ್ನು ಸಾಯಿಸಲೆಂದಿದ್ದೇವೆ. ನೀನು ಕಾಪಾಡಲಾರೆ, ನೀನು ನಮ್ಮ ಪ್ರಯತ್ನಗಳಿಗೆ ಅಡ್ಡಿಬಂದಲ್ಲಿ, ನಿನ್ನನ್ನೂ ಹತ್ಯೆ ಮಾಡಬೇಕಾಗುತ್ತೆ. ಮರ್ಯಾದೆಯಾಗಿ ನಮ್ಮ ದಾರಿಗೆ ಎದುರು ಬರಬೇಡ" ಎಂದರು.

ನನ್ನಲ್ಲದ್ಯಾವುದೋ ಕಾಣದ ಶಕ್ತಿ ಪ್ರವೇಶಿಸಿದಂತಾಯಿತು. ನನ್ನ ಪ್ರಯತ್ನವಿಲ್ಲದೇ ಯೋಚನೆಯೇ ಸಹಾ ಇಲ್ಲದೇ ಮಾತುಗಳು ಹೊರಡುತ್ತಿದ್ದವು. ಆ ಮಾತುಗಳೂ ಸಹಾ ನನ್ನನ್ನು ಪ್ರಮಾದಕ್ಕೆಳೆಯುವಂತವು!" ಬ್ರಾಹ್ಮಣ ಜನುಮ ತಾಳಿ, ನಾಚಿಕೆ ಇಲ್ಲದೇ ನಿನ್ನೆ ರಾತ್ರಿ ಒಂದು ಗೋವನ್ನು ವಧಿಸಿ, ಅದರ ಮಾಂಸ ಮತ್ತು ಸಾರಾಯಿ ಸೇವಿಸಿದಂತಹ ನಿಮ್ಮಗಳಿಗೆ, ನನ್ನನ್ನೂ ಈ ನಿರಪರಾಧಿಯಾದ ಮಹಿಳೆಯನ್ನು ಸಾಯಿಸುವುದು ಕಷ್ಟವಲ್ಲ. ನಾನೆಲ್ಲದಕ್ಕೂ ಸಿದ್ಧ. ತಮ್ಮ ಮೇಲೆ ಕರುಣೆಯಿಂದ ಹೇಳುತ್ತಿದ್ದೇನೆ, ಈ ಸ್ತ್ರೀಯನ್ನು ಸಾಯಿಸಿದರೇ ನೀವು ಕುಷ್ಠರೋಗದ ಪಾಲಾಗುವಿರಿ. ಅಂತಹವರಿಗೆ ಕಾಮದ ಆಶೆ ಅಧಿಕ. ಅವರನ್ನು ಹಾವು ಕಡಿಯುವುದು. ಹಾವಿನ ವಿಷದಿಂದ,ಕುಷ್ಠರೋಗ ಕಡಿಮೆ ಮಾಡಬಹುದು. ಆದರೇ ಅದರ ಪದ್ಧತಿಯೇ ಎಲ್ಲರಿಗೂ ತಿಳಿಯದ್ದು. ಕಾಮವಾಂಛೆ ತಡೆದು, ಅಂತಹ ಔಷಧಿ ಸೇವಿಸಿದರೂ ಉಪಯೋಗವಿಲ್ಲ, ವ್ಯಾಧಿ ಹೆಚ್ಚುವುದು. ವ್ಯಾಧಿಗಳಲ್ಲೇ ನಿಕೃಷ್ಟವಾದ ಈ ಕುಷ್ಠರೋಗ ಬಯಸಿದರೇ ಈಕೆಯನ್ನು ಸಾಯಿಸಿ, ತಮ್ಮ ಹಿತ ಬಯಸಿ ನಾನೀ ಮಾತುಗಳನ್ನು ಹೇಳುತ್ತಿದ್ದೇನೆ" ಎಂದು ನಾನು ನುಡಿದೆನು.

ನನ್ನ ಮಾತುಕೇಳಿದ ಆ ಇಬ್ಬರು ಆಗಂತಕರೂ ಬೆಚ್ಚಿಬಿದ್ದರು. ಮಹದಾಶ್ಚರ್ಯ! ನಾನು ನುಡಿದ ಕೆಲವು ಶಬ್ದಗಳು ಅವರ ಹಿಂದಿನ ಜೀವನದಲ್ಲಿ ನಿಜವಾಗಿದ್ದ ಕಾರಣ, ಅವರಿಗೆ ನನ್ನ ಭವಿಷ್ಯವಾಣಿಯೂ ನಡೆಯುವುದೆನ್ನಿಸಿತು. ಅವರು ತಮ್ಮ ತಪ್ಪನ್ನು ಒಪ್ಪಿಕೊಂಡರು. ಜ್ಯೋತಿಷ್ಯದಲ್ಲಿ ಅಣುವಷ್ಟೂ ಪ್ರಜ್ಞೆ ಇಲ್ಲದ ನಾನು, ಅವರ ದೃಷ್ಟಿಯಲ್ಲಿ ದೊಡ್ಡ ಜ್ಯೋತಿಷ್ಯನಾಗಿಬಿಟ್ಟೆನು. ಹತ್ತಿರದ

ಮರದ ಬಳಿ ಕುಳಿತೆವು. ಅವರ ಕಥೆ ಹೇಳಬೇಕೆಂದೆನು. ಆಗ ಅವರು, ''ಸ್ವಾಮಿ! ತಾವು ತ್ರಿಕಾಲ ಜ್ಞಾನಿಗಳು, ಸರ್ವಜ್ಞರು, ಆದರೂ ತಾವು ಕೇಳಿದ್ದಕ್ಕೆ ಹೇಳುತ್ತಿದ್ದೇವೆ. ನಾವು ಅಣ್ಣತಮ್ಮಂದಿರು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ್ದರೂ ಆ ಧರ್ಮಗಳು ನಮ್ಮಲ್ಲಿ ಶೂನ್ಯ. ಸರ್ವಭ್ರಷ್ಟರಾಗಿದ್ದೇವೆ. ಗೋಮಾಂಸ ಭಕ್ಷಕರೊಡನೆ ಸ್ನೇಹ ಮಾಡಿ, ಸಾರಾಯಿ ಸೇವಿಸುವುದನ್ನೂ ಕಲಿತೆವು. ವ್ಯಭಿಚಾರ ಸಹಾ ಉಂಟು. ಇಷ್ಟು ದುರಾಚಾರಗಳಿಂದ, ಎಲ್ಲಾ ವಿಧವಾಗಿಯೂ ಭ್ರಷ್ಟರಾದೆವು! ಒಂದು ಗುಡ್ಡದ ಮೇಲೆ, ಪದ್ಮಾಸನಾಸೀನಳಾಗಿ ಕುಳಿತಿದ್ದ ಈ ಸ್ತ್ರೀಯನ್ನು ಕಂಡು, ಆಕೆಯನ್ನು ಪಡೆಯಲೂ ಬಯಸಿದೆವು. ಆಕೆ ನಿರಾಕರಿಸಿದ್ದಕ್ಕೆ, ಬಲವಂತವಾಗಿ ಅನುಭವಿಸಲು ಹಿಂದೆಬಿದ್ದೆವು. ವಿಚಿತ್ರವಾಗಿ ನಮ್ಮಿಂದ ತಪ್ಪಿಸಿಕೊಳ್ಳುತ್ತಾ, ನಮ್ಮ ಅದೃಷ್ಟಕ್ಕೆ ತಮ್ಮ ದರ್ಶನ ಭಾಗ್ಯ ಕಲ್ಪಿಸಿದಳು. ನಮ್ಮ ಪೂರ್ವಜನ್ಮ ಪುಣ್ಯವೇ ಸರಿ'' ಎಂದು ನುಡಿದರು. ಆಗ ನಾನು, **''ಯಾವುದು ಕೆಟ್ಟದ್ದು, ಯಾವುದು ಒಳ್ಳೆಯದೆಂದು ತಿಳಿಯುವ ಜ್ಞಾನ, ಭಗವಂತ ನಮಗೆ ಪ್ರಸಾದಿಸಿದ್ದಾನೆ. ಒಳ್ಳೆಯ ದಾರಿಯಲ್ಲಿ ನಡೆದರೇ ಸತ್ಫಲಿತ ಲಭಿಸುವುದು. ಕೆಟ್ಟ ದಾರಿ ಹಿಡಿದರೇ ಜೀವನ ದುರ್ಭರವಾಗುವುದು.** ಈಕೆ ಸದಾಚಾರಣಿಯಾಗಿ ಗೋಚರಿಸುತ್ತಿರುವಳು. ನೀವೀಕೆಯನ್ನು ದುರಾಚಾರಿಣಿ ಎಂದು ಭಾವಿಸಿದಿರಿ. ಮೇಲ್ಪಟ್ಟು ಅತಿ ಕೀಳು ಬಯಕೆಗಳಿಂದ ಈಕೆಯನ್ನು ಹಿಂಬಾಲಿಸಿದಿರಿ. ಈಗ ಪಶ್ಚಾತ್ತಾಪ ಪಡುತ್ತಿದ್ದೀರ. ನಿಮ್ಮ ಪಾಪಕಾರ್ಯಗಳನ್ನು ಭಗವಂತ ಕ್ಷಮಿಸುವನೋ ಇಲ್ಲವೊ ನಾನರಿಯೆ, ಆದರೇ ನಿಮಗೀಗ ಒಂದು ಶುಭ ಸಮಾಚಾರವಿದೆ. **ತ್ರಿಲೋಕಾರಾಧ್ಯನು, ತ್ರಿಮೂರ್ತಿ ಸ್ವರೂಪನು ಆದ ಶ್ರೀದತ್ತನು ಈಗ ಮಾನವ ರೂಪದಲ್ಲಿ ಶ್ರೀಪಾದ ಶ್ರೀವಲ್ಲಭರೆಂದು ಈ ಲೋಕದಲ್ಲಿ ಸಂಚರಿಸುತ್ತಿದ್ದಾರೆ.** ಅವರ ದಿವ್ಯಚರಣಾಶ್ರಯ ಬಿಟ್ಟು, ಮಹಾಪಾಪಿಯರನ್ನುದ್ಧರಿಸುವ ಬೇರೊಂದು ಉಪಾಯ ಕಂಡುಬರುವುದಿಲ್ಲ. ನಾನವರ ಲೀಲೆಗಳನ್ನದೆಷ್ಟೋ ಕೇಳಿದ್ದೆ. ನಾನೀಗ ಅವರಿರುವ ಕುರಂಗಡ್ಡೆಗೆ ಹೊರಟಿರುವೆನು. ತಾಯಿ! ತಮ್ಮ ವೃತ್ತಾಂತವೇನು? ಎಂದು ಕೇಳಿದೆನು.

ಆಗ ಆ ಮಾತೆ, ''ಸ್ವಾಮಿ! ತಾವು ನನ್ನನ್ನು ಈ ಪಾಪಾತ್ಮರಿಂದ ರಕ್ಷಿಸಿದ್ದೀರಿ. ತಾವು ನನಗೆ ತಂದೆಯ ಸಮಾನ. ನಾನು ಸದ್ಬ್ರಾಹ್ಮಣರ ವಂಶಜಾತೆ. ಚಿಕ್ಕ ವಯಸ್ಸಿನಲ್ಲೇ ಬಾಲ್ಯವಿವಾಹವಾಯಿತು. ನನ್ನ ದೌರ್ಭಾಗ್ಯ, ಗಂಡ ನಪುಂಸಕನು, ಪ್ರತಿಕ್ಷಣ ನನಗೆ ನೋವನ್ನು ಕೊಡುತ್ತಿದ್ದರೂ, ಯೌವ್ವನದ ಆಸೆಗಳನ್ನೆಲ್ಲಾ ತಳ್ಳಿಹಾಕಿ ಪತಿಯೇ ದೈವವೆಂದು ನಾನಿದ್ದೆ. ಆದರೇ ಆ ಗಂಡನಿಗೆ ನನ್ನನ್ನು ಹಿಂಸಿಸಿ ಆನಂದಪಡುವುದೇ ಸಂತಸ. ನಾನು ಬೇರೇ ಪುರುಷರ ಸಂಬಂಧ ಪಡೆದಿರುವೆನೆಂದು ಹೇಳುತ್ತಿದ್ದನು. ಅಲಂಕಾರ ಮಾಡಿಕೊಂಡರೇ ''ಪರಪುರುಷರಿಗೊಸ್ಕರನಾ?'' ಎಂದು ಕೇಳುತ್ತಿದ್ದನು. ಬಿಟ್ಟಲ್ಲಿ, ವಿಧವೆಯಂತೆ ಅಮಂಗಳವಾಗಿರುವೆ ಏಕೆ? ಅನ್ನುತ್ತಿದ್ದನು. ಚಿಕ್ಕಮಕ್ಕಳ ಸಂಗಡವಿದ್ದರೇ, ನಿನಗೆ ಮಕ್ಕಳಾಗದೆಂದು ಕೊರುಗುತ್ತಿದ್ದೀಯ ಎಂದು ಪ್ರಶ್ನಿಸುವರು. ಮಾಮೂಲಿಯಾಗಿ ತಿಂದರೂ ಜಾಸ್ತಿ ತಿಂದು ಮನೆ ಚೊಕ್ಕಟ ಮಾಡುತ್ತಿದ್ದೀಯ ಎನ್ನುತ್ತಿದ್ದರು. ಕಡಿಮೆ ತಿಂದರೇ ಅತ್ತೆಯ ಮನೆಯಲ್ಲಿ ಊಟವೇ ಕೊಡುತ್ತಿಲ್ಲ ಎಂದು ಅಕ್ಕಪಕ್ಕದವರು ನುಡಿಯಬೇಕಾ? ಎನ್ನುತ್ತಿದ್ದರು. ಉಪವಾಸ ಮಾಡಿದರೇ ನನ್ನನ್ನು ಕಳಚಿಕೊಳ್ಳಲು ಯಾವುದೋ ವ್ರತ ಮಾಡುತ್ತಾ ಮಂತ್ರಜಪ ಮಾಡುತ್ತಿದ್ದೀಯ ಎನ್ನುತ್ತಿದ್ದರು. ಆತ ಇಷ್ಟು ವಿಧವಾಗಿ ನನ್ನನ್ನು ಕಾಡಿದರೂ ಅತ್ತೆ ಆಗಲಿ, ಮಾವನೇ ಆಗಲಿ, ಮಿಕ್ಕ ಮನೆಯ ಹಿರಿಯರಾಗಲಿ ಒಂದು ಮಾತು ಸಹಾ ಬುದ್ಧಿ ಹೇಳುತ್ತಿರಲಿಲ್ಲ! ನರಕಯಾತನೆ ಭೂಲೋಕದಲ್ಲೇ ನನಗೆ ಲಭಿಸಿತು. ಹೀಗೆ ನನಗೆ ಕಾಲ ಬಹಳ ವಿಷಾದಭರಿತವಾಗಿತ್ತು'' ಎಂದು ತಿಳಿಸಿದಳು.

ಮುಂದೆ ನುಡಿಯುತ್ತಾ ''ಇಷ್ಟರಲ್ಲಿ ನಮ್ಮೂರಿಗೆ ಒಬ್ಬ ಮಂತ್ರ ತಂತ್ರಜ್ಞಾನಿ ಬಂದನು. ಜ್ಯೋತಿಷ್ಯದಲ್ಲೂ ನಿಪುಣನೆಂದು ಪ್ರಚಾರವಾಯಿತು. ನನ್ನ ಅತ್ತೆಮಾವರೂ ಅವನನ್ನು ಬರ ಮಾಡಿಸಿಕೊಂಡರು. ಆತ ಏನೋ ಲೆಕ್ಕಮಾಡಿ, ಚಿತ್ರ ವಿಚಿತ್ರ ಪೂಜೆಯ ನಂತರ, ''ಈಕೆಯ ಜಾತಕ ಸರಿ ಇಲ್ಲ. ಅನೇಕ ಅಮಂಗಳಗಳುಳ್ಳವಳು. ಆ ಯೋಗ ಪ್ರಭಾವವೇ ಗಂಡನಿಗೆ ನಪುಂಸಕತ್ವ ಬಂದಿದೆ! ಈಕೆಯನ್ನು ಮನೆಯಿಂದ ಹೊರಗಾಕಿದರೇ ಮನೆಯ ಅಮಂಗಳವೂ ತೊಲಗಿ, ನನ್ನ ಮಂತ್ರ, ತಂತ್ರ ಪೂಜೆಗೆ ಫಲ ಸಿಕ್ಕಿ ನಿಮ್ಮ ಮಗನ ನಪುಂಸಕತ್ವ ಹೋಗುವುದು. ಬೇರೇ ಮಾದುವೆ ಮಾಡಬಹುದು, ಆಗ ಮಕ್ಕಳೂ ಆಗುವರು'' ಎಂದನು.

ದಯೆಯಿಲ್ಲದ ನನ್ನ ಆ ಮನೆಯ ಹಿರಿಯರು, ನನ್ನನ್ನು ಮನೆಯಿಂದ ಓಡಿಸಿದರು. ವಿಧಿ ಇಲ್ಲದೇ ಕಾಲ್ನಡಿಗೆಯಲ್ಲೇ ತವರು ಮನೆಗೆ ಹೊರಟೆನು. ದಾರಿಯಲ್ಲಿ ಆ ಮಂತ್ರಕಾರನು ಅಡ್ಡ ಬಂದು ನನನ್ನು ಬಲಾತ್ಕಾರ ಮಾಡಿದಾಗ, ನಾನು ಭದ್ರಕಾಳಿಯಾಗಿ ಪಕ್ಕದಲ್ಲಿದ್ದ ಒಂದು ದೊಡ್ಡ ಕಲ್ಲನ್ನು ಎತ್ತಿ ಬಲದಿಂದ ಅವನ ತಲೆ ಒಡೆದೆನು. ಆತ ಅಲ್ಲಿಗಲ್ಲೇ ಸತ್ತನು. ''ಎಂತಹ ಗ್ರಹಚಾರ! ನಾನು ಸ್ತ್ರೀ ಆಗಿದ್ದೂ, ವಿಧಿ ಇಲ್ಲದ ಪರಿಸ್ಥಿತಿಯಲ್ಲಿ ಬ್ರಾಹ್ಮಣನ ಕೊಲೆ ಮಾಡಿದೆನೇ'' ಎಂದು ಮನಸ್ಸು ಕಲಕಲೂ, ತವರು ಮನೆಯಲ್ಲೂ ಮನಶ್ಶಾಂತಿ ಇರಲಾರದೆಂದು ನೆನೆದೆ. ವಿಷಯ ತಿಳಿದು, ತಂದೆ ತಾಯಿ ಕಾಪಾಡಬಲ್ಲರು. ಆದರೇ ಅಲ್ಲಿನ ಇತರರಾದ ಅಣ್ಣತಮ್ಮಂದಿರು, ಅತ್ತಿಗೆ, ನಾದನಿಯರು ಪ್ರೇಮ ತೋರುವರೆಂಬ ನಂಬಿಕೆ ಸ್ವಲ್ಪವೂ ಇರಲಿಲ್ಲ. ನಾನಾ ತಂತ್ರಜ್ಞನನ್ನು ಸಾಯಸಿದ್ದು ಅಲ್ಲಿನ ಹಳ್ಳಿಯ ಜನ ಕಂಡರು. ಆದರೇ ಅವರು ಆ ಮಾಂತ್ರಿಕನ ಒಳ ರೂಪ ಅರಿಯರು. ಸುದ್ದಿ ಎಲ್ಲೆಲ್ಲೂ ಅಲ್ಪ ಸಮಯಕ್ಕೇ ತಲುಪಿತು. ಆ ಭಗವಂತ ಹೇಗಾದರೂ ನನ್ನನ್ನು ಕರೆದೊಯ್ಯಲಿ ಎಂದು, ಯಾವ ಗುರಿಯಿಲ್ಲದೇ ಹೊರಟೆ. ಒಂದು ಕೊಳ ಕಾಣಿಸಿತು. ನೀರು ಸವಿದು, ಪಕ್ಕದಲ್ಲಿದ್ದ ಔದುಂಬರ ವೃಕ್ಷದ ಮೂಲದಲ್ಲಿ, ಮೈಯಲ್ಲಿ ನಿಶ್ಶಕ್ತಿ ತುಂಬುತ್ತಿದ್ದು, ಜ್ಞಾನ ತಪ್ಪುತ್ತಿರಲೂ ನಿದ್ದೆ ಹೋದೆ. ಗಾಢನಿದ್ರೆಯ ನಂತರ ಎದ್ದಾಗ ನನ್ನ ಬಳಿ 2 ನಾಗರ ಹಾವುಗಳು ಕಾವಲು ಕಾಯುತ್ತಿದ್ದವು. ಅವಕ್ಕೆ ನಾನು ನಮಿಸಲೂ ಕೆಲಸ ಮುಗಿಸಿದಂತೆ ಎಲ್ಲಿಗೋ ಹೊರಟು ಹೋದವು. ಹಸಿವೂ ನನಗಾಗುತ್ತಿತ್ತು. ಏನೂ ಮಾಡಲಾರದೇ ನಾನು ''ದತ್ತ ದಿಗಂಬರ, ದತ್ತ ದಿಗಂಬರ, ಜಯ ಗುರುದತ್ತ! ದತ್ತ ದಿಗಂಬರ!'' ಎಂದು ಹಾಡಿಕೊಳ್ಳುತ್ತಿದ್ದೆ. ದತ್ತ ಪ್ರಭುಗಳು, ಸ್ಮರಣ ಮಾತ್ರದಲ್ಲೇ ಪ್ರಸನ್ನರಾಗುವರೆಂದು ನಾನು ಕೇಳಿದ್ದೆನು. ಅದೃಷ್ಟವಶಾತ್ತು ಔದುಂಬರ ವೃಕ್ಷದ ಕೆಳಗಿರಲೂ, ಶ್ರೀದತ್ತರ ಕೃಪಾಶ್ರಯದ ಛಾಯೆಯಲ್ಲಿದ್ದ ಭಾವನೆ ಬಂದಿತು!

ನನ್ನ ದತ್ತ ನಾಮಸ್ಮರಣೆಯನ್ನು ತನ್ಮಯದಿಂದ ಕೇಳುತ್ತಾ ಅತ್ತ ಹೋಗುತ್ತಿದ್ದ ಒಬ್ಬ ದಾರಿಹೋಕ ಎದುರಿನ ನೇರಳೇ ಮರದ ನೆರಳಿನಲ್ಲಿ ನಿಂತ. ಹೆದರಿದ ನಾನು, ''ಎಲೈ, ನೀನ್ಯಾರು? ಮರ್ಯಾದೆಯಿಂದ ಹೊರಡು! ಇಲ್ಲದಿದ್ದರೇ ಇಲ್ಲಿನ ಕಲ್ಲುಬಂಡೆಯಿಂದ ಹೊಡದು ನಿನ್ನನ್ನು ಇಲ್ಲ ಎನ್ನಿಸುತ್ತೇನೆ. ಇದೀಗಲೇ ಒಬ್ಬ ಕಳ್ಳ ಮಾಂತ್ರಿಕನನ್ನು ಹತ್ಯೆ ಮಾಡಿದ್ದೇನೆ'' ಎಂದೆನು.

ಅದಕ್ಕೆ ಆ ನೂತನ ಮನುಷ್ಯ, ಕೈ ಮುಗಿದು, ''ತಾಯಿ! ನಾನು ಅಗಸ ಕುಲಸ್ಥನಾದ ರವಿದಾಸನೆಂಬುವ ಶ್ರೀದತ್ತ ಭಕ್ತ, ಕುರುವಪುರ ನನ್ನ ಸ್ವಗ್ರಾಮ. **ಶ್ರೀಗುರು ದತ್ತರು, ಭೂಲೋಕ ಪಾವನ ಗೊಳಿಸಲೂ, ಶ್ರೀಪಾದ ಶ್ರೀವಲ್ಲಭ ರೂಪದಲ್ಲಿ ಕುರುವಪುರದಂದು ಬೆಳಗುತ್ತಿದ್ದಾರೆ. ಎಷ್ಟು ದೂರದಲ್ಲಿರುವ ದತ್ತ ಭಕ್ತರಿಗಾದರೂ, ಅವರು ಈ ಭೂಲೋಕದಲ್ಲಿ ಅವತರಿಸಿದ್ದ ಶುಭವಾರ್ತೆಯನ್ನು ಯಾವುದೋ ಒಂದು ಲೀಲೆಯ ಮೂಲಕ ತಿಳಿಸುತ್ತಿದ್ದಾರೆ. ಇದು ನನ್ನ ಅನುಭವಕ್ಕೂ ಬಂದಿದೆ!** ನಾನು ಸದ್ಯಕ್ಕೆ

ಕುರುವಪುರಕ್ಕೆ ಹೋಗುತ್ತಿದ್ದೇನೆ. ತಮಗೆ ಒಪ್ಪಿಗೆ ಇದ್ದರೇ ನನ್ನ ಜೊತೆ ಬರಬಹುದು. ಕುರುವಪುರ ಹತ್ತಿರದಲ್ಲೇ ಇದೆ. ಇಲ್ಲಿನ ನಮ್ಮ ಬಳಗದ ಮನೆಗೆ ಹೋಗಿ, ನಂತರ ಕುರುವಪುರಕ್ಕೆ ಹೋಗುವೆನು'' ಎಂದು ನುಡಿದನು.

ಆಗ ನಾನು, ''ನಿನ್ನ ಮಾತನ್ನು ನಂಬಲಾರೆ. ನೀನು ಹೇಳುವ ಆ ಶ್ರೀಪಾದ ಶ್ರೀವಲ್ಲಭರು ಯಾರಾಗಿದ್ದರೂ ಸಹಾ ನನಗೆ ಬೇಕಿಲ್ಲ. ಅವರು ಶ್ರೀದತ್ತ ಅವತಾರಿ ಆಗಿದ್ದಲ್ಲಿ ಅವರೇ ಈ ದೀನಳನ್ನು ತಮ್ಮ ಚರಣಗಳತ್ತ ಆಕರ್ಷಿಸಿ, ರಕ್ಷಿಸುವರು. ಅವರು ಶ್ರೀದತ್ತರೇ ಎಂದು ಸಾಬೀತು ಮಾಡಿಕೊಳ್ಳುವ ಬಾಧ್ಯತೆ ಶ್ರೀಪಾದರ ಮೇಲೆ ಇದೆ. ನಾನು ಅವರ ನಾಮಸ್ಮರಣೆ ಸಹಾ ಮಾಡಲ್ಲ. ಶ್ರೀದತ್ತ ನಾಮವೇ ನನ್ನ ಉಸಿರು. ಏನಾಗುವುದೋ ಮುಂದೆ ನೋಡೋಣ. ನೀನು ತಕ್ಷಣ ಇಲ್ಲಿಂದ ಹೊರಟು ಹೋದರೇ ನಿನ್ನ ಕ್ಷೇಮಕ್ಕೆ ಒಳ್ಳೆಯದು. ಇಲ್ಲಾಂದರೇ ನನ್ನಿಂದ ನಿನಗೆ ಪ್ರಮಾದ'' ಎಂದೆನು.

ಆತ ಮಾರುಮಾತಾಡದೇ ''ದಿಗಂಬರಾ, ದಿಗಂಬರಾ ಶ್ರೀಪಾದ ಶ್ರೀವಲ್ಲಭ ದಿಗಂಬರಾ! ಎಂದು ಹಾಡುತ್ತಾ ಹೊರಟು ಹೋದನು. ನಂತರ ಒಂದು ಗುಡ್ಡದಮೇಲೆ ಪದ್ಮಾಸನ ಸ್ಥಿತಳಾಗಿ ಧ್ಯಾನದಲ್ಲಿದ್ದರೇ ಈ ದುಷ್ಟರು ಕೊಟ್ಟ ತೊಂದರೆಯಿಂದ ನೀವು ದೊಡ್ಡ ಮನಸ್ಸು ಮಾಡಿ ನನ್ನನ್ನು ರಕ್ಷಿಸಿದಿರಿ'' ಎಂದು ತನ್ನ ವೃತ್ತಾಂತ ವಿವರಿಸಿದಳು.

ಆಗ ನಾನು, **"ತಾಯಿ! ಶ್ರೀಪಾದರ ದಯೆ ಇದ್ದ ಕಾರಣಕ್ಕೆ ನೀನು ರಕ್ಷಿಸಲ್ಪಟ್ಟೆ. ಅವರು ಅಂತರ್ಯಾಮಿಯಾಗಿ, ಇರದಂತಹಾ ದೇಶವೂ ಇಲ್ಲ, ಅವರು ತಿಳಿಯದ ಕಾಲವು ಸಹಾ ಸೃಷ್ಟಿಯಲ್ಲೇ ಇಲ್ಲ.** ಕಾರ್ಯಕಾರಣ ಸಂಬಂಧಗಳಿಂದ ಸೃಷ್ಟಿಯಲ್ಲಿ ವಿವಿಧ ಪ್ರದೇಶದಲ್ಲಿ, ವಿವಿಧ ಕಾಲಗಳಲ್ಲಿ ವಿವಿಧ ಘಟನೆಗಳು ನಡೆಯುತ್ತಿರುವವು. ಎಲ್ಲಾ ಕಾರ್ಯಗಳಿಗೂ ಅವರೇ ಮಹಾಕಾರಣ. ತರಾವರಿ ಸ್ಥಿತಿಗಳಲ್ಲಿರುವ ಜೀವಿಗಳಿಗೆ ಅವರವರ ಪರಿಣಾಮ ಕಾರಣ, ವಿವಿಧ ದೇಶಗಳಲ್ಲಿ ತರಾವರಿ ಘಟನೆಗಳು ನಡೆಯುತ್ತಿರುವವು. ಕಾರಣವಿಲ್ಲದ ಕಾರ್ಯಸೃಷ್ಟಿ ಎಲ್ಲೂ ಇರೋಲ್ಲ. ಶ್ರೀಪಾದರು ನಿರ್ಗುಣರೋ, ಸದ್ಗುಣರೋ, ನಿರಾಕಾರರೋ, ಸಾಕಾರರೋ ಅಥವಾ ಇಂತಹ ಸ್ಥಿತಿಗಳಿಗೂ ಮೀರಿದವರೋ ಸಹಾ ಯಾರಿಗೂ ಗೊತ್ತಿಲ್ಲ. ಅವರ ಬಗ್ಗೆ ಕೇವಲ ಅವರಿಗೇ ಅರಿವು. **ನಾವು ಶ್ರೀಪಾದ ಶ್ರೀವಲ್ಲಭರ ನಾಮಸ್ಮರಣೆ ಮಾಡಿಕೊಳ್ಳುತ್ತಿದ್ದರೇ ಅವರ ಅನುಗ್ರಹ ತಪ್ಪದೇ ಸಿಗುವುದು. ಎಲ್ಲಾ ಕಷ್ಟನಷ್ಟಗಳಿಂದ ವಿಮುಕ್ತಿ ಹೊಂದುತ್ತೇವೆ"** ಎಂದು ತಿಳಿಸಿದೆನು. ನಂತರ ಆ ಬ್ರಾಹ್ಮಣರ ಸೋದರರ ಜೊತೆ ಮತ್ತು ಸುಶೀಲ ಎಂದು ಕೂಗಲ್ಪಡುವ ಆ ಯುವತಿಯ ಜೊತೆ ಕುರುಂಗಡ್ಡೆದ ಕಡೆ ಪ್ರಯಾಣ ಮುಂದುವರಿಸಿದೆನು. **ನಾವೆಲ್ಲಾ ಶ್ರೀದತ್ತ ನಾಮಸ್ಮರಣೆ, ಶ್ರೀಪಾದ ಶ್ರೀವಲ್ಲಭ ನಾಮಸ್ಮರಣೆ ಮಾಡುತ್ತಾ ಒಂದು ಭಜನಾಮಂಡಲಿಯಂತೆ ಕಾಣುತ್ತಿದ್ದೆವು.** ದಾರಿಯಲ್ಲಿ ಶ್ರೀ ನಾಮಾನಂದರೆಂಬುವ ಓರ್ವ ಮಹಾತ್ಮನ ಆಶ್ರಮ ಸೇರಿಕೊಂಡೆವು.

## ಶ್ರೀದತ್ತನು ಚಂಡಾಲ ವೇಷದಲ್ಲಿ ಬಂದು ನಾಮಾನಂದನನ್ನು ಅನುಗ್ರಹಿಸುವುದು

ಶ್ರೀ ನಾಮಾನಂದರು ತ್ರಿಕಾಲ ಜ್ಞಾನಿಗಳೆಂದು ತಿಳಿದುಕೊಂಡೆವು. ಅವರು ನಮ್ಮನ್ನು ಸಾದರವಾಗಿ ಆಹ್ವಾನಿಸಿದರು. ಹೀಗೆ ಹೇಳತೊಡಗಿದರು, ''ನನ್ನ ತಂದೆ ಮಾಯಣಾಚಾರ್ಯರು. ನಾನು ಸಾಯನಾಚಾರ್ಯ. ಭರಧ್ವಾಜ ಗೋತ್ರ, ಶ್ರೀವೈಷ್ಣವರು. ನಾನು ಸನ್ಯಾಸ ದೀಕ್ಷೆ ಪಡೆದ ಮೇಲೆ ನಾಮಾನಂದನಾಗಿ ವ್ಯವಹರಿಸಲ್ಪಡುತ್ತಿದ್ದೇನೆ. ನಾನು ಸಂಪೂರ್ಣ ವೈರಾಗ್ಯದಿಂದ ಉತ್ತರ ಭಾರತದ

ಪುಣ್ಯಕ್ಷೇತ್ರಗಳು, ಸಿದ್ಧಕ್ಷೇತ್ರಗಳೂ ದರ್ಶಿಸಿ, ನನ್ನನ್ನುದ್ಧಾರ ಮಾಡುವ ಗುರುವರ್ಯರ ಅನ್ವೇಷಣೆಯಲ್ಲಿ ಪೀಠಾಪುರ ಸೇರಿದೆನು. ಶ್ರೀವೈಷ್ಣವನಾದ ಕಾರಣ ಶಿವಾರಾಧನೆ ಒಪ್ಪಿಗೆ ಇಲ್ಲ. ಮಡಿ ಆಚಾರಗಳು ನಮಗೆ ಅಧಿಕ. ಕುಂತೀಮಾಧವ ದರ್ಶನದ ನಂತರ ಹೊರಗೆ ಛಂಡಾಲನ್ನೊಬ್ಬನನ್ನು ಕಂಡೆನು. ಅದೇ ದುರ್ಭರ. ಆತ ಮೆಲ್ಲಟ್ಟು, "ನಾಮಾನಂದ! ನನಗೆ ಗುರುದಕ್ಷಿಣೆ ಸಮರ್ಪಿಸಿ, ಇಲ್ಲಿಂದ ಕದಲು." ಎಂದು ಗದರಿದನು! ನಾನು ಗಾಭರಿಗೊಂಡೆನು. ಆ ಊರಿನ ಮಧ್ಯದಲ್ಲಿ ಜನ ಈ ವಿಚಿತ್ರವನ್ನು ವೀಕ್ಷಿಸುತ್ತಿದ್ದರು. ಒಬ್ಬ ಛಂಡಾಲ, ಶ್ರೀ ವೈಷ್ಣವ ಬ್ರಾಹ್ಮಣೋತ್ತಮನನ್ನು ಗುರುದಕ್ಷಿಣೆ ಕೊಡು ಎಂದು ಗದರುವುದು, ಕಲಿ ವಿಪರೀತವೇ ಎಂದರು ಜನರು. ಇನ್ನು ಕೆಲವರು, 'ಇವನ್ಯಾರೋ ಕುಡಿದು ಬಂದು ವೈಷ್ಣವೋತ್ತಮನ ಮೇಲೆ ದೌರ್ಜನ್ಯ ಮಾಡುತ್ತಿದ್ದಾನೆ ಎಂದುಕೊಂಡರು. ಆಗ ನಾನು, "ಎಲೈ ನೀನ್ಯಾರೋ ನನಗೆ ಗೊತ್ತಿಲ್ಲ. ಆದರೂ, ನಾನು ವೈಷ್ಣವ ಬ್ರಾಹ್ಮಣ, ನೀನು ಛಂಡಾಲ. ಇನ್ನು, ನನ್ನ ಹೆಸರು 'ನಾಮಾನಂದ' ಅಲ್ಲ. ನೀನು ದೌರ್ಜನ್ಯದಿಂದ ಗುರುದಕ್ಷಿಣೆ ಕೇಳುವುದು ಸರಿ ಇಲ್ಲ" ಎಂದೆನು. ಅದಕ್ಕೂ ಮೀರಿ ಹೆಚ್ಚಿಗೆ ಮಾತನಾಡದೇ ಹೋದೆನು. ಅವನ ಕಣ್ಣುಗಳು ಉರಿಯುವ ಕೆಂಡದಂತೆ ಕೆಂಪಾಗಿದ್ದವು. ಮುಖಲಕ್ಷಣಗಳು, ಎಂತಹವರಿಗಾದರೂ ಹೆದರಿಕೆ ಹುಟ್ಟಿಸುವಂತೆ ಇದ್ದವು. ನನ್ನ ಈ ಶಾಂತ ಮಾತುಗಳಿಗೆ, ಎಷ್ಟು ಮಾತ್ರವೂ ಸೋಲದೆ, "ನೀನು ನನ್ನನ್ನು ಅರಿಯನೆಂದು ಸುಳ್ಳು ಹೇಳುತ್ತಿದ್ದೀಯ. ನನ್ನನ್ನು ಉದ್ಧರಿಸಬಲ್ಲ ಸದ್ಗುರು ಎಲ್ಲಿ ಲಭಿಸುವುರೋ ಎಂದು ಎಲ್ಲಾ ಗೋತ್ರದವರನ್ನೂ ವಿಚಾರಿಸುತ್ತಾ ದೇಶಾದ್ಯಂತ ಹುಚ್ಚುನಾಯಿಯಂತೆ ಸುತ್ತುತ್ತಿದ್ದೀಯ! ಬ್ರಾಹ್ಮಣ ಕುಲಜಾತನೆಂದು ಅಹಂಕಾರದಿಂದ ಸತ್ಯವನ್ನು ಕಾಣದೇ ಹೋಗಿರುವೆ. ನಾನೇ ನಿನ್ನ ಸದ್ಗುರು. ನಾನು ನಿನಗೆ 'ನಾಮಾನಂದ'ನೆಂದು ಸನ್ಯಾಸ ನಾಮ ನೀಡುತ್ತಿದ್ದೇನೆ. ಮರ್ಯಾದೆಯಾಗಿ ನಿನ್ನ ಬಳಿ ಇರುವ ಮೊತ್ತವೆಲ್ಲಾ ನನಗೆ ಗುರುದಕ್ಷಿಣೆಯಾಗಿ ಈ ಎಲ್ಲರ ಸಮಕ್ಷದಲ್ಲಿ ನೀಡಿ, ಸಾಷ್ಟಾಂಗ ನಮಸ್ಕಾರದಿಂದ ನನ್ನನ್ನು ಗುರುವಾಗಿ ಅಂಗೀಕರಿಸಿದೆಯೋ ಸರಿ, ಇಲ್ಲದ್ದಲ್ಲಿ ಈ ಖಡ್ಗದಿಂದ ನಿನ್ನ ಶರೀರ ತುಂಡು ತುಂಡಾಗುವುದು. ನಿನ್ನ ರಕ್ತ ಸವಿಯುವೆನು. ತಲೆಯನ್ನು ಬಾರಿಬಾರಿ ಚುಚ್ಚುವೆನು. ಅತ್ತ ಪ್ರಾಣವನ್ನೂ ತೆಗಿಯದೇ ಶರೀರದ ಎಲ್ಲಾ ಭಾಗಗಳೂ ನೋವು ಕೊಡಲು ನರಕವನ್ನನುಭವಿಸುವೆ. ನನ್ನ ಸಂಗಡ ವ್ಯವಹಾರ, ಕಠಿಣವಾಗಿರುವುದು. ಹೌದೆಂದರೇ ಹೌದು, ಇಲ್ಲವೆಂದರೇ ಇಲ್ಲ. ಎರಡೇ ಮಾತು! ನೀನೀಗ 3 ಕೋಟಿ ದೇವತೆಗಳನ್ನು ಪ್ರಾರ್ಥಿಸಿದರೂ ಯಾರೂ ನನ್ನಿಂದ ನಿನ್ನನ್ನು ಕಾಪಾಡಲಾರರು" ಎಂದು ಕಠಿಣವಾಗಿ ಹೇಳಿದನು. ಅಷ್ಟೇ ಅಲ್ಲ. ಅವನು ಕತ್ತಿಯನ್ನು ತೆಗೆದು ನನ್ನನ್ನು ಖಂಡಿಸಲು ಮುಂದೆ ಬಂದನು.

ಹಾಗೆ, ವಿಧಿ ಇಲ್ಲದ ಸಂದರ್ಭದಲ್ಲಿ, ಅವನ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದೆ. ನನ್ನ ಬಳಿ ಇದ್ದ ಮೊತ್ತವನ್ನೆಲ್ಲಾ ಗುರುದಕ್ಷಿಣೆಯಾಗಿ ಸಮರ್ಪಿಸಿದೆ. ತಕ್ಷಣವೇ ಆಶ್ಚರ್ಯಚಕಿತನಾದೆನು. ದೈವ ವರ್ಣನೆ ಹೊಗಳಿಕೆಗಳು ಕಲ್ಪಿತವಾಗಿ ನನ್ನ ಮನಸ್ಸಿಗೆ ಅನಿಸಿದರೂ, ಆ ಛಂಡಾಲನ ಮುಖ ಮೋಹನರೂಪವಾಗಿತ್ತು! ದಿವ್ಯಮಂಗಳ ರೂಪವೇ ಕಂಡುಬಂದಿತು. ಆ ನೇತ್ರಗಳು ಕರುಣಾ, ಪ್ರೇಮ ರಸವನ್ನು ಚಿಮ್ಮುತ್ತಿದ್ದವು! ಆ ದಿವ್ಯಮಂಗಳ ಮೂರ್ತಿ, **"ನಾನು ಶ್ರೀದತ್ತನು, ಈಗ ಶ್ರೀಪಾದ ಶ್ರೀವಲ್ಲಭನಾಗಿ ಪೀಠಿಕಾಪುರದಲ್ಲವತರಿಸಿರುವೆ. ನೀನು ನನ್ನವ, ನಾನು ನಿನ್ನವ, ನಾನು ನಿನ್ನ ಸೊತ್ತು, ನೀನು ನನ್ನ ಸೊತ್ತು. ನಮ್ಮಿಬ್ಬರನ್ನೂ ಸೇರಿಸಿರುವುದೇ ಸತ್ ಚಿತ್ ಆನಂದ,** ನೀನಿಂದಿನಿಂದಾ ನಾಮಾನಂದನಾಗಿ, ಧರ್ಮಪ್ರಚಾರ ಮಾಡುತ್ತಾ, ಚಿರಶಾಂತಿ ಹೊಂದುವೆ. ಕೊನೆಯಲ್ಲಿ ನನ್ನ ಲೋಕಕ್ಕೆ ಬರಬಲ್ಲೆ" ಎಂದು ಆಶೀರ್ವದಿಸಿದರು.

## ಶ್ರೀ ನಾಮಾನಂದನಿಗೆ ಶ್ರೀಪಾದರು ಸ್ವಹಸ್ತಗಳಿಂದ ಊಟ ಕೊಡುವುದು

ಸ್ವಾಮಿ! ಈ ಪ್ರಕಾರ ನಾನು, ನಾಮಾನಂದನೆಂಬುವ ಸನ್ಯಾಸಿ ಆದೆನು. ಪೀಠಿಕಾಪುರದಲ್ಲಿ ಶ್ರೀಪಾದ ಶ್ರೀವಲ್ಲಭರ ದರ್ಶನ ಮಾಡಲೆಣಿಸಿದೆ. ನನಗೆ ಹಸಿವಾಗುತ್ತಿತ್ತು. ಯಾವ ಮನೆಯಲ್ಲೂ ಅನ್ನ ಸಿಗಲಿಲ್ಲ. ಜನರು ನನ್ನ ಬಗ್ಗೆ ವಿಚಿತ್ರವಾಗಿ, ''ಇವನೊಬ್ಬ ಹುಚ್ಚ. ಛಂಡಾಲನೊಬ್ಬ ಕುಡಿದುಬಂದು ಇವರಿಂದ ಗುರುದಕ್ಷಿಣೆ ಎಂದು ವಸೂಲು ಮಾಡಿದ್ದಾನೆ. ಬ್ರಾಹ್ಮಣನಾದರೂ ಛಂಡಾಲ ಗುರುವಿದ್ದಲ್ಲಿ ಈತನೂ ಅಸ್ಪೃಶ್ಯ. ಆದ್ದರಿಂದ ಇವನಿಗೆ ಭಿಕ್ಷೆ ನೀಡುವುದು ಅಧರ್ಮ'' ಎಂದು ಹೇಳಿಕೊಳ್ಳ ತೊಡಗಿದರು. ಈ ಕಾರಣ ಪೀಠಿಕಾಪುರದ ಬ್ರಾಹ್ಮಣ್ಯ, ನಾನು ಭಿಕ್ಷೆಗೆ ಅನರ್ಹನೆಂದು ನಿರ್ಧರಿಸಿದರು! ನನ್ನ ಅರಿವಿಲ್ಲದೇ ನಾನು ಶ್ರೀ ಅಪ್ಪಲರಾಜು ಶರ್ಮರ ಮನೆ ಸೇರಿ, 'ಭವತಿ ಭಿಕ್ಷಾಂದೇಹಿ' ಎಂದು ಕೂಗಲು ಸಹಾ ಶಕ್ತಿ ಇಲ್ಲದೇ ನಿಂತೆ. ಅಷ್ಟರಲ್ಲಿ, ಶ್ರೀಪಾದರೇ ಬಾಗಿಲು ತೆಗೆದುಕೊಂಡು, ಅನ್ನದ ತಟ್ಟೆಯಿಂದ ಎದುರಾದರು. ಅವರ ಮನೆಯ ಜಗುಲಿ ಮೇಲೆ ಕೂರಿಸಿಕೊಂಡು, ಅವರ ದಿವ್ಯ ಹಸ್ತಗಳಿಂದ ನನಗೆ ಅನ್ನವನ್ನು ತಿನ್ನಿಸಿದರು. ತಮ್ಮ ಅಮೃತ ಹಸ್ತಗಳಿಂದಲೇ ನನ್ನ ಕೈ ಮತ್ತು ಬಾಯಿಯನ್ನು ಶುಭ್ರ ಮಾಡಿದರು! ಅನಂತ ಶಕ್ತಿಯುಳ್ಳ ತಮ್ಮ ಬಲಗೈಯನ್ನು ನನ್ನ ತಲೆಯ ಮೇಲಿಟ್ಟು, ''ನಿನಗೆ ಎಲ್ಲವೂ ಸಿದ್ಧಪಡಿಸಲಾಗುವುದು. ಯಾವುದಿಲ್ಲವೆಂದೂ ಪರದಾಡಬೇಕಿಲ್ಲ. **ಬಂಡೆಯ ಕೆಳಗಿರುವ ಕಪ್ಪೆಗೆ ಸಹಾ ಆಹಾರ ನೀಡಬಲ್ಲ ಪ್ರಭುಗಳು, ನಿನ್ನನ್ನು ಪೋಷಿಸಲಾರರಾ? ನೀನೆಲ್ಲಿದ್ದರೂ, ನಾನು ನಿನ್ನ ಹಿಂದೆಯೇ ಇದ್ದು ಕಾಪಾಡುವೆನು. ಕಾಣದೇ, ನಿನ್ನ ಜೊತೆ ಜೊತೆಯಲ್ಲೇ ಓಡಾಡುವೆನು. ಕಣ್ಣು ರೆಪ್ಪೆಯಂತೇ ಕಾಪಾಡುವೆನು"** ಎಂದು ಅವರ ಅಭಯ ನುಡಿಗಳಿಂದ ನನ್ನನ್ನು ಬೀಳ್ಕೊಟ್ಟರು. ಅಂದಿನಿಂದ ನಾನು ಸನ್ಯಾಸಿ ಆಗಿ ನನ್ನ ಇಚ್ಛೆ ಬಂದಂತೆ ತಿರುಗಾಡುತ್ತಿದ್ದೀನಿ. ಕಾಣದ ಅವರ ದಿವ್ಯಹಸ್ತ ನನ್ನನ್ನು ಸದಾ ಕಾಪಾಡುತ್ತಿದೆ.

## ನಾಲ್ಕು ವಿಧವಾದ ಜೀವನ್ಮುಕ್ತರು

ನಾನು, ''ಸ್ವಾಮಿ! ಶ್ರೀದತ್ತರನ್ನು ಆರಾಧಿಸಿದರೆ ಮೋಕ್ಷ ಶೀಘ್ರವಾಗಿ ಲಭಿಸುವುದೆಂದು ಕೇಳಿದ್ದೆ. ಅದಕ್ಕೆ ಏನಾದರೂ ಪ್ರತ್ಯೇಕ ಆರಾಧನೆಯ ಕ್ರಮವಿದೆಯೇ? ಪ್ರತ್ಯೇಕ ಮಂತ್ರಪಠಣೆ ಉಂಟಾ? ದಯವಿಟ್ಟು ತಿಳಿಸಿ, ಧನ್ಯಗೊಳಿಸಿ'' ಎಂದೆನು.

ಪ್ರಸನ್ನರಾದ ಶ್ರೀ ನಾಮಾನಂದರು, ''ಮಕ್ಕಳೇ! ಮೋಹ ನಾಶವೇ ಮೋಕ್ಷ. ಶರೀರ ನಾಶದ ನಂತರವೇ ಮೋಕ್ಷ ಪ್ರಾಪ್ತವಾಗಬೇಕೆಂಬ ನಿಯಮವಿಲ್ಲ! ಜೀವನ ಕಳೆಯುತ್ತಾನೇ, ಶರೀರಕ್ಕೆ ಸಂಬಂಧಪಟ್ಟ ಪ್ರಾರಬ್ಧವನ್ನು ಶರೀರ ಅನುಭವಿಸುತ್ತಾ ಇರಬಹುದು. ಆದರೆ ಜೀವಾತ್ಮಮುಕ್ತ ಆಗಿರಲು ಸಾಧ್ಯ. ಅಂತವರನ್ನೇ 'ಜೀವನ್ಮುಕ್ತ'ರೆಂದು ಕರೆಯಬಹುದು. ಅಧಿಕ ಪುಣ್ಯವಿದ್ದು ತನ್ನ ಇಷ್ಟ ದೈವದ ಲೋಕದಲ್ಲಿ ನಿವಾಸಿಸಿದರೆ 'ಸಾಲೋಕ್ಯ ಮುಕ್ತಿ' ಆಗುವುದು. ಅಧಿಕವಾದ ಪುಣ್ಯಗಳಿಸಿದವರಿಗೆ ಇಷ್ಟ ದೈವದ ಸಾಮೀಪ್ಯದಲ್ಲೇ ವಾಸಿಸುವ ಭಾಗ್ಯ ಪ್ರಾಪ್ತಿಯಾಗುವುದು. ಅದು 'ಸಾಮೀಪ್ಯ ಮುಕ್ತಿ.' ಅದಕ್ಕೂ ಮೀರಿ ಪುಣ್ಯರಾಶಿ ಇದ್ದಲ್ಲಿ ತನ್ನ ಇಷ್ಟದೈವದ ಸ್ವರೂಪವನ್ನೇ ಹೊಂದುವರು. ಅದುವೇ 'ಸಾರೂಪ್ಯ ಮುಕ್ತಿ.' ಅದಕ್ಕಿಂತ ಹೆಚ್ಚು ಪುಣ್ಯಗಳಿಸಿದರೇ ತನ್ನ ಇಷ್ಟ ದೇವತೆಯ ಚೈತನ್ಯದಲ್ಲಿ 'ಸಾಯುಜ್ಯವ'ನ್ನು ಹೊಂದುವರು. ಒಂದು ಆಧ್ಯಾತ್ಮಿಕ ಸ್ಥಿತಿ ಪಡೆದ ದತ್ತ ಭಕ್ತರು, ಇಹಲೋಕದಲ್ಲಿರುವಾಗಲೇ 'ಸಾಲೋಕ್ಯ ಮುಕ್ತಿ' ಅನುಭವಿಸುವರು. ಆದರೇ ಶರೀರ ಮಾತ್ರ ಪ್ರಾರಬ್ಧ ಅನುಭವಿಸುತ್ತಲೇ ಇರುವುದು! ಅಂತವರ ಮನಸ್ಸು ಶ್ರೀದತ್ತನ ಮೇಲೆ ಮಗ್ನವಾಗಿ, ಸೃಷ್ಟಿಯ ಧರ್ಮಗಳನ್ನು, ಧರ್ಮ ಸೂಕ್ಷ್ಮಗಳನ್ನು, ಸೃಷ್ಟಿ ತರುವ ಚಿತ್ರವಿಚಿತ್ರ ವಿಧಾನಗಳನ್ನು, ತನ್ನ ಅಂತರ್‌ದೃಷ್ಟಿಯಿಂದ

ಪರಿಶೀಲಿಸುತ್ತಾ ಆನಂದಿಸುತ್ತಿರುವುದು. **ಸ್ವಾರ್ಥವಿಲ್ಲದ ಯೋಗೀಶ್ವರರ ದಿವ್ಯಶಕ್ತಿಗಳೆಲ್ಲವೂ ಅವರ ಪ್ರಮೇಯವಿಲ್ಲದೆಯೇ ವಿಶ್ವಕಲ್ಯಾಣಕ್ಕೆ ಉಪಯುಕ್ತವಾಗುವುದು.** ಇಹಲೋಕದಲ್ಲಿರುತ್ತಾ 'ಸಾಮೀಪ್ಯ ಮುಕ್ತಿ' ಹೊಂದುವವರು ಇದ್ದಾರೆ, ಅಂತವರು ಶ್ರೀದತ್ತನು ಮಾಡುವ ದಿವ್ಯಲೀಲೆಗಳನ್ನು ತಮ್ಮ ಅಂತರದೃಷ್ಟಿಯಿಂದ ಸಾಲೋಕ್ಯ ಭಕ್ತರಿಗಿಂತಾ ಪರಿಪೂರ್ಣವಾಗಿ ತಿಳಿದುಕೊಳ್ಳುವರು. ಅವರು ಹೊಂದುವ ಆನಂದ, ಮತ್ತಷ್ಟು ಅಧಿಕವಾಗಿರುವುದು. ಜೀವ ಶರೀರದಲ್ಲಿರುವಾಗ ಅನೇಕ ಗುಣಗಳಿಂದ, ವಾಸನೆಗಳಿಂದ, ಕೋರಿಕೆಗಳಿಂದ ಕೂಡಿರುವುದು. ಪರಿಣಾಮ ಹೊಂದುತ್ತಿರಲೂ, ಜೀವ ಹಾಯಾಗಿ ಹಗುರವಾಗುತ್ತಿದ್ದ ಹಾಗೆ ತಿಳಿಯುವುದು. ಇದು ಆನಂದವೂ ತರುವುದು. **ಸಾಯುಜ್ಯ ಹೊಂದಿದ ಶ್ರೀದತ್ತ ಭಕ್ತರಿಂದ ಶ್ರೀದತ್ತ ದಿವ್ಯಲೀಲೆಗಳು ಯಥೇಚ್ಛವಾಗಿ ಕಾಣುತ್ತಿರುವವು. ಶ್ರೀದತ್ತರಿಗೆ ಸಂಕಲ್ಪವಿರುವುದು. ಶ್ರೀದತ್ತನಲ್ಲಿ ಸಾಯುಜ್ಯ ಹೊಂದಿದ ಯೋಗಿಪುಂಗವರಿಗೆ ಸಂಕಲ್ಪವೆನ್ನುವುದೇ ಇರುವುದಿಲ್ಲ. ಆದರೇ ಅವರ ದರ್ಶನ, ಸ್ಪರ್ಶನ, ಸಂಭಾಷಣಾ ಅನುಗ್ರಹ ಲಭಿಸುವ ಪುಣ್ಯವಂತರಿಗೆ ಶ್ರೀದತ್ತರಿಂದ ಅ ಮಹಾಯೋಗಿಗಳ ಮೂಲಕ ಸದಾ ರಕ್ಷಣೆ ಲಭಿಸುತ್ತಿರುವುದು. ಇಹಲೋಕದ ಮಹದೈಶ್ವರ್ಯವಾಗಲಿ, ಪರಲೋಕ ಸಂಬಂಧಿತ ಮಹದೈಶ್ವರ್ಯವಾಗಲಿ, ಒಬ್ಬ ಶ್ರೀಪಾದ ಶ್ರೀವಲ್ಲಭರು ಮಾತ್ರವೇ ಕೊಡಬಲ್ಲರು. ಮಾನವರು ಅನೇಕ ದೇವತಾ ಸ್ವರೂಪಗಳನ್ನು ಆರಾಧಿಸುವರು. ಆಯಾ ದೇವತೆಗಳೆಲ್ಲಾ ಶ್ರೀಪಾದರ ದಿವ್ಯಾಂಶಗಳೇ. ಆಯಾ ದೇವತೆಗಳ ಮೂಲಕ, ಶ್ರೀಪಾದರೇ ಭಕ್ತರನ್ನು ಅನುಗ್ರಹಿಸುವರು"** ಎಂದು ತಿಳಿಸಿದರು.

## ಶ್ರೀದತ್ತಾರಾಧನೆಯ ವಿಶಿಷ್ಟತೆ

ಆಗ ನಾನು, "ಸ್ವಾಮಿ! ಹಾಗಾದರೇ ನಾವು ಅನೇಕ ರೂಪಗಳಲ್ಲಿರುವ ದೇವತೆಗಳನ್ನಾರಾಧಿಸಬೇಕೆ? ಇಲ್ಲ ಶ್ರೀಪಾದರನ್ನೇ ಆರಾಧಿಸಬೇಕೆ? ದೇವತೆಗಳೆಲ್ಲಾ ಶ್ರೀಪಾದರಿಂದ ಬೇರೆ ಎನ್ನುತ್ತಿದ್ದಿರಿ. ನನಗೆ ಈ ವಿಷಯ ಸ್ವಲ್ಪ ತಿಳಿಯುವ ಹಾಗೆ ವಿವರಿಸಿ" ಎಂದು ಅವರನ್ನು ಬೇಡಿದೆನು. ಅದಕ್ಕೆ ಶ್ರೀ ನಾಮಾನಂದರು ಪ್ರಸನ್ನರಾಗಿ, "ಒಂದು ಹೆಣ್ಣಿಗೆ ಮದುವೆ ಆಯಿತು, ಅತ್ತೆ ಮನೆ ತಲುಪಿದಳು. ಒಮ್ಮೆ ಆಕೆಯ ಅಣ್ಣ ನೋಡಲು ಹೋದರು. ತಂಗಿಯ ಅತ್ತೆ ಆತನೊಡನೆ, "ಸ್ವಾಮಿ! ನಿಮ್ಮ ತಂಗಿ ನಮ್ಮ ಮನೆಯಲ್ಲಿ ಎಷ್ಟೋ ವಿಧವಾದ ಕಳ್ಳತನಗಳನ್ನು ಮಾಡುತ್ತಿದ್ದಾಳೆ. ಹಾಲು, ಮೊಸರು, ಮಜ್ಜಿಗೆ, ತುಪ್ಪ ಕಳ್ಳತನದಲ್ಲಿ ಹೆಚ್ಚಾಗಿ ಸೇವಿಸುತ್ತಿದ್ದಾಳೆ. ಒಂದಾದರೇ ಪರವಾಗಿಲ್ಲ, ತರಾವರಿ ಕಳ್ಳತನಗಳು" ಎಂದು ಅತ್ತುಕೊಂಡರು. ಆಗ ಆ ಅಣ್ಣ, ತಂಗಿಯೊಡನೆ, "ಇಂದಿನಿಂದ ನಿನ್ನ ಈ ತರಹದ ಕಳ್ಳತನ ಬುದ್ಧಿ ಬಿಟ್ಟುಬಿಡು. ನೀನು ಸೇವಿಸುತ್ತಿರುವ ಹಾಲು, ಮಜ್ಜಿಗೆ, ಮೊಸರು, ತುಪ್ಪಗಳ ಸತ್ವವೆಲ್ಲಾ ಒಂದು ಹಾಲಿನಲ್ಲೇ ಇರುತ್ತೆ. ಏಕೀ ತರಾವರಿ ಕಳ್ಳತನ. ಒಂದು ಹಾಲನ್ನು ಅದೆಷ್ಟು ಬೇಕೋ ತೆಗೆದುಕೊ. ನಿಮ್ಮತ್ತೆಯಿಂದ ಮಾತು ಬರುವುದಿಲ್ಲ. ಅವರೇ ಹೇಳಿದರು ಒಂದಾದರೇ ಪರವಾಗಿಲ್ಲವಂತೆ! ಹಾಗೆಯೇ ಒಂದು ಶ್ರೀದತ್ತರನ್ನು ಆರಾಧಿಸಿದರೇ ಎಲ್ಲವೂ ಸಿಗುವುದು. ಜನ ಭಿನ್ನ ರುಚಿ ಉಳ್ಳವರಾದ್ದರಿಂದ, ಭಿನ್ನ ಭಿನ್ನ ದೇವತೆಗಳನ್ನು ಪೂಜಿಸುತ್ತಿದ್ದಾರೆ. ಶಿವಾರಾಧನೆ ಮಾಡಿದರೇ ಶ್ರೀ ವಿಷ್ಣು ಬರಲಾರ. ನಿಜ, ಹಾಗೆಯೇ ಶ್ರೀ ಮಹಾವಿಷ್ಣುವನ್ನು ಆರಾಧಿಸಿದರೇ ಶ್ರೀ ಶಿವಮಹೇಶ ಒಲಿಯಲಾರನು, ಆದರೇ ಅನುಗ್ರಹ ಒಂದೇ ವಿಧವಾಗಿರುವುದು. ಭಕ್ತ ರಕ್ಷಣೆ ಸಹಾ ಒಂದೇ ವಿಧವಾಗಿರುವುದು. ಸಗುಣ, ಸಾಕಾರ ಭಕ್ತಿಯಿಂದ ಮಾಡುವ ಕರ್ಮಗಳಿಗೆ ಫಲಿತ, ಆಯಾ ಕರ್ಮಗಳಿಗೆ ಅನುಗುಣವಾಗಿ ತಾನೇ ಇರಬೇಕು? ಅನೇಕ ಜನುಮಗಳಲ್ಲಿ ಹೊಂದಿದ ಪಾಪ, ಪುಣ್ಯರಾಶಿ, ಕ್ಷೀಣಿಸುವಾಗ, ಪುಣ್ಯಫಲ ಅತ್ಯಧಿಕವಾಗಿ

ಸೇರುತ್ತಿರಲು, ಶ್ರೀದತ್ತ ಭಕ್ತಿ ಹುಟ್ಟುವುದು. ಆದ್ದರಿಂದ ದತ್ತ ಭಕ್ತರಿಗೆ ಅಸಾಧ್ಯವೆಂಬುದೇ ಇಲ್ಲ. **ಬ್ರಹ್ಮನು ಹಣೆಯಲ್ಲಿ ಬರೆದದ್ದನ್ನು ಬದಲಾಯಿಸುವ ಶಕ್ತಿ, ಯಾವ ದೇವತೆಗೂ ಇಲ್ಲ. ಆದರೆ ಭಕ್ತನ ಆವೇದನೆಗೆ ಸ್ಪಂದಿಸಿ, ಶ್ರೀದತ್ತರು ಅಂತಹ ಭಕ್ತನ ಹಣೆ ಬರಹವನ್ನು ಬದಲಾಯಿಸಲೂ ಶ್ರೀ ಬ್ರಹ್ಮ ದೇವರನ್ನು ಸಹಾ ಆದೇಶಿಸಬಹುದು.** ಜೀವಿಗಳ ಶಾರೀರಕ, ಮಾನಸಿಕ, ಆಧ್ಯಾತ್ಮಿಕ ಸ್ಥಿತಿಗಳೆಲ್ಲವೂ ಅಂತಹ ಸ್ಥಿತಿಗಳಲ್ಲಿರಲು ಕಾರಣ ಶ್ರೀ ಮಹಾವಿಷ್ಣು. ತಕ್ಕ ಪರಿಪಕ್ವತೆ ಹೊಂದದೇ ಒಂದು ಬಾರಿ ಪ್ರಚಂಡವಾದ ಯೋಗಶಕ್ತಿ ಜೀವಿಯಲ್ಲಿ ಪ್ರಕಟಿತವಾದರೇ ಶರೀರವಾಗಲಿ, ಮನಸ್ಸಾಗಲಿ, ಬುದ್ಧಿಯಾಗಲಿ, ಆ ಶಕ್ತಿಯನ್ನು ತಡೆಯಲಾರದೇ ಅಗ್ನಿ ಜ್ವಾಲದಲ್ಲಿ, ಸಜೀವವಾಗಿ ದಹನ ಹೊಂದುತ್ತಿರುವ ಹಾಗೆ ಭಾವಿಸುವುದು. ಆದ್ದರಿಂದ ಆ ಜೀವ ಜೀವಯಾತ್ರೆಯನ್ನು ಸಕ್ರಮವಾಗಿ ಮಾಡಲು ಶ್ರೀ ವಿಷ್ಣು ಸಹಾಯ ಪಟ್ಟು, ಅವನ ಕರ್ಮಾನುಸಾರವಾಗಿ ತಕ್ಕ ಸ್ಥಿತಿಗಳಲ್ಲಿ ಇಡುವನು. ಶ್ರೀಕೃಷ್ಣರು, ಶ್ರೀದತ್ತರಿಂದ ಅಭಿನ್ನತ್ವದಲ್ಲಿ ಇರುವವರು. ಗೋವರ್ಧನ ಗಿರಿಯನ್ನುದ್ಧರಿಸಿದರು. ಇದು ಸಾಮಾನ್ಯರಿಗೆ ತಿಳಿದ ವಿಷಯ. ಆದರೇ ಗೋಪ, ಗೋಪಿಕೆಯರೆಲ್ಲರೂ ಹಿಂದಿನ ಜನುಮದಲ್ಲಿ ದೊಡ್ಡ ಋಷಿಗಳು. ಯೋಗಗ್ರಂಥರೇ ಗುಡ್ಡ ಪರ್ವತಗಳು. ಆ ಗ್ರಂಥಿಗಳು ವಿಭೇದವಾಗಿ ಪ್ರಚಂಡವಾದ ಯೋಗಶಕ್ತಿ ತಾಂಡವವಾಡುವಾಗ, ಜೀವಾತ್ಮ ಅತ್ಯಂತ ಹಗುರತೆಯನ್ನು ಅನುಭವಿಸುವುದು. ಆ ಸೂಕ್ಷ್ಮಸ್ಥಿತಿಯಿಂದಾ ಮಹತ್ತರವಾದ ಯೋಗಾನಂದ ಆಗುವುದು. ಅಂತಹ ಸೂಕ್ಷ್ಮಸ್ಥಿತಿಯನ್ನು ಹೊಂದಲು, ಅನೇಕ ಸಾವಿರ ಜನ್ಮಗಳು ತಾಳಬೇಕಾಗುತ್ತೆ. ಶ್ರೀ ಕೃಷ್ಣನು ತನ್ನ ಆಶ್ರಿತರ ಭಾರವೆಲ್ಲವನ್ನೂ ತಾನೇ ಹೊತ್ತು, ಅವರ ಗ್ರಂಥಿ ವಿಭೇದನವನ್ನು ಮಾಡಿ, ಅವರನ್ನು ಜೀವನ್ಮುಕ್ತರಾಗಿ ಮಾಡಿದನು. ಇದು ಆಧ್ಯಾತ್ಮಿಕ ರಹಸ್ಯ. ಭೌತಿಕ ದೃಷ್ಟಿಯಿಂದ ನೋಡುವವರಿಗೆ ಗೋವರ್ಧನ ಗಿರಿಯನ್ನೆತ್ತಿ, ತನ್ನವರನ್ನು ರಕ್ಷಿಸಿದ್ದು ಮಾತ್ರ ಅರ್ಥವಾಗುವುದು. ಆದ್ದರಿಂದ **ತನ್ನ ಭಕ್ತರ ವಿವಿಧ ಸ್ಥಿತಿಗಳನ್ನು ಬದಲಾಯಿಸಬೇಕೆಂದು ಶ್ರೀದತ್ತರು ಭಾವಿಸಿದರೇ, ಮಾಮೂಲಾಗಿ ನಡೆಯಬೇಕಿದ್ದ ಪರಿಣಾಮ ಕ್ರಮವನ್ನು, ಬೇಗನೇ ಮುಂಚಿತವಾಗಿಯೇ ಮುಗಿಸುವಂತೆ ಶ್ರೀ ಮಹಾವಿಷ್ಣುವನ್ನೇ ಆದೇಶಿಸಬಹುದು. ಈ ಪ್ರಕ್ರಿಯೆಯಲ್ಲಿ ತನ್ನ ಭಕ್ತನಿಗೆ, ಅನುಭವಕ್ಕೆ ಬರಬೇಕಾಗಿದ್ದ ಬಾಧೆಗಳೆನ್ನೆಲ್ಲಾ ಆ ಭಕ್ತನಿಂದಲೇ ಅಜ್ಞಾತ ಸ್ಥಿತಿಯಲ್ಲಿ ಅನುಭವಿಸುವಂತೆ ನೋಡಿಕೊಳ್ಳುವನು. ಹಾಗಿಲ್ಲದಿದ್ದರೇ ಆ ಬಾಧ್ಯತಾ ಭಾರವನ್ನೆಲ್ಲಾ ಶ್ರೀದತ್ತರು ತಮ್ಮ ಭುಜಗಳ ಮೇಲೆಯೇ ವಹಿಸಿಕೊಳ್ಳುವರು.** ಅವರು ಅಷ್ಟು ಕರುಣಾಮೂರ್ತಿ. ಶ್ರೀಪಾದ ಶ್ರೀವಲ್ಲಭರ ಅವತಾರದ ಮುಖ್ಯ ಗುರಿ, ತಮ್ಮೊಂದಿಗೆ ಸಾಯುಜ್ಯ ಸ್ಥಿತಿಯನ್ನು ಅನುಭವಿಸ ತಕ್ಕ ಯೋಗ್ಯರನ್ನು ಒಂದು ಲಕ್ಷ ಇಪ್ಪತ್ತೈದು ಸಾವಿರ ಜನರನ್ನು ತಯಾರು ಮಾಡುವುದು. ಎಲ್ಲಾ ಕರ್ಮಬಂಧಗಳ ಸ್ಪಂದನೆಗಳನ್ನು, ಲಯಮಾಡುವ ಸಂಕಲ್ಪವಿದ್ದಲ್ಲಿ, ಶ್ರೀದತ್ತರಲ್ಲಿನ ರುದ್ರಾಂಶೆ ವಿಜೃಂಭಿಸಿ, ಕೋಟಿಗಟ್ಟಲೇ ಜನುಮಗಳ ಹಿಂದಿನವಾದರೂ ಸರಿ, ಇಲ್ಲ ಮುಂಬರುವ ಜನುಮಗಳಿಗೆ ಸಂಬಂಧಪಟ್ಟಂತಹ ಕರ್ಮಬಂಧನಗಳಾದರೂ ಸರಿ ಧ್ವಂಸ ಮಾಡಿ, ಆ ಜೀವಕ್ಕೆ ಮೋಕ್ಷ ಕರುಣಿಸುವುದು. ಶ್ರೀಗಳಲ್ಲಿನ ಬ್ರಹ್ಮಾಂಶವಾಗಲಿ, ವಿಷ್ಣುವಾಂಶವಾಗಲಿ ಅಥವಾ ರುದ್ರಾಂಶವಾಗಲಿ ಹೊರಬಂದು ತಕ್ಕಂತೆ ತನ್ನ ಭಕ್ತನನ್ನು ಸಂರಕ್ಷಿಸುವುದು. ಇದೆಲ್ಲಾ ಅವರ ಇಚ್ಛಾನುಸಾರವೇ ಆದೀತು. ಅಂತಹ ಅವರ ಸಂಕಲ್ಪ ಸಿದ್ಧಿಸಲು ನಾವು ಭಕ್ತಿಮಾರ್ಗ ಪಾಲಿಸಬೇಕು. ಒಮ್ಮೆ **ಪೀಠಿಕಾಪುರದ ಶ್ರೀಪಾದರ ಆಶ್ರಿತನೊಬ್ಬನು ಕುದರೆ ಏರಲು ಹೋದಾಗ, ಅದು ಅವನನ್ನು ಬೀಳಿಸಿ, ತುಳಿದುಗಾಯ ಗೊಳಿಸಿತು. ರಕ್ತಭರಿತನಾದ ಆ ಭಕ್ತನ ಕಡೆ, ಶ್ರೀಪಾದರು ತಮ್ಮ ಅಭಯಹಸ್ತ ತೋರಿಸಿದ, ಕ್ಷಣದಲ್ಲೇ ಆ ಭಕ್ತನ ಗಾಯಗಳೆಲ್ಲವೂ ಮಾಯವಾದವು. ಶ್ರೀಪಾದರ ಮೇಲೆ ಎಳ್ಳಷ್ಟೂ ನಂಬಿಕೆ ಇಲ್ಲದ ಮತ್ತೊಬ್ಬನಿಗೆ**

**ಅಂದೇ 100 ವರಹಗಳಿದ್ದ ಪಾತ್ರೆಯೊಂದು ಲಭಿಸಿತು.** ಶ್ರೀ ವೆಂಕಟಪ್ಪಯ್ಯ ಶ್ರೇಷ್ಠಿ ಈ ವಿಷಯ ವಿವರಣೆ ಕೇಳಲು, **"ನನ್ನ ಭಕ್ತನಾದ ಇವನು ಕುದರೆ ಗಾಯಗಳಿಗೆ ಸಾಯಬೇಕಾದ ದಿನ ಅದು, ಇವನನ್ನು ರಕ್ಷಿಸಿ ಆಯುಸ್ಸನ್ನು 20 ವರುಷ ಬೆಳೆಸಿದ್ದೇನೆ. ಮತ್ತೊಬ್ಬನು ಮಹದೈಶ್ವರ್ಯ ಅಂದು ಅವನಿಗೆ ಸಿಗಬೇಕಿತ್ತು, ಆದರೇ ಅವನು ಭಕ್ತರನ್ನು ಅವಹೇಳನೇ ಮಾಡುತ್ತಿದ್ದ ಕಾರಣ, ಅವನಿಗೆ ಕೇವಲ 100 ವರಹಗಳು ಲಭಿಸುವಂತೆ ಮಾಡಿದ್ದೇನೆ. ನನ್ನ ಮೇಲೆ ಪೂರ್ತಿ ಭಕ್ತಿಯಿಂದ ನಂಬಿದವರಿಗೆ ನಾನೇ ದಾಸನಾಗುವೆನು. ನನ್ನನ್ನು ಅವನ ಹೃದಯಲ್ಲಿ ಬಂಧಿಸಿಕೊಂಡವನೇ ನನ್ನ ನಿಜವಾದ ಒಡೆಯ.** ತ್ರಿಲೋಕಾಧೀಶ್ವರ ಪರಮೇಶ್ವರ ಸಹಾ ಅಂತಹ ಭಕ್ತನ ದಾಸನಾಗಿರುವನು'' ಎಂಬುವ ಒಳ್ಳೆಯ ಸುದ್ದಿ ಮತ್ತು ಸಂದೇಶಗಳನ್ನು ಶ್ರೀಪಾದರು ತಿಳಿಸಿದರು.

ಶ್ರೀ ನಾಮಾನಂದರು ಈ ರೀತಿ ವಿವರಿಸಲು, ನಾವೆಲ್ಲಾ ಆನಂದಪರವಶರಾದೆವು. ಬ್ರಾಹ್ಮಣ ಸೋದರರು ತಾವು ಮಾಡಿದ ಪಾಪ ಕಾರ್ಯಗಳಿಗೆ ಪ್ರಾಯಶ್ಚಿತ್ತ ಮಾರ್ಗ ತಿಳಿಸಲು, ಶ್ರೀ ನಾಮಾನಂದರನ್ನು ಬೇಡಿದರು. ಆಗ ಅವರು, ''ತಾವೆಲ್ಲಾ ಒಪ್ಪತ್ತು ಊಟ ಮಾಡುತ್ತಾ ಮಂಡಲ ಕಾಲ ದೀಕ್ಷೆ ಪಾಲಿಸುವುದು. ಜಾಸ್ತಿ ಕಷ್ಟಪಟ್ಟು ಧನಾರ್ಜನೆ ಮಾಡಿಕೊಳ್ಳಿ. ಅಂತಹ ಅರ್ಜನೆಯಲ್ಲಿ ಉಳಿಸಿ, ಸದ್ಬ್ರಾಹ್ಮಣರಿಗೆ ಊಟೋಪಚಾರ ಮಾಡಿ, ಆಗ ಪಾಪ ನಶಿಸುವುದು. ಪಾಪ ನಶಿಸಿದ ಫಲಿತವಾಗಿ ಶ್ರೀಪಾದರ ದರ್ಶನ, ಸಾಕ್ಷಾತ್ತಾಗಿ ಅಥವಾ ಸ್ವಪ್ನದಲ್ಲಿ ಆಗಲಿ ಆಗುವುದು. ಮಂಡಲ ದೀಕ್ಷಾನಂತರ ಸಹಾ, ತಾವು ಸದಾಚಾರರಾಗಿರಬೇಕು. ಹಿಂದಿನ ಕೆಟ್ಟ ನಡತೆಗಳು ತಿಳಿಯದೇ ನಿಮ್ಮಲ್ಲಿ ತಲೆ ಎತ್ತಿದರೂ ಶ್ರೀಪಾದರು ಕೋಪಗೊಂಡು, ದ್ವಿಗುಣ ಶಿಕ್ಷೆಗೆ ಗುರಿಪಡಿಸುವರು'' ಎಂದರು.

## ಶ್ರೀ ಅನಘಾ ಸಮೇತ ಶ್ರೀ ದತ್ತಾತ್ರೇಯ ಆರಾಧನೆ ಪವಿತ್ರತೆ

ಸುಶೀಲೆ ಎಂಬುವ ಆ ಬ್ರಾಹ್ಮಣ ಮಹಿಳೆ, ತನಗೆ ಸಂಕಟಹರಣವಾಗುವ ಉಪಾಯ ತಿಳಿಸುವಂತೆ ಶ್ರೀ ನಾಮಾನಂದರನ್ನು ಬೇಡಿದಳು. ಪ್ರಸನ್ನ ಚಿತ್ತರಾದ ಶ್ರೀ ನಾಮಾನಂದರು, ''ಆತ್ಮ ನಿರಂತರಾಯವಾದದ್ದು. ಮನಸ್ಸೋ ಕ್ಷಣಕ್ಷಣಕ್ಕೂ ಅನೇಕ ಕೋಟಿಬಾರಿ ಸತ್ತು ಹುಟ್ಟುತ್ತದೆ. ಪತಿ ಪತ್ನಿಯರು ಸೇರುವ ಸಮಯದಲ್ಲಿ ಇಬ್ಬರಲ್ಲಿ ಒಬ್ಬರೂ ಇಲ್ಲ ಇಬ್ಬರೂ ಮಾನಸಿಕ ಚೈತನ್ಯ ಜೀವ ನಿರ್ಜೀವ ಸ್ಥಿತಿಗಳ ಮಧ್ಯೆ ಸಿಕ್ಕಂತ ಅನುಭವ ಹೊಂದಿದರೇ ಹುಟ್ಟುವ ಮಗು ನಪುಸಂಕನೇ. ಹಸಿರು ಸಂಸಾರ ಹಾಳು ಮಾಡುವ ಮಹಾದೋಷದಿಂದ ಮಾನವ, ನಪುಂಸಕವಾಗುವನು. ಅದು, ನರಕದಂತೆಯೇ ಸರಿ. ಅನ್ಯೋನ್ಯ ದಂಪತಿಗಳನ್ನು ಬೇರು ಮಾಡುವುದರಿಂದ, ಗಯ್ಯಾಳಿತನದಿಂದ ಸೊಸೆಯಂದಿರನ್ನು ಬಾಧಿಸುವುದರಿಂದ, ನಿರ್ದಾಕ್ಷಿಣ್ಯವಾಗಿ ಶಿಶು ಹತ್ಯೆ, ಸ್ತ್ರೀ ಹತ್ಯೆ ಮಾಡುವುದರಿಂದ ಮತ್ತು ಅಸಹಾಯಸ್ಥಿತಿಯಲ್ಲಿರುವ ಅನಾಥೆಯರನ್ನು ಬಾಧಿಸುವುದರಿಂದ ನಪುಂಸಕನಾಗಿಯೋ ಅಥವಾ ಅಂತಹ ನಪುಂಸಕನಿಗೆ ಪತ್ನಿ ಯಾಗುವುದೋ ನಡೆಯುವುದು. ಒಬ್ಬನು ಒಂದು ಸ್ತ್ರೀ ಇಂದ 10 ಸಂತಾನ ಪಡೆಯಲು ಹಕ್ಕಿದೆ. ಅದರ ಮೇಲೆ, ಧರ್ಮ ವಿರುದ್ಧ. 10 ಹೆರಿಗೆಗಳ ನಂತರ ಆಕೆ ತಾಯಿಯಂತೇನೇ ಸರಿ. ತಾಯಿ! ನಿನ್ನ ಪತಿಯ ನಪುಸಂಕತ್ವ ಹೋಗಿ ಪುರುಷತ್ವ ಸಿದ್ಧಿಸಲು ಮತ್ತು ನಿಮ್ಮ ದಾಂಪತ್ಯ ಸುಖಪ್ರದವಾಗಲು 'ಅನಘಾ ವ್ರತ' ಮಾಡಿ, ಅನಘಾದೇವಿ ಸಮೇತ ಶ್ರೀ ದತ್ತಾತ್ರೇಯರನ್ನು ಸಂತೋಷ ಗೊಳಿಸಿ. ತಪ್ಪದೇ ಶ್ರೀದತ್ತನು ನಿನ್ನನ್ನು ಅನುಗ್ರಹಿಸುವರು. **ಶ್ರೀಪಾದ ಶ್ರೀವಲ್ಲಭರನ್ನು ಭಜಿಸುವವರಿಗೆ ಇಹಪರಲೋಕ ಸುಖ ಅನಂತವಾಗಿ ಲಭಿಸುವುದು.** ಶ್ರೀ ಬಾಪನಾರ್ಯರು ತಮ್ಮ ಮೊಮ್ಮೊಗನನ್ನು ಸಾಕ್ಷಾತ್ ಶ್ರೀ ದತ್ತಾತ್ರೇಯರಾಗಿಯೇ ದರ್ಶಿಸಿ,

ಸಿದ್ಧಮಂಗಳ ಸ್ತೋತ್ರವನ್ನು ಪಠಿಸಿದರು. ದತ್ತ ದರ್ಶನ ಭಾವನೆಯಿಂದ ನುಡಿದ ಅಕ್ಷರಗಳು, ಬಲು ಶಕ್ತಿ ಉಳ್ಳವವು. ಪ್ರತಿ ಅಕ್ಷರದಲ್ಲೂ ಯುಗಯುಗಾಂತರವರೆಗಿನ ಚೈತನ್ಯವಿರುವುದು. ಅದರಲ್ಲಿ ವ್ಯಾಕರಣ ದೋಷ ಹುಡುಕಬಾರದು. ಶ್ರೀ ಸಿದ್ಧಮಂಗಳ ಸ್ತೋತ್ರ ಪಠಿಸಲು ಯಾವ ವಿಧಿ ನಿಷೇಧವೂ ಇಲ್ಲ. ನಾನೀ ಸ್ತೋತ್ರವನ್ನು ಶ್ರೀ ಬಾಪನಾರ್ಯರ ಬಾಯಿಂದ ಕೇಳಿದ ಭಾಗ್ಯವಂತನು. ಅದು ನನ್ನ ಮನಸಲ್ಲೇ ಇದೆ, ನೀವೂ ಕೇಳಿ!

## ಶ್ರೀ ಸಿದ್ಧಮಂಗಳ ಸ್ತೋತ್ರ

1. ಶ್ರೀಮದನಂತ ಶ್ರೀವಿಭೂಷಿತ ಅಪ್ಪಲ ಲಕ್ಷ್ಮೀ ನರಸಿಂಹರಾಜಾ
ಜಯವಿಜಯೀಭವ ದಿಗ್ವಿಜಯೀಭವ, ಶ್ರೀಮದಖಂಡ ಶ್ರೀವಿಜಯೀಭವ.

2. ಶ್ರೀ ವಿದ್ಯಾಧರಿ ರಾಧ ಸುರೇಖಾ ಶ್ರೀ ರಾಖೀಧರ ಶ್ರೀಪಾದಾ
ಜಯವಿಜಯೀಭವ ದಿಗ್ವಿಜಯೀಭವ, ಶ್ರೀಮದಖಂಡ ಶ್ರೀವಿಜಯೀಭವ.

3. ಮಾತಾಸುಮತೀ ವಾತ್ಸಲ್ಯಾಮೃತ ಪರಿಪೋಷಿತ ಜಯ ಶ್ರೀಪಾದಾ
ಜಯವಿಜಯೀಭವ ದಿಗ್ವಿಜಯೀಭವ, ಶ್ರೀಮದಖಂಡ ಶ್ರೀವಿಜಯೀಭವ.

4. ಸತ್ಯಋಷೀಶ್ವರ ದುಹಿತಾನಂದನ ಬಾಪನಾರ್ಯನುತ ಶ್ರೀಚರಣಾ
ಜಯವಿಜಯೀಭವ ದಿಗ್ವಿಜಯೀಭವ, ಶ್ರೀಮದಖಂಡ ಶ್ರೀವಿಜಯೀಭವ.

5. ಸವಿತೃಕಾಠಕಚಯನ ಪುಣ್ಯಫಲ ಭರದ್ವಾಜ ಋಷಿ ಗೋತ್ರಸಂಭವಾ
ಜಯವಿಜಯೀಭವ ದಿಗ್ವಿಜಯೀಭವ, ಶ್ರೀಮದಖಂಡ ಶ್ರೀವಿಜಯೀಭವ.

6. ದೋ ಚೌಪಾತೀ ದೇವ್ ಲಕ್ಷ್ಮೀ ಘನ ಸಂಖ್ಯಾಬೋದಿತ ಶ್ರೀಚರಣಾ
ಜಯವಿಜಯೀಭವ ದಿಗ್ವಿಜಯೀಭವ, ಶ್ರೀಮದಖಂಡ ಶ್ರೀವಿಜಯೀಭವ.

7. ಪುಣ್ಯರೂಪಿಣೀ ರಾಜಮಾಂಬ ಸುತ ಗರ್ಭಪುಣ್ಯಫಲ ಸಂಜಾತಾ
ಜಯವಿಜಯೀಭವ ದಿಗ್ವಿಜಯೀಭವ, ಶ್ರೀಮದಖಂಡ ಶ್ರೀವಿಜಯೀಭವ.

8. ಸುಮತೀನಂದನ ನರಹರಿನಂದನ ದತ್ತದೇವ ಪ್ರಭು ಶ್ರೀಪಾದಾ
ಜಯವಿಜಯೀಭವ ದಿಗ್ವಿಜಯೀಭವ, ಶ್ರೀಮದಖಂಡ ಶ್ರೀವಿಜಯೀಭವ.

9. ಪೀಠಿಕಾಪುರ ನಿತ್ಯವಿಹಾರಾ ಮಧುಮತಿದತ್ತಾ ಮಂಗಳರೂಪಾ
ಜಯವಿಜಯೀಭವ ದಿಗ್ವಿಜಯೀಭವ, ಶ್ರೀಮದಖಂಡ ಶ್ರೀವಿಜಯೀಭವ.

ಮಕ್ಕಳಾ! ಪರಮ ಪವಿತ್ರವಾದ ಈ ಸಿದ್ಧಮಂಗಳ ಸ್ತೋತ್ರವನ್ನು ಪಠಿಸಿದರೇ, ಅನಘಾಷ್ಟಮೀ ವ್ರತ ಮಾಡಿ ಸಹಸ್ರ ಸದ್ಬ್ರಾಹ್ಮಣರಿಗೆ ಭೋಜನವಿಟ್ಟ ಫಲ ಲಭಿಸುವುದು. ಮಂಡಲ ದೀಕ್ಷೆ ವಹಿಸಿ, ಒಪ್ಪತ್ತು ಊಟ ಮಾಡಿ, ಕಷ್ಟಪಟ್ಟು ದುಡಿದ ಹಣದಿಂದ 1000 ಬ್ರಾಹ್ಮಣರಿಗೆ ಭೋಜನವಿತ್ತ ಫಲ ಸಿಗುವುದು. ಈ ಸ್ತೋತ್ರವು ಯೋಗ್ಯರಿಂದ ಪಠಿಸಲ್ಪಡುವುದು. ಇದನ್ನು ಪಠಿಸುವುದರಿಂದ ಸಿದ್ಧಪುರುಷರ ದರ್ಶನ, ಸ್ಪರ್ಶನ ಲಭಿಸುವುದು. ಮನೋಕೋರಿಕೆಗಳು ನೆರವೇರುವವು. ಮನಸಾ ವಾಚಾ ಕಾಯಾ ಶ್ರೀ ದತ್ತಾರಾಧನೆಯನ್ನು ಮಾಡುವ ಭಕ್ತರು, ಈ ಸ್ತೋತ್ರ ಪಠನೆಯಿಂದ, ಶ್ರೀಪಾದರ ಕೃಪೆಗೆ ಪಾತ್ರರಾಗುವರು. ಈ ಸ್ತೋತ್ರ ಪಠಿಸಿದ ಸ್ಥಳದಲ್ಲಿ ಸೂಕ್ಷ್ಮವಾಯು ಮಂಡಲದ ಸಿದ್ಧರು, ಅಗೋಚರವಾಗಿ ಉಪಸ್ಥಿತರಾಗಿರುವರು" ಎಂದು ಅಮೃತಮಯ ನುಡಿಗಳನ್ನು ಆ ಸುಶೀಲೆ ಎಂಬುವ ಬ್ರಾಹ್ಮಣ ಸ್ತ್ರೀಗೆ ವಿವರಿಸಿದರು.

## ಶ್ರೀಪಾದರ ಅನುಗ್ರಹದಿಂದ ನಪುಂಸಕತ್ವ ತೊಲಗುವುದು

ಶ್ರೀ ನಾಮಾನಂದರ ಬಾಯಿಯಿಂದ ಈ ಅಮೃತಮಯ ನುಡಿಗಳು ಕೇಳಿದ ಕೂಡಲೇ, ನನಗೊಂದು ಯೋಚನೆ ಹೊಳೆಯಿತು. ಆಗ ನಾನು, ''ಮಹಾಪುರುಷರೇ! ಈ ದಿವ್ಯ ಸ್ತೋತ್ರ ಪಾರಾಯಣದಿಂದ, ಶ್ರೀಪಾದರ ದಿವ್ಯಲೀಲಾ ವಿಲಾಸ ಕಥೆಗಳನ್ನು ಈ ಪವಿತ್ರ ಆಶ್ರಮದಲ್ಲಿ ಕೇಳುತ್ತಾ ರಾತ್ರಿ ಇಲ್ಲೇ ಕಳೆಯಬೇಕೆಂಬ ಆಸೆ ಹುಟ್ಟಿದೆ. ಕರುಣಾಸಮುದ್ರರಾದ ತಾವು ಅನುಮತಿಸಬೇಕು'' ಎಂದು ಬೇಡಿದೆನು. ನನ್ನೊಟ್ಟಿಗೆ ಇದ್ದ ಸುಶೀಲ, ಬ್ರಾಹ್ಮಣ ಸಹೋದರರೂ ಅದೇ ಬಯಸಿದರು. ಪ್ರಸನ್ನ ಹೃದಯರಾದ ಶ್ರೀ ನಾಮಾನಂದರು ಒಪ್ಪಿದರು. ರಾತ್ರಿ ಎಲ್ಲಾ ಶ್ರೀಪಾದರ ನಾಮಸ್ಮರಣೆ, ಅವರ ಕಥಾ ಪ್ರಸಂಗ ಮತ್ತು ಶ್ರೀ ಸಿದ್ಧಮಂಗಳ ಸ್ತೋತ್ರ ಪಠನೆದಿಂದ ಕಳೆಯಿತು. ಪ್ರಾತಃಕಾಲದಲ್ಲಿ ಶ್ರೀಪಾದರಿಗೆ ದಿವ್ಯಮಂಗಳ ಹಾರತಿ ಕೊಡಲಾಯಿತು.

ನಂತರ ನಮ್ಮ ಆಶ್ರಮಕ್ಕೆ ಒಂದು ಎರಡೆತ್ತಿನ ಗಾಡಿಯಲ್ಲಿ ಭೋಜನ ಪದಾರ್ಥಗಳನ್ನು ಹಾಕಿಕೊಂಡು ಒಬ್ಬ ಬಂದನು. ಆತ ಸುಶೀಲ ಜೊತೆ ಮಾತನಾಡುತ್ತಾ 'ನಿನ್ನ ಅತ್ತೆ, ಮಾಮ, ಪತಿ ಬೇರೊಂದು ಗಾಡಿಯಲ್ಲಿ ಈ ಆಶ್ರಮ ಸೇರಲಿರುವರು' ಎಂದು ನುಡಿದು, ಸಾಮಾಗ್ರಿಯನ್ನು ಇಳಿಸಿ ಹೊರಟು ಹೋದನು. ಆಗ ಶ್ರೀ ನಾಮಾನಂದರು ಧ್ಯಾನದಲ್ಲಿದ್ದರು.

ಶ್ರೀ ನಾಮಾನಂದರು ಧ್ಯಾನದಿಂದ ಎದ್ದು, 'ಬಂಡಿಯವನೆಲ್ಲಿ?' ಎಂದು ಆತುರತೆಯಿಂದ ಕೇಳಿದರು. ಅವನು ಹೊರಟು ಹೋದನೆಂದು ತಿಳಿದು, 'ಓಹೋ! ನೀವೆಷ್ಟು ಅದೃಷ್ಟವಂತರು! ನಾನೇ ದುರದೃಷ್ಟನು' ಎಂದು ಬಾಧೆ ಪಟ್ಟರು. ನಮಗೆ ಆಶ್ಚರ್ಯವಾಯಿತು. ಆಗ ಅವರು, ''ಶ್ರೀಪಾದರು ಪರಮ ಕರುಣಾಮಯರು. ಅವರೇ ಬಂಡಿಯವನಾಗಿ ಬಂದಿದ್ದರು. ತಾಯಿ, ಸುಶೀಲಾ! ನಿನ್ನ ಅದೃಷ್ಟ ಹಣ್ಣಾಗಿದೆ. ನಿನ್ನ ಪತಿಗೆ ಇದ್ದ ನಪುಸಂಕತ್ತ್ವ ಹೋಗುವುದೇ ಅಲ್ಲದೇ, ಅವರು ಸ್ವಲ್ಪ ಸಮಯಕ್ಕೆ ಇಲ್ಲಿಗೆ ಎತ್ತಿನ ಗಾಡಿಯಲ್ಲಿ ಬರಲಿದ್ದಾರೆ'' ಎಂದು ನುಡಿದರು.

ತ್ರಿಕಾಲ ಜ್ಞಾನಿಗಳಾದ ಶ್ರೀ ನಾಮಾನಂದರು ನುಡಿದಂತೆಯೇ ನಡೆಯಿತು. ಸುಶೀಲ ತನ್ನ ಪತಿ, ಅತ್ತೆ, ಮಾವಂದಿರೊಡನೆ ಅವಳ ಅತ್ತೆ ಮನೆಗೆ ಹೊರಟಳು. ನಾನು, ಆ ಇಬ್ಬರು ಬ್ರಾಹ್ಮಣ ಸಹೋದರರೊಡನೆ ಕುರಂಗಡ್ಡೆ ಕಡೆಗೆ ನನ್ನ ಪ್ರಯಾಣ

ಮುಂದುವರಿಯಲೂ ಶ್ರೀ ನಾಮಾನಂದರನ್ನು ಅನುಗ್ರಹಿಸಲೂ ಕೇಳಿದೆನು. ಅವರ ದಿವ್ಯ ಆಶೀರ್ವಾದ ಪಡೆದು, ಕುರಂಗಡ್ಡೆ ಕಡೆಗೆ ಹೊರಟೆನು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 18

# ರವಿದಾಸನನ್ನು ಕುರಿತ ವರ್ಣನೆ - ಶ್ರೀಪಾದರ ದಿವ್ಯಮಂಗಳ ದರ್ಶನ

ನಾನು, ಆ ಇಬ್ಬರು ಕುರುಂಗಡ್ಡೆ (ಕುರುವಪುರ) ಸೇರಿದೆವು. **ಅನಂತಕೋಟಿ ಬ್ರಹ್ಮಾಂಡನಾಯಕನಾದ ಆ ಆದಿಪುರುಷ, ಆದಿಮಧ್ಯಾಂತರಹಿತ, ಚತುರ್ದಶಭುವನ ಸಾರ್ವಭೌಮನಾದ ಲೀಲಾವತಾರಿ ಶ್ರೀಪಾದ ಶ್ರೀವಲ್ಲಭರು,** ಕೃಷ್ಣಾನದಿಯಲ್ಲಿ ಸ್ನಾನಮಾಡಿ ಈಚೆಗೆ ಬರುತ್ತಿದ್ದರು. ಅವರ ದಿವ್ಯಮಂಗಳ ಸ್ವರೂಪದಿಂದ ದಿವ್ಯಕಾಂತಿ ಚಿಮ್ಮುತ್ತಿತ್ತು. ಅವರ ನೇತ್ರಗಳಿಂದ ಅನಂತವಾದ ಪ್ರೇಮ ಮತ್ತು ಕರುಣೆ ಉಕ್ಕಿ ಬರುತ್ತಿತ್ತು. ಅವರು ನನ್ನ ಹತ್ತಿರ ಬಂದು, ಪಾದ ನಮಸ್ಕಾರ ಮಾಡಿಕೋ ಎಂದರು. ನಾನು ಶ್ರೀಗಳ ಪಾದಗಳನ್ನು ಸ್ಪರ್ಶಿಸುತ್ತಿರಲೂ, ಕಮಂಡಲದಿಂದ ಪವಿತ್ರೋದಕವನ್ನು ನನ್ನ ತಲೆಯ ಮೇಲೆ ಚೆಲ್ಲಿದರು. ನಾನು ಏನೂ ಮಾತನಾಡದಿದ್ದರೂ, ಅತಿ ಮಧುರವಾದ ಕಂಠದಿಂದ ದಿವ್ಯಶ್ರೀಚರಣರು, "ಮಗು ಶಂಕರ ಭಟ್ಟು! ನಿನ್ನಲ್ಲಿನ ಪ್ರೇಮಾತಿಶಯವೇ ನೀನಿಲ್ಲಿ ಆಕರ್ಶಿಸಲ್ಪಟ್ಟಿರುವೆ" ಎಂದರು. ಆ ನುಡಿಗಳ ಮಧುರತೆ, ಅಪಾರವಾದ ಅವರ ಕರುಣೆ ಕೂಡಿದ ದೃಷ್ಟಿ, ವರ್ಣಿಸಲೂ ಶಬ್ದಗಳು ಸಾಲದು. ಸಮಸ್ತ ಭುವನಗಳಿಗೂ ಅಭಯ ಕೊಡತಕ್ಕಂತಹ ಮತ್ತು ಅನಂತ ಶಕ್ತಿಸಂಪನ್ನವಾದ ಅವರ ದಿವ್ಯ ಹಸ್ತವನ್ನು ನನ್ನ ಮಸ್ತಕದ ಮೇಲಿಟ್ಟರು. ನನ್ನೊಳಗಿನ ಕುಂಡಲಿನೀಶಕ್ತಿ ಒಮ್ಮೆ ವಿಜೃಂಭಿಸಿ, ನನ್ನ ಮೈ ಮರೆಸಿತು! ನನ್ನ ಕಣ್ಣಮುಂದಿನ ಸಮಸ್ತ ವಿಶ್ವವೂ ಮಾಯವಾಗುವಂತೆ ಗೋಚರಿಸಿತು. ಸಾವಿರ ಸಮುದ್ರಗಳು ಒಮ್ಮೆ ವಿಜೃಂಭಿಸಿ, ನನ್ನನ್ನು ಅವುಗಳಲ್ಲಿ ಸೇರಿಸಿಕೊಳ್ಳುವಂತೆ, ಮಹಾಶಕ್ತಿಯುಳ್ಳ ವಿದ್ಯುದಗ್ನಿ ನನ್ನ ನರಗಳನ್ನು ದಹಿಸುತ್ತಾ ಮತ್ತೇರಿಸಿತು. ನನ್ನ ಕಣ್ಣುಗಳು ಮುಚ್ಚಿಕೊಂಡವು. ಎದೆ ಹೊಡೆತ, ನಾಡಿಸ್ಪಂದನೆ ನಿಂತುಹೋದವು. ಮನಸ್ಸು ನಿರ್ವಿಕಾರವಾಗಿ, ನಿಶ್ಚಲತೆಯಿಂದ ಮಹಾಶೂನ್ಯದಲ್ಲಿ ಸ್ಥಿರಹೊಂದಿತು! ನನ್ನ ಹೃದಯದ ಚೈತನ್ಯ, ವಿಶ್ವದ ಅನಂತ ಚೈತನ್ಯದೊಳಗೆ ಸೇರಿತು. ಒಮ್ಮೊಮ್ಮೆ ಅತ್ಯಂತ ಸೂಕ್ಷ್ಮ ಸ್ವರೂಪದಲ್ಲಿ, ಆನಂದಮಯ ಸ್ಥಿತಿಯಲ್ಲಿ ನಾನಿರುವಂತೆ ಗೋಚರಿಸುತ್ತಿತ್ತು. ಮತ್ತೊಮ್ಮೆ ಆ 'ನಾನು' ಎಂಬುವುದು ಸಹಾ ನಶಿಸಿ, ತಿಳಿಸಲಾರದ ದಿವ್ಯಾನಂದಸ್ಥಿತಿಯಲ್ಲಿದ್ದೆನು. ಆ ಸ್ಥಿತಿಯಲ್ಲಿ ನನ್ನೊಳಗಿಂದ ಕೋಟಿಗಟ್ಟಲೆ ಬ್ರಹ್ಮಾಂಡಗಳು, ಸೃಷ್ಟಿ, ಸ್ಥಿತಿ ಲಯಗಳಾಗುತ್ತಿರುವ ಜ್ಞಾನ ಆಗುವಾಗ, 'ನಾನು' ಈ ಸರ್ವ ಚೈತನ್ಯಕ್ಕೆ ಅಭಿನ್ನ ಎಂದು ತಿಳಿಯುತ್ತಿದೆ. ಈ 'ನಾನು' ಎಂಬುದು ನಶಿಸಿದಾಗ ತಿಳಿಸಲಾರದ ದಿವ್ಯಾನಂದದಲ್ಲಿದ್ದೆ. ಇದೆಲ್ಲಾ ಚಿತ್ರವಿಚಿತ್ರವಾಗಿತ್ತು.

ಆಗ, ಶ್ರೀಪಾದರೇ ಪುನಃ ತಮ್ಮ ಕಮಂಡಲದಲ್ಲಿನ ಜಲವನ್ನು ನನ್ನ ಮೇಲೆ ಪ್ರೋಕ್ಷಿಸಿದರು. ನಾನು ಯಥಾಸ್ಥಿತಿಗೆ ಬಂದೆನು. ಜಗತ್ತಿಗೆ ಆದಿ ಗುರುವಾದ ಶ್ರೀ ವಲ್ಲಭ ಸ್ವಾಮಿ ಸಾವಿರ ತಾಯಂದಿರ ಪ್ರೇಮವನ್ನು ಮರೆಸುವ ಕರುಣಾದೃಷ್ಟಿಯಿಂದ ನನ್ನನ್ನು ನೋಡುತ್ತಾ ಮುಗುಳ್ನಗೆ ಇತ್ತರು.

### ಮುಸಲ್ಮಾನರಿಗೆ ಶ್ರೀಗಳ ದರ್ಶನ

ನನ್ನೊಟ್ಟಿಗೆ ಬಂದ ಆ ಇಬ್ಬರು ಬ್ರಾಹ್ಮಣರಿಗೆ, ಶ್ರೀಗಳೊಡನೆ ಮಾತನಾಡಲು ಆಗಲಿ, ದಿವ್ಯಚರಣ ತಾಕಲು ಆಗಲಿ, ಧೈರ್ಯವಿರಲಿಲ್ಲ. ಶ್ರೀಗಳು ನನ್ನನ್ನು "ನಿನ್ನೊಡನೆ ಬಂದಿರುವ ಈ ಇಬ್ಬರು ಕಟುಕರು ಯಾರು?" ಎಂದು ಪ್ರಶ್ನಿಸಿದರು. "ಪ್ರಭೂ!

ದಿವ್ಯಶ್ರೀ ಚರಣರ ದರ್ಶನಕ್ಕಾಗಿ ಬಂದಿರುವ ಈ ಇಬ್ಬರೂ ಬ್ರಾಹ್ಮಣರೆ'' ಉತ್ತರಿಸಿದೆನು. ಆ ಪ್ರಶಾಂತ ಸುಂದರನು, ''ಇವರು ಬ್ರಾಹ್ಮಣರಂತೆ ಕಾಣುತ್ತಿಲ್ಲವೇ? ಗೋ ಮಾಂಸ ತಿನ್ನುವ ಮುಸ್ಲಿಮರಾಗಿ ಕಾಣುತ್ತಿದ್ದಾರೆ. ನಿಜವನ್ನು ಇವರೇ ಹೇಳಲಿ'' ಎಂದರು. ಆಗ ಅವರು, ''ಸ್ವಾಮಿ! ನಾವು ಬ್ರಾಹ್ಮಣರಲ್ಲ, ಮುಸಲ್ಮಾನರೇ'' ಎಂದು ಮುಸ್ಲಿಮರು ಪಠಿಸುವ 'ಕಲ್ಮಾ'ನ್ನು ನುಡಿದರು. ಶ್ರೀ ವಲ್ಲಭರು ಸದಾ ಲೀಲಾವಿಹಾರಿ! ನಾನು ಬೆಚ್ಚಿಬಿದ್ದೆನು. ಆಗ ಆ ಮಹಾಗುರುಗಳು, **''ಶ್ರೀಪಾದ ಶ್ರೀವಲ್ಲಭರೆಂಬ ಹೆಸರಿನಲ್ಲಿ, ಮಾಯಾ ವೇಷದಲ್ಲಿ ತಿರುಗಾಡು ಜಗತ್ಪ್ರಭುವಾದ ಶ್ರೀ ದತ್ತಾತ್ರೇಯರನ್ನು ಗುರ್ತಿಸುವುದು, ಅನೇಕ ಜನುಮದ ಪುಣ್ಯಫಲ. ಗುರ್ತಿಸಿದನಂತರ, ಆ ಭಾವನೆ ಸ್ಥಿರವಾಗಿ, ಅವರಮೇಲೆ ಭಕ್ತಿ ಸಂಪೂರ್ಣವಾಗಿ ಹೊಂದಿರುವುದು ದೊಡ್ಡ ಭಾಗ್ಯ.** ಗೋವಿನಲ್ಲಿ ಎಲ್ಲಾ ದೇವತೆಗಳೂ ಇರುವರು. ಅಂತಹ ಗೋವಿಲ್ಲದ ಮನೆ, ಸ್ಮಶಾನಕ್ಕೆ ಸಮಾನ. ಶ್ರದ್ಧೆಯಿಂದ ಗೋಸೇವೆ ಮಾಡುವವರು ನನಗೆಷ್ಟೋ ಪ್ರೀತಿಪಾತ್ರರು. ಗೋವಿನ ಹಾಲು ಪುಷ್ಟಿ ಮತ್ತು ತುಷ್ಟಿಪ್ರದವು. ಬ್ರಾಹ್ಮಣರಾಗಿ ಜನ್ಮಿಸಿ ಗೋಮಾಂಸ ಭುಜಿಸುವರು, ಶಿಕ್ಷೆಗೆ ಒಳಗೊಳ್ಳಬೇಕು. ಯಜ್ಞಯಾಗಾದಿಗಳಲ್ಲಿ ಮೇಕೆಯನ್ನು ಬಲಿಕೊಡುವುದು ಸರ್ವೇಸಾಮಾನ್ಯ. ಯಜ್ಞ ಪಶುವಾದ ಆ ಮೇಕೆಯೇ ಅಲ್ಲದೇ, ಅದರ ಜೊತೆ ರಕ್ತ ಸಂಬಂಧವಿದ್ದ ಅನೇಕ ಮೇಕೆಗಳು ಸಹ, ಆ ನೀಚ ಜನುಮದಿಂದ ಮುಕ್ತರಾಗಿ ಉತ್ತಮ ಜನುಮ ಪಡೆಯುವವು. ಅತಿ ಶೀಘ್ರವಾಗಿಯೇ ಬ್ರಾಹ್ಮಣ ಜನುಮ ಸಹಾ ಪಡೆಯುವವು. ಆದರೇ, ಯಜ್ಞ ಪಶುವಾದ ಅಂತಹ ಮೇಕೆಯನ್ನು, ಆ ವಿಧವಾಗಿ ಉತ್ತಮ ಜನುಮಗಳ ಏಳಿಗೆ ಕೊಡಬಲ್ಲ ಯೋಗ ಮತ್ತು ತಪೋಬಲ ಆ ಯಜ್ಞಕರ್ತನಿಗೆ ಇರಬೇಕು. ಆ ವಿಧವಾದ ಯೋಗ ಮತ್ತು ತಪೋಬಲವಿಲ್ಲದೇ, ಹೆಸರಿಗಷ್ಟೇ ಯಜ್ಞವನ್ನು ಮಾಡಿ ಜೀವಬಲಿಯನ್ನರ್ಪಿಸದರೇ, ಆ ಜೀವಿಯನ್ನು ಕೊಂದ ಪಾಪ ಸುತ್ತಿಕೊಳ್ಳುವುದು. ಆಯಾ ದೇಶಕಾಲಗಳನ್ನನುಸರಿಸಿ, ಧರ್ಮಕರ್ಮಗಳು ನಡೆಯಬೇಕು. ಮುಸಲ್ಮಾನನಾದರು, ಮಹಾತಪಶ್ಶಾಲಿ ಆಗಿದ್ದಲ್ಲಿ, ಗೋಮಾಂಸ ಭಕ್ಷಿಸಿದರೂ, ಅದು ಪರಮೇಶ್ವರಾರ್ಪಣೆ ಬುದ್ಧಿಯಿಂದ ಮಾಡಿದಾಗ, ಗೋವಿಗೆ ಮತ್ತು ಅದರ ರಕ್ತ ಸಂಬಂಧಿತ ಇತರ ಗೋವುಗಳು ಸಹಾ ಉತ್ತಮ ಜನುಮ ಹೊಂದುವ ಅವಕಾಶವಿರುವುದು. ಹಾಗಿಲ್ಲದಿದ್ದಲ್ಲಿ ಮಹಾಪಾಪ ಸುತ್ತಿಕೊಳ್ಳುವುದು. ಅದ್ದರಿಂದ ಸಾಧಾರಣ ನಿಯಮವಾಗಿ, ಗೋಹತ್ಯೆ ಮಹಾಪಾಪವೆಂದು ನಿರ್ಧರಿಸಲಾಗಿದೆ. ಕುರುಕ್ಷೇತ್ರ ಸಂಗ್ರಾಮಕ್ಕೆ ಪೂರ್ವ, ಕೌರವ ಪಾಂಡವರು ಯುದ್ಧ ಮಾಡಲು ತಕ್ಕ ಧರ್ಮಕ್ಷೇತ್ರ ಎಲ್ಲಿದೆ ಎಂದು, ಶ್ರೀ ಕೃಷ್ಣನು ಹುಡುಕಿದನು. ಅರ್ಜುನ, ಜೊತೆಯಲ್ಲಿದ್ದನು. ಒಂದು ಕಡೆ, ಒಬ್ಬ ರೈತನು ತನ್ನ ಗದ್ದೆಗೆ ನೀರು ಕೊಡುತ್ತಿದ್ದನು. ನೀರಿನ ಪ್ರವಾಹ ಹೆಚ್ಚುತ್ತಾ ಬಂದಿತು. ತಡೆ ಹಾಕಲು, ಒಂದು ಬಂಡೆಗೋಸ್ಕರ ಎಷ್ಟು ನೋಡಿದರೂ ಅವನಿಗೆ ಸಿಗಲಿಲ್ಲ. ಅಷ್ಟರಲ್ಲಿ ಅವನ ಮಗ ಊಟ ತೆಗೆದುಕೊಂಡು ಅವನ ಬಳಿ ಬರಲು, ಅ ನೀರಿನ ಪ್ರವಾಹ ತಡೆದು, ತನ್ನ ಹೊಲವನ್ನು ಕಾಪಾಡಲು, ಆ ಮಗನ ಶಿರವನ್ನು ಛೇದಿಸಿ, ಆ ತಲೆ ನೀರಿಗೆ ಅಡ್ಡವಾಗಿತ್ತನು. ಕಡಿಯುತ್ತಿದ್ದ ತಂದೆ ಆಗಲಿ, ತಲೆ ಕಡೆಯಲ್ಪಡುತ್ತಿದ್ದ ಕುಮಾರನಾಗಲಿ, ಆ ಕಾರ್ಯದ ಸಮಯ ಮುಖದಲ್ಲಿ ಎಂತಹ ಭಾವೋದ್ರೇಕಗಳನ್ನು ತೋರಿಸಕೊಳ್ಳಲಿಲ್ಲ! ಸಮಾಜ ಕ್ಷೇಮಕ್ಕೆ ಆಹಾರ ಬೇಕು ಎಂಬುದೇ ಆ ರೈತ ಮತ್ತು ಮಗನ ದೃಷ್ಟಿ ಮತ್ತು ಗುರಿಯಾಗಿತ್ತು. ಆ ಇಬ್ಬರೂ ಧರ್ಮದ ಮೇಲೆ ತಮ್ಮ ಮನಸ್ಸು ಸ್ಥಿರಗೊಳಿಸಿದ್ದರು. ಶ್ರೀಕೃಷ್ಣನು ಆ ಪ್ರದೇಶವನ್ನೇ ಕೌರವ ಪಾಂಡವರಿಗೆ, ಮುಂಬರುವ ಕಾಲಕ್ಕೆ ಸರಿತೂಗುವ ಯುದ್ಧಕ್ಷೇತ್ರವೆಂದು, ಆ ಧರ್ಮಕ್ಷೇತ್ರವನ್ನು ನಿರ್ಧಾರ ಮಾಡಿದರು. ಓ, ಹೆಸರಿಗೆ ಮಾತ್ರ ಬ್ರಾಹ್ಮಣರಾಗಿರುವ ಯುವಕರೇ! ನಿಮಗೆ, ಗೋಮಾಂಸ ಭಕ್ಷಣೆ ಏನೇನೂ ಸಮರ್ಥನೀಯವಾದುದ್ದಲ್ಲ, ನೀವು ಪಾಪಾತ್ಮರು. ಆದರೇ ಪೂರ್ವ ಪುಣ್ಯವಶದಿಂದ ಮತ್ತು ನಿಮ್ಮ ಪಿತೃದೇವತೆಗಳ ಪೂಜಾಫಲ ಅದಕ್ಕೂ ಮೀರಿ ನನ್ನ ಅವ್ಯಾಜ್ಯ ಕರುಣೆ ಕಾರಣ, ನೀವಿಬ್ಬರೂ, ನನ್ನ ದರ್ಶನಭಾಗ್ಯ ಹೊಂದಿರುವಿರಿ. ಇದೇ ಮಹಾಭಾಗ್ಯ ಮತ್ತು ಅಪರೂಪದ ಅದೃಷ್ಟ ಫಲ ಎಂದು ಭಾವಿಸಿರಿ. ನೀವು ಕೊಡುವ

ನಮಸ್ಕಾರಗಳನ್ನು ನಾನು ಸ್ವೀಕರಿಸಲಾರೆ. ನನ್ನ ಪಾದಗಳೂ ತಾಕಬೇಡಿ. ನನ್ನ ಕಮಂಡಲದ ಜಲಪ್ರೋಕ್ಷಣೆ ದೂರದ ಮಾತು. ಶೀಘ್ರವೇ ಇಲ್ಲಿಂದ ಹೊರಟು, ಮನಸಿದ್ದ ಕಡೆ ಹೋಗಬಹುದು. ನಿಮಗೆ ಅನ್ನವಸ್ತ್ರಗಳಿಗೆ ಕೊರತೆ ಇರುವುದಿಲ್ಲ. ನೀವು ನಿಮ್ಮ ಇಚ್ಛೆಬಂದ ಮುಸ್ಲಿಂರನ್ನ ಮದುವೆ ಮಾಡಿಕೊಂಡು, ನಿಮ್ಮ ಧರ್ಮ ಪಾಲಿಸಿ. ನಿಮ್ಮಿಂದ ವಧಿಸಲ್ಪಟ್ಟ ಗೋವುಗಳು, ನಿಮಗೆ ಈ ಜನುಮದಲ್ಲಿ ಮತ್ತು ಜನ್ಮಾಂತರದಲ್ಲೂ ಸಂತಾನವಾಗಿ ಹುಟ್ಟಿ, ನಿಮ್ಮನ್ನು ಬಲು ವಿಧವಾಗಿ ಹಿಂಸಿಸಿ, ನಿಮ್ಮ ಕಷ್ಟಾರ್ಜಿತ ಹಣವನ್ನು ಇಷ್ಟಬಂದಂತೆ ಖರ್ಚು ಮಾಡಿದಂತವರಾಗಲಿ! ಆದರೇ **ನನ್ನ ದರ್ಶನ ಪಡೆದಿರುವ ನೀವು, ಅನೇಕ ಶತಮಾನಗಳ ನಂತರ 'ಬಡೇಬಾಬಾ', 'ಅಬ್ದುಲ್‌ಬಾಬಾ' ಎಂಬ ಹೆಸರುಗಳಲ್ಲಿ ಕೀರ್ತಿಗಳಿಸಿ, ನನ್ನ ಸಂಪೂರ್ಣ ಸದ್ಗುರು ಅವತಾರವಾದ ಸಾಯಿಬಾಬ ಎಂಬುವ ಹೆಸರಿನ, ವಿಲಕ್ಷಣ ಅವತಾರದಿಂದ, ಉದ್ಧರಿಸಲ್ಪಡುವಿರಿ.** ಮಹರಾಷ್ಟ ದೇಶದಲ್ಲಿ ಶೀಲಧೀ ಎಂಬುವ ಗ್ರಾಮ ಉಂಟು. ಮುಂಬರುವ ದಿನಗಳಲ್ಲದು ಸಿದ್ಧಕ್ಷೇತ್ರವಾಗುವುದು. ಅಲ್ಲಿಯೇ ನಿಮಗೆ ಸಾಯಿಬಾಬ ಸಿಗುವರು. ಇದು ದಾಟಲಾರದ ನನ್ನ ಆಜ್ಞೆ. ಅದು ಶಿಲಾಕ್ಷರಗಳೇ ಸರಿ. ಆದ್ದರಿಂದ ತಕ್ಷಣ ಇಲ್ಲಿಂದ ಹೊರಡಿ ಎಂದು ಅವರಿಬ್ಬರನ್ನೂ ಆಜ್ಞಾಪಿಸಿದರು.

ನಾನು, ಶ್ರೀಪಾದರು ಮಾತ್ರವೇ ಅಲ್ಲಿದ್ದೆವು. ಅಷ್ಟರಲ್ಲಿ ರವಿದಾಸನೆಂಬ ಅಗಸನೊಬ್ಬನು ಅಲ್ಲಿಗೆ ಬಂದನು. ಅವನು ಶ್ರೀಪಾದರಿಗೆ ಅನೇಕ ಬಾರಿ ನಮಸ್ಕರಿಸಿದನು. ಸ್ವಲ್ಪಕಾಲ ಶ್ರೀಪಾದರು ಅವನನ್ನು ನಿರ್ಲಕ್ಷಿಸಿದರು. ನಂತರ ಅವನನ್ನು ನೋಡುತ್ತಾ ಮುಗುಳ್ನಗೆ ಇತ್ತರು. ಕಾರಣ, ನನಗೆ ತಿಳಿಯಲಿಲ್ಲ. ಶ್ರೀಗಳು ಪುನಃ ಮುಗುಳ್ನಗೆಯಿಂದ, ನನ್ನ ಭ್ರೂಮಧ್ಯೆ ಒತ್ತಿದರು. ಅದ್ಭುತ! ನನ್ನ ಮನೋನೇತ್ರಕ್ಕೆ ವಿಚಿತ್ರ ದೃಶ್ಯಗಳು ಕಂಡುಬಂದವು.

## ಭಕ್ತರಿಗೆ ಶ್ರೀಪಾದರ ಅನುಗ್ರಹಗಳು

ನಾನು ಕಂಡದ್ದು, ಕುರುಂಗಡ್ಡೆ ಕಡೆಗೆ ರವಿದಾಸನು ಹಡಗು ನಡೆಸುತ್ತಿದ್ದನು. ಅದರಲ್ಲಿ ಚನ್ನಾಗಿ ವೇದಾಧ್ಯಯನ ಮಾಡಿದ ಒಬ್ಬ ಪಂಡಿತನಿದ್ದನು. ಅವರು ಬ್ರಹ್ಮಜಾತಿಗೆ ಸೇರಿದವರೆಂದು, ಇತರರು ತನ್ನ ಜತೆ ಆ ಹಡುಗಿನಲ್ಲಿ ಬಂದು ಅವರನ್ನು ತಾಕಿ, ಮೈಲಿಗೆ ಮಾಡಬಾರದೆಂದು, ಅಧಿಕ ಹಣ ಕೊಡಲು ಸಹಾ ಸಿದ್ಧರಾಗಿದ್ದರು. ತಾನು ಪಂಡಿತನಾದ ಕಾರಣ ಶ್ರೀಪಾದರನ್ನು ದರ್ಶಿಸಲು ಹೋಗುತ್ತಿರಲು, ಶ್ರೀಪಾದರೇ ಪಂಡಿತರಾದರೇ, ಅವರಿಗೆ ಒಳ್ಳೆಯ ಸಂಭಾವನೆ ಕೊಡಿಸುವರೆಂದು ಅದರಿಂದ ಹಡಗಿನ ಬಾಡಿಗೆ ಕೊಡುವನೆಂದೂ ಹೇಳಿದನು. ಆ ರವಿದಾಸು ಸಹಾ ಸರಿ ಅಂದನು. ನೌಕಾ ಮಾರ್ಗದಲ್ಲಿ ಆ ಪಂಡಿತರು, 'ರವಿದಾಸನು ಪುರಾಣೇತಿಹಾಸಗಳ ಬಗ್ಗೆ ಸ್ವಲ್ಪವೂ ತಿಳಿದವನವಲ್ಲ' ಎಂದು ತಿಳಿದು, "ಎಲಾ! ನನ್ನ ಜನುಮ ಚರಿತಾರ್ಥವು. ನೀನೋ ಪುರಾಣದ ಬಗ್ಗೆ ತಿಳಿಯದೇ ನಿನ್ನ ಈ ಜೀವನ ವ್ಯರ್ಥ ಮಾಡಿಕೊಂಡಿದ್ದೀಯ!" ಎಂದು ಅವಹೇಳನೆ ಮಾಡಿದರು. ಅಷ್ಟರಲ್ಲಿ ನದೀ ಪ್ರವಾಹ ಹೆಚ್ಚುತ್ತಾ, ಹಡಗಿಗೆ ಒಂದು ಚಿಕ್ಕ ರಂದ್ರ ಇದ್ದ ಕಾರಣ, ಶೀಘ್ರದಲ್ಲೇ ನೀರನ್ನು ತುಂಬಿಕೊಂಡು ಮುಳಗುತ್ತಿತ್ತು. ರವಿದಾಸನು, "ಸ್ವಾಮಿ! ನಿಮಗೆ ಈಜು ಬರುವದಿಲ್ಲವೆ! ನನಗೆ ಬರುತ್ತೆ. ನನ್ನ ಜನುಮವೇ ಚರಿತಾರ್ಥವು. ನಿಮ್ಮ ಜೀವನ ನೂರಕ್ಕೆ ನೂರು ಪಾಲು ವ್ಯರ್ಥ!" ಎಂದನು, ಮತ್ತು ಶ್ರೀಗಳನ್ನು ಸ್ತುತಿಸಿದನು. ಆಗ ಕಣ್ಣು ಚದುರವಂತಹಾ ದೊಡ್ಡ ಕಾಂತಿ ಒಂದು ನದೀ ಮಧ್ಯದಲ್ಲಿ ಕಂಡುಬಂದು, ನೌಕೆಗೆ ತುಂಬಿದ್ದ ನೀರನ್ನು ಕಾಣದ ಹಸ್ತದಿಂದ ತಳ್ಳಿಹಾಕಿತು. ಇದು ಶ್ರೀಪಾದರ ಕರುಣಾ ಚಮತ್ಕಾರವೇ ಎಂದು ಅವರು ಅರಿದು, ದಡ ಸೇರಿದ ತಕ್ಷಣವೇ ಶ್ರೀಪಾದರ ದರ್ಶನಕ್ಕಾಗಿ ಪರಿತಪಿಸಿದರು. ನಂತರ ಶ್ರೀಪಾದರಿಗೆ, ಇಬ್ಬರೂ ನಮಸ್ಕರಿಸಿದರು. ರವಿದಾಸನು ಇದುವರಿಗೂ ಅದೆಷ್ಟು ಬಾರಿ ನಮಸ್ಕರಿಸಿದರೂ, ಶ್ರೀಗಳು ಗಮನವೇ ಕೊಡುತ್ತಿರಲಿಲ್ಲ. ಆದರೇ ಇಂದು, ರವಿದಾಸನ ನಮನಕ್ಕೆ

ಪ್ರಸನ್ನವದನದಿಂದ ಮಂದಹಾಸ ಮಾಡಿದರು. ಆದರೇ ಆ ಪಂಡಿತನನ್ನು ಮಾತ್ರ ನಿರ್ಲಕ್ಷ್ಯಭಾವನದಿಂದ ಕಂಡರು! ಅವರೊಟ್ಟಿಗೆ ಶಾಸ್ತ್ರಚರ್ಚೆ ಬಯಸಿದ ಆ ಪಂಡಿತ, ಮೂಕನಾದನು. ಶ್ರೀಪಾದರು, "ಎಲೈ! ಪಾಂಡಿತ್ಯ ಗರ್ವದಿಂದ ಯುಕ್ತಾಯುಕ್ತ ವಿವೇಚನೆಯನ್ನು ಮರೆತು ಮಹಾಪಂಡಿತನಾಗಿಯೂ, ಸದ್ವಂಶದಲ್ಲಿ ಜನ್ಮಿಸಿಯೂ, ಪುಣ್ಯ ಆರ್ಜಿಸುವುದು ಬಿಟ್ಟು, ಪಾಪವನ್ನೆ ಗಳಿಸಿದ್ದೀಯ. ನಿನ್ನ ಧರ್ಮಪತ್ನಿಯನ್ನು ಕಷ್ಟಕ್ಕೆ ಒಳಪಡಿಸಿದ್ದೀಯ. ಸುಖವಾಗಿದ್ದ ಒಂದು ಅಗಸರ ಸಂಸಾರವನ್ನು ಒಡೆದು, ಆ ಹೆಂಗಸನ್ನು ನಿನ್ನ ಸೇವೆಗಾಗಿಟ್ಟುಕೊಂಡಿದ್ದೀಯ! ಆಕೆ, ಬಲವಂತಕ್ಕೆ ನಿನ್ನ ಕೊರಿಕೆಗಳನ್ನೆಲ್ಲಾ ತೀರಿಸುತ್ತಿದ್ದರೂ, ನಿನ್ನನ್ನು ಸದಾ ಶಪಿಸುತ್ತಲೇ ಇರುವಳು. ಇತ್ತ ನಿನ್ನ ಧರ್ಮಪತ್ನಿ ಸಹಾ, ತನ್ನ ಸಂಸಾರ ಹಾಳಾಗಿದ್ದಕ್ಕೆ ನಿನ್ನನ್ನು ಅಸಹ್ಯಿಸಿಕೊಳ್ಳುತ್ತಿದ್ದಾಳೆ. ಇದನ್ನೆಲ್ಲಾ ಕಂಡೇ ನಾನು, ನಿನ್ನನ್ನಿಲ್ಲಿಗೆ ಬರಮಾಡಿದೆ. ನಿನ್ನ ಜಾತಕದ ಪ್ರಕಾರ ಇಂದು ನಿನ್ನ ಮರಣ. ಆದರೇ ನಾನು ಕಾಪಾಡಿ, 3 ವರುಷ ಆಯುಷನ್ನು ಬೆಳೆಸಿದ್ದೇನೆ. ನೀನು ಮನೆಗೆ ತಲುಪಿ, ನಿನ್ನ ಹಿಂದಿನ ದುರ್ಮಾಗವನ್ನು ಬಿಟ್ಟು ಒಳ್ಳೆಯ ಜೀವನ ನಡೆಸು, ಇಲ್ಲ ನಿನ್ನ ಕರ್ಮಕ್ಕೆ ಬಿಟ್ಟುಬಿಡುವೆನು. ನೀನು ಮಹಾಪಂಡಿತನೇ, ಸಂದೇಹವಿಲ್ಲ! ನಿನ್ನ ವಿದ್ಯೆಗೆ ಸಂಭಾವನೆ ಬೇಕೇ, ಇಲ್ಲ 3 ವರುಷದ ಆಯಸನ್ನು ಬೆಳಸಲಾ? ತಕ್ಷಣವೇ ಹೇಳು" ಎಂದು ನುಡಿದರು. ಸರ್ವಜ್ಞಮೂರ್ತಿಗಳಾದ ಶ್ರೀಪಾದರ ವಚನಗಳು ಕೇಳಿದ ನಂತರ, ಪಂಡಿತನ ಬಾಯಲ್ಲಿ ಮಾತೇ ಬರದಾಯಿತು. ಅವನ ಮನಸ್ಸಿನಲ್ಲಿ ಆಯಸು ಬೆಳೆಯಲೆಂದೇ ಇತ್ತು. ಆದರೆ ಬಾಯಲ್ಲಿ ಆ ಮಾತು ಬಾರದಾಯಿತು! ಶ್ರೀಪಾದರೇ, "ನಿನ್ನ ಹೃದಯದ ಕೋರಿಕೆ ಪ್ರಕಾರ, ನಿನ್ನ ಆಯುಷನ್ನು ಹೆಚ್ಚಿಸುತ್ತಿದ್ದೇನೆ. ನೀನು ನಿನ್ನ ಅಗತ್ಯಗಳಿಗಾಗಿಟ್ಟುಕೊಂಡಿದ್ದ ಆ ಅಗಸನ ಪತ್ನಿ ಬರುವ ಜನುಮದಲ್ಲಿ ನಿನ್ನ ಪತ್ನಿ ಆಗಬೇಕಿತ್ತು. ಆದರೇ ಈ ಜನ್ಮದಲ್ಲೇ ನಿನ್ನ ಪತ್ನಿಗೆ ಸಮಾನ ಮಾಡಿಕೊಂಡಿದ್ದೆ. ಯಾವ ಜನುಮದ ಧರ್ಮಗಳು ಆ ಜನುಮಕ್ಕೇ ಕಟ್ಟುಬಿದ್ದಿರುವವು. ನೀನದನ್ನು ದಾಟಿದ್ದೀಯ. ಮುಂಬರುವ ಜನುಮದಲ್ಲಿ ಆ ಅಗಸ ದಂಪತಿಗಳು ಮಹಾರಾಜನ ಸುಖಸಂಪತ್ತನ್ನು ಅನುಭವಿಸುವರು. ನೀನು ನಪುಂಸಕಗನಾಗಿ ಹುಟ್ಟಿ, ಆ ಅಗಸ ದಂಪತಿಗಳಿಗೆ ಸೇವೆ ಮಾಡಿಕೊಳ್ಳುತ್ತಾ ಕರ್ಮಫಲವನ್ನು ಅನುಭವಿಸುವೆ. ನೀನು 3 ವರುಷಗಳಲ್ಲಿ ಸತ್ಕರ್ಮಗಳು ಮಾಡಿದರೇ, ಆ ಅಗಸ ಸ್ತ್ರಿ ಹತ್ತಿರ ಸೇವೆ ಮಾಡಿಕೊಳ್ಳುತ್ತಾ ಕಾಲ ಕಳೆಯುವೆ. ಅದೇ ದುಷ್ಕರ್ಮಗಳನ್ನು ಮಾಡಿದರೇ, ಆ ಅಗಸ ದಂಪತಿಗಳ ಸೇವೆ ಮಾಡಿಕೊಳ್ಳುತ್ತಾ ನಿನ್ನ ಶ್ರಮಕ್ಕೆ ತಕ್ಕ ಫಲಸಿಗದೇ ಅನೇಕ ಕಷ್ಟಗಳಿಗೆ ಗುರಿಯಾಗುವೆ. ಸಾಯಬೇಕಿದ್ದ ನಿನ್ನನ್ನು ಕಾಪಾಡಿ, ನನ್ನ ಬಳಿ ಕರೆ ತಂದ ಕಾರಣ, ರವಿದಾಸನಿಗೆ ನಿನ್ನ ಸಮಸ್ತ ಪುಣ್ಯ ಸೇರುವುದು. ಅದರ ಫಲದಿಂದ ಆತ ಸಾಕ್ಷಾತ್ ದತ್ತಾವತಾರಿಯಾದ ನನ್ನನ್ನು ಒಳಗೊಳ್ಳುವನು. ನೀನು ಶೀಘ್ರವಾಗಿ ಈ ಪುಣ್ಯಭೂಮಿಯಿಂದ ಹೊರಡುವುದು ಉಚಿತ" ಎಂದು ಆಜ್ಞಾಪಿಸಿದರು. ಆ ಪಂಡಿತ ಅಲ್ಲಿಂದ ಹೊರಟು ಹೋದನು. ರವಿದಾಸನು ಶ್ರೀಗಳ ಬಟ್ಟೆಗಳನ್ನು ಒಗೆಯುವುದು, ಆಶ್ರಮವನ್ನು ಶುಚಿಮಾಡುವ ಸೇವೆ ಕೆಲಸಗಳನ್ನು ಮಾಡುತ್ತಿದ್ದನು.

ಶ್ರೀಪಾದರು ನದೀ ಸ್ನಾನಕ್ಕೆ ಬಂದಾಗಲೆಲ್ಲಾ ರವಿದಾಸನು ಶ್ರೀ ಗುರುದೇವರಿಗೆ ಸಾಷ್ಟಾಂಗ ನಮಸ್ಕಾರ ಮಾಡುತಿದ್ದನು. ಶ್ರೀಗಳು, ಪ್ರಸನ್ನ ವದನದಿಂದ ಅದನ್ನು ಸ್ವೀಕರಿಸುತ್ತಿದ್ದರು. ಅವನ ತಂದೆ ಹೇಳಿದ್ದ "ಶ್ರೀಪಾದರು ಸರ್ವಾಂತರ್ಯಾಮಿ. ಆದ್ದರಿಂದ, ಅವರಿಗಿತ್ತ ನಮಸ್ಕಾರ ಅನೇಕ ಸಾವಿರ ಜನರ ಗೌರವ ಪಡೆಯುವ ಮಹಾಯೋಗ ತರುವುದು" ಎಂಬ ಮಾತು ನೆನಪಿತ್ತು. ಈ ಯೋಗ, ಕೇವಲ ಶ್ರೀಪಾದರು, ಇತ್ತ ನಮಸ್ಕಾರ, ಸ್ವೀಕರಿಸಿದರೇ ಮಾತ್ರ ಲಭಿಸುವುದೆಂದೂ ಹೇಳಿದ್ದರು. ಹಾಗಾಗಿ, ರವಿದಾಸನು ಶ್ರೀಗಳು ತನ್ನ ನಮಸ್ಕಾರ ಸ್ವೀಕರಿಸುತ್ತಿದ್ದಕ್ಕೆ, ಆಮಿತಾನಂದ ಪಡುತಿದ್ದನು.

ಒಮ್ಮೆ ರವಿದಾಸನು, ಒಬ್ಬ ಮಹಾರಾಜರು, ಸುಂದರ ಯುವತಿಯರೊಡನೆ ಜಲಕ್ರೀಡೆ ಆಡುವುದನ್ನು ಕಂಡು, ತಾನು

ಮಹರಾಜನಾದರೇ ಅದೆಷ್ಟು ಚೆನ್ನಾಗಿತ್ತು ಎಂದು ಅಸೆಪಟ್ಟನು. ಶ್ರೀಗಳು ಅಂತಾರ್ಯಮಿ! ನದೀಸ್ನಾನದ ಸಮಯ ಇದನ್ನು ವಿಚಾರಿಸಿ, ರವಿದಾಸನಿಗೆ, ಯವನ ವಂಶದಲ್ಲಿ ವೈಢೂರ್ಯ ನಗರದಲ್ಲಿ ಜನ್ಮಿಸುವ ಭಾಗ್ಯವಿತ್ತರು. ತಾವು ನೃಸಿಂಹ ಸರಸ್ವತಿ ಅವತಾರದಲ್ಲಿ ಅವನಿಗೆ ದರ್ಶನ ತರುವುದಾಗಿಯೂ, ಮುಗುಳ್ನಗೆಯಿಂದ ಅಭಯವಿತ್ತರು. ರವಿದಾಸನು ತಕ್ಷಣ ಮರಣಿಸಿದನು. ನನ್ನ ಮನೋನೇತ್ರಗಳಿಗೆ ಕಾಣುತ್ತಿದ್ದ ಈ ಆಶ್ಚರ್ಯ ದೃಶ್ಯಕ್ಕೆ ನಾನು ದಿಗ್ಭ್ರಮೆ ಹೊಂದಿದೆನು.

ನಂತರ, ನಾನು ಇಹಲೋಕ ಜ್ಞಾನಕ್ಕೆ ಬರಲು, ಶ್ರೀಪಾದರು ನನ್ನ ಕಡೆನೋಡಿ ನಕ್ಕರು. ಪ್ರತಿಕ್ಷಣವೂ ಲೀಲೆ ತೋರಿಸುವ ಶ್ರೀ ಗುರುದೇವರನ್ನು ಎಷ್ಟು ಹೊಗಳಿದರೂ ಸಾಲದು!

ಇಷ್ಟರಲ್ಲಿ ಕೆಲ ಮಹಿಳೆಯರು, ಅನಾರೋಗ್ಯದಿಂದ ನರಳುತ್ತಿದ್ದ ತಮ್ಮ ಪತಿಗಳೊಡನೇ ಅಲ್ಲಿಗೆ ಬಂದರು. ಹೆಣ್ಣು ಮಕ್ಕಳ ತಂದೆ ತಾಯಿಯರೂ, ಯೋಗ್ಯ ವರಗಳಿಗಾಗಿ ಬಂದರು. ಅವರಿಗೆಲ್ಲಾ ಶ್ರೀಗಳು, ಅರಿಶಿನ ಕೊಂಬುಗಳನ್ನು ಹಂಚುತ್ತಿದ್ದರು. ಎಲ್ಲರೂ ಸಂತಸದಿಂದ, ಅಲ್ಲಿಂದ ಹೊರಡುತ್ತಿದ್ದರು.

## ಶ್ರೀವಲ್ಲಭೇಶನಿಗೆ ಶ್ರೀಪಾದರ ಕೃಪೆಯಿಂದ ಅಕ್ಷಯಪಾತ್ರೆ ಲಭಿಸುವುದು

ಇಷ್ಟರೊಳಗೆ, ಅಲ್ಲಿಗೆ ಒಬ್ಬ ಬ್ರಾಹ್ಮಣ ಯುವಕ ಬಂದನು. ಕೊಳೆತುಂಬಿದ ಮೈ. ಕಾಶ್ಯಪ ಗೋತ್ರ, ಆಪಸ್ತಂಬಸೂತ್ರದವ. ವಲ್ಲಭೇಶನೆಂಬ ನಾಮಧೇಯ. ಪೀಠಿಕಾಪುರ ಅಗ್ರಹಾರದಿಂದ ಬಂದಿದ್ದನು. ಶ್ರೀಪಾದರು ಅವನನ್ನು ಪೀಠಿಕಾಪುರದ ತನ್ನ ಆತ್ಮೀಯರ ಕುಶಲ, ಒಬ್ಬೊಬ್ಬರದೂ ಕೇಳಿ ತಿಳಿದುಕೊಂಡರು. ಸರ್ವಜ್ಞರಿಗೆ ಇದು ಕೇವಲ ಒಂದು ವಿನೋದದ ವಿಷಯವೆ! ಮಧ್ಯಾಹ್ನದ ಭಿಕ್ಷೆಗೆ ಎಷ್ಟೋಮಂದಿ ಭಕ್ಷ್ಯಭೋಜ್ಯಗಳು ತಂದರು. ಇಷ್ಟರಲ್ಲಿ ಶ್ರೀಗಳು, ಯಾವುದೋ ಹಿಡಿಯುತ್ತಿದ್ದ ಹಾಗೆ ತಮ್ಮ ದಿವ್ಯಹಸ್ತಗಳನ್ನು ಮೇಲಕ್ಕೆ ಚಾಚಿದರು. ಒಂದು ದೊಡ್ಡ ಬೆಳ್ಳಿಯ ಪಾತ್ರೆ ತುಂಬಾ "ಖೀರ್" ಎಂಬುವ ಪಾಯಸ ಗ್ರಹಿಸಿ, ಅಲ್ಲಿ ನೆರದಿರುವ ಶಿಷ್ಯಂದಿರಿಗೆ ಕೊಡಲು ನನ್ನನ್ನು ಆದೇಶಿಸಿದರು. ಅವರು ತಂದಿದ್ದ ಭಕ್ಷ್ಯಭೋಜ್ಯಗಳನ್ನು ಕೃಷ್ಣಾ ನದಿಯಲ್ಲಿ ಹಾಕಲು ಸಹಾ ರವಿದಾಸರಿಗೆ ಆದೇಶಿಸಿದರು. ಆ ರೀತಿ, ನದಿಯ ಜಲಚರಗಳಿಗೆ ಸಹಾ ಸ್ವಾಮಿಯ ಪ್ರಸಾದ ಹಂಚಲಾಯಿತು! ಶ್ರೀಪಾದರು ವಲ್ಲಭೇಶನನ್ನು ತನ್ನ ಪಕ್ಕದಲ್ಲಿ ಕುಳಿತುಕೊಳ್ಳಲೂ ನುಡಿದರು. ಅವನ ಪಕ್ಕದಲ್ಲಿ ನಾನೂ ಕುಳಿತೆ. ನನ್ನ ಪಕ್ಕ ಸುಬ್ಬಣ್ಣಶಾಸ್ತ್ರಿ ಎಂಬುವ ಓರ್ವ ಕನ್ನಡ ಬ್ರಾಹ್ಮಣ ಕುಳಿತುಕೊಂಡನು. ಆಗ ಒಬ್ಬ ಬಡಬ್ರಾಹ್ಮಣನು, ತನ್ನ ಮಗಳಿಗೊಂದು ವರ ಸೂಚಿಸಲು ಬೇಡಿದನು. ಆಗ ಶ್ರೀಪಾದರು, "ನಾನಿರಲು ನಿನಗೇಕೆ ಭಯ? ಪಾಪ ಇರುವ ಕಡೆ ಭಯವಿರಬೇಕು! ಈ ವಲ್ಲಭೇಶನೇ ನಿನ್ನ ಅಳಿಯ. ಈ ಸುಬ್ಬಣ್ಣಶಾಸ್ತ್ರಿ ಪೌರೋಹಿತ. ವಲ್ಲಭೇಶನ ಪಿತೃದೇವತೆಗಳು, ಸಶಾಸ್ತ್ರ ಪಿಂಡಪ್ರದಾನಗಳಿಲ್ಲದೇ ಆಗ್ರಹದಲ್ಲಿದ್ದಾರೆ. ಅದು ಒಳ್ಳೆಯದಲ್ಲ. ಭಕ್ತಿಪೂರ್ವಕವಾಗಿತ್ತ ಪಿಂಡಪ್ರದಾನಗಳೇ, ಅವರಿಗೆ ಸೇರುವವು. ಆದ್ದರಿಂದಲೇ ವಿವಾಹ ಮಂತ್ರಗಳ ಮುನ್ನ ಗರುಡ ಪುರಾಣೋಕ್ತ ಮಂತ್ರಗಳು ಪಠಿಸಬೇಕು. ಈಗ, ಮಾಂಗಲ್ಯಭಾಗ್ಯದ ಸಲುವಾಗಿ ಅರಿಶಿನದ ಈ ಕೊಂಬನ್ನು ಸ್ವೀಕರಿಸು. ಇದು ದುರ್ಲಭವಾದ ಮಹಾಪ್ರಸಾದ! ಪೀಠಿಕಾಪುರದ ಮಲ್ಲಾದಿಗಳು, ವೆಂಕಟಪ್ಪಯ್ಯ ಶ್ರೇಷ್ಠಿಗಳು, ವತ್ಸವಾಯಿಗಳು ನನಗೆ ಪಾಯಸ ನೈವೇದ್ಯವಿತ್ತರು. ಅದನ್ನೇ ನಾನು ನಿಮಗೆ ಹಂಚಿದೆ. ಬ್ರಹ್ಮರಾಕ್ಷಸ, ಮಹಾಪಿಶಾಚದಂತಹ ಮಹಾದುಷ್ಟಶಕ್ತಿ ಪೀಡೆಗಳಿಂದ ಈ ಪಾಯಸ ಕಾಪಾಡುವುದು. ದರಿದ್ರ ಪೀಡಿತರಿಗೆ ಇದು ಸಂಪತ್ತು ತರುವುದು" ಎಂದು ತಿಳಿಸಿದರು. ಈ ದಿವ್ಯಭಾಷಣ ಮಾಡುತ್ತಿರಲು, ಶ್ರೀಗಳ

ಕೆನ್ನೆಗಳಿಂದ ಕಣ್ಣೀರು ಜಾರಿದವು. ಚದುರಿದ ಕಂಠದಿಂದ ಶ್ರೀಪಾದರು, **"ಮಲ್ಲಾದಿಗಳ, ವೆಂಕಟಪ್ಪಯ್ಯ ಶ್ರೇಷ್ಠಿಗಳ ಮತ್ತು ವತ್ಸವಾಯಿಗಳ ವಂಶದ ಜೊತೆ ನನಗಿರುವ ಋಣಾನುಬಂಧ ಕಾಲಕಾಲಾಂತರದ್ದು! ಅವರ ವಾತ್ಸಲ್ಯಕ್ಕೆ ನಾನು ಪರವಶನಾದೆನು. ನನಗೆ ತಿನ್ನಲೂ ಏನಾದರೂ ಸಿಗುವುದೇನೋ ಎಂದು ನಾನು, ಯಥೇಚ್ಛವಾಗಿ ಅವರ ಅಡಿಗೆ ಕೊಠಡಿಗಳಿಗೆ ಸೂಕ್ಷ್ಮರೂಪದಲ್ಲಿ ಹೋಗುತ್ತಿರುವೆನು! ಅವರೇ ಅಲ್ಲ. ಬೇರೇ ಯಾರಾದರೂ ನನ್ನನ್ನು ವಾತ್ಸಲ್ಯದಿಂದ ಕಂಡರೇ, ಮುಗಿಯಿತು. ನಾನು ಮಗುವಾಗಿ ಅವರ ಮನೆಲ್ಲೇ ತಿರುಗಾಡುತ್ತಿರುವೆ! ನನ್ನ ಕಾಲಿನ ಸದ್ದು ಸದಾ ಅವರ ಎದೆಯಲ್ಲಿ ಪ್ರತಿಧ್ವನಿಸುತ್ತಿರುವುದು! ರಾತ್ರಿಯ ಸಮಯ, ಕುರುಂಗಡ್ಡೆಯಲ್ಲಿ, ನನ್ನ ಒಪ್ಪಿಗೆ ಇಲ್ಲದೇ ಯಾರೂ ಇರಬಾರದು. ಮುಕ್ತಿಯನ್ನು ಬಯಸಿ, ರಾಕ್ಷಸರು, ಮಹಾಪಿಶಾಚಿಗಳು, ದೊಡ್ಡ ಕಂಠದಲ್ಲಿ ಆರ್ತನಾದ ಮಾಡುತ್ತಿರುವೆರು. ನಾನು, ಅವನ್ನು ಕಬಳಿಸಿ, ನೂತನ ಮುಕ್ತ ದೇಹಗಳನ್ನು ಪ್ರಸಾದಿಸುತ್ತಿರುವೆನು!**

**ದೇವತೆಗಳು, ಗಂಧರ್ವರು, ಯಕ್ಷರು, ಅದೃಶ್ಯ ಶಕ್ತಿಗಳು ಮತ್ತು ಮಹಾಪದಾರ್ಥ ಸಂಬಂಧಿತ ಎಷ್ಟೋ ಉನ್ನತ ಪ್ರಾಣಿಗಳು ನನ್ನ ದರ್ಶನಾರ್ಥ ಬರುವರು. ಮಹಾಸಿದ್ಧರು, ಮಹಾಯೋಗಿಗಳು, ಶತಮಾನಗಳಂತೆ ತಪಸ್ಸಮಾಧಿಯಲ್ಲಿ ತೊಡಗಿರುವ ಮಹಾಪುರುಷರು ನನ್ನ ದರ್ಶನ, ಸ್ಪರ್ಶನ ಮತ್ತು ಸಂಭಾಷಣಾ ಭಾಗ್ಯಕ್ಕಾಗಿ ಆತುರತೆಯಿಂದ ಬರುವರು.** ನೀವೆಲ್ಲಾ ನದಿಯನ್ನು ದಾಟಿಹೋಗಿ. ಈ ಆಜ್ಞೆ ಎಲ್ಲರೂ ಶಿರಸಾವಹಿಸಬೇಕು'' ಎಂದು ಆಜ್ಞಾಪಿಸಿದರು.

ನಾವು ನೀರನ್ನು ದಾಟಿ ದಡದಲ್ಲಿನ ಹಳ್ಳಿ ಸೇರಿದೆವು. ಕನ್ಯಾದಾತರ ಮನೆಯಲ್ಲಿ ವಧುವರರನ್ನು ಕೂರಿಸಿ ಸುಬ್ಬಣ್ಣಶಾಸ್ತ್ರಿಗಳು, ಮಂತ್ರೋಚ್ಛಾರಣೆ ಸಲ್ಲಿಸುತ್ತಿದ್ದರು. ಶಾಸ್ತ್ರಿಗಳಿಗೆ ಈ ಮಂತ್ರ ತಿಳಿಯುವುದೇ ಹೊರತು, ಪ್ರೇತಸಂಸ್ಕಾರ ಮಂತ್ರಗಳು ತಿಳಿಯವು. ಮೇಲ್ಪಟ್ಟು ವಧೂವರರನ್ನು ಕೂರಿಸಿ, ಅಂತಹ ಮಂತ್ರಗಳು ಯಾರೂ ನುಡಿಯರು! ಶ್ರೀಪಾದರನ್ನು ಧ್ಯಾನಿಸಿ ಶ್ರೀ ಸುಬ್ಬಣ್ಣ, ಬ್ರಹ್ಮಸ್ಥಾನ ಅಲಂಕರಿಸಿದರು. ಬಾಯಿಂದ ಅಪ್ರಯತ್ನವಾಗಿ ಮಂತ್ರಗಳು ಹೊರಬೀಳುತ್ತಿದ್ದವು! ಅದು ಅವರಿಗೇ ಆಶ್ಚರ್ಯಗೊಳಿಸುತ್ತಿದ್ದವು. ಆ ಸರಣಿ ಪ್ರೇತಮಂತ್ರಗಳ ನಂತರವೇ ವಿವಾಹಮಂತ್ರಗಳು ಹೇಳಲಾಯಿತು! ಮಂಗಳಸೂತ್ರ ಬದಿಲಿಗೆ ಹರಿಷಿಣದ ಕೊಂಬು ಕಟ್ಟಲಾಯಿತು. ಕನ್ಯಾದಾತ ಬಡವ. ವರನು ಸಹಾ ಬಡವನೇ. ಅಲ್ಲಿ ತಂಗಿದ್ದ ಬ್ರಾಹ್ಮಣರು, ಆ ವಿವಾಹ ಸಂಪ್ರದಾಯಕರವಲ್ಲವೆಂದು ನಿಂದಿಸಿ, ಅಲ್ಲಿಂದ ಹೊರಟು ಹೋದರು! ವಲ್ಲಭೇಶ ಅನಾಥ. ಕನ್ಯೆ ತಂದೆ, ತಾಯಿ, ವರ, ಪುರೋಹಿತ ಮತ್ತು ನಾನೂ ಸೇರಿ ಐದು ಜನ ಮಾತ್ರವೇ! ನಾವೆಲ್ಲಾ ಶ್ರೀಗಳ ದರ್ಶನಕ್ಕೆ ಹೊರಟೆವು. ಅವರು ಆಶೀರ್ವದಿಸಿ ಆನಂದ ತಂದರು. ಸ್ವಲ್ಪ ಸಮಯ ಧ್ಯಾನ ಮಾಡಲು ಹೇಳಿ, ಅವರು ಹೊರಟರು. ನಾನು ಧ್ಯಾನಸ್ಥನಾದೊಡನೆಯೇ, ವಲ್ಲಭೇಶನ ಭವಿಷ್ಯತ್ತು ಗೋಚರಿಸಿತು. ವಲ್ಲಭೇಶ, ಅರಿಶಿನದ ವ್ಯಾಪಾರ ಮಾಡುತ್ತಿರುತ್ತಾನೆ. ಲಾಭ ಗಳಸಿದರೇ, ಕುರುವಪುರಕ್ಕೆ ತೆರಳಿ ಸಹಸ್ರ ಬ್ರಾಹ್ಮಣಾರಾಧನೆ ಮಾಡಬೇಕೆಂದು ನಿಶ್ಚಯಿಸುತ್ತಾನೆ. ಶ್ರೀಪಾದರ ಅನುಗ್ರಹದಿಂದ, ಹಾಗೆಯೇ ವ್ಯಾಪಾರದಲ್ಲಿ ವಿಶೇಷ ಲಾಭ ಪಡೆದನು. ಆದರೆ ಮಾಡಿದ ಬೇಡಿಕೆ ತೀರಿಸಲು ಮುಂದೆ ಹಾಕುತ್ತಾ ಬಂದ. ಇಷ್ಟರಲ್ಲಿ ಶ್ರೀಪಾದರು ಕುರಂಗಡ್ಡೆಯಲ್ಲಿ ಕಣ್ಣಿಗೆ ಕಾಣದೇ ಗುಪ್ತ ರೂಪ ತಾಳಿದರು. ಅಲ್ಲಿ ಅವರ ಪಾದುಕೆಗಳು ಮಾತ್ರ ಇದ್ದವು. ಗಳಿಸಿದ ಧನವನ್ನು ತೆಗೆದುಕೊಂಡು ಕುರಂಗಡ್ಡೆಗೆ ಬರುತ್ತಿರಲು, ನಾಲ್ವರು ಕಳ್ಳರು, ಯಾತ್ರಿಕರ ವೇಷದಲ್ಲಿ ವಲ್ಲಭೇಷನನ್ನು ಹಿಂಬಾಲಿಸಿ ವಧಿಸಿದರು. ಆತ ತನ್ನ ತಲೆ ಕಡಿಯುವ ಸಮಯ ಶ್ರೀಪಾದರನ್ನು ಸ್ಮರಿಸಿದನು. ತಕ್ಷಣ ಶ್ರೀಪಾದರು ತ್ರಿಶೂಲಧಾರಿಯಾದ ಒಂದು ಯತಿ ರೂಪದಲ್ಲಿ ಅಲ್ಲಿ ಪ್ರತ್ಯಕ್ಷವಾಗಿ ಮೂರು ಜನ ಕಳ್ಳರನ್ನು ವಧಿಸಿದರು. ನಾಲ್ಕನೆಯವ, ತಾನು ಕಳ್ಳನಲ್ಲವೆಂದು, ಸತ್ತ ಮೂವ್ವರೂ ದಾರಿಯಲ್ಲಿ ಪರಿಚಯವಷ್ಟೇ ಎಂದು, ಅವರ

ಮಾತಿಗೆ ಸಿಕ್ಕಿ ತಪ್ಪು ಮಾಡಿದ್ದೆನೆಂದು ನೊಂದು, ರಕ್ಷಿಸಲು ಶ್ರೀಗಳನ್ನು ಬೇಡಿದನು. ದಯಾಳು ಗುರುದೇವರು, ಅವನಿಗೆ ಅಭಯವಿತ್ತು, ಸ್ವಲ್ಪ ವಿಭೂತಿ ಅವನ ಕೈಗಿತ್ತು, "ವಲ್ಲಭೇಶನ ಶರೀರಕ್ಕೆ ಬಳಿದು, ಆಚೆ ಬಿದ್ದ ತಲೆಯನ್ನು ಸ್ವಸ್ಥಳಕ್ಕೆ ಸೇರಿಸುವಂತೆ ನುಡಿದರು. ಶ್ರೀಗಳ ಅಮೃತ ದೃಷ್ಟಿ ಸಹಾ ಬೀಳಲು, ವಲ್ಲಭೇಶ ಪುನಃ ಜೀವಂತವಾದನು! ಆ ನಾಲ್ಕನೆಯವನಿಂದ, ನಡೆದದ್ದೆಲ್ಲಾ ಕೇಳಿ ತಿಳಿದುಕೊಂಡೆನು. ಆಗ ಅವನ ಆನಂದಕ್ಕೆ ಅಂತ್ಯವೇ ಇಲ್ಲ. ಶ್ರೀಪಾದರ ದರ್ಶನಕ್ಕೆ ಮತ್ತಷ್ಟು ಸಂತೋಷಿಸಿದನು. ವಲ್ಲಭೇಶನ ಕಾರಣ, ತನಗೆ ಶ್ರೀಪಾದರ ದರ್ಶನ ಲಭಿಸಿತೆಂದು ಆ ನಾಲ್ಕನೇಯವ ಸಹಾ ಸಂತೋಷಪಟ್ಟನು. ವಲ್ಲಭೇಶನು ತನ್ನ ತಪ್ಪನ್ನು ಅರಿತು, ಸಾವಿರ ಬ್ರಾಹ್ಮಣರಿಗೆ ಅನ್ನ ಸಂತರ್ಪಣೆ ಕೊಡುವ ಶಕ್ತಿ ಎಂದೋ ಇತ್ತೆಂದು, ಅನಗತ್ಯವಾಗಿ ನಿಧಾನ ಮಾಡಿ, ತೊಂದರೆಗೆ ಸಿಲುಕಿದೆನೆಂದು ನೊಂದುಕೊಂಡು, ಆ ತಪ್ಪುಸಲುವಾಗಿ ನಾಲ್ಕು ಸಾವಿರ ಬ್ರಾಹ್ಮಣರಿಗೆ ಅನ್ನ ಸಂತರ್ಪಣೆಯನ್ನು ನೆರವೇರಿಸಿದನು.

## ಶ್ರೀಪಾದರ ವಿರಾಟ್ ಸ್ವರೂಪ

ಸ್ವಲ್ಪ ಸಮಯದ ನಂತರ, ಕಣ್ಣುಬಿಡುವಂತೆ ಶ್ರೀಗಳು ಆದೇಶಿಸಿದರು. ನಂತರ, ಶ್ರೀಗಳು "ನಮ್ಮ ಈ ಸನ್ನಿಧಿಯಲ್ಲಿ ಕಾರಣವಿಲ್ಲದ ಕಾರ್ಯ ನಡೆಯದು. ಸೃಷ್ಟಿವಿಧಾನ ವಿಚಿತ್ರ! **ನಿರಾಕಾರಿಯಾದ ನಾನು, ನರಾಕಾರಿಯಾಗಿ ನಿಮ್ಮ ಮುಂದೆ ನಡೆದಾಡುವುದು, ಆಶ್ಚರ್ಯ! ನಿರ್ಗುಣನಾದ ನಾನು, ಸಗುಣನಾಗಿ ನಿಮಗೆ ಕಂಡು ಬರುವುದು ವಿಚಿತ್ರ. ಮೊದಲಿಗೇ ಪರಿಮಿತಿಗಳಿಲ್ಲದ ನಾನು, ನಿಮಗೆ, ಹದ್ದುಗಳಿಂದ ಇರುವಂತೆ ಕಂಡುಬರುತ್ತಿರುವುದು ಮಹದಾಶ್ಚರ್ಯ! ಎಲ್ಲಾ ಶಕ್ತಿಗಳೂ ನನ್ನ ಹಸ್ತಗತ. ಈ ಅನಂತಕೋಟಿ ಬ್ರಹ್ಮಾಂಡದಲ್ಲಿ ಪ್ರತಿ ಅಣುವಿನಲ್ಲೂ ಇರತಕ್ಕಂತವನು ನಾನೇ! ಅಣುವಣುವನ್ನು ಸೇರಿಸಿರತಕ್ಕಂತ ಸಂಕಲ್ಪಸ್ವರೂಪವೂ ನಾನೇ! ಅದೇ ಅಣುವಣುವನ್ನು ಬೇರೆ ಮಾಡಿ, ನೂತನ ಸೃಷ್ಟಿ ರಚನೆಗೆ ರಂಗಸಿದ್ಧ ಮಾಡುವ ಪ್ರಳಯಕಾಲದ ರುದ್ರನೂ ನಾನೇ! ಇದು ಜ್ಞಾನವೆಂದು, ಅಜ್ಞಾನವೆಂದು ನಿಮಗೆ ಬೋಧನೆ ಮಾಡುತ್ತಾ, ಸರ್ವ ಜೀವಿಗಳನ್ನು ಅನೇಕ ವಿಧವಾದ ಮಾಯೆಗಳಲ್ಲಿ ತಳ್ಳಿಹಾಕಿ ಸಂತೋಷಿಸುತ್ತಾ, ಆರ್ದ್ರತೆಯಿಂದಾ ಕೂಗಿದಾಗ, ಸಹಸ್ರ ಬಾಹುಗಳಿಂದ ನಿಮ್ಮನ್ನೆಲ್ಲಾ ಕಾಪಾಡಿ, ಸಂರಕ್ಷಿಸುವ ಅನಾದಿತತ್ತ್ವವೂ ನಾನೇ. ಎಲ್ಲಾ ಜೀವಿಗಳಲ್ಲೂ 'ನಾನು,' 'ನಾನು' ಎಂದು ಅನಿಸುತ್ತಿರುವ, ಕಡಾಖಂಡಿತವಾದ 'ನಾನು' ಬಂದು, ನಾನೇ! ಅಂತಹಾ ನನ್ನಲ್ಲಿನ ಸರ್ವಶಕ್ತಿತ್ವ, ಸರ್ವಜ್ಞತ್ವವು, ಸರ್ವಾಂತರ್ಯಾಮಿತ್ವ ಇಲ್ಲದಿದ್ದರೇ ನೀವೆಲ್ಲಾ ಆಶ್ಚರ್ಯಪಡಬೇಕೇ ಹೊರತೂ, ಅವೆಲ್ಲಾ ನಿಮಗೆ ಕಂಡುಬಂದು, ಅನುಭವ ತರುತ್ತಿರಲೂ ನೀವು ಆಶ್ಚರ್ಯಪಡಬೇಕಾದದ್ದು ಏನಿದೆ!"** ಎಂದು ಪ್ರಶ್ನಾರ್ಥಕವಾಗಿ ನುಡಿದರು.

ಪರಬ್ರಹ್ಮ ಸ್ವರೂಪರಾದ ಶ್ರೀ ಗುರು ದೇವರು ಈ ರೀತಿ ಹೇಳುತ್ತಿರಲು, ಎಲ್ಲಿಂದಲೋ ಘಂಟನಾದ ಕೇಳಿಬಂದಿತು, ಎಲ್ಲರೂ ಆಶ್ಚರ್ಯಪಡುತ್ತಿರಲು, ಆ ಘಂಟೆ ಶ್ರೀಚರಣಗಳತ್ತ ವಾಲಿತು. ಕ್ಷಣಗಳಲ್ಲೇ ಎಲ್ಲರೂ ನೋಡುತ್ತಿರಲೂ ಮಾಯವಾಯಿತು.

## ಮಹಿಳೆಯರ ಪರ ಶ್ರೀಪಾದರ ಮಾತೃಭಾವನೆ

ಶ್ರೀಪಾದರು ಹೀಗೆ ನುಡಿದರು, **"ಈ ಶ್ರೀಪಾದ ಶ್ರೀವಲ್ಲಭ ಅವತಾರ, ಸದ್ಯ ಫಲಕೊಡುವ ಮಹಾವತಾರ.** ನಮ್ಮ ನಾಮಸ್ಮರಣೆಯಿಲ್ಲದ ಯಾವ ಅವಧೂತನೂ ಪೂರ್ಣಸಿದ್ಧನಾಗಲಾರ, ಯೋಗ ವಿಘ್ನಗಳನ್ನು ಜಯಿಸಲಾರ. ಎಲೈ! ವಲ್ಲಭೇಶನೇ! ಕೇಳು. ನಿನ್ನ ತಂದೆ ತಾಯಂದಿರು ನಿನ್ನ ಚಿಕ್ಕವಯಸ್ಸಿನಲ್ಲೇ ತೀರಿಹೋಗಲು, ನಿನ್ನ ನಾಲ್ವರು ಚಿಕ್ಕಪ್ಪಂದಿರೂ, ನಿನ್ನನು ಬಹಳಷ್ಟು

ಕಷ್ಟಗಳಿಗೆ ಗುರಿಮಾಡಿ, ನಿನ್ನ ಆಸ್ತಿಯನ್ನು ಕಬಳಿಸಿ, ನಿನ್ನನ್ನು ಬಿಕಾರಿಯನ್ನಾಗಿ ಮಾಡಿದ ರೀತಿ, ನಮಗೆ ತಿಳಿದಿದ್ದೆ! ಅವರ ಮಕ್ಕಳೂ ಸಹ ನಿನ್ನ ಪರ ವೈರತ್ವ ಬೆಳೆಸಿದ ವಿಷಯವೂ ನಮಗೆ ಗೊತ್ತು! ತೀರಿಹೋದ ನಿನ್ನ ಚಿಕ್ಕಪ್ಪಂದಿರು, ಪುನಃಜನ್ಮಿಸಿ ಕಳ್ಳರಾಗುವರು. ನೀನು ಕುರಂಗಡ್ಡೆಗೆ ಬರುವ ಸಮಯ ನಿನ್ನನ್ನು ಕೊಂದು, ನಿನ್ನ ಧನವನ್ನಪಹರಿಸಲೂ ಸಂಚು ಹಾಕುವರು, ನೀನು ನಮ್ಮನ್ನು ಸ್ಮರಿಸಿದರೇ, ತಕ್ಷಣ ಪ್ರತ್ಯಕ್ಷವಾಗಿ, ನಮ್ಮ ತ್ರಿಶೂಲದಿಂದ ಮುವ್ವರನ್ನು ಸಾಯಿಸುವೆವು. ನಾಲ್ಕನೆಯವನನ್ನು, ಸ್ವಲ್ಪ ದೋಷಗಾರನಾದ ಕಾರಣ ಬಿಟ್ಟುಬಿಡುವೆನು.''

ಶ್ರೀಪಾದರ ವಚನಗಳನ್ನು ಕೇಳಿ, ವಲ್ಲಭೇಶನ ಪತ್ನಿ ಕಣ್ಣೀರು ಹಾಕುತ್ತಿದ್ದಳು. ಶ್ರೀಪಾದರು, ''ಅಮ್ಮಾ! **ಶ್ರೀಪಾದ ಶ್ರೀವಲ್ಲಭನಾದ ನಾನು, ಪ್ರತಿ ಮಹಿಳೆಯಲ್ಲೂ ನನಗೆ ಜನುಮವಿತ್ತ ಅಖಂಡಸೌಭಾಗ್ಯವತಿ ಮಹಾರಾಣಿಯನ್ನೇ ನೋಡುತ್ತಿರುವೆನು.** ಆ ಮಹಾತಾಯಿಯ ಮಡಿಲಲ್ಲಿ ನಾನು ಸದಾ ಪುಟ್ಟಮಗುವೇ! ನೀನು ದುಃಖಿಸಬೇಡ. ನಾನು ಕೊಡುವ ಹರಿಷಿಣ ಕೊಂಬನ್ನು ಭದ್ರವಾಗಿಟ್ಟುಕೋ. ನಿನಗೆ ಸರ್ವಶುಭವೂ ಅದೇ ತರುವುದು. ನೀನು ಸುಮಂಗಳಿಯಾಗೇ ಜೀವಿಸುವೆ. ನನ್ನ ನುಡಿ ಶಿಲಾಶಾಸನವೇ. ಸೃಷ್ಟಿಯಲ್ಲಿ ಯಾರೂ ಅದನ್ನು ದಾಟಲಾರರು.

**ನನಗೆ ಗಾಯತ್ರಿ ಮಂತ್ರೋಪದೇಶವನ್ನು ಮಾಡಿದ ನನ್ನ ಮೊದಲ ಗುರುಗಳಾದ ನನ್ನ ತಂದೆಯ ಹೆಸರು ಚಿರಸ್ಥಾಯಿ ಮಾಡಬೇಕೆಂದೇ, ಅವರ ಹೆಸರಿನ ನರಸಿಂಹದಿಂದ 'ನರಸಿಂಹ ಸರಸ್ವತಿ' ಎಂಬ ಹೆಸರಿನಲ್ಲಿ ನನ್ನ ಮುಂದಿನ ಅವತಾರ ಬರಲಿದೆ. ನಮ್ಮ ತಾತನಾದ ಬಾಪನಾರ್ಯರ ಹೆಸರನ್ನು ಸಹ ಚಿರಸ್ಥಾಯಿಮಾಡಲೆಂದೇ 'ನೃಸಿಂಹ ಸರಸ್ವತಿ' ರೂಪ ಸಂಪೂರ್ಣವಾಗಿ ನಮ್ಮ ತಾತರನ್ನೇ ಹೋಲಿರುವುದು.** ತಾತನವರು ನನಗೆ ದ್ವಿತೀಯ ಗುರು. ಅವರ ಬಳಿಯೇ ನಾನು ವಿದ್ಯೆ ಕಲಿತಿದ್ದು. ನೀವೆಲ್ಲಾ ಈಗ ಕಂಡ ಈ ಘಂಟೆ ನನ್ನ ತಾತನ ಮನೆಯದು. ಅದು ನನ್ನ ಸಂಕಲ್ಪದಂತೇ ಸಾಧಕರನ್ನು ಅನುಗ್ರಹಿಸಲೂ ಅನೇಕ ದೇಶಗಳು ಸುತ್ತುತ್ತಿರುವುದು. ಅದು ಭೂಗರ್ಭದಲ್ಲೂ ಒಮ್ಮೊಮ್ಮೆ ಸಂಚರಿಸುವುದು. ಭೂಮಿಯ ಮೇಲಿನ ಪೊರೆಗಳಲ್ಲೂ ಸಂಚರಿಸಬಲ್ಲದು. ಶಂಕರ ಭಟ್ಟು! ನೀನು ರಚಿಸಲಿರುವ ಶ್ರೀಪಾದ ಶ್ರೀವಲ್ಲಭ ಚರಿತಾಮೃತ, ತೆಲುಗಿನ ಪ್ರತಿಯ ಜಯಸಂಖ್ಯಾ ರೂಪವಾದ 18ನೆಯ ಅಧ್ಯಾಯ, ಪೀಠಿಕಾಪುರ ಸೇರುವ ಸಮಯ ಆ ಘಂಟೆ ಪುನಃ ಪೀಠಿಕಾಪುರ ಸೇರುವುದು. ಈ ಘಂಟೆ ವಿವಿಧ ರೂಪ ಬದಲಾಯಿಸಿದ, ಪರಿಣಾಮ ಸಹಾ ನನ್ನ ಸಂಕಲ್ಪದಾನುಸಾರವೇ ನಡೆದುಕೊಳ್ಳುವುದು. ನನ್ನ ಅಜ್ಜನ ಸ್ವಗೃಹದಲ್ಲಿ ನನ್ನ ಹೆಸರಿನ ಮಹಾಸಂಸ್ಥಾನ ಹೊರಡುವುದು. ನನ್ನ ಪ್ರೇಮದ ಗುರುತಾಗಿ, ಜಯಜಯಧ್ವಾನ ರೂಪವಾದ ಘಂಟೆಯನ್ನು ಪೀಠಿಕಾಪುರಕ್ಕೆ ಕಳುಹಿಸುವೆನು.''



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 19

# ಗುರುಚರಣರಿಂದ ಸಮಾಗಮ

ವಲ್ಲಭೇಶ್ವರ ಶರ್ಮ ದಂಪತಿಗಳು, ನಾನು ಮತ್ತು ಸುಬ್ಬಣ್ಣ ಶಾಸ್ತ್ರಿ ಶ್ರೀಪಾದರ ಲೀಲೆಗಳನ್ನು ಸ್ಮರಿಸಿಕೊಳ್ಳುತ್ತಿದ್ದೆವು. ಆಗ ಅವರ ದೂರದ ಸಂಬಂಧಿ ಲಿಂಗಣ್ಣ ಶಾಸ್ತ್ರಿ ಎಂಬಾತನು ಬಂದನು. ಅತ ವೇದವೇದಾಂಗ ಪಾರಂಗತನು. ಲಿಂಗಣ್ಣ ಶಾಸ್ತ್ರಿ "ನಾನು ಪಿತೃ ತರ್ಪಣ ಸಲುವಾಗಿ ಪಾದಗಯಾ ಕ್ಷೇತ್ರವಾದ ಪೀಠಿಕಾಪುರಕ್ಕೆ ಬಂದಿದ್ದೇನೆ. ನಮ್ಮ ಅಜ್ಜ ಕರ್ಮಿಷ್ಠ ಬ್ರಾಹಣ ಮತ್ತು ಧನವಂತ. ಆದರೂ ಬಲು ಲೋಭಿ. ಶಾಸ್ತ್ರದಲ್ಲಿನ ಆಪದ್ಧರ್ಮಗಳನ್ನು, ಧರ್ಮಸೂಕ್ಷ್ಮಗಳನ್ನೂ ವಿತಂಡವಾದದಿಂದ ತನಗೆ ಅನುಕೂಲವಾಗಿ ಅನ್ವಯಿಸಿಕೊಳ್ಳಬಲ್ಲನು. ಪಿತೃದೇವತೆಗಳ ತೃಪ್ತಿಗಾಗಿ ಮಾಡುವ ದಶವಿಧ ದಾನಗಳನ್ನು 'ಯಥಾಶಕ್ತಿ' ಎಂಬುವ ಸೂತ್ರದಿಂದ ತನಗೆ ಅನುಕೂಲವಾಗಿ ತಿರುಗಿಸಿ, ಬಲು ಸ್ವಲ್ಪ ದ್ರವ್ಯದಿಂದ ಆ ಕಾರ್ಯ ಮುಗಿಯಿತು ಎನ್ನುತ್ತಿದ್ದನು. ಶ್ರದ್ಧಾಪೂರ್ವಕವಾಗಿ ಮಾಡಲಾದ ಶ್ರಾದ್ಧಕರ್ಮಗಳಲ್ಲಿ ಸಹಾ ಅನಗತ್ಯವಾಗಿ ಖರ್ಚಾಗುತ್ತಿದೆ ಎಂದು, ಭೋಕ್ತರೂ ಸಿಕ್ಕಿತೆಂದು, ಅಧಿಕವಾಗಿ ತಿನ್ನುತ್ತಿದ್ದಾರೆನ್ನುತ್ತಾ, ತನ್ನ ಮನೆ ಬಡವಾತ್ತಿದೆ ಎನ್ನುತ್ತಿದ್ದನು. ಆತ ತೀರಿಕೊಳ್ಳಲೂ, ನನ್ನ ತಂದೆ ಸಹಾ ಅವರಂತೆಯೇ ನಡೆದುಕೊಳ್ಳುತ್ತಿದ್ದರು. ಅವರೂ ತೀರಿಕೊಂಡರು. ನಾನು ಮಾತ್ರ ಶಾಸ್ತ್ರಪ್ರಕಾರ ನನ್ನ ಶಕ್ತಿಗೆ ಕಡಿಮೆ ಇಲ್ಲದೇ, ಹೆಚ್ಚೂ ಅಲ್ಲದೇ, ಶಕ್ತ್ಯಾನುಸಾರ ಪಿತೃದೇವತೆಗಳಿಗೆ ತರ್ಪಣಾದಿಗಳನ್ನು ಕೊಡುತ್ತಿದ್ದೆನು.

ಇಷ್ಟರಲ್ಲಿ, ನಮ್ಮ ಮನೆಯಲ್ಲಿ ಕಾರಣವಿಲ್ಲದೇ ಜಗಳಗಳು ಬಂದು, ಮನಶ್ಶಾಂತಿ ಇಲ್ಲದಾಯಿತು. ಅತಿ ಶಾಂತರಾದ ನನ್ನ ಬಂಧುಮಿತ್ರರು, ನನ್ನ ಮನೆಗೆ ಬಂದ ಸ್ವಲ್ಪ ಸಮಯಕ್ಕೆ ರೌದ್ರರಾಗಿ, ಹೊಡೆದಾಡಲೂ ನನ್ನ ಮನೆ ಕಲಹಗಳ ನಿಲಯವಾಯಿತು. ನನ್ನ ಪತ್ನಿ ಜಗಳವಾಡಿ ತವರಿಗೆ ಹೋಗಿರುವಳು. ನಾನು ಮಲಗಿರಲು ನನ್ನ ಪುತ್ರ ನನ್ನ ಕತ್ತು ಹಿಸುಕಲು ಬಂದನು! ನನ್ನ ಸೊಸೆ ನನ್ನನ್ನು 'ವಯಸ್ಸಾಯಿತೆಂದು, ಸಾಯುವುದು ಯಾವಾಗ' ಎನ್ನುತ್ತಿದ್ದಳು. ಮಗಳು ಸಹಾ, ನನ್ನಂತಹ ದರಿದ್ರನಿಗೆ ಹುಟ್ಟಿರಬಾರದೆಂದು ಕಠಿಣವಾಗಿ ನುಡಿಯುತ್ತಿದ್ದಳು. ಅಳಿಯನೋ, 'ನಮ್ಮ ಮನೆ ಕೆಲಸಕ್ಕೆ ಬರಬಾರದಾ, ಕಟ್ಟುಮಸ್ತಾಗಿದ್ದೀಯ, ಅಗತ್ಯ ಬಂದಾಗ ಬ್ರಾಹ್ಮಣಾರ್ಥಕ್ಕೂ ಹೋಗಿ ಬರಬಹುದು. ನಿನಗೆ ಬಕಾಸುರನಿಗೆ ಇತ್ತ ಹಾಗೆ ಊಟ ತಪ್ಪದೇ ಕೊಡುತ್ತೇವೆ. ನೀನೇ ಅಡಿಗೇನೂ ಮಾಡಿ, ತಿಂದು, ಉಳಿದರೇ ನಮಗೆ ಕೊಡಬಹುದು! ಎಂದು ವ್ಯಂಗ್ಯವಾಗಿ ಮಾತನಾಡುತ್ತಿದ್ದರು.

ನನ್ನ ಜೀವನ ಮುಳ್ಳಿನ ಜೀವನವಾಯಿತು! ಪ್ರತಿ ಜೀವಿಗೂ, ಜೀವಿಸುವುದರಲ್ಲಿ ಆಸೆ ಹುಟ್ಟಿ ಜೀವನದಲ್ಲಿ ಮಾಧುರ್ಯ ಕಂಡುಬರುವುದು. ಆದರೇ, ನನ್ನ ವಿಷಯದಲ್ಲಿ ಆ ಮಾಧುರ್ಯ ಇರಲಾರದೆಂದು ದೃಢವಾಗಿದೆ. ಹೋಗಲಿ, ಆತ್ಮಹತ್ಯೆಗೆ ಹೋಗೋಣವೆಂದರೇ, ಪಿಶಾಚಿಯ ಜನ್ಮಲಭಿಸಿದರೇ ಎಂಬ ಭಯ. ಹೇಗೂ ನನ್ನ ಮರಣಾನಂತರ, ಅಂತ್ಯಕ್ರಿಯೆಗಳು ಶಾಸ್ತ್ರಪ್ರಕಾರ ನಡೆಯುವುದಿಲ್ಲ. ಒಂದು ದಿನ ನಾನು, ನನಗೆ ವಹಿಸಿದ್ದ ಹಸುಗಳ ಮನೆಯನ್ನೆಲ್ಲಾ ಶುಭ್ರಮಾಡಿ ಊಟಕ್ಕೆ ಕೂಡಲು, ನನ್ನ ಸೊಸೆ ಹಳಸಿದ, ಹುಳಿಯುಕ್ತ ವಾಸನೆಯುಳ್ಳ ಅನ್ನವಿತ್ತಳು! ಕೆಲಸಗಳಿಂದ ಬಳಲಿದ್ದ ಮೈಗೊ ಊಟ ಬೇಕಿತ್ತು. ಕಣ್ಣೀರೂ ಸುರಿಸಲಾರದೇ, ಆ ಅನ್ನವೂ ತಿನ್ನಲಾರದೇ, ಈ ಲೋಕ, ಜನ, ಬಾಂಧವ್ಯಗಳೆಲ್ಲಾ ಸತ್ಯವೇನಾ ಎನ್ನಿಸಿತು! ಇಲ್ಲ, ಇವೆಲ್ಲಾ ಇಂದ್ರಜಾಲ, ಮಹೇಂದ್ರಜಾಲವಾ ಎನ್ನಿಸಿತು. ಆಲೋಚನಾಶಕ್ತಿಯೇ ಇಲ್ಲದೆ ಮೆದುಳು ಸ್ಥಬ್ದವಾಯಿತು.

ಇಂತಹ ವಿಷಮ ಪರಿಸ್ಥಿತಿಯಲ್ಲಿ ಒರ್ವ ಅವಧೂತರು ನಾನಿದ್ದ, ಹಸುಗಳ ಕೊಠಡಿಯಲ್ಲಿ ದರ್ಶನವಿತ್ತರು! ಕರುಣೆ ತುಂಬಿ ಹರಿಯುತ್ತಿದ್ದ ಕಣ್ಣುಗಳು, ಆ ಮಹಾಪುರುಷರನ್ನು ಕಂಡಕೂಡಲೇ ಬಿಕ್ಕಿಬಿಕ್ಕಿ ಅತ್ತೆನು. ಆತ ನನಗೆ ಚಿರಪರಿಚಿತರಂತೆ, ತೋಚಿತು! ಆತನ ಪಾದಗಳಮೇಲೆ ಬಿದ್ದು, ಆ ದಿವ್ಯಪಾದ ಎದೆಗೆ ಒತ್ತಿಕೊಂಡೆನು. ತನ್ನ ದಿವ್ಯಹಸ್ತದಿಂದ ಆ ದುರ್ಗಂಧ ಚಿಮ್ಮುತ್ತಿದ್ದ ಅನ್ನವನ್ನು ತಾಕಿದರು. ಅದು ಅದೃಶ್ಯವಾಯಿತು! ಬದಲಾಗಿ, 'ಹಲ್ವಾ' ಎಂದು ಕರೆಯಲಾದ ಸಿಹಿ ಇತ್ತು! ಅದರಲ್ಲಿ ಸ್ವಲ್ಪ ಆತ ಸ್ವೀಕರಿಸಿ, ಮಿಕ್ಕಿದ್ದು ನನಗೆ ಇತ್ತರು. ಸಂತೃಪ್ತಿಯಾಗಿ ತಿಂದೆನು. ನನ್ನಲ್ಲಿ ಜೀವಸತ್ವಗಳು ಚೇತನಗೊಂಡವು! ಆ ಅವಧೂತರು ನನನ್ನು ಒಂದು ಹಾರೆಯಿಂದ ದೇವ ಮೂಲೆಯಾದ, ಈಶಾನ್ಯೆಯನ್ನು ಅಗಿಯಲು ಹೇಳಿದರು. ಒಂದಾರಡಿ ಅಗಿಯಲು, ಅಲ್ಲಿ ಎರಡು ನಾಯಿಗಳ ಅಸ್ಥಿಪಂಜರಗಳು ಕಂಡುಬಂದವು. ಅವನ್ನು ತೆಗೆದುಹಾಕಿ, ನನ್ನ ಬಳಿಯಿದ್ದ ಗಂಜಲ ಅಲ್ಲಿ ಸುರಿಯಲಾಯಿತು. ಮಣ್ಣಿನಿಂದ ಆ ಹಳ್ಳ ಮುಚ್ಚಲೂ ಆದೇಶವಾಯಿತು. ಆಗ ಆ ಮಹಾಪುರುಷರು, "ನಿನಿಗೆ ಪಿಶಾಚಪೀಡೆ ತೊಲಗಿಸಿದ್ದೇನೆ. ನಿನ್ನ ಮನೆಗೂ ಈಗ ಸ್ಥಳಶುದ್ಧಿ ಲಭಿಸಿದೆ. ಕಾಲಕ್ರಮವಾಗಿ ನಿನ್ನ ಪರಿಸ್ಥಿತಿ ಸರಿಯಾಗುವುದು. ಪಾದಗಯಾ ಕ್ಷೇತ್ರವಾದ ಶ್ರೀ ಪೀಠಿಕಾಪುರದಿಂದ ಇದೋ, ನಿನಗೆ ಕರೆ ಬಂದಿದೆ. ತಕ್ಷಣ ಹೊರಡು. ಅಲ್ಲಿ ಸೇರೋಣ" ಎಂದರು.

ನಾನು ತಕ್ಷಣ ಇದ್ದ ಸ್ಥಿತಿಯಲ್ಲೇ ಪೀಠಿಕಾಪುರಕ್ಕೆ ಹೊರಟೆನು. ಮನೆಯವರಿಗೂ ತಿಳಿಸಲಿಲ್ಲ. ಸ್ವಲ್ಪ ಸಮಯದ ನಂತರ, ಸಂಜೆ ಆಯಿತು. ಒಂದು ಮಾವಿನ ತೋಪಿನಲ್ಲಿ, ನನ್ನ ನಡಿಗೆ ಸಾಗುತ್ತಿತ್ತು. ಆ ತೋಟದ ಯಜಮಾನ ನರಸಿಂಹಪ್ಪ, ನನ್ನನ್ನು ಪ್ರೀತಿಯಿಂದ ಕೂರಿಸಿ, ತಿನ್ನಲು ಮಧುರ ಫಲ ಕೊಟ್ಟನು. ನನ್ನ ಹಸಿವು ತೀರಿತು. ಆ ರಾತ್ರಿಗೆ ತನ್ನ ಮನೆಯಲ್ಲಿ ತಂಗಿ, ಊಟ ಮಾಡಲು ಬೇಡಿದರು. ನಾನೂ ಒಪ್ಪಿದೆ. ಮಾರನೇ ದಿನ, ಸ್ನಾನ, ಸಂಧ್ಯಾವಂದನೆ ನಂತರ ನಾನು ನನ್ನ ಪಯಣ ಮುಂದುವರೆಯಲೂ, ನನಗೆ ವಸ್ತ್ರಗಳು ಮತ್ತು ದಕ್ಷಿಣೆ ನೀಡಲಾಯಿತು. ಅವಧೂತರ ಹೇಳಿಕೆ ಪ್ರಕಾರ ನನ್ನ ಮಾರ್ಗ, ಹಾಯಾಗಿಯೇ, ಅಗತ್ಯಗಳೆಲ್ಲಾ ತೀರುತ್ತಾ ನಡೆಯುತ್ತಿತ್ತು. ಅಷ್ಟೇಅಲ್ಲ, ಆ ಯಜಮಾನ, "ಸ್ವಾಮಿ! ನಿನ್ನೆ ಮಧ್ಯಾಹ್ನದ ವೇಳೆ, ಒಬ್ಬ ಅವಧೂತರು ನನ್ನ ಸ್ವಪ್ನದಲ್ಲಿ ದರ್ಶನವಿತ್ತು, ಆ ಸಂಜೆಗೆ ಒಬ್ಬ ಸದ್ಬ್ರಾಹ್ಮಣನು ತೋಟದ ಮೂಲಕ ಪಾದಚಾರಿಯಾಗಿ ಹೋಗುವನೆಂದು, ಅವನಿಗೆ ಮಾವಿನಹಣ್ಣು ಕೊಟ್ಟು ರಾತ್ರಿ ತಂಗಲು ಅನುಕೂಲ ಮಾಡಿಕೊಟ್ಟು ನಂತರ ವಸ್ತ್ರ ಮತ್ತು ದಕ್ಷಿಣೆ ಕೊಟ್ಟು ಕಳುಹಿಸಬೇಕೆಂದು ಹೇಳಿದರು. ಅದೇ ರೀತಿ ನಿಮಗೆ ಸೇವೆ ಮಾಡುವ ಭಾಗ್ಯ ನನ್ನದಾಯಿತು" ಎಂದು ಖುಷಿಪಟ್ಟರು.

ಆ ವೃತ್ತಾಂತದಿಂದ, ಆ ಅವಧೂತರು ಸಾಮಾನ್ಯರಲ್ಲವೆಂದು, ಅತೀತ ಶಕ್ತರೆಂದು ತಿಳಿಯಿತು. ನಾನು ವೇದ ಹೇಳಿಕೊಳ್ಳುತ್ತಾ, ಆ ನೂತನ ವಸ್ತ್ರಗಳಲ್ಲಿ ನಡೆಯುತ್ತಿರಲೂ ನನ್ನ ನರಗಳು ಚೈತನ್ಯವಂತವಾದವು. ಅದು ಮಹದಾನಂದ ತಂದಿತು. ನನ್ನ ಹಿಂದೆ ಒಬ್ಬ ವೇದಪಂಡಿತ ಬರುವುದನ್ನು ಗಮನಿಸಿದೆನು. ಆ ವೇದಪಂಡಿತರು, ವೇದದ ಸಾವಿತ್ರಿಪನ್ನ ಹೇಳಲು ಶುರು ಮಾಡಿದರು. ನಾನೂ ಸ್ವರ ಸೇರಿಸಿದೆ. ಆಗ ಆತನು, 'ಸಾವಿತ್ರಿಪನ್ನ ಬಹಳ ಮುಖ್ಯವಾದದ್ದು. ತ್ರೇತಾಯುಗದಲ್ಲಿ ಶ್ರೀ ಭಾರಧ್ವಾಜ ಮಹರ್ಷಿ, ಸಾವಿತ್ರಿ ಕಾಠಕವನ್ನು ಚಯನ ಮಾಡಿದರು. ಅದೂ ಪೀಠಿಕಾಪುರದಲ್ಲೇ! ಆ ದತ್ತ ಪ್ರಭುಗಳು ಹಿಂದೆ ನೀಡಿದ ವಾಗ್ದಾನದನುಸರಿಸಿ, ಇಂದು ಪೀಠಿಕಾಪುರದಲ್ಲಿ ಶ್ರೀಪಾದ ಶ್ರೀವಲ್ಲಭರಾಗಿ ಅವತರಿಸಿದ್ದಾರೆ. ವೇದ, ಪ್ರಭುಗಳಿಗೆ ಪ್ರೀತಿಪಾತ್ರವಾದದ್ದು. **ವೇದ ಪಠನೆಯ ಅಧಿಕಾರ ಬ್ರಾಹ್ಮಣರಿಗೇ ಇದ್ದರೂ, ವೇದಗಳನ್ನು ಅಧ್ಯಯನ ಮಾಡುವ ಅಧಿಕಾರ ಮಾತ್ರ, ಸರ್ವ ವರ್ಣಗಳಿಗೂ ಕೊಡಲಾಗಿದೆ.** ಬ್ರಾಹ್ಮಣರು

ಶ್ರೀಕೃಷ್ಣನನ್ನು ಪೂಜಿಸುವರು. ಆ ಶ್ರೀಕೃಷ್ಣನೋ, ಬ್ರಾಹ್ಮಣರ ಪಾದಗಳು ತೊಳೆದ ಜಲವನ್ನು ತೀರ್ಥವಾಗಿ ಪ್ರೋಕ್ಷಣೆ ಮಾಡಿಕೊಳ್ಳುವರು. ಪೀಠಿಕಾಪುರಕ್ಕೆ ಹೊರಡುತ್ತಿರುವ ನೀನದೆಷ್ಟೋ ಅದೃಷ್ಟವಂತ'' ಎಂದನು.

ನಾನು, ಅವರನ್ನು, ''ಸ್ವಾಮಿ! ಶ್ರೀಪಾದ ಶ್ರೀವಲ್ಲಭರೆಂದರೇ ಯಾರು? ಅವರ ಮಹಿಮೆ ಕೇಳಲು ಆಸೆ ಆಗುತ್ತಿದೆ ಎನ್ನಲು, ಆ ವೇದ ಪಂಡಿತರು, ''ಮಗು! ಶ್ರೀಪಾದ ಶ್ರೀವಲ್ಲಭರ ದರುಶನ, ಸರ್ವಪಾಪ ಕ್ಷಯಕರ. ಅವರು ಸಾಕ್ಷಾತ್ ದತ್ತಾತ್ರೇಯರೇ. ಅವರ ಲೀಲಾ ಜನ್ಮಭೂಮಿ, ಶ್ರೀ ಪೀಠಿಕಾಪುರ. ಹಿಂದಿನ ಯುಗದ ಮಹಾತ್ಮರೂ ಸಹ, ಅಗತ್ಯವಿದ್ದಲ್ಲಿ ಅವತಾರ ಪುರುಷನ ಜೊತೆಜೊತೆಯಲ್ಲೇ, ಅವತರಿಸುವುದೂ ಉಂಟು! ಹಿಂದಿನ ಯುಗದಲ್ಲಿ ಸುಶೀಲ, ವಿಷ್ಣುದತ್ತ ನಾಮದ ಪುಣ್ಯದಂಪತಿಗಳಿದ್ದರು. ಆ ಪತಿವ್ರತೆ, ಮಹಾಸಾಧ್ವಿ. ತನ್ನ ಸಾಧನಾಪ್ರಕ್ರಿಯೆಯಲ್ಲಿ, ಅನಸೂಯ ಮಾತೆ ಸಂಗಡವೇ ಆತ್ಮಸ್ಥಿತಿಯಲ್ಲಿರುತ್ತಿದ್ದಳು! ದತ್ತ ಜಯಂತಿ ದಿನ, ಪ್ರಸವವೇದನೆ ಅನುಭಸುತ್ತಿದ್ದಳು. ವಿಷ್ಣುದತ್ತನು, ತನ್ನ ಸಾಧನಾಕುಶಲದಿಂದ, ಭೌತಿಕವಲ್ಲದ, ಪ್ರಕೃತಿಸಿದ್ಧಿ ಅಲ್ಲದ, ಮನೋಬುದ್ಧಿಗಳಿಗೆ ಕಾಣಸದಂತಹ, ಮಾತಿಗೆ ಸಿಗದಂತಹ, ಬಿಡಿಸಿಹೇಳಲೂ ಆಗದ ಮತ್ತು ದೇವ ರಹಸ್ಯವಾದ ತದಾತ್ಮ್ಯಸ್ಥಿತಿಯನ್ನು ಅತ್ರಿ ಮಹರ್ಷಿಗಳೊಡನೇ ಅನುಭವಿಸುತ್ತಿದ್ದರು. ಆ ದಂಪತಿಗಳೇ ಇಂದಿನ ಸುಮತಿ ಮಹಾರಾಣಿ ಮತ್ತು ಅಪ್ಪಲರಾಜ ಶರ್ಮ. ಅವರ ತಪಸ್ಸಿನ ಫಲವೇ ಅವರ ಸುಪುತ್ರ ಶ್ರೀಪಾದ ಶ್ರೀವಲ್ಲಭರು. ಅವರು ಕೃಷ್ಣಯಜುರ್ವೇದಿಗಳು, ಆಪಸ್ತಂಭ ಸೂತ್ರಿಗಳು, ಭಾರಧ್ವಾಜ ಗೋತ್ರರು. ಹಿಂದಿನ ಯುಗದ ಲಾಭದ ಎಂಬ ವೈಶ್ಯಮುನಿ, ವಾಸವೀಕನ್ಯಕಾ ಅವತಾರದಲ್ಲಿ ಭಾಸ್ಕರಾಚಾರ್ಯರಾಗಿಯು, ಶ್ರೀಪಾದ ಶ್ರೀವಲ್ಲಭ ಅವತಾರ ಸಮಯದೊಳು, ಸುಮತಿ ಮಹಾರಾಣಿಗೆ ತಂದೆಯಾದ ಬಾಪನಾರ್ಯರಾಗಿಯು ಜನ್ಮಿಸಿದರು. ನೀನು ಪೀಠಿಕಾಪುರದಲ್ಲಿ ಆ ಮಹಾ ಪುಣ್ಯವಂತರನ್ನು ದರ್ಶನ ಮಾಡಿಕೊಳ್ಳಬಲ್ಲೆ. ನಿನಗೆ ಆತಿಥ್ಯಕೊಟ್ಟು ವಸ್ತ್ರದಾನವನ್ನು, ದಕ್ಷಿಣೆಯನ್ನು ಕೊಟ್ಟ ಆ ತೋಟದ ಮಾಲೀಕನು, ಪೀಠಿಕಾಪುರದ ವೆಂಕಟಪ್ಪಯ್ಯ ಶ್ರೇಷ್ಠಿಯೆಂಬವನ ತಂದೆ ಆದ ಸುಬ್ಬರಾಮಯ್ಯ ಶ್ರೇಷ್ಠಿ ಎಂಬವರ ಬಳಿ ಹಿಂದಿನ ಜನುಮದಲ್ಲಿ ಆಳಾಗಿ, ಕೆಲಸಕ್ಕಿದವನು! ಪರಮ ಪವಿತ್ರರಾದ ಸುಬ್ಬರಾಮಯ್ಯ ಶ್ರೇಷ್ಠಿಗಳ ಮನೆ ಊಟ ಮಾಡಿದ ಪುಣ್ಯದಿಂದ, ಆತನು ಭೂಸ್ವಾಮಿಯಾಗಿ, ದೊಡ್ಡ ರೈತನಾಗಿ, ಸುಖದಿಂದ ಬಾಳುತ್ತಿರುವನು. ಪೀಠಿಕಾಪುರದಲ್ಲಿ ವೆಂಕಟಪ್ಪಯ್ಯ ಶ್ರೇಷ್ಠಿ ಮತ್ತು ನರಸಿಂಹ ವರ್ಮ, ಶ್ರೀಪಾದರಿಗೆ ಅತ್ಯಂತ ಪ್ರೀತಿಪಾತ್ರರು. ಅವರಿಗೆ ಶ್ರೀಗಳ ಮೇಲೆ ವ್ಯಾತ್ಸಲ್ಯ, ಭಕ್ತಿ, ಮತ್ತು ನಂಬಿಕೆ ಅಪಾರ'' ಎಂದು ವಿವರಿಸಿದರು.

ನಂತರ, ನಾನು ''ಸ್ವಾಮಿ! ಕರ್ಮಬಂಧಗಳು, ಅತ್ಯಂತ ಸಂಕ್ಲಿಷ್ಟ ಬಂಧಗಳೆಂದು ತಿಳಿದಿದ್ದೇನೆ. ಯಜ್ಞ ಮಾಡುವಾಗ ಪವಮಾನ ಮಡಿಕೆ ಒಡೆದರೇ, ಅದರೊಟ್ಟಿಗೆ ಮಾಡುವವನ ತಲೆ ಸಹಾ ಒಡೆಯುವುದೆಂದು ಹೇಳಲಾಗಿದೆ. ಈ ಕಾಲದಲ್ಲೂ ಯಜ್ಞಯಾಗಾದಿಗಳು ನಡೆಯುತ್ತಿವೆ. ಆಕಸ್ಮಿಕವಾಗಿ ಪವಮಾನ ಮಡಿಕೆಗಳು 3ರಲ್ಲಿ ಯಾವುದೊಂದಾದರೂ ಒಡೆದರೇ ಕರ್ತನ ಸಾವು ಆಗುತ್ತಿಲ್ಲ. ಇದಕ್ಕೆ ಕಾರಣವೇನು? ಈ ರೀತಿ ವೇದ ಶಾಸ್ತ್ರದಲ್ಲಿ ಹೇಳಿದಂತಹ ಶುಭ, ಅಶುಭಗಳು ಆಗದೇ ಇರುವುದರಿಂದಲೇ, ನಾಸ್ತಿಕರು ನಗುತ್ತಿದ್ದಾರೆ!'' ಎಂದು ಪ್ರಶ್ನಿಸಿದನು.

ಉತ್ತರವಾಗಿ ಆ ಮಹಾಮಹಿಮರು, ''ಮಗು! ಇಂದಿನ ಕಾಲದಲ್ಲಿ ನಡೆಯುತ್ತಿರುವ ಯಜ್ಞಗಳಲ್ಲಿ, ಪವಮಾನ ಮಡಿಕೆಗಳಲ್ಲಿ ವಿದ್ಯುತ್ತು ಮುಂತಾದ ಪ್ರಾಣಾಪಾಯ ಪದಾರ್ಥಗಳು ಇಲ್ಲ. ಯಜ್ಞಕರ್ತ ಬಲುಶಕ್ತಿಯ ಸಾಧಕನಾಗಿರಬೇಕು. ಅವನಲ್ಲಿ ಯೋಗಾಗ್ನಿ ಉಕ್ಕುತ್ತಿರಬೇಕು! ಆ ಶಕ್ತಿಯೇ ಪವಮಾನ ಮಡಿಕೆಯಲ್ಲಿ ವಿದ್ಯುತ್ತನ್ನು ಉಂಟು ಮಾಡಬಲ್ಲದು. ಮಹಾಯೋಗಿ ಆದವ, ಕರ್ತನಾಗಿ,

ಯಜ್ಞ ಮಾಡಿದ್ದಲ್ಲಿ ತಕ್ಷಣ ಫಲ ಹೊಂದಿ, ಲೋಕಕ್ಕೆ ಒಳ್ಳೆಯದು ಆಗುವುದು. ಹಾಗಲ್ಲದೇ ಹೆಸರಿಗೆ ಮಾತ್ರ ಕರ್ತನಾಗಿ, ನಿರ್ಲಕ್ಷ್ಯದಿಂದ ನಡೆಯುವ ಯಜ್ಞಕ್ಕೆ ವೇದೋಕ್ತ ಫಲ ಸಿಗದು. ಆ ಸಂದರ್ಭಗಳಲ್ಲಿ ಕೊಡತಕ್ಕಂತಹ ದಕ್ಷಿಣೆಯಲ್ಲಿ 16, 116,1116 ಎಂಬುವ ಸಂಖ್ಯಾಭೇದಗಳಿಗೆ ಸಹಾ ಎಷ್ಟೋ ರಹಸ್ಯವಿದೆ. ಗೋತ್ರ ಪಿತೃ ಸಂಬಂಧಿತವಾದದ್ದು, ಜೀವನಪೂರ್ತಿ, ಬದಲಾಯಿಸದೇ ಇರುವುದು. ಸಾಪಿಂಡ್ಯ ಎನ್ನುವುದು, ಮಾತೃ ಸಂಬಂಧಿತವಾದದ್ದು. ಈ ಧರ್ಮವು ಇದಕ್ಕೆ 7 ಪುರುಷಗಳಿಗೆ ಕೊನೆಯಾಗುವುದು. ಮದುವೆಗೆ ಪುತ್ರ ಮತ್ತು ಧನವೆಂಬ ಎರಡು ಫಲಗಳುಂಟು. ಈ ಎರಡನ್ನೂ ಪಡೆಯಲು, ಸ್ತ್ರೀ ಎಂಬ ಅಗ್ನಿ ಮುಖ್ಯವಾಗಿಬೇಕು. **ಗುಣಭೇದವೇ ಇಲ್ಲದ ಶ್ರೀಪಾದರಿಗೆ ಕುಲಭೇದ ಹೇಗೆ ಇದ್ದೀತು! ಅವರು ಭಾವಾದ್ವೈತವನ್ನು ಬೋಧಿಸುತ್ತಿದ್ದಾರೆ. ಕರ್ಮಾದ್ವೈತವನ್ನಲ್ಲ. ಆದಿಶಂಕರರಂತೆ, ಶ್ರೀಪಾದರು ಪಕ್ಷಪಾತರಹಿತರು. ಆದಿಶಂಕರರು, ಹೇಮ ವಿದ್ಯೆಯನ್ನು ಸತ್ವಗುಣ ಮುಖ್ಯವಾದ ಬ್ರಾಹ್ಮಣರಿಗೆ ಉಪದೇಶಿಸದೇ, ರಜೋಗುಣ ಪ್ರಧಾನರು, ಪರೋಪಕಾರ ಪಾರಾಯಣರು, ಸಾರಾಯಿ ಮಾರಿಕೊಂಡು ಬದುಕುವಂತಹ ಗೌಡಕುಲಸ್ಥರಿಗೆ ಉಪದೇಶಿಸಿದರು. ಅದೇ ಪ್ರಕಾರ, ಶ್ರೀಪಾದರು ಸಹ, ಜಾತಿ, ಮತ, ವರ್ಣ ಮತ್ತು ವಯಸ್ಸಿನ ಬೇಧವಿಲ್ಲದೆ, ಅವರವರ ಯೋಗ್ಯತೆ ಅನುಸಾರ, ತಮ್ಮ ಅನುಗ್ರಹ ನೀಡುವರು.** ಆದಿಶಂಕರರು, ಬ್ರಾಹ್ಮಣರಿಗೆ ಹೇಮ ವಿದ್ಯೆಯನ್ನುಪದೇಶಿಸಿದರೇ, ಅವರು ಲೋಭರಾಗಿ, ಧನ ವ್ಯಾಮೋಹಗಳಿಗೆ ಸಿಲುಕಿ, ಸ್ವಧರ್ಮಾನುಷ್ಠಾನ ಮರೆತುಹೋಗುವರು. ಮನಸ್ಸು, ಬುದ್ಧಿ, ಅಹಂಕಾರ, ಭೂಮ್ಯಾದಿ ಪಂಚ ತನ್ಮಾತ್ರಗಳು ಎಂಬ ಈ ಎಂಟನ್ನೂ ಜಡಪ್ರಕೃತಿಗಳೆನ್ನುವರು. ಚಿತ್ಪ್ರಕೃತಿಗೆ ಸೇರಿಸಿದರೇ ಇವು 9 ಆಗುವುದು. ಒಂದು ಎನ್ನುವುದು ಚಿತ್ಪ್ರಕೃತಿಯ ಪ್ರತೀಕ. 2 ರಿಂದ 9 ವರೆಗೂ ಇರುವ ಈ 8 ಅಂಕೆಗಳು, ಜಡಪ್ರಕೃತಿಗಳಿಗೆ ಪ್ರತೀಕ. ಶೂನ್ಯವೆಂಬುದು ಬ್ರಹ್ಮತತ್ವಕ್ಕೆ ಪ್ರತೀಕ. ಪೂರ್ಣದ ಜೊತೆ ಸೇರಿದ 9 ಅಂಕೆಗಳಿಂದ ಹುಟ್ಟಿದ ಗಣಿತ, ಪ್ರಕೃತಿಗಳ ಕಾರ್ಯಕಲಾಪಕ್ಕೆ ಅಂದರೇ ಸೃಷ್ಟಿಗೆ ಪ್ರತೀಕವಾಗಿದೆ. ಶ್ರೀಪಾದರು 2 ಚಪಾತಿಗಳಿಗೋಸ್ಕರ, 'ದೋ ಚೌಪಾತಿ ದೇವ್ ಲಕ್ಷ್ಮೀ' ಎಂದು ಹಾಸ್ಯಾಸ್ಪದವಾಗಿ ಭಿಕ್ಷೆ ಕೋರುತ್ತಿದ್ದರು! ಇದು 2498 ಎಂಬ ಸಂಖ್ಯೆಗೆ ಪ್ರತೀಕ. ಅವರ ಪ್ರತಿಯೊಂದು ಚಲನೆಯಲ್ಲೂ, ಮಾತಿನಲ್ಲೂ ನಾನಾರ್ಥಗಳು ಕಂಡುಬರುತ್ತಿದ್ದವು. ಸೃಷ್ಟಿಯ ಸಮಸ್ತ ದ್ವಂದ್ವಗಳಿಗೂ 2 ಪ್ರತೀಕ. ಸ್ಥೂಲ, ಸೂಕ್ಷ್ಮ, ಕಾರಣ ಮಹಾಕಾರಣಗಳಿಗೆ 4 ಪ್ರತೀಕ. ಬದಲಾವಣೆಗೆ ಒಳಗೊಳ್ಳದ ಬ್ರಹ್ಮತತ್ವಕ್ಕೆ 9 ಪ್ರತೀಕ. ಮಹಾಮಾಯೆಗೆ 8 ಪ್ರತೀಕ. ಶ್ರೀಪಾದರು, ಅರ್ಧನಾರೀಶ್ವರರು.''

## ಶ್ರೀಪಾದರ ವಿರಾಟ್ ಸ್ವರೂಪ

ನಾನು ಬೃಹತ್‌ಶಿಲಾನಗರವೆಂದು ಪ್ರಸಿದ್ಧಿಗೊಂಡ ಪೆನುಗೊಂಡ ಗ್ರಾಮಕ್ಕೆ ಸೇರಿದವನು. ನನ್ನನ್ನು ಗಣಪತಿಶಾಸ್ತ್ರಿ ಎನ್ನುತ್ತಾರೆ. ನಾನು ವೇಧಾಧ್ಯಯನ ಮಾಡಲು, ವಾಯಸಪುರ (ಕಾಕಿನಾಡ) ಕ್ಕೆ ಬಂದೆನು. ಗುರುಸೇವೆ ಮಾಡುತ್ತಾ ವೇದ ಕಲಿಯುತ್ತಿದ್ದೆ. ನಮ್ಮ ಗುರುದೇವರಿಗೆ ಅವರ ಮನೆಯ ಸಮೀಪದಲ್ಲೆ ಜಮೀನು ಇತ್ತು. ಅವರ ಬಳಿ ಗೋಗಣ ಸಹ ಅಧಿಕ. ನಾನು ಗೋಗಳನ್ನು ಕರೆದುಕೊಂಡು ಸದಾ ಅವರ ಜಮೀನಿಗೆ ತರಳುತ್ತಿದ್ದೆನು. ಒಂದು ದಿನ, 10 ವರುಷದ ಬಾಲಕನೊಬ್ಬನು, ದಿವ್ಯ ತೇಜಸ್ಸುಳ್ಳ ಪಶುಪಾಲಕನ ವೇಷದಲ್ಲಿ, ನಮ್ಮ ಜಮೀನಿಗೆ ಬಂದನು. ಜನಿವಾರವಿರಲು, ಆ ಬಾಲಕನನ್ನು, ಬ್ರಾಹ್ಮಣನೇನಾ ಎಂದು ಪ್ರಶ್ನಿಸಿದೆ.

ಆಗ ಆ ಬಾಲಕನು, ''ನಾನು, ನಾನೇ! ನನ್ನಲ್ಲಿ ಸಮಸ್ತ ತತ್ವಗಳೂ ಇವೆ. ಎಲ್ಲವುಕ್ಕೂ ಆಧಾರಭೂತನಾದ ನಾನು ಮಾತ್ರ ನಾನೇ! ನನ್ನಲ್ಲಿನ ಬ್ರಾಹ್ಮಣ ಲಕ್ಷಣಗಳನ್ನು ಕಂಡು ನೀನು ನನ್ನನ್ನು ಬ್ರಾಹ್ಮಣನಾಗಿ ಭಾವಿಸಿದ್ದು ತಪ್ಪಲ್ಲ. ಆದರೇ ಅದು ಮಾತ್ರವೇ

ಸತ್ಯವಲ್ಲ. ಅದೇ ರೀತಿ ನನ್ನಲ್ಲಿ ಕ್ಷತ್ರಿಯ, ವೈಶ್ಯ, ಶೂದ್ರ ಲಕ್ಷಣಗಳನ್ನು ಕಂಡು ಸಾಲಾಗಿ ನನ್ನನ್ನು ಕ್ಷತ್ರಿಯ, ವೈಶ್ಯ ಅಥವಾ ಶೂದ್ರನನ್ನಾಗಿ ಭಾವಿಸಿದರೇ ಅದು ಅಸತ್ಯ ಅಥವಾ ತಪ್ಪಲ್ಲ. ಆದರೇ ಅದು ಮಾತ್ರವೇ ಸತ್ಯವೂ ಅಲ್ಲ, ನನ್ನನ್ನು ಛಾಂಡಾಲನನ್ನಾಗಿ ಭಾವಿಸಿದರೂ ತಪ್ಪಲ್ಲ. ಆದರೆ ಅದು ಕೂಡ ಯಥಾರ್ಥವಲ್ಲ! ನಾನು ಸಮಸ್ತ ಪರಿಮಿತಿಗಳಿಗೂ ಮೀರಿದವನು. ಸತ್ಯಾಸತ್ಯಗಳಾಗಿ ಕಂಡುಬರುವ ಎಲ್ಲಾ ವಿಷಯಗಳಿಗೂ ನಾನು ಅತೀತನು, ಆಧಾರಭೂತನು ಸಹಾ. ನಾನು ಪರಮಸತ್ಯ. ಆಸತ್ಯತತ್ತ್ವ, ಎಲ್ಲಾ ಅವಧಿಗಳನ್ನು ದಾಟಿ ಅತ್ತಕಡೆ ಇರುವುದು ನನ್ನ ಧರ್ಮ, ಪರಮ ಧರ್ಮ. ಅದು, ಸಮಸ್ತ ಧರ್ಮಗಳಿಗೂ ಅತೀತ ಮತ್ತು ಆಧಾರಭೂತ ಎನ್ನದ್ದು ಪರಮ ಪ್ರೇಮತತ್ತ್ವ. ಸೃಷ್ಟಿಯ ಜೀವಿಗಳಲ್ಲಿನ ಎಲ್ಲಾ ಪ್ರೇಮತತ್ತ್ವಗಳಗಿಂತ, ಬಲು ದೂರದಲ್ಲಿರುವುದು. ಅಷ್ಟಲ್ಲದೇ, ಅವೆಲ್ಲವಕ್ಕೂ ಆಧಾರವೂ ಸರಿ. ನನ್ನನ್ನು ನೀನು ಪುರುಷನನ್ನಾಗಿ ಎಣಿಸಿದರೇ, ಮಹಿಳೆಯ ತರಹಾ ವರ್ತಿಸುತ್ತೇನೆ. ಸ್ತ್ರೀಯಾಗಿ ಭಾವಿಸಿದರೇ, ಪುರುಷನಂತೆ ವರ್ತಿಸುವೆನು. ಇಲ್ಲ ನನ್ನನ್ನು ಅರ್ಧನಾರೀಶ್ವರನನ್ನಾಗಿ ಊಹಿಸುವೆಯಾ, ಆ 2 ರೂಪಗಳೂ ವ್ಯಕ್ತವಾಗಲು, ಮುಂದಿರುವ ಮನೋವಾಚಾಮ ಗೋಚರವಾದ, ದಿವ್ಯಾನಂದ ತತ್ತ್ವವೆಂದು ತೋರಿಸಬಲ್ಲನು. ಇಷ್ಟು ವಿಲಕ್ಷಣಗಳಿರುವ ನನ್ನನ್ನು ಏನೆಂದು ಅರಿಯುವೆ?'' ಎಂದರು.

ನನಗೆ ಅವರು ಹೇಳುತ್ತಿರುವುದೆಲ್ಲವೂ ಅತಿ ಜ್ವರಪೀಡಿತನ ಪ್ರಲಾಪದಂತೆ ಕಾಣಿಸುತ್ತಿತ್ತು. ಪಿತ್ತ ಏರಲು, ಅರ್ಥವಿಲ್ಲದ ಮತ್ತು ಆಡಬಾರದಂತಹ ಮಾತುಗಳು ಬಾಯಿಂದ ಬರುವವು ಎಂದೆಣಿಸಿದೆ. ನನ್ನ ಮನಸ್ಸಿನ ಸ್ಥಿತಿ ಗಮನಿಸುತ್ತಿದ್ದ ಆ ಬಾಲಕನು, ''ನಾನೀಗ ಶ್ರೀ ಶನೈಶ್ಚರ ಸಂಗಡ ಮಾತನಾಡುತ್ತಿದ್ದೆ. ಆ ಶನೈಶ್ಚರನು, 'ಪ್ರಭೂ! ನಾನೀಗ ಗಣಪತಿ ಶಾಸ್ತ್ರಿಯನ್ನು ಎಷ್ಟು ತಿಳುವಳಿಕೆಯಿಂದ, ಚಿತ್ರವಿಚಿತ್ರವಾದ ಬಂಧನಗಳಿಗೆ ತಳ್ಳಿ ಹಿಂಸಿಸುವೆನೋ, ಆ ವಿಡ್ಡೂರವನ್ನು ತಾವು ತಿಲಕಿಸಿರಿ' ಎಂದು ನನ್ನೊಟ್ಟಿಗೆ ಹೇಳುತ್ತಿದ್ದಾನೆ, ಆದರೇ ನಾನು ಗಣಪತಿಶಾಸ್ತ್ರಿ ಕರ್ಮಫಲವನ್ನು ಗೋಕ್ಷೀರ ರೂಪದಲ್ಲಿ ಗ್ರಹಿಸಲಿರುವೆನು! ಆದ್ದರಿಂದ, ನೀನು ಇವನನ್ನು ಬಂಧನಗಳಲ್ಲಿ ಬೀಳಿಸಲಾರವೆಂದು, ಶನೈಶ್ಚರನಿಗೆ ಹೇಳಿದೆ'ನೆಂದು ಗಣಪತಿ ಶಾಸ್ತ್ರಿಗೆ ಹೇಳಿದೆನು.

ಆ ಮಾತು ಕೇಳಿದ ಕೂಡಲೇ ನನ್ನಲ್ಲಿ ಅನಿಶ್ಚಲತೆ ತುಂಬಿಕೊಂಡಿತು. ಸದ್ಯಕ್ಕೆ ಆ ಸಮಯದಲ್ಲಿ ನನ್ನ ಜಾತಕದಲ್ಲಿ ಸಹಾ ಬಹಳಷ್ಟು ಕೆಟ್ಟ ದಶೆ ನಡೆಯುತ್ತಿತ್ತು. ನಾನು ಏನೂ ಮಾತನಾಡದೇ ಇದ್ದಲ್ಲಿ, ಆ ಪಶುಪಾಲಕ ಒಂದು ಹಸುವಿನ ಬಳಿ ಹೋಗಿ, ''ಗಾಯತ್ರಿ, ನನಗೆ ಹಸಿವಾಗುತ್ತಿದೆ, ಹಾಲು ಕೊಡಬಲ್ಲೆಯಾ?'' ಎಂದು ಪ್ರಶ್ನಿಸಿದನು. ಗೋಮಾತೆ 'ಸರಿ' ಎನ್ನಲೂ ತಲೆ ತಿರುಗಿಸಿತು. ಅದರ ಕೆಚ್ಚಲು, ಹಾಲಿನಿಂದ ಉಕ್ಕಿ ಚಿಮ್ಮುವಂತಿತ್ತು. ಆ ಪಶುಪಾಲಕ ತೃಪ್ತಿಯಾಗಿ ಹಾಲು ಸವಿದನು. ನಿಜಕ್ಕೂ ಅದು ಬತ್ತಿ ಹೋದಂತಹ ಒಂದು ಮುದಿಯ ಗೋವು! ಆದರೂ ಹಾಲಿತ್ತು. ಇದು ನನಗೆ ಆಶ್ಚರ್ಯವಾಗಿ ಕಂಡುಬಂದಿತು. ಆ ಪಶುಪಾಲಕನು ತೃಪ್ತಿಯಾಗಿ, ಅಲ್ಲಿನ ಒಂದು ಮಾವಿನ ಗಿಡದ ಕೆಳಗೆ ಕುಳಿತನು. ನಾನು ಹಿಂತಿರುಗಿ ನೋಡಲು, ಅವನ ಬಳಿ ಒಂದು 10 ವರುಷದ ರೈತ ತರುಣಿ ಸಹಾ ಇದ್ದಳು. ಅವರಿಬ್ಬರೂ ನೋಡಲು ಅಚ್ಚುಮೆಚ್ಚಾಗಿದ್ದರು. ಅವರಿಬ್ಬರೂ ಸರಸವಾಡುತ್ತಾ ವಿನೋದ ತರುವ ಸಂಭಾಷಣೆಯಲ್ಲಿ, ತಕ್ಕ ಜೋಡಿಯಾಗಿ ಕಂಡುಬಂದರು. ಆಗ ವೆಂಕಟಪ್ಪಯ್ಯ ಶ್ರೇಷ್ಠಿಗಳು, ಕುದುರೆಯ ಗಾಡಿಯಿಂದ ಇಳಿದರು. ಅವರ ಜೊತೆ ತೇಜಸ್ಸಿನಿಂದಿದ್ದ ಒಬ್ಬ 10 ವರುಷದ ಬಾಲಕನೂ ಇಳಿದನು. ಆ ಮಂಗಳ ಸ್ವರೂಪವೇ ಶ್ರೀಪಾದ ಶ್ರೀವಲ್ಲಭರೆಂದು, ನಂತರ ತಿಳಿದುಕೊಂಡೆ. ನಮ್ಮ ಗುರುಗಳಿಗೆ ಈ ಜಮೀನನ್ನು ವೆಂಕಟಪ್ಪಯ್ಯ ಶ್ರೇಷ್ಠಿಗಳು, ಅವರ ತಂದೆಯ ಜ್ಞಾಪಕಾರ್ಥ ಭೂದಾನವಾಗಿ ಕೊಟ್ಟಿದ್ದರು. ಇದರ ಪಕ್ಕದಲ್ಲಿಯೇ, ಶ್ರೇಷ್ಠಿಗಳ ವಿಸ್ತಾರ ಜಮೀನುಗಳಿದ್ದವು. ಅವನ್ನು ನೋಡಿಕೊಳ್ಳಲು ಶ್ರೇಷ್ಠಿಗಳು

ಆಗಾಗ ಪೀಠಿಕಾಪುರದಿಂದ, ವಾಯಸಪುರ ಗ್ರಾಮಕ್ಕೆ ಬರುತ್ತಿದ್ದರು. ಶ್ರೇಷ್ಠಿಗಳು ಅಲ್ಲಿದ್ದ ಪಶುಪಾಲಕನನ್ನು ಕಂಡು ಆಶ್ಚರ್ಯಪಟ್ಟರು. ಏಕೆಂದರೇ ಅವನು, ಶ್ರೀಪಾದರನ್ನು ಬಹಳಷ್ಟು ಹೋಲಿಕೊಂಡಿದ್ದನು.

ಆಗ ಶ್ರೀಪಾದರು, ''ಅಜ್ಜಾ! ಏಕೆ ಇಷ್ಟು ಆಶ್ಚರ್ಯ ಪಡುತ್ತಿರುವೆ?'' ಎನ್ನಲು, ಅವರು, ''ಮಗು! ಅವರಿಬ್ಬರನ್ನೂ ನೋಡು, ನಯನಾಂದವಾಗಿದ್ದಾರೆ!'' ಎನ್ನಲು, ಶ್ರೀಪಾದರು ''ನೋಡುವವನು, ಕಂಡುಬರುತ್ತಿರವುದೂ ಒಂದೇನಾ?'' ಎಂದರು, ಆಗ ಶ್ರೇಷ್ಠಿಗಳು, ''ಅಷ್ಟು ವೇದಾಂತ ನನಗೆ ತಿಳಿಯದು ತಂದೆ!'' ಎಂದು ಪ್ರೀತಿಯಿಂದ ನುಡಿದರು.

ಶ್ರೀಪಾದರು, ''ಅಜ್ಜಾ! ಇದರಲ್ಲಿ ವೇದಾಂತವೇನಿದೆ! ಶ್ರೀಹರಿ ಸಹಾ ಅಂತ್ಯವಿಲ್ಲದ ತನ್ನ ಮಾಯಾಗತಿಯನ್ನು ಕಂಡು ಆಶ್ಚರ್ಯಪಟ್ಟನಂತೆ. ಈ ಸೃಷ್ಟಿ ನವರಸಭರಿತವು. ಆಶ್ಚರ್ಯಕರವಾದ ದೃಶ್ಯಗಳು ಬೆಳಕಿಗೆ ತರುವುದು ಸಹಾ ಸೃಷ್ಟಿಯ ಒಂದು ನಿಯಮ. ಅಲ್ಲಿ, ಎರಡಾಗಿದೆ, ಇಲ್ಲಿ ಒಂದಾಗಿದೆ! ದ್ವೈತ ನಿಜವೆ? ಅದ್ವೈತ ನಿಜವೆ? ನಾನು ಒಂದಾ, ಎರಡಾ ಅಥವಾ ಅನೇಕವೆ? ಆಲೋಚಿಸಿ ಹೇಳು'' ಎಂದರು.

ಶ್ರೇಷ್ಠಿಗಳಿಗೆ ಶ್ರೀಪಾದರ ಆ ಮಾತುಗಳಿಂದ, 'ಆ ಪಶುಪಾಲಕನು, ಆ ರೈತ ತರುಣಿ ಸಹಾ ಶ್ರೀಪಾದರ ಕಾರ್ಯಸೃಷ್ಟಿಯೇನಾ' ಎಂಬುವ ಸಂದೇಹ ಬಂದಿತು. ಶ್ರೇಷ್ಠಿಗಳ ಗಡ್ಡ ಹಿಡಿದು ಶ್ರೀಗಳು, ''ಅಜ್ಜಾ! ಸಂದೇಹವೇಕೆ? ನಿಮ್ಮ ವಂಶದವರು ನನ್ನನ್ನು ಮರೆಯದೇ ಇರುವವರೆಗೂ, ನಾನೂ, ನನ್ನ ಶಕ್ತಿ, ಗೋಚರಿಸದೇ ನಿಮ್ಮ ಜಮೀನುಗಳಲ್ಲಿ ಸುತ್ತುತ್ತಿರುವೆವು! ನಿಮ್ಮ ಮನೆಯಲ್ಲಿ ನನ್ನ ಕಾಲಿನ ಸದ್ದು, ಸಾಧಕರಿಗೆ ಕೇಳಿಬರುತ್ತಲೇ ಇರುವುದು! ಅನಘಾದೇವಿ ಸಮೇತನಾದ ಆ ಅನಘನು, ಶ್ರೀ ದತ್ತಾತ್ರೇಯರು, ತಮ್ಮ ಅರ್ಧನಾರೀಶ್ವರ ಸ್ವರೂಪ ದೃಷ್ಟಿಗೆ ಕಾಣದೇ, ಅವಧೂತ ರೂಪದಲ್ಲಿ ಶ್ರೀಪಾದ ಶ್ರೀವಲ್ಲಭ ಅವತಾರದಲ್ಲಿ, ನಿನ್ನ ಸಮಕ್ಷದಲ್ಲಿರುವೆನು. ಸಂದೇಹವೇ ಬೇಡ. ನಾನು ಸುಮತಿ ಮಾಯಿಗೆ ಮೊಟ್ಟಮೊದಲಿಗೆ ದರ್ಶನವಿತ್ತಾಗ, ನಾನು ಪುತ್ರನಾಗಿ ಜನ್ಮಿಸಿದಾಗ, ವಿವಾಹ ಪ್ರಯತ್ನ ಮಾಡಬಾರದೆಂದು, ಒಂದು ವೇಳೆ ಆ ಪ್ರಯತ್ನ ಮುಂದುವರಿಸಿದರೇ, ನಾನು ಮನೆ ಬಿಟ್ಟು ಹೊರಟು ಹೋಗುವೆನೆಂದೂ ತಿಳಿಸಿದ್ದೆನು. ನೀನು ರಾಜರ್ಷಿ ಆದ ಕಾರಣ, ದೃಢ ಭಕ್ತಿಯಿಂದ ನನ್ನನ್ನು ಬಂದಿಯಾಗಿ ಮಾಡಿದ್ದೀಯ. ಆದ್ದರಿಂದ, ಅನಘಾ ಸಮೇತನಾಗಿ ಅನಘ ಸ್ವರೂಪವನ್ನು ನಿನಗೆ ಪ್ರಸಾದಿಸಿದ್ದೇನೆ. **ಶ್ರೀಪಾದರ ಸನ್ನಿಧಿಯಲ್ಲಿ ಕಾರಣವಿಲ್ಲದ ಕಾರ್ಯ ನಡೆಯಲಾರದು. ಸೃಷ್ಟಿ ವಿಧಾನವು, ಚಿತ್ರವಿಚಿತ್ರವಾದುದ್ದು. ಕರ್ಮಗಳು, ಅವುಗಳ ಫಲ, ಅವು ಸಂಭವಿಸುವ ದೇಶಕಾಲಗಳೆಲ್ಲಾ ನನ್ನಿಂದಲೇ ನಿರ್ಣಯಿಸಲಾಗುವವು. ಮೂರ್ಖರಾದ ಜನರಿಗೆ ನನ್ನ ಕೃತ್ಯಗಳಿಂದ, ಲೀಲೆ ಮತ್ತು ಮಹಿಮೆಗಳಿಂದ ಜ್ಞಾನಬೋಧನೆ, ನನ್ನ ಅವತಾರದಲ್ಲಿ ಒಂದು ಭಾಗ"** ಎಂದು ನುಡಿಯುತ್ತಾ, ಶ್ರೀಗಳು, ನಾವೆಲ್ಲಾ ನೋಡುತ್ತಿರಲೂ ಕಾಂತಿರೂಪ ತಾಳಿ, ಮಾವಿನ ಮರದ ಕಡೆ ನಡೆದರು. ಆ ಪಶುಪಾಲಕ ಮತ್ತು ರೈತ ತರುಣಿ ಸಹಾ ಕಾಂತಿಗಳಾಗಿ ಸ್ವಾಮಿಯಲ್ಲಿ ಸೇರಿದರು! ಆ ಅಕಾಲದಲ್ಲೂ ಸಹಾ, ಆ ಮಾವಿನ ಮರ ಒಂದೇ ಒಂದು ಕಾಯಿ ಬಿಟ್ಟಿತು! ಅದನ್ನು ಶ್ರೀಪಾದರು ಕುಯ್ದು, ಭವ್ಯ ಫಲವಾಗಿರಲು, ಮಗುವಿಗೆ ತಾಯಿ ತಿನ್ನಿಸಿದಂತೆ, ಅದನ್ನು ಶ್ರೇಷ್ಠಿಗಳಿಗೆ ತಿನ್ನಿಸಿದರು. ಅದು ತಿನ್ನುವರೆಗೂ, ಶ್ರೇಷ್ಠಿಗಳು ಚಿಕ್ಕ ಮಗುವಿನಂತೆ ಅಳುತ್ತಿದ್ದರು! **ಶ್ರೀಪಾದರ ಮಾತೃಪ್ರೇಮ ಸಾವಿರ ತಾಯಂದಿರ ಪ್ರೇಮಕ್ಕಿಂತ ಜಾಸ್ತಿ. ಅವರ ದಿವ್ಯನೇತ್ರಗಳಿಂದ ಕರುಣೆ ಮತ್ತು ಪ್ರೇಮ ಸುರಿಯುವಾಗ, ಅವರು ಸಾಕ್ಷಾತ್ ತ್ರಿಶಕ್ತಿ ರೂಪಿಣಿ ಅನಘಾ ಮಾತೆಯೇ ಅನ್ನಿಸುವರು.** ಆ ಮಾವಿನ ಹಣ್ಣಿನ ಬೀಜ (ವಾಟು),

ನೇರಾಗಿನಿಂತ ಸೇವಕನಂತೆ, ಆಜ್ಞೆಗಾಗಿ ಕಾದಿರುವಂತೆ ಇತ್ತು! ಶ್ರೀಪಾದರ ಹಸ್ತ ಸಂಜ್ಞೆಯಿಂದ ಅದು ಮೇಲಕ್ಕೆ ಚಿಮ್ಮಿತು. ಕಾಂತಿಯಾಗಿ ಬದಲಾಯಿಸಿತು! ಶ್ರೀಪಾದರು, **"ಬೀಜ ಮೊದಲು ಬಂತಾ ಅಥವಾ ಮರವೋ ಎಂದು ಕೆಲವರು ವಿತಂಡವಾದ ಮಾಡುವರು! ಅವೆರಡಕ್ಕೂ ಮುಂದೆ ಬಂದವ ಭಗವಂತ. ಆವನು ಬೀಜದಿಂದ ಮರವನ್ನು ಬರಿಸಬಲ್ಲ. ಮರದಿಂದಲೇ ಬೀಜವೂ ತರಬಲ್ಲ! ಅವನ ಸಂಕಲ್ಪಗಳು ಸಪ್ತರ್ಷಿಗಳಿಗೂ ಊಹಾತೀತ. ಮಾಲಿನ್ಯಸಹಿತ ಪರಮಾತ್ಮ ಜೀವವೆಂದು ಕರೆಯಲ್ಪಡುವನು. ಅದೇ ಮಾಲಿನ್ಯವಿಲ್ಲದ ಜೀವನ, ಪರಮಾತ್ಮ ಆಗುತ್ತಿದ್ದಾನೆ!** ಜೀವಾತ್ಮ ಪರಮಾತ್ಮದೊಳು ಲೀನವಾದಲ್ಲಿ, ಅವನ ಸಂಸ್ಕಾರಗಳೆಲ್ಲವೂ ಬೆಂದ ಬೀಜದಂತೆ ಇರುವವು. ಆದರೇ ಪರಮಾತ್ಮನಿಗೆ ಸಂಕಲ್ಪ ಜನಿಸಿ, ತನ್ನಲ್ಲಿ ಲೀನವಾದ ಆ ಜೀವಿಯನ್ನು ಪುನಃ ಸೃಷ್ಟಿಚಕ್ರದಲ್ಲಿ ತರಲೂ ಯಾರೂ ಅಡ್ಡಬರಲಾರರು! ಅಂತಹಾ ಜೀವಿಗಳು, ಕಾರಣಜನ್ಮರಾಗಿ ದೈವಕಾರ್ಯ ನಿರ್ವಹಿಸುವರು. ಜನ್ಮಾಂತರದಲ್ಲಿ ಆ ಜೀವಿ ಪರಮಾತ್ಮನಲ್ಲಿ ಲೀನವಾಗುವುದು. ಪರಮಾತ್ಮನಲ್ಲಿ ಲೀನವಾಗದೇ ಅತ್ಯಂತ ಸಮೀಪದಲ್ಲಿರಲು ಬಯಸುವ ಜೀವಿ, ಆ ಆನಂದಮಯ ಸ್ಥಿತಿಯಲ್ಲೇ ಇರುವುದು. ಅಂತವರನ್ನೂ ಸಹ ಪರಮಾತ್ಮನು ದೈವ ಕಾರ್ಯಕ್ಕೆ ವಿನಿಯೋಗಿಸಬಲ್ಲನು. ಮತ್ತೇ ಜನುಮಾಂತರದಲ್ಲಿ ಪರಮಾತ್ಮನಲ್ಲಿ ಲೀನವಾಗದೇ, ಅತ್ಯಂತ ಸಮೀಪದಲ್ಲಿದ್ದು ಆನಂದ ಅನುಭವಿಸುವರು. ಜೀವಾತ್ಮ ಬೇರೆ, ಪರಮಾತ್ಮ ಬೇರೆ ಎಂಬುವ ಸ್ಥಿತಿಯಲ್ಲಿರಲೂ ಬಯಸುವ ಜೀವಿಗಳು, ಕಾರಣಜನ್ಮರಾಗಿ ದೈವ ಕಾರ್ಯವನ್ನು ನೆರವೇರಿಸಿದ ನಂತರ, ಪುನಃ ಮುಂದಿನ ಸ್ಥಿತಿಯಲ್ಲೇ ಜನ್ಮಾಂತರವರೆಗೂ ಇರುವರು. ದ್ವೈತ ಸ್ಥಿತಿಯಾಗಲಿ, ವಿಶಿಷ್ಟಾದ್ವೈತ ಅಥವಾ ಅದ್ವೈತ ಸ್ಥಿತಿ ಆಗಲಿ, ಜೀವಿಗಳ ಕೋರಿಕೆಯಂತೆ ಯೋನಿ ನೀಡಲಾಗುವುದು. ಆದ್ದರಿಂದ, ಜನರು ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತಗಳಲ್ಲಿ ಯಾವುದು ಮಹತ್ತರವೆಂದು ವಾದಮಾಡಿಕೊಳ್ಳುವುದೂ ತಪ್ಪು. ಸೃಷ್ಟಿ, ಸ್ಥಿತಿ, ಲಯಗಳು ಪ್ರತಿಕ್ಷಣವೂ ನಡೆಯುತ್ತಲೇ ಇರುವವು. ಬ್ರಹ್ಮ ವಿಷ್ಣು ಮಹೇಶ್ವರರು ಅವರವರ, ಕಲ್ಪಾಂತಗಳಲ್ಲಿ ಪರಮಾತ್ಮನ ಅವ್ಯಕ್ತಾನಂದ ಸ್ಥಿತಿಯಲ್ಲಿರುವರು. ಅವರು ಮತ್ತೆ ಮಹಾಸಂಕಲ್ಪವನ್ನನುಸರಿಸಿ, ವ್ಯಕ್ತಸ್ಥಿತಿಗೆ ಬಂದು, ಅವರಿಗಾಗಿ ನೂತನವಾಗಿ ಸೃಷ್ಟಿಸಲ್ಪಟ್ಟ ಬ್ರಹಾಂಡಗಳಲ್ಲಿ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವರು. ನವವ್ಯಾಕರಣ ಪಂಡಿತನಾದ ಶ್ರೀ ಹನುಮಂತನು ಮುಂದಿನ ಕಲ್ಪದಲ್ಲಿ ಬ್ರಹ್ಮನಾಗುವೆನು. ಜೀವಿಗಳಿಗೆ ಅವರವರ ಸಂಸ್ಕಾರಗಳಂತೆ, ಯೋಗ್ಯತಾವಿಶೇಷಗಳಂತೆ, ವಿಶ್ವಪಾಲನೆಯ ಕಾರ್ಯಕ್ರಮದಲ್ಲಿ ಜವಾಬ್ದಾರಿಗಳನ್ನು ಕೊಡಲಾಗುವವು. ಆದ್ದರಿಂದ, ಸೃಷ್ಟಿಯ ಬ್ರಹ್ಮಾಂಡಗಳು, ಅನೇಕ ಕೋಟಿ. ಅವುಗಳ ಪಾಲನೆಯ ಬಾಧ್ಯತೆಯೂ, ಅನಂತ ದೇವತಾಶಕ್ತಿಗಳಿಂದಲೇ! ಅವರ ವಿರುದ್ಧರಾದ ರಾಕ್ಷಸ ಶಕ್ತಿಗಳೂ ಅನಂತವೇ! ತುರುಷ್ಕರು, ಸಗುಣೋಪೇತನಾದ ನಿರಾಕಾರನನ್ನು 'ಅಲ್ಲಾ' ಎನ್ನುವರು. ಕ್ರೈಸ್ತವರು 'ಯಹೋವಾ' ಎಂದು, ಪ್ರತಿಬಿಂಬಿಸಿದ ಕೂಟಸ್ಥ ಚೈತನ್ಯಕುಮಾರವನ್ನು 'ಏಸು' ಎಂದು, ಸ್ವಾಂತವನ್ನು, ಆದರಣೆಯನ್ನು, ಪ್ರೇಮವನ್ನು, ಕರುಣೆಯನ್ನು ನೀಡುವ ದಿವ್ಯಚೈತನ್ಯವನ್ನು 'ಪವಿತ್ರಾತ್ಮ'ವೆಂದೂ ಕರೆಯುವರು. **ಸಮಸ್ತ ಧರ್ಮಗಳಲ್ಲಿ, ಮತಗಳಲ್ಲಿ ಮತ್ತು ಸಿದ್ಧಾಂತಗಳಲ್ಲಿಯೂ, ಸ್ವಪ್ರಕಾಶದಿಂದ ಬೆಳಗುವವನು ನಾನೇ! ಆಯಾ ಜೀವಿಗಳ ಇಚ್ಛೆಯಂತೆ, ಅಭಿರುಚಿಯಂತೆ, ಅವರವರ ಪಥಗಳಂತೆ ಮತ್ತು ಅವರ ಸ್ಥಿತಿಗಳ ಅನುಸಾರವಾಗಿ, ವಿವಿಧ ತತ್ವಗಳಿಂದ ಕಂಡುಬರುವವನು ನಾನೇ! ನಾನು ಸರ್ವತಂತ್ರ ಸ್ವತಂತ್ರನು, ಎಲ್ಲವನ್ನೂ ಸಾಧಿಸಬಲ್ಲನು. ನನಗೆ ನಿರ್ದಿಷ್ಟವಾದ ಪದ್ಧತಿ ಇಲ್ಲ. ಎಲ್ಲಾ ದೇವಿದೇವತಾ ಸ್ವರೂಪಗಳಲ್ಲೂ, ಗರ್ಭದಿಂದ ಉಜ್ವಲವಾಗಿ ಪ್ರಕಾಶಿಸುವನು ನಾನೇ. ಆದ್ದರಿಂದ, ಆಯಾ ಸ್ವರೂಪಗಳ ಮೂಲಕ ಪೂಜೆಗಳನ್ನು ಸ್ತೋತ್ರಗಳನ್ನು ಗ್ರಹಿಸುವನೂ ನಾನೇ! ಎಲ್ಲರನ್ನೂ ಅನುಗ್ರಹಿಸುವವನೂ ನಾನೇ!** ಕಲಿಪುರುಷನ ಮಾಯೆ, ಅಂತವಾದಂತಯೇ ಸರ್ವಮತ ಸಾರವಾದ, ಸನಾತನ ಧರ್ಮವೇ ನನ್ನ

ಸ್ವರೂಪವೆಂಬುವ ತಿಳುವಳಿಕೆ ಉದಯಿಸುವುದು. ಸಾಧಕನು, ಬಹಿರ್ಯಾಗದಿಂದಾಗಲಿ, ಅಂತರ್ಯಾಗದಿಂದಾಗಲಿ ನನ್ನನ್ನು ಪಡೆಯಬಹುದು. ಅವನು ಬಹಿರ್ಮುಖಿಯಾಗಲಿ, ಅಂತರ್ಮುಖಿಯಾಗಲಿ, ನಾನು ಸದಾ ಕಾಪಾಡುತ್ತಿರುವೆನು, ಪ್ರೇಮದಿಂದ ಸಂಪರ್ಕಿಸಲೂ ಬಲ್ಲೆನು. ವೇದದಲ್ಲೂ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂದು ಹೇಳಲಾಗಿದೆ. ನಾನೇ ಆ ಸತ್ಯ, ಜ್ಞಾನ ಮತ್ತು ಅನಂತವಾದ ಬ್ರಹ್ಮಸ್ವರೂಪ. ನಾಸ್ತಿಕನಿಗೆ, ದೇವರಿಲ್ಲವೆಂದು ಪ್ರಬೋಧಿಸುವನೂ ನಾನೇ! ಆಸ್ತಿಕನಿಗೆ ದೇವರಿರುವನೆಂದೂ ಎಚ್ಚರಗೊಳಿಸುವನೂ ನಾನೇ! ಸಮಸ್ತ ಗುರು ಸ್ವರೂಪವೂ ನಾನೇ. ಸತ್ಯಲೋಕವು, ಸತ್ಯನಾಮವು, ಗೋಲೋಕವು ಮತ್ತು ಮಹಾಶೂನ್ಯ ಮುಂತಾದ ಸಾಧನಾಸ್ಥಿತಿಗಳಲ್ಲೂ ಸ್ವಯಂಪ್ರಕಾಶದಿಂದ ಬೆಳಗುತ್ತಿರುವವನು ನಾನೇ! **ಯಾರಾದರೇ ನಿರ್ಮಲ ಭಕ್ತಿಯಿಂದ ನನ್ನನ್ನು ಆರಾಧಿಸುವರೋ, ಎಲ್ಲಾ ಭಾರಗಳನ್ನೂ ನನಗೆ ವಹಿಸಿ, ಸರ್ವಸ್ಯ ಶರಣಾಗತಿ ಎಂದು ಅರ್ಪಿಸಿಕೊಳ್ಳುವರೋ, ಅಂತವರ ಯೋಗಕ್ಷೇಮಗಳನ್ನು ನಾನು ನೋಡಿಕೊಳ್ಳುತ್ತಿರುವೆನು. ನಾನು ಶ್ರೀಪಾದನು, ಶ್ರೀವಲ್ಲಭನು. ಅಜ್ಞಾ! ಅಂದಿನ, ಅತ್ಯಂತ ಪ್ರಾಚೀನಯುಗದ ಅತ್ರಿ, ಅನಸೂಯಾ ನಂದನನೇ ಇಂದಿನ ಶ್ರೀಪಾದ ಶ್ರೀವಲ್ಲಭನು. ಅಜ್ಞಾ! ಭಾರಧ್ವಾಜ ಋಷಿಗಳಿಗಿತ್ತ ವಾಗ್ದಾನ ಪ್ರಕಾರ, ಪೀಠಿಕಾಪುರದಲ್ಲಿ ಹುಟ್ಟಬೇಕಾಗಿ ಬಂದಿತು.** ಶ್ರೀ ವೆಂಕಟಪ್ಪಯ್ಯ ಶ್ರೇಷ್ಠಿಗಳ ಕಣ್ಣಿನಿಂದ, ಧಾರಾಕಾರವಾಗಿ ಆನಂದಾಶ್ರುವುಗಳು ಸುರಿಯುತ್ತಿದ್ದವು. ಅವರು ಶ್ರೀಪಾದರನ್ನು ಬಿಗಿಯಾಗಿ ಅಪ್ಪಿಕೊಂಡರು. ಅವರು ವರ್ಣಿಸಲಾರದ ಮತ್ತು ಹೇಳಲಾರದ ತನ್ಮಯತ್ವ ಹೊಂದಿದರು. ಸ್ವಲ್ಪ ಸಮಯದ ನಂತರ, ಶ್ರೇಷ್ಠಿಗಳು, "ಕಂದಾ! ನನ್ನ ಚಿನ್ನ! ನಮ್ಮ ವಂಶದ ಮೇಲೆ ನಿನ್ನ ಅನುಗ್ರಹವಿರಲಿ. ನಮ್ಮ ಗೋತ್ರ ಮತ್ತು ಆರ್ಯವೈಶ್ಯ ಕುಲದ ಮೇಲೆ ನಿನ್ನ ಅನುಗ್ರಹವಿರಲಿ!" ಎಂದು ಬೇಡಿದರು. ಆಗ ಶ್ರೀಪಾದರು, "ತಾತ! ತಥಾಸ್ತು! ಬ್ರಾಹ್ಮಣನಿಗೆ ಒಂದು ವರ ಕೇಳಲೂ ಅಧಿಕಾರ ಉಂಟು, ಕ್ಷತ್ರಿಯನಿಗೆ ಎರಡು, ವೈಶ್ಯನಿಗೆ ಮೂರು ಮತ್ತು ಶೂದ್ರನಿಗೆ ನಾಲ್ಕು ವರ ಕೇಳಲೂ ಅಧಿಕಾರವಿದೆ. ನೀನು ಬೇಡಿದ ಮೂರು ವರಗಳೂ ಅನುಗ್ರಹಿಸಿದ್ದೇನೆ. **33 ಕೋಟಿ ದೇವತೆಯರ ಅಣೆಗೂ ವಾಗ್ದಾನ ಮಾಡುತ್ತಿದ್ದೇನೆ. ನನ್ನ ಹೆಸರಿನಲ್ಲಿ, ನನ್ನ ಮಾತಾಮಹರಾದ ಶ್ರೀ ಬಾಪನಾರ್ಯರ ಮನೆಯಲ್ಲಿ, ನನ್ನ ಜನ್ಮಸ್ಥಾನದಂದು ಶ್ರೀಪಾದ ಶ್ರೀವಲ್ಲಭ ಮಹಾಸಂಸ್ಥಾನ ನಿಲ್ಲುವುದು. ನಿನ್ನಿಂದ 33ನೆಯ ತಲೆಮಾರು ನಡೆಯುತ್ತಿರಲು, ಶ್ರೀ ಬಾಪನಾರ್ಯರಿಂದ 33ನೇ ತಲೆಮಾರು ನಡೆಯುತ್ತಿರಲು ಮತ್ತು ಶ್ರೀ ನರಸಿಂಹ ವರ್ಮರಿಂದ 33ನೇ ತಲಮಾರು ನಡೆಯುತ್ತಿರಲು, ನಿನ್ನ ವಂಶದಲ್ಲಿನ 33ನೇ ತಲಮಾರಿನ ವ್ಯಕ್ತಿಯನ್ನು ಹೆಸರು ಮಾತ್ರಕ್ಕೆ ನಿಲ್ಲಿಸಿ, ನನ್ನ ಸಂಸ್ಥಾನವನ್ನು ನಾನೇ ಸ್ಥಾಪಿಸಿಕೊಳ್ಳುವೆನು.** ನಿಮ್ಮ ವಂಶ ಮೂಲಪುರುಷನಾದ ಶ್ರೀ ಮಾರ್ಕಂಡೇಯ ಮಹರ್ಷಿಯನ್ನು ಆದೇಶಿಸುತ್ತಿದ್ದೇನೆ. ಮಾರ್ಕಂಡೇಯ ಮಹರ್ಷಿ ಪ್ರತಿ ಗುರುವಾರ ಮಧ್ಯಾಹ್ನದ ಸಮಯ, ಯಾವುದೋ ಒಂದು ರೂಪದೊಳು, ನನಗಿತ್ತ ನೈವೇದ್ಯ ಪದಾರ್ಥದಿಂದ ಎಷ್ಟೋ ಒಂದಷ್ಟು ಗ್ರಹಿಸಲಿ! ಅದರಿಂದ ಮಾರ್ಕಂಡೇಯ ಗೋತ್ರದಲ್ಲಿ ಜನಿಸಿದವರಿಗೆ ಒಳ್ಳೆಯದಾಗಲಿ! ನೀನು ಬಯಸಿದಂತೆಯೇ, ಆರ್ಯವೈಶ್ಯರ ಮೇಲೆ ನನ್ನ ಅನುಗ್ರಹ ಇದೆ. **ಆರ್ಯವೈಶ್ಯರಿಗೆ ರಾಜ್ಯಾಧಿಕಾರದ ಯೋಗ ಸಿಗುವಂತೆ ಆಶೀರ್ವದಿಸುತ್ತಿದ್ದೇನೆ. ಅದರ ಫಲವಾಗಿ ಸ್ವಲ್ಪ ಕಾಲದಲ್ಲೇ ಆರ್ಯವೈಶ್ಯನೊಬ್ಬನು ಭಾರತದ ಪ್ರಭು ಆಗುವನು. ವಿಚಿತ್ರವಾದ ನಾಡೀ ಜ್ಯೋತಿಷ್ಯದ ಸೂಚನೆಯ ಪ್ರಕಾರ, ಆತ ಪೀಠಿಕಾಪುರಕ್ಕೆ ಬರುವನು. ನನ್ನ ಅನುಗ್ರಹ ಪೂರ್ಣವಾಗಿ ಹೊಂದುವನು. ನಂತರ, ನೇಪಾಳ ದೇಶದಿಂದ ಭಕ್ತಜನರು, ಅಸಂಖ್ಯವಾಗಿ ನನ್ನ ದರ್ಶನಕ್ಕಾಗಿ ಇಲ್ಲಿಗೆ ಬರುವರು. ನನ್ನ ನುಡಿ, ಖಂಡಿತವಾದದ್ದು. ಶಿಲಾಶಾಸನದಂತದ್ದು! ಸೃಷ್ಟಿಯ ಯಾವ ಪ್ರಾಣಿಯೂ ಅದನ್ನು ಉಲ್ಲಂಘಿಸಲಾರದಂತಹ ಶಾಸನ!**

**ತಾತ! ನಿನ್ನ ಈ ಕೈ ಗಂಟೆ, ವಿವಿಧ ಬದಲಾವಣೆಗಳಿಗೆ ಒಳಗೊಂಡು, ನನ್ನ ಮೂರ್ತಿ ಪ್ರತಿಷ್ಠಾಪಿಸಲ್ಪಡುವಂತಹ ಸ್ಥಳದಲ್ಲಿ ಭೂಗರ್ಭವಾಗಿರುವುದು. ಆದ್ದರಿಂದಲೇ ಮುಂಬರುವ ಕಾಲಕ್ಕೆ, ಅಲ್ಲಿ ಭೂ ಅಗೆತದಲ್ಲಿ ಮಣ್ಣಿನ ಪಾತ್ರೆಗಳು ಸಿಗುವವು. ಪೀಠಿಕಾಪುರದಲ್ಲಿ ನಿರ್ಮಿಸಲಾಗುವ ನನ್ನ ಮಹಾಸಂಸ್ಥಾನಕ್ಕೆ ಹಣ ಸಹಾಯ ಮಾಡಲು ಪುಣ್ಯ ಮಾಡಿರಬೇಕು. ಹಿಂದೆ, ಎಂದೋ ಒಮ್ಮೆ ಆರ್ಯವೈಶ್ಯನಾಗಿದ್ದು, ಪೀಠಿಕಾಪುರದ ಸಂಬಂಧ ಹೊಂದಿರುವ ವ್ಯಕ್ತಿಯಿಂದ ಮಾತ್ರ ಆ ಸಹಾಯ ಆಗುವುದು. ಅವಿಶ್ವಾಸರು, ಮೂಢರು, ಪಾಂಡಿತ್ಯದ ಗರ್ವ ತುಂಬಿದ ಅಹಂಕಾರಿಗಳು, ಎಲ್ಲದಕ್ಕೂ ಪ್ರಮಾಣ ಕೋರುವರು! ನನ್ನ ಚರಿತ್ರೆ ಪಾರಾಯಣದಿಂದ ಬೇಡಿದ್ದೆಲ್ಲಾ ಸಿದ್ಧಿಸುವುದು. ಇಲ್ಲಿನ ಸಂಸ್ಥಾನದ ಯಾವ ಸತ್‌ಚಟುವುಟಿಕೆಗಳಲ್ಲಿ ಪಾಲ್ಗೊಂಡರೂ, ಅವರ ತೊಂದರೆಗಳು ಪರಿಹಾರವಾಗುವುದು. ಇಲ್ಲಿ ನನ್ನ ಜನ್ಮ ನಕ್ಷತ್ರವಾದ, ಚಿತ್ತಾ ನಕ್ಷತ್ರದಂದು, ನನ್ನನ್ನು ಶ್ರದ್ಧೆಯಿಂದ ಪೂಜಿಸಿದರೇ ಸಾಲಬಾಧೆ ತೊಲಗುವುದು. ಕನ್ಯಾಮಣಿಗಳಿಗೆ ಯೋಗ್ಯ ವರ ಲಭಿಸುವನು. ಭೂತ ಪ್ರೇತ, ಪಿಶಾಚಾದಿ ಕಾಣದ ಶಕ್ತಿಗಳ ಬಾಧೆ ನಾಶವಾಗುವುದು. ಶ್ರಾವಣ ಶುದ್ಧ ಪೌರ್ಣಮಿ ದಿನ, ಶ್ರೀ ವಾಸವೀ ಕನ್ಯೆ, ನನಗೆ ರಕ್ಷಾಬಂಧನ ಕಟ್ಟುವ ಪುಣ್ಯದಿನ. ಅಂದು, ನನ್ನ ಈ ಸನ್ನಿಧಿಯಲ್ಲಿ ತಂಗುವವರಿಗೆ ಚಿತ್ರಗುಪ್ತನು ಮಹಾಪುಣ್ಯ ಬರೆಯುವನು! ನಾನು, ನನ್ನ ಚರಿತ್ರೆ ಮತ್ತು ನನ್ನ ಲೀಲೆಗಳೇ ಇದಕ್ಕೆ ಸ್ವತಃಪ್ರಮಾಣಗಳು! ಕಾಣುವ ಸೂರ್ಯನಿಗೆ, ಬೇರೆ ಬೇರೇ ಪ್ರಮಾಣವೇಕೆ?"** ಎಂದರು.

ಶ್ರೀಪಾದರ ಲೀಲೆಗಳು ಬೇರೇ ಯಾರಿಂದಲೂ ಸಾಧ್ಯವಿಲ್ಲ. ಮಾರನೇ ದಿನ, ನಾನು ವಲ್ಲಭೇಶ್ವರ ಶರ್ಮ ದಂಪತಿಗಳು, ಸುಬ್ಬಣ್ಣ ಶಾಸ್ತ್ರಿ ಮತ್ತು ಲಿಂಗಣ್ಣ ಶಾಸ್ತ್ರಿ, ಶ್ರೀಪಾದರ ದರ್ಶನಕ್ಕಾಗಿ ಕುರುಂಗಡ್ಡೆಗೆ ಹೊರಟೆವು. ಶ್ರೀಗಳು ನಮ್ಮನ್ನು ಪೂರ್ಣವಾಗಿ ಆಶೀರ್ವದಿಸಿದರು. ಮುಗುಳ್ನಗೆಯಿಂದ, "ಓಹೊ! ಏನು ಚರ್ಚೆ, ಏನು ಚರ್ಚೆ. ಶ್ರೀಪಾದ ಶ್ರೀವಲ್ಲಭ ಮಹಾಸಂಸ್ಥಾನ ಆಗಲು, ಇನ್ನೂ ಬಹಳಷ್ಟು ಕಾಲ ನಡೆಯಬೇಕಲ್ಲವೇ! ಮಲ್ಲಾದಿಗಳ ವೆಂಕಟಪ್ಪಯ್ಯ ಶ್ರೇಷ್ಠಿಯ ಮತ್ತು ವಾತ್ಸವಾಯರ ಸಾಲ ತೀರುವುದೆಂದೋ!'' ಎಂದು ನುಡಿದು, ಮೌನಮುದ್ರೆ ತಾಳಿದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

# ಅಧ್ಯಾಯ - 20

# ವಿಸ್ಸಾವಧಾನಿಯವರ ವೃತ್ತಾಂತ

# ಶ್ರೀಪಾದರ ದಿವ್ಯಮಂಗಳ ಸ್ವರೂಪ ವರ್ಣನೆ

ನಾನು ಬೆಳ್ಳಂಬೆಳಿಗ್ಗೆಯೇ, ಶ್ರೀಪಾದರ ದರ್ಶನಕ್ಕಾಗಿ ಕುರುಂಗಡ್ಡೆ ತಲುಪಿದೆನು. ಶ್ರೀಪಾದರ ಶರೀರದಿಂದ ದಿವ್ಯಕಾಂತಿ ಪುಂಜಗಳು ಹೊರಡುತ್ತಿದ್ದವು. ಶ್ರೀಗಳ ದಿವ್ಯನೇತ್ರಗಳಿಂದ ಶಾಂತಿ, ಕರುಣೆ, ಪ್ರೇಮ, ಜ್ಞಾನವು, ಜ್ಯೋತಿರೂಪದಲ್ಲಿ ಉಕ್ಕುತ್ತಿದ್ದವು! ಅವರ ಸನ್ನಿಧಿಯಲ್ಲಿರುವವರು, ಶಾಂತಿ, ಕರುಣೆ, ಪ್ರೇಮ ಮತ್ತು ಜ್ಞಾನವನ್ನು ಯಾಚಿಸದೇನೇ ಹೊಂದುವರು. ಸರ್ವಲೋಕದ ಏಕೈಕ ಪ್ರಭುವಿನ ರೂಪ, ನಿರಾಕಾರ ತತ್ತ್ವ ಸಾಕಾರವಾಗಿ ಸುಗುಣ ಮಾನವಾಕಾರದಲ್ಲಿ ಕಣ್ಣಿನ ಮುಂದೆ ಗೋಚರಿಸಲೂ, ಆನಂದ, ಆಶ್ಚರ್ಯ ನನ್ನಲ್ಲಿ ತುಂಬಿ ತುಳುಕುತ್ತಿತ್ತು!

ಶ್ರೀಪಾದರು ಅನುಗ್ರಹದಿಂದ, ಬಂದು ನಮಸ್ಕರಿಸಿಕೊಳ್ಳಿ ಎಂದು ಸನ್ನೆ ಮಾಡಿದರು. ಅಗ ಅವರ ದಿವ್ಯಹಸ್ತಗಳಿಂದ, ತಿಳಿಯದಂತಹ ಶಾಂತಿ, ಪ್ರೇಮ ತರಂಗಗಳು ಉದಯಿಸಿ, ನನ್ನ ಮನಸ್ಸನ್ನು ಹೃದಯ ಮತ್ತು ಶರೀರವನ್ನೂ ಯಾವುದೋ ತಿಳಿಯದ ಲೋಕಕ್ಕೆ ಕರೆದೊಯ್ದ ಅನುಭವವಾಯಿತು! ನಾನು ಶ್ರೀಚರಣಗಳನ್ನು ಭಕ್ತಿಯಿಂದ ಸ್ಪೃಶಿಸಿದೆನು. ಶರೀರ ಹಗುರವಾಯಿತು. ನನ್ನ ಕಣ್ಣುಗಳಿಂದ ಕಪ್ಪು ತೇಜಸ್ಸು ಈಚೆಗೆ ಬರುವುದು ಗಮನಿಸಿದೆನು. ನಂತರ ನನ್ನ ಶರೀರದ ಎಲ್ಲಾ ಅಂಗಗಳಿಂದಲೂ ಕರಿಯ ತೇಜಸ್ ಹೊರಬಂದಿತು. ಬಂದಂತಹ ಕಪ್ಪಿನ ತೇಜಸ್ಸು ಒಂದು ಮಾನವಾಕಾರ ತಾಳಿತು. ಅದು ನನ್ನಂತೆಯೇ ಇತ್ತು! ಶ್ರೀಪಾದರು ಮುಗುಳ್ನಗೆಯಿಂದ, ನಿನ್ನಂತೆ ಇರುವ ಆ ಆಕಾರ ಯಾರೋ ತಿಳಿಯಿತಾ? ಅಂದಾಗ ನಾನು, ''ಸ್ವಾಮಿ! ಆ ಆಕಾರ ನನ್ನಂತೇ ಇದೆ. ಆದರೇ ಏಕೆ ನನ್ನಿಂದಾ ಹೊರಬಂತೋ ಮತ್ತು ಅದು ಯಾರೋ ಸಹಾ ನನಗೆ ತಿಳಿಯದು''ಎಂದು ಉತ್ತರಿಸಿದೆ.

ಆಗ ಶ್ರೀಪಾದರು, ''ಮಗು! ಆ ಆಕಾರ, ನಿನ್ನ ಪಾಪ ಶರೀರ, ಅವನು ನಿನ್ನ ಪಾಪಮಯ ಪುರುಷ! ಈ ನಿನ್ನ ಶರೀರದಲ್ಲಿ ಉಳಿದಿರುವುದು ಪುಣ್ಯಮಯ ಪುರುಷ ಮಾತ್ರ. **ಎಲ್ಲಾ ಮಾನವ ಶರೀರಗಳಲ್ಲೂ ಪಾಪ, ಪುಣ್ಯ ಪುರುಷರಿರುವರು. ಆ ಎರಡರಿಂದಲೂ ಬಿಡುಗಡೆ ಲಭಿಸಿದರೇ, ಮುಕ್ತಿಯೇ!** ಬ್ರಾಹ್ಮಣಾದವನು ನಿಷ್ಠಾವಂತನಾಗಿ, ತನ್ನ ಪಾಪ ಶರೀರವನ್ನು ದಹಿಸುವುದೇ ಅಲ್ಲದೇ, ತನ್ನ ಪುಣ್ಯಬಲದಿಂದ ಇತರರನ್ನೂ ಉದ್ಧರಿಸಬೇಕು. ಬ್ರಾಹ್ಮಣನು ಸತ್ವಗುಣನಾಗಿರಬೇಕು. ವೇದಶಾಸ್ತ್ರ ತಿಳಿಸಿದ ಕರ್ಮಗಳನ್ನು ಸಂಬಂಧಿಸಿದವರಿಂದ ಮಾಡಿಸುತ್ತಾ, ತನ್ನ ಬದುಕಿಗಾಗಿ ಅಗತ್ಯದಷ್ಟೇ ದ್ರವ್ಯವನ್ನು ಮಾತ್ರ ತೆಗೆದುಕೊಳ್ಳಬೇಕು. ಆಗ, ಅವರ ಪಾಪವನ್ನು ಸಹಾ ತಿಳಿಯದೇ ತೆಗೆದುಕೊಳ್ಳುತ್ತಿರುತ್ತಾನೆ. ಅದನ್ನು ತನ್ನ ತಪಸ್ಸಿನಿಂದ ಸುಟ್ಟುಬಿಡಬೇಕು. ಹಾಗೆ ಬಾಳುವನು ಮಾತ್ರವೇ ಬ್ರಾಹ್ಮಣರಾಗಲೂ ಅರ್ಹನು! ಹಾಗಿಲ್ಲದ್ದಲ್ಲಿ ಅವನು ಬ್ರಹ್ಮಜ್ಞಾನವಂತನಾದ ಬ್ರಾಹ್ಮಣನು ಮಾತ್ರ ಆಗಲಾರ! ನಮ್ಮ ತಾಯಿಯ ಜನಕನಾದ ಬಾಪನಾರ್ಯರಂತವರೂ, ನಮ್ಮ ತಂದೆಯರಾದ ಶ್ರೀ ಅಪ್ಪಲರಾಜ ಶರ್ಮರಂತವರೂ ಸದ್ಬ್ರಾಹಣರೆನಿಸಿಕೊಂಡವರು. **ನಮ್ಮ ತಾಯಿಯ ತಾಯಿ ರಾಜಮಾಂಬ ಮತ್ತು ನಮ್ಮ ಜನನಿ ಸುಮತಿ ಮಹಾರಾಣಿಯೂ ಪರಮ ಪವಿತ್ರರು. ಅಂತವರ ಸ್ಮರಣದಿಂದಲೇ ಜೀವಿಗಳ ಶರೀರದ, ಸಹಸ್ರಾರು ಪಾಪಗಳು, ತಕ್ಷಣ ಮಾಯವಾಗುವವು"** ಎಂದರು.

ಹಾಗೆ ನುಡಿದ ಶ್ರೀಗಳು, ಕೆಲಕಾಲ ಮೌನಮುದ್ರೆ ತಾಳಿದರು. ತಮ್ಮ ಬೆರಳುಗಳಿಂದ ಭ್ರೂಮಧ್ಯೆ ಮುಟ್ಟಿ ತಮ್ಮ ಬಲ ಹಸ್ತವನ್ನು ಚಾಚಿದರು. ಅಂಗೈಯಿಂದ ಪ್ರಕಾಶಮಾನ ಬೆಳಕು ಹುಟ್ಟಿತು! ತಕ್ಷಣ, ಹೋಮಕ್ಕೆ ಬೇಕಾದ ವಸ್ತುಗಳು ಉದ್ಭವಿಸಿದವು. ಕೆಲವು ಮಧುರ ಫಲಗಳು ಮತ್ತು ಪುಷ್ಪಗಳು ಸಹಾ ಮೂಡಿಬಂದವು. ನಂತರ ಬಂಗಾರ, ಬೆಳ್ಳಿ ಬಂದವು. ನವರತ್ನಗಳೂ ಬಂದವು,ನಂತರ ದಿವ್ಯಾಗ್ನಿ ಈಚೆಗೆ ಬಂತು! ನನ್ನ ಶರೀರದಿಂದ ಹೊರಬಂದಂತಹ ಆ ಪಾಪ ಪುರುಷ ಭಯಕಂಪಿತನಾಗಿ ಕಿರಚುತ್ತಿದ್ದನು. ಶ್ರೀಪಾದರು ಕೇವಲ ತಮ್ಮ ನೇತ್ರಗಳ ಸಂಜ್ಞೆಯಿಂದಲೇ ಆ ಪಾಪ ಪುರುಷ, ದಿವ್ಯಾಜ್ಞಿಯಲ್ಲಿ ಬಿದ್ದು ದಹನವಾಗಬೇಕೆಂದು ಆಜ್ಞಾಪಿಸಿದರು. ಅವನು, ಇಷ್ಟವಿಲ್ಲದೇ ಆ ಅಗ್ನಿಯಲ್ಲಿ ಬಿದ್ದುಹೋದನು. ನನ್ನ ಶರೀರದಲ್ಲಿ ಅಗ್ನಿ ಉದ್ಭವಿಸಿತು. ಆಗ ನಾನು "ಸ್ವಾಮಿ! ನಾನು ದಹನವಾಗುತ್ತಿದ್ದೇನೆ, ರಕ್ಷಿಸಿ, ರಕ್ಷಿಸಿ ಎಂದು ಕಿರಚುತ್ತಿದ್ದೆನು. ಶ್ರೀಗಳ ದಿವ್ಯ ನೇತ್ರದಿಂದ ಎದ್ದ ಕಾಂತಿಪುಂಜವೊಂದು ನನ್ನನ್ನು ತಾಕಿತು. ನನ್ನ ಶರೀರ ಶೀತಲವಾಯಿತು. ಹೋಮಾಗ್ನಿ ಆ ಪಾಪ ಪುರುಷನನ್ನು ಸುಟ್ಟುಹಾಕಿತು. ನನ್ನ ಶರೀರದೊಳು, ಅನೇಕಾನೇಕ ವಿದ್ಯುತ್ ಹೊರಡಿತು! ನನ್ನ ಕುಂಡಲಿನಿ ಚೇತರಗೊಂಡಿತು. ನರಗಳು ಹೃದಯ ಸ್ತಂಭಿಸಿದವು. ನಾನು ಸಮಾಧಿಸ್ಥಿತಿಗೆ ಜಾರಿಕೊಂಡೆನು!

ಮಧ್ಯಾಹ್ನವಾಯಿತು. ಅಂದು ಗುರುವಾರ. ಶ್ರೀಪಾದರು ಸ್ನಾನದ ನಂತರ ಭಕ್ತರೊಡನೆ ಇದ್ದರು. ಅವರಿತ್ತ ಭಿಕ್ಷಾನ್ನವನ್ನು ತಮ್ಮ ದಿವ್ಯಹಸ್ತದಿಂದ ಸ್ಪರ್ಶಿಸಿದರು. ತಮ್ಮ ಕಮಂಡಲದಿಂದ ಜಲವನ್ನು ಭಕ್ತರ ಮೇಲೆ ಪ್ರೋಕ್ಷಿಸಿದರು. ಅಷ್ಟದಿಕ್ಕುಗಳಲ್ಲೂ ಸ್ವಲ್ಪ ಅನ್ನವನ್ನು ಬಲಿಗಾಗಿತ್ತರು. ಕೋಟಿ ಕೋಗಿಲೆಗಳ ಮಧುರ ಸ್ವರದಲ್ಲಿ ನನ್ನನ್ನು ಹೆಸರಿಟ್ಟು ಕರೆದರು. ಎಲ್ಲರನ್ನೂ ಊಟಮಾಡಲು ಆಜ್ಞಾಪಿಸಿದರು. ನನ್ನನ್ನು ಅವರ ಬಳಿ ಬರಲು, ಆದೇಶಿಸಿದರು. ಸ್ವಲ್ಪಕಾಲ ಕಣ್ಣು ಮುಚ್ಚಿಕೊಂಡು, ನಂತರ ತೆಗೆದು, ನನ್ನನ್ನು ವಿಲಾಸದಿಂದ ಕಂಡರು! ಅವರ ಕೈಯಲ್ಲಿ ಒಂದು ಬೆಳ್ಳಿಯ ಪಾತ್ರೆ ಆವಿರ್ಭವಿಸಿತು. ಅದು ಹಲ್ವಾ ಎನ್ನುವ ಸಿಹಿ ತಿಂಡಿಯಿಂದ ತುಂಬಿತ್ತು. ಹಲ್ವಾ ಶ್ರೀಗಳ ಅಚ್ಚುಮೆಚ್ಚಿನ ಸಿಹಿ. ಅವರು, "ಶಂಕರ ಭಟ್ಟು! ನನ್ನನ್ನು ನನ್ನ ಭಕ್ತರು ತಮ್ಮ ಭಕ್ತಿಪಾಶೆಗಳಿಂದ ಬಂಧಿಸುವರು. ನಾನೂ, ಕಲ್ಮಷವಿಲ್ಲದ ಭಕ್ತಿಶ್ರದ್ಧೆಗಳಿಗೆ ಮಾತ್ರ ಬದ್ಧನು. ಶ್ರೇಷ್ಠಿಗಳ ಮನೆ ಧರ್ಮಪತ್ನಿ ವೆಂಕಟ ಸುಬ್ಬಮಾಂಬ, ಈ ಸಿಹಿಯನ್ನು ನನಗಾಗಿ ಮಾಡಿ, ನಾನು ತೆಗೆದುಕೊಂಡ ನಂತರವೇ, ತಾನು ತಿನ್ನುವುದಾಗಿ ಪ್ರತಿಜ್ಞೆ ಮಾಡಿರುವಳು. ಅವರ ಮೊಮ್ಮಗಳು ಲಕ್ಷ್ಮೀವಾಸವಿ, ನನ್ನ ಕೈಗೆ ರಕ್ಷಾಬಂಧನವನ್ನು ಕಟ್ಟಿರುವಳು. "ನನ್ನ ಪತಿಯ ಜಾತಕದಂದು, ಮಾರಕಯೋಗವಿದೆ ಎಂದು ಜ್ಯೋತಿಷ್ಯರು ನುಡಿಯುತ್ತಿದ್ದಾರೆ. ನಿನಗೆ ನಾನು ರಕ್ಷಾಬಂಧನವನ್ನು ಕಟ್ಟಿರುವುದೇ ನಿಜವಾಗಿದ್ದಲ್ಲಿ, ನೀನು ಈ ಪ್ರಸಾದವನ್ನು ಸ್ವೀಕರಿಸಿ, ನನ್ನನ್ನು ಸುಮಂಗಳಿಯಾಗಿ ಆಶೀರ್ವದಿಸಬೇಕೆ"ಂದು, ಪಟ್ಟುಹಿಡಿದು, ನಿರಶನ ದೀಕ್ಷೆ ಸಹಾ ಕೈಗೊಂಡಿರುವಳು. ನನಗೆ ಬೇರೆ ದಾರಿಯಾದರೂ ಏನಿದೆ? ಚಿರಂಜೀವಿ ಲಕ್ಷ್ಮೀವಾಸವಿಯನ್ನು ಲಕ್ಷ್ಮೀಸೌಭಾಗ್ಯವತಿಯಾಗಿ ಆಶೀರ್ವದಿಸಿ, ಪುಷ್ಪ, ಬಳೆ, ಕುಂಕುಮಗಳನ್ನು ಪ್ರಸಾದಿಸಿರುವೆನು. ನನ್ನ ಅಜ್ಜಿ ವೆಂಕಟ ಸುಬ್ಬಮಾಂಬ, ಪ್ರೇಮದಿಂದ ತಯಾರು ಮಾಡಿದ ಹಲ್ವಾವನ್ನು ನನ್ನೊಟ್ಟಿಗೆ ತಂದೆ. ಈ ಮಧುರ ಪ್ರಸಾದ ಅನೇಕ ಜನುಮಗಳಿಂದ ಅಂಟುತ್ತಿದ್ದ ಮಹಾಪಾತಕಗಳನ್ನು ತೊಲಗಿಸುವುದು. ನನ್ನ ಭಕ್ತರ ಮನೆಯಲ್ಲಿ ನನಗೆ ನೈವೇದ್ಯವಿತ್ತ ಪ್ರಸಾದವನ್ನು ನಾನೇ ಸ್ವತಃ ಸೂಕ್ಷ್ಮಕಿರಣಗಳಿಂದ ತೆಗೆದುಕೊಳ್ಳುವೆನು. ಆದರೆ ಶ್ರೇಷ್ಠಿಗಳ ಮನೆಯಲ್ಲಿ ಬೇಯಿಸಿದ್ದು ಮಹಾಪ್ರಸಾದವಾದುದ್ದರಿಂದ, ನಾನು ಖುದ್ದಾಗಿ, ಈ ಭೌತಿಕ ರೂಪದಲ್ಲಿ ಸ್ವಿಕರಿಸುತ್ತಿದ್ದೇನಿ. ನೀನೂ ಈ ಪ್ರಸಾದವನ್ನು ಸ್ವೀಕರಿಸಬೇಕಾಗಿದೆ" ಎಂದರು. "ಆ ಪ್ರಸಾದದ ಮಾಧುರ್ಯವನ್ನು ವರ್ಣಿಸಲು ಯಾರಿಗೆ ತಾನೆ ಸಾಧ್ಯ?" ಪ್ರಸಾದದ ಸ್ವಲ್ಪ

ಭಾಗವನ್ನು ಶ್ರೀಪಾದರು ಮೇಲಕ್ಕೆ ಎಸೆದರು. ಅದು ನಭೋಮಂಡಲದೊಳಗೆ ಎಲ್ಲಿಗೋ ಹೋಯಿತು. ಇನ್ನಷ್ಟು ಪ್ರಸಾದ ತೆಗೆದು, ತಮ್ಮ ಅಂಗೈಯಿಂದ ಜಾರು ಹಾಕಿದರು. ಆಗ ಅಲ್ಲಿ ಭೂಭಾಗವೇ ಒಡೆದು, ಪ್ರಸಾದಕ್ಕೆ ದಾರಿಕೊಟ್ಟಿತು. ಪ್ರಸಾದ ಭೂಮಿ ಒಳಗೆ ಸೇರಿದ ನಂತರ, ಒಡೆದ ಭೂಮಿ ಪುನಃ ಯಥಾಸ್ಥಿತಿಗೆ ಬಂತು.!

ಅಲ್ಲಿದ್ದ ಪ್ರಸಾದವನ್ನು ಮಿಕ್ಕ ಭಕ್ತರೂ ಸಹಾ ಯಾಚಿಸಿದರು. ಶ್ರೀಪಾದರ ಅವತಾರ, ಯಾರನ್ನೂ ನಿರಾಶೆಗೊಳಿಸುವ ಅವತಾರ ಅಲ್ಲವೇ ಅಲ್ಲ. ಅದೆಷ್ಟು ಜನಕ್ಕೆ ಆ ಸಿಹಿ ಹಂಚಿದರೂ ಆ ಬಟ್ಟಲಿನಲ್ಲಿ ಪುನಃ ಅಷ್ಟೇ ಸೇರುತ್ತಿತ್ತು. ಅಷ್ಟರಲ್ಲಿ ಪದ್ಮಶಾಲಿ ಕುಲಸಂಭೂತನಾದ, ಗುರುಚರಣನೆಂಬ ಭಕ್ತನು ಬಂದನು. ಶ್ರೀಪಾದರು ಅವನಿಗೂ ಸಹ ಆ ಪ್ರಸಾದವನ್ನಿತ್ತರು. ಆ ರಜತ ಪಾತ್ರೆಯನ್ನು ಕೃಷ್ಣಾ ನದಿಗೆ ಎಸೆದರು.

ನಂತರ, ಶ್ರೀಪಾದರು, ''ಪದ್ಮಶಾಲಿಗಳು ಸಹಾ ಮಾರ್ಕಂಡೇಯ ಗೋತ್ರದವರೇ! ಕಾರಣಾಂತರದಿಂದ, ಅವರು ಮಾಂಸಾಹಾರಿಗಳಾದರು. ನನ್ನ ಸನ್ನಿಧಿಯಲ್ಲಿ ಕಾರಣವಿಲ್ಲದ ಕಾರ್ಯ ನಡೆಯುವುದಿಲ್ಲ. ಗುರುಚರಣಾ! ನೀನು ಎಷ್ಟೋ ದಿವಸಗಳಿಂದ, ನನಗೆ ಪ್ರಸಾದವನ್ನು ನೀಡುತ್ತಾ, 'ಶ್ರೀ ಗುರುಚರಣರೇ ಸರ್ವದಾ ಶರಣು ಶರಣು' ಎನ್ನುತ್ತಾ, ಪವಿತ್ರ ಜೀವನ ನಡೆಸುತ್ತಿದ್ದೀಯ. ಇಂದು ಶ್ರೀಗುರು ಕರಕಮಲದಿಂದ, ಮಹಾ ಪ್ರಸಾದವನ್ನು ಪಡೆದಿದ್ದೀಯ. ಶಂಕರ ಭಟ್ಟನಿಗೆ ಗುರು ತತ್ತ್ವವನ್ನು ನಿನಗೆ ತಿಳಿದಷ್ಟು ಬಿಡಿಸಿ ಹೇಳು. ನಾವು ಮಧ್ಯಾಹ್ನ ಸಮಯ, ಯೋಗ ನಿದ್ರೆಯಲ್ಲಿ ಮಾನಸ ಸಂಚಾರ ನಡೆಸುವೆವು. ನಮ್ಮನ್ನು ಯಾರೂ ದರ್ಶಿಸಬಾರದು. ನಮ್ಮ ವಿಶ್ರಾಂತಿಗೆ ಭಂಗವನ್ನು ಸಹ ತರಬಾರದು'' ಎಂದು ನುಡಿದರು.

ನಾನು ಶ್ರೀ ಗುರುಚರಣನೆಂಬುವ ಮಹಾಭಕ್ತನನ್ನು ಭೇಟಿ ಯಾಗುವುದು, ನಿಜಕ್ಕೂ ಶ್ರೀ ಗುರುಗಳ ಸಂಕಲ್ಪವೇ! ಶ್ರೀ ಗುರುಚರಣನು ಯೋಗ ಮಾರ್ಗದಲ್ಲಿ ಪರಿಣಿತಿ ಹೊಂದಿದವನು. 'ಶ್ರೀ ಪಾದರು ತತ್ತ್ವವನ್ನು ನನಗೆ ತಿಳಿಸಿ ಧನ್ಯನನ್ನಾಗಿ ಮಾಡಿ' ಎಂದು ಪ್ರಾರ್ಥಿಸಿದೆನು. ಆಗ ಗುರುಚರಣನು, **"ಅನಂತಕೋಟಿ ಬ್ರಹ್ಮಾಂಡಗಳ ಸೃಷ್ಟಿಸ್ಥಿತಿಲಯ ಆಚರಿಸುವ ಮಹಾಸಂಕಲ್ಪ ಯಾವುದಿದೆಯೋ, ಅಂತಹ ನಿರಾಕಾರ ನಿರ್ಗುಣತತ್ತ್ವವೇ, ಸಾಕಾರ ಸಗುಣ ಸ್ವರೂಪವಾಗಿ ಹಿಂದಿನ ಯುಗದಲ್ಲಿ ಶ್ರೀದತ್ತಾತ್ರೇಯರಾಗಿ ಅವತರಿಸಿದ್ದು, ಈಗ ಈ ಯುಗದಲ್ಲಿ, ಈ ಕಾಲಕ್ಕೆ ಶ್ರೀಪಾದ ಶ್ರೀವಲ್ಲಭರಾಗಿ ಅವತರಿಸಿದೆ. ಈ ಅವತಾರ ನರಾಕಾರವಾಗಿ ತೋಚುತ್ತಿರುವ, ನಿರಾಕಾರ ಸಗುಣವಾಗಿ ತೊಚುವ ನಿರ್ಗುಣ. ಒಂದೇ ದೇವತಾ ರೂಪವಾಗಿ ಕಂಡುಬರುವ ಸರ್ವ ದೇವತಾ ಸ್ವರೂಪ! ಎಲ್ಲಾ ಯೋಗ ಮಾರ್ಗಗಳ ಗಮ್ಯ. ಸೃಷ್ಟಿ ಮೊದಲಿನಿಂದಲೂ, ಮಹರ್ಷಿಗಳು ಅವರವರ ಸಾಧನಾ ವಿಶೇಷಗಳಿಂದ ಸಾಕ್ಷಾತ್ಕಾರ ಹೊಂದಿದ ದೇವತೆಗಳೆಲ್ಲರೂ, ಶ್ರೀಪಾದರ ದಿವ್ಯ ಸ್ವರೂಪಗಳೇ!**

ಹಿಂದಿನ ಕಾಲದಲ್ಲಿ ಮಹರ್ಷಿಗಳಿಗೆ ಅನೇಕ ದಿವ್ಯಶಕ್ತಿಗಳಿದ್ದವು. ವಶಿಷ್ಠರು, ತುಪ್ಪ ಸಹಿತ ಯಜ್ಞಗಳನ್ನು ಮಾಡುತ್ತಿದ್ದರು. ಅದಿಲ್ಲದೇನೇ ಯಜ್ಞಗಳನ್ನು ವಿಶ್ವಾಮಿತ್ರರು ಮತ್ತು ಜಮದಗ್ನಿ ಮಾಡುತ್ತಿದ್ದರು. **ಯಾವುದೇ ಒಂದು ಕರ್ಮ ಮಾಡಲು ಅಥವಾ ಮಾಡದಿರಲು ಅಥವಾ ಬೇರೆ ರೀತಿ ಮಾಡಲು ಆಗಲಿ, ಆ ಕರ್ಮದ ರಹಸ್ಯ ಮತ್ತು ಮಂತ್ರ ರಹಸ್ಯ ತಿಳಿದವನೇ ಸಮರ್ಥನು. ಶ್ರೀಪಾದರು ಸಮರ್ಥರು. ಆದರೇ ಅವರು ಕರ್ಮ ರಹಸ್ಯವನ್ನು ತಿಳಿದಿರಲೂ ಅಂತಹಾ ವ್ಯಕ್ತಿಗಳೊಡನೆ ಅವರು ವರ್ತಿಸುವ ಮಾರ್ಗಗಳಲ್ಲಿ ಸಹಾ ವ್ಯತ್ಯಾಸ ಕಾಣಿಸುವುದು. ಎಲ್ಲಾ ಶಕ್ತಿಗಳಗಿಂತ ಪ್ರೇಮಶಕ್ತಿ ಮಹತ್ತರವಾದದ್ದು. ಅದಕ್ಕಿರುವ ಶಕ್ತಿ ಅಪಾರ.**

ಬಾಪನಾರ್ಯರಾಗಲಿ, ನರಸಿಂಹ ವರ್ಮರಾಗಲಿ ಮತ್ತು ವೆಂಕಟಪ್ಪಯ್ಯ ಶ್ರೇಷ್ಠಿಗಳೂ ಸಹಾ ವಿಚಿತ್ರ ಯೋಗ ಸಂಪನ್ನರು. ಈ ಮುವ್ವರೂ ಶ್ರೀಪಾದರ ಮೇಲೆ ವಾತ್ಸಲ್ಯ, ಭಕ್ತಿ ಉಳ್ಳವರು. ತಮ್ಮ ಪ್ರೇಮಶಕ್ತಿಯಿಂದ ಶ್ರೀಪಾದರನ್ನು 'ಇಂತಹಾ ಕಾರ್ಯ ಮಾಡಿಸಿ' ತರಲು ಹಟ ಹಿಡಿದು ಕೇಳಬಲ್ಲರು! ಶ್ರೀಪಾದರೂ ಒಲಿಯಲೇಬೇಕು. ಶ್ರೀಪಾದರು **ಪ್ರತಿ ಸ್ತ್ರೀಯಲ್ಲೂ ತಮ್ಮ ತಾಯಿಯನ್ನು ಕಾಣಬಲ್ಲ ಸಹಜ ಸ್ವಭಾವರು. ಸಹಜ ವಾತ್ಸಲ್ಯದಿಂದ ಯಾರೇ ಆಗಲಿ, ಶ್ರೀಪಾದರನ್ನು ದಿವ್ಯ ಶಿಶುವಾಗಿ ಭಾವಿಸಿ ಆರಾಧಿಸುವರೋ, ಶ್ರೀಪಾದರು ಸಹಾ ಅಂತಹವರ ಮನೆಗಳಲ್ಲಿ ಶಿಶುವಂತೆಯೇ ವರ್ತಿಸುವರು.** ಇದುವೇ ಮಹಾಮಾಯೆ. ಯೋಗಿಗಳು, ಜ್ಞಾನರು ಪುನಃ ಪುನಃ ಹೇಳುವ ನಿರ್ಗುಣ ನಿರಾಕಾರ ಪರಬ್ರಹ್ಮವು, ದಿವ್ಯ ಶಿಶುವಾಗಿ ಪೀಠಿಕಾಪುರದಲ್ಲಿ ದಿವ್ಯಲೀಲೆಗಳನ್ನು ತೋರಿಸುವುದು, ತರ್ಕಕ್ಕೆ ಸಿಗದಂತಹ ವಿಷಯ. ವೇದಶಾಸ್ತ್ರಗಳ ಅಧ್ಯಯನ ಮೂಲಕ, ಯೋಗ ಮಾರ್ಗಗಳ ಮೂಲಕ, ಜ್ಞಾನಮಾರ್ಗ ಮೂಲಕ ದೈವ ಲಭಿಸುವುದೆಂಬ ನಂಬಿಕೆಯಿಂದ ಸಾಧನೆ ಮಾಡುವವರಿಗೆ ಆ ದೇವರು, ಆಯಾ ಮಾರ್ಗಗಳಿಂದ ಮಾತ್ರವೇ ಲಭಿಸುವನು. ದೈವಾನುಭವವನ್ನು ಶಾಸ್ತ್ರಗಳ ಮೂಲಕ ಪ್ರಮಾಣಿಸಬಹುದು. ಒಮ್ಮೊಮ್ಮೆ ಶಾಸ್ತ್ರಗಳಿಗೆ ಅತೀತ ಮಾರ್ಗದಿಂದಲೂ ಸಹಾ ದೈವಾನುಭವ ಆಗಬಹುದು. ದೈವವು ಸರ್ವತಂತ್ರ ಸ್ವತಂತ್ರನು. ಶ್ರೀಪಾದರ ಲೀಲೆಗಳು, ತರ್ಕಕ್ಕೆ ಸಿಗದಂತವು. ಹಿಂದೆ ಕೇಳದಿರುವವು'' ಎಂದು ವಿವರಿಸಿದರು.

ಆಗ ನಾನು, ''ಸ್ವಾಮಿ! ತಮಗೆ, ಮೊದಲ ಬಾರಿ, ಶ್ರೀಪಾದರ ದರ್ಶನ ಲಭಿಸಿದ ವಿಷಯ ತಿಳಿಸಿ ನನ್ನನ್ನು ಧನ್ಯನನ್ನಾಗಿ ಮಾಡಿ'' ಎಂದು ಗುರುಚರಣರನ್ನು ಬೇಡಿದೆನು.

ಗುರುಚರಣರು, ''ಬ್ರಾಹ್ಮಣೋತ್ತಮಾ! ತಾವು ಬಹಳ ಧನ್ಯರು, ಶ್ರೀಪಾದರ ಲೀಲೆಗಳನ್ನು ಅವರ ಸಮಕ್ಷದಲ್ಲಿ ತಮಗೆ ತಿಳಿಸುವ ಭಾಗ್ಯ ನನಗೆ ಸಿಕ್ಕಿರುವುದು ಕೇವಲ, ನನ್ನ ಪೂರ್ವ ಜನ್ಮ ಸುಕೃತವೇ ಸರಿ. ತಾವು ಶ್ರೀಗುರುವಿನ ಅಪಾರ ಕರುಣಾಕಟಾಕ್ಷ ಪಡೆದ ಪೂಜ್ಯರು'' ಎಂದು, ತನಗೆ ಆದ, ಶ್ರೀಪಾದರ ದರ್ಶನ ವಿಷಯ ಹೇಳಲಾರಂಭಿಸಿದರು.

ನಾನು ದೈವಭಕ್ತಿವುಳ್ಳ ಕುಟುಂಬದಲ್ಲೆ ಜನಿಸಿದೆನು. ಬಾಲ್ಯದಿಂದಲೇ ನಮ್ಮ ಕುಲದೈವ ಶ್ರೀ ದತ್ತರನ್ನೇ ಆರಾಧಿಸುತ್ತಿದ್ದೆನು. ನಮ್ಮ ಕುಟುಂಬ, ಆರ್ಥಿಕ ಸಂಕಟದಲ್ಲಿತ್ತು. ಶ್ರೀ ದತ್ತರನ್ನೆಷ್ಟು ಬೇಡಿದರೂ, ನಮ್ಮ ಪರಿಸ್ಥಿತಿ ಸುಧಾರಿಸಲಿಲ್ಲ ಸರಿ, ಅಧಿಕವಾಯಿತು! ಕೆಲ ಹಿರಿಯರು ''ನಿನಗೆ ದತ್ತರ ಅನುಗ್ರಹವಿಲ್ಲ. ನಿನ್ನ ಕುಲದೈವವನ್ನು ಬದಲಾಯಿಸು'' ಎಂದು ಸಲಹೆ ನೀಡಿದರು. ನಾನು ಯಾವದೇವರನ್ನು ನೆನೆಸಲೀ ಎಂದು ಯೋಚಿಸಿ, ನಿದ್ರಿಸಿದೆ. ಕನಸ್ಸಿನಲ್ಲಿ ಭಯಂಕರವಾದ ಓರ್ವ ಕಟುಕನನ್ನು ಕಂಡೆ. ಅವನು ಅತ್ಯಂತ ಪ್ರೀತಿಯಿಂದ ತನ್ನ ಮೇಕೆಗಳನ್ನು ಮೇಯಿಸುತ್ತಿದ್ದನು. ಆದರೆ ಪ್ರತಿ ದಿವಸವೂ, ಕೆಲವು ಮೇಕೆಗಳನ್ನು ಕಡಿಯುತ್ತಿದ್ದನು. ಆತನ ಕೈಯಲ್ಲಿದ್ದ ಕತ್ತಿ ಭಯ ಹುಟ್ಟಿಸುತ್ತಿತ್ತು. ಮೇಘ ಗಂಭೀರ ಧ್ವನಿಯಲ್ಲಿ ಆತ, **''ನಾನು ದತ್ತನು. ನೀನದ್ಯಾವ ದೇವತೆಯನ್ನಾರಾಧಿಸಿದರೂ ನನಗೇ ಸೇರುವುದು. ನೀನಾರಾಧಿಸುವ ದೈವದ ನಾಮವನ್ನು ಬದಲಾಯಿಸಿದ ಮಾತ್ರಕ್ಕೆ ನಾನು ಬದಲಾಗುವನು ಅಲ್ಲ. ನಿನ್ನನ್ನು ಬಿಡುವವನಲ್ಲವೇ ಅಲ್ಲ! ನೀನು ನನ್ನ ನೆರಳು ಆಗಿದ್ದು, ನನ್ನ ಬಿಡುವುದು ಎಲ್ಲಿ ಸಾಧ್ಯ? ಎಲ್ಲಾ ದೇವದೇವತೆಗಳ ಮತ್ತು ಮಾನವ ಕೋಟಿಯ ಸಂಕಲ್ಪಗಳನ್ನು ನೆರವೇರಿಸುವ ಮಹಾ ಸಂಕಲ್ಪವು ನಾನೇ! ಭಗವದವತಾರಗಳೆಲ್ಲವೂ ಯಾವ ಬ್ರಹ್ಮಸ್ವರೂಪದಿಂದ ಹೊರಬೀಳುವವೋ, ಆ ಬ್ರಹ್ಮನು ನಾನೇ! ಹುಲಿಯ ಬಾಯಿಗೆ ಸಿಕ್ಕ ಮೃಗವು ತಪ್ಪಿಸಿಕೊಳ್ಳಬಹುದು. ಆದರೇ ನನ್ನ ಕೈಗೆ ಸಿಕ್ಕಿದ**

**ನೀನು, ತಪ್ಪಿಸಕೊಳ್ಳಲಾರೆ. ದತ್ತ ಭಕ್ತರು, ಸಿಂಹದ ಮರಿಗಳಂತೆ ಇರಬೇಕೇ ಹೊರತು, ಹೆದರುಪುಕ್ಕಲಗಳಾಗಬಾರದು. ನಾನು ಸಿಂಹದಂತವನು. ಸಿಂಹದ ಮರಿಗಳಿಗೆ ಸಿಂಹದ ಭಯವಿರುವುದಿಲ್ಲ. ಅವು, ತಾಯಿಯನ್ನು ತಮ್ಮ ಆಟಪಾಟಗಳಿಂದ ಸಂತಸಗೊಳಿಸುವವು.** ಈ ಕತ್ತಿಯಿಂದ ನಾನು ನಿನ್ನನ್ನು ಕೊಲ್ಲುವುದು ಖಂಡಿತ! ಈ ಮೂರು ಲೋಕದಲ್ಲಿ ಯಾರೂ ನಿನ್ನನ್ನು ರಕ್ಷಿಸಲಾರರು'' ಎಂದು ನುಡಿದರು.

ನಾನು ಭಯಗ್ರಸ್ಥನಾಗಿ ಹುಚ್ಚು ಕೂಗು ಕೂಗಿದೆನು. ಕನಸು ಮುರಿದು, ಮನೆಯವರು ವಿಚಾರಿಸಲು, ನನ್ನ ಸ್ವಪ್ನದ ವೃತ್ತಾಂತ ತಿಳಿಸಿದೆನು. ಯಾವ ಜನುಮದ ಕರ್ಮಫಲವೋ ಈಗ, ಈ ದರಿದ್ರ ಅನುಭವಿಸುತ್ತಿದ್ದೇನೆ. ಆರ್ಥಿಕ ಸಂಕಟ ಮತ್ತಷ್ಟು ಬೆಳೆಯಲೂ, ನಾನು ಸತ್ತರೂ ಚೆನ್ನಾಗಿದ್ದೀತು ಎಂದು ಭಾವಿಸಿದೆ! ಬೆಳಿಗ್ಗೆ ಒಬ್ಬ ಹರಿದಾಸನು ಮನೆ ಮುಂದೆ ಹರಿನಾಮ ನುಡಿಯುತ್ತಾ ಬಂದನು. ಈತ ವಿಚಿತ್ರವಾಗಿದ್ದು, ಕೈಯಲ್ಲಿ ತಾಳಕ್ಕಾಗಿ ಚಿಟುಗೆಗಳಿದ್ದವು, ತಲೆಯ ಮೇಲೆ, ಅರಳಿಯ ಮರದ ಸಸಿವುಳ್ಳ ಅಕ್ಕಿಯ ಪಾತ್ರೆ ಇತ್ತು! ಅಂತಹ ಹರಿದಾಸರು ಮನೆ ಮುಂದೆ ನಿಂತಾಗ, ಭಿಕ್ಷೆ ಕೊಡದಿರುವುದು ಅಶುಭವೆನ್ನುವರು. ಆದ್ದರಿಂದ, ಮನೆಯಲ್ಲಿ ಹುಡಿಕಿ, ಸಿಕ್ಕಿದ ಒಂದು ಹಿಡಿಯ ಅಕ್ಕಿಯನ್ನು ಹರಿದಾಸರಿಗೆ ಕೊಟ್ಟೆನು. ಆ ಅಕ್ಕಿಯನ್ನು ಸ್ವೀಕರಿಸಿ, ಆತ, ''ಸ್ವಾಮಿ! ನಿನ್ನೆ ರಾತ್ರಿ ಒಬ್ಬ ಕಟುಕನು, ಗುರುಚರಣರೆಂಬ ದತ್ತ ಭಕ್ತರನ್ನು ಹತ್ಯೆ ಮಾಡಿರುವನು. ವಿಚಿತ್ರವೇನೆಂದರೇ, ಆತನ ಪ್ರಾಣ ಶರೀರ ಬಿಟ್ಟು ಈ ಅರಳಿ ಸಸಿಯಲ್ಲಿ ನಿಂತಿದೆ. ಔದುಂಬರ ವೃಕ್ಷದ ಮೂಲದಂದು, ದತ್ತಾತ್ರೇಯರು ಇರುವುರೆಂದು ಪ್ರತೀತಿ. ಈ ಸಸಿ ಸಾಮಾನ್ಯವಾದುದಲ್ಲ, ಗೋದಾವರಿ ಮಂಡಲದಲ್ಲಿ ಶ್ರೀ ಪೀಠಿಕಾಪುರವೆಂಬ ಮಹಾ ಕ್ಷೇತ್ರವಿರುವುದು. ಅಲ್ಲಿ ಸ್ವಯಂಭೂ ದತ್ತರಾದ ಶ್ರೀಪಾದ ಶ್ರೀವಲ್ಲಭರು ಮಾರು ವೇಷದಲ್ಲಿ ಸುತ್ತುತ್ತಿದ್ದಾರೆಂದು ಪ್ರತೀತಿ. ಶ್ರೀ ವಲ್ಲಭರ ತಾಯಿಯ ತಂದೆಯ ಮನೆಯಲ್ಲಿರುವ ಔದುಂಬರ ವೃಕ್ಷದ ಸಸಿಯೇ, ಈಗೀಗ ನೀವು ನನ್ನ ಪಾತ್ರೆಯಲ್ಲಿ ಕಂಡದ್ದು. ಇದು ನಿಮ್ಮ ಮನೆಯಲ್ಲಿ ಬೆಳೆಸಿ, ಎಲ್ಲಾ ಶುಭಗಳಿಂದ ಅಲಂಕರಿಸಿಕೊಳ್ಳಿ ಎಂದು ನುಡಿಯಲು, ನನಗೆ ತಲೆ ತಿರುಗಿದಂತಾಯಿತು. ಆಗ ನಾನು ಹರಿದಾಸರನ್ನುದ್ದೇಶಿಸಿ, ''ಸ್ವಾಮಿ! ನಾನೇ ಗುರುಚರಣನು, ನಾನು ಯಾವ ವಿಧವಾದ ಹತ್ಯೆಗೂ ಗುರಿಯಾಗಲಿಲ್ಲ. ದತ್ತ ಭಕ್ತನು! ನಾನು ಕನಸಿನಲ್ಲಿ ಕಟುಕನನ್ನು ಕಂಡೆನು. ಆತ ತನ್ನ ಕತ್ತಿಯಿಂದ ನನ್ನನ್ನು ಕೊಲ್ಲುವೆನೆಂದು ಹೇಳಿರುವನು. ಎಲ್ಲೇ ಆಗಲಿ ಓರ್ವನು ಸತ್ತುಹೋದ ನಂತರ, ಶವ ಸಿಗದಿದ್ದಲ್ಲಿ, ಅರಳಿಯ ಮರ ಒಣ ತುಂಡಗಳನ್ನು ಜೋಡಿಸಿ, ಅದನ್ನೇ ಶವವಾಗಿ ಭಾವಿಸಿ ಉತ್ತರ ಕ್ರಿಯೆಗಳು ನಡೆಸುವುರೆಂದು ಕೇಳಿರುವೆನು. ಅಷ್ಟೇಹೊರತು, ಓರ್ವನ ಪ್ರಾಣವನ್ನು ಔದುಂಬರ ವೃಕ್ಷದೊಳಗೆ ಆಕರ್ಷಿಸಿ, ಅದೇ ಸಮಯಕ್ಕೆ ಅದೇ ಮನುಷ್ಯನ ಪ್ರಾಣ ನಿಲ್ಲಿಸುವುದು ಎಲ್ಲೂ ನೋಡಿಲ್ಲ, ಕೇಳಿಯೂ ಇಲ್ಲ!'' ಎಂದೆನು.

## ಔದುಂಬರ ವೃಕ್ಷದ ಮಹಿಮೆ

ಆಗ ಹರಿದಾಸರು ಗಟ್ಟಿಯಾಗಿ ನಗುತ್ತಾ ನೀವು ಹೇಳುವುದು ನಿಜವೇ. ತಪ್ಪಲ್ಲ! ಈ ಸೃಷ್ಟಿ, ಒಳ ರಹಸ್ಯವೆಲ್ಲವೂ ತಿಳಿದಿರುವವರು ಆ ಆದಿಗುರುಗಳಾದ ಶ್ರೀದತ್ತರೇ, ಮುಂಬರುವ ಕ್ಷಣಕ್ಕೆ ಅವರು ಮಾಡಲಿರುವದು ಸಪ್ತರ್ಷಿಗಳಿಗೂ ತಿಳಿಯಲಾರದು! ಹಾಗಿರಲೂ, ನೀನೆಷ್ಟು, ನಾನೆಷ್ಟು! ಮನುಷ್ಯನು ಆತ್ಮಶರೀರ ಬಿಟ್ಟಲ್ಲಿ ಮಾತ್ರವೇ ಮರಣವಲ್ಲ. **ಒಬ್ಬನಿಗೆ ಮಾರಕ ದಶೆ ಬಂದಲ್ಲಿ, ಅವನ ಸದ್ಗುರುಗಳು, ಅವನನ್ನು ಘೋರವಾದ ಮಾನಸಿಕ ಕ್ಷೋಭೆಗೂ, ಅವಮಾನಗಳಿಗೂ ಮತ್ತು ದುರ್ಭರ ಕಷ್ಟನಷ್ಟಗಳಿಗೂ ಒಳಪಡಿಸಿ, ಅವನ ಕರ್ಮ ಕಳೆಯಲೂ, ನೂತನ ಜನುಮ ಪ್ರಾಪ್ತಿಯಾಗಬಹುದು. ಅದೇ ಅವತಾರ**

**ಪುರುಷರಾದರೇ, ತನ್ನ ಆಶ್ರಿತನನ್ನು ಸ್ವಲ್ಪ ಬಾಧೆಗೆ ಒಳಪಡಿಸಿ, ಪುನರ್ಜನ್ಮ ತರುವರು. ಆದರೇ ಶ್ರೀ ದತ್ತಾತ್ರೇಯರು, ತಮ್ಮನ್ನು ಆಶ್ರಯಿಸಿದವರ ಪ್ರಾಣಶಕ್ತಿಯನ್ನು ತಾವು ಸದಾ ವಾಸಮಾಡುವ ಔದುಂಬರ ವೃಕ್ಷಕ್ಕೆ ಆಕರ್ಷಿಸಿ, ಅದರಿಂದ ಹೊರಬೀಳುವ ಪ್ರಾಣಶಕ್ತಿಯಿಂದ, ಆಶ್ರಿತನ ಶರೀರವನ್ನು ರಕ್ಷಿಸುವರು! ಅಲ್ಪಜ್ಞನಾದ ಆಶ್ರಿತನು, ತನ್ನ ಶರೀರದ ಪ್ರಾಣಶಕ್ತಿಯಿಂದಲೇ ಉಸಿರಾಡುತ್ತಿದ್ದಾನೆಂದುಕೊಳ್ಳುವನು! ನಿಜಕ್ಕೆ, ಔದುಂಬರದ ಪ್ರಾಣಶಕ್ತಿ, ಅವನನ್ನು ಚೇತನಗೊಳಿಸಿರುತ್ತೆ! ಆ ಮಾರಕ ದಶೆ ತೊಲಗಿದ ಕ್ಷಣವೇ, ಪುನಃ ಔದುಂಬರದ ಪ್ರಾಣಶಕ್ತಿ ಅವನ ಶರೀರದಲ್ಲಿ ಪ್ರತಿಷ್ಠೆಗೊಂಡು, ಅವನು ಮತ್ತಷ್ಟು ಕಾಲ ಜೀವಿಸಲು ನೆರವಾಗುತ್ತದೆ. ಪವಿತ್ರ ಔದುಂಬರದಿಂದ ಈ ರೀತಿ ಅದೆಷ್ಟು ಪ್ರಾಣಶಕ್ತಿ ಹೊರಬಿದ್ದರೂ, ಅದು ಪರಿಪೂರ್ಣವಾಗಿಯೇ ಇರುವುದು! ಕಾರಣ, ಶ್ರೀ ದತ್ತಾತ್ರೇಯರು, ಪ್ರತಿ ಔದುಂಬರ ವೃಕ್ಷ ಮೂಲದಲ್ಲಿ ಸೂಕ್ಷ್ಮ ರೂಪದೊಳು, ಪ್ರತಿಷ್ಠರಾಗಿರುವುದೇ"** ಎಂದು ವಿಶದೀಕರಿಸಿದರು.

ನನಗೆ ಹರಿದಾಸರು ಹೇಳುವುದೆಲ್ಲಾ ಆಶ್ಚರ್ಯವಾಗಿ ಕಂಡುಬಂದಿತು. ಕೃಷ್ಣದಾಸ ನಾಮಧೇಯದ ಆ ಹರಿದಾಸರು ಹೊರಟು ಹೋದರು. ನಾನು ಆ ಸ್ವಾಮಿಯ ಹೇಳಿಕೆಗಳನ್ನೆಲ್ಲಾ ನೆನೆಯುತ್ತಾ ನನ್ನ ಔದುಂಬರವನ್ನು ನಮ್ಮ ಹಿತ್ತಲಲ್ಲಿ ಪ್ರೇಮ, ಭಕ್ತಿಯಿಂದ ಬೆಳೆಸಲಾರಂಭಿಸಿದೆನು. ಕೆಲ ಕಾಲದ ನಂತರ, ನಮ್ಮ ದೂರದ ನೆಂಟರೊಬ್ಬರು, ವೃದ್ಧನು, ರೇಷ್ಮೆ ಬಟ್ಟೆ ವ್ಯಾಪಾರಿ, ಒಬ್ಬಂಟಿಗ, ನನ್ನಲ್ಲಿ ಪ್ರೇಮದಿಂದ, ನನ್ನೊಟ್ಟಿಗೆ ನಿವಾಸ ಮಾಡಲಾರಂಭಿಸಿದನು. ನನಗೆ ಸ್ವಲ್ಪ ಹಣ ಕೊಟ್ಟು, ರೇಷ್ಮೆ ಬಟ್ಟೆ ವ್ಯಾಪಾರ ಮಾಡಲೂ ಸಲಹೆಯಿತ್ತನು. ಜೊತೆಯಲ್ಲೇ, ಔದುಂಬರಕ್ಕೆ ಪ್ರದಕ್ಷಿಣೆಗಳು ಮತ್ತು ಶ್ರೀದತ್ತರ ಆರಾಧನೆ ಸಹ ಮಾಡುತ್ತಿದ್ದನು. **ನಮ್ಮ ಎಲ್ಲಾ ವ್ಯಥೆಗಳಿಗೂ ಔದುಂಬರವೇ ನೆರವಾಗುತ್ತಿತ್ತು! ಹೀಗೆ ನಮಗೂ ಶ್ರೀದತ್ತ ಪ್ರಭುವಿಗೂ ಮಧ್ಯೆ ಸ್ನೇಹವಾರಧಿಯಾಗಿ, ನಮ್ಮ ಔದುಂಬವರವಿರುತ್ತಿತ್ತು. ಸ್ವಾಮಿ! ಶ್ರೀದತ್ತ ಭಕ್ತರಿಗೆ ಔದುಂಬರ ಸೇವೆ ಅತಿಮುಖ್ಯವಾದ್ದು! ಔದುಂಬರವಿದ್ದ ಮನೆಯಲ್ಲಿ ಶ್ರೀದತ್ತರಿದ್ದಂತೆಯೇ, ಅದರ ಮಹಿಮೆ ಅತೀತ!**

## ಪಾಪಕರ್ಮಗಳ ಫಲಿತವಾಗಿ ಮುಳ್ಳಿನ ಗಿಡವಾಗುವುದು

ನಾನು, ವ್ಯಾಪಾರಕ್ಕಾಗಿ ಓಡ್ರ ದೇಶಕ್ಕೆ ಹೋಗುತ್ತಾ, ಅದೃಷ್ಟದಿಂದ ಪೀಠಿಕಾಪುರಕ್ಕೆ ಸೇರಿ, ಶ್ರೀ ಬಾಪನಾರ್ಯರ ಮನೆ ಪತ್ತೆ ಹಚ್ಚಿದೆನು. ಆಗ ಶ್ರೀಪಾದರು, ಬಾಪನಾರ್ಯರ ಜೊತೆ ಹಿತ್ತಲಲ್ಲಿದ್ದರು. ಶ್ರೀಪಾದರು ಅಲ್ಲಿನ ಒಂದು ಮುಳ್ಳಿನ ಗಿಡಕ್ಕೆ ನೀರು ಹಾಕುತ್ತಿದ್ದರು! ಬಾಪನಾರ್ಯರು ''ಪುಟ್ಟಾ! ಈ ಮುಳ್ಳಿನ ಗಿಡಕ್ಕೆ ಯಾವ ಸಂಜೀವಿನಿಯೋ, ಸೋಮಲತೆಯೋ ಅನ್ನುವ ಹಾಗೆ, ನೀನು ಪ್ರೀತಿಯಿಂದ, ದಿನವೂ ನೀರು ಹಾಕುವೆಯೇ! ಮುಳ್ಳಿನ ಗಿಡ, ಹೇಗೆ ಬಿಟ್ಟರೂ ಬೆಳಕೊಳ್ಳದೇ?'' ಅಂದರು. ಆಗ ಶ್ರೀಪಾದರು, ''ತಾತ! ಹಿಂದೆ ನಮ್ಮ ಬೀದಿಯಲ್ಲೇ ವಾಸಿಸುತ್ತಾ ಸ್ವಯಂಭೂ ದತ್ತರೇ ಬಾಪನಾರ್ಯರ ಮೊಮ್ಮಗನಾಗಿ ಹುಟ್ಟಿರುವನಂತೆ. ಎಷ್ಟು ವಿಚಿತ್ರವೊ, ದೈವದ್ರೋಹದ ಮಾತೋ!'' ಎಂದು ಪರಿಹಾಸ ಮಾಡಿದ ವಿಸ್ಸಾವಧಾನಿ ತಾತರೇ ಈ ಮುಳ್ಳಿನ ಗಿಡ. ನನ್ನ ತಾಯಿ, ನಾನು, ಅಣ್ಣಂದಿರು, ಶ್ರೀ ವಿದ್ಯಾಧರಿ, ರಾಧ ಮತ್ತು ಸುರೇಖರು, ವೆಂಕಟಪ್ಪಯ್ಯ ಶ್ರೇಷ್ಠಿ ಮತ್ತು ನರಸಿಂಹ ವರ್ಮರವರ ಮನೆಗಳಲ್ಲಿ ಊಟ ಮಾಡುವಾಗ, 'ಮಲ್ಲಾದಿಯವರು, ಘಂಡಿಕೋಟರವರೂ ತುಂಬಾ ಅನಾಚಾರವಂತರು, ಧರ್ಮಭ್ರಷ್ಟರು ಸಹಾ. ಈ ಎರಡು ಕುಟುಂಬದವರನ್ನು ಬ್ರಾಹ್ಮಣ ಸಮಾಜದಿಂದ ಹೊರಹಾಕಬೇಕೆಂದು, ಬ್ರಾಹ್ಮಣ ಪರಿಷತ್ತಿನಲ್ಲಿ

ಕಂಠ ಬಿಚ್ಚಿ ಕೂಗಿದ ವಿಸ್ಸಾವಧಾನಿ ತಾತನೇ ಈ ಮುಳ್ಳಿನ ಗಿಡ! ಶ್ರೀಪಾದನು ದತ್ತಾತ್ರೇಯನಾ? ಇದಕ್ಕೆ ಸಾಕ್ಷಿ ಎಲ್ಲಿ? ಶಾಸ್ತ್ರ ಹೇಳುತ್ತಾ, ವೇದ ಘೋಷಿಸುವುದಾ? ಎಂದು ಮೊಂಡುವಾದ ಮಾಡಿದ ಆ ತಾತನೇ ಈ ಮುಳ್ಳಿನ ಗಿಡ! ಸರ್ವಮಂಗಳ ಸ್ವರೂಪಿಣಿ ಆದ, ನನ್ನ ತಾಯಿ ಶ್ರೀಮತಿ ಸುಮತೀ ಮಹಾರಾಣಿಯವರನ್ನು ತಮ್ಮ ಮನೆಯ ಮಗಳಂತೆ ಭಾವಿಸಿ, ಊಟವಿತ್ತು ಹೊಸ ವಸ್ತ್ರಗಳಿಂದ ಗೌರವಿಸಿ, ತಮ್ಮ ಜನುಮ ಧನ್ಯವಾಯಿತೆಂದು ಭಾವಿಸುವ, ವೆಂಕಟಪ್ಪಯ್ಯ ಶ್ರೇಷ್ಠಿ ತಾತರನ್ನು, ನರಿಸಿಂಹ ವರ್ಮ ತಾತನವರನ್ನೂ, ಸದಾ ಆರೋಪಿಸುತ್ತಿದ್ದ ಆ ವಿಸ್ಸಾವಧಾನಿ ಅಜ್ಜನೇ ಈ ಮುಳ್ಳಿನ ಗಿಡ! ತೀರಿಹೋದ ನಂತರ ಉತ್ತರ ಕ್ರಿಯೆಗಳು ಮಾಡದಿದ್ದ ಕಾರಣ, ಅತ್ಯಧಿಕ ಪಾಪಭಾರ ಕಾರಣದಿಂದಲೂ, ತನ್ನ ಸ್ವಭಾವಕ್ಕೆ ತಕ್ಕಂತೆ ಈ ಮುಳ್ಳಿನ ಗಿಡವಾಗಿ ಜನ್ಮಿಸಿದ ವಿಸ್ಸಾವಧಾನಿಯವರಿಗೆ ಕರುಣೆಯಿಂದ ಜಲ ಕೊಡುತ್ತಿದ್ದೇನೆ'' ಎಂದರು.

ಸ್ವಲ್ಪ ಸಮಯದ ನಂತರ, ಹಿತ್ತಲಿನಿಂದ ಬೀದಿಯ ಕಡೆಗೆ ಬಂದರು. ಶ್ರೀಪಾದ ಶ್ರೀವಲ್ಲಭರ ಸುಂದರ ರೂಪವನ್ನು ಕಂಡಕೂಡಲೇ, ನನಗೆ, ಸಂತಸದಿಂದ ಬಿಕ್ಕಳಿಕೆ ಬಂದಿತು. ಆನಂದಭಾಷ್ಪ ಸಹಾ ಬಂದವು. ನಾನು ಶ್ರೀಗಳ ಚರಣಗಳ ಮೇಲೆ ಬಿದ್ದೆನು. ಶ್ರೀಪಾದರು ಪ್ರೇಮದಿಂದ ಬೆನ್ನು ತಟ್ಟಿ, ``ಮಗೂ! ಏಳು, ಏಳು, ಯಾಕೀಹುಚ್ಚು ಕೆಲಸ? ಸತ್ತು, ಪುನರ್ಜನ್ಮ ಪಡೆದು, ನನ್ನ ಬಳಿ ಬಂದೆಯಾ?'' ಎಂದರು. ನಾನು ರೇಷ್ಮೆ ವ್ಯಾಪಾರ ಮಾಡುವನೆಂದು ತಿಳಿದು ಬಾಪನಾರ್ಯರು, ನನ್ನೊಟ್ಟಿಗೆ ``ಎಲೈ! ನಮ್ಮ ಪುಟ್ಟನಿಗೆ ತಕ್ಕ ರೇಷ್ಮೆ ವಸ್ತ್ರ ಉಡುಪುಗಳು ಇವೆಯಾ? ಎಂದರು. ನಾನು ಅವರಿಗೆ ತಕ್ಕ ಬಟ್ಟೆಗಳನ್ನೇ ಕೊಟ್ಟೆನು. ಗುರುಚರಣನೇ, ನಿನಗೊಂದು ವಿಚಿತ್ರ ತೋರಿಸುವೆನು ಬಾ ಎಂದು ನನ್ನನ್ನು ಒಳಗೆ ಕರೆದೊಯ್ದರು. ಬಾಪನಾರ್ಯರೂ ಕೂಡ ಬಂದರು. ನಮ್ಮನ್ನು ಆ ಮುಳ್ಳಿನ ಗಿಡದತ್ತ ನಿಲ್ಲಿಸಿ, ``ವಿಸ್ಸನ್ನ ಅಜ್ಜಾ! ನಿನ್ನ ಮಕ್ಕಳು ಶ್ರದ್ಧೆ ಇಲ್ಲದೇ ಮಾಡಿದ ಶ್ರಾದ್ಧ ಕರ್ಮಗಳಿಂದಲೂ, ಬಾಪನಾರ್ಯರಂತಹ ದೊಡ್ಡ ವ್ಯಕ್ತಿಯನ್ನು, ಕಾರಣವಿಲ್ಲದೇ ನಿಂದಿಸಿದ್ದಕ್ಕೂ ನಿನಗಿಂತಹ ನೀಚ ಜನುಮ ಲಭಿಸಿದೆ. ಈ ಗುರುಚರಣನು, ನಿನಗೆ ಹಿಂದಿನ ಜನುಮದಲ್ಲಿ ಪುತ್ರನಾಗಿದ್ದನು. ಇವನಿಂದ ನಿನಗೆ ಶ್ರಾದ್ಧಕರ್ಮಗಳನ್ನು ಪುನಃ ಮಾಡಿಸುವೆನು. ನಿನಗೆ ಒಪ್ಪಿಗೆ ತಾನೇ'' ಎಂದು ಕೇಳಿದರು. ನಾವು ದಿಗ್ಭ್ರಾಂತರಾಗಿ ನೋಡುತ್ತಿದ್ದೆವು. ಆ ಮುಳ್ಳಿನ ಗಿಡವನ್ನು ಸುತ್ತಿಕೊಂಡೇ ವಾಯು ರೂಪದಲ್ಲಿ ಪ್ರೇತಾತ್ಮರಾಗಿದ್ದ ವಿಸ್ಸಾವಧಾನಿಗಳು, 'ಅದಕ್ಕಿಂತಾ ಮಹದ್ಭಾಗ್ಯ ಉಂಟೇ?'' ಎಂದರು, ಸ್ಪಷ್ಟವಾಗಿ. ಶ್ರೀಗಳು, ನನ್ನ ಕೈಯಿಂದಾ ಆ ಮುಳ್ಳಿನ ಗಿಡವನ್ನು ಸಮೂಲವಾಗಿ ಕಿತ್ತುಹಾಕಿಸಿದರು. ನನ್ನ ಕೈಯಿಂದಲೇ ಒಂದು ಆಲದ ಮತ್ತು ಅರಳಿನ ಒಣ ಕಡ್ಡಿಗಳಿಂದ, ಬೆಂಕಿ ಉದ್ಭವ ಮಾಡಿದರು. ಆ ಮುಳ್ಳಿನ ಗಿಡವನ್ನು ದಹನ ಮಾಡಿದೆನು. ಶ್ರೀಪಾದರು ನನ್ನನ್ನು ಸ್ನಾನಮಾಡಲು ಆದೇಶಿಸಿದರು. ಸ್ನಾನ ವಿಭೂತಿಧಾರಣೆಯ ನಂತರ ಮಹೇಶ್ವರನು ಸ್ಮಶಾನದಲ್ಲಿನ ಬೂದಿಯನ್ನು ಮೈಗೆ ಉಜ್ಜಿಕೊಂಡಿರುವನೆಂದು ಜನ ತಿಳಿಯುವರು! ಮಹಾಪುರುಷರು, ಸಿದ್ಧಪುರುಷರು, ಮಹಾಯೋಗಿಗಳು, ಮಹಾಭಕ್ತರ ದಹನದ ಬೂದಿಯನ್ನೇ ಶಿವ, ಮೈಗೆ ಹಚ್ಚಿಕೊಳ್ಳುವನು. ತನ್ನ ಮೈಯನ್ನಾವರಿಸಿರುವ ತೇಜೋವಲಯದಲ್ಲಿ ಆ ಸಜ್ಜನರು ಐಕ್ಯತೆ ಹೊಂದುವರು. ಕೋತಿ, ಹಾವು, ಹಸು ಮುಂತಾದ ಪ್ರಾಣಿಗಳು ಆಕಸ್ಮಿಕವಾಗಿ ನಮ್ಮಿಂದ ಸಾಯಿಸಲ್ಪಟ್ಟಾಗ, ಉತ್ತರಕ್ರಿಯೆ ಮಾಡತಕ್ಕದ್ದು. ಶ್ರದ್ಧೆಯಿಂದ ಕಾರ್ಯಗಳು ಮುಗಿಸಿ, ಅನ್ನಾರ್ತಿಗಳಿಗೆ ಊಟವಿಟ್ಟಲ್ಲಿ ಶುಭ. ಮಂತ್ರನಿಯಮವಿಲ್ಲ. ಯಾವುದೋ ಜನುಮದಲ್ಲಿ ಅದ್ಯಾವ ಅಲ್ಪ ಋಣಾನುಬಂಧವಿದ್ದರೂ, ಅಂತಹ ಹತ್ಯೆಯ ಪಾಪ, ಕರ್ಮಶೇಷ ಹೋಗುವುದು. ಆ ಜಂತುಗಳಿಗೂ ಸದ್ಗತಿ ಲಭಿಸುವುದು. ಹಿಂದೆ, ಒಮ್ಮೆ ಬರಗಾಲ ಬಂದು, ಲೋಕ ಒದ್ದಾಡುತ್ತಿತ್ತು. ಗೋಗಣಾಭಿವೃದ್ಧಿ ಇದ್ದರೇತಾನೇ ತುಪ್ಪದಂತಹ ಪವಿತ್ರ ಪದಾರ್ಥಗಳು

ಲಭಿಸುವುದು? ಯಜ್ಞಯಾಗಾದಿಗಳಲ್ಲಿದ್ದಲ್ಲಿ ದೇವತೆಗಳಿಗೂ ಮಾನವರಿಗೂ ಇರಬೇಕಾದ ಪರಸ್ಪರ ಸಹಕಾರ ನಿರರ್ಥಕವಾಗಿ, ಧರ್ಮಗ್ಲಾನಿ ಪ್ರಾಪ್ತಿಯಾಗುವುದು. ಆಹಾರವಿಲ್ಲದಿದ್ದರೇ ಮನುಜರು ಸಾಯುವರು. ಆದ್ದರಿಂದಲೇ ಗೌತಮ ಮಹಾಮುನಿಗಳು, ಆಶ್ರಮದಲ್ಲಿ ತನ್ನ ತಪಶ್ಶಕ್ತಿಯಿಂದ ಆಹಾರ ಬೆಳೆಗಳನ್ನು ತರುತ್ತಿದ್ದರು! ಕಾರಣಾಂತರದಿಂದ, ಈ ಮಹರ್ಷಿಗೆ ಪ್ರಾಪ್ತಿಯಾದ ಮಾಯಾಗೋಹತ್ಯೆ ಪಾತಕ ಹೋಗಲು, ಅವರಿಂದ ಗೋದಾವರಿ ಅವತರಿಸಲಾಯಿತು. ಹಾಗಾಗಿ, ಗೌತಮ ಮಹರ್ಷಿಗೆ ಈ ಲೋಕ ತುಂಬ ಋಣಗ್ರಸ್ತವಾಗಿದೆ. ಆತನ ಪತ್ನಿ ಅಹಲ್ಯೆ ಪತಿವ್ರತೆ.

ಈ ವಿಸ್ಸಾವಧಾನಿ, ಗೌತಮ ಗೋತ್ರಜಾತರು. ಗೌತಮರಿಗೂ ವಿಸ್ಸಾವಧಾನಿಗಳಿಗೂ ಇರುವ ಸಂಬಂಧ ಅಷ್ಟೇ. ಇದು ಅತ್ಯಂತ ಅಲ್ಪವಾದ ಋಣಾನುಬಂಧ. ಆದರೂ, ತ್ರೇತಾಯುಗದಲ್ಲಿ, ಪೀಠಿಕಾಪುರದಲ್ಲಿ ನಡೆದ ಸಾವಿತ್ರಿಕಾಠಕ ಚಯನದಲ್ಲಿ ಗೌತಮ ಮಹರ್ಷಿ ಪಾಲ್ಗೊಂಡಿದ್ದ ಕಾರಣಕ್ಕೂ, ವಿಸ್ಸಾವಧಾನಿ ಅದೃಷ್ಟದಿಂದ ಪೀಠಿಕಾಪುರದಲ್ಲಿ ಜನ್ಮಿಸುವುದಲ್ಲದೇ, ಅತಿ ದುರ್ಲಭವಾದ ನನ್ನ ದರ್ಶನ ಪಡೆದ ಕಾರಣಕ್ಕೂ, ಅಯೋಗ್ಯನಿಗೆ ಸಹಿತ, ಮಹಾಕರುಣೆಯಿಂದ ಸದ್ಗತಿಯನ್ನು ಶ್ರೀದತ್ತರು ಪ್ರಸಾದಿಸುವರೆಂದು ಲೋಕ ತಿಳಿಯಬೇಕೆಂದೇ ಈ ಘಟನೆ ನಡೆಯಿತು. **ಋಣಾನುಬಂಧವಿಲ್ಲದಿದ್ದರೇ ಒಂದು ನಾಯಿ ಸಹಾ ನಿನ್ನ ಬಳಿ ಬರಲಾರದು. ಆದ್ದರಿಂದ ಯಾರಾದರೂ ಸಹಾಯ ಕೋರಿದರೆ ತಪ್ಪದೆ ಮಾಡು. ಕೈಲಾಗದಿದ್ದರೆ ಪ್ರೀತಿ ಮಾತುಗಳಿಂದ, ನಿನ್ನ ಅಸಮರ್ಥತೆ ತಿಳಿಸಿ, ಅವರನ್ನು ಸಂತೋಷಪಡಿಸು. ಅವರೊಟ್ಟಿಗೆ ನಿರ್ದಾಕ್ಷಿಣ್ಯ ಪ್ರಕಟಿಸಿದರೇ, ನಾನು ಕೂಡ ನಿಮ್ಮ ಮೇಲೆ ಅಂತಹ ನಿರ್ಲಕ್ಷ್ಯ ತೋರಿಸುವೆನು. ನೀನೆಷ್ಟು ಸತ್ಯವೊ, ಲೋಕ ಅದೆಷ್ಟು ಸತ್ಯವೋ, ಈ ಸೃಷ್ಟಿಯೂ ಎಷ್ಟು ಸತ್ಯವೋ, ಲೋಕದ ಸಮಸ್ತಕ್ಕೂ ನಾನೇ ಮೂಲಕಾರಣವೆಂಬುದೂ ಅಷ್ಟೇ ಸತ್ಯ! ನಾನು ಸಮಸ್ತ ಸತ್ಯಕ್ಕೂ ಸತ್ಯನು.** ವೇದದಲ್ಲೂ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎನ್ನಲಾಗಿದೆ ಎಂದು ವಿವರಿಸಿದರು.

ನಾನು ತನ್ಮಯತೆಯಿಂದ ನೋಡುತ್ತಿದ್ದೆನು. ಬಾಪನಾರ್ಯರಿಗೆ ಆನಂದಬಾಷ್ಪ ಉದುರಿತು. ಅದನ್ನು ಒರೆಸುತ್ತಾ ಶ್ರೀಪಾದರು, ''ತಾತ! ಈ ನಡುವೆ ನೀನು ಸದಾ ನನ್ನ ಧ್ಯಾನದಲ್ಲೇ ಇರುತ್ತಿದ್ದೀಯ. ನಿನ್ನ ಜನ್ಮಧನ್ಯ. ತೇಟ್ ನಿನ್ನ ರೂಪದಲ್ಲೇ 'ನೃಸಿಂಹ ಸರಸ್ವತಿ' ಅವತಾರ ತಾಳುವೆನು. ಸತ್ಯ!'' ಎಂದು, ಬಾಪನಾರ್ಯರ ಕೈಯ್ಯಲ್ಲಿ ತಮ್ಮ ಕೈ ಹಾಕಿದರು. ಆಗ ಅವರು, ''ಶ್ರೀಪಾದಾ! ಅದೆಷ್ಟು ದಿನಗಳಿಂದಲೋ ನನಗೊಂದು ಸಂದೇಹವಿದೆ. ಕೇಳಲೇ'' ಎಂದು ಭಿನ್ನವಿಸಿಕೊಂಡರು. ''ತಾತ! ನಿನಗೆ ಸಂದೇಹವೇ? 10 ವರ್ಷದ ಪುಟ್ಟನು, ಅದನ್ನು ಪರಿಹರಿಸುವುದೇ! ಪ್ರಯತ್ನಿಸುತ್ತೇನೆ, ಕೇಳಿ'' ಎಂದರು ಶ್ರೀಗಳು. ಆಗ ಆರ್ಯರು, ''ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವುದು ಬ್ರಹ್ಮ ವಿಷ್ಣು ಮಹೇಶ್ವರರಲ್ಲವೇ? ಅವರುಗಳ ಶಕ್ತಿಸ್ವರೂಪಗಳೇ ತಾನೇ ಸರಸ್ವತಿ, ಲಕ್ಷ್ಮಿ, ಪಾರ್ವತಿಯರು? ಎಂದು ಪ್ರಶ್ನಿಸಿದರು. ಶ್ರೀಗಳು, ''ಹೌದು'' ಎಂದರು. ಪುನಃ ಬಾಪನಾರ್ಯರು, ''ಇವರೆಲ್ಲರನ್ನೂ ಸೃಷ್ಟಿಸಿದ್ದು 'ಆದಿಪರಾಶಕ್ತಿ' ಮಾತೆ ಅಲ್ಲವೇ? ಹಾಗಿದ್ದಲ್ಲಿ ನೀನು ಯಾರು?'' ಎಂದು ತಮ್ಮ ಸಂದೇಹ ವ್ಯಕ್ತ ಮಾಡಿದರು.

## ಶ್ರೀಪಾದರು ಸರ್ವ ದೇವತಾ ಸ್ವರೂಪಿ - ಎಲ್ಲಕ್ಕೂ ಮೂಲ ಶ್ರೀಪಾದ

ತನ್ನ ಅಜ್ಜನ ಪ್ರಶ್ನೆಗಳಿಗೆ ಶ್ರೀಪಾದರು ಸುಂದರ ಮುಖ ಮತ್ತು ಮುಗುಳ್ನಗೆಯಿಂದ, ''ತಾತಾ! ಈಗಲೇ ನಿಮ್ಮ ಕಣ್ಣೆದುರಲ್ಲೇ ಮುಳ್ಳಿನ ಗಿಡಕ್ಕೆ ಸದ್ಗತಿ ಕಲ್ಪಿಸಿದೆನು. 'ನಾನು ಮಾಡುವ ಕೆಲಸಗಳಿಗೆ ಶಾಸ್ತ್ರ ಪ್ರಮಾಣ ಉಂಟೇ?' ಎಂಬುವ ಪರಿಶೀಲನೆ ಅನಗತ್ಯ.

ನಾನು ಎಲ್ಲಾ ಭೂಮಿಕೆಗಳಲ್ಲೂ ಇರುವೆನು. ನನ್ನನ್ನು ಎಲ್ಲಾ ಭೂಮಿಕೆಗಳಲ್ಲೂ ಯೋಗಿ, ತಪ್ಪದೇ ಕಾಣುವನು. ಸೃಷ್ಟಿ ಮಾಯೆ ಅಲ್ಲ. ಇದನ್ನು ಸೃಷ್ಟಿಯೆಂದು ಭಾವಿಸುವುದೇ ಮಾಯೆ. ಸೃಷ್ಟಿಯಲ್ಲೆಲ್ಲಾ ಒಂದೇ ಭಗವಚ್ಚೈತನ್ಯವಿದೆ. ಆದರೆ ಅದು ಅನೇಕ ತರಹದ ಸ್ಥಿತಿ ಮತ್ತು ಅವಸ್ಥೆಗಳಲ್ಲಿ ಪರಿಣಾಮ ಹೊಂದಲು ವಶೀಭೂತವಾಗಿರುವುದು. ಈ ಪರಿಣಾಮ ಕ್ರಮಕ್ಕೆ, ಕಾಲ ಆಧಾರವಾಗಿರುವುದು. ಕಾಲದ ಕುರಿತ ಜ್ಞಾನ ಸಂಭವಿಸುತ್ತಿದೆ. ಆದ್ದರಿಂದಲೇ ಪರಿಣಾಮಕ್ರಮವೆಂಬುದು ಅನುಭವದಲ್ಲಿದೆ. ಈ ಕಾಲವೆಂಬುದು ಸೂರ್ಯಚಂದ್ರ ಮುಂತಾದ ಖಗೋಳ ಸ್ಥಿತಿಗಳ ಕಾರಣ, ನಮಗೆ ಗೊತ್ತಾಗುತ್ತಿದೆ. ತ್ರಿಕಾಲ ಜ್ಞಾನ ಮತ್ತು ಅವಸ್ಥಾತ್ರಯ ಜ್ಞಾನ ಒಂದೇ ಸಮಯಕ್ಕೇ, ಅನುಭವದಲ್ಲಿರುವರು ಅತ್ರಿ ಮಹರ್ಷಿಗಳು. ಈ ಸೃಷ್ಟಿಯಲ್ಲಿ ಅನಸೂಯಾತತ್ತ್ವ ಅನುಭವದಲ್ಲಿ ಹೊಂದಿದ ದೊಡ್ಡ ಮುತ್ತೈದೆ ಅನಸೂಯ ಮಾತೆ. ನನಗೆ ಸೃಷ್ಟಿ ಸ್ಥಿತಿ ಲಯಗಳು ಮತ್ತು ಸ್ಥೂಲ ಸೂಕ್ಷ್ಮ ಕಾರಣ ಶರೀರಗಳು, ನಿನ್ನೆ, ನಾಳೆ ಮತ್ತು ಇಂದು ಮುಂತಾದವು ಏಕಕಾಲದಲ್ಲೇ ಅನುಭವದಲ್ಲಿರುವುದು. ಆದ್ದರಿಂದ ನನ್ನದು, ನಿತ್ಯ ವರ್ತಮಾನ. ನಡೆದದ್ದು, ನಡೆಯುತ್ತಿರುವುದು ಮತ್ತು ನಡೆಯಲಿರುವುದೆಲ್ಲವೂ ಏಕಕಾಲದಲ್ಲೇ ಅನುಭವದಲ್ಲಿರುವುದು. ಹಾಗಿದ್ದಲ್ಲಿ, ತ್ರಿಮೂರ್ತಿ ಮತ್ತು ತ್ರಿಶಕ್ತಿಗಳೂ ನನ್ನಲ್ಲೇ ಇರುವುದು ಆಶ್ಚರ್ಯದ ಸಂಗತಿಯೇ? ತ್ರಿಮೂರ್ತಿ ಮತ್ತು ತ್ರಿಶಕ್ತಿಗಳು ಸೃಷ್ಟಿಗೆ ಪೂರ್ವವೇ ಆದಿಪರಾಶಕ್ತಿಯಲ್ಲಿರುವರೆಂಬುದು ಸತ್ಯದ ಮಾತು. ನಾನು ಆದಿಪರಾಶಕ್ತಿ ಒಂದೇ, ಅಭಿನ್ನ ಸ್ವರೂಪಗಳು! ಆದರೇ ಇದರಲ್ಲೊಂದು ಸೂಕ್ಷ್ಮಾಂಶವಿದೆ. ಸಮಸ್ತ ಸೃಷ್ಟಿಯೂ ಮಾತೃ ಗರ್ಭದಿಂದಲೇ ಹೊರಬೀಳಬೇಕೆನ್ನುವ ಒಂದು ಮಹಾಸಂಕಲ್ಪದ ಕಾರಣ, ಆದಿಪರಾಶಕ್ತಿ ಉದ್ಭವ ನಡೆಯಿತು. ಅದು ಬ್ರಹ್ಮಯೋನಿ ಸ್ವರೂಪ. ಅದರ ಮೂಲಕ, ತ್ರಿಮೂರ್ತಿ, ತ್ರಿಶಕ್ತಿಗಳು ಹೊರಬಂದರು. ಆದರೇ, ಆ ಆದ್ಯಪರಾಶಕ್ತಿಗೆ ಹೀಗೆ ಸೃಷ್ಟಿಸಬೇಕೆನ್ನುವ ಸಂಕಲ್ಪ ಮತ್ತು ಅದರ ಪದ್ಧತಿ, ಹೇಗೆ ತಾನೇ ಆದೀತು? ಆ ಪ್ರಬೋಧನ ಶಕ್ತಿ ನಾನು. ಅದೇ ಮಹಾಸಂಕಲ್ಪ ಸ್ವರೂಪ! ಅಂತಹ ಮಹಾಸಂಕಲ್ಪ ನನ್ನಿಂದಲೇ ಉದ್ಭವಿಸಿ, ಆದ್ಯಪರಾಶಕ್ತಿ, ತ್ರಿಮೂರ್ತಿಗಳು ಮತ್ತು ತ್ರಿಶಕ್ತಿಗಳ ಹುಟ್ಟುವಿಕೆ! ಅದೇ ಪರಮ ಗುರುಸ್ವರೂಪ. ಅದು ಒಂದು ಪರಮ ರಹಸ್ಯ. ಅಂತಹ ಮಹಾಸಂಕಲ್ಪಕ್ಕೆ ಒಂದು ಮನೋಜ್ಞಾನದಿಂದಲೇ ಎಲ್ಲವೂ ತಕ್ಷಣ ಸಾಧ್ಯ. ಎಲ್ಲಾ ಶಕ್ತಿಗಳನ್ನೂ ಹಿಡಿದಿಡಬಲ್ಲ ಮೂಲಶಕ್ತಿ ನಾನೇ! ಸೃಷ್ಟಿಯಲ್ಲಿ ಮಾತಾ ಶಿಶು, ಪಿತಾ ಪುತ್ರ, ಪತಿ ಪತ್ನಿ ಮತ್ತು ಅಣ್ಣತಂಗಿಯರೆಂಬ ಪವಿತ್ರ ಸಂಬಂಧಗಳು ಇರಲೇಬೇಕು. ಆ ಪವಿತ್ರ ಸಂಬಂಧಗಳನ್ನು ತೋರಿಸಕೊಡಲೆಂದೇ ದೇವೀದೇವತಾ ಸ್ವರೂಪಗಳ ಆತುರ! ಜೀವಿ ಮಾಯೆಯಲ್ಲಿರುವ ಶಕ್ತಿ, ನಾನು, ಮಾಯೆಗೆ ಸಿಗದಂತಹಾ ಮಹಾಶಕ್ತಿ. ಈ ಎರಡು ಶಕ್ತಿಗಳೂ, ಯೋಗ ಶಕ್ತಿಯಿಂದ ಮಾತ್ರ, ಸೇರಲೂ ಸಾಧ್ಯ. ಆದ್ಯಪರಾಶಕ್ತಿ ಆಗಲಿ, ಮೂಲದತ್ತರಾಗಲಿ ಆರಾಧಿಸಲ್ಪಟ್ಟಾಗ, ಅಂತರ್ಲೀನವಾಗಿ, ಅಲ್ಲಿ ತ್ರಿಮೂರ್ತಿ ಮತ್ತು ತ್ರಿಶಕ್ತಿಗಳೂ ಇರುವರು. ಈ ದೇವ ಸಂಬಂಧ ತತ್ತ್ವ-ಸಿದ್ಧಿಗಳು ಕೇವಲ ಸಾಧನೆಯಿಂದ ಮಾತ್ರ ಒಂದು ವ್ಯಕ್ತಿಗೆ ಸಾಧ್ಯ!

## ಶ್ರೀಪಾದರನ್ನು ಆರಾಧಿಸುವವರ ಸಮಸ್ತ ಪಾಪಗಳೂ ನಾಶವಾಗುವವು

ಒಂದು ಕಾಡು ಪ್ರಾಣಿಗೆ ಸಂಸ್ಕೃತ ವ್ಯಾಕರಣ ಬೋಧಿಸುವುದು ಪ್ರಯೋಜನವಿಲ್ಲ. ಆ ಪ್ರಾಣಿ ಸಂಸ್ಕೃತ ವ್ಯಾಕರಣ ಕಲಿಯಬೇಕೆಂದರೆ, ಆ ನೀಚ ಜನುಮದಿಂದ ವಿಮುಕ್ತಿಗೊಂಡು, ಮಾನವ ಜನುಮ ತಾಳಿ, ಸಮರ್ಥನಾದ ಗುರುಗಳಿಂದಲೇ ಅದು ಸಾಧ್ಯ! **ನಾನು ಪ್ರತಿ ಜೀವದಿಂದಲೂ ಗುಪ್ತವಾಗಿ ಸಂಬಂಧ ಪಡೆದಿರುವ ಕಾರಣ, ಜೀವಿಗಳ ಸಂಸ್ಕಾರವನ್ನು ಮತ್ತು ಅವರ**

**ಮಲಿನಗಳನ್ನು ಅವರಿಂದ ಸ್ವೀಕರಿಸಿ, ದಿನೇದಿನೇ ಮಾಡುವಂತಹ ಸ್ನಾನ ಜಪಾದಿಗಳಿಂದ ಅಂತಹದನ್ನು ದಹನಮಾಡಿ ಅವರ ಪರಿಣಾಮಕ್ಕೆ ಸಹಾಯ ಮಾಡುವೆನು. ನಿಜಕ್ಕೆ, ನಾನು ಪೂಜೆ ಮಾಡಬೇಕಾದ್ದಿಲ್ಲ. ನನ್ನನ್ನು ಆರಾಧಿಸುವವರ ಅನೇಕ ಪಾಪಗಳನ್ನು ನನ್ನೊಳಕ್ಕೆ ಆಕರ್ಷಿಸಿಕೊಂಡು, ನಮ್ಮ ಮನೆಯ ಕುಲದೈವರಾದ ಕಾಲಾಗ್ನಿಶಮನ ದತ್ತರಿಗೆ, ಸ್ಥೂಲಪೂಜೆ ಮಾಡುವೆನು. ಆ ಪೂಜೆಯ ಮಹಾಫಲವನ್ನು, ನನ್ನ ಆರಾಧಕರಿಗೆ ಧಾರೆ ಎರೆಯುವೆನು. ಕರ್ಮ ಮಾಡದೇ ಫಲಪ್ರಸಾದ ಕೊಡಲಾಗದು. ಆದ್ದರಿಂದ ತಪಸ್ಸು ಮುಂತಾದವುಗಳನ್ನು ನಾನೀ ಶರೀರದಿಂದ ಮಾಡುವೆನು.ನಾನೇ ಅನಂತ ಚೈತನ್ಯನಾದ್ದರಿಂದ, ನನ್ನ ಕರ್ಮಗಳ ಫಲ ತ್ವರಿತವಾಗಿ ಲಭಿಸುವವು ಮತ್ತು ಅವನ್ನು ಯೋಗ್ಯತೆ ಪ್ರಕಾರ ನನ್ನ ಆರಾಧಕರಿಗೆ ತಲುಪಿಸುವೆನು. ಆದ್ದರಿಂದಲೇ ನನ್ನದು ಆದಿಗುರು ಸ್ವರೂಪ! ತಂದೆ ತಾಯಂದಿರ ಆಸ್ತಿಗೆ, ಮಗು ಅಧಿಕಾರ ಪಡೆದಂತೆ, ಗುರುವಿನ ತಪಶ್ಶಕ್ತಿಮೇಲೂ ಆ ಗುರುವಿನ ಶಿಷ್ಯಂದರಿಗೆ ಆ ಶಕ್ತಿ ಪಡೆಯಲು, ಅಧಿಕಾರ ಇರುವುದು.** ಭಗವದ್ಗೀತೆ ಸಹಾ, ಕರ್ಮ ಆಚರಿಸುವುದು ಒಂದು ವಿಧಿ ಎಂದು ತಿಳಿಸುತ್ತದೆ.

## ನನ್ನ ಅವತಾರಕ್ಕೆ ಸಮಾಪ್ತಿ ಇಲ್ಲ

ದತ್ತನಾದ ನಾನು, ಸುಲಭ ಸಾಧ್ಯನು. ಮಿಕ್ಕ ದೇವತೆಗಳು, ಭಕ್ತರು ಮಾಡಿದ ತಪಸ್ಸಿಗೆ ಸಂತುಷ್ಟರಾಗಿ ವರ ನೀಡುವರು. **ಆದರೆ ಗುರುಸ್ವರೂಪರಾದ ಶ್ರೀದತ್ತರು, ತನ್ನ ಶಿಷ್ಯರು ವರವನ್ನು ಪಡೆಯಲು ಅಡ್ಡ ಬರುವಂತ ದುಷ್ಟಶಕ್ತಿಗಳನ್ನು ತಪೋಶಕ್ತಿಯಿಂದ ತೊಲಗಿಸಿ, ಅವರನ್ನು ಅನುಗ್ರಹಿಸುವಂತಹ, ಕರುಣಾಸ್ವರೂಪ.** ತಾತ! ಅದಕ್ಕೆ ನನ್ನನ್ನು ಸ್ಮೃತಿಮಾತ್ರ ಪ್ರಸನ್ನನೆನ್ನುವರು. ಎಲ್ಲಾ ಗುರು ರೂಪಗಳು ನಾನೇ! ಇದು ಮಹಾಕರುಣ ರಸದಿಂದ ಬಂದ ಗುರುಸ್ವರೂಪ. ಈ ಅವತಾರ ಸಮಾಪ್ತಿಯೇ ಇಲ್ಲ! **ನನ್ನ ಭಕ್ತನ ಕರೆಗಾಗಿ ಕಾದಿದ್ದು, ಕೂಗಿದ ತಕ್ಷಣವೇ ಉತ್ತರ ನೀಡುವೆನು. ನನ್ನ ಭಕ್ತ ನನ್ನ ಕಡೆಗೆ ಒಂದು ಹೆಜ್ಜೆ ಇಟ್ಟರೇ ನಾನು ಅವನ ಕಡೆಗೆ 100 ಹೆಜ್ಜೆ ಇಡುವೆನು. ನನ್ನ ಭಕ್ತರನ್ನು, ಕಣ್ಣರೆಪ್ಪೆಯಂತೆ ಕಾಪಾಡಿ, ಅವರನ್ನು ಎಲ್ಲಾ ಆಪತ್ತುಗಳಿಂದ ಪಾರು ಮಾಡುವುದು ನನ್ನ ಸಹಜತ್ವ"** ಎಂದು ಬಾಪನಾರ್ಯರಿಗೆ ಶ್ರೀಗಳು ಉಪದೇಶಿಸಿದರು.

ಆಗ ನಾನು ಆ ಮಹಾ ಗುರುವನ್ನು "ಮಹಾಪ್ರಭು! ಸೋಮಲತೆ ಮತ್ತು ಸೋಮಯಾಗ ಕುರಿತು ಅಲ್ಪಸ್ವಲ್ಪ ಕೇಳಿದ್ದೆ. ದಯವಿಟ್ಟು ಅವುಗಳ ವಿವರ ತಿಳಿಸಿ" ಎಂದು ಪ್ರಾರ್ಥಿಸಿದೆನು. ಶ್ರೀಪಾದರು, ಸೋಮಲತೆ ಒಂದು ಸಂಜೀವಿನಿ ಮೂಲಿಕೆ ಎಂದು ಹೇಳಿ, ನಾನು ಅದನ್ನು ನೋಡಬೇಕೆಂದಾಗ, ತಮ್ಮ ಅಂಗೈಯಲ್ಲಿ ಸೃಷ್ಟಿಸಿದರು! ನನಗೆ ಬಹುಮಾನಿಸಿದ ಆ ದಿವ್ಯಪ್ರಸಾದ ಮೂಲಿಕೆ, ಇಂದಿಗೂ ನನ್ನ ಪೂಜಾಗೃಹದಲ್ಲಿ ಭದ್ರವಾಗಿದೆ.

ಶ್ರೀಪಾದರು, "ಈ ಸಂಜೀವಿನಿ ವನಮೂಲಿಕೆ, ಹಿಮಾಲಯದ ಶ್ರೇಣಿಯಲ್ಲಿ, ಕಾಶ್ಮೀರದ ಮಾನಸ ಸರೋವರದಲ್ಲೂ, ಸಿಂಧುನದಿಯ ಉಗಮ ಸ್ಥಾನದ ಬಳಿ, ಶ್ರೀ ಮಲ್ಲಿಕಾರ್ಜುನ ವಾಸ ಶ್ರೀಶೈಲ ಪರ್ವತ ಬಳಿ, ಸಹ್ಯಾದ್ರಿ, ವಿಂಧ್ಯ ಪರ್ವತ ಮತ್ತು ಬದರೀ ಅರಣ್ಯ ಶ್ರೇಣಿಗಳಲ್ಲಿ ಲಭಿಸುವುದು. ಇದರ ಪ್ರಭಾವದಿಂದಲೇ ಲಕ್ಷ್ಮಣನ ಮೂರ್ಛೆ ವಾಸಿಯಾಯಿತು. ಇದು ಅದೆಷ್ಟೋ ರೋಗಗಳನ್ನು ವಾಸಿಮಾಡುತ್ತೆ. ಇದನ್ನು ಬಳಸಿಕೊಂಡರೇ 'ಆಕಾಶ ಗಮನ' ಸಿದ್ಧಿ ಲಭಿಸುವುದು.ಕಂಡರಗಳ ಶಕ್ತಿ, ನೇತ್ರಶಕ್ತಿ ಮತ್ತು ಶ್ರವಣ ಶಕ್ತಿ ಬಲಪಡಲೂ ಈ ಮೂಲಿಕೇ ಬಹಳ ಉಪಯೋಗಕಾರಿ. ಇದರ ಪ್ರಭಾವದಿಂದ, ಅಗ್ನಿ ಜಲ ಮತ್ತು ವಿಷದಿಂದ ಎಂತಹ

ಭಯ, ದುಃಖವಾಗಲಿ ಕಂಡುಬರುವುದಿಲ್ಲ. ಈ ಸಂಜೀವಿನಿ ಸಸಿಗೆ, ಶುಕ್ಲ ಪಕ್ಷದಲ್ಲಿ ದಿನಕ್ಕೊಂದು ಎಲೆಯಂತೆ ಹುಟ್ಟುತ್ತಾ, ಪೌರ್ಣಮಿಗೆ 15 ಎಲೆ ಹೊರಬರುವವು. ಕೃಷ್ಣ ಪಕ್ಷದಲ್ಲಿ, ದಿನಕ್ಕೊಂದು ಎಲೆಯಂತೆ ಬೀಳುತ್ತಾ, ಅಮಾವಾಶ್ಯೆಗೆ ಸಸಿ ಒಣಗಿ ಹೋಗುವುದು. ಆ ಒಣ ಕಡ್ಡಿಯನ್ನು ನೀರಿನಲ್ಲಿ ನೆನೆಸಿದರೇ, ರಾತ್ರಿಗೆ ಬೆಳಕನ್ನು ಚಿಮ್ಮುವುದು! ಇಂತಹ ಮಹತ್ತರ ಸಂಜೀವಿನಿಯನ್ನು, ಸಹ್ಯಾದ್ರಿ ಮತ್ತು ಭೀಮಶಂಕರ ಪರ್ವತ ಶ್ರೇಣಿಗಳಲ್ಲಿ ಕಾಡು ಪ್ರಾಣಿಗಳು ಕಾಯುತ್ತಿರುವವು! ಅಮಾವಾಸ್ಯೆ ಮಧ್ಯರಾತ್ರಿ ಸಮಯ, ಕಾಂತಿಯಿಂದ ಬೆಳಗುವುದರಿಂದ, ಇದನ್ನು ಸುಲಭವಾಗಿ ಪತ್ತೆ ಹಚ್ಚಬಹುದು. ಮಗು, ಗುರುಚರಣನೇ! ಇಂತಹವು 24 ವಿಧವಾದ ದಿವ್ಯ ಗಿಡ ಮೂಲಿಕೆಗಳಿವೆ. ಈ ಪವಿತ್ರ ಮೂಲಿಕೆಗಳನ್ನು ಆವರಿಸಿಕೊಂಡು, ದೇವತಾಶಕ್ತಿಗಳಿರುವವು. ಆದ್ದರಿಂದಲೇ ಪವಿತ್ರ ವೇದಪಠನೆ ಮಾಡುತ್ತಾ, ನಮ್ರತೆಯಿಂದ ಈ ಮೂಲಿಕೆಯನ್ನು ಅಗೆದು ಪಡೆಯಬೇಕು. ಆ 24 ದಿವ್ಯ ಔಷಧ ಸಸಿಗಳು ಹೀಗಿವೆ - "(1) ಸೋಮ (2) ಮಹಾಸೋಮ (3) ಚಂದ್ರಮ (4) ಅಂಶುಮಾನ್ (5) ಮಂಜುವಾನ್ (6) ರಜಿತ ಪ್ರಭು (7) ದೂರ್ವಾ (8) ಕನಿಯಾನ್ (9) ಶ್ವೇತಾನ್ (10) ಕನಕ ಪ್ರಭ (11) ಪ್ರತಾನವಾನ್ (12) ಲಾಲ್‌ವೃತ್ತ (13) ಕರದೀರ (14) ಅಂಶವಾನ್ (15) ಸ್ವಯಂಪ್ರಭ (16) ರುದ್ರಾಕ್ಷ (17) ಗಾಯತ್ರಿ (18) ಏಷ್ಟಮ್ (19) ಪಾವತ (20) ಜಗತ್ (21) ಶಾಕರ್ (22) ಅನಿಷ್ಟಮ್ (23) ರೈಕ್ತ (24) ತ್ರಿಪದ ಗಾಯತ್ರಿ" ಎಂದು ತಿಳಿಸಿದರು.

ನಾನು ಶ್ರೀಪಾದರರಿಂದ ಅಪ್ಪಣೆ ಪಡೆದು, ಪೀಠಿಕಾಪುರದಿಂದ ಹೊರಟೆನು.

ನಾನು ಶಂಕರ ಭಟ್ಟರಿಗೆ ಈ ವೃತ್ತಾಂತ ಹೇಳುವುದು ಪೂರ್ತಿ ಆದಾಗ, ಮಹಾಗುರುಗಳ ಮನೋಸಂಚಾರವೂ ಪೂರ್ತಿ ಆಯಿತೆಂದು, ಅವರನ್ನು ದರ್ಶಿಸಿಕೊಳ್ಳಬಹುದೆಂದು ಆಜ್ಞೆ ಆಯಿತು. ನಾವೆಲ್ಲಾ ದರ್ಶಿಸಿಕೊಂಡೆವು. ಶ್ರೀಗಳ ದಿವ್ಯ ಹಸ್ತದಿಂದ, ಫಲಪ್ರಸಾದಗಳು ಪಡೆದೆವು. ನಂತರ, ಶ್ರೀಪಾದರು, "ನೀವಿಬ್ಬರೂ ಕೃಷ್ಣಪಾರು ಮಾಡಿ, ಆಕಡೆ ಹೋಗಿ, ಮಾಂಚಾಲ ಗ್ರಾಮ ತಲುಪಿರಿ. ಮಾಂಚಾಲ ಗ್ರಾಮ ದೇವತೆಯ ಆಶೀರ್ವಾದ ಪಡೆದು, ಪುನಃ ಕುರಂಗಡ್ಡೆಗೆ ಬನ್ನಿ. ನೀವೆಲ್ಲೇ ಇದ್ದರೂ, ನಾನು ಸದಾ ಗಮನಿಸುತ್ತಲೇ ಇರುವೆ.

**ಮುಂಬರುವ ದಿನಗಳಲ್ಲಿ ಒಬ್ಬ ಮಹಾಪುರುಷನ ಜೀವಸಮಾಧಿ ಕಾರಣ ಮಾಂಚಾಲ ಗ್ರಾಮ ವಿಶ್ವವಿಖ್ಯಾತಗೊಳ್ಳುವುದು. ಅವರ ಲೀಲೆಗಳು ಚಿತ್ರವಿಚಿತ್ರ! ಪೀಠಿಕಾಪುರ, ಸ್ಥೂಲ ದೃಷ್ಟಿಯಲ್ಲಿರುವಂತೆಯೇ ಸೂಕ್ಷ್ಮ ದೃಷ್ಟಿಯಲ್ಲೂ ಒಂದಿರುವುದು, ಅದುವೇ 'ಸ್ವರ್ಣ ಪೀಠಿಕಾಪುರ.' ಅದು ನನ್ನ ಸ್ಥೂಲ ಶರೀರವನ್ನಾವರಿಸಿರುವ ತೇಜೋವಲಯದಲ್ಲಿ ಪ್ರತಿಷ್ಠವಾಗಿರುವುದು. ಯಾವುದೇ ಯುಗ, ದೇಶ, ಕಾಲಕ್ಕೆ ಸೇರಿದವರು, ನನ್ನ ಕಟಾಕ್ಷ ಹೊಂದಿದ್ದಲ್ಲಿ ಅಂತಹ ಅವರ ಚೈತನ್ಯ, ಸ್ವರ್ಣ ಪೀಠಿಕಾಪುರದಲ್ಲಿ ಪ್ರತಿಷ್ಠಿತವಾಗಿರುವುದು. ಯೋಗ ದೃಷ್ಟಿ ಉಳ್ಳವರಿಗಿದು ವಿದಿತ. ಸ್ವರ್ಣ ಪೀಠಿಕಾಪುರದಲ್ಲಿ ಸ್ಥಾನ ಪಡೆದವರು ಧನ್ಯರು. ಜನ್ಮಜನ್ಮಗಳಿಗೂ ಅಂತವರನ್ನು ಕಾಪಾಡುವೆನು.**

ಮಗು, ಶಂಕರ ಭಟ್ಟು! ನೂರಾರು ವರ್ಷಗಳ ನಂತರ, ನನ್ನ ಹೆಸರಿನಲ್ಲಿ ಮಹಾಸಂಸ್ಥಾನ ಸ್ಥಾಪಿಸಲಾಗುವುದು. ನನ್ನ ತಾಯಿಯ ತಂದೆ ಮನೆಯಲ್ಲಿ, ನನ್ನ ಜನುಮ ಸ್ಥಳ ಬಳಿ, ಔದುಂಬರ ನೆರಳಲ್ಲಿ ನನ್ನ ಪಾದುಕೆಗಳು ಪ್ರತಿಷ್ಠಿಸಲಾಗುವವು. ನನ್ನ ಹಿಂದಿನ ಮತ್ತು ಮುಂದಿನ ಅವತಾರಮೂರ್ತಿಗಳು ಸಹಾ ಪ್ರತಿಷ್ಠಾಪಿಸಲ್ಪಡುವವು. ತಗೊಳ್ಳಿ, ಈ ದಿವ್ಯದೃಷ್ಟಿಯಿಂದ ಕಾಣಿರಿ!" ಎಂದು ನನ್ನ ಮತ್ತು

ಗುರುಚರಣನ ಭ್ರೂಮಧ್ಯೆ ತಾಕಿದರು. ಆ ಸುಂದರ ದೃಶ್ಯ ಕಂಡು, ಧನ್ಯರಾದೆವು. ಅವರ ಸಂಕಲ್ಪ ಅಮೋಘ, ಲೀಲೆಗಳು ಆಶ್ಚರ್ಯಕರವು! ನಂತರ, ನಾವು ಹೊರಡುತ್ತಿರಲು, ಶ್ರೀಗಳು, ''ವಶಿಷ್ಠರ ಅಂಶದವನು, ನನ್ನ ಈ ಸಂಸ್ಥಾನದ ಪೂಜಾರಿಯಾಗಿ ಬರುವನು'' ಎಂದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 21

# ದಂಡಿ ಸ್ವಾಮಿಗಳು ಕುಕ್ಕುಟೇಶ್ವರಾಲಯಕ್ಕೆ ಬರುವುದು

### ಸಾಧಕರಿಗೆ, ಸ್ಥಾನ, ಭಾವಶುದ್ಧಿ ಅವಶ್ಯ

ನಾನು, ಮಹಾಗುರುಗಳ ಆದೇಶಾನುಸಾರ, ಗುರುಚರಣನೊಟ್ಟಿಗೆ ಮಾಂಚಾಲ ಗ್ರಾಮಕ್ಕೆ ಹೊರಟೆನು. ದಾರಿಯಲ್ಲಿ ಶ್ರೀಪಾದರ ಲೀಲೆಗಳನ್ನು ನೆನೆಯುತ್ತಿದ್ದೆವು. ಗುರುಚರಣನು, ಆಧ್ಯಾತ್ಮಿಕ ವಿಷಯಗಳನ್ನು ತಿಳಿಸಿದನು. ನಾನು, ''ಸ್ವಾಮಿ! ವಶಿಷ್ಠರ ವಂಶಸ್ಥರು, ನಮ್ಮ ಮಹಾಸ್ಥಾನಕ್ಕೆ ಆಚಾರ್ಯರಾಗಿ ಬರುವರೆಂದು ಶ್ರೀಗಳು ಹೇಳಿದರೇ, ಆ ಮಹಾಭಾಗ್ಯವಂತ ಯಾರು? ಯಾವಾಗ ಬರುವರು?'' ಎಂದು ಗುರುಚರಣರನ್ನು ಪ್ರಶ್ನಿಸಿದೆನು. ಆಗ ಗುರುಚರಣರು, ''ಸ್ವಾಮಿ, ಶಂಕರ ಭಟ್ಟು ಅನೇಕ ಶತಮಾನಗಳ ನಂತರವೇ, ಅವರ ಜನುಮ ಸ್ಥಾನದಲ್ಲಿ ಮಹಾಸಂಸ್ಥಾನ ಬರುವುದೆಂದು ಶ್ರೀಗಳೇ ನುಡಿದರು. ಅಲ್ಲಿಗೆ ಯಾರೋ ಓರ್ವ ಮಹಾತಪಸ್ವಿ ಅರ್ಚಕರಾಗಿ ಬರುವುದು ಶ್ರೀಗಳ ಸಂಕಲ್ಪ. ದಿವ್ಯ ಸಂಕಲ್ಪವೇ ಹೊರತು, ಮಹಾತಪಸ್ವಿಗಳು ಬರುವುದು ಅಸಾಧ್ಯ. ದೀರ್ಘಕಾಲದ ಧ್ಯಾನ, ಆರಾಧನೆ, ಪವಿತ್ರ ಮಂತ್ರೋಚ್ಚಾರಣೆ, ಭಕ್ತಿ, ಶ್ರದ್ಧೆಯ ಪೂಜೆಯಿಂದ ಅಲ್ಲಿನ ವಾಯುಮಂಡಲ ಶುದ್ಧಿ ಆಗುವುದು. ವಿಶ್ವಾಂತರಾಳದಿಂದ ಭಾವತರಂಗಗಳು ಸದಾ ಪ್ರಸಾರದಲ್ಲಿರುವವು. ಪವಿತ್ರ ಭಾವದವರಿಗೆ ಪವಿತ್ರ ಸ್ಪಂದನೆಗಳು, ಅಪವಿತ್ರ ಭಾವದವರಿಗೆ ಅಪವಿತ್ರ ಸ್ಪಂದನೆಗಳೂ ಸೇರುವವು. ಒಂದು ಪ್ರದೇಶದ ವಾಯುಮಂಡಲದ ಭಾವತರಂಗಗಳು ಉಕ್ಕಿ ಶಕ್ತಿವಂತವಾದಾಗ ಅಪ್ರಯತ್ನವಾಗಿ ಮಹಾಪುರುಷರ ಮನೋಚೈತನ್ಯವನ್ನು ಸ್ಪೃಶಿಸಿ, ಅನೇಕ ಚಿತ್ರವಿಚಿತ್ರ ರೀತಿಗಳಿಂದ ಆ ಪ್ರದೇಶಕ್ಕೆ ಆಕರ್ಷಿಸುವವು. ಇದೇನು ಆಶ್ಚರ್ಯವಾದ ವಿಷಯವಲ್ಲ. ಅದೇ ಪ್ರಕಾರ, ಅಲ್ಲಿ ದುಷ್ಟಭಾವತರಂಗಗಳಿದ್ದಲ್ಲಿ, ದುಷ್ಟ ಮಾನಸಿಕ ಚೈತನ್ಯವನ್ನು ಸ್ಪೃಷಿಸಿ, ಅನೇಕ ಚಿತ್ರವಿಚಿತ್ರ ರೀತಿಗಳಲ್ಲಿ ಆ ಪ್ರದೇಶಕ್ಕೆ ಆಕರ್ಷಿಸುವವು. ಆದ್ದರಿಂದ, ಸಾಧಕನು ಸ್ಥಳಶುದ್ಧಿಯುಳ್ಳ ಪ್ರದೇಶಗಳಲ್ಲಿ ವಾಸಿಸಬೇಕು. ಭಾವಶುದ್ಧಿವುಳ್ಳವನಾಗಿರಬೇಕು. ಅಂತಹವರೊಟ್ಟಿಗೆ ಮಾತ್ರ ಸಾಂಗತ್ಯ ಹೊಂದಿರಬೇಕು. ದ್ರವ್ಯಶುದ್ಧಿವುಳ್ಳವರಿಂದ ಮಾತ್ರವೇ ಧನವಾಗಲಿ ಅನ್ನವಾಗಲಿ ಸ್ವೀಕರಿಸಬೇಕು. ವೇದ ವೇದಾಂತಗಳಲ್ಲಿ ಮಹಾಪಂಡಿತರೆಷ್ಟೋ ಜನ, ಶ್ರೀಪಾದರ ಅನುಗ್ರಹ ಪಡೆಯಾಲಾರದೇ ಹೋದರು. ಅದೇ, ಕಲ್ಮಶವಿಲ್ಲದ ಮನಸ್ಸುಳ್ಳ ಅಲ್ಪ, ಸ್ವಲ್ಪ ವಿದ್ಯೆಯುಳ್ಳವರು, ಶ್ರೀಗಳಿಂದ ವರ ಹೊಂದಿದರು. ನಾನೊಮ್ಮೆ ಓಡ್ರ ದೇಶದಲ್ಲಿನ ಶ್ರೀ ಜಗನ್ನಾಥ ಪೂರೀ ಮಹಾಕ್ಷೇತ್ರಕ್ಕೆ, ವ್ಯಾಪಾರ ಸಲುವಾಗಿ ಹೋದೆನು. ಅಲ್ಲಿ ನಾನು, ಮಂದಿರದಲ್ಲಿ ಜಗನ್ನಾಥರ ಬದಲಿಗೆ, ಶ್ರೀಪಾದರನ್ನು ದರ್ಶಿಸಿದೆ. ನನ್ನೊಟ್ಟಿಗೆ ಇನ್ನೂ ನಾಲ್ಕು ಜನರು ಶ್ರೀಪಾದ ಭಕ್ತರಿದ್ದರು. ಅವರಿಗೆ, ಅವರವರ ಇಷ್ಟದೇವತೆಯ ರೂಪದಲ್ಲಿ ದರ್ಶನವಿತ್ತು, ತಕ್ಷಣ ಶ್ರೀಪಾದರಾಗಿ ಕಾಣಿಸಿಕೊಂಡು, ಸಮಸ್ತ ದೇವದೇವತೆಯರು ತಾವೇನೆಂದು ತಿಳಿಸಿದರು.

### ದಂಡಿಸ್ವಾಮಿಗೆ ಗರ್ವಭಂಗ

ನಾವು ತಲುಪಿದ ದಿನವೇ, ದಂಡಿ ಸ್ವಾಮಿಯೊಬ್ಬರು, ತನ್ನ 108 ಜನ ಶಿಷ್ಯರೊಂದಿಗೆ ಅಲ್ಲಿಗೆ ಬಂದರು. ಯಾರೇ ಮಹಾತ್ಮರು ಎದುರಾದಾಗ, ಅವರ ಪಾದಗಳಿಗೆ ನಮಿಸುವುದು ನಮ್ಮ ಆಚಾರ. ನಾವು ಪಾದ ನಮಸ್ಕಾರ ಮಾಡಿದ ಕ್ಷಣವೇ ಅವರ ಬಾಯಿ

ಬಿದ್ದುಹೋಯಿತು! 'ಶ್ರೀಪಾದ ಶ್ರೀವಲ್ಲಭಾ ಮಹಾಪ್ರಭು! ಈ ದಂಡಿಸ್ವಾಮಿಗಳ ಬಾಯಿ, ಮಾತು ಸರಿಹೋಗಲಿ' ಎಂದು ಪ್ರಾರ್ಥಿಸಿದೆವು. ತಕ್ಷಣ ಮಾತು ಬಂತು. ನಾವು ಶ್ರೀಪಾದ ಶ್ರೀವಲ್ಲಭರ ಅನುಚರರೆಂದು ತಿಳಿದಕೂಡಲೇ ಅವರು ವಿತಂಡವಾದ ಮಾಡುತ್ತಾ "ಶ್ರೀಪಾದನೆಂಬುವನು ಒಬ್ಬ ಕ್ಷುದ್ರ ಮಾಂತ್ರಿಕನು. ಅವರ ಶಿಷ್ಯಂದಿರೂ ಅಷ್ಟೇ, ಆವರು ತಮ್ಮ ಕ್ಷುದ್ರವಿದ್ಯೆಯಿಂದ ನಮ್ಮದಂಡಿ ಸ್ವಾಮಿಗಳ ಮಾತು ಕ್ಷೀಣಿಸಿದರೂ, ನಮ್ಮಸ್ವಾಮಿಗಳು ಪರಮ ಶಕ್ತಿಯುಳ್ಳವರಾದ್ದರಿಂದ, ಪುನಃ ಸ್ವಸ್ಥತೆ ಹೊಂದಿರುವರು. ನಮ್ಮಸ್ವಾಮಿ ಪೀಠಿಕಾಪುರಕ್ಕೆ ಬಂದು, ನಿಮ್ಮಶ್ರೀಪಾದರ ಒಳಗುಟ್ಟು ಈಚೆಗೆ ತರುವರು. ಶ್ರೀಪಾದರನ್ನು ಅವಮಾನಪಾಲು ಮಾಡಿ ಹೆಸರು ಪಡೆಯುವರು. ಪೀಠಿಕಾಪುರ ವಾಸಿಗಳು ನಮ್ಮಸ್ವಾಮಿಯನ್ನು ಹೊಗಳುತ್ತಾ ಮೆರವಣಿಗೆ ಮಾಡುವರು" ಎಂದು ನಮ್ಮೊಟ್ಟಿಗೆ ಕೊಚ್ಚಿಕೊಂಡರು. ನಾವು ಮೌನ ತಾಳಿದೆವು. **ಶ್ರೀಪಾದರ ಲೀಲೆಯ ವಿಧಾನ, ತಮ್ಮ ಆಶ್ರಿತನನ್ನು ಕಷ್ಟಕ್ಕೆ ಗುರಿಮಾಡಿ, ಅವನು ಶರಣು ಶರಣು ಅಂದಾಗ, ವಿಚಿತ್ರ ಪದ್ಧತಿಯಲ್ಲಿ ಭಕ್ತರ ರಕ್ಷಣೆ ಮಾಡುವುದು. ಸಮಸ್ಯೆಯನ್ನು ತಂದಿಡುವುದೂ ಅವರೇ. ಅದಕ್ಕೆ ಪರಿಷ್ಕಾರ ತೋರಿಸಿ, ಕಾಪಾಡುವವರೂ ಅವರೇ! ಈ ವಿಧವಾದ ಲೀಲಾವಿಶೇಷ ದತ್ತ ಭಕ್ತರೆಲ್ಲರಿಗೂ ತಿಳಿದಿರುವ ವಿಷಯವೇ.** ಕೆಲ ಸಮಯದ ನಂತರ, ದಂಡಿ ಸ್ವಾಮಿಗಳು ಪೀಠಿಕಾಪುರಕ್ಕೆ ಬಂದರು. ನನ್ನ ಭಾಗ್ಯ, ನಾನೂ ಅದೇ ಸಮಯಕ್ಕೆ ಪೀಠಿಕಾಪುರ ಮಾರ್ಗ ಹೋಗುತ್ತಾ, ಆ ಊರು ತಲುಪಿದೆ. ಶ್ರೀ ಬಾಪನಾರ್ಯರ ಮೇಲೆ, ಶ್ರೀ ಅಪ್ಪಲರಾಜ ಶರ್ಮರ ಮೇಲೆ ಮತ್ತು ಶ್ರೀಪಾದರ ಮೇಲೂ ದ್ವೇಷಭಾವ ಉಳ್ಳವರು ಈ ಪೀಠಿಕಾಪುರದಲ್ಲಿ ಏನೂ ಕಡಿಮೆ ಇಲ್ಲ! ದಂಡಿ ಸ್ವಾಮಿಗಳು ಕುಕ್ಕುಟೇಶ್ವರಾಲಯದಲ್ಲಿ ದೇವದೇವತೆಯರನ್ನು ದರ್ಶಿಸಿದರು. ಸ್ವಯಂಭೂ ದತ್ತರನ್ನ ದರ್ಶಿಸಿ, ಅವರು, "ಇಲ್ಲಿರುವ ಸ್ವಯಂಭೂ ದತ್ತರು ಅತ್ಯಂತ ಮಹಿಮಾವಂತರು. ತನ್ನ ಅವತಾರವೆಂದು ಕೊಚ್ಚಿಕೊಳ್ಳುತ್ತಿರುವ ಶ್ರೀಪಾದರ ಗರ್ವ ಅಡಗಿಸಲೂ, ನನ್ನನ್ನು ಸಾಧನವಾಗಿ ಮಾಡಿಕೊಂಡಿರುವರು. ಈ ದಿನದಿಂದ, ಪೀಠಿಕಾಪುರಕ್ಕೆ ಒಳ್ಳೆಯ ಕಾಲ ಬಂದಿದೆ. ನೀವೆಲ್ಲಾ ನಿಶ್ಚಿಂತೆಯಾಗಿರಿ" ಎಂದು ನುಡಿದರು. ನಂತರ, ವಿಭೂತಿ, ಕುಂಕುಮದಂತಾ ಪದಾರ್ಥಗಳನ್ನು ತಮ್ಮಸಂಕಲ್ಪ ಶಕ್ತಿಯಿಂದ ಸೃಷ್ಟಿಸಿ ಆಶ್ರಿತರಿಗೆ ಕೊಟ್ಟರು. ಅಲ್ಲಿನ ಬ್ರಾಹ್ಮಣ್ಯ ವೇದಘೋಷದ ಜೊತೆ, ದಂಡಿ ಸ್ವಾಮಿಯನ್ನು ಊರಿಗೆ ಕರೆತರಲು, ಕುಕ್ಕುಟೇಶ್ವರಾಲಯಕ್ಕೆ ತೆರಳಿದರು. "ತಾನು ಸ್ವತಃ ದತ್ತಾವತಾರವೆಂದು ತಟ್ಟಿ ಹೇಳುತ್ತಿರುವ ಶ್ರೀಪಾದರು, ತನ್ನ ತಪ್ಪನ್ನು ಅರಿತು, ದಂಡಿ ಗುರುಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಬೇಕು. ಬಾಪನಾರ್ಯರು ತಕ್ಷಣ, ದಂಡಿ ಸ್ವಾಮಿ ಬಳಿ ಬಂದು ನಿಂತು, ಕ್ಷಮೆ ಯಾಚಿಸಬೇಕು. ಇನ್ನು ಅಪ್ಪಲರಾಜ ಶರ್ಮರು, ವಂಶ ಪಾರಂ ಪರ್ಯೆಯಾಗಿ ಪೂಜಿಸುತ್ತಿರುವ ಶ್ರೀಕಾಲಾಗ್ನಿ ಶಮನದತ್ತರ ವಿಗ್ರಹವನ್ನು ಸ್ವತಃ ತನಗೆ ಅರ್ಪಿಸಿ, ಸ್ವಾಮಿ ವಿಧಿಸುವ ಶಿಕ್ಷೆ ಪಡೆಯಬೇಕು" ಎಂದು ಊರೆಲ್ಲಾ ತಿಳಿಸಿದರು.

ವೆಂಕಟಪ್ಪಯ್ಯ ಶ್ರೇಷ್ಠಿಗಳ ಆಧ್ವರ್ಯದಲ್ಲಿ ಆರ್ಯವೈಶ್ಯ ಪರಿಷತ್ತು ಸಮಾವೇಶಗೊಂಡಿತು. ಏನೆ ಆಗಲಿ, ದಂಡಿ ಸ್ವಾಮಿಗೆ ಶ್ರೀಪಾದರೇ ಆಗಲಿ, ಬಾಪನಾರ್ಯರು ಮತ್ತು ಅಪ್ಪಲರಾಜ ಶರ್ಮರೇ ಆಗಲಿ ತಲೆ ಬಗ್ಗಿಸಬಾರದೆಂದು ಇಂತಹ ತಪ್ಪು ಕೆಲಸಕ್ಕೆ ಪ್ರೋತ್ಸಾಹ ಕೊಡಬಾರದೆಂದು ತೀರ್ಮಾನಿಸಿದರು. ನರಸಿಂಹ ವರ್ಮರ ಅಧ್ಯಕ್ಷತೆಯಲ್ಲಿ, ನಡೆದ ಕ್ಷತ್ರಿಯ ಮಹಾಸಭೆಯೂ ಹಾಗೆಯೇ ಒಪ್ಪಿತು.

ಶ್ರೀಪಾದರು, ಅವರ ತಾಯಿಯ ತವರ ಮನೆಯ ಔದುಂಬರದ ನೆರಳಿನಲ್ಲಿ ವಿಶ್ರಮಿಸಿದರು. ದಿವ್ಯಕಾಂತಿ ಪ್ರಕಾಶಿಸುತ್ತಿದ್ದ ಅವರ ಮುಖವನ್ನು ಕಂಡು ಶ್ರೇಷ್ಠಿಗಳು, ದುಃಖದಿಂದ ಕಣ್ಣೀರಿತ್ತರು. ನರಸಿಂಹ ವರ್ಮರು ಸಹಾ ಬಾಪನಾರ್ಯರೊಟ್ಟಿಗೆ, ಶ್ರೀಗಳ

ಬಳಿ ಮೌನವಾಗಿ ಕುಳಿತರು. ಅಪ್ಪಲರಾಜ ಶರ್ಮರು ಚೇಷ್ಟೆ ಬಿಟ್ಟ ಹುಚ್ಚನಂತೆ ಕದಲದೇ ಕುಳಿತರು. ಶ್ರೀಕೃಷ್ಣನಂತೆ ಕಂಡ ಶ್ರೀಪಾದರು, ನಿದ್ರೆಯಿಂದ ಎದ್ದು ಹಸಿವಾಗುತ್ತಿದೆ ಎಂದು ಮೊಸರನ್ನ ಬೇಕೆಂದರು. ಶ್ರೀಗಳ ಅಜ್ಜಿ ರಾಜಮಾಂಬ, ಬೆಳ್ಳಿಯ ಬಟ್ಟಲಲ್ಲಿ ಮೊಸರನ್ನ ತಂದುಕೊಟ್ಟರು. ಶ್ರೀಗಳು ಆತುರದಿಂದ ತಿಂದರು. ಶ್ರೀಪಾದರು ತನ್ನ ತಾತನನ್ನು ವೇದಗೋಷ ಮಾಡುವಂತೆ ಕೇಳಿದರು. ಅಪ್ಪಲರಾಜ ಶರ್ಮ ಸಹಾ ವೇದಘೋಷದಲ್ಲಿ ಪಾಲ್ಗೊಂಡರು. ಶ್ರೀಪಾದರೂ ಅವರೊಟ್ಟಿಗೆ ವೇದ ನುಡಿಯುತ್ತಿದ್ದರು. ನರಸಿಂಹ ವರ್ಮ ಮತ್ತು ಶ್ರೇಷ್ಠಿಗಳು ಮಹದಾನಂದದಿಂದ, ಸುಶ್ರಾವ್ಯವಾಗಿದ್ದ ಆ ವೇದ ಮಂತ್ರಗಳನ್ನು ಕೇಳುತ್ತಾ ತನ್ಮಯದಲ್ಲಿದ್ದರು. ಆ ವಾತಾವರಣ ಪವಿತ್ರ ಋಷ್ಯಾಶ್ರಮದಂತಿತ್ತು.

ಕುಕ್ಕುಟೇಶ್ವರಾಲಯದ ಸ್ವಯಂಭೂ ದತ್ತನ ಮುಖದ ಮೇಲೆ ಮೊಸರನ್ನ ಕಾಣಿಸಿತು. ಅರ್ಚಕರು ಅದನ್ನು ಒರಿಸಿದಂತೆಲ್ಲಾ ಪುನಃ ಕಾಣಿಸಿಕೊಳ್ಳುತ್ತಿತ್ತು! ಸ್ವಯಂಭೂ ದತ್ತರ ಈ ಲೀಲೆ ಆಶ್ಚರ್ಯವಾಗಿತ್ತು. ದಂಡಿ ಸ್ವಾಮಿ ತನ್ನ ಹಿಂದಿನ ಮತ್ತು ನೂತನ ಶಿಷ್ಯರೊಂದಿಗೆ ವೇದಘೋಷ ಮಾಡುತ್ತಾ ನಡೆಯಲೂ ಕಾಲುಗಳು ಚಲಿಸುತ್ತಿದ್ದವೇ ಹೊರತು, ಅವರೆಲ್ಲಾ ಮುಂದಕ್ಕೆ ಹೋಗುತ್ತಲೇ ಇರಲಿಲ್ಲ! ಪ್ರಜೆಗಳು ಈ ಆಶ್ಚರ್ಯಕ್ಕೆ ಮಾತೇ ಬಾರದಂತಿರಲೂ, ದಂಡಿ ಸ್ವಾಮಿಯ ಬ್ರಹ್ಮದಂಡವು ಫಳ್ಳೆಂದು ಎರಡಾಗಿ, ಸ್ವಾಮಿಯ ಬೆನ್ನು ಎಲುಬು ಮುರಿದಂತಾಗಿ ಕೆಳಬಿದ್ದರು. ಈ ಸಂಘಟನೆ ಜನರನ್ನು ಮತ್ತಷ್ಟು ಭಯಭ್ರಾಂತಿ ಗೊಳಿಸಿತು. ಇತ್ತ ಪೀಠಿಕಾಪುರ ವಾಸಿಯರಿಗೂ ಮತ್ತು ದಂಡಿ ಸ್ವಾಮಿಗಳಿಗೂ, ಈ ಅನರ್ಥಕ್ಕೆ ಕಾರಣ ಶ್ರೀಪಾದರ ಮೇಲ್ಗಯ್ಯೇ ಎಂದು, ಅವರನ್ನು ನಿಂದಿಸಿದರೇ ಮತ್ತಷ್ಟು ಅವಮಾನ ತಪ್ಪದೆಂದು, ಈಗ ಮನೆ ತಲುಪುವುದಾದರೂ ಹೇಗೆಂಬುದು ಪ್ರಶ್ನೆಯಾಗಿ ಉಳಿದಿತ್ತು.

## ಮೋಹ ನಾಶವೇ ಮೋಕ್ಷ

ಪೀಠಿಕಾಪುರದಲ್ಲಿ ಅಬ್ಬನ್ನ ಎಂಬ ಓರ್ವ ಹಾವುಗಾರ, ಪುಂಗೀ ಊದುತ್ತಾ ಹಾವನ್ನಾಡಿಸುತ್ತಾ ಬಾಪನಾರ್ಯರ ಮನೆಗೆ ಬಂದನು. ಶ್ರೀಪಾದರು, ವೇದಗೋಷ್ಠಿ ನಿಲ್ಲಿಸಿ, ಅಬ್ಬನ್ನನಿಗೆ ಹೊಟ್ಟೆ ತುಂಬಾ ಅನ್ನ ಇತ್ತರು. ಅವನನ್ನುದ್ದೇಶಿಸಿ, “ಎಲಾ! ಇಲ್ಲಿಂದ ಈ ಮಣ್ಣಿನ ಪಾತ್ರೆ ತುಂಬಾ ನೀರನ್ನು ತೆಗೆದುಕೊಂಡು ಕುಕ್ಕುಟೇಶ್ವರಾಲಯಕ್ಕೆ ಹೋಗು, ಅಲ್ಲಿ, ದತ್ತ ಪ್ರಭುಗಳ ಸಂಪೂರ್ಣ ಅವತಾರ, ಶ್ರೀಪಾದ ಶ್ರೀವಲ್ಲಭರ ರೂಪದಲ್ಲಿ ಪೀಠಿಕಾಪುರದಲ್ಲಿರಲೂ, ಕಾರಣವಿಲ್ಲದೇ, ಅವರನ್ನು ನಿಂದಿಸಿತ್ತಿರುವ ಜನ ಇದ್ದಾರೆ. ಅವರಿಗೆ ಮರಣಾನಂತರ ಪಿಶಾಚಿಜನ್ಮ ತರುವುದಾಗಿ ಚಿತ್ರಗುಪ್ತರು ನಿರ್ಧರಿಸಿರುವರು. ಭೂದೇವಿಯೂ ಕೋಪಿಸಿಗೊಂಡಿರುವಳು. ನನ್ನ ಮಾತಾಗಿ, ಭೂದೇವಿಯನ್ನು ಶಾಂತಗೊಳ್ಳಲೂ ಪ್ರಾರ್ಥಿಸಿ, ಶ್ರೀಪಾದರನ್ನು ಯಾರ್‍ಯಾರು ದರ್ಶಿಸಲೂ ಬಯಸುವರೋ ಅವರ ಮೇಲೆ ಈ ಜಲ ಪ್ರೋಕ್ಷಿಸು, ಬೀದಿ ಬೀದಿ ಮತ್ತು ಕುಕ್ಕುಟೇಶ್ವರಾಲಯದಲ್ಲಿ ಈ ವಿಷಯ ಜಾಗಟೆ ಹೊಡೆದ ಮಾದಿಗ ಸುಬ್ಬಯ್ಯನ ಮನೆಯ ಮೊಸರನ್ನವನ್ನು ಮಹಾ ಪ್ರಸಾದವಾಗಿ, ದರ್ಶನಕ್ಕೆ ಬರುವವರಿಗೆಲ್ಲಾ ಕೊಡು” ಎಂದರು. ಅಬ್ಬನ್ನ ಮತ್ತು ಸುಬ್ಬಯ್ಯ, ಶ್ರೀಗಳು ಹೇಳಿದಂತೆಯೇ ಮಾಡಿ, ಆಲಯದಲ್ಲಿದ್ದವರನ್ನು ಕರೆದುಕೊಂಡು ಬಾಪನಾರ್ಯರ ಮನೆ ತಲುಪಿದರು. ಆಗ ಶ್ರೀಪಾದರು ಉಗ್ರರೂಪದಲ್ಲಿ, “ಎಲಾ! ದಂಡಿ ಸ್ವಾಮಿ, ಎಷ್ಟು ಕೊಬ್ಬಿದ್ದೀಯ? ನೀನು ಪೂಜಿಸುವ ದತ್ತನೇ ಇಲ್ಲಿ ಶ್ರೀಪಾದ ಶ್ರೀವಲ್ಲಭನಾಗಿ ಇರಲೂ, ಗುರ್ತಿಸಲಾಗದ ಪರಮಮೂರ್ಖ ನೀನು. ಈ ಗುರುವಿಗೆ ತಕ್ಕವರೇ ಶಿಷ್ಯಂದಿರು! ಸಾಲದ್ದಕ್ಕೆ ಪೀಠಿಕಾಪುರದ ನೂತನ ಶಿಷ್ಯವೃಂದ ಬೇರೇ! ನೀನು ನನ್ನನ್ನು ಏನು ಮಾಡಬಲ್ಲೆ? ಸಮಸ್ತ ಸೃಷ್ಟಿಯನ್ನೇ ಆಜ್ಞಾಪಿಸಬಲ್ಲ ಏಕೈಕ ಶಕ್ತಿಯಮುಂದೆ ನಿನ್ನ ಬಾಳೆಷ್ಟು? ದೈವದೂಷಣೆಯಿಂದ, ನಿನಗೂ ನಿನ್ನಾಶ್ರಯಿಸಿರುವವರಿಗೂ ಮಹಾಪಾಪ ಮುತ್ತಿದೆ. ನಿಮ್ಮೆಲ್ಲರನ್ನೂ ಕೆಲ ನೂರು ವರ್ಷ ಪಿಶಾಚಿ

ಜನ್ಮ ತಾಳಬೇಕೆಂದು ಚಿತ್ರಗುಪ್ತರು ನಿರ್ಧರಿಸಿದ್ದಾರೆ. ಅತ್ಯಂತ ಕರುಣೆಯಿಂದ ನಾನದನ್ನು ತಪ್ಪಿಸಿದ್ದೇನೆ. ಮಾನವ ಜನ್ಮ ತಾಳಿದಾಗ ಸಹಾ ನೀವೆಲ್ಲಾ ಕೀಳು ಜನುಮ ಜೀವಿಗಳ ಜತೆ ಬಾಳಿ, ಅವಸ್ಥೆಗಳು ಪಡಬೇಕೆಂದು ನನ್ನ ತೀರ್ಮಾನ. ಅದರಲ್ಲೂ ಸಹಾ ಸ್ವಲ್ಪ ಶಿಕ್ಷೆ ನಿಮಗೆಲ್ಲಾ ಸಿಗುವಂತೆ ಮಾಡಿದ್ದೇನೆ. ಶ್ರೀಪಾದ ಶ್ರೀವಲ್ಲಭ ಸ್ವರೂಪ ಜಠರಾಗ್ನಿಯಿಂದ ಕೂಡಿರುವುದು! ಬೆಂಕಿ ಜೊತೆ ಹುಡುಗಾಟ, ಪ್ರಮಾದಗಳಿಗೆ ದಾರಿಯೇ ಸರಿ! ನನ್ನ ಮಾಯೆ ಮತ್ತು ನಾನು ಒಂದೇ ಆಗಿರಲೂ, ಮೋಕ್ಷವೆನ್ನುವುದು ಎಲ್ಲಿದೆಯೋ ಯೋಚಿಸಿ. ಮೋಹ ಕಳೆದರೇ ಮೋಕ್ಷ! ಅದ್ಯಾವ ಜೀವಿ ಆದರೂ, ಸಚ್ಚಿದಾನಂದ ಸ್ವರೂಪವನ್ನು ಅನುಭವಿಸಬೇಕೆಂದು ಆಪೇಕ್ಷೆ ಪಟ್ಟರೆ, ಅವರ ಯೋಗ್ಯತಾನುಸಾರ ನಾನೇ ತರುವೆನು. ದಿವ್ಯಾನಂದ ಪರವಶದಲ್ಲಿ, ಮಾಯೆಯನ್ನು ದಾಟಿ ಸುಖಪಡೆಯಲೂ ಇಚ್ಛಿಸಿದರೇ, ಹಾಗೆಯೇ ಅನುಗ್ರಹಿಸುವೆನು. ನನ್ನ ದೃಷ್ಟಿಯಲ್ಲಿ, ನಿರ್ಗುಣ ನಿರಾಕಾರಕ್ಕೂ ಸಗುಣ ಸಾಕಾರಕ್ಕೂ, ಮೋಕ್ಷಕ್ಕೂ ಮತ್ತು ಬಂಧನಕ್ಕೂ ವ್ಯತ್ಯಾಸವಿಲ್ಲ. ಪ್ರತಿಕ್ಷಣವೂ, ಲೆಕ್ಕವಿಲ್ಲದ ಹೊಸ ಲೋಕಗಳು ಸೃಷ್ಟಿಸ್ಥಿತಿಲಯಗಳು ಹೊಂದುತ್ತಿವೆ. ಜೀವಿಗಳು ತಾವು ಹೊಂದುತ್ತಿರುವ ಉನ್ನತ ಸ್ಥಿತಿಗಳಿಗಾಗಲಿ, ಉನ್ನತ ಆನಂದ ಪೀಠಗಳಿಗಾಗಲೀ, ಪರಿಮಿತಿಗಳಾಗಲಿ ಅಥವಾ ಹದ್ದು ಆಗಲಿ ಇಲ್ಲ. ಮರಣಾನಂತರ, ನನ್ನ ಬಳಿ ಬರಲು ಬಯಸುವವರು, ತಪ್ಪದೇ ಬರಲೂ ಸಾಧ್ಯ. ಅಂತವರು, ಎಷ್ಟು ನೂರು ದಿವ್ಯವರುಷ ಆಯಾ ಸ್ಥಿತಿಗಳಲ್ಲಿರಬೇಕೋ, ಅವರನ್ನು ಯಾವ ಯಾವ ಲೋಕಗಳಿಗೆ ಕಳುಹಿಸಬೇಕೆಂಬುದು ನನ್ನ ನಿರ್ಧಾರ. ಕಪಟನಾಟಕ ಸೂತ್ರಧಾರಿಯಾದ ನಾನು, ಸದ್ಯಕ್ಕೆ, ನರ ರೂಪದಲ್ಲಿ ನಿಮ್ಮ ಮುಂದೆ ಇರುವೆನು. ಈ ಆಕಾರದಲ್ಲಿಲ್ಲದಿದ್ದರೂ ಸಹಾ, ನಾನು ನಿಮ್ಮನ್ನೆಲ್ಲಾ ಎಲ್ಲಾ ವೇಳೆಯಲ್ಲೂ ಕಾಣುತ್ತಿರುವೆನೆಂದು ತಿಳಿಸಲು ಮಾತ್ರ, ಆ ಉನ್ನತ ಸ್ಥಿತಿಯಿಂದ ನರನಾಗಿ, ನಿಮ್ಮ ಮುಂದೆ ಚಲಿಸುತ್ತಿರುವೆ. ಮಹಾಯೋಗಿಗಳ ಯೋಗಶಕ್ತಿಗಳೆಲ್ಲವೂ ಲೋಕ ಕಲ್ಯಾಣಕ್ಕಾಗಿಯೇ ಉಪಯೋಗಿಸಬೇಕು. ಲೋಕವೆಂದರೇ, ಕೇವಲ ಈ ಭೂಲೋಕ ಮಾತ್ರವಲ್ಲ. **ನಿನಗಿಂತ ಕಡಿಮೆಯ ಸ್ಥಿತಿಯಲ್ಲಿರುವ ಎಲ್ಲಾ ನಿಸ್ಸಹಾಯ ಜೀವಿಗಳಿಗೂ ಸಹಾಯ ಮಾಡುವುದು ನಿನ್ನ ಧರ್ಮ.** ನಾನು, ಧರ್ಮ, ಕರ್ಮ, ಯೋಗ, ಭಕ್ತಿ ಮತ್ತು ಜ್ಞಾನ ಮಾರ್ಗಗಳನ್ನು ಉಪದೇಶಿಸಲೂ ಅವತರಿಸುವೆನು. ನಾನು, ಎಲ್ಲಾ ಸತ್ಯಗಳಿಗೂ ಮೂಲವಾದ ಏಕೈಕ ಸತ್ಯನು. ಎಲ್ಲಾ ಧರ್ಮಗಳಿಗೂ ಮೂಲವಾದ ಏಕೈಕ ಧರ್ಮನು. ಎಲ್ಲಾ ಕಾರಣಗಳಿಗೂ ಮೂಲವಾದ ಏಕೈಕ ಕಾರಣನು.ನನ್ನ ಸಂಕಲ್ಪವಿಲ್ಲದ್ದು ಈ ಸೃಷ್ಟಿಯಲ್ಲಿ ಯಾವುದೂ ಇಲ್ಲ. ನಾನಿಲ್ಲದೇ, ಈ ಸೃಷ್ಟಿಯೇ ಇಲ್ಲ! ನಾನಿದ್ದದ್ದಕ್ಕೇ, ನೀನಿದ್ದೀಯ, ಈ ಸೃಷ್ಟಿಯೂ ಇದೆ. ಇದಕ್ಕಿಂತ ವಿವರವಾಗಿ ಸತ್ಯವನ್ನು ನಾನು ನಿನಗೆ ಹೇಗೆ ತಿಳಿಸಲಿ? ನೀನು ಹಿಮಾಲಯಕ್ಕೆ ತೆರಳಿ, ಒಂಟಿಯಾಗಿ ತಪಸ್ಸನ್ನು ಮಾಡು. ಯಾವ ಶಿಷ್ಯನನ್ನು ಜತೆಯಲ್ಲಿ ಇಟ್ಟುಕೊಳ್ಳಬೇಡ. ನೀನು ಮೋಕ್ಷ ಹೊಂದದಿದ್ದರೂ, ಆನಂದಿಸದಿದ್ದರೂ ಅತ್ತ ಸೃಷ್ಟಿಗೇ ಆಗಲಿ ಅಥವಾ ನನಗೇ ಆಗಲಿ, ನಷ್ಟವಿಲ್ಲ ಇದು ಸತ್ಯ. ಪೀಠಿಕಾಪುರದಲ್ಲಿ ನಿನಗೆ ಸಿಕ್ಕಿದ, ನಿನ್ನ ಶಿಷ್ಯಂದಿರು ನಿನ್ನ ಜೊತೆ ಬರುವುದು, ಒಂಟೆಗಳ ಮದುವೆಯಲ್ಲಿ, ಕತ್ತೆಗಳ ಸಂಗೀತ ಕಚೇರಿಯಂತಿದೆ! ಒಂಟೆಗಳ ಅಂದವನ್ನು ಕತ್ತೆಗಳು ಹೊಗಳುತ್ತಿದ್ದರೇ, ಆ ಕತ್ತೆಗಳ ಸಂಗೀತವನ್ನು ಒಂಟೆಗಳು ಮೆಚ್ಚಿದಹಾಗಿದೆ! ಒಬ್ಬರನ್ನೊಬ್ಬರು ಹೊಗಳಿಕೊಳ್ಳುತ್ತಿದ್ದೀರ, ಆದರೇ ನಿಮ್ಮಗಳ ನಿಜ ಸ್ವರೂಪ ಬೇರೆನೇ ಇದೆ'' ಎಂದು ಹಿತ ನುಡಿದರು.

## ಅರುಂಧತಿ ವಶಿಷ್ಠರ ಸಂಬಂಧ

ಅರುಂಧತಿ ಮಾತೆ ಛಂಡಾಲರ ವಂಶದಲ್ಲಿ ಜನಿಸಿದೆರೆಂದು ಕೇಳಿದ್ದೇನೆ. ಹಾಗಿದ್ದಲ್ಲಿ, ವಶಿಷ್ಠ ಮಹರ್ಷಿ ಅದು ಹೇಗೆ ಆಕೆಯನ್ನು ಪರಿಣಯವಾದನೆಂದು ಗುರುಚರಣನ್ನು ಪ್ರಶ್ನಿಸಿದೆ. ಆಗ ಆತ ``ಹಿಂದೆ ಒಮ್ಮೆ ವಶಿಷ್ಠರು 1000 ವರುಷ ತಪಸ್ಸಾಚರಿಸಿದರು. ಆಗ

ಅಕ್ಷಮಾಲ ಎಂಬ ಛಂಡಾಲ ತರುಣಿ, ವಶಿಷ್ಠರಿಗೆ, ಆಕೆ ಮಾಡತಕ್ಕಂತ ಸೇವೆ ಮಾಡಿದಳು. ಸಂತುಷ್ಟರಾದ ಋಷಿಗಳು "ಯಾವುದಾದರೂ ಒಂದು ವರ ಯಾಚಿಸು'' ಎಂದಾಗ ಆಕೆ ವಶಿಷ್ಠರನ್ನೇ ಪತಿಯಾಗುವ ವರ ಕೋರಿದಳು. 'ಆಕೆ ಛಂಡಾಲ ಜಾತಿಯ ಕನ್ಯೆ ಎಂದು, ಮದುವೆ ಹೇಗೆ ತಾನೇ ಸಾಧ್ಯ' ಎಂದು ವಶಿಷ್ಠರು ಕೇಳಲೂ, ಆಕೆ 'ವರವನ್ನು ತಮ್ಮ ಆಜ್ಞೆ ಎಂತಲೇ ಕೇಳಿದ್ದೇನೆ. ತಾವು ಕೊಟ್ಟರೇ ಸರಿ, ಇಲ್ಲ ನನ್ನ ದಾರಿಯಲ್ಲಿ ನಾನು ಹೋಗಲು ಅಪ್ಪಣೆ ಕೊಡು'ವಂತೆ ಆಕೆಯ ತೀರ್ಮಾನ ತಿಳಿಸಿದಳು. ಕೊಟ್ಟ ಮಾತಿನ ಬೆಲೆ ಕಾಪಾಡಲು, ವಶಿಷ್ಠರು "ಹಾಗಾದರೇ ನಿನ್ನ ದೇಹವನ್ನು ನನ್ನ ಇಷ್ಟಪ್ರಕಾರ ಬಳಿಸಲೂ, ನಿನಗೆ ಸಮ್ಮತವೇ?'' ಎಂದು ಪ್ರಶ್ನಿಸಿದರು. ಆಕೆ ಸಮ್ಮತಿ ತಿಳಿಸಲೂ, ಋಷಿಗಳು ಆಕೆಯನ್ನು ಭಸ್ಮಮಾಡಿ, ಪುನಃಜೀವಂತಗೊಳಿಸಿದರು. ಈ ಪ್ರಕಾರ ಏಳುಬಾರಿ ಮಾಡಲು, ಆಕೆಯ ಛಂಡಾಲ ಜಾತಿಯ ದೋಷ ಪರಿಹಾರವಾಗಿ, ಪರಿಶುದ್ಧ ಕನ್ಯೆಯಾಗಿ ಉಳಿದಳು. ವಶಿಷ್ಠರು ಆಗ ಆಕೆಯನ್ನು ಪರಿಣಯ ಹೊಂದಿದರು. ತನ್ನ ಪತಿಯ ಕರ್ಮಗಳಿಗೆ ಎಳ್ಳಷ್ಟೂ ನಕಾರ ತಿಳಿಸದ ಕಾರಣ, ಆಕೆಯನ್ನು 'ಅರುಂಧತಿ' ಎಂದು ಕರೆದರು. ಈ ವಿಷಯವನ್ನು ಶ್ರೀಪಾದರು, ವಿವರಿಸುತ್ತಾ, ವಶಿಷ್ಠ ಗೋತ್ರದವರಾದ ನರಸಿಂಹ ವರ್ಮರಿಗೆ ತಿಳಿಸಿದರು. 7 ಜನುಮದ ನಂತರ ಒಂದು ಶೂದ್ರ ಜಾತಿಯಲ್ಲಿ, ಒಬ್ಬ ಬ್ರಾಹ್ಮಣನಿಗೆ ಗಂಡು ಹುಟ್ಟಿದರೇ, ಆ ಮಗು ಉಪನಯನಕ್ಕೂ ಬ್ರಾಹ್ಮಣತ್ವಕ್ಕೂ ಅರ್ಹನೆಂದು ಶಾಸ್ತ್ರ. ಚತುರ್ವಣದವರೂ ಅವರವರ ಗುಣಕರ್ಮ ಚೌಕಟ್ಟು ದಾಟದೇ ನಡೆದುಕೊಳ್ಳುವುದು ಶ್ರೇಯಸ್ಕರ. **ಬ್ರಾಹ್ಮಣನು ತಾನು ಆಚರಿಸುವ ದುಷ್ಕರ್ಮಗಳ ಕಾರಣ, ಕ್ರಮೇಣ ತಪನಗೊಂಡು, ಶೂದ್ರನಾಗಬಹುದು. ಹಾಗೆಯೇ, ಶೂದ್ರನು ಸತ್ಕರ್ಮ ಆಚರಣೆಯಿಂದ ಕ್ರಮೇಣ ಉಚ್ಚ ಸ್ಥಿತಿಗೆ ಏರಿ, ಬ್ರಾಹ್ಮಣನಾಗಬಹುದು. ಆದರೇ ಶ್ರೀದತ್ತ ಪ್ರಭುಗಳ ಮೇಲೆ ಅಚಲ ವಿಶ್ವಾಸ ಬೆಳೆಸಿಕೊಂಡವರು, ಉನ್ನತ ಸ್ಥಿತಿಗಳನ್ನು ಅವರವರ ಯೋಗ್ಯತಾನುಸಾರ, ಬೇಗನೇ ಹೊಂದುವರು. ತನ್ನ ಭಕ್ತನು ಯಾವ ಕುಲದಲ್ಲಿ ಜನ್ಮಿಸಿದರೂ, ಯಾವ ಪರಿಸ್ಥಿತಿಯಲ್ಲಿದ್ದರೂ, ಸುಖಮಯ ಜೀವನಕ್ಕೆ ಬೇಕಾದ ಆಯುರಾರೋಗ್ಯ, ಐಶ್ವರ್ಯವನ್ನು ದತ್ತರು ತರುವರು. ಜನ್ಮಾಂತರ ಕರ್ಮಗಳನ್ನು ಮಾಯಗೊಳಿಸಿ, ತನ್ನ ಭಕ್ತನಿಗೆ, ಉನ್ನತ ಸ್ಥಿತಿಕೊಡುವುದು ಶ್ರೀಪಾದರಿಗೆ ಸಹಜವಾದ ಲೀಲೆ"** ಎಂದರು.

## ದತ್ತ ಭಕ್ತರಿಗೆ ಶ್ರೀಪಾದರ ಅಭಯ

ನಾವು ಶ್ರೀಗಳ ಮಹಿಮಾ ವಿಶೇಷಗಳನ್ನು ಪರಸ್ಪರ ತಿಳಿಸಿಕೊಳ್ಳುತ್ತಾ ಮಾಂಚಾಲ ಗ್ರಾಮ ಸೇರಿದೆವು. ಮಾಂಚಾಲ ಗ್ರಾಮ ದೇವತೆ ನಮಗೆ ದರ್ಶನವಿತ್ತು, ನಮ್ಮನ್ನು ಉದ್ಧರಿಸಿ, ತನ್ನ ದಿವ್ಯಹಸ್ತಗಳಿಂದ ನಮಗೆ ಪ್ರಸಾದ ತಿನ್ನಿಸಿ, "ಹಿಂದೆ, ಪ್ರಹ್ಲಾದನಿಗೆ ಗುರುಬೋಧೆ ಮಾಡಿದ ದತ್ತಾತ್ರೇಯರೇ ಇಂದು ಭೂಲೋಕದಲ್ಲಿ ಶ್ರೀಪಾದ ಶ್ರೀವಲ್ಲಭ ರೂಪದಲ್ಲಿರುವರು. ಶ್ರೀಪಾದರ ಸಂಕಲ್ಪ ಊಹಿಸಲಾಗದ್ದು, ಮುಂಬರುವ ದಶಕಗಳಲ್ಲಿ ಪ್ರಹ್ಲಾದರು ಗುರು ಸಾರ್ವಭೌಮರಾಗಿ ಅವತರಿಸುವರೆಂದು, ಈ ಪ್ರದೇಶ, ಮಂತ್ರಾಲಯವೆಂದು ಹೆಸರು ಪಡೆಯುವುದೆಂದು, ಶ್ರೀಪಾದರೇ ನನಗೆ ತಿಳಿಸಿರುವರು. ಅವರು ನಿತ್ಯವೂ ತುಂಗಭದ್ರಾ ಜಲವನ್ನು ಸವಿಯುವರು. ನಿಮಗೆ ಶುಭವಾಗಲಿ'' ಎಂದು ಹೇಳುತ್ತಾ ಆ ತಾಯಿ ಹಿಂದಿನ ರೂಪಕ್ಕೆ ಸೇರಿಕೊಂಡಳು. ನಾವು ಹೊರಡುತ್ತಿರಲೂ, ಕೃಷ್ಣದಾಸರೆಂಬ ಓರ್ವ ಮಾದಿಗ ದಾಸ, ಬಂದನು. ಮಾಂಚಾಲ ಗ್ರಾಮ ದೇವತೆ, ಕೃಷ್ಣದಾಸರಿಗೂ ಪ್ರಸಾದ ಮತ್ತು ಹೂವನ್ನಿತ್ತು ಅನುಗ್ರಹಿಸಿ, ಕುರಂಗಡ್ಡೆಗೆ ಹೊರಡಲು ಆದೇಶಿಸಿದರು.

ನಾವು ಮೂರು ಜನ, ಕುರಂಗಡ್ಡೆಗೆ ಹೊರಟೆವು. ದತ್ತ ಭಕ್ತರದೆಲ್ಲಾ ಒಂದೇ ಕುಲ. ಅವರಿಗೆ ಶ್ರೀದತ್ತರ ಪ್ರಸಾದ, ಯಾವ ಕುಲದವರಿತ್ತರೂ ಅದು ಸಮ್ಮತವೇ! ನಮ್ಮೊಟ್ಟಿಗೇ ಈಗ ಕೃಷ್ಣದಾಸರಿರುವುದು, ನೂತನೋತ್ಸಾಹವಿತ್ತು. ಮಾತನಾಡುತ್ತಾ ಕೃಷ್ಣದಾಸರು, "ಯಜ್ಞಾದಿ ಕರ್ಮಗಳಲ್ಲಿ ನೀಡುವ ದಕ್ಷಿಣೆ ರು. 16, 116, 1116 ಎನ್ನುವ ಸಂಖ್ಯೆಯ ವಿವರಣೆ ತಿಳಿದರೇ, ಶ್ರೀಪಾದರ ಸಂಖ್ಯೆ 2498ರ ಅರ್ಥ ತಿಳಿದು ಬರುವುದು" ಎಂದರು.

ಆತ್ಮದಿಂದ ಜಗತ್ತು ಉದ್ಭವಿಸಿದ ಹಾಗೆಯೇ, ತಂದೆಯಿಂದ ಮಕ್ಕಳು ಹುಟ್ಟುತ್ತಿರುವರು. ಮದುವೆಯ ಸಮಯದಲ್ಲಿ ವರನು, ಅಗ್ನಿಹೋತ್ರನನ್ನು ಪ್ರಾರ್ಥಿಸುತ್ತಾ "ಓ ದೇವನೇ! ತಾವು ನನಗೆ ಈ ವಧುವಿನಿಂದಾ 10 ಮಕ್ಕಳವರಿಗೂ ದಯ ಪಾಲಿಸು" ಎನ್ನುತ್ತಾನೆ. 11ನೆ ಕುಮಾರ, ತಾನೇ ಆಗುತ್ತಾನೆ. ಅಂದರೇ 10 ಮಕ್ಕಳು ಓರ್ವನಿಗೆ ಧರ್ಮಸಮ್ಮತ. ನಂತರ ಪತ್ನಿಯನ್ನು ತಾಯಿಯಂತೆ ಭಾವಿಸಬೇಕು. ತಂದೆಯಲ್ಲಿ 10ನೇ ಭಾಗ ಕುಮಾರನಾಗಿರುವನು. ದಶಾಂಶರಾದ 10 ಜನ ಸೇರಿದರೇ, ಪೂರ್ಣಾಂಕ ರೂಪನಾದ ತಂದೆ ಆಗುವನು. ಶಿವ ಆತ್ಮರೂಪನಾಗಲು ಪರಿಪೂರ್ಣನು. ಆದ್ದರಿಂದ ದಶಾಂಶರೂಪನು, 16 ದಶಾಂಶಗಳನ್ನು 10 ರಿಂದ ಭಾಗಿಸಿದಾಗ, ಪೂರ್ಣಾಂಕ, ಅಂದರೆ 1 ಎಂಬುವುದು ಶಿವ ಪ್ರತೀಕವಾಗಿ ಬರುವುದು. ಶೇಷವಾಗಿ 6 ಉಳಿಯವುದು. ಶ್ರೀ ವಿಷ್ಣು, ಮಾಯಾಸ್ವರೂಪ ಹೊಂದಿರುವ ಮೂಲಪ್ರಕೃತಿರೂಪನು. ಪ್ರಕೃತಿ, ಪುರುಷನಲ್ಲಿ ಅರ್ಧವೇ ತಾನೇ? ಆದ್ದರಿಂದ 10ರಲ್ಲಿ ಅರ್ಧ 5 ಆಗುವುದರಿಂದ ನಮಗೆ ಶೇಷವಾಗಿ ಬಂದು, 6ನ್ನು 5 ರಿಂದ ಭಾಗಿಸಲೂ, ವಿಷ್ಣುವಿನ ಪ್ರತೀಕವಾಗಿ 1, ಪೂರ್ಣಾಂಕವಾಗಿ ಬಂದಿದೆ. ಆದರೆ ಶೇಷವಾಗಿ 1 ದಶಾಂಶ ಉಳಿದಿದೆ. ಪುರುಷ ಪ್ರಕೃತಿಗಳಿಗೆ, ಅಂದರೇ ಶಿವ ವಿಷ್ಣುರಿಗೆ ಸಂತಾನ ರೂಪನಾದ, ಬ್ರಹ್ಮನು, ಅವರಲ್ಲಿ ದಶಾಂಶ ರೂಪನಾಗಿರಲೂ, ಮೇಲೆ ಕಂಡ, ಉಳಿದ 1ನ್ನು 1ರಿಂದ ಭಾಗಿಸಿದಾಗ, 1 ಪೂರ್ಣಾಂಕ ಫಲವಾಗಿ ಬಂದು, ಶೇಷ ಉಳಿದಿಲ್ಲ.

ಪೂರ್ಣವೆಂದರೇ ಸೊನ್ನೆ ಎಂಬುವುದು ನಿರ್ಗುಣ. ಆದ್ದರಿಂದ ಅದು ರುದ್ರ ಸ್ವರೂಪ. ಸಮಸ್ತವನ್ನೂ ವ್ಯಯಿಸಿದಾಗ, ಮಹಾಶೂನ್ಯವೇ ಅಲ್ಲವೆ ಕಂಡುಬರುವುದು? ಮಹಾಶೂನ್ಯದಲ್ಲಿ ಮಾತ್ರವೇ ಸಮಸ್ತವನ್ನೂ ವ್ಯಯಿಸಲೂ ಸಾಧ್ಯ. ಆದರೇ ವಿಷ್ಣು ಸ್ವರೂಪ ಅನಂತತ್ತ್ವಧರ್ಮ ಹೊಂದಿದೆ. ಸೃಷ್ಟಿಯ ಸ್ಥಿತಿ ಸ್ವಭಾವದಲ್ಲಿ ಅನಂತತ್ತ್ವ ಅನಿವಾರ್ಯ.

## ಶ್ರೀಪಾದರು ಶೋಡಷ ಕಳಾಪ್ರಪೂರ್ಣರು

ಮಗೂ, ಶಂಕರ ಭಟ್ಟಾ! ಒಂದು ವಸ್ತುವನ್ನು ಅನೇಕಾನೇಕ ಚೂರುಗಳಾಗಿ ವಿಭಜಿಸಿದಾಗ ಒಂದೊಂದು ಚೂರು, ಕೊನೆಗೆ ಶೂನ್ಯವೇ ಆಗುವುದಲ್ಲವೇ? ಇಂತಹಾ ಶೂನ್ಯಗಳನೇಕ ಸೇರಿದಾಗಲೇ ಅಲ್ಲವೇ, ಒಂದು ಆಕಾರ ರೂಪುಗೊಳ್ಳುವುದು? ಆದ್ದರಿಂದ, ಶಿವಕೇಶವಗಳಿಬ್ಬರೂ ಒಂದೇ. ಅಭಿನ್ನರು. ದಶಾಂಶ ಭಾಗಾಹಾರದಲ್ಲಿ 10 ರಿಂದ ಭಾಗಿಸಿದರೇ ಮಿಕ್ಕ 6 ದಶಾಂಶಗಳಿಂದ, 5 ದಶಾಂಶಕಗಳ ಮೊತ್ತ ವಿಷ್ಣು ಪ್ರತೀಕವಾಗಿ ನೋಡಲಾಗಿದೆ, ಪಂಚ ಭೂತಾತ್ಮಕವಾದ ಸೃಷ್ಟಿ ಎಲ್ಲವೂ ವಿಷ್ಣು ಸ್ವರೂಪವಾಗಿ ಭಾವಿಸಲಾಗಿದೆ. ದಕ್ಷಯಜ್ಞವನ್ನು ವಿಧ್ವಂಸಗೊಳಿಸಿದ ವೀರಭದ್ರನನ್ನು ಕಂಡು, "ಮೂಲಪ್ರಕೃತಿ, ಶಿವನು ರಮಿಸುವುದಕ್ಕಾಗಿ ಪಾರ್ವತಿ ರೂಪದಲ್ಲಿಯು, ರಾಕ್ಷಸಯುದ್ಧ ಸಮಯ ದುರ್ಗಾ ರೂಪದಲ್ಲಿ, ಕೋಪದಲ್ಲಿರಲೂ ಕಾಳಿಕಾ ದೇವಿಯಾಗಿಯೂ, ಪುರುಷ ವೇಷದೊಳು ವೀರಭದ್ರನಾಗಿಯೂ ಇರುವಳು. ಶ್ರೀಪಾದರು ಷೋಡಶಕಲಾ ಪರಿಪೂರ್ಣರೆನ್ನಲು ಇದೇ ಕಾರಣ" ಎಂದು ವಿಷ್ಣು

ನುಡಿದನು. 16 ವರುಷ ಪ್ರಾಯದಲ್ಲೇ ಪೀಠಿಕಾಪುರದಿಂದ ಹೊರಟರು. ಬ್ರಹ್ಮವಿಷ್ಣು ರುದ್ರ ರೂಪಿ ಆಗಿರಲೂ ಅವರು ಷೋಡಶ ಕಳಾಪ್ರಪೂರ್ಣರು.

## ದೇವತೆಯರ ವಿವಿಧ ಸ್ವರೂಪಗಳು

ಪ್ರಕೃತಿ ವಿಷ್ಣು ಸ್ವರೂಪವಾಗಿರಲೂ 5 ದಶಾಂಶಗಳು ವಿಷ್ಣುವಿಗೆ ಚಿಹ್ನೆ. ಪಾರ್ವತಿ ಪರಮೇಶ್ವರರ ಯೋಗದಲ್ಲಿ ಅವರಿಬ್ಬರಿಗೂ ಮಗನಾದ ಕಾರಣ, ಬ್ರಹ್ಮನು ಶಿವನಲ್ಲಿ ದಶಾಂಶ ರೂಪನಾದನು. ಕಾರಣ ತಿಳಿದಿರುವುದೇ! ಚೇತನಾತ್ಮನಾದ ಶಿವನು ಪ್ರಧಾನನು. ಮಿಥ್ಯಾರೂಪು ಜಗತ್ತಿಗೆ ಗುರ್ತು, ವಿಷ್ಣು ಸ್ವರೂಪವಾಗಿರಲೂ ಅಪ್ರಧಾನನು. ಹಾಗೆ ಶಿವನಲ್ಲಿ ಬ್ರಹ್ಮದಶಾಂಶರೂಪನು. ಆದ್ದರಿಂದ ಏಕಾಂಕ ಅವರ ಗುರ್ತು. ಇಂತಹ ಏಕಾಂಕ, 2 ರಿಂದ 9 ವರೆಗೂ ಇರುವ ಅಷ್ಟಮೂರ್ತಿಗಳಲ್ಲೂ ಪ್ರಬಲವಾಗಿದೆ. ಆದ್ದರಿಂದ ಬ್ರಹ್ಮನಿಗೆ ನವ ಪ್ರಜಾಪತಿ ಸ್ವರೂಪ ಸ್ಥಿರಪ್ರಾಪ್ತಿಯಾಯಿತು. 16, 100, 1000 ಎನ್ನುವ 3 ಪದಗಳಲ್ಲೂ ಕೊನೆಯ ಎರಡು ಪದಗಳೂ ತಾಳಬದ್ಧವಾಗಿ ಗುಣಿಸಲಾಗಿ, 116, 1116 ಎನ್ನುವ ರೂಪ ಹೊಂದಿವೆ. ಇವನ್ನು 10 ರಿಂದ ಭಾಗಿಸಲು, ಸೃಷ್ಟಿಯ ವಿವಿಧ ವಸ್ತು ಸಮುದಾಯಗಳ ಗುರ್ತುಗಳು ಹೊರಬೀಳುವವು. ರುದ್ರನಿಗೆ 1 ಪೂರ್ಣಾಂಕ; ವಿಷ್ಣುವಿಗೆ 11 ಎಂಬ 2 ಪೂರ್ಣಾಂಕ, ಬ್ರಹ್ಮನಿಗೆ 111 ಎಂಬ 3 ಪೂರ್ಣಾಂಕ ಬರುವುದು. 16, 116, 1116 ನ್ನು 'ಷೋಡಶಾದಿ ತ್ರಿದಕ್ಷಿಣೆ' ಎನ್ನುವರು. ತ್ರಿದಕ್ಷಿಣೆ ದಾನ ಮಾಡುವವರಿಗೆ, ಬ್ರಹ್ಮಜ್ಞಾನ ಆಗುವುದೆಂದು ಹೇಳಲಾಗಿದೆ. ತ್ರಿದಕ್ಷಿಣೆ ದಾನ ಮಾಡುವುದರಿಂದ, ಶರೀರ, ಧನ, ಮನಸ್ಸೆನ್ನುವ 3ನ್ನೂ ದಾನ ಮಾಡಿದವನಾಗುವನು. ಮೇಲಿನ 3 ಸಂಖ್ಯೆಗಳಲ್ಲಿ ತೂಕಮಾಡಿ ಕೊಟ್ಟ ದಾನದಿಂದ ಹಿಂದಿನ ಜಗತ್ತನ್ನೇ ದಾನ ಮಾಡಿದ ಫಲ ಲಭಿಸುತ್ತಿದೆ. ಪಿಂಡಾಂಡದಾನ ಈ ಜಗತ್ತಿಗೆ ಚಿಹ್ನೆ. ನಮ್ಮ ಶರೀರ ಸವನತ್ರಯವನ್ನೇ ರೂಪುಗೊಂಡಿರುವುದು. ಪ್ರಾತಸ್ಸವನ, ಮಾಧ್ಯಂದಿನಸವನ, ತೃತೀಯಸವನ ಎಂದು ಗಾಯತ್ರಿ-ತ್ರಿಷ್ಟುಪ್-ಜಗತೀ ಛಂದಸ್ಸಂಬಂಧವಾದ ವರ್ಣಗಳು, ಅಂದರೇ ಗಾಯತ್ರಿಗೆ 24, ತ್ರಿಷ್ಟುಪ್‌ಗೆ 44, ಜಗತಿಗೆ 48, ಒಟ್ಟು 116 ವರ್ಣಗಳು ಇರುವುದರಿಂದ, ಈ ಪಿಂಡಾಂಡ ದಾನ(ಶರೀರದಾನ)ದಿಂದ ಸಹಾ, ಮೇಲೆ ತಿಳಿಸಿದ ದ್ರವ್ಯದಾನ ಲಭ್ಯವಾಗುವುದು.

## ಸಾವಿತ್ರಿಕಾಠಕ ಚಯನ ಫಲಿತವೇ ಶ್ರೀಪಾದಾವತಾರ

ಸಕಲ ಬುದ್ಧಿಪ್ರವೃತ್ತಿಗಳನ್ನೂ ಪ್ರೇರೇಪಿಸುವುದು, ಸವಿತೃಮಂಡಲ ಮಧ್ಯಸ್ಥಿತವಾದ ದಿವ್ಯ ತೇಜಸ್ಸೇ. ಆಕೆಯ ಪ್ರತೀಕ 24. 9 ಬ್ರಹ್ಮಸ್ವರೂಪ. 8 ಮಾಯಾಸ್ವರೂಪ. ತ್ರೇತಾಯುಗದಲ್ಲಿ ಭಾರಧ್ವಾಜ ಮಹರ್ಷಿ ಪೀಠಿಕಾಪುರದಲ್ಲಿ ಸಾವಿತ್ರಿಕಾಠಕಚಯನ ಮಾಡುವುದರಿಂದ, ಅಂದು ಕೊಟ್ಟ ಮಾತಿನ ಪ್ರಕಾರ, ಇಂದು ಪೀಠಿಕಾಪುರದಲ್ಲಿ ಶ್ರೀಪಾದ ಶ್ರೀವಲ್ಲಭರ ರೂಪದಲ್ಲಿ ಶಕ್ತಿ ಸ್ವರೂಪ ಮತ್ತು ಶಾಕ್ತ ಸ್ವರೂಪ, ಅರ್ಧನಾರೀಶ್ವರತ್ವ ಹೊಂದಿ, ಜೀವಿಗಳನ್ನು ಪ್ರೇರೇಪಿಸಿ, ಧರ್ಮಮಾರ್ಗದಲ್ಲಿ ನಡೆಸಲು ಬಂದ ಮಹಾವತಾರವೇ ತಾನೆಂದು ತಿಳಿಸುತ್ತಾ, 'ದೋಚೌಪಾತೀದೇವ್ ಲಕ್ಷ್ಮೀ' ಎಂದು ಭಿಕ್ಷೆ ಕೇಳಿದರು. ಅವರ ನುಡಿಗಳಿಗೂ, ಲೀಲೆಗಳಿಗೂ, ಬೊಧಿಸುವ ವ್ಯಾಕರಣ ಮತ್ತಾರೂ ತಿಳಿಯಲಾರರು. ಈ ನೂತನ ವ್ಯಾಕರಣಕ್ಕೆ ಅವರೇ ಕರ್ತ. ಆದ್ದರಿಂದ ಅದು ಅವರಿಗೆ ಮಾತ್ರ ತಿಳಿದ ವ್ಯಾಕರಣ.

ಕೃಷ್ಣದಾಸರಿಂದ ಎಷ್ಟೋ ವಿಷಯಗಳು ಹೊಸದಾಗಿ ತಿಳಿಯಿತು. ಪಂಡಿತನಾದರೂ ಅಹಂಕಾರವಿದ್ದರೇ, ಶ್ರೀಪಾದರ ಕಟಾಕ್ಷವನ್ನು ಪಡೆಯಲಾರರು.

ಕೃಷ್ಣದಾಸರು ಮುಂದುವರೆದರು ''ಶ್ರೀಪಾದರು, ಇರುವೆ ಮುಂತಾದವುಗಳಿಂದ ಬ್ರಹ್ಮಾದ್ಯಂತ ವ್ಯಾಪಿಸಿಕೊಂಡಿರುವರು. ಒಮ್ಮೆನರಸಿಂಹ ವರ್ಮರ ಗದ್ದೆಯಲ್ಲಿ, ಶ್ರೀಪಾದರೂ, ವರ್ಮ ವಿಶ್ರಾಂತಿ ಪಡೆಯುತ್ತಿದ್ದರು. ಅಲ್ಲಿಗೆ ಎಷ್ಟೋ ಹಾವುಗಳು ಬಂದವು. ಶ್ರೀಪಾದರು, ವಿಚಿತ್ರವಾಗಿ ಅವುಗಳ ತಲೆಯನ್ನು ಶರೀರದಿಂದ ಬೇರೇ ಮಾಡಿದರು! ಅವನ್ನೆಲ್ಲಾ ಒಂದು ಗುಡ್ಡೆ ಹಾಕಲು, ಬಹು ದೊಡ್ಡ ಇರುವೆಗಳು ಸೇರಿದವು. ವರ್ಮರು ಒಳ್ಳೆಯ ನಿದ್ರೆಯಲ್ಲಿದ್ದರು. ಅವರಿಗೆ ನಿದ್ರಾಭಂಗ ಆಗಬಾರದೆಂದು ಶ್ರೀಪಾದರು ಆ ದೊಡ್ಡ ಇರುವೆಗಳನ್ನು ಕೊಂದರು. ಅಲ್ಲಿ ಸತ್ತು ಬಿದ್ದಿರುವ ಇರುವೆಗಳನ್ನು ನೋಡಿ, ವರ್ಮ ನೊಂದುಕೊಳ್ಳಲೂ, ಶ್ರೀಪಾದರು ಮುಗುಳ್ನಗೆಯಿಂದ, ''ರಾಜ, ತನ್ನ ಸೇವಕನನ್ನು ರಕ್ಷಿಸಕೊಳ್ಳಬೇಕು. ಇದು ಪ್ರಕೃತಿ ನಿಯಮ. ಈ ವಿಚಿತ್ರವಾದ ಗಾತ್ರದ ಇರುವೆಗಳಿಗೆ ಒಬ್ಬ ರಾಜನಿರುವನು. ಅವನೀಗ ಬರುತ್ತಿದ್ದಾನೆ ನೋಡಿ'' ಎಂದರು. ಅಷ್ಟರಲ್ಲೆ ವಿಚಿತ್ರ ಕಾಂತಿಯಿಂದ ಒಂದು ದೊಡ್ಡ ಬಿಳಿಯ ಇರುವೆ ಅಲ್ಲಿಗೆ ಬಂದಿತು. ಅದು ಅಲ್ಲಿ ಸತ್ತು ಬಿದ್ದಿದ್ದ ಇರುವೆಗಳಿಗೆಲ್ಲಾ ಪ್ರದಕ್ಷಿಣೆ ಮಾಡಿತು. ತಕ್ಷಣ ಅವೆಲ್ಲಾ ಎದ್ದವು. ಆಗ ಶ್ರೀಪಾದರು, ''ಈ ಇರುವೆಯ ಒಡೆಯನಿಗೆ ಸಂಜೀವಿನೀ ಶಕ್ತಿ ಇದೆ. ಆ ಶಕ್ತಿಯಿಂದ, ತನ್ನವರನ್ನು ಅದು ಬದುಕಿಸಿಕೊಂಡಿತು. ಇಂತಹ ವಿಚಿತ್ರಗಳು ಈ ಜಗತ್ತಿನಲ್ಲಿ ಅದೆಷ್ಟೋ ಇವೆ ತಾತಾ! ನೀನು ಬಯಸಿದರೇ, ಇಂತಹ ವಿಚಿತ್ರಗಳು ಕ್ಷಣಕ್ಷಣಕ್ಕೂ ಒಂದೊಂದು ತೋರಿಸಬಲ್ಲೆನು! ಅಂದರು.

ನರಸಿಂಹ ವರ್ಮ ಅಲ್ಲಿ ಸತ್ತು ಬಿದ್ದಿರುವ ನಾಗರ ಹಾವುಗಳನ್ನು ಆಶ್ಚರ್ಯದಿಂದ ಕಂಡು ಇದೂ ಶ್ರೀಪಾದರ ಕೆಲಸವೇ ಎಂದು ನಿರ್ಧಾರ ಮಾಡಿದರು. ಇತ್ತ ಶ್ರೀಪಾದರು, ಒಂದೊಂದು ಹಾವಿನ ಶರೀರಕ್ಕೆ ಬೇರೆ ಬೇರೆ ತಲೆಗಳನ್ನು ಜೋಡಿಸಿ ಅಂಟಿಸಲೂ ಅವು ಜೀವ ತಳೆದು ಶ್ರೀಗಳಿಗೆ ಪ್ರದಕ್ಷಿಣೆ ಮಾಡಿ ಹೊರಟು ಹೋದವು.

ಆ ನಾಗರ ಹಾವುಗಳು ಅದೇಕೆ ಬಂದವೋ, ಅವುಗಳನ್ನು ಶ್ರೀಪಾದರೇಕೆ ಕೊಂದು, ನಂತರ ಜೀವ ತುಂಬಿದರೋ ಯಾರು ಬಲ್ಲರು? ಉತ್ತರ ರೂಪದಲ್ಲಿ ಶ್ರೀಪಾದರು ಹೀಗೆ ತಿಳಿಸಿದರು. ''ರಾಹು ಗ್ರಹದ ಬಲ ಸಾಲದಿದ್ದಾಗ, ಎಲ್ಲಾ ಕೆಲಸಗಳಲ್ಲೂ ಅಡಚಣೆಗಳು ಎದುರಾಗುತ್ತಾ, ದೊಡ್ಡ ಹಾವಿನ ಬಂಧನದಲ್ಲಿದ್ದಂತೆ ಅನ್ನಿಸುವುದು. ಇದನ್ನೇ ಕೆಲವರು, ಕಾಳಸರ್ಪ ಯೋಗವೆನ್ನುವರು. ರಾಹುವು ಸರ್ಪಗಳ ಅಧಿದೇವತೆ. ಈ ಮಾದರಿಯ ಅಡಚಣೆಗಳನ್ನು ತಂದಿಡುವ ಸರ್ಪಗಳು, ಕಣ್ಣಿಗೆ ಕಾಣಸದೇ ಎಲ್ಲೋ ಇವೆ. ಅಂತಹವುಗಳ ದೋಷವನ್ನು, ಈ ರೀತಿ ತೊಲಗಿಸಿ, ನನ್ನ ಭಕ್ತರಿಗೆ ಸುಖಸಂತೋಷ ತರುತ್ತಿರುವೆನು.

ನಾವು ಕುರುಂಗಡ್ಡೆ ಕ್ಷೇಮವಾಗಿ ಸೇರಿದೆವು. ಶ್ರೀಗಳು ಮುಗುಳ್ನಗೆಯಿಂದ ಆಶೀರ್ವದಿಸಿದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 22

# ಗುರುದತ್ತ ಭಟ್ಟ ವೃತ್ತಾಂತ

### ಜ್ಯೋತಿಷ್ಯ ಶಾಸ್ತ್ರದಲ್ಲಿ ಭಕ್ತರಿಗೆ ಜಾತಕಫಲ ತೋರಿಸಬಲ್ಲವರು ಒಂದು ಶ್ರೀಪಾದರೇ

ಗುರುಚರಣ, ಕೃಷ್ಣದಾಸ ಮತ್ತು ನಾನು, ಶ್ರೀಪಾದರ ಸಮಕ್ಷದಲ್ಲಿ ಊಹಿಸಲಾರದ ಆನಂದದಲ್ಲಿದ್ದೆವು. ಗುರುದತ್ತ ಭಟ್ಟನೆಂಬ ಜ್ಯೋತಿಷ್ಯ ಪಂಡಿತನೊಬ್ಬನು, ಶ್ರೀಗುರುದೇವರ ದರ್ಶನಾರ್ಥ ಬಂದಿದ್ದನು. ಶ್ರೀಪಾದರವನನ್ನು ಬಹಳ ಆದರಿಸಿದರು. ಒಂದು ಪ್ರಶಾಂತ ಸ್ಥಳದಲ್ಲಿ ಕುಳಿತು, ಸತ್ಸಂಗ ಮಾಡುವಂತೆ, ನಮ್ಮನ್ನು ಆದೇಶಿಸಿದರು. ನಮ್ಮ ಸಂಭಾಷಣೆ ಜ್ಯೋತಿಷ್ಯ ಶಾಸ್ತ್ರದ ಕಡೆ ತಿರುಗಿತು. ನಾನು ಶ್ರೀ ಭಟ್ಟು ಮಹಾಶಯನನ್ನು "ಸ್ವಾಮಿ! ಜ್ಯೋತಿಷ್ಯ ಶಾಸ್ತ್ರದಲ್ಲಿ ತಿಳಿಸಿರುವ ಫಲಗಳು, ನಿಜವಾಗಿಯೂ ಫಲಿಸುತ್ತವೆಯಾ? ಇಲ್ಲಾ ಬದಲಾವಣೆ, ಹೆಚ್ಚು ಕಡಿಮೆಯ ಸಾಧ್ಯತೆ ಉಂಟಾ? ಮಾನವನ ಜೀವನ ಪೂರ್ವಕರ್ಮದಂತೆಯೇ ನಡೆಯುತ್ತದಾ? ಇಲ್ಲ, ಮಾನವ ಪ್ರಯತ್ನ ನಿರ್ದೇಶಿತವೇ?'' ಎಂದು ಪ್ರಶ್ನಿಸಿದೆನು. ಆಗ ಶ್ರೀ ಭಟ್ಟು ಮಹಾಶಯರು "ಭ'' ಚಕ್ರವೆಂದರೇ ನಕ್ಷತ್ರ ಕಕ್ಷ್ಯೆ. ಇದರ ಪ್ರಾರಂಭ ಸ್ಥಾನ ಅಶ್ವಿನೀ ನಕ್ಷತ್ರ. ಈ ನಕ್ಷತ್ರದ ಸ್ಥಳ ನಿರ್ದೇಶಿಸಲು ಚೈತ್ರಪಕ್ಷವೆಂದು, ರೈವತ ಪಕ್ಷವೆಂದೂ 2 ಪದ್ಧತಿಗಳುಂಟು. ರೇವತಿ ನಕ್ಷತ್ರ, ಇರಬೇಕಾದ ಸ್ಥಾನಕ್ಕೆ 8 ಕಲೆಗಳಷ್ಟು ಕಡಮೆ ಸ್ಥಾನದಲ್ಲಿರುವುದರಿಂದ, ಅದನ್ನು ಲೆಕ್ಕಿಸಬೇಕಾಗಿಲ್ಲ. ಅಶ್ವಿನಿ ನಕ್ಷತ್ರ ಗೋಳವನ್ನು ಗುರ್ತಿಸುವುದು ಕಷ್ಟವಾದ್ದರಿಂದ, ಅದಕ್ಕೆ 180 ಅಂಶಗಳಲ್ಲಿರುವ ಚಿತ್ತಾ ನಕ್ಷತ್ರ, ಒಂದೇ ಗೋಳವಾಗಿಯು, ಪ್ರಕಾಶಮಯವಾಗಿಯೂ ಮತ್ತು ಸ್ಫುಟವಾಗಿಯೂ ಇರುವ ಕಾರಣ, ಅದಕ್ಕೆ 6 ರಾಶಿಗಳನ್ನು ಸೇರಿಸಿದರೇ, ಅದು ಅಶ್ವಿನಿ ಆಗುವುದು. ಆದ್ದರಿಂದ ಚೈತ್ರ ಪಕ್ಷ ಲೆಕ್ಕಿಸತಕ್ಕದ್ದು. ಅಶ್ವಿನಿ ನಕ್ಷತ್ರ 'ತುರಗ ಮುಖಾಶ್ವಿನೀ ಶ್ರೇಣಿ' ಎಂದು, 3 ಗೋಳಗಳಾಗಿ ಪ್ರಕಟವಾಗಿದೆ. ಶ್ರೀಪಾದರು, ಚಿತ್ತಾ ನಕ್ಷತ್ರದಲ್ಲಿ ಅವತರಿಸಲೂ ಸಹಾ ಒಂದು ವಿಶೇಷ ಕಾರಣವಿದೆ. 3 ಗೋಳಗಳು ಒಂದೇ ನಕ್ಷತ್ರವಾಗಿರುವ ಅಶ್ವಿನಿ ಸಹಾ, ಅವರ ಸ್ವರೂಪವೇ, ಅದುವೇ 'ಭ' ಚಕ್ರಕ್ಕೆ ಪ್ರಾರಂಭ. ಅದು ಅವರ ಶ್ರೀದತ್ತಾತ್ರೇಯ ಸ್ವರೂಪ. ಕಲಿಯುಗದ, ಅವರ ಪ್ರಥಮ ಅವತಾರ ಶ್ರೀಪಾದ ಶ್ರೀವಲ್ಲಭ ಅವತಾರ. ಇದು ಅಶ್ವಿನೀ ನಕ್ಷತ್ರಕ್ಕೆ ಶುದ್ಧ ರೇಖೆಯಲ್ಲಿ 180 ಅಂಶಗಳ ದೂರದಲ್ಲಿರುವ, ಅವರ ಜನುಮ ನಕ್ಷತ್ರವಾದ ಚಿತ್ತಾ ನಕ್ಷತ್ರ. 180 ಅಂಶಗಳ ದೂರದಲ್ಲಿ, ಯಾವುದೇ ನಕ್ಷತ್ರದ್ದಾಗಲಿ ಅಥವಾ ಗ್ರಹದ್ದಾಗಲೀ ಶಕ್ತಿ, ಕೇಂದ್ರೀಕರಿಸಲ್ಪಡುತ್ತಿರುವುದು. ಮಾನವರು ಅವರ ಹಿಂದಿನ ಜನುಮದಲ್ಲಿ ಮಾಡಿದ ಪ್ರಾರಬ್ಧ ಲೆಕ್ಕದ ಪ್ರಕಾರ, ತಕ್ಕ ಗ್ರಹ ಸಂಪುಟದಲ್ಲಿ ಜನಿಸುವರು. ಗ್ರಹಗಳು, ಮಾನವರ ಮೇಲೆ ಪ್ರೇಮಭಾವವೂ ಹೊಂದಿರುವುದಿಲ್ಲ, ದ್ವೇಷಭಾವವೂ ಹೊಂದಿರುವುದಿಲ್ಲ. ಅವುಗಳಿಂದ ಹೊರಬೀರುತ್ತಿರುವ ವಿವಿಧ ಕಿರಣಗಳು, ಅವುಗಳ ಸ್ಪಂದನೆಗಳು, ಆಯಾ ಕಾಲಕ್ಕೆ, ಆಯಾ ಪ್ರದೇಶಕ್ಕೆ, ಆಯಾ ಜೀವಿಗಳಿಗೆ ವಿವಿಧ ಘಟನೆಗಳನ್ನು ಉಂಟುಮಾಡಲು ಸಿದ್ಧತೆಯಲ್ಲಿರುವವು. ಅನಿಷ್ಟ ಫಲಗಳಿಂದ ತಪ್ಪಿಸಿಕೊಳ್ಳಲು, ಆ ಕಿರಣಗಳೂ ಮತ್ತು ಅವುಗಳ ಸ್ಪಂದನೆಗಳನ್ನು ತಡೆದು ಶೂನ್ಯಗೊಳಿಸತಕ್ಕ ಕಿರಣಗಳನ್ನು ಮತ್ತು ಅವುಗಳ ಸ್ಪಂದನೆಗಳನ್ನು ನಾವು ಹೊಂದಿರಬೇಕು. ಇದನ್ನು ಮಂತ್ರತಂತ್ರಗಳಿಂದಾಗಲಿ, ಧ್ಯಾನ, ಪ್ರಾರ್ಥನೆ ಅಥವಾ ಅವರವರ ಸ್ವಕ್ರೀಯವಾದ ಯೋಗಶಕ್ತಿಯಿಂದ ಆಗಲಿ ಸಾಧಿಸಬಲ್ಲೆವು. ಆದರೆ ಪೂರ್ವಜನ್ಮಕರ್ಮ ಅತ್ಯಂತ ಪ್ರಬಲವಾಗಿದ್ದಲ್ಲಿ, ಮೇಲೆ ತಿಳಿಸಿದ ಪದ್ಧತಿಗಳು

ಕೆಲಸ ಮಾಡುವುದಿಲ್ಲ. ಅಂತಹ ಪರಿಸ್ಥಿತಿಗಳಲ್ಲಿ, ಶ್ರೀಪಾದರೊಬ್ಬರೇ ನಮ್ಮ ಹಣೆ ಬರಹಗಳನ್ನು ಬದಲಾಯಿಸಬಲ್ಲರು. ಹಾಗೆ ಅವರು ಮಾಡಬೇಕೆಂದರೆ, ನಮ್ಮಿಂದ ಈ ಲೋಕಕ್ಕೆ ಯಾವುದಾದರೊಂದು ಒಳ್ಳೆಯ ಕೆಲಸ ಮಾಡುವಂತಹ ಪರಿಸ್ಥಿತಿ ಇರಬೇಕು. ಸಾಧಾರಣವಾಗಿ ಇದು ಆಗದಂತಹ ಕೆಲಸ. ಸೃಷ್ಟಿಯ ಕಾರ್ಯಕಲಾಪಗಳಲ್ಲಿ ಮತ್ತು ಕರ್ಮದೇವತೆಯರ ಕಾರ್ಯಕಳಾಪಗಳಲ್ಲೂ, ಶ್ರೀಪಾದರು ಅನಗತ್ಯವಾಗಿ ತಲೆ ಹಾಕುವುದಿಲ್ಲ! **ಆದರೆ ಭಕ್ತರ ಆವೇದನೆ ಶ್ರೀಗಳನ್ನು ಚಲಿಸುತ್ತದೆ. ಶ್ರೀಗಳ ಹೃದಯದಿಂದ ತುಂಬಿ ಉಕ್ಕುತ್ತಿರುವ ಪ್ರೇಮ ಮತ್ತು ಕರುಣೆ ಎಂಬ ಮಹಾಪ್ರವಾಹಕ್ಕೆ, ಕರ್ಮದೇವತೆಗಳ ಶಕ್ತಿ ಸೋತುಹೋಗುವುದು. ಕರ್ಮ ಜಡವಾದುದ್ದು. ಶ್ರೀಪಾದರು, ಚೈತನ್ಯಾಮೂರ್ತಿ. ಅವರಿಗೆ ಬೇಕಾದರೆ ನೆಲವನ್ನು ಅಂಬರವಾಗಿ, ಇಲ್ಲ ಅಂಬರವನ್ನು ನೆಲವಾಗಿಯೂ ಮಾಡಿ, ತಮ್ಮ ಮೇಲ್ಸೆ ತೋರಿಸಬಲ್ಲರು. ಇದು ಅವರಿಗೆ ಅವಲೀಲೆಯಾಗಿ ತೋರಿಸಬಲ್ಲ ವಿಷಯ"** ಎಂದು ವಿವರಿಸಿದರು.

ನಾನು ಅಜ್ಞಾನದಿಂದ ಜ್ಯೋತಿಷ್ಯದಲ್ಲಿ ಮಹಾಪಂಡಿತನೆಂದು ಭ್ರಮಿಸಿದ್ದೆ. ಕನ್ನಡಿಗನಾದ್ದರಿಂದ ತೆಲುಗು ಶುದ್ಧವಾಗಿರಲಿಲ್ಲ. ಆದರೆ ಸಂಸ್ಕೃತದಲ್ಲಿ ಪ್ರತಿಭೆ ಇತ್ತು. ನನ್ನ ಅದೃಷ್ಟದಿಂದ ಪೀಠಿಕಾಪುರದಲ್ಲಿ ಹೆಜ್ಜೆ ಇಟ್ಟೆ. ಕ್ಷುಣ್ಣವಾಗಿ, ಶ್ರೀಪಾದ ಶ್ರೀವಲ್ಲಭರನ್ನು ಕುರಿತು ಕೇಳಿದೆ. ನಮ್ಮ ಕುಲದೈವ ಶ್ರೀದತ್ತಾತ್ರೇಯರು. ಪಾದಗಯಾ ಕ್ಷೇತ್ರವಾದ ಕುಕ್ಕುಟೇಶ್ವರಾಲಯದಲ್ಲಿದ್ದ ಸ್ವಯಂಭೂ ದತ್ತರನ್ನು ದರ್ಶಿಸಿದೆ. ಶ್ರದ್ಧಾಭಕ್ತಿಯಿಂದ ನಮಿಸಿದೆ. ನಾನು ಧ್ಯಾನದಲ್ಲಿ ಕುಳಿತಿರಲೂ, ''ಎಲೈ ಮೂರ್ಖ! ನೀನು ಸತ್ತು ಎಷ್ಟು ಸಮಯವಾಯಿತು? ನನ್ನ ಭಕ್ತನೆಂದು ಕೊಚ್ಚಿಕೊಳ್ಳುತ್ತಿದ್ದೀಯಾ! ಮುಖಸ್ತುತಿ ಮಾಡುತ್ತಾ ಪಾದಕ್ಕೆ ಮೊಳೆ ಹೊಡೆಯುತ್ತಿದ್ದೀಯ. ಪಾದಗಯಾದಲ್ಲಿ ನೀನು ಹಾಗೆ ಮಾಡುತ್ತಾ, ನನ್ನ ರಕ್ತ ನೋಡಲು ಬಯಸಿದ್ದೀಯಾ?'' ಎಂದು ಅಂತರ್ವಾಣಿ ಸ್ಪಷ್ಟವಾಗಿ ಪ್ರಶ್ನಿಸಿತು. ಜ್ಯೋತಿಷ್ಯ ತಿಳಿದಿರಲೂ, ನನ್ನ ಗ್ರಹಗತಿಗಳು ಲೆಕ್ಕಿಸಿದೆ. ನಾನು ಯಾವ ದಿನ, ಎಷ್ಟು ಕ್ಷಣಕ್ಕೆ ಶರೀರ ತ್ಯಜಿಸಬೇಕಿತ್ತೋ, ಅಷ್ಟೇ ಸಮಯಕ್ಕೆ ಸರಿಯಾಗಿ, ಪಾದಗಯಾ ಕ್ಷೇತ್ರದಲ್ಲಿ ಶ್ರೀ ಸ್ವಯಂಭೂ ದತ್ತರ ಬಳಿ ಇದ್ದೆ. ಪರಿಶೀಲಿಸಲೂ, ನನ್ನ ನಾಡೀ ಮತ್ತು ಹೃದಯಗಳು ಸ್ಪಂದಿಸುತ್ತಿರಲಿಲ್ಲ. ಕನ್ನಡಿಯಲ್ಲಿ ನೋಡಲೂ, ಮುಖದಲ್ಲಿ ಜೀವಕಳೆಗೆ ಬದಲು ಪ್ರೇತಕಳೆ ಇತ್ತು. ಮುಗುಳ್ನಗೆ ಸಹಾ, ಸತ್ತ ಪ್ರೇತದ ಪೈಶಾಚಿಕ ಅಟ್ಟಹಾಸದಂತಿತ್ತು! ಸ್ವಯಂಭೂ ದತ್ತರ ಆಲಯದ ಅರ್ಚಕರು, ಬಲು ಧನಾಶಾಪರರು. ಅವನ ಸೂಕ್ಷ್ಮಶರೀರ, ನನ್ನ ಶರೀರಕ್ಕಿಂತ ವಿಕಾರಕಲೆ ತುಂಬಿತ್ತು! ಆಗ ನನ್ನಲ್ಲಿನ, ಮೂಲೆಯಲ್ಲಿ ಅಡಗಿದ್ದ ವಿವೇಕ ಎದ್ದು ನಿಂತಿತು. ಶ್ರೀಪಾದ ಶ್ರೀವಲ್ಲಭರ ದರ್ಶನ ಮಾಡದಿದ್ದಲ್ಲಿ, ನನ್ನ ಈ ದುರವಸ್ಥೆ ದೂರವಾಗದೆಂದು ಅರಿತೆ. ದೇವತೆಯರು ಆನಂದ ಸ್ವರೂಪರು, ಅದು ಹೃದಯ ಮತ್ತು ನಾಡಿ ಸ್ಪಂದನೆಗಳ ಪ್ರಮೇಯವಿಲ್ಲದೇನೇ ಇರುವ ಉನ್ನತ ಸ್ಥಿತಿ ಅವರದ್ದು. ನನ್ನ ಸ್ಥಿತಿ ಅಯೋಮಯ. ಆತ್ಮಕ್ಕೆ ಆನಂದ, ಎಳ್ಳಷ್ಟೂ ಇಲ್ಲ. ಬರೀ ದುಃಖವೇ. ಆತ್ಮ ಶರೀರವನ್ನು ಬಿಟ್ಟಾಗ, ಶರೀರದ ಬಾಧೆಗಳು ಕೊನೆಗೊಳ್ಳುವವು. ಆದರೇ ನನ್ನ ಈ ಆತ್ಮ ಶರೀರ ಬಿಟ್ಟಿಲ್ಲ. ಹೃದಯ, ನಾಡಿ ಸ್ಪಂದನಗಳನ್ನು ನಿಲ್ಲಿಸಿದೆ. ನಾನಿಲ್ಲಿಯ ತನಕ ಪರಮಪಾಪಿಗಳು ಆಡುತ್ತಿದ್ದ ಮಾತುಗಳನ್ನು ಕೇಳಿ ಮೋಸ ಹೋದೆ! ಪವಿತ್ರ ಶಿಲೆಯಾಗಿ ಬೆಳಗಿದ, ಶ್ರೀ ಸ್ವಯಂಭೂ ದತ್ತರೇ ಘಂಡಿಕೋಟೆ ಮನೆತನದಲ್ಲಿ ಜನುಮ ಎತ್ತಿರುವನಂತೆ! ಆ ಶಿಲೆಗಿಲ್ಲದ ನಾಡೀ ಸ್ಪಂದನೆ, ಆ ಅವತಾರ ಎನ್ನಲಾದ ಶ್ರೀಪಾದರಿಗೆ ಹೇಗೆ ಬಂತು? ಮಹಾಲಯ ಅಮಾವಾಸ್ಯೆ ದಿನ, ಪಿತೃದೇವತೆಗಳಿಗೆ ಪವಿತ್ರವಾದ ದಿನ, ಯಾರೋ ಅವಧೂತ ಭಿಕ್ಷೆ ಸ್ವೀಕರಿಸದಂತೆ, ಆ ಮಹನೀಯನೇ ಮಲ್ಲಾದಿಯ ದೇಹಿತ್ರನಂತೆ, ಶ್ರೀ ದತ್ತ ಪ್ರಭುಗಳಂತೆ! ಎಂತಹಾ ವಂಚನೆಯ ಸುದ್ದಿ' ಎಂದು ಬೊಗಳುವ ನಾಯಿಗಳ ಮಾತಿಗೆ ಬಲಿಯಾದೆ. ಫಲಿತವಾಗಿ, 'ಶ್ರೀಪಾದರನ್ನು ದೂರಮಾಡಿಕೊಳ್ಳುತ್ತಿದ್ದೀಯ' ಎಂದು ನನ್ನ ಗುರು ಎಚ್ಚರಿಸುತ್ತಿದ್ದಾರೆ.

ತಕ್ಷಣವೇ ನಾನು, ಓಡಿ, ಶ್ರೀಪಾದರ ಮನೆ ತಲುಪಿದೆ. 10 ವರುಷದ ಶ್ರೀಪಾದರು ಬೀದಿಗೆ ಬಂದು, ''ಬಾರೋ ಮೂರ್ಖ, ಬಾ! ಬದುಕಿದ್ದೂ ಸತ್ತಿರುವ ನಿನ್ನಂತಹ ಬಡಪಾಯಿಗಳಾದ ಮಾನವ ರೂಪ ಪಿಶಾಚಿಗಳಿಗೆ, ಸದ್ಗತಿ ಕಲ್ಪಿಸಲು, ನಿಮ್ಮ ಅಕೃತ್ಯಗಳಿಂದ ರೌರವಾದಿ ನರಕದಲ್ಲಿ ಘೋರವಾದ ಬಾಧೆಗಳನ್ನನ್ನುಭವಿಸುತ್ತಿರುವ ನಿಮ್ಮ ಪಿತೃಗಳಿಗಾಗಿ, ಅವಧೂತ ವೇಷಧಾರಿಯಾಗಿ, ಮಹಾಲಯ ಅಮಾವಾಸ್ಯೆಯ ದಿನ, ಈ ಪವಿತ್ರ ಗೃಹದಲ್ಲಿ ಭಿಕ್ಷೆಯಾಚಿಸಿದ, ದತ್ತಾತ್ರೇಯನೇ ನಾನು! ಯಾರ ಹೆಸರು ಕೇಳಿದರೇನೇ ರಾಕ್ಷಸ ಪಿಶಾಚಿಗಣಗಳು ನಡುಗುವರೋ ಆ ದತ್ತನೇ ನಾನು! ನಿನ್ನನ್ನು ಶಿಲೆಯಾಗಿ ಬದಲಾಯಿಸಿ, ಹಸಿವು ಬಾಯಾರಿಕೆಗಳನ್ನು ಕೊಟ್ಟಿದ್ದೆ. ಪ್ರಾಣ ತೆಗೆದು, ನಿನ್ನನ್ನು ಬದಿಕಿರುವನಂತೆ ಈ ಲೋಕಕ್ಕೆ ತೋರಿದೆ. ನಾನು ದತ್ತನೋ ಅಲ್ಲವೋ ಎಂಬುದು ನಂತರದ ಮಾತು. ಮೊದಲು, ನೀನು ನಿಜಕ್ಕೆ ಸತ್ತಿದ್ದರೂ ಬದಿಕಿರುವನಂತೆ ಮೋಸ ಮಾಡುವುದು ಸರಿಯೇ ಹೇಳು'' ಎಂದು ಘರ್ಜಿಸಲೂ ನಾನು ನಡುಗಿದೆ. ಇಷ್ಟರಲ್ಲಿ ಸುಮತಿ ಮಹಾರಾಣಿ ಬಾಗಿಲ ಬಳಿ ಬಂದು ನನ್ನನ್ನು ನೊಡುತ್ತಾ, ''ಕೃಷ್ಣ ಕನ್ನಾ! ಪ್ರೇತಕಲೆ ತುಂಬಿರುವ ಈ ಪಾಪಿ ಯಾರು? ಒಳಕ್ಕೆ ಬಾ. ನಿನಗೆ ದ್ರಿಷ್ಟಿ ತೆಗೆದುಹಾಕುವೆನು'' ಎಂದು ಕೂಗಿಕೊಂಡಳು. ಆಗ ಶ್ರೀಪಾದರು, ''ಅಮ್ಮಾ! ಈತ ಮಹಾಪಾಪಿ ಇನ್ನೂ ಆಗಿಲ್ಲ. ಅಘೋರಿಯಾಗಿ, ಶವಗಳನ್ನು ಸುಟ್ಟುತಿನ್ನುವ ಜನುಮ ಬರಲಿದೆ. ಮುಂಬರುವ ಆ ಜನುಮಕ್ಕೆ ಮೊದಲೇ ಈತ ನನ್ನ ಬಳಿ ಬಂದಿಹನು. ಮನೆಯಲ್ಲಿ ತಂಗಳು ಏನಾದರೂ ಇದ್ದರೇ ಇವನಿಗೆ ಕೊಡಮ್ಮಾ!'' ಎಂದು ತಾಯಿಯನ್ನು ಬೇಡಿದರು.

ಶ್ರೀಪಾದರ ಸಲುವಾಗಿ, ಅವರ ತಾಯಿ ಅಖಂಡ ಲಕ್ಷ್ಮೀಸೌಭಾಗ್ಯವತಿ ಸುಮತಿ ಮಹಾರಾಣಿ ಸ್ವಲ್ಪ ತಂಗಳೂ, ಒಗ್ಗರಣೆ ಅನ್ನ ಕೊಟ್ಟರು. ಶ್ರೀಪಾದರು ಆ ಅನ್ನ ನನಗಿತ್ತು 'ಜಾಗ ಖಾಲಿ' ಮಾಡಿಹೋಗಲು ಆದೇಶಿಸಿದರು. ನಾನಲ್ಲಿಂದ ಶ್ರೀ ಕುಕ್ಕುಟೇಶ್ವರಾಲಯದ ಎದುರಿನ ಖಾಲಿ ಸ್ಥಳದಲ್ಲಿ ಕುಳಿತು, ಉಂಡೆನು. ತಕ್ಷಣ ನನಗಿದ್ದ ದುರ್ದಶೆ ಸಂಪೂರ್ಣವಾಗಿ ತೊಲಗಿತು! ಪುನಃ ಶ್ರೀಗಳನ್ನು ದರ್ಶಿಸಿಕೊಳ್ಳಲೂ ಹೊರಟರೇ, ಶ್ರೇಷ್ಠಿಗಳು ಶ್ರೀಪಾದರನ್ನು ತಮ್ಮ ಮನೆಗೆ ಕರೆದೊಯ್ದರು. ನೋಡಲು, ಶ್ರೀಗಳು, ಶ್ರೇಷ್ಠಿಗಳ ಅಂಗಡಿಯಲ್ಲಿದ್ದರು. ಅವರು ವರಹಗಳನ್ನು ಲೆಕ್ಕ ಮಾಡಿ ಗಲ್ಲಾಪೆಟ್ಟಿಗೆಯಲ್ಲಿ ಭದ್ರಮಾಡುತ್ತಿದ್ದರು. ಶ್ರೇಷ್ಠಿಗಳು ಖುದ್ದಾಗಿ, ಜೋಳ ಮತ್ತು ಅಕ್ಕಿಯನ್ನು ಅಳತೆಮಾಡಿ ಕೊಡುತ್ತಿದ್ದರು. ಶ್ರೀಪಾದರು, ''ತಾತ ಇಂದು ಬಟವಾಡೆಯ ದಿನ ಅಲ್ಲವೇ, ನನ್ನ ದಕ್ಷಿಣೆ ಎಷ್ಟು? ನನ್ನ ತಂದೆಯಗಿಟ್ಟ ದಕ್ಷಿಣೆ ಎಷ್ಟು?'' ಎಂದು ಪ್ರಶ್ನಿಸಲು, ಶ್ರೇಷ್ಠಿಗಳು ''ಕಂದನೇ! ತಂದೆಗೆ, ತರುವುದು ಪಂಡಿತ ಬಹುಮಾನ. ನಿನಗೆ ತರುವುದು ಆ ವೇಂಕಟೇಶ್ವರನಿಗೆ ಕಟ್ಟಿಟ್ಟ ಮುಡಿಯೇ ಸರಿ. ನಮ್ಮಿಬ್ಬರಲ್ಲಿ ವ್ಯಾಪಾರವಿಲ್ಲ. ನಿನಗೆ ಬೇಕಾದ್ದು ನೀನು ತೆಗೆದುಕೊಳ್ಳಬಹುದು. ನನಗೆ ಬೇಕಾದದ್ದು ನೀನು ಕೊಡಬೇಕು!'' ಎಂದು ಶ್ರೀಪಾದರೊಟ್ಟಿಗೆ ತಮಾಷೆ ಮಾಡಿದರು. ಆ ದೃಶ್ಯ ಬಲು ಮೋಜಿನದಾಗಿತ್ತು. ಶ್ರೀಪಾದರು ಒಂದು ಬೆಲ್ಲದ ಚೂರನ್ನು ಬಾಯಿಗೆ ಹಾಕಿಕೊಂಡು, ಪ್ರಸಾದವಾಗಿ ನನಗೂ ಒಂದು ಚೂರು ಕೊಟ್ಟರು. ತಾತಾ! ನಾನು ಮಾಡಿಸಲಿರುವ ಗಣೇಶ ಪೂಜೆ, ಇದರಿಂದ ಮುಗಿದಿದೆ. ಗಣೇಶನು ಬೆಲ್ಲದ ಚೂರು ನೈವೇದ್ಯ ಬಾಯಲ್ಲಿ ಸಹಾ ಹಾಕಿರುವನು. ಬೇಕಾದರೇ ನೋಡಿ, ಎಂದು ಬಾಯಿ ತೆಗೆಯಲು, ಅಲ್ಲಿ ಶ್ರೇಷ್ಠಿಗಳು ಯಾವ ಮಹಾನ್ ದೃಶ್ಯಗಳನ್ನು ನೋಡಿದರೋ ನಮಗೆ ತಿಳಿಯದು. ಆದರೇ ಸ್ವಲ್ಪ ಸಮಯದ ನಂತರ, ಅವರು, ''ಚಿನ್ನಾ! ಗಣೇಶನಿಗೆ ಹಸಿವಾದಾಗೆಲ್ಲಾ ಬೇಕಾದಷ್ಟು ಬೆಲ್ಲ ನೈವೇದ್ಯವಾಗಿ ಪಡೆಯಲಿ. ಯಾರನ್ನೂ ಕೇಳಬೇಕಾಗಿಲ್ಲ'' ಎಂದು ಹೇಳಬೇಕಾಗಿ ಶ್ರೀಪಾದರನ್ನು ಬೇಡಿದರು. ಅಷ್ಟರಲ್ಲಿ ಅಖಂಡ ಲಕ್ಷ್ಮೀ ಸೌಭಾಗ್ಯವತಿ ವೆಂಕಟ ಸುಬ್ಬಮಾಂಬ, ಶ್ರೀಪಾದರನ್ನು ಎಣ್ಣೆ ಇಟ್ಟು ಸ್ನಾನ ಮಾಡಿಸಲು ಕರೆದೊಯ್ದರು.

"ಮಗು, ಶಂಕರ ಭಟ್ಟು! ನೀಚರ ಮಾತನ್ನು ಕೇಳಿ ನಾನು ಕೆಟ್ಟು, ಅಘೋರಿಯಾಗಿ ಜನ್ಮಪಡೆಯುವಂತ ದೌರ್ಭಾಗ್ಯದಿಂದ ಶ್ರೀಪಾದರು ಈ ರೀತಿ ನನ್ನನ್ನು ಕಾಪಾಡಿದರು. ನನ್ನನ್ನು ಹಾಗೇ ಬಿಟ್ಟಿದ್ದರೇ ನಾನು ಪೂರ್ತಿಯಾಗಿ ಪತನಗೊಂಡಿರುತ್ತಿದ್ದೆನು" ಎಂದು ಗುರುದತ್ತ ಭಟ್ಟ ನುಡಿದರು. ಹೀಗೆ ಸದ್ಗುರುಗಳು, ತಮ್ಮ ಅಮೂಲ್ಯವಾದ ಶಕ್ತಿ ಮತ್ತು ಸಮಯಕೊಟ್ಟು ಪ್ರೇಮದಿಂದ ಪೂರ್ವಜನ್ಮ ಕರ್ಮ ಬಾಧೆಗಳಿಂದ ನಮ್ಮನ್ನು ಕಾಪಾಡುತ್ತಿದ್ದರು.

ಶ್ರೀಪಾದರ ಜಾತಕ 'ಸಾಂದ್ರ ಸಿಂಧುವೇದ'ದಿಂದ ಲೆಕ್ಕಿಸಬೇಕು. ಸಾಮಾನ್ಯ ಗಣಿತಕ್ಕೆ ಅದು ಸಿಗಲಾರದು! ತಿಥಿ ವಾರ ನಕ್ಷತ್ರಗಳು ಸಹಿತ, ಸಾಂದ್ರ ಸಿಂಧುವೇದವನ್ನನುಸರಿಸಿಯೇ ಇರುವುದು. ಶ್ರೀಪಾದರು, ಅಪ್ಪಲರಾಜ ಶರ್ಮ ಮತ್ತು ಬಾಪನಾರ್ಯರು, ಮನೆಯಲ್ಲಿ ತೆಲುಗಿನ ಜೊತೆ ಸಂಸ್ಕೃತ ಸಹಾ ಮಾತನಾಡಲು ಬಳಸುತ್ತಿದ್ದರು. ಹಿಮಾಲಯದಲ್ಲಿ ಸಪ್ತರ್ಷಿಗಳ ಪವಿತ್ರ ಭೂಮಿಯಲ್ಲಿ ಮಾತನಾಡುವ ಸಂಧ್ಯಾಭಾಷೆಯಲ್ಲಿ ಸಹಾ ವ್ಯವಹರಿಸುವುದು ಇವರಿಗೆ ಉಂಟು. ಶಂಬಲಗಳಲ್ಲಿ ಮಾತನಾಡುವ ಈ ಭಾಷೆ ಸಂಸ್ಕೃತದಿಂದ ವಿಭಿನ್ನ. ಬಲು ಮಧುರ ಮತ್ತು ಸುಕುಮಾರ. ವರ್ಣಿಸಲಸಾಧ್ಯ! ಶ್ರೀ ಪೀಠಿಕಾಪುರದಲ್ಲಿ ಕೇವಲ ಶ್ರೀಪಾದರು, ಬಾಪನಾರ್ಯರು ಮತ್ತು ಅಪ್ಪಲರಾಜು ಶರ್ಮ ಈ ಭಾಷೆ ಮಾತನಾಡಬಲ್ಲರು.

ಸತ್ಯಋಷೀಶ್ವರರೆಂದು ಹೆಸರು ಪಡೆದ ಬಾಪನಾರ್ಯರೊಡನೆ, ಶ್ರೀಪಾದರು "ತಾತಾ! ಶ್ರೀಕೃಷ್ಣನು ಸತ್ಯವೇ ಆಗಲಿ ಅಸತ್ಯವೇ ಆಗಲಿ ನುಡಿಯುವನಲ್ಲ, ಆತ ಕೇವಲ ಕರ್ತವ್ಯಬೋಧಕ" ಎಂದರು ಶ್ರೀಪಾದರು. ಆಗ ಬಾಪನಾರ್ಯರು, "ಮಗೂ! ಸದಾ ಸತ್ಯವನ್ನೇ ನುಡಿಯಬೇಕು. ಯಾವ ಕಾರಣಕ್ಕೂ ಸುಳ್ಳು ಹೇಳಬಾರದು" ಎಂದರು. ಶ್ರೀಪಾದರು ಮುಗುಳ್ನಗೆ ತಾಳಿದರು. ಅದೇ ದಿನ ಮಧ್ಯಾಹ್ನಕ್ಕೆ ವೆಂಕಟಪ್ಪಯ್ಯ ಶ್ರೇಷ್ಠಿಗಳು, ಬಾಪನಾರ್ಯರ ಮನೆಗೆ ಬಂದರು, ಶ್ರೇಷ್ಠಿಗಳಿಗೆ ಒಂದು ಬಲವಾದ ಬಯಕೆ ಇತ್ತು. ಅವರ ಪಿತೃದೇವತೆಗಳ ತೃಪ್ತಿಗಾಗಿ, ಒಂದು ಮಹಾಲಯ ಪಕ್ಷದಲ್ಲಿ, ಬಾಪನಾರ್ಯರು ತಮ್ಮ ಮನೆಯಲ್ಲಿ ಉಂಡು, ತಮ್ಮಿಂದ ದಕ್ಷಿಣೆ ಪಡಯಬೇಕೆಂಬುದೇ ಶ್ರೇಷ್ಠಿಗಳ ಕೋರಿಕೆ ಆಗಿತ್ತು. ಬಾಪನಾರ್ಯರು ಆ ಕೋರಿಕೆ ತೀರಿಸುವರಾ ಎಂಬುದು ಅವರ ಸಂಶಯ. ಆದರೂ, ಶ್ರೀಪಾದರನ್ನು ಮನದಲ್ಲಿ ನೆನದು, ತಮ್ಮ ಬಯಕೆ ಬಾಪನಾರ್ಯರ ಮುಂದಿಟ್ಟರು. ಬಾಪನಾರ್ಯರ ಬಾಯಿಂದ ಪ್ರಯತ್ನಪೂರ್ವಕವಾಗಿ, ತಪ್ಪದೇ ಮಹಾಲಯ ಪಕ್ಷದಲ್ಲಿ ಶ್ರೇಷ್ಠಿಗಳ ಮನೆಯಲ್ಲಿ ಊಟ ಮಾಡಿ, ದಕ್ಷಿಣೆ ಪಡೆಯುವನೆಂದು ವಾಗ್ದಾನ ಬಂತು! ಶ್ರೇಷ್ಠಿಗಳ ಆನಂದಕ್ಕೆ ಪಾರವೇ ಇರಲಿಲ್ಲ.

ಶ್ರೀಪಾದರು ಬಲು ಚಮತ್ಕಾರಿ! ಮಹಾಲಯ ಪಕ್ಷದಲ್ಲಿ ವಾಗ್ದಾನ ಪಡೆದಿದ್ದ ಶ್ರೇಷ್ಠಿಗಳು ಮತ್ತು ವಾಗ್ದಾನವಿತ್ತ ಬಾಪನಾರ್ಯರೂ ಆ ವಿಷಯ ಮರೆತು ಹೋದರು. ಮಹಾಲಯ ಅಮಾವಾಸ್ಯೆ ಮಧ್ಯಾಹ್ನ ಬಾಪನಾರ್ಯರ ಮನೆಗೆ ಶ್ರೇಷ್ಠಿಗಳು ಬರಲು, ಶ್ರೀಪಾದರು, "ವಾಗ್ದಾನ ಮಾಡಬಾರದು, ಮಾಡಿದರೇ ಅದನ್ನು ನೆರವೇರಿಸಬೇಕು, ಮಾತು ಕೊಟ್ಟವರು ಒಂದು ವೇಳೆ ಮರೆತರೂ, ವಾಗ್ದಾನ ಪಡೆದವರಾದರೂ ಅದನ್ನು ಜ್ಞಾಪಿಸಬೇಕು. ಈ ವಿಷಯದಲ್ಲಿ ನಿಮ್ಮಿಬ್ಬರಿಂದಲೂ ನಾನು ಸಂಜಾಯಿಷೀ ಕೇಳುತ್ತಿದ್ದೇನೆ" ಎಂದರು. ಆಗ ಮಾಡಿದ ತಪ್ಪನ್ನು ಆ ಇಬ್ಬರೂ ಅರಿತರು. **ಜೀವರಿಗೆ ತಿಳುವಳಿಕೆ ತರಿಸುವುದರಲ್ಲಿ ಶ್ರೀಪಾದರದೆಷ್ಟು ಸಮರ್ಥರೋ, ಮರೆವು ತರಿಸುವುದರಲ್ಲಿ ಸಹಾ ಅಷ್ಟೇ ಸಮರ್ಥರೆಂದು ಇದರಿಂದ ವಿದಿತವಾಯಿತು.** ಮಾಡಿದ ತಪ್ಪಿಗೆ ಇಬ್ಬರೂ ಚಿಂತಿಸಿದರು. ಅವರನ್ನು ಸಮಾಧಾನಿಸುತ್ತಾ ಶ್ರೀಗಳು, "ನಿಮ್ಮಿಬ್ಬರಿಗೂ ಮರೆವು ತರುವುದರಲ್ಲಿ ನನ್ನ ಪಾತ್ರ ಸಹಾ ಇದೆ. ಪ್ರತಿ

ಒಬ್ಬರಲ್ಲೂ "ನಾನು" ಎಂಬುದು ಎದ್ದು ಕಾಣುತ್ತಿರುತ್ತದೆ. ತಂದೆ ತಾಯಿಯಿಂದ ಜೀವನು, ಶರೀರವನ್ನೇ ಅಲ್ಲದೇ ಆ "ನಾನು" ಎನ್ನುವ ಚೈತನ್ಯವನ್ನು ಸಹಾ ಪಡೆಯುತ್ತಿರುವನು. ಇಂತಹಾ "ನಾನು" ಚೈತನ್ಯಕ್ಕೆ ವಿಶ್ವ ಕಾರ್ಯಕಲಾಪಗಳಲ್ಲಿ ಮಾಡಬೇಕಾದ ಒಂದಾನೊಂದು ಬಾಧ್ಯತಾಯುತವಾದ ಕರ್ಮ ಇದೆ. ಅದು ತಂದೆಯಿಂದ ಮಗನಿಗೆ, ಅವನಿಂದ ಅವನ ಮಗನಿಗೆ ಈ ಪ್ರಕಾರ ವಂಶಪಾರಂಪರ್ಯವಾಗಿ ಬರುವಂತಹ ಕರ್ಮಬಂಧವಾಗಿದೆ. ಗೃಹಸ್ಥಾಶ್ರಮವನ್ನು ಬಿಟ್ಟು ಸನ್ಯಾಸವನ್ನು ಸ್ವೀಕರಿಸಿದಾಗ ಮಾತ್ರ ಈ ಕರ್ಮದಿಂದ ಬಿಡುಗಡೆ ಲಭಿಸುತ್ತಿದೆ. ಇಂದು ಮಾಡಲಾದ ಈ ವಾಗ್ದಾನ ಅಥವಾ ಗ್ರಹಿಸಲಾದ ವಾಗ್ದಾನ, ನಿಮ್ಮ ಇಬ್ಬರ ನಾಮರೂಪಗಳಿಗೆ ಸ್ಥಿರವಾಗಿ ನಿಮ್ಮ ಈ ಜನುಮಕ್ಕೇ ಪರಿಮಿತವಾಗಬೇಕಾಗಿಲ್ಲ. ಇದು ಬೃಹದಾಕಾರ ಸ್ವರೂಪವಾದ 'ನಾನು' ಎಂಬ ಚೈತನ್ಯಕ್ಕೆ ಬದಲಾಯಿಸಲಾಗಿದೆ. ಆದ್ದರಿಂದ ಯಾವುದೋ ಒಂದು ದೇಶದಲ್ಲಿ ಯಾವುದೋ ಒಂದು ಕಾಲದಲ್ಲಿ, ಬಾಪನಾರ್ಯರ ವಂಶಸ್ಥನಾದ ಯಾವುದೇ ಒಬ್ಬ ವ್ಯಕ್ತಿ, ಶ್ರೇಷ್ಠಿ ವಂಶದಲ್ಲಿನ ಯಾವುದೋ ಓರ್ವನ ಮನೆಯಲ್ಲಿ, ಮಹಾಲಯ ಪಕ್ಷದಲ್ಲಿ ಊಟ ಮಾಡಿ, ದಕ್ಷಿಣೆ ಪಡೆಯಬಹುದು. ಅದು ಹೇಗೆ, ಯಾವಾಗ, ಯಾವ ರೀತಿ ಎಂದು ನನ್ನನ್ನು ನೀವು ಕೇಳಬಾರದು. ಕರ್ಮ ಸ್ವರೂಪ ಬಹಳ ಕ್ಲಿಷ್ಟವಾದದ್ದು ಮತ್ತು ಸೂಕ್ಷ್ಮವಾದದ್ದು, ಕೆಲವು ಕರ್ಮಗಳಿಗೆ ಭೌತಿಕ ಕಾಲ ಮತ್ತು ಯೋಗ ಕಾಲ, ಬೇರೇ ಬೇರೆಯಾಗಿರುವವು. ಭೌತಿಕ ಕಾಲದನುಸಾರ, ಈ ಮಹಾಲಯ ಪಕ್ಷದಲ್ಲೇ ಈ ಒಂದು ಕರ್ಮ ಆಚರಿಸಲೇಬೇಕು. ಆದರೆ ಯೋಗ ಬರಲಿಲ್ಲ. ಆದ್ದರಿಂದ ಮುಂದಕ್ಕೆ ತಳ್ಳಲಾಗಿದೆ" ಎಂದು ಶ್ರೀಗಳು ವಿಷಯ ವಿವರಿಸಿದರು.

ಆಗ ನಾನು, ಶ್ರೀ ಭಟ್ಟರನ್ನು, ಈ ಭೌತಿಕ ಕಾಲ, ಯೋಗ ಕಾಲಗಳ ಬಗ್ಗೆ ವಿವರಿಸಲೂ ಕೋರಿದೆ. ಆಗ ಆ ಮಹಾಶಯರು, "ಭೌತಿಕ ಕಾಲ, ಭೌತಿಕ ದೇಶ ಅಲ್ಲದೇ ಮಾನಸಿಕ ಕಾಲ, ಮಾನಸಿಕ ದೇಶ ಸಹಾ ಇವೆ. ಇವುಗಳ ಜೊತೆ ಯೋಗ ಕಾಲ, ಯೋಗ ದೇಶ ಸಹಾ ಇವೆ. ಒಬ್ಬ 60 ವರುಷದವನು, ನಿರಂತರ 20 ವರುಷದವನಂತೆ ವಿದ್ಯಾರ್ಜನೆಯಲ್ಲಿದ್ದರೇ, ಆತನ ಭೌತಿಕ ಕಾಲ 60 ವರುಷ ಮಾನಸಿಕ ಕಾಲ 20 ವರ್ಷ ಎನ್ನುವರು.

ಹಾಗೆಯೇ ಒಬ್ಬ 20 ವರ್ಷದ ಯುವಕನಿಗೆ 60 ವರುಷದವನಿಗಿರುವ ಬಾಧ್ಯತೆ ಭಾರಗಳಿದ್ದಲ್ಲಿ ಅವನ ಭೌತಿಕ ಕಾಲ 20 ವರುಷವೆಂದು, ಮಾನಸಿಕ ಕಾಲ 60 ವರುಷವೆಂದು ಲೆಕ್ಕಿಸಲಾಗುವುದು. ಭೌತಿಕ ಕಾಲ ಶರೀರಕ್ಕೆ ಸಂಬಂಧಿಸಿರುವುದು. ಭೌತಿಕ ಮಾನಸಿಕ ಕಾಲಗಳು ಒಂದೇ ಕಾಲವನ್ನು ಹೊಂದಿರಬೇಕೆನ್ನುವ ನಿಯಮವಿಲ್ಲ. ಅವು ಬೇರೆ ಬೇರೆಯಾಗಿರಬಹುದು" ಎಂದು ತಿಳಿಸಿದರು.

## ಕಾಶಿಯಲ್ಲಾಗಲಿ, ಪೀಠಾಪುರದಲ್ಲಾಗಲಿ ನಿವಾಸಿಸಬೇಕೆಂದು ಯಾರು ಮನಸ್ಫೂರ್ತಿಯಾಗಿ ಸಂಕಲ್ಪ ಮಾಡುವರೋ, ಅವರಿಗೆ ಅದು ತಪ್ಪದೇ ಆಗುವುದು. ಶರೀರ ಮಾತ್ರ ಒಂದು ಕ್ಷೇತ್ರದಲ್ಲಿರುತ್ತಾ ಮನಸ್ಸು ಬೇರೆ ಇದ್ದಲ್ಲಿ, ಅಂತಹ ಕ್ಷೇತ್ರವಾಸದ ಫಲ ಲಭಿಸದು

**ನಾನು ಕಾಶೀಯಾತ್ರೆಗೆ ಹೋಗುತ್ತಿದ್ದೇನೆ. ಸದಾ ಕಾಶೀಯಲ್ಲೇ ವಾಸಿಸುವೆನೆಂದು ಯಾರು ಮನಸ್ಫೂರ್ತಿಯಾಗಿ ಸಂಕಲ್ಪ ಮಾಡುವರೋ ಅಂತವರಿಗೆ ಕಾಶೀವಾಸ ಫಲ ಲಭಿಸುವುದು. ಕಾರಣ ಆತನು ಮಾನಸಿಕವಾಗಿ ಕಾಶೀಯಲ್ಲೇ ವಾಸಿಸುತ್ತಿದ್ದಾನೆ! ಆದ್ದರಿಂದ ಭೌತಿಕವಾಗಿ ಆತ ಯಾವುದೇ ದೇಶದಲ್ಲಿದ್ದರೂ ಮಾನಸಿಕ ದೇಶ ಮಾತ್ರ ಕಾಶೀ ಆಗಿದೆ.** ಹಾಗೆಂದು, ಕಾಶೀಯಲ್ಲಿರುತ್ತಾ

ಗೋಹತ್ಯಕಾರನಿಗೆ ಕಾಶೀಫಲ ಶೂನ್ಯ! ಗಂಗೆಯಲ್ಲೇ ನಿಂತು, ಮೀನಿಗಾಗಿ ಕಾದಿರುವ ಬಕನಿಗೆ ಗಂಗಾಸ್ನಾನ ಫಲ ಲಭಿಸದು. ಪೀಠಿಕಾಪುರದಲ್ಲೇ ಇರುತ್ತಾ, ಶ್ರೀಪಾದರನ್ನು ದರ್ಶಿಸುತ್ತಿದ್ದರೂ, ಅವನ ಮಾನಸಿಕ ಕಾಲ ಮತ್ತು ದೇಶ ತಕ್ಕಂತೆ ಇಲ್ಲದಿದ್ದರೇ ಆತ ಪೀಠಿಕಾಪುರ ನಿವಾಸಿ ಆಗಿರಲಿ, ಶ್ರೀಗಳ ಆಶ್ರಿತನಾಗಿರಲಿ, ಲೆಕ್ಕಕ್ಕೆ ಬಾರನು! ಯೋಗ ಕಾಲ ಮತ್ತು ದೇಶ ಎಂಬುವವು ಆಧ್ಯಾತ್ಮಿಕ ಶಕ್ತಿ ಸಂಪನ್ನರಿಗೆ ಮಾತ್ರ ಅರ್ಥವಾಗುವಂತಹ ವಿಷಯಗಳು. ಶ್ರೀಪಾದರ ಅನುಗ್ರಹದಿಂದ ಯಾರಿಗೆ ಯಾವಾಗ ಯೋಗ ಕಾಲ ಸಂಭವಿಸುವುದೋ, ಯಾವ ಪ್ರದೇಶ ಯೋಗ ದೇಶವೆಂದು ಉದ್ಭವಿಸುವುದೋ ಅದು ದಿವ್ಯ ರಹಸ್ಯ.

ಮಾನವನಿಗೆ ಕರ್ಮ ಮಾಡಲು ಅಧಿಕಾರ ಉಂಟು. **ಸತ್ಕರ್ಮ ಸುಖವನ್ನು, ದುಷ್ಕರ್ಮ ದುಃಖವನ್ನು ತಪ್ಪದೇ ತರುವುದು. ಪೂರ್ವಜನುಮ ಕರ್ಮಬಂಧಗಳು ನಮ್ಮನ್ನು ಹಿಂಬಾಲಿಸಿ ಬಾಧಿಸುತ್ತಿದ್ದರೂ, ಸದ್ಗುರು ಕೃಪೆಯಿಂದ ಯೋಗ ಕಾಲ ಬರುವುದು. ಆಗ ಯಾವ ಸ್ಥಳದಲ್ಲಿ ಅ ಕರ್ಮ ಕಳೆಯಬೇಕೋ ಆ ಯೋಗ ದೇಶದಲ್ಲಿ ಆ ಕರ್ಮ ಕಳೆಯುವುದು.** ಇದು ವಿಚಿತ್ರವಾದ ವಿಷಯ! ಪೀಠಿಕಾಪುರದಲ್ಲಿ ನರಸಿಂಹ ವರ್ಮರ ಬಳಿ ಶಿವಯ್ಯ ಎನ್ನುವ ಸೇವಕನೊಬ್ಬನಿದ್ದನು. ಒಮ್ಮೆ ಅಕಸ್ಮಾತ್ತಾಗಿ ಶ್ರೀಪಾದರು ಅವನನ್ನು ತೀವ್ರವಾಗಿ ನೋಡಿದರು. ತಕ್ಷಣ ಅವನ ಮನೋಪ್ರವೃತ್ತಿ ಬದಲಾಯಿಸಿ, ನಿದ್ದೆ ಆಹಾರ ಬಿಟ್ಟು,'' ನಾನೇ ಈ ಸೃಷ್ಟಿಸ್ಥಿತಿಲಯ ಕಾರಕನು, ಆದಿಮೂಲನು, ನನ್ನಲ್ಲೇ ಸಂಪೂರ್ಣ ಸೃಷ್ಟಿ ಉದ್ಭವಿಸಿ, ನನ್ನಿಂದಲೇ ವೃದ್ಧಿ ಹೊಂದಿದ ನಂತರ, ನನ್ನಲ್ಲೇ ಲಯವೂ ಆಗುತ್ತಿದೆ'' ಎಂದು ಹುಚ್ಚು ಹುಚ್ಚಾಗಿ ಮಾತಾಡುತ್ತಿದ್ದನು. ನರಸಿಂಹ ವರ್ಮರಿಗೆ ಬಹಳ ಕರುಣೆ ಹುಟ್ಟಿ ಅವನನ್ನು ರಕ್ಷಿಸಿ ಎಂದು ಶ್ರೀಪಾದರನ್ನು ಬೇಡಿದರು. ಆ ಇಬ್ಬರನ್ನೂ ಶ್ರೀಪಾದರು ಒಂದು ಸ್ಮಶಾನಕ್ಕೆ ಕೊಂಡೊಯ್ದು, ಶಿವಯ್ಯನಿಂದ ಒಣ ಔದುಂಬರ ಕಡ್ಡಿಗಳನ್ನು ದಹನ ಮಾಡಿಸಿದರು, ಆಗ ಶಿವಯ್ಯನಿಗೆ ಆ ವಿಚಿತ್ರ ಮನಃಪ್ರವೃತ್ತಿ ತೊಲಗಿತು.

ನರಸಿಂಹ ವರ್ಮರಿಗೆ ಇದೆಲ್ಲವೂ ಆಶ್ಚರ್ಯಕರವಾಗಿತ್ತು. ಆಗ ಶ್ರೀಪಾದರು, ''ತಾತಾ! ಇದರಲ್ಲಿ ಆಶ್ಚರ್ಯ ಪಡಬೇಕಾದ್ದಷ್ಟೇನೂ ಇಲ್ಲ. ವಾಯಸಪುರ ಅಗ್ರಹಾರದ ಒಬ್ಬ ಪಂಡಿತನಿಗೆ ಸದಾ ನನ್ನನ್ನು ಕಂಡು, 'ಎಂತಹಾ ಅಪಚಾರ! ವೇದ ಸ್ವರೂಪನಾದ ಆ ಪರಮಾತ್ಮನೆಲ್ಲಿ, ಎಳೇ ಕೂಸು, ಶ್ರೀಪಾದನೆಲ್ಲಿ! ಇವನು ಸೃಷ್ಟಿ, ಸ್ಥಿತಿ, ಲಯ ಕಾರಕನಂತೆ. ಇದು ಪರಮ ಸುಳ್ಳು. ಜಂಭದ ಮಾತು' ಎಂಬ ಊಹೆ ಇತ್ತು. ಇತ್ತೀಚೆಗೆ ಆ ಪಂಡಿತ ತೀರಿಹೋದನು. ಅವನಿಗೆ ಬ್ರಹ್ಮರಾಕ್ಷಸತ್ವ ಪ್ರಾಪ್ತಿಸಿತು. ಒಂದಾನೊಂದು ಜನುಮದಲ್ಲಿ ಶಿವಯ್ಯ, ಆ ಪಂಡಿತನಿಗೆ ಸ್ವಲ್ಪ ಋಣಗ್ರಸ್ಥನಾಗಿದ್ದನು. ನಾನು ಯೋಗ ಕಾಲವನ್ನು ಸೃಷ್ಟಿಸಿ, ಯೋಗ ದೇಶವಾಗಿ ಸ್ಮಶಾನವನ್ನು ನಿರ್ಣಯಿಸಿ, ಯೋಗ ಕರ್ಮವಾಗಿ ಮುತ್ತುಗ ಮರ ಸೌದೆಯಿಂದ, ದಹನ ಸಂಸ್ಕಾರ ಆ ಪಂಡಿತನಿಗೆ ಮಾಡಿಸಿ, ಅವನನ್ನು ಬ್ರಹ್ಮರಾಕ್ಷಸತ್ವದಿಂದ ಬಿಡುಗಡೆ ಮಾಡುವುದಲ್ಲದೇ, ನಮ್ಮ ಶಿವಯ್ಯನನ್ನು ಬ್ರಹ್ಮರಾಕ್ಷಸನಿಂದ ಬಿಡುಗಡೆ ಮಾಡಿದೆ'' ಎಂದರು.

''ಮಗೂ, ಶಂಕರ ಭಟ್ಟಾ! ಪೀಠಿಕಾಪುರದಲ್ಲಿ ಅವತರಿಸಿದ ಈ ಮಹಾ ತೇಜಸ್ಸು, ಧರ್ಮಜ್ಯೋತಿ, ಇಂದು ಕುರುಂಗಡ್ಡೆಯನ್ನು ಪವಿತ್ರಗೊಳಿಸುತ್ತಿದೆ. **ಶ್ರೀಪಾದರ ಸಂಕಲ್ಪವನ್ನನುಸರಿಸಿ, ಗ್ರಹಗಳು ಫಲಿತಗಳನ್ನು ಕೊಡುತ್ತಿರುವವು. ಯಾವ ವಿಧವಾದ ಜ್ಯೋತಿಷ್ಯ ಫಲಗಳು ಆದರೂ, ಒಂದು ಭೌತಿಕ ಕಾಲ, ಭೌತಿಕ ದೇಶದಲ್ಲೇ ನಡೆಯಬೇಕೆನ್ನುವ ನಿಯಮವಿಲ್ಲ. ಅದು ಯೋಗ ಕಾಲವನ್ನನುಸರಿಸಿ, ಯೋಗ ದೇಶವನ್ನನುಸರಿಸಿ ನಿರ್ಣಯಿಸಲಾಗುತ್ತಿರುವವು.**

## ಶ್ರೀಪಾದರು ಅನುಗ್ರಹಿಸಿ ಪ್ರಾರಬ್ಧಕರ್ಮ, ಸಾವು ಸಹ ತಪ್ಪಿಸಬಲ್ಲರು

ಶ್ರೀಪಾದರು ಕಲ್ಪಿಸಿದ ಜ್ಯೋತಿಷ್ಯ ಪ್ರಕಾರ 1000 ವರುಷಗಳ ನಂತರ ನಡೆಯಬೇಕಾದ ಸಂಘಟನೆಗಳನ್ನು ಈಗಲೇ ನಡೆಸಬಲ್ಲರು. ಅಂದರೇ ಯೋಗ ಕಾಲವನ್ನು ಇಂದೇ ನಿರ್ಣಯಿಸಬಲ್ಲರು. ಎಲ್ಲೊ ದೂರದಲ್ಲಿ ನಡೆಯಬೇಕಾದ್ದದ್ದನ್ನು ಇಲ್ಲೇ ನಡೆಯಿಸಿ, ಯೋಗ ದೇಶವನ್ನು ನಿರ್ಧರಿಸಬಲ್ಲರು. ಸಂಘಟನೆಗಳು ದೇಶ ಕಾಲದಲ್ಲಿ ಅಲ್ಲವೇ ನಡೆಯುವುದು? ಶ್ರೀಗಳು ಆ ದೇಶ ಕಾಲವನ್ನು ಅವರಿಗೆ ಇಷ್ಟಬಂದಂತೆ ಬದಲಾಯಿಸಬಲ್ಲರು. ಒಮ್ಮೆ ಶ್ರೇಷ್ಠಿಗಳ ಮನೆಯಲ್ಲಿ ದೇವರಿಗೆ ತೆಂಗಿನ ಕಾಯಿಯನ್ನು ತಾವೇ ಒಡೆದರು. ಅದು ಒಡೆದು ರಕ್ತ ತುಂಬಿತ್ತು. ಆಗ ಶ್ರೀಗಳು, **"ತಾತಾ! ನಿನಗಿಂದು ಸಾವು ಬರಲಿತ್ತು. ನಿನ್ನ ತಲೆ ಒಡೆದು ರಕ್ತ ಹರಿಯಬೇಕಿತ್ತು. ಅದನ್ನು ನಾನು ಈ ತೆಂಗಿನ ಕಾಯಿಗೆ ಬದಲಾಯಿಸಿ, ನಿನ್ನ ಪ್ರಾಣ ಉಳಿಸಿರುವೆನು"** ಎಂದು ತಿಳಿಸಿ, ಎಲ್ಲರನ್ನೂ ಆಶ್ಚರ್ಯಗೊಳಿಸಿದರು. ಆಗ ಸಂಜೆ ಆಗಲೂ, ನಾವು ಮುವ್ವರೂ ಶ್ರೀಪಾದರಿಂದ ಅಪ್ಪಣೆ ಪಡೆದು, ಕುರುಂಗಡ್ಡೆ ಬಿಟ್ಟು ಕೃಷ್ಣ ನದಿಯ ಮತ್ತೊಂದು ಕಡೆ ಬಂದೆವು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**



ಶ್ರೀ ನಗರೇಶ್ವರಸ್ವಾಮಿ, ಪೆನುಗೊಂಡ



ಶ್ರೀ ನಗರೇಶ್ವರಸ್ವಾಮಿ, ಪೆನುಗೊಂಡ



ಶ್ರೀ ಮಲ್ಲಿಕಾರ್ಜುನಸ್ವಾಮಿ ಹಾಗೂ ಶ್ರೀ ಭ್ರಮರಾಂಭಾ ದೇವಿ, ಶ್ರೀಶೈಲಂ



ಶ್ರೀ ದ್ರಾಕ್ಷಾರಾಮದ ಭೀಮೇಶ್ವರ



ಅಮರಾವತಿಯ ಶ್ರೀ ಅಮರಲಿಂಗೇಶ್ವರ



ಶ್ರೀ ಕೋಟಿಫಲೀಶ್ವರ



ಕರೀಂನಗರದ ಶ್ರೀ ಕಾಳೇಶ್ವರ ಹಾಗೂ ಶ್ರೀ ಮುಕ್ತೇಶ್ವರ



ಶ್ರೀ ಕುಕ್ಕುಟೇಶ್ವರ



ಶ್ರೀ ಕಾಳಹಸ್ತೀಶ್ವರ



ಶ್ರೀ ಮಹಾನಂದೀಶ್ವರ



ಶ್ರೀ ತ್ರಿಪುರಾಂತಕೇಶ್ವರ

## ಅಧ್ಯಾಯ - 23

# ಶಿವಪೂಜೆ ರಹಸ್ಯ ವಿವರ

### ಶಿವಯೋಗಿ ಭಕ್ತಿ ಮಹಿಮೆ - ಶ್ರೀಪಾದರ ಉಪದೇಶ

ನಾನು, ಕೃಷ್ಣಾನದಿ ದಾಟಿ ಕುರುಂಗಡ್ಡೆ ಸೇರುವಷ್ಟರಲ್ಲಿ ಧರ್ಮಗುಪ್ತನೆಂಬ ಸದ್ವೈಶ್ಯನೊಬ್ಬನು ಪರಿಚಯವಾದನು. ಆತನೂ ಶ್ರೀಪಾದರ ದರ್ಶನಕ್ಕಾಗಿ ಕುರುಂಗಡ್ಡೆ ಪ್ರಯಾಣದಲ್ಲಿದ್ದನು. ಆತ ಶ್ರೀ ವೆಂಕಟಪ್ಪಯ್ಯ ಶ್ರೇಷ್ಠಿಗಳ ಬಳಗವೆಂದೂ ತಿಳಿದುಬಂತು. ನನಗೆ ಬಹಳ ಆಶ್ಚರ್ಯವಾಯಿತು. ಏಕೆಂದರೇ, ನನಗೆ ಪರಿಚಯವಾಗುತ್ತಿರುವ ಶ್ರೀಪಾದರ ಭಕ್ತರೆಲ್ಲರೂ, ಶ್ರೀಗಳ ದಿವ್ಯಚರಿತೆಯನ್ನು, ಲೀಲೆಗಳನ್ನು, ಮಹಿಮೆಗಳನ್ನು ತಿಳಿಸುವುದರಲ್ಲಿ ಒಂದೊಂದು ಸುಂದರ ವಿಶೇಷತೆ ಹೊಂದಿರುವರು! ಶ್ರೀಗಳ ದಿವ್ಯಚರಿತ್ರೆಯಲ್ಲಿ, ಒಂದು ವರುಷದಲ್ಲಿ ನಡೆದ ಕೆಲವು ಸಂಘಟನೆಗಳನ್ನು ಮಾತ್ರ ತಿಳಿಸಲಾಗಿವೆ. ಎಂದೂ ಕೇಳಲಾದ, ಒಂದರಿಂದ ಒಂದು ಭಿನ್ನವಾದ, ಚಿತ್ರವಿಚಿತ್ರ ಘಟನೆಗಳು! ಇಲ್ಲಿಯವರಿಗೂ ಶ್ರೀಪಾದರ 10 ವರುಷಗಳವರೆಗೂ ನಡೆದ ಲೀಲಾ ವಿಶೇಷಗಳು ನನಗೆ ಕ್ರಮಬದ್ಧವಾಗಿ, ಈ ಭಕ್ತ ಪರಿಚಯಸ್ಥರಿಂದ ತಿಳಿಸಲಾಗಿದೆ. ಇದೀಗ ಪರಿಚಯವಾದ ಶ್ರೀಧರ್ಮಗುಪ್ತರು, ಶ್ರೀಪಾದರ 11ನೆಯ ವರುಷದ ಲೀಲಾ ವಿಶೇಷಗಳನ್ನು ತಿಳಿಸಿದರೇ, ಅದೆಷ್ಟು ಚೆನ್ನಾ ಎಂದು ನೆನೆಯುತ್ತಿದ್ದ ಸಮಯದಲ್ಲೇ, ಶ್ರೀ ಧರ್ಮಗುಪ್ತರು, ನುಡಿಯಲಾರಂಭಿಸಿದರು, "ಸ್ವಾಮಿ, ಶಂಕರ ಭಟ್ಟರೇ! ನಾನು ಒಬ್ಬ ಶಿವಭಕ್ತನು. ಶ್ರೀಪಾದರ 11ನೇ ವರುಷದಲ್ಲಿ, ಶಿವಯೋಗಿ ಓರ್ವನು ಪೀಠಿಕಾಪುರಕ್ಕೆ ಬಂದನು. ಬಹಳ ಯೋಗ್ಯನು. ಕರತಲ ಭಿಕ್ಷೆ ಮಾಡುತ್ತಿದ್ದನು. ಅಂದರೇ ಯಾವುದೇ ಚೀಲವಾಗಲಿ, ತಟ್ಟೆ, ಪಾತ್ರೆ ತನ್ನ ಬಳಿ ಇಟ್ಟುಕೊಳ್ಳುತ್ತಿರಲಿಲ್ಲ, ಹುಚ್ಚನಂತೆ ಕಾಣುತ್ತಾ ಕೇವಲ ಕೈಯಲ್ಲೇ ತಿಂಡಿತೀರ್ಥ ಪಡೆಯುತ್ತಿದ್ದನು. ಆತ ಮೊದಲು ಶ್ರೀ ಕುಕ್ಕುಟೇಶ್ವರ ಆಲಯಕ್ಕೆ ಹೋಗಲು, ಅಲ್ಲಿನ ಅರ್ಚಕರು ಧೂಳು ಭರಿತ ಮತ್ತು ಹುಚ್ಚುರೂಪದ ಆಕಾರಕ್ಕೆ ಆತನನ್ನು ಒಳಗೆ ಸೇರಿಸಲಿಲ್ಲ. ತನ್ನ ದೇಹದ ಮೇಲೆ ಪ್ರಜ್ಞೆ ಇಲ್ಲದೇ ಸುತ್ತುತ್ತಾ ಸದಾ ಶಿವ ಪಂಚಾಕ್ಷರಿ ಜಪಿಸುವಂತಹ ಅವಧೂತನು, ಆತನು! ಆಗ ನಾನು ಕುದುರೆಯ ಮೇಲೆ ನನ್ನ ಬಾವನಾದ ವೆಂಕಟಪ್ಪಯ್ಯ ಶ್ರೇಷ್ಠಿಗಳ ಮನೆಗೆ ಹೋಗುತ್ತಿದ್ದೆನು. ದಾರಿಯಲ್ಲಿನ ಕುಕ್ಕುಟೇಶ್ವರಾಲಯ ದರ್ಶಿಸುವುದು ನನ್ನ ಪದ್ಧತಿ. ನಾನು ವೈಶ್ಯ ಪ್ರಮುಖನಾದ ಕಾರಣ, ಅರ್ಚಕರು ನನ್ನ ಹೆಸರಲ್ಲಿ ಘನವಾಗಿ ಪೂಜೆ ಸಲ್ಲಿಸಿದರು. ಅವರಿಗೆ ಒಳ್ಳೆಯ ಕಾಣಿಕೆ ಕೊಡುವುದು ಸಹಾ ನನ್ನ ಪದ್ಧತಿ. ನಾನು 5 ವರಹಗಳು ಕೊಟ್ಟು, ಅವರನ್ನು ಹಂಚಿಕೊಳ್ಳಲೂ ಹೇಳಿದೆ. ಅವರ ಆರ್ಥಿಕ ಕಷ್ಟ, ನಷ್ಟಗಳನ್ನು ಮತ್ತಿತರೆ ನೋವುಗಳನ್ನು ನನಗೆ ತಿಳಿಸುತ್ತಾ, ನಾನು ಧರ್ಮರಕ್ಷಣೆಗಾಗಿ ನಿಂತಿರುವೆನೆಂದು ನಂಬಿರುವ ಜನ ಅವರು. ಅಷ್ಟರಲ್ಲಿ ಆಚೆಯಿಂದ ಜೋರಾಗಿ ಶಿವಯ್ಯ ಒಳಕ್ಕೆ ಬಂದನು. ಅವನ ಹಿಂದೆಯೇ 2 ನಾಗರ ಹಾವುಗಳು ಬರಲು, ಅರ್ಚಕರು ಹೆದರಿದರು.

ಆಗ ಶಿವಯೋಗಿ, "ಅರ್ಚಕ ಸ್ವಾಮಿಗಳೇ! ನಿಮಗೆ ಭಯ ಬೇಡ. ನಾವು ಪೂಜಿಸುವ ಶ್ರೀ ಕುಕ್ಕುಟೇಶ್ವರನಿಗೆ ಇವು ಆಭರಣಗಳು. ತಂದೆಯನ್ನು ಮಕ್ಕಳು ತಬ್ಬಿಕೊಳ್ಳುವಂತೆ, ಈ ನಾಗಗಳು ನಮ್ಮೆಲ್ಲರ ತಂದೆಯಾದ ಕುಕ್ಕುಟೇಶ್ವರನ್ನು ತಬ್ಬಿಕೊಳ್ಳುವ ಆತುರದಲ್ಲಿವೆ. ಇವು ನಮ್ಮ ಸಹೋದರರಂತೆ, ಆದ್ದರಿಂದ ಇವನ್ನು ನೋಡಿ ಹೆದರುವುದೋ, ಓಡಿಹೋಗುವುದೊ, ಇಲ್ಲವೇ

ಸಾಯಿಸುವುದೋ ಮಹಾಪಾಪ. ಅರ್ಚಕರ ವಿಶೇಷ ಪೂಜೆ ಇವುಗಳನ್ನು ಇಲ್ಲಿಗೆ ಬರ ಮಾಡಿಕೊಂಡಿದೆ. ನಾಗಾಭರಣನಾದ ಶ್ರೀ ಕುಕ್ಕುಟೇಶ್ವರರನ್ನು ಶ್ರದ್ಧೆಯಿಂದ ಪೂಜಿಸಿ, ಸುಸ್ವರದಿಂದ, ನಮಕ ಚಮಕ ಹೇಳೋಣ'' ಎಂದರು.

ಅರ್ಚಕರಿಗೆ ಏನು ಮಾಡಲೂ ತೋಚಲಿಲ್ಲ. ಅರ್ಚಕರ ಪರಿಚಯದಲ್ಲಿ ಕೆಲವರು ಹೊಗಳಭಟ್ಟರು ಇದ್ದರು. ಅಲ್ಲಿಗೆ ಬರುವ ಭಕ್ತರಲ್ಲಿ ಧನವಂತರೊಂದಿಗೆ ಅಧಿಕ ಸಂಭಾವನೆಗಾಗಿ ಕೆಲವು ಒಳ್ಳೆಯ ಮಾತುಗಳು ನುಡಿಯುತ್ತಿದ್ದರು. ಆ ಅರ್ಚಕರಲ್ಲಿ ಓರ್ವರು ಸೂರ್ಯಚಂದ್ರ ಶಾಸ್ತ್ರಿ, ನಿಷ್ಠಾನುಷ್ಠಾನಪರ, ಒಳ್ಳೆಯ ಪಂಡಿತ, ಶ್ರೀಪಾದರ ಪರಮಭಕ್ತನೂ ಸಹ. ಆತ ಶ್ರೀಪಾದರನ್ನು ಸ್ಮರಿಸಿ, ನಮಕ ಚಮಕಗಳನ್ನು ಸರಾಗವಾಗಿ ಹೇಳುತ್ತಿದ್ದನು. ಆ ನಾಗರಹಾವುಗಳೂ ಸಹಾ ಹೆಡೆಬಿಟ್ಟು, ಆ ರಾಗತಾಳಕ್ಕೆ ಅನುಗುಣವಾಗಿ ತೂಗುತ್ತಾ, ತಮ್ಮ ಸಂತಸ ತೋರಿಸುತ್ತಿದ್ದವು.

ಸೂರ್ಯಚಂದ್ರ ಶಾಸ್ತ್ರಿ ಶಿವಯೋಗಿಯನ್ನು, ಬಾಪನಾರ್ಯರ ಮನೆಗೆ ಕರೆತಂದರು. ಸಂತೃಪ್ತಿಕರವಾದ ಊಟ ಬಡಿಸಲಾಯಿತು. ನಂತರ ಅವರಿಗೆ ಶ್ರೀಪಾದರ ದರ್ಶನವೂ ಆಯಿತು. ಶ್ರೀಪಾದರು ಅವರಿಗೆ ಶಿವಶಕ್ತಿ ರೂಪಿಯಾಗಿ ದರ್ಶನಕೊಟ್ಟರು. 3 ದಿನ, ಶಿವಯೋಗಿ ಸಮಾಧಿ ಸ್ಥಿತಿಯಲ್ಲಿದ್ದ ನಂತರ, ಶ್ರೀಗಳು ತಮ್ಮ ಹಸ್ತಗಳಿಂದಲೇ ಇತ್ತ ಅನ್ನ ತಿಂದರು. ಆಗ ಶ್ರೀಗಳು, ''ಮಗು! ಸನಾತನ ಧರ್ಮ ಹೇಳುವ ಧರ್ಮ ಕರ್ಮಗಳನ್ನು ತಪ್ಪದೇ ಆಚರಿಸಬೇಕು. ಅವು ಕಲ್ಪನೆಗಳೂ ಅಲ್ಲ, ಅಸತ್ಯಗಳೂ ಅಲ್ಲ. ಅವುಗಳ ಸಾಮಾನ್ಯ ಅರ್ಥ ಒಂದಾದರೇ, ನಿಗೂಢ ರಹಸ್ಯ ಮನಸ್ಸಿಗೆ ಬೇರೇ ತಟ್ಟುವವು! ಋತುಗಳಿಗೆ ಕಾರಕರಾದ ಸೂರ್ಯಚಂದ್ರರಲ್ಲಿ, ಸೂರ್ಯನು ಪರಮಾತ್ಮ ಸ್ವರೂಪನಾದರೇ, ಚಂದ್ರನು ಮನಸ್ಸಿನ ರೂಪ. ಚಿತ್ಸೂರ್ಯ ತೇಜಸ್ಸು, ಮನೋರೂಪಿಯಾದ ಚಂದ್ರನೂ ಸೇರಿದರೇನೇ ಸೃಷ್ಟಿಕಾರ್ಯ ನಡೆಯುವುದು. ಅಮಾವಾಸ್ಯೆ ಮಾಯೆಗೆ ಗುರುತು. ಈ ಮಾಯಾ ಸ್ವರೂಪವೇ ಮೊದಲಿಗೆ, ವಸುವುಗಳೆಂಬ ಕಲೆಗಳನ್ನುತ್ಪತ್ತಿ ಮಾಡುತ್ತಿದೆ. ಚಂದ್ರಬಿಂಬದಲ್ಲಿ ಕಲೆಗಳನ್ನುಂಟು ಮಾಡುವುದು, ಪುನಃ ಅವನ್ನು ತನ್ನಲ್ಲಿ ಲಯಗೊಳಿಸಿಕೊಳ್ಳುವುದು, ನಡೆಯುತ್ತಿದೆ. ಪರಮಾತ್ಮನ ತೇಜಸ್ಸು, ಮಾಯಾಮನೋರೂಪ ಚಂದ್ರನಲ್ಲಿ ಯಾವ ರೀತಿ ಪ್ರಸರಿಸುತ್ತಿದೆಯೋ ಅದೇ ರೀತಿ, ಚಂದ್ರನಲ್ಲಿ ಸೂರ್ಯಕಿರಣ ಪ್ರಸಾರವಾಗುತ್ತಿದೆ. ಮಾಯೆ ಮತ್ತು ಅಮಾವಾಸ್ಯೆ ಜಡಸ್ವರೂಪಗಳಾದರೂ, ಅವುಗಳಿಂದ ಹುಟ್ಟಿದ ಜಗತ್ತು ಮಾತ್ರ ಚಿತ್‌ಸಾನ್ನಿಧ್ಯದನುಸಾರ, ಚಿತ್ ಜಡಾತ್ಮಕವಾಗಿದೆ. ವಸಂತ ಮುಂತಾದ ಋತುಗಳನಾದ ಯಾವ ವಿಧವಾಗಿ ಸೃಷ್ಟಿಗೆ ಕಾರಣವಾಗುತ್ತಿದೆಯೋ ಅದೇ ರೀತಿ, ಸ್ತ್ರೀಯರ ಆರ್ತನಾದ ಶಿಶು ಜನನಕ್ಕೆ ಕಾರಣೀಭೂತವಾಗುತ್ತಿದೆ. ಬ್ರಹ್ಮಜ್ಞಾನ ವಾಂಛೆ ಮಹಿಳೆಯ ರಜೋಜಾತ ಜೀವಗಣಕ್ಕೆ ಮಾತ್ರ ಇರುವುದು. ಮಹಿಳೆಯರಲ್ಲಿನ ರಜಸ್ಸು ಅಂದರೇ ಆರ್ತವು ಬ್ರಹ್ಮನಿಗೆ ವಿರುದ್ಧವಾದ್ದರಿಂದ, ಇದು ಬ್ರಹ್ಮಹತ್ಯೆಯಿಂದ ಹುಟ್ಟಿದೆ ಎಂದು ಪಂಡಿತರ ಊಹೆ.

ಛಂದಸ್ಸಿನಿಂದ ಮುಚ್ಚಲಾಗಿದ್ದ ಕಾರಣ, ವೇದ ರಹಸ್ಯಗಳನ್ನು 'ಛಾಂದಸ'ವೆನ್ನುವರು. ಹರಿಯುವ ಲಕ್ಷಣ ಆರ್ತವಕ್ಕೆ ಇರುವುದು. ಆದ್ದರಿಂದ, ರಜಸ್ವಲೆಯಾದ ಸ್ತ್ರೀಯನ್ನು 3 ದಿನ ದೂರವಾಗಿಡುವರು. ಸ್ವರ್ಗ, ಸ್ವತಸಿದ್ಧಕಾಂತಿ ಉಳ್ಳ ತೇಜೋಗೋಳವು. ಮರ್ತ್ಯಲೋಕವೆಂಬುದು, ಸಾವು ಹುಟ್ಟುವಿಕೆಗಳಿರುವ ಲೋಕ. ಪಾತಾಳಗಳೆಲ್ಲವೂ ಸೂರ್ಯಕಾಂತಿಯಿಂದಲೇ ಪ್ರಕಾಶಗೊಳ್ಳುತ್ತಿರುವುದರಿಂದ, ಇವನ್ನು ''ಪೃಶ್ನಿಗಳು'' ಎನ್ನುವರು. ಸಪ್ತ ಪಾತಾಳಗಳಿಗೂ ಜಾತವೇದಾದಿ ಅಧಿಷ್ಠಾನ ದೇವತೆಗಳಿರುವರು. ನಾವು ವಾಸಿಸುವ ಭೂಮಿ, ಈ ಸಪ್ತ ಪಾತಾಳಗಳಿಗಿಂತಾ ಮುಂದಿದೆ. ಇದರ ಆಧಿದೇವತೆಯೇ 'ಅಗ್ನಿ.' ಈ 8

ಅಧಿದೇವತೆಗಳಿಗೂ ಅಷ್ಟವಸುಗಳೆಂದು ಹೆಸರುಗಳಿವೆ. ಸೂರ್ಯಕಾಂತಿಯಿಂದ ಶೋಭಾಯಮಾನ ಹೊಂದುತ್ತಿರುವುದರಿಂದ, ಇವರನ್ನು ವಸುಗಳೆನ್ನುವರು. ಈ ಎಂಟು ಗೋಳಗಳಿಗೂ ಮಧ್ಯದಲ್ಲಿರುವ ವಾಯುಸ್ಕಂಧಗಳನ್ನು ಸಪ್ತಸಮುದ್ರಗಳನ್ನುವರು. ವಾಯುಗಳಿಗೆ ಸಮುದ್ರವೆಂಬ ಗುರುತು ಇದೆ ಎಂದು ಯಾಜ್ಞ ಮಹರ್ಷಿ ತಿಳಿಸಿದರು. ಸಾಮಾನ್ಯ ಮಾನವರು ಸಪ್ತ ಸಮುದ್ರಗಳನ್ನು ಜಲ ರೂಪದಲ್ಲಿ ಕಾಣುವರು. ಆದರೇ ಅದು ಸರಿ ಅಲ್ಲ!'' ಎಂದು ತಿಳಿಸಿದರು.

## ಶಿವ ಮಹಿಮೆ

## ಆಂಧ್ರ ಪ್ರದೇಶದ, ಏಕಾದಶ ಶಿವ ಕ್ಷೇತ್ರಗಳ ಶಿವ ಸ್ವರೂಪಗಳು

ಮಹೇಶ್ವರನು, ಏಕಾದಶ ರುದ್ರ ಸ್ವರೂಪ. ಆಂಧ್ರದಲ್ಲಿ 11 ಶಿವ ಕ್ಷೇತ್ರಗಳುಂಟು. ಅವುಗಳ ದರ್ಶನ, ಮಹಾಪ್ರಸಾದ. ಅವು (1) ಬೃಹತ್ ಶಿಲಾನಗರದ ಶ್ರೀ ನಗರೇಶ್ವರ (2) ಶ್ರೀಶೈಲದ ಶ್ರೀ ಮಲ್ಲಿಕಾರ್ಜುನ (3) ದ್ರಾಕ್ಷಾರಾಮದ ಶ್ರೀ ಭೀಮೇಶ್ವರ (4) ಕ್ಷೀರಾರಾಮದ ಶ್ರೀ ರಾಮ ಲಿಂಗೇಶ್ವರ (5) ಅಮರಾವತಿಯ ಶ್ರೀ ಅಮರ ಲಿಂಗೇಶ್ವರ (6) ಕೋಟಿಫಲಿಯ ಶ್ರೀ ಕೋಟಿಫಲೀಶ್ವರ (7) ಪೀಠಿಕಾಪುರದ ಶ್ರೀ ಕುಕ್ಕುಟೇಶ್ವರ (8) ಮಹಾನಂದಿಯ ಶ್ರೀ ಮಹಾನಂದೀಶ್ವರ (9) ಕಾಳೇಶ್ವರದ ಶ್ರೀ ಕಾಳೇಶ್ವರ (10) ಶ್ರೀ ಕಾಳಹಸ್ತಿಯ ಶ್ರೀ ಕಾಳಹಸ್ತೀಶ್ವರ ಮತ್ತು (11) ತ್ರಿಪುರಾಂತಕದ ಶ್ರೀ ತ್ರಿಪುರಾಂತಕೇಶ್ವರರು.

ನಿಜಕ್ಕೂ ಶಿವನಿಗೆ ಆಕಾರವಿಲ್ಲ. ಶಿವಲಿಂಗ, ಆತ್ಮಗಳಲ್ಲಿ ಬೆಳಗುವ ಜ್ಯೋತಿ ಸ್ವರೂಪವೇ ಹೊರತು, ಮತ್ತೇನೂ ಅಲ್ಲ! ಸಿದ್ಧಿ ಹೊಂದಿ, ನಿರ್ಮಲ ಮನಸ್ಸು ರೂಪದಲ್ಲಿರುವ ನಿರ್ಮಲತೆಯೇ ಸ್ಫಟಿಕ ಲಿಂಗ. ನಮ್ಮ ತಲೆಯ ಮಿದುಳಿನಲ್ಲಿ, ಜ್ಞಾನ ಉಂಟುಮಾಡುವ ರುದ್ರನನ್ನೇ ಕಪಾಲಿ ಎನ್ನುವರು. ಮಿದುಳಿನಿಂದ ನಾಡಿಗಳ ರೂಪದಲ್ಲಿ, ಕತ್ತಿನ ಕೆಳ ಭಾಗದವರಿಗೂ ಹರಿಯುವ ನಾಡಿಗಳನ್ನು 'ರುದ್ರ ಜಡೆ' ಎನ್ನುವರು. ಶಿವನನ್ನು ಹಠಯೋಗಿ ರೂಪದೊಳು 'ಲಕುಲೀಶ' ಎನ್ನುವರು. **ಶಿವ ಭಿಕ್ಷಾಟನೆ ಮಾಡಿ ಜೀವಿಗಳ ಪಾಪಕರ್ಮಗಳನ್ನು ಹರಿಸುವನು.** ಈ ಸೃಷ್ಟಿಯಲ್ಲಿ ರಾಗತಾಳಕ್ಕೆ ಸರಿಯಾಗಿ ಸೃಷ್ಟಿಸ್ಥಿತಿಲಯಗಳೆಂಬ ಮಹಾಸ್ಪಂದನಕ್ಕೆ, ಆನಂದ ತಾಂಡವ ಮಾಡುವುದರಿಂದ ಶಿವನನ್ನು ನಟರಾಜ ಎನ್ನುವರು. ಶಿವನು ಪರಮಾನಂದಕರವಾದ ಮೋಕ್ಷಸಿದ್ಧಿ ಸಹಾ ಕೊಡಬಲ್ಲನು. ಚಿತ್ ಎಂದರೇ ಮನಸ್ಸು. ಅಂಬರವೆಂದರೆ ಬಟ್ಟೆ ಅಥವಾ ಆಕಾಶ, ಆಕಾಶ ರೂಪದಲ್ಲಿರುವನು ಚಿದಂಬರನು. ಈ ವಿಶ್ವದಲ್ಲಿ ನಾವು ಕಾಣುತ್ತಿರುವ ರೋದಸೀ ಸ್ವರೂಪ ರುದ್ರ ಸ್ವರೂಪವೇ! ದ್ವಾದಶ ಜ್ಯೋತಿರ್ಲಿಂಗಗಳು ರಾಶಿ ಚಕ್ರದಲ್ಲಿನ 12 ರಾಶಿಗಳಿಗೆ ಗುರುತು. ಆದ್ದರಿಂದ ಶಿವ ಕಾಲ ಸ್ವರೂಪನು. ಆ 8 ದಿಶೆಗಳೂ ಆ ಅಷ್ಟಮೂರ್ತಿಯ ಚಿದಾಕಾಶ ಸ್ವರೂಪವೇ. ಪಂಚಭೂತಗಳೂ ಅವರ 5 ಮುಖಗಳೇ. 5 ಜ್ಞಾನೇಂದ್ರಿಯಗಳು, 5 ಕರ್ಮೇಂದ್ರಿಯಗಳು, ಮನಸ್ಸು ಸೇರಿ ಏಕಾದಶ ರುದ್ರ ಕಲೆಗಳಾಗುತ್ತಿವೆ. ಇವನ್ನೇ ಏಕಾದಶ ರುದ್ರ ಎನ್ನುವರು. ಉಮಾಮಹೇಶ್ವರ ರೂಪ ನಿತ್ಯ ಪ್ರಸನ್ನರೂಪ. ತ್ರಿಗುಣಗಳನ್ನು ಭಸ್ಮಮಾಡಿದ ರೂಪವೇ ತ್ರಿಪುರಾಂತಕ ರೂಪ. ಜ್ಞಾನನೇತ್ರವೇ ಮೂರನೆಯ ಕಣ್ಣು. ಸಮಾಧಿ ಸ್ಥಿತಿಯಲ್ಲಿ ಪ್ರಸನ್ನವಾದ ಧ್ಯಾನದಲ್ಲಿರಲೂ, ಸದಾ ಪ್ರವಹಿಸುವ ಪವಿತ್ರತೆಯೇ ಶಿವ ಜಟಾಜೂಟದಲ್ಲಿನ ಆ ಪರಮ ಪಾವನಿ ಗಂಗಾಮಾತೆ.

**ಮೊದಲಿಗೆ ಮಿಥುನವಾದ ಶಿವಪಾರ್ವತಿಯ ಸ್ವರೂಪವೇ ಮಿಥುನ ರಾಶಿ. ಆರ್ದ್ರಾನಕ್ಷತ್ರ ಆಕಾಶದಲ್ಲಿ ಮಿನುಗುವಾಗಲೇ ಶಿವ ದರ್ಶನ ತರುವನು. ಮಿಥುನ ರಾಶಿಗೆ ಮುನ್ನ ವೃಷಭ ರಾಶಿ ದಾಟಬೇಕು. ಆ ವೃಷಭವೇ ನಂದೀಶ್ವರನು. ಅದು ಧರ್ಮ ಸ್ವರೂಪ.**

**ಭ್ರೂಮಧ್ಯದಲ್ಲಿ ಹೊಳೆಯುವ ಜ್ಯೋತಿಯೇ ಲಲಾಟದ ಚಂದ್ರಕಲೆ! ಯೋಗ ಸ್ಥಿತಿಯಿಂದ ನಡೆಯುವ ಕಾಮ ಜಯ ಕಾರಣ, ಸ್ತ್ರೀಪುರುಷ ಭೇದವಿಲ್ಲದ ಸ್ಥಿತಿ ಏಕತ್ವ ರೂಪ. ಹಾಗೆ ಉದ್ಭವಿಸುತ್ತಿರುವ ಸ್ವರೂಪವೇ ಅರ್ಧನಾರೀಶ್ವರ ರೂಪ!**

ಸಹಸ್ರಾರದಲ್ಲಿ ಲಿಂಗೋದ್ಭವ ಸಮಯ, ಕರ್ಪೂರ ಉರಿ ಭಗವತ್ ಜ್ಯೋತಿಯಾಗಿ ಬೆಳಗುತ್ತಿರುವುದು. ಲಿಂಗವೆಂದರೇ, ಸ್ಥೂಲ ಶರೀರದೊಳಗೆ ಅಣಗಿರುವ ಲಿಂಗ ಶರೀರ. ವೇದ, ಇದು ಜ್ಯೋತಿ ರೂಪದಲ್ಲಿ ಬೆಳಗುತ್ತಿರುವುದೆಂದು ವೇದ ಘೋಷಿಸುತ್ತಿದೆ.

ಶಿವಪೂಜಾ ರಹಸ್ಯಗಳು ಅಧ್ಯಯನದಿಂದ ಮತ್ತು ಗುರುವಿನ ಅನುಗ್ರಹದಿಂದ ಮಾತ್ರ ತಿಳಿದುಕೊಳ್ಳಲಾಗುವುದು. **ಭೌತಿಕವಾಗಿ ಕಾಣುವ ಪೀಠಾಪುರದಂತೆಯೇ, ಜ್ಯೋತಿರ್ಮಯವಾದ ಸ್ವರ್ಣ ಪೀಠಿಕಾಪುರ ಸಹಾ ಒಂದಿದೆ. ಅದು ನನ್ನ ಚೈತನ್ಯದಿಂದ ನಿರ್ಮಿತವಾಗಿದೆ. ಅದನ್ನು ಕೇವಲ ನನ್ನನ್ನು ಸ್ಮರಿಸುವ ಭಕ್ತರು, ಜ್ಞಾನಿಗಳು ಅನುಭವದಿಂದ ಅರಿಯಬಲ್ಲರು. ಅಂತವರು ಅದೆಷ್ಟು ದೂರದಲ್ಲಿದ್ದರೂ, ಸ್ವರ್ಣ ಪೀಠಿಕಾಪುರದ ವಾಸಿಗಳೇ ಆಗುವರು. ನಾನಂತವರಿಗೆ ಸದಾ ಸುಲಭಸಾಧ್ಯನು.**

ಭೌತಿಕ ಪೀಠಾಪುರದಲ್ಲಿನ ಶ್ರೀ ಕುಕ್ಕುಟೇಶ್ವರಾಲಯದಲ್ಲಿ ನೀನು ಕಂಡ ಅರ್ಚಕರು, ಪ್ರಮದ ಗಣಗಳ ಅಂಶದಿಂದ ಜನ್ಮಿಸಿದವರೇ. ಭೂತಪ್ರೇತಾದಿ ಮಹಾಗಣಗಳು ಎಷ್ಟೋ ಇರುತ್ತವೆ. **ಯೋಗಾಭ್ಯಾಸ ಮಾಡಿದಷ್ಟೂ, ಶ್ರೀಪಾದ ಶ್ರೀವಲ್ಲಭರನ್ನು ಆರಾಧಿಸಿದಷ್ಟೂ, ಆಯಾ ಭೂತ ಗಣಗಳು ತೊಂದರೇ ಕೊಡುತ್ತಲೇ ಇರುವವು. ಅವನ್ನು ಪಾರು ಮಾಡಿಕೊಂಡು, ನನ್ನನ್ನು ಸೇರುವರು ಧನ್ಯರು.**

**ನನ್ನ ಹೆಸರಲ್ಲಿ ಮಹಾಸಂಸ್ಥಾನ, ನನ್ನ ತಾಯಿಯ ತವರಲ್ಲಿ ತಪ್ಪದೇ ಸ್ಥಾಪಿಸಲಾಗುವುದೆಂದು ನಾನನೇಕಬಾರಿ ತಿಳಿಸಿದ್ದೇನೆ. ನನ್ನ ಸಂಕಲ್ಪ ಅಮೋಘ. ಇರುವೆಯ ಸಾಲಿನ ರೀತಿ ಲಕ್ಷಗಟ್ಟಲೇ ಭಕ್ತರು ಯೋಗಿಗಳು ನನ್ನ ಸಂಸ್ಥಾನ ದರ್ಶಿಸಿಕೊಳ್ಳುವರು. ಯಾರು, ಯಾವ ಸಮಯ, ಎಷ್ಟು ಮಂದಿ, ಯಾವ ರೀತಿ ಬರಬೇಕೆಂಬುದನ್ನು ನಾನು ನಿರ್ಧರಿಸುವೆನು. ಪೀಠಿಕಾಪುರ ನಿವಾಸಿಗಳಾದಷ್ಟು ಮಾತ್ರಕ್ಕೆ ಶ್ರೀಪಾದ ಶ್ರೀವಲ್ಲಭ ಸಂಸ್ಥಾನಕ್ಕೆ ಬಂದು ದರ್ಶನ ಪಡೆಯುವುದು, ಶುದ್ಧ ಸುಳ್ಳು! ನನ್ನ ಅನುಗ್ರಹ ಯೋಗ್ಯರಿಗೇನೇ, ಅಯೋಗ್ಯರಿಗೆ ಎಂದಿಗೂ ಲಭ್ಯವಿಲ್ಲ.**



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 24

# ಅರ್ಧನಾರೀಶ್ವರ ತತ್ತ್ವ ವಿವರಣೆ

ನಂತರ ನಾನು, ಶ್ರೀ ಧರ್ಮಗುಪ್ತರನ್ನು, ಶಿವನಿಗಿರುವ ವಿವಿಧ ಆಭರಣ, ಆಯುಧಗಳಿಗೆ ಸಂಬಂಧಪಟ್ಟ ರಹಸ್ಯ, ಅಂತರಾರ್ಥ ಏನೇನಿದೆಯೋ ತಿಳಿಸಬೇಕೆಂದು ಕೋರಿದೆನು. ಅವರು "ಸ್ವಾಮಿ ಶಂಕರ ಭಟ್ಟ! ಶ್ರೀ ಗಣೇಶನಿಗೆ ಪಾಶಾಂಕುಶಗಳು, ಶ್ರೀ ಮಹಾವಿಷ್ಣುವಿಗೆ ಚಕ್ರ, ಶಿವನಿಗೆ ತ್ರಿಶೂಲ ಮುಖ್ಯಾಯುಧಗಳು, **ತ್ರಿಶೂಲಕ್ಕೆ, ಅಗ್ನಿಜ್ವಾಲೆ ರೂಪದಲ್ಲಿ 3 ಕೊನೆಗಳಿರುವವು. ಸತ್ವರಜಸ್ತಮೋಗುಣಗಳನ್ನು ಈ 3 ಸೂಚಿಸುತ್ತವೆ. ಈ 3, ಒಂದಾಗಿರುವುದು ಏಕತ್ವಕ್ಕೆ ಸಂಜ್ಞೆ. ತ್ರಿಗುಣಾತೀತ! ಒಳ ರಹಸ್ಯವನ್ನೇ ತ್ರಿಶೂಲ ತೋರಿಸುವುದು. ಅಷ್ಟೇ ಅಲ್ಲದೇ, ಇವು ಇಡ, ಪಿಂಗಳ ಮತ್ತು ಸುಷುಮ್ನ ಎನ್ನುವ 3 ನಾಡಿಗಳ ಸಂಗಮವನ್ನೂ ಸೂಚಿಸುತ್ತವೆ. ಇಡ ಪಿಂಗಳ ನಾಡಿಗಳಿಂದ ನಮ್ಮ ಉಸಿರು ಪ್ರಸರಿಸಿ ಭ್ರೂಮಧ್ಯದಲ್ಲಿನ ಶಿರಸ್ಥಾನ ಸೇರಿಕೊಳ್ಳುತ್ತದೆ. ಇಡ, ಪಿಂಗಳ, ಸುಷುಮ್ನ ಸೇರುವ ಬ್ರಹ್ಮಜ್ಞಾನ ಕೇಂದ್ರವನ್ನು ತ್ರಿವೇಣಿ ಸಂಗಮವೆನ್ನುವರು. ತ್ರಿಶೂಲದ ಅಂತರಾರ್ಥ ಇದುವೇ.**

ಎರಡನೆಯದು ನಾಗಾಭರಣ. ಕುಂಡಲಿನೀಶಕ್ತಿ ವಿಜೃಂಭಿಸಿದಾಗ ಅಷ್ಟಸಿದ್ಧಿ ಪ್ರಾಪ್ತಿಯಾಗುವುದು. ಸರ್ಪಾಕಾರದಲ್ಲಿರುವ ಕುಂಡಲಿನಿಯನ್ನು ಅನ್ವಯಿಸುತ್ತಾ ಶಂಕರನನ್ನು ನಾಗಾಭರಣವೆನ್ನುವರು. ಇನ್ನು ಮಹಾಸಿದ್ಧಿಗಳೆಲ್ಲವೂ ಸರ್ಪಗಳಂತೆ ಪ್ರಮಾದಕರವಾದವು. ಅವನ್ನು ವಶದಲ್ಲಿಟ್ಟುಕೊಂಡು ಲೋಕ ಕಲ್ಯಾಣಕ್ಕೆ ಪ್ರಯೋಗಿಸುವುದರಿಂದ ಶಿವನನ್ನು ಈಶ್ವರನೆಂದೂ ಕರೆಯುವರು.

ಶಿವನ ತ್ರಿಶೂಲಕ್ಕೆ ಢಮರುಗವೂ ಕಟ್ಟಿರುವುದು. ಶಬ್ದಗುಣಕ, ಆಕಾಶವೆಂದು ಹೇಳಲಾಗಿದೆ. ಆಕಾಶದಲ್ಲಿ ಶಬ್ದ ಪ್ರಕಂಪನಗಳು ಪಯಣಿಸುವವು. ನಾವು ಮಂತ್ರಜಪ ಮಾಡಿದಾಗ ಆಗಲಿ ಕೇಳಿದಾಗ ಆಗಲಿ, ವಾತಾವರಣದಲ್ಲಿ ಸ್ಪಂದನೆಗಳು ಉತ್ಪತ್ತಿಗೊಂಡು ಕಿವಿ ಸೇರುವವು. ಶಿವನ ಢಮರುಗ ಸಹಾ ಇದನ್ನೇ ಮಾಡುವುದು. ಮಂತ್ರೋಚ್ಚಾರಣೆ ಯೋಗಿಗೆ ಆನಂದ ತರುವುದು. ಆನಂದದಿಂದ ತಾಂಡವವು ಹೊರಬೀಳುವುದು. ಆದ್ದರಿಂದಲೇ ತಾಂಡವ ಶಿವನು ಢಮರುಗವನ್ನು ಧರಿಸಿರುವನು.

ಕಣ್ಣುಬ್ಬುಗಳ ನಡುವೆ ಇರುವ ಆಜ್ಞಾ ಚಕ್ರವೇ ಎಲ್ಲಾ ಜ್ಞಾನಕ್ಕೂ ಕೇಂದ್ರವಾಗಿದೆ. ಜ್ಞಾನಿಗೆ ಅತೀಂದ್ರೀಯ ದೃಷ್ಟಿ ಹೊಳೆಯಲು, ಆಜ್ಞಾಚಕ್ರ ಅರಳಬೇಕು. ಈ ಚಕ್ರದಿಂದಲೇ ಯೋಗಿ, ಭೂತ ಭವಿಷ್ಯ ಮತ್ತು ವರ್ತಮಾನವನ್ನು ಗ್ರಹಿಸಬೇಕು. ಇದೇ ಶಿವನ 3ನೆಯ ಕಣ್ಣು. ಈ ಜ್ಞಾನನೇತ್ರ ಅರಳಿದರೇ, ಕಾಮ ಸ್ವರೂಪನಾದ ಮನ್ಮಥನನ್ನು ದಹಿಸಲು ಸಾಧ್ಯ.

ಶಿವನ ವಾಸ ಪ್ರದೇಶ ಸ್ಮಶಾನ. ಯೋಗಾಗ್ನಿಯಿಂದ ಎಲ್ಲಾ ಆಸೆಗಳು ಭಸ್ಮವಾಗಲು ಯೋಗಿಗೆ ಪರಮ ಶಾಂತಿಪ್ರದಾಯಕವಾದ ಸಾವು ಬರುವುದು. ಬಿಳುಪು ಜ್ಞಾನಕ್ಕೆ ಸಂಕೇತ. ಅದೇ ವಿಭೂತಿ, ಮನುಷ್ಯನಿಗೆ ಆಲೋಚನೆ, ಬಯಕೆಗಳು ನಶಿಸುವುದರಿಂದ, ಶುದ್ಧವಾದ ಜ್ಞಾನ ಪ್ರಾಪ್ತಿಯಾಗುವುದು. ಅದರಿಂದ ಆನಂದ ಲಭಿಸುವುದು. ಜ್ಞಾನದ ಶುದ್ಧತ್ವ, ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕ ಮತ್ತು ಮಾನಸಿಕವೆಂಬ 4 ಸ್ಥಾಯಿಗಳಲ್ಲಿ ಸಂಭವಿಸುವುದು. ಇದರ ಸೂಚಕವೇ ಭಕ್ತರ ಹಣೆಯ ಮೇಲಿನ 4 ವಿಭೂತಿ ರೇಖೆಗಳು.

ಶಿಲಾಜಿತ್ ಎಂಬುವುದು ಅಂಟಿನಂತಹ ಒಂದು ದಿವ್ಯೌಷಧ. ಇದನ್ನು ತಿಂದವರು ನಿತ್ಯಯವ್ವನರಾಗಿರುತ್ತಾರೆ. ಹಿಂದಿನ ಕಾಲದಲ್ಲಿ ಶಿಲಾದನೆಂಬ ಮಹರ್ಷಿ ಕಲ್ಲುಗಳನ್ನೇ ತಿಂದು ಜೀವಿಸುತ್ತಿದ್ದನು. ಆತನೇ ನಂದೀಶ್ವರನು. ಶ್ರೀಕೃಷ್ಣನು ರೋಹಿಣಿ ನಕ್ಷತ್ರ ವೃಷಭ ರಾಶಿಜಾತನು. ಆರ್ದ್ರ ನಕ್ಷತ್ರ ರುದ್ರ ಸ್ಥಾನ. ಉಮಾಮಹೇಶ್ವರರ ಅರ್ಧನಾರೀಶ್ವರತ್ವವನ್ನು ತಿಳಿಸುವುದು ಮಿಥುನ ರಾಶಿ. ಇದಕ್ಕೆ ಮುನ್ನ ಆಕಾಶದಲ್ಲಿ ವೃಷಭ ರಾಶಿ ಕಾಣಿಸುವುದು. ಆ ವೃಷಭವೇ ನಂದೀಶ್ವರ. ನಂದಿ ಧರ್ಮಸ್ವರೂಪ ಸೂಚಿಸುವುದು. ನಿಮ್ನ ಪ್ರಕೃತಿಗೆ ಸೇರಿದ ಕಾಮರೂಪನಾದ ಮನ್ಮಥನನ್ನು ಶಿವ ಭಸ್ಮ ಮಾಡಿದನು. ಆಗ ಅವನು ನಿರಾಕಾರನಾಗಿ, ಉನ್ನತ ಪ್ರಕೃತಿಗೆ ಸಂಬಂಧಿಸಿದ ದಿವ್ಯ ದಾಂಪತ್ಯ ಧರ್ಮಕ್ಕೆ ಸೇರಿದ ಕಾಮರೂಪನಾದನು. ಆದ್ದರಿಂದಲೇ ಶ್ರೀ ಕೃಷ್ಣನು, ಉಪಮನ್ಯು ಋಷಿ ಬಳಿ ಶಿಷ್ಯತ್ವ ಪಡೆದು, ನಿಷ್ಠೆಯಿಂದ ಶಿವೋಪಾಸನೆ ಮಾಡಿ, ಶಿವನ ಅನುಗ್ರಹದಿಂದ, ರುಕ್ಮಿಣಿಯಲ್ಲಿ ಪ್ರದ್ಯುಮ್ನನನ್ನು ಮಗನಾಗಿ ಪಡೆದನು. ಈ ಪ್ರದ್ಯುಮ್ನನೇ ಹಿಂದಿನ ಜನುಮದಲ್ಲಿ ನಿಮ್ನ ಪ್ರಕೃತಿಗೆ ಸೇರಿದ ಮನ್ಮಥನೆಂದು ಹೇಳಲಾಗಿದೆ. ಈ ವೃಷಭವೆನ್ನುವುದು ಮನ್ಮಥ ಸ್ಥಾನ. ಕಾಮ ಸ್ಥಾನ ಸಹಾ. ಧರ್ಮಬದ್ಧವಾದ ಕೋರಿಕೆಗಳು ಯಾವುದಾದರು, ಉನ್ನತ ಪ್ರಕೃತಿಗೆ ಸೇರಿದವೇ. ಅವನ್ನು ಪಡೆಯುವುದು ಧರ್ಮವಿಹಿತವೇ ಎಂದು ತಿಳಿಸಲೂ 'ವೃಷೋತ್ಸರ್ಜನ' ಎಂಬುವದನ್ನು ಮಾಡುವರು.

ಭಯಂಕರವಾದ ತಾಂತ್ರಿಕಸಿದ್ಧರು, ಶಕ್ತರು, ಹುಲಿಯ ಹಾಗೆ ಅಪಾಯಕಾರಿಗಳು. ಅವನ್ನು ವಶಪಡಿಸಿಕೊಂಡವನು ಶಿವನು. ವ್ಯಾಘ್ರ ಶಕ್ತಿಗೆ ವಾಹನ. ಆ ಶಕ್ತಿಯನ್ನು ಪೂರ್ಣವಾಗಿ ಅರ್ಧಾಂಗಿಯಂತೆ, ತನ್ನ ವಶದಲ್ಲಿಟ್ಟುಕೊಂಡಿರುವನೆಂದು ಸೂಚಿಸಲೂ, ಪರಮೇಶ್ವರನು ವ್ಯಾಘ್ರಚರ್ಮಾಂಬರಧಾರಿ ಆದನು.

ಶುದ್ಧ ಬ್ರಹ್ಮಜ್ಞಾನ, ಸದಾ ಪ್ರವಹಿಸುವ ಪ್ರಜ್ಞೆ ಮತ್ತು ಅಮೃತತತ್ತ್ವ ಸಿದ್ಧಿಗಳನ್ನು, ಶಿವನ ಜಟಾಜೂಟದಲ್ಲಿನ ಲೋಕಪಾವನಿ ಗಂಗೆ ಸೂಚಿಸುತ್ತದೆ. ಇಂತಹಾ ನಿತ್ಯಪ್ರಸನ್ನತ್ವದಿಂದ ಸಂಭವಿಸುವ ಮಹಾಪ್ರಶಾಂತ ಆನಂದ ಮತ್ತು ಆಹ್ಲಾದಮಯ ಸ್ಥಿತಿಯನ್ನು ಚಂದ್ರಕಲೆ ಸೂಚಿಸುತ್ತದೆ. ಆದ್ದರಿಂದಲೇ ಚಂದ್ರಶೇಖರನ ತತ್ತ್ವ ಅಮೃತತತ್ತ್ವಸಿದ್ಧಿಗೂ, ಆಹ್ಲಾದಾನಂದ ಸ್ಥಿತಿಗೂ ನಿಲಯವಾಗಿದೆ.

ಅರ್ಧನಾರೀಶ್ವರ ತತ್ತ್ವದ ಅಂತರಾರ್ಥ, ಪ್ರಾಣಿಗಳು ಜೀವಿಸಲು ಬೇಕಾದ ಪ್ರಾಣಶಕ್ತಿ, ಎರಡಾಗಿ, ಒಂದು ಸ್ತ್ರೀಯರ ಅಂಡಾಶಯದಲ್ಲಿ ಶೋಣಿತವಾಗಿಯು, ಪುರುಷರಲ್ಲಿ ಶುಕ್ಲವಾಗಿಯೂ ಇದ್ದೂ, ಈ ಎರಡರ ಸೇರುವಿಕೆಯಿಂದ ಜೀವಿಯಾಗಿ ಉದ್ಭವಿಸುವುದು, ಆದರೇ ಸೃಷ್ಟಿಯಲ್ಲಿ ತಂದೆ ತಾಯಿ ಎನ್ನುವ ಎರಡು ತತ್ತ್ವಗಳೂ ಒಂದೇ ಆಕೃತಿಯಲ್ಲಿ ಇರುವಂತದ್ದು ನೀರುಹಾವು. ಸ್ತ್ರೀ ಪುರುಷರಿಬ್ಬಲ್ಲಿಯೂ, ಸ್ತ್ರೀ ಪುರುಷ ತತ್ತ್ವಗಳು ಎರಡೂ ಇರುವವೆಂದೂ, ಶರೀರದ ಬಲ ಭಾಗದಲ್ಲಿ ಪ್ರವಹಿಸುವ ಶ್ವಾಸ ರೂಪ ಪುರುಷ ಶಕ್ತಿಯನ್ನು 'ಪಿಂಗಳ'ನಾಡಿಯಾಗಿಯು, ಎಡ ಭಾಗದಲ್ಲಿ ಪ್ರವಹಿಸುವ ಶ್ವಾಸ ರೂಪ ಸ್ತ್ರೀ ಶಕ್ತಿಯನ್ನು 'ಇಡಾ'ನಾಡಿಯಾಗಿಯೂ ಗುರ್ತಿಸಬೇಕು. ಪ್ರಾಣಾಯಾಮದ ಸಮಯ, ಶ್ವಾಸ ತೆಗೆದುಕೊಂಡಾಗ ಶರೀರ ತಣ್ಣಗಾಗಿ ಶಾಂತವಾಗುವುದರಿಂದ ಅದನ್ನು 'ಚಂದ್ರನಾಡಿ' ಎನ್ನುವರು.

ಕಾಲಪುರುಷನ ಶರೀರದಲ್ಲಿ, ರಾಶಿ ಚಕ್ರದಲ್ಲಿನ ಮೇಷದಿಂದ ತುಲದವರೆಗೂ ಬಿಸಿ ತಟ್ಟುವ 6 ಮಾಸಗಳು 'ಸೂರ್ಯನಾಡಿ' ಎಂದೆಣಿಸಿದರೆ, ಆಶ್ವಯುಜದಿಂದ ಫಾಲ್ಗುಣದವರೆಗೂ ಇರುವ 6 ತಿಂಗಳಗಳು ತಣ್ಣನೆಯ 'ಚಂದ್ರನಾಡಿ.' ಸೂರ್ಯ ಚಂದ್ರಗತಿಗಳಿಂದಲೇ ಪೌರ್ಣಿಮೆ/ಅಮಾವಾಸ್ಯೆ ಆಗುತ್ತಿವೆ.

ಯೋಗಿ ಆದವನು, ತನ್ನ ಶರೀರದಲ್ಲೇ ಶ್ವಾಸ ಸಾಧನೆ ಮೂಲಕ, ಕಾಲ ಚಕ್ರದಲ್ಲಿನ ಎಲ್ಲವನ್ನೂ ಸಿದ್ಧಿಸಿಕೊಳ್ಳುವನು. ಭೂತ ಭವಿಷ್ಯತ್ ವರ್ತಮಾನಗಳನ್ನು ಗುರುತಿಸಬಲ್ಲ ಕಾಲ ಜ್ಞಾನವನ್ನು ಹೊಂದುವನು. ಈ ಕಾಲ ಚಕ್ರವನ್ನೇ ಅರ್ಧನಾರೀಶ್ವರ ತತ್ತ್ವವಾಗಿಯು, ಎಂದಿಗೂ ಬೇರೆ ಮಾಡಲಾಗದ ಜೋಡಿಯಾಗಿಯೂ ಗುರ್ತಿಸಬೇಕು. ರಾತ್ರಿ-ಹಗಲು, ಪೌರ್ಣಮಿ-ಅಮಾವಾಸ್ಯೆಗಳಂತಹಾ ಎಲ್ಲವೂ ಒಂದರ ನಂತರ ಮತ್ತೊಂದು ಕಾಣುತ್ತಿರುವುದು. ಒಂದಕ್ಕೊಂದು ಆಧಾರವಾಗಿರುವುದು. ರಾತ್ರಿ ಇಲ್ಲದೇ ಹಗಲಾಗಲಿ, ಹಗಲಿಲ್ಲದೇ ರಾತ್ರಿಯಾಗಲೀ ಇರಲಾರವು. ತಂದೆ ತಾಯಿ ಎಂದು ಕರೆಸಿಕೊಳ್ಳುವ ಅರ್ಧನಾರೀಶ್ವರರು, ಈ ಅನಂತ ಸೃಷ್ಟಿಯ ಸಂಚಲನಕ್ಕೆ ಕಾರಣವಾಗುತ್ತಿದ್ದಾರೆ. ಶಿವನು ಸಂಹಾರಕಾರಿ ಎನ್ನಲೂ ಅಂತರಾರ್ಥ, ಹಳೇ ಸೃಷ್ಟಿ ನಶಿಸಿ, ಹೊಸ ಸೃಷ್ಟಿ ಬರುವುದೇ ಎಂದರ್ಥ. ಅಂದರೆ ಸೃಷ್ಟಿಯಲ್ಲಿನ ಬದಲಾವಣೆಗಳು ಅತಿ ಸಹಜವಾಗಿ ಬರುತ್ತಿರಲು, ಹೊಸ ಸೃಷ್ಟಿ ಉದ್ಭವಿಸುವುದು, ಸ್ವಲ್ಪಕಾಲ ಆ ಸ್ಥಿತಿಯಲ್ಲಿದ್ದು ಪುನಃ ಖಂಡಿತ ಸಂಹರಿಸಲಾಗುವುದೆಂದರ್ಥ. ಅಥರ್ವಣ ವೇದದ ಎಲ್ಲಾ ಅಸ್ತ್ರಗಳು, ಶಸ್ತ್ರಗಳು, ಮಂತ್ರಗಳು ಸಿದ್ಧಿಸಬೇಕೆಂದರೆ, ಆ ಅಸ್ತ್ರಶಸ್ತ್ರಾಧಿಪ ಈಶಾನ ರುದ್ರನ ಅನುಗ್ರಹ ಇರಲೇಬೇಕು'' ಎಂದು ತಿಳಿಸಿದರು.

ಆಗ ನಾನು, ಶಿವಪಾರ್ವತಿಯರಿಗೂ ಆರ್ದ್ರಾ ನಕ್ಷತ್ರಕ್ಕೂ ಇರುವ ಅವಿನಾಭಾವ ಸಂಬಂಧವನ್ನು ಬಿಡಿಸಿ ಹೇಳಬೇಕೆಂದು ಶ್ರೀ ಧರ್ಮಗುಪ್ತರನ್ನು ಪ್ರಾರ್ಥಿಸಿದೆನು. ಅವರು, ''ಶ್ರೀ ರುದ್ರನು ಧನುಸ್ಸನ್ನು ಹಿಡಿದು, ಓಡುವ ಜಿಂಕೆಯನ್ನು ಬೇಟೆ ಆಡಿ, ಮೃಗವ್ಯಾಧಿ ರುದ್ರನಾಗುವನು. ಈ ಮೂರ್ತಿ ಆಗಸದಲ್ಲಿ ಆರ್ದ್ರಾ ನಕ್ಷತ್ರದಲ್ಲಿ, ಬೇಟೆಗಾರನಂತೆ ಕಂಡು ಬರುವನು'' ಎಂದರು.

## ಗ್ರಹ ಸಂಚಾರ ಪ್ರಭಾವ

ಇಂತಹ ಮೃಗವ್ಯಾಧಿ ರುದ್ರನ ರೂಪ, ನಕ್ಷತ್ರ ಮಂಡಲದಲ್ಲಿ, ಮಿಥುನ ಕರ್ಕಾಟಕ ರಾಶಿಗಳಿಗೆ ಅಡ್ಡವಾಗಿದ್ದು ಮೂಲೆಯಲ್ಲಿ ಗೋಚರಿಸುವುದು. ಈ ನಕ್ಷತ್ರ ಮಂಡಲದತ್ತ ಕ್ರೂರ ಗ್ರಹಗಳಾದ ಶನಿ, ಕುಜ, ರಾಹುವಿನ ಸಂಚಾರವಾದಾಗ, ಯುದ್ಧಗಳು, ಪ್ರಳಯಗಳು ಸಂಭವಿಸುವವು. ದೇವದಾನವ ಮತ್ತು ಮಹಾಭಾರತ ಯುದ್ಧಗಳು, ಅಂತಹ ಗ್ರಹಗಳಿಂದಲೇ ಆದವು.

ಕಾಲ ಸಂಹಾರಮೂರ್ತಿಯನ್ನು ಅಂದರೇ, ಧನುಸ್ಸನ್ನು ಹಿಡಿದ ಉಗ್ರಮೂರ್ತಿ ರುದ್ರನನ್ನೇ ವೇದಗಳು ಮನ್ಯುದೇವತೆಯಂತೆ ಕೊಂಡಾಡಿವೆ. ಈ ರುದ್ರಮೂರ್ತಿಯ ಆಯುಧ ತ್ರಿಶೂಲ ಅಲ್ಲ. ಧನುಸ್ಸು!

ಮಾಘ ಮಾಸದಲ್ಲಿ ಅಮಾವಾಸ್ಯೆಯ ಮುಂದಿನ ಚತುರ್ದಶಿ, ಮಹಾ ಶಿವರಾತ್ರಿ. ಅದೇ ಪ್ರತಿ ತಿಂಗಳೂ ಅಮಾವಾಸ್ಯೆಯ ಪೂರ್ವದ ಚತುರ್ದಶಿಯನ್ನು 'ಮಾಸ ಶಿವರಾತ್ರಿ' ಎನ್ನುವರು.

## ಶನಿ ಪ್ರದೋಷ ಸಮಯ, ಈಶ್ವರಾರಾಧನೆಯಿಂದ ಶನಿ ಗ್ರಹ ದೋಷ ಮಾಯ

**ಮಹಾಶಿವರಾತ್ರಿ ಮಂಗಳವಾರ ಆದಲ್ಲಿ, ಅದು ಮಹಾಪ್ರಶಸ್ತ. ಶನಿವಾರ ತ್ರಯೋದಶಿ ಆದರೇ ಅದು 'ಶನಿ ತ್ರಯೋದಶಿ.' ಆ ದಿನ ಶಿವಾರ್ಚನೆ, ಎಳ್ಳು ದಾನ ಮಾಡಿದರೆ, ಕರ್ಮಕಾರಕನಾದ ಶನಿಯಿಂದ ಸಂಭವಿಸುವ ವಿವಿಧ ಕಷ್ಟಗಳು ನಾಶವಾಗುವವು. ಶನಿಗೆ ಶಿವ ಅಧಿದೇವತೆಯಾದ್ದರಿಂದ, ಎಳ್ಳೆಣ್ಣೆಯ ಅಭಿಷೇಕ ಶಿವನಿಗೆ ಆಚರಿಸಬೇಕು. ಶನಿಪೀಡೆ ಮಾಯವಾಗುವುದು. ಶನಿವಾರ, ಪ್ರದೋಷ ಸಮಯ, ಶಿವಾರಾಧನೆಯಿಂದ ಕರ್ಮಕಾರಕ ಶನಿ, ಸುಖಶಾಂತಿ ತರುವನು. ಶಿವನು ಸಂಹಾರಕನು. ಎಲ್ಲಾ ಅಶುಭ**

**ಕರ್ಮಗಳ ಮಹಾಪಾಪಗಳನ್ನು ತೊಳೆದುಕೊಂಡು, ಶುಭಪ್ರದವಾದ, ನವ್ಯ, ದಿವ್ಯ ತೇಜೋಮಯ ಶುಭ ಸ್ಪಂದನೆಗಳಿಂದ ಮಾನವನ ಶರೀರ, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಮತ್ತು ಆತ್ಮ ಪರಿಶುದ್ಧತೆ ಹೊಂದಿ, ಆನಂದದಾಯಕವಾದ ಹೊಸ ಬಾಳು ಪಡೆಯಬೇಕೆಂದರೆ ಯಾರೇ ಆಗಲಿ, ಶನಿ ಪ್ರದೋಷ ವೇಳೆ ಶಿವಾರಾಧನೆ ಮಾಡಬೇಕು.**

ಈ ವಿಧವಾದ ಸತ್ಕರ್ಮದಿಂದ ಶನೈಶ್ಚರನು ಶಾಂತಿಯಾಗುವನು. ಶನಿವಾರದ ರಾತ್ರಿ, ಆ ಜೀವಿಯ ಎಲ್ಲಾ ಕರ್ಮ ದೊಷಗಳಿಗೂ ಅದಿಷ್ಠಾನ ದೇವತೆಯಾದ ಅಂಥ ಶಕ್ತಿಗಳು, ಅಂದರೆ ಕಣ್ಣಿಗೆ ಕಾಣದೇ ಕಪ್ಪುರೂಪದ ದುರದೃಷ್ಟ ಶಕ್ತಿಗಳು, ಮಹಾವಿಧ್ವಂಸ ಶಕ್ತಿಗಳು, ಆ ಮಹಾಕಾಲನ ಶಕ್ತಿ ಸ್ವರೂಪವಾದ ಮಹಾಕಾಳಿಯಲ್ಲಿ ಸ್ಥಿರಗೊಳ್ಳುವವು. ಮರುದಿನವಾದ ಭಾನುವಾರ, ಸೂರ್ಯೋದಯ ವೇಳೆ ಸವಿತೃ ಮಂಡಲ ಮಧ್ಯವರ್ತಿ ಆದ ಆ ಮಹಾಶಕ್ತಿಯ ಅನುಗ್ರಹದಿಂದ, ಸಾಧಕನಿಗೆ ನೂತನ ಜೀವನ ಪ್ರಾರಂಭವಾಗಿ, ಅಶುಭಪ್ರದವಾದ ಪಾಪ ಕರ್ಮಗಳ ಮೂಟೆಗಳು, ಪರಮೇಶ್ವರನ ಯೋಗಾಗ್ನಿಯಲ್ಲಿ ದಹನವಾಗುವವು.

## ಪಂಚ ಭೂತಾತ್ಮಕ ಶಿವ ಸ್ವರೂಪ

**ಶಿವನು ಪಂಚ ಭೂತಾತ್ಮಕನು.** ನಮ್ಮ ಶರೀರದಲ್ಲಿನ ಮೂಲಾಧಾರದಲ್ಲಿ ಪೃಥ್ವೀತತ್ತ್ವ ಇರುವುದು. ಇದಕ್ಕೆ ಪ್ರತೀಕವಾಗಿ ಸಾಧಕರಿಂದ **ಪಾರ್ಥಿವ ಲಿಂಗ** ಪೂಜಿಸಲ್ಪಡುತ್ತಿದೆ. ಸ್ವಾಧಿಷ್ಠಾನ ಚಕ್ರದಲ್ಲಿ ಜಲ ತತ್ತ್ವವಿರುವುದು. ಇದಕ್ಕೆ ಸಂಬಂಧಿಸಿ ಜಲ **ಲಿಂಗ**ವಿರುವುದು. ಮಣಿಪೂರಕ ಚಕ್ರ ಅಗ್ನಿ ತತ್ತ್ವಕ್ಕೆ ಸಂಬಂಧಿಸಿದೆ. ಇದರ ರೂಪ **ಜ್ವಾಲಾ ಲಿಂಗ.** ಇದನ್ನೇ ಹಿರಣ್ಯ ಸ್ಥಂಭವೆಂದೂ ಕರೆಯುವರು. ಕಂಠ ಸ್ಥಾನದಲ್ಲಿ ಅಂದರೇ ವಿಶುದ್ಧಿಯಂದು, ವಾಯು ತತ್ತ್ವವಿರುವುದು. ಇದರ ಪ್ರತೀಕ ವಾಯು ಲಿಂಗ. ಆಕಾಶ ಸ್ಥಾನವಾದ ಹೃದಯಲ್ಲಿ **ಚಿದಂಬರ ಲಿಂಗ**ವಿರುವುದು. ಆಕಾಶ ಲಿಂಗವಾದ ಈ ಚಿದಂಬರ ಲಿಂಗಕ್ಕೆ, ಆಕಾಶವೇ ಇರುವುದಿಲ್ಲ. ಈ **ಪಂಚ ಭೂತಾತ್ಮಕ ಶಿವಲಿಂಗಗಳ ಆರಾಧನೆ, ದರ್ಶನ, ಅರ್ಚನೆ ವಿಶೇಷ ಫಲಪ್ರದ.**

ಚಿದಂಬರ ಕ್ಷೇತ್ರದಲ್ಲಿ, ತೆರೆ ಹಿಂದೆ ಬಚ್ಚಿಡಲಾದ 'ಚಿದಂಬರ ರಹಸ್ಯ' ಅಂದರೇ, ತೆರೆ ತೆಗೆದರೇ ಹಿಂದೆ ಶೂನ್ಯ! ಏನೂ ಇರುವುದಿಲ್ಲ. ಶುದ್ಧಾಕಾಶವೇ ಶಿವನ ಆತ್ಮಲಿಂಗ. ಹೃದಯವೇ ಚಿತ್‌ಸ್ಥಾನವಾದ್ದರಿಂದ, ಆತ್ಮದ ವಾಸ ಆಕಾಶ ಸ್ಥಾನವೆಂದು ತಿಳಿಯಬೇಕು. ಆಕಾಶ, ನಿರಾಕಾರ! ಒಂದೇ ದೃಷ್ಟಿಯಲ್ಲಿ ಮನಸ್ಸನ್ನು ಕೇಂದ್ರೀಕರಿಸಿ ನಿಜ ತತ್ತ್ವವನ್ನು ಧ್ಯಾನಿಸುವ ಯೋಗಿಗಳಿಗೆ, ಹೃದಯಾಕಾಶ ತೆರೆದು, ತಮ್ಮ ಹೃದಯಾಂತರಾಳದಲ್ಲೇ ಎಲ್ಲಾ ಸೃಷ್ಟಿ, ಬ್ರಹ್ಮಾಂಡ, ನಕ್ಷತ್ರಗಳು, ತಾರೆಗಳು ಮುಂತಾದವು ದರ್ಶನವಾಗುವವು. ಋಣವೆಂದರೆ ಪಾಪ. **ಋಣವಿಲ್ಲದ್ದು ಅರುಣ. ಪರಮೇಶ್ವರನು ದಹರಾಕಾಶನು. ಆತನು, ಅರುಣಾಚಲೇಶ್ವರ ರೂಪದಲ್ಲೂ, ಅರುಣಾಚಲ ಬೆಟ್ಟ ರೂಪದಲ್ಲೂ ಮತ್ತು ಒಬ್ಬ ಮಹಾಸಿದ್ಧನ ರೂಪದಲ್ಲೂ ಅರುಣಾಚಲದಲ್ಲಿ ನೆಲದಿರುವನು. ಸ್ವಾಮಿಯ ದರ್ಶನ, ಸಮಸ್ತ ಪಾಪಹರಣ. ಆ ಅರುಣಾಚಲೇಶ್ವರನೇ ಇಂದು ಮಾನವನಾಗಿ ಪೀಠಿಕಾಪುರದೊಳು ಶ್ರೀಪಾದ ಶ್ರೀವಲ್ಲಭನಾಗಿ ಅವತರಿಸಿ, ನಮ್ಮನ್ನೆಲ್ಲಾ ಉದ್ಧರಿಸಲು ಸದ್ಯಕ್ಕೆ ಕುರುಂಗಡ್ಡೆಯಲ್ಲಿ ದಿವ್ಯ ತೇಜೋಮಯವಾಗಿರುವನು.**

**ಕುರುಂಗಡ್ಡೆ ಅರುಣಾಚಲ ಪರ್ವತಕ್ಕೆ ಸಮವಾದದ್ದು. ಅರ್ಧನಾರೀಶ್ವರ ರೂಪದಲ್ಲಿನ ಅರುಣಾಚಲೇಶ್ವರನೇ, ಶ್ರೀಪಾದ ಶ್ರೀವಲ್ಲಭನು. ಅಲ್ಲಿನ ಮಹಾಸಿದ್ಧನು ಸಹಾ ಈ ಯತೀಶ್ವರ ವೇಷಧಾರಿಯೇ. ಅರುಣಾಚಲ ಬೆಟ್ಟ, ಸಾಕ್ಷಾತ್ ಶಿವ**

**ಸ್ವರೂಪವಾದಂತೆಯೇ ಇಲ್ಲಿ ಕುರುಂಗಡ್ಡೆಯೂ ಸಾಕ್ಷಾತ್ ಶ್ರೀಗಳ ರೂಪವೇ. ಅರುಣಾಚಲ ಶಿವಲಿಂಗದಲ್ಲಿ ಶಿವ ಶಕ್ತಿಗಳು ಇದ್ದ ಹಾಗೆಯೇ, ಶ್ರೀಪಾದ ಶ್ರೀವಲ್ಲಭರ ರೂಪದಲ್ಲೂ ಶಿವ ಶಕ್ತಿಗಳುಂಟು. ಅರುಣಾಚಲ ಮಹಾಸಿದ್ಧ ಸ್ವರೂಪಿ ಪರಮೇಶ್ವರನ ದರ್ಶನ ದುರ್ಲಭ. ಆದರೇ ಶ್ರೀಪಾದ ಶ್ರೀವಲ್ಲಭರೂಪಿ ಮಹಾಸಿದ್ಧರ ದರ್ಶನ, ಸಾಧಕನಿಗೆ ಅತ್ಯಂತ ಸುಲಭ"** ಎಂದು ತಿಳಿಸಿದರು.

ಆಗ ನಾನು "ಸ್ವಾಮಿ! ಇದಕ್ಕೆ ಮುನ್ನ ನಾನು, ಶ್ರೀಪಾದ ಶ್ರೀವಲ್ಲಭರು ಶ್ರೀ ಪದ್ಮಾವತಿದೇವಿ ಸಹಿತ ಶ್ರೀ ವೇಂಕಟೇಶ್ವರನ ಸಂಯುಕ್ತ ಸ್ವರೂಪವೆಂದು ಕೇಳಿದ್ದೆ. ನೀವೀಗ ಅವರು ಶಿವ ಶಕ್ತಿ ಸ್ವರೂಪವೆನ್ನುತ್ತಿದ್ದೀರ! ಶನಿ ಪ್ರದೋಷ ಸಮಯದ ಶಿವಾರಾಧನೆಯೂ ಮಹಾಪುಣ್ಯವೆಂದಿರಿ. ನನಗೆ ಅಯೋಮಯವಾಗಿದೆ, ದಯವಿಟ್ಟು ಬಿಡಿಸಿ ತಿಳಿಸಿ" ಎಂದು ಶ್ರೀ ಧರ್ಮಗುಪ್ತರನ್ನು ಬೇಡಿದೆನು.

ಶ್ರೀ ಧರ್ಮಗುಪ್ತರು ನಗುತ್ತಾ, "ಸ್ವಾಮಿ! ಶ್ರೀಪಾದ ಶ್ರೀವಲ್ಲಭರ ದಿವ್ಯತತ್ತ್ವ ಸಪ್ತರ್ಷಿಗಳಿಗೇ ತಿಳಿಯಲಾರದ್ದು. ಆದರೂ ನಾನು ಪ್ರಯತ್ನಿಸುವೆ. ಶ್ರೀ ವೇಂಕಟೇಶ್ವರ ಪ್ರಭುಗಳು ಕೃತಯುಗದ ಮಹಾತ್ಮರು. ಅವರು ದಶರಥನಿಗೆ ಪುತ್ರನಾಗಿ, ಶ್ರೀರಾಮನಾಗಿ ಜನ್ಮಿಸುವೆನೆಂದು ವರವನಿತ್ತವರು. ಆದ್ದರಿಂದ ಅವರನ್ನು ಕೌಸಲ್ಯಾ ತನಯನಾದ ಶ್ರೀರಾಮನಾಗಿ ಸಹಾ ಪೂಜಿಸಬಹುದು. ಕೆಲ ಕಾಲ, ಶ್ರೀ ವೇಂಕಟೇಶನನ್ನು ಶಕ್ತಿರೂಪಿ ಬಾಲಾತ್ರಿಪುರ ಸುಂದರಿಯಾಗಿ ಆರಾಧಿಸಿದರು. ನಂತರ ಶಿವ ರೂಪ, ಸುಬ್ರಹ್ಮಣ್ಯ ಸ್ವರೂಪವಾಗಿ ಸಹಾ ಆರಾಧಿಸಿದರು. ಆನಂತರವೇ ಭಗವದ್ರಾಮಾನುಜರ ಕಾರಣ, ಶ್ರೀ ವೈಷ್ಣವರಿಂದ ಮಹಾವಿಷ್ಣುವಾಗಿ ಪೂಜಿಸಲ್ಪಡುತ್ತಿದ್ದಾರೆ. ಬೌದ್ಧರಿಂದ ಮಹಾಶೂನ್ಯವಾಗಿ ಭಾವಿಸಲ್ಪಡುತ್ತಿರುವುದೂ ಈ ಸ್ವಾಮಿಯೇ. ಇವರೇ ಸಾಕ್ಷಾತ್ ದತ್ತ ಪ್ರಭುಗಳು! ಯಾರು ಹೇಗೆ, ಏನೆಂದೇ ಪೂಜಿಸಿದರೂ, ಬದುಲಿಗೆ, ರಕ್ಷಿಸಿ, ತಾನು ಒಬ್ಬ ದೈವ ಮಾತ್ರವೇ ಎಂದು ತಕ್ಕ ಲೀಲೆಗಳು ಪ್ರದರ್ಶಿಸಬಲ್ಲ ಮಹಾಚಮತ್ಕಾರದ ಸೂತ್ರಧಾರಿ. ಅವರೇ ಇಂದು ಶ್ರೀಪಾದರಾಗಿ ಲೋಕಕ್ಕೆ ದರ್ಶನವಿತ್ತಿರುವರು.

ಶ್ರೀಪಾದರ ಎಡ ಭಾಗದಲ್ಲಿ ಶಕ್ತಿ ಸಂಚಾರ, ಬಲ ಭಾಗದಲ್ಲಿ ಶಿವ ಸಂಚಾರವೂ ಇರುವುದು. ಹಾಗೆ ಅವರು ಶಿವ ಶಕ್ತಿ ಸ್ವರೂಪರು. ಅವರ ಹೃದಯದಲ್ಲಿ ಶ್ರೀಪದ್ಮಾವತಿ ತಾಯಿ ಇರುವಳು. ಹೃದಯ ದಯೆಗೆ ಆಲಯ. ಅನಾಹತ ಚಕ್ರಸ್ಥಾನ. ಅಲ್ಲಿಂದ ಶಕ್ತಿ, ಊರ್ಧ್ವ ಅಧೋ ಚಕ್ರಗಳಿಗೆ ಸೇರುತ್ತಿರುವುದು. ಆದ್ದರಿಂದ ಮತ್ತೊಂದು ದಿವ್ಯಮಯ ಶರೀರದಲ್ಲಿ ಅವರು ಶ್ರೀ ಪದ್ಮಾವತಿ ವೇಂಕಟೇಶ್ವರನು. ಅವರೇ ವಾಣಿ ಹಿರಣ್ಯಗರ್ಭ ಸ್ವರೂಪರೂ ಸಹ. ಪರಾ, ಪಶ್ಯಂತಿ, ಮಧ್ಯಮಾ, ವೈಖರೀ ಸ್ವರೂಪಿವಾಣಿ, ದೇವಿ ಆಂದರೆ ಸರಸ್ವತಿ, ಅವರ ನಾಲಿಗೆ ಮೇಲಿರುವಳು. ಆ ಸರಸ್ವತಿ ಮಾತೆ ದಿವ್ಯ ಮಾನಸವು, ಹಿರಣ್ಯಗರ್ಭ ದಿವ್ಯಮಾನಸವು ಅದ್ವೈತ ಸ್ಥಿತಿಯಲ್ಲಿ ಇರುವುದು.

ನಿಜಕ್ಕೂ ಚಿದಂಬರ ರಹಸ್ಯವೆಂದರೆ, ಅವರು 3 ವಿಧ ಚೈತನ್ಯ ಸ್ವರೂಪಗಳನ್ನು ಏಕಕಾಲ ಧರಿಸಬಲ್ಲರು. ಅವರ ಒಂದೊಂದು ಶರೀರ ರೂಪವೂ ಸಂಪೂರ್ಣ ವಿಭಿನ್ನ! ಅವರು ವಾಣಿ ಹಿರಣ್ಯಗರ್ಭ ಚೈತನ್ಯ ಶರೀರವನ್ನು, ಶಿವಪಾರ್ವತಿ ಮತ್ತು ಪದ್ಮಾವತಿ ಶ್ರೀನಿವಾಸ ಚೈತನ್ಯ ಶರೀರಗಳನ್ನೂ ಏಕಕಾಲದಲ್ಲಿ ತಾಳಿ, ಇವುಗಳಿಗೆ ಪೂರ್ಣ ವಿಭಿನ್ನತೆಯ ಶ್ರೀಪಾದ ಶ್ರೀವಲ್ಲಭ ಚೈತನ್ಯ ಶರೀರವೂ ಹೊಂದಿರುವರು. ಇದು ಅವರ ಯೋಗ ಮಾಯೆ, ವೈಷ್ಣವ ಮಾಯೆ. ಇದೇ ಅವರ ಚಿದಂಬರ ರಹಸ್ಯ. ಅವರನ್ನು ದ್ವೈತ ಎಂದರೂ, ವಿಶಿಷ್ಟಾದ್ವೈತರೆಂದರೂ, ಅದ್ವೈತರೆಂದರೂ, ಇವೆಲ್ಲಕ್ಕೂ ಮೀರಿದ್ದೆಂದರೂ ತಪ್ಪಿಲ್ಲ. ಏಕೆಂದರೆ ಅವರ ಯೋಗ ಮಾಯೆ ಮತ್ತು ವೈಷ್ಣವ

ಮಾಯೆ ಅನಂತವಾದದ್ದು. ಜಗನ್ಮೋಹಿನಿಯಾಗಿ ದೇವತೆಯರಿಗೆ ಮಾತ್ರ ಅಮೃತವನ್ನು ಹಂಚಿದ ಚತುರ. ಆ ಮೋಹಿನಿ, ಪರಮ ಶಿವನನ್ನೇ ಹುಚ್ಚೆಬ್ಬಿಸಿ ಧರ್ಮಶಾಸ್ತನನ್ನು ಲೋಕಕ್ಕೆ ಪ್ರಸಾದಿಸಿದ ಮಹಾಮಾಯೆ. ಈ ಮೋಹಿನಿಯೂ ನಾನೇ, ಧರ್ಮಶಾಸ್ತನೂ ನಾನೇ ಎಂದು ನುಡಿಯುವ, ಜ್ಞಾನ ತರುವ ಶ್ರೀದತ್ತನಿಗೆ ಅಸಾಧ್ಯವಾದದ್ದು ಏನಿರುವುದು? ಆತ್ಮಮಾಯೆಯಿಂದ ತನ್ನನ್ನು ತಾನೇ ಸೃಷ್ಟಿಸಿಕೊಳ್ಳುವುದಲ್ಲವೇ! ಮೋಹಿನಿ ರೂಪಧಾರಿ ತನಗೆ ತಾನೇ ಧರ್ಮಶಾಸ್ತನಾಗಿ ರೂಪಿಸಿಕೊಂಡಿರುವನು. ಆಹಾ! ಎಂತಹ ಚಾತುರ್ಯದ ವಿಧಾನ?'' ಎಂದು ನುಡಿದು ನನ್ನನ್ನು ಆಶ್ಚರ್ಯಗೊಳಿಸಿದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 25

# ರುದ್ರಾಕ್ಷಿ ಮಹತ್ವ

### ಶ್ರೀ ಶಿವಾರಾಧನೆ ಪದ್ಧತಿಗಳು - ಅವುಗಳ ಫಲ

ಶಿವರಾಧನೆಯನ್ನು ಯಾವ ರೀತಿ, ಯಾವ ಪದ್ಧತಿಯಲ್ಲಿ ಮಾಡಬೇಕೋ ತಿಳಿಸಬೇಕೆಂದು ನಾನು ಶ್ರೀ ಧರ್ಮಗುಪ್ತರನ್ನು ಬೇಡಲೂ, ಅವರು, "**ಸ್ವಾಮಿ, ಶಂಕರ ಭಟ್ಟಾ! ಶಿವ ಪಂಚಾಕ್ಷರಿಯನ್ನು ಜಪ ಅನುಷ್ಠಾನ ಮಾಡುವುದು ಒಂದು ಪದ್ಧತಿ. ಮಹನ್ಯಾಸ ವಿಧಾನದಿಂದ ಶಿವಾರಾಧನೆ ಮಾಡುವುದು ಎರಡನೆಯ ಪದ್ಧತಿ. ರುದ್ರಾಭಿಷೇಕ ಮೂಲಕ, ಶಿವಾರಾಧನೆ ಮೂರನೇ ಪದ್ಧತಿ.**

ಪಂಚಾಕ್ಷರಿಯ 5 ಅಕ್ಷರಗಳೂ 5 ಭೂತಗಳಿಗೆ ಪ್ರತೀಕ. ಜೀವ ಕೇವಲ ಮಮಕಾರ ಬಂಧನದಲ್ಲಿರುವುದುರಿಂದ 'ಪಶು' ಎನ್ನಲಾಗುವನು. ಆ ಪಶುಬಂಧ ವಿಮೋಚನೆ 'ಪಶುಪತಿ' ತರುವನು.

**ಶಿವ ಪಂಚಾಕ್ಷರಿ ಮಂತ್ರ 5 ಮೂಲೆಗಳುಳ್ಳ ನಕ್ಷತ್ರ ಎನ್ನಲಾಗಿದೆ.** ಈ 5 ಮೂಲೆ ಮಂತ್ರಗಳಲ್ಲಿ, ಮೋಕ್ಷ ತರುವ ಮಂತ್ರಗಳು ಮೊದಲನೆಯ ವಿಧವಾದರೇ, ಭೋಗಭಾಗ್ಯ ತರುವ ಮಂತ್ರಗಳು ಎರಡನೆಯ ತರಹದ್ದು. **ಪಂಚೋಪಚಾರಗಳಲ್ಲಿ ಭೂ ತತ್ತ್ವಕ್ಕೆ ಚಂದನ, ಜಲ ತತ್ತ್ವಕ್ಕೆ ತೆಂಗಿನ ನೀರು, ಅಗ್ನಿ ತತ್ತ್ವಕ್ಕೆ ದೀಪಾರಾಧನೆ, ವಾಯು ತತ್ತ್ವಕ್ಕೆ ಸುವಾಸನೆಯ ಸಾಂಬ್ರಾಣಿ ಧೂಪ, ಅಕಾಶ ತತ್ತ್ವಕ್ಕೆ ಘಂಟಾನಾದವು ಎಂದು ಹೇಳಲಾಗಿದೆ.**

ಪಂಚಾಕ್ಷರಿಯ 5 ಅಕ್ಷರಗಳೂ, ಅವುಗಳ ತತ್ತ್ವಸಾಧಕರಿಗೆ 5 ವಿಭಿನ್ನ ಬಣ್ಣಗಳಲ್ಲಿ ಆ 5 ತತ್ತ್ವಗಳನ್ನು ಪ್ರದರ್ಶಿಸುವವು. (1) ಬಿಳಿಯ ಮುತ್ತು ಅಥವಾ ಪಾದರಸ ಅಥವಾ ಬೆಳ್ಳಿಯಂತಹ ಪ್ರಕಾಶ (2) ಹವಳದಂತಹ ಕೆಂಪು ಕಾಂತಿ (3) ಹಳದಿಯ ಬಂಗಾರ ಕಾಂತಿ (4) ನೀಲಿ ಬಣ್ಣಗಳಲ್ಲಿ ನೀಲಿಯ ಅಂಬರದಂತೆ ವಿಶ್ವವ್ಯಾಪ್ತಿಗೊಂಡಿರುವ ಕಾಂತಿ (5) ಶುದ್ಧ ಧವಳ ಕಾಂತಿ, ಭ್ರೂ ಮಧ್ಯದಲ್ಲಿ 5 ಬಣ್ಣದ ಪ್ರಕಾಶ ಬೆಳಗಲೂ, ಋಷೀಶ್ವರರು ಸಂಧ್ಯೋಪಾಸನೆಯೆಂದು ಹೇಳಿರುವರು.

ಯಂತ್ರ, ಮಂತ್ರ, ಪಂಚತತ್ತ್ವ ಸಾಧನೆ, ಯೋಗ ಸಾಧನೆ, ಆತ್ಮಸಮರ್ಪಣೆ ಎಂಬುವವು ಮುಖ್ಯವಾದ ಸಾಧನಾಂಶಗಳೆಂದು ತಿಳಿಯಬೇಕು. ಇದರಿಂದ ದೇಹಾತ್ಮ ಬುದ್ಧಿ ಮಂದವಾಗಿ **ಜೀವಿಯ ಶರೀರವೇ ದೇಗುಲವಾಗಿ, ಒಳಗಿನ ಜೀವನೇ ಶಿವಾತ್ಮನಾಗಿ ಬದಲಾಯಿಸಿ ಮೋಕ್ಷ ತರುವುದು. ಈ ಸ್ಥಿತಿಗೆ ಪಂಚಾಕ್ಷರೀ ಜಪ, ಮಹನ್ಯಾಸಪೂರ್ವಕ ಶಿವರಾಧನೆ ಮತ್ತು ರುದ್ರಾಭಿಷೇಕ ಅದೆಷ್ಟೋ ಉಪಯೋಗಕಾರಿಗಳು.**

**ಶ್ರೀ ವಿಷ್ಣುವಿಗೆ ಸಹಸ್ರನಾಮ ಸ್ತೋತ್ರವೆಂದರೇ ಪ್ರೀತಿ. ಶ್ರೀ ಮಹಾಗಣಪತಿಗೆ ಮೋದಕ, ಸೂರ್ಯನಿಗೆ ನಮಸ್ಕಾರ, ಚಂದ್ರನಿಗೆ ಅರ್ಘ್ಯ, ಅಗ್ನಿಗೆ ಹವಿಸ್ಸು, ಶಿವನಿಗೆ ಅಭಿಷೇಕಗಳೆಂದರೆ ಬಲು ಪ್ರೀತಿ.** ಹಿಂದೆ ಬ್ರಹ್ಮಕಲ್ಪದಲ್ಲಿ ಪ್ರಳಯ ಬಂದಾಗ ಮುಂದಿನ ಸೃಷ್ಟಿಗಾಗಿ, ಪ್ರತಿಯೊಂದು ಜಾತಿಯ ಬೀಜಗಳು **ಅಂದರೆ ಎಲ್ಲಾ ಜೀವರಾಶಿಗಳು, ವೃಕ್ಷಗಳು, ಔಷಧಿಗಳು ಮುಂತಾದ ಬೀಜಗಳನ್ನು ಒಂದು ಕಲಶದಲ್ಲಿ ತುಂಬಿದನು. ಅಮೃತ, ಸಮುದ್ರ ಮತ್ತು ನದೀಜಲಗಳನ್ನೂ ತುಂಬಿದನು. ಶ್ರೀ ಗಾಯತ್ರಿ ಮಂತ್ರದ ಸಹಾಯದಿಂದ, ತನ್ನ ಪ್ರಾಣಶಕ್ತಿಯನ್ನು ಅದರೊಳಗೆ ಆವಾಹಿಸಿದನು. ಇದನ್ನೇ ಪೂರ್ಣ ಕುಂಭವೆನ್ನುವರು.** ಇದರೊಳಗಿನ

ಅಮೃತವನ್ನೇ ಮಹರ್ಷಿಗಳು ನಿರಂತರ ಧಾರೆಯಾಗಿ ಭೂಮಿ ಮೇಲೆ ಅಭಿಷೇಕ ಮಾಡಿದರು. ಈ ಕೃತ್ಯ ಕೈಲಾಸಗಿರಿ ಬಳಿ ಮಾಡಿದರಿಂದ ಅದು ಅಮೃತ ಸ್ಥಾನವಾಗಿದೆ. **ಶ್ರಾವಣ ಹುಣ್ಣಿಮೆಯಂದು ಅಮರನಾಥ ಗುಹೆಯಲ್ಲಿನ ಹಿಮ, ಪ್ರಕೃತಿ ಸಹಜವಾಗಿ ಶಿವಲಿಂಗದಂತೆ ರೂಪಗೊಳ್ಳುವುದು. ಆ ಅಮರನಾಥನನ್ನು ದರ್ಶಿಸುವುದರಿಂದ ಎಲ್ಲಾ ಪಾಪಗಳು ತೊಲಗುವವು.**

## ವಶಿಷ್ಠ ಮತ್ತು ಅಗಸ್ತ್ಯ ಮಹಾಮುನಿಗಳ ಜನನ

**ಆ ಪೂರ್ಣ ಕುಂಭವನ್ನು ತಿರುಗಿ ಹಾಕಲು, ಆದರಿಂದ ಇಬ್ಬರು ಮಹಾಮುನಿಗಳು ಅವತರಿಸಿದರು. ಅವರು ದೇವತೆಗಳು ಮಿತ್ರಾವರುಣರ ಅಂಶದಿಂದ, ಬಿಳಿಯ ತೇಜಸ್ಸಿನ ವಶಿಷ್ಠರಾಗಿ, ಎರಡನೆಯವರು ನೀಲಿಯ ತೇಜಸ್ಸಿನ ಅಗಸ್ತ್ಯರಾಗಿಯೂ ಆವಿರ್ಭವಿಸಿದರು.**

ಪೂರ್ಣ ಕುಂಭದಲ್ಲಿ ಅಮೃತೀಕರಣೆ ಮಾಡಿದ ಜಲದಿಂದ 11 ಬಾರಿ, ಏಕಾದಶ ರುದ್ರಾಭಿಷೇಕ ಮಾಡಬೇಕು. ಆಗ ಏಕಾದಶ ರುದ್ರಸ್ವರೂಪಿ ಪರಮೇಶ್ವರನು, ಏಕಾದಶ ತಿಥಿಯ ಪುಣ್ಯಬಲ ತರುವನು. ಏಕಾದಶ ರುದ್ರರಿಗೂ, ವೈಷ್ಣವ ಏಕಾದಶಿ ತಿಥಿಗೂ ಸಂಬಂಧವಿರಲೂ, ಶಿವಕೇಶವರು ಒಂದೇ ಎಂದು ತಿಳಿಯಬೇಕು. **ನಮಕದೊಂದಿಗೆ ರುದ್ರಾಭಿಷೇಕ ಮಾಡಿದರೇ ಅಪಮೃತ್ಯು ದೋಷ ಪರಿಹಾರವಾಗುವುದು.** ಸೋಮಲತೆಗೆ ಅಧಿಷ್ಠಾನಮೂರ್ತಿ ಚಂದ್ರ. ಈತ ಪುನರುಜ್ಜೀವಕ್ಕೆ ಮೂಲಶಕ್ತಿಯನ್ನು ಸುರಿಯುವನು. ಈ ಚಂದ್ರಕಲೆ, ಯೋಗಿಯ ಭ್ರೂಮಧ್ಯವಾದ ಕಣ್ಣು ಹುಬ್ಬಿನ ಮೇಲೆ, ಸಹಸ್ರಾರಕ್ಕೆ ಮುಂಭಾಗದಲ್ಲೂ ಬೆಳಗುತ್ತಿರುವುದು.

## ಶ್ರೀ ಈಶ್ವರನ ವಿವಿಧ ರೂಪ ವರ್ಣನೆ

ಈ ಕಾರಣದಿಂದಲೇ ಶಿವನಿಗೆ ಶಿರದಲ್ಲಿ ಚಂದ್ರಕಲೆ ಇದೆ ಎಂದು ಹೇಳಲಾಗಿದೆ. ಘೂರ್ಜರ ದೇಶದ ಸೋಮನಾಥ ಕ್ಷೇತ್ರದಲ್ಲಿನ ಅಮೃತ ಶಿಲೆಯು ಶಿವನ ಶಿರದಲ್ಲಿ ಚಂದ್ರಕಲೆಯಾಗಿ ಸ್ಫಟಿಕ ಲಿಂಗ ಪೂಜೆ ಸ್ವೀಕರಿಸುತ್ತಿದೆ.

ತಾನು ರುದ್ರತ್ವ ಹೊಂದದೇ, ಯಾರೂ ರುದ್ರಾಭಿಷೇಕ ಮಾಡಬಾರದೆಂದು ಶಾಸ್ತ್ರ. ಮಹನ್ಯಾಸದಲ್ಲಿ ಕಾಲ, ಎಲ್ಲವನ್ನೂ ಹರಿಸುವುದಾದ್ದರಿಂದ, ಅಭಿಷೇಕಸ್ತ ಕಾಲಾತ್ಮಕನಾಗಿ, ಯಜ್ಞ ಸ್ವರೂಪವನ್ನು ಮನದಲ್ಲಿ ನ್ಯಾಸಮಾಡಿಕೊಂಡು, ರುದ್ರಾಭಿಷೇಕವನ್ನು ನೆರವೇರಿಸಬೇಕು.

ಬೊಧಾಯನ ಮಹರ್ಷಿ ಪ್ರೋಕ್ಷಿಸಿದ ಮಹನ್ಯಾಸ ಸಹಿತದ ರುದ್ರಾಭಿಷೇಕದಲ್ಲಿ, ಶಿವನ ತತ್ಪುರುಷ, ಅಘೋರ, ಸದ್ಯೋಜಾತ, ವಾಮದೇವ, ಈಶಾನ ಮೂರ್ತಿಗಳು ವರ್ಣಿಸಲಾಗಿವೆ. ತತ್ಪುರುಷಮೂರ್ತಿ ಪ್ರಳಯಾಗ್ನಿ ಬಣ್ಣವನ್ನು, ಅಘೋರಮೂರ್ತಿ ಮೇಘವರ್ಣ, ಘನಶ್ಯಾಮ ನೀಲಿಯನ್ನು, ಸದ್ಯೋಜಾತನು ಚಂದ್ರಕುಂದ ಧವಳ ವರ್ಣವನ್ನು, ವಾಮದೇವ ಮೂರ್ತಿ ಗೌರವ ವರ್ಣದಲ್ಲಿರುವರು, ಈಶಾನ ಮೂರ್ತಿ ತೇಜೋಮೂರ್ತಿ. ಆದ್ದರಿಂದ ಆಕಾಶ ಬಣ್ಣಗಳಲ್ಲಿ ಪ್ರಕಾಶಿಸುತ್ತಿರುವರು.

ರುದ್ರರು ಸಾವಿರಾರು ಸಂಖ್ಯೆಯಲ್ಲಿರುವರು. ರುದ್ರ ಗಣಗಳು ಎನ್ನುವ ದೇವತೆಗಳು ಒಂದೊಂದು ಗಣಕ್ಕೂ ಮುವ್ವರಂತೆ, 33 ಕೋಟಿ ರುದ್ರಗಣಗಳು ಇರುವರೆಂದು, ಇವರೇ ಭೂಮಿ, ಆಕಾಶ, ಅಂತರಿಕ್ಷ, ಜಲ, ವಾಯು, ಶರೀರ, ಪ್ರಾಣ, ಮತ್ತು ಮನಸ್ಸನ್ನು ಆವರಿಸಿಕೊಂಡಿರುವರೆಂದು, ವೇದ ಘೋಷಿಸುತ್ತಿದೆ.

ಶ್ರೀಪಾದರನ್ನು ಪೂಜಿಸಿ, ನೆನೆಯುವಂತಹ ಪುಣ್ಯ ಪುರುಷರನ್ನು 33 ಕೋಟಿ ರುದ್ರ ಗಣಗಳು ಅನುಗ್ರಹಿಸಿವೆ.

**ಈ 33 ಕೋಟಿ ರುದ್ರ ಗಣಗಳ ಅಧಿಪತಿ, ಶ್ರೀ ಗಣಪ, ಆದ್ದರಿಂದಲೇ ತನ್ನಲ್ಲಿನ ಗಣಪತಿ ತತ್ವಯೋಗ ತಿಳಿಸಲೂ, ಶ್ರೀಪಾದ ಶ್ರೀವಲ್ಲಭರು ಗಣೇಶ ಚತುರ್ಥಿಯಂದು ಜನ್ಮಿಸಿದರು. ಆದ್ದರಿಂದಲೇ ಶ್ರೀಪಾದರ ಭಕ್ತರು 33 ಕೋಟಿ ರುದ್ರ ಗಣಗಳ ಅನುಗ್ರಹವನ್ನು ತಪ್ಪದೇ ಪಡೆಯುವರು.**

## ರುದ್ರಾಕ್ಷಿಗಳ ವರ್ಣನೆ

ಶಿವ ಭಕ್ತರಿಗೆ ರುದ್ರಾಕ್ಷಿ ಧಾರಣೆ ಬೇಕಾಗಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಜಾತಿ ಎನ್ನುವ ರುದ್ರಾಕ್ಷಿಗಳು ಉಂಟು, ಬಿಳಿಯ ರುದ್ರಾಕ್ಷಿಗಳು ಬ್ರಾಹ್ಮಣ ಜಾತಿಯವು. ಹೆಚ್ಚಿಗೆ ಸಿಗುವುದಿಲ್ಲ. ಕೆಂಪು, ಜೇನುತುಪ್ಪ ಬಣ್ಣದ್ದು ಕ್ಷತ್ರಿಯ ಜಾತಿ. ಹುಣಿಸೆ ಬೀಜ ಬಣ್ಣ ವೈಶ್ಯ ಜಾತಿ ರುದ್ರಾಕ್ಷಿ, ಕಪ್ಪು ಬಣ್ಣದ ರುದ್ರಾಕ್ಷಿ ಶೂದ್ರ ಜಾತಿಯವು.

ಸಾಧಾರಣವಾಗಿ 5 ರಿಂದ 16 ಮುಖಿಗಳ ರುದ್ರಾಕ್ಷಿಗಳು ಹೆಚ್ಚಾಗಿ ಲಭಿಸುವವು. ಹಾಲಿನಲ್ಲಿ ಮತ್ತು ನೀರಿನಲ್ಲಿ ರುದ್ರಾಕ್ಷಿಗಳು ಮುಳುಗುವವು. ಭಾರವಿಲ್ಲದ ಮತ್ತು ಎಳೇ ರುದ್ರಾಕ್ಷಿಗಳು, ಧರಿಸಲೂ ನಿಷಿದ್ಧ.ಒಂದು ರುದ್ರಾಕ್ಷಿಯನ್ನು ತಾಮ್ರದ ಉದ್ಧರಣೆ ಕೆಳಗೆ ನಿಲ್ಲಿಸಿ, ಅವುಗಳ ಕೆಳಗೆ ತಾಮ್ರದ ಪಂಚಪಾತ್ರೆ ಇಟ್ಟಲ್ಲಿ, ಆ ರುದ್ರಾಕ್ಷಿ ಸಾಲಿಗ್ರಾಮದಂತೆ ತಿರುಗುವುದು. ಪ್ರದಕ್ಷಿಣವಾಗಿ ತಿರುಗಿದರೇ ಒಳ್ಳೆಯ ರುದ್ರಾಕ್ಷಿ ಎಂದು, ಅಪ್ರದಕ್ಷಿಣವಾಗಿ ತಿರುಗಿದ್ದಲ್ಲಿ ಕೆಟ್ಟದ್ದು, ಮತ್ತು ದರಿದ್ರ ತರುವುದೆಂದು ಹೇಳುವರು. ಕೆಟ್ಟದ್ದನ್ನು ಸಂಸಾರಸ್ಥರು ಉಪಯೋಗಿಸಿದರೇ ಪತ್ನಿ ಸಾಯುವಳು, ಸಂಸಾರ ಹಾಳಾಗುವುದು. ಸನ್ಯಾಸತ್ವ ಲಭ್ಯವಾಗುವುದು. ಆದ್ದರಿಂದ ಈ ತರಹದ ರುದ್ರಾಕ್ಷಿಯನ್ನು ಕೇವಲ ಸನ್ಯಾಸಿಗಳು ಉಪಯೋಗಿಸಬಹುದು.

ಕಾಲಾಗ್ನಿರುದ್ರನು ನುಡಿದರು ''ಬ್ರಾಹ್ಮಣರು ಬಿಳಿಯ ರುದ್ರಾಕ್ಷಿಯನ್ನು, ಕ್ಷತ್ರಿಯರು ಕೆಂಪುದ್ದನ್ನು, ವೈಶ್ಯರು ತಿಳಿ ಹಳದಿ ಬಣ್ಣದ್ದನ್ನು ಮತ್ತು ಶೂದ್ರರು ಕಪ್ಪು ರುದ್ರಾಕ್ಷಿ ಧರಿಸಿದರೆ, ಒಳ್ಳೆಯ ಫಲ, ಎಲ್ಲಾ ಬಯಕೆ ತೀರಿ, ಪಾಪ ನಶಿಸುವುದು.''

ಏಕಮುಖಿ ರುದ್ರಾಕ್ಷಿ ಶಿವ ಸ್ವರೂಪ. ದ್ವಿಮುಖಿ ಅರ್ಧನಾರೀಶ್ವರ ರೂಪ, ತ್ರಿಮುಖಿ ಅಗ್ನಿ ಸ್ವರೂಪ. ಚತುರ್ಮುಖಿ ಬ್ರಹ್ಮ ಸ್ವರೂಪ, ಪಂಚಮುಖಿ ಕಾಲಾಗ್ನಿರುದ್ರ ರೂಪಕ್ಕೆ ಸಮಾನವಾದವು, ಷಣ್ಮುಖಿ ಕಾರ್ತಿಕೇಯ ರೂಪ, ಸಪ್ತಮುಖಿ ಮನ್ಮಥ ರೂಪ, ಅಷ್ಟಮುಖಿ ರುದ್ರಭೈರವ ರೂಪ, ನವಮುಖಿ ಕಪಿಲಮುನಿ ರೂಪ. ಇದು ಸಿಗುವುದು ಬಹಳ ಕಷ್ಟ. ಇದರಲ್ಲಿ ವಿದ್ಯಾ, ಜ್ಞಾನ, ಕ್ರಿಯೆ, ಶಾಂತ, ವಾಮ, ಜ್ಯೇಷ್ಠಾ, ರೌದ್ರ, ಅಂಗ ಮತ್ತು ಪಶ್ಯಂತಿ ಎನ್ನುವ ನವ ಶಕ್ತಿಗಳು ಇರುವುದರಿಂದ, ನವಮುಖಿ ರುದ್ರಾಕ್ಷಿ ದೇವತಾ ಸ್ವರೂಪ. ಏಕಾದಶ ಮುಖಿ ಸಾಕ್ಷಾತ್ ರುದ್ರಾಂಶ ರೂಪ. ದ್ವಾದಶಮುಖಿ ದ್ವಾದಶಾದಿತ್ಯ ರೂಪ. ಹೀಗೆ ರುದ್ರಾಕ್ಷಿಗಳಿಗೂ, ದೇವತಾ ಸ್ವರೂಪಗಳಿಗೂ ಹತ್ತಿರದ ಸಂಬಂಧವಿರುವುದು.

ಶ್ರೀಪಾದ ಶ್ರೀವಲ್ಲಭರು ಪ್ರಕೃತಿಯ ಪ್ರವೃತ್ತಿನಿವೃತ್ತಿ ಗಣಾಧಿಪನಾದ ಶ್ರೀ ಗಣೇಶ್ವರನ ತತ್ತ್ವವನ್ನು ತನ್ನ ಚೈತನ್ಯಮಯ ಸ್ವರೂಪದಲ್ಲಿ ಹೊಂದಿಹರು. ಆದ್ದರಿಂದಲೇ ಅವರು 33 ಕೋಟಿ ದೇವತೆಗಳ ದಿವ್ಯ ಸ್ವರೂಪವಾಗಿರುವರು. ಅಷ್ಟಲ್ಲದೇ, ಅವರ ಸಂಕಲ್ಪವಿಲ್ಲದೇ ಈ ಸೃಷ್ಟಿಯಲ್ಲಿನ ಒಂದು ಅಣುವು ಆಗಲಿ, ಪರಮಾಣುವಾಗಲಿ ಕದಲಲಾರದು. ಅವರು ಸಮಸ್ತ ಚಲನೆಗಳಿಗೂ

ಮೂಲಭೂತವಾದ ಕಾರಣರೂಪ. ಎಲ್ಲಾ ಕಾರಣಗಳಿಗೂ ಅವರೇ ಕಾರಣ! ಅವರನ್ನು ಶಿವ ರೂಪವೆಂದೆಣಿಸುವವರಿಗೆ, ವಿಷ್ಣುವಂತೆಯೂ, ವಿಷ್ಣುವೆನ್ನುವವರಿಗೆ ಶಿವನಾಗಿಯೂ ಕಾಣುವರು. ನಿಶ್ಚಲ ನಂಬಿಕೆಯಿಂದ ಶರಣು ಹೋಗುವವರಿಗೆ ನಿಜರೂಪ ತೋರುವರು ಎಂದು ಶಿವಾರಾಧನೆ ಪದ್ಧತಿಗಳೊಂದಿಗೆ ಮತ್ತಷ್ಟು ರುದ್ರಾಕ್ಷಿಗಳ ವಿಷಯ ತಿಳಿಸುತ್ತಾ, ಜನ್ಮತರಿಸಲೂ ಶ್ರೀಪಾದರ ದರ್ಶನಕ್ಕೆ ಕುರಂಗಡ್ಡೆ ಬಂದರು.

ನಾವಿಬ್ಬರೂ ಕುರುಂಗಡ್ಡೆಯಲ್ಲಿ ಶ್ರೀಪಾದ ಶ್ರೀವಲ್ಲಭರನ್ನು ದರ್ಶಿಸಿಕೊಂಡೆವು. ಅವರು ಯೋಗನಿದ್ರೆಯಿಂದ ಎದ್ದು "ಆಹಾ! ಏನು ಚರ್ಚೆಗಳೂ! ಶ್ರೀಪಾದನೆನ್ನುವನೊಬ್ಬ ಇರುವನಂತೆ? ಶಿವ ಸ್ವರೂಪಿಯಂತೆ? ನಾನೇನಾ ಆ ಶ್ರೀಪಾದನು? ಅಲ್ಲಿ ಶ್ರೀಪಾದನೇ ನಾನಾಗಿ ಬಂದಿಹೆನಾ? ನಾನು ಯಾರು? ಸ್ವಾಮಿ ಧರ್ಮಗುಪ್ತರೇ, ಸ್ವಲ್ಪ ಬಿಡಿಸಿ ಹೇಳಿ" ಎಂದು ಕೇಳಿದರು.

ಆಗ ಶ್ರೀ ಧರ್ಮಗುಪ್ತರು, "ಸ್ವಾಮಿ! ನಾನು ಶ್ರೀ ಮಹಾಗುರುಗಳ ದರ್ಶನಕ್ಕಾಗಿ ಪೀಠಿಕಾಪುರದಿಂದ ಹೊರಡುವಾಗ, ನನ್ನ ಬಾವನವರಾದ ಶ್ರೀ ವೆಂಕಟಪ್ಪಯ್ಯ ಶ್ರೇಷ್ಠಿಗಳು, ಶ್ರೀಗಳೊಡನೆ ತರ್ಕವಿತರ್ಕ ಮಾಡುತ್ತಾ, ಅಜ್ಞಾನದಲ್ಲಿರಬೇಡವೆಂದು, ಅವರನ್ನು ಕೇವಲ ಶರಣು ಕೋರಿ ಅವರ ಅನುಗ್ರಹ ಪಡೆಯಬೇಕೆಂದು ಹೇಳಿದರು, ಆದ್ದರಿಂದ ನಿಮ್ಮ ಪ್ರಶ್ನೆಗಳಿಗೆ ನಾನು ಮೂಕನು. ವೇದಗಳೇ ತಮ್ಮ ತತ್ತ್ವತಿಳಿಯಲಾರದೇ ಮೌನ ವಹಿಸಲು, ಸಾಮಾನ್ಯನು ನಾನೆಷ್ಟು, ನನ್ನ ಜ್ಞಾನ ಎಷ್ಟು?" ಎಂದರು.

ಶ್ರೀಪಾದರು ಪ್ರಸನ್ನ ವದನರಾದರು. ನನಗೂ ಶ್ರೀ ಧರ್ಮಗುಪ್ತರಿಗೂ ಪಾದ ನಮಸ್ಕಾರ ಅನುಗ್ರಹಿಸಿದರು. ನಾವು ಆ ಸ್ಪರ್ಶದಿಂದ ಎಚ್ಚರ ಕಳೆದುಕೊಂಡು ಬಹಳ ಕಾಲ ಧ್ಯಾನದಲ್ಲಿದ್ದೆವು. ಸಾಯಂಸಂಧ್ಯಾ ಸಮಯ ಆಗುತ್ತಿರಲೂ ಶ್ರೀಗಳ ಆದೇಶದಂತೆ, ಕೃಷ್ಣದ ಆ ಕಡೆಯ ದಡ ತಲುಪಿದೆವು. ನಾವಿಬ್ಬರೂ ಆ ರಾತ್ರಿ ಶ್ರೀಪಾದರ ದಿವ್ಯ ಲೀಲೆಗಳನ್ನೇ ನೆನೆಯುತ್ತಾ ಕಾಲ ಕಳೆದೆವು. ಆ ಲೀಲೆಗಳು ಊಹಿಸಲಸಾಧ್ಯ. ನಾವು ನಿದ್ರೆಗೆ ಪ್ರಯತ್ನಿಸುತ್ತಿರಲೂ, ಸುಶ್ರಾವ್ಯವಾಗಿ 'ಶ್ರೀಪಾದ ಶ್ರೀವಲ್ಲಭ ದಿಗಂಬರ' ಕೇಳಿ ಬರುತ್ತಿತ್ತು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

# ಅಧ್ಯಾಯ - 26

ನಾವು ಸೂರ್ಯೋದಯ ವೇಳೆಗೆ ಶ್ರೀಗಳ ದರ್ಶನಕ್ಕೆ ಕುರುಂಗಡ್ಡೆ ಸೇರಿದೆವು. ಶ್ರೀ ಧರ್ಮಗುಪ್ತರಿಗೆ, ಕಲಿಯುಗದ ಪ್ರಾದುರ್ಭಾವ ವಿವರಗಳು ಶ್ರೀಪಾದರಿಂದ ತಿಳಿಯಬೇಕೆಂದಿತ್ತು. ಇಂದು ಶ್ರೀಗಳು ಪ್ರಸನ್ನವದನರಾಗಿದ್ದು, ಕರುಣೆಯಿಂದ ನಮಗೆ ಪಾದ ನಮಸ್ಕಾರ ಪ್ರಸಾದಿಸಿದರು.

ಶ್ರೀ ಧರ್ಮಗುಪ್ತರು, ಕಲಿಯುಗದ ಪ್ರಾದುರ್ಭಾವ ವಿವರ ತಿಳಿಸಬೇಕೆಂದು ಶ್ರೀಗಳನ್ನು ಬೇಡಿದರು.

ಶ್ರೀಚರಣರು, "ಮಕ್ಕಳೇ! ಕಾಲ, ಪರಮಾತ್ಮನ ವಿರಾಟ್‌ಸ್ವರೂಪ. ಸೂರ್ಯನನ್ನು ಕಾಲಾತ್ಮಕನೆಂದೂ ಕರೆಯುವರು. ಸೂರ್ಯನು ಧನಿಷ್ಠದಿಂದ ಶ್ರವಣ ನಕ್ಷತ್ರ ಸುತ್ತಿ ಪುನಃ ಧನಿಷ್ಠ ಸೇರಲು ಹಿಡಿಸುವ ಕಾಲವನ್ನು ಬ್ರಹ್ಮಕಲ್ಪವೆನ್ನುವರು. ಇದರ ಅರ್ಧ ಭಾಗ ಸೃಷ್ಟಿ ಕಲ್ಪ ಮತ್ತಷ್ಟು ಅರ್ಧ ಪ್ರಳಯ ಕಲ್ಪವಾಗಿ ಲೆಕ್ಕಿಸುವರು. ಇದನ್ನೇ ಹಗಲು, ರಾತ್ರಿ ಎಂದು ಸಾಮಾನ್ಯ ಅನುಭವಕ್ಕೆ ಹೇಳಬಹುದು.

ಪಿತೃ ದೇವತೆಗಳಿಗೆ ಸಂಬಂಧಿಸಿ, ಕಾಲದಲ್ಲಿ ಅರ್ಧ ಭಾಗಗಳಾಗಿ ಶುಕ್ಲ ಕೃಷ್ಣ ಪಕ್ಷಗಳಿವೆ. ಸಂವತ್ಸರ ಪುರುಷನಿಗೂ, ಅರ್ಧ ಭಾಗಗಳಾಗಿ ಉತ್ತರಾಯಣ ದಕ್ಷಿಣಾಯಣಗಳಿವೆ. ಯೋಗಿ ತನ್ನ ಶರೀರದಲ್ಲೇ ಕಾಲಚಕ್ರವನ್ನು ಕಾಣುವನು. ಇದೇ ರಹಸ್ಯ ರಾಜಯೋಗ ವಿದ್ಯೆ. ಇದಿಲ್ಲದೇ ಕಾಲಜ್ಞಾನ ಶೂನ್ಯ.

ತಾರಕ ರಾಜಕ ಯೋಗದಲ್ಲಿ ಶರೀರವನ್ನು ಬ್ರಹ್ಮಾಂಡವಾಗಿ ಊಹಿಸುವರು. ಎಲ್ಲಾ ಲೋಕಗಳೂ ಇಲ್ಲೇ. ನಮ್ಮ ಶಿರಸ್ಸಿನ ಮೆದುಳಿನ ಭಾಗ ಬ್ರಹ್ಮಲೋಕ. ನಾಭಿ ವಿಷ್ಣು ಲೋಕ. ಹೃದಯದಲ್ಲಿ ರುದ್ರ ಲೋಕ, ಪಿತೃ ದೇವತೆಗಳು ನಮ್ಮ ವೀರ್ಯ ಕಣಗಳಲ್ಲಿ ಜನ್ಯ ದೇವತೆಯಾಗಿರುವರು. ಜನ್ಯ ದೇವತೆಯರು ಮಾನವ ಹಿಂದೆ ಮಾಡಿದ ಕರ್ಮಫಲಗಳನ್ನು ಮುಂಬರುವ ಕಾಲದಲ್ಲಿ ಅನುಭವಕ್ಕೆ ತರುವರು. ಇದು ಒಂದು ಕ್ರಮವಾಗಿ ಪ್ರಾಪ್ತವಾಗಲು ಕಾಲವೆನ್ನುವುದು ಬಹಳಷ್ಟು ಬೇಕಾಗಿದೆ.

## ಕಲಿಯುಗಾಂತ ಲಕ್ಷಣಗಳು

ಪಿತೃ ದೇವತೆಗಳೆಂದರೇ ತೀರಿಹೋದ ದೊಡ್ಡವರಲ್ಲ. ಸತ್ತವರ ಹೆಸರಲ್ಲಿ ನಾವು ಕೊಡುವ ಶ್ರಾದ್ಧಫಲ ಸ್ವೀಕರಿಸಿ, ತೀರಿಹೋದವರಿಗೆಲ್ಲಾ ಉತ್ತಮ ಗತಿ ಕೊಡುವವರು ಜನ್ಯ ದೇವತೆಗಳು. ಇವರಿಗೆ ಜನ್ಮ ಇಲ್ಲ.

ಯೋಗಿ ತನ್ನ ಶರೀರದಲ್ಲಿನ 6 ಯೋಗ ಚಕ್ರಗಳನ್ನು, ವರುಷದ 6 ಋತುಗಳಾಗಿ ನೋಡುವನು. ವರುಷದ 12 ಹುಣ್ಣಿಮೆಗಳು, 12 ಅಮಾವಾಸ್ಯೆಗಳು ಸೇರಿ, 24 ಪರ್ವಗಳೇ ಗಾಯತ್ರಿ ಚತುರ್ವಿಂಶತಿ ಛಂದಸ್ಸು. ಕಾಲ ಸ್ವರೂಪನಾದ ಶ್ರೀಮನ್ನಾರಾಯಣನು ಕೆಲವರು ವರುಷ ಪುರುಷನಾಗಿ ಪೂಜಿಸುವರು. ಇದುವೇ ದ್ವಾದಶಾಕ್ಷರೀ ವಿದ್ಯೆ. ವರುಷದ 12 ಮಾಸಗಳಿಗೆ ಒಂದು ಅಕ್ಷರದಂತೆ, 12 ಅಕ್ಷರಗಳ ಮಂತ್ರ ಇದು.

ನದಿಗಳೆಲ್ಲವೂ ಉಕ್ಕಿ ಮಿತಿ ಇಲ್ಲದ ನಷ್ಟ ತರುವುದು. ಭೂಮಿ ಸದಾ ಭೂಕಂಪಗಳಿಂದ ನಡುಗುತ್ತಿರುವುದು,

ಸೂರ್ಯಚಂದ್ರಾದಿಗಳು ತಮ್ಮ ಕಕ್ಷೆ ತಪ್ಪುವುದು, ಹಗಲಿಲ್ಲದ ಕತ್ತಲೆ, ಆಗಸದಲ್ಲಿ ಭಯ ತರುವ ಧೂಮಕೇತುಗಳು ಮುಂತಾದವು ಕಲಿ ಯುಗಾಂತ ಲಕ್ಷಣಗಳು.

ದ್ವಾಪರ ಯುಗಾಂತದಲ್ಲಿ ಪಶ್ಚಿಮ ಸಮುದ್ರದ ಒಂದ ದ್ವೀಪ ಅಧಿಪತಿಯಾದ ಕಲಿಪುರುಷನು ಘೋರ ತಪಸ್ಸು ಆಚರಿಸುವನೆಂದು ವೇದವ್ಯಾಸರು ತಮ್ಮ ಭವಿಷ್ಯ ಪುರಾಣದಲ್ಲಿ ಹೇಳಿರುವರು.

## ಮ್ಲೇಚ್ಛ ಜಾತಿ ಹುಟ್ಟುವಿಕೆ

ಎಲ್ಲೆಲ್ಲೂ ವೇದಮಂತ್ರ, ಯಜ್ಞಗಳು, ತಪಸ್ಸು ಹೆಚ್ಚಾಗುತ್ತಿರಲೂ, ಕಲಿ ದುಃಖದಿಂದ, ''ಪ್ರಭೂ! ಎಲ್ಲಿ ನೋಡಿದರೂ ಧರ್ಮ ಬೆಳಗುತ್ತಿದೆ. ಹಾಗಿದ್ದಲ್ಲಿ ನನ್ನ ಪ್ರಭಾವ ಹೇಗೆ ಹರಡಲೀ? ನಿಮ್ಮ ವಾಗ್ದಾನದಂತೆ ನಾನು ಯುಗಧರ್ಮ ಹರಡಿಸಬೇಕಲ್ಲವೇ!'' ಎಂದು ಭಗವಂತನನ್ನು ಪ್ರಾರ್ಥಿಸಿದನು. ಆಗ ಜಗತ್ಪ್ರಭುಗಳು ಕಲಿಗೆ ಪಶ್ಚಿಮ ಸಮುದ್ರದ ಒಂದು ದ್ವೀಪದಲ್ಲಿನ ಮ್ಲೇಚ್ಛಜಾತಿಯ ಮುಖ್ಯಸ್ಥನಾದ ಆದಮನನ್ನು ಮತ್ತು ಅವನ ಸಹೋದರಿ ಹವ್ಯವತಿಯನ್ನು ತೋರಿಸಿದರು. ಅವರಿಬ್ಬರಿಗೂ ವಿಹಾರಕ್ಕಾಗಿ ಒಂದು ವಿನೂತನ ಉದ್ಯಾನವನ್ನು ಸೃಷ್ಟಿಸಿ ಅವರಿಬ್ಬರಲ್ಲಿ ಅಧರ್ಮ ಸಂಬಂಧ ಮತ್ತು ಸಂತಾನ ಪ್ರಾಪ್ತವಾಗುವಂತೆ ಕಲಿ ಪ್ರೋತ್ಸಹಿಸಬೇಕೆಂದು ಆದೇಶಿಸಿದರು. ಹಾಗೆ ನಡೆದಂತೆಯೇ ಅವರು ಪತಿತರಾಗಿ, ಅವರ ದಿವ್ಯಶಕ್ತಿಗಳು ನಶಿಸಿದವು. ಆ ಜೋಡಿಯಿಂದ, ಕಲಿ ಧರ್ಮಕ್ಕೆ ಮೂಲವಾದ ಮ್ಲೇಚ್ಛ ಜಾತಿ ಹುಟ್ಟಿಕೊಂಡಿತು.

ದ್ವಾಪರ ಯುಗಾಂತದಲ್ಲಿ ಅಂದರೇ, ಇನ್ನು 2800 ವರುಷಗಳಲ್ಲಿ ದ್ವಾಪರ ಮುಗಿಯುವುದೆಂದಾಗ, ಮ್ಲೇಚ್ಛ ದೇಶದಲ್ಲಿ ಅವರ ಸಂತತಿ ಬೆಳೆಯುವುದೆಂದು, ಭವಿಷ್ಯ ಪುರಾಣ ಪ್ರತಿಸರ್ಗ ಪರ್ವದಲ್ಲಿ ತಿಳಿಸಲಾಗಿದೆ.

ನೀಲಾಚಲದ ಬಳಿ ಸೃಷ್ಟಿಸಲಾದ ಆದಮನು ಮತ್ತು ಹವ್ಯವತಿಗಳ ಪಾಪ ಸಂತಾನವು, ಆರ್ಯ ಧರ್ಮವನ್ನು ದೂಷಿಸುತ್ತಾ, ಎಲ್ಲದನ್ನೂ ತಿನ್ನುವವರಾಗಿಯು, ಅನಾಚಾರಿಗಳಾಗಿಯೂ ಬೆಳೆದರು. ಹೀಗೆ ಬೆಳೆದ ಅನಾಚಾರರನ್ನು ನಾನು, ಕಲ್ಕಿ ಅವತಾರದಲ್ಲಿ ಕೋಟಿಗಟ್ಟಲೇ ವಧಿಸಿ, ಸತ್ಯಯುಗ ತರುವೆ'' ಎಂದು ನುಡಿದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 27

# ಪಂಚದೇವ್ ಪಹಾಡ್ ಪ್ರಾಂತದಲ್ಲಿ ವಿರೂಪಾಕ್ಷರು

### ಪಂಚದೇವ ಪಹಾಡ್ ಸ್ಥಲವಿಶೇಷ

ಶ್ರೀಧರ್ಮಗುಪ್ತರು ಮತ್ತು ನಾನು, ಕೃಷ್ಣಾ ನದಿ ಈ ಭಾಗದ ದಡ ತಲುಪಿದೆವು, ಮಧ್ಯಾಹ್ನವಾಯಿತು. ಅಂದು ಗುರುವಾರ ಗುರುಸಾರ್ವಭೌಮರು ವಿವಿಧ ಪ್ರಾಂತದಲ್ಲಿ ಒಂದೇ ಸಮಯಕ್ಕೆ ಭಿಕ್ಷೆ ಪಡೆಯುವ ಪರಮಪವಿತ್ರ ದಿನ. ಶ್ರೀಪಾದರು ನಮ್ಮನ್ನು ಗರಿಕೆ ಹುಲ್ಲಿನಿಂದ ಒಂದೇದಿನದಲ್ಲಿ ಮನೆ ನಿರ್ಮಿಸಲು ಹೇಳಿದರು. ಆ ಹೊಸ ಪ್ರದೇಶದಲ್ಲಿ ಗೃಹನಿರ್ಮಾಣಕ್ಕೆ ಬೇಕಾದ ಉಪಕರಣಗಳು, ಆಳುಗಳು ಬೇಕು.

ದಿಕ್ಕು ದಿಶೆ ಇಲ್ಲದ ದಾರಿಹೋಕರಂತೆ ನಾವು ಅಲ್ಲಲ್ಲಿ ಸುತ್ತುತ್ತಿದ್ದೆವು. ಒಂದು ಹೊಲದಲ್ಲಿ ಹಸುಗಳಿಗಾಗಿ ಕೊಠಡಿ ಒಂದು ನಿರ್ಮಿಸಲಾಗುತ್ತಿತ್ತು. ಯಜಮಾನರಿಗಾಗಿ ಒಂದು ಎತ್ತರದ ಪೀಠವೂ ತಯಾರಿತ್ತು. ಆ ಯಜಮಾನ ನಮ್ಮನ್ನು ಆಹ್ವಾನಿಸಿ, ಭೋಜನ ತರಲು ಆದೇಶಿಸಿದರು. ನಾವು 'ಬ್ರಾಹ್ಮಣರಾಗಿ ಶೂದ್ರರ ತಿಂಡಿ ತಿನ್ನುವುದೇ' ಎಂದು ಯೋಚಿಸುತ್ತಿರಲೂ, ಆತ, ''ಓಹೋ! ಒಮ್ಮೆ ನಮ್ಮ ಹಸುಗಳನ್ನು ಕದ್ದು, ಅವನ್ನು ಮಾರಿ ನಂತರ ಕದಿಯಲು ಬಂದವರಂತೆ ಕಾಣುವ ನೀವು, ಶೂದ್ರ ಭೋಜನ ತಿನ್ನಲು ಸಂಕೋಚಪಡುತ್ತಿರುವುದು ವಿಚಿತ್ರವಾಗಿ ಕಂಡುಬರುತ್ತಿದೆ'' ಎಂದು ಕಠಿಣವಾಗಿ ಆರೋಪಿಸಿದರು! ಅದು ಅರ್ಥಮಾಡಿಕೊಂಡು, ನಾವು ಬಲವಂತವಾಗಿ ಊಟ ಮಾಡಿದೆವು. ಮಾತಿನಲ್ಲಿ ಆತ ವಿರೂಪಾಕ್ಷನೆಂದು ತಿಳಿದುಬಂದಿತು. ಆತ ನಮ್ಮಿಬ್ಬರನ್ನೂ ಒಂದೊಂದು ಮರಕ್ಕೆ ಕಟ್ಟಿ ನಮ್ಮ ಬಳಿ ಇರುವ ಧನವನ್ನು ತೆಗೆದುಕೊಳ್ಳಲೂ ತನ್ನ ಸೇವಕರಿಗೆ ಆದೇಶ ಕೊಟ್ಟನು. ನನ್ನ ಹತ್ತಿರ ಹಣವಿರಲಿಲ್ಲ. ಶ್ರೀ ಧರ್ಮಗುಪ್ತರ ಬಳಿ ಇತ್ತು.

### ಶ್ರೀಪಾದರ ಊಹಾತೀತ ದಿವ್ಯಲೀಲೆಗಳು

ನಮ್ಮ ವಾಸ್ತವ ಸಂಗತಿ ಅವರಿಗೆ ತಿಳಿಸಿದರೂ ಫಲಿತ ಶೂನ್ಯವೆಂದು ತಿಳಿಯಿತು. ಹಾಗೆ ಅವರ ಬಂದಿಗಳಾಗಿ ಬಿದ್ದಿದ್ದೆವು! ಇಷ್ಟರಲ್ಲಿ ಅಲ್ಲಿಗೆ 'ಮೈಲಾರು'ಗಳೆಂಬ ಒಂದು ಜಾತಿ ಜನ ಬಂದರು. ಈ ಜಾತಿಯ 'ಗಂಗೆ ಕಾವಿಗಳೆ'ಂಬ ಗುಂಪು, ಶ್ರೀ ವಾಸವೀ ಕನ್ಯಕಾಪರಮೇಶ್ವರಿ ಪೀಠಗಳು ತರುತ್ತಿದ್ದರು. ಮೂರು ನಾಮಗಳನ್ನುಧರಿಸಿದ್ದರು. ಇವರು ಗಂಟೆಗಳನ್ನು ಕೈಯಲ್ಲಿ ಹಿಡಿದುಕೊಂಡು, ಶ್ರೀ ಕನ್ಯಕಾಪರಮೇಶ್ವರೀ ದೇವಿಯ ಹಾಡುಗಳನ್ನು, ಪದ್ಯಗಳನ್ನು ಹೇಳುತ್ತಿದ್ದರು. ಇವರು, ವಿವಾಹಾದಿ ಶುಭಕಾರ್ಯಗಳಿಗೆ ಮತ್ತು ಶ್ರೀ ವಾಸವೀ ಮಾತೆ ಜಯಂತಿಗೆ, ಬಿಂದಿಗೆಗಳ ಕಾವಡಿ ಹೊತ್ತು ಬರುತ್ತಿರುವರು. ಇವರಲ್ಲದೇ 'ವೀರಮುಷ್ಟುರೆ'ಂಬುವರು ಪ್ರಭಾವಳಿಯನ್ನು ಸೊಂಟಕ್ಕೆ ಕಟ್ಟಿಕೊಂಡು, ಜಯ ಜಯನಾದ ಹಾಡುತ್ತಾ ಕೈಯಲ್ಲಿ ಗಂಟೆಗಳು ಹಿಡಿದು ಬರುವರು. ಆ ಪ್ರಭಾವಳಿಗಳ ಮೇಲೆ ಖಡ್ಗಗಳು, ರಣರಂಗ ಸಂಬಂಧಿತ ಕವಚಗಳು ಮುಂತಾದ ಚಿಹ್ನೆಗಳು ಕಂಡು ಬರುತ್ತಿದ್ದವು. ಹಿಂದೆ, ವಿಷ್ಣುವರ್ಧನ ಮಹಾರಾಜನ ಸೈನಿಕರು, ಶ್ರೀ ವಾಸವೀ ಮಾತೆಯ ಭಕ್ತರಾಗಿ, ಬಾಲಾನಗರದವರೊಂದಿಗೆ ತಮ್ಮ ಪ್ರಭು ಅಂದರೇ ವಿಷ್ಣುವರ್ಧನರ ವಿಧೇಯ ಆಪ್ತ ಸೈನಿಕರೊಂದಿಗೆ ಯುದ್ಧ ಮಾಡಿದರು. ಹೀಗೆ ವಾಸವೀ ಮಾತೆ ಭಕ್ತರಾದ ಸೈನಿಕ ಕುಟುಂಬದವರನ್ನು

‘ವೀರಮುಷ್ಟುರೆ’ಂಬುವರು. ಆ ದಿನ ಅವರು ತಮ್ಮ ಧನ, ಮಾನ ಮತ್ತು ಪ್ರಾಣಗಳನ್ನು, ಪವಿತ್ರ ಯುದ್ಧಕ್ಕೆ ಸುರಿದ ಕಾರಣ, ವೈಶ್ಯ ಹಿರಿಯರು ಶುಭಕಾರ್ಯಗಳಲ್ಲಿ ಅವರನ್ನು ಗೌರವಿಸುವರು. ಅಲ್ಲಿನ ಜಮೀನು ಕಾಯುತ್ತಿದ್ದವ, ಮೈಲಾರಿಗಳಿಗೂ, ವೀರಮುಷ್ಟರಗಳಿಗೂ ಭೋಜನವಿತ್ತು ಮರ್ಯಾದೆ ಮಾಡಿದರು. ನಂತರ, ನಮ್ಮ ಬಂಧನಗಳನ್ನು ಬಿಡಿಸಿ, ಗೋಶಾಲೆ ನಿರ್ಮಾಣದಲ್ಲಿ ಭಾಗಿಯರಾಗಲೂ ಸೂಚಿಸಿದರು. ಆ ಕೆಲಸ ಮುಗಿಯಲೂ, ವಿರೂಪಾಕ್ಷರುನ್ನುದ್ದೇಶಿಸಿ, ‘‘ಮುಷ್ಟಿಯಲ್ಲಿ ಮುಷ್ಟಿ, ವೀರಮುಷ್ಟಿ ಅಂದರೇ ಏನು ಗೊತ್ತೇ?’’ ಎಂದು ಪ್ರಶ್ನಿಸಿದರು. ‘ತಿಳಿಯದೆ’ಂದೆನು. ಸಂಜೆ ಸಹಾ ನಮಗೆ ಊಟ ಕೊಡಲಾಯಿತು. ಅಲ್ಲಿನ ಗೋವುಗಳನ್ನು ನೋಡಿಕೊಳ್ಳುತ್ತಾ ಆ ರಾತ್ರಿ ಅಲ್ಲೇ ವಿಶ್ರಮಿಸಲೂ ನಮಗೆ ಆದೇಶ ನೀಡಿ, ತಮ್ಮ ಬಂಟರೊಡನೇ ಹೊರಟು ಹೋದರು.

ಆ ರಾತ್ರಿ ನಾವಿಬ್ಬರೂ ಅಲ್ಲೇ ಶ್ರೀಗಳ ನಾಮಸ್ಮರಣೆ ಲೀಲಾವಿಶೇಷಗಳನ್ನು ಒಬ್ಬರಿಗೊಬ್ಬರು ತಿಳಿಸುತ್ತಾ ಕಾಲ ಕಳೆದೆವು. ಬೆಳಿಗ್ಗೆ ಎದ್ದು ನೋಡಲು ಅಲ್ಲಿ, ಗೋವುಗಳೂ ಇಲ್ಲ ಎತ್ತುಗಳೂ ಕಾಣಲಿಲ್ಲ! ಅಲ್ಲಿನ ಸುತ್ತುಮುತ್ತಲಿನ ಜನಾಂಗವೋ, ‘ಈ ಭೂಮಿ ಎಷ್ಟು ಬೆಲೆಗೆ ತೆಗೆದುಕೊಂಡಿರಿ’ ಎಂದು ಕೇಳಿದರು. ಹಿಂದಿನ ಸಂಜೆ ಸಮಯದಿಂದ ನಡೆದ ವೃತ್ತಾಂತವನ್ನು ಎಷ್ಟು ವಿವರಿಸಿದರೂ, ಅವರು ನಮ್ಮ ಮಾತನ್ನು ನಂಬದೇ, ನಮ್ಮನ್ನು ಹುಚ್ಚರೆಂದು ಎಣಿಸಿದರು! ಹೀಗೆ ಸಂದಿಗ್ಧೆಯಲ್ಲಿರಲೂ, ಅಲ್ಲಿಗೆ ಒಬ್ಬ ಖದೀಮ ಪ್ರವೇಶಿಸಿ ‘‘ಶ್ರೀ ವಾಸವೀ ಕನ್ಯೆ ವೈಶಾಖ ಶುದ್ಧ ದಶಮಿ ಜನುಮಿಸಿದಳಾ, ಸಪ್ತಮಿಯಾ?’’ ಎಂದು ಪ್ರಶ್ನಿಸಿದನು. ಶ್ರೀ ಧರ್ಮಗುಪ್ತರು, ಶ್ರೀ ವಾಸವೀ ಮಾತೆ ದಶಮಿ ಎಂದು, ಅದು ಪೂರ್ಣ ದಶಮಿ ಎಂದು, ಶುಕ್ರವಾರವೆಂದು ಸಹಾ ತಿಳಿಸಿದರು. ‘ನೀವಿಬ್ಬರು ಹುಚ್ಚರೂ, ಕೆಲಸವಿಲ್ಲದೇ ಕುರುಂಗಡ್ಡೆಯಲ್ಲಿ ಕಾಲ ತಳ್ಳುತ್ತಿರುವ ಆ ಹುಚ್ಚನ ಬಳಿ ಹೋಗುತ್ತಿದ್ದೀರಾ?’ ಎಂದು ಪ್ರಶ್ನಿಸಿದನು. ಅವನ ಆ ವರ್ತನೆ ನಮಗೆ ಹಿಡಿಸಲಿಲ್ಲ.

ಅದು ಕೇಳಿ ಶ್ರೀ ಧರ್ಮಗುಪ್ತರು, ‘‘ ಆ ಮನುಷ್ಯ ಅಸಭ್ಯವಾದ ನುಡಿಗಳನ್ನು ಆಡಿದರೂ, ನಮ್ಮ ಕರ್ತವ್ಯವನ್ನು ಗುರ್ತು ಮಾಡಿಕೊಟ್ಟಿದ್ದಾನೆ! ನಾವು ತಕ್ಷಣ ಕುರುಂಗಡ್ಡೆಗೆ ತೆರಳಬೇಕು’’ ಎಂದರು. ತಕ್ಷಣ ಒಂದು ದೋಣಿಲ್ಲಿ ನದಿ ದಾಟಿದೆವು. ಇಬ್ಬರ ಬಳಿಯೂ ಹಣವಿರಲಿಲ್ಲ. ‘‘ಈ ಬಾರಿ ನಿಮ್ಮನ್ನು ಕ್ಷಮಿಸುತ್ತಿದ್ದೇನೆ. ಇನ್ನು ಮುಂದೆ ಹಣವಿದೆಯೇ ಎಂದು ನೋಡಿಕೊಂಡು ದೋಣಿ ಹತ್ತಿ’’ ಎಂದು ಗದರಿದನು. ನಂತರ ಅವನು ಶ್ರೀ ಧರ್ಮಗುಪ್ತರ ಉಂಗುರಗಳನ್ನು ಕಂಡು, ಅವನ್ನು ಪಡೆದು, ತನ್ನ ಬಳಿ ಇಟ್ಟುಕೊಳ್ಳದೇ ಕೃಷ್ಣಾ ನದಿಗೆ ಹಾಕಿದನು! ನಾವು ಆಶ್ರಮ ತಲುಪಲೂ ಶ್ರೀಗಳು ನದಿ ಸ್ನಾನದ ನಂತರ ಯೋಗನಿಷ್ಠೆಯಲ್ಲಿದ್ದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**



ಶ್ರೀ ಪಂಚದೇವ ಪಹಾಡ್ (ಕುರುಂಗಡ್ಡ ರಾಯಚೂರು ಬಳಿ)



ಶ್ರೀ ಅನಘಾಲಕ್ಷ್ಮಿ ವಲ್ಲಭ ಶ್ರೀ ದತ್ತಾತ್ರೇಯಸ್ವಾಮಿಯವರು

## ಅಧ್ಯಾಯ - 28

# ಶ್ರೀ ವಾಸವೀ ನಗರೇಶ್ವರರ ವೃತ್ತಾಂತ

### ವಿಷ್ಣು-ಮಹಾವಿಷ್ಣು, ಲಕ್ಷ್ಮಿ-ಮಹಾಲಕ್ಷ್ಮಿ, ಸರಸ್ವತಿ-ಮಹಾಸರಸ್ವತಿ, ಕಾಳಿ-ಮಹಾಕಾಳಿಯ ಸ್ವರೂಪ ವರ್ಣನೆ

ಅಂದು ಶುಕ್ರವಾರ, ಶ್ರೀವಾಸವೀ ಕನ್ನಿಕಾದೇವಿ ಜಯಂತಿ ಶುಭ ಸಮಾರಂಭ. ಶ್ರೀಪಾದರು ಕೃಷ್ಣಾನದಿಯ ಮೇಲೆ ನಡೆದುಕೊಂಡು ಆ ಕಡೆ ದಡ ತಲುಪಿದರು! ನಾವೆಲ್ಲಾ ದೋಣಿಯಲ್ಲಿ ತೀರ ಸೇರಿದೆವು. ಬೆಳಿಗ್ಗೆ 7 ಗಂಟೆಯ ಸಮಯ. ತಿರುಮಲ ಶ್ರೀ ವೇಂಕಟೇಶ್ವರ ಸ್ವಾಮಿ ಶ್ರೀ ಅಲುಮೇಲು ಮಂಗಾಂಬಿಕೆಯಿಂದ ಅರ್ಚನಾದಿಗಳು ಸ್ವೀಕರಿಸುವ ಶುಭ ಸಮಯ.

ಶ್ರೀಪಾದರು, ಹಿಂದಿನ ದಿನವೇ ನಿರ್ಮಿಸಲಾದ ಗೋಶಾಲೆ ಪ್ರವೇಶಿಸಿ, ಧ್ಯಾನಸ್ಥರಾದರು. ಪಂಚದೇವ್ ಪಹಾಡ್‌ರಂದು ಶ್ರೀಪಾದರ ದರ್ಬಾರು ಪ್ರಾರಂಭವಾಗುವ ಶುಭವೇಳೆ ನಾವೂ ಅದೇ ಸಮಯಕ್ಕೆ ಗೋಶಾಲೆ ಸೇರಿದೆವು.

ಅತ್ಯಾಶ್ಚರ್ಯಕರ! ಶ್ರೀಚರಣರ ಶರೀರ, ಪ್ರಕಾಶಮಾನ ಆಗಲಾರಂಭಿಸಿತು! ಅದು 4 ದಿಕ್ಕುಗಳಲ್ಲೂ ವ್ಯಾಪಿಸಿ, ಅವರ ಶರೀರ ತೇಜೋಮಯವಾಗಿ ಕಂಡಿತು. ಮಾಮೂಲಾಗಿ ಬೀಳುವ ನೆರಳೂ ಸಹಾ ಅಂದು ಭೂಮಿಮೇಲೆ ಕಾಣಲಿಲ್ಲ! ಸದಾ ಅವರು ನಡೆದ ಕಡೆ ಕಾಲಿನ ಚಿಹ್ನೆಗಳಿರುತ್ತಿದ್ದವು. ಆದರೇ ಇಂದು, ಭೂಮಿಯಮೇಲೆ ಶ್ರೀಗಳ ಕಾಲ್ನಡಿಗೆಯ ಗುರುತುಗಳಿರಲಿಲ್ಲ. ಶ್ರೀಗಳು ಸೂರ್ಯನನ್ನು ತೀಕ್ಷಣವಾಗಿ ನೋಡಿ, ಅವರ ಶರೀರವನ್ನು ಬೆಳೆಸಿದರು. ನಂತರ ಆ ತೇಜೋಮಯ ರೂಪ ಸೂರ್ಯನಲ್ಲಿ ಸೇರಿಹೋಯಿತು! ಹಾಗೆ ಶ್ರೀಪಾದರು ಅದೃಶ್ಯವಾಗುವುದನ್ನು ಕಣ್ಣಾರೆ ನೋಡಿದೆವು.

ಸೂರ್ಯ ಬಿಂಬದಲ್ಲಿ ಒಂದು ದಿವ್ಯ ತೇಜೋಮಯ ಶಿಶುವನ್ನು ಕಂಡೆವು. ಆ ಮಗು ಅಲ್ಲಿಂದ ಭೂಮಿಯ ಕಡೆಗೆ ಬೇಗ ಬೇಗ ಬಂದಿತು. ಆ ಬಾಲಕ ಭೂಮಿಯ ಮೇಲೆ ಹೆಜ್ಜೆ ಇಡುತ್ತಲೇ ಭೂಮಿ ನಮಗೆ ಅಗೋಚರವಾಯಿತು! ಶಿಶುವು ಮುಗುಳ್ನಗೆ ಇಂದಿತ್ತು. ಪುನಃ ಅವರು ಸೂರ್ಯನನ್ನು ನೇರಾಗಿ ಕಾಣಲು, ಭೂಮಿ ನಮಗೆ ಕಂಡುಬಂದಿತು! ನಮ್ಮಿಬ್ಬರನ್ನೂ ಸೂರ್ಯಬಿಂಬ ಕಾಣಲು ಹೇಳಿದರು. ಅಲ್ಲಿ ಮುದ್ದಾದ ಕಂದಮ್ಮನನ್ನು ಕಂಡೆವು. ಆ ಶಿಶುವು ಒಂದು ಸ್ತ್ರೀ. ಮಂದಹಾಸದಿಂದ ಭೂಮಿ ಕಡೆ ಬಂದಿತು. ಆಗ ಸಹಾ, ಆ ಮಗು ಭೂಮಿಯ ಮೇಲೆ ಕಾಲು ಇಡುತ್ತಿದ್ದಂತೆಯೇ ಭೂಮಿ ನಮಗೆ ಅಗೋಚರವಾಯಿತು! ಆ ಮಗು ನಮ್ಮನ್ನು ನೋಡುತ್ತಾ ನಗಲೂ, ಪುನಃ ಭೂಮಿ ಕಂಡುಬಂದಿತು!

ಪ್ರೀತಿವಾತ್ಸಲ್ಯದಿಂದ ಶ್ರೀಪಾದರು ಮುದ್ದಾದ ಮಗುವನ್ನು ಎತ್ತಿಕೊಂಡರು. ಆಗ ಶ್ರೀಪಾದರ ವಯಸ್ಸು 16. ದಿವ್ಯ ಶಿಶುವು 3 ವರುಷದ್ದು. ಇವರಿಬ್ಬರ ಹೋಲಿಕೆ ಬಹಳ ಹತ್ತಿರವಾಗಿತ್ತು. ಮಗು,ರೇಷ್ಮೆ ವಸ್ತ್ರಗಳನ್ನು, ಆಭರಣಗಳನ್ನೂ ಧರಿಸಿತ್ತು! ಆ ಪೂಜ್ಯರಿಬ್ಬರೂ ಗೋಶಾಲೆ ಪ್ರವೇಶಿಸಿದರು.

ನಾನೂ ಮತ್ತು ಶ್ರೀ ಧರ್ಮಗುಪ್ತರು ಇದೆಲ್ಲವನ್ನೂ ಆಶ್ಚರ್ಯದಿಂದ, ಭಯ ಮತ್ತು ಸಂಭ್ರಮದಿಂದ ಕಾಣುತ್ತಿದ್ದೆವು. 'ಇದೆಲ್ಲಾ ಇಂದ್ರಜಾಲ, ಮಹೇಂದ್ರಜಾಲವಾ' ಎಂದು ಸಂದೇಹ ಪಟ್ಟೆನು.

ಇದನ್ನರಿತ ಶ್ರೀಪಾದರು ಗಂಭೀರವಾಗಿ "ಎಲೈ, ಶಂಕರ ಭಟ್ಟಾ! ಇದು ಇಂದ್ರ ಮಹೇಂದ್ರ ಜಾಲವಲ್ಲ. ಕೇವಲ ನನ್ನ ಸ್ವಭಾವ. ನನ್ನ ನಿಜರೂಪ. ನನ್ನ ಸಂಕಲ್ಪದಿಂದ ನಿಂತ ನೆಲ ಆಕಾಶವಾಗಿಬಿಡುವುದು! ನನ್ನ ಊಹೆಗಳಂತೆ ಬ್ರಹ್ಮನು ಸೃಷ್ಟಿ ಮಾಡುವನು. ಅದರ ಪ್ರಕಾರ ವ್ಯಕ್ತಿಗಳು ವ್ಯವಹಾರಗಳ ಜನನ ನಡೆಯುವುದು. ಅದೃಶ್ಯ ಶಕ್ತಿಗಳು ಸಹಾ ಅನುಕೂಲವಾಗುವವು. **ನಾನು ಬ್ರಹ್ಮ ಸ್ವರೂಪವೆಂದರೆ, ಆ ಬ್ರಹ್ಮನಿಗೆ ಸೃಷ್ಟಿ ನೆರವೇರಿಸಲೂ ಪ್ರೇರಕನೆಂದರ್ಥ. ಹಾಗೆ ಸೃಷ್ಟಿಸಲ್ಪಟ್ಟ ಎಲ್ಲಾ ಜೀವಿಗಳ ಸ್ಥಿತಿ ಕಾಲ ಮತ್ತು ರೀತಿಯನ್ನು ಶ್ರೀ ವಿಷ್ಣುವು ನಿರ್ಧಾರ ಮಾಡುವನು. ಆ ಕೆಲಸವೂ ನನ್ನ ಪ್ರೇರಣೆಯಿಂದಲೇ ನಡೆಯುವುದು. ವಿಷ್ಣುವಿಗೆ ಮಹಾವಿಷ್ಣುವು ನಾನೇ! ಸರಸ್ವತಿ, ಮಹಾ ಸರಸ್ವತಿಯರು ಬೇರೆ ಬೇರೆ. ಸರಸ್ವತಿ ಸೃಷ್ಟಿಗೆ ಸಂಬಂಧಿಸಿದ ಜ್ಞಾನ ಸ್ವರೂಪ. ಮಹಾ ಸರಸ್ವತಿ, ಆ ಸರಸ್ವತಿಗೆ ನೀಡುತ್ತಿರುವ ಪ್ರೇರಣಾಶಕ್ತಿ ಅನಘಾ. ಸೃಷ್ಟಿಯ ಸ್ಥಿತಿಕಾರಣವಾದ ವಸ್ತು ಸಮೃದ್ಧಿ ಲಕ್ಷ್ಮಿರೂಪ. ಆದರೆ ಮಹಾಲಕ್ಷ್ಮೀ ನಾನೇ, ಆ ಲಕ್ಷ್ಮಿರೂಪಕ್ಕೆ ನೀಡುತ್ತಿರುವ ಪ್ರೇರಣೆ ಮತ್ತು ಶಕ್ತಿಯ ಅನಘಾ ಸ್ವರೂಪ! ಸೃಷ್ಟಿಯ ಶಕ್ತಿ, ಕಾಳಿರೂಪ. ಮಹಾಕಾಳಿ ಎಂಬುದು ಕಾಳಿಗೆ ತರುತ್ತಿರುವ ಪ್ರೇರಣೆ ಮತ್ತು ಶಕ್ತಿಯ ಅನಘಾ ಸ್ವರೂಪ.**

## ಶ್ರೀ ಅನಘಾಲಕ್ಷ್ಮಿ ಸ್ವರೂಪ

**ಅನಘಾಲಕ್ಷ್ಮಿಸಮೇತನಾದ ಅನಘ ಎಂಬುದು, ನನ್ನ ದತ್ತ ಸ್ವರೂಪ. ಮಹಾಲಕ್ಷ್ಮಿ, ಮಹಾಸರಸ್ವತಿ, ಮಹಾಕಾಳಿ ರೂಪಗಳು ಒಳಗೊಂಡ, ಮತ್ತು ಈ ಮುವ್ವರಿಗೂ ಭಿನ್ನವಾದ ಒಂದು ದಿವ್ಯ ಮಾತೃ ಸ್ವರೂಪ, ಅನಘಾಲಕ್ಷ್ಮಿ. ಈ ರೂಪ, ಮಹಾಸರಸ್ವತಿ, ಮಹಾಲಕ್ಷ್ಮಿ ಮತ್ತು ಮಹಾಕಾಳಿಗಳಿಗೆ ಆಧಾರವಾಗಿರುವ ಏಕೈಕ ದಿವ್ಯಶಕ್ತಿ ಎಂದು ತಿಳಿದುಕೊಳ್ಳಬೇಕು. ಇನ್ನು ನನ್ನ ಸ್ವರೂಪವೋ, ಬ್ರಹ್ಮ,ವಿಷ್ಣು, ಮಹೇಶ್ವರರಿಗೆ ಆಧಾರಭೂತವಾದದ್ದು ಮತ್ತು ತ್ರಿಶಕ್ತಿ ಸ್ವರೂಪಳಾದ ಅನಘಳನ್ನು ಎಡಭಾಗದಲ್ಲಿ ಧರಿಸಿರುವ 'ಶಾಕ್ತ' ರೂಪವೆಂದು ತಿಳಿದುಕೊ!**

**ತ್ರೇತಾಯುಗದ ಸಾವಿತ್ರಿಕಾಠಕಚಯನ ಫಲವಾಗಿ, ನನ್ನ ದಿವ್ಯ ಭವ್ಯ ಸ್ವರೂಪ ಅರ್ಧನಾರೀಶ್ವರ ತತ್ತ್ವವನ್ನು ಆಧಾರ ಮಾಡಿಕೊಂಡು, ಮಹಾವಿಷ್ಣು ಮಾಯದಿಂದ 'ಯತಿ ಶ್ರೀಪಾದ ಶ್ರೀವಲ್ಲಭ'ರಾಗಿ ಶ್ರೀ ಪೀಠಿಕಾಪುರದಲ್ಲಿ ಅವತರಿಸಿರುವರು. ನೀನು ಕಾಣುತ್ತಿರುವ ಈ ಸ್ವರೂಪ ನಿಜಕ್ಕೂ ಮಹಾಲಕ್ಷ್ಮಿ ಮತ್ತು ಮಹಾವಿಷ್ಣುವಿನ ಸ್ವರೂಪವೇ ಎಂದು ತಿಳಿದುಕೊ!**

ಶ್ರೀ ಪದ್ಮಾವತಿ ತಾಯಿಯ ರೂಪ, ಮಹಾಸರಸ್ವತಿ, ಮಹಾಲಕ್ಷ್ಮಿ ಮತ್ತು ಮಹಾಕಾಳಿಯರ ಚೈತನ್ಯವನ್ನು ಹೊಂದಿ, ಸ್ವರೂಪದಲ್ಲಿ, ಆದಿಲಕ್ಷ್ಮಿಯಾಗಿದ್ದು, ತ್ರಿಶಕ್ತಿಗಳ ಬಲ ಹೊಂದಿಕೊಂಡು, ಈ ತ್ರಿಶಕ್ತಿಗಳನ್ನು ಮೀರಿದ ಮತ್ತು ಆಧಾರವಾಗಿರುವ ಪರಾಶಕ್ತಿ ಸ್ವರೂಪವೆಂದು ತಿಳಿಯಬೇಕು. ಶ್ರೀ ವೇಂಕಟೇಶ್ವರನ ಸ್ವರೂಪ, ದೊಡ್ಡ ಆಕಾರಿ ಬ್ರಹ್ಮರನ್ನು, ವಿರಾಟ್ ಸ್ವರೂಪಧಾರಿ ಮಹಾವಿಷ್ಣುವನ್ನು ಮತ್ತು ಪ್ರಳಯಕಾಲ ರುದ್ರ, 'ಮಹಾಕಾಲ'ವನ್ನು ತನ್ನ ದಿವ್ಯ ಚೈತನ್ಯದಲ್ಲಿ ಲೀಲೆಯಾಗಿ ಧರಿಸಿ, ಅದರ ಆಧಾರವಾಗಿ ಮತ್ತು ಅತೀತವಾಗಿರುವ ಪರಬ್ರಹ್ಮಸ್ವರೂಪವೆಂದು ತಿಳಿ. ಶ್ರೀಪಾದರು ಮಹಾವೈಷ್ಣವ ಮಾಯಾರೂಪದಲ್ಲಿಯೂ, ಶ್ರೀ ಪದ್ಮಾವತಿ ವೇಂಕಟೇಶ್ವರರು ಅರ್ಧನಾರೀಶ್ವರ ರೂಪದಲ್ಲಿಯೂ ಇರುವರೆಂದು ತಿಳಿ.

ಅಗ ನಾನು ಅಂದೆನು, ''ಗುರುಸಾರ್ವಭೌಮರೇ! ತಮಗೆ ಜಯವಾಗಲಿ. ತಾವು ಪದ್ಮಾವತಿ ಶ್ರೀನಿವಾಸರೆಂದರಿ, ಇನ್ನೊಂದು ಸಲ ಅನಘಾಲಕ್ಷ್ಮಿಸಮೇತನಾದ ಅನಘನೆಂದಿರಿ. ಇದು ನನಗೆ ಅರ್ಥವಾಗುತ್ತಿಲ್ಲ, ತಿಳಿಸಿ ನನ್ನನ್ನು ಉದ್ಧರಿಸಿರಿ.''

## ಶ್ರೀಪಾದರೇ ಶ್ರೀ ವೇಂಕಟೇಶ್ವರನು

ಆಗ ಶ್ರೀಪಾದರು ಉಪದೇಶಿಸಿದರು, ''ಮಕ್ಕಳೇ! ನನ್ನ ಕಲೆಗಳು ಅನಂತ. ದಿವ್ಯತ್ವ ವಿಧವಿಧವಾಗಿ ಗೋಚರಿಸುವುದು. ಶ್ರೀ ಮಹಾಲಕ್ಷ್ಮಿ ಮತ್ತು ಪದ್ಮಾವತಿಯರ ಮೂಲತತ್ತ್ವ ಒಂದೇ ಆದರೂ, ಆಕೆ ಮಹಾಲಕ್ಷ್ಮಿಯ ತತ್ತ್ವ ಸ್ವೀಕರಿಸುವಾಗ ಶ್ರೀ ಮಹಾವಿಷ್ಣುವಿಗೆ ಪ್ರಾಪ್ತವಾಗುವ ಪ್ರಭುತತ್ತ್ವ, ನನ್ನಿಂದ ಹೊರಬೀಳುವ ಪ್ರಭುತತ್ತ್ವವೇ. ಅದೇ ರೀತಿ ಆಕೆ ಪದ್ಮಾವತಿ ತತ್ತ್ವ ಸ್ವೀಕರಿಸುವಾಗ, ನನ್ನಿಂದ ಶ್ರೀ ವೆಂಕಟೇಶ್ವರ ಪ್ರಭುತತ್ತ್ವವನ್ನೇ ಹೊರಡಿಸುವೆನು. ಸುಗುಣ, ಸಾಕಾರಗಳಲ್ಲಿ ತತ್ತ್ವ ಆವಿರ್ಭವಿಸುವಾಗ ಅವುಗಳಿಗೆ ತಕ್ಕ ಮರ್ಯಾದೆ, ಲೋಕಾಚಾರ ಮತ್ತು ಪರಿಮಿತಿಗಳನ್ನು ತಪ್ಪದೇ ಪಾಲಿಸಬೇಕು. ನನ್ನ ದಿವ್ಯ ಸಹೋದರಿಯಾದ ಈ ಮಾಯೆ, ಕೃಷ್ಣಾವತಾರ ಸಮಯದಲ್ಲಿ ಯೋಗಮಾಯೆ ರೂಪತಾಳಿ, ಆಕಾಶ ಸೇರಿಬಿಟ್ಟಳು. ಮಹಾತಪಸ್ಸಂಪನ್ನರಾದ ಯೋಗಿಗಳು, ಮಹರ್ಷಿಗಳು, ಮತ್ತು ವೈಶ್ಯ ಮುನಿಗಳು, ಘೋರ ತಪಸ್ಸು ಮಾಡಿ ಆಕೆಯನ್ನು ವಾಸವೀ ಕನ್ನಿಕೆಯಾಗಿ ನಮಗೆ ತಂದರು! ಕೆಲವು ನಿರ್ದಿಷ್ಟ ಕಾರಣಗಳಿಂದ ನಾನು ಶ್ರೀ ಪೀಠಿಕಾಪುರದಲ್ಲಿ ಅವತರಿಸಿದ್ದೇನೆ. ಮುಂದಿನ ಘಟನೆಗಳನ್ನು ನೀವೇ ಕಣ್ಣಾರೆ ಕಾಣಿರಿ. ನನ್ನ ಈ ಅವತಾರ, ದಿವ್ಯವಿನೋದ ಭರಿತಲೀಲೆಗಳಿಂದ ಕೂಡಿದೆ ಎಂದು ತಿಳಿಯುವಿರಿ. ಶಂಕರ ಭಟ್ಟಾ! ಈ ಪಂಚದೇವ್ ಪಹಾಡ್‌ನಲ್ಲಿ ಇಂದು ನಡೆಯುವ ಲೀಲಾ ವಿಶೇಷವನ್ನು, ನೀನು ಕಂಡಂತೆ ಲಿಖಿಸು, ಮುಂದಿನ ಪೀಳಿಗೆಗೆ ಸ್ಫೂರ್ತಿ ತರುವುದಲ್ಲದೇ, ಆಸ್ತಿಕರಿಗೆ ಕೆಲ ಸಂದೇಹಗಳನ್ನು ನಿರ್ಮೂಲನೆ ಮಾಡಿ ಶಕ್ತಿ, ಭಕ್ತಿ ಮತ್ತು ಉತ್ಸಾಹವನ್ನು ನಿನ್ನ 'ಚರಿತಾಮೃತ' ಗ್ರಂಥ ತರಬೇಕು.''

ನಾವಿಬ್ಬರೂ ಆಶ್ಚರ್ಯದಿಂದ ನೋಡುತ್ತಿರಲೂ, ಶ್ರೀಪಾದ ಶ್ರೀವಲ್ಲಭರೂಪ, ದಿವ್ಯ ತೇಜಸ್ಸಿನಿಂದ ಬೆಳಕಾಗಿಯೂ ಅದರಲ್ಲಿಂದ ಶ್ರೀ ಪದ್ಮಾವತಿ ಮತ್ತು ಶ್ರೀ ವೇಂಕಟೇಶ್ವರರು ಹೊರಬಂದರು!



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 29

# ಶ್ರೀಪಾದರ ದಿವ್ಯೋಪದೇಶ, ಶರಣಾಗತ ರಕ್ಷಣೆ

ನಾವು ಕುರುಂಗಡ್ಡೆ ತಲುಪಿ, ಶ್ರೀಗಳ ದರ್ಶನಾನಂತರ ಅವರ ಆಜ್ಞೆಯಂತೆ ಸನ್ನಿಧಾನದಲ್ಲಿ ಕುಳಿತುಕೊಂಡೆವು. ಶ್ರೀಪಾದರು ಹೀಗೆ ನುಡಿದರು.

"ಮಕ್ಕಳೇ! ನಿನ್ನೆ ನಡೆದ ಶ್ರೀ ವಾಸವೀ ಜಯಂತಿ ಉತ್ಸವ ಕಂಡು ಧನ್ಯರಾಗಿರುವಿರಿ. **ನನಗೆ ದೇಶ, ಕಾಲಗಳು ಕೈಚೆಂಡಿನಂತೆ. ಎಲ್ಲೊ ನಡೆಯಬೇಕಾದ್ದ ಅಥವಾ ನಡೆಯುತ್ತಿರುವ ಇಲ್ಲ ನಡೆಯಬೇಕಾದ ಕಾರ್ಯಕಲಾಪಗಳನ್ನು ಭೂತ ಅಥವಾ ವರ್ತಮಾನ, ಇಲ್ಲ ಭವಿಷ್ಯತ್ ಕಾಲಕ್ಕೆ ಬದಲಾಯಿಸಬಲ್ಲೆನು. ನಿಮಗೆ ಮುಗಿಯದಂತಹ ದೇಶ ಕಾಲ ಪ್ರಯಾಣವನ್ನು ಕಲ್ಪಿಸಬಲ್ಲೆನು! ನಿಮ್ಮ ಚೈತನ್ಯ ಸ್ಥಾಯಿಗನುಗುಣವಾಗಿ ನಾನು ಕಾಣಿಸುತ್ತಿರುವೆನು. ಸರ್ವ ಧರ್ಮ ಅಂತರ್ಯಾಮಿ ರೂಪಿಯಾದ ನನ್ನನ್ನು ನಂಬಿಕೊಂಡರೇ, ನನ್ನ ಆದೇಶದಂತೆ ನೀವು ನಡೆದುಕೊಂಡರೇ, ನಿಮ್ಮ ಎಲ್ಲಾ ಭಾರವನ್ನೂ ನಾನು ಹೊತ್ತು, ನಿಮ್ಮ ಗುರಿ ತಲುಪಿಸಬಲ್ಲೆನು. ಒಂದು ನುಡಿಯಿಂದಲೇನೇ, ಪ್ರಕೃತಿಯನ್ನು ನಿಯಂತ್ರಿಸುತ್ತಿರುವುದರಿಂದ, ನಾನು ಸರಸ್ವತಿ ನಾಮದೊಳು ಪ್ರಸಿದ್ಧನಾಗುವೆನು.** ಕಲಿಯುಗದ ಮಾನವರು ಹಿರಣ್ಯಕಶ್ಯಪನಂತವರು. ಅವರ ಸಮಸ್ಯೆ, ಭಾವ, ಆಲೋಚನೆ ಮತ್ತು ವಿಧಾನಗಳು ಅರ್ಥವಾಗದಂತವು! ಅವರು ಪ್ರಕೃತಿ ಶಾಸ್ತ್ರದಲ್ಲಿ ಎಷ್ಟೋ ನೈಪುಣ್ಯಗಳಿಸಿ, ಹಿರಣ್ಯಕಶ್ಯಪನಂತೆ ವರವನ್ನು ಪ್ರಕೃತಿಮಾತೆಯಿಂದ ಪಡೆಯುವರು. ಆದ್ದರಿಂದಲೇ, ಇಚ್ಛೆ ಪೂರೈಸಲೂ, **ಪ್ರಹ್ಲಾದನಂತಹ ಭಕ್ತನನ್ನು ರಕ್ಷಿಸಲೂ ನಾನೀ ಕಲಿಯುಗದಲ್ಲಿ ನರಸಿಂಹಾವತಾರಿ ಆಗಬೇಕು. ನರಸಿಂಹ ಸರಸ್ವತಿ ಎಂಬ ದಿವ್ಯಾವತಾರವನ್ನು ಇಗೋ ಗಂಧರ್ವ ಪುರದಲ್ಲಿ ತಾಳಿ ಬರುವೆನು."**

ನಂತರ ಶ್ರೀಪಾದರು ಧ್ಯಾನಸ್ಥರಾದರು. ನಮ್ಮನ್ನೂ ಧ್ಯಾನದಲ್ಲಿರಲೂ ಆದೇಶಿಸಿದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 30

# ಶ್ರೀಪಾದ ಶ್ರೀವಲ್ಲಭ ಮಹಾಸಂಸ್ಥಾನ ಸ್ಥಾಪನೆ - ಶ್ರೀಗಳೇ ಹೇಳುವುದು

ಜೀವಿಗಳಿಗೆ 64 ಚೈತನ್ಯ ಸ್ಥಾಯಿಗಳಿರುವವು. ನಾಥ ಸಂಪ್ರದಾಯದವರು, 64 ಚೈತನ್ಯ ಸ್ಥಾಯಿಗಳಲ್ಲೂ ತದಾತ್ಮ ಸ್ಥಾಯಿ ಹೊಂದಿ, ಜೀವಿಗಳ ಉದ್ಧಾರಕ್ಕೆ 64 ಶಾಬರ ತಂತ್ರಗಳ ಸಹಾಯ ಪಡೆಯುವರು. ನಾಥ ಸಂಪ್ರದಾಯಕ್ಕೆ ಮೊದಲ ಗುರು ಶ್ರೀ ದತ್ತಾತ್ರೇಯರೇ! ಶ್ರೀಪಾದರು ಅಂದಿನ ದತ್ತನೇ.

ಚದುರಂಗದಲ್ಲಿ 64 ಚೌಕಗಳಿವೆ. ಶ್ರೀ ಮಹಾಲಕ್ಷ್ಮಿ ಜೊತೆಯಲ್ಲಿ ಶ್ರೀ ವಿಷ್ಣುವು, ವೈಕುಂಠದಲ್ಲಿ ಚದುರಂಗ ಆಟದಲ್ಲಿ ಪಳಗಿರುವುನೆಂದರೇ, ಈ 64 ಚೈತನ್ಯ ಸ್ಥಾಯಿಗಳಲ್ಲಿರುವ ವಿವಿಧ ಜೀವಜೀವನ ಕ್ರಿಯೆಗಳನ್ನು ಖುದ್ದಾಗಿ ಗಮನಿಸುತ್ತಾ, ತಕ್ಕ ಅನುಗ್ರಹವನ್ನು ನೀಡುತ್ತಾ ದಿವ್ಯ ವಿನೋದದಲ್ಲಿರುವನೆಂದು ಅದರ ಅಂತರಾರ್ಥ.

### ಮಾನವ ದಿವ್ಯಾತ್ಮನಾಗಲೂ ಬೇಕಾದ ಯೋಗ್ಯತೆ

**ಮಾನವರ ಶರೀರದಲ್ಲಿನ ಚೈತನ್ಯ ಸ್ಥಾಯಿಯನ್ನನುಸರಿಸಿ, ಅವರ ಪರಿಣಾಮದ ವೇಗ ಇರುವುದು. ಜೀವನು, ದಿವ್ಯಾತ್ಮನಾಗಿ ಬದಲಾಯಿಸಲೇ ಬೇಕೆಂಬುವುದು ವಿಶ್ವಮಾನಸದ ಬದಲಿಲ್ಲದ ನಿಶ್ಚಯ. ಅವರವರ ಸ್ಥಾಯಿಗಳಂತೆ, ಆಚರಿಸುವ ಯೋಗ, ಮಂತ್ರ, ಜಪ, ತಪ, ಯಜ್ಞ ಯಾಗಾದಿಗಳು, ಧರ್ಮಕಾರ್ಯಗಳು ಮುಂತಾದವುಗಳಿಂದ ಶರೀರದಲ್ಲಿನ ಆತ್ಮಜ್ಯೋತಿಯ ಶಕ್ತಿ ಬೆಳಗುತ್ತಿರುವುದು. ಆ ಪ್ರಕಾಶದಂತೆ ನಾಡೀ ಶುದ್ಧಿ ನಡೆಯುತ್ತಿರುವುದು. ಈ ಶುದ್ಧಿಯಂತೇ ಮಾನವರಲ್ಲಿ ಶಾರೀರಿಕ, ಮಾನಸಿಕ, ಆಧ್ಯಾತ್ಮಿಕ ಶಕ್ತಿಗಳು ಪ್ರಾಪ್ತವಾಗುತ್ತಿರುವವು. ಇಂತಹ ವಿಕಾಸ ಸಮಯ, ಅವರು ಮಾಡುವ ಧರ್ಮಕಾರ್ಯಗಳಂತೆ, ದೈವಾನುಗ್ರಹ ಲಭಿಸುವುದು.**

**ಶಂಕರ ಭಟ್ಟಾ! ಮುಂದೇ ನನ್ನ ಮಹಾಸಂಸ್ಥಾನ, ಶ್ರೀ ಪೀಠಿಕಾಪುರದಲ್ಲಿನ ನನ್ನ ಜನುಮ ಸ್ಥಳದಲ್ಲಿ ನೆಲೆಯಾಗುವುದೆಂದು ತಿಳಿ. ಶ್ರೀ ಪೀಠಿಕಾಪುರ, ಶ್ಯಾಮಲಾಂಬಾಪುರ, ವಾಯಸಪುರಾಗ್ರಹಾರ ಸೇರಿ ಒಂದು ಪಟ್ಟಣವಾಗುವುದು. ಈ ನನ್ನ ಸಂಸ್ಥಾನಕ್ಕೆ ದರ್ಶನಕ್ಕಾಗಿ ಬರುವವರ ಸಂಖ್ಯೆ ಮಿತಿಮೀರಿ ಹೋಗುವುದು.**

ಕಲಿಯುಗದಲ್ಲಿ ಅನೇಕ ಆಶ್ಚರ್ಯಗಳು ನಡೆಯುತ್ತವೆ. ವಶಿಷ್ಠರ ಅಂಶ ಜಾತಕನೊಬ್ಬನು ಈ ಸಂಸ್ಥಾನದ ಅರ್ಚಕನಾಗುವನು. ಅವನೊಟ್ಟಿಗೆ ನಾನನೇಕ ಲೀಲೆ ತೋರಿಸುವೆನು. ಸದಾ ಆ ನೂರಾರು ದಿವ್ಯಲೀಲೆಗಳು ಆಶ್ಚರ್ಯಕರವಾಗಿರುವವು ಮತ್ತು ಶ್ರೀಪಾದರ ದಿವ್ಯ ನಗುಮುಖ ನೋಡುವುದೇ ಒಂದು ತೃಪ್ತಿ ಆಗಿರುವುದು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 31

# ದಶ ಮಹಾವಿದ್ಯೆಗಳ ವರ್ಣನೆ

ನಾವು ಪ್ರತಿನಿತ್ಯವೂ ಸಾಯಂಕಾಲ, ಶ್ರೀಪಾದರ ಅಪ್ಪಣೆ ಪಡೆದು ಕೃಷ್ಣಾನದಿಯನ್ನು ದಾಟಿ ಬರುತ್ತಿದ್ದೆವು, ಪುನಃ ಬೆಳಿಗ್ಗೆ ಆಶ್ರಮ ತಲುಪುತ್ತಾ, ಶ್ರೀ ಮಹಾಗುರುಗಳಿಂದ ಹೊಸ ಹೊಸ ಯೋಗ ವಿಶೇಷಗಳು ಪಡೆಯುತ್ತಿದ್ದೆವು.

ನಾನು, ಶ್ರೀದೇವಿ ತತ್ತ್ವ ದಶ ಮಹಾವಿದ್ಯೆ ರೂಪದಲ್ಲಿ ಉಪಾಸನೆ ಆಗುವುದೆಂದು ಕೇಳಿದ್ದೆನು. ಶ್ರೀಚರಣರನ್ನು ಆ ದಶ ಮಹಾವಿದ್ಯಾ ವಿಧಾನವನ್ನು ತಿಳಿಸಬೇಕೆಂದು ಬೇಡಿದೆನು. ಶ್ರೀ ಗುರುಗಳು ಹೀಗೆ ನುಡಿದರು.

"ಮಕ್ಕಳೇ! ಶ್ರೀ ವಿದ್ಯೋಪಾಸನ ಅತಿ ಶ್ರೇಷ್ಠವಾದದ್ದು. ಹಿಂದೆ, ಹಯಗ್ರೀವನ ಕೃಪೆಯಿಂದ ಅಗಸ್ತ್ಯನು ಶ್ರೀವಿದ್ಯೆಯನ್ನರಿತನು. ಆತ ಅದನ್ನು ತನ್ನ ಸಹಧರ್ಮಚಾರಿಣಿಯಾದ ಲೋಪಾಮುದ್ರೆಗೆ ತಿಳಿಸಿದ್ದನು. ಆ ಸಾಧ್ವಿ ಶ್ರೀವಿದ್ಯೆಯ ಅಂತರಾರ್ಥಗಳನ್ನು ತನ್ನ ಪತಿಗೆ ವಿಶದೀಕರಿಸಿದಳು! ಹೀಗೆ ಒಬ್ಬರಿಗೊಬ್ಬರು, ಪತಿಪತ್ನಿಯರು, ಗುರುಗಳಾಗಿದ್ದರು! ಇದು ಒಂದು ಅಪುರೂಪ ವಿಚಿತ್ರವಾಗಿತ್ತು.

## ಲೋಪಾಮುದ್ರ ಅಗಸ್ತ್ಯರ ಚರಿತ್ರೆ

ಅಗಸ್ತ್ಯರ ತಪೋಬಲದಿಂದಲೇ ವಿದರ್ಭ ರಾಜನಿಗೆ ಒಂದು ಹೆಣ್ಣು ಮಗುವಾಯಿತು. ಆಕೆಯೇ ಲೋಪಾಮುದ್ರ. ಅಗಸ್ತ್ಯರು ಆ ಲೋಪಾಮುದ್ರೆಯನ್ನು ವಿವಾಹವಾಗಲು ಬಯಸಿದರು. ಆಗದೆಂದರೇ ಶಪಿಸುವರೆಂಬ ಭಯ, ಒಲ್ಲೆನೆಂದರೇ ವಿರುದ್ಧವಾದ ಕನ್ಯೆ - ಮುದುಕನ ಜೋಡಿ ಆಗುವುದೇ ಎಂದು ಆ ರಾಜ ಸಂಕಟಕ್ಕೆ ಒಳಗಾದನು. ಮಗಳ ಬಳಿ ಚರ್ಚಿಸಲೂ, ಆಕೆ, ತಾನು ಹುಟ್ಟಿರುವುದೇ ಅಗಸ್ತ್ಯರಿಗಾಗಿ ಎಂದು ಖಡಾಖಂಡಿತವಾಗಿ ನುಡಿದಳು! ವಿವಾಹ ನಡೆದ ನಂತರ, ಅಗಸ್ತ್ಯರನ್ನು ಸನ್ಯಾಸ ಉಡುಪಗಳನ್ನು ಉಟ್ಟು, ಹಿಂಬಾಲಿಸಿದಳು. ಅಲ್ಲಿ ಆತ ಆಕೆಗೆ ಶ್ರೀವಿದ್ಯೆಯನ್ನುಪದೇಶಿಸಿದರು. ಕೆಲಕಾಲದ ನಂತರ, ಆತ, ಆಕೆಯನ್ನು ಅನುಭವಿಸಲೂ ಇಚ್ಚೆಪಟ್ಟಾಗ, ಆಕೆ "ನಾಥಾ! ಶ್ರೀ ಲಲಿತ ರೂಪವನ್ನುಪಾಸಿಸಿ ನಾನೀಗ ಲಲಿತಾ ಸ್ವರೂಪಿಣಿ. ತಾವೂ ಶಿವ ಸ್ವರೂಪರಾದರೇ ಹೊರತೂ, ನಮ್ಮಿಬ್ಬರಿಗೂ ಸರಿಹೋಲದು'' ಎಂದಳು. ಅಗಸ್ತ್ಯರು ಘೋರ ತಪಸ್ಸು ಮಾಡಿ, ಶಿವ ಸ್ವರೂಪಿಯಾದರು. ಈಗ ಒಪ್ಪಿಗೆ ಕೊಡುವಳೆಂದರೇ, ನಾಥಾ! "ನಾನು ರಾಜ ಕುಟುಂಬಿಕಳು. ನನ್ನನ್ನು ಪಡೆಯುವವನು, ಕ್ಷತ್ರಿಯ ಧರ್ಮ ಪ್ರಕಾರ ಬೆಲೆ ಬಾಳುವ ವಸ್ತ್ರಾಭರಣಗಳು ಧರಿಸಿ, ಸುಗಂಧ ದ್ರವ್ಯಗಳನ್ನುಪಯೋಗಿಸಬೇಕು. ಆಗಲೇ ನಮ್ಮಿಬ್ಬರ ಸೇರುವಿಕೆ ಉಚಿತ'' ಎಂದಳು. ಆಗ ಅಗಸ್ತ್ಯರು, 'ಇಲ್ವಲ'ನೆಂಬ ರಾಕ್ಷಸನನ್ನು ಭೇಟಿಮಾಡಿ, ಮಾಯೋಪಾಯದಿಂದ ಅವನ ತಮ್ಮನಾದ ವಾತಾಪಿಯನ್ನು ಜೀರ್ಣಿಸಿಕೊಂಡು, ಆ ರಾಕ್ಷಸನಿಂದ ಬಹಳಷ್ಟು ಧನ ಪಡೆದು, ಪತ್ನಿಯ ಬಯಕೆಗಳನ್ನು ತೀರಿಸಿ, ಆಕೆಯಿಂದ ಸತ್‌ಸಂತಾನವನ್ನು ಪಡೆದನು.

ಇಲ್ವಲನನ್ನು ಕುರಿತು ತಿಳಿಸಬೇಕೆಂದರೇ, ಇಲ್ವಲ ಮತ್ತು ವಾತಾಪಿ, ರಾಕ್ಷಸ ಸಹೋದರರು. ಅಲ್ಲಿನ ದಾರಿಹೋಕರನ್ನು ಮೋಸಗೊಳಿಸಲು ವಾತಾಪಿ ಒಂದು ಮೇಕೆ ಆಗುವನು. ಇಲ್ವಲ, ಅದನ್ನು ಕೊಂದು ಅತಿಥಿಯರಿಗೆ ಭೋಜನ ತರುವನು. ನಂತರ

ಇಲ್ವಲನು 'ವಾತಾಪಿ'ಯನ್ನು ಕರೆದ ಕೂಡಲೇ ಅತಿಥಿಯರ ಹೊಟ್ಟೆ ಸೀಳಿಕೊಂಡು ಈಚೆ ಬರುವನು. ಆಗ ಆ ಸಹೋದರರು. ಆ ಅತಿಥಿಯರನ್ನು ಕಬಳಿಸುವುದಲ್ಲದೇ ಅವರ ಧನವನ್ನು ಪಡೆಯುತ್ತಿದ್ದರು. ಇಂತಹ ಇಲ್ವಲ ವಾತಾಪಿಯರನ್ನು ಭೇಟಿಮಾಡಿ ಅಗಸ್ತ್ಯರು "ಜೀರ್ಣಂ ವಾತಾಪಿ, ಜೀರ್ಣಂ ಜೀರ್ಣಂ" ಎನ್ನಲೂ, ಅವರ ಸಂಕಲ್ಪದಂತೆ, ವಾತಾಪಿ, ಋಷಿಗಳ ಹೊಟ್ಟೆಯಲ್ಲಿ ಜೀರ್ಣವಾಗಿಹೋದನು. ಅಗಸ್ತ್ಯರಿಗೆ ಧನವೂ ಲಭಿಸಿತು. ಜನರಿಗೆ ಇಲ್ವಲ, ವಾತಾಪಿಯರ ಬಾಧೆಯೂ ತಪ್ಪಿತು.

ಅಗಸ್ತ್ಯರು ಒಮ್ಮೆ ಸಪ್ತ ಸಮುದ್ರ ನೀರನ್ನೂ ತನ್ನ ಕಮಂಡಲದಲ್ಲಿ ತೆಗೆದು, ಕುಡಿದುಬಿಟ್ಟರು. ವಿಂಧ್ಯಾಚಲದ ಗರ್ವವನ್ನೂ ನಿರ್ಮೂಲನೆ ಮಾಡಿದರು. ದಕ್ಷಿಣ ಭಾರತದಲ್ಲಿ ಮಹಾಸಿದ್ಧರಾಗಿ, ತಮಿಳು ಭಾಷೆಯನ್ನು ಜನಕ್ಕೆ ಅರ್ಪಿಸಿದರು. ಎಷ್ಟೋ ದೇಗುಲಗಳನ್ನು ಕಟ್ಟಿಸಿದರು. ನಾನು ಕಲ್ಕಿ ಅವತಾರದಲ್ಲಿರಲೂ, ಪರಶುರಾಮನಂತೆಯೇ ಇವರು ಪ್ರಸಿದ್ಧ ಗುರುಗಳಾಗಿರುವರು.

## ದೇವೀ ದಶ ಮಹಾವಿದ್ಯೆಗಳು

**ದಶ ಮಹಾವಿದ್ಯೆಗಳಲ್ಲಿ ಪ್ರಥಮ ರೂಪ ಕಾಳಿ:** ಮಹಾಕಾಳಿ ಸಮಸ್ತ ವಿದ್ಯೆಗಳಿಗೂ ಮೊದಲು. ಆಕೆಯ ವಿದ್ಯಾಮಯ ರೂಪಗಳೇ ಮಹಾವಿದ್ಯೆಗಳು. ಒಮ್ಮೆ ಹಿಮಾಲಯದಲ್ಲಿನ ಮಾತಂಗಮುನಿ ಆಶ್ರಮದಲ್ಲಿ, ದೇವತೆಗಳು ಮಹಾಮಾಯೆಯನ್ನು ಸ್ತುತಿಸಲೂ, ಅಂಬಿಕೆ ಮಾತಂಗ ವನಿತೆಯ ರೂಪದಲ್ಲಿ ದರ್ಶನವಿತ್ತಳು. ಕಾಡಿಗೆ ಕಪ್ಪು ಬಣ್ಣದಲ್ಲಿರಲೂ ಆಕೆಯನ್ನು 'ಕಾಳಿ' ಎಂದರು. ಶುಂಭ ನಿಶುಂಭರನ್ನು ಕೊಂದಳು. ಕಾಳಿ ನೀಲಿವರ್ಣನದಲ್ಲಿ, 'ತಾರ' ಹೆಸರಲ್ಲಿ ಸಹಾ ಪ್ರಸಿದ್ಧಳು. ಸಂವತ್ಸರಗಟ್ಟಲೇ ಶ್ರಮಿಸಿ ಪಡೆಯುವ ಯೋಗಮಾರ್ಗ ಸಾಧನೆಯನ್ನು, ಕಾಳಿ ಉಪಾಸನೆದಿಂದ ಮಾಸಗಳಲ್ಲೇ ಪಡೆಯಬಹುದು! ಆದರೇ, ಆ ಸಾಧನಾಸಮಯ, ಕಾಳಿಯನ್ನು ತಮ್ಮಲ್ಲಿ ಆಕರ್ಷಿಸುವುದರಿಂದ ಯೋಗಿ ದುರ್ಭರ ಅಗ್ನಿ ತಾಪವನ್ನು ಮತ್ತು ಬಾಧೆಯನ್ನೂ ಅನುಭವಿಸಿಬೇಕಾಗಿರುವುದು.

**ದಶ ಮಹಾವಿದ್ಯೆಯ ಎರಡನೆಯ ರೂಪ ತಾರ:** ಈಕೆ ಸರ್ವದಾ ಮೋಕ್ಷ ತರುವಳು, ತರಿಸುವಳು. ಆದ್ದರಿಂದಲೇ ತಾರ ಎಂದು ಕರೆಯಲ್ಪಟ್ಟಳು. ನೀಲಿ ಸರಸ್ವತಿ ಎಂದೂ ಪ್ರಸಿದ್ಧಳು. ಭಯಂಕರವಾದ ಕಷ್ಟಗಳಿಂದ ಪಾರುಮಾಡಬಲ್ಲ ಈ ತಾಯಿಯನ್ನು ಯೋಗಿಗಳು 'ಉಗ್ರತಾರ' ರೂಪದಲ್ಲಿ ಪೂಜಿಸುವರು. ವಶಿಷ್ಠ ಮಹರ್ಷಿ ಬಹುದೊಡ್ಡ 'ತಾರಾ ಉಪಾಸಕರು." ಚೈತ್ರ ಶುದ್ಧ ರಾತ್ರಿಯನ್ನು 'ತಾರ ರಾತ್ರಿ' ಎನ್ನುವರು.

**ದಶ ಮಹಾವಿದ್ಯೆಯ ಮೂರನೇಯ ರೂಪ ಛಿನ್ನಮಸ್ತ:** ಇದು ಬಲು ರಹಸ್ಯವಾದದ್ದು. ಒಮ್ಮೆ ದೇವಿ ತನ್ನ ಸಖಿಯರೊಡನೆ ಮಂದಾಕಿನಿ ನದಿಗೆ ಸ್ನಾನಕ್ಕೆ ತೆರಳಿದಳು. ಸ್ನಾನದ ನಂತರ ಕ್ಷುದಾಗ್ನಿ ಪೀಡಿತಳಾಗಿ ಕಪ್ಪು ಬಣ್ಣ ಹೊಂದಿದಳು. ಸಖಿಯರಾದ ಜಯವಿಜಯರು ದೇವಿಯನ್ನು ಭೋಜನ ವಿಷಯ ಚರ್ಚಿಸಲು ಆಕೆ ಖಡ್ಗದಿಂದ ತಲೆ ಕಡಿದುಕೊಳ್ಳಲೂ ಅದು ತನ್ನ ಬಲಗೈಯಲ್ಲಿ ಬಂದು ಬಿದ್ದಿತು. ಮಾತೆಯ ಮುಂಡದಿಂದ 3 ರಕ್ತಧಾರೆಗಳು ಸುರಿದವು. 2 ಧಾರೆಗಳನ್ನು ಆಕೆಯ ಇಬ್ಬರು ಸಖಿಯರು ಸೇವಿಸಲು ಮೂರನೆಯ ರಕ್ತ ಧಾರೆಯನ್ನು ದೇವಿಯೇ ಸವಿದಳು. ಅಂದಿನಿಂದ ಆಕೆ "ಛಿನ್ನಮಸ್ತಾ" ನಾಮದಿಂದ ಪ್ರಖ್ಯಾತಿ ಹೊಂದಿದಳು. ಹಿರಣ್ಯಕಶ್ಯಪರು ಈ ರೂಪ ಉಪಾಸಕರೇ!

**ದಶ ಮಹಾವಿದ್ಯೆಯ ನಾಲ್ಕನೆಯ ರೂಪ ಷೊಡಶೀಮಹೇಶ್ವರಿ:** ಈ ದೇವಿಯ ಹೃದಯ ದಯಾಪ್ರಪೂರ್ಣ. ಈಕೆಯನ್ನು ನಂಬಿದವರಿಗೆ ಜ್ಞಾನ ಅನಂತವಾಗಿ ಲಭಿಸುವುದು. ವಿಶ್ವದ ಎಲ್ಲಾ ಮಂತ್ರತಂತ್ರಗಳನ್ನೂ ಈ ದೇವಿಯೇ, ಅನುಗ್ರಹಿಸುವಳು. ವೇದಗಳೂ ಈ ಮಾಹವಿದ್ಯಾಶಕ್ತಿಯನ್ನು ವರ್ಣಿಸಲಾರವು! ಈ ಮಹಾಭಗವತಿ ಭೋಗ, ಮೋಕ್ಷ ಮತ್ತು ಇತರ ಕೋರಿಕೆಗಳ ಪ್ರಧಾತೆ.

**ದಶ ಮಹಾವಿದ್ಯೆಯ ಐದನೆಯ ರೂಪ ಭುವನೇಶ್ವರೀ ದೇವಿ:** ಸಪ್ತಕೋಟಿ ಮಹಾಮಂತ್ರಗಳೂ ಸದಾ ಈಕೆಯನ್ನು ಆರಾಧಿಸುತ್ತಿರುವವು. ಕಾಳೀತತ್ತ್ವ ಮೊದಲು, ಕಮಲಾತತ್ತ್ವದವರೆಗಿನ ದಶ ರೂಪಗಳಲ್ಲಿ ಅವ್ಯಕ್ತ ಭುವನೇಶ್ವರೀ ದೇವಿ ಬ್ರಹ್ಮಾಂಡ ರೂಪಧಾರಿಣಿ! ಪ್ರಳಯ ಬಂದಾಗ ಕಮಲದಿಂದ ಅಂದರೆ ವ್ಯಕ್ತ ಜಗತ್ತಿನಿಂದ ಕಾಳಿರೂಪ ತಾಳಿ, ''ಕಾಲಿನ ಜನ್ಮಧಾತ್ರಿ''ಯಾಗಿ ಹೆಸರು ಪಡೆದಿರುವಳು.

**ದಶ ಮಹಾವಿದ್ಯೆಗಳ ಆರನೆಯ ರೂಪ ತ್ರಿಪುರಭೈರವಿ:** ಕಾಲನ ವಿಶೇಷ ಸ್ಥಿತಿಯನ್ನು ಶಾಂತಿಸುವ ಶಕ್ತಿ ಶ್ರೀ ತ್ರಿಪುರಭೈರವಿ. ಶ್ರೀ ನೃಸಿಂಹ ಭಗವಾನರ ಶಕ್ತಿ ಸಹಾ! ಕ್ಷಣಕ್ಷಣಕ್ಕೂ ಪ್ರಕೃತಿಯಲ್ಲಿ, ಆಕರ್ಷಣೆ ಮತ್ತು ವಿಕರ್ಷಣೆಯ ಕಾರಣ, ಬದಲಾವಣೆಗಳೆಂಬ ಪ್ರಕ್ರಿಯೆ ನಡೆಯುತ್ತಲೇ ಇರುವುದು. ತ್ರಿಪುರಭೈರವಿಯ ರಾತ್ರಿ ನಾಮ ಕಾಳರಾತ್ರಿ! ಭೈರವನನಾಮ ಕಾಲಭೈರವ! ಈ ಎರಡರ ಕೂಟರೂಪವೇ, ನನ್ನ ಮುಂದಿನ ನೃಸಿಂಹ ಸರಸ್ವತಿ ಅವತಾರ. ಅದು ಮಹಾಯೋಗಿಗಳಿಗೆ ತ್ರಿಪುರಭೈರವಿ, ಕಾಲಭೈರವ ಅವತಾರ.

**ದಶ ಮಹಾವಿದ್ಯೆಗಳಲ್ಲಿ ಏಳನೆಯ ರೂಪ ಧೂಮ್ರಾವತಿ:** ಧೂಮ್ರಾವತಿ, ಉಗ್ರತಾರಳೇ! ಶರಣಾಗತರಿಗೆ ಕಷ್ಟಗಳು ಕಳೆದು, ಸಂಪತ್ತು ಕೊಡುವಳು. ಆಗಮಗಳಲ್ಲಿ ಈ ಮಾತೆಯನ್ನು ಅಭಾವ ಸಂಕಟಗಳನ್ನು ದೂರಮಾಡಬಲ್ಲ ಶಕ್ತಿ ಎಂದು ವರ್ಣಿಸಿರುವರು. ಆದರೆ ಜೀವಿಗಳ ಸಂಕಟಗಳಾದ ಕ್ಷುತ್ಪಿಪಾಸನೆ, ಕಲಹ, ದಾರಿದ್ರ್ಯಗಳಿಗೆ ಈಕೆಯೇ ಮೂಲಭೂತ. ಈ ತಾಯಿಯ ಅನುಗ್ರಹದಿಂದ ಸಂಕಟಗಳೆಲ್ಲವೂ ದೂರವಾಗುವವು.

**ದಶ ಮಹಾವಿದ್ಯೆಗಳಲ್ಲಿ ಎಂಟನೆಯ ರೂಪ ಭಗಳಾಮುಖಿ:** ಐಹಿಕ, ಪಾರಲೌಕಿಕ, ದೇಶ, ಸಮಾಜವನ್ನು ಪೀಡಿಸುವ ದುಃಖ ಮತ್ತು ಶತ್ರುನಾಶಕ್ಕೆ ಈ ಮಾತೆ ನೆರವಾಗುವಳು. ಮೊಟ್ಟಮೊದಲಿಗೆ ಬ್ರಹ್ಮದೇವರು ಭಗಳಾಮಹಾ ವಿದ್ಯೋಪಾಸನೆ ಮಾಡಿದರು. ವಿಷ್ಣು ಭಗವಾನರು, ಪರಶುರಾಮನೂ ಭಗಳಾಮುಖಿ ದೇವತಾ ಉಪಾಸಕರೇ. ಬಹಳಷ್ಟು ಕಾಲ, ತಿರುಮಲ ಶ್ರೀ ವೇಂಕಟೇಶ್ವರನನ್ನು ಭಗಳಾಮುಖಿ ಎಂದೇ ಆರಾಧಿಸುತ್ತಿದ್ದರು.

**ದಶ ಮಹಾವಿದ್ಯೆಗಳಲ್ಲಿ ಒಂಬತ್ತನೇಯ ರೂಪ ಮಾತಂಗಿ:** ಮಾತಾ ಮಾತಂಗಿಗೆ ಗೃಹಸ್ಥ ಜೀವನ ಸುಖಪ್ರದವಾಗಿ ಮಾಡಿ, ಪುರುಷಾರ್ಥ ತರಬಲ್ಲ ಶಕ್ತಿ ಉಂಟು. ಈಕೆಯೇ ಮಾತಂಗ ಮಹಾಮುನಿಯ ಮಗಳು.

**ದಶ ಮಹಾವಿದ್ಯೆಗಳಲ್ಲಿ ಹತ್ತನೆಯ ರೂಪ ಕಮಲಾಲಯ:** ಈಕೆ ಸಮೃದ್ಧಿಗೆ ಅಧಿಪತಿ, ಭಾರ್ಗವರಿಂದ ಪೂಜಿಸಲ್ಪಡುವುದರಿಂದ ''ಭಾರ್ಗವಿ'' ಎಂದೂ ಕರೆಯುವರು. ಪೃಥ್ವೀಪತಿತ್ವ, ಪುರುಷೋತ್ತಮತ್ವ ತರಬಲ್ಲಳು. ವಿಶೇಷವಾದ ವಸ್ತುಪ್ರಧಾತೆ ಸಹಾ! ಈಕೆಯೇ ಪದ್ಮಾವತಿ, ಶ್ರೀನಿವಾಸನ ಒಡತಿ, ದೇವೇರಿ.

ಮಕ್ಕಳೇ! ನಿಮಗೆ ದಶ ಮಹಾವಿದ್ಯೆಗಳು ಎಷ್ಟು, ಯಾರಿಂದ ಉಪದೇಶಿಸಬೇಕೋ ನಿರ್ಣಯಿಸಿ, ಆ ರೀತಿ ಬೋಧಿಸುವೆನು. ದಶ ಮಹಾವಿದ್ಯೆ ಸ್ವರೂಪಿಣಿ ಆದ ಅನಘಾದೇವಿಯನ್ನು ಮತ್ತು ಆಕೆಯ ಪ್ರಭು ಅನಘನನ್ನು ಪೂಜಿಸುವವರಿಗೆ, ಅವರ ಸಂತಾನವಾದ

ಅಷ್ಟಸಿದ್ಧಿಗಳೂ ಅನುಗ್ರಹಿಸುವುರು. ನೀವು ಪ್ರತಿ ತಿಂಗಳ ಬಹುಳಾಷ್ಟಮಿಗೆ 'ಅನಘಾಷ್ಟಮಿ' ಆಚರಿಸಿರಿ. ನಿಮ್ಮ ಎಲ್ಲಾ ಕೋರಿಕೆಗಳೂ ಫಲಿಸುವವು. ಶಂಕರ ಭಟ್ಟೂ! ನೀನು ರಚಿಸಲಿರುವ 'ಶ್ರೀಪಾದ ಶ್ರೀವಲ್ಲಭ ಚರಿತಾಮೃತ'ವನ್ನು ಪಾರಾಯಣ ಮಾಡಿ, ನಂತರ ಬರುವ ಶುಕ್ಲ ಅಥವಾ ಕೃಷ್ಣ ಅಷ್ಟಮಿಯಂದು 'ಅನಘಾಷ್ಟಮಿ' ವ್ರತವನ್ನು ಮಾಡಿ, 11 ಮಂದಿಗೆ ಊಟ ಅಥವಾ ಊಟಕ್ಕೆ ಸರಿಬೀಳುವ ಹಣ ದಾನವಿತ್ತಲ್ಲಿ, ತಕ್ಷಣ ಫಲಪ್ರಾಪ್ತಿಯಾಗುವುದು.

## ಚರಿತಾಮೃತ ಪಾರಾಯಣ ಮಹಿಮೆ

ಶ್ರೀ ಚರಿತಾಮೃತ ಗ್ರಂಥವನ್ನು ಒಂದು ಸಾಮಾನ್ಯ ಗ್ರಂಥವಾಗಿ ಎಣಿಸಬೇಡಿ. ಅದು ಜೀವವುಳ್ಳ ಮಹಾಚೈತನ್ಯ ಧಾರೆ ಎಂದು ತಿಳಿಯಿರಿ. ಅದರ ಪ್ರತಿ ಅಕ್ಷರವೂ, ಪಾರಾಯಣ ಸಮಯ, ನನ್ನ ಭಾವನೆಯ ಚೈತನ್ಯದೊಳಗೆ ಪ್ರವೇಶಿಸುವವು. ನಿಮಗೆ ತಿಳಿಯದೇ ನೀವು ನನ್ನೊಟ್ಟಿಗೆ ಭಾವ ಸಂಪರ್ಕ ಪಡೆದಿರುವುದರಿಂದ, ಧರ್ಮಬದ್ಧವಾದ ನಿಮ್ಮೆಲ್ಲಾ ಕೋರಿಕೆಗಳೂ ನನ್ನ ಕೃಪೆಯಿಂದ ತೀರುವವು. ಇದನ್ನು ಪೂಜಾಮಂದಿರದಲ್ಲಿ ಶ್ರದ್ಧೆಯಿಂದ ಅಲಂಕರಿಸಿದರೂ, ಶುಭಪ್ರದ ಸ್ಪಂದನೆಗಳು ಹೊರಬೀಳುತ್ತಿರುವವು, ದುರದೃಷ್ಟಕಾರಕ ಮತ್ತು ಕತ್ತಲೆಯ ಶಕ್ತಿಗಳನ್ನು ಓಡಿಸಿ ಬಿಡುತ್ತಿರುವವು.

ತಿಳಿದೋ ಅಥವಾ ತಿಳಿಯದೇಯೋ ಶ್ರೀಪಾದ ಶ್ರೀವಲ್ಲಭ ಚರಿತಾಮೃತವನ್ನು ನಿಂದಿಸುವ ಅಥವ ಟೀಕೆ ಮಾಡುವವರ ಅನೇಕ ಜನುಮ ಪುಣ್ಯಫಲವನ್ನು ಧರ್ಮದೇವತೆಗಳು ಕಂತಿನಲ್ಲಿ ಗ್ರಹಿಸಿ, ಬಡವರಿಗೆ ಹಂಚುವರು! ಹೀಗೆ ಅವರು ಬಡವರಾಗಿ, ಬಡವರು ಭಾಗ್ಯವಂತರಾಗಿಯೂ ಬದಲಾಗುವರು. ಇದು ಖಚಿತವಾಗಿಯೂ ಸತ್ಯ ನುಡಿಯುತ್ತಿರುವ ಗ್ರಂಥವೆಂದು ನಾನೇ ಪ್ರಮಾಣ ಮಾಡಿ ಹೇಳುತ್ತಿರುವೆನು. ವಿಮರ್ಶಿಸಿದರೇ ದರಿದ್ರರಾಗುವರು. ಶ್ರದ್ಧೆಯಿಂದ ಪಠಿಸಿದರೆ, ದಾರಿದ್ರ್ಯ ತೊಲಗುವುದು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 32

# ನವನಾಥರ ವರ್ಣನೆ

### ನವನಾಥರ ವೃತ್ತಾಂತ

ಶ್ರೀಪಾದ ಶ್ರೀವಲ್ಲಭರ ದಿವ್ಯಚರಣಾರವಿಂದಗಳ ಸ್ಪರ್ಶದ ನಂತರ, ನಾನು ಹೀಗೆ ಪ್ರಶ್ನಿಸಿದೆ. ''ಮಹಾಪ್ರಭೂ! ನವನಾಥರೆಂಬ ಹೆಸರುಳ್ಳ ಸಿದ್ಧಯೋಗಿಗಳು ಇರುವುರೆಂದು, ಅವರೆಲ್ಲಾ ಶ್ರೀದತ್ತ ಅಂಶಾವತರಗಳೇ ಎಂದು ಕೇಳಿರುವೆನು. ಅವರ ಬಗ್ಗೆ ಶ್ರೀ ಚರಣರು ತಿಳಿಸಬೇಕೆಂದು ಪ್ರಾರ್ಥನೆ.''

ನವನಾಥರ ಹೆಸರಿನಿಂದಲೇ ಶ್ರೀಗಳ ಕಣ್ಣಿನಿಂದ ಅಮೃತಧಾರೆ ಪ್ರವಹಿಸಲಾರಂಭಿಸಿತು! ಹಸು ತನ್ನ ಕರುವಿನ ಮೇಲೆ ತೋರಿಸುವ ಪ್ರೇಮ ಚೈತನ್ಯವೇ ಅದು. ಗುರುಗಳು ಸಂತಸದಿಂದ ಹೀಗೆ ನುಡಿದರು.

ಮಕ್ಕಳೇ! **ಮತ್ಸ್ಯೇಂದ್ರಿಯನು, ಗೋರಕ್ಷಕನು, ಜಾಲಂಧರನು, ಗಹಾನಿ, ಅಡ್ಭಂಗನು, ಚೌರಂಗನು, ಭರ್ತರಿ, ಚರ್ಪಟನು, ನಾಗನಾಥನು ಎಂಬವರು ನವನಾಥರು. ಇವರ ಸ್ಮರಣೆಯಿಂದಲೇ ಶುಭಫಲವಾಗುವುದು. ನವನಾಥರನ್ನು ಸ್ಮರಿಸಿದವರಿಗೆ ದತ್ತರ ಕರುಣಾಕಟಾಕ್ಷ ತಪ್ಪದೇ ಸಿಗುವುದು.**

ಈ ಕಲಿಯುಗ ಪ್ರಾರಂಭಕ್ಕೆ ಕೆಲ ವರುಷ ಮುನ್ನ, ಶ್ರೀ ಕೃಷ್ಣರು, ಉದ್ಧವಾದಿ ಭಕ್ತರೊಡನೆಯು ಮತ್ತು ಎಲ್ಲಾ ಯಾದವರೊಡೆನೆಯೂ ಪರಿಶೀಲಸಲ್ಪಟ್ಟ ನವನಾಥರೆಂದು ಕರೆಯಲ್ಪಡುವ ನವನಾರಾಯಣರನ್ನು ಸ್ಮರಿಸಿದರು. ಋಷಭ ಚಕ್ರವರ್ತಿಗೆ 100 ಪುತ್ರರಿದ್ದರು. ಅವರಲ್ಲಿ 9 ಮಂದಿ ನಾರಾಯಣಾಂಶ ಉಳ್ಳವರು. ಇವರೇ ನವ ನಾರಾಯಣರು, (1) ಕವಿ (2) ಹರಿ (3) ಅಂತರಿಕ್ಷು (4) ಪ್ರಬುದ್ಧ (5) ಪಿಪ್ಪಲಾಯನ (6) ಆವಿರ್ಹೋತ್ರನು (7) ದೃಮೀಳ (8) ಚಮಸ (9) ಕರಭಾಜನು. ಇವರೆಲ್ಲರೂ ಅವಧೂತ ಸ್ಥಿತಿಯಲ್ಲಿರುವ ಸಿದ್ಧಪುರುಷರು. ನನ್ನ ಆಜ್ಞೆ ಪ್ರಕಾರ, ಕೃಷ್ಣಾವತಾರದಲ್ಲಿ ಕೊಟ್ಟ ಮಾತಿನಂತೆ, ಧರ್ಮಸಂಸ್ಥಾಪನಾ ಕಾರ್ಯಾರ್ಥವಾಗಿ, ನವನಾಥರು ಭೂಮಿಗೆ ಬಂದರು. ಕವಿ, ಮತ್ಸ್ಯೇಂದ್ರಿಯನಾಗಿ ಜನಿಸಿದನು. ಇವನ ಶಿಷ್ಯನಾಗಿ ಹರಿ, ಗೋರಕ್ಷಕನಾದ. ಅಂತರಿಕ್ಷು, ಜಾಲಂಧರ ನಾಮದಿಂದಲೂ; ಇವನ ಶಿಷ್ಯನಾಗಿ ಪ್ರಬುದ್ಧ, ಕಾನಿಫಾ ಹೆಸರಿನಿಂದಲೂ; ಪಿಪ್ಪಲಾಯನನು, ಚರ್ಪಟ ನಾಮದಿಂದಲೂ; ಆವಿರ್ಹೋತ್ರನು, ನಾಗೇಶನಾಥ ನಾಮದಿಂದಲೂ; ದೃಮೀಳನು, ಭರ್ತರೀನಾಥ ಹೆಸರಿನಿಂದಲೂ; ಚಮಸ, ರೇವಣನಾಥ ನಾಮದಿಂದಲೂ ಮತ್ತು ಕರಭಾಜನು, ಗಹನೀನಾಥ ಹೆಸರನಲ್ಲಿಯೂ ಜನ್ಮಿಸಿದರು.

ಸೃಷ್ಟಿ ಮೊದಲಿನಲ್ಲಿ ಒಮ್ಮೆ ಒಂದಾನೊಂದು ಕಾರಣದಿಂದ ಬ್ರಹ್ಮದೇವರ ವೀರ್ಯ ಉಕ್ಕಿಬಿದ್ದಿತು. ಅದರಿಂದ ಅದೆಷ್ಟೋ ಕಡೆಗಳಲ್ಲಿ ಬಹಳಷ್ಟು ಋಷಿಗಳು ಹುಟ್ಟುವರೆಂದು, ಭವಿಷ್ಯತ್ಪುರಾಣದಲ್ಲಿ ವ್ಯಾಸ ಮಹರ್ಷಿ ನುಡಿದಿದ್ದರು.

ಉಪಚರನನೆಂಬುವ ವಸುವು ಒಬ್ಬನಿದ್ದನು. ಆತ ಊರ್ವಶಿಯನ್ನು ಮೋಹಿಸಿದನು. ಆತನ ವೀರ್ಯ ಉಕ್ಕಿ, ಯಮುನ ನದಿಗೆ ಬಿತ್ತು. ಅದು ಒಂದು ಮೀನು ಸೇವಿಸಿ 'ಮತ್ಸೇಂದ್ರನಾಥ'ನೆಂಬವನಿಗೆ ಜನ್ಮ ತಂದಿತು! ಶಿವನು ಲಲಾಟ ಅಗ್ನಿಯಿಂದ ಮನ್ಮಥನನ್ನು ದಹಿಸಿದಾಗ, ಆ ಭಸ್ಮದಲ್ಲಿ ಸೂಕ್ಷ್ಮ ರೂಪದಲ್ಲಿ ಮನ್ಮಥನ ಆತ್ಮ ಇತ್ತು. ಬೃಹದ್ರಥರಾಜನು ಯಜ್ಞ ಮಾಡುತ್ತಿರಲೂ, ಯಜ್ಞಕುಂಡದಿಂದ ಜಾಲಂಧರನಾಥನು ಹುಟ್ಟಿದನು. ಒಂದಷ್ಟು ಬ್ರಹ್ಮವೀರ್ಯ, ಒಂದು ನಾಗರಹಾವಿನ ಹೆಡೆಮೇಲೆ ಬೀಳಲೂ, ಅದು ಅದನ್ನು ತಿಂಡಿ ಪದಾರ್ಥವೆಂದು ತಿಂದು, ಗರ್ಭ ತಾಳಿತು. ಜನಮೇಜಯನು ಸರ್ಪಯಾಗ ಮಾಡುತ್ತಿದ್ದನು. ಆಗ ಆಸ್ತಿಕನೆಂಬ ಮಹರ್ಷಿ, ಜನಿಸಲಿರುವ ಮಹಾಸರ್ಪವನ್ನು ನಾಶವಾಗದೇ ಕಾಪಾಡಲು, ಮೊಟ್ಟೆಯನ್ನು ಮತ್ತು ತಕ್ಷಕನ ಮಗಳಾದ ಪದ್ಮಿನಿ ಎಂಬ ನಾಗಕನ್ಯಕೆಯನ್ನೂ ಒಂದು ದೊಡ್ಡ ಆಲದ ಮರದ ಪೊಟರೆಯಲ್ಲಿ ಅಡಗಿಸಿಟ್ಟನು. ಅಲ್ಲಿ ಅವಿಹೋರ್ತ್ರನೆಂಬಾತನು ಜನ್ಮಿಸಬೇಕಾಗಿದೆ. ಆ ಮೊಟ್ಟೆಯನ್ನು ಆ ಮರದ ಪೊಟರೆಯಲ್ಲೇ ಇಟ್ಟು, ತಕ್ಷಕನ ಮಗಳು ತನ್ನ ಸ್ಥಾನಕ್ಕೆ ಹೊರಟು ಹೋದಳು. ಅಲ್ಲಿಂದ ವಟಸಿದ್ಧ ನಾಗನಾಥನೆಂಬ ಹೆಸರಿನ ಅವಿಹೋರ್ತ್ರನು ಅವತರಿಸಿದನು. ಮತ್ಸೇಂದ್ರನು ದೇಶ ಸಂಚಾರ ಮಾಡುವಾಗ, ಮಕ್ಕಳಿಲ್ಲದ ಒಂದು ಮಹಿಳೆಗೆ ಸ್ವಲ್ಪ ಭಸ್ಮವನ್ನು ಮಂತ್ರಿಸಿ ಇತ್ತನು. ಆಕೆ ವಿಶ್ವಾಸವಿಲ್ಲದೇ, ಅದನ್ನು ತಿಪ್ಪೆಯಲ್ಲಿ ಬಿಸಾಡಿದಳು. ಆ ಭಸ್ಮವು ಅಮೋಘಶಕ್ತಿ ಉಳ್ಳದ್ದರಿಂದ ಅದರಿಂದ ಗೋರಕ್ಷನಾಥನು ಹುಟ್ಟಿದನು. ಪಾರ್ವತಿ ವಿವಾಹ ಸಮಯ, ಪುರೋಹಿತನಾಗಿದ್ದ ಬ್ರಹ್ಮದೇವರು ಮಧುಮಗಳ ರೂಪ ಮೋಹಿಸಲು, ಆತನ ವೀರ್ಯ ಸ್ರವಿಸಿತು. ಆತ ನಾಚಿಗೆ ಪಟ್ಟು, ಯಾರಿಗೂ ತಿಳಿಯದೇ ಕಾಲಿನಿಂದ ಆ ವೀರ್ಯ ಉಜ್ಜಿಹಾಕಲು, ಅದು 60 ಸಾವಿರ ಭಾಗಗಳಾಗಿ ಅವುಗಳಿಂದ 60,000 ವಾಲಖಿಲ್ಯರೆಂಬ ಮಹರ್ಷಿಗಳು ಜನ್ಮಿಸಿದರು. ಅದರಲ್ಲಿ ಸ್ವಲ್ಪಭಾಗ ಉಳಿದಿರಲು, ಅಲ್ಲಿ ಅದು ಗೊಬ್ಬರವಾಗಿ ಭಾಗೀರಥಿ ನದಿಯಲ್ಲಿ ಸೇರಿಬಿಟ್ಟಿತು! ಕ್ರಮೇಣ ಅದು ನದೀ ತೀರದ ಕಲ್ಲು ಮುಳ್ಳುಗಳಲ್ಲಿ ಸಿಕ್ಕಿಬಿದ್ದಿತು. ಅದರಲ್ಲಿ ಪಿಪ್ಪಲಾಯನ ಆತ್ಮಪ್ರವೇಶಿಸಿ, ಚರ್ಪಟನಾಥನೆಂಬ ನವನಾಥನೊಬ್ಬನು ಜನ್ಮಿಸಿದನು. ಕೌಳಿಕನೆಂಬ ಮಹರ್ಷಿ ಓರ್ವನು ತನ್ನ ಪರ್ಣಶಾಲೆಯಿಂದ ಭಿಕ್ಷಾರ್ಥಿಯಾಗಿ ಹೊರಟು ತನ್ನ ಭಿಕ್ಷಾಪಾತ್ರೆಯನ್ನು ಆಚೆಯೇ ಇಟ್ಟನು. ಅಗ ಅದರಲ್ಲಿ ಸೂರ್ಯನ ರೇತಸ್ಸು ಬಿತ್ತು. ಅದನ್ನು ಅರಿತ ಮಹರ್ಷಿ, ಅಲ್ಲಿಯೇ ಅದನ್ನು ಭದ್ರ ಮಾಡಿದನು. ಭರ್ತರಿ ಅಂದರೇ ಭಿಕ್ಷಾಪಾತ್ರೆ. ಅದರಿಂದ ಜನ್ಮಿಸಿದ ಕಾರಣ, ಆತ ಭರ್ತರೀನಾಥನಾದನು. ಹಿಮಾಲಯದ ಪರ್ವತದಲ್ಲಿ ಒಂದು ಘೋರಾರಣ್ಯದಲ್ಲಿ, ಒಂದು ದೊಡ್ಡ ಆನೆ ನಿದ್ರಿಸುತ್ತಿತ್ತು. ಬ್ರಹ್ಮದೇವನು ಸರಸ್ವತಿಯನ್ನು ಕಂಡು, ಮೋಹಿಸಿ, ಆತನ ವೀರ್ಯ ಸ್ರವಿಸಿ, ಆ ಆನೆಯ ಕಿವಿಯಲ್ಲಿ ಬಿದ್ದಿತು. ಅದರಿಂದ ಪ್ರಬುದ್ಧನೆಂಬುವನು, ಜೀವ ಪಡೆದು ಆನೆಯ ಕಿವಿಯಿಂದ ಬಂದ ಕಾರಣ (ಕರ್ಣ ಕಾನೀಫಾ) ಎಂಬ ನಾಮಧೇಯದಲ್ಲಿ ನವನಾಥರಲ್ಲಿ ಒಬ್ಬರಾಗಿ ಪ್ರಸಿದ್ಧನಾದನು. ಗೋರಕ್ಷಕನು ಸಂಜೀವಿನಿ ಮಂತ್ರ ಜಪಿಸುತ್ತಾ ಒಂದು ಮಣ್ಣಿನ ಗೊಂಬೆ ಮಾಡುತ್ತಾನೆ. ಅಂತಹ ಗೊಂಬೆಯಲ್ಲಿ ಕರಭಾಜನನು, ಸಂಜೀವಿನಿ ಮಂತ್ರ ಪ್ರಭಾವದಿಂದ ಜೀವಂತನಾಗಿ, ಗಹನೀನಾಥನೆಂದು ಹೆಸರು ಪಡೆದನು. ಶ್ರೀಕೃಷ್ಣನ ಆದೇಶಾನುಸಾರ ಈ ನವಕೃಷ್ಣರು (ನವ ನಾರಾಯಣರು) ಮಂದರ ಪರ್ವತದಲ್ಲಿ ತಮ್ಮ ಸ್ಥೂಲ ಶರೀರವನ್ನು ಭದ್ರಮಾಡಿ (ಸಮಾಧಿ ಮಾಡಿ) ಅವರವರ ಅಂಶಗಳದಿಂದ ಭೂಲೋಕದಲ್ಲಿ ನವನಾಥರಾಗಿ ಅವತರಿಸಿ, ಧರ್ಮ ಸಂಸ್ಥಾಪನೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ಆಗ ನಾನಂದೆನು, ''ಗುರುಸಾರ್ವಭೌಮರಿಗೆ ಜಯವಾಗಲಿ, ನವನಾಥರ ಅವತಾರಗಳು ನವಕೃಷ್ಣರ ಅಂಶಾವತಾರಗಳೆಂದಿರಿ, ನವಕೃಷ್ಣರಿಗೂ, ನವನಾಥರಿಗೂ ಭೇದ ಉಂಟೇ ಪ್ರಭೂ!''

ಶ್ರೀಪಾದರು ಮುಗುಳ್ನಗೆಯಿಂದ, ನಮ್ಮಿಬ್ಬರನ್ನೂ ದಿವ್ಯ ಪ್ರೇಮದಿಂದ ಕಾಣುತ್ತಾ "ಮಕ್ಕಳೇ! ಸಮಸ್ತ ಸೃಷ್ಟಿಯ ಮಹಾಸಂಕಲ್ಪ ಸ್ವರೂಪ ನಾನೇ! ಸಮಸ್ತ ದೇವದೇವತೆಯರಿಗೆ ಆಗುವ ಸಂಕಲ್ಪಗಳು ನನ್ನ ಮಹಾಸಂಕಲ್ಪಗಳ ಕೆಲವು ಸಣ್ಣ ಸಂಕಲ್ಪಗಳು ಮಾತ್ರವೇ. ಈ ಅಲ್ಪ ಸಂಕಲ್ಪಗಳಿಗೆ ಸ್ವಲ್ಪಮಟ್ಟಿಗೆ ಮಾತ್ರ ಸ್ವತಂತ್ರವಿರುವುದು. ಒಂದು ಹಸುವನ್ನು ಒಂದಷ್ಟು ಉದ್ದದ ಹಗ್ಗದಿಂದ ಕಟ್ಟಿಹಾಕಿದ್ದರೇ, ಆ ಹಗ್ಗ ಇರುವ ಉದ್ದದಷ್ಟಿನ ಸ್ಥಳದಲ್ಲಿ ಮಾತ್ರ ಆ ಹಸು, ಸ್ವೇಚ್ಛೆಯಿಂದ ಹುಲ್ಲನ್ನು ತಿನ್ನಬಲ್ಲದು, ತಿರುಗಾಡಬಲ್ಲದು. ಆ ಸ್ವೇಚ್ಛಾಪ್ರದೇಶ ದಾಟಬೇಕೆಂದರೆ ಆ ಹಸುವಿನ ಮಾಲಿಯ ಅಪ್ಪಣೆ ಪಡೆಯಬೇಕು, ಬೇಕಾದಾಗ ಅವನೇ ಅದನ್ನು ಬೇರೊಂದು ಕಡೆ, ಹುಲ್ಲು ಇರುವ ಕಡೆ ಕಟ್ಟಿಹಾಕಬೇಕು. ಅದೇ ಪ್ರಕಾರ **ಕೆಲವು ಧರ್ಮಕರ್ಮ ಸೂತ್ರಗಳಿಗೆ ಒಳಗೊಂಡು ಅಂಶಾವತಾರಗಳಿಗೆ ಸ್ವೇಚ್ಛೆ ತರಲಾಗುವುದು, ಆದ್ದರಿಂದ ಸಂಕಲ್ಪ, ಮೂಲತತ್ತ್ವದಿಂದಲೇ ಬರುವುದು. ಅದನ್ನು ಚಲಾಯಿಸುವ ಜವಾಬ್ದಾರಿ ಅಂಶಾವತಾರಿಗಳಿಗೆ ಕೊಡಲಾಗುವುದು. ಏನೇ ಸಮಸ್ಯೆ ಬಂದಲ್ಲಿ, ಅಂಶಾವತಾರಗಳು ಮೂಲತತ್ತ್ವದ ಗಮನಕ್ಕೆ ಅಂತಹಾ ವಿಷಯಗಳು ತರುವರು. ಮೂಲತತ್ತ್ವದ ಅನುಗ್ರಹ ಪ್ರಾಪ್ತಿಗೊಂಡು, ಅಂಶಾವತಾರಿಗಳು, ಜೀವಗಳಿಗೆ ಶ್ರೇಯಸ್ಸನ್ನು ಒದಗಿಸಿಸುವರು. ಮಾನವರಿಗಿದ್ದ ಹಾಗೆಯೇ ರಾಗದ್ವೇಷ, ಅಹಂಕಾರ ಮುಂತಾದ ದುರ್ಗುಣಗಳು ಅಂಶಾವತಾರಗಳಿಗೆ ಇರದ ಕಾರಣ, ಮೂಲತತ್ತ್ವ ಯಾವ ಯಾವ ಕಾರ್ಯಗಳು ಮಾಡಲೂ ಸಾಧ್ಯವಾಗುವುದೋ ಅವೆಲ್ಲಾ ಅಂಶಾವತಾರಿಗಳೂ ಸಹಾ ಮಡುತ್ತಿರುವವು.** ಆದ್ದರಿಂದ ಜೀವಿಗಳಿಗೆ ಸಂಬಂಧಿಸಿದವರೆಗೂ, ಅಂಶಾವತಾರವಾಗಿ ಬಂದರೂ, ಪೂರ್ಣಾವತಾರವಾಗಿ ಬಂದರೂ ವ್ಯತ್ಯಾಸವಿರಲಾರದು!



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 33

# ಶ್ರೀಪಾದರೇ ಖುದ್ದಾಗಿ ರಮಣಿ, ನರಸಿಂಹರಾಯ ಮದುವೆ ನೆರವೇರಿಸುವುದು

ನಾವು ಶ್ರೀಪಾದರ ಅನುಮತಿ ಪಡೆಯಲು, ಅವರು, ''ಮಕ್ಕಳೇ! ನೀವು ಇಲ್ಲಿಂದ ಶ್ರೀ ಪೀಠಿಕಾಪುರಕ್ಕೆ ಹೋಗಿ. ನನ್ನ ಮಂಗಳಕರ ಆಶೀರ್ವಾದ ನಿಮ್ಮನ್ನು ಕಾಪಾಡುವುದು'' ಎಂದರು. ಅಂತೆಯೇ ನಾನೂ ಶ್ರೀಧರ್ಮಗುಪ್ತನೂ ಕೃಷ್ಣಾ ನದಿಯ ಈ ಭಾಗಕ್ಕೆ ಬಂದು ಸೇರಿದೆವು. ಒಂದು ಬಂಡೆಯಮೇಲೆ ಶ್ರೀಪಾದರ ಪಾದ ಚಿಹ್ನೆಗಳನ್ನು ಕಂಡೆವು. ಶ್ರೀಪಾದರಲ್ಲಿ ಸೂರ್ಯ ನಮಸ್ಕಾರ ಮಾಡುತ್ತಿದ್ದರಂತೆ. ಅದು ನಮಗೆ ಆನಂದ ತಂದಿತು.

ನಾವು ಪಂಚದೇವ ಪಹಾಡ್ ಗ್ರಾಮ ಸೇರಿದೆವು. ಒಂದು ಜೋಳದ ಜಮೀನಿನಲ್ಲಿ ಹೋಗುತ್ತಿರಲೂ, ಅದರ ಮಾಲೀಕ ನಮ್ಮನ್ನು ಆದರದಿಂದ ಆಹ್ವಾನಿಸಿದನು. ಸಿಹಿಯಾದ ಫಲಗಳು ಮತ್ತು ಮಜ್ಜಿಗೆಯನ್ನಿತ್ತನು. ಆ ಜಮೀನಿನ ಮಾಲೀಕ ನರಸಿಂಹರಾಯನು. ಆ ಜಮೀನಿನಲ್ಲೇ ಮನೆ ನಿರ್ಮಿಸಿಕೊಂಡಿದ್ದ. ಆತನ ಕೋರಿಕೆಯಂತೆ ಒಂದು ದಿನ ಅಲ್ಲೇ ಇದ್ದೆವು.

ಆತನು ಶ್ರೀ ಚರಣರ ವೈಭವವನ್ನು ಹೇಳತೊಡಗಿದನು, ''ಸ್ವಾಮಿ! ನನ್ನ ಹೆಸರು ನರಸಿಂಹರಾಯ. ಚಿಕ್ಕಂದಿನಲ್ಲಿ ಬಹಳ ದುರ್ಬಲನಾಗಿದ್ದೆ, ಬಹಳ ಭಯಸ್ಥನು. ಚಿಕ್ಕ ವಯಸ್ಸಿನಲ್ಲೇ ತಂದೆ ತಾಯಿಯನ್ನು ಕಳೆದುಕೊಂಡೆನು. ಸೋದರಮಾವನ ಮನೆಯಲ್ಲೇ ಬೆಳೆದೆ. ಅತ್ತೆ ಬಹಳ ಕೆಟ್ಟವರು. ಮನೆಯಲ್ಲಿ ಎಲ್ಲಾ ಕೆಲಸಗಳೂ ಮಾಡಬೇಕಿತ್ತು. ಗದ್ದೆ ಕೆಲಸ ಸಹಾ ಜಾಸ್ತಿ. ಮಾವನ ಮಗಳು ರಮಣಿ, ನಮ್ಮ ಕುಲಸ್ಥರಲ್ಲೇ ಅವಳು ಬಹಳ ಸೌಂದರ್ಯವತಿ ಮತ್ತು ಸದ್ಗುಣಸಂಪನ್ನೆ. ದೇವರಲ್ಲಿ ಭಕ್ತಿ ಹೆಚ್ಚು. ಶ್ರೀಕೃಷ್ಣನು ಆಕೆಯ ಆರಾಧ್ಯ ದೈವ. ನನ್ನ ಆತ್ತೆ ನನಗೆ ಹಳಸಿದ ಅನ್ನ ನೀಡುವುದು ಅವಳು ಸಹಿಸುತ್ತಿರಲಿಲ್ಲ. ನನಗೆ ಆಹಾರ ಕಡಿಮೆ, ಆದರಣೆ ಶೂನ್ಯ. ಆದರೇ ಕೆಲಸ ಹೆಚ್ಚಾಗಿತ್ತು! ನಮ್ಮ ರಮಣಿ, ತಾಯಿಗೆ ತಿಳಿಯದೇ ನನಗೆ ಒಳ್ಳೆಯ ಹಣ್ಣುಗಳು, ಬಿಸಿ ಊಟ ತಂದು ಕೊಡುತ್ತಿದ್ದಳು. ಒಮ್ಮೊಮ್ಮೆ ಆತ್ತೆ ಅದನ್ನು ನೋಡಿ, ಇಬ್ಬರನ್ನೂ ಬೈಯ್ಯುವುದು, ಹೊಡೆಯುವುದೂ ನಡೆಯುತ್ತಿತ್ತು. ನನ್ನ ಮಾವ, ಒಳ್ಳೆಯವರಾದರೂ ಅತ್ತೆಗೆ ಎದುರು ಮಾತು ಆಡುತ್ತಿರಲಿಲ್ಲ. ಬಲಿಷ್ಠರಾದ ನಮ್ಮ ಕುಲದ ಯುವಕರಿಂದ ನನಗೆ ಒದೇ ಸಹಾ ಬೀಳುತ್ತಿತ್ತು. ಮೊದಲೇ ದುರ್ಬಲನಾದ ನನಗೆ, ಈ ಹೊಡತೆಗಳಿಂದ ಮತ್ತಷ್ಟು ದುರ್ಬಲತೆ, ಅಧೈರ್ಯತೆ ಮತ್ತು ಅಸಮರ್ಥತೆ ಹೆಚ್ಚಿತು. ಅಕ್ಕಪಕ್ಕದ, ನನಗಿಂತ ಚಿಕ್ಕ ವಯಸ್ಕರು ಸಹಾ ನನ್ನನ್ನು ತಿರಸ್ಕರಿಸುತ್ತಿದ್ದರು!

ನಮ್ಮ ರಮಣಿ ಸುಂದರಿಯಾದ ಕಾರಣ, ನಮ್ಮ ಕುಲದ ಯುವಕರು ಅವಳನ್ನು ವಿವಾಹ ಆಗಬೇಕೆಂದಿದ್ದರು. ರಮಣಿ, ನನ್ನನ್ನು ಪರಿಣಯವಾಗಲು ಸಿದ್ಧಳಾಗಿದ್ದಳು. ನಾನೋ, ಆಸ್ತಿ ಇಲ್ಲ, ದುರ್ಬಲನು, ಅಧೈರ್ಯಸ್ಥ!

ನನ್ನ ಸೋದರಮಾವ ಧನವಂತ, ಆಸ್ತಿವಂತ. ಒಳ್ಳೆಯವನೇ, ಆದರೇ ಧನ ಪಿಶಾಚಿ! ಅತ್ತೆ, ಗಯ್ಯಾಳಿ. ಆದರೂ ಹೊಗಳಿದರೆ ಮೋಸ ಹೋಗುವ ಸ್ವಭಾವ ಉಳ್ಳವರು.

ನಮ್ಮ ರಮಣಿ, ಶ್ರೀಕೃಷ್ಣ ಭಗವಾನನನ್ನು ನಾನೇ ಅವಳ ಪತಿ ಆಗಬೇಕೆಂದು ಪ್ರಾರ್ಥಿಸುತ್ತಿದ್ದಳು. ಇಷ್ಟರಲ್ಲಿ ನಮ್ಮ ಊರಿಗೆ ಒಬ್ಬ ಕಳ್ಳಸಾಧು ಬಂದನು. ಆತ ಕಾಳಿಮಾತೆ ಉಪಾಸಕನೆಂದು, ಭೂತ ಭವಿಷ್ಯತ್ ವರ್ತಮಾನ ವಿಷಯಗಳು ಹೇಳಬಲ್ಲವನೆಂದೂ

ಪ್ರಚಾರವಿತ್ತು. ನಿಜಕ್ಕೂ ಅವನ ಬಳಿ ಕೆಲ ಶಕ್ತಿಗಳಿದ್ದವು. ಆತನ ಮಾತುಗಳು ಊರಿನವರಿಗೆ ಸಂಪೂರ್ಣ ಸತ್ಯವಾಗಿ ಕಂಡವು. ಆತ ಮೊದಲಿಗೆ ನಮ್ಮ ಅತ್ತೆಯನ್ನು ನಂಬಿಸಿದನು, ಮನೆಯಲ್ಲಿ ಶ್ರೀಕಾಳಿ ಪೂಜೆ ಮಾಡಲು ಸಿದ್ಧನಾದನು. ಪ್ರತಿನಿತ್ಯವೂ ರಮಣಿ ಆರಾಧಿಸುತ್ತಿದ್ದ ಶ್ರೀಕೃಷ್ಣನ ಮಣ್ಣಿನ ಬೊಂಬೆಯನ್ನು ಎಸೆಯಲು ಆದೇಶಿಸಿದನು. ಅತ್ತೆ ಒಪ್ಪಿಕೊಂಡರು. ರಮಣಿಯ ವ್ಯಥೆಗೆ ಕೊನೆಯೇ ಇಲ್ಲದಾಯಿತು. ಆ ಕಳ್ಳ ಸಾಧುವಿನ ಪೂಜೆ ಪ್ರಾರಂಭವಾಯಿತು. ಕಾಳಿ ಮಾತೆಗೆ ಅನೇಕ ಕೋಳಿಗಳ ಬಲಿ ನೀಡಲಾಯಿತು. ಆ ರಕ್ತದಿಂದ ಪೂಜಾ ಗೃಹವೆಲ್ಲಾ ಭಯಂಕರವಾಗಿತ್ತು. ಜೊತೆಗೆ ಮನೆಯಲ್ಲಿ ಮನುಷ್ಯನ ಕಪಾಲ ಮುಂತಾದ ಸ್ಮಶಾನ ವಸ್ತುಗಳು ಇಡಲಾಯಿತು. ಈ ಪೂಜೆಯ ನಂತರ, ಮನೆಯಲ್ಲಿ ನಿಧಿ ಇದೆ ಎಂದು, ಅದು ಮನೆಯವರನ್ನು ಐಶ್ವರ್ಯವಂತರಾಗಿ ಮಾಡುವುದೆಂದೂ ನಂಬಿಸಿದನು.

ಆ ಕಳ್ಳ ಸಾಧು ವಶೀಕರಣ ವಿದ್ಯೆ ಸಹಾ ತಿಳಿದಿದ್ದ ಕಾರಣ, ರಮಣಿಯ ಶೀಲವನ್ನು ಹಾಳು ಮಾಡಲು ಯತ್ನಿಸಿದನು.

ಆ ವಿಚಿತ್ರ ಪೂಜಾ ವಿಧಾನದಿಂದ ರಮಣಿಯ ದೇಹಾರೋಗ್ಯ ಕ್ಷೀಣಿಸಿತು. ರಮಣಿ ವಿಚಿತ್ರವಾಗಿ ವರ್ತಿಸುತ್ತಿದ್ದಳು. ಮೇಕೆಗಳ, ಕೋಳಿಗಳ ರಕ್ತ ಅವಳಿಗೆ ಕೊಡುತ್ತಿದ್ದರು. ಅನ್ನಕ್ಕೆ ಬದಲಾಗಿ ರಕ್ತ ಸವಿಯುತ್ತಿದ್ದಳು! ರಮಣಿಯಲ್ಲಿ ಕಾಳಿಮಾತೆ ಆವರಿಸಿರುವುಳೆಂದು, ಆದ್ದರಿಂದಲೇ ರಮಣಿ ರಕ್ತ ಸೇವಿಸುತಿದ್ದಾಳೆಂದೂ, ಮತ್ತಷ್ಟು ರಕ್ತ ತರ್ಪಣೆ ಮಾಡಿ, ದೇವಿಯನ್ನು ಶಾಂತಿ ಮಾಡಿದರೆ ರಮಣಿ ಮಾಮೂಲಾಗಿಬಿಡುವಳೆಂದು, ನಿಧಿ ನಿಕ್ಷೇಪ ಲಭಿಸುವುದೆಂದು ನಂಬಿಸಿದನು. ಮನೆ ಸ್ಮಶಾನದಂತೆ ಬದಲಾಯಿಸಿ ಆಹಾರ ಪಾತ್ರೆಗಳು ಯಾರೂ ಮುಟ್ಟದೇನೇ ಬಾವಿಯೊಳಗೆ ಬೀಳುತ್ತಿದ್ದವು. ಮನೆಯಲ್ಲಿ ಅಸ್ತಿಪಂಜರಗಳು ಪ್ರತ್ಯಕ್ಷವಾಗುತ್ತಿದ್ದವು. ನಡು ರಾತ್ರಿಯಲ್ಲಿ ಭಯಂಕರ ಶಬ್ದಗಳು ಕೇಳಿ ಬರುತ್ತಿದ್ದವು. ಮಾವನಿಗೆ ಆ ಕಳ್ಳ ಸಾಧುವನ್ನು ಓಡಿಸುವಷ್ಟು ಧೈರ್ಯ ಇರಲಿಲ್ಲ. ಅತ್ತೆಗೆ ಈ ಕಷ್ಟಗಳು ಸಹಿಸಿದರೆ ಮುಂದೆ ನಿಧಿ ಸಿಗುವುದೆಂದು ಆಸೆ ತುಂಬಿತ್ತು. ಒಟ್ಟಲ್ಲಿ ಪರಿಸ್ಥಿತಿಗಳು ಅರ್ಥವಾಗದೇ ಇದ್ದವು.

ಒಂದು ರಾತ್ರಿ ಆ ಕಳ್ಳ ಸಾಧು ರಮಣಿಯನ್ನು ಸಮೀಪಿಸಿ, ಅವಳು ವಶೀಕರಣೆಯಲ್ಲಿರುವ ಕಾರಣ ತನ್ನ ಕೋರಿಕೆ ನೆರವೇರುವುದೆಂದು ತಿಳಿದನು. ಅವನು ಹತ್ತಿರ ಬಂದ ತಕ್ಷಣ ಅವಳು ಭಯಂಕರವಾಗಿ ಕಿರುಚಿಕೊಂಡು, ಅಲ್ಲಿದ್ದ ಒಂದು ಕಬ್ಬಿಣದ ವಸ್ತುವಿನಿಂದ ಅವನ ತಲೆ ಬಡಿದಳು. ಅವಳ ಆ ಹಠಾತ್ತನೆ ನಡೆದ ಕಾರ್ಯ ಅವಳಿಗೇ ತಿಳಿಯಲಿಲ್ಲ. ವಶೀಕರಣದಲ್ಲಿದ್ದ ಹೆಂಗಸು ಏಕೆ ತಿರುಗಿಬಿದ್ದಳೋ ಆ ಕಳ್ಳ ಸಾಧುವಿಗೂ ಅರ್ಥವಾಗಲಿಲ್ಲ!

## ಶ್ರೀಪಾದರ ಆರ್ತತ್ರಾಣ ಪರಾಯಣತತ್ತ್ವ

ಬೆಳಗಾದ ನಂತರ ಒಬ್ಬ ಬಡ ಬ್ರಾಹ್ಮಣ ಭಿಕ್ಷುಕ ನಮ್ಮ ಮನೆಗೆ ಬಂದನು. ರಮಣಿ ಈಚೆಗೆ ಬಂದು, ''ನಮ್ಮನೆಯಲ್ಲಿ ಭೂತ ಪ್ರೇತ ಪಿಶಾಚಿಗಳು ಬಹಳ ಇವೆ. ಬೇಕಾದರೇ ಅವನ್ನೇ ಭಿಕ್ಷೆಯಾಗಿ ತೆಗೆದುಕೊಳ್ಳಿ'' ಎಂದಳು.

ಆ ಬ್ರಾಹ್ಮಣ ಮುಖ ಪ್ರಶಾಂತವಾಗಿತ್ತು. ಪ್ರಕಾಶಿಸುತ್ತಲೂ ಇತ್ತು. ಆಗ ನನ್ನ ಸೋದರಮಾವ ಈಚೆಗೆ ಬಂದು, ''ನಮ್ಮನೆಯಲ್ಲಿ ಅಯೋಮಯ ಪರಿಸ್ಥತಿಗಳಿವೆ. ಬೇಕಾದರೇ ಆ ಪರಿಸ್ಥಿತಿಗಳನ್ನು ಉಂಟು ಮಾಡಿದ ದುಷ್ಟಶಕ್ತಿಗಳನ್ನು ದಾನವಾಗಿ ತೆಗೆದುಕೊ'' ಎಂದರು. ನನ್ನ ಅತ್ತೆ, ''ನಮ್ಮನೆಯಲ್ಲಿ ಈಗ ಏನೂ ಇಲ್ಲ, ದರಿದ್ರ ತಾಂಡವವಾಡುತ್ತಿದೆ. ಬೇಕಾದರೇ ಭಿಕ್ಷೆಯಾಗಿ ದರಿದ್ರ ತೆಗೆದುಕೋ'' ಎಂದರು. ನಾನು, ''ಸ್ವಾಮಿ! ನನ್ನ ಹಿರಿಯರ ಸ್ವತ್ತು ಒಂದು ಬೆಳ್ಳಿಯ ತಾಯತ್ತಿದೆ. ಒಪ್ಪಿಗೆ ಇದ್ದರೇ ದಯವಿಟ್ಟು ತೆಗೆದುಕೊಳ್ಳಿ'' ಎಂದು ಅದನ್ನು ಕೊಟ್ಟೆನು. ಇಷ್ಟರಲ್ಲಿ ಆ ಕಳ್ಳ ಸಾಧು ಮಸಣದಿಂದ ಮಾನವ ತಲೆ ಬುರಡೆಗಳು ತಂದಿದ್ದನು. ವ್ಯಂಗ್ಯವಾಗಿ, ''ಎಲೈ! ಬಡ ಬ್ರಾಹ್ಮಣನೇ! ಬೇಕಾದರೇ ಈ ಬುರಡೆ ಭಿಕ್ಷೆಯಾಗಿ ತೆಗೆದುಕೋ'' ಎಂದನು. ಆ ಬ್ರಾಹ್ಮಣ ಎಲ್ಲವನ್ನು ಮೌನದಿಂದ ಅಂಗೀಕರಿಸಿದನು.

ಅಷ್ಟರಲ್ಲೇ ಮನೆಯಲ್ಲಿ ಒಂದು ದೊಡ್ಡ ಬೆಳಕು ಕಾಣಿಸಿಕೊಂಡಿತು, ಬ್ರಾಹ್ಮಣ ಅದೃಶ್ಯನಾದನು! ಆ ಪ್ರಕಾಶದಿಂದ ಕಳ್ಳ ಸಾಧುವಿಗೆ ಮೈಯ್ಯೆಲ್ಲಾ ಉರಿ ಪ್ರಾರಂಭವಾಯಿತು. ಪ್ರಕಾಶದ ಒಂದು ಕಿರಣ ರಮಣಿಯನ್ನು ಪ್ರವೇಶಿಸಲೂ ಅವಳು ಪುನಃ ಆರೋಗ್ಯವಂತಳಾದಳು. ಅತ್ತೆಗೆ ಪಕ್ಷಪಾತ ಬಂದು ಮಾತೇ ನಿಂತುಹೋಯಿತು. ಮಾವನಿಗೆ ಮೈಯ್ಯೆಲ್ಲಾ ನಡಕ ಶುರುವಾಯಿತು. ನನಗೆ ಪ್ರಚಂಡ ಧೈರ್ಯ ಬಂತು. ನನ್ನ ಶರೀರದಲ್ಲಿ ಯಾವುದೋ ಶಕ್ತಿ ಪ್ರವೇಶಿಸಿ ಎಷ್ಟೋ ಬಲಶಾಲಿಯಾದೆನು! ಆ ಮಾಂತ್ರಿಕನ ಬಾಯಲ್ಲಿ ರಕ್ತ ಸುರಿದು, ಅವನಲ್ಲಿದ್ದ ಎಲ್ಲಾ ಶಕ್ತಿಗಳೂ ನಾಶವಾದವು!

ಆ ದಿವ್ಯ ಪ್ರಕಾಶ, ಮಾನವ ರೂಪ ತಾಳಿತು. ಆ ದಿವ್ಯ ಭವ್ಯ ಸ್ವರೂಪ, ಆರ್ತತ್ರಾಣ ಪರಾಯಣನೂ, ಸಮಸ್ತ ದೇವದೇವತಾ ಸ್ವರೂಪನು, ಆದಿಮಧ್ಯಾಂತರಹಿತನು ಆದ ಶ್ರೀಪಾದ ಶ್ರೀವಲ್ಲಭರದ್ದು!

ಶ್ರೀ ಚರಣರು ಹೀಗೆಂದರು, "ನಿಜಕ್ಕೆ ಕಾಳೀಮಾತೆ ಧ್ವಂಸಮಾಡುವುದು, ಸಾಧಕನಲ್ಲಿ ಅಡಗಿದ್ದ ಕಾಮಕ್ರೋಧಾದಿ ರಾಕ್ಷಸ ಶಕ್ತಿಗಳನ್ನು, ಅಷ್ಟೇಹೊರತು, ತಾಯಿ, ಮೇಕೆ, ಕೋಳಿ ಕೇಳುವುದಿಲ್ಲ! ಪ್ರಾಣಮಯ ಜಗತ್ತಿಗೆ, ರಾಕ್ಷಸ ಶಕ್ತಿಗಳು, ಕಾಳೀರೂಪ ಧರಿಸಿ, ವಿವಿಧ ಬಲಿದಾನ ಕೋರುತ್ತಿರುವವು. ನಿಜಕ್ಕೂ ಕಾಳೀಮಾತೆ ಪ್ರೇಮ, ಶಾಂತಿ, ದಯೆ ಮುಂತಾದ ಶುಭಲಕ್ಷಣಗಳ ನಿಧಿ! ಪ್ರಾಣಮಯ ಜಗತ್ತಿನ ರಾಕ್ಷಸ, ಭೂತ ಪ್ರೇತಾದಿ ಶಕ್ತಿಗಳು, ನಾವು ಇಂತಿಂತಹ ದೇವತೆಗಳೆಂದು ಹೇಳಿಕೊಂಡು ಕ್ಷುದ್ರವಿದ್ಯೆ ತೋರಿಸುವರು! ಕ್ಷುದ್ರ ಮಾಂತ್ರಿಕರು ಅಂತಹ ದೇವತೆಗಳನ್ನು ಪೂಜಿಸುತ್ತಾ, ಲೋಕದಲ್ಲಿ ಕಷ್ಟ ಉಂಟು ಮಾಡುತ್ತಿದ್ದಾರೆ. ಪ್ರಾಣಮಯ ಜಗತ್ತಿನ ವಿವಿಧ ಪ್ರೇತಾತ್ಮೆಯರೂ ಸಹ, ದೇವತೆಗಳ ರೂಪ ತಾಳಬಲ್ಲರು! ಆದರೇ ಅವರಿಗೆ ಆಯಾ ದೈವಶಕ್ತಿಗಳು ಮಾತ್ರ ಇರುವುದಿಲ್ಲ.

**"ಧರ್ಮವನ್ನು ನಿರ್ಲಕ್ಷ ಮಾಡಿದಾಗ, ನಾನು ಅವತರಿಸುವೆ. ಅದರಂತೆಯೇ ಶ್ರೀಪಾದ ಶ್ರೀವಲ್ಲಭ ಅವತಾರ ಬಂದಿದೆ. ಪ್ರೇಮ, ಶಾಂತಿ, ಕರುಣೆ, ದಯೆ ಎನ್ನುವ ಅನಂತ ಶಕ್ತಿ ಸಮ್ಮಿಲನವೇ ಈ ಅವತಾರ."**

ನಮ್ಮ ಗೃಹ ಸಂಪೂರ್ಣವಾಗಿ ಶುದ್ಧಿ ಮಾಡಲಾಯಿತು. ಕಳ್ಳ ಸಾಧುವನ್ನು ಓಡಿಸಿದೆವು. ನಮ್ಮ ಅತ್ತೆಗೆ ಶ್ರೀಪಾದ ಶ್ರೀವಲ್ಲಭರ ಅನುಗ್ರಹದಿಂದ ಪಕ್ಷವಾತ ಕಡಿಮೆಯಾಯಿತು.

ಶ್ರೀಪಾದರು ಖುದ್ದಾಗಿ ತಮ್ಮ ದಿವ್ಯ ಹಸ್ತಗಳಿಂದ ಆಶೀರ್ವದಿಸಿ, ರಮಣಿ ಮತ್ತು ನನ್ನ ವಿವಾಹ ನೆರವೇರಿಸಿದರು. ಆಗ ಅವರಿಗೆ ಕೇವಲ 12 ವರುಷಗಳೇ. ಆಗ ಪೀಠಾಪುರದಲ್ಲೇ ಇದ್ದರು. ಲೀಲಾಶರೀರದೊಂದಿಗೆ ಈ ಪಂಚದೇವ ಪಹಾಡ್‌ನಲ್ಲಿದ್ದರು. ಆ ದಿನ ಅವರು ಪ್ರಸಾದಿಸಿದ ಅಕ್ಷತೆಗಳೇ ಇವು! ಕೆಲ ಕಾಲದನಂತರ ಧರ್ಮಗುಪ್ತ ಮತ್ತು ಶಂಕರ ಭಟ್ಟನೆಂಬುವರು ಬರುವರೆಂದು, ಅವರಿಗೂ ಸ್ವಲ್ಪ ಈ ಅಕ್ಷತೆ ಪ್ರಸಾದಿಸಬೇಕೆಂದು ನನಗೆ ಆದೇಶ ಇತ್ತು. ಆಹಾ! ಎಂತಹ ಲೀಲಾಮಯ ಅವತಾರ ಸ್ವರೂಪ.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 34

# ಶರಭೇಶ್ವರ ವೃತ್ತಾಂತ

ನಾವಿಬ್ಬರೂ ಮತ್ತಷ್ಟು ದೂರ ಪ್ರಯಾಣ ಮಾಡಿ ಒಂದು ಗ್ರಾಮ ತಲುಪಿದೆವು. ಪ್ರಯಾಣ ಕಾಲದಲ್ಲಿ ನಮ್ಮಿಬ್ಬರದ್ದೂ ಶ್ರೀಪಾದರ ನಾಮಸ್ಮರಣೆ ಮತ್ತು ಅವರ ದಯೆ ತುಂಬಿದ ಲೀಲಾ ವೃತ್ತಾಂತಗಳೇ! ಯಾರೋ ಒಬ್ಬರು ಪ್ರತಿ ನಿತ್ಯವೂ ಆತಿಥ್ಯ ನೀಡುತ್ತಿದ್ದರು. ಕೆಲವರು ಎತ್ತಿನಗಾಡಿಯಲ್ಲಿ ಮತ್ತಿತರು ಕುದುರೆಯ ಬಂಡಿಯಲ್ಲಿ ಸಹಾ ನಮಗೆ ನೆರವಾಗುತ್ತಿದ್ದರು. ಉಳಿದ ದೂರ ಪಾದಚಾರಿಗಳಾಗಿಯೇ ಮುಂದುವರಿಸಿದೆವು. ಇವೆಲ್ಲವೂ ಶ್ರೀಗಳು ವೀಕ್ಷಿಸುತ್ತಾ ಇರುವ ಲೀಲಾ ವಿಶೇಷವೇ ಅಲ್ಲವೇ।

ನಾವು ತಲುಪಿದ ಒಂದು ಗ್ರಾಮದಲ್ಲಿ, ಒಬ್ಬ ಬ್ರಾಹ್ಮಣನ ಮನೆಯ ವಸ್ತುಗಳೆಲ್ಲಾ ಬೀದಿಗೆ ಎಸೆಯುತ್ತಿದ್ದರು! ಆ ಬ್ರಾಹ್ಮಣನ ಸಂಸಾರ ಬೀದಿಯಲ್ಲಿ ನಿಂತಿದ್ದರು. ಆ ಬ್ರಾಹ್ಮಣನಿಗೆ ಸಾಲ ಕೊಟ್ಟಿದ್ದ ಒಬ್ಬ ವ್ಯಾಪಾರಿ, ಬಾಕೀ ತೀರಿಸದ ಕಾರಣ ಒಂದು ದಿನ ಅವನನ್ನು ನಿಲ್ಲಿಸಿ, ಅವನ ಸುತ್ತಲೂ ಒಂದು ಗೆರೆ ಎಳೆದು, ಯಜ್ಞೋಪವೀತ ಹಿಡಿದು, ಸಾಲ ಯಾವ ದಿನ ಕೊಡುವೆಯೋ ಪ್ರತಿಜ್ಞೆ ಮಾಡಲೂ ಗದರಿಸಿ ಕೇಳಿದ್ದನು. ಎರಡು ಪಕ್ಷಗಳ ಸಮಯದಲ್ಲಿ ಸಾಲ ತೀರಿಸುವದಾಗಿ ನುಡಿದಿದ್ದನು. ಆದರೇ ಅವನು ಆ ಮಾತು ಉಳಿಸಿಕೊಳ್ಳಲು ಆಗಲಿಲ್ಲ. ಮನೆ ಬಿಟ್ಟುಕೊಡಬೇಕಾಗುತ್ತೇ ಎಂದು ಸಹಾ ಆ ವ್ಯಾಪಾರಿ ನುಡಿದಿದ್ದನು. ಹಾಗೆಯೇ ಅಂದು, ಆ ಬ್ರಾಹ್ಮಣನ ಸಂಸಾರ ಬೀದಿಗೆ ಬಿದ್ದಿತ್ತು! ಆ ಊರಿನ ಜನರೆಲ್ಲಾ ಆ ವಿಪರೀತವನ್ನು ಮೌನದಿಂದ ನೋಡುತ್ತಿದ್ದರೇ ಹೊರತೂ ಯಾರೂ ಆ ಬ್ರಾಹ್ಮಣನ ನೆರವಿಗೆ ಬರಲಿಲ್ಲ, ಮತ್ತಷ್ಟು ಸಮಯವೂ ಕೊಡಿಸಲಿಲ್ಲ.

### ಶ್ರೀಪಾದರು, ಭಕ್ತರನ್ನು ಸಂಕಟದಲ್ಲಿಟ್ಟು, ಪರೀಕ್ಷಿಸಿ ಕಾಪಾಡುವುದು

ಆ ಬ್ರಾಹ್ಮಣನ ದೀನಾವಸ್ಥೆಯನ್ನು ಕಂಡು ಶ್ರೀ ಧರ್ಮಗುಪ್ತರು ವ್ಯಥೆಪಟ್ಟರು. ಅವನಿಗೆ ಸಹಾಯ ಮಾಡಬೇಕೆನ್ನುವ ಮನಸ್ಸಿತ್ತೇ ಹೊರತು ಅವರ ಬಳಿ ಹಣವಿರಲಿಲ್ಲ. ನನ್ನ ಬಳಿಯೂ ಹಣವಿಲ್ಲ. ಆದರೂ ಧೈರ್ಯಮಾಡಿ, ''ಸ್ವಾಮಿ! ಆ ನಿಶ್ಶಕ್ತ ಬ್ರಾಹ್ಮಣನ ಮೇಲೆ ದಯೆ ತೋರಿಸಿ ಮತ್ತೆರಡು ಪಕ್ಷ ಕಾಲ ಅನುಗ್ರಹಿಸಿ. ಅಷ್ಟರಲ್ಲಿ ಶ್ರೀಪಾದ ಶ್ರೀವಲ್ಲಭರು ಅವನ ಕಷ್ಟ ಪಾರು ಮಾಡುವರು. ಅದಕ್ಕೆ ನಾನು ಜಾಮೀನು ನಿಲ್ಲುತ್ತೇನೆ. ಸ್ವಲ್ಪ ಯೋಚನೆ ಮಾಡಿ ಕನಿಕರಿಸಿ'' ಎಂದು ಪ್ರಾರ್ಥಿಸಿದೆನು. ಇದು ಕೇವಲ ನನ್ನ ಪ್ರಯತ್ನವಿಲ್ಲದೇನೆ ಬಂದ ನುಡಿಗಳು! ಆ ವ್ಯಾಪಾರಿ, ''ಸರಿ! ನಿನ್ನ ಮಾತನ್ನು ನಂಬುತ್ತಿದ್ದೇನೆ. 2 ಪಕ್ಷ ಕಾಲ ಅವಧಿ ಕೊಡುತ್ತಿದ್ದೇನೆ. ಆ ಬಾಕೀ ತೀರುವವರೆಗೂ ನೀವಿಬ್ಬರೂ ಇಲ್ಲಿಂದ ಕದಲುವಹಾಗಿಲ್ಲ. ಒಂದು ವೇಳೆ ಕೊಟ್ಟ ಸಮಯಕ್ಕೆ ಬಾಕೀ ತೀರದೇ ಇದ್ದರೇ, ಅವನ ಮನೆ ಸ್ವಾಧೀನ ಪಡೆದುಕೊಳ್ಳುವುದೇ ಅಲ್ಲದೇ ನಿಮ್ಮಿಬ್ಬರನ್ನೂ ಬೀದಿಗೆ ಎಳೆಯುತ್ತೇನಿ, ಗಮನವಿರಲಿ. ನ್ಯಾಯಾಧಿಕಾರಿ ಕೊಡುವ ತೀರ್ಪಿಗೆ, ಶಿಕ್ಷೆಗೆ ನೀವಿಬ್ಬರೂ ಬದ್ಧರಾಗಿ ನಿಲ್ಲಬೇಕು'' ಎಂದು ಹೇಳಿದರು. ಕೊಟ್ಟ ಗಡುವಿನಲ್ಲಿ ನಾನೇ ಆಗಲಿ, ಧರ್ಮಗುಪ್ತರೇ ಆಗಲಿ ಆ ಬ್ರಾಹ್ಮಣನ ಸಾಲ ತೀರಿಸುವುದು ಅಸಾಧ್ಯ. ಹಿಂದು ಮುಂದು ನೋಡದೇ, ಸಾಧ್ಯಾಸಾಧ್ಯ ಲೆಕ್ಕಿಸದೇ ಮಾತು ಕೊಟ್ಟೆನಲ್ಲಾ ಎಂದು, ಅವಿವೇಕತ್ವಕ್ಕೆ ಚಿಂತಿಸಿದೆನು. ಶ್ರೀವಲ್ಲಭರನ್ನೂ ನಿಂದಿಸಿ ಪ್ರಯೋಜನವಿಲ್ಲ. ಈಗ ಧರ್ಮಗುಪ್ತರೂ ಕಷ್ಟದಲ್ಲಿ

ಬಿದ್ದರಲ್ಲಾ ಎಂದು, ಪಾಪಕಾರ್ಯ ಮಾಡಿದೆನೆಂದು, ಕೊಟ್ಟ ಮಾತು ಉಳಿಸಿಕೊಳ್ಳದಿದ್ದರೇ ಆಗುವ ಪರಿಣಾಮಗಳು ಭಯಂಕರವೆಂದು, ಎಲ್ಲಾ ಪ್ರಭುಲೀಲೆ ಎಂದೂ ಯೋಚಿಸಿದೆ. ಇಂತಹ ಪರಿಸ್ಥಿತಿಗಳಲ್ಲೇ ದೃಢ ಭಕ್ತಿ ಇರುವುದೋ ಅಥವಾ ನಂಬಿಕೆ ದೇವರಮೇಲೆ ಕಳೆದುಕೊಂಡು, ಹಾಳಾಗುವುದೋ ನಡೆಯುತ್ತದೆ. ಆದರೇ ಶ್ರೀ ಧರ್ಮಗುಪ್ತರು ನಿಶ್ಚಿಂತೆಯಾಗಿರುವುದೇ ಅಲ್ಲದೇ "ಶಂಕರ ಭಟ್ಟಾ! ನಡೆದಿದ್ದಕ್ಕೆ ಯೋಚನೆ ಬೇಡ. ನಡೆದಿದ್ದು, ನಡೆಯುತ್ತಿರುವುದು ಮತ್ತು ನಡೆಯಲಿರುವುದೂ ಎಲ್ಲಾ ಲೀಲಾವಿನೋದ, ಬ್ರಹ್ಮಲಿಖಿತ ಹೇಗಿರುವುದೋ ಅದೇ ಪ್ರಕಾರ ನಡೆಯುತ್ತದೆ" ಎಂದರು.

ಆ ಬ್ರಾಹ್ಮಣನ ಮನೆಯಲ್ಲಿ ಬೆಲೆ ಬಾಳುವಂಥದೇನೂ ಇರಲಿಲ್ಲ. ಆತ ಬಡವ, ಅವನೂ ಅವನ ಸಂಸಾರ ಹೇಗೂ ಊಟವಿಲ್ಲದೇ ಕಳೆಯುತ್ತಿದ್ದರು. ಅವರ ಜೊತೆಗೆ ನಾವೂ ಅವರ ಅತಿಥಿಗಳು! ನಾವೂ ಏಕಾದಶಿ ಸ್ಥಿತಿಯೇ! ಶ್ರೀಪಾದರ ಕೃಪೆ, ಮಲಗಲು ಮನೆ ಸಿಕ್ಕಿದೆ ಎಂದು ಸಂತಸಪಟ್ಟೆವು. ಹಸಿವಾದಾಗ, ಅಲೆದು ಸುಸ್ತಾದಾಗ, ಸಾಲವಿತ್ತವರು ಜೋರು ಮಾಡಿದಾಗ, **ಏನು ಮಾಡಬಾರದೋ, ಏನು ಮಾಡಬೇಕೆಂಬುವ ಸಂದಿಗ್ಧ ಸ್ಥಿತಿಯಲ್ಲಿದ್ದಾಗ ಮತ್ತು ಕಷ್ಟ ಸಮಯದಲ್ಲಿ ಶ್ರೀಪಾದ ಶ್ರೀವಲ್ಲಭರೇ ನಮಗೆ ರಕ್ಷೆ ಎಂದು ನನಗೆ ಅನ್ನಿಸಿತು.** ಸ್ನಾನ ಸಂಧ್ಯಾವಂದನೆಯ ನಂತರ, ಶ್ರೀಪಾದರೇ ಕಾಪಾಡಲಿ ಎಂದು, ಅವರ ನಾಮಸ್ಮರಣೆ ಮಾಡುತ್ತಿದ್ದೆವು. ದೇವರ ದೀಪದ ಎಣ್ಣೆ, ಬತ್ತಿ ಸಹ ಆ ಬಡ ಬ್ರಾಹ್ಮಣನ ಬಳಿ ಇರಲಿಲ್ಲ! ಮನೆಯಲ್ಲಿ ಎಲ್ಲರೂ "ಶ್ರೀಪಾದರಾಜಂ ಶರಣಂ ಪ್ರಪದ್ಯೆ" ಎಂದು ಏಕ ಕಂಠದಲ್ಲಿ ಹೇಳುತ್ತಿದ್ದೆವು. ಅಕ್ಕಪಕ್ಕದ ಮಕ್ಕಳೂ, ವೃದ್ಧರೂ ಸಹ ಅಲ್ಲಿ ಸೇರಿ, ಶ್ರೀಗಳ ನಾಮಸ್ಮರಣೆ ಮಾಡತೊಡಗಿದರು.

ಆ ಬ್ರಾಹ್ಮಣನ ಮನೆಯಲ್ಲಿ ಕೆಲವರು ರೈತರೂ ಸಹ ಸೇರಿದ್ದರು. ಆ ಬ್ರಾಹ್ಮಣನ ಬಾಕಿಗೆ ಜಾಮೀನು ನೀಡಿರುವ ನಾನು ಓರ್ವ ಮಹಾಪುರುಷರ ಶಿಷ್ಯನೆಂದು, ದೈವಶಕ್ತಿ ಉಳ್ಳವನೆಂದು, ಒಂದು ದೊಡ್ಡ ಜ್ಯೋತಿಷ್ಕನೆಂದೂ ಸಹ ನನ್ನನ್ನು ಹೊಗಳುತ್ತಾ, ಊರಿನಲ್ಲಿ ಪ್ರಚಾರ ಇತ್ತು. ಆ ಊರಿನ ರೈತರು ಪಂದ್ಯ ಕಟ್ಟುವುದರಲ್ಲಿ ಮುಂದೆ ಇದ್ದವರು! ಈಗ ಅವರಲ್ಲಿ ಕೆಲವರು, ಬ್ರಾಹ್ಮಣ ಸಾಲ ತೀರಿಸಬಲ್ಲನೆಂದು ಮತ್ತಿತರರು ಸಾಲ ತೀರಸಲಾರನೆಂದು ಪಂದ್ಯ ಕಟ್ಟಿದ್ದರು. ಆಹಾ, ದುರ್ವಿಧೀ! ಪ್ರಶಾಂತವಾಗಿದ್ದ ನಾನು ಅಶಾಂತಿ ಹೊಂದೆನಲ್ಲಾ? ಎಂದು ಚಿಂತಿಸಿ. "ಧರ್ಮಗುಪ್ತರನ್ನು ಮತ್ತು ನನ್ನ ಕಾರಣ ಊರಲ್ಲಿ ನಡೆಯುತ್ತಿರುವ ಜೂಜು, ಹಣದ ಆಟಗಾರರನ್ನೂ ತೊಂದರೆಗೆ ಗುರಿ ಮಾಡಿರುವನೇ" ಎಂದು ನೆನೆದನು! ಕ್ಷಣಕ್ಷಣ ಲೀಲಾ ವಿನೋದ ವಿಹಾರಿಯಾದ ಶ್ರೀಪಾದರ ದಿವ್ಯಚರಣಗಳೇ ಗತಿ ಎಂದು ನಂಬಿ, ಕಾಲ ಕಳೆಯುತ್ತಿದ್ದೆ. "ಸತ್ಯಂ ವಿಧಾತುಂ ನಿಜ ಭೃತ್ಯಭಾಷಿತಂ" ಎಂದು ನಾರದರು ಶ್ರೀ ಮಹಾವಿಷ್ಣುಗಳಿಗೆ ಹೇಳಿದ ಮಾತುಗಳು ನನಗೆ ನೆನಪಾದವು. "ಶ್ರೀಮನ್ನಾರಾಯಣ ಭಕ್ತರು, ಸೇವಕರು ನುಡಿದ ಮಾತುಗಳನ್ನು ನಾರಾಯಣನು ಕೇಳಿ, ಅವನ್ನು ಸತ್ಯಗೊಳಿಸುವ ಭಾರ ಶ್ರೀ ನಾರಾಯಣನ ಮೇಲೆ ಇರುವುದು" ಎಂದು ಅರ್ಥ.

ಆ ಗ್ರಾಮದಲ್ಲಿ ಶರಭೇಶ್ವರ ಶಾಸ್ತ್ರಿಯೆಂಬ ಪಂಡಿತನಿದ್ದನು. ಆತ ದೊಡ್ಡ ಮಂತ್ರಶಾಸ್ತ್ರಜ್ಞನು. ಯಾವುದೋ ಒಂದು ಪ್ರೇತಾತ್ಮದ ನೆರವಿನಿಂದ, ಭೂತ ಭವಿಷ್ಯತ್ ವರ್ತಮಾನ ವಿಷಯಗಳನ್ನು ಕ್ಷುಣ್ಣವಾಗಿ ಹೇಳುತ್ತಿದ್ದನು. ಕೆಲವರು, ಜೂಜು ಕಟ್ಟಿದವರು, ಬ್ರಾಹ್ಮಣನ ಸಾಲ ವಿಷಯ ಕೇಳಲೂ ಆತ, ಪ್ರೇತಾತ್ಮನನ್ನು ಆವಹಿಸಿಕೊಂಡು, ಬ್ರಾಹ್ಮಣ ಸಾಲ ತೀರಿಸಲಾರನೆಂದು ಶಾಸ್ತ್ರ ಹೇಳಿದನು. ಆ ಗ್ರಾಮಸ್ತರು ಮತ್ತಷ್ಟು ಆಸೆಯಿಂದ ನೂರಾರು ವರಹಗಳು ಪಂದ್ಯ ಕಟ್ಟಿದರು! ಶರಭೇಶ್ವರನ ಮಾತು ಸತ್ಯವೋ, ಶಂಕರ ಭಟ್ಟರ ಮಾತು ಸತ್ಯವಾಗುವುದೋ ಎಂದು ಎಲ್ಲರೂ ಕಾದು ನೋಡುತ್ತಿದ್ದರು.

''ಶ್ರೀಪಾದ ಪ್ರಭೂ! ನನ್ನನ್ನು ಜೂಜುಕೋರರ ಮಧ್ಯೆ ನಿಲ್ಲಿಸಿರುವೆ! ನಾನು ಆ ಬ್ರಾಹ್ಮಣನ ಆಸೆ ನಿರಾಶೆ ಮಾಡುವೆನೋ ಏನೊ? ಶ್ರೀ ಧರ್ಮಗುಪ್ತರನ್ನು ಸಂಕಟಕ್ಕೆ ಗುರಿ ಮಾಡುತ್ತಿರುವೆನೊ ಏನೊ! ಈ ದಿವ್ಯ ವಿನೋದದ ಅಂತರಾರ್ಥವೇನೋ ನಾನು ತಿಳಿಯನು! ಹೆಚ್ಚು ವಿದ್ಯಾವಂತನಲ್ಲದಿದ್ದರಿಂದ, ಆಧ್ಯಾತ್ಮಿಕ ಶಕ್ತಿ ಇಲ್ಲದವನು. ಜ್ಯೋತಿಷಾದಿ ಮಹಾವಿದ್ಯೆ, ಜಪ ತಪ, ಹೋಮಗಳ ನಿಷ್ಠೆ ಅರಿಯದವನು. ಕುತೂಹಲದಿಂದ ಶ್ರೀಪಾದರ ದಿವ್ಯಚರಿತ್ರೆಯನ್ನು ಬರೆಯಲೂ ಸಂಕಲ್ಪಿಸಿಕೊಂಡಿರುವೆ. ಅದಕ್ಕೆ ತಕ್ಕ ಅರ್ಹತೆ ನನಗೆ ಎಳ್ಳಷ್ಟೂ ಇಲ್ಲವೆಂದು ನನಗೆ ಗೊತ್ತು! ಹೇಗೆ, ನನ್ನನ್ನು ಕಾಪಾಡಿ ಉದ್ಧರಿಸುವೆಯೋ ತಂದೆ, ನೀನೇ ನನಗೆ ಗತಿ'' ಎಂದು ಹೃದಯಾಂತರದಿಂದ ಪ್ರಾರ್ಥಿಸಿದೆನು. ''ಮೂರ್ಖ ಬಂಡ ಸ್ವಭಾವದವನು ರಾಜನಿಗಿಂತ ಬಲವಂತ''ನೆಂದು ಒಂದು ಹೇಳಿಕೆ! ಅದೇ ಕಾರಣವೋ ಏನೋ, ನನ್ನಲ್ಲಿ ಎಂದೂ ಕಾಣದ ಧೈರ್ಯ ಚಿಗುರೆದ್ದಿತು. ಆಗಬೇಕಾಗಿರುವುದು ಆಗಿಯೇ ತೀರುವುದು. ಶ್ರೀಪಾದರದು ಯಾವ ತರಹದಿಂದಲೋ, ತಪ್ಪದೇ ಯಾವುದೋ ಉಪಾಯದಿಂದ ಉದ್ಧರಿಸುವರೆಂದು ದೃಢ ನಂಬಿಕೆ ನನ್ನಲ್ಲಿತ್ತು.

ಶರಭೇಶ್ವರ ಶಾಸ್ತ್ರಿಗೆ ಸಹೋದರಿ ಇದ್ದಳು. ಆಕೆ ಸಹಾ ಅದೇ ಗ್ರಾಮದ ನಿವಾಸಿ. ಆಕೆ ಅಂದು ಬೆಳಗಿನ ಝಾವ ಒಂದು ಕನಸು ಕಂಡಳು. ಅದರ ಪ್ರಕಾರ ಆಕೆಗೆ ವಿಪರೀತವಾದ ಜ್ವರ ಬಂದ ಹಾಗೆ, ಆಕೆಯ ಪತಿ ಮರಣಿಸಿ, ಆಕೆಗೆ ವೈಧವ್ಯ ಬಂದ ಹಾಗೆ ಇತ್ತು! ಅಣ್ಣನವರನ್ನು ಅದರ ಫಲ ಕೇಳಲು, ಆತ ಪ್ರೇತಾತ್ಮನ ಸಹಾಯದಿಂದ, ಆತನ ತಂಗಿಯ ಪತಿರಾಯ ದೇಶಾಂತರದಲ್ಲಿ, ಕಳ್ಳರಿಂದ ವಧಿಸಲ್ಪಟ್ಟಿದ್ದಾನೆ ಎಂದು, ಅವನ ಧನವೆಲ್ಲಾ ಕಳ್ಳರು ಅಪಹರಿಸಿರುವರೆಂದೂ ವಿಷಯ ತಿಳಿಸಿದರು.

ಆಕೆ, ಗೊಳೋ ಎಂದು ಅಳುತ್ತಿದ್ದಳು. ಕೆಲವರು ಗ್ರಾಮಸ್ಥರು ಆಕೆಯ ಬಳಿ ಬಂದು, ಊರಿಗೆ ಶಂಕರ ಭಟ್ಟು ಎಂಬ ಒಬ್ಬ ಶ್ರೀಪಾದ ಶ್ರೀವಲ್ಲಭರ ಪರಮಭಕ್ತ ಬಂದಿಹನೆಂದೂ, ಆತನು ಪರಮಧರ್ಮ ಪರಾಯಣನೆಂದೂ, ಆತ ವಿಷಯಗಳ ಸತ್ಯ ತಿಳಿಸುವನೆಂದು, ಆತನನ್ನು ಕೇಳಿ ತನ್ನ ಪತಿಯ ಸ್ಥಿತಿ ತಿಳಿದುಕೊಳ್ಳಬಹುದೆಂದು ಸೂಚಿಸಿದರು. ಆಕೆ ಇದುವರೆಗೂ ತನ್ನ ಅಣ್ಣನಗಿಂತ ಜ್ಞಾನಿ ಇರುವನೆಂದು ತಿಳಿದು ಇರಲಿಲ್ಲ. ಮೊಟ್ಟಮೊದಲಿಗೆ ಅಣ್ಣನನ್ನು ಮೀರಿದ ಪಂಡಿತರ ಬಗ್ಗೆ ಕೇಳಿ, ಆತನಿಗೆ ತನ್ನ ವ್ಯಥೆ ತಿಳಿಸಬೇಕೆಂದೆನ್ನಿಸಿತು. ಆಕೆಯನ್ನು ನಮ್ಮ ಮನೆಗೆ ಕರೆತರಲು, ದೀನವಾಗಿ ಆಕೆ ''ಅಣ್ಣಾ! ನನ್ನ ಮಾಂಗಲ್ಯ ಕಾಪಾಡಿ'' ಎಂದು ಪ್ರಾರ್ಥಿಸಿದಳು. ನಾನು ಅದಕ್ಕೆ ಚೆಲಿಸಿದೆ! ಶ್ರೀಪಾದರಿಂದ, ಮದುವೆಯ ದಿನ ಪಂಚದೇವ ಪಹಾಡ್‌ನ ಆ ರೈತ ಪಡೆದಿದ್ದ ಅಕ್ಷತೆಗಳಿದ್ದವು. ಅವು ತಪ್ಪದೆ ಆಕೆಯ ಮಾಂಗಲ್ಯ ಕಾಪಾಡಬಲ್ಲವೆಂಬ ನಂಬಿಕೆ ನನಗಿತ್ತು. ''ತಾಯಿ! ಈ ಮಂತ್ರಾಕ್ಷತೆ ನಿಮ್ಮ ಪೂಜಾಮಂದಿರದಲ್ಲಿಟ್ಟು ಪೂಜಿಸಿ, ತಪ್ಪದೇ ಕೆಲವೇ ದಿನಗಳಲ್ಲಿ ನಿಮ್ಮ ಪತಿರಾಯ ನಿಮ್ಮ ಬಳಿ ಇರುವರು. ಇದು ಸತ್ಯವಾದ ಮಾತು'' ಎಂದು ಧೈರ್ಯ ತುಂಬಿದೆನು.

ಶರಭೇಶ್ವರ ಶಾಸ್ತ್ರಿಗಳಿಗೆ ಈ ವಿಷಯ ತಿಳಿದುಬಂದಿತು. ಆತ ಕೋಪದಿಂದ ಉರಿದನು. ಇತ್ತ ಅವನ ತಂಗಿ, ''ಆ ಬ್ರಾಹ್ಮಣ ಹೇಳಿದಂತೆ ನನ್ನ ಪತಿ ಬಂದರೇ, ಅವರ ಬಾಕೀ ನಾನೇ ತೀರಿಸಿಬಿಟ್ಟು, ಶಂಕರ ಭಟ್ಟನನ್ನು ಗುರುವಾಗಿ ಸ್ವೀಕರಿಸಿ, ನಾನೂ ಶ್ರೀಪಾದರನ್ನು ಆರಾಧಿಸುವೆ''ನೆಂದು ನುಡಿದಳು.

ಮೂರು ದಿನ ಕಳೆಯಿತು. ಕೆಲವರು ರೈತರು, ನಮ್ಮೆಲ್ಲರಿಗೂ ಆಹಾರ ತಂದುಕೊಡುತ್ತಿದ್ದರು. ಅವರು ನನ್ನ ಪರವಾಗಿ ಪಂದ್ಯ ಕಟ್ಟಿದ್ದರು. ನಾನು ಗೆದ್ದರೇ, ಸಾಲ ತೀರಿದರೇ, ಅವರೂ ವಿಜಯಿಗಳೇ. ಲಾಭ ಪಡೆಯುವರು!

ನಾಲ್ಕನೆಯ ದಿನ, ಶರಭೇಶ್ವರ ಶಾಸ್ತ್ರಿಗಳ ಬಾವಮೈದುನ ಕ್ಷೇಮದಿಂದ ಮನೆ ತಲುಪಿದರು! ಆ ಬ್ರಾಹ್ಮಣ ಸ್ತ್ರೀ ಆನಂದಕ್ಕೆ ಪಾರವೇ ಇರಲಿಲ್ಲ. ನಾನು ಕೊಟ್ಟ ಮಂತ್ರಾಕ್ಷೆಯ ಪ್ರಭಾವವೇ ಎಂದು ಆಕೆಯ ನಂಬಿಕೆ. ನಿಜಕ್ಕೆ ಆ ಮನೆ ಯಜಮಾನನ್ನು ಕಳ್ಳರು ಹೊಡೆಯುವ ಸಮಯ ಒಬ್ಬ ಮುಸ್ಲಿಮ ಫಹಿಲ್ವಾನ್ ಆತನನ್ನು ರಕ್ಷಿಸಿದ್ದನು. ಹಾಗೆ, ಆ ಬ್ರಾಹ್ಮಣ ಸ್ತ್ರೀಯ ಮಾಂಗಲ್ಯ ಉಳಿಯಿತು!

ಆಹಾ! ಶ್ರೀಪಾದರ ಮಹಿಮೆ ಅಪಾರ! ಶರಭೇಶ್ವರ ಶಾಸ್ತ್ರಿಯ ಅಹಂಕಾರ ಅಡಗಿತು! "ನನ್ನ ಜ್ಯೋತಿಷ್ಯದಿಂದ, ನಾವಿರುತ್ತಿದ್ದ ಮನೆ ಬ್ರಾಹ್ಮಣ ಸಾಲ ತೀರಿಹೋಯಿತು! ಅದಲ್ಲದೇ ಶರಭೇಶ್ವರ ಶಾಸ್ತ್ರಿ ನಮ್ಮೆಲ್ಲರನ್ನೂ ಆವರ ಮನೆಗೆ ಆತಿಥ್ಯಕ್ಕೆ ಆಹ್ವಾನಿಸಿದರು. ನಮ್ಮ ಆನಂದಕ್ಕೆ ಅಂತ್ಯವೇ ಇರಲಿಲ್ಲ!

ಆಗ ಶರಭೇಶ್ವರರು, "ಸ್ವಾಮಿ! ದಶ ಮಹಾವಿದ್ಯೆಗಳಲ್ಲಿ ಒಂದಾದ ಧೂಮವತೀ ದೇವಿಯ ಆರಾಧಕನು ನಾನು. ತಂತ್ರ ಗ್ರಂಥಗಳ ಪ್ರಕಾರ ಆ ಮಾತೆ ಉಗ್ರತಾರೆಯೇ! ಮಾತೆ ಪ್ರಸನ್ನಳಾದರೇ ರೋಗ, ಶೋಕಗಳನ್ನು ನಾಶ ಮಾಡಬಲ್ಲಳು. ಕೋಪಗೊಂಡರೇ, ಎಲ್ಲಾ ಸುಖಗಳು, ಬಯಿಕೆಗಳೂ ನಾಶವಾಗುವವು. ಈ ತಾಯಿಗೆ ಶರಣು ಹೊತ್ತರೇ, ಕಷ್ಟಗಳು ತೊಲಗಿ, ಸಂಪತ್ತು ಲಭಿಸುವುದು. ಅದೇ ಕೋಪ ತಂದರೇ, ಜಗಳಗಳು ಹೆಚ್ಚಿ ದಾರಿದ್ರ್ಯ ಸಂಭವಿಸುವುದು. ನಾನು ಆ ತಾಯಿಯ ಅನುಗ್ರಹ ಪಡೆದಿರುವೆ. ಉಚ್ಚಾಟನೆ ಮತ್ತು ಮರಣವನ್ನು ಈ ಮಾತೆ ನಿವಾರಿಸುವಳು. ಕೈಯ್ಯಲ್ಲಾಗದೇ ನರಳುತ್ತಿರುವ ಜನರನ್ನು ರಕ್ಷಿಸಲೂ ಈಕೆಯ ಉಪಾಸನೆ ಅತಿ ಮುಖ್ಯ. ಕೆಲ ಕಾಲ, ನಾನು ಜನರ ಮನ ಒಲಿಯಲೂ ಧನದ ಆಸೆ ಬಿಟ್ಟು ವರ್ತಿಸಿದೆ. ನಂತರ ಉಚ್ಚಾಟನೆ ಮತ್ತು ಮರಣಾದಿಗಳು ಹೊಂದಿದ ಜನರಿಂದ ಬಹಳಷ್ಟು ಧನ ಪಡೆಯುತ್ತಿದ್ದೆನು. ಇದು ಆ ಮಹಾತಾಯಿಗೆ ಇಷ್ಟವಾಗಲಿಲ್ಲ.

ಇಷ್ಟರಲ್ಲಿ ಪ್ರಾಣಾಯಾಮ ಜಗತ್ತಿನ ಒಂದು ದೊಡ್ಡ ಬಲಯುಕ್ತ ಪ್ರೇತಾತ್ಮದ ಜೊತೆ ನನ್ನ ಸಂಬಂಧ ಕುದಿರಿತು. ಆ ಪ್ರೇತಾತ್ಮದ ಸಹಾಯದಿಂದ ಭೂತ ಭವಿಷ್ಯತ್ ವರ್ತಮಾನ ವಿಷಯ ಹೇಳಬಲ್ಲ ಅಪೂರ್ವ ಶಕ್ತಿ ಹೊಂದಿದೆನು. ಅಂತಹ ಪ್ರೇತಾತ್ಮ ಆರಾಧಕರ ಸ್ಥಿತಿ, ಕೊನೆಯಲ್ಲಿ ದೀನವಾಗುವುದು. ಆ ತರಹದ ಉಪಾಸನೆಯೇ ತಪ್ಪು. ಒಂದು ವೇಳೆ ಆರಾಧಿಸಿದರೂ, ಹಾಗೆ ಗಳಿಸಿದ ಹಣ ಪ್ರಜೋಪಯೋಗಕ್ಕೆ, ಬಡವರ, ದೀನರಿಗೆ ಬಳಸಬೇಕು. ಆಗ ಆ ಪ್ರೇತಾತ್ಮ ನಮ್ಮ ಅಧೀನದಲ್ಲೇ ಇರುವುದು. ಹಾಗೆ ಮಾಡದೇ ಬಂದ ಧನವೆಲ್ಲಾ ಸ್ವಾರ್ಥಕ್ಕಾಗಿ ಬಳಿಸಿದರೇ, ಆ ಪ್ರೇತಾತ್ಮ ಬೇಕಾಗಿ ತಪ್ಪು ಜೋತಿಷ್ಯ ಹೇಳಿಸಿ ಆ ಕರ್ತನನ್ನು ಅವಮಾನ ಗೊಳಿಸಿ, ಬಡವನಾಗಿ ಬದಲಾಯಿಸಿ ಬಿಡುವುದು. ಒಮ್ಮೊಮ್ಮೆ ಮರಣವೂ ಸಂಭವಿಸುವುದು. ಸ್ವಾರ್ಥದಿಂದ ನಮ್ಮ ಪುಣ್ಯರಾಶಿ ಕ್ಷೀಣಿಸಿ ಹೋಗುವುದು, ಆಗ ಆ ಪ್ರೇತಾತ್ಮ ಅನೇಕಾನೇಕ ಕಷ್ಟ ತಂದಿಡುವುದು.

ನಾನು ಅವಿವೇಕಿ ಆಗಿ, ಸಾಕಷ್ಟು ಧನಾರ್ಜನೆ ಮಾಡಿ ಸ್ವಾರ್ಥದಿಂದಿದ್ದೆನು. ಅದಕ್ಕೇ ಆ ಪ್ರೇತಾತ್ಮ ನನ್ನ ಹಿಡಿತದಿಂದ ಪಾರಾಗಿ, ತಪ್ಪು ಜೋತಿಷ್ಯ ನನ್ನಿಂದ ಹೇಳಿಸಿ, ತೊಂದರೇ ಕೊಟ್ಟಿದೆ. ನಾನು ಅವಮಾನ ಪಾಲಾದೆ. ಇಂದಿನಿಂದ ತಾವೇ ನನ್ನ ಗುರುಗಳು. ನನ್ನನ್ನು ಶಿಷ್ಯನಾಗಿ ಅಂಗೀಕರಿಸಿರಿ" ಎಂದು ಬೇಡಿದರು. ಆಗ ನಾನು, "ಸ್ವಾಮಿ ಈ ಲೋಕಕ್ಕೆ, ಸೃಷ್ಟಿಗೆ ಶ್ರೀಪಾದ ಶ್ರೀವಲ್ಲಭರೇ ಒಂದು ದೊಡ್ಡ ಏಕೈಕ ಗುರುಗಳು. ಅಹಂಕಾರದಿಂದ ನಾನು ಗುರುತ್ತ್ವವನ್ನು ಅಂಗೀಕರಿಸಿದರೇ ನಾನು ನಿಮ್ಮಗಿಂತ ದೊಡ್ಡ ಅವಮಾನ ಪಾಲಾಗಬೇಕಾಗುವುದು. ನಾವು ಕುರುಂಗಡ್ಡೆಯಿಂದ ಬರುವಾಗ ಶ್ರೀಪಾದರು ದಶ ಮಹಾವಿದ್ಯೆಗಳ ಬಗ್ಗೆ ವಿಶದೀಕರಿಸಿರುವೆರು. ಮಿಕ್ಕ ವಿಷಯಗಳು, ಸೂಕ್ತ ಸಮಯಕ್ಕೆ ತಿಳಿಸಲಾಗುವುದೆಂದು ಹೇಳಿದ್ದಾರೆ. ದಶ ಮಹಾವಿದ್ಯೆಯಲ್ಲಿನ ಕಾಳೀಮಾತೆ ಕುರಿತು, ಮತ್ತು

ಶ್ರೀ ಧೂಮಾವತಿ ಕುರಿತೂ ತಮ್ಮಿಂದ ತಿಳಿದುಕೊಂಡೆನು. ಸ್ವಾಮಿ! ದಯೆ ಮಾಡಿ ನನ್ನನ್ನು ಗುರುವಾಗಿ ಮಾಡಬೇಡಿ, ನಾನು ಒಂದು ವಿಚಿತ್ರ ಪರಿಸ್ಥಿತಿಯಲ್ಲಿ ಇಲ್ಲಿ ಸಿಕ್ಕಿಕ್ಕೊಂಡಿದ್ದೇನೆ. ಈಗ ಅದರಿಂದ ಪಾರಾಗಿದ್ದೇನೆ. **ಶ್ರೀಪಾದರು ಬಿಕ್ಕಟ್ಟು ತರುವುದರಲ್ಲಿ ಬಹಳ ಚತುರರು. ಅವುಗಳಿಂದ ತನ್ನ ಭಕ್ತರನ್ನು ಈಚೆಗೆ ಎಳೆದಾಕುವುದರಲ್ಲಿ ಬಲು ಚಮತ್ಕಾರರು. ಸದಾ ಶ್ರೀಪಾದ ಶ್ರೀವಲ್ಲಭರ ನಾಮಸ್ಮರಣೆ ಮಾಡುವುದೇ ಇಹ ಪರ ಸಾಧನವು"** ಎಂದು ನುಡಿದೆನು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 35

# ಉಗ್ರ ತಾರಾದೇವಿ ವಿವರಣೆ

### ದುಷ್ಕರ್ಮನಾದ ತಾರಾದೇವಿ ಉಪಾಸಕನನ್ನು ಶ್ರೀಪಾದರು ಶಿಕ್ಷಿಸಿ ರಕ್ಷಿಸುವುದು

ನಾವು ಶರಭೇಶ್ವರ ಶಾಸ್ತ್ರಿಯಿಂದ ಅಪ್ಪಣೆ ಪಡೆದು ನಮ್ಮ ಪ್ರಯಾಣ ಮುಂದುವರಿಸಿದವು. ಶ್ರೀಪಾದ ಶ್ರೀವಲ್ಲಭರ ನಾಮ ಸ್ಮರಣೆಯೇ ಇಹಲೋಕ ಮತ್ತು ಪರಲೋಕ ಸಾಧನವೆಂದು ನಂಬಿದೆವು. ಸ್ವಲ್ಪ ದೂರ ಕಳೆದ ನಂತರ ಒಂದು ಆಶ್ರಮ ತಲುಪಿದೆವು. ಅಲ್ಲಿ ಸಿದ್ಧರೆಂಬ ಓರ್ವ ಮಹರ್ಷಿ, ಪುಣ್ಯ ವೈರಾಗಿ, ಕೌಪೀನಧಾರಿಯಾಗಿ ಕಂಡುಬಂದರು. ದ್ವಾರದ ಬಳಿ ಇದ್ದ ಇಬ್ಬರು ಶಿಷ್ಯರು, "ನೀವೇನಾ ಶಂಕರ ಭಟ್ಟು ಮತ್ತು ಧರ್ಮಗುಪ್ತರು?" ಎಂದು ಪ್ರಶ್ನಿಸಿದರು! "ಹೌದು" ಎನ್ನಲೂ ನಮ್ಮನ್ನು ಒಳ ಕರೆದೊಯ್ದರು. ಅಲ್ಲಿ ಶ್ರೀ ತಾರಾದೇವಿ ವಿಗ್ರಹವಿತ್ತು. ಆ ಮಹರ್ಷಿ ತಾರಾದೇವಿ ಉಪಾಸಕರೇ. ಮಧ್ಯಾಹ್ನದ ವೇಳೆಗೆ ಪೂಜೆ, ಭಜನೆ ಮತ್ತು ಸಮೃದ್ಧಿಯಾಗಿ ಭೋಜನವೂ ನಡೆದುಹೋದವು.

ಆಗ ಸಿದ್ಧರು, "ಮಕ್ಕಳೇ! ನಿಮ್ಮ ಬರುವಿಕೆಯನ್ನು ಶ್ರೀಪಾದರು ತಿಳಿಸಿರುವರು. ಆ ಮಹಾ ಗುರುಗಳ ಆದೇಶಾನುಸಾರವೇ ನಿಮಗೆ ಈ ಆತಿಥ್ಯ. ನಾನು ತಾರಾ ಮಾತೆಯ ಉಪಾಸಕ. ಈ ತಾಯಿ ಸದಾ ಮೋಕ್ಷ ಕೊಟ್ಟು ತರಿಸುವಳು. ಆದ್ದರಿಂದಲೇ 'ತಾರ' ಎನ್ನುವರು. ಸುಲಭವಾಗಿ ವಾಕ್‌ಶಕ್ತಿಯನ್ನು ಕೊಟ್ಟು ಭಕ್ತರನ್ನು ರಕ್ಷಿಸುತ್ತಿರಲು, ಈಕೆಯನ್ನು 'ನೀಲ ಸರಸ್ವತಿ' ಎಂದೂ ಕರೆಯುವರು. ಮುವ್ವರು ಹಯಗ್ರೀವರಿರುವರು. ಒಬ್ಬರು ಶ್ರೀ ಮಹಾವಿಷ್ಣು ಅವತಾರ. ಮತ್ತೊಬ್ಬರು ಮಹರ್ಷಿ. ಹಯಗ್ರೀವನೆಂಬ ರಾಕ್ಷಸನನ್ನು ವಧಿಸಲೂ ಈ ಮಾತೆ ನೀಲ ವಿಗ್ರಹ ರೂಪಿಣಿಯಾದಳು. ಈ ದೇವಿ ಉಪಾಸನೆಯಿಂದ ಸಾಮಾನ್ಯನು ಸಹಾ ಬೃಹಸ್ಪತಿಗೆ ಸಮಾನ ವಿದ್ವಾಂಸನಾಗಬಹುದು! ಭರತ ವರ್ಷದಲ್ಲಿ ಮೊದಲಬಾರಿಯ ತಾರೋಪಾಸಕರು ಶ್ರೀ ವಶಿಷ್ಠ ಮಹರ್ಷಿ, ಆದ್ದರಿಂದಲೇ ಈಕೆಯನ್ನು 'ವಶಿಷ್ಠಾರಾಧಿತ ತಾರಾದೇವಿ' ಎಂದೂ ಕರೆಯುವರು. ನನಗಿಲ್ಲಿಯವರೆಗೂ ತಾಯಿಯ ದರ್ಶನ ಪ್ರಾಪ್ತವಾಗಿಲ್ಲ. ನಾನು ಮಿಥಿಲ ದೇಶದಲ್ಲಿನ ಮಹಿಷಿ ಗ್ರಾಮದ ಉಗ್ರತಾರ ಸಿದ್ಧ ಪೀಠವನ್ನು ದರ್ಶಿಸಿರುವೆ. ಅಲ್ಲಿ ತಾರ, ಏಕ ಜಟ ಮತ್ತು ನೀಲ ಸರಸ್ವತಿ ಎಂದು ಏಕರೂಪದ ತ್ರಿಮೂರ್ತಿಗಳ ದರ್ಶನ ಭಾಗ್ಯ ಲಭಿಸುವುದು. ಮಧ್ಯ ಭಾಗದಲ್ಲಿ ದೊಡ್ಡದಾದ ಮತ್ತು ಚಿಕ್ಕ ವಿಗ್ರಹಗಳು ಎರಡು ಕಡೆ ಕೂಡಿರುವವು. ಈ ಮಾತೆಯ ದರ್ಶನ, ಉಪಾಸನೆಯ ನಂತರವೇ, ಶ್ರೀ ವಶಿಷ್ಠರು ತಾರೋಪಾಸನಸಿದ್ಧಿ ಹೊಂದಿದರೆನ್ನುವರು.

ನಾನು ಆ ಮಹಾತಾಯಿ ಉಗ್ರತಾರೆಯ ದರ್ಶನ ಪಡೆದು ಈಚೆಗೆ ಬರಲು ಅಲ್ಲಿ ಒಂದು ಮುದ್ದಾದ ಬಾಲಿಕೆಯನ್ನು ಕಂಡೆನು. ಆ ಮಗು ನಡೆಯಲು ಕಾಲ್ಗೆಜ್ಜೆಯ ನಾದ ಬಲು ಇಂಪಾಗಿತ್ತು. ಅವಳು, "ಮಗೂ! ನೀನೆಲ್ಲೆಲ್ಲೋ ಸುತ್ತುತ್ತಿರುವೆ. ಬಹುಶ ನನ್ನನ್ನು ಕುರಿತೇ ಲೋಕವೆಲ್ಲಾ ಸುತ್ತಾಡುತ್ತಿರುವ ಹಾಗೆ ಕಾಣುತ್ತೆ. ನಿಜವೇ" ಎಂದು ನನ್ನನ್ನು ಪ್ರಶ್ನಿಸಲೂ ನಾನು ಆಶ್ಚರ್ಯಪಟ್ಟೆನು! ಈಕೆಯೇನಾ ಉಗ್ರತಾರದೇವಿ, ಇಲ್ಲಾ, ಇವಳೊಂದು ಹುಚ್ಚಿಯಾ? ತಾರಾಭಗವತಿ, ಶವ ರೂಪ ಶಿವನಮೇಲೆ ಪ್ರತ್ಯಾಲೀಢೆ ಮುದ್ರೆಯಲ್ಲಿ ಕೂತಿರುವಳು. ನೀಲಿ ವರ್ಣ, ತ್ರಿನೇತ್ರಿ, ಕೈಯಲ್ಲಿ ಕತ್ತಿ, ಕಪಾಲ ಮತ್ತು ಖಡ್ಗ ಧರಿಸಿರುವಳು. ವ್ಯಾಘ್ರ ಚರ್ಮವನ್ನು

ಧರಿಸಿರುವಳು. ಶಿರುಸ್ಸುಗಳ ಹಾರದೊಂದಿಗೆ ಭೋಗ ಮೋಕ್ಷಪ್ರದಾಯಿನಿ ಆದ ಆ ದೇವಿಯ ನಿಜ ಸ್ವರೂಪ ಅದು! ಆದರೇ ನಾನು ಕಾಣುತ್ತಿರುವುದು 12, 13 ವರುಷ ಮೀರದ ಅಬಲೆಯ, ಸುಂದರ ಬಾಲಿಕೆಯ ರೂಪ. ನಾನು ಆಶ್ಚರ್ಯ ಹೊಂದಿ ಉತ್ತರ ನೀಡದೇ ತಟಪಟಾಯಿಸುತ್ತಿರಲು, ಆ ಬಾಲಿಕೆ ತನ್ನ ವರ್ಚಸ್ಸನ್ನು ಬೆಳೆಸಿಕೊಳ್ಳುತ್ತಿರಲೂ, ತನ್ನ ಶರೀರದ ಪ್ರತಿಕಣವೂ ತೇಜಸ್ಸಿನಿಂದ ಬೆಳಗಲಾರಂಭಿಸಿದವು! ಶರೀರ ಒಂದು ಬಾಲಕನಾಗಿ ಬದಲಾವಣೆಗೊಂಡಿತು. ಬಂಗಾರದ ಬಣ್ಣ, ಕಣ್ಣುಗಳಲ್ಲಿ ಒಬ್ಬ ಯೋಗಿಯ ಪ್ರಶಾಂತತೆ, ಕರುಣೆ, ಪಾಪಭೀತಿ ಮತ್ತು ದಯೆ ತುಂಬಿ ಉಕ್ಕುತ್ತಿದ್ದವು. ಆ ಬಾಲಕನ 2 ಕಾಲುಗಳಲ್ಲಿ ಗೆಜ್ಜೆಗಳು ಕಟ್ಟಿದ್ದರು. ‘‘ಸ್ವಾಮಿ! ನನಗೆ ಈ ಗೆಜ್ಜೆಗಳು ಬಹಳ ತೊಂದರೆ ಕೊಡುತ್ತಿವೆ, ಬಿಗಿಯಾಗಿವೆ. ಸ್ವಲ್ಪ ಬಿಚ್ಚುತ್ತೀರಾ?’’ ಎಂದಾ ಬಾಲಕನು ನನ್ನನ್ನು ಕೇಳಿದನು. ನಾನಾ ಗೆಜ್ಜೆಗಳನ್ನು ಬಿಚ್ಚಲೂ ‘‘ಅವು ನಿನ್ನ ಹತ್ತಿರದಲ್ಲೇ ಇಟ್ಟುಕೋ ಈ ಗೆಜ್ಜೆಗಳಿಗೆ ಜೀವ ಉಂಟು. ನೀನೆಲ್ಲಿಗೆ ಹೋಗಬೇಕು, ಏನು ತಿನ್ನಬೇಕು, ಯಾರೊಟ್ಟಿಗೆ ಮಾತನಾಡಬೇಕೆಂಬುದು ಅವೇ ನಿರ್ಧರಿಸುವವು.

ಹಾಗೆ ನುಡಿದು, ಆ ಬಾಲಕನು ಅಂತರ್ಧಾನನಾದನು. ನಾನು ಕಾಳೀಘಟ್ಟಕ್ಕೆ ಹೋದೆನು. ಕಾಳೀಮಾತೆ ದರ್ಶನದ ನಂತರ, ದಕ್ಷಿಣದ ಕಡೆ ಸಾಗಿದೆನು. ಪೂರಿ ಕ್ಷೇತ್ರವನ್ನು, ಸಿಂಹಾಚಲವನ್ನೂ ದರ್ಶಿಸಿದೆನು. ನನ್ನ ಅದೃಷ್ಟವಶಾತ್ತು ಪಾದಗಯಾ ಕ್ಷೇತ್ರವಾದ ಶ್ರೀ ಪೀಠಿಕಾಪುರಕ್ಕೆ ಹೋದೆನು. ಶ್ರೀ ಕುಕ್ಕುಟೇಶ್ವರ ಸ್ವಾಮಿಯನ್ನು ದರ್ಶಿಸಿದೆನು. ಸ್ವಯಂಭೂ ದತ್ತನನ್ನೂ ದರ್ಶಿಸಿದೆನು. ಸ್ವಯಂಭೂ ದತ್ತನ ವಿಗ್ರಹವಿದ್ದ ಕಡೆ ಒಂದು ಹುತ್ತವಿತ್ತು. ಅದರಲ್ಲಿ ಒಂದು ದೇವತಾ ಸರ್ಪವಿತ್ತು. ನಾನು ದತ್ತನ ದರ್ಶನ ಮಾಡಿದ ನಂತರವೇ, ಆ ದೇವತಾ ಸರ್ಪ ದರ್ಶನವಾಯಿತು! ಆ ಸರ್ಪ ದರ್ಶನದ ನಂತರ ನನ್ನ ಒಳಗಿನ ಕುಂಡಲಿನಿ, ಶಕ್ತಿಯುತವಾಯಿತು. ನನ್ನ ಶರೀರ ನನ್ನ ಸ್ವಾಧೀನದಲ್ಲಿರದೇ, ಹೆಜ್ಜೆ ಅನಿಯಂತ್ರಿತವಾಗಿ ಬೀಳುತ್ತಿರಲು, ತಾರಾಮಾತೆಯ ನಾಮೋಚ್ಚಾರಣೆ ಮಾಡುತ್ತಾ, ಜೋರಾಗಿ ಕೂಗುತ್ತಿದ್ದೆನು. ನನ್ನ ಅದೃಷ್ಟಕ್ಕೆ ಎಂದೇ ನಾನು, ಹಾಗೆ ಜ್ಞಾನವೇ ಇಲ್ಲದೇ ನರಸಿಂಹ ವರ್ಮ ಎಂಬ ಕ್ಷತ್ರಿಯ ಜಮೀಂದಾರ್ ಮನೆ ಬಳಿಗೆ ಬಂದೆನು. ಮಹಿಷಿ ಗ್ರಾಮದಲ್ಲಿ ದರ್ಶನವಿತ್ತ ಬಾಲಿಕಾರೂಪ, ಪುನಃಗೋಚರವಾಯಿತು! ಆ ರೂಪ, ಆಗಿನಂತೇ ತಟ್ಟನೇ ಬಾಲಕನೂ ಆಯಿತು! ನನಗೆ ದಿವ್ಯವಾಗಿ ದರ್ಶನವೂ ಕೊಟ್ಟನು. ಶ್ರೀ ವರ್ಮರ ಮನೆಯ ಮುಂದೆ, ಮನುಷ್ಯ ಎಳೆಯುವಂತಹ ಒಂದು ಬಂಡಿ ಇತ್ತು. ಆ ಬಾಲಕನು ಆ ಬಂಡಿಯಲ್ಲಿ ತನ್ನ ತಾಯಿಯ ತವರಿಗೆ ಹೋಗ ಬಯಸಿದನು. ಶ್ರೀ ವರ್ಮರು ಗಾಡಿಯನ್ನು ಎಳೆಯಲೂ ನೌಕರನನ್ನು ತಂದು ನಿಲ್ಲಿಸಲೂ, ಬಾಲಕನು, ಆ ನೌಕರನನ್ನೂ ಸಹಾ ತನ್ನೊಟ್ಟಿಗೆ ಬಂಡಿಯಲ್ಲಿ ಕುಳಿತುಕೊಳ್ಳಲು ಹೇಳಿ, ನನಗೆ ಆ ಗಾಡಿಯನ್ನು ಎಳೆಯಲು ಹೇಳಿದನು! ನಾನು ಸಾಧ್ಯವಿಲ್ಲವೆಂದನು. ‘‘ನೀನು ಈ ಬಂಡಿಯನ್ನು ಎಳೆಯದಿದ್ದರೇ, ನಿನ್ನ ಚರ್ಮ ಸುಲಿದು ಜೋಡು ಮಾಡಿಸಿಕೊಳ್ಳುತ್ತೇನೆ ಹುಷಾರ್! ನಾನು ಮೊದಲಿಗೇ ಚೆಮ್ಮಾರನು. ಚರ್ಮ ಸುಲಿದು ಚಪ್ಪಲಿ ಮಾಡುವುದು ನನ್ನ ಕುಲವೃತ್ತಿ. ನಿನ್ನಂತಹ ಪಶುವಿನ ಚರ್ಮ, ಎಮ್ಮೆ ಗೋವಿನ ಚರ್ಮಕ್ಕಿಂತಾ ಶ್ರೇಷ್ಠವಾಗಿರುವುದು’’ ಎಂದು ಒತ್ತಿ ಹೇಳಿದನು.

ಇನ್ನು ಬೇರೇ ದಾರಿ ಇಲ್ಲದೇ, ನಾನಾಗಾಡಿಯನ್ನು ಬಲು ಶ್ರಮಪಟ್ಟು ಎಳೆಯುತ್ತಿದ್ದೆನು. ಆ ಬಾಲಕನು, ತನ್ನ ಕೈಲಿದ್ದ ಕೋಲಿನಿಂದ ನನ್ನನ್ನು ಹೊಡೆಯುತ್ತಿದ್ದನು! ಆ ಇಬ್ಬರ ಮನುಷ್ಯರ ಭಾರ 20 ಮನುಷ್ಯರ ಭಾರಕ್ಕೆ ಸಮವಾಗಿತ್ತು. ನಾನು ಬಾಧೆಪಟ್ಟಷ್ಟೂ ಆ ಬಾಲಕ, ಕೋಲಿನಿಂದ ಹೊಡೆಯುತ್ತಿರಲೂ, ನಾನ ದುಃಖದಿಂದ ರಕ್ತ ಸುರಿಸಿಕೊಂಡೇ, ಹೇಗೋ ಅವರನ್ನು ಗಮ್ಯಸ್ಥಾನ ಸೇರಿಸಿದೆನು.

ಬಾಲಕನ ಜೊತೆ ಇದ್ದ ಆಳು,ನನ್ನ ಸ್ಥಿತಿಗೆ ಆಶ್ಚರ್ಯಪಟ್ಟನು. ಆದರೆ ಆ ಬಾಲಕ ಕಟುಕನಾಗಿ ವಿನೋದ ಪಡುತ್ತಾ ಇದ್ದನು! ಮೇಲ್ಪಟ್ಟು, 'ಆ ದುರಾತ್ಮನ ಮೇಲೆ ಕರುಣೆ ತೋರಿದರೇ ನೀನೂ ಸಹಾ ಶಿಕ್ಷೆಗೆ ಗುರಿ ಆಗುತ್ತೀಯ ಹುಷಾರ್' ಎಂದು ಆ ನೌಕರನನ್ನು ಹೆದಿರಿಸಿದನು. ನಾನು ರಕ್ತ ಸುರಿಸಿಕೊಂಡಿರಲೂ ಆ ಬಾಲಕ ಮನೆ ಒಳಗಿಂದ ಕೈತುಂಬಾ ಮೆಣಸಿನ ಕಾಯಿಗಳು ತಂದು, ನನ್ನ ಹುಣ್ಣುಗಳ ಮೇಲೆ ತಿಕ್ಕಿದನು! ನಾನು ಸೊಂಟದಲ್ಲಿ, ಅಂದು ಮಹಿಷಿ ಗ್ರಾಮದಲ್ಲಿ ಪಡೆದಿದ್ದ 2 (ಜತೆ) ಕಾಲ್ಗೆಜ್ಜೆ ಇಟ್ಟುಕೊಂಡಿದ್ದೆನು.

ಇಷ್ಟರಲ್ಲಿ ಒಳಗಿಂದ ಆ ಬಾಲಕನ ಅಜ್ಜಿ, ಈಚೆಗೆ ಬಂದು, ನನಗೆ ದರ್ಶನ ಕೊಟ್ಟ ತಕ್ಷಣವೇ ನನ್ನ ಶರೀರದ ಉರಿ ಕಡಿಮೆ ಆಯಿತು! ಆಕೆ ರಾಜಮಾಂಬ ಹೆಸರಿನ ಪುಣ್ಯಮೂರ್ತಿ. 'ಪುಣ್ಯರೂಪಿಣಿ' ಎಂದೂ ಕರೆಯಲಾಗುತ್ತಿದ್ದಳು. ಆಕೆಯ ಪತಿ, ಬಾಪನಾರ್ಯರೆಂಬ ಪ್ರಸಿದ್ಧ ಸತ್ಯ ಋಷೀಶ್ವರನು. ಆಕೆ, "ಮಗು! ನೀನು ಸ್ವಲ್ಪ ವಿಶ್ರಾಂತಿ ಪಡೆದು, ಊಟ ಮಾಡಿ ಹೋಗು. ಎಲ್ಲಿಂದ ಬಂದಿದ್ದೀಯ? ಸ್ವಗ್ರಾಮ ಯಾವುದು?'' ಎಂದು ಹಿಂದುಸ್ಥಾನಿ ಭಾಷೆಯಲ್ಲಿ ಮೃದುವಾಗಿ ನುಡಿದರು. ಆ ಆಳು, ಶ್ರೀಪಾದರು ಮಾಡಿದ ದೌರ್ಜನ್ಯವನ್ನು ಅಲ್ಲಿನ ಅಜ್ಜಿ ಮತ್ತು ತಾತಂದರಿಗೆ ತಿಳಿಸಿದನು.

ಆಗ ಶ್ರೀಪಾದರು, "ಅಜ್ಜಿ! ಇವನು ಸುಳ್ಳು ಹೇಳುತ್ತಿದ್ದಾನೆ. ಈ ದಾರಿಹೋಕನಿಗೆ ರಕ್ತ ಸುರಿದೇ ಇಲ್ಲ. ಅವು ಬರೀ ಬೆವರು ಹನಿಗಳು. ನಾನು ಅವನ ಮೈಗೆ ಉಜ್ಜಿದ್ದು ಮೆಣಸಿನ ಕಾಯಿ ಅಲ್ಲ, ಚಂದನ'' ಎಂದು ನುಡಿದು, ಆ ಆಳನ್ನು ಪರಿಶೀಲಿಸಲೂ ಆಜ್ಞಾಪಿಸಿದರು. ಆ ಆಳು ಪರಿಶೀಲಿಸಿ, ಆಶ್ಚರ್ಯಪಟ್ಟನು! ಆಗ ಬಾಪನಾರ್ಯರು, "ಶ್ರೀಪಾದ! ನೀನು ಸತ್ಯವ್ರತನು. ನೀನು ನುಡಿದಂತೆಯೇ ಆಗುವುದು. ಮೆಣಸಿನ ಕಾಯೋ ಚಂದನದ ಪುಡಿಯೋ, ನೀನು ಅಂದಂತೆಯೇ ಕಂಡುಬರುವುದು! ನೀನು ಸಾಕ್ಷಾತ್ ಉಗ್ರತಾರ ರೂಪವೆನ್ನಿಸುತ್ತಿದೆ. ಮಾತೆ ಉಗ್ರತಾರ ವಾಕ್ಸಿದ್ಧಿ ಪ್ರಸಾದಿಸಿದ ಹಾಗೆ ನೀನು, ನಿನ್ನ ಸಂಕಲ್ಪಾನುಸಾರ ನುಡಿದು, ಅಲ್ಲಿನ ಯಾವ ವಸ್ತುವನ್ನಾಗಲಿ ಅವುಗಳ ಸ್ವಭಾವನ್ನಾಗಲಿ ನೀನು ನುಡಿದಂತೆಯೇ ಬದಲಾಯಿಸಬಲ್ಲ ಸಮರ್ಥನು! ಇಲ್ಲಿಗೆ ನಿನ್ನ ಲೀಲಾ ವಿನೋದವನ್ನು ಸಾಕು ಮಾಡಿ ಈ ಅಭಾಗ್ಯನನ್ನು ಕರುಣಿಸು ತಂದೆ!'' ಎಂದರು. ಆಗ ಶ್ರೀಪಾದರು, "ತಾತ! ನೀನು ಸರಿಯಾಗಿಯೇ ನುಡಿದಿರುವೆ. ನನ್ನ ಸಂಕಲ್ಪದಂತೆ ಬದಲಾವಣೆಗಳು ಸಂಭವಿಸುವವು, ನಿಜವೆನ್ನುವುದಕ್ಕೆ ಶಾಸ್ತ್ರ ಪ್ರಮಾಣಗಳು ಅಗತ್ಯ. ಈ ದಾರಿಹೋಕ ಆಗಂತಕನು, ಒಬ್ಬ ಸದ್ಬ್ರಾಹ್ಮಣ. ಉಗ್ರತಾರಾ ಉಪಾಸಕನೇ ಸರೀ! ಆದರೇ ಈತನು ಸನ್ಯಾಸ ದೀಕ್ಷೆಯನ್ನು ಗುರು ಅನುಮತಿಯಿಂದಲ್ಲದೇ ತನ್ನ ಇಚ್ಛಾನುಸಾರ ತೆಗೆದುಕೊಂಡಿರುವನು. ಇವನ ತಂದೆ ಅದೆಷ್ಟೋ ಕಷ್ಟಪಟ್ಟು ಇವನನ್ನು ಬೆಳೆಸಿದನು. ಇನ್ನು ತಾಯಿ, ಇವನ ಗರ್ಭದಲ್ಲಿ ಪಡಬಾರದ ನೋವುಗಳನ್ನೆಲ್ಲಾ ಸಹಿಸಿದಳು. ಸಾಕಷ್ಟು ರಕ್ತ ಕಳೆದುಕೊಂಡಳು. ಅವಳ ಗಾಯಗಳ ನೋವು, ಮೆಣಸಿನ ಕಾರ ಉಜ್ಜಿದಕ್ಕಿಂತಾ ಅಧಿಕ! ಅಷ್ಟು ಕಷ್ಟ ಪಟ್ಟಿದ್ದಳು. ಅವರಿಬ್ಬರೂ ಮರಣಿಸಿ, ಪುಣ್ಯದಿಂದ ಪೀಠಿಕಾಪುರದಲ್ಲೇ ಹುಟ್ಟಿರುವರು.

ಆ ನರಸಿಂಹ ವರ್ಮನ ಆಳು, ಮತ್ತ್ಯಾರೋ ಅಲ್ಲ. ಈ ಆಗಂತಕನ ಹಿಂದಿನ ಜನುಮದ ತಂದೆಯೇ! ಆ ಆಳಿನ ಪತ್ನಿಯೇ ಇವನ ಪೂರ್ವ ಜನುಮದ ತಾಯಿ! ತೀರಿಹೋದ ಹಿರಿಯರ ಪಿಂಡಪ್ರದಾನ ನಿಷ್ಠೆಯಿಂದ ಮಾಡದಿದ್ದರೇ ಅನರ್ಥವಾಗುವುದು. ಇವನು, ಸನ್ಯಾಸ ತೆಗೆದುಕೊಂಡು, ಅವರ ಕರ್ಮಗಳನ್ನು ತತ್ಕಾರಣ, ಬಿಟ್ಟನು. ಇವನ ಪಾಪ, ಪುಣ್ಯ ಕರ್ಮಗಳು ಇವನನ್ನು ಪಾದಗಯಾ ಕ್ಷೇತ್ರವಾದ ಪೀಠಿಕಾಪುರಕ್ಕೆ ಎಳೆದುಕೊಂಡು ಬಂದಿವೆ. ಈಗ ಪಟ್ಟ ಸ್ವಲ್ಪ ನೋವುಗಳಿಂದ ಇವನ ದುರ್ಯೋಗಗಳನ್ನು

ಸಂಪೂರ್ಣಗೊಳಿಸಿರುವೆನು. **ಮಾತೃ ಗರ್ಭದಲ್ಲಿ 9 ತಿಂಗಳ ಕಾಲ ಶಿಶುವು ಬೆಳೆಯುವುದು. ಕಾಶೀ ಕ್ಷೇತ್ರದಲ್ಲಿ 9 ತಿಂಗಳಾಗಲಿ, 9 ದಿನ ಅಥವಾ 9 ಗಂಟೆಗಳಾಗಲಿ ಇದ್ದಲ್ಲಿ ಪಿತೃಶಾಪಗಳು ತೊಲಗುವವು. ಶ್ರೀ ಪೀಠಿಕಾಪುರ, ಕಾಶೀಗೆ ಸಮವಾದ ಕ್ಷೇತ್ರ.** ಈಗ ಈ ಆಗಂತಕನು, ಕನಿಷ್ಠ ಪಕ್ಷ 9 ದಿನ ತನ್ನ ಪೂರ್ವ ಜನುಮದ ಮಾತಾಪಿತರರಿಗೆ ಸೇವೆ ಮಾಡಿದ್ದಲ್ಲಿ, ಪಿತೃದೇವತೆಯರ ಶಾಪ ತೊಲಗುವುದು'' ಎಂದು ನಿಜಾಂಶ ನುಡಿದರು. ನಾನು ಆ ಸೇವೆ ನೆರವೇರಿಸಿದೆನು. ಅವರ ಆಶೀರ್ವಾದ ಮತ್ತು ಅನುಗ್ರಹವನ್ನೂ ಪಡೆದೆನು. ಆ ದಿನ ಅವರು ನನಗೆ ಇತ್ತ ಕಾಲ್ಗೆಜ್ಜೆಯನ್ನು ಭದ್ರವಾಗಿ ಪೂಜಾ ಗೃಹದಲ್ಲಿಟ್ಟೆನು. ನಾನು ಉಗ್ರತಾರಾ ಸಿದ್ಧಿಯನ್ನು ಹೊಂದಿದೆನು. ಹಾಗೆ ಪಡೆದ ತಂತ್ರಜ್ಞಾನದಿಂದ ಜನರ ಮೂಲವ್ಯಾಧಿಗಳನ್ನು ವಾಸಿ ಮಾಡಲಾರಂಭಿಸಿದೆ.

ನೀವಿಲ್ಲಿಗೆ ಬರುವ ಮುನ್ನ ಶ್ರೀಪಾದರು ನನ್ನ ಮನೋನೇತ್ರಕ್ಕೆ ಕಂಡುಬಂದು, ''ಶಂಕರ ಭಟ್ಟು ಮತ್ತು ಧರ್ಮಗುಪ್ತರೆಂಬುವವರು ಈ ಹಾದಿಯಲ್ಲಿ ಬರುವರೆಂದು, ಅವರಿಗೆ ಸಮೃದ್ಧ ಭೋಜನಯುಕ್ತ ಆತಿಥ್ಯ ನೀಡಬೇಕೆಂದು, ನಂತರ ಅವರಿಗೆ ಬಹುಮಾನವಾಗಿ ಶ್ರೀಗಳ ಕಾಲ್ಗೆಜ್ಜೆ ನೀಡಬೇಕೆಂದೂ ಆದೇಶಿಸಿದ್ದರು'' ಎಂದು ನಮಗೆ ಬಿಡಿಸಿ ಹೇಳಿದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 36

# ವೇದಾಂತ ಶರ್ಮ ವೃತ್ತಾಂತ

### ಮಾತಂಗಿ ಉಪಾಸನೆ

ನಾನೂ ಮತ್ತು ಧರ್ಮಗುಪ್ತರು, ನಮಗಿತ್ತ ಶ್ರೀಗಳ ಕಾಲ್ಗೆಜ್ಜೆಗಳನ್ನು ಮಹಾಪ್ರಸಾದವಾಗಿ ಭಾವಿಸಿ ಪ್ರಯಾಣ ಮುಂದುವರೆಸಿದೆವು. ಕಳೆದ ರಾತ್ರಿ ಪೂರ್ತಿ ಶ್ರೀಗಳ ಕಾಲ್ಗೆಜ್ಜೆಯ ಸುಶ್ರಾವ್ಯನಾದವೇ ಮನದಲ್ಲಿ ಪ್ರತಿಧ್ವನಿಸುತ್ತಿತ್ತು. ಹೃದಯದ ಅನಾಹತ ಚಕ್ರದಲ್ಲಿ 'ಓಂ'ಕಾರ, ಅಪ್ರಯತ್ನವಾಗಿ ಬರುವುದನ್ನು ನಾವು ಕೇಳಿದೆವು. ಆದರೇ ಕಳೆದ ರಾತ್ರಿ ಕಾಲ್ಗೆಜ್ಜೆಯ ಸಂಗೀತವೇ ಹೃದಯದಲ್ಲಿ ರಾಗ, ತಾಳಬದ್ಧವಾಗಿ ಕೇಳಿ ಬರುತ್ತಿತ್ತು. ಅನಾಹತದಿಂದ ಶಕ್ತಿ, ಇತರ ಚಕ್ರಗಳಿಗೆ ಪ್ರವಹಿಸುತ್ತಿತ್ತು. ಆ ಪ್ರಸಾರದ ಸಮಯ, ಶರೀರದ ಎಲ್ಲಾ ನಾಡಿಗಳಲ್ಲೂ ಯಾವುದೋ ಹೊಸ ಶಕ್ತಿ ಸೇರಿರುವ ಹಾಗೆ ತೋಚುತ್ತಿತ್ತು.

ನಾವು ನಡೆಯುವಾಗಲೂ ಕಾಲ್ಗೆಜ್ಜೆಯ ನಾದ ಕೇಳಲಾಗುತ್ತಿತ್ತು. ನಡಿಗೆ ನಿಂತರೇ ಗಜ್ಜೆಯ ಶಬ್ದವೂ ಮಾಯವಾಗುತ್ತಿತ್ತು. ಹಾಗಿರಲೂ, ಅಲ್ಲಿನ ಗದ್ದೆಗಳಲ್ಲಿ ಒಂದು ಆಶ್ರಮವಿದ್ದ ಹಾಗೆ ತೋಚಿತು. ಆದರ ಪಕ್ಕ, ಒಂದು ಗ್ರಾಮವೂ ಕಂಡುಬಂತು. 'ಗ್ರಾಮದ ಅಂಚಿನಲ್ಲಿ ಭಂಡಾಲ ಕುಲದವರು ವಾಸಿಸುವರು ಅಲ್ಲವೇ? ಆಶ್ರಮ ಹೇಗೆ ಇದ್ದೀತು' ಎಂದು ನಮ್ಮಲ್ಲಿ ನಾವೇ ತರ್ಕ ಮಾಡುತ್ತಿದ್ದೆವು.

ಆಶ್ರಮ ಸಮೀಪಿಸಲೂ ಕಾಲ್ಗೆಜ್ಜೆಯ ನಾದ ಮಾಯವಾಯಿತು! ಒಂದು ದೊಡ್ಡ ಆಧ್ಯಾತ್ಮಿಕ ಅನುಭವ ಆಗಲಿದೆ ಎಂದು ಮನಸ್ಸಿಗೆ ತಟ್ಟಿತು. ಆಶ್ರಮದಿಂದ 60 ವರುಷದ ತೇಜಸ್ಸುಳ್ಳ ಓರ್ವ ಮಹರ್ಷಿ ಈಚೆಗೆ ಬಂದರು. ಹಿಂದೆಯೇ 30 ವರ್ಷದ ಓರ್ವ ಯೋಗಿನೀ ಮಾತೆಯೂ ಈಚೆಗೆ ಬಂದು ನಮ್ಮನ್ನು ಸಾದರವಾಗಿ ಒಳಗೆ ಕರೆದೊಯ್ದರು. ಆ ಮಹರ್ಷಿ ಹೀಗೆ ಹೇಳಿದರು.

"ನನ್ನ ಹೆಸರು ವೇದಾಂತ ಶರ್ಮ. ನಿಜಕ್ಕೂ ನನ್ನ ಸ್ವಗ್ರಾಮ ಪೀಠಿಕಾಪುರ. ಈಗ ಬಂಗಾರಯ್ಯ ಎಂದು ಕರೆಯಲ್ಪಡುತ್ತಿರುವೆನು. ಈಕೆ ಬಂಗಾರಮ್ಮ. ನಾನು ಜನ್ಮತಃ ಬ್ರಾಹ್ಮಣನು, ಈಕೆ ಚರ್ಮಕಾರಣಿ. ನಮ್ಮ ಮನೆಯಲ್ಲಿ ಮಾತಂಗಿ ಮಾತ ಪೀಠವಿದೆ. ದಶ ಮಹಾವಿದ್ಯೆಗಳಲ್ಲಿ ಒಂದಾದ ಮಾತಂಗಿನಿ ನಾವಿಲ್ಲಿ ಆರಾಧಿಸುತ್ತಿದ್ದೇವೆ."

ನನ್ನ ಶರೀರ ಚಲಿಸಿತು. ಈತ ಬ್ರಾಹ್ಮಣ. ಆಕೆ ಮಾದಿಗ ಕುಲದವಳು. ಇವರ ದಾಂಪತ್ಯ ಹೇಗೆ ಧರ್ಮಸಮ್ಮತ!

ನಮಗೆ ಹಣ್ಣು, ಕಂದಮೂಲಗಳು ಭೋಜನಕ್ಕೆ ಇಡಲಾಯಿತು. ಆಗ ಬಂಗಾರಯ್ಯ "ಸ್ವಾಮಿಗಳೇ! ಅರುಂಧತಿ, ವಶಿಷ್ಠರನ್ನು ವಿವಾಹವಾಗಲೂ ಬಯಸಿದಾಗ, 'ನಾನು ನಿನ್ನ ಶರೀರವೆನ್ನೇನೇ ಮಾಡಿದರೂ ಸಹಿಸಬೇಕೆ'ಂದು ಮಹರ್ಷಿ ಹೇಳಲೂ, ಅರುಂಧತಿ ಒಪ್ಪಿದಳು. ರುಂಧನವೆಂದರೆ ತಡೆ ಹಾಕುವುದು. ಆ ಮಹರ್ಷಿ ಆಕೆಯನ್ನು 7 ಬಾರಿ ಸುಟ್ಟು, ಪುನಃ ಜನುಮವಿತ್ತನು. ಆದರೂ ಆಕೆ ಅಡ್ಡಿಬರಲಿಲ್ಲ. ಆದ್ದರಿಂದಲೇ ಆ ಮಾತೆ 'ಅರುಂಧತಿ' ಎನ್ನಲಾದಳು. ತದನಂತರವೇ ಮಹರ್ಷಿ, ಆಕೆಯನ್ನು ಧರ್ಮಪತ್ನಿಯಾಗಿ ಸ್ವೀಕರಿಸಿದರು."

ನಾನು ಪೀಠಾಪುರದಲ್ಲಿರುವಾಗ ನನಗೆ 3ಬಾರಿ ವಿವಾಹವಾಯಿತು. ಆ ಮುವ್ವರೂ ತೀರಿಕೊಂಡರು. ನನ್ನ ಕರ್ಮಕ್ಕೆ ಚಿಂತಿಸಲೂ, ಶ್ರೀಪಾದರು, ''ತಾತ! ನಿನಗೆ ಮತ್ತೊಂದು ಅಜ್ಜಿಯನ್ನು ಆರಿಸಿರುವೆನು. ಆಕೆಯನ್ನು ವಿವಾಹವಾಗದೇ ಧರ್ಮಪತ್ನಿಯಾಗಿ ಸ್ವೀಕರಿಸಿದರೇ ನಿನಗೆ ಉತ್ತಮ ಜನುಮ ಪ್ರಸಾದಿಸುವೆನು'' ಎನ್ನುತ್ತಿದ್ದರು.

ಪೀಠಿಕಾಪುರದ ಬ್ರಾಹ್ಮಣ ಪರಿಷತ್ತಿಗೆ ಬಾಪನಾರ್ಯರು ಅಧ್ಯಕ್ಷರು, ಪರಿಷತ್ತಿನ ಅಧ್ವರ್ಯದಲ್ಲಿ ವೇದಗೋಷ್ಠಿ, ಕೆಲವು ಧರ್ಮಕರ್ಮಗಳ ವಿಚಾರವಾಗಿ ಸೇರಿ, ಚರ್ಚಿಸಬೇಕೆಂದು ನಿರ್ಣಯವಾಯಿತು. ದೂರ ಪ್ರಾಂತದ ಪಂಡಿತರು, ಅಗ್ರಹಾರದ ಪಂಡಿತರನ್ನು ಆರಿಸಿ ತಿಳಿಸುವ ಜವಾಬ್ದಾರಿ ನನಗೆ ಕೊಡಲಾಯಿತು.

ಶ್ರೀಪಾದರು, ಉಪನಯನದ ನಂತರ ಒಂದು ದಿನವಾದರು ವೇದ ಅಧ್ಯಯನ ಮಾಡಲಿಲ್ಲ, ತಾತನ ಬಳಿ ಅಥವಾ ತಂದೆಯ ಬಳಿ ಆಗಲಿ ಕುಳಿತು ಮನಸ್ಸಿಗೆ ಬಂದಿದ್ದನ್ನು ಹೇಳುತ್ತಿದ್ದರು. ಆದರೇ ಯಾರಾದರೂ ಯಾವುದೇ 'ಪನ್ನ'ವನ್ನು ಹೇಳಲೂ ಕೇಳಿದರೇ ತಟ್ಟನೇ ಹೇಳುತ್ತಿದ್ದರು! ಬಾಪನಾರ್ಯರು ವರುಷಗಳಲ್ಲಿ ಕಲಿತ ವೇದವೆಲ್ಲಾ ಶ್ರೀಗಳಿಗೆ ಬಾಯಿಪಾಠವೇ! ವೇದ, ವೇದಾಂತ, ವೇದ ರಹಸ್ಯಗಳೆಲ್ಲಾ ಅವರಿಗೆ ಅವಲೀಲೆಯೆ ಸರಿ! ಆದ್ದರಿಂದ ಶ್ರೀಪಾದರನ್ನು ಸಹಾ ವೇದ ಪರಿಷತ್ತಿಗೆ ಆಹ್ವಾನಿಸಲೂ ನಾನು ನಿರ್ಧರಿಸಿದೆನು.

ಆದರೇ ಅಲ್ಲಿನ ಬ್ರಾಹ್ಮಣ್ಯದ ನಿಜ ಉದ್ದೇಶ್ಯವೇ ಬೇರೇ ಆಗಿತ್ತು. ಗೋಷ್ಠಿಗಾಗಿ ಎಲ್ಲಾ ಏರ್ಪಾಡುಗಳನ್ನೂ ಮಾಡುತ್ತಿದ್ದರು. ಧರ್ಮಶಾಸ್ತ್ರ ಕ್ಷುಣ್ಣವಾಗಿ ಚರ್ಚಿಸಲ್ಪಡುವುದು. ಶ್ರೀಪಾದರ ಧರ್ಮಭ್ರಷ್ಟ ಕಾರ್ಯಗಳನ್ನು ಗಟ್ಟಿಯಾಗಿ ಖಂಡಿಸಿ, ಆ ಕಾರಣಕ್ಕೆ ಅಪ್ಪಲರಾಜು ಶರ್ಮ ಮತ್ತು ಬಾಪನಾರ್ಯರನ್ನು ಕುಲದಿಂದ ಬಹಿಷ್ಕಾರಗೊಳಿಸಲೂ ಸೂಚಿಸಿ, ಶ್ರೀ ಶಂಕರಾಚಾರ್ಯರ ಅಪ್ಪಣೆ ಪಡೆದು, ಆ 2 ಕುಟುಂಬಗಳನ್ನೂ ಪೀಠಿಕಾಪುರದಿಂದ ಈಚೆಗೆ ಹಾಕುವುದೇ ಅವರ ಉದ್ದೇಶ್ಯ! ಇದು ನನಗೆ ತಿಳಿಸಲೂ, ನಾನೂ ಒಪ್ಪಿದೆ. ಬ್ರಾಹ್ಮಣ ಪರಿಷತ್ತಿಗೆ ಅಧ್ಯಕ್ಷನಾಗಬೇಕೆಂಬುವ ವಿಚಿತ್ರವಾದ ಮತ್ತು ಬಲವಾದ ಕೋರಿಕೆ ನನ್ನಲ್ಲಿ ಚಿಗುರಿತ್ತು.

ಇದ್ದಕ್ಕಿದ್ದಂತೆಯೇ ಶ್ರೀಗಳು, ತಮಗೆ ಚರ್ಮದ ಪಾದುಕೆ ಬಯಸಿದರು. ಆಗ ಅವರ ವಯಸ್ಸು 14. ಬ್ರಾಹ್ಮಣರಿಗೆ ಮರದ ಚಪ್ಪಲಿಯೇ ಹೊರತು, ಚರ್ಮದ ಚಪ್ಪಲಿ ಕೂಡದೆಂದು ಮನೆಯವರಂದರು. ಈ ವಿಷಯ ಚಮ್ಮಾರ ದಂಪತಿಗಳಿಗೆ ತಿಳಿದುಬಂತು. ಅವರು ಶ್ರೀಪಾದರಿಗೆ ಚರ್ಮದ ಪಾದುಕೆ ಸಮರ್ಪಿಸಿ ಧನ್ಯರಾಗಬೇಕೆಂದು ಊಹಿಸಿದರು. ತಕ್ಷಣ ಶ್ರೀಪಾದರು ಪ್ರತ್ಯಕ್ಷವಾದರು. ಶ್ರೀಗಳ ಚರಣಗಳ ಅಳತೆ ತೆಗೆದ ನಂತರ ಬಂಗಾರಮ್ಮ, ''ಮಹಾಪ್ರಭು! ನನ್ನ ಚರ್ಮ ಸುಲಿದು ತಮಗೆ ಪಾದುಕೆ ಮಾಡಿ ಕೊಡಬೇಕೆಂದಿದ್ದೆ'' ಎಂದು ಬೇಡಿಕೊಂಡಳು. ಶ್ರೀಪಾದರು, ಮಂದಹಾಸ ಮಾಡಿ ಅಂತರ್ಧಾನವಾದರು. ಮನೆಯಲ್ಲಿದ್ದ ಒಂದು ಒಳ್ಳೆಯ ಹಸು ಅನಾರೋಗ್ಯಗೊಂಡು ತೀರಿಹೋಗಲು, ಅದರ ಚರ್ಮ ಶುದ್ಧಿ ಗೊಳಿಸಿ, ಬಂಗಾರಯ್ಯ ಮತ್ತು ಬಂಗಾರಮ್ಮ ಶ್ರೀಗಳಿಗೆ ಚಪ್ಪಲಿ ತಯಾರು ಮಾಡಿಕೊಟ್ಟರು. ಅಷ್ಟರಲ್ಲೇ ವೇದಗೋಷ್ಠಿ ಪ್ರಾರಂಭವಾಗಿ, ಆದಿಶಂಕರರನ್ನು ಕುರಿತು ಚರ್ಚೆ ಪ್ರಾರಂಭವಾಯಿತು. ಆದಿಶಂಕರರು ಕಾಶೀಯಲ್ಲಿ ಮಂಡನ ಮಿಶ್ರನೊಂದಿಗೆ ವಾದ ಮಾಡಿದರು. ವಾದದಲ್ಲಿ ತನ್ನನ್ನು ಕೂಡಾ ಗೆದ್ದರೇನೆ ಪರೀಕ್ಷೆ ಪೂರ್ಣವಾಗುವುದೆಂದು ಶ್ರೀಮತಿ ಉಭಯ ಭಾರತಿದೇವಿ ನುಡಿದಳು. ಕಾಮ ಶಾಸ್ತ್ರದಲ್ಲಿ ಆಕೆ ಕೆಲ ಪ್ರಶ್ನೆ ಕೇಳಿದರು. ಆ ಶಾಸ್ತ್ರದಲ್ಲಿ ಶಂಕರರ ಜ್ಞಾನ ಶೂನ್ಯ! ಆದ್ದರಿಂದ ಆರ್ಯರು ಆಕೆಯಿಂದ 6 ಮಾಸ ಅವಧಿ ಕೇಳಿದರು. ಧರ್ಮ ವಿರುದ್ಧವಿಲ್ಲದೇ ಕಾಮ ಶಾಸ್ತ್ರದಲ್ಲಿ

ಜ್ಞಾನ ಪಡೆಯಬೇಕೆಂಬುದೇ ಅವರ ಗುರಿ. ಆಗಲೇ ಮಹಾರಾಜರೊಬ್ಬರು ತೀರಿಹೋದರು. ಶಂಕರರು ತಮಗೆ ತಿಳಿದ 'ಪರಕಾಯ ಪ್ರವೇಶ' ಜ್ಞಾನದಿಂದ ಮಹರಾಜರ ಶರೀರ ಪ್ರವೇಶಿಸಿ, ತನ್ನ ಭೌತಿಕ ಶರೀರವನ್ನು ಜಾಗ್ರತೆಯಾಗಿ ಕಾಪಾಡುತ್ತಿರಿ ಎಂದು, ಅಗತ್ಯವಿದ್ದಲ್ಲಿ ರಾಜಪ್ರಾಸಾದಕ್ಕೆ ಬಂದು ವಿಷಯ ಸಾಂಕೇತಿಕ ಭಾಷೆಯಲ್ಲಿ ತಿಳಿಸಬೇಕೆಂದೂ ತನ್ನ ಶಿಷ್ಯರಿಗೆ ಸೂಚಿಸಿದರು. ಮಹಾರಾಣಿ ರಾಜರಲ್ಲಿ ಕೆಲ ಬದಲಾವಣೆಗಳನ್ನು ಗಮನಿಸಿ, ಯಾರೋ ಮಹಾಪುರುಷರ ಆತ್ಮ ತೀರಿಹೋದ ತನ್ನ ಪತಿಯಲ್ಲಿ ಸೇರಿದೆ ಎಂದು, ಪತಿಯ ಪ್ರಾಣಮಯ ಜಗತ್ತಿನ ಚೈತನ್ಯವನ್ನು ಶವದೊಳಕ್ಕೆ ಆಕರ್ಷಿಸಿ, ಪುನಃ ಚೈತನ್ಯಗೊಂಡ ತನ್ನ ಪತಿ, ದಾಂಪತ್ಯ ಸುಖವನ್ನು ಅನುಭವಿಸುತ್ತಿರಲೂ, ಕೇವಲ ಗಮನಿಸುತ್ತಾ, ಆ ದಿವ್ಯಾತ್ಮ ತನ್ನ ಪತಿಯ ಶರೀರದಲ್ಲಿ ಅಧ್ಯಕ್ಷ ಸ್ಥಾನದಲ್ಲಿದ್ದು, ಆ ದಾಂಪತ್ಯ ಸುಖದ ಅನುಭೂತಿಗಳ ಜ್ಞಾನ ಪಡೆಯುತ್ತಿರುವನೆಂದು ಅರೆತುಕೊಂಡಳು! ಆ ದಿವ್ಯಾತ್ಮ ತನ್ನ ಪತಿಯ ಶರೀರದಲ್ಲಿ ಇರುವವರೆಗೂ ಮಾತ್ರ ತನ್ನ ಪತಿಯ ಪ್ರಾಣಮಯ ಚೈತನ್ಯ ಆ ಶರೀರದಲ್ಲಿರುವುದೆಂದು ಸಹಾ ಆಕೆ ತಿಳಿದುಕೊಂಡಳು. ಆದ್ದರಿಂದ ನಗರದಲ್ಲಿ ಯಾವುದಾದರೂ ಮರಣಹೊಂದಿದ ಶರೀರವಿದ್ದಲ್ಲಿ, ಅದನ್ನು ತಕ್ಷಣ ದಹನ ಮಾಡಬೇಕೆಂದು ಆದೇಶಿಸಿದಳು. ಶಂಕರರ ಶರೀರವನ್ನು ಪತ್ತೆ ಹಚ್ಚಿ ದಹನ ಮಾಡುತ್ತಿರಲೂ, ಶಿಷ್ಯರು ಅರಸನ ರೂಪದಲ್ಲಿದ್ದ ಶಂಕರರಿಗೆ ಅವರ ಹೇಳಿಕೆಯಂತೇ, ಸಾಂಕೇತಿಕ ಭಾಷೆಯಲ್ಲಿ ವಿಷಯ ತಿಳಿಸಿದರು. ಅದಾಗಲೇ ಉರಿಯಲ್ಲಿ ಸುಟ್ಟುಹೋಗಿದ್ದ ಕಾಲುಕೈಗಳನ್ನು ಶ್ರೀ ಲಕ್ಷ್ಮೀನರಸಿಂಹರ ಕೃಪೆಯಿಂದ ಆದಿಶಂಕರರು ಪುನಃ ಪಡೆದರು.

## ಬ್ರಾಹ್ಮಣ ಪರಿಷತ್ತಿನಲ್ಲಿ ಶ್ರೀಪಾದರ ಅದ್ಭುತ ಸಂವಾದ

ಆಗ ಶ್ರೀಪಾದರು ಪರಿಷತ್ತನ್ನು ಹೀಗೆ ಪ್ರಶ್ನಿಸಿದರು. "ಆತ್ಮ ಎಂಬುದು ಒಂದು ಶರೀರವನ್ನು ಬಿಟ್ಟು ಮತ್ತೊಂದು ಶರೀರವನ್ನು ಪ್ರವೇಶಿಸುವುದೆಂದಲ್ಲವೇ ನೀವು ನುಡಿಯುತ್ತಿರುವುದು. ಹಾಗಾದರೇ ಆತ್ಮ ಒಂದೇ ಸಮಯಕ್ಕೆ 3, 4 ಶರೀರದಲ್ಲಿರುತ್ತಾ 3, 4 ಜನುಮಗಳ ಕರ್ಮಫಲ ತೀರಿಸಿಕೊಳ್ಳಬಹುದೇ?'' ಇದು ಕ್ಲಿಷ್ಟವಾದ ವಿಷಯ. ಇಲ್ಲಿಯವರೆಗೂ ಈ ತರಹ ನಡೆದ ದಾಖಲೆ ಇಲ್ಲವೆಂದು ಪರಿಷತ್ತು ಹೇಳಿತು.

ಹಿಂದೆ ಏಕೆ ಇರಲಿಲ್ಲ? ಇತ್ತೆಂಬುದು ನಿಮಗೆ ಗೊತ್ತಿಲ್ಲ. ದೇವೇಂದ್ರನು ಶಾಪಗ್ರಸ್ತನಾಗಿ ಪಂಚ ಪಾಂಡವರಾಗಿ ಜನುಮಿಸಿದನೆಂದು, ಶಚೀದೇವಿ ದ್ರೌಪದಿಯಾಗಿ ಜನುಮ ಎತ್ತಿ ಅವರಿಗೆ ಪತ್ನಿಯಾದಳೆಂದೂ ಇದೆ. ಶಚೀಪುರಂದರರು ಭೂಮಿಯಮೇಲೆ ಹುಟ್ಟಿದರೂ ಸ್ವರ್ಗದಲ್ಲಿ ಮೂಲತತ್ತ್ವಮುಂದೊಯ್ದರು. ಶಯ್ಯಾಸುಖವನ್ನು ಮಾತ್ರ ಅರ್ಜುನನೇ ಹೊಂದಿದನು. ಧರ್ಮರಾಜರು ಆಕೆಯೊಟ್ಟಿಗೆ ಮಂತ್ರಾಂಗ ವಿಷಯ ಮಾತ್ರ ಚರ್ಚಿಸುತ್ತಿದ್ದರು. ಭೀಮನಿಗೆ ತಾಯಿಯಂತೆ ರುಚಿಕರ ಭಕ್ಷ್ಯಭೋಜ್ಯ ಮಾಡಿಕೊಡುತ್ತಿದ್ದಳು. ಮಧ್ಯಮ ಅರ್ಜುನನಿಗೆ ಶಯ್ಯಾಸುಖನಿತ್ತಳು. ನಕುಲನಿಗೆ ಲಕ್ಷ್ಮೀ ಸ್ವರೂಪಿಣಿಯಾಗಿ ಕಾಣುತ್ತಿದ್ದಳು. ಸಹದೇವನೊಟ್ಟಿಗೆ ಭೂದೇವಿಗಿಂತ ಅಧಿಕ ಸಹನೆಯಿಂದ ಪ್ರವರ್ತಿಸುತ್ತಿದ್ದಳು. ಏಕೆಂದರೇ ಸಹದೇವನು ಭೂತ ಭವಿಷ್ಯತ್ ವರ್ತಮಾನ ಚೆನ್ನಾಗಿ ಅರಿತವನು ಮತ್ತು ನಡೆಯಬೇಕಾದ ಘಟನೆಗಳು ಬೇಗ ಬೇಗ ನಡೆದು, ಕ್ಷೇತ್ರ ಸಂಗ್ರಾಮ ತ್ವರಿತವಾಗಿ ಸಮಾಪ್ತವಾಗಬೇಕೆಂಬುವುದೇ ಅವನ ಬಯಕೆ. ದೇವತಾ ಧರ್ಮಗಳು, ಮನುಷ್ಯ ಧರ್ಮಗಳಿಗಿಂತ ಬೇರಾಗಿರುವುದು. ಪ್ರಾಣಿ ಧರ್ಮಗಳು ಮತ್ತಷ್ಟು ಬೇರಾಗಿರುವವು. ಇವೆಲ್ಲವನ್ನೂ ಸೇರಿಸಿ ಮಾತಾಡಬಾರದು'' ಎಂದು ಶ್ರೀಪಾದರು ನುಡಿದರು. ಆಗ ನಾನು,

"ಪುರಾಣಗಳಲ್ಲಿ ಎಷ್ಟೋ ವಿಚಿತ್ರಗಳು ನಡೆದಿರಬಹುದು. ಈ ಕಾಲದಲ್ಲಿ ಆ ರೀತಿ ನಡೆದಿಲ್ಲವಲ್ಲವೇ?'' ಎಂದೆನು. ಶ್ರೀಪಾದರು ನನ್ನನ್ನು ನೇರವಾಗಿ ನೋಡುತ್ತಾ "ನೀನು ಮುವ್ವರು ನಾರಿಯರನ್ನು ವಿವಾಹವಾದೆ. ಮುವ್ವರೂ ಮರಣಿಸಿದರು. ಮುವ್ವರಿಗೂ 3 ಆತ್ಮ ಉಂಟೆ, ಇಲ್ಲ ಒಂದೇ ಆತ್ಮವೇ? ಗಂಡಸು ಮುವ್ವರು ಸ್ತ್ರೀಯರನ್ನು ಮದುವೆ ಮಾಡಿಕೊಳ್ಳುವುದು ಧರ್ಮಸಮ್ಮತವಾದಾಗ ಒಂದು ಮಹಿಳೆ ಮುವ್ವರು ಪುರುಷರನ್ನು ವಿವಾಹವಾಗುವುದು ಧರ್ಮಸಮ್ಮತವೇ? ಇಷ್ಟಕ್ಕೂ ಆತ್ಮ ಅಂದರೇ ಏನು? ದಾಂಪತ್ಯ ಧರ್ಮವೆಂದರೇ ಏನು?'' ಎಂದು ಪ್ರಶ್ನಿಸಿದರು. ಆಗ ನಾನು, ಪುರುಷರು ಎಷ್ಟು ಜನರನ್ನಾದರೂ ವಿವಾಹವಾಗಬಹುದು, ಆದರೇ ಮಹಿಳೆಗೆ ಮಾತ್ರ ಅಂತಹ ಹಕ್ಕಿಲ್ಲವೆಂದು ತಟ್ಟಿ ಹೇಳಿದೆನು.

ಆಗ ಶ್ರೀಪಾದರು, "ಓಹೋ! ನೀನು ಜಗತ್ ನಿಯಮಕನಿಗಿಂತ ದೊಡ್ಡವನೇ? ಮಂಡೋದರಿ ಮಹಾಪತಿವ್ರತೆ. ಮುವ್ವರ ಪತ್ನಿಯಾಗಿದ್ದಳಲ್ಲವೇ? ಆಕೆ ವಾಲಿಗೆ ಪತ್ನಿಯಾಗಿದ್ದಾಗ ಆಕೆಯ ಶರೀರಾಣುಗಳು ಬೇರೆ, ರಾವಣನ ಪತ್ನಿಯಾಗಿದ್ದಾಗಿನ ಶರೀರ ಅಣುವುಗಳು ಬೇರೇ. ಆತ್ಮಕ್ಕೆ ಆಕಾರವಿಲ್ಲದ್ದರಿಂದಲೂ ಯಾವುದರ ಸಂಗಡವೂ ಸೇರಿದ್ದಲ್ಲವಾದ್ದರಿಂದಲೂ ಅದು ನಿತ್ಯಯುಕ್ತವಾದದ್ದು ಮತ್ತು ಶುದ್ಧವಾದದ್ದು, ಅತ್ಯಂತ ಪವಿತ್ರವಾದದ್ದೂ ಸಹ. ತಮೋಗುಣವುಳ್ಳ ವಾಲಿಗೆ ಪತ್ನಿಯಾಗಿದ್ದಾಗ, ಅದಕ್ಕನುಗುಣವಾಗಿಯೇ ವರ್ತಿಸಿದಳು. ರಜೋಗುಣ ಪ್ರಧಾನವಾಗಿದ್ದ ರಾವಣನ ಪತ್ನಿಯಾಗಿದ್ದಾಗ ಅದಕ್ಕೆ ತೂಗುವಂತೆ ವರ್ತಿಸಿದಳು! ವಿಭೀಷಣನ ಪತ್ನಿಯಾಗಿ ಸತ್ತ್ವಗುಣ ತುಂಬಿದಂತೆ ತನ್ನ ಬಾಧ್ಯತೆ ನೆರವೇರಿಸಿದಳಲ್ಲವೇ?'' ಎಂದು ವ್ಯಾಖ್ಯಾನಿಸಿದರು.

ನಾನು ಉತ್ತರಿಸಲೂ ಸೋತೆನು. ಆದರೂ ಆಲೋಚಿಸಿ ಹೀಗೆಂದೆನು. "ಶ್ರೀಪಾದ! ನೀನು ಹೇಳುವುದು ಒಪ್ಪಿದ್ದಲ್ಲಿ, ಒಬ್ಬ ಮಹಿಳೆ ಅನೇಕ ಪತಿಯರನ್ನು ಹೊಂದುವುದೂ ಒಪ್ಪಲೇಬೇಕು!'' ಆಗ ಶ್ರೀಪಾದರು, "ಇದು ಕಲಿಯುಗ, ಅವೆಷ್ಟೋ ಜಾತಿಗಳು ಹುಟ್ಟಿಕೊಳ್ಳುತ್ತಿವೆ. ಪಶು ಪಕ್ಷಿಗಳು, ವೃಕ್ಷಗಳು ಮತ್ತು ಕ್ರಿಮಿಕೀಟಗಳು ಸಹಾ ಮಾನವ ಜನುಮ ಎತ್ತುತ್ತಿವೆ. ಅವುಗಳು ತಮ್ಮ ಸ್ವಭಾವ ಅನುಗುಣವಾಗಿ ವಿವಿಧ ತರಹದ ಬಾಂಧವ್ಯ ಹೊಂದಿವೆ. ಧರ್ಮವಿರುದ್ಧವಾದ ಬಾಂಧವ್ಯ ಬೆಳೆದಾಗ, ಅವಾಂತರ ಕುಲಗಳು ಉತ್ಪನ್ನವಾಗುತ್ತಿವೆ. ಕಲಿ ಯುಗಾಂತಕ್ಕೆ ಇವೆಲ್ಲಾ ನಾಶವಾಗದೇ ಇರಲಾರವು. ಈ ಅವಾಂತರ ಕುಲಗಳ ಉದ್ಭವಕ್ಕೆ ಅಸುರ ಶಕ್ತಿಯ ಕಾರಣವೂ ಇದೆ. ಆದ್ದರಿಂದಲೇ ಅಸುರ ನಾಶ ಆಗಬೇಕಾಗಿದೆ. ಒಮ್ಮೆ ಅಸುರ ಸಂಹಾರವಾದರೇ ಪುನಃ ಅವನು ಜನುಮ ಪಡೆಯಲಾರ. ಆದರೇ, ಒಬ್ಬ ಅಸುರನ ಸ್ಥಾನದಲ್ಲಿ 10 ಅಸುರರು ಜನುಮ ಪಡೆಯುತ್ತಿದ್ದಾರೆ. ಧರ್ಮಬದ್ಧವಾದ ಸಂಬಂಧಗಳು ಮಾತ್ರವೇ ನಿಲ್ಲುವುದಾದ್ದರಿಂದ, ಎಲ್ಲರೂ ತಪ್ಪದೇ ಕುಲಗೋತ್ರಗಳು ವರ್ಣಾಶ್ರಮಗಳ ನಿಯಮ ಪಾಲಿಸಬೇಕು

ಕೆಲವು ದಿವ್ಯಾತ್ಮಗಳು ಸಹಾ ಜನಿಸುತ್ತಿರುವವು. ಅವಕ್ಕೆ ಒಂದೇ ಒಂದು ಆತ್ಮ ಇರುವುದು. ಪುರುಷ ರೂಪದಲ್ಲಿ ಆತ್ಮ ಆವರ್ಭಿಸಿದರೂ, ಸ್ತ್ರೀ ರೂಪದಲ್ಲಿ ಆ ಆತ್ಮಕ್ಕೆ ಶಕ್ತಿ ಆವಿರ್ಭಿಸುವುದು. ಅವರದ್ದು ದಿವ್ಯ ದಾಂಪತ್ಯವೆನ್ನಲಾಗುವುದು. ಇಂತಹ ದಿವ್ಯಾತ್ಮಗಳು, ಸೃಷ್ಟಿ ಆದಿಯಿಂದ ಇವೆ. ಸೃಷ್ಟಿ ಅಂತ್ಯಕ್ಕೂ ಇರುವವು. ಅವು ಪರಾಶಕ್ತಿ ಪರಬ್ರಹ್ಮರ ಅದ್ವಿತೀಯ ಸ್ವರೂಪದಲ್ಲಿ ಸಾಯುಜ್ಯ ಸ್ಥಿತಿಯಲ್ಲಿ ಇರುವವು.

ನೀನು ವೇದಾಂತ ಶರ್ಮ ಎಂಬ ಬ್ರಾಹ್ಮಣನಾಗಿಯು, ಬಂಗಾರಯ್ಯ ಎಂಬ ಚರ್ಮಕಾರನಾಗಿಯೂ ಒಂದೇ ಸಮಯ ಜನ್ಮಿಸಿದೆ. ನಿನ್ನ ಸ್ತ್ರೀ ಶಕ್ತಿ ಮುವ್ವರು ಪತ್ನಿಯರಾಗಿಯು, ನಿನ್ನ ಮನೆಯಲ್ಲಿ ಇತ್ತೀಚೆಗೆ ಮರಣಿಸಿದ ಹಸುವಾಗಿಯು, ಬಂಗಾರಯ್ಯ

ಪತ್ನಿಯಾದ ಬಂಗಾರಮ್ಮನಾಗಿಯು, ಒಂದೇ ಸಮಯದಲ್ಲಿ ಜನ್ಮಿಸಿದೆ. ನಿನ್ನ, ತೀರಿಹೋದ ಪತ್ನಿಯರ ಚೈತನ್ಯ, ಗೋಮಾತೆಯ ಚೈತನ್ಯ, ಪ್ರಸ್ತುತ ಬಂಗಾರಮ್ಮ ಎಂಬ ಮಾದಿಗ ವನಿತೆಯ ಆತ್ಮದಲ್ಲಿ ವಿಲೀನವಾಗಿದೆ. ಚೈತನ್ಯವು, ಎಲ್ಲಿಂದ ಉದ್ಭವಿಸಿತೋ, ಅಲ್ಲಿಗೆ, ಮೂಲ ಚೈತನ್ಯದೊಳಗೆ ವಿಲೀನವಾಗಬೇಕು. ಗರ್ಭಿತವಾದ ಸೃಷ್ಟಿ ರಹಸ್ಯವನ್ನು ಸಪ್ತರ್ಷಿಗಳೇ ತಿಳಿಯಲಾರರು! ಬಂಗಾರಮ್ಮ ಶರೀರ, ಬಂಗಾರಯ್ಯನಿಗೆ ಧಾರೆ ಇಡಲಾದ ಕಾರಣ, ಧರ್ಮವಿರುದ್ಧವಾಗದೇ, ಆಕೆಯ ಜೊತೆ ಸಂಸಾರ ನಡೆಸು. ನೀನು ಆಕೆಯಿಂದ ಶರೀರ ಸುಖ ಎಂದಿಗೂ ಪಡೆಯಬೇಡ. ಧರ್ಮ ಸ್ಥಾನದಲ್ಲಿ ಕುಳಿತ ನಾನು, ಈ ನಿರ್ಣಯ ಮಾಡಿರುವೆನು. ಪ್ರಕೃತಿಯಲ್ಲಿದ್ದಾಗ, ಪ್ರಕೃತಿ ಧರ್ಮ, ಗೌರವವನ್ನು ತಪ್ಪದೇ ಪಾಲಿಸಬೇಕು. ಬಂಗಾರಮ್ಮ ತನ್ನ ಚರ್ಮ ಸುಲಿದು, ನನಗೆ ಚಪ್ಪಲಿ ಮಾಡಿಸುವೆನೆಂದಳು, ನಾನು ಒಪ್ಪಿದೆನು. ಬಂಗಾರಮ್ಮ ಅರಿಯದೇ ಒಂದು ಗೋವಾಗಿ ಜನ್ಮಿಸಿದ್ದಳು. ತಿಳಿಯದೇ ನಿನ್ನ ಮುವ್ವರ ಪತ್ನಿಯರಾಗಿ ಜನ್ಮಿಸಿದ್ದಳು! ಚೈತನ್ಯ, 3, 4 ಶರೀರಗಳಲ್ಲಿ ವಿಭಜನೆ ಹೊಂದಿದ್ದಾಗ, ಆ ಪ್ರತ್ಯೇಕ ಶರೀರದಲ್ಲಿ ಚೈತನ್ಯವನ್ನೇ ತಾನೆಂದು ಭಾವಿಸುವುದು. ಅಲ್ಲಿನ ಏಕತ್ವವನ್ನು ಅರಿಯದು. 'ಕಲೇ ಪಂಚ ಸಹಸ್ರಾಣಿ ಜಾಯತೇ ವರ್ಣಸಂಕರಃ'ದ ಅರ್ಥವೆಂದರೇ, ಕುಲ ಸಾಂಕರ್ಯ ಹೇಳಲಿಲ್ಲ. ವರ್ಣ ಸಾಂಕರ್ಯ ಹೇಳಲಾಗಿದೆ. ಕುಲ ಸಾಂಕರ್ಯ ಹೊಂದಿದಾಗ, ನೀಚ ಜನ್ಮ ಎತ್ತಬೇಕಾಗುತ್ತೆ. ವರ್ಣ ಸಾಂಕರ್ಯ ಹೊಂದಿದಾಗ, ನೂತನ ಶಕ್ತಿಯುತ ಹೊಸ ಜಾತಿ ಒಂದು ಉದ್ಭವಿಸುತ್ತಿರುವುದು. ಆ ಹೊಸದಾದ ಮಾನವ ಜಾತಿ, ಪರಿಣಾಮ ಕ್ರಮದಲ್ಲಿ ದೈವತ್ವ ಹೊಂದುವುದು. ಅಂತಹ ಜಾತಿ ಉದ್ಭವಿಸಬೇಕಾಗಿದೆ.

ಈ ಬ್ರಾಹ್ಮಣ ಪರಿಷತ್ತಿನ ಒಳ ಉದ್ದೇಶ್ಯ ನನಗೆ ತಿಳಿದಿದೆ! ನಮ್ಮ ಅಜ್ಜನನ್ನು, ನಮ್ಮ ತಂದೆಯನ್ನು ಕುಲ ಬಹಿಷ್ಕರನನ್ನಾಗಿ ಮಾಡುವ ದುಷ್ಟಚಿಂತನೆ ನಿಮ್ಮ ಮನಸ್ಸಿನಲ್ಲಿ ಅಡಗಿದೆ. ಆದ್ದರಿಂದ ನಾನು ವೇದಾಂತ ಶರ್ಮನೆಂಬ ನಿನ್ನನ್ನು ಕುಲ ಬಹಿಷ್ಕೃತನನ್ನಾಗಿ ಮಾಡುತ್ತಿದ್ದೇನೆ. ಇಂದಿನಿಂದ ನೀನು ಬಂಗಾರಯ್ಯ ಎಂದು ಕರೆಯಲಾಗುವೆ'' ಎಂದು ಆಜ್ಞಾಪಿಸಿದರು.

ಪರಿಷತ್ತು ಆಶ್ಚರ್ಯಗೊಂಡಿತು. ಎಲ್ಲರೂ ನೋಡುತ್ತಿರಲೂ ಒಂದು ಜ್ಯೋತಿರೂಪ ನನ್ನಲ್ಲಿ ಲೀನವಾಯಿತು! ಆಗ ಶ್ರೀಪಾದರು, ''ನಿಮ್ಮ ಕಣ್ಮುಂದೆಯೇ ಬಂಗಾರಯ್ಯ ಆತ್ಮಜ್ಯೋತಿ ವೇದಾಂತ ಶರ್ಮರಲ್ಲಿ ವಿಲೀನಗೊಂಡಿತು. ಈತ ಬ್ರಾಹ್ಮಣನಾಗುವನೋ ಅಥವಾ ಚಂಡಾಲನೋ ನೀವೇ ನಿರ್ಧರಿಸಿ. ನಮ್ಮನ್ನು ಕುಲದಿಂದ ಹೊರಗೆ ಹಾಕಿ, ಶಂಕರಾಚಾರ್ಯರ ಮೆಚ್ಚುಗೆ ಪಡೆಯಲೂ ಪ್ರಯತ್ನಿಸಿದಿರಿ. ಶಂಕರಾಚಾರ್ಯರು ನನ್ನನ್ನೇನೂ ಮಾಡಲಾರ. ನಿಮ್ಮ ಕಣ್ಣು ಮುಂದೆಯೇ ಹುಟ್ಟಿ ಬೆಳೆದು, ತಾತನ ಹತ್ತಿರವೇ ಆಗಲಿ ತಂದೆ ಬಳಿಯೇ ಆಗಲಿ ವೇದ ಸ್ವಲ್ಪವೂ ಅಭ್ಯಸಿಸದೇ ವೇದವನ್ನು ಪೂರ್ಣವಾಗಿ ಹೇಳುತ್ತಿದ್ದೇನೆ! ಒಂದೇ ಕಾಲಕ್ಕೆ ಅನೇಕ ಕಡೆ ದರ್ಶನ ಕೊಡುತ್ತಿದ್ದೇನೆ. ಶಂಕರಾಚಾರ್ಯರು ಎದುರಾದರೂ ನನಗೆ ಚಿಂತೆಯಿಲ್ಲ. ಅವರು ನಿತ್ಯವೂ ಆರಾಧಿಸುವ ಶ್ರೀ ಶಾರದಾ ಚಂದ್ರಮೌಳೀಶ್ವರನಾಗಿ ದರ್ಶನ ಕೊಡಬಲ್ಲೆನು. ಆಗ ಅವರು ನನ್ನನ್ನು ದೈವನಾಗಿ ಅಂಗೀಕರಿಸಲೇಬೇಕು. ಆಗ ಅವರು ತೆಗೆದುಕೊಳ್ಳುವ ನಿರ್ಣಯ ನಿಮಗೆ ಹಿತಕರವಾಗಿರಲಾರದು. ವೈಶ್ಯ ಮತ್ತು ಕ್ಷತ್ರಿಯ ಪರಿಷತ್ತುಗಳು ನಿಮ್ಮ ನಿರ್ಣಯಗಳಿಗೆ ತಲೆ ಬಗ್ಗಿಸಲಾರವು. ಪೌರೋಹಿತ್ಯ, ಕರ್ಮಕಾಂಡಗಳು, ಸಂಭಾವನೆಗಳನ್ನು ನಿಲ್ಲಿಸಿದರೆ ನೀವೆಲ್ಲಾ ಮನೆ ಮಕ್ಕಳೊಂದಿಗೆ ಪರದಾಡುವಂತೆ ಆಗುವುದು! ನನ್ನೊಟ್ಟಿಗೆ ವ್ಯಾಜ್ಯಕ್ಕೆ ನಿಂತರೇ, ಸರ್ವ ನಾಶವನ್ನು ಬಯಿಸಿ ಪಡೆಯಬೇಕಾಗಿರುತ್ತೆ. ನಾನು ನಿಮಗೆಲ್ಲಾ ಚತುರಾಶ್ರಮ ಧರ್ಮ ನಿರ್ವಹಿಸಬೇಕಾಗಿ ಹೇಳುತ್ತಿದ್ದೇನೆ. ಅಷ್ಟಾದಶ ವರ್ಣದವರೆಲ್ಲಾ ಸುಖಸಂತೋಷದಿಂದ ಜೀವಿಸಬೇಕೆಂದು ನುಡಿಯುತ್ತಿದ್ದೇನೆ.

ನೀವು ಧರ್ಮಕರ್ಮಗಳನ್ನು ಸಮರ್ಥರಾಗಿ ಪಾಲಿಸಿ, ಧರ್ಮಸಂಸ್ಥಾಪನೆಗೆ ಕೈಬಲ ನೀಡಿ. ಹಾಗಿಲ್ಲದಿದ್ದಲ್ಲಿ ಕಷ್ಟನಷ್ಟಗಳಿಗೆ ಒಳಗಾಗುವರು. ನಾನು ಪ್ರಶಾಂತವಾಗೇ ಇರುವೆನು. ಆದರೇ ನೀವೇ ದಿಕ್ಕುತೋಚದ ಪರಿಸ್ಥಿತಿ ಎದುರಿಸಬೇಕಾಗುತ್ತೆ. ಪ್ರಕೃತಿಯಲ್ಲಿ ಪರಿಣಾಮಗಳು ನಡೆಯುವಾಗ ಎರಡೇ ಪದ್ಧತಿಗಳಿರುವವು. ಒಂದು, ಸರಿ ಮಾಡುವ ಪದ್ಧತಿ, ಎರಡು, ಸರಿ ಮಾಡಲ್ಪಡುವ ಪದ್ಧತಿ. ಸರಿಮಾಡಲ್ಪಡಲೂ ಜಾಸ್ತಿ ಸಮಯ ಕೊಡಲಾಗುವುದು. ನೀವು ಸರಿಪಡಿಸಲ್ಪಡಲೂ ಒಪ್ಪಿದರೆ, ವಿನಾಶವನ್ನು ಆಹ್ವಾನಿಸದಂತೆಯೇ ಆಗುವುದು. ಆದರೂ, ವಿನಾಶವನ್ನು ಮಾಡಿ ಆದರೂ ಧರ್ಮವನ್ನು ಸ್ಥಾಪಿಸುವೆನು'' ಎಂದು ದೃಢವಾಗಿ ನುಡಿದರು.

ನಾನು ವಿಧಿಯಿಲ್ಲದ ಪರಿಸ್ಥಿತಿಯಲ್ಲಿ ಬಂಗಾರಮ್ಮನನ್ನು ಕರೆದುಕೊಂಡು ಗ್ರಾಮ ಗ್ರಾಮಗಳನ್ನು ಸುತ್ತಿ ಇಲ್ಲಿ ಬಂದೆನು. ಈ ಆಶ್ರಮದೊಳು ಮಾತಂಗಿ ದೇವಿಯನ್ನು ಪ್ರತಿಷ್ಠಿಸಿಕೊಂಡು ಜೀವಿಸುತ್ತಿದ್ದೆವು.

ಶ್ರೀಪಾದರು ಈ ಮಾರ್ಗದಲ್ಲಿ ಪಯಣಿಸುತ್ತಾ, ಕುರಂಗಡ್ಡೆಯನ್ನು ತಲುಪುವ ಮುನ್ನ ನಮ್ಮ ಆಶ್ರಮಕ್ಕೆ ಬಂದು, ನಮ್ಮನ್ನಾಶೀರ್ವದಿಸಿ, ''ನಿನ್ನ ಶರೀರ ನಶಿಸಿದ ಮೇಲೆ, ಋಣಾನುಬಂಧದಿಂದ ಬ್ರಾಹ್ಮಣ ಜನ್ಮ ಹೊಂದುವೆ. ಬಂಗಾರಮ್ಮ ತನ್ನ ಕರ್ಮಫಲದಿಂದ ಶೂದ್ರ ಸ್ತ್ರೀ ಆಗಿ ಹುಟ್ಟುವಳು. ನೀವಿಬ್ಬರೂ ವಿವಾಹವಾಗುವಿರು. ನಿಮಗೆ ಆಗುವ ಸಂತಾನ, ಕುರುಂಗಡ್ಡೆಯಲ್ಲಿ ನನ್ನನ್ನು ಪೂಜಿಸುವರು. ನಿಮಗೆ ಸುಖವಾಗಲಿ'' ಎಂದು ಆಶೀರ್ವದಿಸಿದರು.

''ಸ್ವಾಮಿ! ಇದು ನಮ್ಮ ವೃತ್ತಾಂತ'' ಎಂದು, ಶ್ರೀಪಾದರ ಸಂಗಡ ಅವರಿಗಿರುವ ಅನುಬಂಧವನ್ನು ನಮಗೆ ವಿವರಿಸಿ, ''ತಾವು ಈ ಮಾರ್ಗದಲ್ಲಿ ಪಯಣಿಸುವುರೆಂದೂ, ನಿಮ್ಮ ಬಳಿ ಶ್ರೀಗಳ ಕಾಲ್ಗೆಜ್ಜೆ ಇರುವುದೆಂದು, ಅದನ್ನು ಪಡೆದು, ಚರ್ಮ ಪಾದುಕೆಗಳನ್ನು ಶಂಕರ ಭಟ್ಟ ಮತ್ತು ಧರ್ಮಗುಪ್ತರಿಗೆ ಕೊಡಬೇಕೆ''ಂದು ಆದೇಶಿಸಿರುವರು.

ನಾವು ಆರಾಧಿಸುವುದು, ಮಾತಂಗ ಮುನಿ ಕನ್ಯೆಯಾದ ಮಾತಂಗಿ ದೇವಿಯನ್ನು. ಈ ತಾಯಿಯನ್ನಾರಾಧಿಸಿದರೇ ದಾಂಪತ್ಯ ಸೌಖ್ಯ ಅನಂತವಾಗಿರುವುದು. ರಾಜಮಾತಂಗಿ, ಕರ್ಣಮಾತಂಗಿ ಎಂದೂ ಕರೆಯುವರು. ಒಮ್ಮೆ ಶ್ರೀಪಾದರು ನಮ್ಮ ಆಶ್ರಮಕ್ಕೆ ಬಂದು ಎಲ್ಲರಿಗೂ ದರ್ಶನವಿತ್ತರು. ಆಗ ಬಂಗಾರಮ್ಮ ಹಾಲನ್ನು ಬಿಸಿ ಮಾಡುತ್ತಿದ್ದಳು. ಈ ಚರ್ಮ ಪಾದುಕೆಗೆ ಮೂಲವಾದ ಗೋಮಾತೆ, ತಲೆಯನ್ನಾಡಿಸುತ್ತಾ ನಮ್ಮ ಮುಂದೆಯೇ ನಡೆದುಹೋದ ಹಾಗೆ ದರ್ಶನಕೊಟ್ಟಿತು! ಶ್ರೀಪಾದರು ನಮ್ಮಿಂದ ಹಾಲನ್ನು ಸ್ವೀಕರಿಸಿದರು. **ನಾವು ಆರಾಧಿಸುವ ಮಾತಂಗಿ ದೇವಿ ವಿಗ್ರಹ, ತಮ್ಮ ಹೆಸರಿನಲ್ಲಿ ಬರಲಿರುವ ಮಹಾಸಂಸ್ಥಾನದಲ್ಲಿನ ಔದುಂಬರ ವೃಕ್ಷದ ಕೆಳಭಾಗ, ಬಹಳ ಆಳದಲ್ಲಿ ಇಡಲಾಗುವುದೆಂದು, ಅಲ್ಲಿ ಅದು ಅನೇಕ ಸಿದ್ಧ ಪುರುಷರಿಂದ ಪೂಜಿಸಲ್ಪಡುವುದೆಂದೂ ತಿಳಿಸಿದರು.** ಬಂಗಾರಮ್ಮನನ್ನು ಕರೆದು, ''ತಾಯಿ! ನಿನ್ನ ಪತಿ ಬಲು ಯೋಗ್ಯನು, ಮುಂದಿನ ಜನುಮದಲ್ಲಿ ಈತನೊಟ್ಟಿಗೆ ಸರ್ವಸುಖವನ್ನು ಅನುಭವಿಸು. ನಿನಗಾಗಿ ಒಂದು ಬಂಗಾರದ ಬೊಟ್ಟು ಮತ್ತು ಶುಭಪ್ರದವಾದ ಮಂಗಳಸೂತ್ರ ತಯಾರು ಮಾಡಿಟ್ಟಿದ್ದೇನೆ. ಹಿರಣ್ಯ ಲೋಕದಲ್ಲಿ ಭದ್ರವಾಗಿದೆ. ಮುಂದಿನ ಜನುಮದಲ್ಲಿ ನಾನೇ ಖುದ್ದಾಗಿ ಅವನ್ನು ನಿನಗೆ ಕೊಟ್ಟು, ನಿಮ್ಮ ವಿವಾಹ ನೆರವೇರಿಸುವೆ'' ಎಂದು ವಿವರಿಸಿದರು.

''ಅಣ್ಣ ತಮ್ಮಂದಿರೇ! ತಾವೆಲ್ಲಾ ನಮ್ಮ ಕಥೆ ಕೇಳಿದರಲ್ಲವೇ? **ಸದಾ ಸಿದ್ಧ ಮಂಗಳಸ್ತೋತ್ರ ಪಠಿಸುತ್ತಿರಿ. ಮಹಾಪುರುಷರ ಅನುಗ್ರಹ ತಪ್ಪದೇ ಲಭಿಸುವುದು. ಸಿದ್ಧರು, ಮಹಾಸಿದ್ಧರು, ಮುಂತಾದವರು ಶ್ರೀಪಾದರಿಗೆ ಕೈಯ್ಯಿಗಳು ಮತ್ತು ಕಾಲುಗಳಿದ್ದಂತೆ.**

ಅವರ ಮೂಲಕ ತಮ್ಮ ಸಂಕಲ್ಪಗಳನ್ನು ಪೂರೈಸುವರು. ಒಮ್ಮೆ ಶ್ರೀಗಳು ರಾಜಮಾತಂಗೀ ದೇವಿ ರೂಪದಲ್ಲಿ ದರ್ಶನವಿತ್ತರು. ಸಮಸ್ತ ಸೃಷ್ಟಿ ಮತ್ತು ಅದರ ರಹಸ್ಯ ಅವರ ಕೈಯಲ್ಲಿವೆ. ನೀವೆಲ್ಲಾ ಅವರನ್ನು ಸದಾ ಸ್ಮರಿಸಿ, ಧ್ಯಾನಿಸಿ ಮತ್ತು ಪೂಜಿಸಿ. ಸರ್ವಸಿದ್ಧಿಗಳೂ ಅವರೇ! ಹೆತ್ತ ತಾಯಿಯಂತೆ ಕಾಪಾಡುವರು. ಭಕ್ತರ ಬಳಿ ಅವರ ಪ್ರೀತಿ, ಕೋಟಿ ತಾಯಂದಿರ ಪ್ರೀತಿಗೂ ಮೀರಿ ಇರುವುದು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 37

# ಛಿನ್ನಮಸ್ತಾದೇವಿ ವರ್ಣನೆ

ನಾವು ಬಂಗಾರಯ್ಯ ಮತ್ತು ಬಂಗಾರಮ್ಮರಿಂದ ಅಪ್ಪಣೆ ಪಡೆದು, ಅವರಿತ್ತ ಚರ್ಮ ಪಾದುಕೆಗಳನ್ನು ಹೊತ್ತು ಮುಂದಿನ ಪ್ರಯಾಣದಲ್ಲಿದ್ದೆವು. ಒಂದು ಅರಣ್ಯದಲ್ಲಿದ್ದು, ಒಂದು ಮರದ ನೆರಳಲ್ಲಿ ತಂಗಿದ್ದೆವು. ಅಲ್ಲಿಗೆ ಕೆಲವು ಯೋಗಿನಿಯರ ಗಣಗಳು ಬಂದವು. ನಮ್ಮನ್ನು ಕಂಡು, ''ಇದು ಗಂಡ್ರಕತ್ತೆ ಕಾಲ, ತಾವು ತಿರುಗಾಡುವ ಸ್ಥಳವಲ್ಲ. ನಾವು ಛಿನ್ನಮಸ್ತಾದೇವಿ ಆರಾಧಕರು. ಈ ತಾಯಿ ಬಹಳ ನಿಷ್ಠೆಯಲ್ಲಿರುವಂತವಳು. ಪುರುಷರಿಗೆ ಈ ಆಲಯ ನಿಷಿದ್ಧ! ಅಷ್ಟಲ್ಲದೇ, ಇದು ದೇವಭೂಮಿ ಆಗಿರುವುದರಿಂದ, ಇಲ್ಲಿಗೆ ಬಂದವರು ಯಾರೂ ಪ್ರಾಣಸಹಿತ ಹಿಂತಿರುಗಲಾರರು'' ಎಂದು ಹೇಳಲೂ, ನಮ್ಮ ಪ್ರಾಣಗಳು ಗಾಳಿಯಲ್ಲಿ ಸೇರಿದಂತಿತ್ತು! ಆಗ ಮಹಾ ತೇಜಸ್ಸುಳ್ಳ ಓರ್ವ ಯೋಗಿನಿ ಮಾತೆ ಅಲ್ಲಿಗೆ ಬಂದರು. ಕಣ್ಣುಗಳು ಕೆಂಪು ಕೆಂಡದಂತಿದ್ದವು! ಆಕೆಯ ಜತೆಗೆ ಬಂದ ಇತರ ಯೋಗಿನೀ ಗಣಗಳು ಒಂದು ಬುತ್ತಿಯಲ್ಲಿ ಛಿನ್ನಮಾಸ್ತದೇವಿಯನ್ನು ಅಲಂಕರಿಸಿ ತಂದರು. ಆಗ ಆ ಯೋಗಿನಿ ಮಾತೆ, ''ಬಂದವರು ಹೇಗೋ ಬಂದುಬಿಟ್ಟಿದ್ದಾರೆ, ಇವರಿಗೆ ಬಟ್ಟೆ (ಸೀರೆ) ರವಿಕೆಗಳನ್ನು ಕೊಡಿ ಎಂದು ಬಂದ ಆ ಯೋಗಿನೀಮಣಿಗಳಿಗೆ ಹೇಳಿದಳು. ಅವು ನಮಗೆ ಕೊಡಲಾಯಿತು! ನಾವು ಉಟ್ಟಿದ್ದ ಉಡುಪುಗಳನ್ನು ಉರಿಯುತ್ತಿರುವ ಜ್ವಾಲೆಗೆ ಹಾಕಿದರು.

ನಾವು ಆ ಸೀರೆ ರವಿಕೆ ಧರಿಸಿದ ಕೂಡಲೇ ನಮ್ಮ ಶರೀರದಲ್ಲಿ ಕೆಲವು ಬದಲಾವಣೆ ಕಂಡುಬಂದಿತು! ನಮ್ಮಗಿದ್ದ ಪುರುಷ ಚಿಹ್ನೆಗಳು ಮಾಯವಾದವು. ಎತ್ತರವಾದ ಮೊಲೆಗಳು ಬಂದವು. ಶರೀರದ ಮರ್ಮ ಅವಯವಗಳೂ ಬಂದ್ದಿದವು. ಪೂರ್ಣ ಸ್ತ್ರೀ ಶರೀರವಾಗಿ ಬದಲಾವಣೆ ಹೊಂದಿತು! ನಮ್ಮ ನಡವಳಿಕೆ ಸಹಾ ಸ್ತ್ರೀ ಸ್ವಭಾವವೇ ಆಯಿತು! ಸ್ವರ ಸಹಾ ಸ್ತ್ರೀಯದೇ! ನಮಗೆ ಆ ಯೋಗಿನೀಮಣಿಯರು, ಶಂಕರಮ್ಮ ಮತ್ತು ಧರ್ಮಮ್ಮ ಎಂದೂ ನಾಮಕರಣ ಮಾಡಿದರು. ತಿನ್ನಲೂ ಮಾಂಸ, ಕುಡಿಯಲೂ ಮದ್ಯವೂ ನಮಗೆ ಕೊಡಲಾಯಿತು.

### ಛಿನ್ನಮಸ್ತಾದೇವಿ ಉಪಾಸನೆ

ಹಗಲು ಹೊತ್ತು ಮನುಷ್ಯನಂತೆ, ರಾತ್ರಿಯ ವೇಳೆ ದೊಡ್ಡ ಹುಲಿಯಂತೆ ಸಂಚರಿಸುವ 'ಕಾಡುಹುಲಿ'ಯ ಬಗ್ಗೆ ಕೇಳಿದ್ದೆವೇ ಹೊರತು ಈ ತರಹದ ದೇವತಾ ಪೂಜೆಗಳು ಇವೆಯೆಂದಾಗಲಿ, ಯೋಗಿನೀ ಗಣಗಳು ತಮ್ಮ ಸಂಕಲ್ಪದಿಂದಲೇ ಪುರುಷರನ್ನು ಸ್ತ್ರೀಯರನ್ನಾಗಿ ಬದಲಾಯಿಸಬಲ್ಲರೆಂದಾಗಲೀ ನಾವು ಕನಸಿನಲ್ಲೂ ಊಹಿಸಲಾದೆವು. ದೊಡ್ಡ ದೊಡ್ಡ ಜ್ಯೋತಿಗಳು ಹಚ್ಚಿಸಲಾದೆವು. ಭಯಂಕರ ನೃತ್ಯಗಳು ಮಾಡಲಾಗುತ್ತಿತ್ತು. ಆಗ ಯೋಗಿನೀ ಮಾತೆ ಹೀಗೆ ನುಡಿದರು. ''ಕಬಂಧವೆಂಬುದು ಪರಿವರ್ತನಾಶೀಲವಾದ ಜಗತ್ತಿಗೆ ಅಧಿಪತಿ. ಆ ಶಕ್ತಿಯೇ 'ಛಿನ್ನಮಸ್ತಾದೇವಿ' ಎಂಬವರು. ಈ ಜಗತ್ತಿನಲ್ಲಿ ವೃದ್ಧಿಕ್ಷಯಗಳು ಸದಾ ನಡೆಯುತ್ತಲೇ ಇರುವವು. ಇದಕ್ಕೆ ವಿರುದ್ಧವಾಗಿ, ಕ್ಷೀಣತ್ವ ಅಧಿಕವಾದರೇ ವೃದ್ಧಿಸ್ಥಾಯಿ ಕಡಿಮೆ ಆದಾಗ 'ಛಿನ್ನಮಸ್ತಾದೇವಿ'ಯ ಪ್ರಾಧಾನ್ಯತೆ ಕಂಡು ಬರುವುದು. ಈ ಮಹಾಮಾತೆಯ ಸ್ವರೂಪ, ಅತಿ ರಹಸ್ಯವಾದದ್ದು. ಒಮ್ಮೆ ಪಾವರ್ತಿದೇವಿ ತನ್ನ ಸಖಿಯರೊಡನೆ ಮಂದಾಕಿನೀ ನದಿಗೆ ಸ್ನಾನಕ್ಕೆ ಹೊರಟಳು. ಸ್ನಾನದ ನಂತರ ಹಸಿವಿನಿಂದ ಕೃಷ್ಣವರ್ಣವಾದಳು. ಆಗ ಸಖಿಯರು ಭೋಜನಬೇಕೆಂದರು. ಆಕೆ 'ಸ್ವಲ್ಪ

ತಡಿಯರೆ'ಂದಳು. ಸ್ವಲ್ಪ ಸಮಯದ ನಂತರ ಪುನಃ ಊಟ ಯಾಚಿಸಲು, ಮತ್ತಷ್ಟು ಸಮಯ ಬೇಕೆಂದಳು. ಹೀಗೆ ಮತ್ತಷ್ಟು ಬಾರಿ ಆದನಂತರ, ಆ ಮಹಾದೇವಿ, ತನ್ನ ಖಡ್ಗದಿಂದ ಶಿರಸ್ಸನ್ನು ಕತ್ತರಿಸಿಕೊಳ್ಳಲೂ, ಅಲ್ಲಿನಿಂದ 3 ಧಾರೆಗಳ ರಕ್ತ ಉಕ್ಕಿ ಬರಲು, ಸಖಿಯರು 2 ಧಾರೆಯ ರಕ್ತ ಕುಡಿದರು. ಮಹಾದೇವಿ ಖುದ್ದಾಗಿ ಒಂದು ಧಾರೆಯ ರುಧಿರ ಪಾನ ಮಾಡಿದಳು.

ನಡು ರಾತ್ರಿ ಸಮಯ ಛಿನ್ನಮಸ್ತಾದೇವಿಯ ಉಪಾಸನೆ ಶುದ್ಧಫಲ ತರುವುದು. ಶತ್ರುವಿನ ಮೇಲೆ ವಿಜಯಕ್ಕೂ, ಶತ್ರು ಸಮೂಹವನ್ನು ಸ್ಥಂಭಿಸಲು, ರಾಜ್ಯ ಪಡೆಯಲು ಕಷ್ಟಸಾಧ್ಯವಾದರೆ, ಮೋಕ್ಷ ಪಡೆಯಲು ಈ ತಾಯಿಯನ್ನು ಉಪಾಸಿಸಬೇಕು. ದಿಕ್ಕುಗಳೇ ಈ ಮಹಾತಾಯಿಯ ವಸ್ತ್ರಗಳು. ನಾಭಿಯಲ್ಲಿ ಯೋನಿಚಕ್ರವಿರುವುದು. ಕೃಷ್ಣ (ತಮಸ್ಸು), ರಕ್ತ (ರಜಸ್ಸು) ಗುಣಯುಕ್ತ ಸಖಿಯರು ಈ ತಾಯಿಯ ಜೊತೆ ಸದಾ ಇರುವರು. ಈಕೆ ತನ್ನ ಶಿರಸ್ಸನ್ನು ಕತ್ತರಿಸಿಕೊಂಡೂ, ಸಜೀವವಾಗಿರುವುದನ್ನು ಯೋಗ ಪರಿಭಾಷೆಯಲ್ಲಿ ಪರಿಪೂರ್ಣ ಅಂತರ್ಮುಖತ್ವಕ್ಕೆ ಪ್ರತೀಕ. ಅಗ್ನಿ ಸ್ಥಾನವಾದ ಮಣಿಪೂರಕದಲ್ಲಿ ಛಿನ್ನಮಸ್ತಾಳನು ಧ್ಯಾನಿಸುವರು. ಹಿರಣ್ಯಕಶ್ಯಪ ಈಕೆಯ ಉಪಾಸಕ.

ನಮಗಿದೆಲ್ಲಾ ಭಯ ತರುವುದಾಗಿಯು, ವಿಚಿತ್ರವಾಗಿಯೂ ಇತ್ತು. ಮಧ್ಯರಾತ್ರಿ ಹೊತ್ತಿಗಂತೂ, ಚಿತ್ರವಿಚಿತ್ರ ವಾದ್ಯ, ನೃತ್ಯಗೀತೆಗಳೊಂದಿಗೇ ಕೋಲಾಹಲವಾಗಿತ್ತು. ಇಬ್ಬರು ಒಳ್ಳೆಯ ಸ್ತ್ರೀಯರನ್ನು ಬಲಿ ಕೊಡಬೇಕೆಂದೂ ಯೋಗಿನೀಮಣಿಯರು ನಿರ್ಧಾರ ಮಾಡಿದರು. ಸಿಕ್ಕಿ ಬಿದ್ದು, ಅವರ ಕೈ ಕೆಳಗೇ ಇರುವ ನಮ್ಮಿಬ್ಬರನ್ನೂ ಬಲಿ ಕೊಡುವುದು ಒಳ್ಳೆಯದೆಂದು ಎಣಿಸಿದರು. ನಮ್ಮ ಕತ್ತಿಗೆ ಬೇವಿನ ಸೊಪ್ಪು ಕಟ್ಟಿದರು! ದೊಡ್ಡ ಕುಂಕುಮ ಬೊಟ್ಟು ಇಡಲಾಯಿತು. ನಮ ಕತ್ತುಗಳು ಕಡಿದಿದ್ದೂ ಆಯಿತು! ಸುರಿಯುತ್ತಿದ್ದ ರುಧಿರ ಧಾರೆಗಳನ್ನು ಯೋಗಿನಿಯರು ಮದೋನ್ಮತ್ತದಿಂದ ಪಾನ ಮಾಡಿದರು. ನಮ್ಮ ತಲೆಗಳು ಒಂದು ಕಡೆ, ಉಳಿದ ಶರೀರ ಮತ್ತೊಂದು ಕಡೆ ಎಸೆಯಲಾಗಿತ್ತು. ಆದರೂ ನಮ್ಮಲ್ಲಿ ಜ್ಞಾನ, ಚೈತನ್ಯವಿತ್ತು! ಮೈಯ್ಯೆಲ್ಲಾ ಉರಿಯುತ್ತಾ ನೋವಿತ್ತು. ಈ ಯೋಗಿನಿಯರ ನಿರ್ದಯೆಗೆ, ಅವರ ಕ್ಷುದ್ರ ವಿದ್ಯೆಗೆ ಬಲಿ ಆದೆವೇ ಎಂದುಕೊಂಡೆವು.

ಇಷ್ಟರಲ್ಲಿ ನಮಗೆ ನಿದ್ದೆಯು ಮತ್ತು ಕವಿಯಿತು. ಆ ಸ್ಥಿತಿಯಲ್ಲಿ ಅಸ್ಪಷ್ಟ ಪ್ರಕಾಶವನ್ನು ಕಂಡೆವು. ಅದು ನಮಗೆ ಹತ್ತಿರವಾಗುತ್ತಿರಲು, ಆ ಯೋಗಿನಿಯರು ಗಾಳಿಯಲ್ಲಿ ವಿಲೀನವಾದಂತೆ ಕಂಡು, ನಮ್ಮ ದೇಹ ಭಾಗಗಳು ಸೇರಿಕೊಂಡವು.

ಉಷಃಕಾಲಕ್ಕೆ 2, 3 ಘಳಿಗೆಗಳ ಮುಂಚಿತವೇ, ಯಥಾರೀತಿ ನಿದ್ರೆಯಿಂದ ಎದ್ದೆವು. ನಮ್ಮ ಉಡುಪುಗಳು ಸೀರೆ, ರವಿಕೆಗಳೇ ಆಗಿದ್ದವು. ಆದರೇ ಸ್ತ್ರೀ ಲಕ್ಷಣಗಳು ಮಾಯವಾಗಿದ್ದವು! ಪುರುಷ ಲಕ್ಷಣಗಳೇ ಇದ್ದವು. ಅಗ್ನಿಯಲ್ಲಿ ನಮ್ಮದೇ ಆದ ಉಡುಪುಗಳು ಸುಟ್ಟಿದ್ದವು. ಆದರೇ ಅಲ್ಲಿ ಹೊಸ ಬಟ್ಟೆ ಇದ್ದವು. ಸ್ನಾನದ ನಂತರ ಆ ನೂತನ ವಸ್ತ್ರಗಳನ್ನು ಧರಿಸಿದೆವು.

ಇಷ್ಟರೊಳಗೆ ನಮ್ಮನ್ನು ಇನ್ನೊಂದು ದಾರಿಹೋಕ ಸೇರಿ "ಸ್ವಾಮಿ! ನಿನ್ನೆ ರಾತ್ರಿ ನಡೆದ ನಿಮ್ಮ ಅನುಭವವೆಲ್ಲಾ ಒಂದು ವಿಧವಾದ ಯೋಗ ಪ್ರಕ್ರಿಯೆ. ಅದು ರಹಸ್ಯವಾದದ್ದು. ಈಗ ನಿಮ್ಮೊಳಗಿನ ಸ್ತ್ರೀ ತತ್ವವೆಲ್ಲಾ ಶುದ್ಧಿ ಆಗಿದೆ. ನಮ್ಮೆಲ್ಲರ ಶರೀರದಲ್ಲೂ ಸ್ತ್ರೀ ಪುರುಷ ತತ್ತ್ವಗಳಿರುವವು. ಆ ಎರಡೂ ಶುದ್ಧಿಯಾದಾಗಲೇ, ಯೋಗ ಶಕ್ತಿ ವಿಶ್ವಚೈತನ್ಯದಿಂದ ಪ್ರವಹಿಸುವುದು. ನಮ್ಮ ಶರೀರಕ್ಕೆ ವಿಶ್ವಚೈತನ್ಯದಿಂದ ಬೇಕಾದ ಪ್ರಮಾಣದ ಶಕ್ತಿ ಪ್ರವಹಿಸುತ್ತಿರುವುದು. ಆತ್ಮಕ್ಕೆ, ಸ್ತ್ರೀ ಪುರುಷ ತತ್ತ್ವ ಎರಡೂ ಇರುವುದು. ಆತ್ಮ ಎರಡಕ್ಕೂ ಆಧಾರವಾಗಿಯು, ವಿಭಿನ್ನವಾಗಿಯೂ ಇರುವುದು.

ನೀವು, ಶ್ರೀಪಾದ ಶ್ರೀವಲ್ಲಭರ ಅನುಗ್ರಹದಿಂದ ಮತ್ತು ಆ ಯೋಗಿನಿಯರ ಅಸಾಧರಣ ಯೋಗ ಪ್ರಕ್ರಿಯೆಯಿಂದ ಮಹಾನ್ ದಯೆ ಪಡೆದಿದ್ದೀರಿ. ಕಷ್ಟದಿಂದಲೂ ಅಸಾಧ್ಯವಾದ ಸುಷುಮ್ನ ಮಾರ್ಗ ತೆರೆದುಕೊಂಡಿತು. ಇನ್ನೇನು ಬೇಕು ನಿಮಗೆ. ಇಂತ ಮಹದ್ಭಾಗ್ಯ ನೀವು ಪಡೆಯಲು ಕಾರಣ, ನಿಮ್ಮ ಬಳಿ ಇದ್ದ ಆ ಚರ್ಮದ ಪಾದುಕೆಗಳೇ. ಚರ್ಮ ದೇಹಗಳ ಚೈತನ್ಯದಿಂದ ನೀವು ಬಿಡುಗಡೆ ಹೊಂದಿ, ಚೈತನ್ಯಪ್ರವಾಹ ರೂಪವಾದ ದಿವ್ಯತ್ತ್ವದಿಂದ ಸಂಬಂಧ ಹೊಂದಿರುವಿರಿ. ಶ್ರೀಪಾದರ ಲೀಲೆಗಳು ಯಾರೂ ಊಹಿಸಲಾರರು'' ಎಂದನು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 38

# ಬಗಳಾಮುಖಿ ಆರಾಧನೆಯ ವಿವರಣೆ

ನಮ್ಮ ಮುಂದುವರೆದ ಪೀಠಿಕಾಪುರ ಪ್ರಯಾಣದಲ್ಲಿ ಒಬ್ಬ ಬೈರಾಗಿ ಸಿಕ್ಕಿದನು. ತೇಜೋವಂತ ಕಣ್ಣುಗಳಿಂದ ಒಂದು ಆಲದ ಮರದ ಕೆಳಗೆ ಕುಳಿತು, ನಮ್ಮನ್ನು ಕಂಡು "ನೀವು ಶಂಕರ ಭಟ್ಟು, ಧರ್ಮಗುಪ್ತರಲ್ಲವೇ?" ಎಂದನು. "ಇಲ್ಲಿ ವಿಶ್ರಾಂತಿ ಪಡೆದು, ನಂತರ ನಿಮ್ಮ ಬಳಿ ಇರುವ ಶ್ರೀಗಳ ಪಾದುಕೆಗಳನ್ನು ನನಗೆ ಕೊಟ್ಟು, ನನ್ನ ಬಳಿ ಇರುವ ಕಾಲನಾಗು (ಕರಿನಾಗ) ರ ಮಣಿಯನ್ನು ಪಡೆಯಿರಿ" ಎಂದರು. ನಾವು ಒಪ್ಪಿದೆವು.

ಅವರನ್ನುದ್ದೇಶಿಸಿ, **"ಸ್ವಾಮಿ! ಶ್ರೀಗಳ ದಿವ್ಯಚರಿತ್ರೆಯನ್ನು ಬರೆಯುವ ಉದ್ದೇಶದಲ್ಲಿ ನಾನಿರಲು, ಅವರ ಒಂದೊಂದು ವರುಷದಲ್ಲಿ ತಟಸ್ಥವಾದ ಒಂದೊಂದು ಘಟನೆಯನ್ನು ವಿವರಿಸಲು ಅವರ ಭಕ್ತರು ನನಗೆ ಸಿಗುತ್ತಿದ್ದಾರೆ! ಇದರ ಕಾರಣವೇನೆನ್ನಲೂ, ಆ ಭೈರಾಗಿ, "ಶ್ರೀಪಾದರು ಆದಿಭೈರವಿ, ಆದಿಭೈರವರು ಕೂಡಿದ ಸ್ವರೂಪ. ಕಾಲಶಾಸಕ ಕಾಲಭೈರವರೂ ಅವರೇ! ಅವರು ಮಹಾಕಾಲ ಸ್ವರೂಪರು. ಕಾಲಪುರುಷ ಬೇರಲ್ಲ!**

ಯಾವಾಗ ಯಾವ ಸಂಘಟನೆಯನ್ನು ಕಲ್ಪಿಸಬೇಕೋ ಅವರಿಗೆ ಗೊತ್ತು. ಶ್ರೀಗಳ ಅವ್ಯಕ್ತ ಸಂಕಲ್ಪವನ್ನು ಅರಿಯಲು ಈ ದೇಶ ಕಾಲದಲ್ಲಿ ಕಟ್ಟುಬಿದ್ದ ಜೀವಿಗಳಿಗೆ ಸಾಧ್ಯವೇ ಇಲ್ಲ. ದೇಶ ಕಾಲದ ಆಟ ಅವರಿಗೆ ತೃಣಪ್ರಾಯ. **ಜೀವಿಗಳ ವಿಕಾಸ ಕ್ರಮ, ಸ್ವಭಾವಗಳು, ಧರ್ಮ, ಕರ್ಮ, ಫಲಿತಗಳು ಮತ್ತು ಪ್ರಭಾವಗಳೆಲ್ಲವೂ ಅವರ ಆಧೀನವೇ.** ಮಹಾಪಂಡಿತನೆಂದು ಗರ್ವಪಡುವ ನನ್ನನ್ನು ಕ್ಷಣದಲ್ಲಿ ಅಜ್ಞಾನಿಯನ್ನಾಗಿ ಮಾಡಬಲ್ಲರು! ಪರಮ ದಡ್ಡನನ್ನು ಎಲ್ಲಾ ವೇದವೇದಾಂಗ ಅರಿತ ಮಹಾಪಂಡಿತನಾಗಿಯೂ ಬದಲಾಯಿಸಬಲ್ಲರು. ಅವರದ್ದು ಯೋಗ ಸಂಪನ್ನಾವತಾರ. ಅವರನ್ನು ಅವತಾರ ಪುರುಷರನ್ನಾಗಿ, ಸಾಕ್ಷಾತ್ ದತ್ತ ಪ್ರಭುಗಳಾಗಿ ತಿಳಿಯಲು ಅದೆಷ್ಟೋ ಪಾಪರಾಶಿ ನಶಿಸಬೇಕು. ಪುಣ್ಯ, ಗುಡ್ಡಗಳಷ್ಟು ಬೆಳೆದಿರಬೇಕು. ಇದು ಸಾಮಾನ್ಯವಾದ ನಿಯಮ. ಆದರೇ ಒಮ್ಮೆ ಅವರ ಕೃಪಾಕಟಾಕ್ಷ ಇದ್ದಲ್ಲಿ, ಅವರ ಭಕ್ತ ಸಂರಕ್ಷಣೆಗೆ ಈ ಅಲ್ಪ ನಿಯಮಗಳು ಅಡ್ಡಿ ಆಗಲಾರವು. ಅವರು ಕ್ಷಣಕ್ಷಣ ಲೀಲಾವಿಹಾರಿ **ಶ್ರೀವಲ್ಲಭರ ಚರಿತಾಮೃತವನ್ನು ಅಧ್ಯಯನ ಮಾಡುವವರಿಗೆ, ಕ್ರಮವಾಗಿ ವಿಕಾಸತೆ ನಡೆಯುತ್ತಿರುವುದು. ಆದ್ದರಿಂದಲೇ ಅವರ ಜೀವನದ ಪ್ರತಿ ಒಂದು ವರುಷದಲ್ಲಿನ ಒಂದು ಅಥವಾ ಎರಡು ಲೀಲೆಗಳು ಮಾತ್ರ ನಿನಗೆ ತಿಳಿಸುವುದು, ಅವೂ ಸಹಾ ಒಂದು ಕ್ರಮದಲ್ಲಿ ತಿಳಿಸುವುದೂ ಅವರ ಲೀಲೆಯೇ! ಅವರು ಕೇವಲ ಒಂದು ಭೂಗೋಳ ವಿಕಾಸಕ್ಕೆ ಮಾತ್ರ ಅವತರಿಸಿರುವುರೆಂದು ತಿಳಿಯುವುದು ತಪ್ಪು. ಕೋಟಿ ಕೋಟಿ ಬ್ರಹ್ಮಾಂಡಗಳು ಪ್ರತಿಕ್ಷಣವೂ ಸೃಷ್ಟಿ ಸ್ಥಿತಿ ಲಯಗಳನ್ನು ಹೊಂದುತ್ತಿರುವವು! ಅವುಗಳಲ್ಲಿ ಬದಲಾವಣೆಯ ಕ್ರಮವೆಲ್ಲವೂ ಶ್ರೀಗಳ ಕೈಯಲ್ಲೇ ಇರುವುದು. ಅವರ ದಿವ್ಯನೇತ್ರ ಅಂಚಿನಲ್ಲಿಯೇ ಕೋಟಿ ಕೋಟಿ ಬ್ರಹ್ಮಾಂಡಗಳು ವೃದ್ಧಿಕ್ಷಯ ಹೊಂದುತ್ತಿರುವವು. ಇದೇ ಅವರ ನಿಜ ತತ್ತ್ವ. ಮೊದಲಿಗೆ ನಿರಾಕಾರವಾಗಿರುವ ಅಪರ ತತ್ತ್ವ, ಯಾವ ಸ್ಥಿತಿಯಲ್ಲಿದೆಯೋ ತಿಳಿಯದ ಆ ಮಹಾತತ್ತ್ವವು ನರ ರೂಪದಲ್ಲಿ ಪೀಠಾಪುರದಲ್ಲಿ ಜನ್ಮಿಸುವುದೇ ಒಂದು ದಿವ್ಯಲೀಲೆ. ಅವತಾರ, ತಾಳಿದ ನಂತರ ಹೊರಡುತ್ತಿರುವ ಲೀಲೆಗಳಿಗೆ ಕೊನೆಯೇ ಇಲ್ಲ! ವೇದಗಳು ಸಹಾ ಅವರ ವರ್ಣನೆಯನ್ನು**

**ಸಂಪೂರ್ಣವಾಗಿ ಮಾಡಲಾರವು. ಅವರ ಜ್ಞಾನ ಅನಂತ. ವೇದಗಳ ಜ್ಞಾನ ಪರಿಮಿತ. ಅವರ ಶಕ್ತಿ ಅನಂತ. ಕರುಣೆ ಅಪಾರ. ಅವರು ಎಲ್ಲಾ ದೇಶಗಳಲ್ಲಿಯೂ, ಎಲ್ಲಾ ಕಾಲಗಳಲ್ಲಿಯೂ ಇರುವವರು. ಅವರು ಸತ್ಯಕ್ಕೆ ಸತ್ಯ, ಜ್ಞಾನಕ್ಕೆ ಜ್ಞಾನ ಮತ್ತು ಅನಂತಕ್ಕೆ ಸಹಾ ಸಿಗದ ಮಹಾ ಅನಂತ.**

## ಬಗಳಾಮುಖಿ ಉಪಾಸನೆ

ನಾನು ನಿಜಕ್ಕೂ ಬಂಗಾಳ ದೇಶದವನು. ಬಗಳಾಮುಖಿ ಆರಾಧಕನು. ತಾಯಿ, ದಶ ಮಹಾವಿದ್ಯೆಗಳಲ್ಲಿ ಒಂದು ದಿವ್ಯಸ್ವರೂಪ. ಮಳೆ ರೂಪದಲ್ಲಿ ನಾಶವನ್ನು ಶತ್ರುವಿಗೆ ಬಯಸುವವರು, ಈ ದೇವಿಯನ್ನುಪಾಸಿಸುವರು. ಸಮಿಷ್ಟಿ ರೂಪದಲ್ಲಿ ಪರಮೇಶ್ವರನ ಸಂಹಾರಶಕ್ತಿ ಸಹಾ ಬಗಳಾದೇವಿಯೇ. ಈ ತಾಯಿ ವಾಕ್ಶುದ್ಧಿ ತರುವಳು. ಅಂದರೇ ಮನೋವಾಕ್ಕಾಯ ಕರ್ಮಗಳಲ್ಲಿ ಒಂದೇ ಗುರಿ ಕಂಡು, ಧರ್ಮಬದ್ದ ಜೀವನ ನಡೆಸುವವರು ಏನು ನುಡಿದರೂ ಸತ್ಯವಾಗುವುದು. ವಾಕ್ಕುಗೂ 'ಪರಾ, ಪಶ್ಯಂತಿ, ಮಧ್ಯಮಾ' ಎನ್ನುವ ಭೇದಗಳುಂಟು.

ಸತ್ಯ ಯುಗದಲ್ಲಿ ಸಮಸ್ತ ಜಗತ್ತನ್ನೂ ನಾಶ ಮಾಡುವ ಭಯಂಕರವಾದ ತುಫಾನೊಂದು ಬಂದಿತು. ಜೀವಿಗಳಿಗೆ ಬಂದ ಸಂಕಟಕ್ಕೆ ಶ್ರೀ ಮಹಾವಿಷ್ಣು ಭಗವಾನರೇ ಚಿಂತೆಗೀಡಾದರು! ಆಗ ಅವರು ತಪಸ್ಸು ಮಾಡಲು ಶ್ರೀವಿದ್ಯಾ ಮಹಾದೇವಿ, ಬಗಳಾಮುಖಿ ರೂಪದಲ್ಲಿ ಶ್ರೀ ವಿಷ್ಣುವಿಗೆ ದರ್ಶನವಿತ್ತು, ಆ ವಿಧ್ವಂಸಕ ತುಫಾನನ್ನು ನಿಲ್ಲಿಸಿದಳು. ಆಕೆಯನ್ನು ವೈಷ್ಣವೀಯಾಗಿಯೂ ಆರಾಧಿಸುವರು. ಮಂಗಳವಾರ, ಚತುರ್ದಶಿ ನಡು ರಾತ್ರಿಯಲ್ಲಿ ಈ ತಾಯಿ ಉದ್ಭವಿಸಿದಳು. ಈಕೆ ಸ್ಥಂಭನ ಶಕ್ತಿರೂಪಿಣಿ. ಈ ಮಾತೆಯಿಂದಲೇ ಆದಿತ್ಯ ಮಂಡಲ ನಿಂತಿದೆ. ಹಾಗೆಯೇ ಸ್ವರ್ಗ ಸಹಾ ನಿಂತಿದೆ. ಇಹ, ಪರಲೋಕದ ಸುಖಗಳನ್ನು ಈಕೆ ಪ್ರಸಾದಿಸಬಲ್ಲಳು! ಸಾಧಕನ ಜೀವನದಲ್ಲಿ ಕಲ್ಲೋಲ ಎಬ್ಬಿಸುವ ದುಷ್ಟ ಶಕ್ತಿಗಳನ್ನು ಮತ್ತು ದುರದೃಷ್ಟವನ್ನು ತರುವ ಅಂಧ ಶಕ್ತಿಗಳನ್ನು, ಅಂದರೇ ಕತ್ತಲಿನ ಶಕ್ತಿಗಳನ್ನು ಈ ತಾಯಿ ಸ್ತಂಭಿಸಿ, ಸಾಧಕನ ಅಭಿವೃದ್ಧಿಗೆ ಆಶೀರ್ವದಿಸುವಳು. ಇತರ ನಾಮಗಳು, ಬಡಬಾಮುಖಿ, ಜಾತವೇದಮುಖಿ, ಉಲ್ಕಾಮುಖಿ, ಜ್ವಾಲಾಮುಖಿ ಮತ್ತು ಬೃಹದ್ಭಾನುಮುಖಿ ಎಂದು, ನಿಜಕ್ಕೂ ಮೊಟ್ಟಮೊದಲಿಗೆ ಬ್ರಹ್ಮದೇವರು, ಬಗಳಾಮಹಾವಿದ್ಯೊಪಾಸನೆ ಮಾಡಿದರು. ಈ ಮಹಾದೇವಿಯನ್ನೇ ಬ್ರಹ್ಮನು ಬಾಲಾರೂಪದಲ್ಲಿ ದರ್ಶಿಸಿ, ತಿರುಮಲೆಯಲ್ಲಿ ಪೂಜಿಸಿದರು. ಶ್ರೀ ಬ್ರಹ್ಮರು ಈ ಮೂರ್ತಿಯನ್ನೇ ಶ್ರೀ ಪದ್ಮಾವತೀ ಸಮೇತ ಶ್ರೀ ವೇಂಕಟ ರಮಣನ್ನಾಗಿ ಸಹಾ ಪೂಜಿಸಿ, ಬ್ರಹ್ಮೋತ್ಸವಗಳನ್ನು ಆರಂಭಿಸಿದರು! ಈ ಮಹಾವಿದ್ಯೆಯನ್ನು ಬ್ರಹ್ಮರು, ಸನಕಾದಿ ಮಹರ್ಷಿಗಳಿಗೆ ಉಪದೇಶಿಸಿದರು. ಬ್ರಹ್ಮರ ನಂತರ ಈ ಮಾತೆ ಬಗಳಾಮುಖಿಯನ್ನು ಆರಾಧಿಸಿದವರಲ್ಲಿ ಮುಖ್ಯರು ಶ್ರೀ ಮಹಾವಿಷ್ಣು. ನಂತರ, ಶ್ರೀ ಪರಶುರಾಮರೂ ಈ ದೇವಿಯನ್ನು ಆರಾಧಿಸಿದವರೇ.

ನಾನು ತೀರ್ಥಯಾತ್ರೆಗಳನ್ನು ಮಾಡುತ್ತಾ ಪೀಠಿಕಾಪುರಕ್ಕೆ ಬಂದೆನು. ಶ್ರೀ ಕುಕ್ಕುಟೇಶ್ವರ ಆಲಯ ದರ್ಶಿಸಿದೆನು. ಅಲ್ಲಿ ಮುದ್ದಾದ ಒಂದು ಬಾಲಕನನ್ನು ಕಂಡೆನು'' ಎಂದು ಹೇಳಿದರು.

ಆ ಬಾಲಕನು, ನನ್ನನ್ನುದ್ದೇಶಿಸಿ ''ಎಲೈ! ನೀನು ಬಂಗಾಳ ದೇಶದಿಂದ ಬಂದವನು. ನಾನು ಬಹಳ ಸಮಯದಿಂದ, 'ಸ್ವಯಂಭೂ ದತ್ತ'ನೆಂಬ ಹೆಸರಿನಲ್ಲಿ ಈ ಗರ್ಭಗುಡಿಯಲ್ಲಿ ಬಂಧಿತನಾಗಿರುವೆನು, ಬಹಳ ಶೆಖೆ, ಉಸಿರೇ ಆಡದು. ಆದ್ದರಿಂದ,

ಅರ್ಚಕರು ನನಗೆ ಶೀತಲೋಪಚಾರ ಮಾಡಬೇಕೆಂದು ಕೋರಿದೆನು. ಅವರು ಒಪ್ಪಲಿಲ್ಲ. ಈ ಸ್ಥಳ ಬಿಟ್ಟು ಹೊರಟು ಹೋಗುವೆನೆಂದೆನು. ಅವರು 'ನೀನು ಹೋಗುವುದಲ್ಲ, ನಾವೇ ಓಡಿಸಿ ಬಿಡುಸುವೆನೆ'ಂದರು. ಆದ್ದರಿಂದ ಇತ್ತೀಚಿಗೇ ಈಚೆ ಬಂದುಬಿಟ್ಟಿರುವನು'' ಎಂದರು.

ನನಗೆ ಅವರ ಮಾತಿನ ಮರ್ಮ ತಿಳಿಯಿತು. ಅವರು ಸಾಕ್ಷಾತ್ ದತ್ತ ಪ್ರಭುಗಳೇ ಎಂದು, ಅವರಿಗೆ ತಕ್ಕ ಶ್ರದ್ಧಾಭಕ್ತಿ ಉಳ್ಳ ಅರ್ಚನಾ ಕಾರ್ಯಕ್ರಮಗಳು ನಡೆಯುತ್ತಿಲ್ಲವೆಂದು, ಅಸ್ಪೃಶ್ಯತೆಯನ್ನು ಪಾಲಿಸದೇ, ಅಲ್ಲಿನ ಕರ್ಮ ನಿರ್ವಾಹಕ ಬ್ರಾಹ್ಮಣರು ಅಸ್ಪೃಶರನ್ನು ಆಲಯದಲ್ಲಿ ಬಿಡದೇ ಇದ್ದುದರಿಂದಲು, ದೀನ ದಲಿತರನ್ನು, ಆರ್ತರನ್ನೂ ರಕ್ಷಿಸಲು ಶ್ರೀದತ್ತ ಪ್ರಭುಗಳೇ ಖುದ್ದಾಗಿ ಅವತರಿಸಿದ್ದಾರೆಂದು ನನಗರ್ಥವಾಯಿತು.

ನಾನು ಅವರನ್ನು, ''ನನ್ನ ಇಷ್ಟ ದೇವತಾ ಸ್ವರೂಪದಲ್ಲಿ ದರ್ಶನ ನೀಡಿ. ನನ್ನನ್ನು ಧನ್ಯನಾಗಿ ಮಾಡಿ'' ಎಂದು ಬೇಡಿದೆನು. ಆ ಮಹಾಪ್ರಭು ಮುಗುಳ್ನಗೆದಿಂದ ನನಗೆ ಶ್ರೀ ಬಗಳಾಮಹಾದೇವಿಯ ದರ್ಶನ ಪ್ರಾಪ್ತಿ ತಂದರು. ಆ ಮಹಾ ತೇಜಸ್ಸಿನಿಂದ ನನಗೆ ಮೂರ್ಛೆ ಬಂದಂತಾಯಿತು. ನಿಜಕ್ಕೂ ಅದು ಬ್ರಹ್ಮಾನಂದ ಅನುಭೂತಿ. ಅದೇ ಸ್ಥಿತಿಯಲ್ಲಿ ಅಷ್ಟ ದಿನ ಇದ್ದೆನು. ನಾಡಿ, ಹೃದಯ ಸ್ಪಂದನವಿರಲಿಲ್ಲ! ಊರಿನವರಿಗೆ ನನ್ನ ಸ್ಥಿತಿ ಅರ್ಥವಾಗಲಿಲ್ಲ.

## ಬೈರಾಗಿ ವಿಷಯ

ನನ್ನ ಸ್ಥಿತಿ ಆ ಗ್ರಾಮದಲ್ಲಿ ಭಯಾಂದೋಳನ ಹುಟ್ಟಿಸಿತ್ತು. ಯಾರೋ ಒಬ್ಬ ಬ್ರಾಹ್ಮಣ ಬೈರಾಗಿ ಶ್ರೀ ಕುಕ್ಕುಟೇಶ್ವರಾಲಯದೊಳಗೆ ಪ್ರವೇಶಿಸಿ, ಸ್ವಯಂಭೂ ದತ್ತರನ್ನು ದರ್ಶಿಸಿ, ಕ್ಷುದ್ರ ಮಾಂತ್ರಿಕನಾದ ಕಾರಣ, ಆತ ತನ್ನ ಕ್ಷುದ್ರ ಶಕ್ತಿಯನ್ನು ಕುಕ್ಕುಟೇಶ್ವರ ಮತ್ತು ಸ್ವಯಂಭೂ ದತ್ತರ ಮೇಲೆ ಪ್ರಯೋಗಿಸಲೆಣಿಸಿದನೆಂದೂ, ಅರ್ಚಕರ ನಿಯಮ ನಿಷ್ಠೆಯ ಕಾರಣ ಆ 2 ದೈವಗಳ ಶಕ್ತಿ ಕ್ಷೀಣಿಸದೆ ಹಾಗೇ ನಿಂತು, ಮರು ಹೊಡೆತದಲ್ಲಿ ಆ ಕ್ಷುದ್ರ ಮಾಂತ್ರಿಕನೇ ಎಚ್ಚರವಿಲ್ಲದೇ, ನಾಡಿ, ಹೃದಯ ಸ್ಪಂದನೆ ಇಲ್ಲದೇ ಬಿದ್ದಿರುವನೆಂದೂ ಪ್ರಚಾರ ಹರಡಿತ್ತು.

ಸಾಧಾರಣವಾಗಿ ವದಂತಿಗಳು ಕ್ಷಣಮಾತ್ರದಲ್ಲೇ ವ್ಯಾಪಿಸಿಬಿಡುವವು. ಸತ್ಯವನ್ನು ಅಸತ್ಯವಾಗಿಯು, ಅಸತ್ಯವನ್ನು ಸತ್ಯವನ್ನಾಗಿಯೂ ಹೇಳಿ ನಂಬಿಸುವುದರಲ್ಲಿ ಅಲ್ಲಿನ ಜನ ಚತುರರು! ಇಂತಹ ಚತುರರ ಮಧ್ಯೆ ಹುಟ್ಟಿದ ಶ್ರೀಪಾದರು, ಬಲು ಚತುರರು. ಇಲ್ಲಿ ನಡೆಯುವುದು ಅವರಿಗೆ ವಿನೋದವೆ. ಅವರು ದಿವ್ಯ ವಿನೋದರು.

ಅರ್ಚಕ ಸ್ವಾಮಿಗಳಿಗೆ ಪೀಠಿಕಾಪುರದಲ್ಲಿ ಘನತೆ ಬೆಳೆಯಿತು. ಅವರ ನಿಯಮ ನಿಷ್ಠೆಯ ಕಾರಣ ಒಬ್ಬ ಕ್ಷುದ್ರ ಮಾಂತ್ರಿಕ ಮೂರ್ಛಿತನಾಗಿ ಶವದಂತೆ ಬಿದ್ದಿರುವನೆಂದು, ಈ ಸ್ವಾಮಿಯನ್ನಾಶ್ರಯಿಸಿದರೇ ಸಮಸ್ತ ಅರಿಷ್ಟಗಳು ನಾಶವಾಗುವವೆಂದು, ಅವರ ಕೈಯಲ್ಲಿ ಪೂಜೆ ಮಾಡಿಸಿದರೇ ಶ್ರೇಯಸ್ಸೆಂದು ಪ್ರಚಾರ ಒಂದು ಹರಡಿತ್ತು. ಹಾಗೆಯೇ ಅರ್ಚಕರಿಂದ ಪೂಜೆಗಳೂ, ಬ್ರಾಹ್ಮಣರಿಗೆ ಪಾರಿತೋಷಿಕೆಗಳೂ ಕೊಡಲಾಗುತ್ತಿತ್ತು. ಕುಕ್ಕುಟೇಶ್ವರ, ಸ್ವಯಂಭೂ ದತ್ತರಿಗೆ ಪೂಜೆ, ಅರ್ಚನೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಾ ಬ್ರಾಹ್ಮಣರಿಗೆ ಸಂಭಾವನೆ ಹೆಚ್ಚಿಗೆ ಸಿಗುತ್ತಿತ್ತು. ಆದರೇ ಮನೆಗೆ ತಂದುಕೊಂಡು ಭದ್ರ ಮಾಡಿಕೊಂಡ ಹಣ, ಬೆಳಿಗ್ಗೆ ಆಗುವಷ್ಟರಲ್ಲಿ

ಮಾಯವಾಗುತ್ತಿತ್ತು! ಕೆಲವು ಅರ್ಚನೆ ಪೂಜೆಗಳಿಗೆ ಮುಂಚೆಯೇ ಒಪ್ಪಂದವಾಗಿ ಹಣ ಪಡೆದಿದ್ದರಿಂದ, ಆ ಕಾರ್ಯಗಳು ಸಂಭಾವನೆ ಇಲ್ಲದೇ ಮಾಡಿಕೊಡಬೇಕಾಗಿತ್ತು. ಅಷ್ಟೇ ಅಲ್ಲದೇ ಸಮೃದ್ಧಿಯಾಗಿ ಊಟ ಮಾಡಿದ್ದರೂ, ನೀರಸವಾಗಿ, ಸುಸ್ತಿನಿಂದ ಇರುತ್ತಿದ್ದರು. ಹೀಗೆ ಧನ, ಸ್ವಾಸ್ಥ್ಯಹೋಗುತ್ತಿದ್ದು ಆಶ್ಚರ್ಯವಾಗಿತ್ತು.

ಪರಿಸ್ಥಿತಿಗಳು ಈ ರೀತಿ ಇವೆ ಎಂದು ನುಡಿದರೇ ಆ ಬ್ರಾಹ್ಮಣರೇ ಕಷ್ಟದಲ್ಲಿರಬೇಕಾಗುತ್ತೆ. ಏಕೆಂದರೇ, 'ಜನರೆಲ್ಲರೂ ಅರ್ಚಕರ ನಿಯಮ ನಿಷ್ಠೆಯ ಕಾರಣ, ತಮಗೆಲ್ಲಾ ಒಳ್ಳೆಯದಾಗುತ್ತಿರುವುದೆಂದೂ, ಕ್ಷುದ್ರ ಶಕ್ತಿಯನ್ನು ತುಳಿಯಲಾಗಿದೆ ಎಂದು ನಂಬಿರುವಾಗ, ಇಲ್ಲಿಯ ಬ್ರಾಹ್ಮಣರು ಯಕ್ಷಿಣೀ ಪ್ರಭಾವಕ್ಕೆ ಒಳಗಾಗಿ ಕಷ್ಟನಷ್ಟಗಳು ಅನುಭವಿಸುತ್ತಿದ್ದಾರೆ' ಎನ್ನುವ ಸತ್ಯ ಹೊರಬಂದರೇ, ಇರುವ ಮರ್ಯಾದೆ ಹೋಗುವುದೆಂದು, ಬ್ರಾಹ್ಮಣರೆಲ್ಲರೂ ಅವರ ಕಷ್ಟನಷ್ಟಗಳನ್ನು ಮನಸ್ಸಿನಲ್ಲೇ ಇಟ್ಟುಕೊಂಡರು.

ಮೂರ್ಛಿತನಾದ ಬೈರಾಗಿಯನ್ನು ಸತ್ತಿರುವೆನಾ, ಇಲ್ಲವಾ ಎಂದು ನಿರ್ಧರಿಸಿ ಬೇಡಿದ್ದಲ್ಲಿ ದಹನ ಕ್ರಿಯೆ ನಡೆಸಲು ಮುಂದಾದರು. ಹಿರಿಯರು, ಬಾಪನಾರ್ಯರನ್ನು ವಿಚಾರಿಸಲೂ, ಅವರು ಪರೀಕ್ಷಿಸಿ 'ಈತ ಸತ್ತಿಲ್ಲ. ಮೂರ್ಛೆ ಸಹಾ ಅಲ್ಲ. ಇದೊಂದು ಸಮಾಧಿ ಸ್ಥಿತಿ' ಎಂದು ನುಡಿದರು. ಇವರ ಮಾತು ತಳ್ಳಿಹಾಕಿ ದಹನ ಮಾಡಿದರೇ ಅವರನ್ನು ಕಾಡುತ್ತಿದ್ದ ಯಕ್ಷಿಣೀ ಪ್ರಭಾವ ಕಡಿಮೆ ಆಗಬಹುದೆಂದು ಕೆಲ ಬ್ರಾಹ್ಮಣರು ಯೋಚಿಸಿದರು. ಮತ್ತಿತರರು, 'ಇಲ್ಲ ಇವನನ್ನು ದಹನ ಮಾಡಿದರೇ, ಕ್ಷುದ್ರ ಶಕ್ತಿ ಮತ್ತಷ್ಟು ವಿಜೃಂಭಿಸಿ ಕಷ್ಟನಷ್ಟಗಳು ಅಧಿಕವಾಗುವುದೆಂದು' ಭಾವಿಸಿದರು. ಶ್ರೀಗಳ ಸಂಕಲ್ಪವೇನೋ, ನನ್ನನ್ನು ದಹನ ಮಾಡಲಿಲ್ಲ!

ಎಂಟನೆಯ ದಿನ ನಾನು ಪ್ರಕೃತಸಿದ್ಧನಾದೆನು. ಶ್ರೀಪಾದರು ಅವರ ದಿವ್ಯ ಹಸ್ತಗಳಿಂದ ನನಗೆ 'ಹಸ್ತ ಮಸ್ತಕ' ಮಾಡಿದರು. ಬ್ರಾಹ್ಮಣರು ಯಾರೂ ನನಗೆ ಭಿಕ್ಷೆ ಕೊಡದಿರಲು, ನನ್ನ ವಾಸ ಮತ್ತು ಭಿಕ್ಷೆ ಗೊಲ್ಲರ ಮನೆಯಲ್ಲಿ ಎಂದು ಸ್ಥಿರವಾಯಿತು. ನನ್ನ ಸ್ವಭಾವದ ಕಾರಣ, ಗೊಲ್ಲರೆಲ್ಲರೂ ನನಗೆ ಹತ್ತಿರವಾದರು. ಅವರಲ್ಲಿನ ಒಂದು ಗೊಲ್ಲ ವನಿತೆ, ಲಕ್ಷ್ಮಿ, ಅವಳ ಪತಿಯೇ ಆ ಗೊಲ್ಲರ ಮುಖ್ಯಸ್ಥ ಮತ್ತು ವ್ಯಾಜ್ಯಗಳ ನ್ಯಾಯನಿರ್ಣೇತ ಮತ್ತು ಆತನೊಬ್ಬನೇ ಸ್ವಲ್ಪ ವಿದ್ಯಾವಂತನಾಗಿದ್ದ ಕಾರಣ, ಆ ಗೊಲ್ಲರು, ಅವನು ಚಿಕ್ಕ ವಯಸ್ಸಿನವನಾದರೂ ಗೌರವಿಸುತ್ತಾ, ತಮ್ಮ ತಮ್ಮ ಆಸ್ತಿ ಪತ್ರಗಳು ತೋರಿಸುವುದು, ಅವನ ಹೇಳಿಕೆಯಂತೆ ಆಸ್ತಿ ಹಂಚುವುದು ಮಾಡುತ್ತಿದ್ದರು. ಆತ ತೀರಿಕೊಂಡು 4,5 ವರುಷವಾಗಿತ್ತು. ಆ ಪತಿವ್ರತೆ ಲಕ್ಷ್ಮಿ ಚಿಕ್ಕವಯಸ್ಸಿನಲ್ಲೇ ವಿಧವೆಯಾಗಿದ್ದಳು.

ನಾನು, ಶ್ರೀಪಾದರ ಮಹತ್ವ ಅರಿತವನಾದ್ದರಿಂದ, 'ಶ್ರೀಪಾದರನ್ನು ಯಾವುದೋ ರೀತಿ ಪೂಜಿಸಿ ಸಂಬಂಧವಿಟ್ಟುಕೊಂಡಿದ್ದರೆ ಶ್ರೇಯಸ್ಕರ'ವೆಂದು ಲಕ್ಷ್ಮಿಗೆ ತಿಳಿಸಿದೆನು. ಅಲ್ಲಿನ ವೆಂಕಟಪ್ಪಯ್ಯ ಶ್ರೇಷ್ಠಿಯ ಮನೆ ಹಸು, ಹಾಲು ಕೊಡುವುದು ನಿಲ್ಲಿಸಿದ ಕಾರಣ, ಅವರ ಮನೆಗೆ ಲಕ್ಷ್ಮಿ ಹಾಲನ್ನು ದಿನಾ ತರುತ್ತಿದ್ದಳು.

ಶ್ರೇಷ್ಠಿಗಳ ಮನೆಗೆ ಶ್ರೀಪಾದರು ಅನೇಕ ಬಾರಿ ಬರುತ್ತಿದ್ದರು. 'ಅಜ್ಜಿ! ನನಗೆ ಹಸಿವು' ಎಂದ ಕೂಡಲೇ ಆ ಮನೆಯ ಮಹಾಲಕ್ಷ್ಮಿ ಸಮಾನಳು ವೆಂಕಟ ಸುಬ್ಬಮ್ಮ ಬಿಸಿಹಾಲು, ಕೆನೆ ಮತ್ತು ಬೆಣ್ಣೆ ಸಹಾ ತೃಪ್ತಿಯಾಗಿ ಇಡುತ್ತಿದ್ದರು. ಅಂದು, ಲಕ್ಷ್ಮಿ ಹಾಲನ್ನು ತಂದುಕೊಡಲು ಶ್ರೀಪಾದರು ಅವರಿಗೆ ಹಸಿವು ಅಧಿಕವಾಗಿರುವುದೆನ್ನಲು, ವೆಂಕಟ ಸುಬ್ಬಮ್ಮ ಲಕ್ಷ್ಮಿಯನ್ನು ಮತ್ತಷ್ಟು ಹಾಲು ತರಲು ಕೇಳಿದರು. ಅವಳಗಾಗಿ ಇಟ್ಟುಕೊಂಡಿದ್ದ ಹಾಲನ್ನು, 'ತನಗೆ ನೀರು ಮಜ್ಜಿಗೆ ಆದರೂ ಸರೀ' ಎಂದು ತ್ಯಾಗಮಾಡಿ ತಂದುಕೊಟ್ಟಳು.

ಆಲಯದಲ್ಲಿ ಪೂಜೆ ಪುನಸ್ಕಾರಗಳು 10 ದಿನ ನಡೆದವು. ಬ್ರಾಹ್ಮಣರಿಗೆ ಭೂರಿ ಸಂಭಾವನೆ, ಸ್ವಯಂಪಾಕ ಮಾಡಲಾದರೂ, ಯಕ್ಷಿಣೀ ಪ್ರಭಾವದಿಂದ ಅವರೆಲ್ಲಾ ಬಲಿಷ್ಠರಾಗದೇ, ನೀರಸದಿಂದ ಅಶಕ್ತರಾಗಿದ್ದರು.

## ಪುರಾಣ ಪಂಡಿತನ ಕಥೆ

ಆ ಗ್ರಾಮಕ್ಕೆ ಪುರಾಣ ಪ್ರವಚನಕಾರನೊಬ್ಬ ಪಂಡಿತ ಬಂದನು. ಕುಕ್ಕುಟೇಶ್ವರಾಲಯ ಹೊರಗಿನ ವಿಶಾಲ ಪ್ರಾಂಗಣದಲ್ಲಿ ಆ ಪ್ರವಚನಕ್ಕೆ ಸಿದ್ಧಮಾಡಿದರು. 'ಈ ಪ್ರವಚನಗಳು ಶೂದ್ರರಿಗೇ ಹೊರತು ನಮಗಲ್ಲ. ನಮಗೆ ಗೊತ್ತಿಲ್ಲದ ಪುರಾಣಗಳು ಎಲ್ಲಿವೆ' ಎಂದು ಬ್ರಾಹ್ಮಣೋತ್ತಮರು ನುಡಿದರು. ಶ್ರೀಯುತ ಬಾಪನಾರ್ಯ, ಶ್ರೇಷ್ಠಿ ಮತ್ತು ವರ್ಮ, 'ತಮ್ಮ ಕಡೆಯಿಂದ ಸ್ವಲ್ಪ ಧನವನ್ನು ಆ ಪಂಡಿತನಿಗೆ ಕೊಡುತ್ತೇವೆ' ಎಂದರು. ಶೂದ್ರರು ಪುರಾಣ ಕೇಳಲು ಬರಬಹುದೆಂದು, ಆಗ ಅವರೂ ಸಂಭಾವನೆ ಕೊಡಬಹುದೆಂದು ನಿರ್ಧಾರವಾಗಿ, ಡಂಗುರ ಹೊಡೆಸಲಾಯಿತು. ಕೆಲ ಬ್ರಾಹ್ಮಣರು, ಶೂದ್ರರು ಕೊಡುವ ಮೊತ್ತದಲ್ಲಿ ಅರ್ಧಭಾಗ, ಬ್ರಾಹ್ಮಣ ಪರಿಷತ್ತಿಗೆ ಕೊಡುವಂತೆ ಆ ಪಡಿಂತನನ್ನು ಕೇಳಬಹುದೆಂದು ಸೂಚಿಸಿದರು. ಅದಕ್ಕೆ ಬಾಪನಾರ್ಯರು ''ಇದನ್ನೇ ಭಿಕ್ಷೆ ಬೇಡುವುದೆನ್ನುವರು. ನೀವು 'ಪುರಾಣ ಶ್ರವಣವೂ ಕೇಳುವುದಿಲ್ಲ'ಎಂದರಿ. ಈಗ ಕಷ್ಟಪಟ್ಟು ಪುರಾಣ ಹೇಳಿದ ಆ ಪಂಡಿತನ ಹಣದಲ್ಲೂ ಭಾಗ ಕೇಳುತ್ತಿದ್ದೀರ. ನೀವು ನಿಮ್ಮ ವರ್ತನೆ ಬದಲಾಯಿಸಿಕೊಳ್ಳದಿದ್ದರೇ, ಮುಂದೇ ಕಾಲಪುರುಷನಿಂದ ಕಠಿಣ ಶಿಕ್ಷೆ ಅನುಭವಿಸಬೇಕಾಗುತ್ತೆ'' ಎಂದು ಹೆಚ್ಚರಿಸಿದರು.

ಬಂದ ಆ ಪಂಡಿತನಿಗೆ ಬಾಪನಾರ್ಯರ ಮನೆಯಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಪುರಾಣ ಪ್ರವಚನೆಯ ಮುನ್ನ ಲಕ್ಷ್ಮಿ ಹಾಲನ್ನು ಕಾಯಿಸಿ ಆತನಿಗೆ ಕೊಡುತ್ತಿದ್ದಳು. ನಂತರ ಆತ ಪ್ರವಚನವನ್ನು ಆರಂಭಿಸುತ್ತಿದ್ದನು.

ಶ್ರೀಪಾದರು ಸರ್ವ ಹೃದಯಾಂತರ್ವರ್ತರು. ಆದ್ದರಿಂದ ಅವರಿಗೆ ತಿಳಿಯದ್ದೇ ಇಲ್ಲ. ಆ ಪುರಾಣ ಪಂಡಿತ ಮಹಾಜ್ಞಾನಿ, ಮಹಾಯೋಗಿ. ಅವನ ಯೋಗಶಕ್ತಿಯಿಂದ, ತನ್ನ ಆತ್ಮ ಧರಿಸಿರುವ ಬೇರೆ ಬೇರೆ ರೂಪಗಳನ್ನು ಕಂಡುಹಿಡಿದನು. ಆ ರೂಪಗಳಲ್ಲಿನ ಚೈತನ್ಯವನ್ನು, ತನ್ನೊಳಕ್ಕೆ ಆಕರ್ಶಿಸಿಕೊಂಡನು.

ಆತ ಈಗ ಒಂದು ಬ್ರಾಹ್ಮಣ ಜಮೀಂದಾರರ 4, 5 ತಿಂಗಳ ಮಗುವಿನಲ್ಲಿ ತನ್ನ ಆತ್ಮವನ್ನು ಕಂಡುಹಿಡಿದನು. ಲಕ್ಷ್ಮಿ ಆತನಿಗೆ ಹಾಲುಕೊಡಲು ಬಂದಾಗ, ಆಕೆಯನ್ನು ಯೋಗ ದೃಷ್ಟಿಯಿಂದ ಕಾಣಲು, ತನ್ನ ಆತ್ಮವೇ, ಮುಂದಿನ ಜನುಮದಲ್ಲಿ ಲಕ್ಷ್ಮಿಯ ಪತಿ ಎಂದು ಗ್ರಹಿಸಿದನು. ಅಂದರೇ ಮಗುವೇ ಲಕ್ಷ್ಮಿಯ ಪತಿ ಆಗುವ ಸಂಭವವಿದೆ ಮರು ಜನುಮದಲ್ಲಿ ಎಂದು ಅರಿತನು.

ಆತ್ಮೆಯ ಪುರುಷ ರೂಪಗಳೆಲ್ಲವೂ, ಮೂಲತತ್ತ್ವ ಆಗಿರುವ ಆ ಪಂಡಿತನಲ್ಲಿ ಈಗಾಗಲೇ ಒಂದಾಗಿವೆ, ತನ್ನ ಶಕ್ತಿ ರೂಪಗಳು ಏನಾಗಿಹೋದವೋ ಎಂದು ಯೋಗ ದೃಷ್ಟಿಯಲ್ಲಿ ನೋಡಲೂ, ತನ್ನ ಸ್ತ್ರೀ ರೂಪಗಳಿಗೆ ಮೂಲ, ಲಕ್ಷ್ಮೀ ಎಂದು ತಿಳಿದುಬಂತು. ಅಷ್ಟಲ್ಲದೇ ತನ್ನ ಸ್ತ್ರೀ ತತ್ತ್ವಗಳೆಲ್ಲಾ ಲಕ್ಷ್ಮಿಯಲ್ಲೇ ವಿಲೀನವಾಗಿರುವುದೂ ಗಮನಿಸಿದ.

ಲಕ್ಷ್ಮಿಗೆ ತನ್ನ ಪತಿಯಮೇಲೆ ಆಸೆ ಅಧಿಕ. ತನ್ನ ಪತಿಯ ಚೈತನ್ಯ ಭೂತ ಶರೀರವನ್ನು ಬಿಟ್ಟು ಬರಲಿಲ್ಲವೆಂದೂ ಆಕೆಗೆ ಅರ್ಥವಾಯಿತು. ಅದೆಷ್ಟೋಬಾರಿ, ತನ್ನ ಪತಿಯ ರೂಪ, ಪಕ್ಕದಲ್ಲೇ ನಿಂತಿರುವುದು ಆಕೆ ಕಂಡಿದ್ದಳು! ವಿರಜಾನದಿ ದಾಟಲು

ಗೋದಾನ ಮಾಡುವರು. ಅಂತಹ ಗೋವು ಸಹಾ ತನ್ನ ಪತಿಯನ್ನು ವಿರಜಾನದಿ ದಾಟಿಸಿ, ಪುನಃ ಭೂಲೋಕದಲ್ಲಿ ಜನುಮಿಸಿದೆ ಎಂದೂ ಅರಿತಳು. ಏಕೆಂದರೇ ಆ ಪತಿವ್ರತೆಗೆ ಗೋವಿನ ದರ್ಶನ ಸಹಾ ಆಗಿತ್ತು. ವಿರಜಾನದಿಯನ್ನು ದಾಟಿದ ಲಕ್ಷ್ಮಿ ಪತಿಯ ಚೈತನ್ಯ ತನ್ನ ಮೂಲತತ್ವವಾದ ಪುರಾಣ ಪಂಡಿತನಲ್ಲಿ ಲೀನವಾಗಿರುವ ವಿಷಯ, ಸರ್ವಜ್ಞರಾದ ಶ್ರೀಪಾದರಿಗೆ ಅವಗತವೇ.

ಆ ಪಂಡಿತನು, ಪೀಠಿಕಾಪುರದಲ್ಲಿದ್ದ ಕರ್ಮ ಋಣಾನುಬಂಧನಗಳನ್ನು ಪೂರೈಸಿ, ಅದರ ಜೊತೆ ತನ್ನ ಆತ್ಮಧರಿಸಿದ ಇತರ ರೂಪಗಳ ಕರ್ಮಗಳನ್ನು ಸಹಾ ತನ್ನ ಯೋಗ ಶಕ್ತಿಯಿಂದ ತೀರಿಸಿಕೊಂಡು, ಪರಮೇಶ್ವರನಲ್ಲಿ ಐಕ್ಯವಾಗಬೇಕೆಂದು, ಪೀಠಿಕಾಪುರಕ್ಕೆ ಬಂದನು. ಬಯಸಿದಂತೆ ಆ ಪಂಡಿತನು ಪರಮೇಶ್ವರನಲ್ಲಿ ಐಕ್ಯವಾದರೇ ಕೆಲವೇ ತಿಂಗಳ ಕೂಸು (ಬ್ರಾಹ್ಮಣ ಜಮೀಂದಾರ್ ಮಗ) ಸಹಾ ಮೃತಪಡುವನು. ಈ ಮಗುವೇ ಲಕ್ಷ್ಮಿಗೆ ಮುಂದಿನ ಜನುಮದ ಪತಿ ಆದ್ದರಿಂದ, ಲಕ್ಷ್ಮಿ ಈಗಿನ ಜನುಮ ಪೂರೈಸಿ ಮರುಜನುಮ ಪಡೆಯುವಷ್ಟರಲ್ಲಿ ಬೆಳೆದು ವೃದ್ಧನಾಗಿರುವ ಈ ಬಾಲಕ ಮೃತಹೊಂದುವನಾದ್ದರಿಂದ, ಲಕ್ಷ್ಮಿ ಬ್ರಹ್ಮಚಾರಿಣಿಯಾಗೇ ತೀರಿಕೊಳ್ಳಬೇಕು.

ಲಕ್ಷ್ಮೀಗೋ, ಮುಂದಿನ ಜನುಮ ಪಡೆಯಬೇಕೆಂಬುವ ಆಸೆ ಬಲವಾಗಿದೆ. ಆದ್ದರಿಂದ ಶರೀರ ನಶಿಸಿದ ನಂತರ ಚೈತನ್ಯ ಸ್ಥಿತಿ ಹೊಂದಿದಾಗ, ಮತ್ತೊಂದು ಸದ್ಬ್ರಾಹ್ಮಣರ ಮನೆಯಲ್ಲಿ ತಾನು ಹುಟ್ಟಬೇಕು. ಮುಂದಿನ ಅವಳ ಪತಿ, ತಿಂಗಳ ಕೂಸು, ಜಮೀಂದಾರ್ ಮನೆಯಲ್ಲಿ ಬೆಳೆದು ದೊಡ್ಡವನಾಗಬೇಕು. ಪಾಪ ಲಕ್ಷ್ಮಿ ಮುಗ್ಧೆ. ಆಕೆಗೆ ತಿಳಿಯದೇ ಆಕೆ ಅರ್ಧನಾರೀಶ್ವರ ಯೋಗವನ್ನು ಅನುಸರಿಸಿದಳು. ಎಲ್ಲಾ ಶ್ರೀಪಾದರ ಲೀಲೆ!

ಪುರಾಣ ಪ್ರವಚನ ಮುಗಿಯಿತು. ಶೂದ್ರರಿಂದ ಪಂಡಿತ, ಸಂಭಾವನೆ ಸ್ವೀಕರಿಸಿದನು. ಲಕ್ಷ್ಮಿ ಶೂದ್ರ ಕುಲದಲ್ಲಿ ಜನ್ಮಿಸಿದಳು. ಶೂದ್ರ ಸಂಬಂಧ ಪಡೆಯುವುದರಿಂದ ಶೂದ್ರರ ಜೊತೆ ತನಗಿದ್ದ ಕರ್ಮಬಂಧ ತೀರಿತೆಂದು ಪಂಡಿತ ಭಾವಿಸಿದನು. ಇನ್ನೂ ಏನಾದರೂ ಉಳಿದಿದ್ದರೇ ಅದನ್ನು ಯೋಗಾಗ್ನಿಯಲ್ಲಿ ದಹನಮಾಡಲೂ ನಿಶ್ಚಯಿಸಿದನು.

ಬಾಪನಾರ್ಯರ ಮನೆಯಲ್ಲಿ ಊಟ ಮಾಡಿದ್ದರಿಂದ ತನ್ನ ಬ್ರಾಹ್ಮಣ ಜನುಮಕ್ಕೆ ಸಂಬಂಧಪಟ್ಟ ಋಣ ತೀರಿ ಹೋಗುವುದೆಂದೂ ಭಾವಿಸಿದನು. ಆ ಮಹಾಯೋಗಿಗೆ ಸಂಭಾವನೆ ತರಲು ಬಾಪನಾರ್ಯರು ಒಳಗೆ ಹೋದರು. ಆಗ ಲಕ್ಷ್ಮಿ ಅಲ್ಲಿಗೆ ಬಂದಳು. ಅವಳ ಮನೆಯ ಹೆತ್ತ ಹಸು ಇತ್ತ 'ಗಿಣ್ಣು' ತಂದಳು. ಲಕ್ಷ್ಮಿಗೆ ಶ್ರೀಪಾದರ ಮೇಲೆ ಅಪಾರ ಭಕ್ತಿ, ಶ್ರದ್ಧೆ.

ಬಾಪನಾರ್ಯರು ಆ ಪಂಡಿತನಿಗೆ ಸಂಭಾವನೆ ಕೊಟ್ಟರು. ಹೊರಡಲು ಅನುಮತಿ ಪಡೆದಾಗ, ಬಾಪನಾರ್ಯರು, "ಎಲ್ಲರೂ ನಿನಗೆ ಅಪ್ಪಣೆ ಕೊಟ್ಟಿದ್ದಾರೆ. ಆದರೇ ಇಬ್ಬರು ಮಾತ್ರ ಅಪ್ಪಣೆ ಕೊಡಲು ಒಪ್ಪುತ್ತಿಲ್ಲ. ನನಗೆ ಸುಳ್ಳು ಲೆಕ್ಕ ಚೆನ್ನಾಗಿ ಗೊತ್ತು! ಬಾಕಿ ಎಷ್ಟಿದೆ, ತೀರಿತಾ ಎಂದು ಇತ್ಯರ್ಥವಾಗುವ ತನಕ, ನೀನು ಹೋಗಬಾರದು'' ಎಂದರು.

ಬ್ರಾಹ್ಮಣ ಬೆಚ್ಚಿದನು. ಶ್ರೀಪಾದರು ದತ್ತಾವತಾರಿ ಎಂದು ಕೇಳಿದ್ದನು. ಶ್ರೀಪಾದರು, "ಮಗು! ಈ ಲಕ್ಷ್ಮಿ ಮುಗ್ಧೆ. ಇನ್ನು ಕೆಲವೇ ವರುಷ ಜೀವಿಸುವಳು. ಸತ್ತ ಮೇಲೆ ಇವಳ ಗತಿ? ನೀನು ತಿಳಿದಂತೆ ಬ್ರಾಹ್ಮಣನಾಗಿಯೂ, ತಿಳಿಯದಂತೆ, ಲಕ್ಷ್ಮಿಯ ಪತಿಯಾಗಿದ್ದ ಗೊಲ್ಲನಾಗಿಯೂ ಜನ್ಮಿಸಿದೆ. ಲಕ್ಷ್ಮಿ ಗೊಲ್ಲನಾಗಿದ್ದ ನಿನ್ನ ಜೊತೆ ಕಷ್ಟಸುಖ ಹಂಚಿಕೊಂಡಳು. ನಿನ್ನ ಆ ಗೊಲ್ಲ ರೂಪದ ಚೈತನ್ಯವನ್ನು ವಿರಜಾನದಿ ದಾಟಿಸಿದ ಗೋಮಾತೆ, ಪುನಃ ಗೋವಾಗಿ ಬಂದಿಹಳು. ಇತ್ತ ಲಕ್ಷ್ಮಿ ತನ್ನ ಪ್ರೇಮಾಗ್ನಿಯಿಂದ, ಪತಿಯ

ಚೈತನ್ಯವನ್ನು ಹತ್ತಿರದಲ್ಲೆ ಉಳಿಸಿಕೊಂಡಿರುವಳು. ಈ ಗೊಲ್ಲ ವನಿತೆಯ ಚೈತನ್ಯ ಕೆಲ ವರುಷಗಳಲ್ಲಿ ಬ್ರಾಹ್ಮಣ ಚೈತನ್ಯಕ್ಕೆ ಬದಲಾಯಿಸಬಲ್ಲದು. ಅಂದರೇ ಈಗ ಈ ಲಕ್ಷ್ಮಿ ಗೊಲ್ಲ ವನಿತೆಯಾಗಿರುವ ಬ್ರಾಹ್ಮಣಿ. ನೀನು, ಬ್ರಾಹ್ಮಣ ರೂಪದಲ್ಲಿನ ಗೊಲ್ಲ! ನಿಮ್ಮಿಬ್ಬರ ಕರ್ಮ ಸಂಬಂಧ ನಾನರಿಯೆ. ಪದ್ಮಾವತಿ ಸ್ವರೂಪಿ ನಾನೇ ಇವಳಿಗೆ ಚಿನ್ನದ ಬೊಟ್ಟಿಟ್ಟು ಆಶೀರ್ವದಿಸಿದೆ. ಇವಳಿಗೆ ಮಾಂಗಲ್ಯ ಸಹಾ ಸೃಷ್ಟಿಸಿ, ಹಿರಣ್ಯ ಲೋಕದಲ್ಲಿಟ್ಟಿದ್ದೇನೆ. ಬಂಗಾರದ ಬಂಧನ ಮುರಿದರೇ, ಪತ್ನಿಗೆ ಪತಿಯ ಸಂಬಂಧ ಮುರಿಯುವುದು. ಆದ್ದರಿಂದಲೇ ನಾವು ಇವಳ ಮಾಂಗಲ್ಯಾಭರಣಗಳು ಹಿರಣ್ಯ ಲೋಕದಲ್ಲಿ ಭದ್ರಮಾಡಿದ್ದೇವೆ. ತಿಂಗಳ ಕೂಸಿನ ನಿನ್ನ ಚೈತನ್ಯ ಹಿಂತಿರುಗಿ ಗ್ರಹಿಸಬಿಟ್ಟರೇ, ಆ ಶರೀರವನ್ನು ಯಾವ ಅಸುರನಾದರೂ ಆಕ್ರಮಿಸಿ ಅಕೃತ್ಯಗಳು ನಡೆಸಬಲ್ಲ. ಆದ್ದರಿಂದ ಈಕೆಯಿಂದ ಸುವರ್ಣ ದಾನ ಪಡೆದು, ಕರ್ಮ ಮತ್ತು ಋಣಾನುಬಂಧ ಪೂರೈಸದೇ, ಮುಂದಿನ ಜನ್ಮದಲ್ಲಿ ಆದರ್ಶ ದಂಪತಿಗಳಾಗಿ, ನನ್ನ ಭಕ್ತರಾಗಿ, ತರಿಸಿದವರಾಗುವಿರಿ!'' ಎಂದು ಆಶೀರ್ವದಿಸಿದರು. ಮಕ್ಕಳೇ! ಹೀಗೆ ಆ ತಿಂಗಳ ಕೂಸು ಬ್ರಾಹ್ಮಣ ಬಾಲಕ, ದೊಡ್ಡವನಾಗುವನು. ಲಕ್ಷ್ಮಿ ಬ್ರಾಹ್ಮಣಿಯಾಗಿ ಹುಟ್ಟಿ ಅವನನ್ನು ಮದುವೆ ಆಗುವಳು. ಶ್ರೀಪಾದರ ಲೀಲೆಗಳು ಅದ್ಭುತಗಳೇ!



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 39

# ನಾಗೇಂದ್ರ ಶಾಸ್ತ್ರಿ ಜೊತೆ ಮಿಲನ

ನಾವು ಕಾಲನಾಗ ಮಣಿಯನ್ನು ಪಡೆದು, ಪ್ರಯಾಣ ಮುಂದುವರೆಸಿದೆವು. ಪೀಠಿಕಾಪುರ ಸಂದರ್ಶಿಸುವ ಆತುರ ನಮ್ಮಲ್ಲಿ ಸಾಕಷ್ಟು ಇತ್ತು.

### ಕಾಲನಾಗರ ಸ್ವರೂಪ

ನಾವೊಂದು ಬ್ರಾಹ್ಮಣನ ಮನೆಯಲ್ಲಿ ಆತಿಥ್ಯ ಪಡೆದೆವು. ಅವರ ಹೆಸರು ಶ್ರೀ ನಾಗೇಂದ್ರ ಶಾಸ್ತ್ರಿ. ಆತ ಮಂತ್ರಶಾಸ್ತ್ರ ತಿಳಿದವನು. ಅವರ ಮನೆಯಲ್ಲಿ ಎಷ್ಟೋ ನಾಗರಹಾವು ತಿರುಗುತ್ತಿರುವವು. ಅವರು, ಅವನ್ನು ಮಕ್ಕಳಂತೆಯೇ ನೋಡಿಕೊಳ್ಳುವರು. ಆ ಹಾವುಗಳು, ಯಾರಿಗೂ ಹಾನಿ ತರುತ್ತಿರಲಿಲ್ಲ. ಅವರ ಮೈಮೇಲೂ ಇಚ್ಛಾನುಸಾರ ತಿರುಗಾಡುತ್ತಿದ್ದವು. ದಿವ್ಯನಾಗಗಳಿಗೆ ಮಣಿ ಇರುವುದು. ಎಷ್ಟೋ ವರುಷ ಆತ ನಾಗೋಪಾಸನೆ ಮಾಡಿದನು. ಕಾಲನಾಗನ ಮಣಿಯನ್ನು ಪೂಜಾರ್ಥ ಹೊಂದಲೂ ಇಚ್ಛಿಸಿ, ನಾಗದೇವತೆ ಪ್ರಾರ್ಥನೆ ಮಾಡಿದನು.

### ನಾಗಮಣಿಯ ಪ್ರಾಭಾವ

ನಾಗೇಂದ್ರ ಶಾಸ್ತ್ರಿಗಳು, ''ಮಕ್ಕಳಾ! ಇಂದು ಬಹಳ ಸುದಿನ. ಶ್ರೀಪಾದರು 15 ವರುಷ ಬಾಲಕನಾಗಿದ್ದಾಗ ನಾನು ಶ್ರೀ ಪೀಠಿಕಾಪುರಕ್ಕೆ ಹೋದೆನು. ಪಾದಗಯಾ ಕ್ಷೇತ್ರ ದರ್ಶನದ ನಂತರ ಸ್ವಯಂಭೂ ದತ್ತರನ್ನು ಕಾಣಲು, ಅವರ ಕತ್ತಿನಲ್ಲಿ ಕಾಲನಾಗ ಒಂದನ್ನು ಕಂಡೆನು. ಅದರ ತಲೆಯ ಮೇಲೆ ಮಣಿ ತಪ್ಪದೇ ಇರುವುದು. ಕಾಲವನ್ನು ಶಾಸಿಸುವ ನಾಗಗಳಿಗೆ 'ಕಾಲನಾಗ' ಎಂದು ಹೆಸರು. ಮಣಿ ರಾತ್ರಿ ಹೊತ್ತು ದಿವ್ಯಕಾಂತಿ ಕೊಡುತ್ತಿರುವುದು. ಕುಂಡಲಿನೀ ಶಕ್ತಿ ಸಹಾ ಇರುವುದು. ಇವು ಮಹರ್ಷಿಗಳಂತೆ ಸದಾ ಯೋಗಧ್ಯಾನದಲ್ಲಿರುವವು. ಮಾನವರಂತೆ, ನಾಗಗಳಿಗೆ ಸಹಾ ವಿವಿಧ ಸ್ಥಿತಿಗಳಿರುವವು. ಸಾಮಾನ್ಯವಾಗಿ ಕಾಲನಾಗಗಳು ಮನುಷ್ಯರಿಗೆ ಕಂಡುಬರುವುದಿಲ್ಲ. ಇವುಗಳ ಮಣಿಗೆ, ಅಂಗಾರಕ ಗ್ರಹದಿಂದ ಬರುವ ಅಶುಭ ಸ್ಪಂದನಗಳನ್ನು ತಡೆಯುವ ಶಕ್ತಿ ಇರುವುದು. ಅಶುಭ ಸ್ಪಂದನಗಳು ನಾಗಮಣಿಯಂದು ಲೀನವಾಗಿ, ಅದರಿಂದ ಶುಭ ಸ್ಪಂದನೆಗಳು ಹೊರಬರುತ್ತಿರುವವು. ಆ ಮಂಗಳಮಯ ಸ್ಪಂದನೆಗಳು, ಮಂಗಳ ಗ್ರಹ ಪೀಡಿತರಿಗೆ ಶುಭಗಳು ಪ್ರಸಾದಿಸಬಲ್ಲವು. ಜಾತಕದಲ್ಲಿ ಮಂಗಳ ಗ್ರಹ ಸರಿಯಾಗಿ ಇಲ್ಲದ್ದಲ್ಲಿ ಜೀವನ ನರಕ ಸಂಕಟಗಳನ್ನು ತರುವುದು. ಪರಿಣಾಮಗಳು, ಮನೆಯವರಿಂದ ವಿರೋಧ, ಬಂಧುಮಿತ್ರಗಳಿಂದ ವಿರೋಧ, ಋಣಬಾಧೆ, ಕನ್ಯೆಯರಿಗೆ ಯುಕ್ತ ವಯಸ್ಸಿನಲ್ಲಿ ಮದುವೆ ಆಗದಿರುವುದು, ಅವಿವಾಹಿತರಾಗಿಯೇ ಉಳಿದುಹೋಗುವುದು, ವಿವಾಹವಾದರು ಸಂತಾನವಾಗದಿರುವುದು, ಎಲ್ಲಾ ಕೆಲಸಗಳೂ ನಿರರ್ಥಕವಾಗುವುದು ಮುಂತಾದವು.

ಸ್ವಯಂಭೂ ದತ್ತನನ್ನು ದರ್ಶಿಸಿದ ನಂತರ ನನ್ನಲ್ಲಿ, ಕಾಲನಾಗನ ಮಣಿಯನ್ನು ಹೊಂದಲೇಬೇಕೆಂಬುವ ಆಕಾಂಕ್ಷೆ ಹೆಚ್ಚಿತು. ಆ ಮಣಿಯಿಂದ ಜೀವನದಲ್ಲಿ ಎಲ್ಲಾ ವಿಧವಾಗಿ ಅಭಿವೃದ್ಧಿ ಹೊಂದುವ ಆಸೆ ಹೆಚ್ಚಿತು'' ಎಂದನು.

## ಶ್ರೀಪಾದರ ಪಾದುಕಾ ಮಹಿಮೆ, ನಾಗದೋಷ ನಿವಾರಣೆ ನಿಯಮಗಳು

ನಾನು ನರಸಿಂಹ ವರ್ಮರ ಮನೆ ಕಡೆಯಿಂದಾ ಹೋಗುತ್ತಿದ್ದೆನು. ಶ್ರೀಪಾದ ಗುರು ಸಾರ್ವಭೌಮರು, ಅವರ ಮನೆಯ ಪ್ರಾಂಗಣದಲ್ಲಿ ಲೀಲೆಯಾಗಿ ಗಿಡಗಳಿಗೆ ನೀರು ಹಾಕುತ್ತಿದ್ದರು. ಅತ್ತ ನರಸಿಂಹ ವರ್ಮ ಗಿಡಗಳ ಬುಡಗಳನ್ನು ಸರಿ ಮಾಡುತ್ತಿದ್ದರು. ಆ ಪ್ರಾಂಗಣದಲ್ಲಿ ಔದುಂಬರ ವೃಕ್ಷ ಒಂದಿತ್ತು. ಆ ವೃಕ್ಷ ನೀರನ್ನು ಸರಿಯಾಗಿ ಹೀರಿಕೊಳ್ಳಲು ಸಹಾಯವಾಗುವಂತೆ ಆ ಭೂಮಿಯನ್ನು ವರ್ಮರು ಸರಿ ಮಾಡುತ್ತಿದ್ದರು. ಆಗ ಅವರ ಕೈಗಳಿಗೆ ಶ್ರೀಪಾದರ ಪಾದಗಳ ಗುರ್ತಿನ ಪಾದುಕೆಗಳು ಲಭಿಸಿದವು. ಅವು, 16 ವರುಷದ ಹುಡಗನದಂತೆ ಇದ್ದವು. 'ನಾಗೇಂದ್ರ ಶಾಸ್ತ್ರಿ ಇಲ್ಲಿಗೆ ಬಾ!' ಎಂಬ ಕರೆ ಕೇಳಿ ಬಂತು. ನಾನು ಆಶ್ಚರ್ಯದಿಂದ ಆ ಕಡೆ, ಅವರ ಸನ್ನಿಧಿಗೆ ಹೋದೆನು. ವರ್ಮರು ಆ ಪಾದುಕೆಗಳನ್ನು ತೆಂಗಿನ ನೀರಿನಿಂದ ತೊಳೆದರು. ಅವನ್ನು ಶ್ರೀಪಾದರ ಪಾದಗಳ ಬಳಿ ಇಡಲಾಯಿತು. 'ಪೂಜಿಸಿಕೊಳ್ಳಲು ಆ ಪಾದುಕೆಗಳು ತಮಗೆ ಕೊಡಲಾಗುವುದೆಂದು ವರ್ಮರು ಯೋಚಿಸುತ್ತಿದ್ದರು. ಆದರೇ ಶ್ರೀಗಳ ಸಂಕಲ್ಪವೇ ಬೇರೇ ಇತ್ತು. ಆ ಪಾದುಕೆಗಳು ಶ್ರೀಪಾದರು ನನಗಿತ್ತು, "ನಾಗೇಂದ್ರ ಶಾಸ್ತ್ರಿ! ನೀನು, ನಾಗೇಂದ್ರನ ಪೀಠ ಒಂದು ಸ್ಥಾಪಿಸಿ, ಈ ಪಾದುಕೆಗಳು ಅಲ್ಲಿಟ್ಟು, ಪೂಜಿಸಿಕೊಳ್ಳಬಹುದು. ನೀನು ಬಹಳ ಕಾಲದಿಂದ, ಕಾಲನಾಗನ ಮಣಿ ಬಯಸುತ್ತಿದ್ದೀಯ. ನಾನು ಪ್ರಸನ್ನನಾಗಿರುವೆನು. ಕಾಲನಾಗರು ಸದಾ ತಮ್ಮ ದಿವ್ಯಮಣಿಗಳಿಂದ ಯಾವ ಸ್ವಾಮಿಯನ್ನು ಪೂಜಿಸುವೆರೋ, ಯಾವ ದಿವ್ಯ ಪಾದ ಪದ್ಮಗಳನ್ನು ಪೂಜಿಸುವೆರೋ, ಆ ಸ್ವಾಮಿ ನಾನೇ! ಈ ದಿವ್ಯ ಪಾದುಕೆಗಳು ನನ್ನವೇ! ನೀನು ಅವನ್ನು ಪೂಜಿಸುಕೋ. ಮೂಲವ್ಯಾಧಿ ಪೀಡಿತರು ನಿನ್ನನ್ನು ಭೇಟಿ ಮಾಡಿದರೇ ಪಾದುಕೆಗಳನ್ನು ಪೂಜಿಸಿ ತೀರ್ಥ ನೀಡಿದರೇ, ಬಾಧೆ ನಿವಾರಿಸಲಾಗುವುದು. ಈ ವಿಧವಾದ ನಾಗದೋಷ ಶಾಂತಿ ಸಂದರ್ಭದಲ್ಲಿ ಕೊಡಲಾಗುವ ಸಂಭಾವನೆಯಲ್ಲಿ ತನ್ನ ಪತ್ನಿಯದಾಗಲಿ, ಪತಿಯದಾಗಲಿ, ಹೆತ್ತ ಮನೆಯದವರದಾಗಲಿ ಸೇರಿರಲೇಬೇಕೆಂಬ ನಿಯಮ ತಪ್ಪದೇ ಪಾಲಿಸಬೇಕೆಂದು ತಿಳಿ. ಗಂಡಸು ತನ್ನ ನಾಗದೋಷ ನಿರ್ಮೂಲನೆಗಾಗಿ ದಕ್ಷಿಣೆ ನೀಡುವಾಗ, ಬಾವಮೈದರಿಂದಾಗಲಿ, ಮಾವಂದಿರಿಂದಾಗಲಿ ಅಂದರೇ ಪತ್ನಿಯ ತವರು ಮನೆಯ ಕಡೆಯಿಂದ ಸ್ವಲ್ಪ ಧನವನ್ನು ತನ್ನ ದಕ್ಷಿಣೆಯ ಜೊತೆ ಸೇರಿಸಿ ನೀಡಬೇಕು. ಹಾಗೆಯೇ ಪತ್ನಿ ತನ್ನ ನಾಗದೋಷ ನಿರ್ಮೂಲನೆಗಾಗಿ ತನ್ನ 'ಸ್ತ್ರೀ ಧನ'ದ ಜೊತೆಗೆ, ಪತಿಯ ಮನೆಯವರಿಂದ ಸ್ವಲ್ಪ ಧನ ಪಡೆದು ಅರ್ಪಿಸಬೇಕು. ಪತಿ ಪತ್ನಿಯರಿಬ್ಬರೂ ನಾಗದೋಷ ಹೊಂದಿದ್ದಲ್ಲಿ, ಪತಿಯ ಧನ ಪತ್ನಿಯ ಸ್ತ್ರೀ ಧನದ ಜೊತೆಗೆ, ಇಬ್ಬರ ಮನೆಗಳ ಕಡೆಯಿಂದಾ ಸ್ವಲ್ಪ ಧನ ಯಾಚಿಸಿ, ಅದರ ಜೊತೆ ದಕ್ಷಿಣೆಯಾಗಿ ನೀಡಬೇಕು. ಕನ್ಯೆಯ ನಾಗದೋಷ ಸಂಪೂರ್ಣ ಪರಿಹಾರಕ್ಕಾಗಿ, ತನ್ನ ತಂದೆ ಧನದ ಜೊತೆ ಸೋದರಮಾವಂದಿರ ಸ್ವಲ್ಪ ಧನವನ್ನು ಸೇರಿಸಿ ನೀಡಬೇಕು.

ನಾಗದೋಷ ಪರಿಹಾರವು ಯಾರೇ ಆಗಲಿ ತಮ್ಮ ಸಂಭಾವನೆಗೆ ತವರು ಮನೆಯವರ ಧನ ಸೇರಿಸದಿದ್ದರೇ, ಆ ಪರಿಹಾರವು ಸಂಪೂರ್ಣ ಆಗಲಾರದೆಂಬ ನಿಯಮನಿಟ್ಟಿರುವೆನು. ಮಗು, ನಾಗೇಂದ್ರ ಶಾಸ್ತ್ರಿ! ನನ್ನ ಈ ನಿಯಮ ಪಾಲಿಸಿ ನಿನ್ನ ನಾಗಶಾಸ್ತ್ರ ವೈದುಷ್ಯವನ್ನು ಉಪಯೋಗಿಸಿಕೋ'' ಎಂದು ತಿಳಿಸಿದರು.

## ಶ್ರೀದತ್ತಾರಾಧಕರಿಗೆ ದೊರೆಯುವ ವಿಶೇಷ ಫಲಿತ

ಶ್ರೀಗಳು, ಮುಂದುವರಿಯುತ್ತಾ, "ಕೆಲ ಕಾಲಕ್ಕೆ ನಿನ್ನ ಹತ್ತಿರಕ್ಕೆ ಶಂಕರ ಭಟ್ಟು ಮತ್ತು ಧರ್ಮಗುಪ್ತರೆಂಬುವರು ಬರುವರು. ಅಲ್ಲಿಯವರೆಗೂ ನೀನಾರಾಧಿಸಿದ ನನ್ನ ಈ ದಿವ್ಯ ಪಾದುಕೆಗಳನ್ನು ಅವರಿಗಿತ್ತು. ಅವರಿಂದ ಒಂದು ಕಾಲನಾಗಮಣಿ ಸ್ವೀಕರಿಸುವುದು.

ಶರೀರ ಧರ್ಮಗಳಿಗೆ ಒಂದು ಕಾಲವಿರುವುದು. ಮನಸ್ಸಿಗೂ ಒಂದು ಕಾಲ, ಪ್ರಾಣಕ್ಕೂ ಒಂದು ಕಾಲ ಇರುವುದು. ಆದರೇ ಆತ್ಮ ಕಾಲಾತೀತ. ಆಯಾ ಗ್ರಹ ನಕ್ಷತ್ರಾದಿಗಳು ಇರುವ ತನಕ ಆಯಾ ಕಾಲಗಳು ಇರುವವು. ವೃದ್ಧಿಕ್ಷಯಗಳು ಕಾಲತೀತವಾಗಿ ನಡೆಯುತ್ತಿರುವವು. ಎಷ್ಟೋ ಬ್ರಹ್ಮಾಂಡಗಳು ಹುಟ್ಟಿ, ಬೆಳೆದು, ಸ್ವಲ್ಪ ಕಾಲ ಸ್ಥಿತಿಯಲ್ಲಿದ್ದು, ನಾಶ ಹೊಂದುತ್ತಿರುವವು. ಅದೆಲ್ಲಾ ಕಾಲ ಮಹಿಮೆಯೇ. ಅಂತಹ ಕಾಲಸ್ವರೂಪ ನನ್ನ ಆಧೀನವಾಗಿದೆ. ನನ್ನನ್ನು ಆರಾಧಿಸುವವರಿಗೆ, ಕಾಲಪುರುಷನು ಅನುಕೂಲವಾಗಿರುವನು. ಭೂತ ಪ್ರೇತಾದಿ ಮಹಾಶಕ್ತಿಗಳು ಸಹಾ, ದತ್ತಾರಾಧಕರನ್ನು ಏನೂ ಮಾಡಲಾರವು. ಈ ಸೃಷ್ಟಿಯಲ್ಲಿನ ಪ್ರಾಣಿಗಳೆಲ್ಲವಕ್ಕಿಂತಾ ನಾನೇ ಬಲವಂತನು. ನನ್ನಿಂದಲೇ ಶಕ್ತಿಯನ್ನು ಪಡೆದು ಜೀವರಾಶಿಗಳು ವೃದ್ಧಿ ಹೊಂದುವವು. ಹಾಗೆ ಶಕ್ತಿಯನ್ನು ಪಡೆದು, ಬಲದಿಂದ ಗರ್ವ ಮತ್ತು ಅಹಂಕಾರಪಟ್ಟರೇ ಅಂತವರಲ್ಲಿನ ನನ್ನ ಬಲ ಹಿಂತಿರುಗಿಸಿಪಡೆಯುವೆನು. ಗರ್ವ, ಅಹಂಕಾರ ಎಲ್ಲಾ ಅನರ್ಥಗಳಿಗೂ ಕಾರಣವಾದದ್ದು. ನನ್ನನ್ನು ಆರಾಧಿಸುತ್ತಾ ಸದಾ ಜ್ಞಾಪಕದಲ್ಲಿ ನನ್ನನ್ನು ನೆನೆಯುವವರು, ಸದಾ ಸಂತುಷ್ಟರಾಗಿ ಆನಂದದಿಂದ ಇರುವರು'' ಎಂದು ನುಡಿದರು.

ಈ ಮಹಾಪುರುಷರು ನನಗೆ ಊಟ ಏರ್ಪಾಟು ಮಾಡಿದರು. ಶ್ರೀವರ್ಮರು ಅನ್ನದಾತರು. ಶ್ರೀದತ್ತ ಅನ್ನದಾನಪ್ರಿಯರು. ಜೀವಗಳು ಹಸಿವಿನಿಂದ ಇದ್ದರೇ ಅವರಿಗೆ ಅಸಂತೃಪ್ತಿ. ಅವರು ಸರ್ವಭೂತ ಹಿತಕರರು.

ಶ್ರೀ ಮಹಾಸ್ವಾಮಿಗಳಿಂದ ಅಪ್ಪಣೆ ಪಡೆದು, ನಾನು ಹೊರಟೆನು. ನೀವು ಕಾಣುತ್ತಿರುವ ಈ ಸ್ಥಳದಲ್ಲಿ ಆಶ್ರಮ ಕಟ್ಟಿಕೊಂಡೆನು. ನನ್ನ ಬಳಿ ಬಂದವರಿಗೆಲ್ಲರಿಗೂ ವರ್ಣಾಶ್ರಮ ಧರ್ಮ ಕುರಿತು ಬೋಧಿಸುತ್ತಿರುವೆನು.

ಇಷ್ಟರಲ್ಲಿ ನನ್ನ ಪತ್ನಿ ತೀರಿಹೋದಳು. ನಾನು ಚಿಂತಿಸುತ್ತಲೇ, ಒಂದು ಹಾವಿನ ಕಡಿತಕ್ಕೆ ತೀರಿಹೋದ ಒಬ್ಬ ಹಜಾಮನ ಪತ್ನಿಯಿಂದ, ನಾನರಿತ ನಾಗವಿದ್ಯೆಯಿಂದ, ಆ ಹಾವನ್ನು ಬರಮಾಡಿಸಿ ವಿಷ ತೆಗೆದೆನು. ಆದರೇ ಆ ಹಜಾಮನ ಪತ್ನಿ ಅದೇ ಶರೀರದಲ್ಲಿರಲು ಇಚ್ಛಿಸಲಿಲ್ಲ. ಆಕೆ ಪ್ರಾಣಮಯ ಜಗತ್ತಿನಲ್ಲಿ ಯಥೇಚ್ಛಯಾಗಿ ವಿಹರಿಸುತ್ತಾ, ಜನರನ್ನು ಆವಹಿಸಿ, ಅವರು ದುಃಖಿಸುವಾಗ ಆನಂದ ಪಡೆಯಬೇಕೆಂದು ಸಂಕಲ್ಪಿಸಿದಳು. ಇತ್ತ ಹಜಾಮ, ತನ್ನ ಪತ್ನಿಯನ್ನು ಬದುಕಿಸಲು ಯಾಚಿಸಿದನು. ಆಗ ನಾನು ''ಸತ್ತ ನನ್ನ ಪತ್ನಿಯ ಆತ್ಮವನ್ನು ಈ ಶರೀರದಲ್ಲಿ ಇಡುವೆನು. ಈಕೆಯನ್ನು ತಾಯಿಯಂತೆ ಭಾವಿಸು'' ಎಂದೆನು.

ತೀರಿಹೋದ ನನ್ನ ಪತ್ನಿಯ ಆತ್ಮ ಹಜಾಮನ ಪತ್ನಿಯ ಶರೀರದಲ್ಲಿಡಲಾಯಿತು. ಅಂದರೇ ನನ್ನ ಪತ್ನಿ ಪುನರುಜ್ಜೀವಿತಳಾದಳು. ಹಜಾಮನ ಪತ್ನಿ ಗಯ್ಯಾಳಿ, ದುಷ್ಟಳಾದ ಕಾರಣ ಆಕೆಯ ಎಲ್ಲಾ ನಾಡಿಗಳೂ ದೋಷಪೂರಿತವಾಗಿದ್ದವು. ಅಂತಹ ಶರೀರದಲ್ಲಿರುವುದು ನನ್ನ ಪತ್ನಿಗೆ ಮುಜುಗುರವಾಗಿತ್ತು. ಶರೀರ ಉರಿಯುತ್ತಿರಲು ಬಾಧೆಯಿಂದ, ಇದನ್ನು ಬಿಟ್ಟು ಹೋಗಬೇಕೆಂದು ಪದೇ ಪದೇ ಬಯಸುತ್ತಿದ್ದಳು.

ನಾನಿದ್ದ ಗ್ರಾಮದಲ್ಲಿ, 'ನಾಗೇಂದ್ರ ಶಾಸ್ತ್ರಿ ಎಂಬ ಬ್ರಾಹ್ಮಣ ಒಂದು ಹಜಾಮನ ಪತ್ನಿಯನ್ನು ಬದುಕಿಸಿ, ಆಕೆಯಲ್ಲಿ ಅಕ್ರಮ ಸಂಬಂಧ ಇಟ್ಟುಕೊಂಡು ಆ ಹಜಾಮನಿಗೆ ಅನ್ಯಾಯ ಮಾಡುತ್ತಿದ್ದಾನೆಂದು, ಅಲ್ಲಿನ ಬ್ರಾಹ್ಮಣ್ಯ ಆ ಶಾಸ್ತ್ರಿಯನ್ನು ಕುಲ ಬಹಿಷ್ಕರಿಸಬೇಕೆಂದು, ಮಂತ್ರ ತಂತ್ರದಿಂದ ಸಂಪಾದಿಸಿದರಲ್ಲಿ ಮುಕ್ಕಾಲು ಭಾಗ ಆ ಶಾಸ್ತ್ರಿ, ಹಜಾಮನಿಗೆ ಕೊಡಬೇಕೆಂದು, ಹಜಾಮರ ಕುಲ ಮುಖ್ಯಸ್ಥರು ತೀರ್ಪಿತ್ತರು.

ನನ್ನ ಪರಿಸ್ಥಿತಿ ಚಿಂತಾಜನಕವಾಗಿತ್ತು. ನಾನು ಎಷ್ಟು ವಿವರಿಸಿ ತಿಳಿಸಿದರೂ, ನನ್ನ ಮಾತು ಕೇಳುವವರೇ ಇರಲಿಲ್ಲ. ತೀರಿಹೋದ ಆ ಹಜಾಮನ ಪತ್ನಿ, ಕೆಲ ಹೆಂಗಸರ ಮೈಮೇಲೆ ಬಂದು, ತಾನು ಸತ್ತ ಶಾಸ್ತ್ರಿಯ ಪತ್ನಿ ಎಂದು, ಪ್ರೇತಾತ್ಮವೆಂದು, ತನ್ನ ಪತಿ ಮಾಡುತ್ತಿರುವ ಅಕೃತ್ಯಗಳನ್ನು ಕುಲ ಹಿರಿಯರು ನಿಲ್ಲಿಸಬೇಕೆಂದು ನುಡಿಯುತ್ತಿದ್ದಳು. ಅವರೆಲ್ಲಾ ಕೋಪಗೊಂಡು, ನನ್ನನ್ನೂ ಆ ಹಜಾಮನ ಪತ್ನಿಯನ್ನೂ ಕೊಲ್ಲುವೆನೆಂದರು.

ಆಗ ನಾನು ಶ್ರೀಪಾದರ ಶರಣು ಬೇಡಿದೆನು. ಶ್ರೀಪಾದರು, ''ನೀನು ಪತಿ ಆದ ಮಾತ್ರಕ್ಕೆ ನಿನ್ನ ಪತ್ನಿಯನ್ನು 'ಹಜಾಮನ ಪತ್ನಿಯ ಶರೀರದೊಳು ಪ್ರವೇಶಿಸ'ಲೆಂದು ಆಜ್ಞಾಪಿಸುವುದು ಸರಿಯಲ್ಲ. ಅಷ್ಟಲ್ಲದೇ ನೀನು, ನಿನ್ನ ಮಂತ್ರಶಕ್ತಿಯಿಂದ ಬಾಧಿತರಿಗೆ ಪ್ರತಿಫಲಾಪೇಕ್ಷಿಸದೇ ಸೇವೆ ಮಾಡಬೇಕು. ಧನವನ್ನು ಯಾಚಿಸದೇ ಅವರೇ ಸಂತೋಷವಾಗಿ ತರುವ ಸಂಭಾವನೆ ಸ್ವೀಕರಿಸಬೇಕು.'' ನಾನು ಶ್ರೀಪಾದರ ಆಜ್ಞೆಯನ್ನು ಶಿರಸಾಪಾಲಿಸಿದೆನು. ನಂತರ ನನ್ನ ಪತ್ನಿಯ ಆತ್ಮ ಆ ಶರೀರವನ್ನು ಬಿಟ್ಟಿತು. ಶರೀರ ದಹನವಾಯಿತು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 40

# ಭಾಸ್ಕರ ಶಾಸ್ತ್ರಿಯ ಜೊತೆ ಮಿಲನ

### ಶಂಕರ ಭಟ್ಟ, ಧರ್ಮಗುಪ್ತರ ವಿಚಿತ್ರ ಸಂಘಟನೆಗಳು

ನಾವು ಅನೇಕ ವಾಹನಗಳ ಮೂಲಕ ಪ್ರಯಾಣಿಸುತ್ತಿದ್ದೆವು. ಒಮ್ಮೆ ಪಾದಚಾರಿಗಳಾಗಿಯು, ಮತ್ತೊಮ್ಮೆ ಎತ್ತಿನ ಗಾಡಿಗಳ ಮೂಲಕ, ಕುದುರೆ ಗಾಡಿ ಮೂಲಕ ಪ್ರಯಾಣ ಮುಂದುವರಿಸುತ್ತಿದ್ದೆವು. ಹಾಗೆ ಪ್ರಯಾಣಿಸುತ್ತಾ ತ್ರಿಪುರಾಂತಕ ಮಹಾಕ್ಷೇತ್ರ ತಲುಪಿದೆವು. ತ್ರಿಪುರಾಂತಕೇಶ್ವರನ ದರ್ಶನ ಲಭಿಸಿತು. ಅಲ್ಲಿನ ದಿವ್ಯಾನುಭವಗಳು ಎಷ್ಟೋ ನಮಗೆ ಆನಂದ ತಂದವು! ನಮ್ಮ ಬಳಿ ಶ್ರೀಪಾದರ ದಿವ್ಯ ಪಾದುಕೆಗಳಿದ್ದವು. ನಮ್ಮ ಜೊತೆಯೇ ಶ್ರೀಗಳು ಪ್ರಯಾಣ ಮಾಡುತ್ತಿದ್ದ ಅನುಭವ ನಮಗಾಗುತ್ತಿತ್ತು. ನಮ್ಮ ಪಯಣ, ಶ್ರೀಗಳೇ ನಮ್ಮೊಳಗಿಂದ ನಡೆಸುತ್ತಿದ್ದಂತೆ ನಮಗೆ ಗೋಚರಿಸುತ್ತಿತ್ತು. ನಮ್ಮ ಮಾತು ಸಹಾ ನಮಗೆ ತಿಳಿಯದಂತೆ ಹೊರಬರುತ್ತಿತ್ತು. ಊಟ ಮಾಡುವಾಗಲೂ ಶ್ರೀಗಳೇ ನಮ್ಮೊಳಗಿಂದ ಭುಜಿಸುತ್ತಿದ್ದಂತೆ ಇತ್ತು! ನಮ್ಮ ಶರೀರದ ಮಾಂಸ, ರಕ್ತ ಮತ್ತು ನಾಡಿಗಳಲ್ಲಿ ಸಹಾ ಅವರೇ ತುಂಬಿರುವಂತೆ ಅನಿಸುತ್ತಿತ್ತು. 'ಜೀವಾತ್ಮನೇ ಪರಮಾತ್ಮ' ಎಂದು ನಾವು ಕೇಳಿದ್ದೇವೇ ಹೊರತು, ಈ ರೀತಿ ಮೈಯ್ಯೆಲ್ಲಾ ಶ್ರೀಗಳ ಚೈತನ್ಯ ತುಂಬಿ, ಅವರೊಟ್ಟಿಗೆ ಸ್ಪರ್ಶವಿಲ್ಲದೇ ಅನುಭವ ಮಾತ್ರ ಇರುವ ಲೀಲೆ ನಾವು ಕೇಳಿರಲಿಲ್ಲ, ನೋಡಿರಲಿಲ್ಲ!

ಶ್ರೀ ತ್ರಿಪುರಾಂತಕೇಶ್ವರ ಅರ್ಚಕರು ಶ್ರೀ ಭಾಸ್ಕರ ಶಾಸ್ತ್ರಿ. ನಮ್ಮನ್ನು ಬಹಳ ಆದರಿಸಿದರು. ಆತ ಶ್ರೀ ಪೀಠಿಕಾಪುರದವರಂತೆ. ಅರ್ಚನೆ ಮಾಡಲು ಅಲ್ಲಿ ನಿಯಮಿಸಿಲ್ಪಟ್ಟಿದ್ದರು. ಶೋಡಷೀ ರಾಜೇಶ್ವರೀ ದೇವಿ ಭಕ್ತ. ಶ್ರೀ ಪೀಠಿಕಾಪುರ ನಿವಾಸಿನಿ, ಶ್ರೀ ಕುಕ್ಕುಟೇಶ್ವರ ಪ್ರಭುಗಳ ದೇವಿಯೇ ಆದ ಶ್ರೀ ರಾಜೇಶ್ವರೀ ದೇವಿ ಸ್ವಪ್ನದಲ್ಲೇ ಆತನಿಗೆ ಮಂತ್ರದೀಕ್ಷೆಯನಿತ್ತಳಂತೆ! ನಮ್ಮಿಬ್ಬರನ್ನು ತನ್ನ ಆತಿಥ್ಯ ಸ್ವೀಕರಿಸಲೂ ಬಯಸಿದನು. ನಮ್ಮ ಬಳಿ ಶ್ರೀಗಳ ಪಾದುಕೆಗಳಿರುವ ವಿಷಯ ಅರಿತನು. ನಾವು ಅವನ್ನು ಆತನ ಪೂಜಾ ಗೃಹದಲ್ಲಿಟ್ಟೆವು. ಸುಶ್ರಾವ್ಯ ಕಂಠದಿಂದ ಆ ಪಾದುಕೆಗಳು ಹೀಗೆ ನುಡಿದವು.

"ಮಕ್ಕಳಾ! ನೀವು ಬಹಳ ಧನ್ಯರು. **ಈ ಪಾದುಕೆಗಳಿಗೆ ಭಾಸ್ಕರ ಶಾಸ್ತ್ರಿ ಪೂಜೆ ಮಾಡಬೇಕು. ಸದ್ಯಕ್ಕೆ ತಾಮ್ರ ರೂಪದಲ್ಲಿರುವ ಈ ಪಾದುಕೆಗಳು, ಭಾಸ್ಕರ ಶಾಸ್ತ್ರಿ ಮಂತ್ರೊಪಾಸನೆ ಬಲದಿಂದ ಕೆಲ ವರ್ಷಗಳಿಗೆ ಸ್ವರ್ಣ ಪಾದುಕೆಗಳಾಗುವವು. ಕೆಲ ಹಿರಣ್ಯ ಲೋಕಸ್ಥ ಮಹಾಪುರುಷರು, ಅವನ್ನು ಹಿರಣ್ಯ ಲೋಕದಲ್ಲಿಟ್ಟು ಪೂಜಿಸುವರು. ನಂತರ, ಕಾರಣ ಲೋಕಕ್ಕೆ ತದನಂತರ, ನಾನಿರುವ ಮಹಾಕಾರಣ ಲೋಕಕ್ಕೆ ತರುವರು. ಆ ನನ್ನ ಪಾದುಕೆಗಳನ್ನು ನಾನೇ ಧರಿಸಿ, ಕಾರಣ ಲೋಕದಲ್ಲಿನ ದಿವ್ಯಾತ್ಮರನ್ನು ಆಶೀರ್ವದಿಸುವೆನು. ನಂತರ ಹಿರಣ್ಯ ಲೋಕದ ಮಹಾಪುರುಷರನ್ನು ಆಶೀರ್ವದಿಸುವೆನು. ಆಗ ಅವುಗಳಿಗೆ ತೇಜೋಮಯ ಸಿದ್ಧಿ ಪ್ರಾಪ್ತಿಯಾಗುವುದು. ಆಗ 18,000 ಮಹಾಸಿದ್ದರು ಅವನ್ನು ಸ್ವರ್ಣ ವಿಮಾನದಲ್ಲಿ ಕೊಂಡೊಯ್ದು, ನನ್ನ ಜನುಮ ಸ್ಥಾನದಲ್ಲಿ ಮಂತ್ರೋಚ್ಚಾರಣೆಯಿಂದ, ದಿವ್ಯ ನೀರಾಜನ ಸಮೇತ ಭೂಮಿಯಲ್ಲಿ 360 ಆಳೆತ್ತರ ಅಂತರ್ಭಾಗದಲ್ಲಿ ಪ್ರತಿಷ್ಠಾಪಿಸುವರು. ಅಲ್ಲಿ ಸ್ವರ್ಣಮಯ ದೇಹಕಾಂತಿಯುಳ್ಳ ದಿವ್ಯನಾಗರು ಪ್ರತಿನಿತ್ಯ ಅವನ್ನು ಪೂಜಿಸುವವು. 64,000 ಯೋಗಿನಿಯರು ಅವನ್ನು ಸ್ವರ್ಣ**

**ಸಿಂಹಾಸನದ ಮೇಲಿಟ್ಟು ಪೂಜಿಸುವರು. ಪ್ರತಿನಿತ್ಯ ಯೋಗಿನಿಮಣಿಯರು ಮತ್ತು ಋಷಿ ಸಂಘದಿಂದ ಆರಾಧಿಸಲ್ಪಡುವ ನಾನು, ಅಲ್ಲೇ ದರ್ಬಾರು ನಡೆಸುವೆನು. ಈ ಭೂಮಿಗೆ ಸೇರಿಕೊಂಡೇ, 'ಸ್ವರ್ಣ ಪೀಠಿಕಾಪುರ' ವಿಭಿನ್ನ ಅಳತೆಗಳಲ್ಲಿ ಅದೃಶ್ಯವಾಗಿ ಮತ್ತು ಅಗೋಚರವಾಗಿರುವುದು. ಸಾಮಾನ್ಯ ಜನರಿಗೆ, ಭೂಮಿ ಮೇಲಿನ ಪೀಠಿಕಾಪುರ ಮಾತ್ರ ಕಾಣುತ್ತಿರುವುದು. ಯೋಗ ದೃಷ್ಟಿಯುಳ್ಳವರಿಗೆ ಮಾತ್ರ 'ಸ್ವರ್ಣ ಪೀಠಿಕಾಪುರ' ಕಾಣುವುದು. ನನ್ನ ಸ್ವರ್ಣ ಪಾದುಕೆ ಪ್ರತಿಷ್ಠಿಸಲ್ಪಡು ಸ್ಥಳದ ಸರಿಯಾಗಿ ಮೇಲಿನ ಭೂ ಭಾಗದಲ್ಲಿ, ಪೀಠಿಕಾಪುರದಲ್ಲಿ ನನ್ನ ಪಾದುಕೆ ಪ್ರತಿಷ್ಠಿಸಲಾಗುವವು. ಆದ್ದರಿಂದ ನೀವೆಲ್ಲಾ ಸಂತೋಷದಿಂದ ಇರಿ. ಮುಂದೆ ಅವೆಷ್ಟೋ ವಿಚಿತ್ರಗಳು ನಡೆಯುವವು. ಈ ನನ್ನ ಮಹಾಸಂಸ್ಥಾನದಲ್ಲಿರುವ ಪಾದುಕೆಯ ದರ್ಶನಕ್ಕಾಗಿ, ಭಕ್ತರು ಇರುವೆಯ ಸಾಲಿಗಳಂತೆ ಬರುವರು."**

ನಾವೆಲ್ಲಾ ಆಶ್ಚರ್ಯಚಕಿತರಾದೆವು. ಶ್ರೀ ಭಾಸ್ಕರ ಶಾಸ್ತ್ರಿಗಳು ಷೋಡಶೀ ರಾಜೇಶ್ವರೀ ದೇವಿಯ ಪರಮಭಕ್ತರು. ''ದೇವಿಯ ವೈಭವನ್ನು ತಿಳಿಸಿ'' ಎಂದು ಕೇಳಲೂ, ಅವರು ಹೇಳಲಾರಂಭಿಸಿದರು.

## ಶ್ರೀ ರಾಜರಾಜೇಶ್ವರೀ ದೇವಿ ವಿವೇಕಕ್ಕೆ ಚಿಹ್ನೆ

''ಮಕ್ಕಳಾ! ರಾಜರಾಜೇಶ್ವರಿ ಚೈತನ್ಯ ಬಗ್ಗೆ ಯೋಚಿಸುವ ನಮ್ಮ ಮನಸ್ಸಿಗೆ, ನಮ್ಮ ಇಚ್ಛೆಗಿಂತಲೂ ಉನ್ನತ, ವಿಶಾಲವಾದ ಪ್ರದೇಶದಲ್ಲಿ ಈ ತಾಯಿ ಕೂತಿರುವಳು! ಸಾಧಾರಣವಾಗಿ ನಮ್ಮ ಆಲೋಚನೆಗಳು ಮನಸ್ಸು ಮೇಧಾಶಕ್ತಿಯಾಗಿ ಬದಲಾಯಿಸಿ ಬಿಡುತ್ತಿರುವುದು. ಹಾಗಲ್ಲದೇ, ಮನಸ್ಸು ವಿವೇಕವಂತವಾಗಿ ಮಾರ್ಪಡಲು ಈ ರಾಜೇಶ್ವರಿ ತಾಯಿ ನೆರವಾಗುವಳು. ಈ ನಮ್ಮ ಇಚ್ಛೆಯ ಸಂಕುಚಿತ ಪರಿಧಿಯನ್ನು ದಾಟಿ ಶುದ್ಧ ವಿಶಾಲತ್ವ ಹೊಂದಬಲ್ಲ ಅನುಗ್ರಹವನ್ನು ತರುವುದೇ ಈ ತಾಯಿಯ ಕರುಣೆ. **ಸಾಮಾನ್ಯವಾಗಿ ಶಕ್ತಿ ಮತ್ತು ವಿವೇಕ ಒಂದೆಡೆ ಇರಲಾರವು! ಆದರೇ, ಶ್ರೀ ರಾಜರಾಜೇಶ್ವರಿ ಅನುಗ್ರಹವಿದ್ದಲ್ಲಿ ನಮ್ಮಲ್ಲಿ ಶಕ್ತಿ, ವಿವೇಕ ಕೂಡಿ ಇರಬಲ್ಲವು.** ದಿವ್ಯ ಚೈತನ್ಯದಿಂದ ಎಷ್ಟೋ ಅನಂತಗಳಿರುವವು. ಅವನ್ನು ತಿಳಿಯಲೂ ನಮ್ಮ ಮನಸ್ಸಿಗೆ ಈ ತಾಯಿ ಸಹಾಯವಾಗುವಳು. ವಿಶ್ವದಲ್ಲಿ ವಿಶಾಲ ಯೋಚನೆಗಳು ಬೆಳಗಲೂ ಈಕೆ ಮನಸ್ಸಿಗೆ ನೆರವಾಗುವಳು! ಅತ್ಯದ್ಭುತ ದಿವ್ಯ ಜ್ಞಾನಕ್ಕೆ, ಶಾಶ್ವತವಾದ ದಿವ್ಯ ಮಾತೃಶಕ್ತಿ ನಮ್ಮಲ್ಲೂ ಮತ್ತು ವಿಶ್ವದಲ್ಲೂ ಬೆಳಗಲು ಮತ್ತು ಪ್ರಶಾಂತತೆಯಿಂದ ಮಹತ್ತರ ಕಾರ್ಯ ಸಾಧನೆಗೆ ಈ ದೇವಿಯ ಅನುಗ್ರಹ ಅತಿ ಮುಖ್ಯ. **ರಾಜರಾಜೇಶ್ವರೀ ದೇವಿ ಅನಂತ ವಿವೇಕಕ್ಕೆ ಹೆಸರು. ಆಕೆಗೆ ತಿಳಿಯದ್ದು ಈ ವಿಶ್ವದಲ್ಲೇ ಇರಲಾರದು.** ಎಲ್ಲಾ ವಿಷಯಗಳನ್ನು, ಸರ್ವ ಜೀವಿಗಳನ್ನು, ಸ್ವಭಾವಗಳನ್ನು, ಅವನ್ನು ಚಲಿಸುವ ಶಕ್ತಿಗಳನ್ನು, ಪ್ರಪಂಚದ ಧರ್ಮವನ್ನು ಮತ್ತು ಅದಕ್ಕೆ ಸಂಬಂಧಿಸಿದ ತಕ್ಕ ಸಮಯವನ್ನೂ ಸಹಾ ಆಕೆ ಗ್ರಹಿಸಬಲ್ಲಳು! ಆಕೆಗೆ ಭೇದಭಾವದ ಬುದ್ಧಿ ಎಳ್ಳಷ್ಟೂ ಇಲ್ಲ. ಯಾರ ಮೇಲೂ ದ್ವೇಷವೇ ಆಗಲಿ, ಅಭಿಮಾನವೇ ಆಗಲಿ ಇರುವುದಿಲ್ಲ. ಸಾಧನೆಯಿಂದ ದರ್ಶನ ಪಡೆದವರನ್ನು ವಿಶ್ವಾಸಪಾತ್ರರನ್ನಾಗಿ ಪರಿಗಣಿಸಿ ತಮ್ಮ ಬಳಿ ಆಶ್ರಯ ನೀಡುವಳು.

ಈ ರಾಜರಾಜೇಶ್ವರಿಯ ಶಕ್ತಿಯನ್ನು ಪಡೆದ ಸಾಧಕರು, ತಮ್ಮ ವಿವೇಕ ಬಲದಿಂದ ವಿರೋಧ ಶಕ್ತಿಗಳನ್ನು ದೂರ ಇಟ್ಟುಕೊಳ್ಳಬಲ್ಲರು. ಆಕೆ, ಅಂತಹವರಿಗೆ ಎಂತಹ ಫಲ ಕೊಡಬೇಕೋ ಅಂತದ್ದೇ ಕೊಡುವಳು. ಈ ವಿಶ್ವದಲ್ಲಿನ ಯಾವುದರ ಮೇಲೂ ಅನುಬಂಧ ಇಟ್ಟುಕೊಳ್ಳದೇ, ಅಂದರೇ ಅಸಂಗತ್ವವನ್ನು ಹೊಂದಿರುವಳು. ಆಕೆ ಪ್ರತಿಯೊಬ್ಬರ ಜತೆಯೂ ಅವರವರ ಪ್ರಕೃತಿ,

ಅಗತ್ಯ ಮತ್ತು ಸಾಮರ್ಥ್ಯದಂತೆ ವ್ಯವಹರಿಸುತ್ತಿದ್ದಳು. ಈ ತಾಯಿ ತನ್ನ ಬಯಕೆಗಳನ್ನು ಬಲವಂತವಾಗಿ ಯಾರ ಮೇಲೂ ವಿಧಿಸುವುದಿಲ್ಲ. ಪರಿಣಾಮಗಳನ್ನರಿತವರನ್ನು ಅವರಿಗೆ ತಕ್ಕಂತೆ ನಡೆಸುವಳು. ಅಜ್ಞಾನರನ್ನು ಅವರ ಅಜ್ಞಾನ ಮಾರ್ಗದಲ್ಲೇ ಹೋಗಲು ಬಿಡುವಳು. ಅಂತವರು ಮೊದಲಿನಿಂದ ಅನುಭವಿಸುತ್ತಿರುವ ಸ್ವಾತಂತ್ರ್ಯವನ್ನು ಆಕೆ ಸಹಿಸುವಳು. ಅವರು ಮುಂದೆ ಬಂದರೂ ಅಥವಾ ಕೆಟ್ಟರೂ ಆಕೆ ಯೋಚಿಸಳು. ಆಕೆ ಅನಂತ ಕರುಣಾಮಯಿ. ಆಕೆಯ ದೃಷ್ಟಿಯಲ್ಲಿ ಎಲ್ಲಾ ತನ್ನ ಮಕ್ಕಳೇ. ಅಸುರರು, ರಾಕ್ಷಸರು ಮತ್ತು ಪಿಶಾಚರನ್ನು ಸಹಾ ಆಕೆ ತನ್ನ ಮಕ್ಕಳಂತೇ ಕಾಣುವಳು! ಮಾನವರ ದಯೆಯಂತೆ ಈ ಮಾತೆಯ ದಯೆ ಕುರುಡಲ್ಲ. ಎಷ್ಟು ದಯೆ ಇದ್ದರೂ, ಈಕೆ ವಿವೇಕವನ್ನು ಮಾತ್ರ ಬಿಟ್ಟಿರಳು. ಪರಮಾತ್ಮ ಆಜ್ಞಾಪಿಸಿದ ಮಾರ್ಗ ಈಕೆ ಎಂದೂ ಬಿಡಳು. ಆಕೆಯ ಶಕ್ತಿ ಜ್ಞಾನಸಹಿತವಾಗಿಯೇ ಇರುವುದು. ಆದ್ದರಿಂದ ನಾವಾಕೆಯ ಅನುಗ್ರಹ ಪಡೆದರೇ ಸತ್ಯ ಹೊರಬಂದು, ನಮಗೆ ಸತ್ಯಜ್ಞಾನ ಬೋಧನೆ ಆಗುವುದು. ಆಕೆಯ ಶಕ್ತಿ ಪಡೆಯಲು ಕರ್ತವ್ಯದೀಕ್ಷೆ ಮತ್ತು ಸತ್ಯಶೋಧನೆ ಬಿಡದೇ ನಡೆಸಬೇಕು. ಆಗಲೇ ಈ ತಾಯಿಯ ಅನುಗ್ರಹ ನಾವು ಪಡೆಯಬಹುದು.

ನಾನು ಪೀಠಿಕಾಪುರ ವಾಸಿ ಆದ್ದರಿಂದ ಮತ್ತು ಶ್ರೀಪಾದರ ದಯೆಗೆ ಪಾತ್ರನಾದ ಕಾರಣ ಶ್ರೀ ರಾಜರಾಜೇಶ್ವರಿ ದೀಕ್ಷೆ ಪಡೆಯಲು ಸಫಲನಾದೆನು. ಇಂದು ನನಗೆ ದೀಕ್ಷೆ. ಬಹಳ ಹೊತ್ತು ಧ್ಯಾನದಲ್ಲಿರಬೇಕು. ಶ್ರೀಪಾದರು, ಪೀಠಿಕಾಪುರದಿಂದ ಯಾವ ಪರಿಸ್ಥಿತಿಯಲ್ಲಿ ಹೊರಬಂದು ಸಂಚಾರಕ್ಕೆ ಬಂದಿಹರೋ ನಾಳೆ ತಿಳಿಸುವೆ. ನೀವು ಬರುವುದಕ್ಕೆ ಮುಂಚಿತವೇ ನಾನಿತ್ತ ಪುಳಿಯೊಗರೇ ಶ್ರೀಗಳು ಸ್ವೀಕರಿಸುವರು. ಅವರು ರಾಜರಾಜೇಶ್ವರಿ ರೂಪದಲ್ಲಿ ದರ್ಶನ ನೀಡುವರು. ಈ ಮಹಾಪ್ರಸಾದ ಸ್ವೀಕರಿಸಿ, ನೀವೂ ಧ್ಯಾನಸ್ಥರಾಗುವುದು'' ಎಂದು ತಿಳಿಸಿದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 41

# ಕುಹನಾ ಪರಿವ್ರಾಜಕ ವೃತ್ತಾಂತ

ಶ್ರೀಪಾದ ಶ್ರೀವಲ್ಲಭರು, ಶ್ರೀ ಮಹಾಸರಸ್ವತಿ, ಶ್ರೀ ಮಹಾಲಕ್ಷ್ಮಿ ಶ್ರೀ ಮಹಾಕಾಳಿ ಮತ್ತು ಶ್ರೀ ರಾಜರಾಜೇಶ್ವರಿ ಸ್ವರೂಪವೆಂದು, ಶ್ರೀ ಭಾಸ್ಕರ ಶಾಸ್ತ್ರಿಗಳು ನಮಗೆ ತಿಳಿಸಿದರು. ಅವರಲ್ಲಿನ ದೈವತ್ವ ಉಪಾಸಕರಿಗೆ ಮಾತ್ರ ಅರ್ಥವಾಗುವುದು.

ಪರಾ, ಪಶ್ಯಂತಿ, ಮಧ್ಯಮಾ ಮತ್ತು ವೈಖರಿ ಮಾತುಗಳಿರುವೆ ಎಂದು ಕೇಳಿದ್ದೇನೆ. ಅವುಗಳ ವಿವರ ತಿಳಿಸಲು ಶ್ರೀ ಭಾಸ್ಕರ ಶಾಸ್ತ್ರಿಗಳನ್ನು ಕೇಳಿದೆನು. ಆಗ ಅವರು, ''ಅಂಬಿಕೆ ತನ್ನ ಪ್ರತಿ ಮಾತಿನಿಂದ ವ್ಯಕ್ತವಾಗುತ್ತಿರುವಳು. ಆಕೆ ಪ್ರತಿ ಮನುಷ್ಯರಿಂದಲೂ, ಪ್ರತಿವ್ಯಕ್ತಿ ಒಳಗೂ ನುಡಿಯುವಳು. ಬಹಿರಂಗವಾಗಿ ಕೇಳಲ್ಪಡುವ ಮಾತನ್ನು 'ಸ್ಥೂಲ' ವಾಕ್ಕೆನ್ನುವರು. ಈಚೆಗೆ ಏನೂ ಕೇಳಿಸದೇ, ಒಳಗೊಳಗೇ ಇರುತ್ತಾ ಕೇವಲ ತುಟಿಯಲ್ಲೇ ಕಂಡುಬರುವ ಮಾತನ್ನು 'ಮಧ್ಯಮ' ವಾಕ್ಕೆನ್ನುವರು. ಇದಕ್ಕೂ ಸೂಕ್ಷ್ಮವಾಗಿರುವ ವಾಕ್ಕನ್ನು 'ವೈಖರಿ' ವಾಕ್ಕೆನ್ನುವರು. ಕಂಠದಲ್ಲಿನ ವಾಕ್ಕು, ಕತ್ತಿನ ತನಕ ಬರುವುದು. ಅಲ್ಲಿಂದ ಈಚೆಗೆ ಬರದೇ, ಮಧ್ಯದಲ್ಲೇ ನಿಂತು, ಮನಸ್ಸಿನಲ್ಲಿ ಮಾತ್ರವೇ ಕದಲುತ್ತಿದ್ದಲ್ಲಿ ಅದನ್ನು 'ಪಶ್ಯಂತಿ' ವಾಕ್ಕೆಂಬುವರು. ಇದಕ್ಕಿಂತ ಸೂಕ್ಷ್ಮವಾಗಿದ್ದು ನಾಭಿಯಲ್ಲೇ ನಿಂತು, ಕಲ್ಪಿತವಾಗದೇ ಸಂಕಲ್ಪ ಮಾತ್ರವಾಗಿ ಇರುವ ವಾಕ್ಕನ್ನು 'ಪರಾ' ವಾಕ್ಕೆಂಬುವರು.

ಅಂಬಿಕೆಯನ್ನು ತ್ರಿಪುರ ಭೈರವಿಯಾಗಿ ಸಹಾ ಆರಾಧಿಸುವರು. ಗುಣತ್ರಯಗಳು, ಜಗತ್‌ತ್ರಯಗಳು, ಮೂರ್ತಿತ್ರಯಗಳು ಮತ್ತು ಅವಸ್ಥ ಮುಂತಾದ ಎಲ್ಲಾ ತ್ರಯಗಳಿಗೂ ಆಕೆ ಅಧೀಶ್ವರಿ. ತ್ರಿಪುಟಿಯನ್ನು ಆಕೆ ಪುರತ್ರಯವಾಗಿ ಮಾಡಿಕೊಂಡು ಈ 3 ಲೋಕಗಳನ್ನೂ ಪಾಲಿಸುತ್ತಿರುವಳು. ನಾವು ಶ್ರದ್ಧೆಯಿಂದ, ಆತ್ಮಸಮರ್ಪಣೆ ಮಾಡಿಕೊಂಡು, ಸಂಪೂರ್ಣ ಶರಣಾಗತರಾದರೆ ಈ ತಾಯಿ ಈ ಲೋಕದಲ್ಲೇ ಅಲ್ಲ ಅದೃಶ್ಯ ಲೋಕದಲ್ಲಿನ ಶತೃಗಳಿಂದ ಸಹಾ ಕಾಪಾಡುವಳು. ವಿರೋಧ ಶಕ್ತಿಗಳು ಈ ಭೌತಿಕ ಲೋಕಕ್ಕೆ ಮಾತ್ರ ಅನ್ವಯಿಸುವುದಿಲ್ಲ. ನಮಗೆ ಪ್ರಾಣಮಯವಾದ, ಭೌತಿಕಮಯವಾದ, ಮಾನಸಿಕಮಯವಾದ ಅಂತರಾತ್ಮಕ್ಕೆ ಸಂಬಂಧಿಸಿದ ಆಧ್ಯಾತ್ಮಿಕವಾದ ಅಸ್ತಿತ್ವ ಸ್ಥಿತಿಗಳುಂಟು. ಇವುಕ್ಕೆ ಸಂಬಂಧಿಸಿದ ಲೋಕಗಳೂ ಉಂಟು. ನಾವು ತಕ್ಕಂತೆ ಮುಂದುವರಿದರೇ ಭೌತಿಕ ಪ್ರಪಂಚದಲ್ಲಿ ಹೇಗೆ ಜೀವಿಸುತ್ತಿದ್ದೇವೋ, ಅದೇ ರೀತಿ ಆಯಾ ಲೋಕಗಳಲ್ಲೂ ಜೀವಿಸಬಲ್ಲವು.

**ಮನುಷ್ಯ ಅಭಿವೃದ್ಧಿ ಹೊಂದಬೇಕೆಂದರೆ ಮುಖ್ಯವಾಗಿ ಶ್ರದ್ಧೆ, ದೃಢವಿಶ್ವಾಸ ಇರಬೇಕು. ಶ್ರದ್ಧೆ ಎಂದರೆ ಸಂಪೂರ್ಣ ನಂಬಿಕೆ ಉಳ್ಳ ಅಂಗೀಕಾರ. ವಿಶ್ವಾಸವೆಂಬುದು ಅನುಭವದಿಂದ ಪಡೆಯಬೇಕು. ನಾವು ಆ ವಿಶ್ವಾಸದಿಂದಲೇ ಜೀವಿಸಬೇಕು. ಬೇಕಾದಾಗ ನಮಗೆ ನೆರವು ತಪ್ಪದೇ ಸಿಗುವುದೆಂಬ ನಂಬಿಕೆ ಇರಬೇಕು. ವಿಶ್ವಾಸದ ಜೊತೆ ಭದ್ರತೆಯ ಭಾವನೆ ಸಹಾ ಇದ್ದರೇ ಆಗ ಅದು ಆತ್ಮವಿಶ್ವಾಸವಾಗುವುದು.**

**ಅಶಕ್ತ ಜ್ಞಾನ, ನಿರ್ಲಿಪ್ತತೆಗೆ ದಾರಿ ಆಗುವುದು. ಜ್ಞಾನವಿಲ್ಲದ ಶಕ್ತಿ ಕುರುಡಾಗಿ, ವಿನಾಶಕ್ಕೆ ನಾಂದಿ ಆಗುವುದು. ಆದ್ದರಿಂದ ನಾವು ಜ್ಞಾನದಿಂದ, ಪ್ರಕೃತಿ ಬಂಧಗಳಿಂದ ಬಿಡುಗಡೆ ಹೊಂದಬೇಕು. ನಂತರ, ಶಕ್ತಿಯಿಂದ ಪರಿಪೂರ್ಣತೆ ಸಾಧಿಸಬೇಕು. ಶಕ್ತಿಗೆ,**

**ಜ್ಞಾನದಿಂದ ಅಪ್ಪಣೆ ಲಭಿಸಬೇಕು.** ಸಾಂಖ್ಯ ಮಾರ್ಗದಲ್ಲಿ ಚೈತನ್ಯವನ್ನು 'ಪುರುಷ'ನೆಂಬುವರು. ಕರ್ಮವನ್ನು ನೆರವೇರಿಸುವುದನ್ನು 'ಪ್ರಕೃತಿ' ಎಂಬುವರು.

ಕೆಳಗಿನ ಸ್ಥಾಯಿಯಲ್ಲಿ ಇವುಗಳ ಮಧ್ಯೆ ವಿರೋಧವಿರುವುದು. ಚೈತನ್ಯವೆಂಬುದು ಕರ್ಮ ನೆರವೇರಿಸದು, ಪ್ರಕೃತಿಗೇನೋ ಜ್ಞಾನವಿಲ್ಲ! ಈ ಎರಡರ ಮಿಲನದಲ್ಲೇ ಸೃಷ್ಟಿ ಆಗುವುದು. ಈ ಎರಡೂ ಅಂಗವಿಕಲ್ಪವೇ **ಚೈತನ್ಯ ಕುಂಟಿ, ಪ್ರಕೃತಿ ಕುರುಡ. ಲೋಕದಲ್ಲಿನ ಕುಂಟ ಮತ್ತು ಕುರುಡು ಸ್ಥಿತಿಗಳನ್ನು ತಿಳಿಸಲೇ ಶ್ರೀಗಳ ಕುಟುಂಬದಲ್ಲಿ ಸಹೋದರರು, ಕುಂಟ ಮತ್ತು ಕುರುಡರಿದ್ದರು. ಚೈತನ್ಯ ಕುಂಟ, ಪ್ರಕೃತಿ ಕುರುಡ ಎಂದು ತೋರಿಸುತ್ತಿವೆ.**

ಉನ್ನತ ಸ್ಥಾಯಿ ಹೊಂದಿದಾಗ, ಚೈತನ್ಯ ಈಶ್ವರ, ಪ್ರಕೃತಿ ಈಶ್ವರಿ ಎಂದು ಕರೆಯಲಾಗುವವು. ಆಗ ಈ ಎರಡರ ಮಧ್ಯೆ ವಿರೋಧವಿರದು. ಇವಕ್ಕೆ ತಕ್ಕ ಯೋಗ ಸಮಯ, **ಕಾಲ ಕೂಡಿವೆ ಎಂದಾಗ ಶ್ರೀಪಾದರು, ಸಹೋದರರ ಕುಂಟು, ಕುರುಡತನ ಹೋಗಲಾಡಿಸಿದರು. ಜಗತ್ತಿನಲ್ಲಿನ ಕುರುಡ, ಕುಂಟ ತನವನ್ನು ನಿರ್ಮೂಲನೆ ಮಾಡುವ ಬೃಹತ್ ಕಾರ್ಯಕ್ರಮ ಸೂಚಿಸಲೇ ಶ್ರೀಪಾದರು ಈ ಕೆಲಸ ಮಾಡಿದರು.**

**ಅತೀತ ಸ್ಥಾಯಿಯಲ್ಲಿದ್ದಾಗ ಇವು ಅಂದರೆ ಚೈತನ್ಯ ಮತ್ತು ಪ್ರಕೃತಿಗಳು ಬ್ರಹ್ಮ ಮತ್ತು ಮಾಯೆ ಎಂದು ಕರೆಯಲಾಗುತ್ತಿವೆ. ತಮ್ಮ 16 ವಯಸ್ಸಿನಲ್ಲಿ ಮನೆ ಬಿಟ್ಟು, ಸಂಸಾರ ತ್ಯಜಿಸಿ, ಬೈರಾಗಿ ಆಗಿ, ಸಂಚಾರಕ್ಕೆ ಹೊರಡುವುದರಲ್ಲಿನ ಆಂತರ್ಯ, ತಾನು ಖುದ್ದಾಗಿ ಬ್ರಹ್ಮನೆಂದು, ಮಾಯೆ ಎಂದು ತಿಳಿಸುವುದೇ. ಅಪರಿಮಿತನು, ಅನಂತ ಗುಣಗಳುಳ್ಳ ಬ್ರಹ್ಮಸ್ವರೂಪಕ್ಕೆ ಪರಿಮಿತಿ ತರುವ ಶಕ್ತಿ ಮಾಯೆ. ತಾನು ಪೀಠಿಕಾಪುರದಲ್ಲಿ ಹುಟ್ಟುವುದು, ತಾನು ಅಪರಿಮಿತ ಬ್ರಹ್ಮನಾದರೂ, ಮಾಯಾಶಕ್ತಿಗೆ ಒಳಗೊಂಡು ತಾನು ಪರಿಮಿತಿಗಳಲ್ಲೇ ಇದ್ದೇನೆಂದು ಸೂಚಿಸಿಲೇ. 16 ವರುಷದ ನಂತರ ತಾನು ಮಾಯೆಗೆ ಬಂಧಿ ಅಲ್ಲವೆಂದು, ತಾನು ಅಪರಿಮಿತ ಬ್ರಹ್ಮ ಸ್ವರೂಪನೆಂದು ಸ್ಪಷ್ಟವಾಗಿ ತಿಳಿಸುವುದು, ಭಕ್ತ ಜನೋದ್ಧರಣೆಗಾಗಿ ಅವತರಿಸಿದ ಪರತತ್ತ್ವವೇ ತಾನೆಂದು ತಿಳಿಸುವುದು.** ಕೆಳ ಸ್ಥಾಯಿಯಲ್ಲಿ ಪ್ರಕೃತಿ ಬಹಳ ಬಲವಾಗಿರುವುದು. ಇದರ ನಿರೂಪಣೆಗಾಗಿ, ಅಂದರೇ ಕೆಳ ಸ್ಥಾಯಿಯಲ್ಲಿ ಪ್ರಕೃತಿ ಬಹಳ ಬಲವಾದದ್ದು ಎಂದು ತಿಳಿಸಲೆಂದೇ, ಶ್ರೀಗಳ ಚರಿತ್ರೆಯಲ್ಲಿ ಪೀಠಿಕಾಪುರದಲ್ಲಿ ನಡೆದ ವಾದ ಪ್ರತಿವಾದಗಳು, ಪರಿಸ್ಥಿತಿಗಳಿಂದ ಆಗುವ ಕೆಲ ನೋವುಗಳು ಕಂಡು ಬರುವವು. ನಂತರ, ಮಧ್ಯ ಸ್ಥಾಯಿಯಲ್ಲಿ ಪುರುಷನು, ಪ್ರಕೃತಿಯೂ ಸಮಾನರೇ! ಈ ಸ್ಥಿತಿಯಲ್ಲೇ ಕೆಲವರು ಅವಿಶ್ವಾಸಿಗಳು ತೊಂದರೆ ನೀಡುವವರು ಸಹಾ ಇರುವರು. ಹಾಗೆಯೇ ವಿವಿಧ ಅನುಭವಗಳನ್ನು ಪಡೆದು, ವಿಶ್ವಾಸ ಬೆಳಸಿಕೊಂಡು ಅವತಾರವನ್ನು ಗುರ್ತಿಸದವರೂ ಇದ್ದಾರೆ. ಶ್ರೀ ಪೀಠಿಕಾಪುರವನ್ನು ಬಿಟ್ಟುಹೋಗುವ ಸ್ಥಾಯಿ, ಉನ್ನತ ಸ್ಥಾಯಿ. ಈ ಸ್ಥಿತಿಯಲ್ಲಿ ಮಾಯೆ ಅಂತರ್ಲೀನವಾಗಿರುವುದು. ತಾನು ಪರಬ್ರಹ್ಮಸ್ವರೂಪವೆಂದು ಸ್ಪಷ್ಟವಾಗಿ ಪ್ರಕಟಿಸಿ, ತನ್ನ ದಿವ್ಯಾವತಾರ ಲೀಲೆಗಳನ್ನು ಕಂಠ ಬಿಚ್ಚಿ ತಿಳಿಸುವ ಸ್ಥಿತಿ. ಅದಕ್ಕೆ ಪೀಠಿಕಾಪುರ ವಾತಾವರಣ ಸರಿಯಾದ್ದಲ್ಲದ ಕಾರಣ, ತಾನು ಪೀಠಿಕಾಪುರ ಬಿಟ್ಟುಹೋದನು. ಜಗತ್ತಲ್ಲೆಲ್ಲಾ ತನ್ನ ಮಹಿಮೆ ವ್ಯಾಪಿಸುವಾಗ ಮುಂಬರುವ ಶತಮಾನಗಳಲ್ಲಿ ಎಂದೋ, ಅವರ ಸಂಕಲ್ಪಾನುಸಾರ ಪೀಠಿಕಾಪುರ ವಾಸರಿಗೆ ಸಹಾ ಜ್ಞಾನೋದಯ ಆಗುವುದು. ಆ ಉಚ್ಛ ಸ್ಥಾಯಿಯಲ್ಲಿನ ಅವರನ್ನು, ದಿವ್ಯಚೈತನ್ಯ ಶಕ್ತಿ, ಮಾನವ ಚೈತನ್ಯದ ಕುಂಟ ತನವನ್ನು, ಪ್ರಕೃತಿಯ ಕುರುಡ ತನವನ್ನೂ ನಿವಾರಿಸುವುದು'' ಎಂದು ತಿಳಿಸಿದರು.

ಆದ್ಯಾವ ಪರಿಸ್ಥಿತಿಗಳಲ್ಲಿ ಶ್ರೀಗಳು ಪೀಠಿಕಾಪುರ ಬಿಟ್ಟು ಹೋಗಲಾಯಿತೆಂದು ನಾನು ಶ್ರೀ ಭಾಸ್ಕರ ಶಾಸ್ತ್ರಿಗಳನ್ನು ಕೇಳಲೂ, ಅವರು ಹೀಗೆ ನುಡಿದರು.

ಶ್ರೀಪಾದರ ಲೀಲೆಗಳು ಸಾಮಾನ್ಯರ ಊಹೆಗೆ ಸಿಗುವುದಿಲ್ಲ. ಒಮ್ಮೆ ಒಬ್ಬ ಸನ್ಯಾಸಿ ಶ್ರೀ ಕುಕ್ಕುಟೇಶ್ವರಾಲಯಕ್ಕೆ ಬಂದನು. ಆತ ದತ್ತ ಭಕ್ತ. ದತ್ತ ದೀಕ್ಷೆ ಕೊಡುತ್ತಿದ್ದವ. ಶ್ರೀದತ್ತ ದೀಕ್ಷೆ ಪಾಲಿಸಿದರೇ ಮಂಡಲ ಪರ್ಯಂತ, ನೆನೆದ ಕಾರ್ಯಗಳು ತಪ್ಪದೇ ಸಫಲವಾಗುವುವೆಂದು ಪ್ರಕಟಿಸಿದನು. ಪೀಠಿಕಾಪುರ ಬ್ರಾಹ್ಮಣ್ಯ ಸಹಾ ಶ್ರೀದತ್ತ ದೀಕ್ಷೆ ತೆಗೆದುಕೊಂಡರು. ಆತ ಅಧಿಕ ಸಂಭಾವನೆ ತೆಗೆಯುತ್ತಿದ್ದನು. ಅದರಲ್ಲಿ ಸ್ವಲ್ಪ ಭಾಗ ತನ್ನ ಬಳಿ ದೀಕ್ಷೆ ಪಡೆದ ಬ್ರಾಹ್ಮಣ್ಯಕ್ಕೆ ಸಹಾ ನೀಡುತ್ತಿದ್ದನು. ಬ್ರಾಹ್ಮಣ್ಯ ಮಾತ್ರ ಇತರ ಕುಲಸ್ಥರಿಗೆ, ಭಾರಿ ಸಂಭಾವನೆ ಕೊಟ್ಟು, ತಮ್ಮಂತೆ ದೀಕ್ಷೆ ಪಡೆದು, ಜನುಮ ಧನ್ಯ ಮಾಡಿಕೊಳ್ಳುವಂತೆ ಹೇಳುತ್ತಿದ್ದರು. ತಮ್ಮೂರಿನ ಬ್ರಾಹ್ಮಣ್ಯದ ಮಾತನ್ನು ತಳ್ಳಿಹಾಕಲಾರದೇ, ಬಹಳಷ್ಟು ಜನ, ಭಾರಿ ಸಂಭಾವನೆ ಇತ್ತು, ದೀಕ್ಷೆ ಸ್ವೀಕರಿಸುತ್ತಿದ್ದರು. ಜೊತೆಯಲ್ಲೇ ಆ ಗ್ರಾಮದಲ್ಲಿ ಶ್ರೀದತ್ತ ದೀಕ್ಷೆ ಪಡೆಯುವುದಾ, ಬೇಡವಾ, ಎಂಬ ಪ್ರಶ್ನೆ ಎದ್ದಿತು! ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಪರಿಷತ್ತುಗಳು ಶ್ರೀ ಬಾಪನಾರ್ಯರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡರು. ಅಧ್ಯಕ್ಷರು, ''ಶ್ರೀದತ್ತರು ಎಲ್ಲರಿಗೂ ಸೇರಿದವರು, ಎಲ್ಲರೂ ದೀಕ್ಷೆ ಪಡೆಯಬಹುದು. ಅಷ್ಟಾದಶ ವರ್ಣರೂ ಆ ಸನ್ಯಾಸಿಯಿಂದ ದೀಕ್ಷೆ ಪಡೆಯಬಹುದು. ಎಲ್ಲರೂ ಅರ್ಹರೇ'' ಎಂದು ತೀರ್ಮಾನಿಸಿದರು.

ಆಗ ಬ್ರಾಹ್ಮಣ ಪರಿಷತ್ತಿನ ಮುಖ್ಯಸ್ಥರು, ''ಸ್ವಾಮಿ! ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಆಚಾರವಂತರಾಗಿರುವರು. ಆದ್ದರಿಂದ ಇವರೆಲ್ಲಾ ದೀಕ್ಷೆ ಸ್ವೀಕರಿಸಬಹುದು. ಶೂದ್ರರು ಆಚಾರವಂತರಲ್ಲ, ಆದ್ದರಿಂದ ಅವರು ದೀಕ್ಷೆ ಪಡೆಯಬಾರದು. ಅವರಿಂದ ದಕ್ಷಿಣೆ ಪಡೆದು ನಾವು ನಮ್ಮ ತಪಶ್ಶಕ್ತಿಯಿಂದ ಅವರನ್ನು ಉದ್ಧರಿಸಬಹುದು'' ಎಂದರು.

ಆಗ ಶ್ರೀ ಬಾಪನಾರ್ಯರು ''ಎಲ್ಲಾ ಕುಲಗಳಲ್ಲೂ ಆಚಾರವಂತರು, ಅನಾಚಾರವಂತರೂ ಇರುತ್ತಾರೆ, ಯಾರು ಆಚಾರವಂತರೋ, ಅನಾಚಾರವಂತರೋ, ಹೇಳುವುದು ಕಷ್ಟ. ಆದ್ದರಿಂದ ಸಾಮೂಹಿಕ ಕಲ್ಯಾಣವನ್ನು ಮತ್ತು ಶ್ರೇಯಸ್ಸಿನ ದೃಷ್ಟಿಯಿಂದ ದತ್ತ ಹೋಮವನ್ನೂ ಅಥವಾ ಯಜ್ಞಯಾಗಾದಿ ಕಾರ್ಯಕ್ರಮಗಳನ್ನೋ ಸಾಂಘಿಕ ಶ್ರೇಯಸ್ಸಿಗಾಗಿ ನಿರ್ವಹಿಸಬಹುದು. ಸಂಭಾವನೆ ಮಾತ್ರ ಸ್ವೀಕರಿಸಿ, ಶೂದ್ರರಿಗೆ ದೀಕ್ಷೆ ನೀಡದಿರುವುದು ಅನ್ಯಾಯವೆಂದು ನನಗೆ ತೋಚುತ್ತದೆ.'' ದಕ್ಷಿಣೆ ಪಡೆದು ನಾವು ನಮ್ಮ ತಪಶ್ಶಕ್ತಿಯಿಂದ ಶೂದ್ರರನ್ನು ಉದ್ಧರಿಸಬಹುದಾದರೇ, ಮಿಕ್ಕ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರನ್ನು ಸಹ ಉದ್ಧರಿಸಬಹುದು. ಹಾಗಿದ್ದಲ್ಲಿ ಯಾವ ಕುಲದವರಿಗೂ ಪ್ರತ್ಯೇಕವಾಗಿ ದೀಕ್ಷೆಗಳನ್ನು ಕೊಡಬೇಕಾಗಿಲ್ಲ. ಜೊತೆಗೆ, ಸಂಭಾವನೆಯನ್ನು ಸಹಾ ಅಧಿಕವಾಗಿಯೇ ನಿರ್ಣಯಿಸಿರುವರು! ಎಲ್ಲಾ ಕುಲದಲ್ಲೂ ಬಡವರು ಇರುವರು. ಅಷ್ಟು ದೊಡ್ಡ ದಕ್ಷಿಣೆ ಕೊಡಲಾರರು. ದಿನ ಕೂಲಿ ಪಡೆಯುವ ಬಡವರು, ಅಂತಹ ಭಾರಿ ದಕ್ಷಿಣೆಗಳು ನಮಗಿತ್ತು, ಕೆಲ ದಿನಗಳು ಉಪವಾಸ ಇರಬೇಕಾಗಿರುತ್ತೆ. **ದಕ್ಷಿಣೆ ಎಂಬುವುದು ಐಚ್ಛಿಕವಾಗಿರಬೇಕು. ಶಕ್ತಿಗೆ ಅನುಸಾರ, ಸಂತೋಷವಾಗಿ ಕೊಡತಕ್ಕದ್ದೇ ದಕ್ಷಿಣೆ ಆಗಿ ಪಡೆಯಬೇಕು. ಅದೇ ಶ್ರೀದತ್ತರಿಗೆ ಸಂತೋಷ"** ಎಂದು ಅಭಿಪ್ರಾಯ ತಿಳಿಸಿದರು.

ಆಗ ಆ ಬ್ರಾಹ್ಮಣರು ''ನಾವು ಬ್ರಾಹ್ಮಣರಾಗಿದ್ದು ಪರಮಹಂಸ ಪರಿವ್ರಾಜಕ ಮಹಾಶಯರು ನಮ್ಮ ಗ್ರಾಮಕ್ಕೆ ಬಂದಾಗ ಕಾದು, ಪೂರ್ಣಕುಂಭ ಹೊತ್ತು, ವೇದಮಂತ್ರದಿಂದ ಸ್ವಾಗತ ನೀಡಲಿಲ್ಲ. ಅವರೇ ಜನಹಿತ ಕೋರಿ ದತ್ತ ಮಂಡಲ ದೀಕ್ಷೆ ನೀಡುತ್ತಿದ್ದಲ್ಲಿ, ನಮ್ಮ ಪರಿಷತ್ತು ಕೈಕಟ್ಟಿ ಕುಳಿತಿರುವುದು ನಾಚಿಗ್ಗೇಡು'' ಎಂದು ಆಕ್ಷೇಪಿಸಿದರು.

ಆಗ ಬಾಪನಾರ್ಯರು, ''ನಿಜಕ್ಕೂ ಬಂದವರು ಪರಮಹಂಸ ಪರಿವ್ರಾಜಕರೇ ಆದರೆ ಅವರನ್ನು ವಿಶೇಷ ರೀತಿ ಸ್ವಾಗತಿಸಬೇಕಿದೆ. ಅವರು ಮುಂಚಿತವಾಗಿಯೇ ಅವರ ಶಿಷ್ಯರ ಮೂಲಕ, ಪರಿಷತ್ತಿಗೆ ಈ ವಿಷಯ ತಿಳಿಸಬೇಕು. ಪರಿಷತ್ತು ಅವರ ವಿವರಗಳನ್ನು ಪೂರ್ತಿಯಾಗಿ ಪರಿಶೀಲಿಸಿ ಅವರ ಮುಖ್ಯ ಶಿಷ್ಯರಲ್ಲಿ ಶಾಸ್ತ್ರ ಅರ್ಥ ನಡೆಸಬೇಕು. ಆಗ ಆ ಶಿಷ್ಯಂದಿರ ಪ್ರಾವೀಣ್ಯತೆ ಕಂಡುಬರುವುದು. ಆಗ ಪರಿಷತ್ತು ಒಂದು ನಿರ್ಣಯಕ್ಕೆ ಬಂದು, ಒಬ್ಬ ಯೋಗ್ಯ ಶಿಷ್ಯನನ್ನು ಪರಿಗಣಿಸಿ, ಮಾತುಕತೆ ನಡೆಸುವರು. ಆಗ ಪರಮಹಂಸ ಪರಿವ್ರಾಜಕರು ಬರುವಾಗ, ವೇದ ಮಂತ್ರದಿಂದ ಪೂರ್ಣಕುಂಭ ಸ್ವಾಗತ ನೀಡಲಾಗುವುದು. ನಂತರ ಅವರೊಟ್ಟಿಗೆ ಶಾಸ್ತ್ರ ಸಂಬಂಧ ಚರ್ಚೆ ನಡೆಯುವುದು. ಆಗ ಪರಿವ್ರಾಜಕ ಮಹಾಶಯರ ಸೂಚನೆಯಂತೇ ಯಜ್ಞವೋ, ಯಾಗವೋ, ದೀಕ್ಷೆಯೋ ಅಥವಾ ಪ್ರವಚನವೋ ನಡೆಸಬಹುದು. ಇವು ಯಾವುದೂ ಇಲ್ಲದೇ ಪರಿವ್ರಾಜಕರು ಕುಕ್ಕುಟೇಶ್ವರಾಲಯಕ್ಕೆ ಬಂದರು. ಬಂದವರೇ ನಿಮ್ಮೊಟ್ಟಿಗೆ ದತ್ತ ಮಂಡಲ ದೀಕ್ಷೆ ಬಗ್ಗೆ ಪ್ರಸ್ತಾವಿಸಿರುವರು. ಮೇಲ್ಪಟ್ಟು ಭಾರಿ ಸಂಭಾವನೆಯೂ ಕೇಳಿರುವರು. ಇದು ನಮ್ಮ ಪದ್ಧತಿಗೆ ವಿರುದ್ಧ ಅಲ್ಲವೇ'' ಎಂದು ಪ್ರಶ್ನಿಸಿದರು.

ಆಗ ಆ ಬ್ರಾಹ್ಮಣರು ''ನಿಯಮಗಳು ಉಲ್ಲಂಘಿಸಲಾಗಿದೆಯಾ ಇಲ್ಲವಾ ಎಂದು ಚರ್ಚಿಸಲು ಇದು ಸೂಕ್ತ ಸಮಯವಲ್ಲ. ನೀವೂ ಮತ್ತು ನಿಮ್ಮ ಅಳಿಯಂದರಾದ ಅಪ್ಪಲರಾಜ ಶರ್ಮ, ದೀಕ್ಷೆ ಸ್ವೀಕರಿಸಿ ದಕ್ಷಿಣೆ ಕೊಡುವಿರಾ? ಇಲ್ಲವಾ?'' ಎಂದು ಕೇಳಿದರು. ಆಗ ಬಾಪನಾರ್ಯರು, ''ನಾವಿಬ್ಬರೂ ಸಾಮೂಹಿಕ ಕ್ಷೇಮಕ್ಕೆ ದೀಕ್ಷೆ ಕೈ ಹಿಡಿಯುವರೇ ಹೊರತು, ಸ್ವಂತ ಶ್ರೇಯಸ್ಸಿಗಲ್ಲ. ದೀಕ್ಷೆ ಬೇಕಿಲ್ಲ. ಆದ್ದರಿಂದ ದಕ್ಷಿಣೆ ಸಹಾ ಕೊಡುವುದಿಲ್ಲ. ಬ್ರಾಹ್ಮಣರಲ್ಲಿ ಯಾರೇ ಆಗಲಿ ದೀಕ್ಷೆ ಹಿಡಿಯಬೇಕೆಂದು ಇದ್ದರೇ, ಸ್ವೇಚ್ಛೆಯಿಂದ ದಕ್ಷಿಣೆ ಕೊಟ್ಟು ಮಾಡಬಹುದು. ನಮ್ಮ ಬ್ರಾಹ್ಮಣ ಪರಿಷತ್ತು, ಸಾಮೂಹಿಕ ಸಮಸ್ಯೆ, ಪರಿಹಾರ ಯೋಚಿಸುವುದೇ ಹೊರತು ನಿಮ್ಮ ವ್ಯಕ್ತಿಗತ ದೀಕ್ಷೆ ಸಮಸ್ಯೆ ಮತ್ತು ಪರಿಹಾರ ಕುರಿತು ಯೋಚಿಸದು'' ಎಂದರು.

ಶ್ರೇಷ್ಠಿ ಮತ್ತು ವರ್ಮ ಸಹಾ ದೀಕ್ಷೆ ಪಡೆಯಲು ಒಪ್ಪಲಿಲ್ಲ. ಮಿಕ್ಕ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ದತ್ತ ಮಂಡಲ ದೀಕ್ಷೆ ತೆಗೆದುಕೊಳ್ಳಲೂ ಅಥವಾ ಬಿಡಲು, ಅವರಿಗೇ ಸ್ವತಂತ್ರ ನೀಡಲಾಯಿತು.

## ಶ್ರೀಪಾದರಿಂದ ದತ್ತ ದೀಕ್ಷೆ ನೀಡುವಿಕೆ

ಶ್ರೀಪಾದರ ಮೇಲೆ ಶ್ರದ್ಧಾಭಕ್ತಿ ಬೆಳೆಸಿಕೊಂಡಿದ್ದ ರೈತರಲ್ಲಿ ವೆಂಕಯ್ಯ ಶ್ರೇಷ್ಠನು. ಶ್ರೀಪಾದರು ವೆಂಕಯ್ಯನ ಗೃಹಕ್ಕೆ ಹೋಗಿ, ದೀಕ್ಷೆ ತಾವೇ ಕೊಡುವರೆಂದು, ಯಾರೂ ನಿರಾಶೆ ಹೊಂದಬೇಕಿಲ್ಲವೆಂದೂ ನುಡಿದರು. ಯಥಾಶಕ್ತಿ ದಕ್ಷಿಣೆ ನೀಡಬಹುದೆಂದೂ ಹೇಳಿದರು. ತನ್ನ ವಿಷಯದಲ್ಲಿ ಮಂಡಲ ದೀಕ್ಷೆ ಬೇಕಿಲ್ಲ, ಏಕರಾತ್ರಿ ದೀಕ್ಷೆ ಸಾಕೆಂದೂ ಸಹ ಪ್ರಕಟಿಸಿದರು. ಒಂದು ರಾತ್ರಿ ಹಗಲು ಅಲ್ಲೇ ಇದ್ದರು. ಶ್ರೀಗಳು ಅಷ್ಟಾದಶ ವರ್ಣರಿಗೂ ದೀಕ್ಷೆ ನೀಡಿದರು. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರು ಆ ಅವಕಾಶ ಪಡೆದರು.

## ಶ್ರೀಪಾದರು ತಾನೇ ದತ್ತನೆಂದು ಪ್ರಕಟಿಸುವುದು

**ಶ್ರೀಪಾದರು ತಾನು ಶ್ರೀ ದತ್ತನೆಂದು ಪ್ರಪಂಚಕ್ಕೆ ತಿಳಿಸಿದ್ದು ಈ ದಿನವೇ. ಇಂದೇ ಶ್ರೀದತ್ತರಿಗೆ ಅತಿ ಪ್ರಿಯಕರವಾದ ಗುರುವಾರ ಸಹಾ ಆಗಿತ್ತು. ತನ್ನ ಬಳಿ ದೀಕ್ಷೆ ಪಡೆದವರೆಲ್ಲರಿಗೂ ಮಂಗಳಕರವಾದ ಆಶೀರ್ವಾದ ನೀಡಿ, ಅವರಿಂದ ಭಜನೆ ಮಾಡಿಸಿ,**

**ತಾನೇ ಶ್ರೀದತ್ತನೆಂದು, ವಿಸ್ತೃತವಾದ ಕಾರ್ಯಕ್ರಮ ತನಗಾಗಿ ಕಾದಿದೆ ಎಂದು, ತನ್ನನ್ನು ಸ್ಮರಿಸಿದ ಮಟ್ಟಿಗೆ ಪ್ರಸನ್ನನಾಗಿ, ಕೋರಿಕೆ ನೆರವೇರಿಸುವೆನೆಂದೂ ಪ್ರಕಟಿಸಿದರು.**

ಮಾರನೆಯ ದಿನ ಅಂದರೆ ಶುಕ್ರವಾರ ಪ್ರಾತಃಕಾಲದಲ್ಲೇ ಶ್ರೀಪಾದರು ನರಸಿಂಹ ವರ್ಮರ ಮನೆ ತಲುಪಲು, ಅವರಿಗೆ ಮಂಗಳ ಸ್ನಾನ ಮಾಡಿಸಲಾಯಿತು. ಕೇವಲ ಒಂದು ಬಾಳೇ ಹಣ್ಣು ಮಾತ್ರ ಅವರು ಸ್ವೀಕರಿಸಿದರು. ಅದನ್ನೂ ನರಸಿಂಹ ವರ್ಮ ಮನೆ ಗೋವಿಗೆ ನೀಡಿದರು. ನಂತರ ಶ್ರೀ ವೆಂಕಟಪ್ಪಯ್ಯ ಶ್ರೇಷ್ಠಿಯ ಮನೆಯಲ್ಲಿ ಮಂಗಳ ಸ್ನಾನ ಆಚರಿಸಲಾಯಿತು. ಅವರ ಮನೆಯಲ್ಲಿ ಬೆಣ್ಣೆ, ಹಾಲು, ಮಜ್ಜಿಗೆ, ಕೆನೆ ಸ್ವೀಕರಿಸಿದರು. ಭಕ್ತರ ಕರೆ ಮೇರೆಗೆ ಪೀಠಿಕಾಪುರ ಬಿಟ್ಟು ಹೊರಡುವ ಸಮಯ ಸಮೀಪವಾಯಿತೆಂದು ತಿಳಿಸಿದರು. ನಂತರ ಶ್ರೀಗಳು, ತಮ್ಮ ತಾತನವರಾದ ಬಾಪನಾರ್ಯರ ಮನೆಗೆ ಬಂದರು. ಅಲ್ಲಿಯೂ ಮಂಗಳ ಸ್ನಾನವನ್ನಾಚರಿಸಿ, **ತಾನು ಸಾಕ್ಷಾತ್ ಶ್ರೀ ದತ್ತನೆಂದೂ, ಶ್ರೀಪಾದ ಶ್ರೀವಲ್ಲಭ ರೂಪ ಕೇವಲ ಮಾಯಾ ಸ್ವರೂಪವೆಂದೂ, ನಾನಾ ಸಮಸ್ಯೆಗಳಿಂದ ನರಳುವವರು ತನ್ನನ್ನು ದೀನವಾಗಿ ಕರೆಯುತ್ತಿದ್ದಾರೆಂದು, ಸ್ಪಷ್ಟವಾಗಿ ತಾನು ಶ್ರೀದತ್ತನೆಂದೇ ಪ್ರಕಟಿಸಿ, ತಮ್ಮ ದಿವ್ಯಲೀಲೆಗಳಿಂದ ಲೋಕೋದ್ಧಾರಣಾ ಕಾರ್ಯಕ್ರಮ ಪ್ರಾರಂಭಿಸಬೇಕೆಂದೂ ತಿಳಿಸಿದರು.** ನಂತರ ತಮ್ಮ ನಿಜಗೃಹಕ್ಕೆ ಆಗಮಿಸಿದರು. ಜನನೀಜನಕರು ತಮ್ಮ ವಿವಾಹ ವಿಷಯ ಪ್ರಸ್ತಾಪಿಸಲೂ, ''ತಾಯಿ! ನಾನೀಗಾಗಲೇ ಅನೇಕ ಬಾರಿ ಅಜ್ಜನಿಗೆ, ಶ್ರೇಷ್ಠಿ ತಾತರಿಗೆ, ವರ್ಮ ತಾತರಿಗೆ, ಅನಘಾಲಕ್ಷ್ಮಿ ಸಮೇತನಾಗಿ ದರ್ಶನ ಕೊಟ್ಟಿದ್ದೀನಿ.ಆ ದಿವ್ಯದಂಪತಿಗಳು ವಿಲಾಸದಿಂದ ಶ್ರೇಷ್ಠಿ, ವರ್ಮರ ಜಮೀನುಗಳಲ್ಲಿ, ಮಾವಿನ ತೋಪುಗಳಲ್ಲಿ ಓಡಾಡುವುದನ್ನು ಬಹಳಷ್ಟು ಮಂದಿ ಕಂಡಿರುವರು. ಇಗೊ ನನ್ನ ಅನಘಾಲಕ್ಷ್ಮಿ ಸಮೇತ ಅನಘ ಸ್ವರೂಪ. ನನ್ನ ದಿವ್ಯ ಭವ್ಯ ಮಂಗಳ ಸ್ವರೂಪ ಕಣ್ತುಂಬಾ ನೋಡಿರಿ! ಮದುವೆಯ ವಿಷಯ ಬಂದರೇ, ನಾನು ಮನೆಬಿಟ್ಟು ಹೋಗುವೆನೆಂದು ಅವಧೂತನಾಗಿ ಬಂದಾಗಲೇ ತಿಳಿಸಿದ್ದೆನು'' ಎಂದು ವಿನಯದಿಂದ ನುಡಿದರು. **ಆ ಮಂಗಳಮಯ ದಿವ್ಯ ಸ್ವರೂಪ ದರ್ಶನದ ನಂತರ ತಮ್ಮ ಅಣ್ಣಂದಿರನ್ನು ಸ್ಪರ್ಶಿಸಿದರು. ಶ್ರೀಗಳ ಅಮೃತದೃಷ್ಟಿ, ಅಣ್ಣಂದಿರ ಅಂಗವಿಕಲ್ಪಗಳನ್ನು ವಾಸಿಮಾಡಿದರು. ಸುಮತಿ ರಾಣಿಯು, ಅಪ್ಪಲರಾಜು ಶರ್ಮರೂ ನಿಶ್ಚೇಷ್ಟರಾದರು.** ಬಾಯಿಂದ ಅವರಿಗೆ ಮಾತೇ ಹೊರಡದಾಯಿತು. ಇಷ್ಟರಲ್ಲಿ ಅಲ್ಲಿಗೆ, ಅಮ್ಮಮ್ಮ ರಾಜಮಾಂಬ, ಅಜ್ಜ ಬಾಪನಾರ್ಯರು, ವೆಂಕಟಪ್ಪಯ್ಯ ಶ್ರೇಷ್ಠಿ ಮತ್ತು ಅವರ ಧರ್ಮಪತ್ನಿ ವೆಂಕಟ ಸುಬ್ಬಮಾಂಬ, ನರಸಿಂಹ ವರ್ಮ ಮತ್ತು ಅವರ ಧರ್ಮಪತ್ನಿ ಅಮ್ಮಾಜಮ್ಮನವರುಗಳು ಬಂದಿದ್ದರು. ಈ ಎಲ್ಲರೊಂದಿಗೆ ಶ್ರೀಗಳು ಸಂತೋಷದಿಂದ, ವಿನೋದವಾಗಿ ಮಾತನಾಡಿಸಲೂ ಸುಮತಿ ಮಹಾರಾಣಿ, ''ಮಗು! ಎಲ್ಲಾ ಬಾಕಿಗಳನ್ನೂ ತೀರಿಸಿ ಹೋಗುತ್ತಿದ್ದೇನೆಂದೆಯೇ ಹೊರತು, ವೆಂಕಟಪ್ಪಯ್ಯ ಶ್ರೇಷ್ಠಿ, ವತ್ಸವಾಯಿ ಮತ್ತು ಮಲ್ಲಾದಿಗಳ ಹಾಲಿನ ಬಾಕಿಗಳು ನೀನು ತೀರಿಸಲಾರೆ'' ಎಂದರು.

## ಶ್ರೀಪಾದರು ಅಂತರ್ಧಾನವಾಗುವುದು

ಆಗ ಶ್ರೀಪಾದರು, ''ಅಮ್ಮಾ! ನೀನನ್ನುವ ಮಾತು ಸುಳ್ಳಲ್ಲಾ. ಈ ಮೂರು ವಂಶಸ್ಥರೂ ನನ್ನನ್ನು ಮರೆತು ಹೋಗದಷ್ಟು ಕಾಲ, ನಾನವರನ್ನು ಮರೆಯುವುದಿಲ್ಲ. ಅವರು ಮರೆತರೂ ನಾನು ಜ್ಞಾಪಿಸುವೆ. ಹಿಂಸಿಸಿಯಾದರೂ ಅವರಿಂದ ಸೇವೆ ಮಾಡಿಸಿಕೊಳ್ಳುವೆನು, ಫಲಿತ ತರುವೆನು. ನಿನ್ನ ತವರಿನ ಪ್ರತೀ ತಲೆಮಾರಿನ ಒಬ್ಬರ ಮನೆಯಲ್ಲಾದರೂ ನಾನು ಭೋಜನ ಗ್ರಹಿಸಿ

ಹೊರಡುವೆ. ಆದರೇ ದಕ್ಷಿಣೆ ಗ್ರಹಿಸುವುದಿಲ್ಲ. ನಿನ್ನ ತವರಿನವರು ನನ್ನನ್ನು ಪ್ರೀತಿಯಿಂದ ಸೋದರಳಿಯನಾಗಿ ಭಾವಿಸುವರೆಂದು ನಾನರಿಯೆ. ನಾನೂ ಈ ಮಾನವೀಯ ಸಂಬಂಧವನ್ನು ಗೌರವಿಸಿ ಬುದ್ಧಿವಂತ ಸೋದರಳಿಯನಂತೆ ವರ್ತಿಸುವೆನು. ಇದಕ್ಕೂ ಮೀರಿ ನಿಮ್ಮ ತವರಿಗೆ ಏನುಬೇಕು?'' ಎಂದು, ತಂದೆಯನ್ನು ಕಂಡು, "ನಮ್ಮ ಘಂಡಿಕೋಟೆ ವಂಶದಲ್ಲಿ ವೇದ, ಬಹಳಷ್ಟು ಕಾಲ ನಿಂತಿರುವುದು. ನನ್ನ ಇಬ್ಬರಣ್ಣಂದಿರೂ ಒಳ್ಳೆಯ ವೇದ ಪಂಡಿತರಾಗುವರು. ಘಂಡಿಕೋಟೆಯವರು ನನ್ನನ್ನು ಮರೆತು ಹೋಗದಷ್ಟು ಕಾಲವೂ ನಾನು ಅವರನ್ನು ಮರೆಯಲಾರೆ. **ಶ್ರೀಧರ ಶರ್ಮ ಒಂದಾನೊಂದು ಜನುಮದಲ್ಲಿ ಸಮರ್ಥ ರಾಮದಾಸನೆಂಬ ಮಹಾಪುರುಷನಾಗಿ ಜನುಮ ಹೊಂದಿ, ಛತ್ರಪತಿ ಶಿವಾಜಿ ಎಂಬ ಹೆಸರಿನಲ್ಲಿ ಜನುಮ ತಾಳಿ, ನರಸಿಂಹ ವರ್ಮರಿಗೆ ಗುರುತ್ವ ತರುವರು. ಈ ತರಹ ನಮ್ಮ ಪೌರೋಹಿತ್ಯ ಸಂಬಂಧ ಎದ್ದು ಕಾಣಿಸುತ್ತದೆ. ರಾಮರಾಜ ಶರ್ಮ ಶ್ರೀಧರ ಹೆಸರಿನಲ್ಲಿ ಜನುಮಿಸಿ ಮಹಾಯೋಗಿ ಆಗುವರು. ಶ್ರೀಧರನ ಶಿಷ್ಯಂದಿರಿಂದ ಪೀಠಿಕಾಪುರದಲ್ಲಿ, ನನ್ನ ಹೆಸರಲ್ಲಿ, ಮಹಾಸಂಸ್ಥಾನ ಒಂದು ಉದಯವಾಗುವುದು. ವೆಂಕಟಪ್ಪಯ್ಯ ಶ್ರೇಷ್ಠಿ ಜೊತೆ ನಮಗಿರುವ ಋಣಾನುಬಂಧ ಸ್ಥಿರಗೊಳಿಸಲಾಗುವುದು. ಅಷ್ಟೇ ಅಲ್ಲದೆ ಅವರ ನಂತರ, ವಾತ್ಸವಾಯಿಯರು ಮುಂಬರುವರು"** ಎಂದು ಅಭಯ ಕೊಟ್ಟರು.

ಸಾವಿತ್ರಿಪನ್ನ ಪರಿಸಲಾಯಿತು. ಶ್ರೀಪಾದರಿಗೆ ವೇದವೆಂದರೇ ಪ್ರಾಣ. ವೇದಪಠನ ನಡೆಯುತ್ತಿರಲೂ, ಅವರೆಲ್ಲಾ ಕಾಣುತ್ತಿದ್ದಂತೆಯೇ, ಅಂತರ್ಧಾನರಾದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 42

# ಮೊಟ್ಟಮೊದಲಬಾರಿ ಪೀಠಿಕಾಪುರ ವಾಸಿಗಳಿಂದ 'ದತ್ತ ದಿಗಂಬರ! ದತ್ತ ದಿಗಂಬರ! ಶ್ರೀಪಾದವಲ್ಲಭ ದತ್ತ ದಿಗಂಬರ' ಎಂಬ ನಾಮಸ್ಮರಣೆ ಪ್ರಾರಂಭಿಸಲಾಗಿ, ನಂತರ ವಿಶ್ವವಿಖ್ಯಾತಗೊಳ್ಳುವುದು

**(ತಪ್ಪಿಹೋದ ಮಕ್ಕಳು ಲಭಿಸಲು ಪಠನೀಯ)**

**ಶ್ರೀಪಾದರು ಜನನೀ ಜನಕ, ಬಾಪನಾರ್ಯ, ನರಸಿಂಹ ವರ್ಮ ಮತ್ತು ವೆಂಕಟಪ್ಪಯ್ಯ ಶ್ರೇಷ್ಠಿಗಳಿಗೆ ಸದಾ ತಮ್ಮ ದಿವ್ಯದರ್ಶನ ತರುವುದು**

ಮಧ್ಯಾಹ್ನ ಊಟದ ನಂತರ ಶ್ರೀಭಾಸ್ಕರ ಪಂಡಿತರು ಹೀಗೆ ನುಡಿದರು. ''ಶ್ರೀಪಾದರು ಶೂದ್ರ ಗೃಹದಲ್ಲಿ ದತ್ತ ದೀಕ್ಷೆ ನೀಡುವುದು, ಅದೂ ಏಕರಾತ್ರಿ ದೀಕ್ಷೆ, ದೀಕ್ಷಾ ವಿಧಿಯಲ್ಲಿ ಸಹಾ ಪಾಲಿಸಬೇಕಾದ ಪೂಜೆ, ಅರ್ಚನೆ ಮುಂತಾದವು ಯಾವುದೂ ಇಲ್ಲದೇ, ಕೇವಲ ಭಕ್ತರ ಕೈಗೆ ದಾರಕಟ್ಟಿ ಭಜನೆ ಮಾತ್ರ ಮಾಡಿಸುವುದು, ಇವೆಲ್ಲಾ ಶಾಸ್ತ್ರ ವಿರೋಧವಾಗಿರುವುದೂ ಅಲ್ಲದೇ, ತಾನೇ ದತ್ತನೆಂದು, ತನ್ನನ್ನು ಸ್ಮರಿಸಿದ ಮಾತ್ರಕ್ಕೆ ಕಷ್ಟಗಳೆಲ್ಲಾ ಮಾಯವಾಗುವುದೆಂದು ಪ್ರಕಟಿಸುವುದು, ಶಾಸ್ತ್ರಗಳನ್ನು ಅವಹೇಳನೆ ಮಾಡಿದಷ್ಟೇ ಎಂದು ಎಣಿಸಿ ಬ್ರಾಹ್ಮಣರೆಲ್ಲಾ ಒಂದಾಗಿ, ಶಂಕರಾಚಾರ್ಯರಿಗೆ ವಿಷಯ ತಿಳಿಸಿ, ಬ್ರಾಹ್ಮಣ ಕುಲದಿಂದ ಬಾಪನಾರ್ಯ ಮತ್ತು ಅಪ್ಪಲರಾಜ ಶರ್ಮರನ್ನು ಹೊರಹಾಕಬೇಕೆಂದು ತೀರ್ಮಾನಿಸಿದರು. ಆದರೆ ಅಷ್ಟರಲ್ಲೇ ಶ್ರೀಪಾದರು ಇದ್ದಕಿದ್ದಂತೆ ಅಂತರ್ಧಾನವಾದದ್ದು ಚರ್ಚನೀಯಾಂಶವಾಗಿತ್ತು. ಶಂಕರಾಚಾರ್ಯರ ಅಪ್ಪಣೆ ಇಲ್ಲದೇ ಯಾರಿಗೂ ಆಧ್ಯಾತ್ಮಿಕ ವಿಷಯಗಳಲ್ಲಿ ಬಿರುದಾವಳಿ ಪ್ರಕಟಿಸಲಾಗದು. ಅಂತಹ ಸಂದರ್ಭದಲ್ಲಿ 16 ವರುಷ ತುಂಬದ ಒಬ್ಬ ಬಾಲಕನನ್ನು ಸಾಕ್ಷಾತ್ ದತ್ತ ಪ್ರಭು ಅವತಾರ ಎನ್ನುವುದು ದೈವ ದ್ರೋಹವೆಂದು ಎಣಿಸಿದರು.

ಆದ್ದರಿಂದ ಕೆಲ ಕಪಟ ಬ್ರಾಹ್ಮಣರು, ಮೇಲೆ ಮಾತ್ರ ಸಾನುಭೂತಿ ತೋರಿಸಲು ಬಾಪನಾರ್ಯರ ಮನೆಗೆ ಬಂದರು. ಆಶ್ಚರ್ಯಕರವಾಗಿ, ಮನೆಯವರು ಯಾರೂ ಶ್ರೀಪಾದರ ಅದೃಶ್ಯಕ್ಕೆ ವಿಷಾದದಿಂದಿರಲಿಲ್ಲ. ಅಷ್ಟಲ್ಲದೇ ಬಾಪನಾರ್ಯರು, ''ದತ್ತನು ವಿಜೃಂಭಿಸಿದ್ದಾನೆ. ಆ ಮಹಾಪ್ರಭು ಶ್ರೀಪಾದ ರೂಪದಲ್ಲಿ ನಮ್ಮನೆಯಲ್ಲಿ ತಿರುಗಾಡಿದ್ದಾನೆ. ನಮಗೆ ದಿವ್ಯ ಸಂತಸ ನೀಡಿದ್ದಾನೆ. ನಮ್ಮ ಕಣ್ಣಿಗೆ ಮೂಡಿದ್ದ ಮಾಯೆ ತೊಲಗಿಸಿದ್ದಾನೆ. ನಮ್ಮ ಕಣ್ಣಲ್ಲೇ ಸದಾ ಬೆಳಗುತ್ತಾ ಮೊದಲಿಗಿಂತ ಅಧಿಕ ಬಾರಿ ದಿವ್ಯದರ್ಶನ ನೀಡುತ್ತಿದ್ದಾನೆ. ನಾವು ಧನ್ಯರು'' ಎಂದು ನುಡಿದರು. ಬಂದ ಬ್ರಾಹ್ಮಣರು ದಿಗ್ಭ್ರಾಂತಿ ಹೊಂದಿದರು. ಅವರು ಬಂದದ್ದೇ ಕಲ್ಮಷ ಬುದ್ಧಿಯಿಂದ. ಅವರು ಕಂಡದ್ದು, ಮನೆಯಲ್ಲಿ ಸಂತೋಷ! ಸುಮತಿ ಮಹಾರಾಣಿ, ಅಪ್ಪಲರಾಜ ಶರ್ಮ, ಅಣ್ಣಂದಿರು ತಂಗಿಯರು ಸಹಾ ಆನಂದದಲ್ಲಿದ್ದರು.

ಆಗ ಶರ್ಮರು, ಶ್ರೀಪಾದನ ಕುರಿತು ನಮಗೆ ಬಹಳ ಯೋಚನೆಗಳಿದ್ದವು. ಈಗ ಎಲ್ಲಾ ಮಾಯವಾಗಿ ನಮ್ಮ ಮನಸ್ಸಿನಲ್ಲಿ ಶಾಂತಿ ಇದೆ. ಸ್ಮರಣೆ ಮಾತ್ರದಲ್ಲೆ ನಮ್ಮ ಮನೋನೇತ್ರದಲ್ಲಿ ಗೋಚರಿಸುತ್ತಿದ್ದಾನೆ. ನಮ್ಮ ಸಂಗಡ ಸ್ಥೂಲ ದೇಹದಿಂದ

ಮಾತನಾಡುತ್ತಿದ್ದಾನೆ. ಸಾಕ್ಷಾತ್ ದತ್ತದೇವನ ಜನನೀ ಜನಕರಾಗಿರುವುದು ನಮ್ಮ ಪುಣ್ಯ. ಮಹದಾನಂದವಾಗಿದೆ'' ಎಂದರು. ಬ್ರಾಹ್ಮಣರು ನಿರಾಶೆಗೊಂಡರು!

ವೆಂಕಟಪ್ಪಯ್ಯ ಶ್ರೇಷ್ಠಿ, ''ಬ್ರಾಹ್ಮಣೋತ್ತಮರಾ! ಇಲ್ಲಿಯವರೆಗೂ ಸ್ವಲ್ಪ ಕಾಲ ಮಾತ್ರ ಶ್ರೀಪಾದನ ಜೊತೆ ಇರುತ್ತಿದ್ದೆವು. ಈಗ! ನಮ್ಮ ಮನೋನೇತ್ರದಲ್ಲಿ ಸದಾ ಬೆಳಗುತ್ತಾ ಜೊತೆ ಜೊತೆಯಲ್ಲೇ ಇದ್ದಾನೆ'' ಎಂದರು.

ನರಸಿಂಹ ವರ್ಮ, ''ನಮ್ಮ ಕಣ್ಣಿಗೆ ಮೂಡಿದ್ದ ಮಾಯೆ ದೂರ ಸರಿದಿದೆ. ನಿತ್ಯವಿನೋದಿ, ದಿವ್ಯವಿನೋದಿ ಆದ ಆ ಪ್ರಭು, ಶ್ರೀಪಾದ ಶ್ರೀವಲ್ಲಭ ರೂಪದಲ್ಲಿ ನಮ್ಮನೆಯಲ್ಲೇ ತಿರುಗಾಡುತ್ತಾ, ನಮ್ಮ ಜೊತೆ ನಗಿಸಿ ಮಾತನಾಡುತ್ತಾ ನಮ್ಮ ಕಣ್ಮುಂದೆಯೇ ನಮಗೆ ನೆರವಾಗಿರುವನು. ಹಿಂದೆಗಿಂತ ಹೆಚ್ಚು ದರ್ಶನ ಭಾಗ್ಯ ಈಗಿದೆ'' ಎಂದರು.

ಈ ವಿಷಯಗಳು ಶ್ರೀ ಕುಕ್ಕುಟೇಶ್ವರಾಲಯದಲ್ಲಿದ್ದ ಸನ್ಯಾಸಿಗೆ ತಿಳಿಸಲಾಯಿತು. ಆತನಿಗೆ ಎದೆ ಡವಡವ ಹೊಡೆದುಕೊಳ್ಳತೊಡಗಿತು. ಶ್ರೀಪಾದರು, ತಾವು ದತ್ತ ಗುರುಗಳೇ ಎಂದು ಸ್ಪಷ್ಟವಾಗಿ ನುಡಿದು ಅಂತರ್ಧಾನವಾದರು. ಬೇರೇ ದೈವಗಳ ಹೆಸರು ಸಹಾ ಎತ್ತದೇ, ತಮ್ಮ ಆರಾಧ್ಯ ದೈವನಾದ ಶ್ರೀದತ್ತಾತ್ರೇಯರೇ ತಾವೆಂದು ತಿಳಿಸಿದರು. ನನ್ನ ದುರದೃಷ್ಟಕ್ಕೆ, ದತ್ತಾತ್ರೇಯರೇ ಶ್ರೀಪಾದ ಶ್ರೀವಲ್ಲಭರಾಗಿ ಜನಿಸಿದ್ದಾರೆಯಾ? ಅದು ಸತ್ಯವಾದರೇ ತನಗೆ ಮುಂದೆ, ಕಷ್ಟನಷ್ಟಗಳಿಗೇನು ಕೊರತೆ ಇಲ್ಲ! ದತ್ತ ಪ್ರಭುಗಳು ವಿಚಿತ್ರ ಸ್ವಭಾವದವರು. **ಅವರು ನನಗೆ ಕಷ್ಟ ತಂದಿಟ್ಟು, ಆನಂದಪಟ್ಟು, ಸಂಪೂರ್ಣ ಶರಣಾಗತಿ ಎಂದ ನಂತರವೇ ನನ್ನನ್ನು ಉದ್ಧಾರ ಮಾಡುವರು. ಇದು ಅವರ ಸ್ವಭಾವ.** ಇಷ್ಟುಮಂದಿ ಬ್ರಾಹ್ಮಣರು ನನ್ನನ್ನು ಪೂಜಿಸುವುದು, ಇಷ್ಟೊಂದು ಧನ ನನ್ನ ಬಳಿ ಸೇರುವುದು, ಶ್ರೀದತ್ತರ ಕರುಣೆಯೇ ಎಂದೆಣಿಸಿದೆನು. ಈ ಕರುಣಾನೋಟ ಮತ್ತು ಅನುಗ್ರಹದ ಹಿಂದೆ ನನಗೆ ಪ್ರತ್ಯೇಕವಾದ ಶಿಕ್ಷೆ ಇಲ್ಲ ತಾನೇ! ಹೆಸರಿಗಾಗಿ, ಧನಕನಕ ವಸ್ತುಗಳಿಗಾಗಿ, ನಾನು ಬಾಯಿ ತೆಗೆಯುತ್ತಿರುವುದು ಶ್ರೀ ದತ್ತರಿಗೆ ವಿದಿತವೇ. ನನ್ನ ಹಿಂದೆ ಬಿದ್ದ ಬ್ರಾಹ್ಮಣ್ಯ ಸಹಾ ಧನಾಸಕ್ತರೇ! ತನಗೇ ಆಗಲಿ, ಈ ಬ್ರಾಹ್ಮಣ್ಯಕ್ಕಾಗಲಿ ಆಧ್ಯಾತ್ಮಿಕ ಶಕ್ತಿ ಏನೂ ಇಲ್ಲ! ದತ್ತ ದೀಕ್ಷೆ ಎಂಬುದು ಕೇವಲ ಧನಾರ್ಜನಗಾಗಿಯೇ! ಈ ದೀಕ್ಷೆ ಹಿಡಿದವರ ಕೋರಿಕೆ ನೆರವೇರದಿದ್ದರೇ, ಅವರ ನಿಷ್ಠೆಯಲ್ಲೇ ಲೋಪ ಎಂದು ಎಣಿಸುವರು. ಕೋರಿಕೆಗಳು ನೆರವೇರಿದರೇ ಅದು ದೀಕ್ಷಾ ಫಲವೆಂದುಕೊಳ್ಳುವರು. ಇದೆಲ್ಲಾ ತಿಳಿದ ಶ್ರೀಪಾದ ಶ್ರೀವಲ್ಲಭರು ನನ್ನನ್ನು ಯಾವುದಾದರೂ ಚಿತ್ರವಿಚಿತ್ರ ಪದ್ಧತಿಯಲ್ಲಿ ಸಿಕ್ಕಿಸುವರಾ'' ಎಂದು ಸನ್ಯಾಸಿ ನಡುಗುತ್ತಿದ್ದನು.

ಇಷ್ಟರಲ್ಲಿ ಶ್ರೀ ಕುಕ್ಕುಟೇಶ್ವರಾಲಯಕ್ಕೆ ಒಬ್ಬ ಮುದಿ ಬ್ರಾಹ್ಮಣ ಬಂದನು. ಹೆಸರು ನರಸಿಂಹ ಖಾನ್ ಎಂದೂ, ಕಾಶ್ಯಪ ಗೋತ್ರಿ ಎಂದೂ, ಮಹಾರಾಷ್ಟ್ರದಿಂದ ಪ್ರತ್ಯೇಕವಾಗಿ ಶ್ರೀ ಕುಕ್ಕುಟೇಶ್ವರ ದರ್ಶನಕ್ಕಾಗಿಯೇ ಬಂದಿರುವೆನೆಂದು, ಇಲ್ಲಿ ದತ್ತ ದೀಕ್ಷೆ ನೀಡಲು ಪರಮಹಂಸ ಪರಿವ್ರಾಜಕಾಚಾರ್ಯರು ಒಬ್ಬರು ಬಂದ ವಿಷಯ ತಿಳಿದು, ಅವರ ದರ್ಶನಾರ್ಥಿಯಾಗಿ ಬಂದೆನೆಂದನು. ಸೊಂಟದಲ್ಲಿ ಅನೇಕ ವರಹಗಳಿದ್ದವು. ಅವೆಲ್ಲವನ್ನೂ ದಕ್ಷಿಣೆಯಾಗಿ ಸಮರ್ಪಿಸಲೂ ಆ ಸನ್ಯಾಸಿ ಆನಂದಭರಿತನಾದನು. ದೀಕ್ಷೆ ಕೊಡಲು ಆ ಬ್ರಾಹ್ಮಣನ್ನು ಕೈ ಮುಂದೆ ಚಾಚಲೂ ಹೇಳಿ ಕಮಂಡಲದಿಂದ ಸನ್ಯಾಸಿ ಉದಕವನ್ನು ಬಿಟ್ಟರೇ, ಒಂದು ಛೇಳು ಸಹಾ ಕೈಗೆ ಬಿತ್ತು! ಆಗ ಆ ಬ್ರಾಹ್ಮಣ ಸ್ವಲ್ಪ ಕಠಿಣವಾಗಿ, ''ನನ್ನ ಕೈಗೇ ಉದಕವನ್ನು ಬಿಟ್ಟಿದ್ದೀಯ. ನನ್ನನ್ನೇ ಅದನ್ನು ಕುಡಿಯೆಂದು ಹೇಳುತ್ತಿದ್ದೀಯ. ಏನೀ ಆಶ್ಚರ್ಯ? ನೀನು ಅನೇಕ ವರ್ಷಗಳಿಂದ ಹೊಂದಿದ್ದ ತಪಸ್ಸಿನ ಫಲ, ನನಗೆ ಧಾರೆ ಎರೆದೆಯೆ? ನಾನಾ ಫಲವನ್ನು ಪೀಠಿಕಾಪುರಕ್ಕೆ ಅಂಕಿತ ಮಾಡುತ್ತಿದ್ದೇನೆ'' ಎಂದು ಹೇಳಿ ಅದೃಶ್ಯನಾದನು. ಸನ್ಯಾಸಿ ಆಶ್ಚರ್ಯಪಟ್ಟನು. ಇಷ್ಟರಲ್ಲಿ ಮನೆ

ಹೊರಗಿನಿಂದ ಒಬ್ಬ ಬ್ರಾಹ್ಮಣ ಛೇಳು ಕಚ್ಚಿತೆಂದು ಕಿರಿಚಿದನು. ಆ ಬ್ರಾಹ್ಮಣನೂ ಈ ಸನ್ಯಾಸಿ ಬಳಿ ದೀಕ್ಷೆ ಪಡೆದವನೇ. ಛೇಳಿನ ಮಂತ್ರ, ಮತ್ತಿತರ ಮಂತ್ರಗಳು, ಶ್ರೀ ಕುಕ್ಕುಟೇಶ್ವರನಿಗೆ ಅಭಿಷೇಕ, ಸ್ವಯಂಭೂ ದತ್ತರಿಗೆ ವಿಶೇಷ ಪರಿಮಾಣದಲ್ಲಿ ಕರ್ಪೂರ ಹಾರತಿ, ಇನ್ನೂ ಅನೇಕ ಪ್ರಯಾಸಗಳಿಂದಲೂ, ಆ ನೋವು ಕಡಿಮೆ ಆಗಲೇ ಇಲ್ಲ. ಮೇಲ್ಪಟ್ಟು ಆ ಬ್ರಾಹ್ಮಣ ಬಾಯಿಂದ ನೊರೆ ಬರುತ್ತಿರಲೂ ಮೂರ್ಛೆ ಹೋದನು. 'ಅದು ಛೇಳಲ್ಲ ಹಾವಿನ ಕಡಿತ' ಎಂದರು.

ಕಮಂಡಲದಿಂದ ಮಹಾರಾಷ್ಟ್ರ ವೃದ್ಧ ಬ್ರಾಹ್ಮಣ ಕೈಗೆ ಬಿದ್ದ ಛೇಳನ್ನು ಗಮನಿಸಿದವರು ಕೆಲವರು, ಅದು ಛೇಳಿನ ಕಡಿತವೇ ಎಂದರು.

ಪೀಠಿಕಾಪುರದಲ್ಲಿ ಯಾವ ಕ್ಷಣ ಯಾವ ರೀತಿಯ ವದಂತಿ ಹುಟ್ಟುವುದೋ, ಪ್ರಚಾರವಾಗುವುದೋ ಮತ್ತದರಿಂದ ಯಾರು ಯಾವ ರೀತಿ ಬಿಕ್ಕಟ್ಟಿನಲ್ಲಿ ಸಿಕ್ಕಿ ಬೀಳುವೆರೋ ಎಂಬುದು ಆ ದೈವವಿದಿತ. ಶ್ರೀ ಕುಕ್ಕುಟೇಶ್ವರ ಸ್ವಾಮಿಗೆ ಅಭಿಷೇಕ, ಸ್ವಯಂಭೂ ದತ್ತರಿಗೆ ಕರ್ಪೂರ ಹಾರತಿ ನಂತರ ಸಹಾ ಛೇಳಿನ ಬಾಧೆ ನಿವಾರಣೆ ಆಗಲಿಲ್ಲವೆಂದರೇ ಶ್ರೀದತ್ತ ದೀಕ್ಷೆ ಕೊಟ್ಟ ಆ ಸನ್ಯಾಸಿಯೇ ಕಾರಣವೆಂದು ಕೆಲವರು ಅನುಮಾನಿಸಿದರು. ಮಹಾರಾಷ್ಟ್ರ ಬ್ರಾಹ್ಮಣ ಕೊಟ್ಟ ಗಂಟಿನಲ್ಲಿ ವರಾಹಗಳ ಸ್ಥಾನದಲ್ಲಿ ಇದ್ದಿಲಿದ್ದವು! ಒಂದು ವೇಳೆ ಶ್ರೀಪಾದ ಶ್ರೀವಲ್ಲಭರು ತನ್ನನ್ನು ಶಿಕ್ಷಿಸಲು ಈ ಬ್ರಾಹ್ಮಣನ ರೂಪದಲ್ಲಿ ಬಂದೆನಾ ಎಂದು ಸನ್ಯಾಸಿ ಗಡಗಡ ನಡುಗಿದನು.

ಆ ಬ್ರಾಹ್ಮಣನ ಬಾಯಿಂದ ಹೆಚ್ಚಾಗಿ ನೊರೆ ಬರುತ್ತಿದ್ದ ಕಾರಣ, ಅದು ಹಾವಿನ ಪ್ರಭಾವವೇ ಎಂದು ತೀರ್ಮಾನಿಸಿದರು. ಮಂತ್ರ ತಂತ್ರಗಳನ್ನು ಕುರಿತ ಒಂದು ವಿದ್ಯೆ, ಕಾಡಲ್ಲಿ ಸಂಚರಿಸುವ ಕೋಯನ ಬಗ್ಗೆ, ಚೆಂಚುಗಳಿಗೆ ತಿಳಿದಿದೆ ಎಂದು, ಅದನ್ನರಿತು ಈ ಸನ್ಯಾಸಿ ಬ್ರಾಹ್ಮಣನ ಮೇಲೆ ಪ್ರಯೋಗಿಸಿದ ಕಾರಣ ಛೇಳಾಗಿದ್ದದ್ದು ಹಾವಿನ ರೂಪ ತಾಳಿ ವಿಷ ತುಂಬಿತೆಂದು, ನಂತರ ಅದು ದೆವ್ವವಾಗಿ, ಆ ಬ್ರಾಹ್ಮಣ ನೋವಿಗೆ ನಲಿಯುತ್ತಿರಲೂ ಇತರರ ಮನೆಗೆ ನುಗ್ಗಿ ಅಲ್ಲಿನ ಧನ ಸಂಪತ್ತು ತಂದು, ತನ್ನನ್ನು ಪ್ರಯೋಗಿಸಿದ ಆ ಸನ್ಯಾಸಿ ಕೈಗೆ ಕೊಡುವುದೆಂದು ಪುಕಾರು ಹುಟ್ಟಿತ್ತು. ಪೀಠಿಕಾಪುರ ಅಂತಹ ವದಂತಿಗಳಿಗೆ ಪ್ರಸಿದ್ಧವಾದದ್ದೆಂದು ಆ ಬಡ ಸನ್ಯಾಸಿ ತಿಳಿದಿರಲಿಲ್ಲ.

ನೊರೆ ಕಕ್ಕುತ್ತಿದ್ದ ಆ ಬ್ರಾಹ್ಮಣ ಸ್ವಲ್ಪ ಹೊತ್ತಿಗೆ ಎದ್ದನು. ಹೊಟ್ಟೆಯಲ್ಲಿನ ಸಂಕಟದ ಕಾರಣ ಕುಣಿದಾಡುತ್ತಿದ್ದನು. ಸ್ವಲ್ಪ ಕುಣಿದಾಡಿ ಅದು ದೆವ್ವವಾಗಿ ಬಿಡುವುದೆಂದು, ಪ್ರತಿ ಒಬ್ಬರ ಮನೆ ಮುಂದೆಯೂ "ಓ ದೆವ್ವವೇ! ನಾಳೆಬಾ!" ಎಂದು ಬರೆದಿದ್ದರೇ ಆ ದೆವ್ವ, ದಿನವಹಿ ಬಂದು, ಮುಂದೆ ಹೋಗುತ್ತಿರುವುದೆಂದು, ಮನೆ ಒಳಕ್ಕೆ ಯಾವ ಕಾರಣಕ್ಕೂ ಆ ದೆವ್ವವನ್ನು ಬಿಟ್ಟು ಧನ ಕಳೆದುಕೊಳ್ಳಕೂಡದೆಂದು ವದಂತಿ ಹೊರಡಿತು.

ಇಲ್ಲಿಯವರಿಗೂ ಆ ಸನ್ಯಾಸಿಯ ಹಿಂದೆ ಬಿದ್ದಿದ್ದ ಬ್ರಾಹ್ಮಣರೆಲ್ಲಾ ಅವನನ್ನು ಬಿಟ್ಟು ಅವರವರ ಮನೆ ಕಾಪಾಡಿಕೊಳ್ಳಲೂ ಓಡಿದರು. ಅವರೂ ಇವರೂ ಅಂತಲ್ಲದೇ ಪ್ರತಿ ಕುಲದವರೂ 'ಓ ದೆವ್ವವೇ! ನಾಳೆ ಬಾ" ಎಂದು ಇಜ್ಜಿಲಲ್ಲಿ ಮನೆ ಗೋಡೆ ಮೇಲೆ ಬರೆದರು.

ವೆಂಕಯ್ಯ ಎಂಬ ರೈತ, 'ಶೂದ್ರರ ಮನೆಗಳಲ್ಲಿ ಇಜ್ಜಿಲಿನ ಪಾತ್ರೆಯೊಂದನ್ನಿಟ್ಟು, ನಮಿಸಿದರೇ ಆ ದೆವ್ವ ಶೂದ್ರರ ಮನೆಗೆ ಹೋಗುವುದೂ ಇಲ್ಲ ಅವರ ಕಷ್ಟಾರ್ಜಿತ ಕದಿಯುವುದೂ ಇಲ್ಲ ಎಂದು ಎಲ್ಲರಿಗೂ ತಿಳಿಸಿದನು.

ಕೆಲ ಸಮಯಕ್ಕೆ ಕುಣಿದಾಟ ನಿಂತು, ಬ್ರಾಹ್ಮಣ ಸ್ವಸ್ಥನಾದನು. ಒಬ್ಬ ರೈತ ಆ ಬ್ರಾಹ್ಮಣನಿಗೆ ''ಸ್ವಾಮಿ! ನಮ್ಮ ಕುಲಮುಖ್ಯಸ್ಥ ವೆಂಕಯ್ಯ, ಶ್ರೀಪಾದರ ಅಕ್ಷತೆ ಕೊಡಬೇಕೆಂದಿದ್ದಾರೆ, ಇದರಿಂದ ಪೂರ್ತಿ ವಾಸಿಯಾಗುವುದೆ''ಂದನು.

ಆಗ ಆ ಬ್ರಾಹ್ಮಣ ''ನಾನು ಸ್ವಸ್ಥನಾಗಿದ್ದೇನೆ. ಆದರೇ ವದಂತಿಗಳಂತೇ ನಾನು ನಿಜವಾಗಿಯೇ, ದೆವ್ವವಾಗಿ ಬದಲಾಯಿಸಬಹುದು, ಶ್ರೀಪಾದರಿತ್ತ ಮಂತ್ರಾಕ್ಷತೆಯನ್ನು ಶೂದ್ರರ ಮೂಲಕ ಅವರ ಮನೆಯಿಂದ ತೆಗೆದುಕೊಳ್ಳುವುದರಲ್ಲಿ ಅದೇ ಪದ್ಧತಿ ಇರಬಹುದು. ಸಹಜವಾಗಿ ಬ್ರಾಹ್ಮಣರಿಂದ ಶೂದ್ರರು ಮಂತ್ರಾಕ್ಷತೆ ಪಡೆಯುತ್ತಾರೆ. ಅಷ್ಟೇಹೊರತು, ಶೂದ್ರರು ಬ್ರಾಹ್ಮಣರನ್ನು ತಮ್ಮ ಮನೆಗೆ ಬರ ಮಾಡಿಕೊಂಡು ಅಕ್ಷತೆ ನೀಡುವುದಿಲ್ಲ. ವೆಂಕಯ್ಯನಂತ ಸೌಮ್ಯನು ನನಗೀತರಹ ಹೇಳಿ ಕಳುಹಿಸುವುದರಲ್ಲಿ ನನ್ನ ಒಳ್ಳೆಯದಕ್ಕೆ ಆಗಿರುತ್ತೆ' ಎಂದು ಯೋಚಿಸಿ, ವೆಂಕಯ್ಯನಿಂದ ಅಕ್ಷತೆ ಪಡೆದು, ಮನೆಗೆ ತೆರಳಿದನು.

ಪೀಠಿಕಾಪುರದಲ್ಲಿ ಹುಟ್ಟಿ ಹರಡಿದ ವದಂತಿಗಳಿಂದ ಅಷ್ಟಾದಶ ವರ್ಣದವರಿಗೂ ಸನ್ಯಾಸಿಮೇಲೆ ನಂಬಿಕೆ ಹೋಯಿತು. ಎಲ್ಲರೂ ಸೇರಿ ಕ್ಷುದ್ರ ವಿದ್ಯೆಗಳಲ್ಲಿ ಹೆಸರು ಪಡೆದ ಸನ್ಯಾಸಿಗೆ ದಕ್ಷಿಣೆ ಕೊಡುವುದು ನಿಲ್ಲಿಸಿದ್ದೂ ಅಲ್ಲದೇ ಇದುವರೆಗೂ ಕೊಟ್ಟಿದ್ದ ಹಣ ಸಹಾ ವಾಪಸ್ ಪಡೆದರು. ಅವನಿಗೆ ದೇಹಶುದ್ಧಿ ಮಾಡದೇ ಕಳುಹಿಸಿದರು. ಆ ದ್ರವ್ಯವನ್ನೇನು ಮಾಡಲು ಬಾಪನಾರ್ಯರನ್ನು ಕೇಳಿದರು.

ಆ ದ್ರವ್ಯದಿಂದ ಅಷ್ಟಾದಶ ವರ್ಣರಿಗೂ ಅನ್ನ ಸಂತರ್ಪಣೆ ಮಾಡಿ ಶ್ರೀದತ್ತರನ್ನು ಸಂತೋಷ ಪಡಿಸಲು ಹೇಳಿ, ವ್ಯಕ್ತಿಗತ ದತ್ತ ದೀಕ್ಷೆ ಅನಗತ್ಯವೆಂದು ಬಾಪನಾರ್ಯರು ನುಡಿದರು.

ಕುಕ್ಕುಟೇಶ್ವರಾಲಯದ ಮುಂದೆ ದೊಡ್ಡ ಚಪ್ಪರ ಹಾಕಲಾಯಿತು. ಎಲ್ಲರಿಗೂ ಅನ್ನ ಸಂತರ್ಪಣೆ ಆಯಿತು. ಮೊದಲಬಾರಿಗೆ **ಎಲ್ಲರೂ 'ದತ್ತ ದಿಗಂಬರ! ದತ್ತ ದಿಗಂಬರ! ಶ್ರೀಪಾದ ವಲ್ಲಭ ದತ್ತ ದಿಗಂಬರ!' ಎಂದು ದಿವ್ಯನಾಮ ಜಪಿಸಿದರು. ಈ ನಾಮ ಪ್ರಪಂಚದಲ್ಲೆಲ್ಲೆಲ್ಲೂ ಅರಳುವುದೆಂದು ಶ್ರೀಪಾದರು ಈಗಾಗಲೇ ನುಡಿದಿದ್ದರು.**



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 43

# ಶ್ರೀ ಅನಘಾಲಕ್ಷ್ಮಿ ವರ್ಣನೆ, ಶ್ರೀಪಾದರ ವೈಷ್ಣವ ಮಾಯೆ

ಶ್ರೀ ಭಾಸ್ಕರ ಪಂಡಿತರು ರಾತ್ರಿ, ತಮ್ಮ ಆರಾಧನೆ ಕಾರ್ಯಕ್ರಮದ ನಂತರ ಹೀಗೆಂದರು. ''ಮಹಾಶಯರೇ! ಶ್ರೀ ವಿದ್ಯೋಪಾಸನ ಮಹಾಶ್ರೇಷ್ಠವಾದದ್ದು. ಸತ್ಯಕ್ಕೆ ಶ್ರೀಪಾದ ಶ್ರೀವಲ್ಲಭರು ಮಹಾಸರಸ್ವತೀ, ಮಹಾಕಾಳೀ, ಮಹಾಲಕ್ಷ್ಮೀ ಸ್ವರೂಪರು.'' ಆಗ ನಾನಂದೆನು ''ಸ್ವಾಮಿ! ಶ್ರೀಪಾದರು ಶ್ರೀ ಪದ್ಮಾವತಿ ವೆಂಕಟೇಶ್ವರ ಸ್ವರೂಪವೆಂದರು. ಈಗ ತ್ರಿಮೂರ್ತಿಗಳು ಸಹಾ ಅವರೇ ಎಂದರು. ಅವರನ್ನೇ ಶ್ರೀ ಅನಘಾಲಕ್ಷ್ಮಿಸಮೇತ ಅನಘರೆನ್ನುವರು. ನನಗೆ ತಿಳಿಯುತ್ತಿಲ್ಲ. ಸ್ವಲ್ಪ ವಿವರಿಸಿ ಹೇಳುವಿರಾ.''

### ಶ್ರೀಪಾದರ ವಿರಾಟ್ ಸ್ವರೂಪ

ಆಗ ಆ ಮಹಾಪಂಡಿತರು, ''ಮಹಾಶಯರೇ! **ಪರಮಾತ್ಮ ಎಲ್ಲಾ ಜೀವರಾಶಿಗಳಲ್ಲೂ ಇರುವನೆನ್ನುವರು. ಇರುವೆಯಿಂದ ಬ್ರಹ್ಮವರೆಗೂ ಆ ದೇವ ವ್ಯಾಪಿಸಿರುವನು ಎನ್ನುತ್ತಾರೆ. ಆದರೇ ಶ್ರೀಪಾದ ಶ್ರೀವಲ್ಲಭಾವತಾರದಲ್ಲಿ ತಾನು ಇರುವೆಯ ಬ್ರಹ್ಮನಾಗಿ ಇರುವೆನೆಂದರು. ಹಾಗಾಗಿ ಎಲ್ಲಾ ಸೃಷ್ಟಿಯಲ್ಲಿ ಸೃಷ್ಟಿರೂಪದಲ್ಲಿ ಕಾಣುವರು. ಅಂದರೇ ಎಲ್ಲಾ ಜೀವರಾಶಿಗಳ ಚೈತನ್ಯದಲ್ಲೂ ಅವರು ತದಾತ್ಮ್ಯ ಸ್ಥಿತಿ ಹೊಂದಿರುವರೆಂದರ್ಥ. ಇದೇ ಈ ಅವತಾರದ ವೈಶಿಷ್ಟ್ಯ.** ಅವರು ಸೃಷ್ಟಿಯ ಎಲ್ಲಾ ಜೀವರಾಶಿಗಳಾಗಿದ್ದರೂ, ಅವರ ಸ್ಪರ್ಶ ಯಾವ ಸ್ಥಾಯಿಯಲ್ಲೂ ಜೀವಿಗಳಿಗೆ ಇರಲಾರದು. ಅದು ವೈಷ್ಣವ ಮಾಯೆ. ಸೃಷ್ಟಿಯ ಮರ್ಯಾದೆ, ಕಟ್ಟುನಿಟ್ಟು ಮತ್ತು ನಿರ್ದಿಷ್ಟ ವಲಯಗಳಲ್ಲಿ ನಡೆದುಕೊಳ್ಳುವ ನಿಯಮ ಇರಬೇಕು. 'ಮಹಾಸರಸ್ವತೀ, ಮಹಾಲಕ್ಷ್ಮೀ, ಮಹಾಕಾಳೀ ರೂಪಿ' ಎನ್ನುವುದರಲ್ಲಿ ಅರ್ಥ, ಯಾವ ಚೈತನ್ಯ ಪದಾರ್ಥ ಆ ರೂಪಗಳಲ್ಲಿ ಕಂಡುಬರುವುದೋ, ಆ ಚೈತನ್ಯ ಪದಾರ್ಥ ತಾವೇ ಎಂಬುವ ಭಾವವೇ. ಅಭಿವ್ಯಕ್ತವಾದ ಆ ಪದಾರ್ಥಗಳಿಂದ ಶ್ರೀಗಳು, ಸದಾ ತಮ್ಮದೇ ಆದ ಯೋಗಮಾಯೆಯಿಂದಾ ತದಾತ್ಮ್ಯ ಸ್ಥಿತಿ ಹೊಂದಿಹರು. ಆವರು ಮಹಾಸರಸ್ವತಿ ಚೈತನ್ಯದಿಂದ ತದಾತ್ಮ್ಯ ಸ್ಥಿತಿಯಲ್ಲಿದ್ದಾಗ, ಅದಕ್ಕೆ ಸಂಬಂಧಪಟ್ಟ ಚತುರ್ಮುಖ ಬ್ರಹ್ಮ ಸ್ವರೂಪನಿಂದ ಸಹಾ ಚೈತನ್ಯದಿಂದ ತದಾತ್ಮ್ಯದಲ್ಲಿರುವರು. ಆದರೇ, ಅತ್ತ ಮಹಾಸರಸ್ವತಿ ರೂಪ ಜೊತೆಯಲ್ಲಾಗಲಿ, ಇತ್ತ ಹಿರಣ್ಯಗರ್ಭ ರೂಪ ಸಂಗಡವಾಗಲಿ ಸ್ಪರ್ಶಾಬಂಧ ಹೊಂದಿರುವುದಿಲ್ಲ. ಅದೇ ವಿಧವಾಗಿ ಒಂದೇ ಆತ್ಮ 4-5 ಪುರುಷ ರೂಪಗಳಲ್ಲಿ ಸಹಾ ಕಂಡುಬರುವುದೆಂದು ಹೇಳುವರು. ಈ ಆತ್ಮದ ಶಕ್ತಿ, ಪತ್ನಿ ಆಕಾರದಲ್ಲಿ 4- 5 ಸ್ತ್ರೀ ರೂಪದಲ್ಲಿ ಸಹಾ ಪ್ರತ್ಯಕ್ಷವಾಗಬಹುದೆಂದೂ ಹೇಳುವರು. ಯಾವ ಪುರುಷನಿಗೆ ಯಾವ ಸ್ತ್ರೀ ಸಗುಣ ಸಾಕಾರಗಳಲ್ಲಿ ವಿಧಿ ನಿರ್ಣಯಿಸಿರುವುದೋ, ಅದಕ್ಕೆ ಸಂಬಂಧಿಸಿದ ಮರ್ಯಾದೆಗಳನ್ನು ತಪ್ಪದೇ ಪಾಲಿಸಬೇಕೆಂದು ಹೇಳುವರು.

ಈ ಪ್ರಕಾರವಾಗಿಯೇ ಅವರು ಅನಘಾಲಕ್ಷ್ಮಿಸಮೇತ ಅನಘನಾಗಿಯೂ ಇರುವರು. ಅದು ಶ್ರೀಗಳ ಅರ್ಧನಾರೀಶ್ವರ ರೂಪ. ಆದರೇ ಶ್ರೀಪಾದ ರೂಪದಲ್ಲಿವರು, ಯತೀಶ್ವರ ರೂಪಧಾರಿ. ಸಗುಣ ಸಾಕಾರದ ಮರ್ಯದೆಯನ್ನು, ಅಂಚು ಕಟ್ಟುನಿಟ್ಟನ್ನು ತಪ್ಪದೇ ಪಾಲಿಸಬೇಕೆಂದು ಹೇಳುವರು. ಇದುವೇ ಧರ್ಮಸೂಕ್ಷ್ಮ. ಧರ್ಮ ಮತ್ತು ಧರ್ಮಸೂಕ್ಷ್ಮ ಒಂದೇ ಅಲ್ಲ. ದಿವ್ಯಾನುಗ್ರಹವನ್ನು

ವಿಶೇಷವಾಗಿ ಸುರಿಸಲು, ಅವರು ಸೃಷ್ಟಿ ರೂಪದಲ್ಲಿರುವರು. ಸೃಷ್ಟಿಯಲ್ಲಿ ತದಾತ್ಮ್ಯ ಸ್ಥಿತಿಯಲ್ಲಿರುವುದರಿಂದ ಮಾನವರ ವಿಕಾಸ, ಬೇಗನೇ ಆಗುವುದೆಂದು ಅದರ ಅರ್ಥ. **ಅವರು ಜಪ, ಧ್ಯಾನ, ತಪಸ್ಸಿನಲ್ಲಿ ಇರುವರು. ಆ ತಪೋಬಲ ಅವರು ತಮ್ಮ ಬಳಿ ಹಿಡಿದಿರುವುದಿಲ್ಲ. ಅದೆಲ್ಲಾ ಸೃಷ್ಟಿ ಉದ್ಧಾರಕ್ಕೆ ವಿನಿಯೋಗಿಸಲಾಗುವುದು. ಭಕ್ತರನ್ನು ಆದಿವ್ಯಾಧಿಗಳಿಂದ ಕಾಪಾಡಲು, ಆ ತಪೋಬಲ ಸುರಿದು, ಅವರನ್ನು ಕರ್ಮಬಂಧನಾವಿಮುಕ್ತರನ್ನಾಗಿ ಮಾಡುವರು.**

ಜಗನ್ಮಾತೆಯ 4 ಶಕ್ತಿಗಳು, ಮಹಾಸರಸ್ವತೀ, ಮಹಾಲಕ್ಷ್ಮೀ, ಮಹಾಕಾಳೀ ಮತ್ತು ರಾಜೇಶ್ವರೀ ಎಂಬುವರು, ಈ ವಿಶ್ವದಲ್ಲಿ ದೈವಾಭಿವ್ಯಕ್ತಿಗಾಗಿ, ವಿಶ್ವ ಪರಿಪಾಲನೆಗಾಗಿ ಎದ್ದು ನಿಂತಿರುವವೇ ಆಗಿವೆ.

ಅಂಬಿಕೆಗೆ 3 ಸ್ಥಾಯಿ ಉಂಟು. (1) ಅತೀತ ಸ್ಥಾಯಿ (2) ವಿಶ್ವ ಸ್ಥಾಯಿ (3) ವ್ಯಕ್ತಿ ಸ್ಥಾಯಿ. ಸೃಷ್ಟಿಗೆ ಮುನ್ನ ಪರಾಶಕ್ತಿ ಅತೀತ ಸ್ಥಾಯಿಯಲ್ಲಿರುವಳು. ಪರಮಾತ್ಮನ ಅನಂತ ಸತ್ಯಗಳನ್ನೂ ತನ್ನೊಳಗೆ ಆಕರ್ಶಿಸಿಕೊಂಡು, ಚೈತನ್ಯದಲ್ಲಿ ಸೇರಿದ ನಂತರ ಪ್ರಪಂಚ ಸೃಷ್ಟಿಯಾಗಿ ಜನ್ಮಿಸುವಳು.

ಸೃಷ್ಟಿಸುವುದೇ ಆ ತಾಯಿ ಕೆಲಸವಲ್ಲ. ಸೃಷ್ಟಿಸಿ, ತನ್ನಲ್ಲಿ ಹೊತ್ತು ಮತ್ತು ಅವುಗಳಲ್ಲಿ ಪ್ರವೇಶಿಸಿ ಬಲ ತರುವಳು. ಇದು ಆಕೆಯ ವಿಶ್ವ ಸ್ಥಾಯಿ.

## ಶ್ರೀ ಅನಘಾಲಕ್ಷ್ಮಿ ಸ್ವರೂಪ

ಇನ್ನು ವ್ಯಕ್ತಿ ಸ್ಥಾಯಿಯಾಗಿ, ಈ ತಾಯಿ, ಮಾನವ ವ್ಯಕ್ತಿತ್ವಕ್ಕೂ ದಿವ್ಯ ಪ್ರಕೃತಿಗೂ ಮಧ್ಯೆ, ಮಧ್ಯವರ್ತಿಯಾಗಿರುವಳು. ಇದುವೇ ಶ್ರೀ ಅನಘಾಲಕ್ಷ್ಮಿ ಆವಿರ್ಭವದ ರಹಸ್ಯ. ತನ್ನ ಮೂಲತತ್ತ್ವದಿಂದ ಕೆಲ ಅಂಶಗಳನ್ನು ಹೊರಡಿಸುವಳು. ಆ ಅಂಶಗಳು ಮಾಡಬೇಕಾದ ಕೆಲಸ ಪೂರ್ಣ ಆದಾಗ, ಪುನಃ ತನ್ನ ಮೂಲತತ್ತ್ವದೊಳಕ್ಕೆ ಸೇರುವಳು. ಅನಘನ ಸಂಕಲ್ಪವಿಲ್ಲದೇ ಅನಘಾಲಕ್ಷ್ಮಿ ಒಂದು ಚಿಕ್ಕ ಕೆಲಸ ಸಹಾ ಮಾಡುವುದಿಲ್ಲ. ತನ್ನ ಪ್ರಭುವಿನ ಸಂಕಲ್ಪ ಆಚರಿಸುವಳು. ಶ್ರೀಪಾದ ರೂಪದಲ್ಲಿ ಜನನೀ ಜನಕ ತಾನೇ ಆದಕಾರಣ ವಿಶೇಷಾನುಗ್ರಹ ಹೊಂದಿಹಳು.

ಶ್ರೀ ಅನಘಾಲಕ್ಷ್ಮಿಗೆ 3 ಭೂಮಿಕೆ (ಸ್ಥಾಯಿ)ಗಳಿವೆ. ಪದಾರ್ಥ ಪರಿಧಿಗೆ ಸೇರಿದ ಸಚ್ಚಿದಾನಂದ ಭೂಮಿಕೆ. ಇಲ್ಲಿ ಅನಂತ ಸ್ಥಿತಿ, ಅನಂತ ಶಕ್ತಿ ಮತ್ತು ಅನಂತವಾದ ದಿವ್ಯಾನಂದದಲ್ಲಿರುವ ಲೋಕಗಳು ಇರುತ್ತವೆ. ಈ ಸ್ಥಿತಿಯಿಂದಲೇ ಜೀವಿಗಳು ಹೇಳಲಾರದ ಪೂರ್ಣತೆಯಿಂದ, ಬದಲಾವಣೆ ಇಲ್ಲದ ಏಕತ್ವದಲ್ಲಿ ಜೀವಿಸುತ್ತಿರುವರು.

ಈ ಸಚ್ಚಿದಾನಂದ ಭೂಮಿಕೆಗೆ ಕೆಳ ಸ್ಥಾಯಿಯಲ್ಲಿ ಪರಿಪೂರ್ಣವಾದ ದಿವ್ಯ ಚೈತನ್ಯ ಸೃಷ್ಟಿಗೆ ಸೇರಿದ ಲೋಕಗಳಿವೆ. ಇವುಗಳಲ್ಲಿ ಶ್ರೀ ಅನಘಾಲಕ್ಷ್ಮಿ ದಿವ್ಯಚೈತನ್ಯ ಮಹಾಶಕ್ತಿಯಾಗಿರುವಳು. ಈ ಪ್ರಪಂಚವನ್ನೇ ವೇದದಲ್ಲಿ ಮಹಾಶ್ಲೋಕವೆಂದು ವರ್ಣಿಸಿರುವರು. ಈ ಲೋಕದ ಕರ್ಮಗಳಿಗೆ ವೈಫಲ್ಯವಿರದು. ಎಲ್ಲಾ ಪ್ರಕ್ರಿಯೆಯಲ್ಲೂ ಇಚ್ಛಾ ಜ್ಞಾನಶಕ್ತಿಗಳು ಅಪ್ರಯತ್ನವಾಗಿಯೇ ಪರಿಪೂರ್ಣತೆಗೊಳ್ಳುವವು. ಅಲ್ಲಿನ ಅನುಭವಗಳು ಸಂಪೂರ್ಣ ಆನಂದಮಯ ಅಲೆಗಳು. ಸುಳ್ಳು, ನೋವು, ದುಃಖ ಅಲ್ಲಿ ಇಲ್ಲವೇ ಇಲ್ಲ. ಸರ್ವರೂಪ, ಕದಲಿಕೆ, ಅನುಭವ ಆನಂದಮಯವಾಗಿರುವುದು.

ಇದರ ಕೆಳ ಭಾಗದಲ್ಲಿ ಅಜ್ಞಾನ ಭೂಮಿಕೆ ಇರುವುದು. ನಮ್ಮ ಲೋಕದಲ್ಲಿ ಅಜ್ಞಾನ ಇರುವುದು. ಮನಸ್ಸು, ಜೀವ, ಶರೀರಗಳಿಂದ ಇಲ್ಲಿನ ಲೋಕಗಳಿರುವವು. ಇಲ್ಲಿನ ಅನುಭವಗಳೆಲ್ಲಾ ಪೂರ್ಣತೆಯಿಲ್ಲದೇ, ಮಿತಿಮೀರದೇ, ಸೋಲನ್ನು ಒಳಗೊಂಡು ಇರುವವು.

## ಶ್ರೀ ರಾಜರಾಜೇಶ್ವರೀ ಮಹಿಮೆ

ರಾಜರಾಜೇಶ್ವರೀ ಚೈತನ್ಯ ಮಾತೃಮೂರ್ತಿ ಅನಂತ ಕರುಣೆ ಹೊಂದಿರುವಳು. ಆಕೆ ಎಲ್ಲರನ್ನೂ ತನ್ನ ಮಕ್ಕಳಂತೆಯೇ ಭಾವಿಸುವಳು. ಪ್ರಾಣಮಯ, ಮನೋಮಯ ಭೂಮಿಕೆಗಳಲ್ಲಿ ಅಂಧಕಾರ ಪಕ್ಷದವರು ಅಸುರರು. ಇವರಿಗೆ ಆತ್ಮನಿಗ್ರಹ, ತಪಸ್ಸು, ಬುದ್ಧಿ ಇರುವವು. ಅಹಂಕಾರಪೂರಿತರೂ ಸಹ. ಕೆಳಗಿನ ಅಂಧಕಾರ ಪಕ್ಷಕ್ಕೆ ಸೇರಿದವರನ್ನು ರಾಕ್ಷಸರು ಎನ್ನುವರು. ಇವರಿಗೆ ಪ್ರಚಂಡ ತೀವ್ರ ಭಾವಗಳು, ಪ್ರಭಾವಗಳು ಇರುವವು. ಇನ್ನೂ ಕೆಳಗಿರುವ ನಿಮ್ನ ಪ್ರಾಣಮಯ ಸ್ಥಾಯಿಯಲ್ಲಿ ಇತರ ವಿಧ ಜೀವಿಗಳಿರುವವು. ಇವರನ್ನು ಪಿಶಾಚಿಗಳು, ಪ್ರಮಧುರೆಂಬುವರು. ಅಸುರಮಾಯೆ ಯಾವ ವೇಷವಾದರೂ ಧರಿಸುವುದು. ಪಿಶಾಚಿಗಳು ವ್ಯಕ್ತರಲ್ಲ. ಒಂದೇ ಬಯಕೆಗೆ ಅಥವಾ ದುರಾಶೆಗೆ ಸ್ಥಿಮಿತವಾದವರಲ್ಲ. ರಾಕ್ಷಸರಿಗೆ ಪ್ರಾಣಮಯ ಸ್ಥಿತಿ, ಶಕ್ತಿವಂತವಾಗಿರುವುದು. ಮನಸ್ಸು ಇರದು. ಕಂಡದ್ದೆಲಾ ನುಂಗಿ ತೇಗಲು ಕಾದುನೋಡುವರು.

## ಆಸುರೀ, ಕಾಳೀ, ಶ್ಯಾಮ ಮಹಾಕಾಳೀ ಸ್ವರೂಪಗಳು

ಕಾಳಿ, ಶ್ಯಾಮಾ ಮುಂತಾದವು ಪ್ರಾಣಮಯ ಸ್ಥಿತಿ ಮೂಲಕ ಕಂಡುಬರುವ ರೂಪಗಳು. ಕಾಳಿ ಎಂಬುದು ವಿಧ್ವಂಸಕ ಶಕ್ತಿ. ಕಷ್ಟಬಂದಾಗ, ದಿಕ್ಕೇ ತೋಚದ ಸಮಯ, ಎಲ್ಲವನ್ನು ಹಾಳು ಮಾಡುವ ಅಜ್ಞಾನದಲ್ಲಿನ ಪ್ರಕೃತ ಶಕ್ತಿ ಆ ತಾಯಿ. ಆದರೇ ಮಹಾಕಾಳಿ, ಬಂಗಾರ (ಚಿನ್ನ) ವರ್ಣದಲ್ಲಿ ಕಂಡುಬರುವ ಉನ್ನತ ಸ್ಥಾಯಿಗೆ ಸೇರಿದ್ದು. ಈಕೆ ಅಸುರರಿಗೆ ಮಹಾ ಭಯಂಕರಿ. ಶ್ರೀ ರಾಜರಾಜೇಶ್ವರಿ ವಿವೇಕಕ್ಕೆ ಚಿಹ್ನೆಯಾದರೇ ಶ್ರೀ ಮಹಾಕಾಳಿ ಬಲ, ಶಕ್ತಿಗೆ ಹೆಸರಾದದ್ದು. ಈ ಮಹಾತಾಯಿಯಲ್ಲಿ ತಲೆ ಸೀಳುವಂತಹ ತೀವ್ರತೆ, ಸಾಧಿಸಲು ಬೇಕಾದ ಮನೋತೀವ್ರತೆ, ಪ್ರತಿ ಒಂದು ಪರಿಮಿತಿಗಳನ್ನು ಮತ್ತು ಪ್ರತಿ ಒಂದು ಅಡಚಣೆಗಳನ್ನೂ ಛೇಧಿಸಿ ಮುಂದೆ ನುಗ್ಗುವ ದಿವ್ಯ ಹಿಂಸಾಶಕ್ತಿ ಇರುವುದು. ಶ್ರೀ ಕಾಳಿಯ ಶಕ್ತಿ, ನಾವು ಪ್ರಚಂಡ ವೇಗದಿಂದ ದೈವದ ಮೇಲೆಯೇ ಕಾಲು ಇಡುವವರೆಗೂ ಆ ತಾಯಿ ಸುಮ್ಮನಿರಳು. ಸಂಘರ್ಷಣೆ ಮತ್ತು ವಿನಾಶಗಳಿಂದ ಆ ತಾಯಿ ನಿಂತುಬಿಡುವಳು. ಆದರೇ ಶ್ರೀ ಮಹಾಕಾಳಿ ಶಕ್ತಿಗೆ ಮೀರಿದ ಅಡಚಣೆಗಳು ಎದುರಾದಾಗ, ಪ್ರಗತಿ ನಿಂತುಬಿಟ್ಟಾಗ, ಸಾಧಕ ಈ ತಾಯಿಯನ್ನು ತನ್ನೊಳಕ್ಕೆ ಬೇಡಿದರೇ ತಕ್ಷಣ ರಕ್ಷಿಸುವಳು.

## ಸಾಧಕರ ಸ್ಥಾಯಿ (ಭೂಮಿಕೆ)ಯಲ್ಲಿ ಮಹಾಕಾಳೀ, ಮಹಾಸರಸ್ವತೀ, ಮಹಾಲಕ್ಷ್ಮೀ ಸ್ವರೂಪ

ಶ್ರೀ ಮಹಾಲಕ್ಷ್ಮಿಯಲ್ಲಿ ಸೌಂದರ್ಯಶೋಭೆ ಇರುವುದು. ವಿವೇಕ, ಶಕ್ತಿ ಸಂಪೂರ್ಣತ್ವಕ್ಕೆ ಸೌಂದರ್ಯ ಮುಖ್ಯ. ಇದು ಇಲ್ಲದ್ದಲ್ಲಿ, ನಾವು ಎಷ್ಟು ಪರಿಪೂರ್ಣತ್ವ ಸಾಧಿಸಿರುವೆವೆಂದುಕೊಂಡರೂ, ಅದಕ್ಕೆ ಪರಿಪೂರ್ಣತ್ವ ಬಾರದು. ಅಂದರೇ ಒಂದಾನೊಂದು ಸ್ಥಾಯಿಯಲ್ಲಿ ಒಂದು ವಿಧವಾದ ಸಮತೋಲನ ಸ್ಥಿತಿ ಏರ್ಪಡುತ್ತಿರುವುದು. ಅದನ್ನು ಆ ಸ್ಥಾಯಿಯಲ್ಲಿ ಪರಿಪೂರ್ಣತೆ ಎಂದುಕೊಳ್ಳುವೆವು. ಆದರೆ ಅದಕ್ಕಿಂತ ಉನ್ನತ ಸ್ಥಾಯಿ ಸೇರಿದಾಗ, ಅಲ್ಲಿ ಪುನಃ ನಮಗೆ ನವೀನ ಶಕ್ತಿಗಳು, ನವೀನ

ಪರಿಸ್ಥಿತಿಗಳೂ ಕೂಡುತ್ತಿರುವವು. ಅವಕ್ಕೆ ಅನುಗುಣವಾಗಿ, ಹೊಸದಾದ ಸಮತೋಲನ ಸ್ಥಿತಿ ಏರ್ಪಡುವುದು. ಆ ಸ್ಥಾಯಿಯಲ್ಲಿ ಅದು ಪರಿಪೂರ್ಣತೆ ಹೊಂದುವುದು. ಆದ್ದರಿಂದ ಪರಿಪೂರ್ಣವಾದ ಪರಿಪೂರ್ಣತೆಗೆ ಶ್ರೀ ಮಹಾಲಕ್ಷ್ಮಿ ಒಂದು ಗುರುತು. ವಿವೇಕದಲ್ಲಿ ಪರಿಪೂರ್ಣತೆ ಲಭಿಸಿ, ಬಲದಲ್ಲಿ ಪರಿಪೂರ್ಣತೆ ಬರದಿದ್ದರೇ ಪೂರ್ಣಸಿದ್ಧಿ ಆಗಿಲ್ಲವೆಂದೇ. ಆದ್ದರಿಂದ ಪರಿಪೂರ್ಣ ಪರಿಪೂರ್ಣತೆಯಲ್ಲಿ ವಿವೇಕ, ಬಲ, ಸೌಂದರ್ಯ ಮತ್ತು ಪರಿಪೂರ್ಣತೆ ಎಂಬುವ 4, ಅವಕ್ಕೆ ಇರಬೇಕಾದ ಸಮಪಾಲುಗಳಿರುವವು. ಮನುಷ್ಯನಿಗೆ ತಿಳಿಯದ ರಹಸ್ಯವೆಂದರೇ, ಸಾಮರಸ್ಯತೆಗಳ ಸೌಂದರ್ಯ. ಇದು ವಿಶ್ವಾದ್ಯಂತ ವ್ಯಾಪಿಸಿರುವ ಚಂದ. ಶ್ರೀ ಮಹಾಲಕ್ಷ್ಮಿ ಅನುಗ್ರಹದಿಂದಲೇ ವಿವಿಧ ಲಕ್ಷಣಗಳು ಉಳ್ಳ ಈ ಸೃಷ್ಟಿಯ ವಸ್ತುಗಳು, ಶಕ್ತಿಗಳು ಮತ್ತು ಜೀವಿಗಳು ಪರಸ್ಪರ ಸೇರುವವು, ಒಂದಾಗುವವು. ಏಕತ್ವ ಸ್ಥಿತಿ ಆನಂದದಾಯಕ. ವಿವಿಧ ವಸ್ತುಗಳು, ಶಕ್ತಿಗಳು ಮತ್ತು ಜೀವಿರಾಶಿಗಳನ್ನು ತನ್ನ ಲಯಗಳಾಗಿ ಮತ್ತು ರೂಪಗಳಾಗಿ ಶ್ರೀ ಮಹಾಲಕ್ಷ್ಮಿ ಮಾರ್ಪಡಿಸುವಳು. ಶ್ರೀ ಮಹಾಲಕ್ಷ್ಮಿ ಪ್ರೇಮ ಮತ್ತು ಆನಂದಕ್ಕೆ ಅಧಿದೇವತೆ. ಆದರೇ ಲಕ್ಷ್ಮಿ ಭೌತಿಕ ವಸ್ತು ಸಂಚಯಕ್ಕೆ ಮಾತ್ರ ಚಿಹ್ನೆ. ಶ್ರೀ ಮಹಾಲಕ್ಷ್ಮಿ ಭೌತಿಕ ವಸ್ತು ಸಂಚಯ, ಭೌತಿಕ ಶಕ್ತಿಗಳು ಮತ್ತು ಭೌತಿಕ ಜೀವಿಗಳನ್ನು ದಿವ್ಯಾನಂದ ಸಾಮರಸ್ಯಕ್ಕೆ ಅನುಕೂಲವಾಗಿ ಮಾರ್ಪಡಿಸಿ, ದಿವ್ಯ ಜೀವನವನ್ನು ಪ್ರಸಾದಿಸಬಲ್ಲ ಮಹಾಶಕ್ತಿ!

ಆದರೇ ಶ್ರೀ ಅನಘಾಲಕ್ಷ್ಮಿಯ ಶಕ್ತಿ ಸಂಪೂರ್ಣವಾಗಿ ಪ್ರವಹಿಸಲೂ ವಿವೇಕ, ಬಲ, ಸೌಂದರ್ಯಗಳ ಜೊತೆ ಕೆಲಸದಲ್ಲಿ ಜಾಣತನವೂ ಇರಬೇಕು. ವೇದಗಳು ಸರಸ್ವತಿಯನ್ನು ಘೋಷಿಸುವವು. ಉಪನಿಷತ್ ಆಕೆಯನ್ನು 'ಉದ್ಗೀತೆ' ಎಂದವು. ದಶ ಮಹಾವಿದ್ಯೆಗಳು, ಮಾತಂಗಿ ಎಂದವು. ತಾಯಿ, ವೈಖರೀವಾಕ್‌ಗೆ ಸೇರಿದವಳು.

ಆದರೇ ಮಹಾಸರಸ್ವತಿ ಬೇರೇ. ದಿವ್ಯ ನೈಪುಣ್ಯ, ಆತ್ಮ ಚೈತನ್ಯಗಳಿಗೆ ಈಕೆ ಚಿಹ್ನೆ. ಈ ತಾಯಿ ಕರುಣೆಯಿಂದ ನಮ್ಮ ಕರ್ಮಗಳ ಆಚರಣೆಯಲ್ಲಿ ಕುಶಲತೆ ಲಭಿಸುವುದು. ದಿವ್ಯ ಜ್ಞಾನದ ಉಪಯೋಗ ತಿಳಿದುಬರುವುದು. ಆತ್ಮ ಚೈತನ್ಯವನ್ನು ಜೀವನಕ್ಕೆ ಹೊಂದಾಣಿಸಲೂ ತಿಳಿದುಬರುವುದು. ವಿವಿಧ ಶಕ್ತಿಯ ಸಾಮರಸ್ಯದಿಂದ ಆನಂದ ರೀತಿ, ಪರಿವರ್ತನೆಗೆ, ಪರಿಪೂರ್ಣತೆಗೆ, ದೂರದ ಮತ್ತು ಚಿಕ್ಕ ವಿಷಯಗಳಲ್ಲೂ ಶ್ರದ್ಧೆ ಈ ತಾಯಿಯೇ ಕೊಡುವಳು.

**ಮಕ್ಕಳೇ! ಆನಂದ, ಪರಮೇಶ್ವರನಿಗೆ ಸಂಬಂಧಿಸಿದ್ದು. ಆದರೇ ಪಾರವಶ್ಯ, ಯೋಗಿಯ ಅನುಭವ, ಬಯಕೆಗಳಿಲ್ಲದವನಿಗೆ ಆಗುವುದೇ ಆನಂದ. ಎಲ್ಲ ಜೀವಿಗಳೂ ಸುಖದುಃಖ ಪಡೆಯಲೇಬೇಕು.**

## ಶ್ರೀ ಅನಘಾದೇವಿಯ ಸ್ವರೂಪ, ಅನಘಮುನಿ ಸ್ವರೂಪ, ಅನಘಾವ್ರತ, ಶ್ರೀದತ್ತ ಭಕ್ತರು ಆಚರಿಸಲೇಬೇಕಾದದ್ದು

ಶ್ರೀ ಅನಘಾದೇವಿಯ ರೂಪ, ಶ್ರೀ ಲಕ್ಷ್ಮೀದೇವಿ. ಆಕೆಯಲ್ಲಿ ಶ್ರೀ ರಾಜರಾಜೇಶ್ವರೀ, ಮಹಾಲಕ್ಷ್ಮೀ, ಮಹಾಕಾಳೀ, ಮಹಾಸರಸ್ವತೀ ಲಕ್ಷಣಗಳು ತುಂಬಿವೆ! ಶ್ರೀ ಅನಘ, ವಿಷ್ಣುರೂಪಿ. ಇವರಲ್ಲಿ ಪರಮೇಶ್ವರ ಬ್ರಹ್ಮಲಕ್ಷಣಗಳೂ ಇವೆ. ಆದ್ದರಿಂದ **ಶ್ರೀ ಅನಘಾದೇವಿ ಸಮೇತ ಶ್ರೀ ಅನಘನ ಆರಾಧನೆ ಸರ್ವ ಶುಭಪ್ರದಾಯಕ. ಶ್ರೀ ಅನಘಾಷ್ಟಮೀ ವ್ರತ, ದತ್ತ ಭಕ್ತರು ವಿಧಿವತ್ತಾಗಿ ಆಚರಿಸತಕ್ಕದ್ದು. ಈ ವ್ರತದಿಂದ ಸರ್ವ ಶುಭಗಳೂ ಲಭಿಸುವವು.**

## ಶ್ರೀಪಾದರ ವಿಶಿಷ್ಟತೆ, ಶ್ರೀದತ್ತಾರಾಧನೆಯ ಮಹತ್ವ

ಮಕ್ಕಳೇ! ಶ್ರೀ ಅನಘಾ ಸಮೇತ ಶ್ರೀ ಅನಘನು ಶ್ರೀಪಾದ ಶ್ರೀವಲ್ಲಭ ರೂಪಿಯಾಗಿ ಭುವಿಯಲ್ಲಿ ಅವತರಿಸಿರುವನು. ಜೀವಿಗಳ ಭೌತಿಕ, ಮಾನಸಿಕ, ಆತ್ಮಿಕ ಚೈತನ್ಯಗಳಿಗೆ ಹತ್ತಿರದಲ್ಲಿರುವನು. ಆತ, 'ಸ್ಮರ್ತೃಗಾಮಿ' ಅಂದರೇ ಕೂಗಿದ ತಕ್ಷಣವೇ ಸ್ಪಂದಿಸುವ ಲಕ್ಷಣ ಉಳ್ಳವನು. ತನ್ನ ಭಕ್ತರ, ಆಶ್ರಿತರ ಕಷ್ಟನಷ್ಟಗಳನ್ನು ಹೋಗಲಾಡಿಸಿ, ಇಹಪರ ಸುಖ ತರಬಲ್ಲ ಸಮರ್ಥನು. ದಶ ಮಹಾವಿದ್ಯಾಚರಣೆಯ ಫಲವನ್ನು ಶ್ರೀದತ್ತರೂಪಿ ಶ್ರೀಪಾದ ಶ್ರೀವಲ್ಲಭರನ್ನು ಆರಾಧಿಸುವುದರಿಂದ ಒಡನೆಯೇ ಪಡೆಯಬಹುದು. ವಿವಿಧ ದೇವತಾರಾಧನೆಯಿಂದ ತಪ್ಪದೇ ಶುಭ ಫಲ ಲಭಿಸುತ್ತಿರುವುದು. ಆದರೇ ಶ್ರೀ ದತ್ತಾರಾಧನೆಯಿಂದ ಆಯಾ ದೇವತೆಗಳು, ಶೀಘ್ರುವಾಗಿ ಶುಭ ಫಲ ತರುವರು. ಶ್ರೀದತ್ತರು, ಸರ್ವ ದೇವತಾಸ್ವರೂಪಿ, ಚತುರ್ಯುಗ ಅವತಾರಿ ಮತ್ತು ಅವತಾರ ಸಮಾಪ್ತಿ ಆಗದ ಮಹಾವತಾರ ಕಾರಣ, ಈ ಶೀಘ್ರು ಫಲಪ್ರಾಪ್ತಿ ಸುಲಭವಾಗಿದೆ.

## ಶ್ರೀಪಾದರ ಚರಿತಾಮೃತ ಮಹಿಮೆ

ಮಗು! ಶಂಕರ ಭಟ್ಟು! ನೀನು ಬರೆಯುವ ಚರಿತಾಮೃತ, ಮಹಾಪವಿತ್ರ ಗ್ರಂಥ, ಮಹಾಯೋಗಿಗಳು, ಮಹಾಪುರುಷರು ಸಹಾ ಅಧ್ಯಯನ ಮಾಡುವರು. ಅವರು ಅದನ್ನು ಸಂಧ್ಯಾಭಾಷೆಗೆ ಸಂಬಂಧಿಸಿದ ವ್ಯಾಕರಣ ಸಹಾಯದಿಂದ ಅರ್ಥ ಮಾಡಿಕೊಳ್ಳುವರು. ಅವರು ಪಡೆಯುವ ಯೋಗ ವಿಭೂತಿ ಬಲು ಚಿತ್ರವಿಚಿತ್ರವಾಗಿರುವುದು. ಭೌತಿಕ ಸ್ಥಾಯಿಯ ಮನುಜರು ಇದರ ಪಾರಾಯಣದಿಂದ ಇಹಪರ ಸುಖ ಶುಭಗಳು ಹೊಂದುವರು. ಇದು 'ಅಕ್ಷರ ಸತ್ಯ ಗ್ರಂಥ'ವಾದ್ದರಿಂದ ಇದರ ಒಂದೊಂದು ಅಕ್ಷರದಲ್ಲೂ ಯೋಗ ಶಕ್ತಿ ತುಂಬಿರುವುದು. ಪ್ರತಿ ಅಕ್ಷರವೂ 'ಬೀಜಾಕ್ಷರ ಶಕ್ತಿ' ಹೊಂದಿರುವುದು. ಈ ಪವಿತ್ರ ಗ್ರಂಥವನ್ನು ಇತರ ಭಾಷೆಗಳಲ್ಲಿ ಓದಿದರೂ, ಭಕ್ತಿ ಶ್ರದ್ಧೆ ಇದ್ದ ಪಕ್ಷದಲ್ಲಿ ಅದೇ ಫಲ ಲಭಿಸುವುದು. ಇದು ಆ ಮಹಾಪ್ರಭುವಿನ ಅಕ್ಷರ ಸ್ವರೂಪವೇ ಸರಿ.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 44

# ಸ್ವರ್ಣ ಪೀಠಿಕಾಪುರ ವರ್ಣನೆ

ಶ್ರೀ ಭಾಸ್ಕರ ಪಂಡಿತರು ಅಂದಿನ ರಾತ್ರಿ ಸಹಾ ತಮ್ಮ ಮನೆಯಲ್ಲೇ ಆತಿಥ್ಯ ಸ್ವೀಕರಿಸಿ ಶ್ರೀಪಾದರ ದಿವ್ಯ ಚರಿತ್ರೆಯನ್ನು ಕೇಳಬೇಕೆಂದು ನಮ್ಮನ್ನು ಕೋರಿದರು. ಮಾರನೇ ದಿನ ನಾವು ಸ್ನಾನ ಸಂಧ್ಯಾವಂದನೆಗಳನ್ನು ಮುಗಿಸಿದ ನಂತರ ಶ್ರೀ ತ್ರಿಪುರಾಂತಕೇಶ್ವರ ದರ್ಶನಕ್ಕೆ ಆಲಯ ತಲುಪಿದೆವು. ಅಲ್ಲೇ ಭಾಸ್ಕರ ಪಂಡಿತರು ಶ್ರೀಪಾದರನ್ನು ಕುರಿತು ಹೇಳಲಾರಂಭಿಸಿದರು.

### ಶ್ರೀಪಾದರ ಜನುಮ ಸ್ಥಳ

“ಮಕ್ಕಳಾ! ಶ್ರೀಪಾದರು ಸಾಕ್ಷಾತ್ ಶಿವ ಸ್ವರೂಪಿ. ಅವರು ಪೀಠಿಕಾಪುರಿಯಲ್ಲಿ ಅಂತರ್ಧಾನವಾಗಿ ಕಾಶೀ ನಗರ ಸೇರಿದರು. ಗಂಗಾಸ್ನಾನ ಮಾಡಿದರು. ಅವರು ಶ್ರೀ ಪೀಠಿಕಾಪುರದಲ್ಲಿ ಅವತರಿಸಿದ್ದರಿಂದ ಭೂತ ತತ್ತ್ವಕ್ಕೆ ಮುಂದುವರಿಯಲೂ ಚೈತನ್ಯವಿತ್ತರು. **ಆದ್ದರಿಂದ ಪೀಠಿಕಾಪುರದಲ್ಲಿ ಅವರ ಜನುಮ ಸ್ಥಳ ಭೂಮಿ ಚೈತನ್ಯಗೊಂಡಿತು. ಆದ್ದರಿಂದ ಅಲ್ಲಿ ಮುಂದೇ ಯಾವಾಗಲೋ, ಕೆಲ ಶತಮಾನಗಳ ನಂತರ, ಅಲ್ಲಿ ಬರಲಿರುವ ಅವರ ಮಹಾಸಂಸ್ಥಾನದಲ್ಲಿ ದಿವ್ಯ ಪಾದುಕೆಗಳು ಪ್ರತಿಷ್ಠಿಸಲಾಗುವವು. ಆ ಭೂಮಿ ಚೈತನ್ಯಗೊಂಡು ಕ್ರಮೇಣ ಭೂಮಂಡಲವನ್ನೇ ಜಾಗೃತಗೊಳಿಸುತ್ತದೆ. ಇದನ್ನು ಪಡೆದ ಜನರು ಅವರ ದಿವ್ಯಾಕರ್ಷಣೆಯಿಂದ ಪೀಠಿಕಾಪುರಕ್ಕೆ ಆಕರ್ಷಿಸಲ್ಪಡುವರು. ಆದ್ದರಿಂದ ಅವರು ಮಾಡುವ ಪೃಥ್ವೀತತ್ತ್ವ ಯಜ್ಞ ಪೀಠಿಕಾಪುರದಿಂದಲೇ ಪ್ರಾರಂಭವಾಯಿತೆಂದು ನಾವು ತಿಳಿಯಬೇಕು. ಅವರು ಸಂಚರಿಸಿದ ಮತ್ತು ಸಂಚರಿಸುವ ಪ್ರದೇಶಗಳೆಲ್ಲಾ ನಮ್ಮ ಅರಿವಿಲ್ಲದೇ ಜಾಗೃತಿ ಹೊಂದುವವು. ಅಲ್ಲಿ ಹೆಜ್ಜೆ ಇಟ್ಟವರು ದೈವೀಶಕ್ತಿಯಿಂದ ಸ್ಪಂದನೆಗೊಳಗಾಗಿ ಆಕರ್ಷಿಸಲ್ಪಡುವರು.**

ಅಷ್ಟಲ್ಲದೇ ಪ್ರತಿಯೊಬ್ಬರಲ್ಲಿ ಪೃಥ್ವೀ ತತ್ತ್ವ ಇರುವುದು. ಇದು ಶಬ್ದ, ರೂಪ, ಸ್ಪರ್ಶ, ರಸ, ಗಂಧವನ್ನು ಹೊಂದಿರುವುದು. **ಆದ್ದರಿಂದ, ಯೋಗ ಪರವಾಗಿ ಕಂಡಲ್ಲಿ, ಯಾರ ಶರೀರದ ಪೃಥ್ವೀ ತತ್ತ್ವ ಶ್ರೀಗಳ ಕರುಣೆಯಿಂದ ಜಾಗೃತವಾಗುವುದೋ ಅವರು ತಪ್ಪದೇ ಶ್ರೀ ಪೀಠಿಕಾಪುರಕ್ಕೆ ಆಕರ್ಷಿಸಲ್ಪಡುವರು.**

ಆಗ ನಾನು, “ಆರ್ಯಾ! ಜನರು ಅವರ ಶರೀರದಲ್ಲಿನ ಪೃಥ್ವೀ ತತ್ತ್ವ ಜಾಗೃತಗೊಂಡು, ಭೌತಿಕವಾಗಿ ಶ್ರೀ ಪೀಠಿಕಾಪುರಕ್ಕೆ ಬರುವರಾ?” ಎಂದು ಪ್ರಶ್ನಿಸಿದೆನು.

### ಸ್ವರ್ಣ ಪೀಠಿಕಾಪುರ ಮಹಿಮೆ

ಅವರು ಮಂದಹಾಸದಿಂದ, “ನೀನು ಕೇಳಿದ ಪ್ರಶ್ನೆ ಸಮಂಜಸವಾಗಿದೆ! ಭೌತಿಕವಾದ ಪೀಠಿಕಾಪುರದಂತೇ ಸ್ವರ್ಣ ಪೀಠಿಕಾಪುರವಿದೆ. ವ್ಯಾಪಕದಲ್ಲೂ ಸಮವಾಗಿ 2 ಪೀಠಿಕಾಪುರಗಳೂ ಇವೆ. ಸ್ವರ್ಣ ಪೀಠಿಕಾಪುರ ಕೇವಲ ಚೈತನ್ಯದಿಂದ ನಿರ್ಮಿತವಾಗಿದೆ. ಸಾಧಕನಲ್ಲಿ ಆ ಚೈತನ್ಯ ಸಂಬಂಧಿಸಿದ ಪದಾರ್ಥ ನಿರ್ಮಿತವಾದಾಗ ಆತ ಸ್ವರ್ಣ ಪೀಠಿಕಾಪುರವಾಸಿ ಆಗುವನು. ಆ ಪುರದಲ್ಲಿ ಚೈತನ್ಯದಿಂದಲೇ ನಿರ್ಮಿತವಾದ ಎಷ್ಟೋ ಸಾವಿರ ಮಹಾಸೌಧಗಳು ಇವೆ. ಯೋಗಿಗಳು, ಮಹಾಪುರುಷರು ಆ ಸ್ವರ್ಣ

ಪೀಠಿಕಾಪುರ ಮಹದಾನಂದ ನಿವಾಸಿಗಳು. ಆದರೇ ಈ ನಮ್ಮ ಚರ್ಮ ನೇತ್ರಗಳಿಗೆ ಅಗೋಚರ. ಸ್ವರ್ಣ ಪೀಠಿಕಾಪುರ ಜ್ಞಾನ ಚಕ್ಷುಗಳಿಗೂ, ಯೋಗ ಚಕ್ಷುಗಳಿಗೆ ಮಾತ್ರ ಕಂಡುಬರುವುದು.

## ಶ್ರೀ ಕಾಶೀ ವಿಶೇಷಗಳು, ಪಂಚಕ್ರೋಶ ಯಾತ್ರೆ

ಅದೇ ರೀತಿ ಸ್ವರ್ಣ ಕಾಶೀ ಎಂಬುದೂ ಇದೆ. ಇದು ಸಹ ಭೌತಿಕ ಕಾಶೀ ನಗರದ ವ್ಯಾಪ್ತಿಗೆ ಸಮವಾಗಿ, ಚೈತನ್ಯ ಪದಾರ್ಥದಿಂದ ನಿರ್ಮಿತವಾಗಿರುವುದು. ಆದ್ದರಿಂದಲೇ **'ಕಾಶೀಯಾತ್ರಂಗಮಿಷ್ಯಾಮಿ ತತ್ರೈವನಿವಸ್ಯಾಮ್ಯಹಂ' ಇತಿ ಬ್ರುವಾಣಸ್ಸತತಂ, ಕಾಶೀ ವಾಸಫಲಂ ಲಭೇತ್ ಎಂದು ಹೇಳಲಾಗಿದೆ. ಅರ್ಥ, 'ನಾನು ಕಾಶೀಗೆ ಹೋಗುತ್ತಿದ್ದೇನೆ, ಅಲ್ಲಿಯೇ ವಾಸಿಸುವೆನು' ಎಂದು ಸದಾ ನುಡಿಯುವವನಿಗೆ, ಕಾಶೀ ವಾಸ ಫಲ ಸಿದ್ಧಿಸುವುದು. ಸ್ವರ್ಣ ಕಾಶೀಯಲ್ಲಿ ಯಾರ ಚೈತನ್ಯವಾದರೂ ವಾಸಿಸಲೂ, ಅನುಗ್ರಹ ಪಡೆಯಲು, ಕಾಶೀ ವಿಶ್ವೇಶ್ವರನು ಅಂತಹವರ ಮನಸ್ಸಿನಲ್ಲಿ ಸದಾ ಇರಬೇಕು.** ಇದು ಸುಲಭಾರ್ಥ. ನಿನ್ನ ಅನ್ನಮಯ ಕೋಶಕ್ಕೆ ಸಂಬಂಧಿಸಿದ ಭೌತಿಕ ಪೀಠಿಕಾಪುರವಿದೆ. ಹಾಗೆಯೇ ಭೌತಿಕ ಕಾಶೀ ಸಹಾ ಇದೆ. ಪ್ರಾಣಮಯ ಕೋಶಕ್ಕೆ ಸಂಬಂಧಿಸಿದ ಪ್ರಾಣಮಯ ಪೀಠಿಕಾಪುರವಿದೆ. ಹಾಗೆಯೇ ಪ್ರಾಣಮಯ ಕಾಶೀ ಇದೆ. ಮನೋಮಯ ಕೋಶಕ್ಕೆ ಸಂಬಂಧಿಸಿದ ಮನೋಮಯ ಪೀಠಿಕಾಪುರವಿದೆ. ಹಾಗೆಯೇ ಮನೋಮಯ ಕಾಶೀ ಇದೆ. ವಿಜ್ಞಾನಮಯ ಕೋಶಕ್ಕೆ ಸಂಬಂಧಿಸಿ ವಿಜ್ಞಾನಮಯ ಪೀಠಿಕಾಪುರ, ವಿಜ್ಞಾನಮಯ ಕಾಶೀ ಇವೆ. ಆನಂದಮಯ ಕೋಶಕ್ಕೆ ಸಂಬಂಧಿಸಿ ಆನಂದಮಯ ಪೀಠಿಕಾಪುರ, ಆನಂದಮಯ ಕಾಶೀ ಇವೆ. ಈ ಆನಂದಮಯ ಪೀಠಿಕಾಪುರವನ್ನೇ, ನಾನು ಸ್ವರ್ಣ ಪೀಠಿಕಾಪುರವೆಂಬುವುದು. ಈ ಆನಂದಮಯ ಕಾಶೀಯೇ ಸ್ವರ್ಣ ಕಾಶೀ. ಆಗ ನಾನು, ''ಮಹಾಶಯರೇ! ನಾನು ಅಲ್ಪಜ್ಞನು, ದಯವಿಟ್ಟು ಈ ವಿಷಯ ವಿವರಿಸಿ. ಕೆಲವರು, ಕಾಶೀಯಲ್ಲಿ ಪಂಚಕ್ರೋಶ ಯಾತ್ರೆ ಮಾಡಿದರೇ ಮಹಾಫಲವೆನ್ನುವರು. ಅದರರ್ಥ?'' ಎಂದು ಪ್ರಶ್ನಿಸಿದನು. ಶ್ರೀ ಭಾಸ್ಕರ ಪಂಡಿತರು, ''ಮಗು! ಪಂಚಕ್ರೋಶ ಯಾತ್ರೆ ಭೌತಿಕ ಯಾತ್ರೆ ಮಾತ್ರವೇ! ವಾಸ್ತವಕ್ಕೆ ನಾವೆಲ್ಲಾ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಕೋಶಗಳೆಂದು ಕರೆಯಲ್ಪಡುವ ಪಂಚ ಕೋಶ ಯಾತ್ರೆಯನ್ನು ನಮ್ಮ ಚೈತನ್ಯದೊಂದಿಗೆ ಮಾಡಬೇಕು. ಇದುವೇ ಅದರಲ್ಲಿ ನಿಗೂಢವಾದ ದೇವ ರಹಸ್ಯ. **ಶ್ರೀಪಾದರ ಅನುಗ್ರಹದಿಂದ ಸಾಧಕರಿಗೆ ಪಂಚ ಕೋಶ ಯಾತ್ರೆ ಮಾಡಲು ಶಕ್ತಿ ಲಭಿಸುವುದು. ಆದ್ದರಿಂದಲೇ ಅವರು ಪಂಚ ಭೂತಗಳಿಗೆ ಸಂಬಂಧಸಿದ ಪಂಚ ಮಹಾಯಜ್ಞಗಳನ್ನು ಅವರ ಯೋಗಶಕ್ತಿಯಿಂದ ಮಾಡುವುದು, ಈ ಯಜ್ಞಗಳಿಗೆ ಚಿಹ್ನೆಯಾಗಿ, ಅವರು ಕುರುಂಗಡ್ಡೆ ಸಮೀಪದಲ್ಲಿನ ಪಂಚದೇವ ಪಹಾಡ್‌ನಲ್ಲಿ ದರ್ಬಾರ್ ಮಾಡುವುದು,** ದೈವ ರಸಹ್ಯ ಅನುಷ್ಠಾನಮಾಡುವವರಿಗೂ, ಯೋಗ ದೃಷ್ಟಿ ಉಳ್ಳವರಿಗೂ ಮಾತ್ರ ಅರ್ಥವಾಗುವುದು. ಉಳಿದ ಸಾಮಾನ್ಯ ಮಾನವರಿಗೆ ಏನೇನೂ ಅರ್ಥವಾಗದು'' ಎಂದರು.

**ಶ್ರೀಪಾದರು ಕಾಶೀಯಲ್ಲಿ ಗಂಗಾಸ್ನಾನ ಮಾಡಲು, ಗಂಗಾಮಾತೆ ಪ್ರತ್ಯಕ್ಷವಾಗಿ, ಪ್ರತಿದಿನ ಗಂಗಾನದಿ ಸ್ನಾನ ಮಾಡಬೇಕೆಂದು ಕೋರಿದಳು. ಹಾಗೆಯೇ ಮಾಡುವೆನೆಂದು ಶ್ರೀಗಳು ವರವನ್ನಿತ್ತರು.** ಗಂಗಾಮಾತೆಯ ಚೈತನ್ಯ ಸಹಾ ಹಾಗೆಯೇ ಪಂಚ ಕೋಶಗಳಲ್ಲಿರುವುದು. ಅಂದರೇ ಈ ಮಾತೆಯ ಚೈತನ್ಯ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಕೋಶಗಳಲ್ಲಿರುವುದು.

ಆಗ ನಾನು, ''ಮಹಾಶಯರೇ! ಗಂಗಾಮಾತೆ ಜಲಸ್ವರೂಪಿ ಅಲ್ಲವೇ? ಆಕೆಗೆ ಪಂಚ ಕೋಶ ಹೇಗೆ ಸಾಧ್ಯ?'' ಎಂದೆನು.

ಭಾಸ್ಕರ ಪಂಡಿತರು, ನಗುತ್ತಾ, ''ಮಗು! ದೇವತೆಯರು ಮಂತ್ರ ಸ್ವರೂಪಿಗಳು, ಭೌತಿಕ ಸ್ವರೂಪರಲ್ಲ. ಮಂತ್ರಗಳೆಂಬುವವು ಶಬ್ದ ಬ್ರಹ್ಮನ ಶಕ್ತಿರೂಪ. ಗಂಗಾಮಾತೆ ಅಂದರೇ ಶಕ್ತಿ ಸ್ವರೂಪಿ ಚೈತನ್ಯ ರೂಪದಲ್ಲಿನ ದೇವತೆ ಎಂದು ಅರ್ಥ. ಆಕೆ ಭೌತಿಕ ರೂಪದಲ್ಲಿರುವ ಗಂಗಾನದಿ ಸ್ವರೂಪಕ್ಕೆ ತದಾತ್ಮ್ಯ ಸ್ಥಿತಿಯಲ್ಲಿರುವ ಅಭಿಮಾನ ದೇವತೆ. ಅಂದರೇ ಚೈತನ್ಯ ರೂಪಿ ದೇವತೆ. ಹಾಗೆಯೇ ಸೂರ್ಯ ಭಗವಾನನೆಂದರೇ, ಆಗಸದಲ್ಲಿ ಕಾಣುವ ಸೂರ್ಯ, ಖಗೋಳಕ್ಕೆ ತದಾತ್ಮ್ಯ ಸ್ಥಿತಿಯಲ್ಲಿರುವ ಚೈತನ್ಯ ರೂಪವಾದ ದೇವತಾಸ್ವರೂಪಿ ಎಂದು ಅರ್ಥ.

ಮಾನವರಲ್ಲಿ ಜಲ ತತ್ತ್ವವಿರುವುದು. ಆ ಜಲ ತತ್ತ್ವವನ್ನು ಶುದ್ಧಿ ಮಾಡಲು ಶ್ರೀಗಳು ಜಲ ಯಜ್ಞ ಮಾಡಲು ಸಂಕಲ್ಪ ಮಾಡಿದರು. ಆದ್ದರಿಂದಲೇ ಪ್ರತಿನಿತ್ಯವೂ ಕಾಶೀಯಲ್ಲಿ ಗಂಗಾ ಸ್ನಾನವಾಚರಿಸಲೂ ನಿಶ್ಚಯಿಸಿದರು. ಈ ಕಾರ್ಯದಿಂದ, ಭೌತಿಕ ರೂಪದಲ್ಲಿರುವ ಜಲವಾಸಿಗಳೆಲ್ಲವೂ ಪವಿತ್ರವಾಗುವವು. ಗಂಗೆ ಮುಂತಾದ ನದಿಗಳೆಲ್ಲವೂ ಪಾಪಾತ್ಮರ ಸ್ನಾನಗಳಿಂದ ಅಪವಿತ್ರವಾಗಿರುವವು. ಮಹಾಪುರುಷರು, ಚೈತನ್ಯ ಸ್ವರೂಪರು, ಪುಣ್ಯ ಪುರುಷರ ನದೀ ಸ್ನಾನದಿಂದ ಆಯಾ ನದಿಗಳು ಪುನಃ ಪವಿತ್ರಗೊಳ್ಳುವವು. ಹೀಗೆ ಪವಿತ್ರ ನದಿಗಳು ಮಲಿನವಾಗಿದ್ದರೂ, ತಮ್ಮ ಪವಿತ್ರತೆ ಪುನಃ ಹೊಂದುವವು. ಜಲ ಯಜ್ಞವನ್ನು ಅವರು ಮಾಡುವುದರಲ್ಲಿನ ಅಂತರಾರ್ಥ, ಜೀವರಾಶಿಗಳ ಶರೀರಗಳಲ್ಲಿ ರಸ ಸ್ವರೂಪದಲ್ಲಿನ ಜಲ ತತ್ತ್ವವನ್ನು ಶುದ್ಧೀಕರಿಸುವುದೇ! **ಶ್ರೀಪಾದ ಶ್ರೀವಲ್ಲಭ ಸಾರ್ವಭೌಮರು ತಮ್ಮ ಕೈ ಚಾಲನೆಯಿಂದ ಮಾತ್ರವೇ ಕೋಟ್ಯಾನುಕೋಟಿ ಬ್ರಹ್ಮಾಂಡಗಳನ್ನು ಸೃಷ್ಟಿಸಿ, ರಕ್ಷಿಸಿ, ಸುಚೈತನ್ಯ ಹೊಂದಿಸಬಲ್ಲ ಸತ್ಯವಾದ ತ್ರಿಮೂರ್ತ್ಯಾತ್ಮಕವಾದ ಶ್ರೀದತ್ತ ಪ್ರಭುಗಳು. ಅವರು ಲೀಲಾಮಾನುಷ್ಯ ವಿಗ್ರಹಧಾರಿಗಳಾಗಿ, ತ್ರೇತಾಯುಗದಲ್ಲಿ ಭರಧ್ವಾಜ ಮಹರ್ಷಿಗಳಿಗೆ ಕೊಟ್ಟ ವಾಗ್ದಾನದ ಪ್ರಕಾರ ಭಾರಧ್ವಾಜ ಗೋತ್ರದಲ್ಲಿ, ಸಾವಿತ್ರಕಾಠಕ ಚಯನ ಮಾಡಲಾದ ಪುಣ್ಯ ಸ್ಥಳವಾದ ಪೀಠಿಕಾಪುರದಂದು ಅವತರಿಸಿದರು. ಅವರ ಅವತಾರೋದ್ದೇಶ ಮಹಾಯೋಗಿಗಳನ್ನು, ಮಹಾಸಿದ್ಧರನ್ನು ಮತ್ತು ಮಹಾಪುರುಷರನ್ನು ಅನುಗ್ರಹಿಸಿ, ಅವರ ಮೂಲಕ ಧರ್ಮೋದ್ಧಾರಣೆ ಮಾಡುವುದು. ಅವರ ನರಸಿಂಹ ಸರಸ್ವತೀ ನಾಮ ಅವತರಣಾ ವಾಗ್ದಾನ ಅಕ್ಷರಸತ್ಯವಾಯಿತು.** ಈ ದಿವ್ಯ ವಾಗ್ದಾನವನ್ನು ಶಂಕಿಸುವರನ್ನು, ಶ್ರೀಪಾದ ಅವತಾರವನ್ನು ಅವಹೇಳನೆ ಮಾಡುವವರು ಪಿಶಾಚಿ ಜನುಮ ತಾಳುವರೆಂದು, ಬಲಹೀನರನ್ನು ಮತ್ತು ದುರದೃಷ್ಟವಂತರನ್ನು ಅಂತಹ ಪಿಶಾಚಿಗಳು ಆವಹಿಸುವುವೆಂದು, ಮತ್ತು ಅವುಗಳಿಗೆ ವಿಮೋಚನೆ, ಗಂಧರ್ವ ನಗರದಲ್ಲಿ ತಾನು ನೃಸಿಂಹ ಸರಸ್ವತಿ ಅವತಾರ ತಾಳಿದಾಗಲೇ ಎಂದೂ, ಅನೇಕಬಾರಿ ಹೇಳಿರುವರು. ಶ್ರೀಗಳ ದಿವ್ಯ ವಚನಗಳನ್ನು ಶಂಕಿಸುವವರು ಭಯಂಕರ ನರಕ ತಲುಪುವರು. ನೀನು ಬರೆಯಲಿರುವ ಶ್ರೀಪಾದ ಶ್ರೀವಲ್ಲಭ ಚರಿತಾಮೃತವು, ಅಕ್ಷರ ಸತ್ಯ ಗ್ರಂಥ. ಇದು ಅನೇಕ ಭಾಷೆಗಳಿಗೆ ಅನುವಾದಿಸಲಾಗುವುದು. ಈ ಮಹಾ ಪವಿತ್ರ ಗ್ರಂಥವನ್ನು ಯಾವ ಭಾಷೆಯಲ್ಲಿ ಪಾರಾಯಣ ಮಾಡಿದರೂ ವಿಶೇಷ ಫಲ ಲಭಿಸುವುದು. ತನ್ನ ಚರಿತಾಮೃತವನ್ನು ಅನುವಾದಿಸುವುದಕ್ಕೆ, ಯೋಗ್ಯತೆ ಇರುವವರನ್ನೇ ಆರಿಸಿಕೊಳ್ಳುವನೆಂದೂ, ಅನುವಾದಿಸುವ ಸಮಯದಲ್ಲಿ ಸಹಾ ಆ ಕರ್ತನ ಮೇಲೆ ವಿಶೇಷ ಕೃಪಾಶೀರ್ವಾದ ಇರುವುದೆಂದೂ, ಆ ಗ್ರಂಥವನ್ನು ಪೂಜಾಮಂದರಿದಲ್ಲಿಟ್ಟು ಪೂಜಿಸಿದ್ದ ಮಾತ್ರಕ್ಕೇ ತನ್ನ ಕೃಪೆ ಲಭಿಸುವುದೆಂದೂ, ಕಲಿ ಯುಗದಲ್ಲಿ ಈ ಗ್ರಂಥ ಪಾರಾಯಣದಿಂದ ಸರ್ವ ಶುಭಗಳೂ ಲಭಿಸಲು ನೆರವಾಗುವುದೆಂದು ಆ

ಮಹಾಪ್ರಭುಗಳೇ ಹೇಳಿದರು. **"ಆದ್ದರಿಂದ ನೀನು ಗ್ರಂಥವನ್ನು ಬರೆಯುವುದು ಎಂಬುದು ಒಂದು ನೆಪ ಮಾತ್ರವೇ! ಶ್ರೀಗಳ ಚರಣಗಳೇ ಈ ಗ್ರಂಥವನ್ನು ನಿನ್ನ ಕೈಯಲ್ಲಿ ಬರೆಸುತ್ತಿವೆ."**

ಆಗ ನಾನಂದೆನು, ''ಮಹಾಶಯರೇ! ತಾವು ಹೇಳುವುದು ಸತ್ಯ. ನಾನು ಪಂಡಿತನಲ್ಲ. ಅದರಲ್ಲೂ ವೇದವೇದಾಂತ ವಿಷಯಗಳು ಏನೇನೂ ತಿಳಿಯದವನು. ಇಂತಹ ಅಲ್ಪಜ್ಞಾನಿ ಕೈಯಲ್ಲಿ, ಈ ಮಹತ್ಕಾರ್ಯವನ್ನು ಬರೆಸುವುದು ನನಗೆಷ್ಟೋ ಆಶ್ಚರ್ಯವಾಗಿಯೂ, ಆನಂದವಾಗಿಯೂ ಇದೆ.''

ಅದಕ್ಕೆ ಭಾಸ್ಕರ ಪಂಡಿತರು, **"ಒಟ್ಟಲ್ಲಿ ದತ್ತ ವಿಧಾನವೇ ಅಷ್ಟು. ನಿಷಿದ್ಧ ಪದಾರ್ಥಗಳಿಂದ ರೋಗಗಳನ್ನು ವಾಸಿ ಮಾಡುವುದು, ಅದ್ಭುತ ಕೆಲಸಗಳನ್ನು ಏನೂ ತಿಳಿಯದವರಿಂದ ಮಾಡಿಸುವುದು, ಅವರಿಗೆ ನಿತ್ಯವಿನೋದ, ದಿವ್ಯವಿನೋದ! ಅದೇ ಅವರ ಸ್ವಭಾವ. ಅದು ಅವರ ದಿವ್ಯಶಕ್ತಿಗೆ ನಿದರ್ಶನ ಸಹ."**

ಒಮ್ಮೆ ಒಬ್ಬ ಸನ್ಯಾಸಿ ಕುಕ್ಕುಟೇಶ್ವರಾಲಯಕ್ಕೆ ಬಂದನು. ನರಸಿಂಹ ವರ್ಮರೂ, ವೆಂಕಟಪ್ಪಯ್ಯ ಶ್ರೇಷ್ಠಿಗಳು, ಚಿಕ್ಕಮಗುವಾದ ಶ್ರೀಪಾದರನ್ನು ಒಂದು ಕುದುರೆಯ ಗಾಡಿಯಲ್ಲಿ ಕೂರಿಸಿಕೊಂಡು ಅದೇ ದೇಗುಲಕ್ಕೆ ಬಂದರು. ಆ ಸನ್ಯಾಸಿ ಸ್ವಯಂಭೂ ದತ್ತನ ಆಲಯದಲ್ಲಿ ಧ್ಯಾನದಲ್ಲಿದ್ದರು. ಶ್ರೀಪಾದರು ಶ್ರೇಷ್ಠಿಗಳನ್ನುದ್ದೇಶಿಸಿ, ''ತಾತ! ಈ ಮೀನುಗಾರನನ್ನಿಲ್ಲೇಕೆ ಬರಲು ಬಿಟ್ಟಿರುವಿರಿ?'' ಪ್ರಶ್ನಿಸಿದನು. ನರಸಿಂಹ ವರ್ಮ ''ಕನ್ನಾ! ಹಾಗೆ ನುಡಿಯಬಾರದು. ಇವರು ಸನ್ಯಾಸಿಗಳು, ಕೋಪ ಬಂದರೇ ಶಪಿಸಬಲ್ಲರು'' ಎಂದು ಗುಟ್ಟಾಗಿ ಹೇಳಿದರು. ''ಮೀನುಗಾರನಿಗೂ ಕೋಪ ಬರುವುದೇ? ಮೀನು ವಾಸನೆ ಹೊಡಿಯುತ್ತಿರುವ, ಮೀನು ಭಕ್ಷಿಸುವನನ್ನು ಮೀನುಗಾರನನ್ನದೇ ಸನ್ಯಾಸಿ ಎನ್ನಬೇಕೆ?'' ಎಂದರು. ಶ್ರೀಪಾದರು ಮನುಷ್ಯರನ್ನು ಕೋಪಗೊಳಿಸುವ ಸ್ವಭಾವಿ. ಇಷ್ಟರಲ್ಲೇ ಆ ಸನ್ಯಾಸಿ ಕಣ್ತೆರೆದನು. ತನ್ನ ಮೈಯಲ್ಲಾ ಮೀನು ವಾಸನೇ ಇರುವುದು ಗಮನಿಸಿದನು. ಆತ ನಿಷ್ಠೆಯ ಸನ್ಯಾಸಿಯೇ. ಶ್ರೀಪಾದರನ್ನು ನೋಡಿದನು. ಆತ ಮನದಲ್ಲೇ 'ಶ್ರೀ ಭಗವಾನನ ಮತ್ಸ್ಯಾವತಾರವೆಂದರೇ ಏನೋ', ಎಂದು ಆಲೋಚಿಸುತ್ತಿದ್ದನು. ಇದಕ್ಕೆ ಯೋಗಪರ ಅರ್ಥವೇನಾದರೂ ಉಂಟೇ ಎಂದೂ ಯೋಚಿಸುತ್ತಿದ್ದನು. ಶ್ರೀಪಾದರು, ''ಸ್ವಾಮೀ, ನಿಮ್ಮ ಕಮಂಡಲದಲ್ಲಿ ಚಿಕ್ಕ ಚಿಕ್ಕ ಮೀನುಗಳಿವೆ. ಅವು ಹೇಗೆ ಆನಂದವಾಗಿವೆಯೋ ನೋಡಿ'' ಎಂದರು.

## ಸನ್ಯಾಸಿಗೆ ವಿಶೇಷಾನುಗ್ರಹ

ಸನ್ಯಾಸಿಗೆ ಇದೆಲ್ಲಾ ಅಯೋಮಯವಾಗಿತ್ತು. ಶ್ರೀಪಾದರು ಸನ್ಯಾಸಿ ಕಣ್ಣುಗಳನ್ನು ನೇರವಾಗಿ ಕಂಡರು. ಆಗ ಆತ ಅಂತರ್ಮುಖನಾದನು. ಯೋಗ ದೃಷ್ಟಿ ಲಭಿಸಿ, ತನ್ನ ಶರೀರದ ರಕ್ತ ನಾಳದಲ್ಲಿ ಮತ್ತು ಇತರ ದ್ರವದಲ್ಲಿ ಚಿಕ್ಕ ಕಣಗಳಿದ್ದ ಹಾಗೆ, ಅದು ಮೀನಿನ ಆಕಾರದಲ್ಲಿರುವ ಹಾಗೆಯೂ ತಿಳಿದನು. ಆ ಸಣ್ಣ ಕಣಗಳೇ ಶರೀರದ ವಿವಿಧ ಅನುಭೂತಿಗೆ ಕಾರಣವೆಂದೂ ಅರಿತನು. ಮೂಗಿಗೆ ವಾಸನೆ ತರುವುದೂ ಈ ಕಣಗಳೇ ಎಂದು ತಿಳಿದನು. ಹಾಗೆಯೇ ನಾಲಿಗೇಗೆ ತರುವ ರುಚಿಯು ಈ ಮೀನಾಕಾರದ ಕಣಗಳೇ ಎಂದು ಗಮನಿಸಿದನು. 'ಆಹಾ! ಮತ್ಸ್ಯಾವತಾರದ ಪ್ರಕ್ರಿಯೆ ಎಂದರೇ ಇದಾ!' ಎಂದು ಆಶ್ಚರ್ಯಪಟ್ಟನು. ಮೂಲಾಧಾರದ ಬಳಿ ಇರುವ ವಾಸನೆ ಕಂಡುಹಿಡಿಯುವ ಈ ಚಿಕ್ಕಚಿಕ್ಕ ಕಣಗಳ ಜ್ಞಾನ ಅರಿತರೇ, ಪ್ರಪಂಚದ ಎಲ್ಲಾ ವಾಸನೆಗಳನ್ನೂ ನಿಯಂತ್ರಿಸಬಲ್ಲ

ಶಕ್ತಿ ಆಗುವುದೆಂದರಿತನು. ಆಗ ಬಹಿರ್ಮುಖನಾಗಿ ಮಂದಹಾಸ ಮಾಡಿದನು. ಶ್ರೀಗಳೂ ಮುಗುಳ್ನಗೆ ಇತ್ತರು. ಆ ಸನ್ಯಾಸಿ ಗುರುಗಳ ಶ್ರೀಚರಣಗಳ ಮೇಲೆ ಬಿದ್ದನು. ಅವರು ಅನುಗ್ರಹಿಸಿದರು. ಆಗ ಸನ್ಯಾಸಿಯ ಮೈ ಸುಗಂಧ ಕಂಪು ತರಲಾರಂಭಿಸಿತು! 'ಶ್ರೀ ಪರಾಶರ ಮಹರ್ಷಿ ಮತ್ಸ್ಯಗಂಧಿಯನ್ನು ಯೋಜನಾಗಂಧಿಯಾಗಿ ಬದಲಾಯಿಸಿದ ಯೋಗ ಪ್ರಕ್ರಿಯೆ ಇದೇ' ಎಂದು ಸನ್ಯಾಸಿ ಅರಿತನು. ಪತಿವ್ರತೆಗಳ ಶರೀರಗಳಿಂದ ಸುವಾಸನೆ ಚಿಮ್ಮುತ್ತಿತ್ತು. ಅದರಿಂದಲೇ ಆವರನ್ನು ಸುವಾಸಿನಿಯರೆಂದೂ ಕರೆಯುವರು. ಶರೀರದಲ್ಲಿ ಅನುಭೂತಿಗಳೆಲ್ಲವೂ ಸುವಾಸನಾಭರಿತವಾದರೇ, ಭೌತಿಕವಾಗಿ ಸಹಾ ಬದಲಾವಣೆಗಳು ಸಂಭವಿಸಿ, ಭೌತಿಕವಾಗಿ ಸುವಾಸನೆ ಹೊರಬರುವುದೆಂದು ಆ ಸನ್ಯಾಸಿಗೆ ಶ್ರೀಗಳು ಮೌನವಾಗಿಯೇ ಬೋಧಿಸಿದರು. ಅವರು ದಿವ್ಯ ವಿನೋದರಲ್ಲವೇ!

ಆಗ ಶ್ರೀಪಾದರು, "ಎಲೈ! ನಿನಗೆ ಮತ್ಸ್ಯಾವತಾರದ ಬಗ್ಗೆ ತಿಳಿದಿದೆ, ದೈವೀ ಪ್ರಕೃತಿಗೆ ಅಸುರೀ ಪ್ರಕೃತಿಗೆ ಕೂರ್ಮಾವತಾರವೇ ಆಧಾರ. ಮಂದರ ಪರ್ವತವನ್ನು ಕೂರ್ಮದ ಮೇಲಿಟ್ಟು ದೇವ ದಾನವರು ಸಮುದ್ರ ಮಥನ ಮಾಡಿದರು. ನೀನು ಅಂತರ್ಮುಖನಾಗಿ, ಕೂರ್ಮವು ತನ್ನ ತಲೆಯನ್ನು ಚಿಪ್ಪಿನಲ್ಲಿ ಅವಿತುಕೊಂಡಂತೇ, ಮಹಾಯೋಗಿ ಆಗಬಹುದು. ಇಲ್ಲ ಬಹಿರ್ಮುಖನಾಗಿ ಎಲ್ಲಾ ದುರ್ಗುಣಗಳನ್ನೂ ಸೇರಿಸಿಕೊಂಡು ರಾಕ್ಷಸನಾದರೂ ಆಗಬಹುದು. ನೀನು ಬರ್ಹಿಮುಖನೇ ಆದರೇ ಯಾರೋ ಒಬ್ಬರು ನಿನ್ನ ಶಿರಸ್ಸು ಛೇದಿಸಿಬಿಡುವರು, ನೀನು ಮರಣಿಸುವೆ, ಸಾಯದಿರಲು, ಅಂತರ್ಮುಖನಾಗು, ಯೋಗಾಭ್ಯಾಸ ಮಾಡಿ ಕರ್ಮಬಂಧನದಿಂದ ವಿಮುಕ್ತಿ ಹೊಂದಬೇಕು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**



ಶ್ರೀ ಶ್ರೀಪಾದ ಶ್ರೀವಲ್ಲಭರು ಶ್ರೀ ಗುರು ದತ್ತಾತ್ರೇಯಸ್ವಾಮಿ ಹಾಗೂ ಶ್ರೀ ನರಸಿಂಹ ಸರಸ್ವತಿಸ್ವಾಮಿಯವರು
ಕುರುವಪುರ



ಶ್ರೀ ರಾಮ ಭಕ್ತ ಜೈ ಹನುಮಾನ್

## ಅಧ್ಯಾಯ - 45

# ಶ್ರೀ ಹನುಮಂತನನ್ನು ಭೂಮಿಯ ಮೇಲೆ ಅವತರಿಸಲು ಆದೇಶಿಸುವುದು

### ಶ್ರೀ ಕಾಶೀಯಲ್ಲಿ ಶ್ರೀಪಾದರ ವಾಸ

ಶ್ರೀಭಾಸ್ಕರ ಪಂಡಿತರ ಮನೆಯಲ್ಲಿ ಮಧ್ಯಾಹ್ನದ ಊಟದ ನಂತರ, ಅವರು ಹೀಗೆ ಹೇಳಿದರು. ''ಮಕ್ಕಳೇ! ಶ್ರೀಪಾದರ ಲೀಲೆಗಳು ತರ್ಕಕ್ಕೆ ನಿಲುಕದವು. ಅವರು ಕಾಶೀ ನಗರದಲ್ಲಿ ಎಷ್ಟೋ ಮಹಾಪುರುಷರನ್ನು ಆಶೀರ್ವದಿಸಿದರು. ಅವರಿಗೆ ಬೇಕಾದ ಯೋಗ ಶಕ್ತಿಗಳನ್ನು, ಸಿದ್ಧಿಗಳನ್ನೂ ಪ್ರಸಾದಿಸಿದರು.

ಶ್ರೀಗಳು ಋಷಿ ಸಂಘವನ್ನುದ್ದೇಶಿಸಿ, ''ನಾನು ನೃಸಿಂಹ ಸರಸ್ವತಿ ನಾಮದಲ್ಲಿ ಮತ್ತೊಂದು ಅವತಾರ ತಾಳುವೆನು. ಪೀಠಿಕಾಪುರದಲ್ಲಿ ಅದೃಶ್ಯನಾಗಿ, ಕಾಶೀಗೆ ಬರುವುದರಲ್ಲಿ ಬಲವಾದ ಕಾರಣವಿದೆ. ಇದು ಮಹಾಪುಣ್ಯಕ್ಷೇತ್ರ, ಸಿದ್ಧ ಸಂಘಗಳಿಗೆ ಗೂಡು. ನಾನು ಪತ್ರಿದಿನ ಗಂಗೆಯಲ್ಲಿ ಸ್ನಾನ ಮಾಡಲು ಯೋಗ ಮಾರ್ಗದಲ್ಲಿ ಬರುವೆನು. ನರಸಿಂಹ ಸರಸ್ವತಿ ಅವತಾರದಲ್ಲಿ ಇಲ್ಲಿಯೇ ಸನ್ಯಾಸ ದೀಕ್ಷೆ ಹಿಡಿಯುವೆನು. ಬರುವ ಶತಮಾನಗಳಲ್ಲಿ ಕ್ರಿಯಾ ಯೋಗವನ್ನು ಗೃಹಸ್ಥರಿಗೆ ಸಹಾ ಬೋಧಿಸಲೂ, ಶ್ಯಾಮಾಚರಣನೆಂಬಾತನನನ್ನು ಇಲ್ಲಿ ಹುಟ್ಟಲೂ ಆದೇಶಿಸುತ್ತಿದ್ದೇನೆ. ಮುಂಬರುವ ಯುಗಕ್ಕೆ ಬ್ರಹ್ಮನಾಗಬಲ್ಲ ಹನುಮಂತನನ್ನು ಶ್ಯಾಮಾಚರಣ ಬಳಿ ಕುಳುಹಿಸಿ, ಆತನಿಗೆ ಹನುಮಂತನಿಂದ ಕ್ರಿಯಾ ಯೋಗ ದೀಕ್ಷೆಯನ್ನು ಕೊಡಿಸುವೆನು. ಇದು ಸತ್ಯ'' ಎಂದರು.

### ಶ್ರೀ ಹನುಮಂತನಿಗೆ ಸೀತಾ, ರಾಮ, ಲಕ್ಷ್ಮಣ, ಭರತ, ಶತೃಘ್ನರಾಗಿ ದರ್ಶನ ತರುವುದು

ಆಗ ಅವರು, ಋಷಿಗಳೆಲ್ಲಾ ತಮ್ಮನ್ನು ಯೋಗ ಮಾರ್ಗದಲ್ಲಿ ಹಿಂಬಾಲುಸುತ್ತಿರಲೂ ಬದರಿಕಾ ವನ ತಲುಪಿದರು. ಅಲ್ಲಿನ ನರನಾರಾಯಣ ಗುಹೆಯಲ್ಲಿ ಅನೇಕರಿಗೆ ಕ್ರಿಯಾ ಯೋಗ ದೀಕ್ಷೆ ಇತ್ತರು. ಅಲ್ಲಿಂದ 12 ಕ್ರೋಸು (ಗಾವುದ) ದೂರದಲ್ಲಿನ ಊರ್ವಶೀ ಕುಂಡ ತಲುಪಿದರು. ಋಷಿ ಗಂಗೆಯಲ್ಲಿ ಸಹಾ ಸ್ನಾನವಾಚರಿಸಿದರು. 5000 ವರುಷಗಳಿಂದ ತಪೋದೀಕ್ಷೆಯಲ್ಲಿರುವ ಸರ್ವೇಶ್ವರಾನಂದನೆಂಬ ಮಹಾಯೋಗಿಯನ್ನಾಶೀರ್ವದಿಸಿದರು. ಅಲ್ಲಿಂದ ನೇಪಾಳ ದೇಶ ತಲುಪಿದರು. ಅಲ್ಲಿ ಒಂದು ಪರ್ವತದ ಮೇಲೆ ರಾಮ ನಾಮ ಧ್ಯಾನದಲ್ಲಿರುವ ಹನುಮಂತರಿಗೆ ಸೀತಾ, ರಾಮ, ಲಕ್ಷ್ಮಣ, ಭರತ, ಶತೃಘ್ನ ಸಮೇತ ದರ್ಶನವಿತ್ತರು. ಶ್ರೀ ಹುನುಮನುದ್ದೇಶಿಸಿ, ''ಮಗು! ಅಗ್ನಿ ಬೀಜವಾದ 'ರಾಂ' ಎಂಬುದನ್ನು ಎಷ್ಟು ಕೋಟಿ ಜಪಿಸಿದೆಯೋ ಲೆಕ್ಕ ಮೀರಿದೆ. ಎಷ್ಟು ಸ್ವಲ್ಪ ಸಮಯಸಿಕ್ಕರೂ, ಅಷ್ಟೇ ಸ್ವಲ್ಪ ಕಾಲದಲ್ಲಿ 'ರಾಂ' ಬೀಜೋಚ್ಛಾರಣೆ ಮಾಡಿರುವೆ. ನಿನ್ನ ಲೆಕ್ಕ ಬರೆಯಲೂ ಚಿತ್ರಗುಪ್ತರೇ ತಬ್ಬಿಬ್ಬಾಗುತ್ತಿದ್ದಾರೆ! ಮಹಾ ಅನಂತವಾದ ಮಹಾ ಶೂನ್ಯಕಾಲದಲ್ಲಿ ಸಹಾ ಕೋಟಿಗಟ್ಟಲೇ ರಾಮನಾಮ ಜಪಿಸಿರುವೆ. ಆದ್ದರಿಂದ ನೀನು ಕಾಲಾತೀತನು. ಕಾಲಾತ್ಮಕನೂ ಸಹಾ. ನಿನ್ನ ವಯಸ್ಸು ಎಷ್ಟು ಲಕ್ಷ ವರುಷವೆಂದೇ ನಿರ್ಧರಿಸಲು ಚಿತ್ರಗುಪ್ತರಿಗೆ ಲೆಕ್ಕ ಸಿಗುತ್ತಿಲ್ಲ! ಈ ಕಲಿಯುಗದಲ್ಲಿ ಒಮ್ಮೆ ನೀನು ಅವತರಿಸಬೇಕು. ಇಂದ್ರಿಯ ಪ್ರವೃತ್ತಿಗಳನ್ನು ಶಾಂತಿ ಮಾಡಲು ಸಮರ್ಥನಾದ ಕಾರಣ ನೀನು ಶಾಯೀ ನಾಮದಲ್ಲಿ ಖ್ಯಾತಿ ಪಡೆದವನಂತಾಗು.

## "ರಾಂ" ಬೀಜ ಮಹಿಮೆ

ಆಗ ಶ್ರೀ ಹನುಮಂತ ಶಾಯಿ, ''ಪ್ರಭೂ! 'ರಾಂ' ಬೀಜ ಅಗ್ನಿ ಬೀಜವೇ. ನನಗೆ ಅಗ್ನಿ ಸಿದ್ಧಿ ಆದ ಮಾತೂ ನಿಜವೇ! ನಾನು ಅಗ್ನಿ ಯೋಜನದಲ್ಲಿ ಪರಿಪೂರ್ಣನಾದೆ ಎಂಬುವುದೂ ನಿಜವೇ ಸರಿ! ದೇಹ ಬುದ್ಧಿಯಿಂದ ನಾನು ನಿಮ್ಮ ದಾಸನು. ಜೀವ ಬುದ್ಧಿಯಿಂದ ನಾನು ನಿಮ್ಮ ಅಂಶನು. ಆತ್ಮ ಬುದ್ಧಿಯಿಂದ ನೀವೇ ನಾನಾಗಿ ಇರುವೆನು. ನಾನು ಯಾವ ರೂಪದಲ್ಲಿ ಅವತರಿಸಬೇಕೋ ತಿಳಿಸಬೇಕು'' ಎಂದರು. ಶ್ರೀಪಾದರು ಮಂದಹಾಸದಿಂದ, ''ಹನುಮಾ! ನೀನು ಶಿವಾಂಶ ಸಂಭೂತನಾದರೂ ಶ್ರೀರಾಮ ಭಕ್ತನಾದೆ. ಭಲೇ! ಅರಬ್ಬೀ ಭಾಷೆಯಲ್ಲಿ 'ಅಲ್' ಅಂದರೇ ಶಕ್ತಿ. 'ಅಹ್' ಎಂದರೇ ಶಾಕ್ತ. ಶಕ್ತಿಯನ್ನು ಧರಿಸಿದವನು. ಆದ್ದರಿಂದ 'ಅಲ್ಲಾಹ್' ಅಂದರೇ ಶಿವಶಕ್ತಿಯ ಸಂಯುಕ್ತ ಸ್ವರೂಪವೆಂದು ಅರ್ಥ. ಇಲ್ಲಿವರೆಗೂ ಜಾನಕೀವಲ್ಲಭ ರೂಪದಲ್ಲಿ ನನ್ನನ್ನು ಆರಾಧಿಸಿದ ನೀನು, ಮ್ಲೇಚ್ಛ ಜನರಿಗೆ ಒಪ್ಪಿಗೆಯಾದ, ಶಿವಶಕ್ತಿ ಸ್ವರೂಪನಾದ 'ಅಲ್ಲಾ' ನಾಮ ಸ್ಮರಿಸುತ್ತಾ ನನ್ನನ್ನು ಶಿವಶಕ್ತಿಯಾಗಿ ಆರಾಧಿಸು'' ಎಂದರು. ಆಗ ಶಾಯಿ ಹೀಗೆಂದರು, ''ಪ್ರಭೂ! ನನಗೆ, ಭರದ್ವಾಜ ಮಹರ್ಷಿ ತ್ರೇತಾಯುಗದಲ್ಲಿ ಸಾವಿತ್ರಕಾಠಕ ಚಯನವನ್ನು ಪೀಠಿಕಾಪುರದಲ್ಲಿ ಮಾಡಿದರೆಂದೂ ಗೊತ್ತು. ಅಂದು ಕೊಟ್ಟ ವರದಿಂದ ತಾವು ಭಾರದ್ವಾಜ ಗೋತ್ರದಲ್ಲಿ ಜನ್ಮಿಸಿದ ವಿಷಯವೂ ನಾನರಿಯೆ. ನಾನು ನಿಮ್ಮನ್ನು ಬಿಟ್ಟು, ಎಂದಿಗೂ, ಇರಲಾರೆ. ನಿಮ್ಮ ಗೋತ್ರವೇ ನನ್ನ ಗೋತ್ರವೂ ಆಗಬೇಕು. ನಾನು ನಿಮ್ಮ ಕೂಸೇ ತಾನೇ.''

## ಶ್ರೀಪಾದ, ಹನುಮರ ಸಂವಾದ

ಆಗ ಶ್ರೀಪಾದರು, ''ಮಗೂ! ಹನುಮಾ! ನೀನು ಹೊಂದುವ ದೇಹ, ಭಾರದ್ವಾಜ ಗೋತ್ರದಲ್ಲೇ ಆಗಲಿ!'' ಎಂದರು. ಆಗ ಹನುಮರು, ''ಅಲ್ಲಾಮಾಲಿಕ್! ಅಲ್ಲಾನೇ ಯಜಮಾನ'' ಶ್ರೀಪಾದರು, ಹನುಮನನ್ನು ಅಪ್ಪಿಕೊಂಡರು. ನಂತರ, ''ಹನುಮ! ನೀನು ದೇಹ ಬುದ್ಧಿ ಬಿಡು. ನೀನು ನನ್ನ ಅಂಶ.'' ಆಗ ಸೇವಕೋತ್ತಮನು, ''ಪ್ರಭೂ! ನಾನು ತಮ್ಮ ಅಂಶವೇ. ಒಪ್ಪುತ್ತೇನೆ. ಆದರೇ ಅಂಶಾವತಾರಗಳು ತಮ್ಮ ಕೆಲಸಗಳು ಈ ಭೂಮಿ ಮೇಲೆ ಮುಗಿಸಿದ ನಂತರ ಮೂಲತತ್ತ್ವದಲ್ಲಿ ವಿಲೀನವಾಗಿ ಬಿಡುವವು. ಆಗ ಅಂಶಾವತಾರಗಳಿಗೆ ಬೆಲೆ ಇರಲಾರದು. ಆದರೇ ನಾನು ಧರಿಸುವ ಅಂಶಾವತಾರ, ಮೂಲತತ್ತ್ವದೊಂದಿಗೆ ಸೇರಿದ್ದರೂ, ಅದು ಮೂಲವಾದ ನಿಮ್ಮ ತತ್ತ್ವದ ಶಕ್ತಿ ಸಂಪತ್ತೆಲ್ಲವನ್ನೂ ಧರಿಸಿರಬೇಕು'' ಎಂದು ಬಯಸಿದರು. ಅದಕ್ಕೆ ಶ್ರೀಪಾದರು, **"ಮಗೂ, ಹನುಮಾ! ನೀನು ಬಹಳ ಬುದ್ಧಿವಂತ. ಯಾವ ಶಕ್ತಿ ಪ್ರಭಾವಗಳು ನನ್ನಲ್ಲಿ ಉಂಟೋ, ಅವೆಲ್ಲವೂ ನಿನ್ನಲ್ಲೂ ತುಂಬಿರಲಿ. ನಾನು ನರಸಿಂಹ ಸರಸ್ವತಿ ರೂಪದಲ್ಲಿ ಶ್ರೀಶೈಲದ ಕದಳೀ ವನದಲ್ಲಿ ರಹಸ್ಯವಾಗಿ 300 ವರುಷ ಯೋಗ ಸಮಾಧಿಯಲ್ಲಿರುವೆನು. ಆಗ ಪ್ರಜ್ಞಾಪುರದ ಸ್ವಾಮಿ ಸಮರ್ಥನೆಂಬ ಹೆಸರಿನಲ್ಲಿ ಖ್ಯಾತಿ ಹೊಂದುವೆನು. ನಾನು ಶರೀರ ತ್ಯಾಗ ಮಾಡುವ ಸಮಯ, ಶ್ಯಾಯೀ ರೂಪದಲ್ಲಿರುವ ನಿನ್ನೊಳಗೆ ಅವತರಿಸುವೆನು.** ನನ್ನ ಅವತಾರ ನಿನ್ನೊಳಗೆ ಇದೆ ಎಂದು ಬಹು ಸ್ಪಷ್ಟವಾಗಿ ಪ್ರಕಟಿಸುವೆ. ನೀನು ನನ್ನ ಸರ್ವಸಮರ್ಥ ಸದ್ಗುರು ಅವತಾರವಾಗಿ ಖ್ಯಾತಿ ಹೊಂದುವೆ. **"ಪ್ರಭೂ! ದೇಹ ಬುದ್ಧಿಯಿಂದ ತಮ್ಮ ಸೇವಕನಾದ ಕಾರಣ 'ಅಲ್ಲಾಮಾಲಿಕ್' ಎಂದು ಸಂಚರಿಸುವೆನು. ಜೀವಾತ್ಮ ಬುದ್ಧಿಯಿಂದ ತಮ್ಮ ಅಂಶನಾಗಿ ಗುರು ಸ್ವರೂಪದಲ್ಲಿ ನಡೆದುಕೊಳ್ಳುವೆನು. ಆದರೇ ಶ್ರೀ ಚರಣರು ದತ್ತ ಪ್ರಭುಗಳಲ್ಲವೇ?" ನಿಮಗೂ, ನನಗೂ ಅಂತರವಿರುವುದು ಉಚಿತವೇ? ನಾನೇ ತಾವಾಗಿ, ತಾವೇ ನಾನಾಗಿ ಬದಲಾಯಿಸಿದರೇ ಅಲ್ಲವೇ ಅದ್ವೈತ ಸಿದ್ಧಿಸುವುದು. ಆದ್ದರಿಂದ ತಾವು ನನಗೆ ಶ್ರೀದತ್ತ ಸಾಮೀಪ್ಯ ಪ್ರಸಾದಿಸಿರಿ.**

ಶ್ರೀಪಾದ ವಲ್ಲಭರು ಕಾಲಪುರುಷನನ್ನು ಅಲ್ಲಿಗೆ ಬರಲು ಆದೇಶಿಸಿದರು. ತಕ್ಷಣ ಕಾಲಪುರುಷ ಮುಂದೆ ಕೈ ಕಟ್ಟಿ ನಿಂತಿದ್ದನು. ಆಗ ಶ್ರೀ ಮಹಾಪ್ರಭುಗಳು, ''ಕಲಿಪುರುಷ! ಈ ಹನುಮ ಕಾಲಪುರುಷನಾದ ನಿನ್ನನ್ನೇ ಅಧಿಗಮಿಸಿ ಕಾಲಾತೀತನಾಗಿರುವನು. ಈತನಿಗೆ ನನ್ನ ಸಾಯುಜ್ಯ ಕೊಡಲು ಬಯಸಿದ್ದೇನೆ. ಈತನಿಗೆ ನಾಥ ಶಬ್ದವನ್ನು ಸಹಾ ನೀಡುತ್ತಿದ್ದೇನೆ. ಈಗಿನಿಂದಲೇ ಈತ 'ಸಾಯಿನಾಥ'ನೆಂದು ಕರೆಯಲ್ಪಡಲಿ! ಇಂದು ದತ್ತ ಜಯಂತಿಯಾಗಿ ನಿರ್ಧಾರ ಮಾಡುತ್ತಿದ್ದೇನೆ. ಹನುಮನ ಚೈತನ್ಯ ಅದಕ್ಕೆ ಹೊಂದುವಂತೆ ಬದಲಾಯಿಸಿ ದತ್ತ ಸ್ವರೂಪ ಕೊಡಿ'' ಎಂದು ಆಜ್ಞಾಪಿಸಿದರು.

ಋಷಿ ಗಣಗಳೆಲ್ಲಾ ಆಶ್ಚರ್ಯದಿಂದ ಪ್ರಭುಗಳನ್ನು ಕಾಣುತ್ತಿರಲೂ, ಹನುಮನ ಶರೀರದ ಜೀವಾಣುಗಳೆಲ್ಲವೂ ವಿಘಟನೆ ಹೊಂದಿದವು. ಮೊದಲು ಅಲ್ಲಿಂದ ಅನಸೂಯಾ ಮಾತೆ ಆವಿರ್ಭವಿಸಿ, ''ಮಗು ಕೃಷ್ಣ ಕನ್ನಯ್ಯಾ! ಎಂತಹಾ ತುಂಟ ಮಗುವೋ ನೀನು, ದತ್ತಾ! ನಿನ್ನ ಜನುಮ ಸಮಯ, ಲೋಕ ಸಹಜವಾದ ನೋವು ಇರುವುದು. ತಾಯಂದಿರು ಅನುಭವಿಸುವ ಆ ಮಾಧುರ್ಯ, ನನಗೂ ಇರುವುದೆಂದು ನೆನೆಸಿದೆ. ಆದರೇ ಆ ನೋವುಗಳೇನೂ ಇಲ್ಲದೇ ನೀನು ಹುಟ್ಟಿದೆ. ಆದರೇ ನೀನು ನನಗೆ ಪ್ರಸವ ನೋವನ್ನು ಕೊಡಬೇಕೆಂದಿರುವೆಯೇ ಏನೋ, ಈಗ ನನ್ನ ಹೊಟ್ಟೆಯಲ್ಲಿ ಒಂದು ವಿಧವಾದ ಸಂಕಟ ಇದೆ. ನನ್ನ ಎದುರಿನಲ್ಲಿ ಇರುವ ನೀನು ಪುನಃ ನನ್ನ ಗರ್ಭದಲ್ಲಿ ಹುಟ್ಟಲಿದ್ದೀಯಾ? ಏನೀ ವೈಷ್ಣವ ಮಾಯೆ!'' ಎಂದು ನುಡಿದಳು. ಆಗ ಶ್ರೀಪಾದರು, ''ತಾಯಿ! ಮಕ್ಕಳು ಯಾರೇ ಆಗಲಿ ತಂದೆ ತಾಯಿಗಳ ಬಯಕೆಗಳು ತೀರಿಸಬೇಕು. ನಿನ್ನ ಗರ್ಭದಲ್ಲಿರುವುದು ಹನುಮ. ಆತನಿಗೆ ನನ್ನ ಸಾಯುಜ್ಯ ಸ್ಥಿತಿ ನೀಡಿದ್ದೇನೆ. ಒಂದು ರೀತಿ ಹೇಳಬೇಕಾದರೇ ನನ್ನ ಮಾಯೆಯಿಂದ ನಾನೇ ಗರ್ಭದಲ್ಲಿದ್ದೇನೆ, ಹುಟ್ಟುತ್ತೇನೆ'' ಎಂದು ನುಡಿದರು. ಕೆಲ ಸಮಯದ ನಂತರವೇ ಆಕೆಗೆ ನೋವು ಅಧಿಕವಾಯಿತು. ಅನಸೂಯ ಮಾತೆ ಮುದ್ದಾದ, 3 ತಲೆಗಳುಳ್ಳ ದತ್ತಮೂರ್ತಿಯನ್ನು ಹೆತ್ತಳು! ಸ್ವಲ್ಪ ಹೊತ್ತಿಗೆ ಆ ಮೂರ್ತಿ ಮಾಯವಾಗಿ ಆ ತಾಯಿಯ ಮಡಿಲಲ್ಲಿ ಒಂದು ಕೂಸು ಇತ್ತು. ಆ ನೂತನ ಮಗುವಿಗೆ ಸಾಕ್ಷಾತ್ ಅನಸೂಯ, ಎದೆ ಹಾಲನ್ನಿತ್ತಳು. ಆ ಘಟನೆ ಸಹ ಸ್ವಲ್ಪ ಹೊತ್ತಿಗೆ ಅದೃಶ್ಯವಾಗಿ, ಅಲ್ಲಿ ಹನುಮ ಕಾಣಿಸಿಕೊಂಡರು. ಜಾನಕೀರಾಮರು ಹನುಮ ಎದುರಿನಲ್ಲಿದ್ದರು. ''ಪ್ರಭೂ! ಮುಸಲ್ಮಾನ ಮತದ ಒಳ್ಳೆಯ ವಿಷಯಗಳು, ಸನಾತದನ ಧರ್ಮದ ಒಳ್ಳೆಯ ವಿಷಯಗಳೂ ಸೇರಿಸಿ ಜನರ ಮುಂದೆ ತರಲೂ ಒಂದು ಮುಸ್ಲಿಮ್ ಗುರುವಿರಬೇಕಲ್ಲವೇ?'' ಎಂದು ಹನುಮ ಪ್ರಶ್ನಿಸಲೂ, ಪ್ರಭುಗಳು **"ಮಹಬೂಬ್ ಸುಭಾನಿ ಎಂಬ ಮಹಾಜ್ಞಾನಿ ನನ್ನಲ್ಲಿ ಲೀನವಾಗಿರುವನು. ಆತನನ್ನು ವಾರಿಷ್ ಆಲೀಷಾ ಎಂಬ ಹೆಸರಿನಲ್ಲಿ ಸಾಕ್ಷಾತ್ಕರಿಸುವೆನು. ಆತ ನಿನಗೆ ಗುರುವಾಗಿ ಯೋಗ ರಹಸ್ಯಗಳನ್ನು ಬೊಧಿಸುವನು. ಕ್ರಿಯಾಯೋಗವನ್ನು ಶ್ಯಾಮಾಚರಣನು ಬೊಧಿಸುವನು. ನಿನಗೆ ಬೇಕಾದ ಇತರ ಬೇಡಿಕೆಗಳು ಇದ್ದಲ್ಲಿ, ನೀನು ತಿಳಿಸುವಂತವನಾಗು"** ಎಂದು ಪ್ರೀತಿಯಿಂದ ನುಡಿದರು.

## ಶ್ರೀ ಮಾಣಿಕ್ಯ ಪ್ರಭುಗಳ ಆವಿರ್ಭಾವ

ಆಗ ಶ್ರೀ ಹನುಮ, ''ಪ್ರಭೂ! ತಾವು ಶ್ರೀ ಪದ್ಮಾವತಿ ವೇಂಕಟೇಶ್ವರ ಅಭಿನ್ನ ಸ್ವರೂಪರೆಂದು ಕೇಳಿದ್ದೇನೆ. ತಮ್ಮ ಆರಾಧನೆ ತಿಳಿದಿರುವ ಶ್ರೀ ವೈಷ್ಣವ ಸ್ವಾಮಿಯನ್ನು ಸಹ ಅನುಗ್ರಹಿಸಿ'' ಎಂದು ಬೇಡಿದನು. ಶ್ರೀಗಳು, ''ನನ್ನನ್ನೇ ನಿರಂತರ ಸ್ಮರಿಸುತ್ತಾ ನನ್ನ ಚೈತನ್ಯದಲ್ಲಿ ಸದಾ ಮನಸ್ಸು ಮಗ್ನಮಾಡಿರುವ ಗೋಪಾಲರಾವೆಂಬ ಮಹಾವಿಷ್ಣುವನ್ನು ನಿನಗೆ ಗುರುವಾಗಿ ಪ್ರಸಾದಿಸುತ್ತೀದ್ದೇನೆ. ಆತ ವೇಂಕಟೇಶ್ವರ ಭಕ್ತನಾಗಿ, ವೆಂಕೂಸಾ ಎಂದು ಕರೆಯಲ್ಪಡುವನು. ಆತನ ಮರಣಾನಂತರ, ಆತನ ಭಸ್ಮ ಒಂದು ಮಡಿಕೆಯಲ್ಲಿ

ಸೇರಿಸಿ, ಭೂಮಿಯಲ್ಲಿ ಸ್ವಲ್ಪ ಕಾಲ ಭದ್ರ ಮಾಡಿರು. ನಾನು ಸೂಚಿಸಿದ ಸಮಯ ತೆಗೆದುನೋಡು, ವೆಂಕಟೇಶ್ವರನ ವಿಗ್ರಹವಿರುವುದು. ಅದಕ್ಕೆ ಅರ್ಚನೆ ಮಾಡಿದರೂ ನಾನು ಪ್ರಸನ್ನನಾಗುವೆನು'' ಎಂದು ಅಭಯವಿತ್ತರು. ಆಗ ಶ್ರೀ **ಹನುಮ, ಮಾತೆ ಜಾನಕಿಯನ್ನುದ್ದೇಶಿಸಿ "ಅಮ್ಮಾ! ತಾವು ಪ್ರೇಮದಿಂದ ಈ ನಿಮ್ಮ ಕಂದನಿಗಿತ್ತ ಮಾಣಿಕ್ಯ ಹಾರವನ್ನು ನಾನು ಒಡೆದು ಶ್ರೀರಾಮ ನಾಮಕ್ಕಾಗಿ ಹುಡುಕಿ, ಇಲ್ಲವೆಂದು ಬಿಸಾಡಿದೆ, ಆ ಮಹಾಪರಾಧಕ್ಕೆ ತಾವು ಕ್ಷಮಿಸಬೇಕು" ಎಂದು ಪ್ರಾರ್ಥಿಸಿದನು. ಅದಕ್ಕೆ ಶ್ರೀ ಚರಣರು, "ದೈವ ಸಾನ್ನಿಧ್ಯದಲ್ಲಿ ಕಾರಣವಿಲ್ಲದೆ ಕಾರ್ಯ ನಡೆಯದು. ಆ ಮಾಣಿಕ್ಯ ಹಾರವನ್ನು ನಾನು ಭದ್ರದಿಂದ ಎತ್ತಿಟ್ಟಿದ್ದೇನೆ. ಆ ಹಾರ ದತ್ತ ಸ್ವರೂಪವೇ! ಸಂದೇಹವೇಕೆ? ನನ್ನಲ್ಲಿನ ಚೈತನ್ಯ ಆತ್ಮಜ್ಯೋತಿಯಿಂದ ಆ ಹಾರಕ್ಕೆ ಪ್ರಾಣ ಕೊಡಲಾಗಿದೆ. ಆ ಮಾಣಿಕ್ಯ ಹಾರವೇ ಗುರು ಸ್ವರೂಪವಾಗಿ ಪ್ರಕಾಶಿಸಲಿ. ಆ ಗುರು ಸ್ವರೂಪ ಮಾಣಿಕ್ಯ ಪ್ರಭುವೆಂದು ಕರೆಯಲ್ಪಡಲಿ." ಮಕ್ಕಳೇ!** ಶ್ರೀ ವಲ್ಲಭರು, ಬದರಿಯಲ್ಲಿ ನಾರಾಯಣ ಸ್ವರೂಪರೇ. ನರನೆಂಬುವ ಆ ಮಹರ್ಷಿ ಭೂಲೋಕದಲ್ಲಿ ಪುನಃ ಅವತರಿಸುವನೆಂದರು. ನಾಮ, ರೂಪ ಶ್ರೀ ಚರಣರಿಗೇ ಗೊತ್ತು!

## ಶ್ರೀಪಾದರು ದ್ರೋಣಗಿರಿ ಪರ್ವತದಲ್ಲಿ ಶಂಬಲ ಗ್ರಾಮದಲ್ಲಿ ನೆಲೆಸುವುದು

ಒಮ್ಮೆ ಪೀಠಿಕಾಪುರದಲ್ಲಿ ಶ್ರೀಪಾದರ ಸೋದರಮಾವ ಆದ ವೆಂಕಾವಧಾನಿಗಳು, ಮಕ್ಕಳಿಗೆ ವೇದ ಕಲಿಸುತ್ತಿದ್ದರು. ಪಕ್ಕದಲ್ಲೇ ಒಂದು ತೆಂಗಿನ ಮರವಿತ್ತು. ಆ ದಿವ್ಯ ಸ್ಥಳಕ್ಕೆ ಒಂದು ವಾನರ ಬಂದು ವೇದ ಕೇಳುತ್ತಿತ್ತು. ಸುತ್ತಮುತ್ತಲಿನ ಹಣ್ಣು ಮತ್ತಿತರೆ ವಸ್ತುಗಳನ್ನು ಹಾಳು ಮಾಡದೇ ವೇದವನ್ನೇ ಶ್ರದ್ಧೆಯಿಂದ ಆಲಿಸುತ್ತಿತ್ತು. ಶ್ರೀಪಾದರು, ''ಮಾವಯ್ಯಾ! ಭಗವಂತನಿಗೆ ಅವತಾರಗಳಿದ್ದ ಹಾಗೆ ತೆಂಗಿನ ಮರಕ್ಕೂ ಅವತಾರಗಳಿರುವೆಯಾ?'' ಎಂದು ಪ್ರಶ್ನಿಸಿದರು. ಅವರು, ''ಕನ್ನಾ! ಇದೆಂತಹ ಪ್ರಶ್ನೆ! ಪ್ರಶ್ನಿಸಲೂ ಅರ್ಥವಿರಬೇಕಲ್ಲವೇ?'' ಎಂದರು. ಶ್ರೀಗಳು, ''ಅದಲ್ಲ ಮಾವಯ್ಯ! ಮರ ಕಾಯಿಯನ್ನು ಕೊಡುತ್ತಿದೆ ಪುನಃ ಕಾಯಿ ಮರವಾಗುತ್ತಿದೆ. ಮರ ಪುನಃ ಕಾಯಿಯನ್ನು ಪ್ರಸಾದಿಸುತ್ತಿದೆ. ಈ ಪ್ರಕ್ರಿಯೆ ನಡೆಯುವುದರಿಂದ ಮರ ಬೀಜ ರೂಪ ತಾಳುವುದು. ಮತ್ತೆ ಕಾಯಿ ವಿಜೃಂಭಿಸಿ, ಮರವಾಗುವುದೂ ನಡೆಯುತ್ತಿದೆ'' ಎಂದು ಶ್ರೀಗಳು ನುಡಿದರು. ಈ ಸಂಭಾಷಣೆ ಮುಗಿಯಿತು. ಇಷ್ಟರೊಳಗೆ ತೆಂಗಿನ ಮರದಿಂದ ಒಂದು ದೊಡ್ಡ ಕಾಯಿ ಬಿತ್ತು. ಅದನ್ನು ಶ್ರೀಪಾದರು ತೆಗೆದುಕೊಂಡು, ಅಲ್ಲಿದ್ದ ವಾನರನ್ನುದ್ದೇಶಿಸಿ ''ನಿನ್ನನ್ನು ಬರೀ ಕೈಲಿ ಕಳುಹಿಸಲೂ ಮನಸೊಪ್ಪುತ್ತಿಲ್ಲ. ನನ್ನ ಕೈಯಿಂದ ಪ್ರಸಾದವಾಗಿ ಇದನ್ನು ಕೊಡುತ್ತಿದ್ದೇನೆ. ನನ್ನ ಕೈಯಿಂದ ಮತ್ತೊಂದು ಕಾಯಿ ನೀನು ಕೇಳಬಾರದು. ಒಪ್ಪಿಗೆ ಆದರೇ ಇದನ್ನು ಪಡೆಯಬಹುದು'' ಎಂದರು. ಆ ವಾನರ ಸಮ್ಮತಿ ಸೂಚಕವಾಗಿ ತಲೆ ಆಡಿಸಿತು. ಆಗ ಶ್ರೀಪಾದರು ಆ ಕಾಯಿಯನ್ನು ವಾನರನಿಗೆ ಕೊಟ್ಟು ಅದರ ಮೈಯೆಲ್ಲಾ ಅಭಿಮಾನದಿಂದ ಸವರಿದರು. ಅದು ಆನಂದ ಪರವಶಗೊಂಡು ಹೊರಟಿತು. ಇಷ್ಟಕ್ಕೂ ಆ ವಾನರ ಯಾರೋ, ಆ ಕಾಯಿಯನ್ನು ಏಕೆ ಕೊಟ್ಟರೋ, ಮತ್ತೊಂದು ಕಾಯಿ ಕೇಳಕೂಡದೆಂದೇಕೆ ನುಡಿದರೋ, ಅಪ್ರಯತ್ನವಾಗಿ ಅದೇ ಸಮಯ ಆ ಕಾಯಿ ಏಕೆ ಬಿದ್ದಿತೋ, ಯಾರಿಗೆ ಗೊತ್ತು! ಶ್ರೀಗಳ ಲೀಲೆಗಳು ಚಿತ್ರವಿಚಿತ್ರ, ಊಹಾತೀತ!

ಶ್ರೀ ಮಹಾಪ್ರಭುಗಳು ದ್ರೋಣಗಿರಿ ಎಂದು ಕರೆಯಲ್ಪಡುವ ಸಂಜೀವಿನಿ ಪರ್ವತದ ಬಳಿ ಹೋದರು. ಕೆಲವು ದಿನಗಳು ಅಲ್ಲಿನ ಋಷಿ ಗಣಗಳ ಜೊತೆ ಆನಂದವಾಗಿ ಕಳೆದರು. ಅಲ್ಲಿನ ಮಹಾಯೋಗಿಗಳಿಗೆ ಏನು ಅನುಗ್ರಹಿಸಿದರೋ ಯಾರಿಗೆ ಗೊತ್ತು. ಅಲ್ಲಿಂದ ಕಲ್ಕಿ ಪ್ರಭು ಜನುಮ ತಾಳಲಿರುವ ಶಂಬಲ ಗ್ರಾಮ ತಲುಪಿದರು. ಅದು ಮಹಾ ಮಹಾ ಯೋಗಿಗಳಿಗೇ ದರ್ಶಿಸಲೂ

ಅಸಾಧ್ಯವಾದ ಪ್ರದೇಶ. ಹಿಮಾಲಯಗಳಲ್ಲಿ ಸಾವಿರಾರು ವರುಷಗಳಿಂದ ತಪಸ್ಸು ಮಾಡುತ್ತಿರುವ ಮಹಾಪುರುಷರು ಅಲ್ಲಿರುವರು. **ಶಂಬಲ ಗ್ರಾಮದಲ್ಲಿ ಅವರು ಸ್ಫಟಿಕ ಪರ್ವತದ ಶುದ್ಧ ಜಲ ಸೇವಿಸಿದರು. ಆದ್ದರಿಂದ ಅವರ ವಯಸ್ಸು ನಿಂತು ಹೋಗಿರುವುದು! ಶರೀರ ಬದಲಾವಣೆಗಳಿಲ್ಲದೇ, ಅವರೆಲ್ಲಾ 16 ವರುಷದ ಬಾಲಕರಂತೆಯೇ ಇದ್ದರು.**

## ಶ್ರೀಪಾದರು ಗೋಕರ್ಣ ಕ್ಷೇತ್ರದಿಂದ ದಿವ್ಯ ಲೋಕಕ್ಕೆ ತರಳುವುದು

ತದನಂತರ ಅವರು ಅನೇಕ ದಿವ್ಯ ಸ್ಥಳಗಳನ್ನು ಸಂಚರಿಸುತ್ತಾ ಭಕ್ತರನ್ನು, ಮಹರ್ಷಿಗಳನ್ನೂ ಅನುಗ್ರಹಿಸುತ್ತಾ ಗೋಕರ್ಣ ಕ್ಷೇತ್ರ ತಲುಪಿದರು. ಅಲ್ಲಿ ಶ್ರೀಗಳು 3 ವರುಷವಿದ್ದರು. ಆ ಮಹಾಕ್ಷೇತ್ರದಲ್ಲಿ ಅವರು ದಿವ್ಯ ಲೀಲೆಗಳನ್ನು ತೋರಿದರು. ಅವು ಲೆಕ್ಕಕ್ಕೆ ಸಿಗದಂತವೇ! ಅವರು ಕ್ಷಣ ಕ್ಷಣ ಲೀಲಾವಿನೋದಿ. ಅಲ್ಲಿಂದ ಅವರು ಶ್ರೀಶೈಲ ತಲುಪಿದರು. **ಶ್ರೀ ಬಾನಪಾರ್ಯರು ಆ ಶ್ರೀಶೈಲದಲ್ಲೇ, ಹಿಂದೆ, ಮಹಾಯಜ್ಞವೊಂದನ್ನು ಮಾಡಿ, ಸೂರ್ಯ ಮಂಡಲದಿಂದ ಮಲ್ಲಿಕಾರ್ಜುನ ಲಿಂಗದೊಳಕ್ಕೆ ಶಕ್ತಿಪಾತ ಮಾಡಿದ್ದ ಕಾರಣ ಶ್ರೀಪಾದ ಶ್ರೀವಲ್ಲಭರ ಅವತಾರ ಆವಿಷ್ಕಾರವಾಯಿತು.** ಅಲ್ಲಿಂದ ಅವರು ಯೋಗ ಮಾರ್ಗದಲ್ಲಿ ಶರೀರದಿಂದಲೇ ಮಹಾಗ್ನಿಗೋಳ ಸದೃಶ್ಯರಾಗಿ ಸೂರ್ಯ ಮಂಡಲಕ್ಕೆ ತಲುಪಿದರು. ಅಲ್ಲಿಂದ ಧೃವ ನಕ್ಷತ್ರದೊಳಕ್ಕೆ, ನಂತರ ಸಪ್ತರ್ಷಿ ಮಂಡಲದೊಳಗೆ ಮತ್ತು ಆರ್ದ್ರಾ ನಕ್ಷತ್ರಕ್ಕೆ ತೆರಳಿ 4 ತಿಂಗಳ ನಂತರ ಶ್ರೀಶೈಲಕ್ಕೆ ಹಿಂತಿರುಗಿದರು. ಆರ್ದ್ರಾ ನಕ್ಷತ್ರದಲ್ಲಿನ ಮಹರ್ಷಿಗಳ ಕೋರಿಕೆಯಂತೇ ದಿವ್ಯಜ್ಞಾನ ಯೋಗವೊಂದನ್ನು, ಅತ್ಯಂತ ನೂತನ ಯೋಗವೊಂದನ್ನು ಬೋಧಿಸಲು ಶ್ರೀಶೈಲದ ಸಿದ್ಧ ಪುರುಷರನ್ನು ಸಮಾವೇಶ ಗೊಳಿಸಿ, ಅಲ್ಲಿ ಬೋಧಿಸಿದರು. ಬೋಧನೆಯ ನಂತರ, ಆ ಸಿದ್ಧ ಪುರುಷರನ್ನು ಪುನಃ ಆರ್ದ್ರಾ ನಕ್ಷತ್ರದೊಳಕ್ಕೆ ಕಳುಹಿಸಿದರು. ಅವರ ಕಾರ್ಯಕ್ರಮ ತಿಳಿಯಲಾರದ್ದು. ಶ್ರೀಗಳು ಅನೇಕ ಕೋಟಿ ಬ್ರಹ್ಮಾಂಡಗಳಿಗೆ ಏಕೈಕ ಪ್ರಭುಗಳು. ಸ್ವಲ್ಪ ಸಮಯದ ನಂತರ ಅವರು ಕುರಂಗಡ್ಡೆ ಎಂಬ ದಿವ್ಯ ಸ್ಥಳವನ್ನು ಸೇರಿದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 46

# ಶ್ರೀ ಪೀಠಿಕಾಪುರದಿಂದ ಪಂಚದೇವ್ ಪಹಾಡ್‌ಗೆ ವಿಚಿತ್ರವಾಗಿ ಜನನೀ ಜನಕ ಮತ್ತು ಆಶ್ರಿತರನ್ನ ಬರಿಸುವುದು

### ಶ್ರೀ ಧನಗುಪ್ತರ ಮನೆಗೆ ಹೋಗುವುದು

### ಶ್ರೀಪಾದುಕೆಗಳ ಮೇಲೆ ಮಂತ್ರಾಕ್ಷತೆಯ ವೃದ್ಧಿ, ಪಾದುಕೆಗಳನ್ನು ಭಾಸ್ಕರ ಪಂಡಿತರಿಗೆ ತರುವುದು

ನಾವು ಶ್ರೀ ಭಾಸ್ಕರ ಪಂಡಿತರಿಂದ ಅಪ್ಪಣೆ ಪಡೆದು ಹೊರಡಲೂ ಸಿದ್ಧರಾದೆವು. ಅವರು ಸ್ವಲ್ಪ ಸಮಯ ಧ್ಯಾನಸ್ಥರಾದರು. ನಾವು ಭಾಸ್ಕರ ಪಂಡಿತರಿಗೆ ಶ್ರೀ ಪಾದುಕೆಗಳನ್ನು ಅರ್ಪಿಸಿದ್ದು, ಅವರದನ್ನು ಪೂಜಾಗೃಹದಲ್ಲಿಟ್ಟಿದ್ದರು. **ಆ ಪಾದುಕೆಗಳ ಮೇಲೆ ಆಶ್ಚರ್ಯವಾಗಿ ಮಂತ್ರಾಕ್ಷತೆ ವೃದ್ಧಿ ಹೊಂದಿದ್ದವು! ಪಂಡಿತರು, "ಸ್ವಾಮಿಗಳಾ! ಶ್ರೀಪಾದರ ಲೀಲೆಗಳು ಅಗಮ್ಯಗೋಚರ. ಶ್ರೀ ಪದ್ಮಾವತಿ ಅಮ್ಮನ ಜನುಮ ನಕ್ಷತ್ರ ಮೃಗಶಿರ. ಶ್ರೀ ವೇಂಕಟೇಶ್ವರದ್ದು ಶ್ರವಣ, ಉತ್ತರ ಫಲ್ಗುಣೀ ನಕ್ಷತ್ರ ಅಮ್ಮನವರಿಗೆ ಮಿತ್ರ ತಾರೆಯಾಗಿದೆ. ವೇಂಕಟೇಶ್ವರ ಸ್ವಾಮಿಗೆ ಪರಮ ಮಿತ್ರ ತಾರೆಯಾಗಿದೆ. ಆದ್ದರಿಂದ ಅವರ ದಿವ್ಯ ಕಲ್ಯಾಣ ಉತ್ತರ ಫಲ್ಗುಣೀ ನಕ್ಷತ್ರ. ಮಕ್ಕಳಾ! ಇಂದು ಸಹಾ ಅದೇ ನಕ್ಷತ್ರ! ಶ್ರೀಪಾದುಕೆಗಳ ಮೇಲೆ ಮಂತ್ರಾಕ್ಷತೆ ಉದ್ಭವಿಸಿರುವುದು, ಶ್ರೀಪಾದ ಶ್ರೀವಲ್ಲಭರು, ಸಾಕ್ಷಾತ್ ಶ್ರೀ ಪದ್ಮಾವತೀ ವೇಂಕಟೇಶ್ವರ ಸ್ವರೂಪವೇ ಎಂದು ತಿಳಿಸಲೂ ಅವರು ಹೀಗೆ ಮಾಡಿದ ಹಾಗಿದೆ.** ನೀವೂ ಸ್ವಲ್ಪ ಮಂತ್ರಾಕ್ಷತೆ ಇಟ್ಟುಕೊಳ್ಳಿ, ಶುಭವಾಗಲಿ. ಶ್ರೀ ಚರಣರ ಕೃಪಾಕಟಾಕ್ಷ ಯಾವಾಗಲೂ ನಿಮ್ಮನ್ನು ಕಾಯುತ್ತಿರಲಿ. ಹೋಗಿ ಬನ್ನಿ'' ಎಂದು ಆಶೀರ್ವದಿಸಿದರು.

### ಶಂಕರ ಭಟ್ಟು ಮತ್ತು ಧರ್ಮಗುಪ್ತರು ದೇಶ ಪರ್ಯಟನೆಯಲ್ಲಿ ಕಂಡ ಕ್ಷೇತ್ರಗಳು

ಎಂತಹ ಮಹದ್ಭಾಗ್ಯ! ನಮ್ಮ ಪ್ರತಿ ಒಂದು ಚಲನೆ, ಆಲೋಚನೆ, ಗಮನ ಮತ್ತು ಕಾರ್ಯಗಳನ್ನು ಅವರು ಗಮನಿಸುತ್ತಿದ್ದಂತೆ ಅನಿಸಿತು. ನಾವು ಸ್ವಲ್ಪ ದೂರ ಒಂದು ಮದುವೆ ಗುಂಪಿನ ಎತ್ತಿನ ಗಾಡಿಯಲ್ಲಿ ನಂತರ ಒಂದು ವೈಶ್ಯ ಪ್ರಮುಖರ ಕುದುರೇ ಗಾಡಿಯಲ್ಲೂ ಪಯಣಿಸಿದೆವು. ಅವರು ಕೊಂಡವೀಡುಗೆ ಹೋಗುತ್ತಿದ್ದರು. ನಮ್ಮ ವೈಶ್ಯ ಪ್ರಮುಖರು, ''ಮಿತ್ರರೇ! ಇಂದು ನಮಗೆ ಬಹಳ ಶುಭದಿನ. ಎತ್ತಿನಗಾಡಿಯಲ್ಲಿ ಪ್ರಯಾಣಿಸುವ ಮದುವೆಯ ಗುಂಪಿಗೆ ಶ್ರೀಪಾದರ ಮಂತ್ರಾಕ್ಷತೆ ಕೊಡಲಾಯಿತು. ನಂತರ ನಮಗೂ ಕೊಟ್ಟರು. ನಾನು ಹಿಂದೆ ಒಮ್ಮೆ ವ್ಯಾಪಾರ ಕಾರ್ಯದಲ್ಲಿ ಪೀಠಾಪುರಕ್ಕೆ ಹೋಗಿದ್ದೆನು. ಆಗ ಶ್ರೀಪಾದರ ದರ್ಶನ ವೆಂಕಟಪ್ಪಯ್ಯ ಶ್ರೇಷ್ಠಿಗಳ ಮನೆಯಲ್ಲಿ ಆಯಿತು. ಆಗ ಶ್ರೀಗಳು ಪ್ರೇಮದಿಂದ, ''ನಿನ್ನ ಮಗನ ಮದುವೆಯ ಸಂದರ್ಭ ನಾನು ನನ್ನ ಆಶೀರ್ವಾದದಿಂದ ಮಂತ್ರಾಕ್ಷತೆ ಕಳುಹಿಸುವೆನು. ನಿನಗೆ ಆ ಮಂತ್ರಾಕ್ಷತೆ ತಲುಪಿಸುವ ಬಡ ಬ್ರಾಹ್ಮಣಿಗೆ 11 ವರಹಗಳನ್ನು ದಕ್ಷಿಣೆಯಾಗಿ ಕೊಡು. ಆತನ ಜೊತೆ ಒಬ್ಬ ವೈಶ್ಯ ಪ್ರಮುಖನೂ ಬರುವನು. ಆತನ ಮಗನಿಗೆ ನಿನ್ನ ಮಗಳನ್ನಿತ್ತು ವಿವಾಹ ಮಾಡುವುದಾಗಿ ಮಾತು ಕೊಟ್ಟು, 100 ವರಹಗಳನ್ನಿತ್ತು ಕೊಂಡವೀಡುನಲ್ಲಿ 'ನಿಶ್ಚಯ ತಾಂಬೂಲ' ಮಾಡಿಕೊಳ್ಳುವುದು'' ಎಂದು

ನನಗೆ ಹೇಳಿದ್ದರು.

ನಮ್ಮಿಬ್ಬರ ಹತ್ತಿರವೂ ಹಣವಿರಲಿಲ್ಲ. ನಾವು ಕೊಂಡವೀಡು ಸೇರಿದೆವು. ಅಲ್ಲಿ ಧನಗುಪ್ತರ ಮಗನ ಮದುವೆ ವೈಭವವಾಗಿ ನಡೆಯಿತು. ನನಗೆ 11 ವರಹಗಳು ಧನಗುಪ್ತರು ನೀಡಿದರು. ಕನ್ಯಾದಾತರಿಗೆ ಧನಗುಪ್ತರು ದೂರದ ನೆಂಟರು. ಧರ್ಮಗುಪ್ತರ ಕುಟುಂಬವನ್ನು ಮದುವೆಗೆ ಕರೆಯಲಾಯಿತು. ಧರ್ಮಗುಪ್ತರು ಎಲ್ಲಿರುವುದೂ, ಯಾವಾಗ ಬರುವುದೂ ಯಾರಿಗೂ ತಿಳಿಯದು.

ಧನಗುಪ್ತರ ಬೀಗರ ಮನೆಗೆ ಧರ್ಮಗುಪ್ತರ ಕುಟುಂಬದವರೂ ಬಂದರು. ಧರ್ಮಗುಪ್ತರ ಮಗ ಸಹಾ ಬಂದನು. ಕೊಂಡವೀಡುನಲ್ಲಿ ಧರ್ಮಗುಪ್ತರ ಮಗನಿಗೂ, ಧನಗುಪ್ತರ ಮಗಳಿಗೂ ಮದುವೆ ಮಾಡಲೂ ನಿಶ್ಚಯ ತಾಂಬೂಲ ಬದಲಾಯಿಸಿಕೊಳ್ಳಲಾಯಿತು. ಅಲ್ಲಿಯವರೆಗೂ ಹಣವಿಲ್ಲದವನಾಗಿದ್ದ ನಾನು 11 ವರಹದ ಮಾಲೀಕನಾದೆನು. ಹಾಗೆಯೇ ಧರ್ಮಗುಪ್ತರಿಗೂ 100 ವರಹ ಲಭಿಸಿತು. ಆಹಾ! ಎಂತಹ ವಿಚಿತ್ರ ಘಟನೆ!

ಧರ್ಮಗುಪ್ತರಿಗೆ ಅಲ್ಲಿ ವಜ್ರದ ವ್ಯಾಪಾರಕ್ಕೆ ಸಂಬಂಧಿಸಿದ ವರ್ತಕ ಪ್ರಮುಖರೊಡನೆ ಪರಿಚಯವಾಯಿತು. ಅದಕ್ಕೆ ಸಂಬಂಧಿಸಿದ ಮಾತುಕತೆಗಾಗಿ, ಅಲ್ಲೇ ಸ್ವಲ್ಪ ಕಾಲ ಇರಲೂ ಬಯಸಿದರು. ಕೊಂಡವೀಡು ಪ್ರಾಂತದಲ್ಲಿ ಶ್ರೀದತ್ತ ಪ್ರಭುಗಳು ಯಥೇಚ್ಚವಾಗಿ ಸುತ್ತಾಡುತ್ತಿರುವುರೆಂದು ಹೇಳಿಕೆ. ಅಲ್ಲಿ ಲಂಬಿಕಾ ಯೋಗಿಗಳು, ಶಿವ ಯೋಗಿಗಳು, ಸ್ವರ್ಣ ವಿದ್ಯೆಬಲ್ಲವರೂ ಸಹಾ ಇರುವವರಂತೆ.

ನನ್ನನ್ನು ಮಾತ್ರ ಕುದುರೆ ಗಾಡಿಯಲ್ಲಿ ವಿಜಯವಾಡಕ್ಕೆ ಸೇರಿಸಲು ನಿಶ್ಚಯವಾಯಿತು. ನಾನು ಅಲ್ಲಿ ತಲುಪಲೂ, ಧನಗುಪ್ತರ ನೆಂಟರ ಮನೆಯಲ್ಲಿ ನನಗೆ ತಂಗಲೂ ಏರ್ಪಾಡಾಯಿತು. ಈ ಮಹಾಕ್ಷೇತ್ರದಲ್ಲಿ ಕೃಷ್ಣಾನದಿ ಇರುವುದು. ಶ್ರೀ ಕನಕದುರ್ಗ ಮಲ್ಲೇಶ್ವರಾಲಯವೂ ಉಂಟು. ಕೃಷ್ಣಾನದಿ ಸ್ನಾನ, ಆಲಯ ದರ್ಶನ ಮಾಡಿದೆನು. ಒಳಗೆ ಒಬ್ಬ ವೃದ್ಧ ಸನ್ಯಾಸಿ ಪರಿಚಯವಾದರು. ಆತ ಎಷ್ಟೊ ದಿನಗಳಿಂದ ಪೀಠಿಕಾಪುರಕ್ಕೆ ಬಂದು ಶ್ರೀಪಾದರ ದರ್ಶನ ಮಾಡಿಕೊಳ್ಳುವ ಆತುರದಲ್ಲಿದ್ದನು.

ನಾವು ಇಬ್ಬರೂ ವಿಜಯವಾಡದಿಂದ ಹೊರಟು ಕೆಲ ದಿನಗಳು ಪಯಣ ಮಾಡಿದ ನಂತರ ರಾಣ್ಮಹೇಂದ್ರವರ ಸೇರಿದೆವು. ಅಲ್ಲಿ ಗೋದಾವರಿ ಸ್ನಾನದ ನಂತರ ಮಾರ್ಕಂಡೇಶ್ವರನನ್ನು, ಕೋಟಿಲಿಂಗೇಶ್ವರನನ್ನೂ ದರ್ಶಿಸಿದೆವು. ಪ್ರಯಾಣ ಸುಖಕರವಾಗಿ ನಡೆಯುತಿತ್ತು. ನಾನು ವೃದ್ಧ ಸನ್ಯಾಸಿಗೆ, ''ನಾವು ಕೆಲವೇ ದಿನಗಳಲ್ಲಿ ಪೀಠಿಕಾಪುರ ಸೇರಲಿದ್ದೇವೆ. ಅಲ್ಲಿ ಶ್ರೀಪಾದರ ಜನುಮ ಗೃಹ ದರ್ಶಿಸಬಲ್ಲೆವು. ವೆಂಕಟಪ್ಪಯ್ಯ ಶ್ರೇಷ್ಠಿ ಮತ್ತು ನರಸಿಂಹ ವರ್ಮರನ್ನೂ ಭೇಟಿಯಾಗಬಲ್ಲೆವು. ಬಾಪನಾರ್ಯರ ಆಶೀರ್ವಾದ ಪಡೆಯುವೆವು. ಜನನೀಜನಕರಾದ ಸುಮತೀ ಮಹಾರಾಣಿ, ಅಪ್ಪಲರಾಜ ಶರ್ಮರನ್ನೂ ಭೇಟಿಯಾಗುವೆವು. ನಮಗೆ ಮಹಾ ಸೌಭಾಗ್ಯದ ಕಾಲ ಹತ್ತಿರವಾಗಿದೆ. ಶುಭಗಳು ಸಾಲಿನ ಸಮಯ ಇದು. ನಂತರ ನಾವು ಪೀಠಿಕಾಪುರದಿಂದ ಕುರಂಗಡ್ಡೆ ತಲುಪಿ, ಶ್ರೀಪಾದ ಶ್ರೀವಲ್ಲಭರನ್ನು ದರ್ಶಿಸುವೆವು'' ಎಂದು ಹೇಳಿದೆನು.

ಸನ್ಯಾಸಿ ಮಹದಾನಂದದಿಂದಿದ್ದನು. ಮಾರ್ಗ ಮಧ್ಯದಲ್ಲಿನ ದೇವಸ್ಥಾನಗಳನ್ನು ದರ್ಶಿಸುತ್ತಿದ್ದೆವು. ಕೆಲವು ದಿನಗಳಲ್ಲಿ ಪೀಠಿಕಾಪುರ ಸೇರಿಕೊಂಡೆವು. ಶ್ರೀ ಬಾಪನಾರ್ಯರ ಮನೆಯಲ್ಲಿ ನಮಗೆ ಊಟ ಮತ್ತು ತಂಗಲು ಏರ್ಪಾಟು ಮಾಡಲಾಯಿತು. ಶ್ರೀಪಾದರ ಬಾಲ್ಯಲೀಲೆಗಳನ್ನಷ್ಟೂ ಕೇಳಿದೆವು. ಪೀಠಿಕಾಪುರ ಬ್ರಾಹ್ಮಣ್ಯ ಸಹಾ ಶ್ರೀಗಳ ತತ್ತ್ವ ಸ್ವಲ್ಪ ಸ್ವಲ್ಪ

ಅರ್ಥಮಾಡಿಕೊಳ್ಳುತ್ತಿದ್ದಾರೆಂದು ತಿಳಿದುಕೊಂಡೆವು. ಶ್ರೀಗಳ ಲೀಲೆಗಳದೆಷ್ಟೆಂದು ನಾನು ವರ್ಣಿಸಲಿ? ಸಾವಿರ ನಾಲಿಗೆಯ ಆ ಆದಿಶೇಷನಿಗೇ ಅಸಾಧ್ಯ. 'ಸ್ಥಾಲೀಪುಲಾಕ' ನ್ಯಾಯಕ್ಕೆ, ಕೆಲ ಲೀಲೆಗಳನ್ನೇ ಗ್ರಂಥಕ್ಕೆ ತೆಗೆದುಕೊಂಡಿದ್ದೇನೆ.

## ಶ್ರೀಪಾದರ ಆಶ್ರಿತ ಬಂಧುಗಳು - ಕುರಂಗಡ್ಡೆ ಪ್ರಯಾಣ

ಶ್ರೀ ನರಸಿಂಹ ವರ್ಮರು, ಅವರ ಧರ್ಮಪತ್ನಿ ಅಮ್ಮಾಜಮ್ಮನವರು ಕುರುಂಗಡ್ಡೆಗೆ ಹೋಗಿ ಶ್ರೀಪಾದರ ದರ್ಶನ ಮಾಡಬೇಕೆಂದು ನಿಂತರು. ವೆಂಕಟಪ್ಪಯ್ಯ ಶ್ರೇಷ್ಠಿ, ಬಾಪನಾರ್ಯರು, ಅಪ್ಪಲರಾಜ ಶರ್ಮ ಸಹಾ ಜತೆ ಸೇರಿದರು. ಸುಮತಿ ಮಹಾರಾಣಿಗೆ ಶ್ರೀಗಳನ್ನು ಕಾಣುವ ಆಸೆಯೇ ಅಲ್ಲದೇ ಅವರ ಯೋಗಕ್ಷೇಮ ಬಗ್ಗೆ ಹೆದರಿ, ನಮ್ಮನ್ನು ಪದೇ ಪದೇ ಪ್ರಶ್ನಿಸಿದರು.

ಕುರುಂಗಡ್ಡೆಗೆ ಪ್ರಯಾಣ ನಿರ್ಧಾರವಾಯಿತು. ಒಟ್ಟು 18 ಕುದುರೇ ಗಾಡಿಗಳು ಸಿದ್ಧವಾದವು! ಪ್ರಯಾಣ ಅನೇಕ ದಿನಗಳು ಹಿಡುಸುವದಾದರೂ, ಆ ದರ್ಶನ ಭಾಗ್ಯದ ದಿನ ನೆನೆಯುತ್ತಾ ಆತುರದಿಂದಿದ್ದರು. ಸುಮತಿ ಮಹಾರಾಣಿಗೆ ಕಣ್ಣೀರು ಸುರಿಯುತ್ತಿತ್ತು. ಎಲ್ಲರೂ ಅಭಯವಚನ ನೀಡುತ್ತಿದ್ದರು.

## ಜನನೀಜನಕರಿಗೂ, ಆಜ್ಜಂದಿರಿಗೂ ಶ್ರೀಪಾದರ ದರ್ಶನ

ಸರ್ವಾಂತರ್ಯಾಮಿಯೂ, ಮಾಯಾನಾಟಕ ಸೂತ್ರಧಾರಿಯಾದ ಶ್ರೀಪಾದ ಮಹಾಪ್ರಭುಗಳು ಇಲ್ಲಿನ ಕಥೆ, ವ್ಯಥೆಗಳನ್ನು ಗಮನಿಸುತ್ತಲೇ ಇದ್ದರು. ಇದ್ದಕ್ಕಿದ್ದಂತೇ ಆ 18 ಕುದುರೇ ಗಾಡಿಗಳಲ್ಲಿದ್ದವರಿಗೆಲ್ಲರಿಗೂ ಯಾವುದೊ ಮತ್ತು ಬಂದ ಹಾಗೆ ತೂಗುತ್ತಿದ್ದರು. ಬಂಡಿಗಳು ಆಗಸದಲ್ಲಿ ಓಡುತ್ತಿದ್ದ ಹಾಗಿದ್ದವು!

ನಾವು ಪೀಠಿಕಾಪುರ ಬೆಳಗಿನ ಝಾವ ಬಿಟ್ಟಿದ್ದೆವು. ಅಪರಾಹ್ನದ ಸಮಯ. ಕುದುರೇ ಓಡಿಸುವವರು, ದಾರಿ ತಪ್ಪಿ ಬಂದಿದ್ದೇವೆಂದೂ, ಆ ಪ್ರಾಂತ ಅಪರಿಚಿತವಾದದ್ದೆಂದೂ ತಿಳಿಸಿದರು.

ನಾನೂ ಕೆಳಗೆ ಇಳಿದು ಬಂದು, ಆ ಪ್ರಾಂತವನ್ನು ಪರಿಶೀಲಿಸುತ್ತಾ, ಭೇಟಿಯಾದ ದಾರಿ ಹೋಕರನ್ನು ಪ್ರಶ್ನಿಸಲೂ, "ಸ್ವಾಮಿ! ಇದು ಪಂಚದೇವ್ ಪಹಾಡ್!" ಎಂದರು. ಕುರುಂಗಡ್ಡೆ ತಲುಪಿದ ಹಾಗೆಯೇ! ಶ್ರೀಪಾದ ಶ್ರೀವಲ್ಲಭನನ್ನು ಕಾಣಬಹುದು! ಅಂದು ಗುರುವಾರವೂ ಆದ ಕಾರಣ ನಾವೆಲ್ಲಾ ಶ್ರೀಗಳ ದರ್ಶನಕ್ಕೆ ಸೇರಿದೆವು. ಆ ಮಹಾಪ್ರಭುಗಳು ಎಲ್ಲರನ್ನೂ ಪ್ರೇಮದಿಂದ ಮಾತನಾಡಿಸುತ್ತಾ ಅವರವರ ವ್ಯಾಧಿಗಳನ್ನೂ ನಿರ್ಮೂಲನೆ ಮಾಡುತ್ತಿದ್ದರು! ಎಲ್ಲರಿಗೂ ಸಮೃದ್ಧಿ ಊಟವೂ ಸಿಗಲು, ಇದು ಕನಸೋ ನನಸೋ ಎನ್ನುವ ಭ್ರಾಂತಿಗೆ ಒಳಗೊಂಡಿದ್ದೆವು. ಎಲ್ಲರೂ ಶ್ರೀಗಳ ದರ್ಬಾರು ಪ್ರವೇಶಿಸಿದರು. ಇಷ್ಟು ಸ್ವಲ್ಪ ಸಮಯದಲ್ಲೇ ಪಂಚದೇವ್ ಪಹಾಡ್ ಸೇರಿದ್ದು, ಅದು ಹೇಗೆ ಸಾಧ್ಯವಾಯಿತೋ ತಿಳಿಯಲಿಲ್ಲ.

ಇದು ಕನಸಲ್ಲ ನಿಜವೇ ಎಂದು ಖರಾರಾಯಿತು. ಶ್ರೀಗಳನ್ನು ಅಪ್ಪಿಕೊಂಡು ತಾಯಿ ಸುಮತಿ ಮಹಾರಾಣಿ ಅತ್ತುಬಿಟ್ಟಳು. ಶ್ರೀಗಳು **"ಅಮ್ಮಾ! ನಿರ್ಗುಣವಾಗಿ, ನಿರಾಕಾರಿಯಾದ ... ನ್ನು ತನ್ನ ಕಂದನಾಗಿ ಪಡೆದ ಮಹಾಭಾಗ್ಯಶಾಲಿ ನೀನು. ಅನಸೂಯ ಮಾತೆಗೆ ಸರಿದೂಗುವ ಪತಿವ್ರತಾ ಶಿರೋ... ನು ಕಣ್ಣೀರಿತ್ತರೇ ಈ ಧರಣಿ ಧಾನ್ಯ ತರುವಳಾ? ಎಂದು ಪ್ರಶ್ನಿಸಿ, ಹೆತ್ತ ತಾಯಿಯ ಕಣ್ಣೀರು ಅವರ ದಿವ್ಯ ಹಸ್ತಗಳಿ... "**



## ಅಧ್ಯಾಯ - 47

# ಪಂಚದೇವ್ ಪಹಾಡ್ ದರ್ಬಾರ್ ರೂಪುಗೊಳ್ಳುವುದು ಆತ್ಮೀಯರನ್ನು ವಿಚಿತ್ರವಾಗಿಯೇ ಪೀಠಾಪುರಕ್ಕೆ ಸೇರಿಸುವುದು

### ಶ್ರೀಪಾದರು ಎಲ್ಲರಿಗೂ ಧರ್ಮಕರ್ಮ ಮೇರಿಗೆ ಅನುಗ್ರಹಿಸುವರು

ಶ್ರೀಪಾದ ಶ್ರೀವಲ್ಲಭರ ದರ್ಬಾರಿನಿಂದ ಊಟ ಸಂತೃಪ್ತಿಯಾಗಿ ಇಡಲಾಗುತ್ತಿತ್ತು. ವಿಚಿತ್ರವಾಗಿ ಅನ್ನದ ರಾಶಿ ಖರ್ಚುಮಾಡಿ, ಎಷ್ಟು ಎತ್ತಿಡುತ್ತಿದ್ದರೂ, ರಾಶಿಯಾಗೆ ಉಳಿಯುತ್ತಿತ್ತು. ಉಳಿದ ಅನ್ನ, ಶಾಕಪಾಕಗಳನ್ನು ಶ್ರೀಗಳು ಕೃಷ್ಣಾನದಿಗೆ ಅರ್ಪಿಸುತ್ತಿದ್ದರು. ಹಾಗೆ ಜಲಚರಗಳಿಗೂ ಸಹಾ ಶ್ರೀಪಾದರ ಪ್ರಸಾದ ಲಭಿಸುತ್ತಿತ್ತು!

ಶ್ರೀಪಾದರು ಬಾಪನಾರ್ಯರನ್ನುದ್ದೇಶಿಸಿ, ''ತಾತ! ಶ್ರೀಶೈಲದಲ್ಲಿ ಸೂರ್ಯ ಮಂಡಲದಿಂದ ಶಕ್ತಿಪಾತ ಮಾಡಿದ್ದೀರ. ನನ್ನ ಅವತಾರವನ್ನು ಬಯಸಿ, ದೀನವಾಗಿ ಭರದ್ವಾಜರ ಆಧ್ವರ್ಯದಲ್ಲಿ ಮಹರ್ಷಿಗಳೆಲ್ಲರೂ, ತ್ರೇತಾಯುಗದಲ್ಲಿ ಪೀಠಿಕಾಪುರದಲ್ಲಿ ಸಾವಿತ್ರಕಾಠಕ ಚಯನ ಮಾಡಿದರು. ಕೊಟ್ಟ ಮಾತಿಗಾಗಿ ನಾನು ಅವತರಿಸಿದೆ. ಬ್ರಹ್ಮಸ್ವರೂಪ ಮಾತಲ್ಲಿ ತಿಳಿಸಲಾರದ, ಮನಸ್ಸಿನಿಂದ ಊಹಿಸಲಾರದ ಮತ್ತು ದತ್ತ ಪ್ರಭುಗಳಿಗೆ ಅಸಾಧ್ಯವಾದುದ್ದೇ ಇಲ್ಲವೆಂದೂ ದೃಢವಾಗಿ ಹೇಳುತ್ತಲೇ ಬಂದಿರುವೆ. ದೇಶ ಕಾಲಗಳನ್ನು ಉದ್ದವೂ ಮಾಡಬಲ್ಲೆ, ಸಂಕುಚಿತ ಸಹಾ ಮಾಡಬಲ್ಲೆನು. ನನ್ನ ಇಚ್ಛೆಗೆ ಎದುರಿಲ್ಲ. ನನಗೆ ಬೇಕೆನ್ನಿಸಿದರೇ ಪೃಥ್ವಿ ಆಗಸ ಒಂದಾಗುವುದು. ಅಂತರಿಕ್ಷದ ಖಗೋಳಗಳೆಲ್ಲಾ ನನ್ನ ಕೈಚೆಂಡುಗಳೇ. **ನೀನು ಲಾಭಾದ ಮಹರ್ಷಿ, ನಂದ, ಭಾಸ್ಕರಾಚಾರ್ಯನಾಗಿ ಅವತರಿಸಿದಾಗ ನಿನ್ನನ್ನು ಅನುಗ್ರಹಿಸಿದೆ. ಇಂದು ಬಾಪನ್ನಾವಧಾನಿ ನೀನಾದಾಗ ನಾನು ಶ್ರೀಪಾದನಾದೆ.** ಆಶ್ಚರ್ಯವೇನೂ ಪಡಬೇಕಾಗಿ ಇಲ್ಲ'' ಎಂದು ಹೇಳಿದರು.

ಆಗ ವೆಂಕಟಪ್ಪಯ್ಯ ಶ್ರೇಷ್ಠಿ, ''ಬಂಗಾರ, ಕನ್ನಾ! ನಿನಗೆಲ್ಲಾ ಅತಿ ಸಾಧಾರಣವೇ, ನಮಗೆ ಮಾತ್ರ ಎಲ್ಲವೂ ಅಸಾಧಾರಣವಾಗಿಯೂ, ರೋಮಾಂಚಕವಾಗಿಯೂ ಗೋಚರಿಸುತ್ತಿರುವುದು'' ಎಂದರು.

ಶ್ರೀಪಾದರು, **"ತಾತ! ನಾನು ಬಲು ತಿಳುವಳಿಕೆ ಉಳ್ಳ ವ್ಯಾಪಾರಿ. ಯಾರಿಗೆ ಎಷ್ಟು ನೀಡಬೇಕೋ, ಅವರವರ ಧರ್ಮಕರ್ಮಗಳ ಮೇರೆಗೆ ಅಳೆದು, ತೂಕಮಾಡಿ ಕೊಡುವೆನು. ನನ್ನಿಂದ ಹೊರಬೀಳುವ ಒಂದೇ ಒಂದು ಕಿರಣವೇ ಮಹಾಯೋಗಿ, ಮಹಾಸಿದ್ಧನಾಗಿ ಪ್ರಕಾಶಿಸುವುದು. ಅಂತಹ ಚಿಕ್ಕ ಕಿರಣವನ್ನೇ ಈ ಭೂಮಿ ತಾಳಲಾರದು. ಸ್ವಲ್ಪ ಕುಂಡಲಿನಿ ನೀಡಿದರೇನೇ ನೀವು ತಾಳಬಲ್ಲಿರಿ. ಆದ್ದರಿಂದಲೇ ನನ್ನನ್ನು ನಾನು ಮಾಯದೊಳು ಗುಪ್ತವಾಗಿಡುವೆನು. ಬೇಕಾದಾಗ ಎಂತಹ ಅಸಾಧಾರಣ ಲೀಲೆಯಾದರೂ ತೋರಿಸಬಲ್ಲೆ. ನಾನು ಎಂತಹ ಭಾರವನ್ನಾದರೂ ಎತ್ತ ಬಲ್ಲೆ. ನಾನು ಪರಿಹರಿಸಲಾರದ ಸಮಸ್ಯೆಯೇ ಇಲ್ಲ. ಕೊಡಲಾಗದ ವರಗಳೇ ಇಲ್ಲ. ಮಾಡಲಾರದ ಕಾರ್ಯ ಸಹಾ ಇಲ್ಲ. ಪೀಠಿಕಾಪುರದಿಂದ ನಿಮ್ಮನ್ನೆಲ್ಲಾ ಈ ರೀತಿ ಬರಮಾಡಿಕೊಂಡಿದ್ದು ನಾನು ದತ್ತನೆಂದು ತಿಳಿಸಲು ಮಾತ್ರ"** ಎಂದರು.

ನರಸಿಂಹ ವರ್ಮರು, ''ಎಲ್ಲರನ್ನೂ ರಕ್ಷಿಸುವ ಏಕೈಕ ಕ್ಷತ್ರಿಯನು ನೀನೇ! ಉಳಿದವರು ನಾಮ ಮಾತ್ರಕ್ಕೆ ಕ್ಷತ್ರಿಯರು'' ಅಂದರು. ಆಗ ಶ್ರೀಗಳು ''ಕ್ಷತ್ರಿಯತ್ವ ನನ್ನಲ್ಲಿ ಸದಾ ಸ್ವಾಭಾವಿಕ. ನೀನು ಶಿವಾಜಿ ಮಹರಾಜ ಹೆಸರಿನಲ್ಲಿ ಮಹರಾಷ್ಟದೊಳು ಅವತರಿಸಿ ಸನಾತನ ಧರ್ಮದ ರಕ್ಷಣೆ ಮಾಡಲು ಆದೇಶಿಸುತ್ತಿದ್ದೇನೆ'' ಎಂದರು. ಆಗ ನರಸಿಂಹ ವರ್ಮರು ಜಯಜಯಕಾರ ಮಾಡಿದರು. ''ಶ್ರೀಪಾದ ಸಾರ್ವಭೌಮರಿಗೆ ಜಯವು ಜಯವು.''

ಅಮ್ಮಾಜಮ್ಮನವರು, ''ಮಗು, ಬಂಗಾರ! ನಿನ್ನ ಕಲ್ಯಾಣ ಕಾಣಬೇಕೆಂದು ಎಷ್ಟೋ ಆಸೆ ಪಡುತ್ತಿದ್ದೇವೆ. ಕಲ್ಯಾಣ ಬಲು ವೈಭವದಿಂದ ನಡೆಸಿ, ನಿನಗೆ ಕಲ್ಯಾಣ ತಿಲಕ ಇಟ್ಟು, ಮಧು ಮಗನಾಗಿ ನೋಡಬೇಕೆಂದಿದೆ'' ಅನ್ನಲೂ, ''ಅಮ್ಮಮ್ಮಾ! ತಪ್ಪದೇ ಹಾಗೇ ಆಗಲಿ! ನಾನು ಕಲ್ಕಿ ಅವತಾರಿಯಾಗಿ ಶಂಬಲ ಗ್ರಾಮದಲ್ಲಿ ಜನ್ಮಿಸಿ ಸಿಂಹಳದಲ್ಲಿ ಪದ್ಮಾವತಿ ಎಂಬ ಹೆಸರಿನಲ್ಲಿ ಜನ್ಮಿಸಿದ ಅನಘಾಲಕ್ಷ್ಮಿಯನ್ನು ಲೋಕ ಕಲ್ಯಾಣಕ್ಕಾಗಿ ಮದುವೆ ಆಗುವೆನು. ಅದಕ್ಕೆ ಸ್ವಲ್ಪ ಸಮಯವಿದೆ. ಹಾಗೆ ನಿಮ್ಮ ಬಯಕೆ ತಪ್ಪದೇ ತೀರಿಸುವೆ. ಯಾವಾಗ ಒಬ್ಬನಾದರೂ ನೂತನ ಅಯ್ಯಪ್ಪ ಶಬರಿಮಲೆಗೆ ಬಾರನೋ, ಅದೇ ಕಲಿಯುಗಾಂತ ಎಂದು ತಿಳಿಯಿರಿ, ನಾನು ಧರ್ಮಶಾಸ್ತನು, ಮಾತು ಮೀರನು, ನೀವೆಲ್ಲಾ ಸ್ವಲ್ಪ ಕಾಲ ಕಾದಿರಲೇಬೇಕು'' ಎಂದರು.

## ಮಾಯಾನಾಟಕ ಸೂತ್ರಧಾರಿ ಲೀಲಾವಿನೋದ

ವೆಂಕಟ ಸುಬ್ಬಮಾಂಬ, ''ಕನ್ನಾ! ನೀನು ಹಾಲು, ಮೊಸರು, ಕೆನೆ, ಬೆಣ್ಣೆ ಸೇವಿಸಿ ಬಹಳ ದಿನವಾಗಿದೆ. ನನ್ನ ಕೈಯ್ಯಾರ ತಿನ್ನಿಸಬೇಕೆಂದು ನನ್ನ ಕೋರಿಕೆ'' ಎಂದರು, ಆಗ ಶ್ರೀಪಾದರು, ''ಅಮ್ಮಮ್ಮಾ! ತಪ್ಪದೇ ತಿನ್ನಿಸಿ, ನಾನೂ ಆಯಾಸಗೊಂಡಿದ್ದೇನೆ. ನೀವು ಹೊರಟಾಗಲೇ, ಹಾಲು, ಮೊಸರು, ಕೆನೆ, ಬೆಣ್ಣೆ ತರುತ್ತಿದ್ದೀರೆಂದು ನನಗೆ ಗೊತ್ತಾಯಿತು. ಬಹಳ ದಿನಗಳ ಪ್ರಯಾಣದಲ್ಲಿ ಇವೆಲ್ಲಾ ಕೆಡುವುದಿಲ್ಲವೇ? ನಿಮ್ಮ ಪ್ರೇಮಾಭಿಮಾನಕ್ಕೆ ಸೋತು, ನಿಮ್ಮ ಈ ಪದಾರ್ಥಗಳು ಕೆಡದಂತೆ, ಈ ರೀತಿ ನಿಮ್ಮನ್ನೆಲ್ಲಾ ಕರೆತಂದೆನು! **ಅಮ್ಮಮ್ಮಾ! ಎಷ್ಟು ಕಷ್ಟ ಸಹಿಸಿದ್ದೆ, ನೋಡಿ. ಅಷ್ಟು ದೂರದಿಂದ 18 ಕುದುರೇ ಗಾಡಿಗಳನ್ನು ಒಬ್ಬನೇ, ಇಲ್ಲಿಗೆ ಎಳೆದುಕೊಂಡು ಅಷ್ಟು ಕಡಿಮೆ ಸಮಯದಲ್ಲೇ ಬರುವುದು, ಸಾಮಾನ್ಯವೇ? ಮೈಯ್ಯೆಲ್ಲಾ ನೋವಿದೆ. ಕೈ ಹೇಗೆ ಬೊಬ್ಬೆಯಿಂದ ಇವೆಯೋ ನೋಡಿ!''** ಎಂದು ನುಡಿಯುತ್ತಿದಂತೆಯೇ, ಅವರು ಶ್ರೀಗಳ ಕೈಗಳನ್ನು ಪರಿಶೀಲಿಸಿ, ಆಶ್ಚರ್ಯಪಟ್ಟರು. ನಿಜಕ್ಕೂ **ಶ್ರೀಪಾದರ ಕೈಗಳಲ್ಲಿ ಬೊಬ್ಬೆಗಳಿದ್ದವು. ವೆಂಕಟ ಸುಬ್ಬಮಾಂಬ ಕೈಗಳಿಗೆ ಬೆಣ್ಣೆ ಹಚ್ಚಿ, ಬಿಸಿ ನೀರಿನ ಕಾವು ಸಹಾ ಇತ್ತಳು. ಮಾಯಾ ನಾಟಕ ಸೂತ್ರಧಾರಿ ಲೀಲಾವಿನೋದಕ್ಕೆ ಅಂತ್ಯವೆಲ್ಲಿ!**

ರಾಜಮಾಂಬ, ''ಬಂಗಾರ, ಕನ್ನಾ! ನಿನಗೆ ಇಷ್ಟವಾದ ಹಲ್ವಾ ಮಾಡಿ ನಿನ್ನ ಬೆಳ್ಳಿಯ ಬಟ್ಟಲಲ್ಲಿ ತಂದಿದ್ದೇನೆ. ಇಲ್ಲಿ ಹತ್ತಿರಬಾ, ತಿನ್ನಿಸುತ್ತೇನೆ'' ಎಂದು ಕೂಗಲು, ಬಂದ ಭಗವಂತನಿಗೆ, ಅವರ ಮುವ್ವರು ಅಮ್ಮಮ್ಮರೂ ತಿನ್ನಿಸಿದರು. ಆ ಹಲ್ವಾ ಬಟ್ಟಲಿನಿಂದ ಎಷ್ಟು ತೆಗೆದರೂ ಬರುತ್ತಲೇ ಇತ್ತು! ಶ್ರೀಗಳು ಬಹಳ ಹೊತ್ತು ಈ ವಿನೋದ ಲೀಲೆಯನ್ನು ನಡೆಸುತ್ತಿದ್ದರು.

ಶ್ರೀಪಾದರು, ''ಅಮ್ಮಮ್ಮಂದಿರು ಮುವ್ವರಿಗೂ ನನ್ನಲ್ಲಿ ಪ್ರೀತಿ ಇದ್ದರೇ ಇದ್ದೀತು. ಇಷ್ಟು ಹಲ್ವಾ ತಿಂದರೇ ಆರೋಗ್ಯ ಕೆಡದೇ! ಈ ಕೆಲಸ ನಿಮಗೆ ಧರ್ಮವೇ?'' ಎಂದು ಪ್ರಶ್ನಿಸಿ, ಅವರ ಅಣ್ಣಂದಿರಿಗೂ ತಂಗಿಯರಿಗೂ, ಬಾವಂದಿರಿಗೂ, ತಾವೇ ಹಲ್ವಾ ತಿನ್ನಿಸಿದರು.

ಅಲ್ಲಿಗೆ ಬಂದವರಲ್ಲಿ ವೆಂಕಯ್ಯ ಎಂಬ ರೈತನಿದ್ದನು. ಅವನ ಮನೆಯಲ್ಲೇ ಶ್ರೀಪಾದರು ದತ್ತ ದೀಕ್ಷೆಗಳನ್ನು ನೀಡಿದ್ದರು. ವೆಂಕಯ್ಯನಿಗೂ ಶ್ರೀಗಳೇ ಹಲ್ವಾನಿತ್ತು, ಮಿಕ್ಕಿದ್ದನ್ನ ಕುದುರೇ ಗಾಡಿಯವರಿಗೂ, ಕುದುರೆಗಳಿಗೂ ಇಡುವಂತೆ ಹೇಳಿದರು. ಆ ಬೆಳ್ಳಿಬಟ್ಟಲನ್ನು ವೆಂಕಯ್ಯಗೆ ಉಡುಗೊರೆಯಾಗಿ ನೀಡಿದರು.

ಅಪ್ಪಲರಾಜು ಶರ್ಮ, ''ಮಗು, ಬಂಗಾರು! ನೀನು ದತ್ತ ಪ್ರಭುವೆಂದು ತಿಳಿಯದೇ ಮಾಡಿದ ತಪ್ಪುಗಳನ್ನು ಕ್ಷಮಿಸಬೇಕು'' ಎಂದು ಪ್ರಾರ್ಥಿಸಿದರು. ''ತಂದೆ! ನಾನು ತಮ್ಮ ಕಂದನು. ತಂದೆಯನ್ನು ಮಗ ಕ್ಷಮಿಸುವುದೇ! ಎಂತಹ ವಿಚಿತ್ರ? ತಾವು ಮಗನಾದ ನನ್ನ ಮೇಲೆ ವಾತ್ಸಲ್ಯ ಸುರಿಸಬೇಕು. ಸದಾ ನನ್ನ ಕ್ಷೇಮ, ಅಭಿವೃದ್ಧಿ ಕೋರಬೇಕು ಎಂದರು.

ವೆಂಕಾವಧಾನರೂ, ಆಕೆಯ ಧರ್ಮಪತ್ನೀ ಕಣ್ಣೀರು ಧಾರೆಯಾಗಿ ಅಳುತ್ತಿದ್ದರು. ಆಗ ಶ್ರೀಗಳು, ''ಮಾವ! ನಮ್ಮ ಬಂಧ ಶಾಶ್ವತವಾದದ್ದು. ನಾನು ನಿಮಗೆ ಮಾತ್ರವೇ ಸೋದರ ಅಳಿಯನಲ್ಲ. ನಿನ್ನ ವಂಶದಲ್ಲಿ ಜನ್ಮಿಸಿದ ಪ್ರತಿ ಒಬ್ಬ ವ್ಯಕ್ತಿಯೂ ನನ್ನನ್ನು ಸೋದರ ಅಳಿಯನಂತೆ ಬಾವಿಸಬಹುದು. ನಾನು ನಿಮ್ಮನ್ನೆಲ್ಲಾ ನನ್ನ ದಿವ್ಯಲೀಲೆಗಳಿಂದ ಆನಂದಪಡಿಸುವೆನು. ಕಲ್ಕಿ ಅವತಾರ ಸಮಯದಲ್ಲಿ ಪದ್ಮಾವತಿ ದೇವಿಯನ್ನು ಮಗಳಾಗಿ ಭಾವಿಸಿ ನಿಮ್ಮ ಆರೈಕೆಗಳನ್ನೆಲ್ಲಾ ತೀರಿಸಿಕೊಳ್ಳಬಹುದು'' ಎಂದರು. ತಾಯಿ ಸುಮತಿಗೆ ದುಃಖ ಉಕ್ಕಿಬಂದಿತು. ಮದುವೆ ನೆಪದಲ್ಲಿ ಹಣೆಗೆ ತಿಲಕವಿಟ್ಟು ಮಧು ಮಗನಾಗಿ ಅಲಂಕರಿಸಲು ಆಗದಿರಲೂ, ಅದೇ ಮಗ ಯತೀಶ್ವರನಾಗಿ, ಬೈರಾಗಿ ಆಗಿ ಕಾಣುವುದು ಆಕೆಗೆ ಸಹಿಸಲಾರದಾಯಿತು. ಆಗ ಶ್ರೀಪಾದರು, ''ಅಮ್ಮಾ! ನನಗೆ ಅನಸೂಯ ಮಾತೆ ನೀವೂ ಒಂದೇ. ತಮ್ಮ ಬಯಕೆಗಳನ್ನೆಲ್ಲಾ ಕಲ್ಕಿ ಅವತಾರದಲ್ಲಿ ತಪ್ಪದೇ ನೆರವೇರಿಸುವೆ'' ಎಂದು ಅಭಯವಿತ್ತರು.

''ಅಮ್ಮಾ! ನಿನ್ನ ಗರ್ಭದಲ್ಲಿ ಜನ್ಮಿಸಿದ ಕಾರಣವೇ ನಾನಿಷ್ಟು ಹೆಸರುವಾಸಿ ಆದೆನು. ನಿನ್ನ ಪ್ರೀತಿಯಿಂದಲೇ ನನ್ನ ಸುಪೋಷಣೆಯಾಗಿದೆ. ಅಮ್ಮಾ! ವಾಸವಿ ಮಾಡಿದ ಕೆಲಸ ನೋಡಿದೆಯಾ! ನನಗೆ ಹಸಿವಾಗಲೂ ನಾನು ಮಗುವಾಗಿ, ಅನಸೂಯ ಮಾತೆ ಬಳಿ ಸ್ತನ್ಯ ಪಾನ ಮಾಡಲು ಹೋದರೇ, ಆ ರಾಕ್ಷಸಿ, ಹಾಲೆಲ್ಲಾ ಕುಡಿದು, ''ಅಣ್ಣಾ! ನೀನು ಸುಮತಿ ಮಾತೆಯ ಹಾಲೆ ತೆಗೆದುಕೊ, ಇಲ್ಲಾ ನಿಧಾನಿಸಿದರೇ ಅದೂ ನಾನೇ ಮುಗಿಸುತ್ತೇನೆ ಎಂದು ಹೆದರಿಸಿರುವಳು. ನಾನೇನು ಮಾಡಬೇಕೋ ನೀನೇ ಹೇಳು'' ಎಂದರು. ತಕ್ಷಣ ಮಗುವಾಗಿ ಬದಲಾವಣೆಗೊಂಡು ಒಂದು ಕಿಟಕಿಯ ಬಳಿ, ನೆಲದ ಮೇಲೆ ಮಲಗಿ, ದೀನನೋಟವಿಟ್ಟರು! ಸುಮತಿ ಬಾಧೆಪಟ್ಟು ಮಗುವನ್ನೆತ್ತಿಕೊಂಡು ಸ್ತನ್ಯ ಪಾನ ಮಾಡಿಸಿದಳು. ಅಮ್ಮಾ ವಾಸವಿ! ಎಂದು ಕೂಗಲೂ, ಶ್ರೀಪಾದರಂತೆಯೇ ಇರುವ ಮತ್ತೊಂದು ತಿಂಗಳ ಕೂಸು ಅಲ್ಲಿ ಕಂಡುಬಂದಳು! ಆ ಇಬ್ಬರೂ ಒಂದೊಂದು ಸ್ತನ್ಯಕ್ಕೆ ಬಾಯಿ ಹಾಕಲು, ಸುಮತಿಯ ದುಃಖ ದೂರವಾಯಿತು.

ವೆಂಕಯ್ಯ, ''ಮಹಾಗುರುಗಳಿಗೆ ನಮ್ಮ ಒಂದು ವಿನಂತಿ. ಇಂತಹ ಲೀಲೆ ನಡೆದ ಈ ದರ್ಬಾರು, ಇದಕ್ಕೆ ಸೇರಿದ ವಿಶಾಲ ಭೂಭಾಗವೂ ವಿಶ್ವವಿಖ್ಯಾತವಾಗಬೇಕು'' ಎಂದು ಬಯಸಿದರು.

''ಮುಂದಿನ ಕಾಲದಲ್ಲಿ ನನ್ನ ಈ ದರ್ಬಾರು ಮಂದಿರ, ಒಂದು ಭವ್ಯ ಕಟ್ಟಡವಾಗಿ ನಿರ್ಮಿಸಲಾಗುವುದು. ಅಲ್ಲಿ ಗೋವುಗಳೂ ಇರುವವು. ಇನ್ನೂ ಅನೇಕ ಲೀಲೆಗಳು ತೋರುವೆನು'' ಎಂದು ನುಡಿದರು ಶ್ರೀಗಳು.

ಇದು ನಾಕಂಡ ಪವಾಡ! ನಾನು ಬರೆಯುತ್ತಿರುವುದು ಪೂರ್ಣ ಸತ್ಯ. ಅಲ್ಲಿಗೆ ಆಗಮಿಸಿದವರೆಲ್ಲರಿಗೂ ಮಬ್ಬು ಕವಿಯಿತು, ಸ್ವಲ್ಪ ಸಮಯಕ್ಕೆ ನಾನೂ, ಸನ್ಯಾಸಿ ಮತ್ತು ಶ್ರೀಪಾದರು ವಿನಹಾ ಉಳಿದ ಜನ ಆ ದರ್ಬಾರಿನಲ್ಲಿ ಕಾಣದೇ ಹೋದರು. ಯಾವುದಾದರೂ ರಾಕ್ಷಸ ಮಾಯವೇ ಎಂದು ನಾನು ಬೆದರಿದೆನು!

ಆಗ ಶ್ರೀಪಾದರು, **"ನನ್ನ ಸನ್ನಿಧಿಯಲ್ಲಿ ಯಾವ ರಾಕ್ಷಸ ಮಾಯೆಯೂ ನಡೆಯಲಾರದು. ಅವರನ್ನೆಲ್ಲಾ ಕ್ಷೇಮವಾಗಿ ಪೀಠಿಕಾಪುರ ಸೇರಿಸಿರುವೆನು. ನನ್ನನ್ನು ಯಾರು, ಯಾವ ಭಾವದಿಂದ ಪೂಜಿಸುವರೋ ಅವರನ್ನು ಆ ಭಾವದಲ್ಲೇ ಮುಕ್ತಿಗೊಳಿಸುವೆನು, ಇದು ನನ್ನ ವ್ರತ"** ಎಂದರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 48

# ಪಂಚದೇವ್ ಪಹಾಡ್‌ನಲ್ಲಿ ದರ್ಬಾರ್ ವಿವರಣೆ

### ಶ್ರೀಪಾದರು, ಸ್ತ್ರೀ ಪುರುಷರನ್ನು ಸಂಬೋಧಿಸುವ ಪದ್ಧತಿ

ಶ್ರೀಪಾದರು ಸಾಧಾರಣವಾಗಿ ಗುರುವಾರ, ಪಂಚದೇವ್ ಪಹಾಡ್‌ನಲ್ಲಿ ದರ್ಬಾರ್ ನಡೆಸುವರು. ಶ್ರೀಪಾದರು **ಕೃಷ್ಣಾನದಿ ಮೇಲೆ ಹೆಜ್ಜೆ ಇಟ್ಟುಕೊಂಡೇ ದಾಟುವರು! ಅವರು ಹೆಜ್ಜೆ ಇಡುವ ಮುನ್ನ ಅಲ್ಲಿ ಒಂದು ಕಮಲ ಹುಟ್ಟುತ್ತಿತ್ತು. ಅಂತಹ ಕಮಲಗಳ ಮೇಲೆ ಮರದ ಪಾದುಕೆಗಳು ಹೇಗೆ ನಿಲ್ಲುತ್ತಿದ್ದವೋ ಮಾನವನ ಊಹೆಗೆ ಸಿಗದು. ಅದಲ್ಲದೇ ನೀರಿನ ಮೇಲೆ ನಡೆಯುವುದೇ ಒಂದು ಆಶ್ಚರ್ಯ. ಎಷ್ಟೋ ಕಾಲ ಇದು ನೋಡುವವರಿಗೆ ವಿಚಿತ್ರವಾಗಿ ಕಂಡುಬರುತ್ತಿದ್ದರೂ, ನಂತರ ಅದು ಒಂದು ಸಾಮಾನ್ಯ ಲೀಲೆಯಾಗಿ ನಿಂತಿತು.** ಶ್ರೀಗಳು ಕೃಷ್ಣಾನದಿಯ ಈ ಕಡೆ ಭಾಗಕ್ಕೆ ಬಂದಾಗ, ಭಕ್ತರು ಎದುರು ಹೋಗಿ ಅವರಿಗೆ ಸ್ವಾಗತ ನೀಡುತ್ತಿದ್ದರು. ಸಂಜೆಯವರಿಗೂ ದರ್ಬಾರ್ ನಡೆಯುತ್ತಿತ್ತು. ನಂತರ ಅವರು ಬಂದಂತೆಯೇ ಕೃಷ್ಣಾನದಿಯ ಮೇಲೆ ಹಜ್ಜೆಗಳಿಡುತ್ತಿರಲೂ ಒಂದೊಂದು ಕಮಲ ಉದ್ಭವಿಸುತ್ತಿತ್ತು. ಕುರುಂಗಡ್ಡೆಗೆ ಹಿಂತಿರುಗುತ್ತಿದ್ದರು. ಭಕ್ತರು ಬೀಳ್ಕೊಟ್ಟು ಹಿಂತಿರುಗುತ್ತಿದ್ದರು. ರಾತ್ರಿ ಹೊತ್ತು ಕುರಂಗಡ್ಡೆಯಲ್ಲಿ ಒಬ್ಬರೇ ಇರುತ್ತಿದ್ದರು. ಶುಕ್ರವಾರಗಳಲ್ಲಿ ಕುಮಾರಿಯರಿಗೆ ಮತ್ತು ಸೌಭಾಗ್ಯ ಬಯಸುವ ಮಹಿಳೆಯರಿಗೆ ಅರಿಶಿನದ ಕೊಂಬುಗಳನ್ನು ನೀಡುತ್ತಿದ್ದರು. ತನಗಿಂತ ಹಿರಿಯರನ್ನು 'ಅಮ್ಮ ಸುಮತಿ!' ಎಂದು 'ಅಮ್ಮ ಅನಸೂಯ ತಾಯಿ!' ಎಂದು ಸಂಬೋಧಿಸುತ್ತಿದ್ದರು. ತನಗಿಂತ ಚಿಕ್ಕವರನ್ನು 'ಅಮ್ಮ ವಾಸವಿ! ಎಂದು ಇಲ್ಲ ಅಮ್ಮಾ ಶ್ರೀ ವಿದ್ಯಾಧರಾ! ಇಲ್ಲಾ ಅಮ್ಮಾ ರಾಧ! ಅಥವಾ ಅಮ್ಮಾ ಸುರೇಖಾ ಎಂದು ಕೂಗುತ್ತಿದ್ದರು. ಚಿಕ್ಕವಯಸ್ಸಿನ ಗಂಡು ಹುಡುಗರನ್ನು ಲೇ ಅಬ್ಬಿ! ಎಂದೂ ಬಂಗಾರೂ! ಎಂದಾಗಲಿ ಕೂಗುತ್ತಿದ್ದರು. ಅವರ ತಂದೆಯ ವಯಸ್ಸಿನವರನ್ನು ಸ್ವಾಮಿ (ಅಯ್ಯಾ!) ಎಂದು, ಅಪ್ಪಾ! (ನಾಯನಾ) ಎಂದೂ ಸಂಬೋಧಿಸುತ್ತಿದ್ದರು. ಅವರ ಅಜ್ಜನ ವಯಸ್ಸಿನವರನ್ನು ತಾತಾ! ಎಂದೂ ಆ ವಯಸ್ಸಿನ ಹೆಂಗಸರನ್ನು ಪ್ರೀತಿಯಿಂದ 'ಅಮ್ಮಮ್ಮಾ!' ಎಂದೂ ಕೂಗುತ್ತಿದ್ದರು.

### ಶ್ರೀಪಾದರ ನಿತ್ಯಕಾರ್ಯಕ್ರಮಗಳು ಮತ್ತು ದರ್ಬಾರು

ಶುಕ್ರವಾರದ ದರ್ಬಾರು, ಒಮ್ಮೊಮ್ಮೆ ಕುರುಗಂಡ್ಡೆಯಲ್ಲಿ ನಡೆಯುತ್ತಿತ್ತು. ಅಥವಾ ಪಂಚದೇವ್ ಪಹಾಡ್‌ನಲ್ಲಿ ನಡೆಸುತ್ತಿದ್ದರು. ಹಾಗೆಯೇ ಗುರುವಾರ ದರ್ಬಾರ್ ಸಹಾ ಕುರುಂಗಡ್ಡೆ ಅಥವಾ ಪಂಚದೇವ್ ಪಹಾಡ್‌ನಲ್ಲಿ ನಡೆಯುತ್ತಿತ್ತು. ಅದು ಶ್ರೀಗಳ ಇಷ್ಟದ ಪ್ರಕಾರ ಇರುತ್ತಿತ್ತು. ಭಾನುವಾರದ ದರ್ಬಾರಿನಲ್ಲಿ ಅತಿ ಗಂಭೀರವಾದ ಯೋಗವಿದ್ಯೆಯ ಉಪನ್ಯಾಸವಿರುತ್ತಿತ್ತು. ನಂತರ ಬಂದವರ ಯೋಗಕ್ಷೇಮ ವಿಚಾರಿಸುತ್ತಿದ್ದರು. ಬಹಳ ತಾಳ್ಮೆಯಿಂದ ಅವರವರ ಕಷ್ಟಗಳನ್ನು ವಿಚಾರಿಸಿ ಅಭಯದಾನ ಮಾಡುತ್ತಿದ್ದರು. **ಸೋಮವಾರದ ದರ್ಬಾರಿನಲ್ಲಿ ಪುರಾಣ ಗಾಥೆಗಳ ಬಗ್ಗೆ** ವಿವರಿಸಿ ನಂತರ ಭಕ್ತರ ಯೋಗಕ್ಷೇಮ ವಿಚಾರಿಸುತ್ತಿದ್ದರು. **ಮಂಗಳವಾರದ ದರ್ಬಾರಿನಲ್ಲಿ ಉಪನಿಷತ್‌ಗಳ ಬಗ್ಗೆ ಬೋಧಿಸಿ** ನಂತರ ಯಥಾಪ್ರಕಾರ ಯೋಗಕ್ಷೇಮ ವಿಚಾರ ನಡೆಯುತ್ತಿತ್ತು. **ಬುಧವಾರದ ದರ್ಬಾರಿನಲ್ಲಿ ವೇದಗಳು ಮತ್ತು ವೇದಾರ್ಥಗಳ** ವಿವರಣೆ ನಡೆದ ನಂತರ ಭಕ್ತರ ವ್ಯಥೆಗಳನ್ನು ಕೇಳಿ ಅಭಯದಾನ ನೀಡುತ್ತಿದ್ದರು.

**ಗುರುವಾರದ ದರ್ಬಾರ್‌ನಲ್ಲಿ ಗುರುತತ್ತ್ವದ ಬಗ್ಗೆ ವಿವರಿಸುತ್ತಿದ್ದರು.** ಇಲ್ಲಿಯೂ ಸಹ ಭಕ್ತರ ವ್ಯಥೆಗಳನ್ನು, ಅವರ ವ್ಯಾಧಿಗಳನ್ನು ನಿರ್ಮೂಲನೆ ಮಾಡುವುದು, ಅಭಯಪ್ರಧಾನ ಇರುತಿತ್ತು. ಅಂದು ಪ್ರತ್ಯೇಕ ಅಡಿಗೆ ಮಾಡಿಸಿ ಎಲ್ಲರಿಗೂ ಊಟೋಪಚಾರ ಸಹಾ ಇರುತಿತ್ತು. ಪ್ರೀತಿ ಉಕ್ಕಿದಾಗ ತಾವೇ ಭೋಜನ ಬಡಿಸುತ್ತಿದ್ದರು. ಕೆಲ ಅದೃಷ್ಟಶಾಲಿಗಳಿಗೆ ತಿನ್ನಿಸುವುದೂ ಆಗುತ್ತಿತ್ತು! ಸಂಕೋಚ ಪಡುವವರಿಗೆ ಬಾಯಲ್ಲಿ ಅನ್ನ ತುರುಕುವುದೂ ಒಂದು ಪ್ರೇಮ ಲೀಲೆಯಾಗಿ ಸಂತೋಷವಾಗಿರುತ್ತಿತ್ತು! ಅವರ ಧನ ಮತ್ತು ಅನ್ನದ ಭಂಡಾರಗಳು ಸದಾ ತುಂಬಿಯೇ ಇರುವುದೆಂದೂ ಅಭಾವದ ಪ್ರಶ್ನೆಯೇ ಇಲ್ಲವೆಂದೂ ನುಡಿಯುತ್ತಿದ್ದರು. ಇನ್ನು **ಶುಕ್ರವಾರದ ದರ್ಬಾರಿನಲ್ಲಿ ಶ್ರೀವಿದ್ಯೆ ಬಗ್ಗೆ ಬೋಧನೆ ಇರುತ್ತಿತ್ತು. ತಪ್ಪದೇ ಅರಿಶಿನದ ಕೊಂಬುಗಳನ್ನು ಕೊಡುತಿದ್ದರು. ಶನಿವಾರದ ಕೂಟದೊಳು ಶಿವಾರಾಧನೆಯ ಮಹತ್ವವನ್ನು ವಿವರಿಸುತ್ತಿದ್ದರು.**

ಶ್ರೀಪಾದರ ದರ್ಬಾರುಗಳಲ್ಲಿ ಭಾಗವಹಿಸಿದವರು ಧನ್ಯರು. ಅವರೆಲ್ಲಾ ಶಾಕಪಾಕಗಳು, ಸಜ್ಜೆ, ರಾಗಿ, ಬತ್ತ ಮುಂತಾದವೆಲ್ಲಾ ಅರ್ಪಿಸುತ್ತಿದ್ದರು. ನಿತ್ಯವೂ ಅನ್ನ ಸಂತರ್ಪಣೆ ಇರುತ್ತಿತ್ತು. ಗುರುವಾರಗಳಲ್ಲಿ ಪ್ರತ್ಯೇಕ ಭೋಜನ. ಅಂದು ಒಂದು ಸಿಹಿ ಪದಾರ್ಥ ಸಹಾ ಇರುತಿತ್ತು. ಶ್ರೀಗಳ ಹೃದಯ ಬಲು ಕೋಮಲ. ಬಾಧೆಪಡುತ್ತಾ ಬರುವ ಭಕ್ತರು ಸತ್ಯಕ್ಕೂ ಆ ಬಾಧೆಗಳ ನಿವಾರಣೆ ಹೊಂದಿ ಆನಂದದಿಂದ ಹಿಂತಿರುಗುತ್ತಿದ್ದರು. **ಅವರದ್ದು ಕೋಟಿ ತಾಯಂದಿರ ಪ್ರೀತಿ! ಶ್ರೀದತ್ತ ಪುರಾಣ ಪಾರಾಯಣೆ, ಅವರ ಅನುಗ್ರಹಕ್ಕೆ ಒಂದು ನಿಜ ಮಾರ್ಗವೆನ್ನುತಿದ್ದರು.**

ರಾತ್ರಿಗಳಲ್ಲಿ ಯಾರನ್ನೂ ಕುರಂಗಡ್ಡೆಯಲ್ಲಿ ತಂಗಲೂ ಒಪ್ಪುತ್ತಿರಲಿಲ್ಲ. ಆದರೇ ನನ್ನೊಟ್ಟಿಗೇ ಬಂದಿದ್ದ ಆ ವೃದ್ಧ ಸನ್ಯಾಸಿಯನ್ನು ಕೆಲಕಾಲ ಇರಲು ಬಿಟ್ಟರು. ನನ್ನನ್ನೂ ರಾತ್ರಿ ಹೊತ್ತು ಕುರುಂಗಡ್ಡೆಯಲ್ಲಿರಲೂ ಹೇಳುತ್ತಿದ್ದರು. ವೃದ್ಧ ಸನ್ಯಾಸಿಯನ್ನು ಕಾಶೀಯಲ್ಲಿ ಜೀವಿಸುವಂತೆಯೂ, ಅಲ್ಲೇ ಪರಮಪದ ಹೊಂದುವಂತೆಯು ಹೇಳುತ್ತಿದ್ದರು. ಅಡಿಗೆಯ ಪಾತ್ರೆಗಳ ಶುಭ್ರತೆ, ಅಡಿಗೆ ಮಾಡಿ ಬಂದ ಭಕ್ತರ ಸೌಕರ್ಯ ಗಮನಿಸುವುದು ನನ್ನ ವಿಧಿ. ದರ್ಬಾರಿಗೆ ಯಾವ ಸಮಯದಲ್ಲೇ ಬರಲೀ, ಭಕ್ತರಿಗೆ ಅನ್ನವಿರಬೇಕು! ಆಚೆ ಊಟಮಾಡಿ ಬಂದವರಿಗೂ ವಿಧಿಯಾಗಿ, ಇಲ್ಲಿನ ಪ್ರಸಾದ ಪಡೆಯಲೇಬೇಕೆಂದು ಆದೇಶಿಸುತ್ತಿದ್ದರು. ತಯಾರಾದ ಭೋಜನ ಕಡಿಮೆಯಾಗಿ ಬಂದ ಭಕ್ತರು ಅಧಿಕವಾಗಿದ್ದ ಪಕ್ಷ, ತಮ್ಮ ಕಮಂಡಲೋದಕ ಅವುಗಳ ಮೇಲೆ ಪ್ರೋಕ್ಷಿಸಿ, ಅಕ್ಷಯಗೊಳಿಸಿದ ಸಮಯಗಳು ಅನೇಕ!

ರಾತ್ರಿ ವೇಳೆ ದೇವತೆಯರು ಕುರುಂಗಡ್ಡೆಗೆ ವಿವಿಧ ವಿಮಾನಗಳಲ್ಲಿ ಬಂದು ಶ್ರೀಗುರು ದರ್ಶನ ಮಾಡುತ್ತಿದ್ದರು. ಅವರ ಆಶೀರ್ವಾದ ಪಡೆದು ಹೋಗುತ್ತಿದ್ದರು. ಒಮ್ಮೊಮ್ಮೆ ಹಿಮಾಲಯದಿಂದ ಕಾಂತಿಮಯ ದೇಹಗಳುಳ್ಳ ಯೋಗಿಗಳು ಶ್ರೀಗಳ ದರ್ಶನಕ್ಕಾಗಿ ಆಗಮಿಸುತ್ತಿದ್ದರು. ಅವರಿಗೆ ಶ್ರೀಗಳೇ ಖುದ್ದಾಗಿ ಭೋಜನ ನೀಡುತ್ತಿದ್ದರು.

ಶ್ರೀಪಾದರ ಊಟವೋ, ಒಂದು ಹಿಡಿ ಅಗಳುಗಳೇ! ಅಕ್ಕಿ ಅನ್ನವಾದರೂ, ಜೋಳದ ಅನ್ನವಾದರೂ ಅಷ್ಟೇ. ಒಮ್ಮೊಮ್ಮೆ ರಾಗಿಮುದ್ದೆ ಸವಿಯುತ್ತಿದ್ದರು! 'ತನ್ನ ಭಕ್ತರು ಸಂತೃಪ್ತಿಯಾಗಿ ಭುಜಿಸಿದರೇ, ತನಗೆ ತೃಪ್ತಿ' ಎಂದು ಹೇಳುತ್ತಿದ್ದರು.

ರವಿದಾಸನೆಂಬ ಅಗಸನಿಗೆ ಶ್ರೀಚರಣರ ವಸ್ತ್ರಗಳನ್ನು ಒಗೆಯುವ ಮಹದ್ಭಾಗ್ಯ ಲಭಿಸಿತ್ತು. ತನ್ನ ದರ್ಶನದ ನಂತರವೂ ಸಹ ಕೆಟ್ಟ ಕೃತ್ಯಗಳನ್ನು ಬಿಡದಂತಹವರಿಗೆ ವಿಚಿತ್ರ ಕಷ್ಟ ಎದುರಾಗುತ್ತಿದ್ದವು. ಪುನಃ ಶ್ರೀಗಳನ್ನೇ, ಅವುಗಳಿಂದ ಪಾರಾಗಲೂ, ಆಶ್ರಯಿಸಬೇಕಾಗುತ್ತಿತ್ತು! ತೀರಿಹೋದವರಿಗೆ ವಿಧಿಯಾಗಿ ಶ್ರದ್ಧೆಯಿಂದ ಶ್ರಾದ್ಧಕರ್ಮ ಮಾಡಲೂ ಹೇಳುತ್ತಿದ್ದರು. ಅಷ್ಟಾದಶ

ವರ್ಣರೂ ತನ್ನ ಮಕ್ಕಳಂತೆ ಎಂದೂ, ಯಾರ ಮೇಲೂ ಪಕ್ಷಪಾತ ಬುದ್ಧಿ ಇರಲಾರದೆಂದು, ಅವರವರ ಧರ್ಮಕರ್ಮಗಳ ಪ್ರಕಾರ ಫಲ ಕೊಡುತ್ತಿರುವೆನೆಂದು ಹೇಳುತ್ತಿದ್ದರು. ಈ ದಿನ ಸಿಕ್ಕಿದ ಮಹದವಕಾಶ ಪುನಃ ಲಭಿಸುವುದಿಲ್ಲವೆಂದು, ಮುಂದಿನ ಅವತಾರದಲ್ಲಿ ಒಂದಷ್ಟು ಕಠಿಣವಾಗಿ ವರ್ತಿಸುವೆನೆಂದೂ ಹೇಳುತ್ತಿದ್ದರು. ಎಷ್ಟೋ ಜನುಮಗಳ ಪುಣ್ಯದಿಂದ ಶ್ರೀಗಳ ದರ್ಶನ ಲಭಿಸುತ್ತಿದೆ ಎಂದು, ಕೈಗೆ ಸಿಕ್ಕಿದ ಅವಕಾಶ ಸದುಪಯೋಗಿಸಿಕೊಳ್ಳಬೇಕೆಂದು, ಇಲ್ಲದಿದ್ದರೆ ಅನೇಕ ಜನುಮಗಳ ನಂತರವೇ ಸದ್ಗುರು ದರ್ಶನ ಲಭಿಸಬಹುದೆಂದೂ ಹೇಳುತ್ತಿದ್ದರು. ಈ ವಿಶಾಲ ಪ್ರಪಂಚದೊಳು ಯಾವ ಯುಗದಲ್ಲಾದರೂ ಒಂದೂ ಕಾಲು ಲಕ್ಷ ಸಿದ್ಧ ಪುರುಷರು, ತನ್ನ ಅಂಶದವರಿರುವರೆಂದೂ, ಅವರಲ್ಲಿ ಯಾರನ್ನು ಆಶ್ರಯಿಸಿದರೂ ತನ್ನ ಅನುಗ್ರಹ ಅವರ ಮೂಲಕ ಲಭಿಸುವುದೆನ್ನುತ್ತಿದ್ದರು.

ಈ ಸೃಷ್ಟಿಗೆಲ್ಲಾ ಅವರೇ ಆಧಾರವೆಂದು, ತನ್ನ ಸಂಕಲ್ಪದಿಂದಲೇ ಸೃಷ್ಟಿಯ ಸ್ಥಿತಿ ಲಯಗಳು ನೆರವೇರುತ್ತಿವೆ ಎಂದೂ ಹೇಳುತ್ತಿದ್ದರು. ನಿನ್ನ ಗುರುವಿಗೆ ನೀನು ನಮಸ್ಕರಿಸಿದರೇ, ಅವರು ಅವರ ಗುರುವಿಗೆ ನಮಸ್ಕರಿಸುವರು. ಈ ರೀತಿ ನಾವು ಯಾವ ಗುರುವಿಗೆ ನಮಸ್ಕರಿಸಿದರೂ ಕೊನೆಗೆ ಅದು ಆದಿಗುರುಗಳಾದ ಶ್ರೀಪಾದರಿಗೇ ಸೇರುವುದೆಂದು ಹೇಳುತ್ತಿದ್ದರು. ದೇವತೆಗಳಿಗೆ ಕೋಪ ಬಂದರೇ ಗುರುಗಳು ಕಾಪಾಡುವೆರೆಂದೂ, ಗುರುಗಳಿಗೆ ಮನಸ್ಸು ಮುರಿದರೇ ರಕ್ಷಕ ಯಾರೂ ಇರಲಾರನೆಂದೂ ಹೇಳುತ್ತಿದ್ದರು. ತನ್ನನ್ನು ಆರಾಧಿಸುವರಿಗೆ ಇಹ ಪರ ಲಾಭಗಳು ಎರಡೂ ಲಭ್ಯವೆಂದು, ಯಾರನ್ನು ದ್ವೇಷಿಸಿದರೂ ಕೊನೆಗೆ ಆ ದ್ವೇಷವೂ ತನ್ನನ್ನೇ ಸೇರುವುದೆಂದೂ ಹೇಳುವರು.

ತಾನು ಅನುಗ್ರಹ ಮಾಡಲೆಣಿಸಿದರೇ ಯೋಗ್ಯತೆ ಅಯೋಗ್ಯತೆಗಳು ಗಣನೆಗೇ ಬಾರವೆಂದು, ಆದರೇ ತನ್ನ ಅನುಗ್ರಹಕ್ಕೆ ನಮ್ಮಲ್ಲಿ ಸಾತ್ವಿಕ ಭಾವಗಳು ತುಂಬಿ ತುಳುಕುತ್ತಿರಬೇಕೆಂದೂ ಹೇಳುತ್ತಿದ್ದರು.

## ಹೃದಯದಲ್ಲಿ ಭಗವನ್ನಾಮ ಸ್ಮರಿಸುತ್ತಾ ಸದಾ ಕರ್ಮಗಳನ್ನಾಚರಿಸಬೇಕು

ಕುರುಂಗಡ್ಡೆ ಮಹಿಮಾನ್ವಿತ ಕ್ಷೇತ್ರವೆಂದು, ಇಲ್ಲಿರುವ ಮಹೇಶ್ವರನು ಜಾಗೃತಮೂರ್ತಿ ಎಂದು, ಇಲ್ಲಿಗೆ ದೇವತೆಗಳು, ಯೋಗಿಗಳು, ಮಹರ್ಷಿಗಳು, ಮಹಾಪುರುಷರೂ ಮಾರು ವೇಷದಲ್ಲಿ ಜನರ ಕಣ್ಣಿಗೆ ಕಾಣದೇ ಇರುವರೆಂದು, ಇಲ್ಲಿ ಎಲ್ಲರಿಗೂ, ಅವರವರಿಗೆ ತಕ್ಕ ಸ್ಥಾನ ಇರುವುದೆಂದೂ, ಮನದಲ್ಲಿ ಭಗವನ್ನಾಮವನ್ನು ಸ್ಥಿರಗೊಳಿಸಿಕೊಂಡು ಸದಾ ಕರ್ಮಗಳನ್ನಾಚರಿಸಬೇಕೆಂದು ಮತ್ತು ಆ ಕರ್ಮಗಳು ಧರ್ಮಬದ್ಧವಾಗಿರಬೇಕೆಂದು ಹೇಳುತ್ತಿದ್ದರು. ತನ್ನ ದರ್ಶನದಿಂದ ಮಹಾಪಾಪಗಳು ತೊಲಗುವವೆಂದು, ನಂತರ ಅಂತವರು ಪುಣ್ಯಕರ್ಮಗಳಲ್ಲಿ ಭಾಗವಹಿಸಿದರೇ ಶುಭ ಫಲಗಳು ಹೊಂದಲೂ ಸುಲಭವಾಗುವುದೆನ್ನುವರು. ಶ್ರೀಪಾದರ ವಚನಗಳನ್ನು ಅನುಸರಿಸುತ್ತಾ ನಮ್ಮ ಜೀವನಗಳನ್ನು ನಡೆಸುತ್ತಾ ಪುನೀತರಾಗೋಣ!



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 49

# ಶ್ರೀಪಾದರು ಕರ್ಮ ವಿಧ್ವಂಸ ಮಾಡುವ ವಿಧಾನಗಳು

### 33 ಸಂಖ್ಯಾ ವಿಶೇಷತೆ, ಕುರುಂಗಡ್ಡೆಯಲ್ಲಿ ಅವರ ಕಾರ್ಯಕ್ರಮಗಳು

ಒಮ್ಮೆ ಶ್ರೀಪಾದರು ಹೀಗೆಂದರು, ''ಶಂಕರ ಭಟ್ಟಾ! ನಾವು ಅನುಷ್ಠಾನ ಮಾಡುವುದು ಅಗ್ನಿ ವಿದ್ಯೆ. ಅಗ್ನಿದೇವನ ಉಪಾಸನೆ ಶ್ರೋತ್ರಿಯ ಲಕ್ಷಣ. ನಿನ್ನ ಅಗ್ನಿ ಉಪಾಸನೆ, ಅಡಿಗೆ ಮನೆ ಒಲೆ ಹತ್ತಿಸಿ ಅಡಿಗೆ ಮಾಡುವುದೇ.'' ಆಗ ನಾನು ''ಮಹಾಗುರುಗಳಿಗೆ ಜಯವಾಗಲಿ! ನನ್ನ ಅನಂತರವೂ ಈ ಒಲೆ ಹಾಗೇ ಉರಿಯುತ್ತಾ ಇರಲಿ'' ಎಂದು ನುಡಿದೆ. ಶ್ರೀಗಳು, ''ನಿನ್ನ ಅಡಿಗೆ ಒಲೇಗೆ ಸ್ವಂತ ಶಕ್ತಿ ಇಲ್ಲ. ನನ್ನ ಯೋಗಾಗ್ನಿ ಸೇರುವಿಕೆಯಿಂದಲೇ ಈ ಒಲೆಯ ಮೇಲೆ ಅಡಿಗೆ ಪ್ರಸಾದವಾಗಿ ಭಕ್ತರ ಹಸಿವು ಮತ್ತು ಕಷ್ಟಗಳನ್ನು ಪರಿಹರಿಸುತ್ತಿದೆ. ಈ ಅಡಿಗೆ ಒಲೆ ಇನ್ನೊಂದು 9 ವರುಷಗಳು ಮಾತ್ರವೇ ಉರಿಯಬೇಕು. ಅಂದರೇ ನನ್ನ 30ನೆಯ ವರುಷ, ನನ್ನ ಈ ಶರೀರವನ್ನ ಸಾಕುಮಾಡುವೆನು. ತದನಂತರ 3 ವರುಷ ತೇಜೋಮಯ ರೂಪದಲ್ಲಿ ಶ್ರದ್ಧಾಳುಗಳ ದರ್ಶನ ತರುವೆನು. ಆಗ 33 ವರುಷ ವಯಸಾಗುವುದು. **ಯೋಗಿಗಳು ಜೀವನದಲ್ಲಿ 33ನೇ ವರುಷ ಅನೇಕ ಬದಲಾವಣೆಗಳನ್ನು ತರುವ ವರುಷ.** ಬೆನ್ನೆಲುಬಿನ ಮಣಿಗಳೂ 33, ರುದ್ರಗಣಗಳ ಸಂಖ್ಯೆ ಸಹಾ 33 ಕೋಟಿ! ತದನಂತರ ಸಹಾ ನಮ್ಮ ಅಗ್ನಿಯಜ್ಞ ಮುಂದುವರಿಯುವುದು. ಕರ್ಮಗಳನ್ನು ಸ್ಥೂಲ ರೂಪಕ್ಕೆ ಬರ ಮಾಡಿಸುವ ಮುನ್ನ ದಹನ ಮಾಡುವ ಸೂಚಕವೇ ನನ್ನ ಈ ಅಗ್ನಿ ಆರಾಧನೆ. ಆದರೆ ಭಕ್ತರ ಕರ್ಮಗಳು, ಸ್ಥೂಲ ರೂಪ ಹೊಂದುವ ಮುನ್ನ ಸೂಕ್ಷ್ಮ ರೂಪದಲ್ಲಿರುವವು. ಅದಕ್ಕೂ ಮುನ್ನ, ಕಾರಣ ರೂಪದಲ್ಲಿ ಕಾರಣ ಶರೀರವನ್ನಂಟಿಯಿರುವುದು. ಆದ್ದರಿಂದ 33ನೆಯ ವರುಷ ದಾಟಿದ ನಂತರ ಇಂತಹ ಅಗ್ನಿಪೂಜೆ ನನಗವಸರ. ಆಗಲೇ ನನ್ನಾಶ್ರಯಿಸಿದವರ ಪಾಪ ಕರ್ಮಗಳನ್ನು ಸೂಕ್ಷ್ಮ ರೂಪದಲ್ಲಿರುವವನ್ನು, ಕಾರಣ ಶರೀರದಲ್ಲಿರುವವನ್ನು ನನ್ನ ಯೋಗಾಜ್ಞೆಯಿಂದ ದಹನ ಮಾಡುವೆನು. ನೀನು ಮಾತ್ರ ನನಗೆ 30ನೆಯ ವರುಷ ಬರುವವರೆಗೂ ಈ ಅಡಿಗೆ ಮನೆಯ ಒಲೆಯನ್ನು ಉರಿಸುತ್ತಲೇ ಇರು. ನಂತರ ಬರುವ ನನ್ನ ಭಕ್ತರು, ಅವರವರ ಅಡಿಗೆ ಅವರೇ ಮಾಡಿಕೊಂಡು ಭುಜಿಸಿ ಹೋಗುವರು. ಹಾಗೆ 3 ವರುಷ ಕಳೆಯುವುದು. ನಂತರ, ಸ್ಥೂಲ ರೂಪದಲ್ಲಿ ಈ ಅಗ್ನಿಪೂಜೆಯ ಅಗತ್ಯವೇ ಇಲ್ಲ. ಪೃಥ್ವಿ ಯಜ್ಞವನ್ನು ಪ್ರಾರಂಭಿಸಿರುವೆನು. ದಿಗ್ವಿಜಯವಾಗಿ ನಡೆಯುತ್ತಿದೆ. ಜಲ ಯಜ್ಞವನ್ನೂ ಪ್ರಾರಂಭಿಸಿರುವೆನು. ಅದು ಸಹಾ ಬ್ರಹ್ಮಾಂಡವಾಗಿ ನಡೆಯುತ್ತಿದೆ. ಈಗ ಅಗ್ನಿಪೂಜೆಯನ್ನು ಅಗ್ನಿ ಯಜ್ಞವಾಗಿ ಆರಂಭಿಸಿರುವೆನು. ಇದೂ ಸಹಾ ನಿರಾತಂಕವಾಗಿ ಸಾಗುವುದು. ಸಮಸ್ತ ಜೀವರಾಶಿಗಳಲ್ಲಿನ ಅಗ್ನಿ ಸ್ವರೂಪವೂ ನಾನೇ, ಅವೆಲ್ಲವನ್ನೂ ಪವಿತ್ರೀಕರಿಸುವವನೂ ನಾನೇ! ಎಲ್ಲವನ್ನೂ ದಹನ ಮಾಡುವವನು ಸಹಾ ನಾನೇ!'' ಎಂದು ಗಂಭೀರವಾಗಿ ಹೇಳಿದರು.

ಪಂಚ ತತ್ತ್ವಗಳಿಗೆ ಸಂಬಂಧಿಸಿದ ಯಜ್ಞಗಳನ್ನು ಕುರಿತು ನಾನೆಂದೂ ಕೇಳಿರಲಿಲ್ಲ. ಶ್ರೀಪಾದರ ಲೀಲಾವಿಧಾನವನ್ನು ಕುರಿತು ಯೋಚಿಸುವುದು ವ್ಯರ್ಥವೆಂದು ನಿರ್ಧರಿಸಿದೆನು. ಒಂದು ದಿನ ನೂತನ ದಂಪತಿಗಳು ಶ್ರೀಪಾದರ ದರ್ಶನಕ್ಕಾಗಿ ಬಂದರು. ಅವರಿಬ್ಬರನ್ನೂ ಪಂಚದೇವ್ ಪಹಾಡ್‌ನ ತನ್ನ ದರ್ಬಾರ್‌ನಲ್ಲಿ ವಾಸಿಸಲೂ ಆಜ್ಞಾಪಿಸಿದರು. ಎರಡು ದಿನಗಳಿಗೆ ಆ ಯುವಕ

ಮೃತನಾದನು. ಅವರು ಮಹಾಗುರುಗಳು ತಮ್ಮನ್ನು ಕಾಪಾಡುವರೆಂದೂ ಎಷ್ಟೋ ವರಗಳು ನೀಡುವ ಕರುಣಾದೈವವೆಂದು ನಂಬಿ ಬಂದಿದ್ದರು. ಆದರೇ ಆ ಅಬಲೆ, ನವ ವಧುವಿಗೆ ಅತಿ ದುರ್ಭರವಾದ ವೈಧವ್ಯ ಪ್ರಾಪ್ತವಾಯಿತು. ಆ ವಿಧವೆಯ ಬಂಧುಮಿತ್ರರು ಪಂಚದೇವ್ ಪಹಾಡ್‌ಗೆ ಬಂದರು. ಶವ ದಹನ ಮಾಡಬೇಕೋ ಬೇಡವೋ ಎಂಬುವ ಸಂದಿಗ್ಧದಲ್ಲಿದ್ದರು. ಶ್ರೀಪಾದರ ಅಜ್ಞೆ ವಿನಃ, ಅಲ್ಲಿಂದ ಶವವನ್ನು ಈಚೆಗೆ ತೆಗೆದುಕೊಂಡು ಹೋಗಲೂ ಅಸಾಧ್ಯ. ಆ ನವ ವಧು ಶೋಕ ದೇವತೆಯಂತೆ ಇದ್ದಳು. ಶ್ರೀಪಾದರು ತಮ್ಮ ದರ್ಬಾರಿಗೆ ಆಗಮಿಸಿದರು. ಆಗ ಆ ನವ ವಧು, ಶ್ರೀಗಳಿಗೆ ತನ್ನ ದೌರ್ಭಾಗ್ಯ ತಿಳಿಸಿದಳು. ಕರ್ಮಫಲ ಅನಿವಾರ್ಯವೆಂದರು. ''ಜಡವಾದ ಕರ್ಮಕ್ಕೆ ನಿಜಕ್ಕೂ ನನ್ನ ಪತಿಗೆ ಮೃತ್ಯುವನ್ನು ಪ್ರಸಾದಿಸುವ ಶಕ್ತಿ ಇದ್ದರೇ, ಆ ಕರ್ಮಕ್ಕೆ ದೇವತಾ ಸ್ಥಾನ ನೀಡಿ ಆಲಯಗಳು ಕಟ್ಟಿಸಿ, ಆರಾಧಿಸುವುದು ಒಳ್ಳೆಯದು! ಚೈತನ್ಯ ಸ್ವರೂಪ, ಅಗ್ನಿ ವಸ್ತ್ರಧಾರಿ ಮತ್ತು ಅಗ್ನಿ ರೂಪಿಯಾದ ಶ್ರೀಪಾದ ಶ್ರೀವಲ್ಲಭರಿಗೆ ಸಾಧ್ಯಾಸಾಧ್ಯಗಳಿಲ್ಲವೆಂದು ಕೇಳಿದ್ದೆನು. ಈ ಅಭಾಗ್ಯಳಿಗೆ ಮಾಂಗಲ್ಯ ಭಿಕ್ಷೆಯನ್ನಿತ್ತು ಧನ್ಯಳನ್ನಾಗಿ ಮಾಡಬೇಕು'' ಎಂದು ಬೇಡಿಕೊಂಡಳು. ಸತ್ಯಕ್ಕೆ ಆ ನವ ವಧುವಿಗೆ ಶ್ರೀಗಳ ದಯೆ ಮತ್ತು ಕಾರುಣ್ಯಗಳ ಮೇಲೆ ಸಂಪೂರ್ಣ ನಂಬಿಕೆ ಇತ್ತು.

## ತೀರಿಹೋದವನಿಗೆ ಜೀವದಾನ

ಆಗ ಶ್ರೀಪಾದರು, ''ವಿಶ್ವಾಸೋಫಲದಾಯಕಂ'' ನನ್ನಲ್ಲಿ ನಿನಗೆ ಅಷ್ಟು ದೃಢ ನಂಬಿಕೆ ಇದ್ದರೇ ನಿನ್ನ ಪತಿ ಜೀವಂತವಾಗುವನು. ಆದರೆ ಕರ್ಮ ಸಿದ್ಧಾಂತಕ್ಕೆ ಭಿನ್ನವಾಗಲ್ಲದೇ ಒಂದು ಉಪಾಯ ಹೇಳುವೆನು. ನಿನ್ನ ಮಂಗಳಸೂತ್ರ ಮಾರಿ ನಿನ್ನ ಪತಿಯ ಭಾಗ್ಯಕ್ಕೆ ಸಮವಾದ ಸೌದೆಗಳನ್ನು ತಂದುಕೊಡು. ಆ ಸೌದೆ ಅಡಿಗೆಗೆ ಉಪಯೋಗಿಸಿ ಅನ್ನ ಮಾಡೋಣ. ಅದರಿಂದ ನಿನ್ನ ಮಾಂಗಲ್ಯಕ್ಕೆ ಉಂಟಾದ ಅಮಾಂಗಲ್ಯ; ಸೌದೆ ಸುಡುವುದರಿಂದ ನಿನ್ನ ಪತಿ ಸುಟ್ಟು ದಹನವಾಗುವ ಅಮಾಂಗಲ್ಯ ಮತ್ತು ಮೃತ್ಯುರೂಪ ಕರ್ಮ ಸ್ಪಂದನೆಗಳು ಆಕರ್ಷಿಸಿದ ಸೌದೆ ದಹನವಾಗಲು ತಯಾರಾದ ಶ್ರಾದ್ಧಾನ್ನ ಅಮಾಂಗಲ್ಯ ಸಹಾ ಶಾಂತಿ ಹೊಂದುವುದು'' ಎಂದರು ಶ್ರೀಪಾದರು. ಆ ಮಹಿಳೆ ಅದೇ ಪ್ರಕಾರ ಮಾಡಲೂ ಆಕೆಯ ಪತಿ ಜೀವಂತವಾದನು.

ಶ್ರೀಪಾದರು ಭಕ್ತರ ವಿವಿಧ ಪಾಪ ಕರ್ಮಗಳನ್ನು ಸೌದೆಗೆ ಆಕರ್ಷಿಸುತ್ತಿದ್ದರು. ಅದರಿಂದ ಸೌದೆ ಭಸ್ಮಗೊಂಡು, ರುಚಿಕರ ಅಡಿಗೆ ತಯಾರಾಗಿ, ಪ್ರಸಾದವಾಗಿ ಶುಭಗಳನ್ನು ಪ್ರಸಾದಿಸುತ್ತಿತ್ತು.

## ದರಿದ್ರ ಬ್ರಾಹ್ಮಣನ ಮೇಲೆ ವಿಶೇಷ ಅನುಗ್ರಹ

ಇನ್ನೊಮ್ಮೆ ಬಡ ಬ್ರಾಹ್ಮಣನೊಬ್ಬನು ಶ್ರೀಗಳ ದರ್ಶನಕ್ಕಾಗಿ ಬಂದನು. ಶ್ರೀಪಾದರು ತನ್ನನ್ನು ಕರುಣಿಸದೇ ಹೋದರೇ ಆತ್ಮಹತ್ಯೆಯೇ ಗತಿ ಎಂದು ನುಡಿದನು. ಆಗ ಉರಿಯುತ್ತಿರುವ ಸೌದೆ ಒಂದನ್ನು ತಂದು ಆ ಬ್ರಾಹ್ಮಣನಿಗೆ ಇಟ್ಟರು! ಆ ಬ್ರಾಹ್ಮಣ ಬಹಳಷ್ಟು ಕಾಲ ವ್ಯಥೆ ಪಟ್ಟನು. ಆಗ ಶ್ರೀಗಳು, ''ಎಲೈ ಬ್ರಾಹ್ಮಣನೇ! ನೀನು ಆತ್ಮಹತ್ಯೆ ಮಾಡಿಕೊಳ್ಳಲೂ ಹೋದೆ, ನನ್ನನ್ನು ಕಾಣದಿದ್ದರೇ ನಿಜಕ್ಕೂ ಆತ್ಮಹತ್ಯೆಗೆ ಬಲಿಯಾಗಿರುವೆ. ಆದ್ದರಿಂದ ನಿನ್ನಲ್ಲಿ ಆತ್ಮಹತ್ಯೆಗೆ ಸಂಬಂಧಪಟ್ಟ ಎಲ್ಲಾ ಪಾಪ ಕರ್ಮ ಸ್ಪಂದನೆಗಳೂ, ಈ ಉರಿಯುತ್ತಿರುವ ಸೌದೆಗೆ ಸೇರಿ ಸುಟ್ಟುಹೋಗಿವೆ. ಇನ್ನು ಮುಂದೆ ನಿನಗೆ ದಾರಿದ್ರ್ಯಬಾಧೆ ಇರುವುದಿಲ್ಲ. ಈ

ತಣ್ಣಗಾದ ಕೊಳ್ಳಿಯನ್ನು ನಿನ್ನ ಮಡಿ ಪಂಚೆಯಲ್ಲಿ ಸುತ್ತಿಕೊಂಡು ಭದ್ರವಾಗಿ ನಿನ್ನ ಮನೆಗೆ ತೆಗುದುಕೊಂಡು ಹೋಗು. ಆತ ಹಾಗೇ ಮಾಡಲು, ಮನೆಯಲ್ಲಿ ಮೂಟೆ ಬಿಚ್ಚು ನೋಡಲು ಅದು ಬಂಗಾರವಾಗಿತ್ತು! ಬ್ರಾಹ್ಮಣನ ದರಿದ್ರಬಾಧೆ ಹಾಗೆ ತೀರಿತು.

ಶ್ರೀಪಾದರು ತಮ್ಮ ಅಗ್ನಿ ಯಜ್ಞದಿಂದ ಬಲು ವಿಚಿತ್ರ ರೀತಿಗಳಲ್ಲಿ ತನ್ನ ಭಕ್ತರ ಪಾಪ ಕರ್ಮಗಳನ್ನು ಧ್ವಂಸ ಮಾಡುತ್ತಿದ್ದರು. ಒಮ್ಮೊಮ್ಮೆ ತನ್ನ ಭಕ್ತರನ್ನು ಪ್ರತ್ಯೇಕವಾದ ತರಕಾರಿ, ಬದನೇಕಾಯೋ, ಬೆಂಡೇಕಾಯೋ ತರಲೂ ಹೇಳುತ್ತಿದ್ದರು. ಆ ತರಕಾರಿಯಲ್ಲಿ ಭಕ್ತರ ಪಾಪ ಕರ್ಮ ರೂಪ ಸ್ಪಂದನೆಗಳನ್ನು ಆಕರ್ಷಿಸುತ್ತಿದ್ದರು. ಅದೇ ತರಕಾರಿಯ ಊಟ, ತಪ್ಪದೇ ಭಕ್ತರಿಂದ ತಿನಿಸಿ ಅವರ ಕರ್ಮ ದೋಷವನ್ನು ನಿರ್ಮೂಲಿಸುತ್ತಿದ್ದರು.

ಒಂದು ಹೆಣ್ಣು ರಜಸ್ವಲೆಯಾದರೂ ಮದುವೆ ಆಗಲಿಲ್ಲ. ಅವಳ ಕುಜದೋಷ ನಿವಾರಣೆಗೆ ಗಟ್ಟಿ ತೊಗರೀ ಬೀಜ ತರಿಸಿ, ಎಲ್ಲರನ್ನೂ ತಿನ್ನಲೂ ಆದೇಶಿಸಿದರು. ಹೀಗೆ ಅವಳ ಕರ್ಮ ತೊಲಗಿ, ಒಳ್ಳೆಯ ಗಂಡನ ಜೊತೆ ಮದುವೆ ನೆರವೇರಿತು.

ಮತ್ತಿತರನ್ನು ಹಸುವಿನ ತುಪ್ಪ ತಂದು ದರ್ಬಾರಿನ ಅಡಿಗೆಗೆ ಉಪಯೋಗಿಸಬೇಕೆಂದು ಆಜ್ಞಾಪಿಸಿದರು. ಇನ್ನು ಕೆಲವರನ್ನು ಆ ತುಪ್ಪದಿಂದ ದೀಪ ಉರಿಸಲು ಹೇಳಿದರು. ಅತಿ ಕ್ಲಿಷ್ಟಕಾಲ ಬಂದಾಗಲೋ, ಕನ್ಯೆಯರಿಗೆ ವಿವಾಹ ಆಗದಿದ್ದರೇನೋ, ರಾಹು ಕಾಲದಲ್ಲಿ ಶುಕ್ರವಾರಗಳಲ್ಲಿ ಅಂಬಿಕಾಪೂಜೆ ಮಾಡಲು ಹೇಳುತ್ತಿದ್ದರು.

ಒಮ್ಮೆ ಒಬ್ಬ ಭಕ್ತನು ಆನಾರೋಗ್ಯದಿಂದ ಹಾಸಿಗೆ ಹಿಡಿದನು. ಶ್ರೀಪಾದರು ಅತ ಮಲಗುವ ಆ ಮನೆಯಲ್ಲಿ ಹರಳೆ ಎಣ್ಣೆಯ ದೀಪವಿಟ್ಟು ಒಂದು ರಾತ್ರಿಯೆಲ್ಲಾ ಉರಿಯುವಂತೆ ನೋಡಿಕೊಂಡರೇ ಆತ ವಾಸಿಯಾಗುವನೆಂದು ಹೇಳಿದರು. ಹಾಗೇಯೇ ರೋಗ ವಿಮುಕ್ತನಾದನು!

**ಮತ್ತೊಂದು ಭಕ್ತ ಪರಮ ನಿರ್ಭಾಗ್ಯ ಸ್ಥಿತಿಯಲ್ಲಿದ್ದನು. ಆಗ ಶ್ರೀಪಾದರು ಒಂದು ವಾರ ಕಾಲ, ಮನೆಯಲ್ಲಿ ಹಸುವಿನ ತುಪ್ಪದ ದೀಪ ಅಖಂಡವಾಗಿ ಉರಿಸಲು ಹೇಳಿ, ಮನೆಯಲ್ಲಿ ಪುನಃ ಶ್ರೀ ಲಕ್ಷ್ಮಿ ಕಳೆ ತಂದರು.** ಅಂತಹ ಎಷ್ಟೋ ವಿನೂತನ ಪದ್ಧತಿಗಳ ಮೂಲಕ ಆಶ್ರಿತ ಭಕ್ತರನ್ನು ಪಾಪ ವಿಮುಕ್ತರನ್ನಾಗಿ ಮಾಡುತ್ತಿದ್ದರು. ಆ ವಿಧಿವಿಧಾನಗಳನ್ನು ತಿಳಿದುಕೊಳ್ಳುವುದು ಮಾನವ ಮಾತ್ರರಿಗೆ ಸಾಧ್ಯವಾಗುವ ಕೆಲಸವಲ್ಲ.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 50

# ಗುರುನಿಂದಾ ಕಾರಣ, ಪ್ರಾಪ್ತಿಯಾಗುವ ದರಿದ್ರಾದಿ ಶಾಪಗಳ ನಿವೃತ್ತಿ ಮಾರ್ಗ - ಶ್ರೀ ನಾಮಸ್ಮರಣಾ ಮಹಿಮೆ

ಒಮ್ಮೆ ಶ್ರೀಪಾದ ಶ್ರೀವಲ್ಲಭರು ನನ್ನನ್ನುದ್ದೇಶಿಸಿ, ‘‘ನಮ್ಮ ಅಗ್ನಿ ಯಜ್ಞದ ನಂತರ, ನಾನು ವಾಯು ಯಜ್ಞವನ್ನು ಸಹಾ ಪ್ರಾರಂಭಿಸಲಿದ್ದೇನೆ’’ ಎಂದು ತೀರ್ಮಾನಿಸಿದರು.

ವಾಯು ಯಜ್ಞವೆಂದರೇ ಏನೋ ನನಗೆ ತಿಳಿಯದು. ಹೊಟ್ಟೆ ನೋವಿನಿಂದ ಒಬ್ಬ ವೃದ್ಧ ಬ್ರಾಹ್ಮಣನು ಕುರಂಗಡ್ಡೆಗೆ ಬಂದನು. ವಿಪರೀತ ಬಾಧೆಯಿಂದ ನರಳುತ್ತಾ, ಸಾವೇ ತನಗೆ ಗತಿ ಎಂದು ನುಡಿದನು.

**ಆಗ ಶ್ರೀಪಾದರು, “ನೀನು ನಿನ್ನ ಹಿಂದಿನ ಜನುಮದಲ್ಲಿ ನಿನ್ನ ಕಠಿಣ ಮಾತುಗಳಿಂದ ಎಷ್ಟೋ ಜನರನ್ನು ನೋಯಿಸಿದ್ದೀಯ. ಚುಚ್ಚುವ ಮಾತಿನಿಂದ ನೋಯಿಸಿದ್ದೀಯ. ಅದರ ಫಲವೇ ನಿನಗಂಟಿರುವ ಈ ವ್ಯಾಧಿ. ಮಾನವನ ವಾಗ್ದೋಷ ಕಳೆದುಕೊಳ್ಳಲೂ ಕಲಿಯುಗದಲ್ಲಿ ಒಂದೇ ಮಾರ್ಗ, ಭಗವನ್ನಾಮ ಸ್ಮರಣೆ.** ಇದರಿಂದ ವಾಯು ಮಂಡಲ ಶುದ್ಧಿ ಆಗುವುದು. ನಾನು ಕುರಂಗಡ್ಡೆಯಲ್ಲಿ ನಾಮ ಸ್ಮರಣೆಯೆಂಬ ಮಹಾಯಜ್ಞ ಪ್ರಾರಂಭಿಸಿ ಈ ಶುಭಕಾರ್ಯಕ್ಕೆ ನಾಂದಿ ಮಾಡಿದ್ದೇನೆ. ಯೋಗ ಸ್ಥಾಯಿಯಲ್ಲಿ ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂಬ ವಾಗ್ರೂಪಗಳನ್ನು ನಿಯಂತ್ರಿಸಲಿದ್ದೇನೆ. **ಶ್ರೀಪಾದ ವಲ್ಲಭಾ ದಿಗಂಬರಾ! ಎಂದೂ ದತ್ತ ದಿಗಂಬರಾ! ಎಂದು ಮನಸ್ಪೂರ್ತಿಯಾಗಿ ನನ್ನ ನಾಮ ಸ್ಮರಣ ಯಾರು ಮಾಡುವರೋ ಅಂತಹವರಿಗೆ ಅತ್ಯಂತ ಸುಲಭಪ್ರಾಪ್ತನಾಗಿ, ಶುಭಗಳನ್ನು ತರುವೆನು” ಎಂದರು.**

**ಶ್ರೀಚರಣರು ಆದೇಶಿಸಿದ ಹಾಗೆ 3 ರಾತ್ರಿ, 3 ಹಗಲುಗಳು ಕುರುಂಗಡ್ಡೆಯಲ್ಲಿ “ಶ್ರೀಪಾದ ಶ್ರೀವಲ್ಲಭ ದಿಗಂಬರ” ಎಂಬ ನಾಮಧ್ಯಾನ ಮಾಡಲಾಯಿತು.** ಆ 3 ದಿನ ಮಾತ್ರ ಶ್ರೀಗಳು ಯಾರನ್ನಾದರೂ ಕುರುಂಗಡ್ಡೆಯಲ್ಲಿ ರಾತ್ರಿ ಹೊತ್ತು ತಂಗಲು ಅನುಮತಿ ನೀಡಿದರು. ವೃದ್ಧ ಬ್ರಾಹ್ಮಣ ಹೊಟ್ಟೆನೋವು ಮಾಯವಾಯಿತು.

ಶ್ರೀಪಾದರು ಹೀಗೆ ಅಂದರು, ‘‘ಪ್ರಸ್ತುತಕ್ಕೆ ವಾಯು ಮಂಡಲವೆಲ್ಲಾ ಕೆಟ್ಟ ವಾಕ್ಕುಗಳಿಂದ ತುಂಬಿದೆ. **ಪ್ರತಿ ಒಂದು ವಾಕ್ಕನ್ನು ನುಡಿಯುವಾಗಲು ಮಾನವ, ಪ್ರಕೃತಿಯಲ್ಲಿನ ಸತ್ವರಜಸ್ತಮೋ ಗುಣಗಳಲ್ಲಿ ಒಂದೋ, ಎರಡೋ ಅಥವಾ ಮೂರು ಗುಣಗಳನ್ನು ಪ್ರಜ್ವಲಿಸುತ್ತಿದ್ದಾನೆ. ಹಾಗೆ ಪ್ರಜ್ವಲಗೊಂಡ ಗುಣಗಳು ಒಳ್ಳೆಯದಕ್ಕೆ ಉಪಯೋಗಕ್ಕೆ ಬಾರದ ಕಾರಣ, ಪೃಥ್ವಿ ವ್ಯಾಪಸ್ತೇಜೋ ವಾಯುರಾಕಾಶಗಳ ಅಂದರೇ ಭೂಮಿ, ನೀರು, ಬೆಳಕು, ಗಾಳಿ ಮತ್ತು ಆಕಾಶಗಳ ಮೇಲೇ ದುಷ್ಪಭಾವ ತೋರಿಸುತ್ತಿವೆ. ಈ ಪಂಚ ಭೂತಗಳು ದೂಷಣೆಗೆ ಗುರಿಯಾದ ಕಾರಣ, ಎಲ್ಲವೂ ದೂಷಿತವಾಗಿ, ಮನುಷ್ಯನ ಮನಸ್ಸು, ಶರೀರ ಮತ್ತು ಅಂತರಾತ್ಮ ದೂಷಿತವಾಗಿ ಅಂತಹ ಅವನು ಪಾಪ ಕರ್ಮಿಯಾಗುತ್ತಿದ್ದಾನೆ. ನಂತರ ದರಿದ್ರನಾಗುತ್ತಿದ್ದಾನೆ. ಆ ದರಿದ್ರದಿಂದ ಪಾಪದ ಬುತ್ತಿ**

ಬೆಳೆಸಿಕೊಳ್ಳುತ್ತಿದ್ದಾನೆ. ಆದ್ದರಿಂದ ಮನಸ್ಸು ದೋಷಗೊಂಡು, ದಾನ, ಪುಣ್ಯ ಮಾಡಲಾರದೇ ಹೋಗುತ್ತಿದ್ದಾನೆ. ತತ್ಫಲಿತವಾಗಿ ಪುನಃ ದರಿದ್ರನಾಗುತ್ತಿದ್ದಾನೆ.

## ತ್ರಿಕರಣಶುದ್ಧಿ ಆವಶ್ಯಕತೆ

ಮಾನವನು ದರಿದ್ರ ಬಾಧೆಗಳಿಂದ ವಿಮುಕ್ತನಾಗಬೇಕೆಂದರೇನೋ ಅಥವಾ ಇತರ ಪಾಪಕರ್ಮಗಳಿಂದ ವಿಮುಕ್ತನಾಗಬೇಕೆಂದರೇನೋ, ಮನೋವಾಕ್ಕಾಯಗಳಲ್ಲಿ ಶುದ್ಧಿ ಇರಬೇಕು. ಇದನ್ನೇ ತ್ರಿಕರಣಶುದ್ಧಿ ಎನ್ನುವರು. ಮನದಲ್ಲಿರುವುದೇ ಬಾಯಲ್ಲಿ ಬರಬೇಕು. ಬಾಯಲ್ಲಿ ನುಡಿದಿದ್ದೇ ಚರ್ಯೆಯಲ್ಲಿ ತೋರಿಸಬೇಕು. ತ್ರಿಕರಣಶುದ್ಧಿ ಹೊಂದಿದ ಮಾನವನು ಮಹನೀಯನಾಗುತ್ತಿದ್ದಾನೆ.

ಮನದಲ್ಲಿ ನೆನೆಯುವುದು ಒಂದು, ಮಾತಿನಲ್ಲಿ ಹೊರಬರುವುದು ಮತ್ತೊಂದು, ಈ ಎರಡಕ್ಕೂ ಸಂಬಂಧವಿಲ್ಲದೇ ಕೈಯಲ್ಲಿ ಮಾಡುವುದು ಇನ್ನೊಂದು! ಇದೇ ತ್ರಿಕರಣಶುದ್ಧಿ ಇಲ್ಲದಿರುವುದು. ಆಗ ಅಂತಹವನು ದುರಾತ್ಮನಾಗುತ್ತಿದ್ದಾನೆ. ಈ ಕಲಿ ಕಾಲದಲ್ಲಿ ಸುಲಭವಾಗಿ ತರಿಸಲೂ ಮಾರ್ಗಗಳನೇಕ. ಅದರಲ್ಲಿ ನಾಮ ಸ್ಮರಣೆ ಅತ್ಯಂತ ಸುಲಭವಾದದ್ದು. ನಾಮ ಸ್ಮರಣೆ, ಉಚ್ಛಾರಣೆ ನಾಲಿಗೆ ಮೇಲಿದ್ದರೇ ಪವಿತ್ರವಾಕ್ಕು ಬಾಯಲ್ಲಿ ಬರುವುದು. ನಾಮ ಸ್ಮರಣೆ ಮಾಡುವಾಗ, ಮನಸ್ಸು ದೇವರ ಮೇಲೆ ಮಗ್ನವಾದರೇ ಮನಸ್ಸೂ ಪವಿತ್ರವಾಗುವುದು. ಇದೇ ಪವಿತ್ರಕರ್ಮ ಮಾಡಲು ಉತ್ತೇಜಕವಾಗಿರುವುದು.

## ಕರ್ಮ ವಿಮೋಚನೆ

ಒಮ್ಮೆ ಕ್ಷಯ ವ್ಯಾಧಿ ಪೀಡಿತನೊಬ್ಬ ಕುರುವಪುರಕ್ಕೆ ಬಂದನು. ಆತನಿಗೆ ಮಧುಮೇಹ ವ್ಯಾಧಿ ಸಹಾ ಇತ್ತು. ಇನ್ನೂ ಕೆಲವು ವ್ಯಾಧಿಗಳೂ ಇದ್ದವು. ಅವನನ್ನು ಕಂಡು ಶ್ರೀಗಳು ಕೋಪದಿಂದ ಹೀಗೆಂದರು, ''ಈತ ಹಿಂದಿನ ಜನುಮದಲ್ಲಿ ಮಹಾಕಳ್ಳ. ಎಷ್ಟೋ ಜನರ ಸೊತ್ತು ಕದ್ದು ಅವರ ಬಾಳನ್ನು ಹಾಳು ಮಾಡಿದ್ದಾನೆ. ಒಬ್ಬ ತಂದೆ ತನ್ನ ಮಗಳ ಮದುವೆಗೆ ಕೂಡಿಟ್ಟಿದ್ದ ಹಣವನ್ನು ಅಪಹರಿಸಿದ್ದಾನೆ. ಅ ನಷ್ಟದಿಂದ ಆ ಮದುವೆ ಮಾಡಲಾರದೇ ಹೋಯಿತು. ಸರಿ ವಯಸ್ಸಿನಲ್ಲಿ ವಿವಾಹ ಮಾಡದ ಕಾರಣ ಅವನನ್ನು ಊರಿನಿಂದ ಹೊರಹಾಕಿದರು. ವರದಕ್ಷಿಣೆ ಕೊಡಲಾಗದ ಕಾರಣ ಅವಳಿಗೆ ಮುದಿವಯಸಿನ ವರಗಳೇ ಸಿಗುತ್ತಿದ್ದರು. ಆಗ ಆ ಕನ್ಯೆ ಆತ್ಮಹತ್ಯೆ ಮಾಡಿಕೊಳ್ಳಲೂ, ತನ್ನ ಪೂರ್ಣ ಜೀವನ ಮಣ್ಣುಪಾಲು ಆಯಿತು. ಇದರ ಹೊಣೆ ನಮಗೆಲ್ಲಾ ತಿಳಿದಿದ್ದೇ, ಆ ಕ್ಷಯ ರೋಗಿ!''

ಆ ಕ್ಷಯ ರೋಗಿ, ಅತಿ ದೀನದಿಂದ ಶ್ರೀಚರಣರ ಕ್ಷಮೆ ಕೇಳಿದನು. ದಯಾಸಮುದ್ರನಾದ ಶ್ರೀಚರಣರು ಅವನನ್ನು ಪಂಚದೇವ್ ಪಹಾಡ್‌ನಲ್ಲಿನ ದರ್ಬಾರ್ ಗೋಶಾಲೆಯಲ್ಲಿ ಮಲಗಿಸಲು ಹೇಳಿದರು. ಅಲ್ಲಿ ಸೊಳ್ಳೆ ಕಾಟ. ಕುಡಿಯಲೂ ಸಿಹಿ ನೀರು ಸಹಾ ಕೊಡಕೂಡದೆಂದು ಗುರುದೇವರು ಆಜ್ಞಾಪಿಸಿದರು.

ಅವನಿಗೆ ಒಂದು ಕನಸಿನಲ್ಲಿ ರಾಕ್ಷಸರು ಕಂಡುಬಂದು ಅವನ ಕಂಠ ಹಿಚುಕಿ ಸಾಯಿಸುತ್ತಿದ್ದ ಹಾಗೆ ಆಯಿತು. ಮತ್ತೊಂದು ಕನಸಿನಲ್ಲಿ ದೊಡ್ಡ ಬಂಡೆಯೊಂದು ಅವನ ಎದೆಯ ಮೇಲೆ ಇಟ್ಟ ಅನುಭವವಾಯಿತು! ಆ ಬಂಡೆಯ ಮೇಲೆ ಒಬ್ಬ ಬಲಿಷ್ಠ

ಫಹಿಲ್ವಾನ್ ಸಹಾ ಕೂತಂತೆ ಆಯಿತು. ಈ ಎರಡು ಕನಸುಗಳಿಂದ ಅವನ ಕರ್ಮ ನಶಿಸಲು, ಆತ ಸ್ವಸ್ಥನಾದನು. **ಭೌತಿಕವಾಗಿ ಅನೇಕ ವರುಷಗಳು ಬಾಧೆ ಅನುಭವಿಸಬೇಕಿದ್ದ ದುಷ್ಕರ್ಮ ಯೋಗವನ್ನು ಶ್ರೀಪಾದರು ಆ ಕ್ಷಯ ರೋಗಿಯಿಂದ, ಈ ಪ್ರಕಾರ ಮಾನಸಿಕವಾಗಿ ಅನುಭವಿಸುವ ಹಾಗೆ ಮಾಡಿ, ಕರ್ಮ ವಿಮುಕ್ತನನ್ನಾಗಿ ಮಾಡಿದರು.**



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 51

# ಜಲಗಂಡ ಮುಂತಾದ ಗಂಡಗಳಿಂದ ರಕ್ಷಣೆ

### ಗ್ರಂಥ ಪಾರಾಯಣ ಮಹಿಮೆ

ಇಷ್ಟರಲ್ಲಿ ಆಶ್ವಯುಜ ಕೃಷ್ಣ ದ್ವಾದಶಿ ಬಂತು. ಅಂದು ಹಸ್ತಾ ನಕ್ಷತ್ರ. ಕೃಷ್ಣಾನದಿಯಲ್ಲಿ ಸ್ನಾನ ಮಾಡಿದ ನಂತರ ಶ್ರೀಗಳು ಸ್ವಲ್ಪ ಕಾಲ ಧ್ಯಾನಸ್ಥರಾದರು. ನಾನು ಅಡಿಗೆಗಾಗಿ ಒಲೆ ಹಚ್ಚಿಸುತ್ತಾ ವಿಫಲನಾದೆನು. ಬೆಂಕಿಯೂ ಪೂರ್ತಿ ಶಾಂತಗೊಂಡಿತು. ಶ್ರೀಗಳು ನನ್ನನ್ನು ಮತ್ತೊಮ್ಮೆ ಸ್ನಾನ ಮಾಡಿ ಬರಲು ಹೇಳಿದರು. ನಂತರ ಹೀಗೆಂದರು. "ಮಗು ಶಂಕರ ಭಟ್ಟಾ! ನಾನು ಗುಪ್ತನಾಗುವ ಸಮಯ ಬಂದಿದೆ. ಕೃಷ್ಣಾನದಿಯಲ್ಲಿ ಸೇರಿ ಹೋಗುವೆನು. ಈ ಕುರುವಪುರದಲ್ಲಿ ಅಗೋಚರವಾಗಿ ಸಂಚರಿಸುತ್ತಿರುವೆನು. ನಂತರ ನೃಸಿಂಹ ಸರಸ್ವತಿ ಎಂಬ ನಾಮದಲ್ಲಿ, ಸನ್ಯಾಸಿ ಧರ್ಮ ಪುನರುದ್ಧರಿಸಲು ಬರುವೆನು. **ನೀನು ರಚಿಸುವ ಸಂಸ್ಕೃತ ಪ್ರತಿ ನನ್ನ ಮಹಾಸಂಸ್ಥಾನದ ಔದುಂಬರ ವೃಕ್ಷದ ತಳದಲ್ಲಿ, ಎಷ್ಟೋ ಮನುಷ್ಯ ಉದ್ದದ ಆಳದಲ್ಲಿ, ಶಬ್ದ ಸ್ವರೂಪವಾಗಿ ನಿಂತಿರುವುದು. ಅದರಿಂದ ಹೊರಬೀಳುವ ದಿವ್ಯ ಶಬ್ದಗಳು ಮಾನವ ಮಾತ್ರ ಕಿವಿಗಳಿಗೆ ಕೇಳಲಾರವು. ಹೃದಯದಲ್ಲಿ ನನ್ನ ಕರೆಯೋಲೆಯನ್ನು ಪಡೆದವರು ತಪ್ಪದೇ ನನ್ನ ದರ್ಶನಕ್ಕೆ ಬರಲೂ ಸಾಧ್ಯವಾಗುವುದು. ನಾನು ನನ್ನ ಭಕ್ತ ಸಂರಕ್ಷಣೆಯಲ್ಲಿ ಸದಾ ನಿರತನಾಗಿರುವೆನು. ನಿನ್ನ ಸಂಸ್ಕೃತ ಗ್ರಂಥಕ್ಕೆ ತೆಲುಗು ಅನುವಾದ ಸಹಾ ಬರುವುದು. ಅದು ಬಾಪನಾರ್ಯರ 33ನೆಯ ತಲೆಮಾರಿನಲ್ಲಿ ಬೆಳಕಿಗೆ ಬರುವುದು. ಇನ್ನೂ ಅನೇಕ ಭಾಷೆಗಳಿಗೆ ಅನುವಾದವಾಗುವುದು. ಯಾವುದೇ ಭಾಷೆಯಲ್ಲಿ ಓದಿದರೂ ದಿವ್ಯಾನುಭವಗಳು, ರಕ್ಷಣೆ ಒಂದೇ ಸಮವಾಗಿರುವುದು.**

### ಭಕ್ತರಿಗೆ ಶ್ರೀಪಾದರ ಅಭಯ

ನೀನು ನನಗೆಷ್ಟೋ ಸೇವೆ ಮಾಡಿದೆ. ಹೆತ್ತ ತಂದೆಯನ್ನು ಅಂಟಿಕೊಂಡಿದ್ದ ಹಾಗೆ, ಮಗುವಿನಂತೆ ಇದ್ದೆ. ನನ್ನ ಮರದ ಪಾದುಕೆಗಳನ್ನು ನಿನಗೆ ಬಹುಮಾನವಾಗಿ ನೀಡುತ್ತಿದ್ದೇನೆ. ನಾನಿಲ್ಲವೆಂದು ನೀನು ದುಃಖಿಸಬೇಡ. ನೀನು 3 ವರುಷಗಳವರೆಗೂ ಇಲ್ಲೇ ಇರಬೇಕು. ನಿನಗೆ ಈ 3 ವರುಷವೂ ತೇಜೋಮಯ ರೂಪದಲ್ಲಿ ದರ್ಶನ ನೀಡುತ್ತಿರುವೆನು. ನಿನಗೆ ಅನೇಕ ಯೋಗ ರಹಸ್ಯಗಳನ್ನೂ ತಿಳಿಸುತ್ತಿರುವೆನು.

### ಶ್ರೀಪಾದರ ಅಂತರ್ಧಾನ

3 ವರುಷದ ನಂತರ ಬರುವ ಇದೇ ಆಶ್ವಯುಜ ಕೃಷ್ಣ ದ್ವಾದಶಿಯಂದು, ನೀನು ರಚಿಸಿದ ಶ್ರೀಪಾದ ಶ್ರೀವಲ್ಲಭ ಚರಿತಾಮೃತ ನನ್ನ ಪಾದುಕೆಗಳಿಗೆ ಕೇಳಿಸು. ಆ ದಿನ ದರ್ಶನಕ್ಕೆ ಬರುವ ಎಲ್ಲಾ ಭಕ್ತರೂ ಧನ್ಯರು. ಎಲ್ಲರಿಗೂ ಮಂಗಳಮಯ ಆಶೀರ್ವಾದಗಳು.

ಶ್ರೀಪಾದ ಶ್ರೀವಲ್ಲಭ ಮಹಾಪ್ರಭುಗಳು ಈ ಪ್ರಕಾರ ಹೇಳಿ ಕೃಷ್ಣಾನದಿಯಲ್ಲಿಳಿದು ಆ ನೀರಿನಲ್ಲೇ ಸೇರಿಹೋದರು.

ಅವರ ಮರದ ಪಾದುಕೆಗಳನ್ನು ನಾನು ಎದೆಗೆ ಒತ್ತಿಕೊಂಡು, ತಾಯಿಯನ್ನು ಕಳೆದುಕೊಂಡ ಕಂದನಂತೆ ಬಿಕ್ಕಿ ಬಿಕ್ಕಿ ಅತ್ತೆನು. ನಂತರ ಸುಸ್ತಾಗಿಬಿಟ್ಟೆನು. ಎಚ್ಚರಗೊಂಡ ನಂತರ ಕೃಷ್ಣಾನದಿಯಲ್ಲಿಳಿದು ಸ್ನಾನವನ್ನಾಚರಿಸಿ, ಬಂದು ಧ್ಯಾನಸ್ಥನಾದೆನು. ನನ್ನ ಮನೋನೇತ್ರಗಳಿಗೆ ಶ್ರೀಪಾದ ಶ್ರೀವಲ್ಲಭರು ತೇಜೋಮಯ ರೂಪದಲ್ಲಿ ದರ್ಶನವಿತ್ತರು.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 52

# ಶಂಕರ ಭಟ್ಟರ ಯೋಗಾನುಭವ ನಿರೂಪಣೆ

### ಶ್ರೀಪಾದರ ದಿವ್ಯದರ್ಶನ

ನಾನು 3 ವರುಷಗಳು, ಪ್ರತಿದಿನವೂ, ನಡುರಾತ್ರಿ ಸಮಯ ಶ್ರೀಪಾದ ಶ್ರೀವಲ್ಲಭರ ದಿವ್ಯತೇಜೋಮಯ ದರ್ಶನ ಪಡೆಯುತ್ತಿದ್ದೆನು. ನಾನು ನನ್ನ ಯೋಗಾನುಭೂತಿಗಳನ್ನು ಪ್ರತ್ಯೇಕವಾಗಿ ಒಂದು ಪುಸ್ತಕವಾಗಿ ಬರೆದಿದ್ದೆನು. ಅದನ್ನು ಹಿಮಾಲಯದಲ್ಲಿರುವ ಯೋಗಿ ಒಬ್ಬರು ತೆಗೆದುಕೊಂಡು ಹೋದರು. ಶ್ರೀಪಾದ ಶ್ರೀವಲ್ಲಭರ ಆಜ್ಞಾನುಸಾರವೇ ಇದು ನಡೆದಿದೆ.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**

## ಅಧ್ಯಾಯ - 53

# ಶ್ರೀಪಾದ ಶ್ರೀವಲ್ಲಭರ ಚರಿತಾಮೃತ ಪೀಠಿಕಾಪುರ ಸೇರುವ ವಿಧಾನ

### ಶ್ರೀಪಾದರ ಚರಿತಾಮೃತದ ವಿಶೇಷಗಳು

ನಾನು ರಚಿಸಿದ ಶ್ರೀಪಾದ ಶ್ರೀವಲ್ಲಭ ಚರಿತಾಮೃತ ಅವರ ಸೋದರ ಮಾವಂದಿರ ಹತ್ತಿರ ಸ್ವಲ್ಪಕಾಲವಿರುವುದು. ತದನಂತರ, ಇದಕ್ಕೆ ತೆಲುಗಿನ ಅನುವಾದ ಮಾಡಬೇಕು. ಈ ಅನುವಾದ ಪೂರ್ತಿ ಆದ ನಂತರ ನನ್ನ ಆ ಸಂಸ್ಕೃತ ಪ್ರತಿ ಅದೃಶ್ಯವಾಗಿ ಹೋಗುವುದು. ಗಂಧರ್ವರು ಇದನ್ನು ಪಡೆದು ಶ್ರೀಪಾದ ಶ್ರೀವಲ್ಲಭರ ಜನುಮ ಸ್ಥಳದಲ್ಲಿ ಕೆಲವು ಮನುಷ್ಯ ಆಳಗಳಲ್ಲಿಡುವರು. ಅಲ್ಲಿ ಅದು ಸಿದ್ಧಯೋಗಿಯರಿಂದ ಪಠಿಸಲ್ಪಡುವುದು.

ನಾನು ರಚಿಸಿದ ಚರಿತಾಮೃತವನ್ನು ಶ್ರೀಪಾದರ ದಿವ್ಯ ಪಾದುಕೆಗಳ ಬಳಿ ಓದಿ ಕೇಳಿಸಿದೆನು. ಬಂದವರು 5 ಮಂದಿ ಪರಮಾನಂದಪಟ್ಟರು.

ನಾನು ಪಂಡಿತನಲ್ಲ, ಆದ್ದರಿಂದ ಯಾವ ಅಧ್ಯಾಯ ಓದಿದರೇ ಯಾವ ಫಲಿತ ಲಭಿಸುವುದೆಂದು ಹೇಳಲಾರೆ. ಶ್ರೀ ಬಾಪನಾರ್ಯರ 33ನೇ ತಲೆಮಾರಿನಲ್ಲಿ ಈ ಗ್ರಂಥದ ತೆಲುಗು ಪ್ರತಿ ಬೆಳಕಿಗೆ ಬರುವುದು.

ತೆಲುಗು ಪ್ರತಿ ಬೆಳಕಿಗೆ ತರುವ ಮುನ್ನ, ಹಾಗೆ ಮಾಡಲೂ ಶ್ರೀಪಾದರಿಂದ ನಿಯಮಿತವಾದವರು, ಅದನ್ನು ವಿಜಯವಾಟಿಕಾ ಮಹಾಪುಣ್ಯಕ್ಷೇತ್ರದ ಬಳಿ ಕೃಷ್ಣಾನದಿಯಲ್ಲಿ ನಿಮಜ್ಜನೆ ಮಾಡಬೇಕು.

ಬೆಳಕಿಗೆ ತರುವ ಭಾಗ್ಯಶಾಲಿ, ಶ್ರೀಪಾದರ ಜನುಮ ಸ್ಥಾನದಲ್ಲಿ, ಅವರ ಮಹಾಸಂಸ್ಥಾನ ನಿಂತ ಪವಿತ್ರ ಸ್ಥಳದಲ್ಲಿ, ಶ್ರೀಪಾದ ಶ್ರೀವಲ್ಲಭ ಚರಿತಾಮೃತ ತೆಲುಗು ಪ್ರತಿಯನ್ನು ಪಾರಾಯಣ ಮಾಡಿ ಶ್ರೀಚರಣರಿಗೆ ಸಮರ್ಪಿಸಬೇಕು. ಪಾರಾಯಣ ಮಧ್ಯದಲ್ಲಿ ಆ ಅದೃಷ್ಟವಂತನಾದ ವ್ಯಕ್ತಿಗೆ ಗಾಣಗಾಪುರದಿಂದ ಪ್ರಸಾದ, ಆಯಾಚಿತವಾಗಿ ತಲುಪಿಸಿದರೇ ಆ ವ್ಯಕ್ತಿ ಬಾಪನಾರ್ಯರ ವಂಶದ 33ನೆಯ ತಲೆಮಾರಿಗೆ ಸೇರಿದ ವ್ಯಕ್ತಿಯಾಗಿರುವನು. ಇದು ತೇಜೋಮಯ ರೂಪದಲ್ಲಿ ದರ್ಶನವಿತ್ತ ಶ್ರೀಪಾದ ಶ್ರೀವಲ್ಲಭರ ದಿವ್ಯವಚನ.



**ಶ್ರೀಪಾದ ಶ್ರೀವಲ್ಲಭರಿಗೆ ಜಯವಾಗಲಿ**


SRIPADA
SAMSTHANAM, Pithapuram
Birth Place of Sripada Srivallabha
संस्थानम, पिठापुरम